ಕರ್ನಾಟಕದ ಹರಿದಾಸರು

ಡಾ. ಹೆಚ್. ಕೆ. ವೇದವ್ಯಾಸಾಚಾರ್ಯ



ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ - ಮಂತ್ರಾಲಯ

॥ ಶ್ರೀಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಕರ್ನಾಟಕದ ಹರಿದಾಸರು

ವಿಮರ್ಶಾತ್ಮಕ ಅಧ್ಯಯನ

(ಪಿಹೆಚ್.ಡಿ. ಮಹಾಪ್ರಬಂಧ)

ವೇದಾಂತರತ್ನಂ, ವಿದ್ಯಾರತ್ನಂ

ಡಾ. ಹುಲಿ. ಕೃ. ವೇದವ್ಯಾಸಾಚಾರ್ಯ, ಎಂ.ಎ., ಪಿಹೆಚ್.ಡಿ.

ಮೈಸೂರು

ಪ್ರಸ್ತಾವನೆ

ಆರ್. ಎಸ್. ಪಂಚಮುಖಿ, ಎಂ.ಎ.

ಧಾರವಾಡ

ಮುನ್ನುಡಿ

ಡಾ. ಬಿ.ಎಸ್.ಕೆ. ಶರ್ಮಾ, ಎಂ.ಎ., ಪಿಹೆಚ್.ಡಿ., ಡಿ.ಲಿಟ್.

ಮುಂಬೈ

ಪ್ರಕಾಶಕರು

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ

ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಕರ್ನಾಟಕದ ಹರಿದಾಸರು

ವಿಮರ್ಶಾತ್ಮಕ ಅಧ್ಯಯನ

(ಪಿಹೆಚ್.ಡಿ. ಮಹಾಪ್ರಬಂಧ)

KARNATAKADA HARIDASARU
Ph.D. Thesis by Dr. H.K. Hulivedavyasacharya

First Edition : 1965
Second Edition : 1992
Third Edition : 2005

Copies : 1000

Pages : xii + 497

Price :

Designed at :

Sri Gurusarvabhouma Vidyunmana Mudranalaya
'Sri Moolarama', # 19/20, 5th Main, 2nd Cross, Chamarajpet
Bangalore - 560 018

✆ **080-26606080**

Printed at :

Sharanya Prints & Packs
Chennai

✆ **0091-44 22436327, 22436649**

ಗ್ರಂಥ ಸಮರ್ಪಣೆ

ಶ್ರೀಹಂಸನಾಮಕ ಪರಮಾತ್ಮನಿಂದ ಪ್ರವರ್ತಿತವಾದ
ಪರಂಪರೆಯಲ್ಲಿ ಬಂದಿರುವ ಸರ್ವಜ್ಞರಾದ ಶ್ರೀಪಾವನಪವನಾಂಶಸಂಭೂತರಾದ

ಜಗದ್ಗುರು ಶ್ರೀಮಧ್ವಾಚಾರ್ಯರ

ಮೂಲಮಹಾಸಂಸ್ಥಾನಾಧೀಶ್ವರರಾದ
ವೇದಾಂತ ಸಾಮ್ರಾಜ್ಯ ದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರರಾದ

ಶ್ರೀಮದ್ವಿಜಯೀಂದ್ರತೀರ್ಥಶ್ರೀಪಾದಂಗಳವರ

ಕರಕಮಲಸಂಜಾತರಾದ

ಶ್ರೀಮತ್ಸುಧೀಂದ್ರತೀರ್ಥಶ್ರೀಪಾದಂಗಳವರ

ವರಕುಮಾರಕರಾದ

ಶ್ರೀಮದ್ರಾಘವೇಂದ್ರತೀರ್ಥಶ್ರೀಪಾದಂಗಳವರ

ಚರಣಾರವಿಂದಗಳಲ್ಲಿ
ಈ ಕುಸುಮವನ್ನು ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರ 80 ನೇ ವರ್ಧಂತ್ಯುತ್ಸವದ
ಸುಸಂದರ್ಭದಲ್ಲಿ ಭಕ್ತಿಶ್ರದ್ಧಾದರಪೂರ್ವಕವಾಗಿ ಸಮರ್ಪಿಸಲಾಗಿದೆ.

ಆಶೀರ್ವಚನ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪದವಾಕ್ಯಪ್ರಮಾಣಪಾರಾವಾರಪಾರಂಗತ
ಸರ್ವತಂತ್ರಸ್ವತಂತ್ರ ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯ
ಶ್ರೀಮನ್ಮೂಲರಘುಪತಿವೇದವ್ಯಾಸದೇವದಿವ್ಯಶ್ರೀಪಾದಪದ್ಮಾರಾಧಕ ಜಗದ್ಗುರು ಶ್ರೀಮನ್ಮಧ್ವಾಚಾರ್ಯ
ಮೂಲಮಹಾಸಂಸ್ಥಾನಾಧೀಶ್ವರರಾದ ಶ್ರೀರಾಘವೇಂದ್ರಸ್ವಾಮಿಗಳವರ ಮಠದ
ವೇದಾಂತಸಾಮ್ರಾಜ್ಯದಿಗ್ವಿಜಯವಿದ್ಯಾಸಿಂಹಾಸನಾಧೀಶ್ವರರಾದ ಶ್ರೀಮತ್ಸುಯಮೀಂದ್ರತೀರ್ಥ
ಶ್ರೀಪಾದಂಗಳವರ ಕರಕಮಲಸಂಜಾತರಾದ ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರ
ವರಕುಮಾರಕರಾದ

ಶ್ರೀಮತ್ಸುಶಮೀಂದ್ರತೀರ್ಥ ಶ್ರೀಪಾದಂಗಳವರು

ಮಾಡುವ ನಾರಾಯಣ ಸ್ಮರಣೆಗಳು

ಲಕ್ಷ್ಮೀದೇವಿಯಿಂದ ಹರಿದುಬಂದ ಹರಿಸಾಹಿತ್ಯವನ್ನು ಪ್ರಪ್ರಥಮವಾಗಿ ಬೆಳೆಸಿದವರೇ ನಮ್ಮ ಪೂರ್ವೀಕರಾದ ಶ್ರೀನರಹರಿತೀರ್ಥರು. ಶ್ರೀಮದಾಚಾರ್ಯರಿಂದ ಪರಮಹಂಸಾಶ್ರಮವನ್ನು ಸ್ವೀಕರಿಸಿ, ದೂರದ ಕಳಿಂಗದೇಶದಲ್ಲಿದ್ದುಕೊಂಡು ಅನೇಕ ಹರಿದಾಸ ಕೀರ್ತನೆಗಳನ್ನು ರಚಿಸಿ, ದಾಸಸಾಹಿತ್ಯಕ್ಕೆ ಸ್ಫೂರ್ತಿ ಇತ್ತವರೇ ನರಹರಿತೀರ್ಥರು. ನಂತರದಲ್ಲಿ ಹರಿದಾಸ ಸಾಹಿತ್ಯವು ಉತ್ತುಂಗಕ್ಕೇರಿದ್ದು ಶ್ರೀವ್ಯಾಸರಾಜರ ಸುವರ್ಣಯುಗದಲ್ಲಿ ಎಂದರೆ ತಪ್ಪಾಗಲಾರದು. ಶ್ರೀವ್ಯಾಸರಾಜರು ಸ್ವತಃ ಗೀತರಚನಕಾರರಾಗಿ ತಮ್ಮ ಜೊತೆಯಲ್ಲಿದ್ದವರನ್ನು ಪ್ರೋತ್ಸಾಹಿಸುತ್ತಾ, ಪುರಂದರದಾಸರಂತಹ ದಾಸಶ್ರೇಷ್ಠರನ್ನು ನಾಡಿಗೆ ನೀಡಿದ ಮಹಾನ್ ಚೇತನ ಶ್ರೀವ್ಯಾಸರಾಜರು. ಪುರಂದರದಾಸರು ಹಾಕಿಕೊಟ್ಟ ಮಾರ್ಗದಲ್ಲಿಯೇ ಅನೇಕ ದಾಸರುಗಳು ಅವತಾರ ಮಾಡಿದರು. ಅವರುಗಳಲ್ಲಿ ಕನಕದಾಸರು, ಗೋಪಾಲದಾಸರು, ಜಗನ್ನಾಥದಾಸರು, ವಿಜಯದಾಸರು ಹಾಗೂ ಇನ್ನು ಮುಂತಾದ ಅಪರೋಕ್ಷ ಜ್ಞಾನಿಗಳು ದೇಶ ಸಂಚರಿಸುತ್ತಾ ಭಗವಂತನನ್ನು ಹಾಡಿ ಹೊಗಳುತ್ತಾ ಅನೇಕ ಪದ-ಪದ್ಯ- ಸುಳಾದಿಗಳ ರಚನೆಯಿಂದ ಹರಿದಾಸಸಾಹಿತ್ಯ ಇಂದು ಪುಷ್ಟಿಯಾಗಿ ನಿಂತಿದೆ. ಈ ಹರಿದಾಸಸಾಹಿತ್ಯದಲ್ಲಿ ಅನೇಕ ಪ್ರಕಾರಗಳಿವೆ. ಬಯಲಾಟಗಳು, ಜೋಡಿಪದಗಳು, ಲಾಲಿಪದಗಳು, ಲಾವಣಿ ಪದಗಳು, ಉಗಾಭೋಗಗಳು ಮತ್ತು ಸುಳಾದಿಗಳು. ಪ್ರಸ್ತುತ ಶ್ರೀಮಠದಿಂದ ಪ್ರಕಾಶನಗೊಳ್ಳುತ್ತಿರುವ ಈ ಕುಸುಮವು ನಮ್ಮ ಪರಮಗುರುಗಳಾದ ಶ್ರೀಸುವ್ರತೀಂದ್ರತೀರ್ಥ ಶ್ರೀಪಾದಂಗಳವರ ಪೂರ್ವಾಶ್ರಮದ ಪುತ್ರರಾದ ಡಾ।। ಹೆಚ್.ಕೆ. ವೇದವ್ಯಾಸಾಚಾರ್ಯರು ಹರಿದಾಸರುಗಳ ಮೇಲೆ ನಡೆಸಿದ ವಿಮರ್ಶಾತ್ಮಕ ಅಧ್ಯಯನದ ಪಿಹೆಚ್.ಡಿ. ಪ್ರಬಂಧವಾಗಿದೆ. ಈ ಕೃತಿಯು ಹರಿದಾಸಸಾಹಿತ್ಯ ಅಭ್ಯಸಿಸುವವರಿಗೆ ಉತ್ತಮ ಮಾರ್ಗದರ್ಶನ ನೀಡುವುದರಲ್ಲಿ ಎರಡು ಮಾತಿಲ್ಲ. ಈ ಗ್ರಂಥವು ಪುನರ್ಮುದ್ರಣಗೊಂಡು ದಾಸಸಾಹಿತ್ಯ ಪ್ರಕಾರಗಳ ಮೇಲೆ ಅಧ್ಯಯನ ಮಾಡುವವರಿಗೆ ಒಂದು ಉತ್ತಮ ಆಕರವಾಗಲಿದೆ. ಈ ಕೃತಿಯನ್ನು ಮಹಾ- ಸಂಸ್ಥಾನದಿಂದ ಪ್ರಕಟಿಸುತ್ತಿರುವುದು ನಮಗೆ ಅತೀವ ಸಂತೋಷವನ್ನುಂಟುಮಾಡಿದೆ.

ಇದೇ ರೀತಿಯಾಗಿ ಅನೇಕ ದಾಸಸಾಹಿತ್ಯ ಪ್ರಬಂಧಗಳು ಶ್ರೀಮಠದಿಂದ ಹೊರಬರುವಂತಾಗಲಿ ಎಂದು ನಮ್ಮ ಉಪಾಸ್ಯಮೂರ್ತಿಯಾದ ಶ್ರೀಮೂಲರಘುಪತಿವೇದವ್ಯಾಸದೇವರಲ್ಲಿ ತಥಾ ಶ್ರೀರಾಘವೇಂದ್ರಗುರುಸಾರ್ವಭೌಮರಲ್ಲಿ ಪ್ರಾರ್ಥಿಸುತ್ತೇವೆ.

ಇತಿ ನಾರಾಯಣ ಸ್ಮರಣೆಗಳು.

ಪ್ರಕಾಶಕರ ನುಡಿ

ಹರಿದಾಸಸಾಹಿತ್ಯ ಭಕ್ತಿಸಾಹಿತ್ಯದ ಮೇರುಘಟ್ಟ. ಹರಿದಾಸರು ಭಕ್ತಿಯ ಮೂಲಕ ಮಾನವನ - ಸಮಾಜದ ಬದುಕನ್ನು ಉದ್ಧಾರ ಮಾಡಿದವರು. ವ್ಯಾಸರಾಯರು ದಾಸಪರಂಪರೆಯನ್ನು ನೀರೆರೆದು ಪೋಷಿಸಿದವರು. ಕನಕ-ಪುರಂದರರನ್ನು ಪ್ರೋತ್ಸಾಹಿಸಿದ ರೀತಿ ಅನನ್ಯವಾದುದು. ಅದೇ ರೀತಿ ಎರಡನೇ ಘಟ್ಟದ ದಾಸ ಪರಂಪರೆಗೆ ಮೂಲ ಪ್ರೇರಣೆ ನೀಡಿ ಅನುಗ್ರಹಿಸಿದವರು ಶ್ರೀರಾಘವೇಂದ್ರ ಗುರುಸಾರ್ವಭೌಮರು. ಕನ್ನಡ ಹರಿದಾಸ ಪರಂಪರೆಗೆ ಮಂತ್ರಾಲಯದ ಕೊಡುಗೆ ಮಹತ್ತರವಾದುದು. ಕಲಿಯುಗ ಕಾಮಧೇನು ಎಂದು ಭಕ್ತರಿಂದ ಪೂಜಿಸಲ್ಪಡುವ ರಾಯರನ್ನು ಕೊಂಡಾಡಿ ಸಾವಿರಾರು ಕೀರ್ತನೆಗಳು ದೊರೆಯುತ್ತಲಿವೆ.

ಡಾ. ಹೆಚ್.ಕೆ. ವೇದವ್ಯಾಸಾಚಾರ್ಯ ಅವರಿಂದ ಕರ್ನಾಟಕದ ಹರಿದಾಸರುಗಳ ಮೇಲೆ ವಿಮರ್ಶಾತ್ಮಕ ಅಧ್ಯಯನವಾಗಿ ಹೊರಬಂದ ಕೃತಿಯೇ ಈ ಕರ್ನಾಟಕದ ಹರಿದಾಸರು. ಶ್ರೀಯುತರು ನಾಡಿನಾದ್ಯಂತ ಹಳ್ಳಿ-ಹಳ್ಳಿಗಳಿಗೆ ಸಂಚರಿಸಿ ದಾಸಸಾಹಿತ್ಯದ ಜಾಡನ್ನು ಶೋಧಿಸಿ, ಅದನ್ನು ತಮ್ಮ ಪಿಹೆಚ್.ಡಿ.ಯ ಪ್ರಬಂಧವನ್ನಾಗಿಸಿದರು. ಇದನ್ನು 1965 ರಲ್ಲಿ ಹಾಗೂ 1992 ರಲ್ಲಿ ಪರಿಮಳ ಸಂಶೋಧನ ಪ್ರಕಾಶನ ಮಂದಿರವು ತಮ್ಮ ಶ್ರೀಸುಯಮೀಂದ್ರಮಾಲಾ ಸಂಖ್ಯೆಯಲ್ಲಿ ಪ್ರಕಟಿಸಿತ್ತು. ದಾಸಸಾಹಿತ್ಯ ಅಭ್ಯಸಿಸುವವರಿಗೆ ಇದೊಂದು ಗೈಡ್ ರೂಪದಲ್ಲಿದೆ ಎಂದರೆ ತಪ್ಪಾಗಲಾರದು. ಶ್ರೀಮಠದಿಂದ ಈ ಉದ್ಗ್ರಂಥವನ್ನು ಪುನಃ ಪ್ರಕಟಿಸಲು ನಮಗೆ ಅನುಮತಿ ಇತ್ತ ಪರಿಮಳ ಸಂಶೋಧನ ಪ್ರಕಾಶನ ಮಂದಿರದವರಿಗೂ ಹಾಗೂ ಡಾ. ಹೆಚ್.ಕೆ. ವೇದವ್ಯಾಸಾಚಾರ್ಯರ ಹಿರಿಯ ಪುತ್ರರಾದ ಹುಲಿ. ಪವಮಾನಾಚಾರ್ಯ ಇವರಿಗೂ ನಾನು ಆಭಾರಿಯಾಗಿರುತ್ತೇನೆ.

ಈ ಪುಸ್ತಕದ ಮುದ್ರಣ ಕಾರ್ಯದಲ್ಲಿ ನಮ್ಮೊಂದಿಗೆ ಸಹಕರಿಸಿದ ಗಂಗಾವತಿ ಜಿ. ಪವನ್‌ಕುಮಾರ್, ರಾಜಾ. ಎಲ್. ಸೂರೀಂದ್ರಾಚಾರ್ಯ, ಅಕ್ಷರ ಜೋಡಣೆ ಮಾಡಿದ ವಿ. ವಿಜಯಲಕ್ಷ್ಮಿಯವರಿಗೆ ಕೃತಜ್ಞತೆಗಳು.

ರಾಜಾ. ಎಸ್. ರಾಜಗೋಪಾಲಾಚಾರ್ಯ

ಶ್ರೀಪಾದಂಗಳವರ ಆಪ್ತಕಾರ್ಯದರ್ಶಿಗಳು

ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

INTRODUCTION

by

Vidyabhushana, Sastranidhi

Dr. B.N.K. Sharma, M.A., Ph. D.,

Professor of Sanskrit, Ruparel College, BOMBAY -16.

(Reproduced from Second Edition)

It is with mixed feelings of pleasure and sadness that I am writing this Introduction to Dr. H.K. Vedavyasachar's work : "*Karnatakada Haridasaru*", which is now being posthumously published by his dear friend and collaborator in the cause of propagating Madhva philosophy. Sri Raja Gururajacharya, the learned Editor of the Parimala magazine and Founder, Proprietor of the Parimala Research and Publishing House, Nanjangud, has placed all lovers of Dasa Sahitya under an obligation to him by arranging to make this important and authentic work on the subject available to the Kannada reading public. It is the work which earned for its author the Doctorate of the Bombay University in 1954. That by itself is sufficient testimony to its worth. It is an *epoch-making* treatise on the origin, growth and development of the great Haridasa Order of Karnatak, - an authentic, well-documented and comprehensive presentation of the subject, in a handy, single Two volumes of sizable proportions. There are available a few other works in Kannada on the subject such as those of Belur Keshava Dasa and Sri R.S. Panchamukhi. The subject has also been dealt with briefly in Dr. R.S. Mugali's *Kannada Sahitya Charitre* and latterly special attention has been paid to the works of select Dasas like Sri Purandara Dasa and Jagannatha Dasa and others by other writers like Drs. K.M. Krishna Rao and Patil (Jamkhandi) and by Sri K. Sampathgiri Rao and Sri Bhadragiri Keshavadasa, not to speak of the three volumes of the Critical editions of the Padas of Sri Purandara Dasa with scholarly Introductions, published in the Minchinaballi Series, Dharwar. But the present work of Dr. H.K. Vedavyasachar stands in a distinct category by itself as an illuminatingly scientific and historical study of the whole range of Dasa Sahitya and its thought in a scholarly and systematic manner. This extensive literature created by the God-intoxicated Aparoksha Jnanis saturated with the spirit of Vaishnavism is here studied for the first time in relation to the history of religion, philosophy and

mysticism in general,- as they developed in different parts of the world and not merely, as heretofore, as an offshoot of a denominational sect of Brahmanism. The thought-content of the Dasa Sahitya is shown here as the final expression of the finest fusion of the spirit and aspirations of religion, philosophy and mysticism as contained in the great legacy of Hindu Thought. Thanks to this wider perspective which Dr. Vedavyasachar has brought to bear on this study, the reader gets a fair glimpse if not a full insight into the yearnings of the human spirit thro' ages and climes as it coursed thro' historic times in ancient Sumeria, Assyria, Egypt, Greece and Israel and later in Europe and Arabia and found its fulfilment in the long course of the development of Vedic thought in Hinduism, in the north and south of India thro' successive phases of Vedic, non-Vedic, Puranic and Darsanic thought. The analysis and coordination of these instincts and aspirations of the religious spirit of man and its final configuration in the philosophy of the Dasa-Sahitya under the impact and inspiration of the Vedantic philosophy of Sri Madhvacharya, in Karnatak, whence its message spread to other parts of the country in course of time, is described in simple yet forceful language in this Volume of about 500 pages. The combination of traditional learning and modern University education and training that the author has had the privilege of possessing, has enabled him to move with ease and felicity into the recesses of traditional thought and to draw upon the thoughts of some of the foremost authorities on the history of religion and mysticism in English such as underhill and then to compare the results and arrive at an assessment of the achievements of the Haridasas viewed in their universal set-up. This new step he has taken is well worth following up much more assiduously and comprehensively by students of Haridasa Sahitya in the years to come. What he has done is only a "Digdarsana" (ದಿಗ್ದರ್ಶನ).

The author has gone into the realms of modern subjectivism, Rationalism etc., and brought out their limitations in solving the riddle of religion in human life. The significance of the "Bimbapratibimbabhava" relation between the human spirit and the ultimate source of all being, consciousness and creative evolution called god, Bhagavan or Brahman,- which is the silken thread that unites the finite with the Infinite in an indissoluble bond and the spontaneity of the love, regard and understanding that such an intimate relation entails between them for all time and the grandeur, beauty and satisfyingness of such an intrinsic and indissoluble bond between the two friendly birds locked in everlasting companionship "ದ್ವಾ ಸುಪರ್ಣಾ ಸಯುಜಾ ಸಖಾಯಾ" - *Mundakopanisad* (iii,1,1) is the peculiar

glory and asset of the philosophy of Madhvacharya which the dasas had taken upon themselves to proclaim and propagate thro' their inspired writings. It is the history of this spiritual adventure of the human spirit, as carried out by the Haridasa, that is unfolded in this learned work of Dr. Vedavyasacharya.

It is divided into two major parts. The first part is devoted to the study of the history of religion as such. Religion is the governing principle of civilized life. The author inquires into its meaning, *raison d'etre* and its relation to science, and politics, into the values and sanctions of religion, the different aspects of the manifestations of the religious spirit among the great religions of the world and their vicissitudes. He then takes up the development of the Hindu religion in its sacred scriptures and schools of philosophy. He faces the challenge to religion brought up by Subjectivism, Rationalism, Logical Positivism, Dialectical Materialism and other ways of thinking and shows how none of them is in a position to dislodge religion and the religious spirit and instinct from our midst or disprove their veracity. He supports his views with relevant citations from the writings of eminent thinkers like Descartes, Spinoza, Kant, Locke, Berkeley and others. Drawing upon the *Vishnutattvanirnaya* and other sources he emphasizes the need to rest the moral law upon the ultimate sanction of an "Apaurusheya-Pramana". He has quoted extensively from Sanskrit philosophical classics like the works of Sankaracharya, Madhvacharya, Jayatirtha, Vyasaraya, Udayanacharya, Raghavendra Swamin and others to give point to his arguments.

The author has ably explained the central principles of the Vedic religion under convenient headings of God, the world, the Souls and their Sadhanas, emphasizing the primacy of Bhakti among such Sadhanas as the corner-stone of Mysticism, Devotionalism and true religion. He also clarifies the place of Yoga in this scheme of Sadhanas. He has set at rest the fanciful theory of Heras that Bhakti was alien to the concepts of Vedic religion and that it had its origin in non-Vedic society from which it percolated into later Hindu thought. He has also brought out the historical associations and the intimate philosophical nexus between Bhakti and Vaishnavism from their very birth. Whatever may be the truth about the alleged natural tendency of Saivism to lean towards a monistic goal, the historical probability of the impact of early Virasaiva Vachana Sahitya in Kannada on the rise and development of the Haridasa movement and literature deserves much closer attention than has been accorded here, as the parallelisms in thought, expression and sentiments between the two

streams are far too striking to be passed over as casual or accidental. His observations (following the stand taken by Sri Madhvacharya) on the different forms of Bhakti known as "Kamabhakti", "Dvesha-Bhakti" etc., are worth serious consideration by all students of Religion. He has done well to give his readers a peep into the devotional fervour of the Vaishnava Mystics of Bengal, Uttar Pradesh, Rajasthan, Maharashtra and Tamilnad.

In Part II we have the detailed treatment of the Haridasas of Karnatak led by Sri Madhvacharya. The part played by his distinguished successors like Narahari Tirtha, Sri Padaraja, Vyasaraya, Vadiraja, Purandaradasa, Kanakadasa, Vijayindra Tirtha, Kumara Vyasa, Vaikuntha Dasa, Raghavendra Swami, Prasanna Venkatesa, Vijayadasa, Giriyamma, Varadendra Tirtha, Vyasatattvajna Yati, Mohanadasa, Gopaladasa, Jagannatha Dasa, Bhaganna Dasa and Pranesa Dasa in the development of the Bhakti-Siddhanta thro' Haridasa Sahitya is sketched with an unerring eye for significant details. The author has laid special emphasis on the position occupied by the concept of "Bimbaparoksha" in spiritual illumination and realization in the Vaishnava tradition of the Haridasas which distinguishes it from every other spiritual tradition and which is distinctive of philosophical teaching of Madhvacharya, derived from the core of Vedic and Vedantic thought. This makes the status of "Jivanmukti" much better understood and appreciated, with reference to this tradition, than in any other.

The author has given short but lucid accounts of the works of each of the great Dasas mentioned above and brought out the literary and philosophical excellences of their writings. One striking feature of Dr. Vedavyasachar's work is the bold step he has taken in including the famous Kannada Mahakavi Kumara-Vyasa (*alias* Gadugina Naranappa) in the family of Haridasas. In doing so, he has evidently taken a wider view of "Dasa-Sahitya". The Kannada *Mahabharata* of Kumara-Vyasa is a monumental religious epic saturated with Krishan-bhakti and can certainly be regarded as a devotional work of very high order. We have striking parallels to this work in the position occupied in Tamil literature by the famous *Ramayana* of Kamban and the *Mahabharata* of Villiputturar, both of whom have been honoured in the popular and literary traditions of Tamilnad by the title of "Alvars"' which corresponds to the title of "Haridasas"! Dr. Vedavyasachar's finding in the light of the internal evidences brought out by him from the *Kumara VyasaBharata* that Kumara Vyasa was a Madhva in his religious persuasion deserves to be

very carefully considered. He has similarly let in some evidence showing that Kanaka Dasa was probably initiated into Dasa Kuta by Vadiraja Swami.

From p.317 onwards we have copious illustrative selections drawn from the vast range and varied styles of Haridasa compositions, throwing light upon the numerous "Prameyas" (doctrinal tenets) of their siddhanta which are the same as those of Madhva-Siddhanta, as presented in the Sanskrit originals. These topics range from the most intricate to the most familiar and popular ones. All of them are lighted up by a great wealth of figures and illustrations from life and literature which go straight to the heart and make an instantaneous and indelible appeal which is the privilege of the spoken language of the people. Among the topics touched upon in this section are the supremacy of Hari, His Avataras and their eulogies from different emotional standpoints, visits to Kshetras and Kshetramurtis like Vitthala, Harihara and others, laudations of Krishnalila in different aspects and settings, the Epic Krishna, the glory of the names of God, Jagat-Srshti, kalasrshti, sound-symbolisms, Taratamya, Vairagya, ethical precepts, worship, fasts, pilgrimages, moral virtues, Satsanga, worship of minor gods, Upasana, practical behaviour, codes of conduct for women and miscellaneous virtues.

The last two Chapters are in the form of Appendices. The first one (Ch. XV) summarises the contents of some of the insufficiently known independent works of the Haridasas such as Vadiraja, Kanaka Dasa and Mohana Dasa. The short works *Svapnagadya, Harisarvottamasara* and *Vaikunthavarnana* of Vadiraja, the *Haribhaktisara* of Kanakadasa and the *koluhadu* of Mohanadasa are among those described in this section. The author has undoubtedly placed his readers under a large debt to him by his short illuminating summary of the *Tattvasuvale* and above all of the great *Harikathamrtasara* of Jagannatha Dasa. The penultimate chapter (XVI) gives a scholarly account of the enduring contributions which the Haridasas have made to Karnatak Music as an art and as a science. This chapter is a fitting conclusion to this monumental survey of the Haridasa-Sahitya.

From the beginning to the end of this thrilling study of about 500 pages, the young and alert mind of this enterprising scholar and earnest researcher, holds the attention of the reader riveted to the subject, filling him with genuine admiration for the mighty work of social and spiritual rehabilitation of the human spirit that the selfless Haridasas had done for

the benefit of the sons and daughters of Karnataka and thro' them to the whole of humanity. The spirit of these Haridasas will not be content until the people of Karnatak imbibe their teachings and invite their fellowmen and women of Bharatabhumi and the world at large to share the legacy with them and enjoy the fruits thereof in deep spiritual fellowship.

The time has come for the *Haridasas* to take steps to disseminate their teachings much more intensively and widely in and outside Karnatak in the interests of a true and genuine spiritual integration of all Bharatiyas. I would fain hope that the reading of this book will imbibe many from the younger generation of Kannadigas to come up to carry forward the work that Dr. Vedavyasachar had done within his short lifetime. It is with very great pleasure then that I felicitate the learned Editor and publisher, my esteemed friend Raja Gururajacharya, and congratulate him on his achievement in giving us this substantial work on the Haridasa. I have no doubt that loving study of the Haridasas of Karnatak will find a permanent place in the heart and household of every Kannadiga and fulfil the function of his friend, philosopher and guide for true purposeful and godly living. The author of this book is himself no longer with us to see it being published this day; there is no doubt that his labour of love stands fulfilled and rewarded in the manner visualized by the immortal Kalidasa.

"ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ"
(Kumarasambhava, V)

ಕರ್ನಾಟಕದ ಹರಿದಾಸರು

(ವಿಮರ್ಶಾತ್ಮಕ ಅಧ್ಯಯನ)

ಪ್ರಸ್ತಾವನೆ

(ದ್ವಿತೀಯ ಮುದ್ರಣ)

ಡಾ. H.K. ವೇದವ್ಯಾಸಾಚಾರ್ಯರು (M.A.) ಕರ್ನಾಟಕದ ಹರಿದಾಸ ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಿ ಅದರಲ್ಲಿ ಅಡಕವಾಗಿದ್ದ ಅಮೌಲ್ಯವಾದ ತತ್ವಗಳನ್ನು ಚೆನ್ನಾಗಿವಿಮರ್ಶಿಸಿ ಈ ಪ್ರಬಂಧವನ್ನು ಬರೆದಿದ್ದಾರೆ. ಇವರುವಿಶ್ವವಿದ್ಯಾಲಯದಿಂದ M.A. ಪದವಿಯನ್ನು ಉಚ್ಚತರಗತಿಯಲ್ಲಿ ಪಡೆದು ಧಾರವಾಡದಲ್ಲಿ ಆಗಿನ ಮುಂಬಯಿ ಸರಕಾರದವರು ಸ್ಥಾಪಿಸಿದ್ದ ಕನ್ನಡಸಂಶೋಧನಸಂಸ್ಥೆಯಲ್ಲಿ Ph.D. ಡಾಕ್ಟರೇಟ್ ಪದವಿಗಾಗಿ ನನ್ನ ನೇತೃತ್ವದಲ್ಲಿ ಹರಿದಾಸರ ವಿಷಯವನ್ನು ಪರಿಶೀಲಿಸಿ ಪ್ರಬಂಧವನ್ನುಬರೆದು ಮುಂಬಯಿವಿಶ್ವವಿದ್ಯಾಲಯಕ್ಕೆ ಪರೀಕ್ಷೆಗಾಗಿ ಅರ್ಪಿಸಲು ಸ್ನಾತಕೋತ್ತರವರ್ಗಕ್ಕೆ ಸೇರಿದರು. ಅವರು ನನ್ನಲ್ಲಿ ಈ ವಿಷಯವನ್ನು ಮೇಲಿಂದಮೇಲೆ ಮುಖತಃ ಚರ್ಚಿಸಿ ತಮ್ಮ ಸ್ವಾಭಾವಿಕವಾದ ಬುದ್ಧಿಮತ್ತೆಯಿಂದಲೂ, ಪ್ರತಿಭೆಯಿಂದಲೂ ಜಗತ್ತಿನ ಪ್ರಾಚೀನ ಧರ್ಮ ಮತ್ತು ತತ್ವಜ್ಞಾನಗಳ ಉಗಮ–ವಿಕಾಸಗಳರೀತಿಯನ್ನು ತಿಳಿದುಕೊಂಡು ಅದನ್ನು ಭಾರತದೇಶದ ಧರ್ಮಚರಿತ್ರೆಯೊಡನೆ ತುಲನಾತ್ಮಕವಾಗಿ ಚರ್ಚಿಸಿ ಸುಸಂಬದ್ಧವಾದ ಪ್ರಬಂಧವನ್ನು ಬರೆದು ನನ್ನ ಅವಗಾಹನೆಗೆ ಅರ್ಪಿಸಿದರು ಇದನ್ನು ನೋಡಿ ನನಗೆ ಅತ್ಯಾನಂದವಾಯಿತು. ಮುಂಬಯಿ ಯುನಿವರ್ಸಿಟಿಯವರು ಇದನ್ನು ತಮ್ಮ ಪರೀಕ್ಷಕರಿಂದ ಪರೀಕ್ಷಿಸಿ ಶ್ರೀ ವೇದವ್ಯಾಸಾಚಾರ್ಯರಿಗೆ ೧೯೫೫ರಲ್ಲಿ ಡಾಕ್ಟರೇಟ್ ಪದವಿಯನ್ನು ದಯಪಾಲಿಸಿದರು. ಈಪದವಿಯನ್ನುಪಡೆದ ಕಲವೇತಿಂಗಳಲ್ಲಿ ಡಾ. ವೇದವ್ಯಾಸಾಚಾರ್ಯರು ದುರ್ದೈವದಿಂದ ಕರಾಳಕಾಲನ ತುತ್ತಿಗೆ ಆಹುತಿಯಾಗಿ ವೈಕುಂಠಪದವನ್ನೈದಿದರು. ಅವರ ಅಮೂಲ್ಯವಾದ ಪ್ರಬಂಧವನ್ನು ಅವರ ಭಾವಮೈದುನರಾದ ವಿದ್ಯಾವೈಭವ, ಕವಿತಿಲಕ, ವೇದಾಂತಶಿರೋಮಣಿ, ಶ್ರೀಪಾದಪುತ್ರ ರಾಜಾ S. ಗುರುರಾಜಾಚಾರ್ಯರು ಇದೀಗ ತಮ್ಮ ಮುದ್ರಣಾಲದಲ್ಲಿ ಮುದ್ರಿಸಿ ಶ್ರೀ ಪರಿಮಳ ಸಂಶೋಧನ ಮತ್ತು ಪರಕಾಶನಮಂದಿರದ್ವಾರಾ ಪ್ರಕಾಶಗೊಳಿಸಿದ್ದಾರೆ. ಶ್ರೀ ಗುರುರಾಜಾಚಾರ್ಯರು ಈ ಗ್ರಂಥದ ಸೌಷ್ಟವನ್ನು ಕುರಿತು ಪ್ರಸ್ತಾವನಾರೂಪವಾಗಿ ನಾಲ್ಕು ಮಾತುಗಳನ್ನು ಬರೆಯಬೇಕೆಂದು ನನ್ನನ್ನು ಕೇಳಿದ್ದು ಸಮಯೋಚಿತವಾಗಿದೆ.

ಡಾ. ವೇದವ್ಯಾಸಾಚಾರ್ಯರು ಈ ಪ್ರಬಂಧರಚನೆಯಲ್ಲಿ ಉಪಯೋಗಿಸಿದ ಪುಸ್ತಕಗಳ ಪಟ್ಟಿ (Bibliography) ನೋಡಿದರೆ ಅವರು ತಮ್ಮ ವಿಷಯವನ್ನು ಬಹುಮುಖವಾಗಿಯೂ, ಪ್ರಮಾಣವಾಗಿಯೂ ಚರ್ಚಿಸಿದ್ದಾರೆಂದು ಗೊತ್ತಾಗುವುದು. ಹರಿದಾಸರ ಪ್ರಸಿದ್ಧಮತ್ತು ಅಪ್ರಸಿದ್ಧಕೃತಿಗಳನ್ನು ಆಧುನಿಕ ವಿಮರ್ಶಾದೃಷ್ಟಿಯಿಂದ

ಪರೀಕ್ಷಿಸಿದ್ದಲ್ಲದೆ ಹರಿದಾಸರ ಮೇಲೆ ವಿವೇಚಿಸಿದ ಪ್ರಾಚೀನ ಮತ್ತು ಅರ್ವಾಚೀನ ಗ್ರಂಥಕಾರರ ಲೇಖನಗಳನ್ನೂ, ಪ್ರಬಂಧಗಳನ್ನೂ ತಮ್ಮ ಅವಗಾಹನೆಗೆ ತಂದುಕೊಂಡಿದ್ದಾರೆ. ಅವರ ಅಧ್ಯಯನದ ವ್ಯಾಪ್ತಿಯು ಸರ್ವಗ್ರಾಹಿಯಾದುದರಿಂದ ಹರಿದಾಸರನ್ನು ಕುರಿತು ಕನ್ನಡಸಾಹಿತ್ಯದಲ್ಲಿ ಇದ್ದ ಪ್ರಬಂಧಗಳಲ್ಲಿ ಇದರ ಉಪಯುಕ್ತತೆಯು ವಿಶೇಷವಾಗಿದೆಯೆಂದು ಹೇಳಬಹುದು.

ಈ ಪ್ರಬಂಧದ ವಿಷಯನಿರೂಪಣೆಯನ್ನು ಇಲ್ಲಿ ಸಂಕ್ಷೇಪವಾಗಿ ಸಂಗ್ರಹಿಸುತ್ತೇವೆ. ಇದರಲ್ಲಿ ಎರಡು ಭಾಗಗಳಿದ್ದು ಮೊದಲನೆಯ ಭಾಗದಲ್ಲಿ ೧೧ ಅಧ್ಯಾಯಗಳೂ ಎರಡನೆಯದರಲ್ಲಿ ೭ ಅಧ್ಯಾಯಗಳೂ ಇರುತ್ತವೆ. ಅವು ಇಂತಿವೆ.

ಒಂದನೆಯ ಭಾಗ :

I ಹರಿದಾಸರ ಮತ್ತು ಅವರ ಸಾಹಿತ್ಯ.

II ಹರಿದಾಸಸಾಹಿತ್ಯದ ವಿಸ್ತಾರ, ಉದ್ದೇಶ, ಧಾರ್ಮಿಕ ಹಿನ್ನಲೆ.

III ಧರ್ಮದ ಲಕ್ಷಣ ಮತ್ತು ರೂಪರೇಶೆಗಳು.

IV ಧರ್ಮದ ಅವಶ್ಯಕತೆ.

V ಧರ್ಮಗಳ ಇತಿವೃತ್ತ.

VI ಧರ್ಮದ ತಾತ್ವಿಕ ವಿವೇಚನೆ.

VII ವೈದಿಕಧರ್ಮದ ಮುಖ್ಯ ಪ್ರಮೇಯಗಳು.

VIII ಭಕ್ತಿಯ ಪ್ರಾಮುಖ್ಯವಿವೇಚನೆ.

IX ಯೋಗ (Mysticism)

X ಭಾರತದಲ್ಲಿ ಭಕ್ತಿ.

XI ವೈಷ್ಣವ ಸಂತರು.

ಈ ವಿಭಾಗವನ್ನು ಅವಲೋಕಿಸಿದರೆ ವಿಷಯನಿರೂಪಣೆಯ ವ್ಯಾಪ್ತಿಯು ಗೊತ್ತಾಗುವುದು. "ಹರಿದಾಸ ಸಾಹಿತ್ಯವೆಂದರೆ ಹರಿದಾಸರ ಮುಖದಿಂದ ತಾನೇತಾವಾಗಿ ಹೊರಟ ವಾಕ್ಪ್ರವಾಹವು. ಅನುಭವಪೂರ್ಣವಾದ ಈ ಸದುಕ್ತಿಗಳಲ್ಲಿ ಹರಿದಾಸರ ವ್ಯಕ್ತಿವಿಕಾಸವು ಸಂಪೂರ್ಣವಾಗಿರುವುದು". (I, ಪುಟ ೨.) "ದಾಸಸಾಹಿತ್ಯ ಅತ್ಯಂತ ವ್ಯಾಪಕವಾದ ವಾಙ್ಮಯವು. ಇದರಲ್ಲಿ ವೇದ ಉಪನಿಷತ್ತುಗಳಲ್ಲಿ ಉಕ್ತವಾದ ಪರಬ್ರಹ್ಮ ಮತ್ತು ಜಗತ್ತಿನ ಅನೇಕ ವಿಷಯಗಳೂ, ಭಾರತದ ವಿವಿಧ ದರ್ಶನಗಳಲ್ಲಿ

ಚರ್ಚಿತವಾದ ಕೆಲವು ಗಡುಚಾದ ತತ್ವಗಳೂ, ಭಾಗವತಾದಿ ಪುರಾಣಗಳಲ್ಲಿ ಹೇಳಲ್ಪಟ್ಟ ಹರಿಭಕ್ತಿದ್ಯೋತಕವಾದ ಅನೇಕ ಉಪನ್ಯಾಸಗಳೂ ಅಡಕವಾಗಿರುವುವಲ್ಲದೆ ಭಾರತದ ರಾಜನೀತಿಯ, ಧರ್ಮದ, ಲೋಕವ್ಯವಹಾರದ ವಿಷಯಗಳೂ ಸುಂದರವಾಗಿ ಚಿತ್ರಿತವಾಗಿವೆ. II, ಪುಟ 9–3). ಸಮಾಜದಲ್ಲಿ ಬೇರೆ ಬೇರೆ ಹಂತಗಳಿರುವುವು. ಎಲ್ಲಬಗೆಯ ಜನರಿಗೂ ಇದರಲ್ಲಿ ತಕ್ಕ ಸಾಹಿತ್ಯವು ದೊರಕುವುದು. ಧರ್ಮ ಮತ್ತು ದರ್ಶನಗಳ ಚರಿತ್ರೆಯಲ್ಲಿ ದಾಸ ಸಾಹಿತ್ಯದ ಸ್ಥಾನ ಮತ್ತು ಉದ್ದೇಶವನ್ನು ವಿವೇಚಿಸಿ ವರ್ಣಾಶ್ರಮಧರ್ಮದ ತಳಹದಿಯ ಮೇಲೆ ಶ್ರೀಮಧ್ವಾಚಾರ್ಯರ ದ್ವೈತಸಿದ್ಧಾಂತದ ತತ್ವಗಳನ್ನಾಶ್ರಯಿಸಿ ದಾಸಸಾಹಿತ್ಯವು ಕನ್ನಡದಲ್ಲಿ ರಚಿತವಾಗಿದ್ದು, ಜೈನ–ಬೌದ್ಧಧರ್ಮಗಳ ಅಪಪ್ರಚಾರದಿಂದ ಮಲಿನವಾಗಿದ್ದ ವೈದಿಕಮತವನ್ನು ಜನಸಾಮಾನ್ಯಕ್ಕೆ ಹೃದಯಂಗಮವಾಗಿ ಉಪದೇಶಿಸುತ್ತ ಲೋಕಸಂಗ್ರಹಕಾರ್ಯವನ್ನು ಮಾಡುತ್ತದೆ. (II, ಪುಟ 10) ಧರ್ಮವೆಂದರೇನು ? ಅದರ ಸ್ವರೂಪ ಮತ್ತು ವ್ಯಾಪ್ತಿಯು ಎಷ್ಟು ? ಅತೀಂದ್ರಿಯವಾದ ಧರ್ಮವನ್ನು ಏಕೆ ಒಪ್ಪಬೇಕು. ? ಅದಿಲ್ಲದಿದ್ದರೆ ಲೋಕವ್ಯವಹಾರಗಳು ಸಾಗಲಾರವೆ ? ಮಾನವನು ತನ್ನ ಧ್ಯೇಯವನ್ನು ಸಾಧಿಸಲಾರನೇ ? ವಿಜ್ಞಾನದಿಂದ ಜಗತ್ತಿನ ಸಮಸ್ಯೆಗಳನ್ನು ಬಿಡಿಸಲು ಶಕ್ಯವಾದರೆ ಧರ್ಮದ ಅವಶ್ಯಕತೆ ಏನು ? ಈ ವಿಷಯವಿವೇಚನೆಯನ್ನು ಮಾಡುತ್ತ (III) ಗ್ರಂಥಕರ್ತರು ಪಾಶ್ಚಾತ್ಯ ವೈಜ್ಞಾನಿಕರ ಅಭಿಪ್ರಾಯಗಳಿಂದಲೇ ಭೌತವಿಜ್ಞಾನದ ಅಸಮರ್ಥತೆಯನ್ನೂ ಘಾತುಕತ್ವವನ್ನೂ ಎತ್ತಿ ತೋರಿಸಿದ್ದಾರೆ. ಹೀಗಾಗಿ ಜಡಪದಾರ್ಥಗಳನ್ನು ವಿಚಾರಮಾಡುವ ಭೌತ ಶಾಸ್ತ್ರಗಳು ಚೇತನ ಪ್ರಧಾನವಾದ ವಿಜ್ಞಾನಕ್ಕಿಂತ ಬಹಳ ಮುನ್ನಡೆಯಿತು. ಇದೀಗ ಮಾನವನಿಗೆ ಬಿದ್ದ ಅತ್ಯಂತಪ್ರಬಲವಾದ ಆಘಾತ (ಪುಟ ೨೦) ಇಷ್ಟೇ ಅಲ್ಲ ಆಧುನಿಕ ವಿಜ್ಞಾನದಿಂದ ಬರುವ ತಿಳಿವು ಸ್ಪಷ್ಟವಾಗಿಲ್ಲ. ಇದು ಅತಿ ಸಂದಿಗ್ಧ. ಎಲ್ಲ ಭೌತವಿಜ್ಞಾನಿಗಳ ಸಿದ್ಧಾಂತದಲ್ಲಿ ಏಕರೂಪತೆ ಇಲ್ಲ. ಆಧುನಿಕ ವಿಚಾರದಲ್ಲಿ ಸಂಶಯವಾದ ತಲೆ ಹಾಕಿದೆ. ಸಂದಿಗ್ಧವಿಚಾರದಿಂದ ಪ್ರವೃತ್ತಿ ಹೇಗೆ ಉಂಟಾಗಬೇಕು ? ಈ ಭೌತಶಾಸ್ತ್ರದ ವಿಚಾರಗಳಮೇಲೆ ಹೊಸಹೊಸ ರಾಜಕೀಯ ಮತ್ತು ಸಾಮಾಜಿಕತತ್ವಗಳು ಉದ್ಭವವಾಗಿ ಸಮಾಜದ ರಚನೆಯನ್ನೇ ಅಸ್ತವ್ಯಸ್ತಮಾಡಿವೆ (IV 23) ಸಮಾಜ ಸಮಾನತಾವಾದವು ತಲೆಯೆತ್ತಿ ಭೇದವನ್ನೂ ತಾರತಮ್ಯವನ್ನೂ ಅಲ್ಲಗಳೆಯುತ್ತಿದೆ. ಇದು ಸ್ವಭಾವವಿರುದ್ಧವಾದದ್ದು; ಅನುಭವಕ್ಕೆ ವಿಪರೀತವಾದದ್ದು. ಆಧುನಿಕರ ಚಾರ್ವಕವಾದದಿಂದ ಲೋಕಪೀಡೆಯಾಗುವುದಲ್ಲದೆ ಲೋಕಕಲ್ಯಾಣವು ಸರ್ವಥಾ ಘಟಿಸಲಾರದು. 'ನ ಚ ತೇನ ಲೋಕೋಪಕಾರಃ ಪರಸ್ಪರ ಹಿಂಸಾದೀನಾ ಅಪಕಾರಸ್ಯೈವ ಪ್ರಾಪ್ತೇಃ' (ವಿಷ್ಣುತತ್ವ ನಿರ್ಣಯ I) ಧರ್ಮವನ್ನೂ ಅತೀಂದ್ರಿಯ ಶಕ್ತಿಯಾದ ಪರಮಾತ್ಮನನ್ನೂ ಒಪ್ಪದಿದ್ದರೆ ಜನರು ತಮ್ಮ ಸ್ವಾರ್ಥಸಾಧನೆಗಾಗಿ ನಿರ್ಭಯದಿಂದ ಒಬ್ಬರ ಕುತ್ತಿಗೆಯನ್ನು ಇನ್ನೊಬ್ಬರು ಕೊಯ್ಯುತ್ತ ಇರಲು, ಜಗತ್ತು ಅಶಾಂತಿ ಸಾಗರದಲ್ಲಿ ಮುಳುಗಿ ಹೋಗುವುದು. ಧರ್ಮವನ್ನು ಒಪ್ಪದಿದ್ದರೆ ಗತಿಯೇ

ಇಲ್ಲ. (To this reality, approach is not through science, but through art, through the appreciation of nature and aobve all through 'religion-guide to modern thought. P. 133))ಈ ದುರವಸ್ಥೆಯನ್ನು ವಿವೇಚಿಸಿ ಭಾರತದ ದರ್ಶನಕಾರರು—ವೇದಾಂತಿಗಳು ಸರ್ವಸ್ವತಂತ್ರನಾದ ಪರಮಚೇತನನಾದ ಭಗವಂತನನ್ನು ಜಗತ್ತಿನ ಸೃಷ್ಟಿ—ಸ್ಥಿತಿಲಯಾದಿಗಳನ್ನು ಮಾಡುವ ಪ್ರಭುವೆಂದು ಒಪ್ಪಿದ್ದಾರೆ.

ಆಧುನಿಕ ವಿಮರ್ಶಕರು ಧರ್ಮ ಮತ್ತು ಸಂಸ್ಕೃತಿಯ ಚರಿತ್ರೆಯನ್ನು ಪರಿಶೀಲಿಸುತ್ತ ಮಹೆಂಜೋದಾರೋ ಹರಪ್ಪ ಮೊದಲಾದ ಸೈಂಧವ ಸಂಸ್ಕೃತಿ ಆರ್ಯ, ಪ್ರಾಗಾರ್ಯ, ದ್ರಾವಿಡ, ದ್ರಾವಿಡಾನುರೂಪ ಇತ್ಯಾದಿಯಾಗಿ ಅನೇಕ ಬಗೆಯಾಗಿ ಪರಸ್ಪರ ವಿಶಕಲಿತವಾಗಿ ಸಿದ್ಧಾಂತಿಸಿದ್ದಾರೆ. ಬೇರೆ ವಿಮರ್ಶಕರು, ಜಗತ್ತಿನಲ್ಲಿ ಇರಾಣದ ಝುರತುಷ್ಟ್ರ ಮತ, ಹಿಬ್ರೂ ಮತ್ತು ಕ್ರೈಸ್ತ ಮತ, ಇಸ್ಲಾಂಮತ, ಬೌದ್ಧಮತಗಳೂ ಹಿಂದೂಮತವೂ (ಆರ್ಯಧರ್ಮವು) ಹೇಗೆ ಉದಯಹೊಂದಿದವೆಂಬುದನ್ನು ವಿವರಿಸುತ್ತ ವೇದ ಉಪನಿಷತ್ತು, ಸೂತ್ರ, ದರ್ಶನ ಮತ್ತು ವಿವಿಧ ಮತಗಳ ಸ್ವರೂಪವನ್ನು ಉತ್ಕ್ರಾಂತಿತವಾದದ ತತ್ತ್ವದಮೇಲೆ ತಿಳಿಸಿದ್ದಾರೆ. ಈ ವಿವೇಚನೆಯಲ್ಲಿ ಚೇತನಧರ್ಮ, ನೀತಿಗಳು ಮತ್ತು ಅತೀಂದ್ರಿಯ ವ್ಯಾಪಾರಗಳಿಗೆ ಅವಕಾಶವೇ ಇಲ್ಲ. ಸೈಂಧವಸಂಸ್ಕೃತಿಯ ಪುರಸ್ಕರ್ತರಾದ ಪುರಾತತ್ತ್ವವಾದಿಗಳಲ್ಲಿಯೂ ವೇದೋಪನಿಷತ್ತುಗಳ ಅಧ್ಯೇತೃಗಳಾದ ಆಧುನಿಕ ವಿಮರ್ಶಕರಲ್ಲಿಯೂ ಪರಸ್ಪರ ವಿಚಾರಗಳಲ್ಲಿಯೂ ನಿರ್ಣಯದಲ್ಲಿಯೂ ಏಕರೂಪತೆ ಇಲ್ಲ. ಆರ್ಯ—ದ್ರಾವಿಡವಾದ, ಆರ್ಯರು ಮಧ್ಯ—ಏಸಿಯಾ ಮೊದಲಾದ ಹೊರನಾಡುಗಳಿಂದಬಂದು ಭಾರತದಲ್ಲಿದ್ದ ದ್ರಾವಿಡರ ಮೇಲೆ ದಾಳಿಇಟ್ಟು ಅವರನ್ನು ಸೋಲಿಸಿ ದೇಶೀಯಸಂಸ್ಕೃತಿಯ ಮೇಲೆ ಪರಕೀಯ ಆರ್ಯ ಸಂಸ್ಕೃತಿಯನ್ನು ಹೇರಿದರೆಂಬವಾದ, ಭಾಷೆಗಳ ಮೂಲಾನ್ವೇಷಣ ಇವೇಮೊದಲಾದ ಹೊಸ ಸಂಶೋಧನೋಪಾಯಗಳ ವಿಷಯ ನಿರ್ಧಾರಣೆಗೆ ತೀರ ಅಸಮರ್ಥಗಳು ಅಪೂರಕಗಳೂ ಆಗಿದ್ದು ನಿಜವಾದ ತತ್ತ್ವವನ್ನು ಮರೆಮಾಡಿ ಬುದ್ಧಿಭ್ರಮವನ್ನುಂಟುಮಾಡಿರುವುವು. ಆರ್ಯರು ಹೊರಗಿನಿಂದ ಬಂದು ಇಲ್ಲಿ ನೆಲಸಿದರೆಂಬವಾದದಲ್ಲಿ ಹುರುಡಿಲ್ಲ. ಆಧುನಿಕಸಂಶೋಧಕರು ತೋರಿಸುವ ಯುಕ್ತಿಗಳೆಲ್ಲ ಸದೋಷವಾಗಿವೆ. ವೇದಗಳಿಗೆ ಕಾಲವನ್ನು ಕಲ್ಪಿಸಿ ಧರ್ಮವು ಕಾಲಕಾಲಕ್ಕೆ ಬದಲಾಗುತ್ತಹೋಯಿತೆಂದು ಹೇಳುವ ಈ ಸಂಶೋಧಕರಲ್ಲಿ ಐಕ್ಯಮತ್ಯವಿಲ್ಲ. ಭೂಗರ್ಭಶಾಸ್ತ್ರಜ್ಞರು, ಉತ್ಖನನ ಶಾಸ್ತ್ರಜ್ಞರು, ಭಾಷಾಶಾಸ್ತ್ರಜ್ಞರು, ಪ್ರಾಣಿ ಮೂಲಾನ್ವೇಷಣ ಪಟುಗಳು ವೇದಾರ್ಥ ವಿಮರ್ಶಕರು ಇದೇ ಮೊದಲಾದ ಈಗಿನ ಜಿಜ್ಞಾಸುಗಳು ಹೂಡಿದ ಸಂಶೋಧನೆಯ ಪರಿಣಾಮವಾಗಿ ಜ್ಞಾನದಲ್ಲಿ ಸಾಂಕರ್ಯವೂ ಭ್ರಮವೂ ಬಲಗೊಂಡಿದೆ. ವೇದಗಳ ಕಾಲವನ್ನು ಕ್ರಿ. ಶ. ಪೂ. ೧೦೦೦ ವರ್ಷದಿಂದ ಆರಂಭವಾಗಿ ಕ್ರಿ. ಶ. ಪೂರ್ವ ಲಕ್ಷಾವಧಿ ವರ್ಷಗಳನ್ನು ಈ ಸಂಶೋಧಕರ ವಿವೇಚನೆಯು ಗರ್ಭೀಕರಿಸುತ್ತದೆ. ಆದ್ದರಿಂದ ಈ ವಿಚಾರಸರಣಿಯು

ತೀರಬಾಲಿಶವಾಗಿದೆ. ವೇದಗಳೇ ಜಗತ್ತಿನ ಅತ್ಯಂತಪ್ರಾಚೀನವಾದ ಸನಾತನ, ನಿತ್ಯ ಅಪೌರುಷೇಯಗಳಾದ ನಿಧಿ. ಅವುಗಳ ಅರ್ಥವನ್ನು ಭೌತ ಶಾಸ್ತ್ರದ ಬಲದಿಂದಾಗಲಿ, ಐತಿಹಾಸಿಕ ವಿಮರ್ಶೆಯಿಂದಾಗಲಿ ಮಾಡಬಾರದು. ಆದರಿಂದ ಅವುಗಳ ಪರಮತಾತ್ಪರ್ಯವು ಹೊರಡಲಾರದು. ವೇದಗಳು ಭೌತಿಇತಿಹಾಸಗಳಲ್ಲ; ಆತ್ಮ-ಪರಮಾತ್ಮಜ್ಞಾನವನ್ನು ನಿಃಸಂದೇಹವಾಗಿ ಮಾಡಿಕೊಡುವ ಮುಖ್ಯಉಪಾಯ. ಅಲ್ಲಿ ಬಹುದೇವವಾದ, ಏಕದೇವವಾದ, ಅದ್ವೈತವಾದಗಳಿಗೆ ಆಸ್ಪದವಿಲ್ಲ. ಸಮಸ್ತಜಗತ್ತಿಗೆ ಸೃಷ್ಟಿ ಸ್ಥಿತ್ಯಾದಿಗಳನ್ನು ಮಾಡುವ ಪರಮೇಶ್ವರ ಶ್ರೀಹರಿಯೇ ಅಧಿದೈವ, ಉಳಿದ ಅಗ್ನಿ, ಇಂದ್ರಾದಿದೇವತೆಗಳು ಪರಿವಾರದೇವತೆಗಳು. ಆ ಎಲ್ಲ ದೇವತೆಗಳಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿದ್ದು ಕಾರ್ಯವನ್ನುಮಾಡಿ ಮಾಡಿಸುತ್ತ ಅಪ್ರತಿಹತಪ್ರಭುತ್ವದಿಂದ ಮೆರೆಯುವನೆಂದು ತಿಳಿಯಬೇಕು. ಭಾರತವೇ ಈ ವೇದಗಳ ಉದಯಕ್ಕೆ ಮೂಲಸ್ಥಾನ. ಇಲ್ಲಿಯೇ ಎಲ್ಲ ಧರ್ಮಗಳು ಹುಟ್ಟಿ ಪರದೇಶಗಳಿಗೆ ಹೋಗಿ ಅಲ್ಲಿ ಕಾಲಾಂತರದಲ್ಲಿ ಅಭಾಸರೂಪವನ್ನು ತಳೆದವು. ಆದ್ದರಿಂದ ಧರ್ಮ, ಭಾಷೆ, ತತ್ವಜ್ಞಾನಗಳಲ್ಲಿಯೂ ಆಚಾರ ವಿಚಾರ ವಿಹಾರಗಳಲ್ಲಿಯೂ ಪರದೇಶಗಳೊಡನೆ ಒಂದಿಲ್ಲೊಂದು ರೀತಿಯಿಂದ ಸಾಮ್ಯವು ಏರ್ಪಟ್ಟಿದೆ. ಈ ಸಾಮ್ಯದಿಂದ ಪಾಶ್ಚಾತ್ಯಸಂಶೋಧಕರು ಪಶ್ಚಿಮ ಪ್ರದೇಶಗಳಿಂದಲೇ ಸಂಸ್ಕೃತಿಯು ಭಾರತಕ್ಕೆ ಬಂದು ನೆಲೆಸಿದವೆಂದು ವರ್ಣಿಸಿದ್ದಾರೆ. ಈ ವಾದಕ್ಕೆ ಸಾಕಷ್ಟುಪ್ರಮಾಣಗಳಿಲ್ಲ. ವೈದಿಕಧರ್ಮವು ಅತ್ಯಂತಪ್ರಾಚೆನವಾದದ್ದು. ವೇದಗಳನ್ನು ಬ್ರಹ್ಮಸೂತ್ರ ಸಮನ್ವಯಾಧ್ಯಾಯದಲ್ಲಿ ಹೇಳಿದ ನ್ಯಾಯಗಳಿಂದ ಅರ್ಥವಿಸಬೇಕು. ಏಕೆಂದರೆ ವೇದಾರ್ಥಗಳ ನಿರ್ಣಯಕ್ಕಾಗಿಯೇ ಬ್ರಹ್ಮಸೂತ್ರಗಳನ್ನು ವೇದವ್ಯಾಸರು ನಿರ್ಮಿಸಿದರು. ವೇದಾರ್ಥವನ್ನು ನಿರ್ಣಯಿಸಲಿಕ್ಕೆ "ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದ ಏ ವಚ । ಜ್ಯೋತಿ : " ಇತ್ಯಾದಿ ಷಡಂಗಗಳೂ ಅವುಗಳ ವಿವರಣೆಯನ್ನುಮಾಡುವ ಪರಂಪರಾಗತ ಗ್ರಂಥರಾಶಿಯೂ ಸಂಪ್ರದಾಯವೂ ವೇದಗಳ ರಹಸ್ಯವನ್ನು ತಿಳಿಸಬಲ್ಲವೇ ವಿನಾ ಈಗ ಬುದ್ಧಿ ಬಲದಿಂದ ಕಲ್ಪಿಸಲ್ಪಟ್ಟ ಭಾಷಾಶಾಸ್ತ್ರ, ಪ್ರಾಣಿಶಾಸ್ತ್ರ, ಭೂಗರ್ಭ ಶಾಸ್ತ್ರ ಮೊದಲಾದ ಆಧುನಿಕ ಸಂಶೋಧಕರ ಭೌತ ಉಪಾಯಗಳು ಆ ಆಧ್ಯಾತ್ಮ ಗ್ರಂಥದ ಐದಂಪರ್ಯವನ್ನು ತಿಳಿಯಲು ಶಕ್ತವಾಗುವುದಿಲ್ಲ.

'ಯತೋವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' 'ನೇತಿ ನೇತಿ ತ್ಯತ್ತ್ಯ ್ಯಜನ್' (ಭಾಗವತ) ಇತ್ಯಾದಿವಚನಗಳಿಂದ ಈಶ್ವರನು ಭೌತಿಇಂದ್ರಿಯಗಳಿಗೆ ಗೋಚರನಲ್ಲ-ಮೆಂದಮೇಲೆ ಅವನ ಸಂಕಲ್ಪವನ್ನು ಸೃಷ್ಟ್ಯಾದಿ ಮಹಿಮೆಗಳ ಇತ್ಯರ್ಥವನ್ನು ತಿಳಿಯುವುದೆಂತು? ಕೇವಲ ನಮ್ಮ ಐಂದ್ರಯಿಕ ವ್ಯಾಪಾರಗಳಮೇಲೆ ಭಾರಹಾಕಿ ಈ ಪರಮಚೇತನನಾದ ಶ್ರೀಹರಿಪರಮಾತ್ಮನನ್ನು ಅಥವಾ ಚೇತನರ ವ್ಯಾಪಾರಗಳನ್ನು ಊಹಿಸಲು ಮಾಡಿದ ಆಧಿನಿಕ ಭೌತವಾದಗಳು ತೀರ ಅಸಮರ್ಥವಾಗಿವೆಯೆಂಬುದನ್ನು ಗ್ರಂಥಕಾರ

ಧರ್ಮದ ಸಾತ್ವಿಕ ವಿವೇಚನೆಯಲ್ಲಿ ವಿವೇಚಿಸಿ ವೈದಿಕಧರ್ಮದ ಮುಖ್ಯಪ್ರಮೇಯಗಳನ್ನು ಈಶ್ವರ ಜೀವಜಡಾತ್ಮಕಜಗತ್ತು ಪರಸ್ಪರ ಸಂಬಂಧ ಜೀವನು ಈಶ್ವರನನ್ನು ಕಾಣಲಿಕ್ಕೆ ಬೇಕಾಗುವ ಸಾಧನಗಳು ಇತ್ಯಾದಿ ವಿಷಯಗಳನ್ನು ಸಮಯೋಚಿತವಾದ ಪ್ರಮಾಣಗಳನ್ನು ಕೊಟ್ಟು ವಿವರಿಸಿದ್ದಾರೆ. ಮಾರ್ಕ್ಸ ಮೊದಲಾದವರ ಸಮತಾವಾದವನ್ನು ಸದೋಷವೆಂದು ಖಂಡಿಸಿ ತಾರತಮ್ಯವು ಈಶ್ವರಸೃಷ್ಟಿಯ ಮೂಲಾಧಾರವೆಂದು ತೋರಿಸ್ದಾರೆ. ಈ ಸಂದರ್ಭದಲ್ಲಿ ಕರ್ಮವಾದ, ಸ್ವಭಾವವಾದ, ಅದ್ವೈತಿಗಳ ಅಧ್ಯಾಸವಾದ, ಜ್ಞಾನದಿಂದ ಅಜ್ಞಾನನಿವೃತ್ತಿಯಾಗುವದಾದರೆ ಈಶ್ವರ ಪ್ರಸಾದದ ಆವಶ್ಯಕತೆಯೇ ಇಲ್ಲ. ಇತ್ಯಾದಿ ವಿಪರ್ಯಸ್ತಮತಗಳು ಸಂಸಾರದಲ್ಲಿ ಬಳಲುತ್ತಿರುವ ಜೀವನ ಸಮಸ್ಯೆಗಳನ್ನು ಪರಿಹರಿಸಲಾರವೆಂದು ಬಹುಸ್ವಾರಸ್ಯವಾಗಿ ವಿವೇಚಿಸಿ ತಿಳಿಸಿದ್ದಾರೆ. ಈಶ್ವರ ಪ್ರಸಾದದ ಅವಶ್ಯಕತೆಯನ್ನು ಒತ್ತಿಹೇಳಿ ಜೀವನು ಪರಮಸಾಧನವಾದ ಭಕ್ತಿಯನ್ನು ಒಪ್ಪಲೇಬೇಕೆಂದೂ ಈ ಭಕ್ತಿಮಾರ್ಗವು ವೇದಗಳಲ್ಲಿ ಪ್ರತಿಪಾದ್ಯವಾಗಿರುವುದರಿಂದ ಅದು ದ್ರಾವಿಡರ ಸಂಪರ್ಕದಿಂದ ಆರ್ಯರ ಧರ್ಮದಲ್ಲಿ ಬಂದುಸೇರಿತ್ತೆಂದುಹೇಳುವ ಕೆಲವು ಆಧುನಿಕ ವಾದಿಗಳ ವಾದಸರಣಿಯು ಸದೋಷವೆಂದು ವೇದಮಂತ್ರಗಳ ಉಲ್ಲೇಖಗಳಿಂದ ಸಿದ್ಧಮಾಡಿದ್ದಾರೆ. ಈಶ್ವರಾಪರೋಕ್ಷವಾದ ಮೇಲೆ ಅವನ ಅತ್ಯರ್ಥ ಪ್ರಸಾದದಿಂದ ಮೋಕ್ಷವಾಗುವುದು, ಈಶ್ವರಸಾಕ್ಷಾತ್ಕಾರಕ್ಕೆ ಶಾಸ್ತ್ರಶ್ರವಣ, ಮನನ, ನಿಧಿಧ್ಯಾಸ (ಧ್ಯಾನ)ಗಳು ಅತ್ಯವಶ್ಯಕವಾದ ಉಪಾಯಗಳು. ಚಿತ್ತವೃತ್ತಿನಿರೋಧದಿಂದ ಅಂತರಂಗದಲ್ಲಿ ಪರಮಾತ್ಮನ ಮೂರ್ತಿಯನ್ನು ಪ್ರಾಕೃತಮನಸ್ಸಿನಲ್ಲಿ ಯೋಗದಿಂದ ಕಂಡು ಮುಂದೆ ಜ್ಞಾನಾಗ್ನಿಯಿಂದ ಪರಮಾತ್ಮನ ಪ್ರಸಾದದಿಂದ ಪ್ರಾಕೃತಮನಸ್ಸನ್ನುಸುಟ್ಟು ಚೇತನ ರೂಪವಾದ ಸ್ವರೂಪಮನಸ್ಸಿನಲ್ಲಿ ಅವನನ್ನು ಪ್ರತ್ಯಕ್ಷೀಕರಿಸುವದೇ ಅಪರೋಕ್ಷಜ್ಞಾನವು. ಭಕ್ತಿ ಪ್ರಸಾದ ಜ್ಞಾನಗಳು ಪರಸ್ಪರ ಅವಿಯುಕ್ತವಾಗಿದ್ದು ಮೋಕ್ಷದಲ್ಲಿಯೂ ಆನಂದರೂಪವಾಗಿಉಳಿಯುವುವು.

ಈ ಯೋಗಸಾಧನೆಯು ಜಗತ್ತಿನ ಎಲ್ಲಧರ್ಮಗಳಲ್ಲಿಯೂ ಒಂದಿಲ್ಲೊಂದುರೂಪದಿಂದ ಇರುವದು. ಪಾಶ್ಚಾತ್ಯತತ್ತ್ವವಿಜ್ಞಾನಿಗಳು ಈ ಯೋಗಸಾಧನೆಗೆ Mysticism ಎನ್ನುವರು. ಇದರ, ಸ್ವರೂಪನಿರೂಪಣೆಯಲ್ಲಿ ಅನೇಕಭಿನ್ನಾಭಿಪ್ರಾಯಗಳುಂಟು. ಸರ್ ವಿಲಿಯಂ ಜೇಮ್ಸ್, ರುಫುಸ್ ಜೋನ್ಸ ಮೊದಲಾದವರ ವಿವೇಚನೆಗಳನ್ನು ಹೇಳುತ್ತ ವೈದಿಕಸಿದ್ಧಾಂತದಲ್ಲಿ ಯೋಗಕ್ಕೆ ಇರುವವಿಶಿಷ್ಟಾರ್ಥವನ್ನು ಚಿತ್ರಿಸಿದ್ದಾರೆ. ಈ ಯೋಗದಲ್ಲಿ ಜ್ಞಾನ ಭಕ್ತಿ ವಿರಕ್ತಿಗಳ ಸಮಾವೇಶವಿದೆ. ಹಿಬ್ರೂಮತ, ಕ್ರೈಸ್ತಮತ, ಇಸ್ಲಾಂಮತದ ಸೂಫೀಪಂಥ ಇವೆಲ್ಲ ಯೋಗಸಾಧನೆಗೆ ಪ್ರಾಶಸ್ತ್ಯವನ್ನು ಕೊಟ್ಟಿವೆ. ಆದರೆ ಅಲ್ಲಿ ವೈದಿಕಯೋಗದ ಏಕದೇಶವನ್ನು ಮಾತ್ರ ಕಾಣಬಹುದಾಗಿದೆ. ಅದ್ವೈತಿಗಳೂ ಭಕ್ತಿ ಮತ್ತು ಯೋಗವನ್ನು ಪುರಸ್ಕರಿಸುವರು. ಆದರೆ ಅದಕ್ಕೆ ಬೇಕಾಗುವ ತಾರತಮ್ಯ, ಬಿಂಬ ಪ್ರತಿಬಿಂಭಾವ,

ಈಶ–ದಾಸಭಾವಗಳು ಸರ್ವಾಂಶದಿಂದ ಇಲ್ಲದಿರುವುದರಿಂದ ಆ ಯೋಗದಲಕ್ಷಣವು ವಿಷಯವ್ಯಾಪಕವಾಗಲಾರದು. ಬ್ರಹ್ಮಸಾಕ್ಷಾತ್ಕಾರವನ್ನು ಪಡೆದ ಯೋಗಿಗಳ ಯೋಗದ ಸ್ವರೂಪವು ಈ ತತ್ತ್ವಜ್ಞಾನಿಗಳ ಭೌತಮನಸ್ಸಿನ ತರ್ಕಕ್ಕೆ ವಿಷಯವಾಗಲಾರದೆಂದು ತಿಳಿಯಬೇಕಾಗುವುದು. **ಅಪೌರುಷೇಯಗಳಾದ** ವೇದಗಳಿಂದಲೂ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದ ಶುಕ, ನಾರದ, ಪ್ರಹ್ಲಾದಾದಿಗಳ ಅನುಭವ ಕಥನದಿಂದಲೂ ಯಥಾಕಥಂಚಿತ್ ಅದನ್ನು ಅಧಿಕಾರಜೀವರು ಗ್ರಹಿಸಬಹುದು.

ಭಾರತದಲ್ಲಿ ಭಕ್ತಿಯಪ್ರವಾಹವು ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ವಿವಿಧರೂಪಗಳಲ್ಲಿ ಹರಿದುಬಂದಿದೆ. ಯೋಗವಿಲ್ಲದೆ ಬ್ರಹ್ಮಸಾಕ್ಷಾತ್ಕಾರವಾಗಲಾರದು. ಅಪರೋಕ್ಷಜ್ಞಾನಕ್ಕೆ ಭಕ್ತಿ–ಪ್ರಸಾದಗಳು ಅವಶ್ಯವಾಗಿವೆ. ಉತ್ತರದಲ್ಲಿ ಭಕ್ತೆ ಮೀರಾ, ಸೂರದಾಸ, ತುಳಸೀದಾಸ, ಕಬೀರದಾಸ, ಬಂಗಾಳದ ಜಯದೇವ, ಚಂಡೀದಾಸ ಚೈತನ್ಯಪ್ರಭು, ಆಂಧ್ರದ ರಾಮದಾಸ, ಪೋತನ, ತ್ಯಾಗರಾಜ, ದ್ರಾವಿಡರ ಅಳ್ವಾರರು, ಮಹಾರಾಷ್ಟ್ರದ ಜ್ಞಾನದೇವ, ತುಕಾರಾಂ, ಏಕನಾಥ, ಗುಜರಾತಿನ ನರಸೀಭಗತ ಮೊದಲಾದವರು ಹರಿಶರಣರ ಶ್ರೇಣಿಯಲ್ಲಿ ಕಂಗೊಳಿಸುತ್ತಿದ್ದಾರೆ. (ಪುಟ,೨೧೦) ಕರ್ಣಾಟಕದಲ್ಲಿ ಹರಿಭಕ್ತಿಯು ೧೨ನೆಯಶತಮಾನದಲ್ಲಿ ಶ್ರೀಮಧ್ವಾಚಾರ್ಯರಿಂದ ಅಂಕುರಿಸಿ ಶ್ರೀನರಹರಿತೀರ್ಥರಿಂದ ರೂಪುಗೊಂಡು ೧೫ನೆಯ ಶತಮಾನದಲ್ಲಿ ಶ್ರೀಪಾದರಾಯರಿಂದ ಬಲಗೊಂಡಿತು. ಮುಂದೆ ಶ್ರೀವ್ಯಾಸರಾಜ; ಪುರಂದರದಾಸ, ಕನಕದಾಸ, ಮೊದಲಾದ ದಾಸಾಗ್ರಣಿಗಳ ಅಪ್ಯಾಯಮಾನವಾದ ಗೀತಗಳಿಂದ ಪ್ರಫುಲ್ಲವಾಗಿಬೆಳೆಯಿತು. ಪದ್ಮಪುರಾಣದ ಒಂದು ವಚನದಲ್ಲಿ ''ಉತ್ಪನ್ನಾ ದ್ರಾವಿಡೇ ಸಾಽಹಂ ವೃದ್ಧಿಂ ಕರ್ಣಾಟಕೇ ಗತಾ । ಕ್ವಚಿತ್ ಕ್ವಚಿನ್ಮಮಹರಾಷ್ಟ್ರೇ ಗುರ್ಜರೇ ಜೀರ್ಣತಾಂಗತಾ॥''

(೧–೪೮) ಭಕ್ತಿಯು ದಕ್ಷಿಣದಲ್ಲಿ ಪ್ರವಹಿಸಿದ ರೀತಿಯನ್ನು ಹೇಳಿದ್ದು ಗಮನೀಯವಾಗಿದೆ. ಉತ್ತರಾಪಥದಲ್ಲಿ ಬಂಗಾಲ (ಚೈತನ್ಯ) ರಾಜಸ್ಥಾನ (ಮೀರಾಬಾಯಿ) ಹಿಂದೂಸ್ಥಾನಿ (ಕಬೀರದಾಸ) ಮಗ್ಗುಲಲ್ಲಿ ಮಹಾರಾಷ್ಟ್ರ (ನಾಮದೇವ, ತುಕಾರಾಮ) ದಕ್ಷಿಣದಲ್ಲಿ ದ್ರಾವಿಡ ನಮ್ಮಾಳ್ವಾರ್, ಕುಲಶೇಖರಾಳ್ವಾರ್, ತಿರುಮಂಗೈ ಆಳ್ವಾರ್, ಅಂಡಾಳ್, ಮೊದಲಾದವರು, ಆಂಧ್ರದಲ್ಲಿ ತ್ಯಾಗರಾಜಮೊದಲಾದವರು–ಹೀಗೆ ನಾಲ್ಕುಕಡೆಗೆ ಪ್ರಾಚೀನ ಕಾಲದಿಂದಲೂ ಭಕ್ತಿಯಪ್ರವಾಹವು ಪ್ರವಹಿಸುತ್ತಿರುವಾಗ ಮಧ್ಯವರ್ತಿಯಾದ ಕರ್ಣಾಟಕದಲ್ಲಿ ಅದು ಪೂರ್ಣರೂಪದಿಂದ ಆವಿರ್ಭಾವಹೊಂದಿತೆಂದು 'ಸಾಽಹಂವೃದ್ಧಿಂ ಕರ್ಣಾಟಕೇಗತಾ' ಎಂಬ ಉಕ್ತಿಯಿಂದ ಸ್ಪಷ್ಟವಾಗುತ್ತದೆ. ಕರ್ಣಾಟಕದ ಹರಿದಾಸರು ತಮ್ಮ ಸೇವೆಯನ್ನು ಹೀಗೆ ಪರಿಶುದ್ಧವಾಗಿ ಸಲ್ಲಿಸಿ ಆತ್ಮೋದ್ಧಾರವನ್ನು ಮಾಡಿಕೊಂಡರಲ್ಲದೆ ಜಗತ್ತಿಗೆ ಅಸದೃಶವಾದ ಸುಖ ಶಾಂತಿಗಳ ಬೀಜವನ್ನು ಊರಿದರೆಂಬುದನ್ನು

ಡಾ. ವೇದವ್ಯಾಸಾಚಾರ್ಯರು ಎರಡನೆಯ ಭಾಗದಲ್ಲಿ ಹೃದಯಂಗಮವಾಗಿ ನಿರೂಪಿಸಿದ್ದಾರೆ.

ಎರಡನೆಯ ಭಾಗದಲ್ಲಿ ಈ ವಿಷಯಗಳು ಚರ್ಚಿಸಲ್ಪಟ್ಟಿವೆ :–

XII. **ಕರ್ನಾಟಕದ ಹರಿದಾಸರು** :–ಇದರಲ್ಲಿ ಹರಿದಾಸರ ವೈಶಿಷ್ಟ್ಯ, ಪೂರ್ವಪರಂಪರೆ, ಶ್ರೀ ಮಧ್ವಾಚಾರ್ಯರ ಅವತಾರ, ಸಂಸ್ಕೃತ ಪ್ರಾಕೃತವಿಚಾರಗಳು ಚರ್ಚಿಸಲ್ಪಟ್ಟಿವೆ.

XIII. **ಹರಿದಾಸರ ಪರಿಚಯ** :–ಇದರಲ್ಲಿ ದಾಸಸಾಹಿತ್ಯವು ನರಹರಿತೀರ್ಥರಿಂದ ಆರಂಭವಾಗಿ ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರು, ವಿಜಯೀಂದ್ರರು, ಪುರುಂದರದಾಸರು,, ಗದುಗಿನ ನಾರಾಯಣಪ್ಪ ವೈಕುಂಠದಾಸರು, ಕನಕದಾಸರು ಇವರಿಂದ ಅತ್ಯುನ್ನತಸ್ಥಾನಮಾನವನ್ನು ಮುಟ್ಟಿತ್ತೆಂದು ಹೇಳಿದೆ. ಮತ್ತು ಶ್ರೀರಾಘವೇಂದ್ರ ತೀರ್ಥರ ಜೀವನಾಳಿಕೆಯಿಂದ ಪ್ರಸನ್ನವೆಂಕಟದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು ಮೊದಲಾದ ಮಹಾನುಭಾವರಾದ ದಾಸರಿಂದ ದಾಸಸಾಹಿತ್ಯವು ಬಹುಮುಖವಾಗಿ ಬೆಳೆಯಿತು.

XIV. **ಹರಿದಾಸ ಸಾಹಿತ್ಯ ಸರಣಿ** :– ಇದರಲ್ಲಿ ಗ್ರಂಥಕಾರರು ಹರಿದಾಸರ ವರ್ಣನಾವೈಖರಿಯನ್ನೂ ಭಕ್ತಿಯ ಪಾರಮ್ಯವನ್ನೂ ಪರಮಾತ್ಮನ ಮತ್ತು ಅವನ ಪರಿವಾರದ ದೇವತೆಗಳು, ಸೃಷ್ಟಿಯವೈಚಿತ್ರ್ಯ ಅಗಾಧಮಹಿಮೆ ಇತ್ಯಾದಿ ವಿಷಯಗಳನ್ನು ಬಹುಸಮರ್ಪಕವಾದ ಹಾಡುಗಳನ್ನು ಉದಾಹರಿಸಿ ಪ್ರತಿಪಾದಿಸಿದ್ದಾರೆ. ಸಾಧನತಾರತಮ್ಯ, ತೀರ್ಥಕ್ಷೇತ್ರಗಳಮಹಿಮೆ, ಪ್ರಾರ್ಥನಾ, ಉಪಾಸನಾ, ಸಾಕ್ಷಾತ್ಕಾರ, ಇವೇ ಮೊದಲಾದವುಗಳನ್ನು ವಿವರವಾಗಿ ಚಿತ್ರಿಸಿ ಹರಿದಾಸರು ಉಪಯೋಗಿಸಿದ ವಿವಿಧ ಅಲಂಕಾರರಸಪೋಷಣೆಗಳನ್ನು ಉಪಯುಕ್ತ ಹಾಡುಗಳ ಉದಾಹರಣೆಯಿಂದ ತಿಳಿಸಿ ಹೇಳಿದ್ದಾರೆ.

XV. ಈ ಅಧ್ಯಾಯವು ಹರಿದಾಸರ ಗ್ರಂಥಗಳ ಸಾರಾನುವಾದ ಮತ್ತು ವಿಮರ್ಶೆಗಳಿಗೆ ಮೀಸಲಾಗಿದೆ. ಮುಖ್ಯವಾಗಿ ಶ್ರೀವಾದಿರಾಜರ ಸ್ವಪ್ನಪದ, ಗುಂಡಕ್ರಿಯೆ ಲಕ್ಷ್ಮೀಶೋಭಾನೆಗಳೂ ಕನಕದಾಸರ ಹರಿಭಕ್ತಿಸಾರವೂ, ಮೋಹನದಾಸರ ಕೋಲುಹಾಡು, ಜಗನ್ನಾಥದಾಸರ ತತ್ವ ಸುವ್ವಾಲಿ, ಹರಿಕಥಾಮೃತಸಾರಗಳೂ ವಿಶೇಷವಾಗಿ ವಿಮರ್ಶೆಗೊಳಪಟ್ಟಿವೆ.

XVI, XVII. ಹರಿದಾಸರಿಂದ ಕರ್ನಾಟಕಸಂಗೀತಕ್ಕಾದ ಉಪಕಾರ, ದಾಸಸಾಹಿತ್ಯದ ಭಾಷೆ ಮತ್ತು ವಾಙ್ಮಯದ ಸ್ವರೂಪಗಳು ಚರ್ಚಿಸಲ್ಪಟ್ಟಿವೆ.

XVIII. ಈ ಹದಿನೆಂಟನೆಯ ಪ್ರಕರಣದಲ್ಲಿ ಜಗತ್ತಿಗೆ ಹರಿದಾಸರು ನೀಡಿದ ಸಂದೇಶವೂ ಅವರು ಉಪದೇಶಿಸಿದ, ಶ್ರೀಹರಿಯು ಸರ್ವತ್ರವ್ಯಾಪ್ತನಾಗಿದ್ದು

ಸರ್ವರಕ್ಷಕನಾಗಿದ್ದಾನೆಂಬ ಅಬಾಧಿತ ತತ್ತ್ವವೂ—ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ.

ಅಂತೂ ಈ ಹದಿನೆಂಟು ಪ್ರಕರಣಗಳಲ್ಲಿ ಡಾ. ವೇದ್ಯಾಸಾಚಾರ್ಯರು ಹರಿದಾಸಸಾಹಿತ್ಯದ ಅಂತರಂಗ ಮತ್ತು ಬಹಿರಂಗ ಪರೀಕ್ಷೆಯನ್ನು ಬಹುಜಾಣ್ಮೆಯಿಂದ ಮಾಡಿ ಅಲ್ಲಲ್ಲಿ ದಾಸರ ಪದಗಳನ್ನು ಉದಾಹರಿಸಿ ತೋರಿಸಿದ್ದಾರೆ. ಮೊದಲನೆಯ ವಿಭಾಗದಲ್ಲಿ ಹರಿದಾಸರ ಸಾಹಿತ್ಯದ ಹಿನ್ನಲೆಯಲ್ಲಿ ಇದ್ದ ತತ್ವಗಳನ್ನು ಜಗತ್ತಿನ ವಿವಿಧ ಕ್ಷೇತ್ರಗಳಲ್ಲಿ ನಡೆದುಬಂದ ಮತ್ತು ನಡೆಯುತ್ತಿರುವ ಧಾರ್ಮಿಕ ಚಲನವಲನೆಗಳ ಸಿಂಹಾವಲೋಕನದಿಂದ ಚರ್ಚಿಸಿ ಭಕ್ತಿಮಾರ್ಗದ ತಾಯಿಬೇರಾದ ವೈದಿಕಸಿದ್ಧಾಂತ ಅಥವಾ ಮಧ್ವ ಸಿದ್ಧಾಂತದ ಸುಬಂಧುರತೆಯನ್ನೂ, ಲೋಕಕಲ್ಯಾಣ ನಿರ್ವಹಣ ಶಕ್ತಿಯನ್ನೂ ಬಹು ಮಾರ್ಮಿಕವಾಗಿ ಚರ್ಚಿಸಿ ಮನಗಾಣಿಸಿದ್ದಾರೆ.

ಈ ಹರಿದಾಸರ ವಿಮರ್ಶಾತ್ಮಕ ಅಧ್ಯಯನವು ಕೇವಲ ಕನ್ನಡ ಹರಿದಾಸರುಗಳಿಗೆ ಮರ್ಯಾದಿತವಾಗಿಲ್ಲ. ಒಬ್ಬೊಬ್ಬ ದಾಸರ ಜೀವನ ಚರಿತ್ರೆ ಮತ್ತು ಕೃತಿಗಳನ್ನು ಚರ್ಚಿಸುವುದರಲ್ಲಿ ತಾತ್ಪರ್ಯವುಳ್ಳದ್ದಾಗಿಲ್ಲ. ಇದು ಮಾನವ ಸಂಸ್ಕೃತಿಯ ಉದಾತ್ತತೆಯನ್ನು ಶಾಸ್ತ್ರೀಯವಾಗಿ ಚಿತ್ರಿಸುವ ಬಹುಮುಖ ಪ್ರಸರವುಳ್ಳ ವಿಚಾರ ಗೋಷ್ಠಿಯ ಸಿದ್ಧಾಂತವನ್ನು ಸಂಗ್ರಹಿಸುವ ಕೈಗನ್ನಡಿಯು. ಮಹಾಭಾರತವು ವಿಶ್ವಸಂಸ್ಕೃತಿಯನ್ನು ರೂಪಿಸುವಂತೆ ಹರಿದಾಸರ ಕೃತಿಗಳು ಭಿನ್ನ ಭಿನ್ನ ಮಟ್ಟದ ಮಾನವರ ಮನೋವ್ಯಾಪಾರಗಳನ್ನು ಸಮಯೋಚಿತವಾದ ಅನುಭವದ ಉದಾಹರಣೆಗಳನ್ನು ಕೊಟ್ಟು ಮನದಟ್ಟಾಗುವಂತೆ ಬಿಂಬಿಸುತ್ತವೆ. ಡಾ. ವೇದವ್ಯಾಸಾಚಾರ್ಯರು ಈ ತಮ್ಮ ವಿಷಯದ ವ್ಯಾಪ್ತಿಯನ್ನು ಕರ್ಣಾಟಕಕ್ಕೆಮಾತ್ರ ನಿಲ್ಲಿಸದೆ, ಇಡಿಯ ಭಾರತದೇಶದ ವಿವಿಧ ದೇಶಭಾಗಗಳ ಭಕ್ತಿಯ ವ್ಯಾಪಾರಗಳನ್ನು ವಿಮರ್ಶಾ ವಿಷಯವಾಗಿ ಮಾಡಿಕೊಂಡಿದ್ದಾರೆ. ಭಾರತವು ಜಗತ್ತಿನ ರಾಮಣೀಯಕದ ತವರು ಭೂಮಿಯು. ಅಲ್ಲಿ ಪೂರ್ವ ಪಶ್ಚಿಮ ದೇಶಗಳಲ್ಲಿ ಬಾಳಿಬೆಳಗಿದ್ದ ಮಹಾತತ್ವಜ್ಞಾನಿಗಳಾದ ವಿಭೂತಿಪುರುಷರ ವಿಚಾರತರಂಗಗಳು ಮೂಡಿವೆ; ಕೃತಿಗಿಳಿದಿವೆ; ಕೃತಕೃತ್ಯತೆಯನ್ನು ಪಡೆದಿವೆ. ಆದರೂ ಪಾಶ್ಚಾತ್ಯ ತತ್ವಜ್ಞಾನಿಗಳ ವಿಚಾರಗಳನ್ನು ಇಜಿಪ್ಟ್, ಗ್ರೀಸ್, ಚೀಣಾ ಮತ್ತು ಜಪಾನ್, ಇರಾಣ, ಹಿಬ್ರೂ ಮತ್ತು ಕ್ರೈಸ್ತಮತಗಳ ಕವಾಟದಲ್ಲಿ ಆಧ್ಯಾತ್ಮಿಕ ಹಿನ್ನಲೆಯಲ್ಲಿ ಚರ್ಚಿಸಿ ಅಲ್ಲಿ ತೋರಬಂದ ಅಸಮಗ್ರತೆಯನ್ನೂ ಅಪರ್ಯಾಪ್ತಿಯನ್ನೂ ಎತ್ತಿ ತೋರಿಸಿ ಕೊನೆಗೆ ಹಿಂದೂಮತವನ್ನು ವಿಚಾರವಿಷಯಕ್ಕೆ ತೆಗೆದುಕೊಂಡು ಅಲ್ಲಿರುವ ಗುಣದೋಷಗಳನ್ನು ಎತ್ತಿತೋರಿಸಿದ್ದಾರೆ. ಪಾಶ್ಚಾತ್ಯರ ಸಂಸರ್ಗದಿಂದಲೂ ಬುದ್ಧಿದೋಷದಿಂದಲೂ ಉದಯ ಹೊಂದಿದ್ದ ಆಧುನಿಕ ಭೌತವಾದವೂ ಜೈನ—ಬೌದ್ಧ, ಸಾಂಖ್ಯ ಚಾರ್ವಾಕ, ಮೀಮಾಂಸಾದಿ ಮತಗಳೂ, ಸ್ವತಃಪ್ರಮಾಣಗಳಾದ ವೇದಗಳ ತಾತ್ಪರ್ಯವನ್ನು ಕದಲಿಸಿ, ಭಾರತದೇಶದ ತತ್ವವಿಚಾರರಂಗದಲ್ಲಿ ಸಾಂಕರ್ಯವನ್ನೂ ವಿಪರ್ಯಾಸವನ್ನೂ ಹರಡಿದವು "ಬುದ್ಧಿದೋಷ

ನಿರಾಸಮಾತ್ರಕಾರಣತ್ವಾತ್ ಯುಕ್ತೀನಾಮ್'' ಎಂದು ಶ್ರೀಮಧ್ವಾಚಾರ್ಯರು ಶ್ರೀವಿಷ್ಣುತತ್ತ್ವನಿರ್ಣಯದಲ್ಲಿ ಹೇಳಿದಂತೆ ಈ ಅನ್ಯಥಾಪ್ರತಿಪತ್ತಿಯನ್ನು ಶ್ರೀವೇದವ್ಯಾಸರು ಬ್ರಹ್ಮಸೂತ್ರಗಳನ್ನು ರಚಿಸಿ ವೇದಗಳಿಗೆ ಸರಿಯಾದ ಅರ್ಥವನ್ನು ಹೇಳಿ ನಿರಾಸಮಾಡಿದರು. ಮುಂದೆ ಕಾಲಕ್ರಮದಿಂದ ಅದನ್ನು ಅಪಾರ್ಥಗೊಳಿಸಿದ ಅದ್ವೈತಾದಿಮತಗಳನ್ನು ಖಂಡಿಸಿ ಶ್ರೀಮಧ್ವಾಚಾರ್ಯರು ವೈದಿಕ ಸಿದ್ಧಾಂತವನ್ನು ಉಜ್ಜೀವನಗೊಳಿಸಿದರು. ಅವರ ಸಿದ್ಧಾಂತವೇ ಮಧ್ವ ಸಿದ್ಧಾಂತ ಅಥವಾ ದ್ವೈತಸಿದ್ಧಾಂತ. ಈ ಮಧ್ವಸಿದ್ಧಾಂತದ ವಿಚಾರ ಲಹರಿಯಮೇಲೆ ಹರಿದಾಸ ಸಾಹಿತ್ಯ ಪ್ರವಾಹವು ನಿಂತಿದೆಯೆಂದು ಈ ಗ್ರಂಥದಲ್ಲಿ ಪ್ರತಿಪಾದಿಸಲ್ಪಟ್ಟಿದೆ. **ಈ ವಿಷಯ ವಿವೇಚನೆಯಿಂದ 'ಕರ್ನಾಟಕದ ಹರಿದಾಸರು (ವಿಮರ್ಶಾತ್ಮಕ ಅಧ್ಯಯನ)''** ಎಂಬ **ಈ ಗ್ರಂಥದ ಸ್ಥಾನವು ಜಾಗತಿಕ ಜ್ಞಾನಸಾಹಿತ್ಯದಲ್ಲಿ ಅತ್ಯುನ್ನತವಾಗಿದೆಯೆಂಬುದು ಸ್ಪಷ್ಟವಾಗುತ್ತದೆ.** ಈ ರೀತಿಯ ಸಮಗ್ರದೃಷ್ಟಿಯ ವಿಚಾರಸಾಹಿತ್ಯವು ಕನ್ನಡದಲ್ಲಿ ಅಪರೂಪ; ಇಲ್ಲವೆಂದರೂ ಸಲ್ಲುವುದು.

ಡಾ. ವೇದವ್ಯಾಸಾಚಾರ್ಯರು ತಮ್ಮ Ph. D ಡಿಗ್ರಿಯ ಪ್ರಬಂಧದ ವಿಷಯ ಮರ್ಯಾದೆಯನ್ನು ಮೀರಬಾರದೆಂದು ಇಜಿಪ್ತ, ಗ್ರೀಸ್, ಚೀಣಾ, ಇರಾಣ ಮೊದಲಾದ ದೇಶಗಳ ತತ್ತ್ವಜ್ಞಾನಿಗಳ ಸಿದ್ಧಾಂತಗಳನ್ನು ಅತಿ ಸಂಕ್ಷೇಪವಾಗಿ ರೂಪಿಸಿದ್ದಾರೆ. ಅನುಷಂಗಿಕವಾಗಿ ಬಂದ ವಿಷಯಗಳ ಚರ್ಚೆಯನ್ನು ಮಾಡುವ ಗೂಜಿಗೆ ಹೋಗಿಲ್ಲ, ಆದರೆ ಅವೆಲ್ಲವುಗಳಲ್ಲಿ ತೋರಿಬಂದ ಅಪರ್ಯಾಪ್ತತೆಯನ್ನು ಎತ್ತಿ ತೋರಿಸಿ ಅಲ್ಲಿ ಭೌತವಾದ ಪ್ರಭಾವವನ್ನು ಸೂಚಿಸಿ ಭಾರತದೇಶದ ತತ್ವಜ್ಞಾನಿಗಳ ವಿಚಾರಸರಣಿಯ ಅಧ್ಯಾತ್ಮರಂಗದ ಎಲ್ಲೆಯನ್ನು ಮೀರಿಲ್ಲವೆಂದು ಹೇಳಿದ್ದಾರೆ. ಅಲ್ಲಿ ಪ್ರಚುರವಾಗಿದ್ದ ಜೈನಬೌದ್ಧಾದಿಮತಗಳು ಅಭಾಸಮತಗಳು. ವೈದಿಕಮತವೇ ಸರ್ವಮಾನ್ಯವಾದ ಸುಬಂಧುರವಾದ ಪರಮಸಿದ್ಧಾಂತವು. ಅದನ್ನು ಹರಿದಾಸರು ತಮ್ಮ ಹಾಡುಗಳಿಂದ ಜನಸಾಮಾನ್ಯರಲ್ಲಿ ಪ್ರಚಾರಗೊಳಿಸಿದರು. 'ಧರ್ಮಃ ಪ್ರೋಜ್ಝಿತ ಕೈತವೋತ್ರ ಪರಮೋ'' ಪರಮಾತ್ಮನ ಜ್ಞಾನಕ್ಕೆ ಸಾಧನವಾದ ನಿರ್ವ್ಯಾಜವಾದ ಭಾಗವತಧರ್ಮಗಳನ್ನು ಅದರ ವಿವಿಧಭಾಗಗಳೊಂದಿಗೆ ಬಹು ಸ್ವಾರಸ್ಯವಾಗಿ ಒತ್ತಿಹೇಳಿ ಜನರ ನೈತಿಕಮಟ್ಟವನ್ನು ಉದಾತ್ತಗೊಳಿಸಿದರು.

ಸಾಧನ ನಿರೂಪಣೆಯಲ್ಲಿಯೂ ಉಪಾಸನಾ ಸಾಧನೆಯಲ್ಲಿಯೂ ಸಾಧಕನು ಅನುಸರಿಸತಕ್ಕ ನಿಯಮಗಳನ್ನು ಬಹುಜಾಣ್ಮೆಯಿಂದ ದಾಸರ ಪದಗಳನ್ನು ಉದಾಹರಿಸಿ ವಿವರಿಸಿದ್ದಾರೆ. ''ದಾನ ತೀರ್ಥ ತಪೋಯಜ್ಞ ಪೂರ್ವಾಃಸರ್ವೇಪಿ ಸರ್ವದಾ । ಅಂಗಾನಿ ಹರಿಸೇವಾಯಾಂ ಭಕ್ತಿಸ್ತ್ವೇಕಾ ವಿಮುಕ್ತಯೇ ॥'' ಎಂಬ ತಾತ್ಪರ್ಯನಿರ್ಣಯದ ವಾಕ್ಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಗ್ರಂಥಕರ್ತರು ಒಂದೊಂದು ಸಾಧನಕ್ಕೆದಾನ, ತೀರ್ಥ, ತಪಸ್ಸು, ಯಜ್ಞ ಇತ್ಯಾದಿಗಳಿಗೆ ಅನುಕೂಲವಾದ ಹಾಡುಗಳನ್ನು ಆರಿಸಿದ್ದಾರೆ.

ಮುಂದೆ 'ಕರ್ಮಣಾ ಜ್ಞಾನಮಾತನೋತಿ' ಎಂಬ ಪ್ರಮಾಣಾನುಸಾರವಾಗಿ ಅಧಿಕಾರಿ ಜೀವನ ಯೋಗ್ಯತೆಗನುಸರಿಸಿ ಕರ್ಮ, ಶ್ರವಣ ಮನನ ನಿಧಿಧ್ಯಾಸನ ಇತ್ಯಾದಿ ಉಪಾಯಗಳಿಂದ ಜ್ಞಾನವು ಹುಟ್ಟುವ ಕ್ರಮವನ್ನೂ ದಾಸರ ಪದಗಳಿಂದ ತಿಳಿಸಿದ್ದಾರೆ. ಪರಮಾತ್ಮನ ಮೂರ್ತಿಚಿಂತನೆಗಾಗಿ ಆತನ ಸರ್ವಾಂಗಗಳನ್ನು, ಒಟ್ಟಿಗೆ ಮತ್ತು ಬೇರೆ ಬೇರೆಯಾಗಿ ಮನಸ್ಸಿನಲ್ಲಿ ನಿಲ್ಲುವಂತೆ ಬಹು ಆಕರ್ಷಕವಾದ ರೀತಿಯಲ್ಲಿ ವಿಷಯವನ್ನು ಪ್ರತಿಪಾದಿಸಿದ್ದಾರೆ. ಅಂತು ಈ ಸಾಧನವಿಚಾರವು ವೇದಾಂತದಲ್ಲಿ ಬಹುಜಟಿಲವಾದ ಘಟ್ಟವು, ಅದನ್ನು ಡಾ॥ವೇದವ್ಯಾಸಾಚಾರ್ಯರು ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ವಿಸ್ತಾರವಾಗಿ ಚರ್ಚಿಸಿದ್ದಾರೆ. ಈ ವಿವೇಚನೆಯಿಂದ ಮಧ್ವಶಾಸ್ತ್ರದ ಉದ್ಗ್ರಂಥಗಳ ಗುಹ್ಯ ಪ್ರಮೇಯಗಳು ವಾಚಕರ ಮನಸ್ಸಿನಲ್ಲಿ ದೃಢವಾಗಿ ನಿಲ್ಲಲು ಅನುಕೂಲವಾಗುತ್ತದೆ.

ಈ ಗ್ರಂಥದ ವೈಶಿಷ್ಟ್ಯಗಳು

ಇದುವರೆಗೆ ಈ ಪ್ರಬಂಧದಲ್ಲಿ ನಿರೂಪಿತವಾದ ವಿಷಯಗಳನ್ನು ಅನುವಾದ ಮಾಡಿದ್ದೇವೆ. ಈಗ ಅಲ್ಲಿ ಗ್ರಂಥಕರ್ತರು ಕನ್ನಡ ಜನತೆಯ ಎದುರಿಗೆ ಇಟ್ಟ ವಿಷಯಗಳನ್ನು ದಿಗ್ದರ್ಶನ ಮಾಡುವುದು ಉಚಿತವಾಗಿದೆ. ನಾವು ಮೇಲೆ ಹೇಳಿದಂತೆ ಎರಡನೆಯ ಭಾಗವಾದ 'ಕನ್ನಡ ಹರಿದಾಸರು' ಎಂಬ ಪ್ರಬಂಧಕ್ಕೆ ಉಪೋದ್ಘಾತರೂಪವಾಗಿ ಮೊದಲನೆಯ ಭಾಗದಲ್ಲಿ ಅನೇಕ ಸಾಮಾನ್ಯ ತತ್ವಗಳ ವಿಮರ್ಶೆಯು ಮಾಡಲ್ಪಟ್ಟಿದೆ. ಇದರ ಅನುವಾದವನ್ನು ಬೇರೆ ಬೇರೆ ಸಂಕ್ಷೇಪವಾಗಿ ಕೊಟ್ಟಿದ್ದೇವೆ. ಅದರಲ್ಲಿ ಕೆಳಗಿನ ವಿಷಯಗಳು ಗಮನಾರ್ಹವಾಗಿವೆ.

1. ವಿಜ್ಞಾನದಿಂದ, ಭೌತವಾದದಿಂದ, ಮಾನವನ ಜಟಿಲವಾದ ಸಮಸ್ಯೆಗಳ ಪರಿಹಾರವಾಗುವುದಿಲ್ಲ, ಅದರಲ್ಲಿ ಪರಸ್ಪರವ್ಯಾಹತಿಗಳು ಇರುವುದಲ್ಲದೆ ಅದನ್ನು ಅನುಸರಿಸರಿಸುವದರಿಂದ ಜಗತ್ತಿನ ವಿಘಾತವೇ ಆಗುವದು, ಇದನ್ನು ಪಾಶ್ಚಾತ್ಯ ವಿಮರ್ಶಕರೇ ಒಪ್ಪಿದ್ದಾರೆ. ಶ್ರೀಮಧ್ವಾಚಾರ್ಯರು ಸಹ ವಿಷ್ಣುತತ್ವನಿರ್ಣಯದಲ್ಲಿ ದೇವರು, ಧರ್ಮಾಧರ್ಮ ಮೊದಲಾದ ಅತೀಂದ್ರಿಯವಸ್ತುಗಳನ್ನು ನಂಬದಿದ್ದರೆ ಜಗತ್ತಿನಲ್ಲಿ ಹಿಂಸೆ ಅಪಕಾರಗಳ ಕೋಲಾಹಲವೂ ಏಳುವುದೆಂದು ಸಾರಿದ್ದಾರೆ. "ನ ಚ ತೇನ ಲೋಕೋಪಕಾರಃ ಪರಸ್ಪರ ಹಿಂಸಾದಿನಾ ಅಪಾಕಾರಸ್ಯೈವ ಪ್ರಾಪ್ತೇಃ"

—ವಿ. ನಿ.

2. ಈಶ್ವರ—ಪರಮಚೇನತವಸ್ತುವನ್ನು ನಂಬದೆ ಗತ್ಯಂತರವಿಲ್ಲ. ಇಲ್ಲದಿದ್ದರೆ ಜಗತ್ತಿನಲ್ಲಿ ಸುಸಂಘಟಿತವಾದ ಸೃಷ್ಟಿಸ್ಥಿತಿಲಯಾದಿ ವ್ಯಾಪಾರಗಳು ನಡೆಯಲಾರವು. ಈತನು ಪ್ರತ್ಯಕ್ಷ, ಅನುಮಾನ, ಅಪ್ತವಾಕ್ಯಗಳಿಗೆ ಗೋಚರವಾಗುವುದಿಲ್ಲ. ಆದ್ದರಿಂದ ಸ್ವತಃಪ್ರಮಾಣವಾದ ಅಪೌರುಷೇಯ ವೇದವನ್ನು 'ಅಥ ಪರಾ ಯಯಾ

ತದಕ್ಷರಮಧಿಗಮ್ಯತೇ' ಪರಮಾತ್ಮನ ಜ್ಞಾನಸಾಧನವೆಂದು ಒಪ್ಪಲೇಬೇಕು. ಈ ವೇದಗಳು ಪುರುಷನಿರ್ಮಿತವಲ್ಲ. ಕಾಲಕರ್ಮಗಳ ಪ್ರಭಾವಕ್ಕೆ ಒಳಪಟ್ಟವಲ್ಲ. ಆದ್ದರಿಂದ ವೇದಗಳಕಾಲವನ್ನು ನಿರ್ಧರಿಸುವ ಆಧುನಿಕ ಸಂಶೋಧಕರ ಪ್ರಯತ್ನಗಳು ವಿಫಲವಾಗುವುವು. ಆ ವಿಮರ್ಶಕರಲ್ಲಿ ಅತ್ಯಂತ ಅಸಂಬದ್ಧವಾದ ವಿಮತಿಯು ಇರುವುದೆಂಬ ಅಂಶವನ್ನು ಎತ್ತಿ ತೋರಿಸಿ ಅವೆಲ್ಲ ನಂಬಲು ಅರ್ಹವಲ್ಲವೆಂದು ಹೇಳಿದ್ದಾರೆ. ಈ ವಿವೇಚನೆಯಲ್ಲಿ Archaeology (ಪುರಾತತ್ವಶಾಸ್ತ್ರ) geology (ಭೂಗರ್ಭಶಾಸ್ತ್ರ) Anthropology (ಪ್ರಾಣಿಮೂಲಶಾಸ್ತ್ರ) ಇವೇ ಮೊದಲಾದ ಆಧುನಿಕಶಾಸ್ತ್ರಗಳ ಅಪಾರ್ಯಪ್ತತೆಯು ಎತ್ತಿ ತೋರಿಸಲ್ಪಟ್ಟಿದೆ. ಆದ್ದರಿಂದ ಶ್ರೇಯಸ್ಕಾಮಿಗಳಾದ ಜಿಜ್ಞಾಸುಗಳು ಸರ್ವಸಮ್ಮತವಾದ ನಿರ್ದೋಷ ಪ್ರಮಾಣಗಳಿಂದ ತತ್ವಗಳನ್ನು ಪರಿಶೀಲಿಸಬೇಕೆಂದೂ ಅಂಥ ಪ್ರಮಾಣಗಳು: "ಋಗ್ಯಜುಃ ಸಾಮಾಥರ್ವಾಶ್ಚ ಭಾರತಂ ಪಂಚರಾತ್ರಕಂ । ಮೂಲರಾಮಾಯಣಂ ಚೈವ ಪ್ರಮಾಣಮಿತಿನಿಶ್ಚಿಯಃ । ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಮ್" ಋಗಾದಿ ವೇದಗಳೂ ತದನುಸಾರಿ ಪೌರುಷೇಯಾಗಮಗಳೂ; ಆಧುನಿಕ ವಿದ್ವಾಂಸರು ಈ ಸೂಚನೆಯನ್ನು ಲಕ್ಷದಲ್ಲಿಡಬೇಕು. ಅಲ್ಪ ಪ್ರವೃತ್ತಿಯುಳ್ಳ ಪ್ರಾಕೃತಿಕ ಇಂದ್ರಿಯಗಳೂ ಅನುಮಾನವೂ ಪುರುಷದೋಷಸಂಬದ್ಧವಾದ ಆಗಮಗಳೂ ಪ್ರಕೃತ್ಯತೀತನಾದ ಪರಮಾತ್ಮನನ್ನು ಗ್ರಹಿಸಲು ಹೇಗೆ ಶಕ್ತವಾಗುವುವು?

3. ಭೌತ ಮತ್ತು ವಿಜ್ಞಾನವಾದದ ಹಿನ್ನಲೆಯಲ್ಲಿ ತಲೆಯೆತ್ತಿದ ಸಮತಾವಾದವೇ ಮೊದಲಾದ ರಾಜಕೀಯ ಮತ್ತು ಸಾಮಾಜಿಕ ಪಕ್ಷಗಳು ಜಗತ್ತಿಗೆ ಕಲ್ಯಾಣವನ್ನು ತರಲು ಸಮರ್ಥವಾಗುವುದಿಲ್ಲ. ಆದ್ದರಿಂದ ಈಗ ಉದ್ಭವಿಸಿದ ಎಲ್ಲ ವಾದಗಳನ್ನು ಅಲ್ಲಗಳೆದು ಪರಮಾತ್ಮನ ಪ್ರಭುತ್ವವನ್ನು ಪ್ರತಿಷ್ಠಾಪಿಸುವ ವೈದಿಕಸಿದ್ಧಾಂತವೇ ಸರ್ವಗ್ರಾಹ್ಯವಾದ ತತ್ವವಾದವೆಂದು ಎಲ್ಲರೂ ಒಪ್ಪಬೇಕಾಗುವುದು.

4. ಆರ್ಯ–ದ್ರಾವಿಡವಾದಕ್ಕೆ ಸಂಸ್ಕೃತಿಯ ಮೂಲಭೂಮಿಯು ಮಧ್ಯಏಸಿಯಾ ಎಂಬ ಈಗನ ಪಾಶ್ಚಾತ್ಯವಿದ್ವಾಂಸರ ವಿಧಾನಕ್ಕೆ ತಳಬುಡವೇ ಇಲ್ಲ. ಪ್ರಮಾಣಶೂನ್ಯವಾದ ಮತವನ್ನು ವಿಚಾರಶೀಲರು ಅಂಗೀಕಾರಮಾಡಬಾರದು.

ಈ ಪಾಶ್ಚಾತ್ಯರ ವಿಚಾರಸರಣಿಯ ಮಾದರಿಯನ್ನು ನಾವು ಈ ಪ್ರಬಂಧದ ಸಮರ್ಥನೆಗಾಗಿ ಇಲ್ಲಿ ಸ್ವಲ್ಪ ಉದಾಹರಿಸುತ್ತೇವೆ. ಈ ಹೊಸ ಹೊಸ ಶೋಧಕಶಾಸ್ತ್ರಗಳು ಹೇಗೆ ಅಪೂರ್ಣವಾಗಿವೆ ಎಂಬುದನ್ನು ಈ ಕೆಳಗಿನ ವಿಧಾನದಿಂದ ಊಹಿಸಬಹುದು:–

· Ever since Lyell, after a long struggle, yielded to the blandishment of the Darwinian view of evolution, some seventy five years ago, geologist have been arranging the sequence of rocks and fossils to suit Darawinian theories and Darwinians have been quoting the geologists' interpretation

of rocks as the greatest proof of their hypothesis-a spelendid example of arguing in vicious circle (stone Age in India by P. T. Srinivasa Ayyangar, 1926)"ಭೂಗರ್ಭ ಶಾಸ್ತ್ರಜ್ಞರು ಡಾರ್ವಿನ್ನಿನ ಉತ್ಕ್ರಾಂತಿವಾದವನ್ನು ಪ್ರತಿಭಟಿಸಿದ್ದರೂ ಕಡೆಗೆ ಅವರ ಪ್ರಭಾವಕ್ಕೆ ಒಳಗಾಗಿ ಆ ವಾದಕ್ಕೆ ತಕ್ಕಂತೆ ತಮ್ಮ ಸಿದ್ಧಾಂತವನ್ನು ಮಾರ್ಪಡಿಸಿಕೊಂಡರು. ಉತ್ಕ್ರಾಂತಿವಾದಿಗಳು ಭೂಗರ್ಭಶಾಸ್ತ್ರದ ಸಿದ್ಧಾಂತವನ್ನು ತಮ್ಮ ಪ್ರಮೇಯಕ್ಕೆ ಉಪೋದ್ಬಲಕ ಪ್ರಮಾಣವೆಂದು ಹೇಳಿಕೊಳ್ಳಹತ್ತಿದರು. ಇದಕ್ಕಿಂತ ಹೆಚ್ಚಿನ ಅನ್ಯೋನ್ಯಾಶ್ರಯ ದೋಷವು ತತ್ವವಿವೇಚನೆಯಲ್ಲಿ ಬೇರೆಯಾವುದು ಉಂಟು? ಈ ಹೊಸ ಪ್ರಯೋಗಪಟುಗಳಾದ ಸಂಶೋಧಕರು ಪರಸ್ಪರಾಶ್ರಯದಿಂದ ದೂಷಿತರಾಗಿದ್ದು ಯಾವ ಕೊನೆಯ ನಿರ್ಣಯವನ್ನೂ ಮುಟ್ಟಲಾರರು.''

—ವಿದ್ಯಾರತ್ನ ಆರ್. ಎಸ್. ಪಂಚಮುಖಿ **ಕರ್ನಾಟಕದ ಇತಿಹಾಸ** ಸಂಪುಟ ೧. ಪುಟ ೫೧

ಎರಡನೆಯ ಭಾಗದಲ್ಲಿ ಹರಿದಾಸರ ಪರಿಚಯವನ್ನು ಮಾಡಿಕೊಡುವಾಗ ಪುರಂದರದಾಸರನ್ನು ಕುರಿತು ಇತ್ತೀಚೆಗೆ ಬೆಳಕಿಗೆ ಬಂದ ಕ್ರಿ. ಶ. ೧೫೨೬ ಕಾಮಲಾಪುರಂ ತಾಮ್ರಶಾಸನವನ್ನು ಇಲ್ಲಿ ಉದಾಹರಿಸಬಹುದು. ಕೃಷ್ಣದೇವರಾಯನು ಶ್ರೀವ್ಯಾಸತೀರ್ಥರಿಗೆ ವ್ಯಾಸಸಮುದ್ರ ಮೊದಲಾದ ಗ್ರಾಮಗಳನ್ನು ದಾನಮಾಡಿದನೆಂದೂ ಶ್ರೀವ್ಯಾಸರಾಜರು ಅವುಗಳನ್ನು ೩೧೮ ವಿಭಾಗಗಳಲ್ಲಿ ೩೧೮ ಜನ ವಿದ್ವಾಂಸರಿಗೆ ವಿದ್ಯಾದಾನವೆಂದು ದಾನಮಾಡಿದರೆಂದು ಬರೆದಿದೆ. ಆ ವಿದ್ವಾಂಸರಲ್ಲಿ ಪುರಂದರದಾಸರ ಮಕ್ಕಳು ಹೆಸರಿಸಲ್ಪಟ್ಟಿದ್ದಾರೆ.

ಧೀಮಾನ್ **ಲಕ್ಷ್ಮಣ ದಾಸ್ಯಖ್ಯಃ** ಶ್ರೀ **ಪುರಂದರದಾಸಜಃ** ।
ವಸಿಷ್ಠಗೋತ್ರಜೊ ವೃತ್ತಿದ್ವಯ ಮತ್ರೈತಿ ಯಾಜುಷಃ ॥ ೧೭೫ ॥
ವಸಿಷ್ಠಾನ್ವಯ ಸಂಭೂತಃ ಶ್ರೀ **ಪುರಂದರದಾಸಜಃ** ।
ದ್ವಿಜೋ **ಹೇವಣದಾಸಾಖ್ಯೋ** ಯಜಷೋತ್ರ ದ್ವಿವೃತ್ತಿಕಃ ॥೨೯೧॥
ಶ್ರೀಮಾನ್ **ಮಧ್ವಪದಾಸಖ್ಯೋ** ಯಾಜುಷೋತ್ರ ದ್ವಿವೃತ್ತಿಕಃ ॥೨೯೨॥

ಇಲ್ಲಿ ಪುರಂದರದಾಸರ ಮೂವರುಮಕ್ಕಳ ಹೆಸರುಗಳು ಲಕ್ಷ್ಮಣದಾಸ, ಹೇವಣದಾಸ ಮಧ್ವಪದಾಸ ಎಂದು ಬರೆದಿದೆ. ಇವರಲ್ಲಿ ಮಧ್ವಪದಾಸರು ಮಧ್ವಪತಿ ವಿಠ್ಠಲ ಎಂಬ ಅಂಕಿತವುಳ್ಳ ಮಧ್ವಪತಿದಾಸರು.

ದಿವಂಗದ ಡಾ। H.K. ವೇದವ್ಯಾಸಾಚಾರ್ಯರ 'ಕರ್ನಾಟಕ ಹರಿದಾಸರು' ಎಂಬ ಈ ಗ್ರಂಥವು ಅನೇಕ ಹೊಸ ವಿಚಾರಗಳಿಂದ ತುಂಬಿದ್ದು ಆಧುನಿಕ ವಿಮರ್ಶಕರಿಗೆ ಎಚ್ಚರಿಕೆಯನ್ನು ಕೊಡುತ್ತಿದೆ. ಭಕ್ತಿ ಸಾಹಿತ್ಯದ ಚರಿತ್ರೆಯನ್ನು ತಿಳಿಯಲು ಇದು

ಉಪಯುಕ್ತವಾದ ಸಾಧನವಾಗಿದೆ. ಬಹುಮುಖ ವ್ಯಾಪ್ತಿಯುಳ್ಳ ಈ ಗ್ರಂಥವು ಎಲ್ಲ ಸಾಧಕ ಜೀವರಿಗೆ ಬಹು ಉಪಯುಕ್ತವಾಗಿದೆ. ವಾಕ್‌ಶೈಲಿ, ವಿವರಣೆಯ ಲಾಲಿತ್ಯ, ಅರ್ಥಸ್ಪಷ್ಟತೆ ಇವೆಲ್ಲ ಗ್ರಂಥಕ್ಕೆ ಶೋಭೆಯನ್ನು ತರುತ್ತವೆ. ಇದು ಕನ್ನಡದಲ್ಲಿ ಸಂಶೋಧನ ಭಕ್ತಿಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆ ಎಂದು ಧಾರಾಳವಾಗಿ ಹೇಳಬಹುದು. ಇಂಥ ಪ್ರೌಢಪ್ರಬಂಧವನ್ನು ಪ್ರಕಾಶಗೊಳಿಸಿದ ವಿದ್ವಾನ್ ರಾಜಾ. ಎಸ್ ಗುರುರಾಜಾಚಾರ್ಯರು ಅಭಿನಂದನಾರ್ಹರು. ಗ್ರಂಥಕರ್ತರು ನಮ್ಮ ಸನಿಯದಲ್ಲಿ ಇಲ್ಲದಿರುವುದು ನಮಗೆ ವಿಶೇಷವಾದ ವ್ಯಥೆಯನ್ನು ಉಂಟುಮಾಡುತ್ತಿದೆ. ಅವರ ಪವಿತ್ರವಾದ ಸ್ಮರಣೆಯಿಂದ ತುಂಬಿಬಂದ ಶೋಕದಿಂದ ಲೆಕ್ಕಣಿಕೆಯು ಮುಂದೆ ಸಾಗದಾಗಿದೆ. ಅವರು ಶ್ರೀಹರಿಯ ಮಂದಿರದಲ್ಲಿ ನಿಂತು, ಈ ನಮ್ಮ ನಿವೇದನೆಯನ್ನು ಕೇಳಿ ಸಂತೋಷಪಲಿ! ಈ ಗ್ರಂಥದಲ್ಲಿ ಪ್ರತಿಪಾದಿತವಾದ ಹರಿಭಕ್ತಿಯು ದೇಶದಲ್ಲಿ ಹಬ್ಬಿ ಜನರಿಗೆ ಸುಖಶಾಂತಿಗಳನ್ನು ತರುವಂತೆ ಹಾರೈಸಲಿ ಎಂದುಹೇಳಿ ಉದ್ಗಾರಪೂರಿತ ಹೃದಯರಾಗಿ ಈ ಪ್ರಸ್ತಾವನೆಯನ್ನು ಮುಗಿಸುತ್ತೇವೆ.

ಕುರುಭಂಕ್ಷ್ವ ಚ ಕರ್ಮ ನಿಜಂ ನಿಯತಂ
ಹರಿಪಾದ ವಿನಮ್ರಧಿಯಾ ಸತತಂ ।

ವಿದ್ಯಾರತ್ನಂ **ಆರ್. ಎಸ್. ಪಂಚಮುಖಿ**
ನಿವೃತ್ತ ಕನ್ನಡ ಸಂಶೋಧನ
ಸಂಸ್ಥೆಯ ಡೈರೆಕ್ಟರರು, ಧಾರವಾಡ,
ಮತ್ತು ಕಾರ್ಯಾಧ್ಯಕ್ಷರು,
ಪ್ರಧಾನ ಸಂಪಾದಕರು,
ಕರ್ನಾಟಕ ಇತಿಹಾಸ ಸಂಶೋಧನ ಮಂಡಲ,
ಧಾರವಾಡ

ಕರ್ನಾಟಕದ ಹರಿದಾಸರು

(ವಿಮರ್ಶಾತ್ಮಕ ಅಧ್ಯಯನ)

ಭಾಗ – ೧

ಭಾಗ – ೨

ಪರಿವಿಡಿ

ಶ್ರೀಃ

ಕರ್ಣಾಟಕದ ಹರಿದಾಸರು

(ವಿಮರ್ಶಾತ್ಮಕ ಅಧ್ಯಯನ)

ಭಾಗ ೧

೮. ಹರಿದಾಸರು ಮತ್ತು ಅವರ ಸಾಹಿತ್ಯ

ಕನ್ನಡ ಹರಿದಾಸರುಗಳು ನಿಷ್ಠಾವಂತ ಜ್ಞಾನಿಗಳು ಮತ್ತು ಭಗವದ್ಭಕ್ತರು. ವೇದಾದಿ ಸಕಲ ಸಚ್ಛಾಸ್ತ್ರಗಳ ಸಾರವನ್ನರಿತು ಅದನ್ನು ಅನುಷ್ಠಾನಕ್ಕೆ ತಂದು ಹರಿಪ್ರಸಾದವನ್ನು ಪಡೆದ ಪರಮ ಪುನೀತರು. ಹರಿಯ ಅನುಗ್ರಹಕ್ಕಾಗಿ ಹೊತೊರೆದು ಮಿಡಿಯುತ್ತಿದ್ದ ಭಕ್ತರು. ಹರಿಯೊಡನೆ ನಾನಾ ರೀತಿಯ ಭಾವಭಂಗಿಗಳಲ್ಲಿ ಹಾಡಿ ನಲಿದ ಭಾಗ್ಯವಂತರು. ಹರಿಭಕ್ತಿಯ ಉನ್ಮಾದದಿಂದ ಕೊಬ್ಬಿದವರು. ಹರಿಯನ್ನು ತಂತಮ್ಮ ಹೃದಯಗುಹೆಗಳಲ್ಲಿ ತಮ್ಮ ಬಿಂಬರೂಪಿಯಾಗಿ ಕಂಡುಕೊಂಡ ಮಹಾಯೋಗಿಗಳು. ತಾವೊಬ್ಬರೇ ಹರಿದರ್ಶನದಿಂದ ಭಾವಸಮಾಧಿಯಲ್ಲಿ ಮೈಮರೆಯುವಂತಹ ಸ್ವಾರ್ಥಿಗಳಲ್ಲ. ತಾವು ತಿಳಿದು, ನಡೆದು, ಕಂಡುಕೊಂಡ ಸತ್ಯವನ್ನು ಅರ್ಹರಿಗೆ ಉಪದೇಶಿಸಿ ಅವರನ್ನೂ ತಮ್ಮಂತೆ ಆತ್ಮಾರಾಮರನ್ನಾಗಿ ಮಾಡಲು ತೊಡಗಿದ ಮಹಾಪುರುಷರು, ಹರಿದಾಸರು ಉಚ್ಚ ತರಗತಿಯ ಸಮಾಜ-ಸುಧಾರಕರು. ಇವರು ಜನಾಂಗದ ಕಲ್ಯಾಣಕ್ಕಾಗಿ ತಮ್ಮ ಜ್ಞಾನ ಮತ್ತು ಅನುಭವದ ತಿರುಳನ್ನೇ ತಮ್ಮ ಸಾಹಿತ್ಯದಲ್ಲಿ ಹುದುಗಿಸಿ ಜನತೆಗೆ ನೀಡಿರುವರು. ಇವರ ಹಿತವಾದ ಉಪದೇಶದ ಮರ್ಮವನ್ನರಿತು ಕಾರ್ಯೋನ್ಮುಖವಾದಲ್ಲಿ ಜಗತ್ತು ಇಂದಿನ ತುಮುಲ ಅಶಾಂತಿಯನ್ನು ನೀಗಿ ಶಾಂತಿಯ ಮತ್ತು ಶಾಶ್ವತ ಸುಖದ ತಾಣವನ್ನು ಹೊಂದುವುದು.

ಕನ್ನಡ ಹರಿದಾಸರುಗಳ ಅಧ್ಯಯನ, ಅವರ ಜೀವನಚರಿತ್ರೆಯನ್ನು ಅರಿಯುವುದರಿಂದ ಆಗಲಾರದು. ಅವರ ಜೀವನವನ್ನು ಚಿತ್ರಿಸುವ ಸಾಹಿತ್ಯ ಹೆಚ್ಚಾಗಿಲ್ಲ. ಅವರಿಂದ ರಚಿತವಾದ ವಿಸ್ತಾರವಾದ ಸಾಹಿತ್ಯದ ಅಧ್ಯಯನದಿಂದಲೇ ಇವರ ವಿಷಯವು ಸಂಪೂರ್ಣವಾಗಿ ತಿಳಿಯುವುದು. ಅವರ ವಿಶ್ವವ್ಯಾಪಕವಾದ ಸಾಹಿತ್ಯದಲ್ಲಿ ಅವರ ವೈಯಕ್ತಿಕ ವಿಷಯಗಳೂ ಅಡಗಿರುವುವು. ಹರಿದಾಸ ಸಾಹಿತ್ಯವೆಂದರೆ ಹರಿದಾಸರ ಮುಖದಿಂದ ತಾನೇತಾನಾಗಿ ಹೊರಟ ವಾಕ್ಪ್ರವಾಹವು. ಅನುಭವಪೂರ್ಣವಾದ ಈ ಸಮುಕ್ತಿಗಳಲ್ಲಿ ಹರಿದಾಸರ ವ್ಯಕ್ತಿವಿಕಾಸವು ಸಂಪೂರ್ಣವಾಗಿ ಆಗಿರುವುದು.

ಹರಿದಾಸರ ಸಾಹಿತ್ಯದಲ್ಲೆಲ್ಲ ಏಕಮುಖವಾದ ವಿಚಾರಧಾರೆಯೂ, ಒಂದು

ನಿರ್ದಿಷ್ಟವಾದ ಧ್ಯೇಯವೂ ಕಾಣುವುದು. ಇವರ ಪರಂಪರೆಯಲ್ಲಿ ವಿಚ್ಛೇದವು ಇದ್ದರೂ ಪ್ರತಿಯೊಬ್ಬ ದಾಸರ ಉಕ್ತಿಗಳಲ್ಲಿಯೂ ಏಕಸೂತ್ರತೆಯು ಸ್ಪಷ್ಟವಾಗಿರುವುದು. ಆದರೆ ಹರಿದಾಸರ ವಿಶಾಲ ಸಾಹಿತ್ಯದ ರೂಪರೇಷೆಗಳನ್ನು ತಿಳಿಯುವುದು ಈಗ ಬಿಡಿಬಿಡಿಯಾಗಿ ಉಪಲಬ್ಧವಾಗಿರುವ ಅವರ ಪದ-ಪದ್ಯ-ಸುಳಾದಿಗಳಿಂದ ಕಷ್ಟಸಾಧ್ಯವಾಗಿರುವುದು. ಆ ಸಾಹಿತ್ಯದ ಅಧ್ಯಯನವು ಸಮಗ್ರವೂ ಸಂಪೂರ್ಣವೂ ಆಗಬೇಕಾದಲ್ಲಿ ಆ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿ ಸ್ವಪರಿಪೂರ್ಣವಾದ ಅಚ್ಚುಕಟ್ಟುಗಳಲ್ಲಿ ಅದನ್ನು ವಿಭಜಿಸಬೇಕಾದುದು ಅತ್ಯಗತ್ಯ. ಭಾರತದ ದಾರ್ಶನಿಕ, ಧಾರ್ಮಿಕ, ಯೋಗಶಾಸ್ತ್ರಗಳಿಗೂ ಕನ್ನಡ ಭಾಷೆಗೂ ಈ ದಾಸಸಾಹಿತ್ಯದಿಂದ ಆದ ಮಹದುಪಕಾರದ ಅರಿವಾಗಬೇಕಾದಲ್ಲಿ ಇಂತಹ ಶಾಸ್ತ್ರೀಯ ಅಭ್ಯಾಸವು ಅವಶ್ಯಕವು. ಕನ್ನಡ ಹರಿದಾಸರ ವಿಮರ್ಶಾತ್ಮಕ ಅಧ್ಯಯನವಾದರೂ ಇದಕ್ಕಿಂತ ಬೇರೆಯಲ್ಲ.

೧೧. ದಾಸಸಾಹಿತ್ಯದ ವಿಸ್ತಾರ, ಉದ್ದೇಶ ಮತ್ತು ಧಾರ್ಮಿಕ ಹಿನ್ನೆಲೆ

ದಾಸಸಾಹಿತ್ಯ ಅತ್ಯಂತ ವ್ಯಾಪಕವಾದ ವಾಙ್ಮಯವು. ಇದರಲ್ಲಿ ವೇದ ಉಪನಿಷತ್ತುಗಳಲ್ಲಿ ಉಕ್ತವಾದ ಪರಬ್ರಹ್ಮ ಮತ್ತು ಜಗತ್ತಿನ ಅನೇಕ ವಿಷಯಗಳು, ಭಾರತದ ವಿವಿಧ ದರ್ಶನಗಳಲ್ಲಿ ಚರ್ಚಿತವಾದ ಕೆಲವು ಗಡುಚಾದ ತತ್ತ್ವಗಳೂ, ಭಾಗವತಾದಿ ಪುರಾಣಗಳಲ್ಲಿ ಹೇಳಲ್ಪಟ್ಟ ಹರಿಬಕ್ತಿದ್ಯೋತಕವಾದ ಅನೇಕ ಉಪಾಖ್ಯಾನಗಳೂ ಅಡಕವಾಗಿರುವುದಲ್ಲದೆ ಭಾರತದ ರಾಜನೀತಿಯ, ಧರ್ಮದ, ಲೋಕವ್ಯವಹಾರದ ವಿಷಯಗಳೂ ಸುಂದರವಾಗಿ ಚಿತ್ರಿತವಾಗಿವೆ. ಬ್ರಾಹ್ಮಣಾದಿ ವರ್ಣ ಹಾಗೂ ಬ್ರಹ್ಮಚರ್ಯಾದಿ ಆಶ್ರಮದವರಿಗೂ, ಚಂಡಾಲಾದಿ ನೀಚ ಯೋನಿಗಳಲ್ಲಿ ಉತ್ಪನ್ನರಾದವರಿಗೂ, ಸ್ತ್ರೀಯರಿಗೂ, ಅವರವರ ನಡವಳಿಕೆ ಜ್ಞಾನ ಕರ್ಮಾದಿಗಳ ಬಗ್ಗೆ ಸೂಕ್ತ ಉಪದೇಶವಿದೆ. ಶೃಂಗಾರಾದಿ ವಿವಿಧ ರಸಗಳನ್ನು ಸಮಯೋಚಿತವಾಗಿ ಪ್ರದರ್ಶಿಸುವ ಹರಿಯ ಲೀಲಾವಿಲಾಸದ ರಮಣೀಯ ಸಾಹಿತ್ಯವಿದೆ. ಇವೆಲ್ಲವೂ ಭಾರತ ಸಂಗೀತದ ಹಿರಿಯ ಸಂಪ್ರದಾಯವಾದ ಕರ್ಣಾಟಕ ಸಂಗೀತದ ಅಚ್ಚುಕಟ್ಟಿನಲ್ಲೂ ಷಟ್ಪದಿ ಮೊದಲಾದ ಕನ್ನಡ ಛಂದಸ್ಸಿನಲ್ಲೂ ರಚಿತವಾಗಿವೆ. ಈ ವಾಙ್ಮಯವು ಲಲಿತ ಪದವಿನ್ಯಾಸದಿಂದ ಸರಳವಾಗಿರುವಷ್ಟೇ ಜಟಿಲಾಲಂಕಾರಾದಿ- ಗಳಿಂದ ಪ್ರೌಢವೂ ಹೌದು, ಒಟ್ಟಿನ ಮೇಲೆ ಇದು ವಿವಿಧ ಮನೋಭಾವದ ಸಹೃದಯರು, ದಾರ್ಶನಿಕರು, ಸುಧಾರಕರು, ಸಂತರು, ಸ್ತ್ರೀಯರು ಮೊದಲಾದವರಿಗೆಲ್ಲ ಬೇಕಾದುದನ್ನು ಒದಗಿಸುವ ಆಕರವಾಗಿರುವುದು. ಸಮಾಜದ ಬೇರೆ ಬೇರೆ ಹಂತಗಳಲ್ಲಿರುವ ಎಲ್ಲ ಬಗೆಯ ಜನರಿಗೂ ಇದರಲ್ಲಿ ತಕ್ಕ ಸಾಹಿತ್ಯವು ದೊರಕುವುದು. ಇಷ್ಟಾದರೂ ಹರಿಭಕ್ತಿಯು ಇದರಲ್ಲಿ ಓತಪ್ರೋತವಾಗಿ ಸೇರಿರುವುದು. ಈ ವಿಶ್ವವ್ಯಾಪಕ ಸಾಹಿತ್ಯಕ್ಕೆ ಹರಿಭಕ್ತಿಯೇ ಅಂತಃಶಕ್ತಿಯು.

ಇಂತಹ ವಿಶಾಲವಾದ ಸಾಹಿತ್ಯ ಸುಮಾರು ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ

ಆರಂಭವಾಗಿ ಹದಿನೈದು ಹದಿನಾರನೆಯ ಶತಮಾನಗಳಲ್ಲಿ ಅತ್ಯಂತ ಉನ್ನತಿಯನ್ನು ಹೊಂದಿ, ಮುಂದೆ ಒಂದುನೂರು ವರ್ಷಗಳಷ್ಟು ಕಾಲ ಸುಪ್ತವಾಗಿದ್ದು ಮತ್ತೆ ಹದಿನೇಳನೆಯ ಶತಮಾನದಲ್ಲಿ ನವಚೈತನ್ಯದಿಂದ ಅತ್ಯಂತ ವಿಸ್ತಾರಗೊಂಡು ಮುಂದಿನ ಶತಕಗಳಲ್ಲಿ ಅತ್ಯಂತ ಕ್ಷೀಣದೆಶೆಯನ್ನೈದಿತು. ಸುಮಾರು ಐದುನೂರು ವರ್ಷಗಳಷ್ಟು ದೀರ್ಘಕಾಲ ಬೆಳೆದ ಈ ಸಾಹಿತ್ಯವು ಯಾವ ಉದ್ದೇಶದಿಂದ ಆರಂಭವಾಯಿತೋ ಅದನ್ನು ಯಶಸ್ವಿಯಾಗಿ ಸಾಧಿಸಿತೆನ್ನಲೇನೂ ಅಡ್ಡಿಯಿಲ್ಲ. ಇದರ ಹಿನ್ನೆಲೆಯನ್ನು ಇದರ ಆರಂಭಕಾಲದಲ್ಲಿ ದೇಶದಲ್ಲಿದ್ದ ವಾತಾವರಣವನ್ನೂ ವಿಚಾರಮಾಡಿದಲ್ಲಿ ಇದರ ಸಾರ್ಥಕತೆಯು ಅರ್ಥವಾಗುವುದು.

ಕನ್ನಡ ದಾಸಸಾಹಿತ್ಯವೆಲ್ಲ ಮಧ್ವಮತದ ಅಚ್ಚುಕಟ್ಟಿನಲ್ಲಿ ಬೆಳೆದುದು. ಕರ್ನಾಟಕದ ಹರಿದಾಸರೆಲ್ಲ ಮಾಧ್ವಸಂಪ್ರದಾಯಕ್ಕೆ ಸೇರಿದವರು. ಮಧ್ವಮತವು ಉದಯವಾದಾಗಲೇ ಇದೂ ಉದಯವಾಗಿ ಮಧ್ವಮತದ ಅತ್ಯಂಕ ವಿಕಾಸ ಕಾಲದಲ್ಲೇ ಇದೂ ವಿಕಾಸಗೊಂಡಿತು. ಇದರ ಉದ್ದೇಶವಾದರೂ ಮಧ್ವಮತದ ಉದ್ದೇಶದೊಂದಿಗೆ ಸೇರಿದೆಯೆನ್ನಬಹುದು.

ಲೋಕದಲ್ಲಿ ದೊಡ್ಡ ದೊಡ್ಡ ಧಾರ್ಮಿಕ ಮತ್ತು ಮತೀಯ ಬೋಧನೆಗಳು ರೂಪುಗೊಳ್ಳುವ ಮುನ್ನ ವಾತಾವರಣವು ಅತ್ಯಂತ ಕಲುಷಿತವಾಗಿ ಜನತೆಯಲ್ಲಿ ಅಶಾಂತಿ, ದುರಾಸೆ, ಅತ್ಯಾಚಾರಗಳೇ ತಾಂಡವವಾಡುತ್ತಿರುವುದು. ಸಂಪ್ರದಾಯವು ತನ್ನ ಜೀವಕಳೆಯನ್ನು ಕಳೆದುಕೊಂಡು ಸಮಾಜಕ್ಕೆ ಭಾರವಾಗಿ ದುರ್ಭರವಾಗಿ ತೋರುವುದು. ಅಂತಹ ವಿಷಮ ಸನ್ನಿವೇಶದಲ್ಲಿ ತತ್ತ್ವಗಳು, ದಿವ್ಯ ಅನುಭವಪೂರ್ಣ ಉಪದೇಶಗಳು ಮತಪ್ರವರ್ತಕರಿಂದ, ಸಂತರಿಂದ, ಜ್ಞಾನಿಗಳಿಂದ ಹೊರಹೊಮ್ಮಿ ಜನತೆಯಲ್ಲಿ ಅದ್ಭುತ ಪರಿಣಾಮಮಾಡಿ ಅದರ ಚೇತನವನ್ನು ಚಿಗುರಿಸುವುದು. ಆಗ ಸಮಾಜದ ಸ್ಥಿತಿಯು ಉತ್ತಮಗೊಂಡು ಅದರ ಬಾಳು ಸಾರ್ಥಕವಾಗುವುದು. ಮಧ್ವಾಚಾರ್ಯರು ಅವತರಿಸಿ ವೈಷ್ಣವ ಮತವನ್ನು ಜೀರ್ಣೋದ್ಧಾರಮಾಡುವ ಮುನ್ನ ಇಂತಹ ವಿಷಮ ಸನ್ನಿವೇಶವೇ ಸಮಾಜದಲ್ಲಿ ಮೂಡಿತ್ತೆನ್ನಬಹುದು, ಅವರು ತಮ್ಮ ಉಪದೇಶಾಮೃತದಿಂದ ನೊಂದ ಜನಾಂಗವನ್ನು ಸಂತೈಸಿ ಅದಕ್ಕೆ ಸರಿಯಾದ ದಾರಿಯನ್ನು ತೋರಿಸಿಕೊಟ್ಟರು. ಅವರು ತತ್ತ್ವಶಾಸ್ತ್ರ ಪ್ರಪಂಚದಲ್ಲಿ ಮಾಡಿದ ಅಸಾಧಾರಣವಾದ ಕಾರ್ಯವನ್ನು ಹರಿದಾಸರು ಕನ್ನಡ ಭಾಷೆಯಲ್ಲಿ ಭಾವಗೀತ ರಚನೆಯಲ್ಲಿ ರೂಪಾಂತರಿಸಿ ಆ ಅಮರ ತತ್ತ್ವವನ್ನು ದಲಿತರಾದ ಜನರಲ್ಲೂ ಬೀರಿ ಲೋಕಕಲ್ಯಾಣಕ್ಕೆ ಕಾರಣರಾದರು. ಆ ಕಾಲದ ಹಿನ್ನೆಲೆಯನ್ನು ವಿವೇಚಿಸುವುದರಿಂದ ಇದು ಸ್ಪಷ್ಟಪಡುವುದು.

ಭಾರತದ ಇತಿಹಾಸವನ್ನು ಮೊದಲಿನಿಂದ ನೋಡಿದಲ್ಲಿ ಒಂದು ಮುಖ್ಯವಾದ ಅಂಶವು ಹೊರಪಡುವುದು. ವೈದಿಕಧರ್ಮದಿಂದ ಹೊರಹೊಮ್ಮಿದ ಭಾರತಸಂಸ್ಕೃತಿಯು ಒಮ್ಮೆ ಸರ್ವತ್ರ ಹರಿಡ ನೆಲೆಗೊಂಡ ಮೇಲೆ ಅದರ ತಿರುಳು ಮರೆಯಾಗುತ್ತಾ ಬಂದಂತೆ

ಅದಕ್ಕೆ ವಿರೋಧಿಯಾದ ಇತರ ಧರ್ಮಗಳು ತಲೆಯೆತ್ತಿ ಅದನ್ನು ಬದಿಗೊತ್ತುವುದು. ಆಮೇಲೆ ಮತ್ತೊಮ್ಮೆ ಈ ಸಂಸ್ಕೃತಿಗೆ ಪ್ರಚೋದಕ ಶಕ್ತಿಯೊಂದು ದೊರಕಿ ಮತ್ತೊಮ್ಮೆ ಇದು ಭದ್ರವಾದ ತಳಹದಿಯ ಮೇಲೆ ನಿಂತು ಜನತೆಯಲ್ಲಿ ಬೇರೂರುವುದು. "ಯದಾ ಯದಾ ಹಿ ಧರ್ಮಸ್ಯ" ಎಂಬ ಭಗವದ್ವಚನದಲ್ಲಿ ಈ ವಿಷಯವು ಸೂಚಿತವಾಗಿರುವುದು. ಜನತೆಗೆ ಯಜ್ಞ-ಯಾಗಾದಿಗಳ ಕ್ಲಿಷ್ಟಮಾರ್ಗದಿಂದ ಬಿಡುಗಡೆಯಾಗುವ ಸುಲಭೋಪಾಯವನ್ನು ತೋರಿಸಹೊರಟ ಬೌದ್ಧಮತವಾಗಲೀ, ಜೈನಮತವಾಗಲೀ ತಮ್ಮ ಉದ್ದೇಶವನ್ನು ಸಫಲ ಮಾಡಿಕೊಳ್ಳಲಿಲ್ಲ. ಬೌದ್ಧಮತವು ಬರುಬರುತ್ತಾ ವಿರಕ್ತ ಜೀವನವನ್ನು ಎತ್ತಿಹಿಡಿದಿದ್ದರಿಂದ ಜನತೆಗೆ ಈ ಶಿಸ್ತಿನ ಜೀವನ ಬೇಸರವೆನಿಸಿ ದುರಾಚಾರಗಳಿಗೆ ಎಡೆಯಿತ್ತಿತು. ವಿಷಯಲೋಲುಪತೆ ಹೆಚ್ಚಾಯಿತು. ಸಮಾಜದ ಬಿಗಿ ಸಡಿಲಿತು. ವಿಚಾರಶೀಲರಿಗೆ ಬೌದ್ಧಮತದ ತತ್ವಗಳು ಹಿಡಿಸದಾದುವು. ಆಗ ಭಟ್ಟಕುಮಾರ ಹುಟ್ಟಿ ವೇದಮತವನ್ನು ಪುನರುಜ್ಜೀವಿಸಿ ಯಜ್ಞ-ಯಾಗಾದಿಗಳ ಮಹತ್ವವನ್ನು ಎಲ್ಲೆಡೆಯಲ್ಲೂ ಹರಡಿದ. ಇದರಿಂದ ಮತ್ತೊಮ್ಮೆ ವರ್ಣಾಶ್ರಮಗಳು ಸ್ಥಿರಪಡಿಸಲ್ಪಟ್ಟವು. ಅದ್ವೈತಮತ ಸ್ಥಾಪನೆಯಾಯಿತು. ಇದರಿಂದ ಜ್ಞಾನಪ್ರಪಂಚದಲ್ಲಿ ಒಂದು ವಿಧವಾದ ಕ್ರಾಂತಿಯಾದರೂ ವಿಚಾರಶೀಲರಿಗೆ ಬೌದ್ಧಮತದ ತತ್ತ್ವಗಳಿಗೂ ಅದ್ವೈತ ಮತದ ತತ್ತ್ವಗಳಿಗೂ ಹೆಚ್ಚು ವ್ಯತ್ಯಾಸ ತೋರಲಿಲ್ಲ. ಸಾಮಾನ್ಯ ಜನರಿಗೆ ಇದರಿಂದ ಯಾವ ಅನುಕೂಲವೂ ಆಗಲಿಲ್ಲ. ಇನ್ನು ಯಜ್ಞ-ಯಾಗಾದಿಗಳೇ ತಾರಕವೆಂದು ಸಾರುವ ಮೀಮಾಂಸಕ ಮತದ ಶುಷ್ಕತತ್ತ್ವಗಳು, ಜೀವನವನ್ನು ರಸಮಯವನ್ನಾಗಿ ಮಾಡಿ ಸಾರ್ಥಕಪಡಿಸಿ ಗುರಿಮುಟ್ಟುವಂತೆ ಮಾಡುವುದಿಲ್ಲವೆಂಬ ಕೂಗು ಜನರಲ್ಲಿ ಎದ್ದಿತು. ರಾಮಾಜನುಚಾರ್ಯರು ಅವತರಿಸಿ ಶ್ರೀವೈಷ್ಣವಮತವನ್ನು ಬೆಳಕಿಗೆ ತಂದಿದ್ದರಿಂದ ಭಕ್ತಿಯ ಮಹಿಮೆ ಕೆಲಮಟ್ಟಿಗೆ ತಿಳಿದು ಜನರು ತೃಪ್ತರಾದಂತಾಯಿತು. ಆದರೆ ಜ್ಞಾನಿಗಳು ಮತ್ತು ಜನಸಾಮಾನ್ಯರು ಇವರಿಬ್ಬರ ಬಯಕೆಗಳಿಗೂ ಹೊಂದುವ ಸಮನ್ವಯ ಅಲ್ಲಿ ಸಿಕ್ಕಲಿಲ್ಲ. ಕರ್ಮ, ಜ್ಞಾನ ಮತ್ತು ಭಕ್ತಿಗಳು ಕೂಡುವುದೆಲ್ಲಿ ಎಂಬುದೇ ತಿಳಿಯಲಿಲ್ಲ. ಭಕ್ತಿಯ ಪಾರವಶ್ಯಕತೆಯು ಆಪ್ಯಾಯಮಾನವಾದರೂ ಆ ಭಕ್ತಿಯು ತಕ್ಕ ಅಚ್ಚುಕಟ್ಟಿನಲ್ಲಿ ಸೇರಲಿಲ್ಲ. ಕರುಳು ಮತ್ತು ಮಿದುಳಿಗೆ ಒಂದೇ ವಿಧವಾದ ಸಾಂತ್ವನೆಯು ಬೇಕೆಂದು ಎಲ್ಲರೂ ಹಾತೊರೆದರು, ಆರ್ಯಧರ್ಮದ ಅಡಿಗಲ್ಲಿನ ಮೇಲೆ ವೇದಾದಿ ಸಕಲ ಶಾಸ್ತ್ರಗಳ ಮರ್ಮವನ್ನು ಜ್ಞಾನ, ಕರ್ಮ, ಭಕ್ತಿ ಇವುಗಳ ಸಮನ್ವಯವನ್ನು ಮಾಡಿ ತೋರಿಸುವ ಒಂದು ಮಾರ್ಗ ಬೇಕಾಗಿತ್ತು. ಇಂತಹ ಸಮಯದಲ್ಲಿ ಮಧ್ವಾಚಾರ್ಯರು ಉದಯಿಸಿ ದ್ವೈತಮತವನ್ನು ಸ್ಥಾಪಿಸಿದರು.

ತತ್ವಶಾಸ್ತ್ರ ಪ್ರಪಂಚದಲ್ಲಿ ಈ ರೀತಿಯಾದರೆ ಜನಸಾಮಾನ್ಯರಲ್ಲಿಯ ಸ್ಥಿತಿ ಇನ್ನೊಂದು

ಪರಿಯಾಗಿತ್ತು. ನಿಷ್ಕೃಷ್ಟವಾದ ಸಿದ್ಧಾಂತವನ್ನು ತರ್ಕಾದಿಗಳ ಸಹಾಯದಿಂದ ಚರ್ಚಿಸಿ ಕಟ್ಟಿದ ತತ್ತ್ವಶಾಸ್ತ್ರ ಅಥವಾ ದರ್ಶನಗಳು ಸಮಾಜದಲ್ಲಿನ ಮೇಲ್ತರಗತಿಯಂತಹವರಿಗೆ ನಿಲುಕುವಂತಹವು. ಇವು ಜನಸಾಮಾನ್ಯರಿಗೆ ಅನುಕೂಲವಾಗುವಂತಹ ರೂಪವನ್ನು ತಳೆದಾಗ ಇವುಗಳ ಸತ್ತ್ವಪರೀಕ್ಷೆಯಾಗುತ್ತೆನ್ನಬಹುದು. ವೇದಾದಿಗಳ ಅರ್ಥವನ್ನು ಮಥನಮಾಡಿ ವೈದಿಕದರ್ಶನವನ್ನು ಬ್ರಹ್ಮಸೂತ್ರಗಳು ಪ್ರಕಾಶಕ್ಕೆ ತಂದರೆ, "ಸ್ತ್ರೀ ಶೂದ್ರಬ್ರಹ್ಮಬಂಧೂನಾಂ ತ್ರಯೀ ನ ಶ್ರುತಿಗೋಚರಾ । ಇತಿ ಭಾರತಮಾಖ್ಯಾನಂ ...." ಎಂಬ ವಾಕ್ಯಾನುಸಾರ ಭಾರತ-ಭಾಗವತಾದಿ ಪುರಾಣಗಳು ಸಾಮಾನ್ಯ ಜನತೆಗೆ ವೇದಧರ್ಮಗಳನ್ನು ಲಲಿತವಾಗಿ ತಿಳಿಸುವುದಕ್ಕಾಗಿಯೇ ರಚಿತವಾದವು. ವೇದೋಕ್ತವಾದ ತತ್ತ್ವಗಳನ್ನೂ, ಧರ್ಮಗಳನ್ನೂ ಸುಂದರವಾದ ಉಪಾಖ್ಯಾನಗಳಿಂದಲೂ, ಮನಸ್ಸಿಗೆ ನಾಟುವ ನೀತಿಗಳಿಂದಲೂ ಇವು ಜನತೆಯಲ್ಲಿ ಸಾರಿದವು. "ಭಾರತವ್ಯಪದೇಶೇನ ಆಮ್ನಾಯಾರ್ಥಃ ಪ್ರದರ್ಶಿತಃ" ಎಂಬ ವಾಕ್ಯವು ಇದನ್ನು ಸ್ಪಷ್ಟಪಡಿಸುವುದು. ವೈದಿಕಧರ್ಮ ಖಂಡನೆಮಾಡಿ ನಾಸ್ತಿಕವಾದವನ್ನು ಹರಡಲು ಪ್ರವೃತ್ತವಾದ ಜೈನ ಹಾಗೂ ಬೌದ್ಧಮತಗಳು ವಿದ್ವಾಂಸರಲ್ಲಿ ಮಾತ್ರ ಬಳಕೆಯಲ್ಲಿದ್ದ ಸಂಸ್ಕೃತಭಾಷೆಯನ್ನು ಬಿಟ್ಟು ಪ್ರಾಕೃತ ಮತ್ತು ಪಾಳೀ ಭಾಷೆಗಳನ್ನು ತಮ್ಮ ತತ್ತ್ವಗಳ ಉಪದೇಶ ಭಾಷೆಯನ್ನಾಗಿ ಆರಿಸಿಕೊಂಡವು. ಆದ್ದರಿಂದಲೇ ಇವು ಜಾಗ್ರತೆಯಾಗಿ ಎಲ್ಲ ಕಡೆಯೂ ಹರಡಿ ರಾಜಾಶ್ರಯವನ್ನು ಪಡೆದವು. ಇವುಗಳ ಪ್ರತಿಕ್ರಿಯೆ ಆರ್ಯಸಂಸ್ಕೃತಿಯ ಮೇಲೂ ಸಾಕಷ್ಟು ಆಯಿತು. ಅಂತೆಯೇ ರಾಮಾಯಣ- ಭಾರತಾದಿ ಗ್ರಂಥಗಳು ಬೇರೆ ಬೇರೆ ಪ್ರಾಕೃತ ಭಾಷೆಗಳಲ್ಲಿ ರಚಿತವಾದವು. ಜೈನ-ಬೌದ್ಧಮತಗಳು ಇಷ್ಟಕ್ಕೇ ನಿಲ್ಲದೆ ಭಾರತದ ವಿವಿಧ ಪ್ರಾಂತ್ಯಗಳ ಬಳಕೆಯ ಭಾಷೆಗಳಲ್ಲೂ ವಿಶೇಷ ಸಾಹಿತ್ಯ ರಚಿಸಿಕೊಂಡವು, ಮೀಮಾಂಸಕರಿಂದ ಪೆಟ್ಟು ತಿಂದ ಬೌದ್ಧಮತವು ಕ್ರಮವಾಗಿ ಭಾರತದಿಂದ ಕಾಲ್ತೆಗೆದರೂ ಜೈನಮತ ಮಾತ್ರ ಇಲ್ಲಿ ಬೇರೆ ಬೇರೆ ಕಡೆ ಹರಡಿತು. ಕರ್ನಾಟಕದಲ್ಲಿ ಮುಖ್ಯವಾಗಿ ಇದರ ಪ್ರಚಾರ ಹೆಚ್ಚಾಯಿತು. ಕ್ರಿ.ಶ. ಏಳು ಮತ್ತು ಎಂಟನೆಯ ಶತಕಗಳಲ್ಲೇ ಮಹಾಭಾರತಾದಿ ಗ್ರಂಥಗಳು ಜೈನರಿಂದ ತಮ್ಮ ಮತಾನುಸಾರವಾಗಿ ಕನ್ನಡದಲ್ಲಿ ರಚಿತವಾದವು. ಉತ್ತರ ಭಾರತದಲ್ಲೂ ದಕ್ಷಿಣ ಭಾರತದಲ್ಲೂ ಕೆಲಕೆಲವು ವಾಮಾಚಾರ ಪದ್ಧತಿಗಳು ಪ್ರಾಚೀನಕಾಲದಿಂದಲೂ ಪ್ರಚಲಿತವಾಗಿದ್ದು, ಜನರಲ್ಲಿ ದುಷ್ಟವೃತ್ತಿಯನ್ನು ಬೆಳೆಸಹತ್ತಿದವು. ಇಷ್ಟೇ ಅಲ್ಲ; ಉತ್ತರಭಾರತದಲ್ಲಿ ಮಹಮ್ಮದೀಯ ರಾಜರು ರಾಜ್ಯ ಕಟ್ಟಿದಂದಿನಿಂದ ಆ ಮತ ಪ್ರಚಾರವೂ ಒತ್ತಾಯವಾಗಿ ಸಾಗಹತ್ತಿತು. ಆದ್ದರಿಂದಲೇ ಮಹಾಭಾರತ, ರಾಮಾಯಣ ಪುರಾಣಗಳ ಆಧಾರದ ಮೇಲೆ ಜನತೆಯಲ್ಲಿ ಪ್ರಚಾರ ಮಾಡಹತ್ತಿದ ವೈಷ್ಣವ, ಶಾಕ್ತ, ಶೈವ ಮೊದಲಾದ ಪಂಥಗಳೂ ಉತ್ತರದಿಂದ ದಕ್ಷಿಣದ ಕಡೆಗೆ ಸರಿದವು. ಕರ್ನಾಟಕವನ್ನು ಮುಖ್ಯ ಕ್ಷೇತ್ರವನ್ನಾಗಿ ಮಾಡಿಕೊಂಡ ಜೈನ, ಶೈವ ಮತ್ತು ವೈಷ್ಣವ ಪಂಥಗಳ ಮುಖ್ಯ ಉದ್ದೇಶ ಜನತೆಯ ಮೇಲೆ ತಮ್ಮ ಪ್ರಭಾವವನ್ನು ಚೆನ್ನಾಗಿ

ಬೀರಿ ಜನರಲ್ಲಿ ಶೀಲವನ್ನು ಸ್ಥಾಪಿಸಬೇಕೆಂಬುದೇ ಆಗಿತ್ತು. ಮಹಾರಾಷ್ಟ್ರದಲ್ಲೂ ವೈಷ್ಣವಸಂತರು ಒತ್ತರದಿಂದ ತಮ್ಮ ಪಂಥದ ಪ್ರಚಾರ ನಡೆಸಿದ್ದರು. ರಾಮಾನುಜಾಚಾರ್ಯರು ಕರ್ಣಾಟಕದಲ್ಲಿ ಬಂದು ನೆಲೆಸಿದ್ದರೂ ಆ ಮತದಲ್ಲಿ ಜನೋಪಯೋಗಿ ಉಪದೇಶಗಳು ತಮಿಳುಭಾಷೆಯಲ್ಲಿದ್ದುದರಿಂದ ಕರ್ಣಾಟಕದಲ್ಲಿ ಅವರಿಂದ ವೈಷ್ಣವಮತ ಪ್ರಚಾರವು ಆಗಲಿಲ್ಲ. ಜೈನಮತವೂ ಕರ್ಣಾಟಕದಲ್ಲಿ ಬಂದ ಕೆಲವು ಕಾಲಾನಂತರ ಅವನತಿಯ ಹಾದಿಯನ್ನೇ ಹಿಡಿದಿತು. ಶೈವಮತವು ಕರ್ಣಾಟಕದಲ್ಲಿ ಬಸವೇಶ್ವರರಿಂದ ಹೊಸರೂಪವನ್ನು ತಾಳಿ ವೀರಶೈವಮತವೆನಿಸಿತು. ಸಮಾಜದಲ್ಲಿ ಕೆಳಗಿನ ಜನರಲ್ಲಿ ರೂಢವಾಗಿದ್ದ ಕಾಡುಸಿದ್ಧ ಮತ್ತು ಪಾಶುಪತವೇ ಮೊದಲಾದ ಕೆಲವು ಪಂಥಗಳಲ್ಲಿನ ವಾಮಾಚಾರಗಳನ್ನು ತೊಡೆದು ಶೀಲವನ್ನೂ, ಸಚ್ಚಾರಿತ್ರ್ಯವನ್ನೂ ಜನರಲ್ಲಿ ಸ್ಥಾಪಿಸಲು ವೀರಶೈವಮತವು ಮುಖ್ಯವಾಗಿ ಹೆಣಗುತ್ತಿತ್ತು. ಆದರೆ ಇದು ಸರ್ವತ್ರ ಪ್ರಚಾರಗೊಳ್ಳಲು ಬಹುಕಾಲ ಹಿಡಿಯಿುತ. ಅಲ್ಲದೆ ಆ ಮತವು ಆರ್ಯಧರ್ಮದಲ್ಲಿ ಮೊದಲಿನಿಂದಲೂ ನಡೆದುಬಂದ ವರ್ಣಾಶ್ರಮಧರ್ಮ ಮತ್ತು ವೇದಪ್ರಾಮಾಣ್ಯಗಳನ್ನು ಅಲಕ್ಷಿಸಿದ್ದರಿಂದ ಇದರ ಕಾರ್ಯಕ್ಷೇತ್ರವು ಕಿರಿದಾಯಿತು. ಹೀಗಾಗಿ ಜನತೆಯಲ್ಲಿ ನೈತಿಕಮಟ್ಟವನ್ನು ಹೆಚ್ಚಿಸಿ ಸರಿಯಾದ ಮಾರ್ಗದಲ್ಲಿ ಒಯ್ಯಲು ಎಲ್ಲ ಮತಗಳೂ ಹವಣಿಸುತ್ತಿದ್ದರೂ ಅವುಗಳು ತಮ್ಮ ಧ್ಯೇಯಗಳನ್ನು ಸಂಪೂರ್ಣವಾಗಿ ಸಾಧಿಸದೆ ಹೋದವು.

ಹರಿದಾಸರ ಉಪದೇಶವು ಮಾತ್ರ ಈ ಮಹೋದ್ದೇಶದಲ್ಲಿ ಸಂಪೂರ್ಣ ಯಶಸ್ಸನ್ನು ಸಂಪಾದಿಸಿತು. ಅಂತೆಯೇ ಇದು ಇಷ್ಟೊಂದು ವ್ಯಾಪಕವಾದ ಸಾಹಿತ್ಯವಾಯಿತು. ಇದು ಜನಸಾಮಾನ್ಯರಿಗೆ ತಕ್ಕ ಶೈಲಿಯಲ್ಲಿ ಅವರ ಮನಸಾಟುವಂತಹ ಸಂಗೀತದ ಹಿನ್ನೆಲೆಯಲ್ಲಿ ವರ್ಣಾಶ್ರಮಧರ್ಮದ ಮಹತ್ವ, ಮಧ್ವಾಚಾರ್ಯರು ಸಾಧಿಸಿ ತೋರಿಸಿದ ಹರಿಯ ಸರ್ವೋತ್ತಮತ್ವಾದಿ ಮಹಾಪ್ರಮೇಯಗಳು ಮತ್ತು ಭಾರತೀಯರಲ್ಲಿ ಪ್ರಾಚೀನ ಕಾಲದಿಂದ ನಡೆದುಬಂದ ಆಚಾರ, ನೀತಿ ಇವುಗಳನ್ನು ರಸವತ್ತಾಗಿ ಜನತೆಯಲ್ಲಿ ಪ್ರಚಾರಮಾಡಿತು. ವಿಕ್ಷಿಪ್ತವಾಗಿಯೂ, ಅನನ್ವಿತವಾಗಿಯೂ, ಕೆಲವು ಕಡೆ ಪರಸ್ಪರ ವಿರುದ್ಧವಾಗಿಯೂ ಕಂಡುಬರುತ್ತಿದ್ದ ಗಡುಚಾದ ತತ್ತ್ವಗಳನ್ನೂ, ಭಗವದವತಾರಗಳ ಚರಿತ್ರೆಗಳನ್ನೂ, ಸಾಂಪ್ರದಾಯಿಕವಾದ ಆಚಾರಾದಿಗಳನ್ನೂ, ಸಮಂಜಸವಾಗಿ ಹರಿದಾಸರು ಸಮನ್ವಯಮಾಡಿ ಆ ಪಾಕದಿಂದ ಸಾಹಿತ್ಯವನ್ನು ರಚಿಸಿದರು. ದಾಸಸಾಹಿತ್ಯದಷ್ಟು ವ್ಯಾಪಕವಾದ ಸಾಹಿತ್ಯವೇ ಬೇರೊಂದಿಲ್ಲ. ಇಷ್ಟು ವಿಸ್ತಾರವಾದ ಭೂಮಿಕೆಯ ಮೇಲೆ ಆದ ವಾಙ್ಮಯ ಸೃಷ್ಟಿಗೆ ಮುಖ್ಯ ಪ್ರೇರಕಶಕ್ತಿಯಾಗಿದ್ದುದಾದರೂ ಮಧ್ವಾಚಾರ್ಯರ ದ್ವೈತಸಿದ್ಧಾಂತವೇ. ಹರಿದಾಸರು ಮಧ್ವಮತವನ್ನೇ ಕನ್ನಡದಲ್ಲಿ ಸಮಗ್ರವಾಗಿ ವ್ಯಾಖ್ಯಾನಮಾಡಿದ್ದಾರೆನ್ನಬಹುದು. ಭಾರತವು ಹೇಗೆ ವೇದಗಳ ವ್ಯಾಖ್ಯಾನರೂಪವೋ ಕನ್ನಡ ಹರಿದಾಸಸಾಹಿತ್ಯವಾದರೂ ಹಾಗೆಯೇ ದ್ವೈತಸಿದ್ಧಾಂತದ ವ್ಯಾಖ್ಯಾನರೂಪವು. ಮಧ್ವಾಚಾರ್ಯರು ವೇದಾದಿ ಸಕಲ

ಸಚ್ಛಾಸ್ತ್ರಗಳ ನಿಜಸಾರವನ್ನು ಹೊರಗೆಡವಿದ್ದಾರೆ. ದಾಸರು ಅದನ್ನು ವಿಸ್ತಾರ ಮಾಡಿದ್ದಾರೆ.

ದಾಸವಾಙ್ಮಯವು ಜನತೆಯನ್ನು ಲೌಕಿಕಜೀವನದಿಂದ, ಕ್ಷುದ್ರ ಆಚಾರ ವಿಚಾರಗಳಿಂದ, ಸ್ವಾರ್ಥವೇ ಮೊದಲಾದ ದೋಷಗಳಿಂದ ಎಚ್ಚರಗೊಳಿಸಿ ಜೀವನದ ಧ್ಯೇಯದತ್ತ ಮನುಷ್ಯನ ಗಮನವನ್ನು ಸೆಳೆಯಿತು. ಅನೇಕ ವಿಷಯಗಳನ್ನು ಉಪದೇಶಿಸುವಾಗಲೂ ಇದು ಕೇಂದ್ರತತ್ತ್ವವನ್ನು ಉಪದೇಶ ಮಾಡುವುದನ್ನು ಮರೆಯಲಿಲ್ಲ. ಆದ್ದರಿಂದಲೇ ಈ ವಾಙ್ಮಯದಲ್ಲೆಲ್ಲ ಒಂದು ಹಿಡಿತವು ಕಂಡುಬರುವುದು. ಅದೆಂದರೆ ಹರಿಭಕ್ತಿ. ಹರಿಭಕ್ತಿಯನ್ನು ಮುಖ್ಯವಾಗಿಟ್ಟುಕೊಂಡು ಈ ಸಾಹಿತ್ಯವು ಉಳಿದೆಲ್ಲ ಆಚಾರ ವಿಚಾರಗಳನ್ನೂ ಈ ಬೆಳಕಿನಲ್ಲಿ ಉಪದೇಶಿಸಿತು. ಅಂತೆಯೇ ಇದರ ಮಹೋನ್ನತ ಕಾರ್ಯವು ಯಶಸ್ವಿಯಾಗಿ ಇದರ ಉಪದೇಶ ಮತ್ತು ಪ್ರಭಾವದಿಂದ ಜನತೆಯಲ್ಲಿ ಆರ್ಯಧರ್ಮವು ಇನ್ನೊಮ್ಮೆ ಜೀವಂತವಾಗಿ ನೆಲೆಸುವಂತಾಯಿತು.

ದಾಸರುಗಳು ಮುಖ್ಯ ತತ್ತ್ವವಾದ ಹರಿಭಕ್ತಿಯನ್ನು ತಿಳಿಸಲು ಬೇರೆ ಬೇರೆ ವರ್ಗದ ಜನರಿಗೆ ಉಪಯುಕ್ತವಾದಂತಹ ಶೈಲಿಯನ್ನು ಉಪಯೋಗಿಸಿರುವುದು ಕೆಳಗಿನ ಎರಡು ಮಾದರಿಗಳಲ್ಲಿ ಸ್ಪಷ್ಟವಾಗಿ ತೋರುವುದು. "ಶ್ರೀರಮಾ ಮಾನಿನೀಮಾನಸೇಂದೀವರೋ । ತ್ಫುಲ ಸಂಫುಲ್ಲಚಂದ್ರಾ ಚಿದಾನಂದ ಸಾಂದ್ರಾ ಸದಾ ಸನ್ನುತೇಂದ್ರಾ ನಮೋಪೇಂದ್ರ ನಿ । ಸ್ತಂದ್ರ ನೀ ಕೇಳು ಈ ರೀತಿ ...."

ಇದು ಶ್ರೀಪಾದರಾಜರು ರಚಿಸಿದ ಲಕ್ಷ್ಮೀನರಸಿಂಹಪ್ರಾದುರ್ಭಾವ ದಂಡಕವು. ನರಸಿಂಹದೇವರ ಅವತಾರವನ್ನು ತಿಳಿಸುವುದು.

"ತಾಳಲ್ಲಲ್ಲಲ್ಲಲ್ಲೋ। ಮೈಸುತ್ತಲ್ಲಲ್ಲಲ್ಲೋ। ಹೆಚ್ಚಿನ ತಮನೆಂಬ ದನುಜವೇದವ ಕದ್ದು। ಬಚ್ಚಿಟ್ಟು ನೀರೊಳು ಮುಳಗಿರಲು। ಮಚ್ಚರೂಪದಿಂದ ಹೋಗಿ ಅವನ ಕೊಂದ। ಅಚ್ಯುತರಾಯನೆಂಬೋ ಮಾಸಾಳಮ್ಮ ॥"

ಇದು ಕನಕದಾಸರ ಕೃತಿಯು. ಮೊದಲ ಕೃತಿಯಲ್ಲಿ ಸಾಹಿತ್ಯದ ಮೇಲ್ಮಟ್ಟದ ದಂಡಕಶೈಲಿಯಲ್ಲಿ ದಾಸರು ಗಂಭೀರವಾಗಿ ಹೇಳಿದ್ದಾರೆ. ಎರಡನೆಯದರಲ್ಲಿ ಹಳ್ಳಿಯ ಅನಕ್ಷರಸ್ಥ ಒಕ್ಕಲಿಗರಿಗೆ ಅವರ ಭಾಷೆಯಲ್ಲೇ ಹರಿಮಹಿಮೆಯನ್ನು ವರ್ಣಿಸಿದ್ದಾರೆ.

ಹೀಗೆ ಸರ್ವಾಲಿಂಗಿತವಾದ ವ್ಯಾಪಕವಾದ ಸಾಹಿತ್ಯವು ವೈದಿಕ ಧರ್ಮವನ್ನು ಸರಿಯಾದ ಬೆಳಕಿನಲ್ಲಿ ವಿವರಿಸಿದ ಮಧ್ವಮತದ ಬುನಾದಿಯ ಮೇಲೆ ರಚಿತವಾದದ್ದು. ಆದ್ದರಿಂದ ಮಧ್ವಾಚಾರ್ಯರಿಂದ ಉಪದಿಷ್ಟವಾದ ವೈದಿಕಧರ್ಮದ ಸರಿಯಾದ ತಿಳುವಳಿಕೆ ದಾಸಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಅತ್ಯವಶ್ಯಕವು. ವೈದಿಕಧರ್ಮಗಳಿಗೆ ಮೂಲವು ವೇದವು. ವೇದವು ಜಗತ್ತಿನ ಎಲ್ಲ ಧರ್ಮಗಳ ತೌರೂರು, ಇದು ಅಪೌರುಷೇಯವು. ಅಂದರೆ ಅನಾದಿ ಕಾಲದಿಂದಲೂ ಲೋಕದಲ್ಲಿ ರೂಢವಾಗಿರುವ ಧರ್ಮಾಧರ್ಮಗಳನ್ನು

ಗೊತ್ತುಪಡಿಸುವ ಜಗತ್ತಿನ ಅತ್ಯಂತ ಹಳೆಯ ವಹಿಯು. ಇದರ ಯಥಾರ್ಥಜ್ಞಾನ ಸುಲಭವಾಗಿ ಆಗುವುದು ಶಕ್ಯವಲ್ಲ. ಇದರ ತಪ್ಪು ತಿಳುವಳಿಕೆಯಿಂದಲೇ ಅನೇಕ ಮತಗಳು ಉದಯಿಸಿರುವುವು. ಇದರ ರಹಸ್ಯ ತಿಳಿಯದೆ ಇದನ್ನು ಅನುಕರಿಸಿ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಧರ್ಮಗಳು ಉದಯಿಸಿದವು. ವೈದಿಕಮತದ ಅಧ್ಯಯನದ ಜೊತೆಗೆ ಇತರ ಮತಗಳ ಪರೀಕ್ಷಣವೂ ಅವಶ್ಯಕವು. ಪ್ರಾಚೀನಕಾಲದಿಂದಲೂ ಅವ್ಯಾಹತವಾಗಿ ಧರ್ಮವನ್ನು ಟೀಕಿಸುತ್ತಾ ಬಂದ ವಿವಿಧ ಪ್ರಯತ್ನಗಳನ್ನು ಪೂರ್ಣ ವಿಚಾರಮಾಡಿ, ಅವುಗಳು ಧರ್ಮದ ಮೇಲೆ ಹೇರುವ ದೋಷಗಳು ಸಯುಕ್ತಿಕವಲ್ಲ ಎಂಬುದನ್ನು ತಿಳಿಸುವುದು ಅತ್ಯವಶ್ಯಕವು. ಆದ್ದರಿಂದ ಸುದೀರ್ಘವಾದರೂ ಅತ್ಯವಶ್ಯಕವಾದ್ದರಿಂದ ಧರ್ಮದ ಅವಶ್ಯಕತೆ, ಧರ್ಮದ ರೂಪರೇಷೆಗಳು,ಇತಿಹಾಸ ಮೊದಲಾದವುಗಳನ್ನು ವಿಶೇಷ ವಿಚಾರಮಾಡಿ ಆ ಅಡಿಪಾಯದ ಮೇಲೆ ವೈದಿಕಧರ್ಮದ ಮುಖ್ಯಾಂಶಗಳನ್ನು ಚರ್ಚಿಸಿ ಆಮೇಲೆ ಹರಿದಾಸಸಾಹಿತ್ಯದ ವಿಷಯ ತಿಳಿದುಕೊಳ್ಳುವುದರಿಂದ ದಾಸಸಾಹಿತ್ಯದ ಸಮಗ್ರ ಅಧ್ಯಯನವಾದಂತಾಗುವುದು. ತಕ್ಕ ಹಿನ್ನೆಲೆಯಿಲ್ಲದೆ ಮಾಡುವ ದಾಸಸಾಹಿತ್ಯ ವಿಚಾರವು ತಾತ್ತ್ವಿಕವಾಗಿಯೂ, ವಿಮರ್ಶಾದೃಷ್ಟಿಯಿಂದಲೂ ಬಲಗೊಳ್ಳುವುದಿಲ್ಲ. ಪ್ರಾಚೀನ ದಾರ್ಶನಿಕರು ತಂತಮ್ಮ ದರ್ಶನದ ತತ್ತ್ವಗಳನ್ನು ನಿರೂಪಿಸುವ ಮೊದಲು ಇತರ ದರ್ಶನತತ್ತ್ವಗಳ ಪರೀಕ್ಷಣವನ್ನು ವಿಸ್ತಾರವಾಗಿಯೇ ಮಾಡುವರು. ಹಾಗಿಲ್ಲದಲ್ಲಿ ಅವರು ಪ್ರತಿಪಾದಿಸವ ತತ್ತ್ವಗಳು ಯುಕ್ತಿ ಸಮ್ಮತವಾಗುವುದಿಲ್ಲ. ಆದ್ದರಿಂದ ದಾಸಸಾಹಿತ್ಯದ ಮೂಲವಾದ ವೈದಿಕಧರ್ಮದ ತಾತ್ತ್ವಿಕವಿವೇಚನೆಯನ್ನು ಮೊದಲು ಕೈಗೊಳ್ಳುವುದು ಅಗತ್ಯವು.

III. "ಧರ್ಮ"ದ ಲಕ್ಷಣ ಮತ್ತು ರೂಪರೇಷೆಗಳು

ರಿಲಿಜನ್ ಎಂಬ ಆಂಗ್ಲಶಬ್ದಕ್ಕೆ "ಧರ್ಮ" ಎಂಬ ಸಂಸ್ಕೃತ ಶಬ್ದವನ್ನು ಪರ್ಯಾಯವಾಗಿ ಹೇಳುವ ರೂಢಿಯು ಬಂದಿರುವುದು. ವಸ್ತುತಃ ವಿಚಾರಮಾಡಿದಲ್ಲಿ ಧರ್ಮವೆಂಬುದು ಅತ್ಯಂತ ವ್ಯಾಪಕವಾದ ಅರ್ಥವುಳ್ಳಶಬ್ದವು. ಇದಕ್ಕೆ ಅನೇಕ ಅರ್ಥಗಳು ಪ್ರಸಿದ್ಧವಿದೆ. ಆದರೆ ರಿಲಿಜನ್ (ಒಫಔೆಗಔಈಖ) ಎಂಬುದರ ಅರ್ಥವನ್ನು "ಧರ್ಮ"ದಷ್ಟು ಚೆನ್ನಾಗಿ ಇತರ ಶಬ್ದಗಳು ಬೋಧಿಸುವುದಿಲ್ಲವೆಂದು ಇದನ್ನೇ ಆ ಪದಕ್ಕೆ ಪರ್ಯಾಯವಾಗಿ ಉಪಯೋಗಿಸುತ್ತಿರಬೇಕು. ರಿಲಿಜನ್ ಎಂಬ ಆಂಗ್ಲಶಬ್ದಕ್ಕೂ ನಿಷ್ಕೃಷ್ಟವಾದ ಅರ್ಥವನ್ನು ಹೇಳುವುದು ಕಷ್ಟವೆಂದು ಅನೇಕ ಪಂಡಿತರು ಅಭಿಪ್ರಾಯಪಡುತ್ತಾರೆ. ಮತ್ತು ಆ ಶಬ್ದದಿಂದ ಬೋಧಕವಾಗಬಹುದಾದ ಕೆಲವು ಅಂಶಗಲನ್ನು ಹೀಗೆ ಸಂಗ್ರಹಿಸಬಹುದೆಂದು ಹೇಳುತ್ತಾರೆ.

ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ಮತ್ತು ನಮ್ಮ ಬುದ್ಧಿಶಕ್ತಿಗೆ ನಿಲುಕುವ ಪದಾರ್ಥಗಳನ್ನು ಬಿಟ್ಟು ನಮ್ಮಲ್ಲಿ ರೂಢವಾಗಿರುವ ಒಂದು ನಂಬಿಕೆ (ಒಔಥ)ಯ

ಬಲದಿಂದ ನಮಗೆ ಗೋಚರವಾಗುವ, ಬೇರೆ ಪದಾರ್ಥಗಳನ್ನು ಒಳಗೊಂಡ ಜಗತ್ತೊಂದಿದೆ ಎಂಬ ನಿಶ್ಚಯಜ್ಞಾನ ಇದರ ಮೊದಲ ಲಕ್ಷಣ. ಆದ್ದರಿಂದಲೇ ಇದಕ್ಕೆ ಬರಿಯ 'ನಂಬಿಕೆ' ಎಂದು ವ್ಯವಹಾರ ಉಂಟು.[1]

ಈ ದೃಷ್ಟ ಪ್ರಪಂಚವು ಆ ಅತೀಂದ್ರಿಯ ಜಗತ್ತಿನ ಆಗುಹೋಗುಗಳಿಂದ, ಸುಖದುಃಖಗಳಿಂದ ಮನುಷ್ಯ ಮೋಹಗೊಳ್ಳಬಾರದು.[2] ನ್ಯಾಯವಾದ ಮತ್ತು ಶಾಸ್ತ್ರೋಕ್ತವಾದ ಮಾರ್ಗದಲ್ಲಿ ನಡೆದರೆ ಈ ದೇಹದಿಂದಲೇ ಆ ಅಲೌಕಿಕ ಜಗತ್ತಿನ ಕೆಲವು ಅನುಭವಗಳನ್ನು ಪಡೆಯಬಹುದು. ಈ ಚರಾಚರಾತ್ಮಕ ಜಗತ್ತಿನಲ್ಲಿ ಅದೃಷ್ಟವಾದ ಶಕ್ತಿಯೊಂದರ ಕೈವಾಡವು ಸೂಕ್ಷ್ಮದರ್ಶಿಗಳಿಗೆ ಗೋಚರ- ವಾಗುವುದು. ಈ ಶಕ್ತಿಯನ್ನೇ ಭಗವಂತನೆನ್ನಬಹುದು. ಅಲೌಕಿಕ ಜಗತ್ತಿನ ಕೇಂದ್ರತತ್ತ್ವವೇ ಭಗವಂತ. ಅವನು ಈ ಜಗತ್ತಿನ ನಿಯಾಮಕನಾಗಿ ಎಲ್ಲ ಜೀವಿಗಳ ಹೃದಯದಲ್ಲೂ ಪ್ರೇರಕನಾಗಿದ್ದುಕೊಂಡು

---

1. Faith in the primary sense is a way of corresponding with Realities which transcend sense-experience. It is an inward power by which the soul lives above the seen and the temporal, and 'overcomes' the world of the causal mechanical order. It is a conviction arising apparently from the very rationality of the spirit in us that there is an inner-unseen, spiritual universe, an eternal moral order. It is the soul's vision of what ought to be and its confidence in the reality and permanence of that estimate of worth, 'the assurance of things not seen.' It is no more product of sense experience, but it is the very pinnacle of rationality and as normal a function as our responses to ocular vision.

- Studies in Mystical religion
Rufus M. Jones

2. ಲೊಳಲೊಟ್ಟೆ ಎಲ್ಲ ಲೊಳಲೊಟ್ಟೆ । ಆನೆ ಕುದುರೆ ಒಂಟೆ ಲೊಳಲೊಟ್ಟೆ ।
ಬಹುಸೇನೆ ಭಂಡಾರವು ಲೊಳಲೊಟ್ಟೆ। ಮಾನಿನಿಯರ ಸಂಗ ಲೊಳಲೊಟ್ಟೆ?
ದೊಡ್ಡ ಕ್ಷೋಣೀಶನೆಂಬೋದು ಲೊಳಲೊಟ್ಟೆ ।। -- ಪುರಂದರದಾಸರು

i. ಶ್ವೋಭಾವಾ ಮರ್ತ್ಯಸ್ಯ ಯದಂತಕೈತತ್ಸರ್ವೇಂದ್ರಿಯಾಣಾಂ ಜರಯಂತಿ ತೇಜಃ।
ಅಪಿ ಸರ್ವಂ ಜೀವಿತ ಮಲ್ಪಮೇನ ತವೈವವಾಹಾಸ್ತವ ನೃತ್ತಗೀತಮ್ ।।

-- ಕಠೋಪನಿಷತ್-1-26

ii. ಕೌಮಾರ ಆಚರೇತ್ಪ್ರಾಜ್ಞೋ ಧರ್ಮಾನ್ಭಾಗವತಾನಿಹ ।
ದುರ್ಲಭಂ ಮಾನುಷಂ ಜನ್ಮ ತದಪ್ಯಧ್ರುವಮರ್ಥದಮ್ ।।

-- ಭಾಗವತಮ್, 7-61

✣ ✣ ✣

ಈ ಜಗತ್ತಿನ ವ್ಯಾಪಾರವನ್ನು ನಡೆಸುತ್ತಿರುವನು.[3] ಅವನ ಹೊರತು ಯಾರು ಏನನ್ನೂ ಮಾಡಲಾರರು, ಎಲ್ಲ ಚೇತನರೂ ಅವನ ಅಧೀನ. ಅವನು ಸರ್ವಶಕ್ತ, ಸರ್ವವ್ಯಾಪ್ತ, ಸರ್ವಜ್ಞ. ಅವನ ಅನಂತ ದಯೆಯಿಂದ ಜೀವ ಈ ಜಗತ್ತಿನ ನಶ್ವರವಾದ ಜೀವನವನ್ನು ಮೀರಿ ಶಾಶ್ವತ ಸುಖವನ್ನು ಕಾಣುವನು. ಇದಕ್ಕಾಗಿ ಮನುಷ್ಯ ಸಚ್ಚಾರಿತ್ರನಾಗಿರಬೇಕು. ಜೊತೆಗೆ ಆ ಭಗವಂತನನ್ನೇ ಆರಾಧಿಸಬೇಕು. ಆತನನ್ನು ಸ್ತುತಿಸಬೇಕು. ಈ ಬಗೆಯ ಸಾಧನೆ ಬರಿಯ ಜ್ಞಾನದಿಂದ ಸಾಧ್ಯವಿಲ್ಲ. ಜ್ಞಾನದ ಜೊತೆಗೆ ಭಕ್ತಿ ಮತ್ತು ಅನುಭವವೂ ಬೇಕು.[4] ನಂಬಿಕೆಯೇ ಇಂತಹ ಅನುಭವಕ್ಕೆ ಮೂಲಕಾರಣ. ನಂಬಿಕೆ ಮತ್ತು ಶ್ರದ್ಧೆ ಇದ್ದರೆ ಈ ಎಲ್ಲ ತತ್ತ್ವಗಳ ಸತ್ಯತೆಯ ಅರಿವಾಗಿ ಮನುಷ್ಯ ಆ ಕಡೆ ತನ್ನ ಲಕ್ಷ್ಯವನ್ನು ಚೆಲ್ಲುವನು. ಆದ್ದರಿಂದ ಮೆದುಳಿನ ಜೊತೆಗೆ ಕರುಳು ಬೇಕು. ಏಕೆಂದರೆ ಮೆದುಳಿಗೆ ನಿಲುಕದ ಭಾವನೆ, ಸ್ನೇಹ, ಭಕ್ತಿ ಮತ್ತು ಆನಂದ ಇವು ಹೃದಯಕ್ಕೆ ನಿಲುಕವುವು.[5] ಇವೇ "ಧರ್ಮ" ಎಂಬ ಪದದಿಂದ ಬೋಧವಾಗುವ ವಿಷಯಗಳು. ರಿಲಿಜನ್ ಎಂಬ ಶಬ್ದವು "ಸಂಗ್ರಹಿಸು" "ಗಣನೆ ಮಾಡು" ಎಂದರೆ "ದೈವೀಸಂಪರ್ಕದ ಲಕ್ಷಣ ತೋರಿಸು" ಎಂಬರ್ಥದಲ್ಲಿ "ಲೆಗ್" ಎಂಬ ಧಾತುವಿನಿಂದ ನಿಷ್ಪನ್ನವಾದುದೆಂದು ಸಿಸಿರೋ ಎಂಬ ಪಂಡಿತನು ಅಭಿಪ್ರಾಯ- ಪಡುವನು. ಸರ್ವಿಪಾಸ್ ಎಂಬ ಪಂಡಿತನು ಇದು "ಲಿಗ್" ಎಂಬ ಧಾತುವಿನಿಂದ ನಿಷ್ಪನ್ನವಾದುದೆಂದೂ ಇದಕ್ಕೆ "ಕಟ್ಟು" ಎಂಬರ್ಥ ಎಂದರೆ "ಮಾನವರಿಗೂ ದೇವತೆಗೂ ಇರುವ ಸಂಬಂಧ" ಎಂದು ಅಭಿಪ್ರಾಯಪಡುವನು.

ಮುಖ್ಯವಾಗಿ ಮನುಷ್ಯನಿಗೂ ಅಪ್ರಾಕೃತಶಕ್ತಿಗೂ ಇರುವ ಸಂಬಂಧ ಮತ್ತು ಅಂತಹ ಸಂಬಂಧಸೂಚಕ ಪಂಥವೆಂಬರ್ಥದಲ್ಲಿ ಇದನ್ನು ಉಪಯೋಗಿಸುವುದು ಕಡಿಮೆ.[6] ಸರ್

3. ಈಶ್ವರಸ್ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ ।
   ಭ್ರಾಮಯನ್ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ।
4. ಶ್ರದ್ಧಾವಾಂಲಭತೇಜ್ಞಾನಂ ತತ್ಪರಃಸಂಯತೇಂದ್ರಿಯಃ ।
   ಜ್ಞಾನಂಲಬ್ಧ್ವಾಪರಾಂಶಾಂತಿಮಚಿರೇಣಾಧಿಗಚ್ಛತಿ ॥

-- ಗೀತಾ.

ಫಲವಿದು ಬಾಳ್ದುದಕೆ ಸಿರಿನಿಲಯನ ಗುಣಗಳ ತಿಳಿದು ಭಜಿಸುವುದೆ.

-- ಜಗನ್ನಾಥದಾಸರು.

5. Most religions have, however, consistently maintained and maintained as a par of the religion, as, that is to say, an article of faith, that mankind cannot live by knowledge alone. To know the truths which religions have affirmed is also to feel the truth of what one knows, so that it no longer remains something outside oneself, but is taken up into and incorporated with one's whole being. The heart, in short is involved no less than the

ವಿಲಿಯಂ ಜೇಮ್ಸರು ಇದೇ ಅಭಿಪ್ರಾಯವನ್ನೇ ಹೇಳುತ್ತಾರೆ. ದೇವತಾಸಂಬಂಧಕ್ಕೆ ಅವರು ಧರ್ಮವೆನ್ನುವರು.[7] ಇನ್ನು ಧರ್ಮವೆಂಬ ಸಂಸ್ಕೃತಶಬ್ದಕ್ಕೆ ಬೇರೆ ಬೇರೆ ಲಕ್ಷಣಗಳು ಉಕ್ತವಾಗಿವೆ. ಯಾವುದರಿಂದ ಇಹಪರಗಳೆರಡರಲ್ಲಿಯೂ ಸೌಖ್ಯವು ಸಿದ್ಧಿಸುವುದೋ ಅದು ಧರ್ಮವೆಂದು ವೈಶೇಷಿಕರ ಮತ.[8] ಕಾರ್ಯಪ್ರಚೋದಕ ಲಕ್ಷಣ ಉಳ್ಳದ್ದು ಧರ್ಮವೆಂದು ಜೈಮಿನಿ ಅಭಿಪ್ರಾಯ.[9] ವೇದೋಕ್ತವಾದುದು ಧರ್ಮವೆಂದು ವೈದಿಕ ಸಿದ್ಧಾಂತಿಗಳ ಅಭಿಪ್ರಾಯ.[10] ಇದರ ಜೊತೆಗೆ ಮತ್ಸ್ಯಪುರಾಣದಲ್ಲಿ[11] ಧಾರಣಮಾಡು ಎಂಬರ್ಥದಲ್ಲಿಯೂ, ದೊಡ್ಡದು ಎಂಬ ಅರ್ಥದಲ್ಲಿಯೂ ಇದರ ಪ್ರಯೋಗವಿದೆ.

ಮಹಾಭಾರತದಲ್ಲೂ[12] ಇದೇ ಅರ್ಥ ವಿಹಿತವಾಗಿದೆ. ರಿಲಿಜನ್ ಎಂಬ ಶಬ್ದದ ಮೂಲಧಾತು13ವಿಗೂ ಧರ್ಮಶಬ್ದಕ್ಕೂ ಈ ಧಾರಣೆ, ಬಂಧನ, ವಸ್ತುವಿನ ಮುಖ್ಯ ಸ್ವಭಾವ

---

brain. Hence 'experience' is perhaps a better word than knowledge an experience which is of the whole man; whereas the intellect knows algebra, the heart human love, the emotions, fear, it is the whole man, the whole man as thinking, as feeling, as striving and as loving, that knows or experiences the truth of religion.

-- God & Evil, C.E. M. Joad. P.10

6. Of Roman writers Cicero held that it came from a root 'leg'-meaning to take up, 'gather, count or observe', 'to observe the signs of a Divine Communication'. Servius on the other hand, held that it came from another root 'lig' - to bind, so that 'religis' meant a 'relationship', i.e., a communion between the human and the Superman. For most Europeans, at any rate, 'religion has came to mean a fixed relationship between the human self and some non-human entity' the Sacred, the Supernatural, the self-Existent, the Absolute, or simply "God".

-- Comparative Religions. A.D. Bouquet.

7. Religion shall mean for us, the feelings, acts and experiences of individual men in their solitude so far as they apprehend themselves to stand in relation to whatever they may consider divine.

-- Varieties of Religious Experiences.

8. ಯತೋಽಭ್ಯುದಯ ನಿಶ್ರೇಯಸಸಿದ್ಧಿಃ ಸಧರ್ಮಃ.

9. ಚೋದನಾಲಕ್ಷಣೋಽರ್ಥೋಽಧರ್ಮಃ.

10. ವೇದಪ್ರಣಿಹಿತೋ ಧರ್ಮಃ.

11. ಧರ್ಮೇತಿಧಾರಣೇ ಧಾತುಃ ಮಹತ್ವೇಚೈವಮುಚ್ಯತೇ ।
ಆಧಾರಣೇ ಮಹತ್ವೇ ವಾ ಧರ್ಮಸ್ಸ ತು ನಿರುಚ್ಯತೇ ।

12. ಧಾರಣಾದ್ಧರ್ಮ ಇತ್ಯಾಹುಃ ಧರ್ಮೋ ಧಾರಯತಿ ಪ್ರಜಾಃ ॥

ಎಂಬ ಅರ್ಥಛಾಯೆ ಮೂಡುವುದು. ಅಲ್ಲದೆ ಧರ್ಮವೆಂಬುದು ಅದೃಷ್ಟ ಜಗತ್ತಿಗೆ ಸಂಬಂಧಪಟ್ಟದೆಂಬುದು ಭಾರತ ಸಂಸ್ಕೃತಿಯಲ್ಲಿ ಅನೂಚಾನವಾಗಿ ಬಂದ ಪ್ರತೀತ. ಧರ್ಮವು ದೇವರ ಸಂಬಂಧ ಹೊಂದಿದುದು. "ಧಾರಕಾದ್ಧರ್ಮೋ ಹರಿಃ" ಎಂಬ ನಿಷ್ಪತ್ತಿಯಂತೆ ಧರ್ಮ ಶಬ್ದಕ್ಕೆ ದೇವರೆಂದೇ ಅರ್ಥವು. ಆದ್ದರಿಂದ ಧರ್ಮ ಶಬ್ದದ ಅರ್ಥವು ಅತ್ಯಂತ ವ್ಯಾಕವಾದುದು. ನಶ್ವರವಾದ ಈ ಸಂಸಾರದಿಂದ ನೊಂದ ಮನುಷ್ಯನಿಗೆ ವೇದಗಳು ಸರಿಯಾದ ಹಾದಿ ತೋರಿಸುತ್ತವಾದ್ದರಿಂದ14 "ವೇದೋಕ್ತವಾದುದು ಧರ್ಮ" ಎಂಬ ಅಭಿಪ್ರಾಯವೂ ಸರಿಯಾದುದು ಆಗಿದೆ.

IV. ಧರ್ಮದ ಅವಶ್ಯಕತೆ

ಈ ಜಗತ್ತಿನ ಸ್ವರೂಪವೇನು? ಜಡ ಚೇತನರುಗಳ ಲಕ್ಷಣವೇನು? ಮಾನವನ ಧ್ಯೇಯವಾವುದು? ಪ್ರಗತಿ ಎಂದರೇನು? ಸುಖಸ್ವರೂಪವೇನು? ಪ್ರತ್ಯಕ್ಷ ಮತ್ತು ಊಹೆಗೆ ನಿಲುಕದ ಅದೃಷ್ಟ ಉಂಟೆ? ಎಂಬ ಪ್ರಶ್ನೆಗಳು ಮನುಷ್ಯನ ಮುಂದೆ ಅನಾದಿಕಾಲದಿಂದಲೂ ಇರತಕ್ಕವು.

---

13. The words religion, law, legal obligation, are derived from Latin roots having allied meanings ligare, legare, lex legic. That which holds a thing together, makes it what it is, prevents it from breaking up and changing it into something else, its characteristic function, its peculier property, its fundamental attributes, its essential nature, is its Dharma the law of its being premarily. Briefly Dharma is characteristic property scientifically, duty morally and legally religion with all its proper implications, psycho-physically and spiritually and righteousness and law generally, but duty above all.

-- Science of Social Organisation
Bhagawandas

14. ಶರೀರಾಂತಃ ಕರಣ ಸನ್ನಿಧಾನೇನ ಸ್ವಾತ್ಮನೋ ವಿವಿಧದುಃಖಂ ಪಶ್ಯನ್ ನಿಷ್ಕಂಟಕಂಚ ಸುಖಮಲಭಮಾಮೋತ್ತಿಯಂ ಸಂಶೇತೇ ಕಿಂ ಮಮೇದಂ ದುಃಖಾದಿಕಂ ಶರೀರಸಂಬಂಧಾ ದಿ ನಿಮಿತ್ತಮೇವ ಉತ ಸ್ವಾಭಾವಿಕಮಿತಿ ತಂ ಪ್ರತಿ ವೇದಃ ಪ್ರವರ್ತತೇ ॥

-- ವಿಷ್ಣುತತ್ತ್ವನಿರ್ಣಯ ಟೀಕಾ

ಅದುಃಖಮಿತರತ್ಸರ್ವಂ ಜೀವಾ ಏವತು ದುಃಖಿನಃ ।
ತೇಷಾಂ ದುಃಖಪ್ರಹಾಣಾಯ ಶ್ರುತಿರೇಷಾ ಪ್ರವರ್ತತೇ ॥

✣ ✣ ✣

1. ವಿಜ್ಞಾನದ ಮಹತ್ವ

ಜಗತ್ತಿನ ಇತಿಹಾಸ ಪ್ರಾರಂಭವಾದಂದಿನಿಂದಲೂ ಧರ್ಮದಿಂದ ಮಾತ್ರ ಮಾನವನ ಈ ಮೂಲಭೂತ ಪ್ರಶ್ನೆಗಳನ್ನು ಪರಿಹರಿಸಲು ಶಕ್ಯವೆಂಬ ಅಭಿಪ್ರಾಯ ರೂಢವಾಗಿತ್ತು. ಆದರೆ ಭೌತವಿಜ್ಞಾನ (ಫಚುಔಔಬಥ್ಞಔಓಖ್ಬ)ದ ಉದಯವಾಗಿ, ಅದು ಮುನ್ನಡೆದಂತೆಲ್ಲಾ ಈ ಅಭಿಪ್ರಾಯ ಬದಲಾಗಹತ್ತಿತು. ಈ ಮೂಲಭೂತವಾದ ಪ್ರಶ್ನೆಗಳಿಗೆ ವಿಜ್ಞಾನವೇ ಪರಿಹಾರವನ್ನು ಸೂಚಿಸಬಲ್ಲದೆಂಬ ಪ್ರಬಲವಾದ ಭರವಸೆ ಜನರಲ್ಲಿ ಮೂಡಿತು. ಅದರಲ್ಲೂ ನಿತ್ಯಜೀವನಕ್ಕೆ ಸಂಬಂಧಿಸಿದ ಆಹಾರೋತ್ಪಾದನೆ, ವಸ್ತ್ರವಸತಿಗಳ ಸೌಕರ್ಯ, ಸಂಚಾರಕರಣ, ಸಮಾಚಾರದ ತೀವ್ರಗತಿ, ವಿಹಾರ ಸಾಮಗ್ರೀಸೃಷ್ಟಿ, ಇವು ತೋರಹೊಮ್ಮಿದ ಮೇಲಂತೂ ವಿಜ್ಞಾನಕ್ಕೆ ಅತಿಶಯವಾದ ಗೌರವವೂ, ಅದರ ಬಗ್ಗೆ ಪ್ರಾಮಾಣ್ಯಬುದ್ಧಿಯೂ ಉಂಟಾಗಿ, ಇದರಿಂದ ಜಗತ್ತೇ ಮಾರ್ಪಡುವುದೆಂದೂ, ಮುಂದೆ ಮನುಷ್ಯನಿಗೆ ಬಿಡಿಸಲಾರದ ತೊಡಕೇ ಉಳಿಯಲಾರದೆಂದೂ ಮಾನವ ನಂಬಿದ.

ಈ ಹುರುಪಿನಲ್ಲಿ ವಿಜ್ಞಾನದ ವಿವಿಧ ಮುಖಗಳ ಫಲಿತಾಂಶಗಳು ಏನೆಂಬುದರ ಬಗ್ಗೆ ಅವನ ಲಕ್ಷ್ಯವೇ ಹೋಗಲಿಲ್ಲ. ವಿಜ್ಞಾನಿ ತನ್ನ ವಿಶೇಷ ಕ್ಷೇತ್ರಗಳಲ್ಲಿ ಕಾರ್ಯರತನಾಗಿ ಜಗತ್ತಿನ ಕೆಲವೊಂದು ಸಂಕುಚಿತಭಾಗಕ್ಕೆ ಲಕ್ಷ್ಯ ಕೊಡುತ್ತ ನಡೆದ. ಹೀಗೆ ಸಾಗಿದಂತೆ ಅವನೊಂದು ಕೆಲವು ನಿರ್ದಿಷ್ಟ ನಿರ್ಣಯಗಳಿಗೆ ಬಂದ. ಆದರೆ ಅವು ವಿಜ್ಞಾನದ ಇತರ ಭಾಗಗಳಲ್ಲಿ ನಡೆದ ಕಾರ್ಯಗಳ ಫಲಿತಾಂಶಕ್ಕೆ ಹೇಗೆ ಹೊಂದಿಕೊಂಡಿವೆ ಎಂಬುದನ್ನು ವಿಚಾರ ಮಾಡದಾದ. ಇದು ಅವನ ಆಕ್ಷೇಪಣೆಯಲ್ಲ. ವಿಜ್ಞಾನದ ಬೇರೆ ಬೇರೆ ಕ್ಷೇತ್ರಗಳ ಫಲಿತಾಂಶಗಳಲ್ಲಿ ಪರಸ್ಪರ ವಿರೋಧಗಳಿದ್ದರೂ ಆಶ್ಚರ್ಯವೇನಲ್ಲ; ಆದ್ದರಿಂದ ಈ ಭಿನ್ನ ಭಿನ್ನ ಕ್ಷೇತ್ರಗಳ ಫಲಿತಾಂಶಗಳನ್ನು ಹೊಂದಿಸಿ ಸಮನ್ವಯ ಮಾಡುವ ಅವಶ್ಯಕತೆ ಈಗ ಹೆಚ್ಚಾಗಿದೆ. ಹೀಗೆ ಮಾಡುವುದರಿಂದ ನಮ್ಮೀ ಪ್ರಪಂಚದ ರೂಪರೇಷೆಗಳೇನೆಂಬುದನ್ನು ವಿಚಾರಿಸುವುದಕ್ಕೂ ಅಂತಹ ಪ್ರಪಂಚದಲ್ಲಿರುವ ಮಾನವಜೀವಿತದ ಗೊತ್ತುಗುರಿಯ ಬಗ್ಗೆ ವಿಚಾರಮಾಡುವುದಕ್ಕೂ ಅವಕಾಶವಾಗುವುದು.[1]

1. The scientist working away in his own special compartment, devotes his attention to a certain carefully delimited section of the universe. Thus enclosed, he arrives at more or less definite conclusions without stopping to consider what relation they bear to the conclusions reached by other scientists working in their watertight compartments. This is not a criticism of the scientist; cosmic correlation is not his business, but it is not to be wondered at if some of the conclusions clash. Hence arises the need for a clearing house in which the results arrived at by the various sciences can be pooled and collated, in order that looking at them as a whole, we may be able to infer what

2. ವಿಜ್ಞಾನ ಬೆಳೆದ ಕ್ರಮ

ಹತ್ತೊಂಬತ್ತನೆಯ ಶತಮಾನದಲ್ಲಿ ಹೊರಸೂಸಿದ ವಿಜ್ಞಾನದ ಫಲಿತಾಂಶದ ಪರಿಣಾಮವಾಗಿ, "ಪ್ರತ್ಯಕ್ಷಕ್ಕೆ ಗೋಚರವಾದ, ದೇಶಕಾಲಗಳಿಂದ ಪರಿಚ್ಛಿನ್ನವಾದ ವಸ್ತು ಮಾತ್ರ ಸತ್ಯ. ಉಳಿದವು ಸತ್ಯವಲ್ಲ"ವೆಂಬ ಭಾವನೆ ಸರ್ವತ್ರ ಬೇರೂರಿತು. ಆದ್ದರಿಂದ ಪದಾರ್ಥಗಳ ಸ್ವರೂಪನಿರ್ಣಯವೆಂದರೆ ಪದಾರ್ಥಗಳ ದರ್ಶನ, ಸ್ಪರ್ಶನ, ಅವುಗಳ ಭಾಗಪರೀಕ್ಷೆ ಇಷ್ಟೆ. ಪದಾರ್ಥಗಳ ಮೌಲಿಕ ಪರೀಕ್ಷಣವಾಗಲೀ, ಧಾರ್ಮಿಕ ಅನುಭವವಾಗಲೀ ಸತ್ಯವಲ್ಲ. ಅದು ಛಾಯಾಪ್ರಪಂಚದ ವಿಹಾರದಂತೆ. ವಿಜ್ಞಾನದ ಇಂತಹ ಭಾವನೆಯ ಪ್ರಭಾವಕ್ಕೊಳಪಟ್ಟ ವ್ಯವಹಾರಜ್ಞಾನವೂ ಇದೇ ಹಾದಿ ಹಿಡಿಯಿತು. ಭೂತಜಗತ್ತನ್ನು ಕಣ್ಣಿಂದ ನೋಡುವುದೇ ಸತ್ಯದ ಪರಿಚಯ. ಒಳಗಣ್ಣಿನಿಂದ ಅತೀಂದ್ರಿಯ ಪದಾರ್ಥಗಳನ್ನು ನೋಡುವುದು ಭ್ರಮೆ.

ಇಂತಹ ದರ್ಶನಕ್ಕೆ ವಿಷಯವಾಗಿ ಜಗತ್ತಿಗೆ ಸ್ವರೂಪಸತ್ತೆಯೇ ಇಲ್ಲ ಎಂಬೀ ಅಭಿಪ್ರಾಯಗಳು ಜನಗಳ ತಲೆಯಲ್ಲಿ ತುಂಬಿದವು[2] ಜಗತ್ತಿನ ಬಗ್ಗೆ ಸಂಪೂರ್ಣ ತಿಳುವಳಿಕೆ ಪಡೆಯಲು ಬಹಳ ದೂರವಿಲ್ಲವೆಂಬುದು ಆಗಿನ ದೃಷ್ಟಿ[3] ಯುರೋಪಿನ ಸಂಸ್ಕೃತಿಯೇ ಅತಿ ಪಕ್ವವಾದದ್ದೆಂದೂ, ಅಂತ್ಯ ಸಿದ್ಧವಾದದ್ದೆಂದೂ, ಮಾನವಶಕ್ತಿಯ ಚರಮ- ಸಾಕ್ಷಾತ್ಕಾರವೆಂದೂ ಅಂದಿನ ನಂಬುಗೆ.[4]

---

kind of universe it is that we live in and hazard a guess at the destiny of human life within it.

-- Guide to Modern Thought

2. It followed that whatever else was real must be of the same nature as that which one could theoretically see and touch. Hence, to enquire into the nature of the things, we saw and touched, to analyse them into elements and atoms, was to deal directly with reality; to apprehend values and to enjoy religious experience was to wander in a world of shadows. Commonsense under the influence of science, took the same view; to use the eye of the body to view the physical world was to acquaint oneself with what was real; to use that of the soul to see visions was to become the victim of illusion. And the use of the Universe to which the visions led had, it was urged, no objective reality.

-- ibid p. 18.

3. The nineteenth century view seems to have been that we wee within reasonable distance of attaining a complete understanding of the universe.

-- ibid p. 27.

4. Victoriana-compiled by Margaret Barton & Osbert Sitwell.

C C C

ಇದೆಲ್ಲ ವಿಜ್ಞಾನದ ಶೈಸವಾವಸ್ಥೆಯಲ್ಲಿನ ಭಾವನೆಗಳು. ಆಗ ಜಡ ಪದಾರ್ಥದ ಪ್ರಾಧಾನ್ಯ ತಾನೇತಾನಾಗಿತ್ತು. ಭೌತಶಾಸ್ತ್ರವಂತೂ ಜಡ ಪದಾರ್ಥಗಳ ಪರೀಕ್ಷಣೆಯಲ್ಲಿ ಇತಿಕರ್ತವ್ಯತೆಯನ್ನು ಕಂಡುಕೊಂಡಿತ್ತು. ಇತರ ವಿಜ್ಞಾನಿಗಳಿಗೂ ಇದೇ ಹಂಬಲವಿತ್ತು. ಮಾನವಶಾಸ್ತ್ರವೂ ಸಹ ಪ್ರತ್ಯೇಕವಾದ ಆತ್ಮ, ಮನಸ್ಸು ಇದೆಯೆಂಬುದನ್ನು ನಿರಾಕರಿಸುತ್ತಿತ್ತು. ವಿಕಾಸವಾದದ ಪರಿಣಾಮದಿಂದ ಜೀವಶಾಸ್ತ್ರವೂ ಯಾಂತ್ರಿಕ ಕಲ್ಪನೆಗೆ ಮೋಹಗೊಂಡಿತ್ತು. ಮನೋವಿಶ್ಲೇಷಣೆಯೂ ಇದಕ್ಕೆ ಬಲ ಕೊಡುತ್ತಿತ್ತು. ಖಗೋಳಶಾಸ್ತ್ರವೂ ಆಗ ನಿರ್ಜೀವ ಶಾಸ್ತ್ರವೇ. ಹೀಗಾಗಿ ಜಡ ಪದಾರ್ಥವನ್ನು ವಿಚಾರಮಾಡುವ ಭೌತಶಾಸ್ತ್ರಗಳು ಚೇತನ-ಪ್ರಧಾನವಾದ ವಿಜ್ಞಾನಕ್ಕಿಂತ ಬಹಳ ಮುನ್ನಡೆಯಿತು. ಇದೀಗ ಮಾನವನಿಗೆ ಬಿದ್ದ ಅತ್ಯಂತ ಪ್ರಬಲವಾದ ಆಘಾತ.[5]

ಆದರೆ ಬೇರೆ ಬೇರೆ ವಿಜ್ಞಾನಗಳು ಬೆಳೆದು ನೂತನ ಆವಿಷ್ಕಾರಗಳು ನಡೆದ ಮೇಲೆ, ಜಡದ ಬಗ್ಗೆ ವಿಚಾರಮಾಡಿದ ಈ ಎಲ್ಲಾ ವಿಜ್ಞಾನಗಳ ಕಟ್ಟಡದ ಬುನಾದಿಯೇ ಕುಸಿದಿದೆ. ಪದಾರ್ಥವೆಂದರೆ ಘನವಾಗಿ ದೃಗ್ಗೋಚರವಾಗಿರಬೇಕೆಂಬ ಭಾವನೆ ಮಾಯವಾಗಿದೆ. ಈಗಿನ "ಪದಾರ್ಥ" ವಿದ್ಯುತ್ತಿನ ಒಂದು ಶಕ್ತಿಯಂತಾಗಿದೆ. ಇದು ಚೇತನದ ಅಂಶವೇನೋ ಎಂಬಷ್ಟು ಸೂಕ್ಷ್ಮವಾಗಿದೆ.[6] ಆದ್ದರಿಂದ ಆಧುನಿಕ ವಿಜ್ಞಾನದಿಂದ ಬರುವ ತಿಳಿವು ಸ್ಪಷ್ಟವಾಗಿಲ್ಲ. ಇದು ಅತಿ ಸಂದಿಗ್ಧ. ಬೇರೆ ಬೇರೆ ವಿಜ್ಞಾನ ಶಾಸ್ತ್ರ, ಬೇರೆ ರೀತಿಯಾಗಿ ದಿಕ್ಪ್ರದರ್ಶನ ಮಾಡುತ್ತದೆ. ಆಧುನಿಕ ವಿಚಾರಪ್ರಪಂಚದಲ್ಲೂ ಇದರ ಪರಿಣಾಮವು ಗಮನಾರ್ಹವಾಗಿದೆ. ಇದು ತಾನು ಉದಯಿಸಿದ ಬೌದ್ಧಿಕ ಹಿನ್ನೆಲೆಯೂ ಅಷ್ಟೇ ಸಂದಿಗ್ಧವಾಗಿದೆ. ಹಿಂದಿನ ಶತಮಾನದ ಭೌತವಾದ ಮಾಯವಾಗುತ್ತಿದೆಯೆಂದು ಅನಿಸಿದರೂ, ಇದಕ್ಕೆ ಬದಲು ಏನೆಂಬುದು ಮಾತ್ರ ಸ್ಪಷ್ಟವಾಗಿಲ್ಲ.[7] ಈ ವಿಚಾರದಿಂದ ನಮ್ಮ ದೃಗ್ಗೋಚರವಾದ, ಸ್ಪರ್ಶಕ್ಕೆ ವಿಷಯವಾದ ಪದಾರ್ಥಗಳಂತಿರುವುದೇ ಸತ್ಯವೆಂಬ ಸಂಕುಚಿತ ಕಲ್ಪನೆ ಬಯಲಾದಂತೆಲ್ಲಾ ವಿಶಾಲ ದೃಷ್ಟಿಗೆ ಇಂಬು ದೊರೆಯುತ್ತದೆ. ಮೌಲಿಕ ಭಾವನೆಗಳೂ ಸತ್ಯವಿರಬಹುದು. ಧರ್ಮ ಶೀಲಗಳ ಕಲ್ಪನೆಯೂ ಸತ್ಯವಿರಬಹುದೆಂಬ ವಿಚಾರಗಳು ಮೂಡುತ್ತಿವೆ. ಹಿಂದಿನ ಶತಕದಲ್ಲಿ ಧರ್ಮ ಮತ್ತು ವಿಜ್ಞಾನಕ್ಕಿದ್ದ ಅಂತರ ಕೂಡುವಂತಾಗಿದೆ.8 ಇದರಿಂದ ನಾವು ನಿಷೇಧಮುಖವಾದ ನಿರ್ಣಯವನ್ನು ಮಾಡಬಹುದು. ಧರ್ಮವು ಮಿಥ್ಯೆ ಎನ್ನಲು ಭೌತವಿಜ್ಞಾನಗಳು ಹೇಳುವ ಕಾರಣಗಳು ಸರಿಯಲ್ಲವೆಂದೂ,

---

5. Thus the enormous advance gained by the sciences of inanimate matter over those of living things is one of the greatest catastrophes ever suffered by humanity.

-- Man the Unknown. p. 38.

6. To-day the foundation for this whole way of thinking, the hard, obvious, simple lumps of matter, has disappeared.............it is a 'mush' of electricity; frequently it turns out not to be matter at all but a projection of the consciousness of its perceiver.

-- Guide to Modern Thought. p. 19

ಜಗತ್ತಿನ ವಿಚಾರದಲ್ಲಿ "ಧರ್ಮ" ಮಾಡಿರುವ ವಿಚಾರವನ್ನು ತತ್ತ್ವತಃ ಪುನರ್ವಿಮರ್ಶಿಸಬೇಕೆಂದು ಹೇಳಬಹುದು.[9] ಆಧುನಿಕ ವಿಚಾರದಲ್ಲಿ ಸಂಶಯ ವಾದ ತಲೆಹಾಕಿದೆ. ತನ್ನ ಸಿದ್ಧಾಂತಗಳನ್ನೇ ಅದು ಶಂಕಿಸುವುದಲ್ಲದೆ ನೂತನ ಅನುಮಾನಗಳನ್ನು ಸ್ವೇಚ್ಛೆಯಿಂದ ಅದು ಉಪಯೋಗಿಸುತ್ತಿದೆ.[10] ಈ ಬಗೆಯ ನೀತಿಯುಂಟಾದುದು ಸ್ವಾಭಾವಿಕವೇ. ತಿಳಿದ ವಿಷಯಗಳ ಪ್ರಪಂಚ ಹೆಚ್ಚಿದಂತೆ ತಿಳಿಯದ ಜಗತ್ತಿನೊಡನೆ ಅದರ ಸಂಪರ್ಕವೂ ಹೆಚ್ಚುತ್ತದೆ. ಹೀಗಾಗಿ ನಮ್ಮ ಅಜ್ಞಾನ ಪ್ರಕಾಶಕ್ಕೆ ಬರುತ್ತದೆ.[11] ಫ್ರಾಯಿಡ್ ಮೊದಲಾದ ಮನೋವಿಶ್ಲೇಷಣಜ್ಞರ ಬರಹಗಳಿಂದ ಜನರಲ್ಲಿ ಅಹೇತುಕವಾದ ಮೂಡುತ್ತಿವೆ. ಇದು ಎಲ್ಲ ಬೌದ್ಧಿಕ ರಂಗಗಳಲ್ಲೂ ವ್ಯಾಪಿಸಿವೆ. ರಾಜಕಾರಣ ಮತ್ತು ಸಾಹಿತ್ಯದಲ್ಲೂ ಇದರ ಸೋಂಕು ಹೇರಳವಾಗಿದೆ.[12]

---

7. Not less interesting than the implications of the sciences themselves is their effect upon contemporary thought. This, as may be expected, is as confused as the intellectual background from which it springs. There is a certain vague consciousness of the fact that materialism is losing ground, and that the closed circle of the mechanist universe of the 19th century has been broken; but there is no clear conception of what has come to take its place.

   -- ibid p. 26.

8. The imaginative concept in of reality no longer being united by likeness to the things we can see or touch, there is room for wider views. Value for example, may be real, and so may be the object of the ethical and the religious consciousness........... and the 19th century gulf between science and religion is in a fair way to being bridged.

   -- ibid p. 20.

9. The only conclusion we are justified in drawing is the negative one that the reasons which physical science was formally thought to provide for supposing that religion was necessarily false no longer obtain, and the way is therefore open for reconsideration of the religious interpretation of the universe on merits.

   -- ibid p. 20.

10. In the second place, modern thought is characterised by a scepticism as to its conclusions and a freedom in its use of hypotheses.

    -- ibid p. 29.

11. The more we enlarge the sphere of the known, the more, it is obvious, we enlarge its area of contact with the unknown, and in so doing, we realise our ignorance.

    -- ibid p. 29.

12. The resultant irrationalism, if I may so term it, pervades, every department of modern intellectual activity notably politics and literature.

    -- ibid p. 30.

+ + +

3. ನೂತನ ರಾಜಕೀಯ–ಸಾಮಾಜಿಕ ತತ್ತ್ವಗಳು

ವಿಜ್ಞಾನವು ದೃಷ್ಟ ಮತ್ತು ಅದೃಷ್ಟ ಪ್ರಪಂಚಗಳೆರಡರಲ್ಲೂ ತನ್ನ ಕೈವಾಡವನ್ನು ತೋರಿಸಿತು. ಇದರಿಂದ ಹಿಂದಿನ ಯುಗದ ಕೊನೆಯಾಗಿ ನೂತನ ಯುಗದ ನಿರ್ಮಾಣವಾಯಿತು. ಅದೃಷ್ಟಪ್ರಪಂಚದ ವಿಷಯದಲ್ಲಿದ್ದ ಹಳೆಯ ಭಾವನೆಗಳು ಮರೆಯಾಗಿ, ದೇವರ ಕಲ್ಪನೆ, ಅವನ ಅನಂತ ಶಕ್ತಿ, ಜಗತ್ತಿನ ನಿರ್ಮಾಣಕ್ಕೆ ಅವನ ಕಾರಣತ್ವ,, ಜೀವರುಗಳಲ್ಲಿ ಅವನ ಅನಂತ ದಯೆ ಇವೆಲ್ಲ ಈಗ ಕಟ್ಟುಕತೆಗಳೆನಿಸಿದವು. ಮನುಷ್ಯನು ದೇವರ ನಿಯಮಕ್ಕೆ ಬದ್ಧ. ಅವನಿಗೆ ಪುಣ್ಯಪಾಪಗಳ ಲೇಪವೆಂಬೀ ಭಾವನೆಗಳು ಬಾಲಿಶವಾಗಿವೆ. ಗುರುಹಿರಿಯರಲ್ಲಿ ಭಕ್ತಿಯೂ ಈಗ ಹಿಂದಿನಂತೆ ತೀವ್ರವಾಗಿಲ್ಲ. ಹೀಗಾಗಿ ಮನುಷ್ಯ ಈಗ "ಸ್ವತಂತ್ರ"ನಾಗಿದ್ದಾನೆ. ಅವನು ಇರುವ ಜಗತ್ತು ಸಂಪೂರ್ಣ ಅವನ ಅಧೀನ. ಇದರಲ್ಲಿ ಪ್ರಗತಿ ಸಾಧಿಸಲು ಅವನು ಸಂಪೂರ್ಣ ಶಕ್ತ. ಇದಕ್ಕೆ ದೈವದ ಕೈವಾಡ ಬೇಕಿಲ್ಲ. ಇದರಲ್ಲಿ ಸೋಲುಂಟಾದರೆ ಮನುಷ್ಯನ ಪ್ರಯತ್ನದಲ್ಲಿ ಕುಂದಿದೆಯೆಂದರ್ಥ. ಈಗಾಗಲೇ ಮನುಷ್ಯ ತನ್ನ ಬುದ್ಧಿಶಕ್ತಿಯಿಂದ ಅನೇಕ ಅದ್ಭುತ ಕಾರ್ಯಗಳನ್ನು ಸಾಧಿಸಿದ್ದಾನೆ. ಜಗತ್ತಿನಲ್ಲಿ ಸುಖಸಾಮಗ್ರಿಗಳನ್ನು ಸೃಜಿಸಿದ್ದಾನೆ. ಆಹಾರ ವಸನಗಳ ಉತ್ಪಾದನೆಯನ್ನು ಹೆಚ್ಚುಮಾಡಿದ್ದಾನೆ. ವಿಚಿತ್ರ ವಾಹನಾದಿಗಳನ್ನು ಬಳಕೆಯಲ್ಲಿ ತಂದಿದ್ದಾನೆ. ಕಷ್ಟಗಳೆಲ್ಲ ಮಾಯವಾಗುವುದಕ್ಕೆ ತಕ್ಕ ಸಾಧನೆಗಳನ್ನು ಮಾಡಿದ್ದಾನೆ.

ಈ ಬಗೆಯ ನೂತನ ಸೃಷ್ಟಿಯಿಂದ ಹೊಸ ನೀತಿ ನಿಯಮಗಳೂ ಉದಯಿಸಿವೆ. ಹಿಂದಿನಂತೆ ಜಾತಿ ಮತಗಳ ಕಟ್ಟು ಕಟ್ಟಳೆಗಳಿಲ್ಲ. ಈಗ ಒಬ್ಬ ಮನುಷ್ಯ ಇನ್ನೊಬ್ಬನ ಮೇಲೆ ಯಾವ ರೀತಿಯಿಂದಲೂ ಅಧಿಕಾರ ಮಾಡುವಂತಿಲ್ಲ. ರಾಜ–ಭೃತ್ಯ ನ್ಯಾಯವೂ ಇಲ್ಲದಂತಾಗಿ ಪ್ರಜಾಪ್ರಭುತ್ವವೆಂಬ ನೂತನ ತತ್ತ್ವವೇ ಉದಯಿಸಿದೆ. ಜನರೆಲ್ಲ ಇಂದು ಸ್ವತಂತ್ರರಷ್ಟೇ ಅಲ್ಲ; "ಸ್ವಪ್ರಭು"ಗಳೂ ಆಗಿದ್ದಾರೆ. ಇದರಲ್ಲಿ ವಿದ್ಯಾವಂತ ಅವಿದ್ಯಾವಂತರೆಂಬ ಭೇದವಿಲ್ಲ. ಈ ಪ್ರಜಾಪ್ರಭುತ್ವಕ್ಕಿಂತಲೂ ಮಿಗಿಲಾದ ಸಮತಾವಾದವು ಈಗ ಆರಂಭವಾಗಿದೆ. ಈ ತತ್ತ್ವದಿಂದಂತೂ ಸರ್ವರೂ ಎಲ್ಲ ವಿಧದಿಂದಲೂ ಸಮರು. ಬೌದ್ಧಿಕವಾಗಿಯಾಗಲೀ, ಆರ್ಥಿಕವಾಗಿಯಾಗಲೀ ಯಾರೂ ಯಾರಿಗಿಂತಲೂ ಶ್ರೇಷ್ಠತೆಯನ್ನು ರೂಢಿಸಲು ಸಾಧ್ಯವಿಲ್ಲ. ಅಷ್ಟೇ ಅಲ್ಲ; ಈ ತತ್ತ್ವ ಎಲ್ಲ ರಂಗಗಳಲ್ಲೂ ತನ್ನ ವರ್ಚಸ್ಸನ್ನೂ ಬೀರಿದೆ. ಇದರಿಂದ ನೂರಾರು ಶತಮಾನಗಳಿಂದ ಬೆಳೆದು ಬಂದ ಧರ್ಮ, ನೀತಿ, ಲಲಿತಕಲೆ, ಶಿಲ್ಪ, ಸಂಗೀತ, ಸಾಹಿತ್ಯ ಇವೆಲ್ಲ "ಇರುವವನು" "ಇಲ್ಲದಿರುವವನ" ಮೇಲೆ ನಡೆಸಿದ ದಬ್ಬಾಳಿಕೆಯೆಂಬ ಅಭಿಪ್ರಾಯ ಪ್ರಚುರವಾಗಿದೆ. ಈ ಎಲ್ಲ ರಂಗಗಳಲ್ಲಿಯೂ ಇರುವವರು ಇಲ್ಲದಿರುವವರ ದುಡಿಮೆಯಿಂದ ಸೌಕರ್ಯಗಳನ್ನು ಕಲ್ಪಿಸಿ ತಮ್ಮ ಬುದ್ಧಿವಿಕಾಸಕ್ಕೆ ನಿರ್ಮಿಸಿಕೊಂಡ ಲೀಲಾವಿಲಾಸಗಳು. ಇದು ಇಲ್ಲದವನಿಗೆ

ಎಂದಿಗೂ ಗಮ್ಯವಲ್ಲ. ಈ ಮಹತ್ತರವಾದ ಕ್ರೂರ ನರಮೇಧವನ್ನು ಕಂಡುಕೊಂಡು ಅದನ್ನು ತೊಡೆದುಹಾಕಿ ಲೋಕಕಲ್ಯಾಣ ಮಾಡಲು ಸರ್ವಸಮತಾ ತತ್ತ್ವವಿಂದು ಪಣತೊಟ್ಟು ಹೊರಟಿದೆ. ಇದೇ ನೂತನ ಸಂಸ್ಕೃತಿಯ ಜೀವಾಳ ಮತ್ತು ವಿಜ್ಞಾನ ನೀಡಿದ ಔದ್ಯೋಗೀಕರಣದ ಮತ್ತು ಸಂಘ ಜೀವನದ ಪರಿಣಾಮ.

ಹೀಗೆ ನೂತನ ತತ್ತ್ವಗಳು ಜನಜೀವನದಮೇಲೆ ತಮ್ಮ ಪ್ರಭಾವ ಬೀರಿ ಜನರ ದೃಷ್ಟಿಕೋಣವನ್ನೇ ಬದಲಿಸಿಬಿಟ್ಟಿದೆ. ಈ ತತ್ತ್ವಗಳು ಸತ್ಯವಲ್ಲವೆಂಬುದು ಸ್ಥಿರಪಟ್ಟಲ್ಲಿ ಧರ್ಮದ ಅಭಿಪ್ರಾಯವು ಸ್ಥಿರವಾಗುವುದು. ವಿಜ್ಞಾನದ ಹಿಂದಿನ ನಿರ್ಣಯಗಳು ದೋಷಗ್ರಸ್ತವೆಂಬುದರ ಅರಿವಾದಂತೆಯೇ ಈ ತತ್ತ್ವಗಳ ವಿಷಯದಲ್ಲೂ ಅಭಿಪ್ರಾಯ ಬದಲಾಗಲು ಹೆಚ್ಚಿನ ಕಾಲಾವಕಾಶ ಬೇಕು. ಈ ನೂತನ ತತ್ತ್ವಗಳಲ್ಲಿ ಕೆಲವು ಪ್ರಬಲವಾದ ದೋಷಗಳಿರುವುವು. ಈ ನೂತನ ವಾದವು ಇನ್ನೂ ಪ್ರಯೋಗಾವಸ್ಥೆಯಲ್ಲಿದೆ. ಇದರ ಪ್ರಯೋಗದಿಂದ ಈಗೇನೋ ಅನುಕೂಲಗಳು ಏರ್ಪಡುತ್ತಿವೆ. ಜನಶಕ್ತಿ ಹೆಚ್ಚಿ ಸಾಮೂಹಿಕ ತೇಜಸ್ಸಿನಿಂದ ಆಗಬೇಕಾದ ಕಾರ್ಯಗಳು ವಿಶೇಷವಾಗಿ ನೆರವೇರುತ್ತಿದೆ. ಆದರೆ ಇದು ಚಿರಂತನವಾದ ಸಮಾಜದ ಭದ್ರತೆಗೆ ನೆರವಾಗುವುದೆಂದು ಹೇಳಲಾಗುವುದಿಲ್ಲ.

4. ಈ ತತ್ವಗಳ ವಿವೇಚನೆ.

ಜಗತ್ತಿನಲ್ಲಿ ರೂಢಮೂಲವಾಗಿರುವ "ಭೇದ"ವನ್ನು ನಿರಾಕರಿಸಿರುವುದೇ ಈ ವಾದದಲ್ಲಿರುವ ಮುಖ್ಯ ದೋಷ. ಎಲ್ಲರ ಆಸೆ ಆಕಾಂಕ್ಷೆಗಳೂ, ಗೊತ್ತು ಗುರಿಗಳೂ ಒಂದೇ ಎಂದು ನಿರ್ಧರ ಮಾಡಿರುವುದಕ್ಕಿಂತ ಕುರುಡುತನ ಬೇರೆ ಇಲ್ಲ. ಅಶನ-ವಸನಗಳ ಪೂರೈಕೆಯಷ್ಟೇ ಮಾನವ ಜೀವಿತದ ಧ್ಯೇಯವೆಂಬುದಕ್ಕಿಂತ ಹುಚ್ಚುತನ ಬೇರೆಯಿಲ್ಲ. ಇದು ಅದೃಷ್ಟ ಅತೀಂದ್ರಿಯ ಅನುಭವಗಳನ್ನು ತರ್ಕಬದ್ಧವಾಗಿ ಅಲ್ಲಗಳೆದರೂ ಮನುಷ್ಯನ ಅಂತರಂಗವನ್ನು ಬದಲಿಸಲಾಗುವುದಿಲ್ಲ. ಅನ್ನಗತಪ್ರಾಣನಾಗಿರುವ ಮನುಷ್ಯನಿಗೆ ಅನ್ನ ಸಾಧನವಾದೀತೇ ಹೊರತು, ಇದೇ ಧ್ಯೇಯವಾಗಲಾರದು. ಬದುಕಿಗೆ ಹಾದಿ ಹಾಕಿಕೊಟ್ಟು ಅನ್ನ ಕೃತಾರ್ಥವಾಗುತ್ತದೆ. ಬದುಕಿನ ಸಮಸ್ಯೆ ಒಂದು ರೀತಿ ಇತ್ಯರ್ಥವಾದ ಮರುಕ್ಷಣದಲ್ಲಿಯೇ, ಪ್ರತಿಯೊಬ್ಬನೂ ಅವನವನ ಸ್ವಭಾವ, ಸಂಸ್ಕಾರ, ಸನ್ನಿವೇಶಗಳಿಗನುಸಾರವಾಗಿ ಒಳ್ಳೆಯದನ್ನೋ ಕೆಟ್ಟದನ್ನೋ ಆಲೋಚನೆ ಮಾಡುತ್ತಾನೆ. "ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್'' ಎಂಬುದು ಸ್ವಭಾವ ಕಥನವೇ ಹೊರತು ಉಪದೇಶವಲ್ಲ. ಕೆಲವರು ಭಾವನಾಪರವಶರಾಗಿ ಸುಂದರವಾದೊಂದು ಕಲ್ಪನಾವಿಲಾಸದಲ್ಲಿ ತೊಡಗಿರಬಹುದು. ಇನ್ನು ಕೆಲವರು ಗಿರಿ ನದೀ ಕಂದರಾದಿ ಪ್ರಕೃತಿದತ್ತ ಸೌಲಭ್ಯಗಳನ್ನು ಅಳವಡಿಸಿ ಬೃಹದಾಕಾರದ ಜಲಾಶಯಗಳ ನಿರ್ಮಾಣದ ಸಾಹಸದ ಯೋಜನೆಯಲ್ಲಿ ಮೈಮರೆತಿರಬಹುದು. ಮತ್ತೆ ಕೆಲವರು ತಮ್ಮ ಅತುಳ ಭುಜಬಲದ ಕಡೆಗೊಮ್ಮೆ ದೃಷ್ಟಿ ಚೆಲ್ಲಿ ಜಗತ್ತನ್ನೇ ಜಯಿಸುವೆವೆಂದು ಕೊಳ್ಳುತ್ತಿರಬಹುದು.

ಇನ್ನು ಕೆಲವರು ಸಹಜವಾದ ಸ್ವಭಾವಧರ್ಮಕ್ಕನುಸರಿಸಿ ಕಲಹೋತ್ಪಾದನೆಯ ಕಡೆಗೋ, ಚೌರ್ಯಾದಿಗಳ ಕಡೆಗೋ ಲಕ್ಷ್ಯಕೊಡಬಹುದು. ಆಲೋಚನಾ ಪರರಾದ ಮತ್ತೂ ಕೆಲವರು ಜಗತ್ತಿನ ಇತಿ ಮಿತಿಯ ಬಗ್ಗೆ ಯೋಚಿಸುತ್ತಾ ಸರ್ವಶಕ್ತನಾದ ಭಗವಂತನಲ್ಲಿ ಮನಃಪ್ರಣಿಧಾನ ಮಾಡಬಹುದು. ಪ್ರಾಣಧಾರಕ ಶಕ್ತಿಯನ್ನು ಕೊಡುವುದು ಅನ್ನವಾದರೂ ಅದರಿಂದ ಆಗುವ ಫಲಗಳು ಭಿನ್ನ. ಆ ಭಿನ್ನ ಮನೋಧರ್ಮಗಳು ಔಪಾಧಿಕ, ಅನುಷಂಗಿಕ ಮತ್ತು ನಿರ್ವಾಯ ಎನ್ನುವುದು ಗಾಡಿಯ ಹಿಂದೆ ಕುದುರೆ ನಿಲ್ಲಿಸಿದಂತೆ. ಈ ನೂತನ ವಾದಸರಣಿಯಲ್ಲಿ ಈ ಎಲ್ಲ ಭಿನ್ನಮನೋಧರ್ಮಗಳ ಕಾರ್ಯವು ಮನುಷ್ಯನ 'ಕೇಂದ್ರ ಪ್ರಶ್ನೆ'' ಯಾದ ಅನ್ನೋತ್ಪಾದನೆಗೆ ಮೀಸಲಾಗಿರಿಸಬೇಕೆಂಬ ಹುಚ್ಚು ಹಟತೋರುತ್ತದೆ. ಸೋಪಾಧಿಕಹೇತುವುಳ್ಳ ಅನುಮಾನದಷ್ಟೇ ಇದೂ ದೋಷದುಷ್ಟವಾದುದು.

ಇನ್ನು ಎರಡನೆಯದಾಗಿ ಸರ್ವಸಮತಾ ತತ್ತ್ವವು ಜಗತ್ತಿನಲ್ಲಿ ದೋಷ ಅಥವಾ ತಪ್ಪೆಂಬುದೇ ಇಲ್ಲವೆಂಬ ಧೋರಣೆಯನ್ನು ತಳೆದಿದೆ. ಕ್ರೌರ್ಯ ಚೌರ್ಯ, ವ್ಯಭಿಚಾರ, ಅಮಿತ ಆಸೆ, ಮೋಸ, ದ್ರೋಹ ಇತ್ಯಾದಿ ತಪ್ಪುಗಳು ಔಪಾಧಿಕವೆಂದು ಇದು ಮೂಲೆಗೊತ್ತಿಬಿಡುವುದು. ಮನುಷ್ಯ ನಿತ್ಯಶುದ್ಧ ಸ್ವಭಾವದವನು. ಅವನಿಗೆ ಸಮಯ ಸನ್ನಿವೇಶಗಳ ಸೆಳೆತದಿಂದ, ಇಲ್ಲವೆಂಬ ಕೊರಗಿನಿಂದ ಇನೊಬ್ಬರನ್ನು ಸುಲಿಗೆ ಮಾಡಬೇಕೆಂಬ ದುರ್ಬುದ್ಧಿ, ದ್ರೋಹದ ಕಡೆಗೆ ಮನಸ್ಸು ಹೋಗುತ್ತದೆ. ಯುಗ–ಯುಗಾಂತರಗಳಿಂದ ಇಂತಹ ಅತೃಪ್ತಿ ಜನಾಂಗಗಳಲ್ಲಿ ರೂಢಮೂಲವಾದ್ದರಿಂದ ಜಗತ್ತಿನಲ್ಲಿರುವ ದೋಷಗಳು ಅನಿರ್ವಾಯವೆಂಬ ಭಾವನೆ ಬೆಳೆದು ಬಿಟ್ಟಿದೆ. ಅತೃಪ್ತಿಯೇ ಮೂಡದಂತಹ ವ್ಯವಸ್ಥೆಯು ಮಾನವ ಸಮಾಜದಲ್ಲಿ ಕಲ್ಪಿತವಾಗಿದ್ದಲ್ಲಿ, ಅದು ಸಂಸ್ಕಾರರೂಪವಾಗಿ ಬಲಗೊಂಡು ಇಷ್ಟೊಂದು ದೋಷಗಳಿಗೆ ಅವಕಾಶ ಕೊಡುತ್ತಿರಲಿಲ್ಲ. ಈಗಲೂ ಈ ಕೊರಗು ಜನರಲ್ಲಿ ನಾಮಾವಶೇಷವಾಗುವಂತೆ ಮಾಡಿದಲ್ಲಿ ಕಾರಣವಿಲ್ಲದೆ ಕಾರ್ಯಹುಟ್ಟುವುದು ಎಷ್ಟು ಅಸ್ವಾಭಾವಿಕವೋ, ಹಾಗೆಯೇ ದ್ವೇಷಾಸೂಯೆಗಳಾಗಲೀ, ಹಿಂಸೆ ಅತ್ಯಾಚಾರಗಳಾಗಲೀ ಜಗತ್ತಿನಲ್ಲಿ ಹೇಳಹೆಸಹಿಲ್ಲದಂತೆ ಕರಗಿಹೋಗುತ್ತದೆ.

ಇದೆಲ್ಲ ವಾದದ ಹಿಂಬದಿಯಲ್ಲಿ ಯಾವುದೋ ಅಭಾವವೇ ಕೆಡುಕಿಗೆ ಮೂಲವೆಂಬ ಅಭಿಪ್ರಾಯ ಅಡಗಿದೆ. ಈ ಅಭಾವ ಬಯಲಾದರೆ ಕಲ್ಯಾಣವು ಏರ್ಪಡುವುದು. ಮಾನಸಿಕ ಸಮಾಧಾನ ಇಲ್ಲದಲ್ಲಿ ಭಯ ಮತ್ತು ಅಸೂಯೆ ಕಾಣುವುದರಿಂದ ಅದು ದೋಷವೆನಿಸುವುದು. ಪದಾರ್ಥಗಳ ಅಭಾವದಿಂದ ಬಡತನ ಹೊರಸೂಸುವುದರಿಂದ ಅದೂ ದೋಷವೇ. ಯುದ್ಧವೂ 'ಕೆಡುಕೇ', ದುರಭಿಪ್ರಾಯ, ಹಿಂಸ್ರ ಮನೋಭಾವನೆ, ಭಯಲಾಲಸೆಯ ಕಾರಣದಿಂದ ಇದು ಕೆಡುಕೆಂದಲ್ಲ. ಇದು ದೇಶದ ಶಕ್ತಿ ಸಾಮರ್ಥ್ಯವನ್ನು ದುರುಪಯೋಗಪಡಿಸಿ ಹಾಳುಮಾಡುವುದು. ಇದು ಮೂರ್ಖತನ, ಹುಡುಗಾಟ

ಮತ್ತು ಅನ್ಯಾಯ ಹಾಗೂ ವಿವೇಕಶೂನ್ಯ ಕೃತ್ಯ. ಆದಾದರಿಂದಲೇ ಇದು ಕೇಡು. [13]

ಆದ್ದರಿಂದ ವ್ಯಕ್ತಿಯ ದೋಷಗಳು ಸನ್ನಿವೇಶದಿಂದ ಉದ್ಭವಿಸಿದವು. ಜಗತ್ತಿನಲ್ಲಿ ಇದುವರೆಗೆ ನಡೆದುಬಂದ ಗುಣದೋಷಗಳ ವಿವೇಕ ಅಸ್ವಾಭಾವಿಕ. ಎಲ್ಲರಿಗೂ ಮಾನವತೆಯ ರಕ್ಷಣೆಯಾಗಲು ಸಾಕಷ್ಟು ಅನ್ನ, ವಸ್ತ್ರ, ವಸತಿ ಮತ್ತು ವಿದ್ಯೆ ಕೊಟ್ಟರೆ ಭೂಮಿಯೇ ಸ್ವರ್ಗವಾಗುವುದು. ಎಲ್ಲ ಧರ್ಮ, ನೀತಿ, ಕಲೆ, ಸಂಸ್ಕೃತಿ ಇದಕ್ಕಾಗಿ ಹೆಣಗಬೇಕು. ಇದನ್ನು ಮಿಕ್ಕಿ ಅತೀಂದ್ರಿಯ, ಅಲೌಕಿಕ, ಅದೃಷ್ಟವಾವುದೂ ಇಲ್ಲ. ಇದಕ್ಕೆ ಪ್ರತಿಯಾಗಿ ಯಾವುದೂ ಬೆಳೆಯಬಾರದು. ಜಗತ್ತು ಇದುವರೆಗೂ ತಪ್ಪು ಹೆಜ್ಜೆ ಇಡುತ್ತ ಬಂದಿತು. ಇದು ಸರ್ವತ್ರ ಹರಡಿದಲ್ಲಿ ಇನ್ನು ಮುಂದೆ ಭಯವೇ ಇಲ್ಲ. ಯಾವ ತಿಕ್ಕಾಟ, ತಾಕಲಾಟಗಳೂ ಇರುವುದಿಲ್ಲ. ಇದನ್ನು ಬೆಳೆಸಲು ಈಗ ಸಲ್ಲದ ಧರ್ಮ, ನೀತಿಗಳನ್ನು ವಿಧ್ವಂಸ ಮಾಡಬೇಕು. **ಸುಖಪೂರ್ಣ ಸಮಾಜ ರಚನೆಗೆ "ಪರಲೋಕ"** ವಿಚಾರ ಅಸಂಗತ. [14]

ಜೀವನದಲ್ಲಿ ಕೆಡುಕನ್ನು ತೊಡೆದು ಹಾಕಲು ಜನರಲ್ಲಿ ಅನಾಸಕ್ತಿ ಸಿದ್ಧಾಂತವನ್ನೂ ಯಂತ್ರ ಮತ್ತು ಪ್ರಜಾಪ್ರಭುತ್ವ ತತ್ತ್ವವನ್ನೂ ಹರಡಬೇಕು. [15]

ಇದು ಹೊಸ ಸಿದ್ಧಾಂತಸಾರ, ಮೇಲೆ ನೋಡಲು ಇದು ಸಮಂಜಸವಾಗಿಯೇ ತೋರುವುದು. ಆದರೆ ಜಗತ್ತಿನಲ್ಲಿಯ ದೋಷವು, ತಮೋಗುಣವು ವಿಷಮತೆಯಿಂದ ಬಂದುದಲ್ಲ. ಅಭಾವವೇ ದೋಷಕ್ಕೆ ಕಾರಣವೆನ್ನುವುದು ಸರಿಯಾದ ತರ್ಕವಲ್ಲ. ಲೋಕರೂಢಿಯಲ್ಲಿ ಸಮಂಜಸವೂ ಅಲ್ಲ. ಜಗತ್ತಿನಲ್ಲಿ ಅಭಾವಿದ್ದಡೆಯೇ ಅಶಾಂತಿ, ದೊಷಗಳು ಕಾಣುವುದು? ಧನಿಕ ಎಂದೂ ಕ್ರೂರಿಯಲ್ಲವೇ? ದಲಿತನಲ್ಲದವ ಎಂದಿಗೂ ಹಿಂಸ್ರಕನಲ್ಲವೇ? [16]

---

13 (Common to both these views) was the assumption that evil consisted in the lack of something whose presence would be good. Thus fear and envy are evils because they indicate a lack of psychological adjustment, poverty because it is the result of evil intentions and desires, the intention to hurt and to destroy, the desire to conquer and to humiliate, but because it wastes material and effort, because it misuses energy, because it is stupid, childish and irrational. --God & Evil p. 21.

14 ....and that to the production of such a (perfect) society considerations involving otherwardly factors were irrelevent. --ibid P. 22

15 (man) would presently abolish the evil inherent in life by popularizing anaesthetics and by extending the blessings of the machine and the ballot. -Faith for living- Lewis Mumford.

16 Was no rich man ever cruel and no unrepressed man ever tyrannical? -"God & Evil'. p. 24

ಮಹಾಭಾರತದ ಚಿತ್ರವನ್ನು ಚಿತ್ರಿಸಿದ ಗ್ರಂಥಕರ್ತನಿಗೆ ದುರ್ಯೋಧನನ ಪಾತ್ರ ತೋರಿದುದು ಅತ್ಯಂತ ಸ್ವಾಭಾವಿಕವಾಗಿದೆ. ದುರ್ಯೋಧನನಿಗೆ ಯಾವುದರ ಅಭಾವದಿಂದ ದುರ್ಬುದ್ಧಿ ಹುಟ್ಟಿತು? ದ್ವೇಷ ಮನೆಮಾಡಿತು? ಔದ್ಯೋಗಿಕ ಕ್ರಾಂತಿ ಏರ್ಪಟ್ಟು ಬಡವ –ಬಲ್ಲಿದ ಭೇದ ಬೃಹದಾಕಾರವನ್ನು ತಾಳಿ ಬಡವರ ದುಃಖ ಒತ್ತರಿಸಿ ಬಂದ ಹಿಂದಿನ ಶತಮಾನದ ಯುರೋಪಿನಲ್ಲಿ ಈಬಗೆಯ ವಾದ ಸತ್ಯವೆಂಬ ಭಾವ ಉದಯಿಸಿತು. ಇದು ಸತ್ಯದ ಒಂದು ಮೊಗ ಮಾತ್ರ. ಇದರಿಂದ ಕತೆ ಪೂರ್ತಿ ಮುಗಿದಂತಲ್ಲ.

ಬಿಕ್ಕಟ್ಟಿನ ನೀತಿಯಿಂದ ರಷ್ಯ ಉದಯಿಸುವ ಮುನ್ನ ಅಧಿಕಾರಾರೂಢ ಪಕ್ಷಕ್ಕೂ, ಟ್ರಾಟ್ಸ್ಕಿ ಮೊದಲಾದ ಕೆಲವು ವ್ಯಕ್ತಿಗಳಿಗೂ ನಡೆದ ಘೋರ ತುಮುಲವೇ ಮಾನವಹೃದಯದ ನಂಜನ್ನು ಹೊರಸೂಸುವುದು. ವೈಯಕ್ತಿಕ ಸ್ವಾತಂತ್ರ್ಯವನ್ನು ಇಲ್ಲವಾಗಿಸಿ, ರಾಷ್ಟ್ರದ ಅಭ್ಯುದಯದ ಸೋಗಿನಲ್ಲಿ ಬಿಗುಮಾನದ ಧೋರಣೆ ತೋರುವ ಈ ತತ್ತ್ವಪಾಲನೆ ದೀರ್ಘ ಜೀವಿಯಲ್ಲ. ಕೆಲಕಾಲವಾದ ಮೇಲೆ ಇದು ಕೊನೆಗಾಣಬೇಕು. ಮನುಷ್ಯನ ತಮೋಗುಣ ಸನ್ನಿವೇಶಜನ್ಯವಲ್ಲ. ಇದು ಅನಾದಿಯಾಗಿ ಇರತಕ್ಕದು.[17] ಪ್ರತಿಮಾನವನೂ ದೋಷಗ್ರಸ್ತನೇ. ಮಾನವ ಕಲ್ಯಾಣೇಚ್ಛುಗಳು ಇದನ್ನು ಗಣನೆಗೆ ತರಲೇಬೇಕು. ಜಗತ್ತಿನಲ್ಲಿ ಅನ್ಯಾಯ, ಅಧರ್ಮ; ದಬ್ಬಾಳಿಕೆ ಇವು ಬಲಿಯದಂತೆ ನೋಡಿಕೊಳ್ಳಬೇಕು. ಜನರಲ್ಲಿ ಪರಸ್ಪರ ಸೌಹಾರ್ದ ವಿವೇಕ ಬೆಳೆಯುವಂತೆ ಶ್ರಮಿಸಬೇಕು. ಇದು ಯಾವುದೇಬಗೆಯ ಕಟ್ಟು ಕಟ್ಟಳೆಗಳಿಂದಾಗಲೀ, ಸಿದ್ಧಾಂತದ ಪ್ರಯೋಗದಿಂದಾಗಲೀ ಸಾಧ್ಯವಾಗಲಾರದು.[18] ಮೇಲೆ ವಿಚಾರಮಾಡಿದ ನೂತನ ತತ್ತ್ವಗಳಿಂದ ರೂಪಗೊಂಡ ಈ ನೂತನ ಸಂಸ್ಕೃತಿ ಇಷ್ಟು ವಿಚಿತ್ರವಾಗಿರಲು ಅದು ನಮಗೆ ಹೊಂದದಿರುವುದೇ ಕಾರಣ. ನಮ್ಮ ಅಂದರೆ ಚೇತನರುಗಳ ನಿಜಸ್ವಭಾವವನ್ನು ಅರೀಯದೇ ಬೆಳೆದುದೇ ಇದರ ದೋಷ. ವಿಜ್ಞಾನದ ಸ್ವೇಚ್ಛೆಯ ಅವಿಷ್ಕಾರಣಗಳಿಂದಲೂ ಮನುಷ್ಯನ ಲಾಲಸೆ, ಭ್ರಮೆ, ಅವರ ಬಾಯ್ಮಾತಿನ ತತ್ತ್ವಗಳು. ಆಕಾಂಕ್ಷೆಗಳು, ಇವುಗಳಿಂದ ಉದಯಿಸಿದ ಸಂಸ್ಕೃತಿಯಿದು. ನಮ್ಮ ಪ್ರಯತ್ನವೇ ಇದಕ್ಕೆ ಕಾರಣವಾದರೂ ಇದು ನಮ್ಮ ಇತಿ.

---

17 Evil is not merely a by-product of unfavourable circumstances; it is too wide-spread and too deep-seated to admit of any such explanation; so widespread & so deepseated that one can only conclude that what the religions have always taught is true and that evil is endemic in the heart of Man --God & Evil. P. 24

18 The systems of Government, entirely constructed in the minds of doctrinairs are valueless. The principles of French Revolution, the visions of Marx and Lenin apply only to abstract men. It must be clearly realized that laws of human relations are still unknown. Sociology and Economics are conjectural sciences- that is pseudosciences.

--Man the Unknown p. 37.

ಮಿತಿಗೆ ಅಳವಡಿಸದು.[19] ಇದಕ್ಕೆ ನಮ್ಮ ಬಗ್ಗೆ ನಾವು ಹೆಚ್ಚಾಗಿ ತಿಳಿದುಕೊಳ್ಳುವುದೇ ಪರಿಹಾರವು.[20] ಇಂತಹ ಚೇತನಜ್ಞಾನ ಅಥವಾ ಆತ್ಮಜ್ಞಾನವು ವಿಜ್ಞಾನದಿಂದ ಬೆಳೆಯಲಾರದು. ಕಲೆ, ಪ್ರಕೃತಿ ಪರಿಶೀಲನೆಯಿಂದ ಬೆಳೆಯಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಇದು ಧರ್ಮದಿಂದ ಬೆಳೆಯಬಲ್ಲದು.[21]

5. ಧರ್ಮವು ಅಗತ್ಯ.

ಆದ್ದರಿಂದ ಧರ್ಮದಲ್ಲಿ ಏನೂ ಹುರುಳಿಲ್ಲವೆಂದು ಕಡೆಗಂಡು ಹೀಯಾಳಿಸಿದ್ದನ್ನು ಬಿಟ್ಟು ಈಗ ಅದನ್ನು ಮತ್ತೊಮ್ಮೆ ಚೆನ್ನಾಗಿ ವಿಚಾರಮಾಡಿ ತಿಳಿದುಕೊಳ್ಳಬೇಕು. ಧರ್ಮದ ಬಗಗೆ ಈಗಿನ ಜನಾಂಗದ ಅನಾಸಕ್ತಿಯೇ ಇಷ್ಟು ಅಶಾಂತಿಗೆ ಕಾರಣ. ಏಕೆಂದರೆ ಮನುಷ್ಯ ಸ್ವಾಭಾವಿಕವಾಗಿ ಆಧ್ಯಾತ್ಮಶರಣ. ಅವನಿಗೆ ನಂಬಲು ಆಚರಿಸಲು ಧರ್ಮಲೋಪವಾದ್ದರಿಂದ ಅವನೀಗ ದಿಕ್ಕು ಕಾಣದಾಗಿ ನಾನಾವಿಧ ರಾಜಕೀಯ ಮತ್ತು ಇತರ ಲೌಕಿಕ ಸಾಂತ್ವನೆಗಳಿಗೆ ಆತುಕೊಳ್ಳುತ್ತಾನೆ. ಅದು ಸರಿಯಲ್ಲವೆಂದು ಕಂಡುಬಂದಲ್ಲಿ ಕೂಡಲೇ ಇನ್ನೊಂದಕ್ಕೆ ಜೋತುಬೀಳುತ್ತಾನೆ. ಹೀಗಾಗಿ ಇಂದಿನ ಜಗತ್ತಿನಲ್ಲಿ ಎಲ್ಲ ಕಲಬೆರಿಕೆಯಾಗಿಹೋಗಿದೆ. ಸರಿಯಾದ ಅಡಿಪಾಯದ ಮೇಲೆ ಧರ್ಮದ ಪುನಃಪ್ರತಿಷ್ಠೆಯಾದಲ್ಲಿ ಇದು ಸರಿಹೋಗಿ ಶಾಂತಿ ಬೇರೂರುವುದು. ಅದರ ಹೊರತು ಬರಿಯ ಬುದ್ಧಿಯ ಬಲುಮೆಯಿಂದ ಯಾವುದೂ ಸಾಧಿತವಾಗುವುದಿಲ್ಲ. ಬುದ್ಧಿಗಿಂತ ಮನಃಪೂರ್ವಕವಾದ ನಂಬಿಕೆಯಿಂದ, ವಿಶ್ವಾಸದಿಂದ ಒಬ್ಬ ಇನ್ನೊಬ್ಬನನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲ. ಇಂತಹ ನಂಬಿಕೆಯೇ ಧರ್ಮಕ್ಕೆ ಮೂಲಾಧಾರ. ನಂಬಿಕೆ ಮತ್ತು ವಿಶ್ವಾಸ ಬೆಳೆದು, ಬಲಿತು, ಸರ್ವಶಕ್ತನಾದ ಭಗವಂತನಲ್ಲಿ ಹೋಗಿ ನಿಲ್ಲುವುದೇ ಜಗತ್ತಿನಲ್ಲಿ ಎಲ್ಲ ಧರ್ಮಗಳ ರಹಸ್ಯ. ಧರ್ಮಬಾಹಿರ ಜೀವನ ಪೂರ್ಣವಲ್ಲ. ಅದು ಬರಿದೆಂದೆನಿಸುವುದು. ದಿನಗಳುರುಳಿದಂತೆ ಅಜ್ಞೇಯವೆಂದುಕೊಂಡಿದ್ದನ್ನು ತಿಳಿದು ಕೊಳ್ಳಬೇಕೆಂಬ ಆಸೆ ಹೆಚ್ಚುವುದೇ ಹಿತವಾದುದು. ಮನುಷ್ಯನಿಗೆ ತನ್ನಲ್ಲಿಯ ದೋಷ, ಜಗತ್ತಿನಲ್ಲಿಯ ತಮೋಗಣದ ಬಗ್ಗೆ ಬಹಳ ಆಶ್ಚರ್ಯವಾಗುವುದು.

---

19 Modern civilization finds itself in a difficult position, because it does not suit us, It has been erected without any knowledge of our real nature. It was born from the whims of scientfic discoveries, from the appetites of men, their illusions, their theories and their desires. Although constructed by our efforts, it is not adjusted, to our size and shape. -ibid p. 34

20 The only possible remedy for this evil is a much more profound knowledge of our selves. --ibid. p. 38.

21 To this reality approach is not through science, but through art, through the appreciation of nature and above all through *religion*.
--Guide to Modern Thought. p. 133

ಇದನ್ನು ನಿವಾರಿಸಲು ಅವನು ಅಸಮರ್ಥನಾಗಿರುವನು. ತನ್ನ ಅಲ್ಪತೆಯ ಬಗ್ಗೆ ಅವನಿಗೆ ಅರಿವುಂಟಾದಾಗಲೇ ಭಗವಂತನ ಕಡೆಗೆ ಮನಸ್ಸು ಧಾವಿಸುವುದೆಂದು ಧರ್ಮಪುರುಷರು ಹೇಳುವರು. ತನ್ನ ಈ ಬಗೆಯ ಅಲೆದಾಟದಲ್ಲಿ ಯಶಸ್ಸು ಸಿಕ್ಕಬಹುದೆಂದು ಅವನಿಗೆ ಅನಿಸುವುದು. ಅದು ಬಿಟ್ಟು ಬರಿಯ ಬುದ್ಧಿಮತ್ತೆಯಿಂದ ಉನ್ಮತ್ತನಾದಲ್ಲಿ ಅವನ ಜ್ಞಾನವಾಗಲಿಕ್ಕಿಲ್ಲ.[22] ಅವನನ್ನು ಅನನ್ಯಶರಣರಾಗಿ, ದಾಸರಾಗಿ ಭಜಿಸಿದರೆ ಅವನು ಒಲಿಯಬಹುದು. "ನಾಯಮಾತ್ಮಾ ಪ್ರವಚನೇನ ಲಭ್ಯಃ ನ ಮೇಧಯಾ ನ ಬಹುನಾ ಶ್ರುತೇನ "[23]

ತತ್ವಶಾಸ್ತ್ರ ಮಿಕ್ಕೆಲ್ಲಶಾಸ್ತ್ರಗಳಿಗೆ ಮಿಗಿಲಾದರೆ, ದೇವತಾಶಾಸ್ತ್ರ ಇದಕ್ಕೂ ಮಿಗಿಲಾದುದು.[24] ಆದ್ದರಿಂದ ಮಾನವನ ಪ್ರಗತಿಯಾಗಬೇಕಾದರೆ, ಶಾಂತಿ ದೊರೆಯಬೇಕಾದರೆ, ವಿಜ್ಞಾನಗಳ ಮಹತ್ವವನ್ನು ನಿರಾಕರಿಸಿ, ರಾಜಕೀಯ ತತ್ತ್ವಗಳ ಮೋಹವನ್ನು ತೊಡೆದು, ನೂತನ ಸುಖಭ್ರಾಂತಿಯ ಉಪಕರಣಗಳನ್ನು ಕಡೆಗಂಡು, ಧರ್ಮದ ಕಡೆಗೆ ಮಾನವ ಲಕ್ಷ್ಯಕೊಡಬೇಕು. ಮನಸ್ಸನ್ನು ಆಕಡೆ ತಿರುಗಿಸಬೇಕು. ನಿತ್ಯ ಮತ್ತು ಲೌಕಿಕ ಜೀವನದಲ್ಲೂ ಇದರ ಸೋಂಕು ಹತ್ತಿಸಬೇಕು. ಮುಖ್ಯ ಧರ್ಮವೇ ಧ್ಯೇಯವಾಗಿರಬೇಕು. ಹಿಂದೆ ಧರ್ಮವೇ ಜನಜೀವನದ ಮುಖ್ಯ ಉಸಿರಾಗಿತ್ತು.

---

22 ಅಜ್ಞಾಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ।
ನ್ಯಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥ ಗೀತಾ.. ೪—೪೦

23 The life that lacks religion lacks, so I have come to feel fulness and roundness, and the desire to find that true which I have always believed to be false, to know something, something of that which I have thought to to be unknowable, grows as the years pass. One is dismayed by the evil at large in the world and in oneself, depressed and humiliated by the inadequecy of one's efforts to cope with it, humiliated, then, by the inadequecy of one's own self. It is from precisely such a feeling of humiliation that , religious writers have often urged, the search for and need of God, take their rise. What is more, the seeker who is inspired by such a mood may not be wholly without the hope of succeeding in his quest. For alienated by intellectual pride God they have assured us, draws nearer to those who approach him in humbleness of sipirit.
-- God & Evil p. 113.

24 Philosophy is the highest of human sciences, which know things by natural light of reason. But there is a science above it, for if there be a seience which is a participation by man of knowledge proper to God

Himself, obviously that science will be superior to the highest human science. Such a science however exists. It is theology.

--Introduction to Philosophy p. 124,
Jacquis Maritain.

ಅಥ ಪರಾ ಯಯಾ ತದಕ್ಷರಮಧಿಗಮ್ಯತೇ।

ಅಧ್ಯಾತ್ಮವಿದ್ಯಾ ವಿದ್ಯಾನಾಂ ವಾದಃ ಪ್ರವದತಾಮಹಮ್ ॥

——ಗೀತಾ

✣ ✣ ✣

V. ಧರ್ಮಗಳ ಇತಿವೃತ್ತ

ಅಧುನಿಕ ಇತಿಹಾಸ ವಿಮರ್ಶಕರ ಅಭಿಪ್ರಾಯದಂತೆ ಕ್ರಿ. ಪೂ. 5000 ವರ್ಷಗಳ ಹಿಂದೆ ಜಗತ್ತಿನಲ್ಲಿ ಮಾನವನ ಇತಿಹಾಸ ಆರಂಭವಾಗುತ್ತದೆ. ಭೂಗರ್ಭಶಾಸ್ತ್ರ, ಖಗೋಳಶಾಸ್ತ್ರ, ಮೊದಲಾದ ಶಾಸ್ತ್ರಗಳು ಇದನ್ನು ಅನೇಕ ಲಕ್ಷ ವರುಷಗಳಷ್ಟು ಹಿಂದೆ ತಳ್ಳುವುದು. ಅದೇನೇ ಇರಲಿ, ಅಂತೂ ಜಗತ್ತಿನಲ್ಲಿ ಮಾನವ ಸಂಸ್ಕೃತಿಯ ಆರಂಭದಿಂದಲೂ ಧರ್ಮವು ಈ ಸಂಸ್ಕೃತಿಯ ಮುಖ್ಯವೂ, ಅನಿವಾರ್ಯವೂ ಆದ ಅಂಗವಾಗಿದೆ. ಅಷ್ಟೇಕೆ ಜಗತ್ತಿನ ವಿವಿಧ ಜನಾಂಗಗಳ ಪ್ರಾರಂಭದ ಇತಿಹಾಸ ದೊರೆಯುವುದು ಆಯಾ ಧಾರ್ಮಿಕ ಇತಿಹಾಸ ಗ್ರಂಥಗಳಲ್ಲೇ.

1. ಪ್ರಾಗೈತಿಹಾಸಿಕ ಕಾಲ.

ಪ್ರಾಗೈತಿಹಾಸಿಕ ಕಾಲದ ಪ್ರಪ್ರಥಮ ಸಂಸ್ಕೃತ ಜನಾಂಗದವರು ಸಿಂಧೂ ದೇಶದಲ್ಲಿಯೂ, ಮೆಸಪೊಟೇಮಿಯಾದಲ್ಲೂ ಇದ್ದರೆಂದು ಇತಿಹಾಸಜ್ಞರ ಮತ. ಆದ್ದರಿಂದ ಮೆಸಪೊಟೇಮಿಯಾಕ್ಕೆ ಬಂದ ಸುಮೇರಿಯನ್ನರೂ, ಸಿಂಧೂ ಸಂಸ್ಕೃತಿಯ ಜನಾಂಗದವರೂ ಒಂದೇ ಬುಡಕಟ್ಟಿಗೆ ಸೇರಿದವರಿರಬೇಕೆಂದೂ, ಅವರ ಮೂಲಸ್ಥಳ ಬೆಲೂಚೀಸ್ಥಾನದ ಹತ್ತಿರವಿರಬೇಕೆಂದೂ ಶೋಧಕರೆನ್ನುವರು.

ಈ ಸೈಂಧವ ಸಂಸ್ಕೃತಿಯ ಜನಾಂಗದವರು ವಿಶಾಲವಾದ ಮಂದಿರಗಳನ್ನು ಕಟ್ಟಿ, ದೇವತೆಗಳನ್ನು ಅದರಲ್ಲಿ ಪ್ರತಿಷ್ಠಿಸಿ, ಆರಾಧಿಸುತ್ತಿದ್ದರೆಂದೂ, ಅವರು ಶಿವ, ಅಂಬಾವಿಗ್ರಹ, ನಾಗರು, ವೃಕ್ಷದೇವತೆಗಳು, ಪ್ರಾಣಿ, ವೃಕ್ಷ, ಶಿಲೆ, ಲಿಂಗಗಳನ್ನು ಪೂಜಿಸುತ್ತಿದ್ದರೆಂದೂ, ಸರ್ ಜಾನ್ ಮಾರ್ಷಲ್ ಮೊದಲಾದ ತಜ್ಞರ ಅಭಿಪ್ರಾಯ. ಆದ್ದರಿಂದ ಸೈಂಧವ ಸಂಸ್ಕೃತಿಯಲ್ಲಿ "ಧರ್ಮದ ಆಚರಣೆ" ವಿಶೇಷವಾಗಿ ಬಲಗೊಂಡಿತ್ತು.

ಮೆಸೆಪೊಟೇಮಿಯಾದಲ್ಲಿ ಅತಿ ಪ್ರಾಚೀನವಾಗಿ ಬಂದು ಬೇರೂರಿದ ಸುಮೇರಿಯನ್ನರು ನಗರ–ಠಾಣ್ಯಗಳನ್ನು ಸ್ಥಾಪಿಸಿದರು. ಇಂತಹ ಒಂದೊಂದು ಪಾಳೆಯಪಟ್ಟಿನಲ್ಲೂ ಒಂದೊಂದು ಕುಲದೇವತೆ, ಒಂದು ದೊಡ್ಡ ದೇವಸ್ಥಾನವಿರುತ್ತಿದ್ದವು. ಎನ್ಲಿಲ್ (Enlil) ಎಂಬುದು ನಿಪ್ಪುರ್ (Nippur) ಎಂಬ ಪಾಳೆಯದ ದೇವತೆ. ಇದು ಭೂ–ದೇವತೆ (Earth-God) ಉರುಕ್ (Uruk) ಎಂಬ ಪಾಳಯದಲ್ಲಿ ಪೂಜೆಗೊಳ್ಳುತ್ತಿದ್ದ ಇಷ್ಟಾರ್ (Ishtar) ಫಲಪ್ರದ ಮತ್ತು ಪ್ರೇಮಾಧಿದೇವತೆ, ಈ ಪ್ರೇಮಮಂದಿರಗಳಿಗಾಗಿ ಅಲ್ಲಲ್ಲಿ ಕೃತಕ ಗುಡ್ಡಗಳು ರಚಿಸಲ್ಪಡುತ್ತಿದ್ದವು. ಇಂತಹ ದೇವತೆಗಳನ್ನೆಲ್ಲ ಒಟ್ಟಿಗೆ ಸೇರಿಸಿ ಅವರುಗಳಲ್ಲಿ ತಾರತಮ್ಯಗಳನ್ನೇರ್ಪಡಿಸಿಕೊಂಡಿದ್ದೂ ಅನೇಕ ಆಧಾರಗಳಿಂದ ವ್ಯಕ್ತಪಡುವುದು ಈ ದೇವತಾರಾಧನೆಗಳು ಯಾಗರೂಪವಾಗಿಯೂ, ಸ್ತೋತ್ರ ರೂಪವಾಗಿಯೂ

ಆಗುತ್ತಿದ್ದವೆಂದು ಸರ್ ಚಾರ್ಲ್ಸ್ ಎಲ್ಲಿಯವರು ಅಭಿಪ್ರಾಯ ಪಟ್ಟಿದ್ದಾರೆ. ಸುಮಾರು ಕ್ರಿ. ಪೂ. 5000ವರ್ಷಗಳಿಂದ ಕ್ರಿ. ಪೂ. 483ರ ವರೆಗೆ ಈ ಮೆಸಪೊಟೇಮಿಯಾ ದೇಶದಲ್ಲಿ ಅನೇಕ ರಾಜಕೀಯ ಬದಲಾವಣೆಗಳು ನಡೆದು ಅನೇಕ ಭಿನ್ನ ಭಿನ್ನ ಜನಾಂಗಗಳ ಪ್ರಭುತ್ವವೇರ್ಪಟ್ಟಿದ್ದರೂ ಈ ದೇವತಾರಾಧನೆ ನಡೆಯುತ್ತಲೇ ಬಂದಿತು. ಈ ಜನಾಂಗಗಳಲ್ಲಿ ಪರಸ್ಪರ ಸಾಂಕರ್ಯವೇರ್ಪಟ್ಟು ಈ ದೇಶದ ''ಧಾರ್ಮಿಕ ಭಾವನೆ'' ಹಿಬ್ರೂ ಧರ್ಮಕ್ಕೆ ಹಾದಿ ಹಾಕಿಕೊಟ್ಟು ರೂಪಾಂತರ ಹೊಂದಿತು.

2. ಈಜಿಪ್ಟ್

ಈಜಿಪ್ಟ್ ದೇಶದಲ್ಲೂ ಮೆಸಪೊಟೇಮಿಯಾ ದೇಶದಂತೆ ಧಾರ್ಮಿಕ ಇತಿಹಾಸ ಅತಿ ಪ್ರಾಚೀನವಾಗಿದೆ. ಸುಮಾರು ಕ್ರಿ. ಪೂ. 30 ರಲ್ಲಿ ರೋಮನ್ ರಾಜ್ಯದಲ್ಲಿ ಲಯಹೊಂದುವವರೆಗಿನ 300 ವರ್ಷಗಳ ಈಜಿಪ್ಟ್ ಇತಿಹಾಸದಲ್ಲಿ ಸೆಮೆಟಿಕ್, ಇಥಿಯೋಪಿಯನ್, ಅಸ್ಸೀರಿಯನ್, ಬ್ಯಾಬಿಲೋನಿಯನ್, ಪರ್ಷಿಯನ್ ಗ್ರೀಕ್, ಮತ್ತು ಟಲಿಮಿಕ್ ಅರಸರ ಆಡಳಿತಾವಧಿಯಲ್ಲಿ ಧರ್ಮವು ಈ ದೇಶದಲ್ಲಿ ಜಾಗೃತವಾಗೇ ಇದ್ದಿತು. ಸೂರ್ಯ ಮತ್ತು ನೈಲ್ ನದಿಯ ಆರಾಧನೆ ಮೊದಲಿನಿಂದ ನಡೆದು ಬಂದಿತ್ತು. ಜೊತೆಗೆ ರಾ, ಅಮೆ಼ ಮತ್ತು ಒಸರಿಸ್‌ದೇವತೆಗಳ ಪೂಜೆಯೂ ನಡೆಯುತ್ತಿತ್ತೆಂದು A.W. ಪಾರ್ಟರ್‌ರವರು ವಿವರಿಸಿದ್ದಾರೆ. ಈ ದೇಶದಲ್ಲಿ ದೊಡ್ಡ ದೇವಮಂದಿರಗಳಿದ್ದುವೆನ್ನಲು ಸಾಕಷ್ಟು ಆಧಾರಗಳಿವೆ.

ಇದರ ಜೊತೆಗೆ ಈಜಿಪ್ಟ್ ದೇಶದಲ್ಲಿ ನೀತಿನಿಯಮಗಳ ಭಾವನೆ ವಿಶೇಷವಾಗಿ ಬೆಳೆದಿತ್ತು. ಸುಮಾರು ಕ್ರಿ. ಪೂ. 2900ರಲ್ಲಿ ಕಾಗೆಮ್ನ (Kagemna) ಬೋಧನೆಗಳಿಂದ ಆರಂಭವಾದ ಈ ನೈತಿಕ ಭಾವನೆ ಕ್ರಿ. ಪೂ. 15ನೆಯ ಶತಮಾನದ ಅಮೆ಼ –ಎಮ್ ಅಪ್ಟ್ (Amen-em Apt)ನ ಬೋಧನೆಯವರೆಗೂ ಸಾರೋದ್ಧಾರವಾಗಿ ನಡೆದು ಬಂದಿತು. ಹೀಗೆ ಹಿಬ್ರೂ ಸಂತರಿಗಿಂತ ಬಹಳ ಹಿಂದೆಯೇ ಇಲ್ಲಿ ನೀತಿ ಬೋಧನೆಗಳಿದ್ದವು. ಕ್ರೀಟ್, ಮಾಲ್ಟ, ಬೆಲೆರಿಕ್ ದ್ವೀಪಗಳು, ಎಟ್ರಸ್ಕನ್, ಇಟಲಿ, ಅನಟೋಲಿಯ ಮೊದಲಾದ ದೇಶಗಳಲ್ಲೂ ಧರ್ಮದ ಬೇರೆ ಬೇರೆ ಅಂಗಗಳಾದ ದೇವತಾರಾಧನೆ ಮೊದಲಾದವು ರೂಢಿಯಲ್ಲಿದ್ದವೆಂದು ಪ್ರಾಚ್ಯವಸ್ತು ಸಂಶೋಧಕರು ಅಭಿಪ್ರಾಯ ಪಡುವರು.

ಮಧ್ಯ ಅಮೇರಿಕಾ ದೇಶದಲ್ಲಿನ ಪ್ರಾಚೀನ ಇತಿಹಾಸದ ವಿವರಗಳು ಅಷ್ಟಾಗಿ ಹೊರಬೀಳದಿದ್ದರೂ, ಅಲ್ಲೂ ಮೊದಲಿನಿಂದ ಧರ್ಮದ ಆಚರಣೆ ಇತ್ತೆಂದು ಊಹಿಸಬಹುದು. ಸ್ಪೆ಼ಸರು ಸುಮಾರು 28 ದೇವತೆಗಳನ್ನು ಪಟ್ಟಿ ಮಾಡಿ ಅಲ್ಲಿ ಪೂಜಿಸುತ್ತಿದ್ದ ದೇವತೆಗಳೆಂದು ಹೇಳುವರು. ಸೂರ್ಯಾರಾಧನೆಯು ಅಲ್ಲಿಯ ಧರ್ಮದಲ್ಲಿ ಮುಖ್ಯವಾದದ್ದು.

3. ಗ್ರೀಸ್

ಗ್ರೀಕ್ ಮತ್ತು ರೋಮನ್ ದೇಶದ ಧಾರ್ಮಿಕ ಇತಿಹಾಸ ಅತ್ಯಂತ ಪ್ರಸಿದ್ಧವಿದೆ. ಮತ್ತು ಅನೇಕ ವಿಧದಲ್ಲಿ ಇದು ಭಾರತದ ಧಾರ್ಮಿಕ ಇತಿಹಾಸವನ್ನೇ ಹೋಲುತ್ತದೆ. ಗ್ರೀಕ್ ದೇಶದ ಧಾರ್ಮಿಕ ಚರಿತ್ರೆಯಲ್ಲಿ ಸಾರೋದ್ಧಾರವಾದ ಭಾರತದ ಅನುಕರಣೆಯು ತೋರುವುದು. ಇದಕ್ಕೆ ಬಹುಶಃ ಪರ್ಷಿಯಾ ದೇಶವೇ ಮಾರ್ಗವಾಗಿರಬೇಕು. ಅರಸು ಪುರೂರವನು ಕ್ರಿ. ಪೂ. 20ರಲ್ಲಿ ಅರ್ಥೆಸ್‌ಗೆ ಒಬ್ಬ ರಾಯಭಾರಿಯನ್ನು ಕಳುಹಿಸಿದ್ದನೆಂಬ ಐತಿಹ್ಯವಿದೆ. ಪೈಥಾಗೋರಾಸ್‌ನ ಜೀವನ ಚರಿತ್ರೆಯ ಕರ್ತೃವಾದ ಐಯಾಂಬ್ಲಿಕಸನು ಎಲ್ಲ ದೇಶಗಳಲ್ಲೂ ಸಂಚಾರ ಮಾಡಿದೆನೆಂದೂ, ತನಗೆ ಈಜಿಪ್ಟ್, ಮೆಸೆಪೊಟೇಮಿಯಾ ದೇಶಗಳ ಹಾಗೂ ಬ್ರಾಹ್ಮಣರ ತತ್ತ್ವಗಳ ಪರಿಚಯವಿದೆಯೆಂದೂ ಹೇಳಿಕೊಳ್ಳುವನು. ಆದ್ದರಿಂದ ಭಾರತದ ಧಾರ್ಮಿಕ ಭಾವನೆಗಳು ಗ್ರೀಕ್ ದೇಶಕ್ಕೆ ವಿಶೇಷವಾಗಿ ಹರಡಿದೆಯೆನ್ನಲೇನೂ ಅಡ್ಡಿಯಿಲ್ಲ. ಎಲಿಯಾಟಿಕ್ಸ್, ಕ್ಸೆನೋಫೆನೆಸ್, ಮತ್ತು ಪರ್ಮೆನೈಡಿಸ್‌ರ ತತ್ತ್ವಗಳು ಉಪನಿಷದುಕ್ತ ತತ್ತ್ವಗಳ ಅನುಕರಣೆಯನ್ನು ಮಾಡುವವು. ಈ ಗ್ರೀಕ್ ವಸಾಹತುಗಳೇ ಇಟಲಿಯಲ್ಲಿದ್ದುದರಿಂದ ರೋಮ್ ದೇಶದ ಧಾರ್ಮಿಕ ಇತಿಹಾಸವು ಪ್ರತ್ಯೇಕವಾಗಿಲ್ಲ.

ಜಿಯಸ್. ಅಂಬಾ, ಡಯೋನಿಸಿಸ್, ಅಪಾಲೋ. ಅಫ್ರೋಡೀಟೆ ಮೊದಲಾದ ಗ್ರೀಕ್ ದೇವತೆಗಳಂತೂ ಪ್ರಸಿದ್ಧವಾಗಿವೆ. ಗ್ರೀಕರಲ್ಲಿದ್ದ ಧಾರ್ಮಿಕ ದೀಕ್ಷೆಯು ಗಮನಿಸಬೇಕಾದ ವಿಷಯ. ಇದರ ಬಗ್ಗೆ ಅವರ ಆದರ ಹೆಚ್ಚು. ಸರಿಯಾದ ದೀಕ್ಷೆ ಇಲ್ಲದಲ್ಲಿ ಧಾರ್ಮಿಕ ತತ್ತ್ವಗಳೇ ತಿಳಿಯಲಾರದೆಂದು ಅವರ ನಂಬಿಕೆ.

ಅಲ್ಲಿ ಬೃಹದಾಕಾರದ ಯಾಗಗಳೂ ನಡೆಯುತ್ತಿದ್ದವು. ಅನೇಕ ಶತಮಾನಗಳ ಕಾಲ ಗ್ರೀಕ್ ದೇಶದಲ್ಲಿ ಧರ್ಮ ಜೀವಂತವಾಗಿದ್ದು ಪುಷ್ಟಿಗೊಂಡಿತು. ರೋಮ್ ದೇಶದಲ್ಲೂ ಇದು ಮುಂದುವರೆದು ಅಲ್ಪ ಸ್ವಲ್ಪ ರೂಪಾಂತರ ಹೊಂದಿತು. ಹೀಗೆ ಮುನ್ನಡೆದ ಈ ಧರ್ಮವು ಹಿಬ್ರೂ ಧರ್ಮದೊಂದಿಗೆ ಕಲಿತು, ಬೌದ್ಧ ಧರ್ಮದ ಪ್ರಭಾವಕ್ಕೊಳಗಾಗಿ ಕ್ರೈಸ್ತಮತದ ಉದಯಕ್ಕೆ ಕಾರಣವಾಯಿತು.

ಉತ್ತರ ಮತ್ತು ಮಧ್ಯ ಯುರೋಪಿನಲ್ಲಿ ಈಗಿನ ಯುರೋಪಿಯನ್ನರ ಪೂರ್ವಜರಾದ ಆಂಗ್ಲೋಸಾಕ್ಸನ್, ಗಾಲ್, ಸ್ಲಾವೋನಿಕ್ ಮೊದಲಾದ ಜನಾಂಗದವರ ಧಾರ್ಮಿಕ ಇತಿಹಾಸವು ಲುಪ್ತವಾಗಿದ್ದರೂ, ಅವರ ಆಚರಣೆಯ ಅವಶೇಷಗಳು ಈಗಲೂ ಯುರೋಪಿನ ಅನೇಕ ದೇಶಗಳ ಆಚಾರಗಳಲ್ಲಿ ಕಂಡುಬರುವುವು. ಇದರಿಂದ ಆಗ ಧರ್ಮ ವಿಶೇಷ ಆಚರಣೆಯಲ್ಲಿತ್ತೆಂದು ಊಹಿಸಬಹುದು.

4. ಚೀಣಾ ಮತ್ತು ಜಪಾನ್

ಚೀಣಾದೇಶದ ಜನರು ಸ್ವಾಭಾವಿಕವಾಗಿ ಧಾರ್ಮಿಕ ಮನೋಧರ್ಮದವರಲ್ಲ. ಅವರ ಒಲವು ಸಾಮಾನ್ಯವಾಗಿ ದೇವರ ಕಡೆಗೆ ಇಲ್ಲ. ಅವರು ಭಾವುಕರೂ ಅಲ್ಲ. ಅವರು ಹೆಚ್ಚಾಗಿ ಪ್ರಯೋಜನಶರಣರು ಮತ್ತು ಲೌಕಿಕ ಮನೋಭಾವನೆಯವರು. ಆದರೂ ಅಲ್ಲಿಯ ಧಾರ್ಮಿಕ ಇತಿಹಾಸ ವಿಸ್ತಾರವಾಗಿದೆ.

ಪ್ರಾಚೀನ ಕಾಲದಲ್ಲಿ ಅವರಲ್ಲಿ ದೇವರಿಂದ ಸ್ವಾಭಾವಿಕವಾಗಿ ವಿಕಾಸ ಹೊಂದಿದ ಜಗತ್ತಿಗೆ ಆಕಾಶವೇ ಆಧಿದೇವತೆ. ಈ ಆಕಾಶವೇ ಅದೃಷ್ಟ ಅಥವಾ ಟೀನ್ (Tien) ಎಂಬ ಹೆಸರನ್ನು ಪಡೆದಿರುವುದು. ಅಲ್ಲೂ ನಮ್ಮಲ್ಲಿದ್ದಂತೆ ಕಯೋ (Kiao) ಮೊದಲಾದ ದೊಡ್ಡ ದೊಡ್ಡ ಯಾಗಗಳಿದ್ದವು. ಆ ಯಾಗ ಸ್ಥಳಗಳಿಗೆ "ಸ್ವರ್ಗಸ್ತೂಪ" (Altars of Heaven)ಎಂಬ ಹೆಸರಿತ್ತು.

ಆರಂಭದಲ್ಲಿ ಚೀಣದ ಧರ್ಮ ಇತರ ಧರ್ಮಗಳಂತೆ ಬಹು ದೇವತಾ ಪ್ರತಿಪಾದಕವಾಗಿತ್ತು. ಸರ್ವೋತ್ತಮನಾದ ಭಗವಂತನಲ್ಲದೆ ಅನೇಕ ಪರಿವಾರ ದೇವತೆಗಳೂ ಉಂಟೆಂದು ಅಭಿಪ್ರಾಯವಿತ್ತು. ಇವರ ಆರಾಧನೆಗಾಗಿ ಅನೇಕ ಹಬ್ಬಗಳು ಆಚರಿಸಲ್ಪಡುತ್ತಿದ್ದವು. ಸಂಗೀತ ನೃತ್ಯಾದಿಗಳು ನಡೆಯುತ್ತಿದ್ದವು. ದೇವತೆಗಳಲ್ಲಿ ಸ್ವರ್ಗಪ್ರಚುರರು ಕೆಲವರು, ಭೂಪ್ರಚುರರು ಕೆಲವರು, ಭೂತ ಪ್ರೇತಾದಿಗಳಿಗೂ ಈ ಧರ್ಮದಲ್ಲಿ ಸ್ಥಾನವುಂಟು. ಇದಲ್ಲದೆ ಬಿರುಗಾಳಿ, ಅನಾವೃಷ್ಟಿ ಮೊದಲಾದ ಪ್ರಕೃತಿಯ ವಿಕಾರಗಳಿಗೂ ಕೆಲವು ದೇವತೆಗಳಿರುತ್ತಿದ್ದರು.

ಕ್ರಿ. ಪೂ. 1200 ರಿಂದ 300ವರೆಗಿನ ಎರಡನೆಯ ಕಾಲದಲ್ಲೇ ಕನ್‌ಫ್ಯೂಷಸನ (Kung-fu-tzn or Confucius) ಬೋಧನೆ ಆರಂಭವಾಯಿತು. ಇವನು ಹುಟ್ಟಿದ್ದು ಕ್ರಿ. ಪೂ. 551 ರಲ್ಲಿ. ಈತನ ಬೋಧನೆಗಳು ಹೆಚ್ಚಾಗಿ ನೈತಿಕವಾದುದು. ಅಲ್ಲಿಂದ ಮುಂದೆ ಬೌದ್ಧಧರ್ಮದ ಪ್ರಚಾರವೇ ಹೆಚ್ಚಾಗಿ ಆಯಿತು.

ಜಪಾನಿನಲ್ಲೂ ಮೊದಲು ಧಾರ್ಮಿಕ ಪ್ರಚಾರ ಚೀಣಾ ದೇಶದಂತೆಯೇ ಇದ್ದು, ಆಮೇಲೆ ಕೆಲವು ಬದಲಾವಣೆಗಳಾದವು. ಇಲ್ಲೂ ಬೌದ್ಧಮತದ ಮತ್ತು ಷಿಂಟೋ ತತ್ತ್ವಗಳ ಪ್ರಚಾರ ಹೆಚ್ಚಾಗಿ ಆಯಿತು.

5. ಇರಾನ್.

ಇರಾನ್ ಅಥವಾ ಪರ್ಷಿಯಾ ದೇಶದಲ್ಲಿ ಕ್ರಿ. ಪೂ. ಆರನೆಯ ಶತಮಾನದಲ್ಲಿ ಜರಥುಷ್ಟ್ರನ ಮತ ಆರಂಭವಾಯಿತು. ಜೆಂಡ್ ಅವೆಸ್ಟ (ಛಂದೋಽವಸ್ಥಾ) ಎಂಬ ಗ್ರಂಥದಲ್ಲಿ ಈ ಮತದ ನಿರೂಪಣೆ ಇದೆ. ಅವೆಷ್ಟ ಗ್ರಂಥದ ಭಾಷೆ ವೇದಗಳ ಭಾಷೆಗೆ

ಅತಿ ಸಮೀಪವಾದುದು. ಅಲ್ಪ ಸ್ವಲ್ಪ ಬದಲಾವಣೆಗಳಿಂದ ಅವೆಷ್ಟ ಸಂಸ್ಕೃತದ ರೂಪವನ್ನು ತಾಳುವುದು. ಆದ್ದರಿಂದ ಅವೆಷ್ಟ ಗ್ರಂಥದ ರಚನೆಯ ಕಾಲದವರೆಗೂ ಆರ್ಯರು ಮತ್ತು ಇರಾನಿಯನ್ನರೂ ಒಟ್ಟಿಗಿದ್ದರೆಂದೂ ಆಮೇಲೆ ಇಬ್ಬರೂ ಬೇರೆ ಯಾದರೆಂದೂ ಸಂಶೋಧಕರು ಊಹಿಸುತ್ತಾರೆ. ವೇದಗಳಲ್ಲಿ ಕಂಡು ಬರುವ ಮಿತ್ರ ಮೊದಲಾದ ದೇತೆಗಳ ಹೆಸರು ಅವೆಷ್ಟಾದಲ್ಲಿ ಹೇರಳವಾಗಿ ಕಂಡುಬರುತ್ತದೆ.

ಜರುಥುಷ್ಟನ ಮತಪ್ರಕ್ರಿಯೆಯಲ್ಲಿ ದ್ವಿತತ್ತ್ವವಾದವು ಮುಖ್ಯವಾದುದೆಂದು ಹೇಳಬಹುದು. ಇಲ್ಲಿ ದೈವ ಮತ್ತು ಆಸುರ ಶಕ್ತಿಗಳಿಗೆ ಅನಂತವಾದ ಕಲಹವು ಕಂಡುಬರುವುದು, ಅವಷ್ಟದ ಗಾಥೆಗಳಲ್ಲಿ ಅಹುರಮೆಡ್ಜನೆಂಬ ಸರ್ವೋತ್ತಮನಾದ ವಸ್ತುವೂ ಅವನಿಗೆ ಅಧೀನರಾದ ಇತರ ದೇವತೆಗಳ ವರ್ಣನೆಯೂ ಕಂಡುಬರುತ್ತದೆ. ಬರುಬರುತ್ತ ಮಿತ್ರ ದೇವತೆಗೂ ಹೆಚ್ಚಿನ ಸ್ಥಾನಮಾನ ಕೊಡಲ್ಪಟ್ಟಿದೆ. ಅಹ್ರಿಮಾ್ ಎಂಬುವನು ತಮೋಗುಣದ ಅಧಿಪತಿ, ಕಲಿ. ಇವನು ಅತ್ಯಂತ ಪ್ರಬಲ ಶಕ್ತಿ. ದೇವತೆಗೂ ಈ ದೈತ್ಯನಿಗೂ ಎಂದಿಗೂ ಕಲಹ. ಆದರೆ ಕಲಿಶಕ್ತಿಯನ್ನು ಹೋರಾಟದಿಂದ ದಮನ ಮಾಡಿ ಭಗವಂತನ ಅನುಗ್ರಹ ಪಡೆಯುವುದೇ ಜೀವನದ ಗುರಿ. ಗಾಥೆಗಳಲ್ಲಿ ಆಗಾಮಿಜನ್ಮದ ವಿಷಯವೂ ಜೀವನ ಅಮೃತತ್ವ ವಿಷಯವೂ ಉಕ್ತವಾಗಿದೆ. ಅವೆಷ್ಟ ಕೊನೆಯ ಭಾಗದಲ್ಲಿ ಜರುಥುಷ್ಟನು ಬಂದು ಜೀವರ ದುಃಖನಿವಾರಣೆಮಾಡಿ ಸತ್ಯವನ್ನು ಸ್ಥಾಪಿಸುವನೆಂದೂ ಹೇಳಿದೆ.

6. ಹಿಬ್ರೂಮತ ಮತ್ತು ಕ್ರೈಸ್ತಮತ

ಕ್ರೈಸ್ತಮತಕ್ಕೆ ಮೂಲವಾದ ಹಿಬ್ರೂಮತ ಮೋಸೆಸ್‌ನಿಂದ ಆರಂಭವಾಗಿ,ಅನೇಕ ಸಂತರಿಂದ ಪುಷ್ಟಿಗೊಂಡು, ಕೊನೆಗೆ ಕ್ರೈಸ್ತ ಮತಕ್ಕೆ ಇಂಬುಕೊಟ್ಟು, ಅದರೊಡನೆ ಹೋರಾಡಿ ಅದು ಹಬ್ಬಿದಂತೆಲ್ಲ ಕ್ಷೀಣದೆಶೆಯನ್ನು ಹೊಂದಿತು. ಈ ಮತದಲ್ಲಿ ಏಕೇಶ್ವರ ವಾದಕ್ಕೆ ವಿಶೇಷ ಪ್ರಾಶಸ್ತ್ಯ. ಭಗವಂತ ಸರ್ವೋತ್ತಮ. ಅದ್ವಿತೀಯ ಮತ್ತು ಅಕಳಂಕ. ಅವನ ಹೊರತು ಜಗತ್ತಿನಲ್ಲಿ, ಮನುಷ್ಯ ಸರ್ವರೀತಿಯಿಂದಲೂ ಅವನ ಸೇವಕ. ಅವನು ಶುದ್ಧಾಚರಣೆಯಿಂದ ಅನವರತವೂ ಜಿಹೋವ (Jehova) ನ ಸೇವೆ ಮಾಡಿದಲ್ಲಿ, ಸೇಟ್ (Satan) ಎಂಬ ಕಲಿಯಿಂದ ಪಾರಾಗಬಹುದು. ಯಾಗಗಳೂ, ಪ್ರಾರ್ಥನೆಯೂ ಸಾಧನೆಗಳಲ್ಲಿ ಮುಖ್ಯವಾದುದು. ಅಬ್ರಹಾಂ ಈ ಮತದ ಮೂಲಪುರುಷ. ಇವನೂ ಜರಥುಷ್ಟನೂ ಸಮಕಾಲಿಕರೆಂದು ಕೆಲ ಮಿಮರ್ಶಕರ ಅಭಿಪ್ರಾಯ. ಈ ಮತಕ್ಕೆ ಅವೆಷ್ಟ ಮತವೇ ಮೂಲವೆಂದೂ, ಈ ಮತದಿಂದಲೇ ಕ್ರೈಸ್ತ ಮತ್ತು ಇಸ್ಲಾಂ ಮತಗಳು ಹುಟ್ಟಿಕೊಂಡವೆಂದೂ ಹೇಳುತ್ತಾರೆ.

ಹಿಬ್ರೂಮತದ ಶಾಖೆಯಂತೆ ಆರಂಭವಾದ ಕ್ರೈಸ್ತಮತ ವಿಶ್ವದಾದ್ಯಂತ ವ್ಯಾಪಿಸಿಬಿಟ್ಟಿತು.

ಹಿಬ್ರೂಮತದ ಗ್ರಂಥವಾದ ಜೆನಿಸಿಸ್ ಎಂಬುದೇ ಈ ಮತದ ಪೂರ್ವಾಧ್ಯಾಯವೆನ್ನಬಹುದು. ಇದಕ್ಕೆ ಹಳೆಯ ಒಡಂಬಡಿಕೆ ಅಥವಾ Old Testament ಎಂದೂ ಕ್ರೈಸ್ತಮತದ ಗ್ರಂಥಕ್ಕೆ ಹೊಸ ಒಡಂಬಡಿಕೆ (New Testament) ಎಂದೂ ಹೆಸರು. ಬೈಬಲ್‌ನಲ್ಲಿ ಇವೆರಡೂ ಸೇರಿವೆ.

ಏಸುಕ್ರಿಸ್ತ ಪ್ಯಾಲಿಸ್ಟೈನಿನ ಜರೂಸೆಲೆಮಿನ ಹತ್ತಿರದ ಬತ್ಲೆಹ್ಯಾಂ ಎಂಬಲ್ಲಿ ಮೇರಿ ಎಂಬಾಕೆಯಲ್ಲಿ ಜನಿಸಿದ. ಈತ ಕಾನೀನನೆಂದು ಕೆಲ ಕ್ರೈಸ್ತರು ಹೇಳುವರು. ಇವನ ತಂದೆ ಜೋಸೆಫ್ ಮತ್ತು ತಾಯಿ ಮೇರಿ ಇವರಿಬ್ಬರೂ ಬಡತನದ ಜೀವನ ನಡೆಸುತ್ತಿದ್ದಾಗ ಕ್ರಿಸ್ತ ಹುಟ್ಟಿದನೆಂದೂ ಇನ್ನು ಕೆಲವರ ಅಭಿಪ್ರಾಯ. ಏನೇ ಇರಲಿ, ಬಹಳ ಬಡತನ ವಾತಾವರಣದಲ್ಲಿ ಬೆಳೆದ ಕ್ರಿಸ್ತನಿಗೆ ಅಂದಿನ ಹಿಬ್ರೂಮತದ ಸ್ಥಿತಿ ಬಹಳ ಬೇಸರವೆನಿಸಿತು. ಹಿಬ್ರೂಮತದ ಆಚರಣೆ ಬರಿಯ ಬಹಿರಾಡಂಬರವಾಗಿ ಪರಿಣಮಿಸಿ, ಜನರಲ್ಲಿ ಸ್ವಾರ್ಥ, ವಂಚನೆ, ಇಂದ್ರಿಯ ಲೋಲುಪತೆ, ನಿರ್ದಯೆ ಇವೇ ತಾಂಡವವಾಡುತ್ತಿದ್ದವು. ಕ್ರಿಸ್ತ ಇದು ಧರ್ಮ ವಿರೋಧಿ ಜೀವನವೆಂದೂ, ಜನರಲ್ಲಿ ಮುಖ್ಯವಾಗಿ ಭೂತದಯೆ, ಮಾನವರಲ್ಲಿ ಸ್ನೇಹ, ಪ್ರೀತಿ, ಉಪಕಾರಮನೋಭಾವನೆ ಬೆಳೆಯಬೇಕೆಂದೂ ಬೋಧಿಸಿದ. ಇದು ಸಾಮಾನ್ಯ ಜನರಿಗೆ ಅತಿ ಪ್ರಿಯವೆನಿಸಿದರೂ ರೂಢಮೂಲರಾದ ಹಿಬ್ರೂಮತದ ಪುಢಾರಿಗಳಿಗೆ ದೊಡ್ಡ ಆಘಾತವಾದಂತಾಗಿ ಅವರನ್ನು ರೊಚ್ಚಿಗೆಬ್ಬಿಸಿತು. ಅವರು ಅನೇಕ ಉಪಾಯಗಳಿಂದ ಇದನ್ನು ಬೀಜಾವಸ್ಥೆಯಲ್ಲೇ ತೊಡೆದುಹಾಕಬೇಕೆಂದು ಪ್ರಯತ್ನಿಸಿ ವಿಫಲರಾಗಿ ಕೊನೆಗೆ ಕ್ರಿಸ್ತನನ್ನೇ ಶೂಲಕ್ಕೇರಿಸಿ ಕೊಂದರು. ಇದರಿಂದ ಕ್ರಿಸ್ತನ ಜೀವನ ನಷ್ಟವಾಯಿತೇ ಹೊರತು, ಅವನ ಬೋಧನೆಗಳಿಗೆ ಯಾವ ಕುಂದೂ ಆಗಲಿಲ್ಲ. ಶೂಲಕ್ಕೇರಿಸಿದ ತರುಣದಲ್ಲೇ ಕ್ರಿಸ್ತನು ಪುನಃ ತನ್ನ ಅನುಯಾಯಿಗಳಿಗೆ ದೃಗ್ಗೋಚರನಾಗಿ ತನ್ನ ಕೊನೆಯ ಸಂದೇಶವನ್ನು ಕೊಟ್ಟನೆಂಬ ಐತಿಹ್ಯ ಪ್ರಬಲವಾಗಿದೆ. ಇದರಿಂದ ಆ ಮತ ವಿಶೇಷವಾಗಿ ಹರಡಲು ಅನುವಾಯಿತು. ಅಂದಿನಿಂದ ಕ್ರಮ ಕ್ರಮವಾಗಿ ಹರಡುತ್ತಾ ಬಂದ ಈ ಮತ ಇಂದು ಸುಮಾರು ಪ್ರಪಂಚದ ಮೂರನೆಯ ಒಂದು ಜನಾಂಗದ ಮತವಾಗಿ ಪರಿಣಮಿಸಿದೆ.

ಕ್ರೈಸ್ತಮತದಲ್ಲಿ ದೇವರು ಒಬ್ಬ. ಅವನು ಸರ್ವಶಕ್ತ, ಕರುಣಾಮಯ ಎಂಬುದು ಮುಖ್ಯ ತತ್ತ್ವ. ದೇವರಿಂದ ಈ ಜಗತ್ತು ಸೃಷ್ಟವಾಯಿತು. ಈಗ ಕಾಣುತ್ತಿರುವ ಜಗತ್ತೊಂದೇ ಆತನಿಂದ ಸೃಷ್ಟವಾಯಿತು. ಇದು ಮುಂದುವರೆಯುವುದೆಂಬುದಕ್ಕೆ ಆ ಮತದಲ್ಲಿ ಪುರಸ್ಕಾರವಿಲ್ಲ. ಈ ಜಗತ್ತು ಅಭಾವದಿಂದ ಸೃಷ್ಟವಾಯಿತು. ಇದಕ್ಕೆ ಉಪಾದಾನಕಾರಣ ಬೇರೇನೂ ಇಲ್ಲ. ಇದೊಂದು ನಿರ್ದಿಷ್ಟವಾದ ಕಾಲದಲ್ಲಿ ಸೃಷ್ಟವಾಯಿತು. ಈ ಜಗತ್ತಿನ ಜೀವಿಗಳಲ್ಲಿ ಎಲ್ಲರೂ ಪಾಪಿಷ್ಠರೇ. ಎಲ್ಲರೂ ತಪ್ಪು ಹಾದಿಯಲ್ಲಿ ಹೋಗುವವರೇ, ಇದನ್ನು ಮನಗಂಡೇ ಕ್ರಿಸ್ತ ಎಲ್ಲರ ಪಾಪನಿವಾರಣೆಗಾಗಿ ಹೆಣಗಿದ.

ಇದಕ್ಕಾಗಿಯೇ ಅವನ ಜೀವನವೂ ಕೊಲೆಯಿಂದ ಕೊನೆಗೊಂಡಿತು. ಶಿಲುಬೆಯ ಆಕಾರಕ್ಕೆ ಈ ಮತದಲ್ಲಿ ಅತ್ಯಂತ ಗೌರವ. ಇದು ಕ್ರಿಸ್ತನ ಅಂತ್ಯವನ್ನು ಸೂಚಿಸುವುದು. ಅಷ್ಟೇಕೆ ಇದು ಮನುಷ್ಯನ ದುಃಖೋಪಭೋಗದ ಸಂಕೇತ, ಈ ದುಃಖಭೋಗ ಅನಿವಾರ್ಯ. ಇದು ಎಲ್ಲರಿಗೂ ಕಟ್ಟಿಟ್ಟದ್ದೆ. ದೇವರ ದೂತನಾದ ಕ್ರಿಸ್ತನಿಗೆ ಇದು ದುಃಖಕರವಲ್ಲದಿದ್ದರೂ, ಆ ಮತದ ಮುಖ್ಯತತ್ತ್ವವಾದ ಈ ದುಃಖಾನುಭವದ ಕಥೆಯನ್ನು ತೋರಿಸಲೋಸುಗ ಅವನು ಇಂತಹ ಗಂಡಾಂತರಕ್ಕೆ ಒಳಗಾದನೆಂದು ಆ ಮತೀಯರ ಗಾಢವಾದ ನಂಬಿಕೆ. ಆದ್ದರಿಂದ ಇದು ಕ್ರಿಸ್ತನಿಗೆ ಭಗವಂತನಿಂದ ಬಂದ ಆಣತಿಯೆಂದು ಅವರು ಹೇಳುವರು.[1]

ಸ್ವಾರ್ಥವೆಂಬುದು ಎಲ್ಲರಲ್ಲೂ ಇರುವ ಧರ್ಮ. ಇದರಿಂದ ಪ್ರಾಣಿಗಳೂ ಸಹ ಬದುಕಬೇಕೆಂಬ ಆಸೆ ತಳೆದು ಇದಕ್ಕಾಗಿ ಹೋರಾಡುತ್ತವೆಂದು ಡಾರ್ವಿನ್ ಮೊದಲಾದ ಪ್ರಾಣಿಶಾಸ್ತ್ರಜ್ಞರ ಅಭಿಪ್ರಾಯ. ಆದರೆ ಇದಕ್ಕೂ ಒಂದು ಮಿತಿಯುಂಟು. ಇದು ಮಿತಿಮೀರಿದರೆ ಆಗ ಮಾನವನ ಜೀವನ ಹೊಲಸಾಗುವುದು. ಈ ಮಿತಿಮೀರಿದ ಸ್ವಾರ್ಥವೇ ಮನುಷ್ಯನ ಪಾಪ (Sin). ಇದು ಮನುಷ್ಯನನ್ನು ದೇವರಿಂದ ದೂರಮಾಡುವುದು. ಈ ಪಾಪವನ್ನು ಕಳೆದುಕೊಳ್ಳಲು ಮನುಷ್ಯ ನಿರಂತರ ಧರ್ಮಬೋಧಕರಾದ ಪುರೋಹಿತರಲ್ಲಿ ಶುದ್ಧ ಮನಸ್ಸಿನಿಂದ ತನ್ನ ಅಂದಿನ ಪುಣ್ಯಪಾಪಗಳ ಕಥೆಯನ್ನು ಹೇಳಿಕೊಂಡು ಪಶ್ಚಾತ್ತಪ್ತನಾಗಬೇಕು. ಉಪವಾಸಾದಿ ವ್ರತಾಚರಣೆ ಮಾಡಬೇಕು. ದೇವರನಾಮ ಜಪ ಮಾಡಬೇಕು. ಸುಳ್ಳಾಡಬಾರದು. ಎಲ್ಲಕ್ಕಿಂತ ಹೆಚ್ಚಾಗಿ ಭೂತದಯೆವುಳ್ಳವನಾಗಿರಬೇಕು. ಎಲ್ಲರೂ ತನ್ನ ಸಹೋದರರೆಂದು ತಿಳಿದು ವಿಶ್ವಾಸಮಾಡಬೇಕು. ಹಿಂಸೆಯನ್ನು ಬಿಡಬೇಕು. ಇದರಿಂದ ನಮ್ಮ ಪಾಪಗಳು ದೂರವಾಗಿ ಭಗವಂತನೊಡನೆ ನಮ್ಮ ಸಂಬಂಧವೇರ್ಪಡುವುದು. ಈ ಸಂಬಂಧ ಕಲ್ಪಿಸುವವನು ಕ್ರಿಸ್ತ. ಕ್ರಿಸ್ತನನ್ನು ಹೊರತು ಯಾವ ಕ್ರೈಸ್ತನೂ ಉದ್ಧೃತನಾಗಲಾರ. ಇದೇ ಅವನು ಮಾನವರ ಮೇಲೆ ಮಾಡುವ ಅನುಗ್ರಹ (Grace), ಮನುಷ್ಯನ ಉದ್ಧಾರಕ್ಕೆ ಪ್ರಾರ್ಥನೆಯೂ ಮುಖ್ಯಸಾಧನೆ. ನಿಷ್ಕಾಮ ಪ್ರಾರ್ಥನೆಯಿಂದ ಮನುಷ್ಯನ ಪಾಪಗಳು ದೂರವಾಗುವುವು. ಮನುಷ್ಯನನ್ನು ಕಲಿಯು (Satan) ಅಟ್ಟಹಾಸಗಳೆಯುವನು. ಸ್ವಾಭಾವಿಕವಾಗಿ ಮನುಷ್ಯನು ದೇವರ ಪ್ರತಿಬಿಂಬ. (Image of God) ಈ ಕಲಿಯೇ ಸಂಸಾರಕ್ಕೆ ಮೂಲಕಾರಣ. ಆದಿಮಾನವರಾದ

---

1 Thus the Christian says that the Cross, instead of being a regrettable flaw in the constitution of things, is, actually the will of God both for Himself and for all His creatures.

--Comparative Religion. P. 256

✣ ✣ ✣

ಆಡಂ ಮತ್ತು ಈವರು ಕಲಿಯಿಂದ ಮೋಸಹೊಂದಿ ಸಂಸಾರ ಜಾಲದಲ್ಲಿ ಬಿದ್ದರು. ಇವನ ಹಿಡಿತಕ್ಕೆ ಸಿಕ್ಕ ಜೀವರು ನಿತ್ಯ ನರಕದಲ್ಲಿ (Eternal Hell) ನರಳುವರು. ಭಗವಂತನ ಅನುಗ್ರಹ ಪಡೆದರೆ ಸ್ವರ್ಗಕ್ಕೆ ತೆರಳುವರು. ದೇವರು, ದೇವದೂತ ಮತ್ತು ಕ್ರಿಸ್ತ ಈ ಮೂವರೂ ತ್ರಿಪುಟಿ (Trinity) ಎನಿಸುವರು.

೭. ಇಸ್ಲಾಂ ಮತ

ಇಸ್ಲಾಂ ಮತವು ಕ್ರಿ. ಶ. ೬ನೆಯ ಶತಮಾನದಲ್ಲಿ ಅರೇಬಿಯಾದಲ್ಲಿ ಆರಂಭವಾಯಿತು. ಇದರ ಪ್ರವರ್ತಕನಾದ ಮೊಹಮ್ಮದನು ಮೆಕ್ಕಾ ಪಟ್ಟಣದ ವ್ಯಾಪಾರಿ ಸಂತತಿಗೆ ಸೇರಿದವನು. ಇವನು ಯೌವನದಲ್ಲಿ ತನ್ನ ಉದ್ಯೋಗ ಕೈಕೊಂಡು ಖದೀಜಾ ಎಂಬ ಹಿರಿಯ ವಿಧವೆಯೊಬ್ಬಳನ್ನು ಮದುವೆಯಾದನು. ಅವನಿಗೆ ಆಕೆಯಲ್ಲಿ ಆರು ಮಕ್ಕಳಾಯಿತು. ಮಧ್ಯ ವಯಸ್ಸಿನಲ್ಲಿ ಅವನಿಗೆ ಜೀವನದಲ್ಲಿ ಅಶಾಂತಿ ತಲೆದೋರಿತು. ಅವನು ಆಹಾರ ನಿದ್ರೆಗಳನ್ನು ಬಿಟ್ಟು ಅಲೆಯಲಾರಂಭಿಸಿದನು. ಹೀಗಿರುವಾಗ ಇವನಿಗೆ ಅನೇಕ ಅಶರೀರ ವಾಕ್ಕುಗಳು ಕೇಳಿಸಿದವು. ತಾನು ದೇವರ ದೂತನೆಂದು ಜನರ ಕೀಳು ಸ್ಥಿತಿಯನ್ನು ನೋಡಿ ದೇವರು ಅವರನ್ನು ಉದ್ಧರಿಸಲು ತನ್ನನ್ನು ಕಳುಹಿಸಿದನೆಂದೂ, ಅವನು ತನ್ನ ಹೆಂಡತಿ, ಬಂಧುಗಳಲ್ಲಿ ಹೇಳಿಕೊಂಡನು. ಇದನ್ನು ಸಹಿಸದ ಪುರಪ್ರಮುಖರು ಅವನನ್ನು ಊರಿನಿಂದ ಹೊರಗಿಟ್ಟರು. ಅಲ್ಲಿಂದ ಸ್ವಲ್ಪ ದೂರದಲ್ಲಿದ್ದ ಯತ್ರಿಬ್ ಎಂಬಲ್ಲಿಗೆ ಅವನು ಓಡಿಹೋದನು. ಅದು ಯೆಹೂದಿಗಳು ಮತ್ತು ಕ್ರೈಸ್ತರಿಂದ ನಿಬಿಡವಾದ ಸ್ಥಳ. ಅಲ್ಲಿ ಅವನು ತನ್ನ ಬೋಧನೆಗಳಿಂದ ಕೆಲವು ಅನುಯಾಯಿಗಳನ್ನು ಮಾಡಿಕೊಂಡನು. ಅಲ್ಲಿಂದ ಮುಂದೆ ಇವನು ಪ್ರತಿರೋಧಿಗಳನ್ನು ಎದುರಿಸಲು ಬಲಪ್ರಯೋಗವನ್ನು ಕೈಕೊಂಡು ಅದರ ಸಹಾಯದಿಂದ ತನ್ನ ಮತವನ್ನು ಹರಡಿದನು.

ಮೊಹಮ್ಮದನ ಮತ ಆರಂಭವಾಗುವ ಸಮಯದಲ್ಲಿನ ಅರೇಬಿಯದ ಸ್ಥಿತಿ ಸಂಪೂರ್ಣವಾಗಿ ಕಲುಷಿತವಾಗಿತ್ತು. ಜನರಲ್ಲಿ ಧಾರ್ಮಿಕ ವಿಶ್ವಾಸ ಕಡಿಮೆಯಾಗಿ ಮೋಸ, ವ್ಯಭಿಚಾರ ಮತ್ತು ಹಿಂಸೆಯೇ ಹೆಚ್ಚಾಗಿತ್ತು. ಇಂತಹ ದುರವಸ್ಥೆಯಲ್ಲಿ ಇಸ್ಲಾಂ ಮತ ಆರಂಭವಾಯಿತು. ಈ ಇಸ್ಲಾಂ ಮತದ ಹುಟ್ಟಿಗೆ ಹಿಬ್ರೂಮತದ ಪಾರಿವ್ರಾಜಕರೇ ಕಾರಣರೆನ್ನಬಹುದು. ವಿರಕ್ತರಾದ ಯೆಹೂದಿ ಸನ್ಯಾಸಿಗಳು ಊರಿಂದ ಊರಿಗೆ ಅಲೆಯುತ್ತಿದ್ದುದನ್ನು ನೋಡಿದ ಮೊಹಮ್ಮದನು ತಾನೂ ಅವರಂತೆಯೇ ಎಂದು ಹೇಳಿ ಕೊಳ್ಳುತ್ತಿದ್ದು ಕೊರಾನಿನಲ್ಲಿ ಅವರ ಬಗ್ಗೆ ಪೂಜ್ಯ ಭಾವನೆಯನ್ನು ತೋರಿಸಿರುವನು. ಯೆಹೂದಿ ಮತದ ಅನೇಕ ತತ್ತ್ವಗಳು ಇಸ್ಲಾಂ ಮತದಲ್ಲಿ ಕಂಡುಬರುವುದು.

ಇಸ್ಲಾಂ ಶಬ್ದಕ್ಕೆ ದೇವರ (ಅಲ್ಲಾ) ಮತ್ತು ಮೊಹಮ್ಮದನು ಪೂಜೆ ಮತ್ತು ಅವರಿಗೆ ಸಮರ್ಪಣೆ ಎಂದರ್ಥ, ದೇವರು ಒಬ್ಬನೇ. ಇವನೇ ಅಲ್ಲಾ. ಅಲ್ ಇಲಾಹ್ ಎಂಬುದರ

ಸಂಕ್ಷಿಪ್ತ ರೂಪವೇ ಅಲ್ಲಾ. ಇದಕ್ಕೆ ಸರ್ವಶಕ್ತನೆಂದರ್ಥ. ರಾಬ್ (Rabb)ಎಂದರೆ ಈಶ್ವರನೆಂಬುದು ದೇವರ ಇನ್ನೊಂದು ಹೆಸರು. ದೇವರ ಇಚ್ಛೆಯಿಂದಲೇ ಎಲ್ಲವೂ ಜರುಗುವುದು. ಅವನ ವ್ಯಾಪಾರ ನ್ಯಾಯವಾದುದು. ನಮಗೆ ಅದರಲ್ಲಿ ಪರಸ್ಪರ ವಿರೋಧಗಳು ಕಂಡುಬರಬಹುದು. ಇದು ನಮ್ಮ ಯುಕ್ತಿಗೆ ನಿಲುಕತಕ್ಕದಲ್ಲ. ನಾವು ಅವನಿಗೆ ಶರಣು ಹೋಗಬೇಕು. ಮುಸ್ಲಿಂ ಎಂದರೆ ಶರಣ ಎಂದರ್ಥ. ಆ ಭಗವಂತನ 99 ಹೆಸರುಗಳನ್ನು ಜಪಮಣಿಯಿಂದ ಜಪ ಮಾಡುವುದು ರೂಢಿಯಲ್ಲಿದೆ. ಇಂತಹ ಭಗವಂತನ ಸೇವೆಯನ್ನು ಬಿಟ್ಟು ಬೇರೆ ಮತವನ್ನಾಶ್ರಯಿಸುವುದು ಮುಸ್ಲಿಮರಿಗೆ ಎಂದೂ ಸಹಿಸದು. ಅನ್ಯಮತ ಸಹಿಷ್ಣುತೆ ಅವರಲ್ಲಿ ಕಡಿಮೆ. ತಮ್ಮ ಮತವನ್ನು ಹೇಗಾದರೂ ಹರಡಬೇಕೆಂಬ ಹಟ ಅವರಲ್ಲಿ ಹೆಚ್ಚು.

ಅಲ್ಲಾನಿಂದ ಈ ಜಗತ್ತು ಸೃಷ್ಟವಾಯಿತು. ಅಭಾವವೇ ಈ ಜಗತ್ತಿನ ಪೂರ್ವಾವಸ್ಥೆ. ಈ ಜಗತ್ತು ಇದೇ ಮೊದಲನೆಯದು ಮತ್ತು ಕಡೆಯದು. ಹಿಬ್ರೂ ಮತ್ತು ಕ್ರಿಸ್ತ ಮತದಂತೆ ಇಲ್ಲೂ ಕಲಿಯ ಪ್ರೇರಣೆಯಿಂದ ಮನುಷ್ಯ ಸಂಸಾರಿಯಾಗುವನು. ಜಗತ್ಪ್ರಳಯ ಕಾಲದಲ್ಲಿ ಫಲಾಫಲ ನಿರ್ಣಯದ ದಿನ ಎಲ್ಲ ಮುಸ್ಲಿಮನ ವಿಚಾರಣೆಯೂ ಆಗುವುದು. ಸರ್ವೋತ್ಕೃಷ್ಟನಾದ ದೇವರಲ್ಲದೆ ಇತರ ದೇವತೆಗಳುಂಟೆಂಬ ಕಲ್ಪನೆಯಿದ್ದರೂ ಏಕದೇವತಾ ವಾದದಲ್ಲೇ ಇದರ ಮುಖ್ಯ ತಾತ್ಪರ್ಯ. ಮುಸ್ಲಿಮನ ಸಾಧನೆ ಐದು ಬಗೆಯವು. 1. ಕಲೀಮ– ಅಲ್ಲನ ಹೊರತು ಬೇರೆ ದೇವರಿಲ್ಲ. ಮೊಹಮ್ಮದನೇ ಅವನ ದೂತನೆಂಬ ಘೋಷ. 2 ಸಲಾಕ್. ಅಥವಾ ಅಂಗನ್ಯಾಸಪೂರ್ವಕ ದಿನಕ್ಕೆ ಐದು ಬಾರಿ ನಮಾಜು. 3. ರಮ್‌ಜಾ :– ಉಪವಾಸ. 4. ಜಕಾತ್ :– ಭಿಕ್ಷಾದಾನ ಮತ್ತು 5. ಹಜ್ :– ಅಥವಾ ಮಕ್ಕಾ ಯಾತ್ರೆ.

ಇದಲ್ಲದೆ ಜೆಹಾದ್ ಎಂದರೆ ಪವಿತ್ರ ಯುದ್ಧವೂ ಒಂದು ಸಾಧನೆ. ಶುಕ್ರವಾರ ಮಸೀತಿಗೆ ಹೋಗುವುದು ವಿಧಾಯಕವಾಗಿದೆ. ಅಲ್ಲಿ ಮೆಕ್ಕಾ ಕಡೆ ತಿರುಗಿ ಪ್ರಾರ್ಥನೆ ನಡೆಸಬೇಕು. ಇದು ಎಲ್ಲಕ್ಕಿಂತ ಮುಖ್ಯಸಾಧನೆ. ಈ ನಮಾಜಿಗೆ ಇಮಾಂ ಎಂಬ ಪುರೋಹಿತನೊಬ್ಬನಿರುವನು. ಅವನನ್ನು ಅನುಸರಿಸಿ ಎಲ್ಲರೂ ನಮಾಜು ಮಾಡುವರು. ಇವರ ಮತಗ್ರಂಥವಾದ ಕೊರಾನ್ ಮೊಹಮ್ಮದನಿಗೆ ದೈವಪ್ರೇರಿತವಾದ ತತ್ತ್ವಗಳನ್ನೊಳಗೊಂಡಿದೆ ಎನ್ನುವರು.

೮. ಬೌದ್ಧಮತ

ಉಪನಿಷತ್ತಿಗಿದ್ದಂತೆ ಬುದ್ಧನ ಬೋಧನೆಗೆ ಕೇವಲ ಕೆಲ ಅಧಿಕಾರಿಗಳು ಮಾತ್ರವಲ್ಲ; ಜಿಜ್ಞಾಸುಗಳೆಲ್ಲ ಇದಕ್ಕೆ ಅಧಿಕಾರಿಗಳು. ಇದೊಂದು ಸಾಧನಮಾರ್ಗ. ಇದರಲ್ಲಿ ಆತ್ಮನ ಬಗ್ಗೆ ಹೆಚ್ಚು ಚರ್ಚೆ ಇಲ್ಲ. ಆದರೆ ಆತ್ಮ ನಿತ್ಯನೆಂದೂ ದುಃಖಮೂಲವಾದ ಸಂಸಾರದಲ್ಲಿ ಅವನು ಸಿಕ್ಕಿರುವನೆಂದೂ ಅವನ ಮತ. ಆಸೆ ಅಜ್ಞಾನಗಳೇ ಸಂಸಾರಬಂಧಕ್ಕೆ

ಮೂಲಕಾರಣ. ಇದರಿಂದಲೇ ಜನ್ಮಾಂತರಗಳೂ ಆಗುವವು. ಈ ಜನ್ಮಗಳೆಲ್ಲ ದುಃಖಕರ. ಇದನ್ನು ಎದುರಿಸಲು ಮನುಷ್ಯ ಆಶೆಯನ್ನು ಬಿಡಬೇಕು. ನಿಷ್ಠುರವಾದ ನಿಯಮಬದ್ಧ ಜೀವನವನ್ನು ನಡೆಸಬೇಕು. ಮತ್ತು ಧ್ಯಾನಾಸಕ್ತವಾಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಜ್ಞಾನ ಸಂಪಾದಿಸಬೇಕು, ಈ ನಿಯಮಬದ್ಧ ಜೀವನಕ್ಕೆ ಶೀಲ, ಯೋಗ, ಸಮಾಧಿ, ಪ್ರಜ್ಞಾ ಮೊದಲಾದ ಎಂಟು ಮಾರ್ಗಗಳುಂಟು. ಇವನ್ನು ಅನುಸರಿಸಿದ ಹೊರತು ಮನುಷ್ಯ ಉದ್ಧೃತನಾಗಲಾರ. ಇದರ ಪಾಲನೆಯಿಂದ ಮನುಷ್ಯ ಬೋಧಿಸತ್ತ್ವನಾಗಿ ನಿರ್ವಾಣವನ್ನು ಪಡೆಯುತ್ತಾನೆ. ಒಟ್ಟನಲ್ಲಿ ಬುದ್ಧ ಉಪನಿಷದುಕ್ತ ತತ್ತ್ವಗಳನ್ನೇ ಅಂಗೀಕರಿಸಿ ಅದಕ್ಕೆ ಪ್ರಾಣರೂಪವಾದ ಬ್ರಹ್ಮತತ್ತ್ವವನ್ನು ಮಾತ್ರ ಉಪೇಕ್ಷೆ ಮಾಡಿದನೆಂದು ಹೇಳಬಹುದು.

ಹೀಗೆ ಸುಲಭತತ್ತ್ವಗಳನ್ನೊಳಗೊಂಡ ಬುದ್ಧನ ಬೋಧನೆಗಳು ಬರುಬರುತ್ತಾ ರಾಜಾಶ್ರಯದಿಂದ ಪ್ರಬಲವಾಗಿ ಭಾರತದಲ್ಲೆಲ್ಲಾ ಪಸರಿಸಿ ಅಶೋಕಚಕ್ರವರ್ತಿಯ ಪ್ರಯತ್ನದಿಂದ ಸಿಂಹಳ, ಚೀಣಾ, ಜಪಾನ್, ಸಯಾಂ, ಬರ್ಮಾ, ಮಲಯಾ, ಇಂಡೋಚೀಣಾ, ಮೊದಲಾದ ದೇಶಗಳಲ್ಲಿ ಹರಡಿತು. ಅಷ್ಟೇ ಅಲ್ಲ, ಬರಿಯ ಮತವೆನಿಸಿಕೊಂಡಿದ್ದು ನಾಲ್ಕು ವಿಧವಾದ ದರ್ಶನಗಳಿಗೆ ಹಾದಿಹಾಕಿಕೊಟ್ಟಿತು, ಆಮೇಲೆ ಬೆಳೆದ ಹೀನಯಾನ ಮತ್ತು ಮಹಾಯಾನವೆಂಬ ಎರಡು ಭಿನ್ನ ಪಂಥಗಳಿಗೂ, ಸೌತ್ರಾಂತಿಕ ಯೋಗಾಚಾರ ಮತ್ತು ಮಾಧ್ಯಮಿಕವೆಂಬ ಭಿನ್ನಪ್ರಕ್ರಿಯೆಗಳಿಗೂ, ಬುದ್ಧ ಉಪದೇಶಿಸಿದ ಬೋಧನೆಗಳಿಗೂ ಬಹಳ ವ್ಯಾತ್ಯಾಸವಿದೆ. ಪಾಲೀಮತ ಗ್ರಂಥಗಳಲ್ಲಿ ಬೌದ್ಧಮತಕ್ಕೆ ಆಧಾರಪ್ರಾಯವಾದ ನಾಲ್ಕು ಮುಖ್ಯತತ್ತ್ವಗಳ ಉಲ್ಲೇಕನವಿದೆ. ಇದೇ ಬುದ್ಧನ ಪ್ರಥಮೋಪದೇಶವೆಂದು ಬೌದ್ಧರ ಅಭಿಪ್ರಾಯ.

1. ಜೀವನ ದುಃಖಮಯ ಅಥವಾ ದೋಷದುಷ್ಟವಾದುದು. ಇದನ್ನು ಒಂದು ರೋಗಕ್ಕೆ ಹೋಲಿಸಬಹುದು. ರೋಗದಂತೆ ಇದೂ ಅನಿಷ್ಟವಾದುದು ಮತ್ತು ಅಶಾಶ್ವತವು.

2. ಆತ್ಮವಿಷಯಕವಾದ ಅಜ್ಞಾನವೇ ಅಂದರೆ ಅವಿದ್ಯೆಯೇ ಈ ದುಃಖಕ್ಕೆ ಮೂಲಕಾರಣ. ಆತ್ಮವೆಂಬುದು ಬೇರೆ ವಸ್ತುವಲ್ಲ. ಇದು ನಾಮರೂಪಾತ್ಮಕವಾದುದು. ಅಥವಾ ಪಂಚಸ್ಕಂಧರೂಪವಾದುದು, ಇಂತಹ ಆತ್ಮವಾದರೂ ನಿತ್ಯವಾದುದಲ್ಲ. ಯಾವಾಗಲೂ ಬದಲಾವಣೆ ಹೊಂದುತ್ತಿರುವುದು. ಕೊನೆಗೆ ನಿರ್ವಾಣದಲ್ಲಿ, ಅದು ಸಂಪೂರ್ಣವಾಗಿ ಹೋಗಿಬಿಡುವುದು. ಈ ಅನಿತ್ಯವಾದ ಆತ್ಮಕ್ಕೆ ಅಂಟಿಕೊಂಡಿರುವುದರಿಂದ ನಮಗೆ ಎಲ್ಲ ದುಃಖಗಳೂ ಬಂದೊದಗಿರುವವು. ಹೀಗೆ ಆತ್ಮನನ್ನು ಅನಿತ್ಯವೆಂದು ಹೇಳುವ ವಾದ ಬರುಬರುತ್ತಾ ಎಲ್ಲ ವಸ್ತುಗಳಿಗೂ ಅನ್ವಯಿಸಿತು. ಎಲ್ಲ ಪದಾರ್ಥಗಳೂ ಅದರದರ ಭಾಗಗಳ ಸಂಘಾತವೆಂಬ ವಾದ ಮೂಡಿತು. ಇದೇ ನೈರಾತ್ಮ್ಯವಾದ.

3. ಇಂತಹ ಅವಿದ್ಯೆಯು ಪರಿಹಾರ್ಯ. ಇದರ ಕಾರಣಗಳು ಹೋದರೆ ಇದೂ ಇಲ್ಲದಂತಾಗುವುದು. ಅವಿದ್ಯೆಗೆ ಅನತ್ತ ಎಂದರೆ ಜೀವವಿಷಯದ ಅಜ್ಞಾನ, ಜನನ, ಮರಣ, ತೃಷಾ, ಇವೇ ಮುಖ್ಯಕಾರಣಗಳು. ಇವನ್ನು ತೊಡೆದವನು ಆರ್ಹ್ಯ ಎನಿಸುವನು. ಅಂತಹವನೇ ನಿರ್ವಾಣವನ್ನು ಹೊಂದುವನು.

4. ಪ್ರಜ್ಞೆ ಅಥವಾ ಸಮೀಚೀನ ಜ್ಞಾನ ಮತ್ತು ಯೋಗ ಅಥವಾ ನಿಯಮಬದ್ಧ ಜೀವನವೇ ಈ ದುಃಖನಿವಾರಣೆಗೆ ಉಪಾಯ. ಇದು ಕಟುವಾದ ತಪಸ್ಸ್ವಾಧ್ಯಾಯಗಳಿಂದ ಬರತಕ್ಕುದ್ದಲ್ಲ. ಶೀಲ, ಪ್ರಜ್ಞಾ, ಸಮಾಧಿ ಇವುಗಳಿಂದ ಸಿದ್ಧಸುವುದು.

ಈ ಮುಖ್ಯ ತತ್ತ್ವಗಳಲ್ಲಿ ಕ್ಷಣಭಂಗುರವಾದ ಎಂದರೆ ಎಲ್ಲ ಪದಾರ್ಥಗಳು ಪ್ರತಿಕ್ಷಣವೂನೂತನವಾಗಿರುವುವೆಂಬವಾದವು ಹೀನಯಾನ ಮಹಾಯಾನ ಪಂಥಗಳೆರಡಕ್ಕೂ ಸಾಮಾನ್ಯವು. ಹೀನಯಾಲದಲ್ಲಿ ಸರ್ವಾಸ್ತಿವಾದವನ್ನಂಗೀಕರಿಸುವರು, ಆದರೆ ಈ ಪದಾರ್ಥಗಳೆಲ್ಲ ಸ್ವಲಕ್ಷಣ, ಅಂದರೆ ವಸ್ತುಗತ ಧರ್ಮಗಳಲ್ಲ ನಮ್ಮಧೀಕಲ್ಪಿತವಸ್ತು, ಧರ್ಮಿಮಾತ್ರ ಸತ್ಯ ಎಂಬುದು ಹೀನಯಾನದ ಮುಖ್ಯ ಪ್ರಮೇಯ.

ಯೋಗಾಚಾರರು ಅಂದರೆ ವಿಜ್ಞಾನವಾದಿಗಳು ಮತ್ತು ಮಾಧ್ಯಮಿಕರು ಅಂದರೆ ಶೂನ್ಯವಾದಿಗಳು. ಇವರಿಬ್ಬರೂ ಮಹಾಯಾನ ಪಂಥಕ್ಕೆ ಸೇರಿದವರು. ವಿಜ್ಞಾನವಾದಿಗಳು ಪದಾರ್ಥಕ್ಕೆ ಸ್ವತಂತ್ರ ಸತ್ತೆಯನ್ನೇ ಒಪ್ಪುವುದಿಲ್ಲ. ಅದು ಚಿತ್ತಗತ ಅಂದರೆ ಭಾವನಾಕಲ್ಪಿತ. ಆದ್ದರಿಂದ ಎಲ್ಲವೂ ಜ್ಞಾನಮಯ. ಶೂನ್ಯವಾದದಲ್ಲಿ ಇನ್ನೂ ಸ್ವಲ್ಪ ಮುನ್ನಡೆ ಇದೆ. ವಿಜ್ಞಾನವಾದದಲ್ಲಿ ಜ್ಞಾನ ಒಂದನ್ನಾದರೂ ಒಪ್ಪಿದರೆ, ಈ ಶೂನ್ಯವಾದದಲ್ಲಿ ಜ್ಞಾನಾಧಿಷ್ಠಿತ ಚೇತನವೂ ಮಿಥ್ಯೆಯೆನ್ನುವರು. ಏಕೆಂದರೆ ಇಡೀ ಜಗತ್ತೇ ವಿರೋಧಗಳಿಂದ ಕೂಡಿದುದು. ಇದರಲ್ಲಿ ಯಾವುದನ್ನೂ ಸತ್ಯವೆನ್ನುವಂತಿಲ್ಲ. ಆದರೂ ವ್ಯವಹಾರಕ್ಕೆ ಅನುಕೂಲವಾದ ಸತ್ಯತ್ವವನ್ನೂ ಒಪ್ಪಿಕೊಳ್ಳಬೇಕು. ಇದೇ ಸಂವೃತಿ ಸತ್ಯತ್ವವು. ಈ ವಾದವೇ ಶಂಕರಾಚಾರ್ಯರ ಅದ್ವೈತಕ್ಕೆ ಹಿನ್ನಲೆಯಾದುದು. ಹೀಗೆ ನಾನಾಮುಖವಾಗಿ ಬೆಳೆದ ಬೌದ್ಧಮತವು ಇಂದು ಒಂದು ದೊಡ್ಡ ಮತವಾಗಿದೆ.

೯. ಹಿಂದೂಮತ

ಹಿಂದೂ ಮತವೆಂದು ಹೆಸರಾದ ಆರ್ಯಧರ್ಮದ ಇತಿಹಾಸವನ್ನರಿಯುವ ಮೊದಲು ಭಾರತ ದೇಶದ ಪ್ರಾಗೈತಿಹಾಸಿಕ ಅಂಶಗಳ ಬಗೆಗೆ ಇತಿಹಾಸ ಸಂಶೋಧಕರ ಅಭಿಪ್ರಾಯಗಳನ್ನು ಅರಿಯಬೇಕು. ಹದಿನೇಳನೆಯ ಶತಮಾನದಲ್ಲಿ ಸಂಸ್ಕೃತ ಭಾಷೆ ಪಾಶ್ಚಾತ್ಯರಿಗೆ ಪರಿಚಯವಾದ ಮೇಲೆ ಯುರೋಪ್ ಮತ್ತು ಅಮೇರಿಕೆಯ ಅನೇಕ ಪಂಡಿತರು ವೇದಾದಿ ಸಕಲ ಭಾರತೀಯ ಗ್ರಂಥಗಳನ್ನು ಅಧ್ಯಯನಮಾಡಿ ಅದರಲ್ಲಿನ

ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ಹಾಗೂ ಭಾಷಾಸಂಬಂಧಿ ಅಂಶಗಳನ್ನೆಲ್ಲಾ ಹೊರಗೆಡಹಿದರು. ಅದನ್ನೆಲ್ಲಾ ಕ್ರೋಢೀಕರಿಸಿ ಅತಿ ಪ್ರಾಚೀನಕಾಲದಿಂದಲೂ ಇಲ್ಲಿ ತಿಳಿದುಬಂದಿರುವ ಇತಿಹಾಸವನ್ನು ಅನೇಕ ಪಂಡಿತ ಶೋಧಕರು ಕಟ್ಟಿದ್ದಾರೆ. ಅವುಗಳ ಯಾಥಾರ್ಥ್ಯವನ್ನು ತಿಳಿಯುವ ಮುನ್ನ ಅವರ ವಿಚಾರಸರಣಿಯನ್ನು ಅರ್ಥಮಾಡಿಕೊಳ್ಳಬೇಕು.

ಈಗ್ಗೆ ಸುಮಾರು ಐದುಸಾವಿರ ವರ್ಷಗಳ ಹಿಂದೆ ಪ್ರಾಗ್ದ್ರಾವಿಡರಾದ ಆದಿವಾಸಿಗಳು ಭಾರತದಲ್ಲೆಲ್ಲಾ ಹರಡಿದ್ದರು. ಅವರು ಪಶುತುಲ್ಯರಾಗಿದ್ದರು. ಇವರು ಇತರ ಖಂಡದ ಆದಿವಾಸಿಗಳನ್ನೇ ಹೋಲುವರು. ಬಹುಶಃ ಆ ಕಾಲದಲ್ಲಿ ಸಿಂಹಳ, ಮಲಯ, ಈಸ್ಟ್‌ಇಂಡೀಸ್ ದ್ವೀಪಗಳೆಲ್ಲಾ ಒಟ್ಟಿಗೇ ಸೇರಿದ್ದವು. ಈ ಜನಾಂಗದ ಅವಶೇಷವು ಈಗ ಭಾರತದ ಬೆಟ್ಟ ಗುಡ್ಡಗಳಲ್ಲಿ ಕಾಣುವುದು.

ಆಮೇಲೆ ವಾಯುವ್ಯ ಕಣಿವೆಗಳ ಮೂಲಕ ಕ್ರಿ. ಪೂ. 2000 ವರ್ಷಗಳಿಗೆ ಮುಂಚೆ ದ್ರಾವಿಡರು, ಪ್ರವಾಹತಃ ಬಂದು ನೆಲಸಿದ ಆರ್ಯರೂ, ಮಂಗೋಲರೂ, ಸ್ಕಿಥಿಯನರೂ ಮತ್ತು ಅರಬ್ ಮುಸ್ಲಿಮರೂ ಹೀಗೆ ಕ್ರಮವಾಗಿ ಬಂದರು. ಅಲ್ಲಿಂದ ಇತ್ತೀಚೆಗೆ ಯುರೋಪಿಯನ್ನರು ಸಮುದ್ರಮಾರ್ಗವಾಗಿ ಬಂದರು.

ಕಪ್ಪು ಬಣ್ಣದ ದ್ರಾವಿಡರು ಕ್ರಿ. ಪೂ. 3000 ವರ್ಷಗಳ ಹಿಂದೆ ಸಿಂಧೂ ಬಯಲಿನಲ್ಲಿ ತಮ್ಮ ಸಂಸ್ಕೃತಿಯನ್ನು ಸ್ಥಾಪಿಸಿದರು. ಇದರ ಅವಶೇಷಗಳೂ ಹರಪ್ಪ ಮೊಹೆಂಜೊದಾರೋವಿನಲ್ಲಿ ದೊರೆತರೂ ಸಂಪೂರ್ಣ ವಿವರಗಳು ತಿಳಿದಿಲ್ಲ. ಆದರೂ ಇವರು ಬಹು ದೇವತಾರಾಧಕರೆಂದೂ ಅವರಲ್ಲಿ ಗೋರಕ್ಷಣೆಯೂ ಇತ್ತೆಂದೂ, ಅಂಬಾವಿಗ್ರವನ್ನೂ ಶಿವನನ್ನೂ ಪೂಜಿಸುತ್ತಿದ್ದರೆಂದೂ ಹೇಳಬಹುದು. ಇವರು ಆದಿವಾಸಿಗಳೊಂದಿಗೆ ದೇಹಸಂಬಂಧ ಬೆಳೆಸಿದರು. ಈ ಮಿಶ್ರಸಂತಾನವೇ ಈಗ ವಿಂಧ್ಯಕ್ಕೆ ದಕ್ಷಿಣದಲ್ಲಿರುವುದು.

ಸುಮಾರು ಕ್ರಿ. ಪೂ. 1700ರಲ್ಲಿ ಆರ್ಯರು ಭಾರತವನ್ನು ಹೊಕ್ಕರು. ಅಲ್ಲಿಂದ ಮುಂದೆ ಗುಂಪು ಗುಂಪಾಗಿ ಬರುತ್ತಲೇ ಇದ್ದರು. ಇವರು ಗಟ್ಟಿಗರು. ದ್ರಾವಿಡರನ್ನು ಇವರು ದಸ್ಯುಗಳೆಂದು ಜರಿದು, ಅವರನ್ನು ಗೆದ್ದು ತಮ್ಮ ಪಾಳಯಗಳನ್ನು ಸ್ಥಾಪಿಸಿದರು. ಹನುಮಂತ, ದ್ರಾವಿಡನಿರಬೇಕು. ಆರ್ಯರು ಅವಜ್ಞೆಯಿಂದ ಕಪಿಯೆಂದು ಕರೆದಿರಬೇಕು. ಆರ್ಯರು ತಾವು ಎಷ್ಟೇ ಶುದ್ಧರೆಂದುಕೊಂಡರೂ ದ್ರಾವಿಡರೊಡನೆ ಅನಿವಾರ್ಯವಾಗಿ ರಕ್ತಸಬಂಧವನ್ನು ಬೆಳೆಸಿದರು. ಆರ್ಯರ ಶುದ್ಧ ಸಂತತಿ ಈಗಲೂ ವಾಯುವ್ಯಪ್ರಾಂತ ಮತು ಪಂಜಾಬಿನಲ್ಲಿ ಕಾಣುವುದು. ದಕ್ಷಿಣಭಾರತದಲ್ಲಿ ದ್ರಾವಿಡರು ಮತ್ತು ಬಂಗಾಳದಲ್ಲಿ ದ್ರಾವಿಡ–ಮಂಗೋಲಿಯನ್ನರ ಮಿಶ್ರ ಸಂತತಿ ಕಾಣಬರುವುದು. ಭಾರತದ ಈ ಮಿಶ್ರಜನಾಂಗ ಮತ್ತು ಉಷ್ಣ ಹವೆ ಇಲ್ಲಿ ಧಾರ್ಮಿಕ ಇತಿಹಾಸದ ಮೇಲೆ ಅತ್ಯಂತ ಪ್ರಭಾವವನ್ನು ಬೀರಿದೆ. ಆರಂಭದಿಂದ ವರ್ತಮಾನಕಾಲದವರೆಗಿನ ಭಾರತದ

ಇತಿಹಾಸವನ್ನು ಹೀಗೆ ವಿಂಗಡಿಸಬಹುದು:–

1. ಪ್ರಾಗೈತಿಹಾಸಿಕಯುಗ:– ಇದರ ಬಗ್ಗೆ ಹೆಚ್ಚಿನ ವಿವರ ತಿಳಿದು ಬಂದಿಲ್ಲ.

2. ಸೈಂಧವಸಂಸ್ಕೃತಿಯ ದ್ರಾವಿಡಸಂಸ್ಕೃತಿ:– ಕ್ರಿ.ಪೂ. 2000 ವರ್ಷದ ಹಿಂದೆ.

3. ವೈದಿಕಯುಗದ ಪೂರ್ವಭಾಗ:– ಕ್ರಿ. ಪೂ. 1500–800 ರ ವರೆಗೆ.

4. ವೈದಿಕಯುಗದ ಉತ್ತರಭಾಗ :– ಕ್ರಿ. ಪೂ. 800 ರಿಂದ 500ರ ವರೆಗಿನ ಬ್ರಾಹ್ಮಣಗಳ ಕಾಲ.

5. ತತ್ತ್ವಶಾಸ್ತ್ರಗಳ ಉದಯ:– ಕ್ರಿ. ಪೂ. 500 ರಿಂದ 100ರ ವರೆಗೆ.

6. ಪೂರಾಣಯುಗ :– ಕ್ರಿ. ಪೂ. 200 ರಿಂದ ಕ್ರಿ. ಶ. 500ರ ವರೆಗೆ.

7. ಮುಸ್ಲಿಮ್ ದಂಡೆಯಾತ್ರೆ :– ಕ್ರಿ. ಶ. 664 ರಿಂದ 1206ರ ವರೆಗೆ.

8. ಸಂತರಯುಗ :– 13 ರಿಂದ 19ನೆಯ ಶತಮಾನದವರೆಗೆ.

9. ನವೀನಯುಗ.

ಇದರಲ್ಲಿ ವೈದಿಕಯುಗದ ವಿಷಯಗಳನ್ನು ತಿಳಿಯಲು ವೇದಗಳೇ ಆಧಾರ. ವೇದ ಅಂದರೆ ತಿಳಿ ಅಥವಾ ಜ್ಞಾನವೆಂದರ್ಥ. ಇದೊಂದು ದೊಡ್ಡ ವಾಙ್ಮಯದ ಸಂಕೇತ. ಒಂದು ಗ್ರಂಥಮಾತ್ರವಲ್ಲ; 'ಮಂತ್ರ ಬ್ರಾಹ್ಮಣಯೋರ್ವೇದನಾಮಧೇಯಂ' ಎಂಬ ವಾಕ್ಯಾನುಸಾರ ವೇದಗಳಲ್ಲಿ, ಮಂತ್ರ ಅಥವಾ ಸಂಹಿತೆ ಮತ್ತು ಬ್ರಾಹ್ಮಣಗಳೆಂದು ಎರಡು ಭಾಗ. ಕೆಲವು ಪ್ರಾಚೀನ ಉಪನಿಷತ್ತುಗಳೂ ಬ್ರಾಹ್ಮಣಗಳ ಜೊತೆ ಸೇರುವುವು. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ – ಈ ನಾಲ್ಕು ವೇದಗಳಿಗೂ ಸಂಹಿತೆ, ಬ್ರಾಹ್ಮಣ ಮತ್ತು ಉಪನಿಷತ್ತುಗಳುಂಟು. ಇವುಗಳಲ್ಲಿ ವೈದಿಕಯುಗದ ಕ್ರಮಿಕಇತಿಹಾಸವು ತಿಳಿಯುವುದು. ವೈದಿಕಯುಗದ ಕಾಲಪರಿಮಿತಿಯು ನಿರ್ಣಯವಾಗಿಲ್ಲ. ಕ್ರಿ. ಪೂ. 480 ರಲ್ಲಿ ನಿರ್ಯಾಣ ಹೊಂದಿದ ಬುದ್ಧನಿಗಿಂತ ಉಪನಿಷತ್ತುಗಳು ಪ್ರಾಚೀನವೆಂದು ಮಾತ್ರ ಹೇಳಬಹುದು. ವೈದಿಕಯುಗದ ಆರಂಭದ ಕಾಲದ ಬಗ್ಗೆ ಹೆಚ್ಚಿನ ವಿವಾದವಿದೆ. ವೇದಮಂತ್ರಗಳಲ್ಲಿ ಕೆಲವು ಅತ್ಯಂತ ಪ್ರಾಚೀನವೂ ಕೆಲವು ಕಾಲ ಅರ್ವಾಚೀನವೂ ಇವೆ. ಇವು ರಚನೆಯಾಗಲು ಅನೇಕ ಶತಮಾನಗಳು ಹಿಡಿದಿರಬೇಕು. ಇವು ರಚನೆಯಾದ ಎಷ್ಟೋ ಕಾಲಾನಂತರ ಒಟ್ಟುಗೂಡಿಸಲ್ಪಟ್ಟಿರಬೇಕು. ಹೀಗೆ ಒಟ್ಟುಗೂಡಿದ ಗ್ರಂಥಗಳೇ ಸಂಹಿತೆಗಳು. ಈಗಿನ ಸಂಹಿತೆಗಳಲ್ಲಿ ಋಕ್‌ಸಂಹಿತೆಯೇ ಅತಿ ಪ್ರಾಚೀನ. ಆ ಕಾಲದಲ್ಲಿ ಪ್ರಚಾರದಲ್ಲಿದ್ದ ಮಂತ್ರಗಳಲ್ಲಿ ಎಷ್ಟು ಭಾಗ ಈಗಿನ ಸಂಹಿತೆಗಳಲ್ಲಿ ಸೇರಿದೆ ಎನ್ನುವುದನ್ನು ಹೇಳುವಂತಿಲ್ಲ. ಅಂತೂ ಈಗ ಸಂಹಿತೆಯಲ್ಲಿಲ್ಲದ

ಎಷ್ಟೋ ಮಂತ್ರಗಳು ಆಗ ಪ್ರಚಾರದಲ್ಲಿದ್ದುವೆಂದು ಹೇಳಬಹುದು. [2]

ಈ ಸಂಹಿತೆಗಳಲ್ಲಿನ ಕೆಲವು ಋಕ್ಕುಗಳ ಅರ್ಥ ಬಹಳ ಸಂದಿಗ್ಧವಾಗಿದೆ. ಆಗಿನ ಎಷ್ಟೋ ಮಂತ್ರಗಳ ಅನುಪಲಬ್ಧಿ ಮತ್ತು ಈ ಅರ್ಥ ಸಂದಿಗ್ಧತೆ ಇದರಿಂದ ಆಗಿನ ಕಾಲದ ಧಾರ್ಮಿಕ ಭಾವನೆಯ ವಿಷಯ ಸರಿಯಾಗಿ ಅರ್ಥವಾಗಲಾರದು. ಆದರೂ ಈ ಮಂತ್ರಗಳಲ್ಲಿ ಪ್ರಕೃತಿಪೂಜೆ (Nature Worship)ಯು ಉಕ್ತವಾಗಿದೆಯೆಂದೂ ಇದು ಆರ್ಯರ ಮೂಲಸ್ಥಳವಾದ ಮಧ್ಯ ಏಷ್ಯಾದಿಂದ ಬಂದಿರಬೇಕೆಂದೂ ಇಂತಹ ಭಾವನೆ ಇತರ ದೇಶಗಳಲ್ಲೂ ಕಾಣುವುದೆಂದೂ ಪಂಡಿತರ ಮತ.

(a) ವೇದಗಳಲ್ಲಿನ ಧಾರ್ಮಿಕ ಭಾವನೆ.

ಮನುಷ್ಯನ ನಿತ್ಯ ಅನುಭವಕ್ಕೆ ಬರುವ ಬೆಂಕಿ, ಗಾಳಿ, ಬಿಸಿಲು, ಮಳೆ ಮೊದಲಾದ ಪ್ರಾಕೃತಿಕ ಶಕ್ತಿಗಳ ಮೂರ್ತಸ್ವರೂಪವೇ ಈ ಮಂತ್ರದಲ್ಲಿನ ವಾಯು, ಅಗ್ನಿ, ಸೂರ್ಯ, ಮಿತ್ರ ಮೊದಲಾದ ದೇವತೆಗಳು. ಈ ಜಗತ್ತಿನಲ್ಲಿ ಋತುಸಂಭವ, ದಿನ, ರಾತ್ರಿಗಳೆಲ್ಲಾ ಈ ಶಕ್ತಿಗಳ ಅಧಿಕಾರದಿಂದ ನಡೆಯುವುವು. ಆದ್ದರಿಂದ ಆ ಶಕ್ತಿಗಳ ಅಧಿಷ್ಠಾತೃಗಳಾದ ದೇವತೆಗಳು ಮನುಷ್ಯನಿಗಿಂತ ಅತಿಶ್ರೇಷ್ಠರು ಮತ್ತು ಮನುಷ್ಯಅವರಿಗೆ ಅಧೀನನಾಗಿರಬೇಕು. ಮಂತ್ರಗಳು ದೇವತೆಗಳ ಸ್ತೋತ್ರರೂಪವು. ಜಗತ್ತಿನ ಆಡಳಿತವನ್ನು ನಿರ್ವಹಿಸುವ ಈ ದೇವತೆಗಳು ಅನೇಕರು. ಇವರಲ್ಲಿ ಅಗ್ನಿ, ಮಿತ್ರ ಮೊದಲಾದ ದೇವತೆಗಳು ಆರ್ಯರು ಭಾರತದಲ್ಲಿ ನೆಲೆಸುವುದಕ್ಕಿಂತ ಪೂರ್ವದಲ್ಲಿದ್ದ ದೇವತೆಗಳು, ಉಷಾ, ಸೂರ್ಯ ಮೊದಲಾದ ದೇವತೆಗಳು ಭಾರತದಲ್ಲಿ ಉದಯಿಸಿದರು. ಈ ದೇವತೆಗಳಲ್ಲಿ ಕೆಲವರು ಅತಿ ಮುಖ್ಯರು, ಮತ್ತು ಇತರರು ಅಪ್ರಧಾನರು. ಪುರಾಣಯುಗದಲ್ಲಿ ಅತಿ ಪ್ರಧಾನರಾದ ವಿಷ್ಣು ಮತ್ತು ಶಿವ ಇವರುಗಳ ಹೆಸರು ವೇದಗಳಲ್ಲಿ ಕಂಡುಬಂದರೂ ಇವರು ಅತ್ಯಂತ ಅಪ್ರಧಾನ ದೇವತೆಗಳು. ವೇದಗಳಲ್ಲಿನ ಮುಖ್ಯ ದೇವತೆಗಳು ಇಂದ್ರ ಮತ್ತು ವರುಣ. ಈ ಇಬ್ಬರು ಲೋಕಪಾಲರೂ, ಸಮಸ್ತ ಜಗತ್ತಿನ ಧಾರಕರೆಂದು ಉಕ್ತವಾಗಿದೆ. ಶತ್ರುಗಳನ್ನು ಜಯಿಸಿ ತನ್ನ ಭಕ್ತರನ್ನು ಕಾಪಿಡಲು ಇಂದ್ರ ಅತ್ಯಂತ ಕುತೂಹಲಿ. ಇವನು ಶಕ್ತಿ ಮತ್ತು ಬಲದ ಪ್ರತಿಬಿಂಬ. ಆದರೆ ಅವನು ಅಹಂಕಾರಿ; ಅವನದು ವ್ಯರ್ಥ ಪೌರುಷ. ಸೋಮವೆಂಬ ಸುರೆ ಅವನಿಗೆ ಅತಿಪ್ರಿಯವಾದುದು. ಆರ್ಯವರ್ಣದ ರಕ್ಷಕನೆಂದೂ ಕೃಷ್ಣವರ್ಣದ ನಾಶಕನೆಂದೂ ಅವನ ವರ್ಣನೆ ಇರುವುದರಿಂದ ಅವನು ಆರ್ಯರ ದಿಗ್ವಿಜಯ ಸೂಚಕ ದೇವತೆಯು. ಇವನು ಮಳೆಯ ದೇವತೆಯೆಂದು

---

2 We have no right to suppose that we have even a hundredth part of the religious and popular poetry that existed during the vedic age.

--Six systems of Indian Philosophy. p. 41.

ಪ್ರೊ. ರಾಧಾಕೃಷ್ಣನ್ನರ ಅಭಿಪ್ರಾಯ. ವರುಣನ ಸ್ತೋತ್ರ ಇಂದ್ರನ ಸ್ತೋತ್ರದಷ್ಟು ಹೆಚ್ಚಾಗಿಲ್ಲದಿದ್ದರೂ, ಅವನ ವರ್ಣನೆ ಉದಾತ್ತವಾಗಿರುವುದರಿಂದ ಅವನು ಇಂದ್ರನಿಗಿಂತ ಮಿಗಿಲಾದ ದೇವತೆಯೆನ್ನಬಹುದು. ವರುಣನು ಸತ್ಯ ಮತ್ತು ಋತುಗಳ ಧಾರಕ, ಸಜ್ಜನರ ಪಾಲಕ, ಜಗತ್ತಿನ ನಿಯಮವು ಅವನ ಅಧೀನ. ಅವನು ಸದಾ ಸತ್ಯವನ್ನೆ ಕಾಯುತ್ತಿರುವನು. ಅವನು ಪಾಪಗಳನ್ನು ಕ್ಷಮಿಸುವನು. ಈ ವರುಣದೇವತೆ ಆರ್ಯರ ಆರಂಭ ಕಾಲದ ಆದರ್ಶವಾಗಿದ್ದು ಮುಂದೆ ಅಪ್ರಧಾನವಾದರೂ, ಆ ಆದರ್ಶ ಭಾರತೀಯರಲ್ಲಿ ಚಿರಾಸ್ಥಾಯಿಯಾಗಿ ಏಕೇಶ್ವರವಾದಕ್ಕೆ ಕಾರಣವಾಯಿತು.

ಋತವೆಂಬುದು ಮುಂದಿನ ಭಾರತೀಯ ಗ್ರಂಥಗಳಲ್ಲಿ ಕಾಣಬರುವ ಧರ್ಮವೆಂಬ ಅರ್ಥವನ್ನು ಒಳಗೊಂಡಿದೆ. ಬರುಬರುತ್ತಾ ಎಲ್ಲ ದೇವತೆಯೂ ಇದರ ಧಾರಕನೆಂದು ವರ್ಣನೆಯಿದೆ. ದೇವತೆಗಳಿಂದಲೇ ಈ ಜಗತ್ತು ಹುಟ್ಟಿದ್ದು. ಇದರ ಪಾಲಕರೂ ಅವರೇ, ಈ ಭೂಮಿ, ದೇವತೆಗಳ ಅವಾಸಸ್ಥಾನವಾದ ಸ್ವರ್ಗ, ಇವೆರಡಕ್ಕೆ ಮಧ್ಯದಲ್ಲಿರುವ ಅಂತರಿಕ್ಷ ಲೋಕ, ಈ ಮೂರು ಲೋಕಗಳಿಗೂ ಪ್ರತ್ಯೇಕ ದೇವತೆಗಳು ರಕ್ಷಕರು. ಮನುಷ್ಯ ದೇವತೆಗಳಿಗೆ ಸಂಪೂರ್ಣ ಅಧೀನ. ದೇವತೆಯನ್ನು ಅವನು 'ತಂದೆ', 'ಅಣ್ಣ' ಎಂದು ಸಂಬೋಧಿಸುವನು. ದೇವತೆಗಳು ಭಕ್ತರಲ್ಲಿ ಅನುಗ್ರಹ ಮಾಡುವರು. ಅವರು ಧರ್ಮಪ್ರಿಯರಾದ್ದರಿಂದ ಭಕ್ತನೂ ಸದಾಚಾರಿಯಾಗಿರಬೇಕು. ಈ ಜಗತ್ತು ಅಸತ್ಯವೆಂಬ ಭಾವನೆ ಮಂತ್ರಗಳಲ್ಲಿ ಕಂಡುಬರುವುದಿಲ್ಲ.[3]

ವೇದಕಾಲದ ಜನರಿಗೆ ಜಗತ್ತಿನಲ್ಲಿ ಆಸಕ್ತಿ ಹೆಚ್ಚು. ಈ ಜೀವನವನ್ನು ಸುಖಮಯವನ್ನಾಗಿ ಮಾಡಬೇಕೆಂದೂ ಧನ, ಧಾನ್ಯ, ಸಂತಾನ, ಸಂಪತ್ತನ್ನು ಕೊಡಬೇಕೆಂದೂ ಭಕ್ತನು ಪ್ರಾರ್ಥಿಸುವನು. ಜನ್ಮಾಂತರಗಳಲ್ಲಿ ನಂಬಿಕೆ ಇದ್ದಂತೆ ಕಂಡುಬರುವುದಿಲ್ಲ. ಆದರೆ ಈ ಚೇತನ ಅಮರವಾದುದೆಂದೂ, ಸತ್ತಮೇಲೂ ಈ ಚೇತನನಿರುವನೆಂದೂ ಅವರು ತಿಳಿದಿದ್ದರು. ಸಜ್ಜೀವಿಗಳು ದೇವತೆಗಳೊಂದಿಗೆ ಸುಖವಾಗಿರುತ್ತಾರೆಂದೂ, ದುಷ್ಟ ಜೀವಿಗಳು ಅಂಧಂತಮಸ್ಸನ್ನು ಹೊಂದುವರೆಂದು ಹೇಳುವರು.

(b) ಬ್ರಾಹ್ಮಣಗಳಲ್ಲಿನ ಧಾರ್ಮಿಕ ಭಾವನೆಗಳು

ಪ್ರಾಚೀನ ಋಕ್ಕುಗಳನ್ನೊಳಗೊಂಡ ಮಂತ್ರ ಭಾಗದಲ್ಲಿ ಈಬಗೆಯ ಭಾವನೆಗಳು ಕಂಡುಬಂದರೆ, ಕೆಲವು ಅರ್ವಾಚೀನ ಮಂತ್ರಗಳಲ್ಲೂ ಧಾರ್ಮಿಕ ಭಾವನೆಯು ಬೇರೆ ರೂಪವನ್ನು ತಳೆಯುತ್ತದೆ. ಬ್ರಾಹ್ಮಣ ಶಬ್ದವು ಬ್ರಹ್ಮ ಎಂಬುದರಿಂದ ನಿಷ್ಪನ್ನವಾದುದು. ಬ್ರಹ್ಮ ಎಂದರೆ ಪವಿತ್ರವಾದ 'ಶಬ್ದ', 'ಸ್ತೋತ್ರ' ಎಂದರ್ಥ. ಯಜ್ಞಕ್ಕೆ ಸಂಬಂಧಿಸಿದಂತೆ

---

3. There is no thought in these Mantras of the physical universe or any part of it being unreal.

--P.B. Essentials of Indian Philosophy.

ಋತ್ವಿಕ್ಕಿನ ಉದ್ಘೋಷ ಎಂದರ್ಥ, ಈ ಭಾಗಗಳಲ್ಲಿ ಯಜ್ಞಗಳ ವಿವರಗಳು ತುಂಬಿವೆ. ಇವುಗಳಲ್ಲಿ ಸಂಹಿತೆಗಳಲ್ಲಿದ್ದ ಭಾವನೆಗಳು–1. ಏಕೇಶ್ವರವಾದ, 2. ಏಕತತ್ತ್ವವಾದ ಮತ್ತು 3. ಯಜ್ಞಕಾಂಡ ಹಿಗೆ ಮೂರು ಭಾಗವಾಗಿ ಮುಂದುವರೆದಿದೆ. ಮಂತ್ರಗಳಲ್ಲೇ ಇದರ ಸೂಚನೆ ಕಂಡುಬರುವುದು. ಅನೇಕ ದೇವತೆಗಳಲ್ಲಿನ ನಂಬಿಕೆ ಬರುಬರುತ್ತಾ ಏಕೇಶ್ವರ ಭಾವನೆಯಲ್ಲಿ ಪರ್ಯವಸಾನ ಹೊಂದುವುದು. ಎಲ್ಲದೇವತೆಗಳಲ್ಲೂ ಕಾಣಬರುವ ಸಾದೃಶ್ಯವೇ ಇದಕ್ಕೆ ಮೊದಲ ಹೆಜ್ಜೆ. ಎಲ್ಲರೂ 'ದೇವ'ರು, ಶಕ್ತರು. ಭಕ್ತನಲ್ಲಿ ಅನುಗ್ರಹ ಮಾಡುವರು. ಎಲ್ಲರಲ್ಲಿಯ ಈ ಸಾಮಾನ್ಯ ಶಕ್ತಿಯನ್ನು ಒತ್ತಿಹೇಳುವ ಪ್ರವೃತ್ತಿ ಇದೆ. 'ಏಕಂ ಸದ್ವಿಪ್ರಾ ಬಹುಧಾವದಂತಿ, ಅಗ್ನಿಂ ಯಮಂ ಮಾತರಿಶ್ವಾನಮಾಹುಃ' ಎಂಬೀ ಮಂತ್ರದಲ್ಲಿ ಈ ಬಗೆಯ ಭಾವನೆ ತೋರುವುದು. ಈ ಬಗೆಯ ಸರ್ವೋತ್ತಮ ದೇವತೆಯ ಕಲ್ಪನೆ ಧಾರ್ಮಿಕ (Religious) ಎನ್ನುವುದಕ್ಕಿಂತಲೂ ತಾತ್ತ್ವಿಕ (Philosophical) ವೆನ್ನಬಹುದು. ವಿಶ್ವ–ಕರ್ಮ ದೇವತೆಯಲ್ಲಿ ಸರ್ವ ಶಕ್ತಿಯು ಮೂರ್ತೀಭವಿಸಿದೆ. ಹೀಗೆ ದೇವತೆಗಳ ಉತ್ಕೃಷ್ಟಗುಣಗಳಿಂದ ಸರ್ವೇಶ್ವರನನ್ನು ಕಾಣಬಯಸುವ ಯತ್ನ ಈ ಕಾಲದಲ್ಲಿ ಅವ್ಯಾಹತವಾಗಿ ಸಾಗಿದೆ. ಪ್ರಜಾಪತಿಯು ಇಂತಹ ದೇವತೆಯೇ. ಅವನು ಋತದಿಂದ ಉತ್ಪನ್ನನಾದವನೆಂದೂ ಅವನೇ ಜಗತ್ಪಾಲಕನೆಂದೂ ಹೇಳಿದೆ. "ಕಸ್ಮೈದೇವಾಯ ಹವಿಷಾ ವಿಧೇಮ" ಎಂಬ ಪ್ರಶ್ನೆಗೆ ಉತ್ತರವೇ ಈ ದೇವತೆ. ಈ ದೇವತೆಯೂ ಮುಂದೆ ಅಪ್ರಧಾನವಾಗಿ ಇದೂ ಚತುರ್ಮುಖ ಬ್ರಹ್ಮನಿಗೊಂದು ವಿಶೇಷಣವಾಗಿ ನಿಂತುಬಿಡುವುದು.

ಎರಡನೆಯ ಮುಖ ಏಕತತ್ವವಾದ. ಇದು ತಾತ್ತ್ವಿಕ ಬೆಳವಣಿಗೆ. ಈ ಜಗತ್ತು ಒಂದು ಮೂಲಕಾರಣದಿಂದ ಹೊರಹೊಮ್ಮಿತು. ಈ ಮೂಲ ಕಾರಣ 'ಅದಿತಿ', 'ಕಾಲ' ಎಂದು ನಾನಾ ಪ್ರಕಾರವಾಗಿ ಹೇಳಲ್ಪಟ್ಟಿದೆ. ಅತ್ಯಂತ ವಿಚಾರಪೂರಿತ ಮಂತ್ರವೊಂದರಲ್ಲಿ ಈ ಮೂಲಕಾರಣಕ್ಕೆ ಯಾವ ಹೆಸರೂ ಇಲ್ಲ. " ಅದೊಂದು" (ತದೇಕಂ) ಎಂಬ ಭಾವನಾಮ ಅರ್ಥಗರ್ಭಿತವಾಗಿದೆ. "ನಾಸದಾಸೀ ನ್ನೋಸದಾಸೀತ್" ಎಂಬ ಮಂತ್ರದಲ್ಲಿ ಏಕತತ್ತ್ವವಾದದ ಛಾಯೆಯು ಕಾಣುವುದು. ಈ ಮೂಲಶಕ್ತಿಯು ಯಾವ ಬಾಹ್ಯಶಕ್ತಿಯ ಅಪೇಕ್ಷೆಯೂ ಇಲ್ಲದೆ ತನ್ನಷ್ಟಕ್ಕೆ ತಾನೇ ವಿಕಸಿತವಾಗುವುದೆಂಬುದು ಗಮನಾರ್ಹವಾದ ವಿಷಯ. ಎಲ್ಲರೂ ಎಲ್ಲ ಪದಾರ್ಥಗಳೂ ಒಂದು ಮೂಲಶಕ್ತಿಯಲ್ಲೇ ಅಡಕವಾಗಿದೆಯೆಂಬ ಅದ್ವೈತಭಾವನೆ ಹೊರಸೂಸುವುದು. ಈ ಮೂಲಶಕ್ತಿ ಎಲ್ಲವನ್ನೂ ಆವರಿಸಿ ಎಲ್ಲಕ್ಕೂ ಮಿಕ್ಕಿದೆಯೆಂದು "ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಂ" ಎಂಬ ಪುರುಷಸೂಕ್ತ ಮಂತ್ರದಲ್ಲಿ ಹೇಳಿದೆ.

ಕೊನೆಯದಾಗಿ ಬೆಳೆದ ಭಾವನೆಯು ಯಜ್ಞಭಾಗವು. ಮೊಟ್ಟ–ಮೊದಲಿಗೆ ಧನ, ಧಾನ್ಯ, ಪಶು, ಸಂತಾನ, ಮೊದಲಾದ ಐಹಿಕ ಆಶೆಗಳಿಂದ ಕೂಡಿದ ಪ್ರಾರ್ಥನೆಗಳು

ಬರುಬರುತ್ತಾ ಕರ್ಮಜಟಿಲವಾಗುತ್ತಾ ಬಂದು ಅದರ ಸರ್ವಾಧಿಕಾರವೂ ಪುರೋಹಿತರಾದ ಬ್ರಾಹ್ಮಣರ ಹಸ್ತಗತವಾಯಿತು. ವರ್ಷಾನುಗಟ್ಟಳೆ ಅನೇಕ ಪುರೋಹಿತರು ಸೇರಿ ಒಂದೊಂದು ಯಜ್ಞವನ್ನು ನಡೆಸುತ್ತಿದ್ದರು. ಈ ಯಜ್ಞಗಳಲ್ಲಿ ಋತ್ವಿಕ್ಕರು ಪ್ರಾಚೀನ ಮಂತ್ರಗಳ ಉಪಯೋಗವನ್ನು ಮಾಡುತ್ತಿದ್ದರು. ಇದರಿಂದ ಆ ಮಂತ್ರಗಳ ಹಿನ್ನಲೆಯೇ ಬದಲಾಯಿತು. ಮನುಷ್ಯರು ಹಿಂದಿನಂತೆ ದೇವತಾನುಗ್ರಹಾಕಾಂಕ್ಷಿಗಳಾಗಿ ಕರ್ಮಮಾಡುವ ಅವಶ್ಯಕತೆ ಇರಲಿಲ್ಲ. ಈ ಯಜ್ಞಾಚರಣೆಯಿಂದ ದೇವತೆಗಳನ್ನು ಬಲಾತ್ಕಾರವಾಗಿ ಒಲಿಸುವ ಯತ್ನ ಕಂಡುಬರುವುದು. ಆದ್ದರಿಂದ ವೇದಮಂತ್ರಗಳಿಗೆ ಅಮೂಲ್ಯ ಶಕ್ತಿಯಿದೆ ಎಂಬ ಭಾವನೆ ಬೆಳೆಯಲು ಅವಕಾಶವಾಯಿತು. ಇದರಿಂದಲೇ ಯಕ್ಷಿಣೀ, ಇಂದ್ರಜಾಲ ಮೊದಲಾದುವು ಹುಟ್ಟಿಕೊಂಡವೆಂದು ಕೆಲ ಪಂಡಿತರ ಅಭಿಪ್ರಾಯ. ಅದು ಕೀಳು ವರ್ಗದ ಜನರಲ್ಲಿ ಬೆಳೆಯಿತೇನೋ ನಿಜ. ಅಥರ್ವವೇದದಲ್ಲಿ ಅದಕ್ಕೆ ಸಂಬಂಧಪಟ್ಟ ಕೆಲವು ಮಂತ್ರಗಳಿವೆ. ಆದರೆ ಬ್ರಾಹ್ಮಣ, ಕ್ಷತ್ರಿಯ ಮುಂತಾದ ಉತ್ತಮ ವರ್ಣಗಳಲ್ಲಿ ಅಂತಹ ಭಾವನೆ ಯಾವಾಗಲೂ ಬೆಳೆಯಲಿಲ್ಲ. ಅಂತೂ ಯಜ್ಞಕಾಂಡದ ಪ್ರತ್ಯಕ್ಷರವನ್ನೂ ಯಥಾವಿಧಿ ಅನುಸರಿಸುವುದೇ ಮುಖ್ಯವೆಂದು ಈ ಭಾಗದ ತಾತ್ಪರ್ಯವೆನ್ನಲೇನೂ ಅಡ್ಡಿಯಿಲ್ಲ.

(C) ಉಪನಿಷತ್ತಿನ ಉಪದೇಶಗಳು

ಉಪನಿಷತ್ತೆಂದರೆ 'ರಹಸ್ಯವಿದ್ಯೆ'ಯೆಂದರ್ಥ. ಇದು ಕೆಲವರಿಗೆ ಮಾತ್ರ ಉಪದೇಶಿಸಲ್ಪಡಬೇಕೆಂಬ ನಿಯಮ ಉಂಟು. ಆದ್ದರಿಂದ ಇವು ಸರ್ವಾಧಿಕಾರಿಕವಲ್ಲ. ಉಪನಿಷತ್ತುಗಳು ಸಂಖ್ಯೆಯಲ್ಲಿ ಹೆಚ್ಚಾಗಿದ್ದರೂ, ಹತ್ತು ಹದಿನೈದು ಉಪನಿಷತ್ತುಗಳು ಮಾತ್ರ ಮುಖ್ಯವಾದವು. ಉಳಿದವು ಅಷ್ಟು ಪ್ರಾಚೀನವೂ ಅಲ್ಲ, ಅಷ್ಟು ಮುಖ್ಯವೂ ಅಲ್ಲ. ಉಪನಿಷತ್ತುಗಳು ವೇದವಿದ್ಯೆಯ ಫಲರೂಪಗಳು. ಅವುಗಳಲ್ಲಿ ಗದ್ಯವೂ, ಪದ್ಯವೂ ಇವೆ. ಸಾಮಾನ್ಯ ಓದುಗರಿಗೂ ಇವುಗಳ ಸ್ಥೂಲಾರ್ಥವಾಗುವುದು. ಅತ್ಯಂತ ವಿಸ್ತೃತವಾದ ಯಜ್ಞಪರವಾದ ಬ್ರಾಹ್ಮಣಗಳಿಗೆ ಇವು ನೇರ ವಿರೋಧಿಯೆಂದು ಹೇಳಬಹುದು. ಇವುಗಳಲ್ಲಿ ಅನೇಕ ಕಡೆ ಯಜ್ಞಗಳ ವಿಷಯಗಳಲ್ಲಿ ಅವಜ್ಞೆಯು ಕಂಡುಬರುವುದು. ತತ್ತ್ವಜ್ಞಾನಕ್ಕಿರುವ ಬೆಲೆ ಯಜ್ಞಯಾಗಾದಿಗಳಿಗಿಲ್ಲ, ದೇವತೆಗಳೂ ಇಲ್ಲಿ ಹಿಂದಿನಂತೆ ಉಚ್ಚಸ್ಥಾನೀಯರಾಗಿಲ್ಲ. ಮನುಷ್ಯರಂತೆ ಅವರೂ ದೋಷಗ್ರಸ್ತರು. ಆದರೂ ಒಟ್ಟಿನಲ್ಲಿ ಇವುಗಳಲ್ಲಿ ಅಲ್ಲಲ್ಲಿ ಯಜ್ಞಗಳ ಪ್ರಶಂಸೆಯೂ ಕಂಡು ಬರುವುದರಿಂದ ಇವು ವೇದಗಳ ಅಂತ್ಯಭಾಗ ಮಾತ್ರವಲ್ಲದೆ ಸಮಗ್ರ ವೇದದ ಸಾರವನ್ನೊಳಗೊಂಡ ಗ್ರಂಥಗಳೆಂದೇ ಹೇಳಬಹುದು. ಇದೇ ಭಾರತದ ವೈಶಿಷ್ಟ್ಯ. ಹೊಸ ಹೆಜ್ಜೆಯನಿಟ್ಟಮೇಲೆ ಹಳೆಯದು ತಿರಸ್ಕೃತವಾಗುವುದರ ಬದಲು ಹೊಸದರೊಂದಿಗೆ ಬೆರೆತುಹೋಗುವುದು.

ಉಪನಿಷತ್ತುಗಳ ಬೋಧನೆಯ ತತ್ತ್ವಾಂಶವೇನೆಂಬುದನ್ನು ನಿರ್ಣಯಿಸುವುದು

ಬಹಳ ಕಷ್ಟ. ಏಕೆಂದರೆ ಮುಂದೆ ಹುಟ್ಟಿದ ಬೇರೆಬೇರೆ ವೇದಾಂತಗಳೆಲ್ಲ ಉಪನಿಷತ್ತುಗಳ ಆಧಾರದ ಮೇಲೆ ಹುಟ್ಟಿದವೆಂದು ಹೇಳಿಕೊಳ್ಳುವುವು. ಆದರೆ ಉಪನಿಷತ್ತುಗಳಲ್ಲಿ ಅದ್ವೈತವೇ ಮುಖ್ಯವಾಗಿ ತೋರುವ ಅರ್ಥವೆಂದು ಧಾರಾಳವಾಗಿ ಹೇಳಬಹುದು. ಅಂದರೆ ಅಂತ್ಯ ತತ್ತ್ವವು ಒಂದೇ ಎಂದು ಇವುಗಳ ತಾತ್ಪರ್ಯ. ಮೇಲೆ ಕೆಳಗೆ, ಹಿಂದೆ ಮುಂದೆ, ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಎಲ್ಲಡೆಯಲ್ಲೂ ಬ್ರಹ್ಮನೇ ಎಂದು ಅವುಗಳಲ್ಲಿ ಹೇಳಿದೆ. [4]

ಈ ಸರ್ವಾತ್ಮಕ ತತ್ತ್ವವು ಚಿತ್, ಉಳಿದೆಲ್ಲವೂ ಇದರಲ್ಲಿ ಅಡಗಿದ್ದು ಇದರಿಂದ ಹೊರಸೂಸುವುದೆಂದು ಹೇಳಿರುವುದರಿಂದ ಇದರಲ್ಲಿ ವಿಜ್ಞಾನವಾದವೇ ಉಕ್ತವಾಗಿದೆಯೆಂದು ಹೇಳಬಹುದು. ಸ್ಥಾವರಜಂಗಮಾತ್ಮಕವಾದುದೆಲ್ಲ ಪ್ರಜ್ಞಾನದಲ್ಲಿ ಪ್ರತಿಷ್ಠವಾದುದು.ಇದೇ ಲೋಕಕ್ಕೆ ಆಧಾರ. ಈ ಪ್ರಜ್ಞಾನವೇ ಬ್ರಹ್ಮ ಎಂಬುದು ಐತರೇಯೋಪನಿಷತ್ತಿನ ವಾಕ್ಯ.[5]

ಇದರಿಂದ ಬಹುತತ್ತ್ವವಾದವಾಗಲೀ, ಸತ್ಕಾರ್ಯತ್ವವಾದವಾಗಲಿ ಉಪನಿಷತ್ತುಗಳಲ್ಲಿ ಕಂಡುಬರುವುದಿಲ್ಲವೆಂದಲ್ಲ. ಇವುಗಳ ಸ್ಪಷ್ಟೀಕರಣ ಉಪನಿಷತ್ತುಗಳಲ್ಲಿಲ್ಲ. ಸಂಹಿತೆಗಳಿಗೆ ಹೊಂದುಕೊಂಡ ಕೆಲವು ಪುರಾತನ ವಾಕ್ಯಗಳಲ್ಲಿ ಇವು ಅಲ್ಲೊಂದು ಇಲ್ಲೊಂದು ಕಾಣುವುವು. ಈ ರೀತಿ ಬೇರೆ ಬೇರೆ ಭಾಗಮಾಡುವುದು ಸನಾತನ ಸಂಪ್ರದಾಯಕ್ಕೆ ವಿರೋಧವಾದದ್ದು. ಸಂಪ್ರದಾಯ ರೀತ್ಯಾ ಸಮಗ್ರ ವೇದವು ಒಟ್ಟಿಗೆ ಹೊರಹೊಮ್ಮಿದವು. ಅದ್ದರಿಂದ ಅವುಗಳಲ್ಲಿ ಅರ್ಥವಿರೋಧವಿಲ್ಲ. ಆದರೆ ಈ ಅಭಿಪ್ರಾಯ ಶಾಸ್ತ್ರೀಯವಲ್ಲ. ಸಮಗ್ರ ವೈದಿಕ ವಾಙ್ಮಯವೆಲ್ಲ ಅನೇಕ ಶತಮಾನಗಳು ಬೆಳೆದು ಬಂದದ್ದರಿಂದ ಕಾಲದಿಂದ ಬೇರ್ಪಟ್ಟ ಆ ಗ್ರಂಥಗಳಲ್ಲಿ ಏಕಮುಖವಾದ ವಿಚಾರಧಾರೆ ಇದೆ ಎನ್ನುವುದು ಬಹಳ ಸೋಜಿಗದ ಸಂಗತಿಯಾಗುವುದು.

ಹಾಗಾದರೆ ಉಪನಿಷದುಕ್ತವಾದ ಸಮನ್ವಯ ತತ್ತ್ವದ ಬಗೆ ಏನು? ಈ ಪ್ರಶ್ನೆಯ ಉತ್ತರಕ್ಕೆ ನಾವು ಕೆಲವು ಮಂತ್ರವಾಕ್ಯಗಳನ್ನು ಗಮನಿಸಬೇಕು. ನಾಸದೀಯ ಸೂಕ್ತಾದಿಗಳಲ್ಲಿ "ತದೇಕಂ" ಎಂಬ ಸರ್ವನಾಮದಿಂದ ಮೂಲತತ್ತ್ವದ ವರ್ಣನೆ ಇದ್ದುದನ್ನು ನೋಡಿದರೆ ಪ್ರಕೃತಿ, ಮನುಷ್ಯ ಮತ್ತು ದೇವತೆಗಳು, ಇವೆಲ್ಲರ ಮೂಲತತ್ತ್ವವೊಂದನ್ನು ಕಾಣುವ ಹಂಬಲ ಈ ಋಕ್ಕುಗಳಲ್ಲಿ ಕಂಡುಬರುವುದು. ಇಂತಹುದೇ ಕಲ್ಪನೆಯು ಬ್ರಹ್ಮ

4 ಸ ಏವಾಧಸ್ತಾತ್ ಸ ಉಪರಿಷ್ಟಾತ್ ಸ ಪಶ್ಚಾತ್ ಸ ಪುರಸ್ತಾತ್ ।
ಸ ದಕ್ಷಿಣತಃ ಸ ಉತ್ತರತಃ ಸ ಏವೇದಂ ಸರ್ವಮ್ ।

—ಛಾಂದೋಗ್ಯ ೭–೨೫–೧

5 ಸರ್ವಂ ತತ್ಪ್ರಜ್ಞಾನೇತ್ರಂ ಪ್ರಜ್ಞಾನೇ ಪ್ರತಿಷ್ಠಿತಂ ಪ್ರಜ್ಞಾನೇತ್ರೋ ಲೋಕಃ
ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ

—ಐತರೇಯ III. 3

ಪದದಲ್ಲಿಯೂ ಕಾಣುವುದು. ದ್ಯಾವಾ ಪೃಥಿವಿಯನ್ನು ರಚಿಸಲು ಉಪಯೋಗಿಸಿದ ಮರವಾವುದು ಎಂಬ ಪ್ರಶ್ನೆಗೆ 'ಬ್ರಹ್ಮ'ನೆಂಬ ಉತ್ತರ ಬ್ರಾಹ್ಮಣಗಳಲ್ಲಿ ದೊರೆಯುವುದು. ಇದೇ ಕಲ್ಪನೆಯೇ ಉಪನಿಷತ್ತುಗಳಲ್ಲಿ ಮೈದೋರುವುದು. ಇದು ಒಂದು ಮುಖ.

ಉಪನಿಷತ್ತಿನ ಏಕತತ್ತ್ವವಾದದ ಇನ್ನೊಂದು ಮುಖವೆಂದರೆ ಜಗತ್ತಿನ ಬಾಹ್ಯಶಕ್ತಿಯ ವಿಚಾರದ ಜೊತೆಗೆ ಇದರ ಪ್ರಾಣಶಕ್ತಿಯನ್ನು ವಿಚಾರ ಮಾಡುವುದು. ಇದರ ಸಂಬಂಧವಾದ ವಿಚಾರಗಳೆಲ್ಲಾ ವೈದಿಕ ವಾಕ್ಯಗಳಲ್ಲಿ ನಡೆದಿರುವುದು. ಪ್ರಾಣ, ಇಂದ್ರಿಯ ಮೊದಲಾದವುಗಳ ವರ್ಣನೆಯೂ ಬಂದಿರುವುದು. ಆತ್ಮ ಎಂಬುದೇ ಈ ಪ್ರಾಣಶಕ್ತಿ ಎಂಬ ಕಲ್ಪನೆ ಆಗಲೇ ಬೆಳೆದಿರುವುದು. ಇಂದ್ರಿಯಾದಿಗಳೆಲ್ಲಾ ಅನಾತ್ಮ. ಆತ್ಮವು ಅಜ್ಞೇಯ, ಅದೃಷ್ಟ ಮತ್ತು ಅಚಿಂತ್ಯ. ಆದ್ದರಿಂದ ಜಗತ್ತಿನ ಬಾಹ್ಯ ಸಮಗ್ರ ಶಕ್ತಿ ಬ್ರಹ್ಮನಾದರೆ, ಜಗತ್ತಿನ ಅಂತರಶಕ್ತಿಯೇ ಆತ್ಮ. ಈ ಎರಡು ಪದಗಳು ಉಪನಿಷತ್ತುಗಳಲ್ಲಿ ಪ್ರತ್ಯೇಕವಾಗಿ ಉಪಯುಕ್ತವಾಗಿರುವುದಲ್ಲದೆ, ಎರಡರ ಏಕತ್ರ ಪ್ರಯೋಗವೂ ಕಂಡುಬರುವುದು. ಮನುಷ್ಯರ ದೇಹ ಮತ್ತು ಜೀವ ಇವೆರಡರ ಸಂಬಂಧದಂತೆ ಆತ್ಮ ಮತ್ತು ಬ್ರಹ್ಮ ಇವರ ಸಂಬಂಧವೆಂದು ವೇದಗಳಲ್ಲಿನ ಉಕ್ತಿ. ಈ ಎರಡು ಭಾವನೆಗಳು ಬರುಬರುತ್ತಾ ಬೆರೆತುಹೋಗಿದೆ. ಇವೆರಡರ ಸುಂದರ ಸಮನ್ವಯವೇ ಉಪನಿಷತ್ತಿನ ಹಾರ್ದ್ರ. "ತತ್ವಮಸಿ, ಅಹಂಬ್ರಹ್ಮಾಸ್ಮಿ" ಮೊದಲಾದ ವಾಕ್ಯಗಳ ಅಭಿಪ್ರಾಯವೇ ಇದು. ಇದೇ ಭಾರತದ ತತ್ತ್ವಾವಿಷ್ಕರಣೆಯ ಚರಮಸೀಮೆ. ಇವೆರಡರ ಐಕ್ಯ ಪ್ರತಿಪಾದನೆಯ ರಹಸ್ಯ ಬಹಳ ಗಂಭೀರವಾದುದು. ಜಗತ್ತಿನ ಬಾಹ್ಯ ಶಕ್ತಿಯಾದ ಬ್ರಹ್ಮತತ್ತ್ವವು ಚಿದಾತ್ಮಕವಾಗಿರಬೇಕಾದ ಅವಶ್ಯಕತೆಯೂ ಇಲ್ಲ. ಅದೇ ಜಗತ್ತಿನ ಮೂಲಶಕ್ತಿಯಾಗಿರಬೇಕಾದ ಅವಶ್ಯಕತೆಯೂ ಇಲ್ಲ. ಅಸತ್ತಿನಿಂದ ಜಗತ್ತಿನ ಉತ್ಪತ್ತಿಯೆಂಬ ಭಾವನೆ ವೈದಿಕ ವಾಕ್ಯಗಳಲ್ಲೇ ಕಾಣುವುದು. ಈ ತತ್ತ್ವದ ಅಸ್ತಿತ್ವವನ್ನು ಸ್ಥಾಪಿಸಿ, ಇದು ಚಿದಾತ್ಮಕವೆನ್ನುವ ತಾತ್ಪರ್ಯವೇ ಬ್ರಹ್ಮ--ಆತ್ಮಗಳ ಐಕ್ಯ ಪ್ರತಿಪಾದನೆಯಲ್ಲಿ ಅಡಗಿದೆ. ಏಕೆಂದರೆ ನಮ್ಮ ಆತ್ಮವು ಚಿದಾತ್ಮಕವೆಂಬುದು ಅಬೋಧ್ಯ ಅನುಭವಕ್ಕೆ ಗೋಚರವಾಗುವುದು. ಇದನ್ನು ಯಾವ ಹೈತುಕವಾದವೂ ಅಲ್ಲಗಳೆಯಲಾರದು. ಇದೇ ಬ್ರಹ್ಮನೆಂಬ ನಿರ್ಣಯ ಜಗತ್ತಿನ ಸಮಸ್ಯೆಯನ್ನು ನಿವಾರಿಸುವುದು. ಬರಿಯ ಆತ್ಮತತ್ತ್ವವೂ ಈ ಸಮಸ್ಯೆಯನ್ನು ಬಿಡಿಸಲಾರದು. ಏಕೆಂದರೆ ಇದು ಪರಿಮಿತವಾದದು. ಜಡಪದಾರ್ಥಗಳಿಂದ ಪರಿಚ್ಛಿನ್ನವಾದುದು. ಆದ್ದರಿಂದ ಬ್ರಹ್ಮ--ಆತ್ಮರ ಐಕ್ಯ ಕಲ್ಪನೆಯೇ ಎಲ್ಲಾ ಸಂದೇಹಗಳನ್ನೂ ಪರಿಹರಿಸುವುದು. ಇದೇ ಉಪನಿಷತ್ತುಗಳಲ್ಲಿ ಉಪದಿಷ್ಟವಾದ ಅದ್ವೈತದ ಅಂತರಾರ್ಥ. ಈ ಎಲ್ಲ ಅರ್ಥವೂ ಸಚ್ಚಿದಾನಂದ ಎಂಬ ವಾಕ್ಯದಲ್ಲಿ ಅಡಕವಾಗಿರುವುದು. ಸತ್ ಎಂಬುದು ಇದರ ಅಸ್ತಿತ್ವವನ್ನೂ, ಚಿತ್ ಎಂಬುದು ಇದರ ಚಿದಂಶವನ್ನೂ, ಆನಂದ ಎಂಬುದು ಶಾಂತ ಎಂದರೆ ಸರ್ವಾಲಿಂಗಿತ ಎಂಬ ವಿಶಾಲಾರ್ಥ ಸೂಚಕವಾದ್ದರಿಂದ ಅಭೇದತತ್ತ್ವವನ್ನೂ ಸೂಚಿಸುವುದು.

ಈ ಏಕಮೇವ ತತ್ತ್ವಕ್ಕೂ ಪರಿದೃಶ್ಯಮಾನವವಾದ ಜಗತ್ತು ಮತ್ತು ಚೇತನರುಗಳಿಗೂ ಇರುವ ಸಂಬಂಧವನ್ನು ನೋಡಬೇಕಾದುದು ಮುಂದಿನ ವಿಷಯ. ಇದೆಲ್ಲ ಬ್ರಹ್ಮನ ಅಭಾಸವೆಂದು ಹೇಳುವ ವಾದ ಒಂದು. ಇದು ಸತ್ಯವಾದರೂ ಬ್ರಹ್ಮನಿಗಿಂತ ಭಿನ್ನವಾದುದಲ್ಲವೆಂಬ ವಾದ ಇನ್ನೊಂದು. ಶಂಕರಾಚಾರ್ಯರು ಮೊದಲವಾದವನ್ನು ಎತ್ತಿ ಹಿಡಿದರು. ಎರಡನೆಯ ವಾದವನ್ನು ಎತ್ತಿ ಹಿಡಿದವರು ಭರ್ತೃಪ್ರಪಂಚರು. ಪಂಚಭೂತ, ಪಂಚತನ್ಮಾತ್ರವನ್ನೊಳಗೊಂಡ ಈ ಪ್ರಪಂಚಕ್ಕೆಲ್ಲ ಬ್ರಹ್ಮನೇ ಮೂಲ, ಈ ಪಂಚಭೂತ, ಪಂಚತನ್ಮಾತ್ರಗಳಿಂದಲೇ ಜಗತ್ತಿನ ಭೇದಗಳೆಲ್ಲಾ ಸತ್ಯವಾದದ್ದು. ಜೀವನವೇ ಭಿನ್ನತೆಯ ಮೇಲೆ ನಿಂತಿದೆ. ಈ ಭೇದವಿರುವುದರಿಂದ ಇದರ ಐಕ್ಯಮತ್ಯವನ್ನುಂಟುಮಾಡಬೇಕೆಂದು ಎಲ್ಲಾ ರಾಜಕೀಯ, ಸಾಮಾಜಿಕ ಸಂಸ್ಥೆಗಳು ಹೆಣಗುವವು. ಈ ಭೇದಗಳು ಆತ್ಯಂತಿಕ ಸತ್ಯವಲ್ಲ. ಇದೆಲ್ಲಾ ಆ ಬ್ರಹ್ಮನ ನಾಮರೂಪಾತ್ಮಕವಾದುದು. ಈ ಭೇದವು ಬ್ರಹ್ಮನ ನಿಜತತ್ತ್ವ ತಿಳಿಯದ ಅವಿದ್ಯೆಯಿಂದ ಉಂಟಾದುದು. ಈ ಅವಿದ್ಯೆಯೇ ಮಾಯೆ ಎನಿಸುವುದು. ಇದು ಅಜ್ಞಾನಕ್ಕೂ ವಿಪರೀತ ಜ್ಞಾನಕ್ಕೂ ಕಾರಣವಾಗುವುದು. ಜ್ಞಾನದಿಂದ ಈ ಅಜ್ಞಾನವನ್ನು ತೊಡೆದುಹಾಕಿದಾಗಲೇ ಮೋಕ್ಷವಾಗುವುದು. ಜೀವ ಬ್ರಹ್ಮೈಕ್ಯವನ್ನು ಹೊಂದುವುದು.

ಅಜ್ಞಾನನಾಶಕವಾದ ಜ್ಞಾನವು ಬರಿಯ ತಿಳುವಳಿಕೆಯಿಂದ ಉಂಟಾಗಲಾರದು. ಇದು ಅನುಭವಗೋಚರವಾಗಬೇಕು. ಇದಕ್ಕೆ ಸಮೀಚೀನವಾದ ಶೀಲ, ಅನುಷ್ಠಾನವೂ ಅವಶ್ಯಕ. ಇದೇ ಧರ್ಮ ಮತ್ತು ತತ್ತ್ವಗಳ ಸಮನ್ವಯ. ಇದಕ್ಕೆ ಸರಿಯಾದ ಸಾಧನೆ ಅವಶ್ಯಕ. ಗುರುವು ಸಾಧನೆಗೆ ಮುಖ್ಯ. ಗುರುಮುಖದಿಂದ ಉಪದಿಷ್ಟವಾದ ತತ್ತ್ವವನ್ನು ಸಾಧಕ ಮೊದಲು ಶ್ರವಣಮಾಡಬೇಕು. ಆಮೇಲೆ ಅದನ್ನು ಮನನ ಮಾಡಬೇಕು. ಅನಂತರ ಧ್ಯಾನಮಾಡಬೇಕು. ಈ ಧ್ಯಾನಕ್ಕೇ ಯೋಗವೆಂದು ಹೆಸರು. ಈ ಯೋಗದಿಂದಲೇ ಸಮೀಚೀನ ತತ್ತ್ವದ ಸಾಕ್ಷಾತ್ಕಾರವಾಗುವುದು. ಈ ತತ್ತ್ವದಲ್ಲಿ ದೀಕ್ಷೆ ಮತ್ತು ಪ್ರಾಪಂಚಿಕ ಸುಖದಲ್ಲಿ ವೈರಾಗ್ಯ ಇವು ಅವಶ್ಯಕ. ಇಂದ್ರಿಯನಿಗ್ರಹಾದಿಗಳೂ ಅವಶ್ಯಕ. ಹೀಗೆ ವೈರಾಗ್ಯಾದಿಗಳಿಂದ ಕೂಡಿದ ಪಾರಮಾರ್ಥಿಕ ಜೀವನಕ್ಕೆ ಸನ್ಯಾಸವೆಂದು ಹೆಸರು. ಪ್ರವೃತ್ತಿ ಕರ್ಮದ ಬದಲು ಸನ್ಯಾಸಕ್ಕೆ ಕಾರಣವಾದ ನಿವೃತ್ತಿ ಕರ್ಮವೇ ಬ್ರಹ್ಮಜ್ಞಾನಕ್ಕೆ ಮೊದಲ ಹೆಜ್ಜೆ. ಇದರಿಂದಲೇ ಜೀವ ಜೀವನ್ಮುಕ್ತನಾಗುವನು. ವಿದೇಹ ಮುಕ್ತಿಯೇ ಆತ್ಯಂತಿಕ ಮುಕ್ತಿಯು.

✣ ✣ ✣

(d) ಮತಗಳ ಉದಯ

ಈ ಬಗೆಯ ವೈದಿಕ ತತ್ತ್ವಗಳಿಂದಲೇ ಮುಂದೆ ಭಾರತದಲ್ಲಿ ವಿವಿಧ ದರ್ಶನಗಳ ಉದಯವಾದರೂ ವೈದಿಕಯುಗ ಮುಗಿದ ಎಷ್ಟೋ ಕಾಲವಾದಮೇಲೆ ಅವುಗಳು ಹುಟ್ಟಿದವು. ಸಾಮಾನ್ಯವಾಗಿ ಇವೆರಡಕ್ಕೆ ಸುಮಾರು ಎರಡು ಶತಮಾನಗಳ ಅಂತರವಿರಬಹುದೆಂದು ಪಂಡಿತರು ಅಭಿಪ್ರಾಯಪಡುವರು. ಈ ಎರಡು ಶತಮಾನಗಳ ಅಂತರದಲ್ಲಿ ಭಾರತದ ಜ್ಞಾನರಥ ಬಹಳ ಮುನ್ನಡೆಯಿತು. ಇದು ಬರಿಯ ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಇತರ ಭಾಗಗಳಲ್ಲೂ ಅಂದರೆ ಗ್ರೀಸ್ ಮೊದಲಾದ ದೇಶಗಳಲ್ಲೂ ಆಗ ಬೌದ್ಧಿಕ ಸಾಧನೆಗಳು ಉನ್ನತಮಟ್ಟವನ್ನು ಮುಟ್ಟಿದವು. ಈ ಕಾಲದಲ್ಲಿ ಭಾರತದಲ್ಲಿ ಆದ ಜ್ಞಾನ ಬೆಳವಣಿಗೆಯೇ ಮುಂದೆ ದರ್ಶನಗಳ ಉದಯಕ್ಕೆ ಕಾರಣವಾಯಿತು. ಕಲ್ಪ ಸೂತ್ರಗಳು, ಮಹಾಭಾರತ ಮತ್ತು ಉಪನಿಷತ್ತುಗಳಲ್ಲಿ ಕೆಲವು ಈ ಕಾಲದ ಗ್ರಂಥಗಳು.

ವೈದಿಕ ಯುಗದಲ್ಲಿ ಆರಂಭವಾದ ಏಕೇಶ್ವರವಾದವು ಅನಂತರವೂ ಬೆಳೆಯಿತು. ಪ್ರಜಾಪತಿಯೇ ಪ್ರಧಾನದೇವತೆಯೆಂದು ಕೆಲವು ಮಂತ್ರಗಳಲ್ಲಿದ್ದುದು ಮುಂದೆ ಚತುರ್ಮುಖ ಬ್ರಹ್ಮನೇ ಪ್ರಜಾಪತಿಯೆಂಬ ಭಾವನೆ ಬೆಳೆಯಿತು. ಮಹಾಭಾರತದಲ್ಲಿ ಕೆಲವು ಕಡೆ ಚತುರ್ಮುಖ ಬ್ರಹ್ಮ ಅಥವಾ ಹಿರಣ್ಯಗರ್ಭನೇ ಸರ್ವೋತ್ತಮ ದೇವತೆ ಎಂಬ ಭಾವನೆ ಇದೆ. ಆದರೆ ಇದು ಪುಷ್ಟವಾಗಿ ಬೆಳೆಯಲಿಲ್ಲ. ಶೈವ ಮತ್ತು ವೈಷ್ಣವ ಮತಗಳು ಬೆಳೆದದ್ದರಿಂದ ಇದು ಬೆಳಕಿಗೆ ಬರಲಿಲ್ಲ. ಶಿವ ಮತ್ತು ವಿಷ್ಣು ಇವರಿಬ್ಬರೂ ವೇದಗಳಲ್ಲಿ ಆರಾಧ್ಯವಾದ ದೇವತೆಗಳಾದರೂ ಅವರ ಸ್ಥಾನ ವೇದಗಳಲ್ಲಿ ಗೌಣ. ಆದರೆ ಬರುಬರುತ್ತಾ ವೇದಗಳಲ್ಲಿ ವರುಣನಿಗೆ ಇದ್ದ ಸ್ಥಾನ ಇವರಿಗೆ ಲಭಿಸಿ ಈ ಎರಡು ಮತಗಳೂ ಇಂದಿಗೂ ಪ್ರಧಾನವಾಗಿ ಉಳಿದಿವೆ. ಇವರಿಬ್ಬರಿಗೂ ದೇವದೇವ, ದೇವಾಧಿದೇವ ಎಂಬ ಹೆಸರುಗಳು ರೂಢವಾಗಿವೆ.

ವೇದಗಳಲ್ಲಿ ರುದ್ರನು ಬಿರುಗಾಳಿ ಮತ್ತು ಮಿಂಚಿಗೆ ಅಧಿದೇವತೆ. ಮುಂದೆ ಶಿವನಿಗೆ ಬಂದ ವಿಶೇಷಣಗಳೆಷ್ಟೋ ವೇದದಲ್ಲೇ ಕಾಣುವುದು. ಪರ್ವತದಲ್ಲಿ ಅವನ ವಾಸ. ಜಟಾಜೂಟ, ಚರ್ಮಾಂಬರ ಇವು ವೇದಗಳಲ್ಲಿ ವರ್ಣಿತವಾಗಿವೆ. ಇವನ ಭೀಷಣ ಸ್ವಭಾವದಿಂದ ಪ್ರಸನ್ನತೆಯನ್ನು ಹೊರಸೂಸಲೆಂದೇ ಇವನಿಗೆ ಶಿವನೆಂಬ ವಿಶೇಷಣವಿದೆ. ಶ್ವೇತಾಶ್ವತರ ಉಪನಿಷತ್ತಿನಲ್ಲಿ ಇವನೇ ಪರಬ್ರಹ್ಮನೆಂದೂ, ಇವನಲ್ಲಿ ಭಕ್ತಿ ಮಾಡಿದರೆ ಪ್ರಸನ್ನನಾಗುವನೆಂದೂ ಹೇಳಿದೆ. ಮಹಾಭಾರತದಲ್ಲಿ ಕೆಲವು ಕಡೆ ಶಿವನು ಸರ್ವೋತ್ತಮನೆಂಬ ವರ್ಣನೆ ಇದೆ. ಶಿವನ ಶ್ರೇಷ್ಠತೆಯು ಮೊಹಂಜದಾರೋ ಅವಶೇಷಗಳಲ್ಲಿ ಕಾಣುವುದು. ಆದರೆ ಇದಕ್ಕೂ ವೈದಿಕ ಶೈವಮತಕ್ಕೂ ಯಾವ ಸಂಬಂಧವೆಂಬುದು ತಿಳಿಯದ ವಿಷಯ. ಅಂತೂ ಮುಂದೆ ಶೈವಮತ ಅತ್ಯಂತ ಪ್ರಬಲವಾಯಿತು. ವೇದದಲ್ಲಿ ವಿಷ್ಣುವೂ ಒಬ್ಬ

ಸೌರದೇವತೆ. ತ್ರಿವಿಕ್ರಮನೆಂಬುವುದು ವಿಷ್ಣುವಿನ ವಿಶೇಷಣ. ಇದು ಸೂರ್ಯನ ಉದಯ, ಮಧ್ಯಪಥ ಮತ್ತು ಅಸ್ತಮಾನವನ್ನು ಸೂಚಿಸುವುದೆಂದು ತೋರುವುದು. ವಿಷ್ಣುವೆಂದರೆ ವ್ಯಾಪ್ತನೆಂದರ್ಥ. ಸೂರ್ಯನ ವ್ಯಾಪ್ತಿಗೆ ಈ ರೂಪ ಬಂದಿರಬೇಕೆಂದು ಊಹಿಸಲವಕಾಶವಿದೆ. ಬ್ರಾಹ್ಮಣಗಳ ಕಾಲದಲ್ಲಾಗಲೇ ವಿಷ್ಣುವಿನ ಸ್ಥಾನ ಅತಿ ಶ್ರೇಷ್ಠವಾಗಿತ್ತು. "ತದ್ವಿಷ್ಣೋಃ ಪರಮಂಪದಂ'' ಎಂಬುದು ಕಾಠಕವಾಕ್ಯ. ಇದರಂತೆ ನಾರಾಯಣನ ಕಲ್ಪನೆಯೂ ಬ್ರಾಹ್ಮಣಗಳಲ್ಲಿ ಬೆಳಗೊಂಡಿತು. ಇದರ ಆರಂಭದ ಚಿನ್ಹೆಯೂ ವೇದದಲ್ಲಿ ಇರುವುದು, ನಾರಾಯಣನೆಂದರೆ ಸಕಲರ ಆಶ್ರಯಸ್ಥಾನವೆಂದರ್ಥ. ನಾರಾಯಣ ಸಕಲದೇವತೆಗಳ ಮತ್ತು ಜಗತ್ತಿನ ಒಳಗೂ ಹೊರಗೂ ಇದ್ದಾನೆಂದೂ ಅವನ ಕುಕ್ಷಿಯಲ್ಲಿ ಎಲ್ಲರೂ ಇದ್ದಾರೆಂದೂ ಬ್ರಾಹ್ಮಣಗಳಲ್ಲಿ ಉಕ್ತವಾಗಿದೆ. ಮಹಾನಾರಾಯಣ ಉಪನಿಷತ್ತಿನಲ್ಲಂತೂ ನಾರಾಯಣನ ಶ್ರೇಷ್ಠತೆಯೇ ಮುಖ್ಯ ವಿಷಯ. ಧರ್ಮಪುತ್ರನೆಂಬ ವಿಶೇಷಣ ನಾರಾಯಣನಿಗೆ ಪುರಾಣಗಳಲ್ಲಿ ಹೇಳಿದೆ. ಆದ್ದರಿಂದ ವಿಷ್ಣುವಿನ ಮಹಾತ್ಮೆ ಸರ್ವತ್ರ ಉಕ್ತವಾಗಿದೆ. ಮಹಾ ನಾರಾಯಣ ಉಪನಿಷತ್ತು ಇದಕ್ಕೋಸ್ಕರ ಪ್ರಸಕ್ತವಾಯಿತು. ವೈಷ್ಣವ ಮತದ ಅಭ್ಯುದಯಕ್ಕೆ ವಿಷ್ಣು ಮತ್ತು ನಾರಾಯಣ ಇವರುಗಳಲ್ಲದೆ ಇನ್ನೊಂದು ಅಂಶವೂ ಸೇರಿದೆ. ಈ ಅಂಶವು ಅವೈದಿಕವಾದದ್ದು. ಆದರೆ ಅನಾರ್ಯವಲ್ಲ. ಬುದ್ಧ ಮಹಾವೀರರಿಗಿಂತ ಮೊದಲು ಭಾರತದಲ್ಲಿ ವಾಯುವ್ಯ ಭಾಗದಲ್ಲಿ ವಸುದೇವಪುತ್ರನಾದ ಕೃಷ್ಣನೆಂಬುವನು ಒಂದು ವಿಧವಾದ ದೇವತಾರಾಧನಪರ ಮತವನ್ನು ಹರಡಿದನು. ಇದರಲ್ಲಿ ಭಗವಾನ್ ಎಂದರೆ ಪೂಜ್ಯ ಎಂಬ ಅಭಿಧಾನವಿದೆ. ಇದು ವೈದಿಕಯುಗದ ವರುಣದೇವತೆಯಂತೆ ಅತ್ಯಂತ ಗಂಭೀರವೂ ಉದಾರವೂ ಆದದ್ದು. ಇದೇ ಮುಂದೆ ಭಾಗವತಧರ್ಮವೆಂಬ ಅಭಿಧಾನದಿಂದ ಸರ್ವತ್ರ ಪ್ರಚಾರವಾಯಿತು. ಇದರ ಒಂದು ಅಂಶ ಭಗವದ್ಗೀತೆಯಲ್ಲಿ ಮೈದೋರಿದೆ. ಗ್ರೀಕ್ ರಾಯಭಾರಿ ಮೆಗಾಸ್ತಾನೀಸನು ಭಾರತದಲ್ಲಿದ್ದಾಗ ಈ ಮತವು ವಿಶೇಷ ಪ್ರಚಾರದಲ್ಲಿತ್ತು. ಆದ್ದರಿಂದ ಇದು ಆ ಕಾಲಕ್ಕಿಂತ ಬಹು ಪ್ರಾಚೀನವಾದುದೆಂದು ಹೇಳಬಹುದು. ವೈದಿಕ, ವಿಷ್ಣು–ನಾರಾಯಣ ಕಲ್ಪನೆಗಳೊಂದಿಗೆ ಈ ಭಾಗವತಧರ್ಮದ ಮೇಳವಾಗಿ ವೈಷ್ಣವಮತ ಪುಷ್ಟಿಗೊಂಡಿತು. ಮುಂದೆ ಭಾಗವತ ಕೃಷ್ಣನನ್ನೇ ನಾರಾಯಣನೆಂದು ಪೂಜಿಸುವ ರೂಢಿ ಬಂದಿತು.

ವೈದಿಕವಾದ ಅಂಶಗಳು ವೈಷ್ಣವ ಮತಕ್ಕೆ ಪೋಷಕವಾದಂತೆ ಅವೈದಿಕವಾದ ಆಗಮಗಳಲ್ಲಿ ಶೈವಮತದ ಪೂಜಾದಿಗಳು ವಿಧಾಯಕವಾಗಿದೆ. ವೈಷ್ಣವ ಮತಕ್ಕೂ ಕೆಲ ಆಗಮಗಳುಂಟು. ಶೈವಮತಕ್ಕಿಂತಲೂ ಮಿಗಿಲಾದ ಸರ್ವೋತ್ತಮತ್ವವು ಇವುಗಳಲ್ಲಿ ಉಕ್ತವಾಗಿರುವುದು. ವೈಷ್ಣವ ಮತದಲ್ಲಿ ಅವತಾರಗಳು ಅತಿ ಮುಖ್ಯವಾದದ್ದು. ಅವತಾರವೆಂದರೆ ಇಳಿ ಎಂದರ್ಥ. ದೇವರು ಜಗತ್ತಿಗೆ ಆಗಾಗ್ಗೆ ಇಳಿದು ಬಂದು

ಧರ್ಮವನ್ನು ಪುನರುಜ್ಜೀವಿಸಿ ಮನುಷ್ಯನನ್ನು ಉದ್ಧಾರಮಾಡಲು ಅವತಾರಮಾಡುತ್ತಾನೆಂದರ್ಥ. ಹಿಂದೂ ಮತದ ಪ್ರಕಾರ ಜಗತ್ತಿನಲ್ಲಿ ಪ್ರಗತಿ ಅನುಸ್ಯೂತವಾಗಿಲ್ಲ. ಆಗಾಗ್ಗೆ ತೀವ್ರ ಗ್ಲಾನಿ ತೋರುವುದು. ಆಗ ದೇವರು ಅವತರಿಸುವನು. **"ಯದಾ ಯದಾ ಹಿ ಧರ್ಮಸ್ಯ "** ಎಂಬ ಗೀತಾವಾಕ್ಯದಲ್ಲಿ ಇದೇ ವಿಷಯ ಉಕ್ತವಾಗಿದೆ. ಈ ಅವತಾರದ ಕಲ್ಪನೆಯು ಹಿಂದೂ ಮತದಲ್ಲಿ ಇತರ ಎಲ್ಲಾ ಧರ್ಮಗಳನ್ನೂ ಅಳವಡಿಸಿಕೊಳ್ಳಲು ಹಾದಿ ಹಾಕಿ ಕೊಟ್ಟಿತು. ಯಾವ ದೇವರನ್ನೇ ಪೂಜಿಸಲಿ ಅದು ತನ್ನನ್ನು ಕುರಿತೇ ಎಂದು ಭಗವದ್ಗೀತೆಯಲ್ಲಿ ಕೃಷ್ಣನು ನುಡಿದಿರುವನು.[6]

ಇದರಿಂದ ಇದು ಇತರ ಧರ್ಮಗಳಲ್ಲಿನ ಸರಿಯಾದ ಅಂಶಗಳನ್ನು ಸೇರಿಸಿಕೊಂಡು ಆ ಧರ್ಮಕ್ಕೆ ಬೇರೆ ಸ್ವರೂಪ ಕೊಡುವುದು. ಶ್ರೀ ಕೃಷ್ಣನನ್ನು ದೇವರೆಂದು ಪೂಜಿಸುವ ಬಗೆಯು ಹೀಗೆ ಆದದ್ದು. ಆದರ ಪುರಾಣಗಳಲ್ಲಿನ ಶ್ರೀ ಕೃಷ್ಣನ ಚಿತ್ರ ಅತಿ ಜಘನ್ಯವಾದುದು. ಆದರೆ ಭಗವದ್ಗೀತೆಯಲ್ಲಿನ ಚಿತ್ರ ಅತಿ ಉದಾತ್ತವೂ, ಸುಂದರವೂ, ಪವಿತ್ರವೂ, ಆದುದು. ಪುರಾಣಗಳಲ್ಲಿನ ಕೃಷ್ಣನು ಗೊಲ್ಲತಿಯರೊಡನೆ ಅಶ್ಲೀಲ ಶೃಂಗಾರ ಚೇಷ್ಟೆಗಳನ್ನು ನಡೆಸಿದುದರ ವರ್ಣನೆಯಿರುವುದು. ಇದು ಬಹುಶಃ ಪ್ರಾಚೀನ ದನಗಾವ ಹೆಡೆಯನ ಚಿತ್ರವಿರಬಹುದು. ಭಗವದ್ಗೀತೆಯ ಕೃಷ್ಣ ಧರ್ಮಾಚಾರ್ಯನಿರಬಹುದು. ಈ ಇಬ್ಬರು ಕೃಷ್ಣರ ಮಿಲನವಾಗಿರಬೇಕೆಂದು ಊಹಿಸಬಹುದು. ಈ ಕೃಷ್ಣ ವಿಷ್ಣುವಿನ ಅವತಾರಗಳಲ್ಲಿ ಸೇರಿಸಲ್ಪಟ್ಟಂತೆ ವೇದಮತ ಬಾಹಿರನಾದ ಬುದ್ಧನನ್ನು ದಶಾವತಾರಗಳಲ್ಲಿ ಸೇರಿಸಿರುವುದು ಮತ್ತೊಂದು ಮಹತ್ತರವಾದ ಸಂಗತಿ. ಶೈವಮತಕ್ಕಾಗಲಿ ವೈಷ್ಣವ ಮತಕ್ಕಾಗಲಿ ಭಕ್ತಿ ಮುಖ್ಯಸಾಧನೆ.

ವೈಷ್ಣವ ಮತದಲ್ಲಿ ಪಶುಹಿಂಸೆಯನ್ನು ನಿರಾಕರಿಸಿದೆ. ವೈಷ್ಣವ ಮತದಲ್ಲಿ ಪ್ರಶಸ್ತಿಯನ್ನು ಹೇಳುವ ಸಂದರ್ಭದಲ್ಲಿ ಮಹಾಭಾರತದಲ್ಲಿ ಪಶುವಧೆ ಇಲ್ಲದೆ, ಅಶ್ವಮೇಧ ಯಾಗದ ವರ್ಣನೆ ಇರುವುದು. ಏಕೇಶ್ವರ ವಾದದಲ್ಲಿ ಮುಖ್ಯವಾಗಿ ದೇವರಿಗೂ, ಭಕ್ತನಿಗೂ, ಜಗತ್ತಿಗೂ, ಭೇದವು ನಿರೂಪಿಸಲ್ಪಡುವುದು. ಭಕ್ತ ದೇವರಿಗೆ ಅಧೀನ. ಅವನ ಧ್ಯೇಯವೇನೆಂಬುದು ಸ್ಪಷ್ಟವಿಲ್ಲದಿದ್ದರೂ ಅವನು ದೇವರ ಸನ್ನಿಧಾನವನ್ನು ಹೊಂದುವನು. ಅಥವಾ ದೇವರ ಸಾರೂಪ್ಯವನ್ನು ಪಡೆಯುವನು ಎಂದು ಹೇಳಬಹುದು. ಇದಕ್ಕೆ ಭಕ್ತಿ ಮೊದಲಾದ ಸಾಧನೆಗಳಿಗಿಂತ ಹೆಚ್ಚಾಗಿ ಭಗವತ್ಪ್ರಸಾದವು ಅತ್ಯಾವಶ್ಯಕ. ಈ ಭಗವತ್ಪ್ರಾಸಾದವು ಭಕ್ತನಿಗೆ ಅವಶ್ಯಕವೆಂಬುದು ಮಂತ್ರಗಳಲ್ಲಿಯೂ ಉಕ್ತವಾಗಿದೆ.

---

6. ಯೇಽಪ್ಯನ್ಯೇ ದೇವತಾಭಕ್ತಾಃ ಯಜಂತೇ ಶ್ರದ್ಧಯಾನ್ವಿತಾಃ ।
ತೇಽಪಿ ಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಮ್ ॥

— — ಗೀತಾ ೯—೨೩

✣ ✣ ✣

(e) ಧರ್ಮ ಮತ್ತು ವರ್ಣಾಶ್ರಮಗಳು

ಬ್ರಾಹ್ಮಣಗಳಲ್ಲಿ ವಿಶೇಷವಾಗಿ ಪ್ರಾಮುಖ್ಯತೆಯನ್ನು ಪಡೆದ ಯಜ್ಞ ಯಾಗಾದಿಗಳಿಗೆ ಕಲ್ಪಸೂತ್ರಗಳಲ್ಲಿ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಕಲ್ಪಸೂತ್ರಗಳು ಯಜ್ಞಾಚರಣೆಯನ್ನು ಕ್ರಮಬದ್ಧವಾಗಿ ಏರ್ಪಡಿಸುತ್ತವೆ. ದೊಡ್ಡ ದೊಡ್ಡ ಯಾಗಗಳ ವಿಷಯ ಶ್ರೌತ ಸೂತ್ರಗದಲ್ಲೂ, ಗೃಹ್ಯ ಕರ್ಮಗಳು ಗೃಹ್ಯಸೂತ್ರಗಳಲ್ಲೂ ವಿಧಾಯಕವಾಗಿವೆ. ಮೂರನೆಯ ವರ್ಗಕ್ಕೆ ಸೇರಿದ ಧರ್ಮಸೂತ್ರದಲ್ಲಿ ಮನುಷ್ಯನ ಆಚಾರವೂ ವಿಹಿತವಾಗಿದೆ. ಮನುಷ್ಯನು ನಿತ್ಯದಲ್ಲೂ ವಿಶೇಷ ಕಾಲದಲ್ಲೂ ಅನುಸರಿಸಬೇಕಾದ ಜೀವನ ಕ್ರಮವನ್ನು ಸರಿಮಾಡಿ ಅವನನ್ನು ವೇದೋಕ್ತ ಕರ್ಮಗಳಿಗೆ ಅಧಿಕಾರಿಯನ್ನಾಗಿ ಮಾಡುವುದೇ ಇವುಗಳ ಉದ್ದೇಶ. ಸರಿಯಾದ ನಡವಳಿಕೆ ಇಲ್ಲದವನನ್ನು ವೇದಗಳೂ ಪಾವನ–ಮಾಡಲಾರವೆಂದು ಧರ್ಮಸೂತ್ರಗಳ ಅಭಿಪ್ರಾಯ.[7]

ಭಾರತದ ಇತಿಹಾಸದಲ್ಲಿ ಧರ್ಮ ಅತಿ ಮುಖ್ಯವಾದ ಅಂಶ. ಆದರೆ ಇದರ ನಿಷ್ಕೃಷ್ಟವಾದ ಅರ್ಥ ಹೇಳುವುದು ದುಸ್ತರ. "ಧಾರಣಾದ್ಧರ್ಮ ಮಿತ್ಯಾಹುಃ" ಎಂಬುವುದು ಮಹಾಭಾರತದ (XII 109-14) ವಚನ. ಅಂದರೆ ಯಾವುದು ಒಟ್ಟಿಗೆ ಹಿಡಿದಿರುವುದೋ ಅದೇ ಧರ್ಮ. ಇದು ಎಲ್ಲ ನೈತಿಕ ಮತ್ತು ಸಾಮಾಜಿಕ ಪರಿಪಾಟಿಗೂ ಮೂಲ. ವೇದಗಳಲ್ಲಿ ಋತವೆಂಬುದರಲ್ಲಿ "ಧರ್ಮ" ಕಲ್ಪನೆ ಅಡಗಿರುವುದು. ಬರಿಯ ನೀತಿ ಸಂಬಂಧ ಇದನ್ನು ಉಪಯೋಗಿಸುವುದೂ ಉಂಟು. ಧರ್ಮ ಎಂದರೆ ಸರಿಯಾದ ನಡವಳಿಕೆ ಎಂದರ್ಥ. ಧರ್ಮದ ನಡವಳಿಕೆಯಿಂದ ಸತ್ಫಲಗಳುಂಟಾಗುವುವು. ಧರ್ಮದಿಂದ ಅದೃಷ್ಟ ಉಂಟಾಗುವುದು. ಅದೃಷ್ಟವೇ ಸ್ವರ್ಗಾದಿಫಲಗಳನ್ನು ಕೊಡುವವು. ಧರ್ಮಶಾಸ್ತ್ರಗಳಲ್ಲಿ ಮುಖ್ಯವಾಗಿ ಸಾಧಾರಣ ಧರ್ಮ ವಿಶೇಷ ಧರ್ಮವೆಂಬ ಎರಡು ಬಗೆಯ ಧರ್ಮಗಳ ವರ್ಣನೆಯುಂಟು. ಇಂದ್ರಿಯನಿಗ್ರಹ, ಸತ್ಯಭಾಷಣ, ಭೂತದಯೆ ಮೊದಲಾದವು ಸಾಧಾರಣಧರ್ಮಗಳು. ಇವು ಎಲ್ಲರಿಗೂ ವಿಹಿತವಾದವು.[8]

ವೈದಿಕ ಕಾಲದಿಂದಲೂ ಭಾರತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ಸಾಮಾಜಿಕಪ್ರಭೇದವು ನಡೆದುಬಂದಿದೆ. ಇದರಲ್ಲಿ ಮೊದಲು ಮೂರು ವರ್ಣದವರಲ್ಲಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸವೆಂಬ ನಾಲ್ಕು ಅವಸ್ಥೆಗಳು ವ್ಯವಸ್ಥಿತವಾಗಿವೆ. ವಿಶೇಷಧರ್ಮಗಳು ಈ ವರ್ಣ ಮತ್ತು ಆಶ್ರಮಗಳಿಗೆ

---

7. ಆಚಾರಹೀನಂ ನ ಪುನಂತಿ ವೇದಾಃ – ವಾಸಿಷ್ಠಧರ್ಮಸೂತ್ರಂ VI –3

8. ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯ ನಿಗ್ರಹಃ ।
ದಾನಂ ದಮೋ ದಯಾ ಶಾಂತಿಃ ಸರ್ವೇಷಾಂ ಧರ್ಮಸಾಧನಮ್ ॥
–ಯಜ್ಞವಲ್ಕ್ಯಸ್ಮೃತಿ 1.4122:

ಸೇರಿದುದು. ಸಾಮಾನ್ಯ ಧರ್ಮಗಳು ಎಲ್ಲರಿಗೂ ವಿಹಿತವಾದದ್ದು. ಬ್ರಾಹ್ಮಣರಿಗೆ ಯಜನ ಯಾಜನಾದಿಗಳು. ಕ್ಷತ್ರಿಯರಿಗೆ, ದುಷ್ಟಶಿಕ್ಷಣ, ಶಿಷ್ಟಪರಿಪಾಲನೆಗಳು ವಿಹಿತವಾದವು. ಹಾಗೆಯೇ ಬ್ರಹ್ಮಚಾರಿಗಳಿಗೆ ಗುರುಕುಲವಾಸ ವೇದಾಧ್ಯಯನ ಮೊದಲಾದ ಧರ್ಮಗಳು. ಗೃಹಸ್ತನಿಗೆ ಪಂಚ ಮಹಾಯಜ್ಞಗಳು ವಿಹಿತವಾಗಿವೆ. ಒಟ್ಟಿನಲ್ಲಿ ಈ ಧರ್ಮಶಾಸ್ತ್ರಗಳು ಕರ್ಮಕಾಂಡಕ್ಕೂ ಉಪನಿಷತ್ತಿನ ಜ್ಞಾನಕಾಂಡಕ್ಕೂ ಒಂದು ಕೊಂಡಿಯಂತಿದೆಯನ್ನಲಡ್ಡಿಯಿಲ್ಲ.

(f) ದರ್ಶನಗಳ ಉತ್ಪತ್ತಿ

ವೇದಗಳು ಮತ್ತು ಅವುಗಳ ಅಂಗ ಮತ್ತು ಉಪಾಂಗಗಳ ಆಸರೆಯಿಂದ ಹುಟ್ಟಿಕೊಂಡ ಹೊಸ ಗ್ರಂಥಗಳಂತೆಯೇ, ಇನ್ನೊಂದು ಬಗೆಯ ಸಾಹಿತ್ಯವೂ ಈ ಮಧ್ಯಕಾಲದಲ್ಲಿ ಉದಯವಾಯಿತು. ಈ ಸಾಹಿತ್ಯದ ಸೂಕ್ಷ್ಮ ಅಂಶಗಳು ವೇದಗಳಲ್ಲೇ ಕಂಡುಬರುವುದು. ಈ ಜಗತ್ತಿಗೆ ಯಾವ ಮೂಲವೂ ಇಲ್ಲವೆಂದೋ ಅಥವಾ ಇದು ಅಸತ್ತಿನಿಂದ ಉತ್ಪನ್ನವಾಯಿತೆಂದು ಹೇಳುವುದೇ ಆ ವಾದ. ಇದು ವೇದದಲ್ಲಿ ಸೂಕ್ಷ್ಮವಾಗಿ ಕಂಡರೂ, ಇದಕ್ಕೂ ವೈದಿಕ ತತ್ತ್ವಗಳಿಗೂ ಯಾವ ಸಾಮರಸ್ಯವೂ ಕಂಡು ಬರುವುದಿಲ್ಲ. ಇವೆರಡಕ್ಕೂ ಕೇವಲ ವಿರೋಧವೇ ತೋರುವುದು. ಇದು ಬ್ರಾಹ್ಮಣ ಉಪನಿಷತ್ತುಗಳ ಕಾಲದಲ್ಲಿ ವಿಶೇಷ ಹೊರಬರದಿದ್ದರೂ ಅಂತರ್ಗಾಮಿನಿಯಾಗಿದ್ದೇ ಇತ್ತು. ಈ ಬಗೆಯ ಶೂನ್ಯವಾದ, ನಾಸ್ತಿಕವಾದ ಅಥವಾ ಸ್ವಭಾವವಾದವು ಬಹುಶಃ ಭಾರತದಲ್ಲಿ ಬಂದು ನೆಲೆಸಿದ ಆರ್ಯರಲ್ಲೇ ಉದ್ಭವಿಸಿರಬೇಕು. ಎಲ್ಲ ಪದಾರ್ಥಗಳೂ ಆಯಾ ರೀತಿಯಲ್ಲಿರಲು ಅವುಗಳ ಸ್ವಭಾವವೇ ಕಾರಣವಾಗಿರಬೇಕೆಂದು ಸ್ವಭಾವವಾದವು ಹೇಳುವುದು. ಬೆಂಕಿ ಸುಡುವುದೂ, ನೀರು ತಣ್ಣಗಿರುವುದೂ, ಗಾಳಿ ಸಮಧಾತು–ವಾಗಿರುವುದೂ ಪದಾರ್ಥ ಸ್ವಭಾವವೇ [9] ಈ ವಾದಕ್ಕೆ ಸ್ವತಂತ್ರವಾದ ಸಾಹಿತ್ಯವಿಲ್ಲ. ಇದರ ಕೆಲವು ಅಂಶಗಳು ಭಾರತದಲ್ಲಿ ವರ್ಣಿತವಾಗಿದೆ. ಇದೇ ಲೋಕಾಯತ ಅಥವಾ ಚಾರ್ವಾಕಮತವಾಗಿ ಬೆಳೆಯಿತು. ಈ ಮತದ ವಿವರಗಳು ಇತರ ದರ್ಶನಗಳಲ್ಲಿ ದೊರಕುವುದು. ಈ ಚಾರ್ವಾಕ ಮತದ ಜೊತೆಗೆ ಬೆಳೆದ ಇನ್ನೆರಡು ಅವೈದಿಕ ಮತಗಳೇ ಜೈನ, ಬೌದ್ಧ ಮತಗಳು. ಈ ಎರಡು ಮತಗಳ ಸಾಹಿತ್ಯವೂ ಹೆಚ್ಚಾಗಿ ಪ್ರಾಕೃತ ಭಾಷೆಯಲ್ಲಿರುವುದರಿಂದ ಇವು ಪಂಡಿತರುಗಳಿಗಿಂತ ಸಾಮಾನ್ಯ ಜನರಿಗೆ ಹೆಚ್ಚು ಸಂಬಂಧಪಟ್ಟವು.

ಕಲ್ಪಸೂತ್ರಗಳು ರಚಿತವಾದ ಸೂತ್ರಪದ್ಧತಿಯು ಭಾರತವಾಙ್ಮಯದಲ್ಲಿ ಒಂದು

9. ಅಗ್ನಿರುಷ್ಣೋ ಜಲಂ ಶೀತಂ ಸಮಸ್ಪರ್ಶಸ್ತಥಾನಿಲಃ ।
ಕೇನೇದಂ ಚಿತ್ರಿತಂ ತಸ್ಮಾ ತ್ಸ್ವಭಾವತ್ತದ್ವ್ಯವಸ್ಥಿತಿಃ ॥

ವಿಶಿಷ್ಟಸ್ಥಾನ ಗಳಿಸಿದೆ. ಯಜ್ಞ ಯಾಗಾದಿಗಳ ಸಂಬಂಧವಲ್ಲದೆ ವ್ಯಾಕರಣಾದಿ ಇತರ ಶಾಸ್ತ್ರಗಳೂ ಈ ಸೂತ್ರಕ್ರಮದಲ್ಲೇ ರಚಿತವಾದವು. ಅಷ್ಟೇ ಅಲ್ಲ, ಭಾರತದ ಎಲ್ಲ ದರ್ಶನಗಳ ಮೂಲ ಈ ಸೂತ್ರ ಪದ್ಧತಿಯಲ್ಲೇ ಕಂಡುಬರುವುದು. ಇದು ಅಲ್ಲಲ್ಲಿ ವಿಶಕಲಿತವಾಗಿ ಹರಡಿದ್ದ (ದರ್ಶನ) ಮನೋಭಾವಗಳನ್ನು ಒಟ್ಟುಗೂಡಿಸಿ ಸರಿಯಾದ ಅಚ್ಚುಕಟ್ಟಿನಲ್ಲಿ ತತ್ತ್ವಗಳನ್ನಿಡಲು ಯೋಗ್ಯ ಸಾಧನ. ಸಾಂಖ್ಯದರ್ಶನದ ಹೊರತು ಇತರ ಎಲ್ಲ ದರ್ಶನಗಳ ಸೂತ್ರಗಳೂ ಪ್ರಾಚೀನವಾದವೇ. ಈ ಸೂತ್ರಗಳು ಕ್ಲಿಷ್ಟವಾದ್ದರಿಂದ ಇವುಗಳಿಗೆ ಟೀಕೆ ಟಿಪ್ಪಣಿಗಳಿಗೂ, ಭಾಷ್ಯಗಳೂ ರಚಿತವಾಗಿ ಈ ಸೂತ್ರಗಳ ಅಭಿಪ್ರಾಯವನ್ನು ವಿಶದೀಕರಿಸುವುವು. ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸಾ ಮತ್ತು ವೇದಾಂತ ಎಂಬ ಆರು ದರ್ಶನಗಳಲ್ಲಿ ಕ್ರಮವಾಗಿ ಎರಡೆರಡು ಒಂದು ಗುಂಪಿಗೆ ಸೇರಿದ್ದು, ಈ ಆರು ಭಿನ್ನಪ್ರಮೇಯಗಳನ್ನೊಳಗೊಂಡಿದ್ದರೂ ಇವಕ್ಕೆ ಸಾಮಾನ್ಯ ಹಿನ್ನಲೆಯುಂಟು. ಎಲ್ಲ ದರ್ಶಗಳೂ ಜ್ಞಾನವೆಂದರೇನು? ಅದರ ಪ್ರಭೇದಗಳೆಷ್ಟು? ಅದರ ಇತಿಕರ್ತವ್ಯತೆಯೇನು? ಪ್ರಮಾಣದ ಲಕ್ಷಣವೇನು? ಎಂಬೀ ಪ್ರಶ್ನೆಗಳನ್ನು ಮುಂದಿಟ್ಟುಕೊಂಡೇ ಹೊರಡುತ್ತವೆ. ಈ ಪ್ರಮಾಣ ಸಮೀಕ್ಷಣವಿಲ್ಲದ ದರ್ಶನವಿಲ್ಲ. ಪ್ರಮಾಣವೆಂದರೆ ಯಥಾರ್ಥ ದರ್ಶನವನ್ನು ಹುಟ್ಟಿಸುವ ಸಾಧನ. ಇದು ಯಥಾರ್ಥ ಜ್ಞಾನವನ್ನು ಹುಟ್ಟಿಸುವುದಲ್ಲದೆ ಆ ಜ್ಞಾನದ ಯಾಥಾರ್ಥ್ಯವನ್ನೂ ತೋರಿಸಿಕೊಡುವುದು. ಆದ್ದರಿಂದ ಇದು ದರ್ಶನ ಶಾಸ್ತ್ರವೂ ಹೌದು, ಸಾಧನಶಾಸ್ತ್ರವೂ ಹೌದು. ಪ್ರಮಾಣದ ವಿವರಗಳ ಬಗ್ಗೆ ಭಿನ್ನಾಭಿಪ್ರಾಯವಿದೆ.

ಬಹು ದಾರ್ಶನಿಕರಿಗೆ ಸಮ್ಮತವಾದದ್ದು ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಅಥವಾ ಶಬ್ದವೆಂಬ ಪ್ರಮಾಣಪತ್ರಯ. ಈ ಶಬ್ದಪ್ರಮಾಣದಲ್ಲಿ ಪೌರುಷೇಯ ಮತ್ತು ಅಪೌರುಷೇಯವೆಂದು ಮತ್ತೆರಡು ಬಗೆ. ಇದರಲ್ಲಿ ಪೌರುಷೇಯ ಆಗಮವೆಂದರೆ ನಂಬಿಕೆಗೆ ಅರ್ಹನಾದ ಆಪ್ತನಿಂದ ಹೇಳಲ್ಪಟ್ಟ ಶಬ್ದ. ಅಪೌರುಷೇಯವೆಂದರೆ ಯಾರಿಂದಲೂ ಹೇಳಲ್ಪಡದ ಸನಾತನವಾಗಿ ಬಂದ ಆಗಮ. ವೇದವೇ ಇಂತಹ ಆಗಮ. ಪ್ರತ್ಯಕ್ಷ ಮತ್ತು ಅನುಮಾನಗಳ ಮಿತಿಮೀರಿದ ಸ್ಥಳದಲ್ಲಿ ಆಗಮದ ಉಪಯೋಗ [10] ಅದರಲ್ಲೂ ಅದೃಷ್ಟ ವಿಷಯಗಳ ನಿಜವಾದ ಜ್ಞಾನವನ್ನು ಹುಟ್ಟಿಸಲು ಅಪೌರುಷೇಯ ಆಗಮ ಒಂದೇ ಶಕ್ತವಾದದ್ದು. ಮೀಮಾಂಸಕರು ಮತ್ತು ವೇದಾಂತಿಗಳು ಮಾತ್ರ ಅಪೌರುಷೇಯ ಆಗಮನವನ್ನು ಒಪ್ಪುವರು. ವೇದಾಂತಿಗಳಲ್ಲಿ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಎಂಬೀ ಮೂರು ಮತಗಳು ವಿಶೇಷ ಪ್ರಸಿದ್ಧವಾದವು.

---

10. ಅಪ್ರಾಪ್ತೇ ಶಾಸ್ತ್ರಮರ್ಥತ್ವಾತ್ – ಮೀಮಾಂಸಾಸೂತ್ರಮ್ –1–1–5

✣ ✣ ✣

ಕರ್ಮಸಿದ್ಧಾಂತ.

ಕರ್ಮಸಿದ್ಧಾಂತವು ಎಲ್ಲ ದರ್ಶನಗಳ ಇನ್ನೊಂದು ಸಾಮಾನ್ಯ ಧರ್ಮ. ಚಾರ್ವಾಕನನ್ನು ಬಿಟ್ಟರೆ ಉಳಿದವರೆಲ್ಲ ಇವನ್ನು ಒಪ್ಪಿರುವರು. ಭಾರತೀಯರ ಜೀವನದಲ್ಲಿ ಕರ್ಮಸಿದ್ಧಾಂತ ಅತ್ಯಂತ ಪ್ರಭಾವವನ್ನು ಬೀರಿದೆ. ಇದರ ಮೂಲ ಅಜ್ಞೇಯ. ಇದರಲ್ಲಿ ಕಾರ್ಯಕಾರಣಭಾವ ಮುಖ್ಯವಾದ ಅಂಶ. ಈ ಕಾರ್ಯಕಾರಣಭಾವವನ್ನು ಕರ್ಮಸಿದ್ಧಾಂತವು ಮನುಷ್ಯನ ನಿತ್ಯ ನಡುವಳಿಕೆಗಳಲ್ಲಿ ರೂಢಿಗೆ ತಂದಿರುವುದು. ಭೌತಿಕ ಪ್ರಪಂಚದಲ್ಲಿ ಪ್ರತಿಯೊಂದು ಕಾರ್ಯಕ್ಕೂ ಒಂದು ಕಾರಣ ಹೇಗೆ ನಿಯತವೋ ಹಾಗೆಯೇ ನೈತಿಕಪ್ರಪಂಚದಲ್ಲೂ ಎಲ್ಲ ಆಗುಹೋಗುಗಳಿಗೂ ನಿಯತವಾದ ಕಾರಣವಿದೆ. ಹೀಗೆ ಮನುಷ್ಯನ ನಡುವಳಿಕೆಯೆಲ್ಲ ಪೂರ್ವನಿಯತವಾದಲ್ಲಿ ಅವನಿಗೆಲ್ಲಿಯ ಸ್ವಾತಂತ್ರ್ಯ? ಈ ಸಂದೇಹ ಹುಟ್ಟುವುದು. ಇದರಿಂದ ಇದು 'ದೈವಾಧೀನ' (fatalistic) ವಾದಲ್ಲಿ ಪರ್ಯವಸಿತವಾಗುವುದು. ಇದರ ತಾತ್ಪರ್ಯ ಹಾಗಲ್ಲ. ಸ್ವಾತಂತ್ರ್ಯವೆಂದರೆ ತನಗೆ ತೋರಿದ್ದನ್ನು ಮಾಡುವು–ದೆಂದರ್ಥವಲ್ಲ. 'ಸ್ವ–ತಂತ್ರ' ಎಂದರೆ ತನಗೆ ತಾನು ಅಧೀನನೆಂದರ್ಥ. ಈ ಅರ್ಥದಲ್ಲಿ ಕರ್ಮಸಿದ್ಧಾಂತದಲ್ಲಿ ಸ್ವಾತಂತ್ರ್ಯವಿದ್ದೇ ಇದೆ. ಅಷ್ಟೇ ಅಲ್ಲ, ಇದು ಸ್ವಾತಂತ್ರ್ಯವನ್ನೇ ಉಪದೇಶಿಸುವುದು, ನಮ್ಮ ನಿತ್ಯ ನಡವಳಿಕೆಗೆ ಕಾರಣವು. ಈ ಹಿಂದೆಯೇ ಇದೆಯೆಂದರ್ಥವಲ್ಲ. ಇದು ಹಿಂದಿನ ಹುಟ್ಟಿನಲ್ಲೂ ಇರಬಹುದು. ಕರ್ಮಸಿದ್ಧಾಂತ ಜನ್ಮಾಂತರವನ್ನು ಮುಖ್ಯವಾಗಿ ಒಪ್ಪುವುದು. ಸಂಸಾರವೆಂದರೆ ಜನನ–ಮರಣಗಳ ಕೊಂಡಿ ಎಂದರ್ಥ. ಜೀವ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮದ ಭೋಗರೂಪವೇ ಇಂದಿನ ಅವನ ಅವಸ್ಥೆ. "ನೈತಿಕಸಾಕ್ಷಾತ್ಕಾರ ವ್ಯಕ್ತಿಯ ಅಮರತ್ವಕ್ಕೆ ಮೂಸೆ ಇದ್ದಂತೆ"[11] ಎನ್ನುವ ಕ್ಯಾಂಟನ ಅಭಿಪ್ರಾಯ ಸ್ಪಷ್ಟವಿದೆ. ಕರ್ಮಸಿದ್ಧಾಂತವೇ ಜನ್ಮಾಂತರ–ಗಳಿಗೆಮುಖ್ಯ ಕೈದೀವಿಗೆ. ಆದ್ದರಿಂದ ನಮ್ಮ ಈ ಜನ್ಮದ ಕ್ರಿಯೆಗಳಿಗೆ ಹಿಂದಿನ ಜನ್ಮದ ನಡವಳಿಕೆಯೇ ಹಾದಿ ಹಾಕಿಕೊಟ್ಟಿದ್ದೆಂದಹಾಗಾಯಿತು. ಆದ್ದರಿಂದ ದೈವವೆಂಬುದು ಬೇರಾವ ವಸ್ತುವೂ ಅಲ್ಲದೆ ನಮ್ಮ ಹಿಂದಿನ ಕರ್ಮವೇ ಆಯಿತು. ಆದ್ದರಿಂದ ಇದು ದೈವಾಧೀನ ವಾದವಲ್ಲ. ಹಾಗಾದರೆ ಈ "ಹೊಣೆ" ಮೊಟ್ಟಮೊದಲಿಗೆ ಯಾವಾಗ ಹೊರಿಸಲ್ಪಟ್ಟಿತು? ಈ ಪ್ರಶ್ನೆ ಸಹಜ. ಆದರೆ ಜೀವ ಹಿಂದೆ ಪ್ರವೃತ್ತಿಶೂನ್ಯನಾಗಿದ್ದನೆಂದು ಈ ಪ್ರಶ್ನೆ ಭಾವಿಸುವುದು. ಇದು ಸರಿಯಲ್ಲ. ವ್ಯಕ್ತಿಯನ್ನವಲಂಬಿಸದ ಬರಿಯ ಮನೋಧರ್ಮ ಹೇಗೆ ಅಸಂಭವವೋ, ಮನೋಧರ್ಮ ವಿರಹಿತ ಜೀವನೂ ಅಷ್ಟೇ ಅಸಂಭವ, ಜೀವನಿಗೆ ಯಾವಾಗಲೂ ಒಂದು ಹವ್ಯಾಸ ಉಂಟೇ ಉಂಟು. ಕರ್ಮಮಾಡದೆ ಜೀವ ಒಂದು ಘಳಿಗೆಯೂ ಇರಲಾರ[12]

11. Moral consciousness is the guarantee of personal immortality according to Kant.

12. ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ —ಗೀತಾ.

ಇದರಿಂದಲೇ ಕರ್ಮವನ್ನು ಅನಾದಿ ಎನ್ನುವುದು, ಇದು ಅಪ್ರತ್ಯಕ್ಷವಾಗಿ ಅನಾದಿಕಾಲದಿಂದಲೂ ಮನುಷ್ಯನ ಬೆನ್ನುಹತ್ತಿದೆ. ಈ ಕರ್ಮಸಿದ್ಧಾಂತದಬಲೆಗೆ ಸಿಕ್ಕು ಕೆಲವು ದಾರ್ಶನಿಕರು ಇದಕ್ಕೆ ವಿಶೇಷ ಮಹತ್ವವನ್ನು ಹೇಳಿದರು. ಮೀಮಾಂಸಕರು ಕರ್ಮವೇ ಸರ್ವಸ್ವ–ಇದೇ ಜಗತ್ತಿನ ವೈವಿಧ್ಯವನ್ನೂ, ಮನುಷ್ಯರ ಭಿನ್ನ ಯೋಗ್ಯತೆಯನ್ನೂ, ದೇವರ ಅಸ್ತಿತ್ವವನ್ನೂ, ಜಗತ್ತಿನ ಮೂಲವನ್ನೂ ವಿವರಿಸುವುದೆಂದು ಹೇಳಿದರು. ನಮ್ಮ ಎಲ್ಲಾ ವ್ಯಾಪಾರಗಳಿಗೂ ನಾವೇ ಹೊಣೆಯಾದ್ದರಿಂದ ಅದರ ಫಲಗಳಿಗೂ ನಾವೇ ಜವಾಬ್ದಾರರು. ಇದು ಎಲ್ಲ ಭಾರತೀಯನಲ್ಲೂ ಗಾಢಮೂಲವಾದ ನಂಬಿಕೆ. ಕರ್ಮಸಿದ್ಧಾಂತ ಯಾಂತ್ರಿಕವಾಗಿ ಉಳಿಯದೆ ನೈತಿಕ ಬಾಧ್ಯತೆಯನ್ನೂ ಮನುಷ್ಯನಲ್ಲಿ ಹೇರುವುದು. ಉತ್ತಮ ಜೀವನ ನಡೆಸಲು ಇದೊಂದು ಪ್ರೇರಕಶಕ್ತಿಯಾಗುವುದು. ನೈತಿಕಪ್ರಗತಿಗೆ ಕಾರಣವಾಗುವುದು. ಕರ್ಮಸಿದ್ಧಾಂತದಿಂದ ಉತ್ತಮ ಜೀವನ ನಡೆಸುವ ಪ್ರೇರಣೆಯುಂಟಾಗಿ, ಅದರಿಂದ ಉತ್ತಮ ಸಂಸ್ಕಾರವನ್ನು ಹುಟ್ಟಿಸಿ ಉನ್ನತಿಯ ಮಾರ್ಗದಲ್ಲಿ ಒಯ್ಯುವುದು. ಇಂತಹ ಉತ್ತಮ ಸಂಸ್ಕಾರಕ್ಕೆ ಕಾರಣವಾದ ಸತ್ಪ್ರವೃತ್ತಿಯ ಬಗೆಯನ್ನೂ ಫಲಾಪೇಕ್ಷೆ ತೊರೆದು ಕರ್ಮ ಮಾಡುವ ರೀತಿಯನ್ನೂ ಗೀತೆಯು ಸುಂದರವಾಗಿ ಚಿತ್ರಿಸುವುದು.

(h) ಮೋಕ್ಷ

ಕರ್ಮಸಿದ್ಧಾಂತವನ್ನು ಹೊಂದಿಕೊಂಡೇ ಭಾರತದರ್ಶನದಲ್ಲಿ ಮೋಕ್ಷ ಕಲ್ಪನೆಯು ಬೆಳೆದಿದೆ. ಮೋಕ್ಷವೆಂದರೆ ಬಿಡುಗಡೆ ಎಂದರ್ಥ. ಮತ್ತೆ ಮತ್ತೆ ಬರುವ ಹುಟ್ಟುಸಾವುಗಳೇ ಸಂಸಾರ. ಈ ಸಂಸಾರದಿಂದ ಬಿಡುಗಡೆ ಹೊಂದುವುದೇ ಮೋಕ್ಷ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ನಂಬುವರು. ಅದರಲ್ಲಿ ಮಧ್ಯದೆರಡು ಪುರುಷಾರ್ಥಗಳು ಈ ಲೋಕಕ್ಕೆ ಸಂಬಂಧಪಟ್ಟುದು. ಅಂತಹ ಉದಾತ್ತ ಧ್ಯೇಯಗಳಲ್ಲ. ಧರ್ಮ ಮತ್ತು ಮೋಕ್ಷಗಳು ಆಧ್ಯಾತ್ಮಿಕ ಪುರುಷಾರ್ಥ. ಎಲ್ಲ ದರ್ಶನಗಳಲ್ಲೂ ಇವೆರಡರ ಪ್ರಸ್ತಾಪ ಹೆಚ್ಚು, ಆದ್ದರಿಂದ "ಭಾರತೀಯ ದರ್ಶನಗಳೆಲ್ಲ ನಿರಾಶಾಮಯವಾದುದು. ಪ್ರಪಂಚವನ್ನು ಅಲ್ಲಗಳೆಯುವುದು" ಎಂಬ ಟೀಕೆ ಸಾಮಾನ್ಯವಾಗಿದೆ. ಧರ್ಮ ಮೋಕ್ಷಕ್ಕೆ ಸಾಧನ, ಮೋಕ್ಷವೇ ಕೊನೆಯ ಗುರಿ. ಮೋಕ್ಷಸ್ವರೂಪದ ಬಗ್ಗೆ ಒಮ್ಮತವಿಲ್ಲ. ಆದರೂ "ಸ್ವಪರಿಪೂರ್ಣ"ನಾಗುವುದೇ ಮೋಕ್ಷವೆಂಬುದು ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯ. ಅಂತೂ ಎಲ್ಲರಿಗೂ ಮೋಕ್ಷಬೇಕು. ಸಂಸಾರ ಬಂಧಕವಾದರೂ ಕೊನೆಗೆ ಅದು ಕಳೆಯಲೇ ಬೇಕು. ಆಮೇಲೆ ಸದ್ಗತಿ ಕಟ್ಟಿಟ್ಟದ್ದೆ. ಎಲ್ಲ ದರ್ಶನಗಳೂ ಮುಂಬರುವ ಸೌಖ್ಯವನ್ನು ಪ್ರತಿಪಾದಿಸುವುದು. ಆದ್ದರಿಂದ ಇವಾವುದೂ ನಿರಾಶವಾದಗಳಲ್ಲ. ಸತ್, ಸತ್ಯ, ಭವ್ಯ ಈ ಶಬ್ದಗಳೇ ಇದಕ್ಕೆ ನಿದರ್ಶನ. ಜೀವನ ಅಶಾಶ್ವತ. ಮುಂದಿನ ಫಲ ಭವ್ಯ. ಆದ್ದರಿಂದ ಇಹಜೀವನಕ್ಕೆ ಹೆಚ್ಚು ಅಂಟಿಕೊಳ್ಳದೆ ತನ್ನ ಕರ್ತವ್ಯವನ್ನು ತಾನು ಮಾಡಬೇಕೆಂಬ ನಿಷ್ಕಾಮ ಕರ್ಮವನ್ನು ಗೀತೆಯು ಬೋಧಿಸಿತು.

(i) ಭಗವದ್ಗೀತೆ.

ಉಪನಿಷತ್ತುಗಳನ್ನು ಬಿಟ್ಟರೆ ಭಗವದ್ಗೀತೆ ಆರ್ಯರ ಧಾರ್ಮಿಕ ಇತಿಹಾಸದಲ್ಲಿ ಅತಿಮುಖ್ಯವಾದ ಗ್ರಂಥ. ಕೇವಲ ೭೦೦ ಶ್ಲೋಕಗಳ ಈ ಪುಟ್ಟಗ್ರಂಥ ಮಹಾಭಾರತದಲ್ಲಿ ಸೇರಿದ್ದರೂ ಎಲ್ಲ ರೀತಿಯಿಂದಲೂ ಸ್ವತಂತ್ರ ಗ್ರಂಥವೇ. ಕೌರವ ಪಾಂಡವರ ಯುದ್ಧ ಸಮಯದಲ್ಲಿ ಯುದ್ಧ ಮಾಡಲಾರೆನೆಂದು ವಿಷಣ್ಣನಾಗಿ ಕುಳಿತ ಅರ್ಜುನನಿಗೆ ಕೃಷ್ಣನು ಮಾಡಿದ ಉಪದೇಶವೇ ಗೀತೆಯ ವಸ್ತು. ಗೀತೆಯ ವಿವರಗಳು ವಿಶಕಲಿತ ಮತ್ತು ಅಸಂಬದ್ಧ.[13] ಇದರಲ್ಲಿ ಕೆಲವಡೆ ಉಪನಿಷತ್ತತ್ತ್ವಗಳ ಉಪದೇಶವಿದ್ದರೆ ಮತ್ತೆ ಕೆಲವು ಕಡೆ ಭಾಗವತ ಧರ್ಮದ ಸೋಂಕು ತೋರುವುದು. ಇದರಲ್ಲಿ ಉಪದಿಷ್ಟವಾದ ಮುಖ್ಯತತ್ತ್ವಗಳ ಬಗ್ಗೆ ಯಾವ ಸಂದೇಹವೂ ಇಲ್ಲ. ಮುಖ್ಯವಾಗಿ ಇದರಲ್ಲಿ ಕ್ಷತ್ರಿಯನಾದ ಅರ್ಜುನನಿಗೆ ಯುದ್ಧವೇ ಧರ್ಮವೆಂದು ಉಪದೇಶಿಸುತ್ತಾನೆ. ಜೀವ ನಿತ್ಯ, ದೇಹ ಅನಿತ್ಯ. ಅದಕ್ಕಾಗಿ ಪರಿತಾಪ ಪಡಬೇಕಾಗಿಲ್ಲ. ನಾನು, ನನ್ನದು. ನನ್ನವರೆಂಬ ಅಭಿಮಾನದ ಮೂಲಕ ಸುಖ–ದುಃಖಾದಿಗಳುಂಟಾಗುವುವು. ಅದನ್ನು ತ್ಯಜಿಸಿ ತನ್ನ ಕರ್ತವ್ಯವೆಂದು ತಿಳಿದು ಯುದ್ಧ ಮಾಡುವುದೇ ಧರ್ಮ, ಇದರಲ್ಲಿ ಜ್ಞಾನ, ಕರ್ಮ ಮತ್ತು ಭಕ್ತಿ ಈಮೂರೂ ಸೇರಿದೆ. ಗೀತೆಯು ಸಮಾಜದ ಸುಭದ್ರತೆಗೂ, ವ್ಯಕ್ತಿಯ ಪ್ರಗತಿಗೂ, ನೈತಿಕಉನ್ನತಿಗೂ ಸರಿಯಾದಮಾರ್ಗವನ್ನು ಉಪದೇಶಿಸಿದೆ. ತನ್ನ ಸ್ಥಾನಮಾನಕ್ಕೆ, ತನ್ನ ಯೋಗ್ಯತೆಗೆ ತಕ್ಕುದಾದ ತನಗೆ ವಿಹಿತವಾದ ಕರ್ಮ ಮಾಡಬೇಕಾದುದು, ನ್ಯಾಯ. ವ್ಯಕ್ತಿಯ ಕಲ್ಯಾಣಕ್ಕೆ ಮಾರ್ಗ. ಅದನ್ನು ಬಿಟ್ಟು ಚಿತ್ತಸ್ಥೈರ್ಯವಿಲ್ಲದೆ, ಕ್ಷಣಕ್ಕೊಂದು ಯೋಚನೆ ಮಾಡುತ್ತಾ ಹಿಡಿದ ಕೆಲಸವನ್ನು ಪೂರೈಸದೆ ಅಲೆದಾಡುವುದು ವ್ಯಕ್ತಿಯ ನಾಶಕ್ಕೆ ಎಷ್ಟು ಕಾರಣವೋ ಸಮಾಜದ ಶಿಥಿಲತೆಗೂ ಅಷ್ಟೇ ಕಾರಣ. ಆದರೆ ಹೀಗೆ ಮಾಡುವ ಕರ್ಮಗಳಲ್ಲಿ ಫಲಾಪೇಕ್ಷೆ ಇರಬಾರದು. ಆಗ ಇದು ವೈಯಕ್ತಿಕವಾದ ಸಂಕುಚಿತ ಕ್ಷೇತ್ರವನ್ನು ಮೀರಿ ಸಮಾಜದ ಸುವ್ಯವಸ್ಥೆಗೆ ಕಾರಣವಾಗುವುದು. ಹೀಗೆ ಕರ್ತವ್ಯಪಾಲನೆ ಮಾಡುವುದೇ ಭಗವದಾರಾಧನೆಯೆಂಬ ಭಾವನೆ ಮೊಳೆಯಬೇಕು. ಇದೇ ಗೀತೆಯು ಜಗತ್ತಿಗೆ ಸಾರುವ ಸಂದೇಶ.

(k) ಪುರಾಣಗಳು ಮತ್ತು ಆಗಮ

ಶೈವ ವೈಷ್ಣವ ಮತಗಳು ಬ್ರಾಹ್ಮಣ ಮತ್ತು ಪುರಾಣಯುಗದಲ್ಲಿ ವಿಶೇಷ ಪ್ರಚಾರದಲ್ಲಿದ್ದವು. ಆದರೆ ಚತುರ್ಮುಖಬ್ರಹ್ಮ ಸರ್ವೋತ್ತಮನೆಂಬ ವಾದವು ಮಹಾಭಾರತದ

---

13. The teaching when taken in its details is full of perplexity, because the work shares the heterogeneous character, previously mentioned of the epic to which it belongs.

--Essentials of Ind. Philosophy p. 53.

ಕೆಲವು ಸ್ಥಳಗಳಲ್ಲಿಯೂ, ಕೆಲವು ಪುರಾಣಗಳಲ್ಲೂ ಬೆಳೆದಿದೆ. ಇದಲ್ಲದೆ ಶಕ್ತಿಯ ಸರ್ವೋತ್ತಮತ್ವವು ದೇವೀಭಾಗವತಾದಿಗಳಲ್ಲಿ ಉಕ್ತವಾಗಿದೆ. ಶಿವ ಮತ್ತು ವಿಷ್ಣುಪಾರಮ್ಯಪರ ಪುರಾಣಗಳಂತೂ ಪ್ರಸಿದ್ಧವೇ ಆಗಿವೆ. ಬ್ರಹ್ಮ–ವಿಷ್ಣು–ರುದ್ರ ಈ ಮೂರು ದೇವತೆಗಳು ತ್ರೀಮೂರ್ತಿಗಳೆಂದು ಪ್ರಸಿದ್ಧರು. ಇವರು ಕ್ರಮವಾಗಿ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣರು. ಇವರು ಮೂರು ದೇವತೆಗಳೂ ಸಮರೆಂದೂ, ಅದರಲ್ಲಿ ಒಬ್ಬರು ಶ್ರೇಷ್ಠರೆಂದೂ ಕೆಲ ಭಕ್ತರ ನಂಬಿಕೆ. ಪುರಾಣಗಳಲ್ಲಿ ಇದಕ್ಕೆ ಅವಕಾಶವಿದೆ. ಮೂರು ದೇವತೆಗಳೂ ಅಭಿನ್ನರೆಂಬ ಇನ್ನೊಂದು ವಾದವೂ ಉಂಟು. ಇದು ಶೈವ, ವೈಷ್ಣವ ಮತವನ್ನು ಸಮನ್ವಯ ಮಾಡಬೇಕೆಂಬ ಬಯಕೆಯಿಂದ ಹುಟ್ಟಿದ ವಾದವಿರಬೇಕು. ಈ ತ್ರಿಮೂರ್ತಿಗಳಲ್ಲದೆ–ಸ್ಕಂದ ಗಣಪತಿ, ಸೂರ್ಯ, ಶಕ್ತಿ ಇವರ ಉತ್ಕರ್ಷವನ್ನು ಹೇಳುವ ಮತಗಳೂ ಉಂಟು. ಒಟ್ಟಿನಲ್ಲಿ ಪುರಾಣಗಳಲ್ಲಿ ಎಲ್ಲದೇವತೆಗಳ ಪ್ರಶಂಸೆಯೂ ಕಂಡುಬರುವುದು. ಒಂದೇ ಪುರಾಣದಲ್ಲಿ ಇಂಥ ಪರಸ್ಪರ ವಿರುದ್ಧವಾದಗಳು ಕಾಣುವುವು. ಈ ದೇವತೆಗಳ ಮಹಾತ್ಮೆಗಳಲ್ಲದೆ, ಪುರಾಣಗಳಲ್ಲಿ ಸೃಷ್ಟಿಪ್ರಕರಣ, ರಾಜರುಗಳ ವಂಶ, ಅವುಗಳ ಚರಿತ್ರೆ, ಭಗವದವತಾರಗಳವರ್ಣನೆ, ಉಪಾಖ್ಯಾನಗಳು, ತೀರ್ಥಕ್ಷೇತ್ರಮಹಿಮಾ, ದಾನ, ಧರ್ಮ, ದಯಾ, ಆಚಾರ ಇವುಗಳ ಪ್ರಶಂಸಾಪರವಾದ ಉಪದೇಶ, ವ್ರತಮಹಾತ್ಮೆ ಮೊದಲಾದ ಅನೇಕ ವಿಷಯಗಳು ಕಂಡಿವೆ. ಇದಲ್ಲದೆ ಅಗ್ನಿ, ಬೃಹನ್ನಾರದೀಯ ಮೊದಲಾದ ಪುರಾಣಗಳಲ್ಲಿ, ಮಂತ್ರ, ಯಂತ್ರ, ನಾಟ್ಯ, ಸಂಗೀತ, ಛಂದಸ್ಸು, ಅಲಂಕಾರ ಮೊದಲಾದ ಅನೇಕ ಲೌಕಿಕವಿಷಯಗಳ ಪ್ರಸ್ತಾಪವೂ ಕಂಡುಬರುವುದು. ಇವೆಲ್ಲ ಇತ್ತೀಚೆಗೆ ಸೇರಿಸಿರಬಹುದಾದ ಅಂಶಗಳೆಂಬುದರಲ್ಲಿ ಸಂದೇಹವಿಲ್ಲ.

ಈ ಪುರಾಣಗಳ ಶೈಲಿಯಲ್ಲಿಯೇ ರಚಿಸಲ್ಪಟ್ಟ ಇನ್ನೊಂದು ಜಾತಿಯ ಗ್ರಂಥಗಳೇ ಆಗಮಗಳು. ಆಗಮವೆಂದರೆ ಸಂಪ್ರದಾಯವೆನ್ನಬಹುದು. ಇವುಗಳಲ್ಲೂ ಅನೇಕ ವಿಷಯಗಳ ಪ್ರಸ್ತಾಪವಿದ್ದರೂ ದೇವತಾರಾಧನೆಯ ವಿಷಯವೇ ಇದರ ಮುಖ್ಯ ಪ್ರತಿಪಾದ್ಯ ವಸ್ತು. ದೇವಾಲಯ ನಿರ್ಮಾಣ, ದೇವತಾ ಪ್ರತಿಷ್ಠಾ ವಿಚಾರ, ಲೋಹ, ದಾರು, ಮೃತ್ತಿಕಾ, ಶಿಲಾ ಮೊದಲಾದವುಗಳಿಂದ ಪ್ರತಿಮಾ ರಚಿಸುವ ವಿಧಾನ, ನಿತ್ಯನೈಮಿತ್ತಿಕ ದೇವತಾರಾಧನೆಯ ಕ್ರಮ, ಸಂಪ್ರೋಕ್ಷಣಾದಿ ಶುದ್ಧಿ ವಿಷಯ ಮೊದಲಾದವು ಇದರಲ್ಲಿ ಹೇಳಲ್ಪಟ್ಟಿದೆ, ಶೈವ ವೈಷ್ಣವ, ಸ್ಕಾಂದ ಮೊದಲಾದ ಭಿನ್ನ ದೇವತಾಪರವಾದ ಆಗಮಗಳುಂಟು. ಈ ಆಗಮಗಳು ವೇದಕ್ಕೆ ಹೆಚ್ಚು ಸಮ್ಮತವಲ್ಲವೆಂದು ಶಂಕರಾಚಾರ್ಯರ ಅಭಿಪ್ರಾಯ. ಆದರೆ ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರು ಇವುಗಳಿಗೂ ಹೆಚ್ಚಿನ ಪ್ರಮಾಣ್ಯ ಹೇಳುವರು.

ಇನ್ನು ಮಂತ್ರ ಮತ್ತು ತಂತ್ರ ಶಾಸ್ತ್ರಗಳೇ ಒಂದು ದೊಡ್ಡ ಸಾಹಿತ್ಯವಾಗುವುದು.

ಬಹುಶಃ ಇವು ಮಾಟ–ಮದ್ದು ಮೊದಲಾದ ಕ್ಷುದ್ರ ಸಿದ್ಧಿಗಳನ್ನವಲಂಬಿಸಿ ಬೆಳದಿರಬೇಕು. ಅಥರ್ವ ವೇದದಲ್ಲಿ ಇದರ ಪ್ರಸ್ತಾಪವಿರುವುದು ಸ್ಪಷ್ಟವಿದೆ. ಮುಂದೆ ಬ್ರಾಹ್ಮಣಾದಿಗಳಲ್ಲಿ ಇದಕ್ಕೆ ಹೆಚ್ಚಿನ ಅವಕಾಶ ದೊರೆಯಲಿಲ್ಲ. ಆದರೂ ಬ್ರಾಹ್ಮಣಗಳಲ್ಲಿ ಯಜ್ಞಯಾಗಾದಿಗಳ ಸಂದರ್ಭದಲ್ಲಿ ಸಣ್ಣ ಕ್ರಿಯೆಗಳಿಗೂ ಹೆಚ್ಚಿನ ಪ್ರಾಧಾನ್ಯ ಕೊಟ್ಟಿದ್ದರಿಂದ ಅವುಗಳಲ್ಲಿ ಯಾವುದೇ ಅದೃಷ್ಟ ಮಹಿಮೆ ಇರಬೇಕೆಂಬ ಭಾವನೆ ಬೆಳೆಯಲು ಅವಕಾಶವಾಯಿತು. ಜಡ ಪದಾರ್ಥಗಳಿಗೂ ಮಂತ್ರಗಳಿಂದ ಸಂಸ್ಕಾರ ಮಾಡುವುದು ಬ್ರಾಹ್ಮಣಗಳಲ್ಲಿ ಸಾಮಾನ್ಯ. ಜೊತೆಗೆ ವೇದಮಂತ್ರಗಳನ್ನು ಉಚ್ಚರಿಸುವಾಗ ಸ್ವರಗಳನ್ನು ಸರಿಯಾಗಿ ಘೋಷಿಸಬೇಕೆಂಬ ಕಟುವಾದ ನಿಯಮ ಅನೂಚಾನವಾಗಿ ನಡೆದುಬಂದಿರುವುದು. ಅದು ತಪ್ಪಿದ್ದರಿಂದ ''ಇಂದ್ರಶತ್ರೋ ಆಯಾಹಿ'' ಎಂಬ ಮಂತ್ರದ ಅರ್ಥವೇ ಬದಲಾಯಿತೆಂಬ ಐತಿಹ್ಯ ಗಮನಾರ್ಹವಾದುದು. ಇದರಿಂದ ಅಕ್ಷರಗಳಲ್ಲೂ ಮಹಿಮೆಯುಂಟೆಂದೂ ಅದನ್ನು ಒಂದು ಕ್ರಮದಲ್ಲಿ ಒಂದು ನಿಯಮಕ್ಕೆ ಒಳಪಟ್ಟು ಪುನಃ ಪುನಃ ಉಚ್ಚರಿಸಿದರೆ ಅದರಿಂದ ಮನೋಭೀಷ್ಟ ಸಿದ್ಧಿಸುವುದೆಂಬ ಭಾವನೆಬಲಿಯಿತು. ಮಂತ್ರಶಾಸ್ತ್ರದಲ್ಲಿ ಇದೇ ವಿಶೇಷವರ್ಣಿತವಾಗಿದೆ. ಬೇರೆ ಬೇರೆ ದೇವತೆಗಳನ್ನು ಒಲಿಸಿಕೊಳ್ಳಲು ಬೇರೆ ಬೇರೆ ಬೀಜಾಕ್ಷರಗಳನ್ನು ಜಪಿಸಬೇಕೆಂಬ ಸಂಪ್ರದಾಯವಿದೆ. ಹಾಗೆ ಬೇರೆ ಬೇರೆ ಅಭೀಷ್ಟಗಳನ್ನು ಪಡೆಯಲು ಯಾವ ಯಾವ ಕ್ರಿಯೆಗಳನ್ನು ನಡೆಸಬೇಕೆಂಬುದು ತಂತ್ರಶಾಸ್ತ್ರಗಳಲ್ಲಿ ಉಕ್ತವಾಗಿದೆ. ಈ ಶಾಸ್ತ್ರಗಳ ಬಗ್ಗೆ ಹೆಚ್ಚಿನ ಶೋಧನೆ ಅಗತ್ಯ.

10. ಇತಿಹಾಸ ಸಂಶೋಧಕರ ಅಭಿಪ್ರಾಯ ವಿಮರ್ಶೆ

ಹಿಂದೂಮತದ ಈ ವಿವೇಚನೆಯು ಅಧುನಿಕ ಇತಿಹಾಸ ಸಂಶೋಧಕರಿಂದ ನಡೆದುದು. ಧರ್ಮಕ್ಕೆ ಅವಶ್ಯಬೇಕಾಗುವ ಅತೀಂದ್ರಿಯ ಪದಾರ್ಥಗಳಲ್ಲಿನ ನಂಬಿಕೆಯು ಈ ವಿವೇಚನೆಯಲ್ಲಿ ಇಲ್ಲದಿರುವುದರಿಂದ ಇದರಲ್ಲಿ ಕೆಲವು ದೊಡ್ಡ ದೋಷಗಳು ಕಂಡುಬರುವುವು. ಎಲ್ಲ ವಿಮರ್ಶಕರೂ ಆರಂಭದಲ್ಲಿ ಕೆಲವು ಸಂಶೋಧಕರು ಮಾಡಿದ ಕೆಲವು ನಿರ್ಣಯಗಳನ್ನು ಒಪ್ಪಿಕೊಂಡೇ ಮುಂದುವರೆಯುವುದರಿಂದ ಈ ದೋಷಗಳು ಉದ್ಭವಿಸುವುದು ಸಹಜ.

(a) ವೇದಗಳು–ಸೈಂಧವ ಸಂಸ್ಕೃತಿ

ಸಂಸ್ಕೃತಭಾಷೆಗೂ ಇರಾನಿಯನ್, ಗ್ರೀಕ್ ಮತ್ತು ರೋಮನ್ ಭಾಷೆಗಳಿಗೂ, ಇರತಕ್ಕ ಬಾಂಧವ್ಯವನ್ನು ಪರಿಶೀಲಿಸಿ, ಇವೆಲ್ಲ ಘನಿಷ್ಟವಾಗಿ ಸಂಬಂಧಹೊಂದಿರಬೇಕೆಂದೂ, ಇವುಗಳಲ್ಲಿ ಗ್ರೀಕ್, ರೋಮನ್ ಭಾಷೆ, ಅವುಗಳ ಸಂಸ್ಕೃತಿಯ ಕಾಲಕ್ಕೂ ಸಂಸ್ಕೃತಭಾಷೆ ಮತ್ತು ಸಂಸ್ಕೃತಿಯ ಕಾಲಕ್ಕೂ ವಿಶೇಷ ಅಂತರವಿರಲಾರದೆಂಬ ಅಂಶವನ್ನು ಮುಖ್ಯವಾಗಿಟ್ಟುಕೊಂಡು, ವಿಮರ್ಶಕರು ಗ್ರೀಕ್ ಭಾಷೆಯ ಕಾಲವನ್ನು

ಕ್ರಿ. ಪೂ. ಕೆಲವು ಶತಕಗಳೆಂದು ನಿರ್ಣಯಿಸಿ, ಸಂಸ್ಕೃತಭಾಷೆಗೆ ಮೂಲವಾದ ವೇದಗಳ ಕಾಲವೂ ಸ್ವಲ್ಪ ಹೆಚ್ಚು ಕಡಿಮೆ ಇದಕ್ಕೆ ಹೊಂದಿಕೊಂಡಿರಬೇಕೆಂದೂ ಊಹಿಸಿದರು. ಈ ಊಹೆಗೆ ಸರಿಯಾಗಿ ಇತರ ವಿಷಯಗಳನ್ನು ಸಮನ್ವಯ ಮಾಡಿಕೊಂಡರು. ಬ್ಯಾಬಿಲೋನಿಯನ್, ಅಸ್ಸೀರಿಯನ್, ಚಾಲ್ಡಿಯಸ್ ಮತ್ತು ಇತ್ತೀಚೆಗೆ ಕಂಡುಹಿಡಿದ ಸೈಂಧವ– ಈ ಸಂಸ್ಕೃತಿಗಳು ಪ್ರಾಚೀನವೆಂಬುದು ವ್ಯಕ್ತಪಟ್ಟಿದ್ದರಿಂದ ಇವೆಲ್ಲವೂ ವೇದಗಳಿಗಿಂತ ಪ್ರಾಚೀನವಾಗಿರಬೇಕು. ವೇದಗಳಲ್ಲಿ ಬರುವ ದಸ್ಯು ಮೊದಲಾದ ಶಬ್ದಗಳಿಗೂ, ಶತ್ರುಗಳನ್ನು ನಾಶಮಾಡು ಎಂಬಿವೇ ಮೊದಲಾದ ಪ್ರಾರ್ಥನೆಗಳಿಗೂ ಇಂದ್ರನ ವಿಶೇಷಣವಾದ ವೃತ್ರಘ್ನ ಮೊದಲಾದ ಶಬ್ದಗಳಿಗೂ, ಈ ಊಹಾಪೋಷಿತ ಸಿದ್ಧಾಂತಕ್ಕೆ ಅನುಗುಣವಾಗಿ ಅರ್ಥ ಮಾಡಿದರು. ದ್ರಾವಿಡರೆಂಬುವರೇ ಈ ದಸ್ಯುಗಳು. ಅವರಿಗೂ ವೇದಕಾಲದ ಆರ್ಯರಿಗೂ ಕಲಹಗಳಾಗಿರಬೇಕು. ವೈದಿಕ ಆರ್ಯರು ಮತ್ತು ಗ್ರೀಕ್ ಸಂಸ್ಕೃತಿಯ, ಇರಾನಿಯನ್ ಸಂಸ್ಕೃತಿಯ ಜನರೂ ಒಂದೇ ಬುಡಕಟ್ಟಿಗೆ ಸೇರಿದ್ದರಿಂದ ಆ ಮೂಲ ಭಾರತದಲ್ಲಿರಲಾರದು. ಯುರೋಪ್, ಇರಾನ್ ಮತ್ತು ಭಾರತ ಈ ಮೂರು ದೇಶಗಳಿಗೆ ಮಧ್ಯಸ್ಥಳವಾದ ಮಧ್ಯ ಏಷ್ಯವೇ ಇದರ ಮೂಲಸ್ಥಳವಾಗಿರಬೇಕು. ಇವರು ಅಲ್ಲಿಂದ ವಲಸೆ ಹೊರಟು ಬೇರೆ ಬೇರೆ ದೇಶಗಳಲ್ಲಿ ನೆಲಸಿರಬೇಕು. ಹಾಗೆ ವಲಸೆ ಹೊರಟು ಭಾರತಕ್ಕೆ ಬಂದ ಆರ್ಯರು ದ್ರಾವಿರೊಡನೆ ಕಲಹಮಾಡಿ ದ್ರಾವಿಡರನ್ನು ಸೋಲಿಸಿ ಅವರೊಡನೆ ಸಂಬಂಧ ಬೆಳೆಸಿ ಭಾರತದಲ್ಲಿ ನೆಲೆಸಿದರು. ಸೈಂಧವಸಂಸ್ಕೃತಿ ದ್ರಾವಿಡಸಂಸ್ಕೃತಿ ಇರಬೇಕು. ಇದೇ ಇವರ ಊಹಾಸರಣಿ.

ವಿಮರ್ಶಕರು ವೇದಗಳ ವಿಚಾರ ಮಾಡುವಾಗ ಇಂತಹ ಯಾವ ತಿಳುವಳಿಕೆಗೂ ಆಸ್ಪದ ಕೊಡಬಾರದು. ಮುಖ್ಯ ಅದರದರ ಗುಣದೋಷಗಳ ಮೇಲೆ ಅದರದರ ನಿರ್ಣಯ ಮಾಡಬೇಕು. ವೇದಗಳನ್ನು ಜಗತ್ತಿನ ಅತ್ಯಂತ ಪ್ರಾಚೀನ ಗ್ರಂಥಗಳೆಂದು ಎಲ್ಲರೂ ಒಕ್ಕೊರಲಿನಿಂದ ಒಪ್ಪಿರುವರು. ಇದಕ್ಕಿಂತಲೂ ಪ್ರಾಚೀನವಾದ ಇತಿಹಾಸ ಸೂಚಕ ಗ್ರಂಥ ಯಾವುದೂ ದೊರೆತಿಲ್ಲವೆಂದೂ ಹೇಳುವರು. ಸೈಂಧವಾದಿ ಸಂಸ್ಕೃತಿಗಳು ಇವುಗಳಿಗಿಂತಲೂ ಪ್ರಾಚೀನವೆಂದು ಹೇಳಲು ಉತ್ಖನನದಿಂದ ದೊರೆತ ಕೆಲವು ನಿದರ್ಶನಗಳೇ ಇವರಿಗೆ ಆಧಾರ. ಹರಪ್ಪ ಮತ್ತು ಮೊಹೆಂಜೊದಾರೋವಿನಲ್ಲಿ ದೊರೆತ ಅವಶೇಷಗಳಲ್ಲಿನ ಕೆಲವು ಸಾಮಗ್ರಿಗಳಲ್ಲಿ ನಾಣ್ಯಗಳ ಮೇಲೆ ಇರುವ ಕೆಲ ಅಕ್ಷರಗಳು ಮುಖ್ಯವಾದುವು. ಇದು ದ್ರಾವಿಡ ಭಾಷೆಯಂತೆಯೇ ಸಂಶ್ಲೇಷ (Agglutinating) ಭಾಷೆಯಾಗಿರಬೇಕೆಂದು ಸರ್ ಜಾರ್ಜ್ ಮಾರ್ಷಲ್ಲರ ಊಹೆ. ಆರ್ಯರು ಬರುವುದಕ್ಕೆ ಮೊದಲು ದ್ರಾವಿಡರು ಉತ್ತರ ಭಾರತದಲ್ಲಿ ಇದ್ದರಾದ್ದರಿಂದ ಇವರ ಭಾಷೆಯೇ ಸೈಂಧವ ಸಂಸ್ಕೃತಿಯ ಭಾಷೆಯೆಂಬುದು ಅವರ ವಾದ. ಅದಕ್ಕೆ ಸರಿಯಾಗಿ ಅಲ್ಲಿ ಸಿಕ್ಕ ಮಾನವ ದೇಹಶೇಷಗಳನ್ನು ಪರೀಕ್ಷಿಸಿ ದ್ರಾವಿಡ ಜನಾಂಗದ ಬುಡಕಟ್ಟಿಗೇ ಅದು

ಸೇರಿದುದೆಂದು ಅವರು ನಿರ್ಣಯಿಸಿದರು, ಆದರೆ ಇದಾವುದೂ ನಿಶ್ಚಿತ ಪ್ರಮಾಣವಲ್ಲ. ಮೊಹೆಂಜೊದಾರೋವಿನ ಜನಜೀವನ ಗ್ರಾಮೀಣವಲ್ಲವೆಂದೂ ನಾಗರಿಕವೆಂದೂ ಅದೇ ಪಂಡಿತರು ಅಭಿಪ್ರಾಯಪಡುತ್ತಾರೆ. ವೈದಿಕ ಜೀವನ ಗ್ರಾಮೀಣವೆಂದು ಅವರ ಮತ. ಇದರಿಂದಲೇ ಇದನ್ನು ವೈದಿಕಸಂಸ್ಕೃತಿಯ ಅನಂತರ ಬಂದುದೆಂದು ಹೇಳಬಹುದು. ಸೈಂಧವ ಸಂಸ್ಕೃತಿಯಲ್ಲಿನ ಕುರುಹುಗಳು ಅಲ್ಲಿ ನಾನಾ ಜನಾಂಗಗಳ ಸಮಾವೇಶ–ವಾಗಿತ್ತೆಂಬುದಕ್ಕೆ ಸೂಚಕವಾಗಿದೆಯೇ ಹೊರತು ಅದು ದ್ರಾವಿಡಮಾತ್ರಾಧಿಷ್ಠಿತವೆಂದು ತಿಳಿಸುವುದಿಲ್ಲ, ನಾಣ್ಯಗಳ ಭಾಷೆಯೂ ಅರ್ಥವಾಗಿಲ್ಲ. ಅಲ್ಲಿ ರಾವ್‌ಬಹದ್ದೂರ್ ದಯಾರಾಂ ಸಹನಿಯವರಿಂದ ಕಂಡುಹಿಡಿಯಲ್ಪಟ್ಟ ಒಂದು ನೃತ್ಯ ಭಂಗಿಯ ಹಿತ್ತಾಳೆಯ ಸ್ತ್ರೀ ಮೂರ್ತಿಯು ದ್ರಾವಿಡ ಚಿನ್ಹೆಯನ್ನು ಸೂಚಿಸುವುದಿಲ್ಲ, ಅಲ್ಲಿ ಪ್ರಚಾರದಲ್ಲಿದ್ದ ಲಿಂಗಪೂಜೆ ಮತ್ತು ಶೈವಾರಾಧನೆಯೂ ವೈದಿಕವೇ. ಋಗ್ವೇದದಲ್ಲಿ VII 21-5 ಮತ್ತು X 99-3 ಈ ಎರಡು ಸ್ಥಳದಲ್ಲಿ ಲಿಂಗಪೂಜೆಯು ವಿಹಿತವಾಗಿದೆಯೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಅಲ್ಲದೇ ಅಲ್ಲಿ ಕೆಲವು ಮಂದಿರಗಳ ಅವಶೇಷಗಳು ದೇವಸ್ಥಾನಗಳಂತೆ ತೋರುವುದು. ಇದರಿಂದಲೂ ಇದು ವೈದಿಕ ಸಂಸ್ಕೃತಿಗಿಂತಲೂ ಅರ್ವಾಕ್ತನವೆಂದು ಹೇಳಬಹುದು. ಈ ಕೆಲಕಾರಣಗಳಿಂದ ಇದಕ್ಕಿಂತಲೂ ವೈದಿಕ ಸಂಸ್ಕೃತಿಯೇ ಪೂರ್ವವೆಂದು ಡಾ॥ ಲಕ್ಷ್ಮಣ ಸ್ವರೂಪರು ಎಂಟನೆಯ ಆಲ್ ಇಂಡಿಯಾ ಓರಿಯಂಟಲ್ ಕಾನ್ಫರೆನ್ಸಿನ ಅಧ್ಯಕ್ಷಭಾಷಣದಲ್ಲಿ ವಿಚಾರ ಮಾಡಿದ್ದಾರೆ.

(b) ಭಾರತವೇ ಆರ್ಯರ ಮೂಲಸ್ಥಾನ

ಸರ್‌ಜಾನ್ ಮಾರ್ಷಲ್‌ರ ವಾದಕ್ಕೆ ಆರ್ಯರು ಹೊರಗಿನಿಂದ ಬಂದರೆಂಬುದೇ ಆಧಾರ. ಅದಕ್ಕೆ ಕಾರಣ ಗ್ರೀಕ್ ಸಂಸ್ಕೃತಿಯ ಜನಾಂಗದವರೊಂದಿಗೆ ಆರ್ಯರನ್ನು ಕಾಲತಃ ಒಂದುಗೂಡಿಸಬೇಕೆಂಬ ಹಂಬಲ. ಇದೇ ದೋಷಗ್ರಸ್ತವಾದುದು, ಆರ್ಯರು ಹೊರಗಿನಿಂದ ಭಾರತಕ್ಕೆ ಬಂದರೆಂಬುದೇ ಅನಿಶ್ಚಿತ ಸಿದ್ಧಾಂತ. ಇತ್ತೀಚೆಗೆ ಅನೇಕ ಸಂಶೋಧಕ ಪಂಡಿತರು ಇದನ್ನು ಸಂಶಯಪಡಹತ್ತಿದ್ದಾರೆ. ಈ ವಿಷಯವನ್ನು ಬಹಳ ಯುಕ್ತಿಯುಕ್ತವಾಗಿ ವಿಚಾರಮಾಡುತ್ತಾ ಡಾ॥ ರಾಧಾ ಕುಮುದಮುಖರ್ಜಿಯವರು ಭಾರತ ಜನಾಂಗಗಳ ತೊಟ್ಟಿಲು, ಅಂದರೆ ಮಾತೃಸ್ಥಾನ ಮತ್ತು ಭಾರತದ ಸಂಸ್ಕೃತಿಗೆ ಮೂಲಸ್ಥಳವೂ ಭಾರತವೇ ಎಂದು ಘೋಷಿಸಿದ್ದಾರೆ. ಡಾ॥ ಎ. ಆರ್. ಬ್ಯಾನರ್ಜಿಯವರು ಬುಕ್ಸಾರ್ ಎಂಬಲ್ಲಿ ಸುಮಾರು ಐವತ್ತು ಅಡಿಗಳ ಕೆಳಗೆ 'ಮೃತ್ ಪ್ರಧಾನ' ಯುಗದ ಒಂದು ನಗರವನ್ನು ಉತ್ಖನನ ಮಾಡಿರುತ್ತಾರೆ. ಅದರಲ್ಲಿ ಸುಮರ್ ಮತ್ತು ಸಿಂಧ್ ಸಂಸ್ಕೃತಿಗೆ ಸಂಬಂಧಿಸಿದಂತಹ ಒರಟು ಮೃಣ್ಮಯ ಪ್ರತಿಮೆಗಳೂ (Terracottas) ಪ್ರಾಕ್–ಸುಮರ್‌ಕಾಲದ ಎಂದು ಮತ್ತು ಏಜಿಯನ್ ಸಂಸ್ಕೃತಿ ಹೊಂದಿದ ನುಣುಪಾದ ಮೃಣ್ಮಯ ಪ್ರತಿಮೆಗಳೂ ದೊರೆತಿವೆ. ಇದರಿಂದ ಭಾರತದ ಸಂಸ್ಕೃತಿಗೆ ಪುರಾಶಿಲಾಯುಗ

(Palaeolithic) ಮತ್ತು ನವ ಶಿಲಾಯುಗ (Neolithic) ಕ್ಕೆ ಮಾತ್ರ ಸೇರಿದ್ದೆಂಬ ಊಹೆಯು ತಪ್ಪಾಗುವುದು. ಸುಮರ್‌ಜನಾಂಗದ ಮತ್ತು ಸುಮರ್ ಸಂಸ್ಕೃತಿ ಭಾರತದಿಂದ ಬಂದುದೆಂದು Ancient History of the Near East ಗ್ರಂಥದಲ್ಲಿ ಪಂಡಿತ ಹಾಲ್ (Hall) ರವರು ಅಭಿಪ್ರಾಯಪಡುತ್ತಾರೆ. ಋಗ್ವೇದದ ನದೀ ಸೂಕ್ತಗಳಲ್ಲಿ ಗಂಗಾ ಯಮುನಾ ನದಿಗಳೇ ಮೊದಲಿಗೆ ಬರುವುದರಿಂದ ಸಿಂಧೂ ಬಯಲಿನಲ್ಲಿ ಆರ್ಯರು ಬಂದು ನೆಲೆಸಿದರೆಂದೂ ಸಂಹಿತೆಗಳ ಕಾಲದಲ್ಲಿ ಅಲ್ಲೇ ಇದ್ದರೆಂದೂ ಹೇಳುವುದು ಅನುಚಿತವಾಗುವುದು. ಸರಸ್ವತಿ ನದಿಗೆ ವೇದದಲ್ಲಿ ವಿಶೇಷ ಪ್ರಾಶಸ್ತ್ಯವಿದೆ, ಸರಯೂ ನದಿಯ ಉಲ್ಲೇಖವೂ ಇದೆ. ಇದರಿಂದ ಆರ್ಯರು ಹೊರಗಿನಿಂದ ಬಂದರೆಂಬುದು ಸಾಧಿತವಾಗುವುದಿಲ್ಲ. ಭೋಗಾಜ್ಕೋ (Bogazkoi) ಶಾಸನಗಳ ಪ್ರಕಾರ ಆರ್ಯರು ಕ್ರಿ. ಪೂ. 1500ರಲ್ಲಿ ಭಾರತದಿಂದ ಹೊರ ಹೊರಟರೆಂದು ಹೇಳಿದೆ. ಧಾನ್ಯಗಳ ಸ್ವರೂಪದಿಂದ ಸಂಸ್ಕೃತಿಯ ನಿರ್ಣಯ ಮಾಡುವುದೊಂದು ವಾಡಿಕೆ. ಇದನ್ನು ಪ್ರೊ॥ ಈಲಿಯಟ್ ಸ್ಮಿಥ್. ಪ್ರೊ॥ W.J. ಪರ್ರಿ, ಪ್ರೊ ॥ ಫ್ಲ್ಯೂರಿ ಸಮರ್ಥಿಸಿದ್ದಾರೆ. ಇದರ ಪ್ರಕಾರ Inequalities of Man ಎಂಬ ಪುಸ್ತಕದಲ್ಲಿ ಪ್ರೊ॥ ಜೆ. ಬಿ. ಎಸ್. ಹಾಲ್ಡೇನರು ಅಬಿಸೀನಿಯದ ಗೋಧಿ ಮತ್ತು ಅಫ್‌ಘಾನಿಸ್ಥಾನದ ಆಗ್ನೇಯಕ್ಕಿರುವ ಗೋಧಿ ಇವೆರಡು ಮೂಲಸಂಸ್ಕೃತಿಯ ಕುರುಹು ಎಂದು ವಿಚಾರ ಮಾಡಿದ್ದಾರೆ. ಇದರ ಪ್ರಕಾರವೂ ಭಾರತವೇ ಮಾನವ ಜನಾಂಗದ ಮೂಲಸ್ಥಾನವಾಗುವುದು. ಡಾ॥ ನೃಪೇಂದ್ರ ಕುಮಾರದತ್ತರೂ ಭಾರತವೇ ಆರ್ಯರ ಮೂಲಸ್ಥಾನವಾಗಿರಬೇಕೆಂದು ವಿಚಾರ ಮಾಡಿದ್ದಾರೆ.

(C) ವೇದಗಳ ಕಾಲ

ಆರ್ಯರ ಮೂಲಸ್ಥಾನಕ್ಕೆ ಹೊಂದಿಕೊಂಡಂತೆ ಇರುವ ಇನ್ನೊಂದು ಪ್ರಶ್ನೆಯೆಂದರೆ ವೇದಗಳ ಕಾಲ. ಇದೊಂದು ಅತ್ಯಂತ ಜಟಿಲವಾದ ಸಮಸ್ಯೆ. ಇದರ ವಿಷಯದಲ್ಲಿರುವಷ್ಟು ಭಿನ್ನಾಭಿಪ್ರಾಯವು ಇನ್ನಾವುದರಲ್ಲೂ ಇಲ್ಲ. ಪ್ರತಿಯೊಬ್ಬ ಪಂಡಿತನೂ ಇತರರ ವಾದವನ್ನು ಖಂಡಿಸುವುದರಲ್ಲಿ ಎಷ್ಟು ನಿಶ್ಚಿತ ಧೋರಣವನ್ನು ತೋರುವನೋ ತನ್ನ ಸಿದ್ಧಾಂತವನ್ನು ಹೇಳುವುದರಲ್ಲಿ ಅಷ್ಟೇ ಸಂಶಯಗ್ರಸ್ತನಾಗಿರುವನು. ಹೀಗಾಗಿ ಎಲ್ಲ ವಾದಗಳೂ ಸಂಶಯದಲ್ಲಿ ಪರ್ಯವಸಾನ ಹೊಂದುವುದು. ಒಬ್ಬರ ವಾದಕ್ಕೂ ಇನ್ನೊಬ್ಬರ ವಾದಕ್ಕೂ ಯುಗಗಳಷ್ಟು ಭೇದ ತೋರುವುದು. ಶ್ರೀ ಧೀರೇಂದ್ರ ಮುಖ್ಯೋಪಾಧ್ಯಾಯರು ವೃಷಾಕಪಿಸೂಕ್ತದ ಆಧಾರದಿಂದ ಜ್ಯೋತಿಷ ವಿಷಯಗಳನ್ನು ಪರಿಶೀಲಿಸಿ ಸುಮಾರು 30,000 ವರ್ಷಗಳಷ್ಟು ಹಿಂದಿನವು ವೇದಗಳೆಂದು ಹೇಳಿದರೆ, ಇನ್ನೊಬ್ಬ ಪಂಡಿತರು ಕ್ರಿ. ಪೂ. 200 ವರ್ಷಗಳಷ್ಟು ಈಚಿನವೆಂದು ಹೇಳುವರು.

ವೇದಗಳಲ್ಲಿನ "ಸರಸ್ವತಿ ನದಿಯು ಸಮುದ್ರಕ್ಕೆ ಸೇರುವುದೆಂ"ಬ ಅಂಶ, ಚತುಸ್ಸಮುದ್ರಗಳ

ಅದರಲ್ಲೂ ಪೂರ್ವ ಸಮುದ್ರದ ಉಲ್ಲೇಖ, ಸಪ್ತಸಿಂಧವಃ ಎಂಬ ಪದಪ್ರಯೋಗ ಇವುಗಳ ಆಧಾರದಮೇಲೆ ಡಾ॥ ಎ. ಸಿ. ದಾಸ್‌ರವರು ಈಗಿನ ರಾಜಪುತ್ರಸ್ಥಾನ ಸಮುದ್ರವಾಗಿತ್ತೆಂದೂ, ಸುಮಾರು 25,000 ವರ್ಷಗಳ ಹಿಂದೆ ವೇದಗಳ ರಚನೆಯಾಗಿರಬೇಕೆಂದೂ ವಾದ ಹೂಡಿರುವರು.

ಪ್ರೊ॥ ಯಾಕೋಬಿ ಮತ್ತು ಬಾಲಗಂಗಾಧರ ತಿಲಕರವರು ಕ್ರಿ. ಪೂ. 6000 ದಿಂದ 4500 ವರ್ಷಗಳ ಅವಧಿಯಲ್ಲಿ ವೇದಗಳು ರಚಿತವಾಗಿರಬೇಕೆಂದು ವಿಚಾರ ಮಾಡಿರುವರು. ಮಾಕ್ಸ್‌ಮುಲ್ಲರ್ ಮತ್ತು ಮಾಕ್ಡೆನಲ್‌ರವರು ಕ್ರಿ. ಪೂ. 1500 ರಿಂದ 2000 ವರ್ಷಗಳು ವೇದಗಳಕಾಲವೆಂದು ಹೇಳುವರು. ಪ್ರೊ॥ ವಿಂಟರ್‌ನಿಟ್ಸ್‌ರವರು ಮಧ್ಯಮಾರ್ಗವನ್ನು ಅನುಸರಿಸುತ್ತೇವೆಂದು ಹೇಳಿಕೊಂಡು ಕ್ರಿ. ಪೂ. 3000 ವರ್ಷಗಳು ವೇದಗಳ ಕಾಲವೆಂದು ಅಭಿಪ್ರಾಯಪಡುವರು.

ಜ್ಯೋತಿಷ, ಭೂಗರ್ಭಶಾಸ್ತ್ರ ಮೊದಲಾದವುಗಳ ಆಧಾರದಿಂದ ವೇದಗಳ ಕಾಲನಿರ್ಣಯ ಮಾಡಲು ಹೊರಟ ದಾಸ್, ಯಾಕೊಬಿ, ಟಿಳಕ್ ಇವರ ವಿಚಾರ ಹಾಗಿರಲಿ. ಮಾಕ್ಡೆನಲ್ ಮೊದಲಾದ ಪಾಶ್ಚಾತ್ಯ ಪಂಡಿತರ ನಿರ್ಣಯಕ್ಕೆ ಕಾರಣವಾದುದು ಆರ್ಯರು ಹೊರಗಿನಿಂದ ಬಂದರೆಂಬ ಊಹೆ. ಅವೆಸ್ಟ ಮತ್ತು ವೇದಗಳಿಗಿರುವ ನಿಕಟವಾದ ಹೋಲಿಕೆ, ಇದರ ಜತೆಗೆ ವೇದಗಳ ಕೊನೆಯ ಭಾಗವಾದ ಉಪನಿಷತ್ತುಗಳ ಕಾಲ, ಬುದ್ಧನ ಕಾಲ ಒಂದೇ ಆಗಿರಬೇಕೆಂದೂ, ಇದಾದ ಇನ್ನೂರು ಮುನ್ನೂರು ವರ್ಷಗಳಲ್ಲೇ ಅಲೆಗ್ಸಾಂಡರನು ಭಾರತದ ದಂಡಯಾತ್ರೆ ನಡೆಸಿದನೆಂದೂ ಅವರು ತರ್ಕಿಸುವರು.

ಸರ್ ವಿಲಿಯಂ ಜೋನ್ಸರು 1795 ನೇ ಏಷ್ಯಾಟಿಕ್ ರಿಸರ್ಚಸ್ (IV. XXXII P. 11)ನಲ್ಲಿ ಮೆಗಾಸ್ತನೀಸನೆಂಬ ಗ್ರೀಕ್ ರಾಯಭಾರಿಯ ಬರಹಗಳಲ್ಲಿ ಬಂದ ಸ್ಯಾಂಡರ್‌ಕೊಟಸ್ (Sandrakottus) ಚಂದ್ರಗುಪ್ತಮೌರ್ಯನೆಂದೂ ಸಿದ್ಧಾಂತಮಾಡಿ ಅದಕ್ಕೆ ಕೆಲವು ಸಮರ್ಥನೆಗಳನ್ನು ಕೊಟ್ಟರು. ಆದರೆ ಈಚೆಗೆ ಕೆಲ ಪಂಡಿತರು ಅವರ ವಾದವನ್ನು ವಿಮರ್ಶಿಸಿ ಮೇಗಾಸ್ತನೀಸನು ಗುಪ್ತರ ಚಂದ್ರಗುಪ್ತರ ಸಮಕಾಲಿಕನೆಂದು ಹೇಳುವರು. ಇವರ ಅಭಿಪ್ರಾಯಕ್ಕೆ ಇತಿಹಾಸದ ಅಂಶಗಳು ಸಾಧಕವಾಗಿರುವುವು. ಮತ್ತು ಪುರಾಣಗಳ ವಂಶಾವಳಿಗಳ ಪ್ರಕಾರ ನಂದಸಂತತಿ ರಾಜ್ಯಕ್ಕೆ ಬಂದಂದಿನಿಂದ ಲೆಕ್ಕ ಹಿಡಿದರ ಮಹಾಭಾರತ ಯುದ್ಧವು ಕ್ರಿ. ಪೂ. 3137ರಲ್ಲಿ ನಡೆಯಿತೆಂದು ತಜ್ಞರು ಅಭಿಪ್ರಾಯಪಡುವರು. ಅಂದರೆ ಕ್ರಿ. ಪೂ. 1532ರಲ್ಲಿ ಚಂದ್ರಗುಪ್ತಮೌರ್ಯನು ಸಿಂಹಾಸನಾರೋಹಣ ಮಾಡಿರಬೇಕು. ಅದಾದ ಸುಮಾರು 1200 ವರ್ಷಗಳ ಮೇಲೆ ಬಂದ ಯವನರಾಜ ಅಲೆಕ್ಸಾಂಡರನಿಗೂ ಅವನಿಗೂ ಯಾವ ಸಂಬಂಧವೂ ಇಲ್ಲ.

ಮಹಾಭಾರತದ ಯುದ್ಧವೇ ಇಷ್ಟು ಹಿಂದಿನದಾಗಿರುವಾಗ ವೇದಗಳ ಕಾಲವನ್ನು

ವಿಮರ್ಶಕರು ಹೇಳುವುದು ಸರಿಯಲ್ಲ. ವೇದಗಳಲ್ಲಿ ಕಾಲಸೂಚಕ ಅಂಶಗಳೇ ಇಲ್ಲ[14] ವೇದಗಳಲ್ಲಿ ಆರ್ಯರು ಹೊರದೇಶದಿಂದ ಬಂದರೆಂಬ ಉಲ್ಲೇಖವಿಲ್ಲ. [15] ಆದ್ದರಿಂದ ವೇದದ ಕಾಲವನ್ನು ನಿರ್ಧರವಾಗಿ ನಿರ್ಣಯ ಮಾಡುವುದಾಗಲೀ [16] ವೇದಮಂತ್ರಗಳ ಅರ್ಥ ಮಾಡಿ ಅದರಿಂದ ಆರ್ಯರು ಹೊರಗಿನಿಂದ ಬಂದವರು, ಅವರು ಈ ರೀತಿಯ ಜೀವನ ನಡೆಸುತ್ತಿದ್ದರು ಎಂದು ಮುಂತಾದ ವಾದ ಹೂಡುವುದಾಗಲೀ ಅಸಂಗತವಾಗುವುದು. ಏಕೆಂದರೆ ವೇದಮಂತ್ರಗಳ ಅರ್ಥ ಅತ್ಯಂತ ಸಂದಿಗ್ಧ; ಅಲ್ಲಿಯ ಶಬ್ದ ಪ್ರಯೋಗ ಅತಿ ಪ್ರಾಚೀನ, ವ್ಯಾಕರಣ ನಿಯಮಾತೀತ, ಇದರ ಶಬ್ದ ಕೋಶವೆಲ್ಲ ಪಂಡಿತ್ಯೆಕಜ್ಞೇಯ, ಅದರಲ್ಲೂ ಬರಿಯ ರಹಸ್ಯಾರ್ಥಗರ್ಭಿತ ಮತ್ತು ಯಜ್ಞಪ್ರಕ್ರಿಯಾಪರ. ಆದ್ದರಿಂದ ಅನೇಕ ಮಂತ್ರಗಳ ಅರ್ಥ ತಿಳಿಯದೇ ಹಾಗೇ ಉಳಿದಿದೆ. ಪ್ರತಿ ಮಂತ್ರದಲ್ಲೂ ಅರ್ಥವಾಗದ ಶಬ್ದ ಒಂದಾದರೂ ಇರದೇ ಇರುವುದಿಲ್ಲ ಎಂದು ಅನೇಕ ಪಾಶ್ಚಾತ್ಯ ಪಂಡಿತರೇ ಅಭಿಪ್ರಾಯಪಟ್ಟಿರುವರು. [17]

(d) ವೇದಾರ್ಥ ಮತ್ತು ಆರ್ಯರಜಾತಿ ವಿಸ್ತರಣ

ವೇದಕ್ಕೆ ಅರ್ಥಮಾಡುವಾಗ ನೂತನ ಯತ್ನಗಳಿಗೆ ಕೈಹಾಕಿದರಾಗಲೀ, ತಮ್ಮ ಬುದ್ಧಿಶಕ್ತಿಯನ್ನುಪಯೋಗಿಸಿದರಾಗಲೀ ಅದು ಕೇವಲ ಅಸಂಬಂದ್ಧ ಪದಪುಂಜವೆನಿಸುವುದು. ಪಾಶ್ಚಾತ್ಯ ಪಂಡಿತರು ಮಾಡಿರುವ ಅರ್ಥ ಈ ರೀತಿಯದು. ಇದನ್ನು ಅರ್ಥಮಾಡುವಾಗ ನಿರುಕ್ತಾದಿ ವೇದಾಂಗಗಳ ಸಹಾಯವನ್ನು ಪಡೆದು ಸಂಪ್ರದಾಯವನ್ನು ಶರಣು ಹೋಗಬೇಕು. ಈ ಬೆಳಕಿನಲ್ಲಿ ಅರ್ಥಮಾಡಿದರೆ ಆಗ ಅದರಿಂದ ಹೊರ ಹೊಮ್ಮುವ

14. From the entire Vedic period, we have not one single piece of antiquarian or archaeological material, not one bit of property, not a building, not a monument, not a coin, jewel or utensil.
-Religion of the Veda, P.20, Bloomfield

15 It is however certain that the Rigveda offers no assistance in determining the mode in which the Vedic Indians entered India. --Rapson's Cambridge History of India Vol. I, P. 70

16 The date assigned to the poetry of the Veda is and will always remain hypothetical --Max Muller, Physical Religion, P. 22.
Whether the Vedic hymns were composed 1000 or 1500 or 2000 or 3000 years B. C. no power on earth will determine. --ibid p. 91

17. The Rigveda is not any easy book. Its dialect is archaic and there are a large number of words which occur only once. The vocabulary is priestly, full of mystic allusions to the technique of sacrifice. Hence while a considerable part of the Rigveda is fairly clear, there are many simple stanzas which still remain obscure. Moreover there is hardly a single hymn in the Rigveda in which there is not some obslu obsecure word or difficult phrase religion of Rig Veda -Griswold

ಅಭಿಪ್ರಾಯದಿಂದ "ಸಮಸ್ತ ವೇದದಲ್ಲೂ ಒಂದು ನಿಷ್ಕೃಷ್ಟ ಅರ್ಥವಿದೆ. ಇದು ಬಹುದೇವತಾವಾದವನ್ನು ತಿಳಿಸುವುದಲ್ಲ. ಆಯಾ ದೇವತೆಗಳನ್ನೇ ಉತ್ಕೃಷ್ಟರೆಂದು ಹೇಳುವ ಹುಚ್ಚುಗೀತ ಅದಲ್ಲ. ಅದರಲ್ಲಿ ಎಲ್ಲ ಕಡೆಗೂ ನಾರಾಯಣನೇ ಪರದೇವತಾ ಎಂಬಂಶ [18] ಉಕ್ತವಾಗಿದೆ." ಎಂಬುದು ವ್ಯಕ್ತವಾಗುವುದು. ವೇದದಲ್ಲಿ ಐತಿಹಾಸಿಕ ವಿಷಯಗಳಿಗೆಡೆಯಿಲ್ಲ. ವೈದಿಕ ಉಪದೇಶವೆಲ್ಲ ಅಧ್ಯಾತ್ಮಿಕವಾದದ್ದು ಮತ್ತು ಸನಾತನವಾದುದು. ಈ ಜಗತ್ತಿನಲ್ಲೆಲ್ಲ ನಡೆಯುತ್ತಿರುವ ವ್ಯವಹಾರಗಳಿಗೆ ಪರಂಪರೆಯಾ ಮಾತೃಸ್ಥಾನ ಅದೇ. ವೇದಗಳಿಲ್ಲದಿದ್ದರೆ ಜಗತ್ತು ಶೂನ್ಯವಾಗುತ್ತಿತ್ತು. ಮನುಷ್ಯನಿಗೆ 'ಧರ್ಮ'ವೇ ಮುಖ್ಯವಾದ್ದರಿಂದ ವೇದದಲ್ಲಿ ಉಕ್ತವಾದ ಪ್ರಧಾನ ವಿಷಯ ಧರ್ಮ. ಜಗತ್ತಿನ ಇತರ ಧರ್ಮಗಳೆಲ್ಲ ವೇದ ಧರ್ಮದಿಂದ ಹೊರಟಿದುದೇ, ಅವು ವೇದಾರ್ಥಾಭಾಸರೂಪಗಳು. ಭಾರತೀಯರು ಅನಾದಿಕಾಲದಿಂದಲೂ ಇದೇ ದೇಶದಲ್ಲಿರುವವರು. ಇಲ್ಲಿಂದ ಅನೇಕ ಕಾರಣಗಳಿಗಾಗಿ ಪೂರ್ವಕ್ಕೂ, ಪಶ್ಚಿಮಕ್ಕೂ, ದಕ್ಷಿಣೋತ್ತರಗಳಿಗೂ ಹೋಗಿ ಬೇರೆಬೇರೆ ದೇಶಗಳಲ್ಲಿ ನೆಲೆಸಿದರೇ ಹೊರತು,ಇಲ್ಲಿದ್ದವರು ಮೂಲ ನಿವಾಸಿಗಳು, ಇವರು ಅನಾರ್ಯರು, ಕಾಡುಜನಗಳು, ಆರ್ಯರು ಹೊರಗಿನಿಂದ ಬಂದರು ಎಂಬುದು ಕೇವಲ ಊಹಾಕಲ್ಪಿತ. ಇದಕ್ಕೆ ಯಾವ ನಿದರ್ಶನವೂ ಇಲ್ಲ, ಇಲ್ಲಿಂದ ಹೊರಹೋದ ಆರ್ಯರಲ್ಲಿ ಅನೇಕ ತಲೆಮಾರಿನವರೆವಿಗೂ ರೂಢವಾಗಿದ್ದ ವೇದಗಳ ನಿಜಾರ್ಥದ ಅರಿವು ಮರೆವಾಗಿ ಅದರ ಅಭಾಸಗಳೇ ಪ್ರಚಾರದಲ್ಲಿ ಬಂದು ಬೇರೆ ಬೇರೆ ಮತಗಳೆಂದು ಪ್ರಖ್ಯಾತವಾದವು ಎಂಬುದು ಅನೇಕ ಪಂಡಿತರ ಅಭಿಪ್ರಾಯದಿಂದಲೂ, ವಿಷಯಗಳ ನಿಷ್ಪಕ್ಷಪಾತ ಪರಿಶೀಲನೆಯಿಂದಲೂ ಸ್ಥಿರಪಡುವುದು. ಆರ್ಯರು ಇಲ್ಲಿಂದಲೇ ಹೊರಟು ಬೇರೆ ಬೇರೆ ದೇಶಗಳಲ್ಲಿ ನೆಲೆಸಿದರು. ಆದ್ದರಿಂದ ಸರ್ವ ಜನಾಂಗಗಳ ಮತ್ತು ಸಂಸ್ಕೃತಿಗಳ ಮೂಲ ಭಾರತವೇ. [19] ಭಾರತೀಯರು ಈಜಿಪ್ಟ್, ಎಥಿಯೋಪಿಯಾ, ಅಬಿಸೀನಿಯಾ ಮೊದಲಾದ ದೇಶಗಳಿಗೆ ಹೋಗಿ ನೆಲಸಿ ಅಲ್ಲಿ ತಮ್ಮ ಧರ್ಮವನ್ನು ಹರಡಿದರೆಂದು ಬ್ರಗ್ಸ್‌ಬೇ, ಹಿರೇಣ ಮೊದಲಾದ ಪಂಡಿತರು

---

18. ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ।
ಆದಾವಂತೇ ಚ ಮಧ್ಯೇಚ ವಿಷ್ಣುಸ್ಸರ್ವತ್ರ ಗೀಯತೇ ॥ —ಹರಿವಂಶ.

19. But in no similar instance have events occurred fraught with consequences of such magnitude, as those flowing from the great religious war which for a long series of years raged throughout the length and breadth of India. That contest ended by the expulsion of vast bodies of men, many of them killed in the arts of early civilization and still greater numbers of warriors by profession. Driven beyond the Himalayan mountains in the north and to Ceylon their last stronghold in the south swept acrosss the valley of the Indus of the west; This persecuted people carried with them the germs of the European arts and science. The mighty human tide that passed

ಅಭಿಪ್ರಾಯಪಡುತ್ತಾರೆ. ಜರಥುಷ್ಟ್ರಮತಾನುಯಾಯಿಗಳಾದ ಪರ್ಷಿಯನರೂ ಭಾರತದಿಂದ ಹೋದವರೇ [20] ಭಾರತ ಧರ್ಮ ಸಂಸ್ಕೃತಿಯ ಪ್ರಚಾರ ಗ್ರೀಸಿನಲ್ಲೂ ಆಯಿತು.[21]

ಪುರಾಣದಲ್ಲಿ ತುರುಷ್ಕರೆಂದು ಹೆಸರಾದ ಭಾರತೀಯರಿಂದಲೇ ಟರ್ಕಿ ಎಂಬ ಹೆಸರು ಬಂದಿತು. ಇವರು ಟರ್ಕಿಯಿಂದ ಅಫ್ಘಾನಿಸ್ಥಾನದವರೆವಿಗೂ ಹರಡಿದರೆಂದು ಕರ್ನಲ್ ಟಾಡ್ ರವರು ಅಭಿಪ್ರಾಯ ಪಡುತ್ತಾರೆ.[22] ಸೈಬೀರಿಯ, ಬಾಕ್ಟ್ರಿಯಾ, ಸಮರ್‌ಖಂಡಗಳಿಗೂ ಭಾರತೀಯರು ವಲಸೆ ಹೋದುದು ಸ್ಪಷ್ಟವಿದೆ. ಸ್ಕ್ಯಾಂಡಿನೇವಿಯಾ (ಕ್ಷತ್ರಿಯ ಪದದ ಅಪಭ್ರಷ್ಟ ರೂಪ)ದಲ್ಲಿ ಭಾರತದಿಂದ ವಲಸೆ ಹೋದುದರ ಕುರುಹು ಸ್ಪಷ್ಟವಿದೆ. ಭಾರತದ ಪೂರ್ವಕ್ಕಿರುವ ಬರ್ಮಾ ಇಂಡೋನೇಷ್ಯ, ಕೊಚಿ‌ ಚೀಣಾ, ಮಲಯಾ ಮೊದಲಾದ ದ್ವೀಪಗಳಿಗೂ, ಅಮೇರಿಕಾ ದೇಶಕ್ಕೂ ಭಾರತೀಯರು ಹೋಗಿ ನೆಲೆಸಿದ್ದರೆಂದು ಎಲ್ಫಿನ್‌ಸ್ಟನ್ , ಫರ್ಗ್ಯೂಸನ್. ಕೋಲ್‌ಮನ್ ಮೊದಲಾದ ಇತಿಹಾಸಜ್ಞರು ಅಭಿಪ್ರಾಯ ಪಡುತ್ತಾರೆ. ದಕ್ಷಿಣ ಅಮೇರಿಕೆಯ ಪೆರು ಮುಂತಾದ ದೇಶಗಳಲ್ಲಿ

---

the barriers of the Punjab rolled onward towards its destined channel in Europe and in Asia to fulfil its beneficent office in the moral fertilization of the world --Pocoke, India in Greece. P. 26.

It is there (Aryavartha) we must seek not only for the cradle of Brahmin Religion. but for the cradle of the high civilization of the Hindus which gradually extended itself in the west to Ethiopia, to Egypt to Phoenicia, in the east to Siam, to China and to Japan; in the south Ceylon and to Colchis, whence it came to Greece and to Rome and at Length to the remote abode of the Hyperborans.

--Theogony of the Hindus P. 168. Count Bjornstjerna.

Of the cursory observations on the Hindus, which it would require volumes to expand and illustrate, this is the result that they had an immemorial affinity with the old Persians, Ethiopeans and Egyptians, the Phoenicians, Greeks, and Tuscans the Scythians or Gothes, the Celts, the Chinese, Japanese and Peruvians.

-Sir W. Jones Asiatic Researches. Vol. I. P. 426

20 Max Muller- Science & language.

21 Early Indian thought penetrated to Greece through Iran and influenced some thinkers and Philosophers there. Much later Plotinus came to the East to study Iranian and Indian Philosophy and was especially influenced by the mystic elements in the Upanishads. From Plotinus many of these ideas are said to have gone to St. Augustine and through him influenced the Christianity of the day. --Discovery of India P. 67.

22 Colonel Toad Rajastan Vol. I. P. 103.

ಭಾರತದ ಪುರಾಣ ಕಥೆಗಳ ಪ್ರಭಾವ ತೋರುವುದು.[23] ಪುರಾಣಗಳಲ್ಲೂ ಮಹಾಭಾರತದಲ್ಲೂ ಪರದೇಶಗಳ ಹೆಸರೂ ಅವುಗಳೊಡನೆ ಭಾರತದ ಸಂಪರ್ಕವೂ ವಿವಿಧವಾಗಿ ವರ್ಣಿತವಾಗಿವೆ. ಮನುಸ್ಮೃತಿಯಲ್ಲಿ ಕರ್ಮಭ್ರಷ್ಟರಾದ ಕ್ಷತ್ರಿಯರು ಬಹಿಷ್ಕೃತರಾಗಿ ಪೌಂಡ್ರಕಾದಿ ಜಾತಿಗಳೆನಿಸಿದರೆಂದು ಉಕ್ತವಾಗಿದೆ.[24] ಅರ್ಜುನ ಮತ್ತು ಸಹದೇವರು ಇತರ ವಂಶೀಯ ರಾಜರನ್ನು ಗೆದ್ದ ವಿಷಯವೂ ಅಲ್ಲಲ್ಲಿ ಉಕ್ತವಾಗಿರುವುದು.[25] ಈ ಎಲ್ಲ ವಿವೇಚನೆಯಿಂದ ' ಹೊರಗಿನಿಂದ ಭಾರತಕ್ಕೆ ಆರ್ಯರು ಬಂದು ಇಲ್ಲಿ ನೆಲಸಿದರೆಂಬುದಕ್ಕಿಂತ ಇಲ್ಲಿಂದಲೇ ಬೇರೆ ಬೇರೆ ದೇಶಗಳಿಗೆ ಹೋಗಿ ನೆಲಸಿ ಅಲ್ಲಿ ಧರ್ಮಗಳ ಮೂಲಪುರುಷರೆನಿಸಿದರು. ವೇದಗಳು ಸನಾತನವಾಗಿದ್ದುದು, ಅದರಲ್ಲಿ ಉಪದಿಷ್ಟವಾದುದು ಅಧ್ಯಾತ್ಮತತ್ತ್ವವಾದ ವಿಷ್ಣುಸರ್ವೋತ್ತಮತ್ವವು. ಅದರಲ್ಲಿ ಐತಿಹಾಸಿಕ ಅಂಶಗಳಿಲ್ಲ' ಎಂಬ ವಿಷಯಗಳು ಸ್ಪಷ್ಟವಾಗುವುವು.

(c) ವೇದ ಧರ್ಮ ಇತರ ಧರ್ಮಗಳ ಮೂಲ.

ಈ ಜಗತ್ತಿನಲ್ಲಿ ಪ್ರಸಿದ್ಧವಿರುವ ಎಲ್ಲ ಧರ್ಮಗಳೂ ಭಾರತದ ಆರ್ಯಧರ್ಮದಿಂದಲೇ ಉದ್ಭೂತವಾದವು. ಆದರೆ ಈ ಮತದ ಮುಖ್ಯ ಸಾರ ಹೋಗಿ ಅವೆಲ್ಲ ಅದರ

23 Asiatic Researches Vol. I.P. 426.

24. ಶನಕೈಸ್ತು ಕ್ರಿಯಾಲೋಪಾದಿಮಾ ಕ್ಷತ್ರಿಯ ಜಾತಯಃ ।
ವೃಷಲತ್ವಂ ಗತಾ ಲೋಕೇ ಬ್ರಾಹ್ಮಣಾ ದರ್ಶನೇನ ಚ ॥
ಪೌಂಡ್ರಕಾಶ್ಚೋದ್ರ ದ್ರವಿಡಾಃ ಕಾಂಭೋಜಾ ಯವನಾ ಶ್ಯಕಾಃ ।
ಪಾರದಾ ಪಹ್ಲವಾಶ್ಚೀನಾಃ ಕಿರಾತಾಃ ದರದಾಃ ಖಶಾಃ ॥
ಮುಖರೋಹರು ಪಜ್ಜಾನಾಂ ಯಾ ಲೋಕೇ ಜಾತಯೋ ನಹಿಃ ॥
ಮ್ಲೇಂಛವಾಚಶ್ಚಾರ್ಯವಾಚಃ ಸರ್ವೇತೇ ದಸ್ಯವಃ ಸ್ಮೃತಾಃ ॥

—ಮನುಸ್ಮೃತಿ: X P. 43.

ಕಾಂಭೋಜಾನಾಂ ಸಹಸ್ರಶ್ಚ ಶಕಾನಾಂ ಚ ವಿಶಾಂಪತೇ
ಶಬರಾಣಾಂ ಕಿರಾತಾನಾಂ ಬರ್ಬರಾಣಾಂ ತಥೈವ ಚ ॥
ಅಗಮ್ಯರೂಪಾಂ ಪೃಥಿವೀಂ ಮಾಂಸಶೋಣಿತ ಕರ್ದಮಾಮ್ ।
ಕೃತವಾಂಸ್ತತ್ರ ಶೈನೇಯಃ ಕ್ಷಪಯಂಸ್ತಾವಕಂ ಬಲಮ್ ॥
ದಸ್ಯೂನಾಂ ಚ ಶಿರಸ್ತ್ರಾಣೈಶಿರೋಭಿರ್ಲೂನ ಮೂರ್ಧನ್ಯೈಃ ।
ದೀರ್ಘಕೂರ್ಚೈರ್ಮಹೀಕೀರ್ಣಾ ವಿನಹೈರಂಡಜೈರಿವ ॥

—ಮಹಾಭಾರತ ದ್ರೋಣಪರ್ವ. ಅ. ೧೧೬

25. ದರಾದಾನ್ ಸಹಕಾಂಭೋಜೈರಜಯತ್ಪಾಕಶಾಸನಿಃ ।
ಪ್ರಾಗುತ್ತರಾಂದಿಶಂ ಯೇ ಚ ವಸಂತ್ಯಾಶ್ರಿತ್ಯ ದಸ್ಯವಃ ॥

—ಸಭಾಪರ್ವ. ೧೦೨೧—೩೨

ಅಭಾಸವಾದವು. ಜಗತ್ತಿನ ಮತದಲ್ಲಿ ಇಸ್ಲಾಂ ಮತ ಇತ್ತೀಚಿನದು. ಕ್ರೈಸ್ತಮತ ಇದಕ್ಕಿಂದ ಹಳೆಯದು. ಇವೆರಡು ಮತಗಳೂ ಯೆಹೂದಿ ಮತದಿಂದ ಹುಟ್ಟಿದವೆಂಬುದು ನಿರ್ವಿವಾದ ವಿಷಯ. [26]

ಹಿಬ್ರೂಮತದ ಜೊತೆಗೆ ಆರ್ಯಧರ್ಮವೂ ಬೌದ್ಧಮತವೂ ಕ್ರೈಸ್ತಮತಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದವು. [27] ಬೌದ್ಧಮತ ಆರ್ಯಧರ್ಮದ ವರ್ಚಸ್ಸಿಗೆಸೇರಿದ್ದೆಂಬುದು ಇತಿಹಾಸದಿಂದ ಸ್ಪಷ್ಟವಿದೆ. ಪರ್ಷಿಯಾದಲ್ಲಿ ಜರುಥುಷ್ಟ್ರನ ಮತವೂ ಆರ್ಯಧರ್ಮದಿಂದ ನಿಷ್ಪನ್ನವಾದದ್ದೇ, ವೇದಗಳಿಗೂ ಅವೆಸ್ಟ ಗ್ರಂಥಕ್ಕೂ ಇರುವ ಹೋಲಿಕೆ ಇದನ್ನು ಪುಷ್ಟೀಕರಿಸುವುದು. ಹಿಬ್ರೂಮತವು ಅವೆಸ್ಟ್ ಮತದಿಂದ ಹೊರಬಂದಿತೆಂಬುದು ಇತಿಹಾಸದಿಂದ ವ್ಯಕ್ತಪಡುವುದು. ಕ್ರಿ. ಪೂ. 1920ರಲ್ಲಿ ಅಬ್ರಹಾಂನು ಜರುಥುಷ್ಟ್ರನೂ ಸಮಕಾಲಿಕರು. ಆಗ ಜರುಥುಷ್ಟ್ರನ ಸಂಪರ್ಕದಿಂದ ಅಬ್ರಹಾಂನು ಅವೆಸ್ಟ್ ಮತದ ತತ್ತ್ವಗಳನ್ನು ತಿಳಿದು ಹಿಬ್ರೂಮತದ ಉದಯಕ್ಕೆ ಕಾರಣನಾದನು. [28] ಈ ಎರಡು ಮತಗಳ ಕೆಲವು ಪ್ರಮೇಯಗಳಲ್ಲಿ ಹೆಚ್ಚಿನ ಹೋಲಿಕೆ ಇದೆ. ಹೀಗೆ ಎಲ್ಲ ಧರ್ಮಗಳ ಪ್ರಮೇಯಗಳಲ್ಲೂ ವೈದಿಕಧರ್ಮದ ಪ್ರಮೇಯಗಳ ಛಾಯೆ ಕಾಣುವುದು. ಅಂದಮಾತ್ರಕ್ಕೆ ವೇದಗಳಿಗೆ ಇರುವಷ್ಟು ಪ್ರಾಮಾಣ್ಯವೇ ಎಲ್ಲಾ ಧರ್ಮಗಳಿಗೂ ಉಂಟೆಂದಾಗಲೀ, ಈಗ ಪ್ರಚಲಿತವಾದ ಎಲ್ಲ ಧರ್ಮಗಳೂ ವೈದಿಕ ಧರ್ಮವನ್ನೇ ಬೋಧಿಸುತ್ತದೆಂದಾಗಲೀ ಹೇಳುವುದು ತಪ್ಪಾಗುವುದು. ಇಲ್ಲಿಂದ ಇತರದೇಶಗಳಿಗೆ ಹೋಗಿ ನೆಲೆಸಿದ ಆರ್ಯರು ಬರುಬರುತ್ತಾ ವೈದಿಕ ಧರ್ಮದ ರಹಸ್ಯವನ್ನು ಮರೆತು, ಈ ಧರ್ಮದ ಕೆಲವು ಪ್ರಮೇಯಗಳನ್ನು ಮಾತ್ರ ರೂಢಿಯಲ್ಲಿಟ್ಟುಕೊಂಡು ಬೇರೆಬೇರೆ ಧರ್ಮಗಳನ್ನು ಆರಂಭಮಾಡಿದರು.

ಸಾಗರಾದ್ವೀಪವಾಸಂಶ್ಚ ನೃಪತೀನ್ಮ್ಲೇಚ್ಛಯೋನಿಜಾನ್ ।
ನಿಷಾದಾನ್ಪುರುಷಾದಾಂಶ್ಚ ಕರ್ಮಪ್ರಾವರಣಾನಪಿ ॥
ದ್ವೀಪಂ ತಾಮ್ರಾಹ್ವಯಂ ಚೈವ ವಶೇ ಕೃತ್ವಾ ಮಹಾಮತಿಃ ॥

—ಸಭಾಪರ್ವ.

26 There seems no doubt of his (Mohammad's) indebtedness to Hebrew Prophetic ideas,

--Comparative Religion P. 267.

It (Christianity) began as a jewish sect. --ibid P. 247

27 Plotinus..... was especially influenced by the mystic element in the Upanishads. From Plotinus many of these ideas are said to have gone to St. Augustine and through him influenced the Christianity of the day.

--Discovery of India P. 67.

(f) ವೇದಗಳ ಮುಖ್ಯ ಉಪದೇಶ

ವೇದಮಂತ್ರಗಳಲ್ಲಿ ಪ್ರಾಕೃತಶಕ್ತಿಗಳ ಆರಾಧನೆಯು ಕಂಡುಬರುವುದೆಂದೂ, ಅದು ಬರುಬರುತ್ತಾ ಅಗ್ನಿ, ವರುಣ ಮೊದಲಾದ ಪ್ರತಿಯೊಬ್ಬ ದೇವತೆಗಳನ್ನೂ ಸರ್ವೋತ್ಕೃಷ್ಟ ದೇವತೆ ಎಂದು ಆರಾಧಿಸುವ (Henotheism) ಹವ್ಯಾಸವು ತೋರಿಬರುವುದೆಂದೂ, ಅವುಗಳಲ್ಲಿ ಪುನರ್ಜನ್ಮ, ಪುಣ್ಯಪಾಪ ಮತ್ತು ಮೋಕ್ಷಗಳ ಪ್ರಸ್ತಾಪವೇ ಇಲ್ಲವೆಂದೂ ಮ್ಯಾಕ್ಸ್‌ಮುಲ್ಲರ್ ಮೊದಲಾದ ಪಂಡಿತರು ಅಭಿಪ್ರಾಯಪಡುವರು. ವೇದಗಳಲ್ಲಿ ಒಂದು ನಿಷ್ಕೃಷ್ಟವಾದ ತತ್ತ್ವಪ್ರತಿಪಾದನೆ ಇಲ್ಲವೆಂದೂ, ಅವು ಬಾಲಿಶವಾದ ವಾಕ್ಯಗಳೆಂದೂ ಉದ್ಗಾರ ತೆಗೆದಿದ್ದಾರೆ. ಇದು ಯಥಾರ್ಥವಲ್ಲ. ವೇದಮಂತ್ರಗಳು ಅಪಾತತಃ ಹಾಗೆ ಅಯತಾರ್ಥಪ್ರತಿಪಾದಕಗಳಂತೆ ಕಂಡುಬಂದರೂ, ಸರಿಯಾದ ವಿವರಣಕ್ರಮವನ್ನನುಸರಿಸಿ, ನಿಷ್ಪಕ್ಷವಾಗಿ ಪೂರ್ವಾಪರ ಸಮನ್ವಯಮಾಡಿ ನೋಡಿದರೆ ಅದರಲ್ಲಿ ಒಂದು ನಿಯಮಬದ್ಧ ತರ್ಕಸರಣಿ, ನಿಷ್ಕೃಷ್ಟವಾದ ತತ್ತ್ವಪ್ರತಿಪಾದನೆ ಕಾಣುವುದು. ವೇದಗಳಲ್ಲಿ ಕರ್ಮಸಿದ್ಧಾಂತವೂ, ಜನ್ಮಾಂತರಗಳ ವಿಷಯವೂ ಜಗತ್ತು, ಜೀವ ಮತ್ತು ಪರಮಾತ್ಮ ಇವರ ವಿಷಯವೂ ಸ್ಪಷ್ಟವಾಗಿ ಉಕ್ತವಾಗಿವೆ. ಮುಂದೆ ಮಾತ್ರ ಪುರಾಣೇತಿಹಾಸಗಳಲ್ಲಿ ಬೆಳೆದು, ಬಲಿತ ಸನಾತನ ತತ್ತ್ವಗಳೆಲ್ಲ ವೇದೋಕ್ತವಾದದ್ದೇ. ವೇದಾನುಕ್ತ ವಿಷಯವೇ ಇಲ್ಲ. ಇದರಲ್ಲಿ ಮನಬಂದ ದೇವತೆಗಳ ಸ್ತೋತ್ರವಿಲ್ಲ. ವೇದಮಂತ್ರಗಳೆಲ್ಲ ಏಕದೇವತಾಪರವಾದದ್ದೇ.[29] Pictet ಮತ್ತು ಕೋಲ್ಮನ್ ಮೊದಲಾದ

Some moderate Christians admit that Buddhism in Syria was a preparation, a fore-runner of the religion preached by Christ over two Centuries later.
--Ancient India Vol. II. P. 329. R.C. Dutt.

28 That the Zorastrian religion influenced the Jewish goes without saying.
-Religious Systems of the World.
--P. 182. L.H. Mills.

29. ವೇದಭಾಷ್ಯಭೂಮಿಕಾ ಔರ್ ವೇದಭಾಷ್ಯಮೇ ದಯಾನಂದ ಸರಸ್ವತೀ ಕಾ ಮುಖ್ಯ ಬಲ್ ಇಸ ಬಾತಪರ್ ಹೈ ಕಿ ವೇದೋಂ ಮೇ ಏಕೇಶ್ವರ ಉಪಾಸನಾ ಹೈ । —ವೇದ ಮೇ ಅಗ್ನಿ ಆದಿ ನಾಮೋಂ ಸೇ ಶುದ್ಧ ರೂಪಸೆ ಪರಮಾತ್ಮಾ ಕಾ ವರ್ಣನ ಹೈ ॥
—ವೈದಿಕವಾಙ್ಮಯ ಕಾ ಇತಿಹಾಸ.

The vedic religion is the knowledge, the recognition of the eternal principles of being, of god, of spirit and matter and their relation to one another as revealed to men in the Vedas.
--H.B. Sarda, Hindu Superiority, P. 392

✣ ✣ ✣

ಪಾಶ್ಚಾತ್ಯ ಪಂಡಿತರೂ ಇದೇ ಅಭಿಪ್ರಾಯ ಪಡುತ್ತಾರೆ.[30] ಯೋಗಿ ಅರವಿಂದರೂ ಇದನ್ನೇ ಎತ್ತಿ ಹಿಡಿಯುವರು.[31]

ವೇದಮಂತ್ರಗಳಲ್ಲಿ "ಯೋ ದೇವಾನಾಂ ನಾಮಧಾ ಏಕ ಏವ; ಯ ಆತ್ಮದಾ ಯಸ್ಯ ಬಲದಾ ಯಸ್ಯ ವಿಶ್ವೇ ಉಪಾಸತೇ ಪ್ರಸಿಷಂ ಯಸ್ಯ ದೇವಾಃ; ಯೋನಃ ಪಿತಾ ಜನಿತಾ ಯೋ ವಿಧಾತಾ; ತದೇವರ್ತಂ ತದುಸತ್ಯ ಮಾಹುಃ ತದೇವ ಬ್ರಹ್ಮ ಪರಮಂ ಕವೀನಾಂ; ಯಮಿಂದ್ರಮಾಹುಃ ವರುಣಂ ಯಮಾಹುಃ; ಏಕಂ ಸದ್ವಿಪ್ರಾ ಬಹುಧಾ ವದಂತಿ ಇಂದ್ರಂ ಯಮಂ ಮಾತರಿಶ್ವಾನಮಾಹುಃ"–ಎಂಬ ವಾಕ್ಯದಿಂದ ಪರಬ್ರಹ್ಮನಾದ ಹರಿಯೊಬ್ಬನೇ ಆರಾಧ್ಯನೆಂಬುದು ಸ್ಪಷ್ಟಪಡುವುದು. ಇವು ವೇದ ಮಂತ್ರಗಳಲ್ಲಿ ಮಧ್ಯದಲ್ಲಿ ಬಂದರೂ ವಿಮರ್ಶಕರು ಅವೆಲ್ಲ ಹೆಚ್ಚು ಬೆಳೆದ ಬಲಿತ ಭಾವನೆಗಳನ್ನು ತಿಳಿಸುವುದರಿಂದ ಇತ್ತೀಚಿನ ವಾಕ್ಯಗಳಾಗಿರಬೇಕೆಂದೂ, ಪ್ರಾಚೀನ ಮಂತ್ರಗಳ ಜೊತೆಗೆ ಆಮೇಲೆ ಸೇರಿಸಿರಬೇಕೆಂದೂ ಹೇಳುವರು. ಅವರ ಈ ಊಹೆ ನಿರಾಧಾರವಾದುದು.

"ಋಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ।
ಯಸ್ತನ್ನ ವೇದಃ ಮೃಚಾಕರಿಷ್ಯತಿ ಯ ಇತ್ ತದ್ವಿದುಸ್ತ ಇಮೇ ಸಮಾಸತೇ ॥

ಋ. 1–164–39

ಎಂಬ ಋಗ್ವೇದ ವಾಕ್ಯಗಳಿಂದಲೂ, ಐತರೇಯ, ಆರಣ್ಯಕ ವಾಕ್ಯಗಳಿಂದಲೂ ಬ್ರಹ್ಮೋಪಾಸನೆಯ ಪ್ರಾಮುಖ್ಯವು ಉಕ್ತವಾಗಿರುವುದು. ವೈದಿಕವಾಙ್ಮಯವನ್ನೆಲ್ಲಾ ಕ್ರೋಢೀಕರಿಸಿ ಸಮನ್ವಯಮಾಡುವ ಪದ್ಧತಿ ವೇದಾಕ್ಯಗಳಲ್ಲೇ ಕಾಣುವುದು. "ಏಕಸ್ಯಾತ್ಮನೋ ಅನ್ಯೇ ದೇವಾಃ ಪ್ರತ್ಯಜ್ಞಾನಿ ಭವಂತಿ" ಎಂಬ ನಿರುಕ್ತವಾಕ್ಯದಲ್ಲಿ ಈ ಸಮನ್ವಯದ ಸಮರ್ಥನೆ ಇರುವುದು.

---

30 The Almighty....the creator, preserver and destroyer of the universe, under such and innumerable other definition is the deity acknowledged in the Vedas or the sacred writings of Hindus.

--"Mythology of the Hindus"-- Coleman.

31 But why should not the foundation of the vedic thought be natural monotheism rather than this new fangled monstrosity of henotheism (and anthropomorphism)? Well, because primitive barbarians could not possibly have arisen to such high conceptions and if you allow them to have so risen, you imperil our theory of evolutionery stages of human development and you destory our whole idea about the sense of the vedic hymns and their place in the history of mankind. Truth must hide herself, common sense disapper, so that a theory must flourish.

--Aurobindo.

ಬಾದರಾಯಣರ ಬ್ರಹ್ಮಸೂತ್ರಗಳು ವೇದವಾಕ್ಯಗಳ ವ್ಯಾಖ್ಯಾಸಂಚಿ. ಅದರಲ್ಲಿ ವೇದವಾಕ್ಯಗಳಲ್ಲಿನ ಕರ್ಮಕಾಂಡಪರ ವಾಕ್ಯಗಳೂ, ಬೇರೆ ಬೇರೆ ದೇವತಾ ಪ್ರತಿಪಾದಕವೆಂದು ತೋರುವ ವಾಕ್ಯಗಳೂ ಸರ್ವೋತ್ತಮನಾದ ಹರಿಯ ಸ್ತುತಿರೂಪವಾದದ್ದೆಂಬುದು ಯುಕ್ತಿಗಳಿಂದ ಸಾಧಿಸಲ್ಪಟ್ಟಿದೆ. ಬಾದರಾಯಣರು ಬಾದರಿ, ಕಾಶಕೃತ್ಸ್ನ, ಔಡುಲೋಮಿ, ಆಸ್ಮರಥ್ಯ ಮೊದಲಾದವರ ಹೆಸರನ್ನು ಉಲ್ಲೇಖಿಸಿರುವರು. ಇದರಿಂದ ವೇದಮಂತ್ರ ಅರ್ಥಸಮನ್ವಯಮಾಡುವ ಪದ್ಧತಿ ಅನೂಚಾನವಾಗಿ ಬಂದಿರಬೇಕೆಂದು ಗೊತ್ತಾಗುತ್ತದೆ. ವಿಷ್ಣುವೇ ಪರದೈವ, ಅವನ ದಾಸನಾದ ಜೀವನಿಗೆ ಅವನ ಆರಾಧನೆಯೇ ಧ್ಯೇಯ ಎಂಬುದು ಮುಖ್ಯ ಉಪದೇಶ. ಅಧುನಿಕ ವಿಮರ್ಶಕ ಪಂಡಿತರು ತಮ್ಮ ತಮ್ಮ ದೃಷ್ಟಿಕೋಣಕ್ಕ ತಕ್ಕಂತ ಅವುಗಳಿಗೆ ಅರ್ಥಮಾಡಲು ಯತ್ನಿಸಿರುವರು. ಅಗ್ನ್ಯಾದಿ ಬೇರೆ ಬೇರೆ ದೇವತಾ ಪ್ರತಿಪಾದಕ ಶ್ರುತಿಗಳು ಹೇಗೆ ವಿಷ್ಣುದೇವತಾಪರವೆಂಬುದನ್ನು ಶ್ರೀ ಮಧ್ವಾಚಾರ್ಯರು ಯುಕ್ತಿಯುಕ್ತವಾಗಿ ತೋರಿಸಿರುವರು.[32] ಸಂಹಿತೆ ಮತ್ತು ಬ್ರಾಹ್ಮಣಗಳು ಇರುವಂತೆಯೇ ಉಪನಿಷತ್ತುಗಳೂ ವೈದಿಕ ವಾಙ್ಮಯಕ್ಕೆ ಸೇರಿದ್ದರೂ ಅವುಗಳು ಇತ್ತೀಚಿನ ಗ್ರಂಥಗಳು, ಅವುಗಳಲ್ಲಿ (ಆತ್ಮ) ಬ್ರಹ್ಮೈಕ್ಯ ಉಪದೇಶವು ಹೇಳಲ್ಪಟ್ಟಿದೆಯೆಂಬ ವಾದವು ಸರ್ವ ಸಮ್ಮತವಲ್ಲ.[33] ಈ ಉಪನಿಷತ್ತುಗಳಲ್ಲಿ ಹತ್ತು

32. ಅಗ್ನ್ಯಾದಿಶಬ್ದಾನಾಂ ನಿಗಮನಿಘಂಟ್ವಾದಿರೂಪಾನುಶಾಸನಬಲೇನ ಆಗ್ನೇಯಾದಿ ಕರ್ಮಾದಿಸಿದ್ಧಿರೂಪಪ್ರಯೋಜನಬಲೇನ ಚ ಪ್ರಸಿದ್ಧಾಗ್ನ್ಯಾದಾವಿವ "ಓಂ ಚಮಸವದ ವಿಶೇಷಾತ್ ಓಂ" ಇತ್ಯಾದೌ ಭಾಷ್ಯೋಕ್ತದಿಶಾ "ನಾಮಾನಿ ಸರ್ವಾಣಿ ಯಮಾವಿಶಂತಿ ತಂ ವೈ ವಿಷ್ಣುಂ ಪರಮ ಮುದಾಹರಂತಿ" ಇತಿ "ಸರ್ವನಾಮಾ ಸರ್ವಲಿಂಗ" ಇತಿ "ಯೋ ದೇವಾನಾಂ ನಾಮಧಾ ಏಕ ಏವ" ಇತ್ಯಾದಿ ಶ್ರುತಿಭಿಃ" "ಸರ್ವಟಂದಭಿದೋಹ್ಯೆಷ ಸರ್ವದೇವಾಭಿದೋಹ್ಯಸೌ" ಇತ್ಯಾದಿ ಸ್ಮೃತಿ ಭಿಶ್ಚ "ಇಂದ್ರ ಮಿತ್ರಂ ವರುಣಮಗ್ನಿಮಾಹು ರ್ಯಮು ಸತ್ಯ ಮಾಹುಃ। ವೇದೇಷು ಇತ್ಯಾದಿ ಶ್ರುತಿಭಿಃ ಬೃಹ್ಮಣಾದ್ಬ್ರಹ್ಮ ನಾಮಾಸೌ ಐಶ್ವರ್ಯಾದಿಂದ್ರ ಉಚ್ಯತೇ ಏವಂ ನಾನಾವಿಧೈಶ್ಶಬ್ದೈರೇಕ ಏವ ತ್ರಿವಿಕ್ರಮಃ ವೇದೇಷು ಸ ಪುರಾಣೇಷು ಗೀಯತೇ ಪುರುಷೋತ್ತಮಃ ॥" ಇತ್ಯಾದಿಸ್ಮೃತಿಭಿಶ್ಚ ವಿಶಿಷ್ಯಾನು ಶಾಸನರೂಪಾಭಿಃ ವಿಷ್ಣಾವಪಿ ಶಕ್ತೇಃ ಸಿದ್ಧತ್ವೇನ ವಿಷ್ಣ್ವರ್ಥಸ್ಯಾಪಿ ನ್ಯಾಯ್ಯತ್ವಾತ್.

—ಮಂತ್ರಾರ್ಥಮಂಜರೀ, ಶ್ರೀ ರಾಘವೇಂದ್ರಸ್ವಾಮಿನಃ ।

33 On the question as to what upanishads teach, there are so to speak two views... Many eminent scholars... hold that the Vedanta of Sankara represents the true teaching of the upanishads,

An impartial consideration of the upanishads taken as a whole will, however, show that this view about the teaching of the upanishads is not tenable. --V.S. Ghate; The Vedanta, P. 9

Of modern interpreters of upanishads, Deussen and Gough are the two important who hold that Sankara's interpretation is alone correct.'

The idea that the different stages view are related in the form given by Deussen is one impossible to accept.

--A. B. Keith, Religion & phil. of the Veda, P. 509

ಹನ್ನೆರಡು ಅತ್ಯಂತ ಪ್ರಸಿದ್ಧವಾದವು. ಇವುಗಳಲ್ಲಿ ಬೃಹದಾರಣ್ಯಕ, ಮಾಂಡೂಕ್ಯ ಮತ್ತು ಛಾಂದೋಗ್ಯ ಇವು ಅದ್ವೈತಪರವಾದ್ದರಿಂದ ಪ್ರಾಚೀನವೆಂದೂ ಶ್ವೇತಾಶ್ವತರ, ಕಠ ಇತ್ಯಾದಿ ಉಪನಿಷತ್ತುಗಳು ಭೇದಪ್ರತಿಪಾದಕವಾದ್ದರಿಂದ ಅರ್ವಾಚೀನವೆಂದೂ ವಿಮರ್ಶಕರ ಅಭಿಪ್ರಾಯ. ಈ ಕ್ರಮ ಶಾಸ್ತ್ರೀಯವಾಗಿ ಕಾಣುವುದಿಲ್ಲ. ಇವರ ಈ ಅಭಿಪ್ರಾಯಕ್ಕೆ ಡಾರ್ವಿನ್ನರ ವಿಕಾಸವಾದದ ಹಿನ್ನಲೆಯಿದೆ. ಯಾವ ಸಿದ್ಧಾಂತವೇ ಆಗಲಿ ಹುಟ್ಟಿ ಬೆಳೆದು ಅಭಿವೃದ್ಧಿಯಾಗಿ ನಾಶಹೊಂದುವುದು. ಇದರಿಂದ ಇನ್ನೊಂದು ಸಿದ್ಧಾಂತ ವಿಕಸಿತವಾಗುವುದೆಂಬುದು ಪ್ರಕೃತಿನಿಯಮಕ್ಕೆ ಹೊಂದವುದಿಲ್ಲ. ಎಲ್ಲ ಸಿದ್ಧಾಂತಗಳೂ ಅನಾದಿಕಾಲದಿಂದಲೂ ಬಂದದ್ದು ಎಂದು ಶ್ರೀ ಮಧ್ವಾಚಾರ್ಯರು ಹೇಳಿರುವುದು ಯುಕ್ತಿಯುಕ್ತವಾಗಿದೆ.[34] ಸಂಹಿತೆಗಳಲ್ಲಾಗಲೀ, ಉಪನಿಷತ್ತುಗಳಲ್ಲಾಗಲೀ, ಪುರಾಣಾದಿಗಳಲ್ಲಾಗಲೀ, ಸ್ಪಷ್ಟವಾಗಿ ಯಾವುದೊಂದರ ಸಿದ್ಧಾಂತವೂ ಸಿಗಲಾರದು.[35] ಒಂದು ವಾಕ್ಯ ಭೇದಪರವಾಗಿದ್ದರೆ, ಇನ್ನೊಂದು ಅಬೇಧ ಪರವಾದಂತೆ ತೋರಬಹುದು. ಒಂದು ವಿಷ್ಣುದೇವತಾಪರವಾದರೆ ಇನ್ನೊಂದು ಶಿವ ಪರವ್ಯಾಖ್ಯಾನಕ್ಕೆ ಅವಕಾಶ ಕೊಡುವಂತೆ ತೋರಬಹುದು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ತಾತ್ಪರ್ಯ ಲಿಂಗಾದಿಗಳನ್ನು ಇಟ್ಟುಕೊಂಡು ಸರಿಯಾದ ಅರ್ಥವನ್ನು ವಿಚಾರಮಾಡಿ ನಿರ್ಣಯ ಮಾಡುವುದೇ ಜಿಜ್ಞಾಸುವಿನ ಕರ್ತವ್ಯ. ಇದಕ್ಕೆ ಧರ್ಮಶ್ರದ್ಧೆ, ಸಂಪ್ರದಾಯಜ್ಞಾನವೂ ಅವಶ್ಯಕ. ವೇದಮಂತ್ರಗಳಲ್ಲೇ ನಿಷ್ಕೃಷ್ಟವಾದ ಅರ್ಥಸಿದ್ಧವಾಗಿದ್ದಲ್ಲಿ, ಸಾಧಕನ ಸಾಧನೆಗೆ ಅವಕಾಶವಿರುತ್ತಿರಲಿಲ್ಲ. ನಿರ್ಣಾಯಕಶಾಸ್ತ್ರವಾದ ಬ್ರಹ್ಮಸೂತ್ರಗಳಾದರೋ ಭೇದಪರವೆಂಬುದು ಸ್ಪಷ್ಟವಾದ ವಿಷಯ. ಇವುಗಳನ್ನೇ ಅಭೇದಪರವಾಗಿ ಅರ್ಥಮಾಡುವುದು ಅಸಮಂಜಸವೆನಿಸುವುದು. ಇದರಂತೆಯೇ ಉಪನಿಷತ್ತುಗಳ ವಾಖ್ಯಾನವೂ ಸಹ. ಆದ್ದರಿಂದ ವೇದಮಂತ್ರಗಳು ಮತ್ತು ಉಪನಿಷತ್ತುಗಳಲ್ಲಿನ ಅರ್ಥವನ್ನು ನಿರ್ಣಯ ಮಾಡುವುದು ಬ್ರಹ್ಮಸೂತ್ರಗಳು. ಇವು ಭೇದಪರ ಮತ್ತು ವೈಷ್ಣವ. ಇದರಿಂದಲೇ ವಿಷ್ಣುಸರ್ವೋತ್ತಮತ್ವವು ಸ್ಥಿರಪಡುವುದು.

(g) ಪುರಾಣಗಳು

ಪುರಾಣಗಳ ವಿಷಯವನ್ನು ವಿಚಾರ ಮಾಡುವಾಗ ಒಂದು ಮುಖ್ಯವಾದ ಅಂಶವನ್ನು ಗಮನಿಸಬೇಕು. ಈ ಪುರಾಣಗಳಲ್ಲಿನ ವಿಷಯ ಪರಸ್ಪರ ಅಸಂಬದ್ಧವಿದ್ದಂತೆ ಕಂಡುಬಂದರೂ ಇವುಗಳಲ್ಲಿ ಒಂದು ಏಕಸೂತ್ರತೆ ಇದೆ. ಸೃಷ್ಟಿ, ಪ್ರಳಯ, ರಾಜರ

---

34 ಅನಾದಿಕಾಲತೋ ವೃತ್ತಾಃ ಸಮಯಾ ಹಿ ಪ್ರವಾಹತಃ ।
ನ ಚೇಚ್ಛೇದೋಽಪಿ ಕಸ್ಯಾಪಿ — ಅನುವ್ಯಾಖ್ಯಾನಂ. ೨.೨.೩

35. ಶೃಂಗೇ ಕರ್ಣೇ ವಾ ಗೃಹಿತ್ವಾ ನಾಗಮೋ ನಾರಾಯಣಂ ಗಮಯತಿ।
—ವಿಷ್ಣುತತ್ತ್ವನಿರ್ಣಯ

ವಂಶಗಳು, ನೀತಿ, ಧರ್ಮ, ವ್ರತ ತೀರ್ಥ–ಕ್ಷೇತ್ರ ಮಹಿಮಾ ಮೊದಲಾದ ವಿಷಯಗಳು ಎಲ್ಲ ಪುರಾಣಗಳಲ್ಲೂ ಇರುವುವು. ಒಂದೊಂದು ಪುರಾಣಗಳಲ್ಲಿ ಒಂದೊಂದು ದೇವತೆಯ ಉತ್ಕರ್ಷವು ಉಕ್ತವಾಗಿರುವುದು–ಆದರೆ ಮತ್ಸ್ಯಪುರಾಣದಲ್ಲಿ ವಿಷ್ಣೂ–ತ್ಕರ್ಷಪರವಾದವು ಸ್ವಾತಿಕಪುರಾಣವೆಂದೂ, ಬ್ರಹ್ಮೋತ್ಕರ್ಷಪರವಾದದ್ದು ರಾಜಸವೆಂದೂ, ಶಿವ–ಶಕ್ತ್ಯು ತ್ಕರ್ಷಕಪರವಾದದ್ದು ತಾಮಸವೆಂದೂ ವಿಭಾಗ ಮಾಡಿದೆ.

ಶೈವ ವೈಷ್ಣವ ಮತಗಳ ಬೆಳವಣಿಗೆಯನ್ನು ಹೇಳುವಾಗ ವಿಮರ್ಶಕರು ವೈಷ್ಣವಮತಕ್ಕೆ ವೈದಿಕವಾದ ವಿಷ್ಣು–ನಾರಾಯಣ ಇವರೊಂದಿಗೆ ಅವೈದಿಕವಾದ ಭಾಗವತಧರ್ಮದ ಕೃಷ್ಣನ ಕಥೆಯೂ ಸೇರಿ ವೈಷ್ಣವ ಮತದ ಉದಯವಾಯಿತೆಂದು ಹೇಳುವರು. ಇದು ಸರಿಯಲ್ಲ. ಕಾಠಕಾದಿ ಉಪನಿಷತ್ತುಗಳಲ್ಲೇ ಈ ಭಾಗವತಧರ್ಮದ ಉಪದೇಶವಿದೆಯೆಂದು ಎಲ್ಲರೂ ಒಪ್ಪುವರು. ಈ ಭಾಗವತಧರ್ಮವೇ ಭಗವದ್ಗೀತೆಯಲ್ಲೂ ಭಾಗವತಾದಿ ಪುರಾಣಗಳಲ್ಲೂ ವಿಶೇಷವಾಗಿ ಹೇಳಲ್ಪಟ್ಟಿದೆ. ಭಗವಂತನ ಮಹಿಮೆಯು ವಿಚಿತ್ರವಾದದ್ದು. ಇದು ಬರಿಯ ಊಹೆಗೂ ಬುದ್ಧಿ ವಿಚಾರಕ್ಕೂ ನಿಲುಕತಕ್ಕದ್ದಲ್ಲ. ಆದ್ದರಿಂದಲೇ ವಿಮರ್ಶಕರಿಗೆ ಇವೆಲ್ಲ ಅಸಂಗತವಾಗಿ ತೋರುವುದು. ವೈದಿಕ, ಅವೈದಿಕ ಅಂಶಗಳು ಸೇರಿ ವೈಷ್ಣವಮತದ ಉದಯವಾಗಿದ್ದಲ್ಲಿ, ಮನುಸ್ಮೃತಿಯಂತಹ ಧರ್ಮಶಾಸ್ತ್ರ ಗ್ರಂಥದಿಂದ ಹಿಡಿದು ಭಾರತ, ಭಗವದ್ಗೀತಾ, ಭಾಗವತ, ವಿಷ್ಣು, ನಾರದೀಯ, ಪದ್ಮ, ಹರಿವಂಶ ಇತ್ಯಾದಿ ಪುರಾಣಗಳಲ್ಲೆಲ್ಲಾ ಹರಿಯ ದಶಾವತಾರ ವರ್ಣನೆಯು ಬರುತ್ತಿರಲಿಲ್ಲ. ಭಗವಂತನ ಈ ಎಲ್ಲ ಅವತಾರಗಳ ವರ್ಣನೆ ವೇದ, ಇತಿಹಾಸ, ಪುರಾಣ ಮೊದಲಾಗಿ ಎಲ್ಲ ಸಚ್ಛಾಸ್ತ್ರಗಳಲ್ಲೂ ಒಂದೇ ರೀತಿಯಾಗಿ ವರ್ಣಿತವಾಗಿದೆ ಎಂಬುದನ್ನು ಶ್ರೀ ಮಧ್ವಾಚಾರ್ಯರು ಯುಕ್ತಿಸಮ್ಮತವಾಗಿ ತೋರಿಸಿರುವರು. ಶುದ್ಧಾದ್ವೈತಮತಸ್ಥಾಪಕರಾದ ವಲ್ಲಭಾಚಾರ್ಯರೂ ಸಹಾ ಮಧ್ವಾಚಾರ್ಯರಂತೆ ಭಾಗವತವನ್ನು ಶಾಸ್ತ್ರವೆಂದು ಕರೆದಿರುವರು. ಇದರಿಂದ ಪುರಾಣಗಳಿಗೆ ಸಾಂಪ್ರದಾಯಿಕವಾದ ಪ್ರಾಮಾಣ್ಯ ಉಂಟೆಂದು ಸ್ಪಷ್ಟಪಡುವುದು.

ವೈಷ್ಣವ ಮತದೊಂದಿಗೆ ಅವತಾರಗಳ ಕಲ್ಪನೆಯೂ ಸೇರಿದೆಯೆಂಬ ಅಭಿಪ್ರಾಯವೂ ಮಾನ್ಯವಾದುದಲ್ಲ. ಅವತಾರಗಳ ಕಲ್ಪನೆ ಬರಿಯ ಊಹೆಯಾಗಿದ್ದ ಪಕ್ಷದಲ್ಲಿ ವಿಷ್ಣುವಿಗೆ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ ಮೊದಲಾದ ಪಶುಸಂಬಂಧಿಯಾದ ಜಘನ್ಯ ಯೋನಿಗಳನ್ನು ಹೇಳುವ ಕಾರಣವಿರಲಿಲ್ಲ. ಪೂಜ್ಯವಾದ ವಸ್ತುವಿಗೆ ತುಚ್ಛವಾದ ವೇಷ ಹಾಕುವುದು ಅಸ್ವಾಭಾವಿಕವಾಗುವುದು. ಅವತಾರಗಳು ವೇದಗಳಲ್ಲೇ ವರ್ಣಿತವಾಗಿವೆ. ನೃಸಿಂಹತಾಪನೀ, ರಾಮತಾಪನೀ ಮೊದಲಾದ ಉಪನಿಷತ್ತುಗಳು ಒಂದೊಂದು ಅವತಾರಗಳ ವರ್ಣನೆಗೆ ಮೀಸಲಾಗಿವೆ. ಆದ್ದರಿಂದ ಇದು ಮೊದಲಿಂದಲೂ ಇದ್ದ ಅಂಶ, ಆಮೇಲೆ ಬೆಳೆದುದಲ್ಲ.

ಪುರಾಣಗಳನ್ನು ಅತಿ ಲಘುವಾಗಿ ಎಣಿಸುವುದು ಸಾಮಾನ್ಯವಾಗಿದೆ. ಕೆಲವು

ಪುರಾಣಗಳಿಗಂತೂ ಬಹಳ ಇತ್ತೀಚಿನ ಕಾಲವನ್ನು ಹಚ್ಚುವ ರೂಢಿ ಇದೆ. ಭಾಗವತವು ಕ್ರಿ. ಶ. ಹನ್ನೆರಡನೆಯ ಶತಮಾನದಲ್ಲಿ ರಚಿತವಾಗಿರಬೇಕೆಂಬ ಭಾವನೆ ಬೆಳೆದಿದೆ. ವಿಷ್ಣು ಪುರಾಣ–ಕ್ರಿ. ಶ. 1045 ರಲ್ಲಿ ರಚಿತವಾಗಿರಬೇಕೆಂದು ಪ್ರೊ. ವಿಲ್ಸನ್‌ರವರು ಅಭಿಪ್ರಾಯಪಡುವರು. ಇದು ಇತಿಹಾಸಕ್ಕೇ ವಿರೋಧವಾಗುವುದು. 1030 ರಲ್ಲೇ ಅಲ್ಬರೂನಿಯು ಹದಿನೆಂಟು ಪುರಾಣಗಳ ಪಟ್ಟಿಯನ್ನು ಕೊಟ್ಟಿರುವನು. ಅವು ಅತಿ ಪ್ರಾಚೀನವೆಂದೂ ಹೇಳುವನು. ಅವನು ಕೊಟ್ಟಿರುವ ಪಟ್ಟಿಯು ವಿಷ್ಣು ಪುರಾಣದಲ್ಲಿದ್ದಂತೆ ಇರುವುದು. ಅಂದರೆ 1030ರ ಹೊತ್ತಿಗೆ ಪುರಾಣಗಳೆಲ್ಲಾ "ಪುರಾತನ"ವಾಗಿದ್ದವು. ಬಾಣನ ಕಾಲದಲ್ಲಿ ವಾಯು, ಅಗ್ನಿ, ಭಾಗವತ, ಮಾರ್ಕಂಡೇಯ ಪುರಾಣಗಳು ಪ್ರಚಾರದಲ್ಲಿದ್ದವೆಂದು ಡಾ|| ಪೂರರ್ ಹೇಳುವರು. ಸ್ಕಾಂದಪುರಾಣವೂ ಅಷ್ಟುಹೊತ್ತಿಗೆ ಪ್ರಚಾರದಲ್ಲಿದ್ದಿತು. ಕ್ರಿ. ಪೂ. ಮೂರನೆಯ ಶತಕದಲ್ಲಿ ರಚಿತವಾದ ಕೌಟಿಲ್ಯನ ಅರ್ಥಶಾಸ್ತ್ರಕ್ಕಿಂತ ಪೂರ್ವದಲ್ಲೇ ಪುರಾಣಗಳು ರಚಿತವಾಗಿರಬೇಕೆಂದು ಅರ್ಥಶಾಸ್ತ್ರದಲ್ಲಿ ಹೇಳಿರುವ ಇತಿಹಾಸದ ವಿವರಣೆಯಿಂದ ಸ್ಪಷ್ಟಪಡುವುದು. ಪುರಾಣಗಳಲ್ಲಿ ಪ್ರಕ್ಷಿಪ್ತ ಭಾಗಗಳು ಎಷ್ಟೋ ಸೇರಿವೆ. ಮತ್ತು ಇದ್ದ ಭಾಗವು ಇಲ್ಲವಾಗಿದೆ. ಆದರೆ ಈ ಪುರಾಣಗಳಲ್ಲಿ ಕೆಲವು ಮೊದಲು ಕೆಲವು ಆಮೇಲೆ ಹೀಗೆ ರಚಿತವಾಗಿಲ್ಲ. ಪುರಾಣಗಳನ್ನು ಶಾಸ್ತ್ರೀಯ ದೃಷ್ಟಿಯಿಂದ ನೋಡಿ ಅವುಗಳಲ್ಲಿನ ವಾಸ್ತವಾಂಶಗಳನ್ನು ಹುಡುಕುವುದು ಸರಿಯಾದ ವಿಮರ್ಶೆ. ಅಂತಹ ವಿಮರ್ಶೆಯಿಂದ ಪುರಾಣಗಳ ನಿಜವಾದ ಬೆಲೆಯು ತಿಳಿಯುವುದು. "ಇತಿಹಾಸಪುರಾಣ: ಪಂಚಮೋ ವೇದಾನಾಂ ವೇದಃ" ಎಂಬ ಶ್ರುತಿವಾಕ್ಯವೂ "ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್" ಎಂಬ ಪುರಾಣವಚನವೂ ಪುರಾಣಗಳಿಗೆ ಹೆಚ್ಚಿನ ಮಾನ್ಯತೆಯನ್ನು ಕೊಟ್ಟಿರುವುವು. ವೇದಗಳ ಅರ್ಥಮಾಡುವಾಗ ಪುರಾಣಗಳ ಸಹಾಯ ಪಡೆಯಬೇಕು. ಭಾಗವತ ಮೊದಲಾದ ಪುರಾಣಗಳಲ್ಲಿ ವಿಷ್ಣು, ಪುರುಷಸೂಕ್ತ ಮೊದಲಾದವುಗಳ ಸುಂದರ ವ್ಯಾಖ್ಯಾನವಿರುವುದು. ಶ್ರೀ ಮಧ್ವಾಚಾರ್ಯರು ಪುರಾಣಗಳ ಬೆಲೆಯನ್ನು ಚೆನ್ನಾಗಿ ತೋರಿಸಿರುವರು. ಆಧುನಿಕ ಪಂಡಿತರನೇಕರು ಪುರಾಣಗಳ ಮಹತ್ವವನ್ನೇ ಹೇಳಿರುವರು .[36]

---

36 The point is the Puranas, Dharmasastras and Smritis help us in the Vedic interpretation
--Prof. Vidushekara Bhattacharya,
Vedic Interpretation & Tradition,
IV G.C. Report

The most systematic record of Indian historical tradition is that preserved in the dynastic list of puranas.... Modern European writers have been inclined to disparage unduly, the authority of the puranic texts, but closer study finds in them much genuine and valuable tradition.
--V. A. Smith, Early History of India, P. 11.

ಪರ್ಗಿಟರ್‌ರವರಂತೂ ಪುರಾಣಸಾಹಿತ್ಯದ ಆಧಾರದಿಂದಲೇ ಭಾರತದ ಪ್ರಾಚೀನ ಇತಿಹಾಸದ ವಿಷಯಗಳಲ್ಲಿ ತಮ್ಮದೇ ಒಂದು ವಾದ ಹೂಡಿದ್ದಾರೆ. ಆದ್ದರಿಂದ ಪ್ರಾಚೀನ, ಅರ್ವಾಚೀನ ಅಭಿಪ್ರಾಯಗಳಿಂದ ಪುರಾಣಗಳ ಪ್ರಾಮಾಣ್ಯವು ವ್ಯಕ್ತಪಡುವುದು.

ಪುರಾಣಗಳಂತೆಯೇ ಸಾತ್ವಿಕಾಗಮಗಳೂ ಪ್ರಮಾಣಭೂತವಾದುದೇ. ಅದ್ವೈತಕ್ಕೆ ಆಗಮಗಳು ಪೋಷಕವಲ್ಲದ್ದರಿಂದ ಇದಕ್ಕೆ ಶಂಕರಾಚಾರ್ಯರು ಹೆಚ್ಚಿನ ಪ್ರಾಮಾಣ್ಯವನ್ನು ಹೇಳಿಲ್ಲ. ಪಾಶುಪತಾದ್ಯಾಗಮಗಳು ಬ್ರಹ್ಮಸೂತ್ರಗಳಲ್ಲಿ ಖಂಡಿಸಲ್ಪಟ್ಟಿವೆ. ಪಂಚರಾತ್ರಾಗಮವು ಅತ್ಯಂತ ಪ್ರಮಾಣವು. ಮಂತ್ರಶಾಸ್ತ್ರವೂ ಪ್ರಾಮಾಣಿಕ. ಸಂಸ್ಕೃತ ಸಜೀವ ಭಾಷೆಯು. ದೇವತಾಧ್ಯಾನಕ್ಕೆ ಮಂತ್ರ ಜಪಗಳು ಅವಶ್ಯಕ. ಆದ್ದರಿಂದಲೇ ಸಂಸ್ಕೃತದಲ್ಲಿ ಇದು ಹೆಚ್ಚಾಗಿ ಬೆಳೆದಿದೆ.

✣ ✣ ✣

VI ಧರ್ಮದ ತಾತ್ತ್ವಿಕ ವಿವೇಚನೆ

I ವಿಷಯಿವಾದ. (Subjectivism)

ಧರ್ಮವೇನೋ ಎಲ್ಲ ಜನಾಂಗಗಳಲ್ಲೂ ಆರಂಭದಿಂದಲೂ ನಡೆದು ಬಂದಿತು. ಮಾನವಇತಿಹಾಸದಲ್ಲಿ ಇದು ಅನಿವಾರ್ಯವಾದ ಅಂಗವಾಗಿದ್ದರೂ, ಆಧುನಿಕ ವಿಮರ್ಶಕರು ಜಗತ್ತಿನ ಧರ್ಮಗಳೆಲ್ಲ ಮಾನವಸಂಸ್ಕೃತಿಯ ಆರಂಭದೆಸೆಯನ್ನು ಸೂಚಿಸುವುದೆಂದೂ ಇದೆಲ್ಲ ಸತ್ಯಭೂತವಾದುದಲ್ಲವೆಂದೂ, ಭ್ರಾಂತಿಕಲ್ಪಿತವೆಂದೂ ನಿಶ್ಚಯ ಮಾಡಿದ್ದಾರೆ. ಸಾವಿರಾರು ವರ್ಷಗಳಿಂದ ಜಗತ್ತಿನ ಎಲ್ಲ ದೇಶದ ಇತಿಹಾಸದಲ್ಲೂ ಧರ್ಮಗಳು ಬೆಳೆದು ಬಂದುದಕ್ಕೂ ವಿಮರ್ಶಕ ಪಂಡಿತರು ರಂಜಕವಾದ ಕಾರಣಗಳನ್ನು ಕೊಟ್ಟಿರುತ್ತಾರೆ. ಈಗ ಪ್ರಗತಿಪಥದತ್ತ ಸಾಗುತ್ತಿರುವ ಮಾನವ ತನ್ನ ಹಿನ್ನಲೆಯಲ್ಲಿನ ಮೌಢ್ಯವನ್ನರಿತು, ಎಚ್ಚೆತ್ತು ಮುಂದಾದರೂ ಧರ್ಮದ ಹವ್ಯಾಸವನ್ನು ಬಿಟ್ಟು ನಿಜವಾದ ಅಭ್ಯುದಯದ ಕಡೆ ತಿರುಗಬೇಕೆಂದು ಈ ಪಂಡಿತರು ಸಲಹೆ ಕೊಟ್ಟಿರುತ್ತಾರೆ.[1] ಫ್ಯೂಯರ್‌ಬಾಚ್ (Feverbarch), ಫ್ರೇಜರ್ (Frazer), ಮತ್ತು ಫ್ರಾಯಿಡ್ (Freud) ಇವರುಗಳೂ ಜ್ಯೂಲಿಯನ್ ಹಕ್ಸ್ಲೆರವರ ವಾದವನ್ನೇ ಎತ್ತಿಹಿಡಿದು, ಧರ್ಮಗಳೆಲ್ಲ ಭ್ರಾಂತಿಮೂಲವೆಂದೂ, ಇತರ ಶಾಸ್ತ್ರಗಳ ಅಧ್ಯಯನಕ್ಕೆ ಧರ್ಮದ ಇತಿಹಾಸ ಅಂಗಭೂತವಾದುದೆಂದೂ ಹೇಳುವರು.[2] ಸ್ಪೆಂಗ್ಲರ್ (Spengler) L.P. ಜಾಕ್ಸ್ (L.P. Jacks) ಮೊದಲಾದ ಇನ್ನು ಕೆಲವು ಪಂಡಿತರು ಧರ್ಮದ ವಿಷಯದಲ್ಲಿ ಸ್ವಲ್ಪ ಸಹಾನುಭೂತಿ ತೋರಿಸಿರುವರು. ಧರ್ಮಗಳು ಮನುಷ್ಯನ ಜೀವನಪಥದಲ್ಲಿ ಛತ್ರಗಳಿದ್ದಂತೆ. ಇಲ್ಲಿ ಕ್ಷಣಕಾಲ ಅವನು ತಂಗಿದ್ದು ಮುಂದೆ ಅಡಿ ಇಡುತ್ತಾನೆಂದು

---

1 Until it (The fundamental question, viz., non-human absolute values as against human evolving values) is settled, and the idea of God relegated to the past with the idea of ritual magic and other products of primitive and unscientific human thought, we shall never get the new religion we need. In that new religion man must must make up his mind to take upon himself his full burden, by acknowledging that he is the highest entity of which he has any knowledge that his values are the only basis for any categorical imperative and that he must work out both his own salvation and destiny and the standards on which they are based. To put off this burden on the shoulders of an imaginary God is shrunk from full responsibility and to hinder man from arriving at his full stature.

-- Julian Huxley. Religion without Revelation.

2 All religions being based upon illusion, their study can be no more than a branch of anthropology. archaeology, psychology and sociology.

-Comparative Religion.

ಅವರು ಅಭಿಪ್ರಾಯಪಡುವರು.[3]

ಇಂತಹ ದೃಷ್ಟಿ ಇರುವವರೆಗೆ ಜಗತ್ತಿನ ಎಲ್ಲ ಧರ್ಮಗಳೂ ಅನಾದಿಕಾಲದಿಂದಲೂ ಭ್ರಾಂತಿಯ ಬುನಾದಿಯಮೇಲೆ ಕಟ್ಟಿದ ಮಿಥ್ಯಾಭೂತವಾದ ಕಟ್ಟಡಗಳಾಗುತ್ತವೆ. ಈ ಧರ್ಮಗಳ 'ವಿಚಾರವೂ' ಕತೆ ಕಾದಂಬರಿಗಳನ್ನು ಓದಿದಂತೆ ಮನೋರಂಜನೆಗೆ ಮಾತ್ರ ಅವಕಾಶಮಾಡಿಕೊಡಬಲ್ಲದು. ಇದರಿಂದ ಈ ದೃಷ್ಟಿಯಿಂದ ವಿಚಾರಮಾಡಿದ ತಜ್ಞರುಗಳು ಧರ್ಮದ ಬಗ್ಗೆ ತೀವ್ರ ಗಮನ ಕೊಟ್ಟಿಲ್ಲವೆಂದು ಹೇಳಬೇಕಾಗುವುದು. ಜ್ಯೂಲಿಯರ್ ಹಕ್ಸ್ಲರವರ ವಾದವೂ ಏಕಪಕ್ಷೀಯವಾದದ್ದೇ, ಅತೀಂದ್ರಿಯ ಪದಾರ್ಥಗಳಾದ 'ದೇವರು' 'ಧರ್ಮ–ಅಧರ್ಮ' 'ಪುಣ್ಯ–ಪಾಪ' 'ಸ್ವರ್ಗ–ನರಕ' ಮತ್ತು ಸಾಧನೆ–ಅನುಷ್ಠಾನಗಳು ಧರ್ಮದ ಮುಖ್ಯ ಅಂಗಗಳು. ಇವು ನಂಬಿಕೆ, ಶ್ರದ್ಧೆ, ವಿಶ್ವಾಸ ಇದರ ಬಲದ ಮೇಲೆ ನಿಂತಿರುವುವು. ಅತೀಂದ್ರಿಯ ಪ್ರದಾರ್ಥಗಳನ್ನೇ ಸತ್ಯವಲ್ಲವೆಂದು ತರ್ಕದಿಂದ ಹೊಡೆದು ಹಾಕಿದರೆ ಧರ್ಮದ ಸತ್ತ್ವವೇ ಹೋದಂತೆ. ಇನ್ನು ಭಗವಂತನ ಅಗಮ್ಯ ಮಹಿಮೆಯ ವರ್ಣನೆ ಭಕ್ತನ ಹಂಬಲ ಇವೆಲ್ಲ ಈ ದೃಷ್ಟಿಯಿಂದ ಹಾಸ್ಯಾಸ್ಪದವೇ ಸರಿ. ಈ ವಿಮರ್ಶಕ ಪಂಡಿತರು ಜಗತ್ತಿನ ಕಾರ್ಯಗಳೆಲ್ಲ ದೃಷ್ಟಕಾರಣಗಳಿಂದಲೇ ನಡೆಯುವುದೆಂದು ಹೇಳುವರು. 'ಧರ್ಮ–ಅಧರ್ಮ' ಮನೋಭಾವನ್ನು ಈಗ ಅತೀಂದ್ರಿಯವಾಗಿ ಕಂಡರೂ, ಮೂಲತಃ ಇವೂ ಲೌಕಿಕ ಕಾರಣಗಳಿಂದಲೇ ಉದ್ಭವಿಸಿದುದೆಂದು ಅವರ ಅಂಬೋಣ. 'ಇದು ಸರಿ, ಇದು ತಪ್ಪು' ಎಂಬ ನೈತಿಕ ಭಾವನೆ ಬೆಳೆದುದು ಮನುಷ್ಯರಿಂದಲೇ. ಮನುಷ್ಯನ ಬುದ್ಧಿಶಕ್ತಿಯ ಹೊರಗೆ ಈ ಭಾವನೆಗೆ ಅಸ್ತಿತ್ವವೇ ಇಲ್ಲ. ಅಂದರೆ 'ಸತ್ಯ–ಮಿಥ್ಯೆ' 'ಧರ್ಮ–ಅಧರ್ಮ' ಇವು ವಿಷಯನಿಷ್ಠ ಧರ್ಮಗಳೆಲ್ಲ. ಮನುಷ್ಯನ ಬುದ್ಧಿ ಕಲ್ಪಿತ. ಆದ್ದರಿಂದ ವಿಷಯಿನಿಷ್ಠ (Subjective) ಎನ್ನುವರು. ಭೌತಿಕವಾದವು ಹೇಗೆ ಧರ್ಮವು ಅವಶ್ಯಕವಲ್ಲವೆಂದು ಅಲ್ಲಗಳೆಯುವುದೋ, ಈ 'ವಿಷಯಿ'ವಾದವೂ ಸಹ ಧರ್ಮವನ್ನು ಅಲ್ಲಗಳೆಯುವುದು. ಜಗತ್ತು ಭೌತಿಕ. ಅದರಲ್ಲಿ ಬೇರೆ ಧರ್ಮವಿಲ್ಲ. ಇದು ಯಂತ್ರದಂತೆ ಕೆಲಸಮಾಡುವುದೆಂದು ಭೌತವಾದವು ಹೇಳುವುದು.[4] ಆದರೆ ವಿಜ್ಞಾನಿಗಳೇ, " ಜಗತ್ತಿನ ವ್ಯಾಪಾರಕ್ಕೆ ಜಡದ ಹೊರತು 'ಬೇರೊಂದು ಶಕ್ತಿ' ಬೇಕೆಂದೂ ಅದೇ ಚೇತನ ಶಕ್ತಿ"ಯೆಂದೂ ಒಪ್ಪಿಕೊಳ್ಳುವರು. ಆದರೆ ವಿಷಯಿವಾದಿಗಳು ಜಗತ್ತಿನ ವ್ಯಾಪಾರಕ್ಕೆ ಬೇಕಾಗುವ ಆ 'ಬೇರೊಂದು ಶಕ್ತಿ

3 The religions of the world are hospitable Caravanserais in which the traveller may rest for a brief space and then awake refreshed to pursue his journey of exploration -ibid

4. Subjectivism is no less hostile to religion than is materialism. Materialism denies God because it holds that the world of nature is all and that the world of nature works like a machine. -God & Evil P. 193

(ಚೇತನ ಶಕ್ತಿ)' ಯು ಮನುಷ್ಯನ ವಿಚಾರದಿಂದಲೇ ಹೊರಸೂಸಿದ್ದೆಂದೂ, ಇದು ಅತೀಂದ್ರಿಯವಲ್ಲವೆಂದೂ, ಇದನ್ನು ಅವಲಂಬಿಸಿದ ಧಾರ್ಮಿಕ ಹಾಗೂ ನೈತಿಕ ತತ್ತ್ವಗಳೂ ಅತೀಂದ್ರಿಯವಲ್ಲವೆಂದೂ ಹೇಳುವರು.[5] ಮತ್ತು ದೇವರ ಅಸ್ತಿತ್ವವನ್ನು ನಿರ್ಣಯಿಸಲು ಹೊರಟ ಯಾವುದೇ ವಿಚಾರವಾಗಲೀ ದೇವರ ಅಸ್ತಿತ್ವವನ್ನು ಸ್ಥಾಪಿಸುವುದರ ಬದಲು, ಈ ವಿಚಾರಕರ ಆಸೆ ಅಭಿಪ್ರಾಯಗಳನ್ನು ಸೂಚಿಸುವುದೆಂದು ಇವರು ಆಕ್ಷೇಪಿಸುವರು.[6] ದೇವರ ಅಸ್ತಿತ್ವವನ್ನು ಹೇಳುವವರಾದರೋ ದೇವರಿದ್ದಾನೆ, ಧರ್ಮಾದಿಗಳನ್ನೊಳಗೊಂಡ ಜಗತ್ತೂ ಇದೆ. ಈ ಜಗತ್ತಿನಲ್ಲಿ ಅನುಭವಕ್ಕೆ ಬರುವ ಧರ್ಮ ಅಧರ್ಮಗಳು (ಅದೃಷ್ಟವಾದರೂ) ಸತ್ಯ ಮತ್ತು ಇವು ಮನುಷ್ಯರಿಗೆ ಗೋಚರವಾಗುವುವು. ಇವುಗಳ ಬಗ್ಗೆ ವಿಚಾರಮಾಡುವುದೂ ಶಕ್ಯ ಎಂದು ಹೇಳುವರು.[7] ಧರ್ಮಾದಿಗಳು ಸತ್ಯವೆಂದು ತೋರಿಸದಿದ್ದಲ್ಲಿ 'ಪರಂಪರಾಗತ ಮತೀಯ ವಿಚಾರಗಳು' (Religious hypotheses) ನಿರಸ್ತವಾಗುವುವು.

'ಧರ್ಮ–ನೀತಿ' ಈ ಭಾವನೆಗಳು ಮನುಷ್ಯನಿಂದಲೇ ಉದಯಿಸಿ ಹೇಗೆ ಸ್ವತಂತ್ರಸತ್ತೆಯನ್ನು ಸ್ಥಾಪಿಸಿಕೊಂಡವಂಬುದು ಈ ಕೆಳಗಿನ ವಾದಸರಣಿಯಲ್ಲಿ ಸ್ಪಷ್ಟವಿರುವುದು :–[8]

ಮನುಷ್ಯ ತನ್ನ ವಿಕಾಸವಾದಂತೆ ಸಮಾಜ ರಚನೆಯನ್ನು ಮಾಡಿಕೊಂಡ. ವ್ಯಕ್ತಿಗಳಂತೆಯೇ ಸಮಾಜವೂ ತನ್ನ ಆಸ್ತಿತ್ವಕ್ಕಾಗಿ ಹೋರಾಡಬೇಕು. ಇಂತಹ ಹೋರಾಟದಲ್ಲಿ ಸಮಾಜಗತ ವ್ಯಕ್ತಿಗಳ ಕೆಲ ಗುಣಗಳು ಜಯಪ್ರದವಾಗುವುವು. ಧೈರ್ಯ ಮತ್ತು ನಂಬಿಕೆ ಪುರುಷರಲ್ಲಿಯೂ ಅವಂಧ್ಯತ್ವ ಮತ್ತು ವಿಧೇಯತೆಯು ಹೆಂಗಸಿನಲ್ಲಿಯೂ ಇರಬೇಕಾದ ಗುಣಗಳು.

---

5. They are hostile because they endeavour to explain away this 'something other' and to explain away, therefore, the moral principle which I am suggesting is a part of the 'something other' on sebjectivist lines, as being a projection of or an emanation from human Consciousness - ibid P. 188

6. (Subjectivism denies God) because it holds that any judgement of the kind which asserts that God exists, does not in fact succeed in making a statement about God, but asserts something about the wishes and opinions of the persons passing the judgement. --ibid P. 193

7. If there is a God, there must be a moral; that is to say, a world of which Good and Evil are real factors, which it should be possible for the human mind to know and about which it should be possible for it to make judgements. --ibid P.195

8. -ibid P. 197

ಅಂತೆಯೇ ಈ ಗುಣಗಳಿಗೆ ಉತ್ತೇಜನ ದೊರೆಯಿತು. ಅದನ್ನು ಬೆಳೆಸಿಕೊಳ್ಳುವುದು ಸಾಮಾಜಿಕ ಶಿಕ್ಷಣವಾಯಿತು. ಅದರ ಪ್ರಾಪ್ತಿ ಸಾಮಾಜಿಕ ಗೌರವಕ್ಕೆ ಎಡೆಕೊಟ್ಟಿತು. ಧೈರ್ಯಶೀಲ ಪುರುಷನೂ ಸಂತತಿಪ್ರದಳಾದ ಸ್ತ್ರಿಯೂ ಸಮಾಜಕ್ಕೆ ಅತ್ಯುಪಯುಕ್ತರಾದ್ದರಿಂದ ಅವರು ಪ್ರಶಂಸೆಗೆ ಪಾತ್ರರಾದರು. ಅದರಂತೆ ಈ ಗುಣಗಳು ಪುಣ್ಯ (Virtue) ವೆಂದೂ ಪರಿಗಣಿತವಾದವು.[9] ಬರಬರುತ್ತಾ ಈ ಗುಣಗಳಿಂದ ಸಮಾಜಕ್ಕಾಗುವ ಉಪಕಾರವು ಮರೆತುಹೋಗಿ ಬರಿಯ ಧೈರ್ಯ ಮತ್ತು ಪಾತಿವ್ರತ್ಯಕ್ಕೆ ಹೆಚ್ಚಿನ ಮಾನ್ಯತೆ ದೊರೆಯಿತು. ಹೀಗೆ ಮೊದಲು ಸಮಾಜದ ಉಪಯೋಗಕ್ಕಾಗಿ ಅಂಗೀಕೃತವಾದ ಗುಣ, ಕ್ರಿಯೆಗಳನ್ನೇ ಜನರು 'ಧರ್ಮ–ನೀತಿ' ಎಂದು ಸಾರಿದರು. ಈ ನಿಗಮವನ್ನೇ ಇನ್ನು ಕೆಲವು ಪಂಡಿತರು ಇನ್ನೂ ಮುಂದೆ ಪ್ರಾಣಿಸ್ವಭಾವಕ್ಕನುಸರಿಸಿ ಬೆಳೆಸಿರುತ್ತಾರೆ. ಇದರ ಪ್ರಕಾರ ಹಿಂದಿನ ಜನಾಂಗ ಕೇವಲ ದೈಹಿಕ ಪ್ರಯೋಜನಕ್ಕಾಗಿ ಇಂಬಿತ್ತು ಬೆಳೆಸಿದ ನಿಯಮಗಳು ಮುಂದಿನ ಜನಾಂಗದವರು 'ಧರ್ಮ'ವೆಂದು ಅಂಗೀಕರಿಸುವ 'ಹುಟ್ಟುಗುಣ' ಅಥವಾ 'ಸ್ವಭಾವ'ವಾಗಿ ಬೆಳೆಯಿತೆಂದು ಹೇಳುವರು. ನಮ್ಮ ಪೂರ್ವಜರು ಪ್ರಯೋಜನವನ್ನು ವಿಚಾರಮಾಡಿ 'ತಪ್ಪು–ಸರಿ' ಎಂಬುದನ್ನು ನಾವು ಸ್ವಾಭಾವಿಕವಾಗಿಯೇ ತೆಗಳುತ್ತೇವೆ, ಹೊಗಳುತ್ತೇವೆ. ಇದು ಬರುಬರುತ್ತಾ ಹುಟ್ಟುಗುಣವಾಗಿ ಕೆಲವು ಕೆಲಸಗಳ ಬಗ್ಗೆ

9. Thus men come to value as right or as moral in them selves which were originally approved because of their social utility. Some have developed this conclusion on biological lines and have surmised that in later generations there appears an iborn or inherited instinct to approve of that which the earlier generations consciously encouraged for utilitarian resons. We praise or blame instinctively what our ancestors encouraged or discouraged as a result of a rational calculation. Because of these inherited instincts, we experience a feeling of guilt at the doing of certain actions'; we know them to be wrong even when we do not know why they are wrong... Thus to say 'this or that is wrong' is not to make an objective judgement about the ethical chareacteristics of "this" or "that"; it is to make a subjective judgement to the effect that I, or my community or the community from which my community is descended, disapprove or disapproved of it, Now the reasons which led to this disapproval being concerned with matters of survival or convenience are not ethical. Therefore there is no objective basis for ethics good and bad are not real and independent factors in the universe. It is only on this assumption, it is said, that we can explain the bewildering variety of moral judgements that different societies have passed. --ibid P. 197

ನಮಗೆ ತಪ್ಪೆಂಬ ಭಾವನೆ ಬಂದರೂ, ಅದೇಕೆ ತಪ್ಪೆಂಬುದು ಮಾತ್ರ ತಿಳಿಯುವುದಿಲ್ಲ. ಅಂದಮೇಲೆ 'ಇದು ತಪ್ಪು' ಎಂದರೆ 'ಇದರ' ಬಗ್ಗೆ ಇರುವ ಗುಣ ವಿಮರ್ಶೆಯಲ್ಲ. ನಾನು ನಮ್ಮ ಜನಾಂಗ, ನಮ್ಮ ಪೂರ್ವಜರು ಇದನ್ನು ಒಪ್ಪುವುದಿಲ್ಲವೆಂದು ಇದರ ಅಂತರಾರ್ಥ. ಆದ್ದರಿಂದ ಇದರ ಮೂಲಕಾರಣ ನೈತಿಕವಲ್ಲ ಮತ್ತು ಧರ್ಮಾದಿಗಳಿಗೆ ವಿಷಯನಿಷ್ಠ ಸತ್ಯತ್ವವೂ ಇಲ್ಲ. 'ಧರ್ಮ' ಮತ್ತು 'ಅಧರ್ಮ'ವೆಂಬುದು ಸತ್ಯವಾದ ಸ್ವತಂತ್ರ ಪದಾರ್ಥಗಳಲ್ಲ. ಆದ್ದರಿಂದಲೇ ಬೇರೆಬೇರೆ ಜನಾಂಗಗಳು ಬೇರೆಬೇರೆ ನೈತಿಕ ನಿಯಮಗಳನ್ನ ಸರಿಸುವುದು.

ಇದರಂತೆಯೇ ಆರಂಭದಲ್ಲಿ ಮನುಷ್ಯ ಗಾಳಿ, ಮಿಂಚು ಮೊದಲಾದ ಪ್ರಾಕೃತ-ಶಕ್ತಿಗಳಿಗಂಜಿ ನಿರುಪಾಯನಾಗಿ ಅವುಗಳಲ್ಲಿ ಶಕ್ತಿಯನ್ನಾರೋಪಿಸಿ ಆ ದೇವತೆಗಳ ಅನುಗ್ರಹಕ್ಕಾಗಿ ನಿಯಮಗಳನ್ನು ಹಾಕಿಕೊಂಡುದೇ 'ಮತ'ವೆನಿಸಿತು. ವಸ್ತುತ: ವಿಚಾರ ಮಾಡಿದರೆ, ದೇವರೂ ಕೂಡ ಮನುಷ್ಯಬುದ್ಧಿಕಲ್ಪಿತವೇ ಹೊರತು ಸತ್ಯನಲ್ಲ[10] ಅನಾಗರಿಕ ಮನುಷ್ಯನ ಸ್ಥಿತಿ ಹಾಗಾದರೆ ವಿಜ್ಞಾನದಿಂದ ಮುಂದುವರಿದ ಜಗತ್ತಿನಲ್ಲಿ ಮನುಷ್ಯನ ಸ್ಥಿತಿಯಾದರೋ, ವಿಜ್ಞಾನ ಚಿತ್ರಿಸಿರುವ ಈ ಭೀಷಣ ಜಗತ್ತಿಗೆ ಹೆದರಿ 'ದೇವರು' ಎಂಬ ಅಧ್ಯಾತ್ಮ ತತ್ತ್ವಕ್ಕೆ ಆತುಕೊಳ್ಳುತ್ತಾನೆ. ಆದ್ದರಿಂದ ಈ ವಾದದ ಪ್ರಕಾರ 'ಧರ್ಮ'ಗಳು ಸತ್ಯವೆಂದು ಮನುಷ್ಯ ಅವುಗಳನ್ನು ನಂಬಿಲ್ಲ. ಅವು ತನಗೆ ಹಿತಕರವೆಂದೂ, ಅನುಕೂಲವೆಂದೂ ಅವನು ಅದರಲ್ಲಿ ನಂಬಿಕೆ ಇಟ್ಟಿರುವನು. ಹೀಗಿರುವುದರಿಂದ ಎಲ್ಲ ಮತಗಳೂ ಮನುಷ್ಯನ ಕಲ್ಪನೆಯೆಂಬ ಅಡಿಪಾಯದ ಮೇಲಿರುವುದೇ ಹೊರತಾಗಿ ನಿಜವಾದ ಸುಭದ್ರವಾದ ಅಡಿಗಲ್ಲಿನಮೇಲೆ ನಿಂತಿಲ್ಲ. [11]

2. ಧರ್ಮಾದಿಗಳು ಅತೀಂದ್ರಿಯ ಮತ್ತು ಸತ್ಯ.

ಧರ್ಮಾದಿ ಅತೀಂದ್ರಿಯ ಪದಾರ್ಥಗಳ ವಿಷಯದಲ್ಲಿ ಬಹಳ ಗುರುತರವಾದ ಈ ಮೇಲಿನ ಟೀಕೆಗೆ ಸರಿಯಾದ ಉತ್ತರರೂಪ ಪರಿಹಾರ ಹುಡುಕುವುದು ಅವಶ್ಯಕ.

---

10. The feeling of helplessness engendered by these (draught, flood, etc.) calamities is intolerable to him. Accordingly he devises beings who are endowed with the power to control the forces which are by him uncontrolable..... by bribvery and propitiation the favour of the benevolent can be assured.

In these practices it is said we may discern the origin of religion, God is not a being existing in independence of man, a real and objective factor in the universe; He is man's creation, the product of his fears and the recipient of his bribes. -ibid.

11. Men then according to subjectivist's account, have believed in religion not because it is true, but because it is comforting and convenient to the Government. -ibid.

ಶ್ರೀ ಮಧ್ವಾಚಾರ್ಯರು 'ಧರ್ಮ–ಅಧರ್ಮ' ಇವುಗಳು ಸ್ವತಂತ್ರಸತ್ತೆಯುಳ್ಳವೆಂದು ಅಂಗೀಕರಿಸದಿದ್ದಲ್ಲಿ, ಅಂತಹವನು ಶಾಸ್ತ್ರಕಾರನಾಗಲಾರ. ಅಂದರೆ ಇವುಗಳ ಅಂಗೀಕಾರ ಅವಶ್ಯಕ, ಇಂತಪ ಧರ್ಮಾದಿಗಳು ಸಿದ್ಧವಾಗಬೇಕಾದರೆ ಅವುಗಳನ್ನು ತಿಳಿಸುವ ಅಪೌರುಷೇಯ ವಾಕ್ಯಗಳನ್ನು[12] ಒಪ್ಪಿಕೊಳ್ಳಲೇಬೇಕು ಎಂದು ಹೇಳಿರುವ ಮಾತುಗಳು ಮೇಲಿನ ಟೀಕೆಗಳಿಗೆ ಉತ್ತರವನ್ನು ಸೂತ್ರವಾಗಿ ಹೇಳುವುವು.

ಧರ್ಮವನ್ನು ಟೀಕಿಸುವವರು ಏನೇ ಹೇಳಲಿ ಒಂದು ವಿಷಯವು ಮಾತ್ರ ಸ್ಥಿರಪಡುವುದು. ಜನರು ಎಲ್ಲೆಡೆಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ಕೆಲವನ್ನು ಧರ್ಮ, ಕೆಲವನ್ನು ಅಧರ್ಮವೆಂದು ಕರೆಯುತ್ತ ಬಂದಿರುವರು. ಇವುಗಳಲ್ಲಿ ದೇಶ, ಕಾಲ, ಸನ್ನಿವೇಶಗಳಿಗೆ ತಕ್ಕಂತೆ ಸ್ವಲ್ಪ ಬದಲಾವಣೆಯಾಗಬಹುದು. ಆದರೆ ಧರ್ಮ ಮತ್ತು ಅಧರ್ಮವೆಂಬುದರ ಮೂಲಕಲ್ಪನೆಗೆ ಈ ಬದಲಾವಣೆಗಳಿಂದ ಬಾಧಕವೇನೂ ಇಲ್ಲ.[13] ಅಲ್ಲದೆ ಟೀಕೆ ಮಾಡುವವರು ಹೇಳುವಂತೆ ಧರ್ಮವೂ ಅನುಕೂಲ, ಹಿತಕರವಾದುದೂ ಒಂದೇ ಆಗಲಾರದು. ಧರ್ಮ, ನ್ಯಾಯ, ಸತ್ಯ ಇವುಗಳಿಗೂ, ಅನುಕೂಲ, ಹಿತಕರ, ಅಪೇಕ್ಷಣೀಯ ಇವುಗಳಿಗೂ ಸ್ಪಷ್ಟವಾದ ವ್ಯತ್ಯಾಸವಿದೆ. ಈ ಎರಡು ಪದಪುಂಜಗಳು ಎರಡು ಭಿನ್ನವರ್ಗದ ಅರ್ಥಗಳನ್ನು ಸೂಚಿಸುವುದು. ಇವುಗಳ ಪರಸ್ಪರ ಬೆರಕೆಯಾಗುವಂತಹ ಸನ್ನಿವೇಶ ಈಗ ಎಲ್ಲೂ ಇಲ್ಲ.. ಧರ್ಮವನ್ನು ಟೀಕಿಸುವ ವಿಮರ್ಶಕರು ಇವೆರಡು ವರ್ಗದ ಪದಗಳಿಗೆ ಅರ್ಥಭೇದ ಉಂಟಾಗಲು ಕಾರಣವೇನೆಂಬುದನ್ನು ವಿವರಿಸಬೇಕು.[14]

---

12. ನ ಚಾಪೌರುಷೇಯ ವಚನಮೇವ ನಾಸ್ತೀತಿ ವಾಚ್ಯಮ್ । ತದಭಾವೇ ಸರ್ವಸಮಯಾಭಿಮತಧರ್ಮಾದ್ಯಸಿದ್ಧೇಃ । ಯಸ್ಯ ತೌ ನಾಭಿಮತೌ ನಾಸೌ ಸಮಯೀ। ಸಮಯಪ್ರಯೋಜನಾಭಾವಾತ್. —ವಿ. ತ. ವಿನಿರ್ಣಯಃ

13. People in all times and places have evinced a disposition to call certain things right and wrong and what at any given moment they will call right and wrong no doubt depends very largely upon the society to which they belong and the age in which they live. Such variations do not however, invalidate the existence of a *Standard of Absolute Right and Wrong* to which differing Judgements will approximate with more are less exactitude, though never perhaps with absolute exactitude. -ibid.

14. If what is right or good is in the last resort exhaustively analysable into what is expedient or pleasant or useful it is impossible to explain how this distinction came to be made. It seems reasonable then to suppose that the words 'good' and 'right' stand for concepts which we specifically distinguish from those denoted by the words 'pleasant' "expedient' and 'useful" -ibid. P. 201

ಇನ್ನು ಲೌಕಿಕ ಕಾರಣಗಳಿಂದ ಧರ್ಮ–ನ್ಯಾಯ ಮೊದಲಾದವುಗಳು ಉದ್ಭವಿಸಿದವೆಂಬುದನ್ನು ಒಪ್ಪಿಕೊಂಡರೂ, ಈಗ ಧರ್ಮಾದಿಗಳು ಸ್ವತ: ಸತ್ಯವಾಗಿದೆಯೆಂಬುದಂತೂ ನಿರ್ವಿವಾದ ವಿಷಯ[15] ಅಷ್ಟೇ ಅಲ್ಲ, ಕಾರಣ ಸಾಮಗ್ರಿಗಳಲ್ಲಿಲ್ಲದ ಗುಣ ಕಾರ್ಯದಲ್ಲಿ ಎಂದಿಗೂ ಬರಲಾರದು. ಸಜಾತೀಯಕಾರಣಸಾಮಗ್ರಿಗಳಿಂದ ಸಜಾತಿಯ ಕಾರ್ಯವೇ ಎಂದಿಗೂ ಆಗುವುದು. ಹಾಗೆಯೇ ಮರವಿನಿಂದಾಗಲೀ , ವಂಶಾನುಗತ ಅಭ್ಯಾಸದಿಂದಾಗಲೀ "ಅನುಕೂಲ–ವಾದ"ದಿಂದ 'ಧರ್ಮ ಮನೋಭಾವನೆ'ಯು ಉತ್ಪನ್ನವಾಗಲಾರದು.[16] ಮೊದಲಿಗೆ

---

ii) What is good will in the last analysis be decided by immediate incontrovertible feeling, in which innermost essence of the being i.e. (the personality) manifests itself. It is as impossible to force a man by logical proofs to love and admire an ideal of life as it is to make his tongue feel the sweetness or bitterness of a particular fruit.

-Paulsen; a System of Ethies P. II.

iii) The idea of the good is something simple, ultimate, and unanalysable. Moral obligation is one of those immediate data of consciousness from which the idea of God may be inferred.

-The theory of God & Evil Vol II; P 103-106, Hastings Rashdall.

1v) Right and wrong as peculiar to moral cognition are unique and unanalysable.

--Prof. Sidwiek. Mind. XXViii- P. 580

v) Duty involves the discovery of something higher than ourselves that has claims upon us.

--Types of Ethical Theory II; P. 104 Martineau

15 They constitute an objection to this account not because they suggest that the account may not be true, but because they show that, if it is true, it does not prove what it is intended to prove. It does not, that is to say, prove that ethical Judgements, even if they do derive from non-ethical Judgements may not be genuinely ethical now. -- God & Evil P. 203

16. You cannot I add from a combination of Judgements of expediency, derive judgements of ethics either by inheritence or through forgetfulness.

--ibid

ii) There is a mystical aspect in our highest moral movements. We never rise to any high level of moral action without feeling that the call of duty come from beyond our isolated self. There is an augustness in conscience which has made men in all ages name it the voice of god, but however it is named, everybody in these high moments of obedience has an experience which is essentially

ಧರ್ಮಾದಿಗಳ ವಾಸನಾ ವಿಶೇಷವೇ ಜನಾಂಗಕ್ಕೆ ಇಲ್ಲದಿದ್ದರೆ, ಈ ವಾಸನಾ ವಿಶೇಷವು ಯಾವಾಗ, ಹೇಗೆ ಉಂಟಾಯಿತೆಂಬ ಪ್ರಶ್ನೆಯು ಅಪರಿಹಾರ್ಯ. ಬರಿಯ ಲೌಕಿಕ ಸೌಖ್ಯವನ್ನು ಕಾರಣನಾಗಿ ಹೂಡಿದ ಜನಾಂಗಗಳಲ್ಲಿ "ಧರ್ಮಾದಿ"ಗಳ ಬಲವತ್ತರ ಪ್ರೇರಣೆಯು ಹೇಗೆ ಆದೀತು?[17] ಇದು ಸ್ವಾಭಾವಿಕವಾಗಿಯೇ ಅಸಂಭವವಾಗಿ ತೋರುವುದು. ಅಲ್ಲದೆ ಈ "ಧರ್ಮಾದಿ"ಗಳು ಎಂದಿನಿಂದಲೂ ಇರಬೇಕೆಂಬುದನ್ನು.[18] ಸೂಚಿಸುವುದು. ಹಾಗೆ ಚಿರಂತನವಾಗಿ ಇದು ಇರುವುದರಿಂದಲೇ 'ಇದು ಧರ್ಮ' 'ಇದು ಹಿತಕರ' ಎಂಬುದಕ್ಕೆ ಇರುವ ಭೇದವೂ ಎಂದಿಗೂ ಸ್ಪಷ್ಟವಾಗಿದೆ.

ವಿಕಾಸವಾದವಾಗಲೀ, ವಿಷಯಿ ಸತ್ಯತ್ವ ಪ್ರತಿಪಾದಕ (Subjectivism) ವಾದವಾಗಲೀ ಜಗತ್ತಿನ ಮೂಲನಿಯಮವನ್ನು ಉಪೇಕ್ಷಿಸುವುದು. ಜಗತ್ತಿನಲ್ಲಿ ಯಾವ ಪದಾರ್ಥದ ಸ್ವಭಾವವೂ ಬದಲಾಗದು.[19] ಯಾವ ವಸ್ತುವೂ ಆರಂಭದಲ್ಲಿ ಕ್ಷೀಣದಸೆಯಲ್ಲಿದ್ದು ನಿರಂತರ ಪ್ರಗತಿಪಥದಲ್ಲಿ ಬೆಳೆಯುವುದೆಂಬ ವಿಕಾಸವಾದದ ಮುಖ್ಯ ತತ್ತ್ವವು ಸತ್ಯಕ್ಕೆ ಬಹಳ ದೂರವಾದುದು. ವಸ್ತುವು ಹುಟ್ಟಿನಿಂದ ನಾಶದವರೆಗೆ ಕೆಲಕಾಲ ವೃದ್ಧಿಸಿ, ಕೆಲಕಾಲ ಕ್ಷಯಿಸಿ, ಕೆಲಕಾಲ ಸಮಸ್ಥಿತಿಯಲ್ಲಿದ್ದು ಹೋಗುವುದು.[20] ಇದು ಜಡಪದಾರ್ಥಗಳಿಗೆ ಹೇಗೋ ಹಾಗೇ ತತ್ತ್ವಗಳು ಮತ್ತು ಭಾವನೆಗಳು ಇವುಗಳಿಗೂ ಅನ್ವಯಿಸುವುದು. ಪ್ರಗತಿ ತತ್ತ್ವದ ಪ್ರಕಾರ, ವಿಕಾಸಮಾರ್ಗದಲ್ಲಿ ಪದಾರ್ಥದ ಸ್ವಾಭಾವ ಬದಲಾಗುವುದೆಂಬುದು ಸರಿಯಲ್ಲ. ಆದ್ದರಿಂದ ಈ ಜಗತ್ತಿನಲ್ಲಿ "ಧರ್ಮ, ಅಧರ್ಮ ಕರ್ತವ್ಯ' ಮೊದಲಾದವು ಮೂಲ ರಚನೆಯಲ್ಲಿ ಹೊಂದಿಕೊಂಡಂತೆಯೇ ಇರುವುವು. ಅವು ನಮ್ಮ ಭಾವನೆಗಳಿಂದ ಮಾತ್ರ ಹುಟ್ಟಿಕೊಂಡು. ನಮ್ಮ ಭಾವನೆಗಳಲ್ಲೇ

---

mystical-an experience which cannot be analysed and reduced to 'explanation;' in terms of anything else. The great ethical writers of all schools recognise this.

-Rufus, M. Joness-Studies in Mystical religion.

17. There must presumably have been a moment in the history of mankind when the pull of the moral imperative-"Do this because you aught to do it"-was first felt and expressed in a moral judgement. but how could the moral judgement have been made and how could it have exerted an influence over the conduct of those to whom it was addressed, if the human beings had never recognised anything but expediency?

--God & Evil. P. 204

18. ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ ಧರ್ಮೇ ಸರ್ವಂ ಪ್ರತಿಷ್ಠಿತಮ್.

19. ಸ್ವಭಾವಸ್ಯ ಅನಪಾಯಾತ್.

20. ಷಡ್ಭಾವವಿಕಾರಾಃ —ಅಸ್ತಿ, ಜಾಯತೇ, ವರ್ಧತೇ, ತಿಷ್ಠತಿ, ಅಪಕ್ಷೀಯತೇ, ವಿನಶ್ಯತಿ ಚೇತಿ.

—ನಿರುಕ್ತ.

ಉಳಿದಿರುವುದಿಲ್ಲ, ಬಾಹ್ಯ ಜಗತ್ತಿನಲ್ಲಿ ಅವು ಸ್ವತಃ ಸಿದ್ಧವಾಗಿರುವುವು. ಅವುಗಳ ಕರೆಗೆ ನಮ್ಮ ಮನಸ್ಸು ಓಗುಟ್ಟುವುದೂ ಉಂಟು. ಆದ್ದರಿಂದ ಈ ಜಗತ್ತು ಧರ್ಮಾದಿ ನಿಯತವು.[21]

ವಿಜ್ಞಾನದಿಂದ ಹೊರಹೊಮ್ಮಿದ ಭೌತವಾದವು ಜಗತ್ತಿನ ರಚನೆಗೆ ಅಲೌಕಿಕ ಹೇತುವಿಲ್ಲವೆಂದು ಹೇಳಿದುದನ್ನು ವಿಜ್ಞಾನಿಗಳೇ ಪುನರ್ವಿಮರ್ಶೆಮಾಡುವಂತಾಗಿದೆ. ನಿತ್ಯ ಜೀವನದಲ್ಲಿ ಆಗುವ ಕೆಲವು ಅನುಭವಗಳು ಜಗತ್ತಿನಲ್ಲಿ ಅದೃಷ್ಟವಾದ, ಅತೀಂದ್ರಿಯ ಕಾರಣಗಳುಂಟು, ಅದೃಷ್ಟವಾದ ಧರ್ಮಾದಿಗಳು ಸತ್ಯವೆಂಬುದನ್ನು ತೋರಿಸಿಕೊಡುವುವು. ನಮ್ಮ ಯಾವ ಇಂದ್ರಿಯಗಳೂ ಗೋಚರವಲ್ಲದೆ ಬರಿಯ ಕಾರ್ಯ–ಕಾರಣ ಅನುಮಾನದಿಂದಲೇ ಕೆಲವು ಪದಾರ್ಥಗಳನ್ನು ನಿರ್ಣಯ ಮಾಡುವುದು ಪ್ರತಿಯೊಬ್ಬನವ್ಯವಹಾರದಲ್ಲೂ ಕಂಡಿದೆ. ರೇತೋತ್ಸರ್ಗದಿಂದ ಮಕ್ಕಳಾಗುವುದೇ ಮೊದಲಾದ ಕಾರ್ಯಗಳು ಅತೀಂದ್ರಿಯವಾದ ಕಾರಣಗಳು ಲೋಕದಲ್ಲಿದೆ ಯೆಂಬುದನ್ನು ಸೂಚಿಸುವುವು[22]. ತಪಸ್ಸಾಧನೆಯಿಂದ ಉಂಟಾಗುವ ಫಲಗಳಂತೂ ದೃಗ್ಗೋಚರವಾ–ಗುವುದರಿಂದ ಅದೃಷ್ಟ ಕಾರಣವನ್ನು ಒಪ್ಪಬೇಕಾಗುವುದು. ಪರಮಾತ್ಮನ ಆಸ್ತಿತ್ವವನ್ನು ಅನುಮಾನ ಪ್ರಮಾಣದಿಂದಲೇ ಸಾಧಿಸಹೊರಟ ಗಂಡೆದೆಯ ಉದಯಮಾಚಾರ್ಯರೂ

---

21. The Universe, then, Contains, "good" "Right" and aught as independent factors in its fundamental make up To say that these factors are independent means that they are not merely in, or Projections of our minds but exist apart from us and are noted and responded to by our minds. The universe then is a moral universe. --God & Evil P. 207

ii ಪ್ರತ್ಯಯಶಬ್ದೇನಾತ್ರ ಸಮಾಶ್ವಾಸವಿಷಯ ಪ್ರಾಮಾಣ್ಯ ಮುಚ್ಯತೇ । ತಥಾ ಚ ಪ್ರಯೋಗಃ – ಆಗಮ ಸಂಪ್ರದಾಯೋಽಯಂ ಕಾರಣಗುಣಪೂರ್ವಕಃ ಪ್ರಮಾಣತ್ವಾತ್ । ಪ್ರತಕ್ಷಾದಿವತ್ । ನಹಿ ಪ್ರಮಾಣ್ಯ ಪ್ರತ್ಯಯಂ ವಿನಾ ಕ್ವಚಿತ್ಸಮಾಶ್ವಾಸಃ । ನ ಚಾಸಿದ್ಧಸ್ಯ ಪ್ರಮಾಣಸ್ಯ ಪ್ರತೀತಿಃ । ನ ಚ ಸ್ವತಃ ಪ್ರಾಮಾಣ್ಯಮಿತ್ಯಾವೇದಿತಮ್।

–ನ್ಯಾಯಕುಸುಮಾಂಜಲಿಃ

22. ನನ್ವತೀಂದ್ರಿಯಾರ್ಥಾಭಾವೇನ ಪ್ರತ್ಯಕ್ಷೇತರಸ್ಯಾಪ್ರಾಣಾತ್ ಕಥಂ ಶಾಸ್ತ್ರಾದೀಶ್ವರಸಿದ್ಧಿರಿತಿ ನಾಸ್ತಿಕವಾದಂ ಮೋಕ್ಷಧರ್ಮ ವಚನೇನ ನಿರಾಚಷ್ಟೇ ಃ–

"ರೇತೋಧಾತುರ್ವಟಕಣಿಕಾಘೃತಧೂಮಾದಿವಾಸನಮ್ ।
ಜಾತಿಸ್ಮೃತಿರಯಸ್ಕಾಂತಃ ಸೂರ್ಯಕಾಂತೋಂಬುಭಕ್ಷಣಮ್ ॥
ಪ್ರೇತ್ಯ ಭೂತಾಪ್ಯಯಶ್ಚೈವ ದೇವತಾಭ್ಯುಪಯಾಚನಮ್ ।
ಮೃತೇ ಕರ್ಮನಿವೃತ್ತಿಶ್ಚ ಪ್ರಮಾಣಮಿತಿ ನಿಶ್ಚಯಃ ॥ - M. B. XII 220-230.

ಇತಿ ಮೋಕ್ಷಧರ್ಮವಚನಾತ್ ನ ನಾಸ್ತಿಕ್ಯವಾದೋ ಯುಜ್ಯತೇ। ದರ್ಶನಾಚ್ಚ ತಪ ಆದಿ ಫಲಸ್ಯ – ಬ್ರಹ್ಮಸೂತ್ರಭಾಷ್ಯಮ್.

ಈಶ್ವರಸಿದ್ಧಿಗೆ ಮೊದಲ ಸೋಪಾನವಾಗಿ ಅಲೌಕಿಕ ಕಾರಣವನ್ನು ಎಲ್ಲರೂ ಒಪ್ಪಲೇಬೇಕೆನ್ನುತ್ತಾರೆ. "ಜಗತ್ತಿನಲ್ಲಿನ ನಿಯಮಗಳು ಸಾಪೇಕ್ಷವಾದವು, ಅನಾದಿಯಾದವು, ವಿಚಿತ್ರವಾದವು ಮತ್ತು ಸರ್ವತ್ರ ಅನುಸರಿಸಲ್ಪಡುತ್ತಿರುವುವು. ಪ್ರತಿಯೊಬ್ಬರ ಅನುಭವಕ್ಕೂ ವಿಷಯವಾದವು. ಆದ್ದರಿಂದ ಅಲೌಕಿಕವಾದ ಕಾರಣ ಒಂದು ಸಂಸಾರಚಕ್ರವನ್ನು ನಡೆಸುತ್ತಿರಬೇಕು'' ಎಂದು ಅವರು ಗಹನವಾದ ತರ್ಕಶೈಲಿಯಲ್ಲಿ ಪ್ರತಿಪಾದಿಸಿದ್ದಾರೆ[23]. ಅಲೌಕಿಕ ಕಾರಣಗಳಿಂದ ರೂಪಗೊಂಡ ಧರ್ಮಾದಿಗಳು ಹೇಗೆ ಸತ್ಯಭೂತವಾದದ್ದೋ ಹಾಗೆಯೇ ಮತೀಯಅನುಭವಗಳೂ (Religious Experiences) ಅದರಿಂದ ಸಾಧಿಸಲ್ಪಡುವ 'ದೇವರು' ಸತ್ಯ ಭೂತವಾದವು. ಆರಂಭಕಾಲದಲ್ಲಿ ಪ್ರಾಕೃತಿಕ ಶಕ್ತಿಗಳಿಗೆ ಹೆದರಿ ಒಂದು 'ಶಕ್ತಿ' ಬೇಕೆಂದು 'ದೇವರೆಂ'ಬುದನ್ನು ಸೃಷ್ಟಿಸಿ ಮನುಷ್ಯ ಅದಕ್ಕೆ ಶರಣು ಹೋದ. ಅದೇ ಈಗ ಮತವಾಗಿ ಬೆಳೆಯಿತೆಂಬ ವಿಮರ್ಶಕರವಾದವು ಏಕಪಕ್ಷೀಯವಾದುದು. ಈಗ ಉಪಸ್ಥಿತವಿರುವ ಮತಗಳು ಸ್ವಪರಿಪೂರ್ಣವಾಗಿ ಬೆಳೆದಿವೆ. ಆದರೆ ಈ ಮತೀಯಭಾವನೆಗಳು ಮನಸ್ಸಿನ ಹಂಬಲ ಪೂರೈಸಲು ರೂಪಗೊಂಡುದು ಎಂದು ವಿಮರ್ಶಕರ ತರ್ಕ. ಇದರಿಂದ ಮನುಷ್ಯ ಯಾವಾಗಲೂ ಅತೀಂದ್ರಿಯವಸ್ತುವಾದ ದೇವರನ್ನು ಅರಸುವ ಸ್ವಭಾವದವನು ಎಂಬುದಂತೂ ಸ್ಪಷ್ಟವಾದಂತಾಯಿತು.[24] ಅದಕ್ಕೆ ಮನುಷ್ಯನನ್ನು **ಆಧ್ಯಾತ್ಮಶರಣ**ನೆನ್ನುವುದು. ಅವನ ಈ ಸ್ವಭಾವ ಅನಾದಿಕಾಲದಿಂದಲೂ ಬಂದಿರುವುದರಿಂದ [25] ಇದನ್ನು ಬರಿಯ ಭ್ರಾಂತಿ ಎಂದಂತೂ ಅಲ್ಲಗಳೆಯುವಂತಿಲ್ಲ. ಭೌತಿಕ ವಾದಿಗಳೂ ಅದನ್ನು ತಿರಸ್ಕರಿಸಲಾರರು.[26] ಹೀಗೆ "ಮತ–ಪ್ರಿಯತೆ'' ರೂಢಮೂಲವಾಗಿರಬೇಕಾದರೆ ಮಾನವನ ಅಂತರಾತ್ಮನಲ್ಲಿ

---

23 ಸಾಪೇಕ್ಷತ್ವಾದನಾದಿತ್ವಾದ್ವೈಚಿತ್ರ್ಯಾದ್ವಿಶ್ವವೃತ್ತಿತಃ ।
ಪ್ರತ್ಯಾತ್ಮನಿಯಮಾದ್ಭುಕ್ತೇರಸ್ತಿ ಹೇತುರಲೌಕಿಕಃ ॥ —ನ್ಯಾಯಕುಸುಮಾಂಜಲಿಃ

24 Man's tendency is to organise his knowledge and his feelings his desire for understanding and for propitiation, his ideals of virtue, his complementary instincts for selfassertion and self abasement - these and much else enter into the reaction of his mind to the external complex of forces; and finally it is his capacity for experiencing things as sacred which makes the reaction a religious one.

-Science&Religion, Julian Huxley.

25 That this experience, the experience of the 'numinous' has been enjoyed by human beings all the way down the ages, few I think would be disposed to deny. What account are we to give of it? -God & Evil. P. 217

26 Now that it (the experience of the numinous) should be the first (a mere twist in the human mind) of these is precisely what, I should have thought, a purely materialistic account of man and his environment would be forced to deny. - God & Evil. P. 218

ಈ ಭಾವನೆಯನ್ನುದ್ಭವಿಸಲು ಯಾವುದೋ ನಿಜವಾದ ಕಾರಣವಿರಬೇಕೆಂದೂ ಹೇಳದಂತಾಗುವುದು.[27] ಆದರೆ "ಈಶ್ವರ" ಇರುವುದರಿಂದಲೇ 'ಈಶ್ವರಭಾವನೆ', 'ಈಶ್ವರನ ಹಂಬಲ' ಜೀವನದಲ್ಲಿ ಉಂಟಾಗಬೇಕು. ಇಲ್ಲದಿದ್ದಲ್ಲಿ ಕಾರಣಗಳು ಸುಳ್ಳಾದಲ್ಲಿ ಕಾರ್ಯಜಾತವಾದ "ಧಾರ್ಮಿಕಪ್ರವೃತ್ತಿ"ಗಳೂ ಸುಳ್ಳಾಗಬೇಕಿತ್ತು. ಇವು ಸತ್ಯಭೂತವಾದ್ದರಿಂದ ಇದಕ್ಕೆ ಕಾರಣವಾದ 'ದೇವರು' ಸತ್ಯಭೂತವಾಗಿರಬೇಕು.

3. ಅನುಮಾನದಿಂದ ಈಶ್ವರಸಾಧನೆ

ಈಶ್ವರ ಪ್ರತ್ಯಕ್ಷಕ್ಕಂತೂ ಗೋಚರವಾಗುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಅನುಮಾನ ಪ್ರಮಾಣದಿಂದ ಈಶ್ವರನ ಅಸ್ತಿತ್ವವನ್ನು ಸಾಧನಮಾಡುವ ಪ್ರಯತ್ನ ಪಾಶ್ಚಾತ್ಯ–ಭಾರತದರ್ಶನಕಾರರನೇಕರಲ್ಲಿ ಕಂಡುಬರುವುದು. ಭಾರತದರ್ಶನಕಾರರನೇಕರಲ್ಲಿ ಹೀಗೆ ಅನುಮಾನ ಪ್ರಮಾಣದಿಂದ ದೇವರನ್ನು ಸಾಧನೆ ಮಾಡುವುದರಲ್ಲಿ ನೈಯಾಯಿಕರು, ಅದರಲ್ಲೂ ಪ್ರಾಚೀನ ನೈಯಾಯಿಕರು ಅಗ್ರಗಣ್ಯರು. ಅವರ ಪೈಕಿ ಉದಯನಾಚಾರ್ಯರು ಈ ವಾದವನ್ನು 'ನ್ಯಾಯಕುಸುಮಾಂಜಲಿ'ಯಲ್ಲಿ ಅತ್ಯಂತ ಗಂಭೀರವಾಗಿ ವಿಚಾರಮಾಡಿರುತ್ತಾರೆ. ಅವರು ದೇವರುಂಟೆಂಬುದಕ್ಕೆ ಮುಖ್ಯವಾಗಿ ಕೊಡುವ ಕಾರಣಗಳು ಹೀಗಿವೆ.[28] ಕಾರ್ಯತ್ವಾನುಮಾನವು ಮೊದಲನೆಯದು. ಈ ಜಗತ್ತು ಕಾರ್ಯ ಆದ್ದರಿಂದ ಇದಕ್ಕೊಂದು ಕಾರಣವಿರಬೇಕು. ಆ ಕಾರಣನೇ ಈಶ್ವರನು. ಪಾಶ್ಚಾತ್ಯರಲ್ಲೂ ಈ ಅನುಮಾನವು ಈಶ್ವರ–ಸಾಧಕಪ್ರಮಾಣವೆಂದು ಅಂಗೀಕೃತವಾಗಿದೆ. ಇದಕ್ಕೆ Causal Argumentಎಂದು ಹೆಸರು. ಈ ಜಗತ್ತಿನಲ್ಲಿ ಕಾಣಬರುವುದೆಲ್ಲ ಕಾರಣವಾಗಿರಬೇಕು, ಅಥವಾ ಕಾರ್ಯವಾಗಿರಬೇಕು. ಕಾರಣವಾದ ಪದಾರ್ಥಗಳಿಗೆ ಪುನಃ ಇನ್ನೊಂದು ಕಾರಣವಿರಬೇಕು. ಘಟ ಕಾರ್ಯ, ಇದಕ್ಕೆ ಮಣ್ಣು ಕಾರಣ. ಆದರೆ ಇದು ಪಂಚಭೂತಗಳ ಕಾರ್ಯ. ಗಡಿಯಾರಕ್ಕೆ ಅದರಲ್ಲಿರುವ ಪ್ರತ್ಯೇಕ ಯಂತ್ರಗಳು ಕಾರಣ, ಉಕ್ಕು ಮೊದಲಾದ ಧಾತುಗಳು ಆ ಯಂತ್ರ ವಿಭಾಗಕ್ಕೆ ಕಾರಣ. ಹೀಗೆ ಈ ಕಾರ್ಯಕಾರಣಭಾವ ಎಲ್ಲ ಪದಾರ್ಥಗಳಲ್ಲೂ ಅನಾದಿಕಾಲದಿಂದಲೂ ನಡೆದುಬಂದಿದೆ. ಇದು ಬರಿಯ ಕುರುಡು ನಿಯಮವಾಗಲಾರದು. ಕಾರಣಗಳಿದ್ದ ಮಾತ್ರಕ್ಕೇ ಕಾರ್ಯಗಳುಂಟಾಗಲಾರವು. ಮಣ್ಣು ಮಡಕೆಯಾಗಲು ಚಕ್ರ, ದಂಡ ಮತ್ತು ಕುಲಾಲ ಇವರು ಬೇಕು. ಇದರಂತೆ ಈ ಕಾರ್ಯಜಾತ ಜಗತ್ತಿಗೆ ನಿಮಿತ್ತಕಾರಣನಾದ ಭಗವಂತನೊಬ್ಬ

---

27. I think the materialist would be right in arguing that we cannot explain our feeling for the 'numinous' except on the assumption that there is some objective feature in nature which excites it. -God & Evil. p.218

28. ಕಾರ್ಯಾಯೋಜನಧೃತ್ಯಾದೇಃ ಪದಾತ್ಪ್ರಯತಃ ಶ್ರುತೇಃ ।
ವಾಕಾತ್ಸಂಖ್ಯಾವಿಶೇಷಾಚ್ಚ ಸಾಧ್ಯೋ ವಿಶ್ವವಿದವ್ಯಯಃ ।

ಬೇಕು. ಅವನಿಗೆ ಕಾರ್ಯಕಾರಣ ಭಾವವನ್ನು ನಿರ್ವಹಿಸುವ ಯೋಗ್ಯತೆ ಇರಬೇಕು. ಅಂದರೆ ಅವನು ಸರ್ವಜ್ಞನೂ, ಸರ್ವಶಕ್ತನೂ ಆಗಿರಬೇಕು. ಇದೇ ಈ ವಾದದ ಮುಖ್ಯ ಸಾರಾಂಶ. ಈ ಜಗತ್ತೆಲ್ಲ ಒಬ್ಬ ಸರ್ವಜ್ಞನಿಂದ ಆದ ಕಾರ್ಯವೆಂಬುದೇ ಈ ಅನುಮಾನದಿಂದ ಸಾಧಿಸಲ್ಪಡುವ ವಿಷಯ.[29] ವೇದಶಾಸ್ತ್ರಗಳಿಗೆ ವಿರೋಧವಿಲ್ಲದ ತರ್ಕದಿಂದ ಪರಂಪರಾಗತ ಉಪದೇಶಗಳನ್ನು ಬಲಪಡಿಸುವ ಯತ್ನವೇ ಧರ್ಮವೆಂಬ ಮನುಸ್ಮೃತಿ ವಾಕ್ಯವನ್ನು[30] ಉದಹರಿಸಿ ಉದಯನಾಚಾರ್ಯರು ತಮ್ಮ ತರ್ಕಕ್ಕೆ ಶ್ರುತಿಗಳ ಬೆಂಬಲವಿದೆಯೆಂದು ತೋರಿಸಲು ಶ್ರುತಿಯನ್ನು ಉದಹರಿಸುತ್ತಾರೆ[31] ಕಾರ್ಯತ್ವಾನುಮಾನದಿಂದ ಸಿದ್ಧನಾಗುವ ಸರ್ವಜ್ಞ. ಸರ್ವತ್ರವ್ಯಾಪ್ತ. ಸರ್ವಪ್ರೇರಕ ಮೊದಲಾದ ಗುಣಗಳುಳ್ಳ ಈಶ್ವರನೇ ಈ ಶ್ರುತಿವಾಕ್ಯದಿಂದಲೂ ವರ್ಣಿತನಾಗಿದ್ದಾನೆಂದು ಅವರು ಉಪಪಾದಿಸಿದ್ದಾರೆ. ನೈಯಾಯಿಕರು ಜಗತ್ತು ಪರಮಾಣುಗಳಿಂದ ಆದುದೆಂದು ಹೇಳುವುದರಿಂದ ಈ ಪರಮಾಣುಗಳನ್ನು ಯೋಜನೆಮಾಡತಕ್ಕ ಚೇತನ ಪರಮಾತ್ಮನೆಂಬ ಆಯೋಜನಯುಕ್ತಿಯನ್ನು [32] ಅವರು ಹೇಳುವರು. ಮೂರನೆಯದೇ ಧೃತಿ (Teleslogical argument) ಈ ಸಮಸ್ತ ಜಗತ್ತಿಗೂ ಒಬ್ಬ ಧಾರಕನು ಅವಶ್ಯಕ. ಆ ಧಾರಕನೇ ಈಶ್ವರ[33] ಈ ಅನುಮಾನಕ್ಕೆ ಆಗಮದ ಬೆಂಬಲವೂ ಇದೆ.[34] ಜಗತ್ತಿನಲ್ಲಿ ಭಾಷಾದಿ ವ್ಯವಹಾರವೇ

---

29 ಸಾಮಾನ್ಯತೋ ದೃಷ್ಟಂತು ಲಿಂಗಮೀಶ್ವರ ಸತ್ತಾಯಾಮಿದಂ ಬ್ರೂಮಹೇ ಪೃಥಿವ್ಯಾದಿಕಾರ್ಯಂ ಧರ್ಮ ತದುತ್ಪತ್ತಿಪ್ರಕಾರಪ್ರಯೋಜನಾದ್ಯಬಿಭ್ಞಾಕರ್ತೃಪೂರ್ವಕಮಿತಿ ಸಾಧ್ಯೋ ಧರ್ಮಃ ಕಾರ್ಯತ್ವಾತ್ ಘಟವತ್ । —ನ್ಯಾಯ ಕುಸುಮಾಂಜಲಿಃ

ಆರ್ಷಂ ಧರ್ಮೋಪದೇಶಂ ಚ ವೇದಶಾಸ್ತ್ರಾವಿರೋಧಿನಾ ।
ಯಸ್ತರ್ಕೇಣಾನುಸಂಧತ್ತೇ ಸ ಧರ್ಮಂ ವೇದ ನೇತರಃ । — ಮನುಸ್ಮೃತಿಃ

ವಿಸ್ವತಶ್ಚಕ್ಷುರುತ ವಿಶ್ವತೋಮುಖೋ ವಿಶ್ವತೋ ಬಾಹುರುತ ವಿಶ್ವತಸ್ಪಾತ್ । ಸಂಬಾಹುಭ್ಯಾಂ ಧಮತಿ ಸಂಪ್ರತ್ಪೈರ್ದ್ಯಾವಾಭೂಮೀ ಜನಯನ್ ದೇವ ಏಕಃ । ಅತ್ರ ಪ್ರಥಮೇನ ಸರ್ವಜ್ಞತ್ವಂ..... —ನ್ಯಾಯಕುಸುಮಾಂಜಲಿಃ

ಪರಮಾಣ್ವಾದಯೋ ಚೇತನಾಯೋಜಿತಾಃ ಪ್ರವರ್ತಂತೇ, ಅಚೇತನತ್ವಾತ್, ವಾಸ್ಯಾದಿವತ್।
—ನ್ಯಾಯಕುಸುಮಾಂಜಲಿಃ ೫—೪

33 ಕ್ಷಿತ್ಯಾದಿ ಬ್ರಹ್ಮಾಂಡಪರ್ಯಂತಂ ಜಗತ್ ಸಾಕ್ಷಾತ್ಪರಂಪರೆಯಾ
ವಾ ವಿಧಾರಕ ಪ್ರಯತ್ನಾದಿಷ್ಠಿತಂ, ಗುರುತ್ವೇ ಸತ್ಯಪತನಧರ್ಮಕತ್ವಾತ್,
ವಿಯತಿವಿಹಂಗಮ ಶರೀರವತ್ ತತ್ಸಮ್ಯುಕ್ತದ್ರವ್ಯವಚ್ಚ । —ibid

34 ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿದ್ಯಾವಾಪೃಥಿವ್ಯೌ ವಿಧೃತೇ ತಿಷ್ಠಿತಃ ।

ii) ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥

ಮೊದಲಾದ ವಿವಿಧ ಕಾರ್ಯಗಳ ನೈಪುಣ್ಯ—ಇವುಗಳಿಗೆ ಮೂಲಪ್ರವರ್ತಕ ಒಬ್ಬ ಸ್ವತಂತ್ರ ಈಶ್ವರನಿರಬೇಕೆಂಬುದು ನಾಲ್ಕನೆಯ ಯುಕ್ತಿ.[35] ಯೋಗದರ್ಶನಾಚಾರ್ಯ ಪತಂಜಲಿಗಳು ಈಶ್ವರನೇ ಅನಾದಿಕಾಲದಿಂದ ಗುರುವೆಂದು ಹೇಳಿದ್ದಾರೆ.[36] ಶ್ರುತಿಗಳೂ ಭಾಷಾ ವ್ಯವಹಾರದ ಆದಿಕರ್ತೃವೆಂದು ಪರಮಾತ್ಮನನ್ನು ಸಂಬೋಧಿಸುತ್ತವೆ.[37]. ಕೊನೆಯದಾಗಿ ಪ್ರತ್ಯಯ ಅಂದರೆ ವೇದಪರಂಪರೆಯಲ್ಲಿ ನಂಬಿಕೆ—ಶ್ರದ್ಧೆ ಅಥವಾ ವಿಶ್ವಾಸ—ಇದರಿಂದಲೂ ಈಶ್ವರಸಾಧನೆ ಮಾಡಬಹುದು.[38]

---

35 ಯದೇತತ್ಪಟಾದಿ ನಿರ್ಮಾಣನೈಪುಣ್ಯಂ ಕುವಿಂದಾದೀನಾಂ, ವಾಗ್ವ್ಯವಹಾರಶ್ಚ ವ್ಯಕ್ತಾಪಾಚಾಂ, ಅಪಿ ತತ್ಕ್ರಮ ವ್ಯವಹಾರಶ್ಚ ಬಾಲಾನಾಂ, ಸ ಸರ್ವಃ ಸ್ವತಂತ್ರ ಪುರುಷ ವಿಶ್ರಾಂತಃ, ವ್ಯವಹಾರತ್ವಾತ್? ಪುಣತರ ಶಿಲ್ಪಿನಿರ್ಮಿತಾ ಪೂರ್ವಘಟಘಟನಾನ್ವೆ ಪುಣ್ಯವತ್, ಚೈತ್ರಮೈತ್ರಾದಿ ಪದವತ್, ಪತ್ರಾಕ್ಷರವತ್ ಪಾಣಿನೀಯ ವರ್ಣನಿರ್ದೇಶಕ್ರಮವಚ್ಚೇತಿ ॥

—ನ್ಯಾಯಕುಸುಮಾಂಜಲಿಃ .

36. ಸರ್ವೇಷಾ ಮಪಿ ಗರುಃ ಕಾಲೇನಾನವಚ್ಛೇದಾತ್ ಯೋಗಸೂತ್ರಮ್

37. ಯಜ್ಞೇನ ವಾಚ ಪದಪೀಪ್ಯಮಾಯನ್ ತಾಮನ್ವಿಂದನ್ ಋಷಿಷು ಪ್ರವಿಷ್ಟಾಮ್ ।
ತಾಮಾಭೃತ್ಯಾ ವ್ಯದಧುಃ ಪರುಷಾಃ ಅಭಿಸಂನವಂತೇ

ii. ಬೃಹಸ್ಪತೇ ಪ್ರಥಮಂ ವಾಚೋ ಅಗ್ರಂ ಯತ್ಪ್ರೈರತನಾಮಧೇಯಂ ದಧಾನ್ಯ ।
ಯದೇಷಾಂ ಶ್ರೇಷ್ಠಂ ದದರಿ ಪ್ರಮಾಸೀತ್ಪ್ರೇಮ್ಣಾ ತದೇಷಾಂ ನಿಹಿತಂ ಗುಹಾವಿ

—ಋಗ್ವೇದ ಃ.

38. i ಈಶ್ವರಃ ಕಾರಣಂ, ಪುರುಷಕರ್ಮಾಫಲ್ಯದರ್ಶನಾತ್ —ನ್ಯಾಯಸೂತ್ರಮ್

ii ಸ ಹಿ ಸರ್ವವಿತ್ಸರ್ವಕರ್ತಾ, ಈದೃಶೇಶ್ವರಾಸಿದ್ಧಿಃ ಸಿದ್ಧಾಃ । —ಸಾಂಖ್ಯದರ್ಶನಮ್

iii ಕ್ಲೇಶಕರ್ಮವಿಪಾಕಾಶಯೈರಪರಾಮೃಷ್ಟಃ ಪುರುಷವಿಶೇಷ ಈಶ್ವರಃ ತ್ರ್ತ ನಿರತಿಶಯಂ ಸಾರ್ವಜ್ಞ್ಯಬೀಜಮ್. —ಯೋಗದರ್ಶನಮ್

iv ಸಮಾಧಿಸಿದ್ಧಿರೀಶ್ವರಃ ಪ್ರಣಿಧಾನತ್ ।

v I find in myself an idea of God as a substance Infinite, Eternal, Immutable, Omnipotent, by which myself and all other things have been created and produced -Descartes.

vi If intellect and will do belong to God's eternal essence, each of these attributes must be taken in a sense very different from the common one. For there would have to be a world-wide difference between one intellect and will, and the intellect and will constituting God's essence, nor could they agree in anything except the name; just as the Dog a constellation agrees with Dog an animal that barks.

-Spinoza

ಹೀಗೆ ಈಶ್ವರ ಸಾಧನೆಗೆ ಅನೇಕ ಯುಕ್ತಿಗಳನ್ನು ಭಾರತೀಯರು ಮತ್ತು ಪಾಶ್ಚಾತ್ಯರು ಉಪಯೋಗಿಸಿದ್ದಾರೆ. ಇದಲ್ಲದೆ ಭಾರತದರ್ಶನಾಚಾರ್ಯರನೇಕರು ಮತ್ತು ಪಾಶ್ಚಾತ್ಯತತ್ತ್ವಶಾಸ್ತ್ರವೇತ್ತರನೇಕರು ದೇವರ ಅಸ್ತಿತ್ವದ ಬಗ್ಗೆ ತಮ್ಮ ಅಭಿಪ್ರಯವನ್ನು ಅನೇಕರೀತಿಯಾಗಿ ವ್ಯಕ್ತಪಡಿಸಿದ್ದಾರೆ. [38] A

---

vii It is this that enables spirits to enter into a kind of fellowship with God and brings it about that in relation to them he is not only what an inventor is to his majustes, but also what a prince is to his subjects and indeed what father is to his children. -Leibnitz.

viii And we can know therefore that a supremely powerful knowing and intelligent being exists. Otherwise there must have been a time when knowledge did not exist and in that case, it never could have come into being- -Locke.

ix We perceive a continual succession of ideas; some are anew excited, others are changed or totally disappear, there is therefore some cause of these ideas, where on they depend and which produces and changes them. That this cause cannot be any quality of idea or combination of ideas, is clear already; It must therefore be a substance, but it has been shown that there is no corporan or material substance, it remains therefore that the cause of ideas is an incorporan active substance or spirit.

And since our own will is not sequel to the task there must be some other will that produces ideas in us namely God. -Berkley.

4. ಈಶ್ವರ ಸಾಧನೆಗೆ ಅನುಮಾನ ಅಸಮರ್ಥ ಪ್ರಮಾಣ

ಈಶ್ವರನನ್ನು ಸಾಧನೆಮಾಡಲು ಅನುಮಾನಪ್ರಮಾಣಗಳು ಭಾರತ ಮತ್ತು ಪಾಶ್ಚಾತ್ಯ ದಾರ್ಶನಿಕರಿಂದ ಉಪಯೋಗಿಸಲ್ಪಟ್ಟಿದ್ದರೂ ಇವೆಲ್ಲ ದೋಷದುಷ್ಟವಾದವು. ಮತ್ತು ಇವುಗಳಿಂದ ಈಶ್ವರನ ಸಾಧನೆಯು ಅಸಂಭವವಾಗುವುದು. ಪಾಶ್ಚಾತ್ಯರಲ್ಲಿ ಈಶ್ವರಸಾಧನೆಗೆ ಯಾವ ಯಾವ ಅನುಮಾನಗಳನ್ನು ಉಪಯೋಗಿಸುತ್ತಾರೆ, ಅವೆಲ್ಲ ಹೇಗೆ ಬಲ್ಬಜವಾದವು ಎಂಬುದನ್ನು ಸರ್ ವಿಲಿಯಂ ಜೇಮ್ಸರು ಚೆನ್ನಾಗಿ ಸಂಗ್ರಹಿಸುತ್ತಾರೆ.[39] ಭಾರತದಲ್ಲಿ ಮೀಮಾಂಸಕರು ಮತ್ತು ಎಲ್ಲ ವೇದಾಂತಿಗಳೂ[40] ಈಶ್ವರನನ್ನು ಸಾಧನೆಮಾಡಲು

---

39. The arguments that God's existence have stood for hundreds of years with the waves of unbelieving criticism breaking against them, never totally discrediting them in the ears of the faithful, but on the whole slowly and surely washing out the mortar from between their joints. If you have a God already whom you believe in, these arguments confirm you. If you are atheist, they fail to set you right. The proofs are various. The 'Cosmological' one, so called reasons from the contingence of the world to a First cause which must contain whatever perfects the world itself contains. The "Arguments from design" reasons from the fact that nature's laws are mathematical and her parts benevolently adapted to each other, that this cause is both intellectual and benevolent, The "moral argument" is that the moral law presupposes a law-giver,. The "argument ex Cohensu gentium" is that the belief in God is widespread as to be grounded in the rational nature of man, and should therefore carry authority with it.

The bare fact that all idealists since Kant have felt entitled either to scout or to neglect them shows that they are not solid enough to serve as religion's all-sufficient foundation. Causation is indeed too obscure a principle to bear the weight of the whole structure of theology. As for the argument from design, see how Darwinian ideas have revolutionized it. Conceived as we now conceived them, as so many fortunate escapes from almost limitless process of destruction, the benevolent adaptations which we find in Nature suggest a deity very different from the one who figured in the earlier versions of the arguments. The fact is that these arguments do but follow the conbined suggestions, of the fact and so our feeling. They prove nothing rigorously. They only corroborate our existent partialities. Varieties of Religious Experience.

40 ನೇ ಚಾತೀಂದ್ರಿಯಾನಾರ್ಥಾನ್ ಶ್ರುತಿಮಂತರೇಣ ಕಶ್ಚಿದುಪಲಭತ ಇತಿ ಶಕ್ಯಂ ಸಂಭಾವಯಿತುಂ ನಿಮಿತ್ತಾಭಾವತ್। ಶಕ್ಯಂ ಕಪಾಲಾದೀನಾಂ ಸಿದ್ಧಾನಾಮಪ್ರತಿಹತಜ್ಞಾನತ್ವಾದಿತಿ ಚೇನ್ನ ಸಿದ್ಧೇರಪಿ ಸಾಪೇಕ್ಷತ್ವಾತ್। ಧರ್ಮನುಷ್ಠಾನಾಪೇಕ್ಷಾ ಹಿ ಸಿದ್ಧಿಃ । ಸ ಚ ಧರ್ಮಃ ಚೋದನಾಲಕ್ಷಣ ಇತಿ । ——ಶಂಕರಾಭಾಷ್ಯಮ್

ಆಗಮಗಳೇ ಸಮರ್ಥವೆಂದೂ, ಅನುಮಾನ ಪ್ರಮಾಣದಿಂದ ಇದು ಸಾಧ್ಯವಿಲ್ಲವೆಂದೂ ಘಂಟಾಘೋಷವಾಗಿ ಹೇಳಿರುವರು. ಅನುಮಾನಪ್ರಮಾಣಕ್ಕೆ ಪ್ರತ್ಯಕ್ಷ ಅಥವಾ ಆಗಮದ ಬಲ ಬೇಕು. ದೃಷ್ಟ ವಿಷಯಗಳಲ್ಲಿ ಪ್ರತ್ಯಕ್ಷದ ಸಹಕಾರವಿರುವುದು. ಅದೃಷ್ಟವಿಷಯದಲ್ಲಿ ಅದಕ್ಕೆ ಆಗಮದ ಸಹಕಾರ ಬೇಕು. ಬರಿಯ ಅನುಮಾನ ಏನನ್ನೂ ನಿಶ್ಚಯಿಸಲಾರದು. ಪೂರ್ವೋತ್ತರ ವಿರೋಧಗಳಿದ್ದಲ್ಲಿ ಮಾತ್ರ ನಿಶ್ಚಿತವಾದ ಅರ್ಥವನ್ನು ನಿರ್ಣಯಮಾಡಲು ಅನುಮಾನವು ಶಕ್ತವಾಗಿರುವುದು. ಅದ್ದರಿಂದ ನೈಯಾಯಿಕರು ಈಶ್ವರನನ್ನು ಸಾಧಿಸಲು ಹೇಳಿದ ಯುಕ್ತಿಗಳೆಲ್ಲ ದೋಷದುಷ್ಟವಾದವು. ಅಪೌರುಷೇಯ ಆಗಮದಿಂದಲೇ ಈಶ್ವರನು ಸಿದ್ಧನಾಗುವನೆಂದು ಶ್ರೀ ಮಧ್ವಾಚಾರ್ಯರು ಹೇಳಿರುವರು.[41] ಅನುಮಾನ ಪ್ರಮಾಣದಿಂದ ಈಶ್ವರನನ್ನು ಸಾಧನೆಮಾಡಲು ಸಾಧ್ಯವಿಲ್ಲವೆಂದು ಶ್ರುತಿ ವಾಕ್ಯಗಳೇ ಸಾರಿಹೇಳುತ್ತವೆ.[42]

ಈಶ್ವರನು ಧರ್ಮಾದಿ ಅತೀಂದ್ರಿಯ ವಸ್ತುಗಳ ಕೋಟಿಗೆ ಸೇರಿದ ವಸ್ತು. ಧರ್ಮಾದಿಗಳು, ಈಶ್ವರ ಉಂಟೆಂದು ಒಪ್ಪಿಕೊಳ್ಳಲೇ ಬೇಕು. ಅಂದಮೇಲೆ ಅವುಗಳ ಜ್ಞಾನ ನಮಗೆ ಹೇಗೆ ಆಗಬೇಕು.? ಬರಿಯ ಯುಕ್ತಿ, ಊಹೆ ಅಥವಾ ಅನುಮಾನದಿಂದ

---

41 i. ನ ಚಾನುಮಾನಸ್ಯ ನಿಯತಪ್ರಾಮಣ್ಯಮ್ :–
ಶ್ರುತಿಸಾಹಾಯ್ಯರಹಿತಮನುಮಾನಂ ನ ಕುತ್ರಚಿತ್ ।
ನಿಶ್ಚಯಾತ್ಸಾಧಯೇದರ್ಥಂ ಪ್ರಮಾಣಾಂತರಮೇವ ಚ ॥
ಶ್ರುತಿಸ್ಮೃತಿಸಹಾಯಂ ಯತ್ಪ್ರಮಾಣಾಂತರಮುತ್ತಮಮ್ ।
ಪ್ರಮಾಣಪದವೀಂ ಗಚ್ಛೇ ನ್ನಾತ್ರ ಕಾರ್ಯಾ ವಿಚರಣಾ ॥
ಪೂರ್ವೋತ್ತರ ವಿರೋಧೇನ ಕೋತ್ರಾರ್ಥೋಽಭಿಮತೋ ಭವೇತ್ ॥
—ಬ್ರಹ್ಮಸೂತ್ರಭಾಷ್ಯಮ್

ii. ನಾವೇದವಿನ್ನತರ್ಕೇಣ ಮತಿರಿತ್ಯಾದಿ ವಾಕ್ಯತಃ ।
ತರ್ಕೋ ಜ್ಞಾಪಯಿತುಂ ಶಕ್ತೋ ನೇಶಿತಾರಂ ಕಥಂಚನ ॥
—ಅನುವ್ಯಾಖ್ಯಾನಮ್. ೧–೧–೩

iii. ಅನೇನೈವ ನ್ಯಾಯೇನ ಸರ್ವತ್ರ ಪ್ರತಿಪಕ್ಷಸಂಭವಾತ್ ಸತ್ಯಸಂಕಲ್ಪತ್ವಾಶರೀರತ್ವ ನಿತ್ಯಜ್ಞಾನೇಚ್ಛಾಪ್ರಯತ್ನತ್ವ ದುಃಖಾದಿರಾಹಿತ್ಯಾದಿಕಮಪಿ ನಾನುಮಾನೇನ ಸಾಧಯಿತುಂ ಶಕ್ಯಮ್ । —ನ್ಯಾಯಸುಧಾ.

42. ನೈಷಾ ತರ್ಕೇಣ ಮತಿರಾಪನೇಯಾ ಪ್ರೋಕ್ತಾನ್ಯೇವ ಸುಜ್ಞಾನಾಯ ಪ್ರೇಷ್ಠ —ಕಾಠಕ.
ನಾವೇದವಿನ್ಮನುತೇ ತಂ ಬೃಹಂತಂ ಸರ್ವಾನುಮಾತ್ಮಾನಂ ಸಾಂಪರಾಯೇ—ತೈತ್ತಿರೀಯ.
ನೇಂದ್ರಿಯಾಣಿ ನಾನುಮಾನಂ ವೇದಯಂತಿ ತಸ್ಮಾದಾಹುರ್ವೇದಾಃ
ಔಪನಿಷದಃ ಪುರುಷಃ —ಪಿಪ್ಪಲಾದ.

✣ ✣ ✣

ಈ ಅತೀಂದ್ರಿಯ ವಸ್ತುಗಳ ಜ್ಞಾನ ನಮಗೆ ಆಗಲಾರದು.[43] ಕಣ್ಣಿಂದ ರುಚಿಯನ್ನಾಗಲಿ,ವಾಸನೆಯನ್ನಾಗಲೀ ತಿಳಿಯುವುದು ಎಷ್ಟು ಅಶಕ್ಯವೋ ಅನುಮಾನದಿಂದ ಬ್ರಹ್ಮನನ್ನು ತಿಳಿಯುವುದೂ ಅಷ್ಟೇ ಅಶಕ್ಯವು.[44] ಅಪೌರುಷೇಯವಾದ ಆಗಮದಿಂದ ಮಾತ್ರ ಈಶ್ವರಜ್ಞಾನ ಸಾಧ್ಯವೆಂಬುದನ್ನು ತಿಳಿಸುವುದಕ್ಕಾಗಿಯೇ "ಶಾಸ್ತ್ರಯೋನಿತ್ವಾತ್" ಎಂಬ ಬ್ರಹ್ಮಸೂತ್ರವು ಪ್ರಸಕ್ತವಾಯಿತು.[45] ನೈಯಾಯಿಕರು ಸರ್ವಜ್ಞನಾದ ಈಶ್ವರನಿಂದ ರಚಿತವಾದ್ದರಿಂದ ವೇದಗಳು ಪ್ರಮಾಣಭೂತವಾದವು ಎಂದು ಹೇಳುವರು. ಆದರೆ ಅನುಮಾನದಿಂದ ಈಶ್ವರನ ಸಾಧನೆಯಾಗುವುದಿಲ್ಲವಾದ್ದರಿಂದ ಸರ್ವಜ್ಞ–ತ್ವಾದಿಗುಣವಿಶಿಷ್ಟನಾದ ಈಶ್ವರನನ್ನು ಸಾಧಿಸಲು ಪ್ರಮಾಣಭೂತವಾದ ಆಗಮವು ಅವಶ್ಯಕವು. ಇಂತಹ ಪ್ರಮಾಣಭೂತವಾದ ಆಗಮವನ್ನು ರಚಿಸಲು ಸರ್ವಜ್ಞನಾದ ಈಶ್ವರನು ಅವಶ್ಯಕವೆಂಬರೆ ಅನ್ಯೋನ್ಯಾಶ್ರಯ ದೋಷವು ಸಂಭವಿಸುವುದು.[46]

5. ವೇದಾಪೌರುಷೇಯತ್ವವು

ಆದ್ದರಿಂದ ಅತೀಂದ್ರಿಯ ವಸ್ತುವಿಷಯಕಜ್ಞಾನವು ಆಗಮಗಳಿಂದಲೇ ಶಕ್ಯವೆಂದಹಾಗಾಯಿತು. ಅಷ್ಟೇ ಅಲ್ಲ, ಬರಿಯ ಆಗಮಪ್ರಮಾಣದಿಂದ ಇದು ಸಾಧ್ಯವಾಗುವುದಿಲ್ಲ. ಈಸ್ವರಸಾಧನೆಗೆ ಅಪೌರುಷೇಯವಾದ ಆಗಮಪ್ರಮಾಣವು ಬೇಕು. ಆಗಮಪ್ರಮಾಣವೆಂದರೆ ತತ್ತ್ವಜ್ಞಾನಿಗಳಿಂದ ಉಕ್ತವಾದ ಶಬ್ದ ಅಥವಾ ಅಂತಹವರಿಂದ ರಚಿತವಾದ ಗ್ರಂಥಗಳು. ಆದರೆ ಈಶ್ವರನನ್ನು ಸಾಧನೆಮಾಡುವ

---

43. We may bring out into prominence through logical reasoning truths that were previously only implicit, but to arrive at absolute truth with regard to the invisible world through intellect alone, has long seen admitted to be an impossibility. The illusion of those who would believe that truth which was not already implied in the premises could ever be obtained by mere intellectual reasoning has long since been dispelled,

-Dr. A. J. Jones, Eucken, A Phylosphy of life.

44. ಚಕ್ಷುರಾದಿ ಯಥಾಶಕ್ತಂ ರಸಗಂಧಾದಿ ವಸ್ತುಷು ।
ಅನುಮಾಪಿ ತಥಾ ಶಕ್ತಾ ಧರ್ಮಬ್ರಹ್ಮಾದಿ ವಸ್ತುಷು ॥

–ತಾತ್ಪರ್ಯಚಂದ್ರಿಕಾ. ೧–೧–೩

45. ಶಾಸ್ತ್ರೈಕಸಮಧಿಗಮ್ಯತ್ವಾ ತ್ಕಾರಣಸ್ಯ । ನ ಹಿ ಧರ್ಮಾದಿ ನಿಶ್ಚಯೋ ಅನುಮಾನೇನೇತಿ ಸೂತ್ರಾರ್ಥಃ ।

–ತತ್ತ್ವಪ್ರಕಾಶಿಕಾ

46. ಸರ್ವೇಶ್ವರಸಿದ್ಧೌ ತತ್ಕೃತತ್ವೇನ ವೇದಪ್ರಾಮಾಣ್ಯಸಿದ್ಧಿಃ । ಪ್ರಾಮಾಣ್ಯಸಿದ್ಧೌ ಚ ತತಃ ಸರ್ವಜ್ಞಸಿದ್ಧಿರಿತ್ಯನ್ಯೋನ್ಯತ್ವಾತ್]

–ತತ್ವಪ್ರದೀಪಃ – ೧–೧–೧

– ಆಗಮವು ಎಂತಹ ತತ್ತ್ವಜ್ಞಾನಿಯಿಂದ ಉಪದಿಷ್ಟವಾಗಿದ್ದರೂ ಪ್ರಮಾಣವಾಗಲಾರದು. ಇದು ಅಪೌರುಷೇಯವಾಗಿರಬೇಕು. ಅಂದರೆ ಯಾವ ಪುರುಷನಿಂದಲೂ ನಿರ್ಮಿತವಾಗದೆ ಸ್ವತಂತ್ರವಾಗಿರಬೇಕು. ಇದೊಂದು ವಿಚಿತ್ರ ಸಂಗತಿ. ಜಗತ್ತಿನ ಇನ್ನಾವ ದೇಶದ ಇತಿಹಾಸದಲ್ಲೂ ಈ ಅಪೌರುಷೇಯ ಆಗಮದ ಕಲ್ಪನೆ ಇಲ್ಲ. ಭಾರತದಲ್ಲೂ ಮೀಮಾಂಸಕರು ಮತ್ತು ವೇದಾಂತಿಗಳನ್ನು ಬಿಟ್ಟರೆ ವೇದಗಳ ಅಪೌರುಷೇಯತ್ವವನ್ನು ಸಾಂಖ್ಯ, ನೈಯಾಯಿಕ ಮೊದಲಾದ ಇತರ ದಾರ್ಶನಿಕರು ಒಪ್ಪುವುದಿಲ್ಲ.

ದರ್ಶನಗಳ ಇತಿಹಾಸದಿಂದ ಆಗಮಪ್ರಮಾಣ ಒಪ್ಪುವುದು ಅವಶ್ಯಕ. ಅದಿಲ್ಲದ ಬರಿಯ ಅನುಮಾನಪ್ರಮಾಣಕ್ಕೆ ನೆಲೆ ಇಲ್ಲ ಎಂಬ ಅಂಶ ಸ್ಪಷ್ಟ ಪಡುವುದು. ಬೌದ್ಧಾದಿ ಆಗಮಾಪ್ರಾಮಾಣ್ಯವಾದಿಗಳೂ ಸಹ ತಮ್ಮ ಪೂರ್ವಾಚಾರ್ಯರ ವಾಕ್ಯಗಳನ್ನು ಪ್ರಮಾಣವಾಗಿಟ್ಟುಕೊಂಡೇ ಮುಂದುವರೆಯುತ್ತಾರೆ. ಪಾಶ್ಚಾತ್ಯ ದರ್ಶನದಲ್ಲೂ ಹಿಂದಿನವರ ತತ್ತ್ವನಿಶ್ಚಯಕ್ಕೆ ಅನುಕೂಲವಾಗಿಯೋ ಪ್ರತಿಕೂಲವಾಗಿಯೋ ಯುಕ್ತಿವಿನ್ಯಾಸ ಮಾಡಿ ನೂತನ ನಿರ್ಣಯಗಳನ್ನು ಮಾಡುವುದು ಕಂಡಿದೆ. ಇದರಿಂದಲೂ ಅಪ್ರತ್ಯಕ್ಷವಾಗಿಯಾದರೂ ಆಗಮವಿಲ್ಲದೆ ಶಾಸ್ತ್ರೀಯ ವ್ಯವಹಾರ ಅವಶ್ಯಕವೆಂದು ಹೇಳಿದಂತಾಗುವುದು. ಜಗತ್ತಿನ ಬೇರೆ ಬೇರೆ ಮತಗಳಲ್ಲಿ ಆಗಮವು ಎಂತಹ ಪ್ರಧಾನದ ಸ್ಥಾನದಲ್ಲಿದೆಯೆಂಬುದು ಸರ್ವವಿದಿತವಾಗಿದೆ.

ಆದರೆ ಅಪೌರುಷೇಯ ಆಗಮದ ವಿಷಯ ಸ್ವಲ್ಪ ವಿಚಿತ್ರವಾಗಿಯೇ ಇದೆ. ಉಳಿದೆಲ್ಲ ಧರ್ಮಗಳಲ್ಲಿಲ್ಲದೆ ಭಾರತಧರ್ಮದಲ್ಲಿ ಮಾತ್ರ ಇದರ ಕಲ್ಪನೆ ಇರುವುದು, ಇದರ ಮೊದಲ ವೈಶಿಷ್ಟ್ಯ. ಇದರ ಸಾಧ್ಯಾಸಾಧ್ಯತೆಗಳನ್ನು ವಿಚಾರಮಾಡಿದರೆ ಎರಡು ಮುಖ್ಯವಾದ ಪ್ರಶ್ನೆಗಳು ಹೊರಡುವುದು. ವೇದಗಳೆಂಬ ಗ್ರಂಥ ಯಾವುದೋ ಕಾಲಕ್ಕೆ ಹೊಂದಿಕೊಂಡುದು. ಇದು ಎಲ್ಲರಿಗೂ, ಎಲ್ಲ ಕಾಲಕ್ಕೂ ಪ್ರಾಮಾಣಿಕವಾದ ಅಪೌರುಷೇಯ ಗ್ರಂಥವಾಗಲು ಶಕ್ಯವಿಲ್ಲ. ಆದ್ದರಿಂದ ವೇದಾರ್ಥಗಳ ಅನಾದಿನಿತ್ಯತ್ವ ಶಕ್ಯವೇ ಎಂಬುದೇ ಮೊದಲನೇ ಪ್ರಶ್ನೆ. "ಅಗ್ನಿಮೀಳೆ ಪುರೋಹಿತಂ'' ಇತ್ಯಾದ್ಯಾನುಪೂರ್ವೀ–ಪುರಸ್ಸರವಾಕ್ಯಗಳು ಮಾತ್ರ ಅಪೌರುಷೇಯವೆಂದರೆ; ಇತರ ವಾಕ್ಯಗಳಿಗೂ, ಇವುಗಳಿಗೂ ಇರುವ ವೈಲಕ್ಷಣ್ಯವೇನು? ಎಂದರೆ ಅರ್ಥತಃ, ಶಬ್ದತಃ ವಿಶಿಷ್ಟ ಪರಿಮಿತಿಗೊಳಗಾದ ವೇದಗಳು ಹೇಗೆ ಅಪೌರುಷೇಯವೆನಿಸಿಯಾವು?—ಈ ವಿಷಯವನ್ನು ಉಳಿದ ಆಚಾರ್ಯರುಗಳಿಗಿಂತ ಶ್ರೀಮಧ್ವಾಚಾರ್ಯರು ಯುಕ್ತಿಯುಕ್ತವಾಗಿ ವಿಚಾರಮಾಡಿರುವರು. ವಿಷ್ಣುತತ್ತ್ವ ವಿನಿರ್ಣಯ. ಸುಧಾ, ತರ್ಕತಾಂಡವ, ಯುಕ್ತಿಮಲ್ಲಿಕಾ ಮೊದಲಾದ ಗ್ರಂಥಗಳಲ್ಲಿ ಇದರ ಕೂಲಂಕಷವಾದ ಚರ್ಚೆಯಿದೆ. ಮುಖ್ಯವಾಗಿ ಈ ವಿಚಾರವನ್ನು ಹೀಗೆ ಸಂಗ್ರಹಿಸಬಹುದು.

ವೇದಗಳ ಅಪೌರುಷೇಯತ್ವವನ್ನು ವಿಚಾರಮಾಡುವಾಗ. ಇಂತಹ ಆಗಮದ ಅವಶ್ಯಕತೆ, ಸಂಭಾವನಾ ಮತ್ತು ಸಿದ್ಧಿ – ಈ ಮೂರು ಅಂಶಗಳನ್ನು ಗಮನಿಸಬೇಕು.

ಧರ್ಮ, ನೀತಿ ಇವು ಎಲ್ಲ ದೇಶಗಳಲ್ಲೂ ಸಂಸ್ಕೃತಿಯ ಅತಿ ಮುಖ್ಯವಾದ ಅಂಶವೆಂಬುದು ಸ್ಪಷ್ಟವಾದುದು. ಈ ವಿಜ್ಞಾನಯುಗದಲ್ಲೂ ಮಾನವ ಸಂಸ್ಕೃತಿಯ ಸಮಸ್ಯೆಯ ನಿಜವಾದ ಪರಿಹಾರ ಧಾರ್ಮಿಕಮಾರ್ಗದಿಂದ ಮಾತ್ರ ಸಾಧ್ಯ ಎಂಬುದನ್ನು ವಿಜ್ಞಾನಿಗಳು, ಪಂಡಿತರು ಒಪ್ಪಿಕೊಂಡಿರುತ್ತಾರೆ. ಅಷ್ಟೇ ಅಲ್ಲ. ಅತ್ಯಾಧುನಿಕ ವಿಜ್ಞಾನದ ಪರಿಶೋಧನೆಗಳು ಜಡಪದಾರ್ಥದ ಪರಿಮಿತಿಯನ್ನು ಕಂಡುಕೊಂಡು ಈ ಜಗತ್ತಿನ ಮೂಲದಲ್ಲಿ ಚೇತನ ಪದಾರ್ಥದ ವ್ಯಾಪಾರವಿರಬೇಕೆಂಬ ನಿಶ್ಚಯಕ್ಕೆ ಬರಹತ್ತಿವೆ. ಈ ಚೇತನಶಕ್ತಿಯೊಡನೆ ವಿಜ್ಞಾನದಿಂದ ವ್ಯವಹರಿಸಲು ಶಕ್ಯವಿಲ್ಲ. ಅದಕ್ಕೆ ಆಧ್ಯಾತ್ಮ ಶಾಸ್ತ್ರವೇ ಬೇಕು. ಈ ಬಗೆಯಿಂದ ಸರ್ವದೇಶಗಳಲ್ಲೂ, ಸರ್ವಕಾಲಗಳಲ್ಲೂ, "ಧರ್ಮಮಾರ್ಗ" ವೊಂದೇ ನಿಜವಾದ ಹಾದಿ ತೋರಿಸುವುದೆಂದಹಾಗಾಯಿತು. ಸಂಗ್ರಹವಾಗಿ ಹೇಳುವುದಾದರೆ 'ಧರ್ಮ'ವೇ ಮಾನವಸಂಸ್ಕೃತಿಯ ಜೀವಜೀವಾಳ. ಆದ್ದರಿಂದ ಮಾನವಜನಾಂಗ ಇರುವವರೆಗೂ ಧರ್ಮಗಳೂ ಇರಬೇಕು. ಹಾಗೆಯೇ ಮಾನವಜನಾಂಗದ ಆರಂಭದಿಂದಲೂ ಇದು ಇರಬೇಕು. ವಿಕಾಸವಾದದ ರೀತ್ಯಾ ಮಾನವ ಆರಂಭದೆಸೆಯಲ್ಲಿ ಪಶುತುಲ್ಯನಾಗಿದ್ದ. ಧರ್ಮವೂ ಭಯದಿಂದ ರೂಪಗೊಂಡಿತೆಂಬುದು ಸತ್ಯಕ್ಕೆ ದೂರವಾದುದು. ಜಗತ್ತಿನ ಇತಿಹಾಸವನ್ನು ಪರ್ಯಾಲೋಚಿಸಿದಲ್ಲಿ ಯಾವುದೇ ವ್ಯವಸ್ಥೆಯಾಗಲಿ ಮೊದಲು ರೂಪಗೊಂಡು, ಬೆಳೆದು, ಕೆಲಕಾಲ ಹರಡಿ ಮತ್ತೆ ನಾಶವಾಗುವುದು. ಧರ್ಮವೂ ಹೀಗೆಯೇ, ಆಗಾಗ್ಗೆ ಗ್ಲಾನಿಹೊಂದುವುದೆಂಬುದು 'ಯದಾ ಯದಾ ಹಿ ಧರ್ಮಸ್ಯ' ಎಂಬ ಗೀತಾವಾಕ್ಯದಿಂದ ಸ್ಪಷ್ಟವಾಗುವುದು. ಆದ್ದರಿಂದ ಧರ್ಮ ಆರಂಭದಿಂದಲೇ ಪೂರ್ಣರೂಪುಗೊಂಡಿದ್ದು ಆಮೇಲೆ ಅವನತಿಯ ಹಾದಿ ಹಿಡಿಯಿತೆಂದು ಹೇಳಬಹುದು.

ಮಾನವಸಂಸ್ಕೃತಿಯ ಬೆನ್ನು ಮೂಳೆಯಂತಿರುವ ಧರ್ಮ ಕೆಲವು 'ಸರ್ವಸಮ–ಯಾಭಿಮತ'ಮೂಲತತ್ತ್ವಗಳು ಅತ್ಯಂತ ಆರಂಭ ದೆಸೆಯಿಂದಲೂ ಇರಲೇಬೇಕು. ಜಗತ್ತಿನ ರಚನೆಗೆ ಪಂಚಭೂತಗಳು ಹೇಗೆ ಅವಶ್ಯಕವೋ, ಮಾನವಸಂಸ್ಕೃತಿಗೆ ಧರ್ಮದ ಮೂಲತತ್ತ್ವಗಳು ಅವಶ್ಯಕ. ಜಗತ್ತಿನ ಸೃಷ್ಟಿಯಲ್ಲಿ ಚೇತನಧರ್ಮವಾದ ವಿಶ್ವಾಸ, ಆಸೆ–ಆಕಾಂಕ್ಷೆ, ಸುಖ–ದುಃಖ, ಬುದ್ಧಿ, ಇಚ್ಛಾ–ಪ್ರಯತ್ನ ಇವುಗಳ ಪೂರೈಕೆಗೆ ಒಂದು ಆಶ್ರಯಸ್ಥಾನ ಬೇಕೇಬೇಕು. ಅದೇಧರ್ಮ. ಇದು ಅನಾದಿಕಾಲದಿಂದಲೂ ಬಂದುದು. ನಮ್ಮ ತಿಳುವಳಿಕೆ ಇಲ್ಲದಂತೆ ಕೆಲವು ನಿಯಮಗಳನ್ನು ನಾವು ಅನುಸರಿಸುತ್ತಿದ್ದೇವೆ. ವಿಚಾರಮಾಡುವಮೊದಲೇ ನಿರ್ಣಯವನ್ನು ಒಪ್ಪಿಕೊಳ್ಳುವುದು ಹೇಗೆ ವಿಚಿತ್ರವೋ ಇದೂ ಅದರಂತೆ ವಿಚಿತ್ರವಾದರೂ ಸತ್ಯವಾದುದು. ಅಷ್ಟೇ ಅಲ್ಲ. ಇದುಅನಿವಾರ್ಯವೂ

ಹೌದು.[47] ಈ ನಿಯಮಗಳು ಧರ್ಮಮೂಲವಾದದ್ದು. ಆದ್ದರಿಂದ ಧರ್ಮ ಅನಾದಿಕಾಲದಿಂದಲೂ ಬಂದುದೆಂದಹಾಗಾಯಿತು. ಇಂತಹ ಅನಾದಿ ಧರ್ಮಗಳನ್ನು ತಿಳಿಸುವ ಆಗಮವೂ ಅನಾದಿಯಾಗಿರಬೇಕು. ಅಂತೆಯೇ ಅಪೌರುಷೇಯ. ಆದ್ದರಿಂದಲೇ ಅನಾದಿಯಾದ ಆಗಮದ ಅವಶ್ಯಕತೆಯು ನೈಜವಾದುದು.

ಇಂತಹ ಅಪೌರುಷೇಯ ಆಗಮವು ಅವಶ್ಯಕವಾದರೂ ಇದು ಸಂಭವವೇ ಎಂಬುದು ಎರಡನೆಯ ಪ್ರಶ್ನೆ. ಧಾರ್ಮಿಕ ಭಾವನೆಗಳು ಅನಾದಿಕಾಲದಿಂದಲೂ ಬಂದಿರುವುದರಿಂದ ಅವುಗಳಿಗೆ ರೂಪು ಕೊಡುವ 'ಸಂಪ್ರದಾಯ' ಅಥವ 'ಆಗಮ' ಬೇಕು. ಆಗಮವಿಲ್ಲದೆ ಬರಿಯ ಧರ್ಮಗಳು ಗಾಳಿಯಲ್ಲಿ ತೂರಾಡಿ ಬದುಕಲಾರವು. ಧಾರ್ಮಿಕ ಭಾವನೆಗಳ ದೇಹವಿದ್ದಂತೆ ಆಗಮಗಳು. ಈ ಆಗಮ ವಾಕ್ಯಸಮೂಹ. ವಾಕ್ಯವೆಂದರೆ ಪುರುಷ ನಿರ್ಮಿತವಾಗಿರಬೇಕು. ಇದು (ಆಗಮ) ಅನಾದಿಕಾಲದಿಂದಿರುವುದು ಸಂಭವವೇ ಎಂಬುದು ಪ್ರಶ್ನೆ. ಇದನ್ನು ಮೂಲತಃ ವಿಚಾರಮಾಡಿದರೆ ಅಸಂಭವವಾಗಿ ತೋರಲಾರದು. ವರ್ಣಗಳು ನಿತ್ಯವಾದ ದ್ರವ್ಯಗಳು, ಪುರುಷರಿಂದ ವ್ಯಕ್ತವಾಗುವವೆಂಬುದನ್ನು ವೇದಾಂತಿಗಳು ದೀರ್ಘತರವಾಗಿ ವಿಚಾರಮಾಡಿದ್ದಾರೆ. ಈಗಿನ ಭಾಷಾಶಾಸ್ತ್ರಜ್ಞರು ಭಾಷೆಯ ಹುಟ್ಟನ್ನು ವಿಚಾರಮಾಡಹೋಗಿ ಯಶಸ್ವಿಯಾದ ಸಿದ್ಧಾಂತ ಮಾಡಲಾರದೆ ಹೋಗಿದ್ದಾರೆ. ಶಬ್ದಕ್ಕೂ ಅರ್ಥಕ್ಕೂ ಇರುವ ಅವಿಯೋಗಿ ಮತ್ತು ಅಪರಿಹಾರ್ಯವಾದ ಸಂಬಂಧವೂ ವಿಚಿತ್ರವಾಗಿದೆ. 'ವಾಗರ್ಥಾವಿವ ಸಂಪೃಕ್ತೌ' "ವಾಚಾಮರ್ಥೋನುಧಾವತಿ" ಎಂಬ ನಾಣ್ಣುಡಿಗಳಲ್ಲಿ ಈ ಶಬ್ದಾರ್ಥಗಳ ಅನಾದಿ ಸಂಬಂಧದ ಸೂಚನೆ ಇದೆ. ಅರ್ಥಗಳು, ಭಾವನೆಗಳು ಎಂದಿನಿಂದ ಬಂದವೋ ಶಬ್ದಗಳೂ ಅಂದಿನಿಂದಲೇ ಬಂದವು. ಭಾವನೆಗಳಿಗೆ ಹುಟ್ಟು ಹೇಳಿದರೆ ಭಾಷೆಗೂ ಹುಟ್ಟು ಹೇಳಬಹುದು. ನ್ಯೂಟನ್ ಹುಟ್ಟುವ ಮೊದಲು 'ಗುರುತ್ವಾಕರ್ಷಣ' (Gravitation Theory) ತತ್ತ್ವವೇ ಇರಲಿಲ್ಲವೆಂದು ಯಾವ ವಿಜ್ಞಾನಿಯೂ ಹೇಳಲಾರನು. ಪಂಚಾಂಗವಿಲ್ಲದಿದ್ದಲ್ಲಿ ನಕ್ಷತ್ರವಿರಲಾರದೆಂಬುದು ನಮ್ಮಲ್ಲಿ ಅಪಹಾಸ್ಯದ ಮಾತು. ಹಾಗೆ ಭಾಷೆ (ಆಗಮ) ಮತ್ತು ಭಾವನೆ ಅನಾದಿಕಾಲದಿಂದಲೂ ಯಾರನ್ನೂ ಅಪೇಕ್ಷಿಸದೇ ರೂಢಮೂಲವಾಗಿದ್ದವು. ಆಗಮವು ಋಷಿಗಳಿಂದ, ಕವಿ (ಜ್ಞಾನಿ)ಗಳಿಂದ, ಯೋಗಿಗಳಿಂದ, ಅಭಿವ್ಯಕ್ತವಾಯಿತು.

---

47. Yet human beings must live: They must also live in societies. Now living from its very nature involves the *adoption of conclusions before they have been established*. It also involves the need to act as if a certain course of conduct were right before one knows that it is right. In a word to live is to take risks.

--Counter attack from the East. G. E. M. JOAD.

✣ ✣ ✣

ಅಂತೆಯೇ ಅವರು ಋಷಿಗಳು, ಅಂದರೆ ಮಂತ್ರಗಳನ್ನು ನೋಡಿದವರು [48] ಆದ್ದರಿಂದ ಆಗಮಗಳ ಅನಾದಿತ್ವವು ಸಂಭಾವಿತವು.

ಇಂತಹ ಅಪೌರುಷೇಯ ಆಗಮವು ಸಂಭಾವಿತವೆಂದ ಮೇಲೆ ಇದು ಇದೆಯೆಂಬುದೂ ಸ್ವತಃ ಸಿದ್ಧವಾಗುವುದು. ವೇದ ಒಂದೇ ಅಪೌರುಷೇಯ ಆಗಮವೆಂದು ಪ್ರಸಿದ್ಧವಾಗುವುದು. 'ವಾಚಾವಿರೂಪ ನಿತ್ಯಯಾ', 'ಶ್ರುತಿರ್ವಾ ನಿತ್ಯಾ' ಇತ್ಯಾದಿ ವಾಕ್ಯಗಳಲ್ಲಿ ತಾನು ಅಪೌರುಷೇಯುವೆಂದು ವೇದವೇ ಹೇಳಿಕೊಂಡಿದೆ. ಇತರ ಧರ್ಮ ಗ್ರಂಥಗಳಲ್ಲಿಲ್ಲದ ಕೆಲವು ಗುಣಗಳು ವೇದಗಳ ಅಪೌರುಷೇಯತ್ವಕ್ಕೆ ಸಾಧಕವಾಗಿವೆ. ಇದುವರೆವಿಗೂ ಅನಾದಿಕಾಲದಿಂದಲೂ, ಒಂದು ಅಕ್ಷರ, ಒಂದು ಸ್ವರವನ್ನೂ ವ್ಯತ್ಯಾಸ ಮಾಡದೆ ಪರಂಪರೆಯಿಂದ ಒಂದೇರೀತಿಯಾಗಿ ರಕ್ಷಿಸಿಕೊಂಡು ಬಂದಿರುವ ಗ್ರಂಥ ವೇದ ಒಂದೇ. ವೇದ ಪ್ರಚಾರದಲ್ಲಿ ಬಂದಾಗಿನಿಂದಲೂ ಅಪೌರುಷೇಯವೆಂಬ ಪ್ರಸಿದ್ಧಿ ಹೊಂದಿದೆ. ಅಧುನಿಕ ವಿಮರ್ಶಕರು ಅತ್ಯಂತ ಗಂಭೀರವಾಗಿ ವಿಚಾರಮಾಡಿದರೂ ವೇದದಕಾಲವನ್ನು ನಿರ್ಣಯಮಾಡಲು ಶಕ್ತರಾಗಿಲ್ಲ. ವೇದಗಳನ್ನು ಕಾಲದ ಪರಿಮಿತಿಗಳಲ್ಲಿ ಅಡಗಿಸಲು ಸಾಧ್ಯವಾದ ಐತಿಹಾಸಿಕ ಅಂಶಗಳು ವೇದದಲ್ಲಿ ಎಲ್ಲೂ ಅವರಿಗೆ ದೊರೆತಿಲ್ಲ.[49] "ವೇದ,

---

48 ಸಾಕ್ಷಾತ್ಕೃತಧರ್ಮಾಣಃ ಋಷಯಃ ಸಂಭಭೂವುಃ ತೇಽ ಸಾಕ್ಷಾತ್ಕೃತಧರ್ಮ-ಭ್ಯೋಽವರೇಭ್ಯೋ ಮಂತ್ರಾನ್ ಸಂಪ್ರಾದುಃ । ಋಷಯೋ ಮಂತ್ರದ್ರಷ್ಟಾರಃ
— (ನತು ಕರ್ತಾರಃ — ದುರ್ಗಾಚಾರ್ಯಃ) —ನಿರುಕ್ತಮ್

49. i) The date assigned to the poetry of the Veda is and will always remain hypothetical. --Max Muller: Physical Religion P.22

ii) Personally I should prefer to mention no figures at all. We simply do not know anything more than what I said. This may be very disappointing to those of you who expected a definite answer to the question regarding the age of the oldest monument of Indian literature. But it is a greater service to science to confess of ignorance that to deceive ourselves and others by producing dates which are no dates.
--Winternitz: Some Problems of Indian Litr

iii) The grave differences which separate scholars who assign later dates from those thinkers who favour far earlier dates make it quite clear that positive dates are as yet lacking for determining the chronology of the Vedic period.
-- Griwold; Religion of the Rigveda P. 71

iv) It is however certain that the Rigveda offers no assistance in determining the mode in which the Vedic Indians entered India.
-- Rapson: Cambridge History of India P. 70

ಶ್ರುತಿ, ಅಮ್ನಾಯ'' ಮೊದಲಾದ್[50] ಹೆಸರೇ ವೇದಗಳು ಅಕರ್ತೃಕ, ನಿತ್ಯ ಅಂದರೆ ಅಪೌರುಷೇಯ ಎಂದು ಸೂಚಿಸುವುದು.[51] ಹೀಗೆ ಪ್ರಾಚೀನ, ಆಧುನಿಕ ಪಂಡಿತರ ಅಭಿಪ್ರಾಯಗಳಿಂದಲೂ, ಸಂಪ್ರದಾಯದಿಂದಲೂ, ವೇದಗಳು ಅಪೌರುಷೇಯ, ಅನಾದಿ ಎಂಬುದು ಸುವ್ಯಕ್ತವಾಗುವುದು. ಆದರೆ ಅನಾದಿ ಪರಂಪರಾಗತ ಧಾರ್ಮಿಕಭಾವನೆ ಮತ್ತು ಭಾಷೆಯೊಂದು ಅವಶ್ಯಕ; ವೇದಗಳು ಅಂತಹ ಗ್ರಂಥಗಳು ಎಂದ ಮಾತ್ರಕ್ಕೆ ಎಲ್ಲ ಪ್ರಶ್ನೆಗಳೂ ಬಗೆಹರಿದಂತಾಗುವುದಿಲ್ಲ. ನಾನಾ ದೇಶಗಳಲ್ಲಿ ನಾನಾ ಮುಖವಾಗಿ ಬೆಳೆದು ಬಂದ ಮಾನವಸಂಸ್ಕೃತಿಗೆ ಧರ್ಮದ ಅವಶ್ಯಕತೆ ಇತಿಹಾಸ ಮತ್ತು ಇತರ ಶಾಸ್ತ್ರಗಳ ಬಲದಿಂದ ಮುಖ್ಯವೆಂದು ಕಂಡುಬಂದಮೇಲೆ ಅಂತಹ ಅನಾದಿ ಧಾರ್ಮಿಕ ಭಾವನೆಗಳ ಕಲ್ಪನೆ ಏನಿರಬಹುದು? ಅದನ್ನು ಹೊರಸೂಸುವ ಭಾಷೆ ಹೇಗಿರಬಹುದು? ವೇದಗಳ ಭಾಷೆ ಮತ್ತು ಅರ್ಥ ಇದಕ್ಕೆ ಹೊಂದುವುದೇ? ಅಂದರೆ ವೇದಗಳಲ್ಲಿ ಪ್ರತಿಪಾದ್ಯವಾದ ವಿಷಯ ಮತ್ತು ವೇದಗಳ ಭಾಷೆ ಸರ್ವಧರ್ಮಮೂಲವಾಗಲು ಶಕ್ಯವಾಗಿದೆಯೇ? ಎಂಬುದು ಕೊನೆಯ ಪ್ರಶ್ನೆ. ವೇದಗಳಭಾಷೆಯ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಇದು ಈಗ ಪ್ರಪಂಚದಲ್ಲಿ ವಿದ್ಯಮಾನವಾದ ಭಾಷೆಗಳೆಲ್ಲಕ್ಕೂ ಹಿರಿದಾದುದು. ಭಾಷಾ ಶಾಸ್ತ್ರಜ್ಞರಲ್ಲಿ ಈಚೆಗೆ ಕೆಲವರು ಇದು ಆರ್ಯನ್ ಭಾಷೆಗಳು ಮಾತ್ರವಲ್ಲದೆ, ಸೆಮೆಟಿಕ್ ಮೊದಲಾದ ಇತರ ಭಾಷೆಗಳಿಗೂ ಮಾತೃಪ್ರಾಯವಾದುದೆಂದು ಅಭಿಪ್ರಾಯಪಡುತ್ತಿದ್ದಾರೆ. ಆದ್ದರಿಂದ ವೈದಿಕಭಾಷೆಯು ಎಲ್ಲ ಭಾಷೆಗೂ ಮೊದಲಿನದು.

---

v) The Samhita is absolutely lacking in reference to any historical event which we can date. It had indeed been sought time after time to demonstrate the contrary, but no such attempt has yet approached plausibility. -- Keith: Religion and Philosophy of the Veda P.3.

vi) From the entire Vedic period we have not one single piece of antiquarian or archeological material, not one bit of real property, not a building, not a monument, not a coin, jewel or utensil.

-- Bloomfield: Religion of the Veda P20

50. ವೇದಾಸ್ತೇ ನಿತ್ಯವಿನ್ನತ್ವಾ ಚ್ಛ್ರುತಯಶ್ಚಾಖಿಲೈಃ ಶ್ರುತೇಃ ।
ಆಮ್ನಾಯೋಽನನ್ಯಥಾಪಾಠಾದೀಶಬುದ್ಧಿಸ್ಥಿತಾ ಸ್ಸದಾ ॥

---ವಿಷ್ಣುತತ್ತ್ವವಿನಿರ್ಣಯಃ

51. But what is called 'scripture' in other religions is termed 'sruti' or 'hearing' in Brahminism, because the sacred texts were not written and read but only recited and heard. This also is of chronological significance. It is clear that written literature can develop in a shorter time than one that is only handed down by word of mouth. When each single text requires generations of teachers and disciples in order to be preserved at all.

-- Winternitz : Some Problems of Indian Litr.

ವೇದಗಳಲ್ಲಿ ನಿರೂಪಿತವಾದ ಯಜ್ಞವೇ ಮೊದಲಾದವೂ ಸನಾತನವಾದವೇ. ಈ ವೈದೀಕಭಾವನೆಗಳು ಎಲ್ಲಧಾರ್ಮಿಕ ಭಾವನೆಗಳಿಗಿಂತಲೂ ಪ್ರಾಚೀನ; ಈ ವೈದೀಕಭಾವನೆಗಳೇ ಬಳೆದು ಬಲಿತು ಬದಲಾವಣೆಹೊಂದಿ ಇಂದು ವಿವಿಧ ಧಾರ್ಮಿಕ ಮತ್ತು ನೈತಿಕ ಭಾವನೆಗಳಾಗಿ ವರ್ತಿತವಾಗಿವೆ ಎಂದು ವಿಮರ್ಶಕ ಪಂಡಿತರೇ ಅಭಿಪ್ರಾಯಪಡುವರು. ವೇದಗಳಲ್ಲಿ ದೇಶಕಾಲ ಪರಿಮಿತವಾದ ವ್ಯಕ್ತಿಸೂಚಕವಾದ 'ಕಾಠಕ – ಕಲಾಪಕ' ಮೊದಲಾದವು ಪ್ರವಾಹತಃ ನಿತ್ಯವಾದ್ದರಿಂದ ವೇದಗಳ ಸತ್ಯತ್ವಕ್ಕೆ ಇವುಗಳಿಂದ ಹಾನಿ ಇಲ್ಲ ಎಂಬುದನ್ನು ಶ್ರೀಮನ್ಮಧ್ವಾಚಾರ್ಯರು ಹೃದಯಂಗಮವಾಗಿ ತೋರಿಸಿರುವರು. ವೇದಗಳ ಅರ್ಥವು ಅತ್ಯಂತ ವ್ಯಾಪಕವೂ ಮತ್ತು ಧರ್ಮಕ್ಕೆ ಮೂಲಭೂತವಾದುದೆಂಬುದನ್ನು ಸಮರ್ಥಿಸುವುದಕ್ಕಾಗಿಯೇ ಬ್ರಹ್ಮಸೂತ್ರಗಳು ಪ್ರವೃತ್ತವಾದದ್ದು. ಸಮಗ್ರ ವೈದಿಕ ವಾಙ್ಮಯದಲ್ಲಿ ಎಲ್ಲ ಮತಗಳ ಮುಖ್ಯ ಧ್ಯೇಯನಾದ 'ಬ್ರಹ್ಮ'ನ ಜಿಜ್ಞಾಸೆಯೇ ನಡೆದಿದೆಯೆಂದು ಬ್ರಹ್ಮಸೂತ್ರಗಳು ಸಾರಿದವು.

ಆದ್ದರಿಂದ ಮಾನವಸಂಸ್ಕೃತಿಯ ಮುಖ್ಯ ಅಂಗವಾದ ಧರ್ಮಾದಿಗಳು ಸತ್ಯ ಭೂತವಾದವು ಮತ್ತು ಅಗತ್ಯವಾದವು. ಇವು ಅತೀಂದ್ರಿಯವಾದ್ದರಿಂದ ಯುಕ್ತಿಗೆ ನಿಲುಕತಕ್ಕದ್ದಲ್ಲ. ಇವುಗಳನ್ನು ಸಾಧಿಸಲು ಇವುಗಳ ಜ್ಞಾನ ಪಡೆಯಲು ಆಗಮಗಳು ಬೇಕು. ಈಶ್ವರನೇ ಅತೀಂದ್ರಿಯವಾದ ಧರ್ಮಾದಿಗಳಲ್ಲಿ ಮುಖ್ಯಜ್ಞೇಯನು. ಈಶ್ವರ ಜ್ಞಾನವು ಅಪೌರುಷೇಯ ಆಗಮಗಳಿಂದ ಮಾತ್ರ ಸಾಧ್ಯ. ವೇದಗಳೇ ಇಂತಹ ಅಪೌರುಷೇಯ ಆಗಮವು. ವೇದಗಳಿಂದಲೇ ಈಶ್ವರನ ನಿಜವಾದ ಜ್ಞಾನವಾಗುವುದು ಎಂಬ ಈ ಅಂಶಗಳು ಸ್ಪಷ್ಟಪಡುವುದು.

ಇಂತಹ ವೈದಿಕ ಧರ್ಮಗಳ ಮುಖ್ಯ ಪ್ರಮೇಯಗಳ ಜ್ಞಾನವೂ ಅವಶ್ಯಕವು. ಏಕೆಂದರೆ ಸಮಗ್ರ ಭಾರತ ಸಂಸ್ಕೃತಿಯು ವೈದಿಕ ಪ್ರಮೇಯಗಳ ಮೇಲೆ ನಿಂತಿರುವುದು.

✣ ✣ ✣

VII. ವೈದಿಕಧರ್ಮದ ಮುಖ್ಯ ಪ್ರಮೇಯಗಳು.

1. ಈಶ್ವರ

ಜಗತ್ತಿನ ಎಲ್ಲ ಧರ್ಮಗಳಿಗೂ ಒಂದಿಲ್ಲೊಂದು ರೀತಿಯಿಂದ ಮಾತೃಸ್ಥಾನವಾದ ಅಪೌರುಷೇಯ ವೇದದಿಂದಲೇ ಈಶ್ವರನನ್ನು ತಿಳಿಯಬೇಕು. ವೇದಗಳಿಂದ ಹೊರಸೂಸುವ ಈಶ್ವರ ಕಲ್ಪನೆಯು ಉದಾತ್ತವಾದುದು. "ಸದಾಗಮೈಕವಿಜ್ಞೇಯಂ ಸಮತೀತಕ್ಷ-ರಾಕ್ಷರಮ್। ನಾರಾಯಣಂ ಸದಾ ವಂದೇ ನಿರ್ದೋಷಾಶೇಷಸದ್ಗುಣಮ್ ॥" ಎಂಬ ಶ್ಲೋಕದಲ್ಲಿ ಶ್ರೀಮಧ್ವಾಚಾರ್ಯರು ದೇವರಕಲ್ಪನೆಯ ಮುಖ್ಯಸೂತ್ರವನ್ನೇ ಹೊರಗೆಡಹಿದ್ದಾರೆ. ವೇದಗಳಲ್ಲಿ ಬೇರೆ ಬೇರೆ ದೇವತೆಗಳನ್ನು ಸ್ತೋತ್ರಮಾಡಿದ್ದಾರೆಂದು ಹೇಳುವುದು ವೇದವಾಕ್ಯಗಳಿಗೇ ವಿರುದ್ಧ; ಯುಕ್ತಿಯುಕ್ತವೂ ಅಲ್ಲ. "ಯೋ ದೇವಾನಾಂ ನಾಮಧಾ ಏಕ ಏವ; ಯಮಿಂದ್ರ ಮಾಹುರ್ವರುಣಂ ಯಮಾಹುಃ; ಏಕಂ ಸದ್ವಿಪ್ರಾ ಬಹುಧಾ ವದಂತಿ" ಇತ್ಯಾದಿ ಶ್ರುತಿ ವಾಕ್ಯಗಳು ವೇದೋಕ್ತನಾದ ಪರಬ್ರಹ್ಮ ಒಬ್ಬನೇ ಎಂದು ಬೋಧಿಸುವುವು. "ವೇದೇ ರಾಮಾಯಣೇಚೈವ ಪುರಾಣೇ ಭಾರತೇ ತಥಾ। ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರಗೀಯತೇ॥" ಎಂಬ ಹರಿವಂಶವಚನವೂ "ವೇದೈಶ್ಚಸರ್ವೈರಹಮೇವವೇದ್ಯಃ" ಎಂಬಗೀತಾ ವಾಕ್ಯವೂ ಇದನ್ನೇ ಸಮರ್ಥಿಸುವುವು. ಶ್ರುತಿ, ಲಿಂಗ, ವಾಕ್ಯ ಪ್ರಕರಣ, ಸ್ಥಾನ, ಸಮಾಖ್ಯಗಳು[1] ಮತ್ತು ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ, ಉಪಪತ್ತಿ[2] ಮೊದಲಾದ ತಾತ್ಪರ್ಯಲಿಂಗಗಳಿಂದ ವೇದಾರ್ಥ ವಿಚಾರ ಮಾಡಿದರೂ ಇದೇ ಅರ್ಥವೇ ಹೊರಸೂಸುವುದು. ಸಮಗ್ರ ವೈದಿಕ ಶಬ್ದಗಳು ಪರಬ್ರಹ್ಮಪರವೆಂದು ಸಾಧಿಸುವುದಕ್ಕಾಗಿಯೇ ಬ್ರಹ್ಮಸೂತ್ರಗಳು ಪ್ರವೃತ್ತವಾದವು. "ತತ್ತು ಸಮನ್ವಯಾತ್" ಎಂಬ ಸೂತ್ರದಲ್ಲಿ ಬಾದರಾಯಣರು ಸಮನ್ವಯವನ್ನು ಹೇಳಿ ಮುಂದೆ 'ಆನಂದಮಯೋಭ್ಯಾಸಾತ್' ಎಂಬ ಸೂತ್ರದಿಂದ ಆರಂಭಮಾಡಿಕೊಂಡು ಪ್ರಥಮಾಧ್ಯಾಯಾಂತವಾಗಿ ವೈದಿಕವಾದ 'ಆನಂದಮಯ' ಮೊದಲಾದ ಎಲ್ಲ ಶಬ್ದಗಳೂ ಆ ಪರಬ್ರಹ್ಮನನ್ನೇ ಬೋಧಿಸುತ್ತವೆಂದು ನಿರೂಪಿಸಿರುವರು [3] ಕೊನೆಗೆ 'ಸ್ತ್ರೀ, ಪ್ರಕೃತಿ, ದುಃಖಾ, ಬದ್ಧ' ಇತ್ಯಾದಿ ಶಬ್ದಗಳಿಗೂ ಕೂಡ ಪರಬ್ರಹ್ಮನಲ್ಲೇ ಶಕ್ತಿಯೆಂದು ಬ್ರಹ್ಮಸೂತ್ರಗಳು ಸಾರುವುವು.

---

1 ಶ್ರುತಿಲಿಂಗವಾಕ್ಯಪ್ರಕರಣಸ್ಥಾನಸಮಾಖ್ಯಾನಾಂ ಸಮವಾಯೇ।
ಪಾರದೌರ್ಬಲ್ಯಮರ್ಥವಿಪ್ರಕರ್ಷಾತ್ ॥ ——ಜೈಮಿನೀಯಸೂತ್ರಮ್ iii 3.13

2 ಉಪಕ್ರಮೋಪಸಂಹಾರಾವಭ್ಯಾಸೋಽಪೂರ್ವತಾ ಫಲಮ್ ।
ಅರ್ಥವಾದೋಪಪತ್ತೀ ಚ ಲಿಂಗಂ ತಾತ್ಪರ್ಯನಿರ್ಣಯೇ ॥ ——ಬ್ರ. ಸೂ. ಭಾ. ೧-೧-೪.

ಹೀಗೆ ಪರಬ್ರಹ್ಮನಲ್ಲಿ ಸಕಲ ಶಬ್ದಸಮನ್ವಯವಾಯಿತೆಂದ ಮಾತ್ರಕ್ಕೆ ಆ ಪರಬ್ರಹ್ಮನೊಡನೆ ಉಳಿದೆಲ್ಲ ದೇವತೆಗಳ ಐಕ್ಯವನ್ನು ಹೇಳುವುದು ಸಂಗತವಾಗಲಾರದು. ವೇದದ ಬೇರೆ ಬೇರೆ ವಾಕ್ಯಗಳಲ್ಲಿ ನಾನಾಭಂಗಿಗಳಲ್ಲಿ ಪರಬ್ರಹ್ಮ ಪ್ರತಿಪಾದನೆಯೇ ಉಕ್ತವಾಗಿದೆ.[4] ಆದ್ದರಿಂದ ಸರ್ವಾತ್ಮಕ ತತ್ತ್ವವನ್ನಾಗಲೀ ಸರ್ವಾಭಿನ್ನ ಬ್ರಹ್ಮನನ್ನಾಗಲೀ ವೇದಗಳು ಉಪದೇಶಿಸುವುದಿಲ್ಲ. ನಿರ್ಗುಣ, ನಿರಾಕಾರ ಬ್ರಹ್ಮನೂ ಅಲ್ಲಿ ನಿರೂಪಿತನಾಗಿಲ್ಲ. "ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ" ಇತ್ಯಾದಿ ಶ್ರುತಿವಾಕ್ಯಗಳಲ್ಲಿ ವರ್ಣಿತನಾದ ಬ್ರಹ್ಮ ಪ್ರಾಕೃತಸತ್ತ್ವರಜಸ್ತಮೋಗುಣ ವಿಧುರನೆಂದು ಪ್ರಸಿದ್ಧವು. ಸರ್ವಗುಣ ವಿಧುರನಾದ ಬ್ರಹ್ಮ ಅಜ್ಞೇಯನಾಗುವನು. ನಿರ್ಗುಣ ಎಂದರೆ ಪ್ರಾಕೃತಗುಣಶೂನ್ಯ ಎಂಬರ್ಥಕ್ಕೆ ತ್ರೈಗುಣ್ಯವರ್ಜಿತಮಜಮ್" ಎಂಬ ಭಾರತ ಮಂಗಳಶ್ಲೋಕದ ಸಮರ್ಥನೆ ಇದೆ. "ವೇದಗಳಲ್ಲಿ ನಿರ್ಗುಣ ಬ್ರಹ್ಮ–ಸಗುಣ ಬ್ರಹ್ಮ ಹೀಗೆ ಎರಡು ಪ್ರಕಾರವಾದ ವರ್ಣನೆ ಇದೆ. ಅದರಲ್ಲಿ ನಿರ್ಗುಣ ಬ್ರಹ್ಮೋಪಾದನೆಯೇ ಪಾರಮಾರ್ಥಿಕವಾದುದು. ಗುಣ ವಿಶಿಷ್ಟನಾದ ಸಗುಣ ಬ್ರಹ್ಮೋಪದೇಶವು ಮಂದಾಧಿಕಾರಿಗಳಿಗೆ ಮಾತ್ರ ಹೇಳಿದುದು!" ಎಂದು ಶ್ರೀಶಂಕರಾಚಾರ್ಯರು ಅಭಿಪ್ರಾಯಪಡುವರು. ವೇದಗಳ ಅರ್ಥವನ್ನು ವಿಚಾರ ಮಾಡ ಹೊರಟ ಬ್ರಹ್ಮಸೂತ್ರಗಳಲ್ಲಿ ಈ ದ್ವಿವಿಧಬ್ರಹ್ಮಕಲ್ಪನೆಗೆ ಸ್ವಲ್ಪವೂ ಸಮರ್ಥನೆ–ಯಿಲ್ಲ. 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಪ್ರಥಮ ಸೂತ್ರವಾದೊಡನೆಯೇ ಬ್ರಹ್ಮನ ಲಕ್ಷಣ ಹೇಳುವುದಕ್ಕಾಗಿಯೇ 'ಜನ್ಮಾದ್ಯಸ್ಯ ಯತಃ' ಎಂಬ ಎರಡನೆಯ ಸೂತ್ರದಿಂದ ಸೃಷ್ಟ್ಯಾದ್ಯಷ್ಟಕರ್ತೃ ಬ್ರಹ್ಮ ಎಂದು ಹೇಳಿರುವುದರಿಂದ ನಿರ್ಗುಣಬ್ರಹ್ಮ ಬ್ರಹ್ಮಸೂತ್ರ

3. ಸಕಲ ಜಗತ್ಕಾರಣೇ ಪರೇಬ್ರಹ್ಮಣಿ ಸ್ವರವರ್ಣಪದವಾಕ್ಯ ಮಹಾ ವಾಕ್ಯರೂಪಸ್ಯ ಸಮಸ್ತಶಾಸ್ತ್ರಸ್ಯ ಸಾಕ್ಷಾತ್ಪರಮಮುಖ್ಯವೃತ್ತ್ಯಾ, ನ ತು ಲಕ್ಷಣಯಾ। ತಥಾ ಮಹಾತಾತ್ಪರ್ಯೇಣ ನ ತು ಪರಾರ್ಥ್ಯೇನ ಸಮನ್ವಯಃ ಪ್ರಥಮಾಧ್ಯಾಯೇ ಸಮರ್ಥಿತಃ ।

—ನ್ಯಾಯಸುಧಾ II.1 P 229

4. ಸರ್ವಾಣ್ಯಪಿ ಹಿ ವೇದಾಂತವಾಕ್ಯಾನಿ ಅಸಂಖ್ಯೇಯ ಕಲ್ಯಾಣಗುಣಾಕರಂ ಸಕಲದೋಷಗಂಧವಿಧುರಂ ಏಕರೂಪಮೇವ ಪರಂ ಬ್ರಹ್ಮ ನಾರಾಯಣಾಖ್ಯಂ ಪ್ರತಿಪಾದಯಂತಿ। ಕಿಂತು ೧. ಕಾನಿಚಿತ್ ಸರ್ವಜ್ಞತ್ವ ಸರ್ವೇಶ್ವರತ್ವ ಸರ್ವಾಂತರ್ಯಾಮಿತ್ವ ಸೌಂದರ್ಯೌದಾರ್ಯ ಗುಣವಿಶಿಷ್ಟತಯಾ, ೨. ಕಾನಿಚಿತ್ ಅಪಹತಪಾಪ್ಮತ್ವ ನಿರ್ದುಃಖತ್ವ ಪ್ರಾಕೃತ ಭೌತಿಕದೇಹರಹಿತತ್ವಾದಿ ದೋಷಾಭಾವವಿಶಿಷ್ಟತಯಾ ೩. ಕಾನಿಚಿತ್ ಅತಿಗಹನತಾ ಜ್ಞಾಪನಾಯ ವಾಙ್ಮನಸಾಗೋಚರತ್ವಾಕಾರೇಣ ೪. ಕಾನಿಚಿತ್, ಸರ್ವಪರಿತ್ಯಾಗೇನ ತಸ್ಯವೋಪಪಾದನಾಯ ಅದ್ವಿತೀಯತ್ವೇನ ೫ ಕಾನಿಚಿತ್, ಸರ್ವಸತ್ತಾಪ್ರತೀತಿ ಪ್ರವೃತ್ತಿ ನಿಮಿತ್ತತಾಪ್ರತಿಪತ್ತ್ಯರ್ಥಂ ಸರ್ವಾತ್ಮಕತ್ವೇನ ಇತ್ಯೇವಮಾದ್ಯನೇಕ ಪ್ರಕಾರೈಃ ಪರಮಪುರುಷಂ ಬೋಧಯಂತಿ। ತತೋ ವ್ಯಾಕುಲಬುದ್ಧಯೋ ಗುರುಸಂಪ್ರದಾಯವಿಕಲಾ ಅಶ್ರುತವೇದ–ವ್ಯಾಖ್ಯಾತಾರಃ ಸರ್ವತ್ರಾಪ್ಯೇಕಸೂತ್ರತಾಮನುಸಂದಧಾನಾ ವೇದಂ ಬಿಂದಂತಿ।

—ನ್ಯಾಯಸುಧಾ.

ಗಳಿಗೆ ಅನಭಿಮತನೆಂಬುದು ವ್ಯಕ್ತಪಡುವುದು. ಆಚಾರ್ಯರು ಶ್ರುತ್ಯುಕ್ತಬ್ರಹ್ಮ ಸಕಲಗುಣಪರಿಪೂರ್ಣನೆಂದು ಹೇಳಿರುವರು. [5] 'ಸರ್ವೋತ್ಕರ್ಷಂ ದೇವದೇವಸ್ಯ ವಿಷ್ಣೋಃ ಮಹಾತಾತ್ಪರ್ಯಂ' ಎಂಬುದೇ ಕೊನೆಯ ಸಿದ್ಧಾಂತ. 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಎಂಬಮುಂಡಕಶ್ರುತಿಗೆ ಆಚಾರ್ಯರು 'ಋಗಾದ್ಯಾ ಅಪರಾವಿದ್ಯಾ ಯದಾ ವಿಷ್ಣೋರ್ನವಾಚಕಾ|| ತಾ ಏವ ಪರಮಾ ವಿದ್ಯಾ ಯದಾವಿಷ್ಣೋಸ್ತು-ವಾಚಕಾ'| ಎಂದು ಅರ್ಥಮಾಡಿರುವರು. ಗುಣವಿಶಿಷ್ಟನಾದ ಪರಬ್ರಹ್ಮನನ್ನು ಹೇಳುವುದು ವೇದವಾಕ್ಯಗಳ ತಾತ್ಪರ್ಯವಲ್ಲ. ಪರಬ್ರಹ್ಮ ಗುಣವಿಶಿಷ್ಟನಾದರೆ ಪರಸಾಪೇಕ್ಷನಾಗಿ ಪರಿಮಿತನಾಗುವನು. ಆದ್ದರಿಂದ ಪರಬ್ರಹ್ಮ ನಿರ್ಗುಣ, ನಿರಾಕಾರ, ಅಜ್ಞೇಯ ಎಂದೇ ಎಲ್ಲಾ ವೇದವಾಕ್ಯಗಳ ಅಭಿಪ್ರಾಯ. ಅವನಲ್ಲಿ ಯಾವಗುಣಗಳೂ ಇಲ್ಲವೆಂದು ಸಾರುವುವು ಎಂದು ಅದ್ವೈತಿಗಳು ಹೇಳುವರು. ಪರಬ್ರಹ್ಮನಿಗೂ, ಅವನ ಗುಣಗಳಿಗೂ 'ಅಪೃಥಕ್ತ್ವ ಲಕ್ಷಣ' ಎಂಬ ಸಂಬಂಧ ಉಂಟೆಂದು ವಿಶಿಷ್ಟಾದ್ವೈತಿಗಳು ಹೇಳುವರು. ನೈಯಾಯಿಕರ ಸಮವಾಯಸಂಬಂಧದಂತೆ ಇದೂ ಐಕ್ಯದಲ್ಲೇ ಪರ್ಯವಸಾನ ಹೊಂದುವುದು. ಆಚಾರ್ಯರು ಇದರಲ್ಲಿ ತಥ್ಯಾಂಶವನ್ನು ಬಿಡಿಸಿ ಹೇಳಿರುವರು. ಪರಮಾತ್ಮ ಅನಂತಕಲ್ಯಾಣಗುಣಪರಿಪೂರ್ಣ. ಅವನಿಗೂ ಅವನ ಗುಣಗಳಿಗೂ ಅತ್ಯಂತ ಅಭೇದ, ಅಲ್ಲಿ ಭೇದವನ್ನು ಎಣಿಸಬಾರದು. ಇದೇ 'ನೇಹನಾ ನಾಸ್ತಿಕಿಂಚನ' ಎಂಬಿವೇ ಮುಂತಾದ ಶ್ರುತಿಗಳ ತಾತ್ಪರ್ಯ. ಆದರೆ ಲೋಕವ್ಯವಹಾರದಲ್ಲಿ ಕೆಲವು ಅತ್ಯಂತ ಅಭಿನ್ನವಸ್ತುಗಳಲ್ಲಿ ಭೇದವ್ಯವಹಾರ ಕಂಡಿದೆ, 'ತನ್ನ ಆತ್ಮ, ಪುರುಷನ ಚೈತನ್ಯ, ರಾಹುವಿನ ಶಿರಸ್ಸು' ಇತ್ಯಾದಿ ದೃಷ್ಟಾಂತಗಳಲ್ಲಿ ಅಭಿನ್ನವಸ್ತುಗಳಲ್ಲೂ ಭೇದವ್ಯವಹಾರ ಕಾಣುವುದು. ಹಾಗೆಯೇ ಶ್ರುತಿವಾಕ್ಯಗಳಲ್ಲಿಯೂ 'ಆನಂದಂ ಬ್ರಹ್ಮಣಃ;' ಇತ್ಯಾದಿ ಸ್ಥಳಗಳಲ್ಲಿಯೂ ಭೇದವ್ಯವಹಾರ ಕಂಡಿದೆ. ಆದ್ದರಿಂದ ಅತ್ಯಂತಾಭೇದ ಸ್ಥಳಗಳಲ್ಲಿ ಭೇದನಿರ್ವಾಹಕ ಧರ್ಮವೊಂದು ಇರಬೇಕೆಂದು ಹೇಳಬಹುದು. ಇಂತಹ ಭೇದನಿರ್ವಾಹಕ ಧರ್ಮವನ್ನು ಆಚಾರ್ಯರು 'ವಿಶೇಷ'ವೆಂದು ಕರೆದಿರುವರು.[7] ಇಂತಹ ಭೇದವ್ಯವಹಾರ

---

5 ಅತೋ ನಿಖಿಲಗುಣಗಣಾಢ್ಯಮೇವ ಬ್ರಹ್ಮ ಶ್ರುತ್ಯಭಿಪ್ರೇತಮ್ ।

——ತತ್ತ್ವೋದ್ಯೋತಮ್

6. ಸಾಕ್ಷೀಚೇತಾ ಕೇವಲೋ ನಿರ್ಗುಣಶ್ಚ। ಏವಂ ಧರ್ಮಾನ್ ಪೃಥಕ್ಪಶ್ಯನ್ ತಾವೇವಾನು ವಿಧಾವತಿ । ನೇಹ ನಾನಾಸ್ತಿ ಕಿಂಚನ। ಯ ಇಹ ನಾನೇವ ಪಶ್ಯತಿ।

7. ಯದಿ ಧರ್ಮಾ ಏವ ನ ಸಂತಿ, ತರ್ಹಿ ನೇಹಾಸ್ತಿ ಕಿಂಚನ, ಧರ್ಮಾನ್ ಪಶ್ಯನ್ನಿತ್ಯೇವ ವಕ್ತವ್ಯಮ್। "ನಾನಾ" ಇತಿ– "ಪೃಥಕ್" ಇತಿ ವ್ಯರ್ಥಮೇವ। ತೇನ ಸಂತಿ ಧರ್ಮಾಃ, ಕಿಂತು ನ ಭಿನ್ನಾ ನಾಪಿ ಭಿನ್ನಾ ಭಿನ್ನಾ? ಇತಿ ಶ್ರುತ್ಯರ್ಥಃ। ಅನಯೈವ ಶ್ರುತ್ಯಾ ವಿಶೇಷೋಪಿ ದ್ಯೋತಿತಃ ।

——ವಿ.ತಾ.ನಿ. ಟೀಕಾ ಪುಟ 126 ಬಿ

ವಿರುವ ಸಂಬಂಧ 'ಸವಿಶೇಷಾಭೇದ' ಸಂಬಂಧ. ಇದರಿಂದ ಪಾಶ್ಚಾತ್ಯ ಮತ್ತು ಭಾರತೀಯ ಅದ್ವೈತಿಗಳು 'ಧರ್ಮ' 'ಧರ್ಮಿ'ಗಳ ಸಂಬಂಧದ ಬಗ್ಗೆ ಮಾಡುವ ಪ್ರಶ್ನೆಗೂ ಪರಿಹಾರ ದೊರೆತಂತಾಯಿತು. ಅವರು ಹೇಳುವ ಪ್ರಕಾರ ಬ್ರಹ್ಮನಿಗೂ ಬ್ರಹ್ಮನ ಗುಣಗಳಿಗೂ ಭೇದಾಂಗೀಕಾರ ಮಾಡಿದರೆ ಭೇದಕ್ಕೂ ಬ್ರಹ್ಮನಿಗೂ ಮತ್ತೆ ಭೇದವನ್ನು ಹೇಳಬೇಕಾಗುವುದು. ಹೀಗಾಗಿ ಅನವಸ್ಥಾ ದೋಷ ಬರುವುದು. ಬ್ರಹ್ಮನಿಗೂ ಬ್ರಹ್ಮನ ಗುಣಗಳಿಗೂ ಅಭೇದವನ್ನು ಹೇಳಿದಲ್ಲಿ ಅವೆರಡರ ಸಂಬಂಧವೆಲ್ಲ ಸುಳ್ಳೆನಿಸಿ ನಿರ್ವಿಶೇಷ ವಸ್ತುಮಾತ್ರ ಸಿದ್ಧಿಸುವುದು.[8] ಇದು ಅದ್ವೈತಿಗಳ ಆಕ್ಷೇಪ. 'ಸವಿಶೇಷಾಭೇದ' ಸಂಬಂಧದಿಂದ ಇದು ಪರಿಹೃತವಾಗುವುದು. 'ಸಾಕ್ಷೀಚೇತಾ ಕೇವಲೋನಿರ್ಗುಣಶ್ಚ' ಎಂಬ ಶ್ರುತಿಯಲ್ಲಿ ದೇವರಿಗೆ ಏಕತ್ವ, ದೇವತ್ವ, ಸರ್ವಭೂತಾಂ–ತರ್ಯಾಮಿತ್ವಾದಿ ಅನೇಕಗುಣಗಳು ವಿಹಿತವಾಗಿವೆ. ಇನ್ನೂ ಅನೇಕ ಶ್ರುತಿ ಸ್ಮೃತಿಗಳಲ್ಲಿ ಬ್ರಹ್ಮನಿಗೆ ಗುಣಪೂರ್ಣತ್ವಾದಿಗಳನ್ನು ಹೇಳಿದ್ದಾರೆ.[9] ಇದಕ್ಕೆ ಭೇದ ನಿರ್ವಾಹಕವಾದ 'ವಿಶೇಷ' ಅಗತ್ಯ.

ಹೀಗೆ ಸಕಲ ವೇದಗಳಿಂದಲೂ ಪ್ರತಿಪಾದ್ಯನಾದ ಪರಬ್ರಹ್ಮನು ಸರ್ವೋತ್ತಮ; ಅನಂತಕಲ್ಯಾಣಗುಣಾಭಿರಾಮ; ಪ್ರಾಕೃತಗುಣಶೂನ್ಯ. ಈ ಪರಬ್ರಹ್ಮನೇ ನಾರಾಯಣ, ಸರ್ವಶಾಸ್ತ್ರಪ್ರತಿಪಾದ್ಯನಾದವನು ನಾರಾಯಣನೆಂಬುದು ಅಶಾಸ್ತ್ರೀಯವೆಂದೂ ರುದ್ರಾದಿ ಇತರದೇವತೆಗಳಿಗೂ ಇಂತಹ ಸರ್ವೋತ್ತಮತ್ವವನ್ನು ಹೇಳಬಹುದೆಂದೂ ಕೆಲವರ ವಾದ. ಇತರ ದೇವತೆಗಳ ಉತ್ಕರ್ಷವನ್ನು ಕೆಲವು ಶ್ರುತಿಗಳು ಹೇಳುವುವು.[10] ಆದರೆ ಈವಾಕ್ಯಗಳು ನಿರವಕಾಶವಾದುದಲ್ಲ. ನಾರಾಯಣನ ಸರ್ವೋತ್ತಮತ್ವವನ್ನು ನಿರವಕಾಶವಾಗಿ ಸಾರುವ ಶ್ರುತಿಗಳು ಅನೇಕವಿವೆ.[11] ಅಂಭ್ರಿಣೀ ಸೂಕ್ತದಲ್ಲಿ ಲಕ್ಷ್ಮೀದೇವಿಯರು ಬ್ರಹ್ಮ

---

8. ನ ಚ ಗುಣಗುಣ್ಯಾದಿ ಭೇದಸಂಬಂಧ ಸ್ಸಂಭವೀ। ತಸ್ಯ ಸಂಬಂಧಸ್ಯ ತತೋ ಭಿನ್ನತ್ವೇ ಗುಣವದೇವ ಸಂಬಂಧಾಂತರಾಪೇಕ್ಷತ್ವಾದನವಸ್ಥಾ। ಅಭಿನ್ನತ್ವೇ ವಸ್ತುಮಾತ್ರಮಿತಿ ನ ಸಂಬಂಧಸ್ಸ್ಯಾತ್। —ತತ್ತ್ವಪ್ರದೀಪಃ

9. ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನ ಬಲಕ್ರಿಯಾ ಚ।
ಜ್ಞಃ ಕಾಲಕಾಲೌ ಗುಣೀ ಸರ್ವವಿದ್ಯಃ । —ಶ್ವೇತಾಶ್ವತರ. VI 2-8

10 ಏಕ ಏವ ರುದ್ರೋ ನ ದ್ವಿತೀಯೋಽತಸ್ಥೇ। ಶ್ರೇಷ್ಠೋ ಜಾತಸ್ಯ ರುದ್ರಶ್ರಿಯಾಸಿ। ನ ವಾ ಓಜೀಯೋ ರುದ್ರ ತ್ವದಸ್ತಿ । ವಿಶ್ವಸ್ಮಾದಿಂದ್ರ ಉತ್ತರಃ। ನ ಕಿರಿಂದ್ರತ್ವದುತ್ತರಃ। ಶ್ರೀಯಂ ವಸಾನಾ ಅಮೃತತ್ವಮಾಯನ್।

11 1) ಅಗ್ನಿರ್ವೈ ದೇವಾನಾಮಮವೋ ವಿಷ್ಣುಃ ಪರಮಃ ।
2) ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನೇಶಾನಃ ।
3) ನಾರಾಯಣಾದ್ಬ್ರಹ್ಮಾ ಜಾಯತೇ ನಾರಾಯಣಾದ್ರುದ್ರೋ ಜಾಯತೇ।
4) ತ್ವಂ ಯಜ್ಞ ಸ್ತ್ವಂ ವಷಟ್ಕಾರಸ್ತ್ವ ಮಿಂದ್ರಸ್ತ್ವಂ ರುದ್ರಃ.........

ರುದ್ರಾದಿ ದೇವತೆಗಳನ್ನು ತಾವು ಸೃಷ್ಟಿಸಬಲ್ಲವೆಂದು ಹೇಳಿ[12] ಮುಂದೆ ತನಗೆ ಸರ್ಜಕನು ಸಮುದ್ರಶಾಯಿಯಾದ ಭಗವಂತ[13] ಎಂದು ಹೇಳಿರುವರು. ಇದರಿಂದ ನಾರಾಯಣನೇ ಸರ್ವೋತ್ತಮ ದೇವತೆ ಎಂದು ಸ್ಪಷ್ಟವಾಗುವುದು.

ಆಚಾರ್ಯರು ನಾರಾಯಣನೇ ಭಗವಂತ ಎಂದಿಷ್ಟೇ ಹೇಳದೆ, ಭಗವಂತನ ಲಕ್ಷಣಗಳನ್ನು ತಮ್ಮ ಎಲ್ಲ ಗ್ರಂಥಗಳಲ್ಲೂ ಹೇಳಿರುವರು.[14] ಪರಮಾತ್ಮ ಗುಣಪೂರ್ಣ, ದೋಷದೂರ, ವೈರಾಗ್ಯ ಭಕ್ತ್ಯಾದಿಗಳಿಂದ ಜ್ಞೇಯ ಮತ್ತು ಭಕ್ತರುಗಳಿಂದ ಲಭ್ಯ ಎಂಬ ಲಕ್ಷಣಗಳನ್ನೇ ಎಲ್ಲ ಕಡೆಯೂ ಹೇಳಿರುವರು. ಆಚಾರ್ಯರ ಗ್ರಂಥಗಳ ಟೀಕಾಕಾರರಾದ ಶ್ರೀಮಜ್ಜಯತೀರ್ಥರು ಗುಣಪೂರ್ಣತ್ವಾದಿಗಳನ್ನು ವಿವರಿಸಿರುವರು.[15] ನಾರಾಯಣ ಎಂಬ ಪದವು ಚತುರ್ಮುಖಬ್ರಹ್ಮ ರುದ್ರಾದಿ ಪದಗಳಂತೆ; ದೇವದತ್ತ ಡಿತ್ಥಾದಿ ಪದಗಳಂತೆ ಕೇವಲ ಸಾಂಕೇತಿಕ ಅಥವಾ ರೂಢವಾದದ್ದಲ್ಲ. ಆಚಾರ್ಯರು ಹೇಳಿದ ಪರಬ್ರಹ್ಮನ ನಾಲ್ಕು ಲಕ್ಷಣಗಳೂ ನಾರಾಯಣ ಎಂಬ ಶಬ್ದದಿಂದ ನಿಷ್ಪನ್ನವಾದವು.[16] ಅಂತೆಯೇ ಆಚಾರ್ಯರು ನಾರಾಯಣ ಸರ್ವೋತ್ತಮ ಎಂದು ಹೇಳಿರುವುದು. ಇದು ಬರಿಯ ಏಕದೇವತಾ ಪಕ್ಷಪಾತದಿಂದ ಹೊರಹೊಮ್ಮಿದುದಲ್ಲ. ಅರ್ಥಪೂರ್ಣತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ವಿಚಾರವಿದು. ಈ ದೃಷ್ಟಿಯಿಂದ ನೋಡಿದಲ್ಲಿ ಹಿಂದಿನ ಎಲ್ಲ ವಾಕ್ಯಾರ್ಥವೂ ಯುಕ್ತಿಯುಕ್ತವೆನಿಸುವುದು. ಆಚಾರ್ಯರು ನಾರಾಯಣನ

---

5) ಅಸ್ಯ ದೇವಸ್ಯ ಮೀಳ್ಹುಷೇ ವಪಾ ವಿಷ್ಣೋರಸ್ಯ ಪ್ರಥಮೇ ಹವಿರ್ಭಿಃ। ವಿದೇಹಿ ರುದ್ರೋ ರುದ್ರಿಯಂ ಮಹಿತ್ವಂ ಯಾಸಿಷ್ಟಂ ವರ್ತಿರಶ್ವಿನಾ ವಿರಾವಿತ್॥

12. ಅಹಂ ರುದ್ರಾಯ ಧನುರಾತನೋಮಿ ಬ್ರಹ್ಮದ್ವಿಷೇ ಶರವೇಹಂತ ವಾಉ.

13. ಮಮ ಯೋನಿರಪ್ಸ್ವಂತಃ ಸಮುದ್ರೇ.

14. ನಾರಾಯಣಂ ಗುಣೈಸ್ಸರ್ವೈರುದೀರ್ಣಂ ದೋಷವರ್ಜಿತಮ್। ಜ್ಞೇಯಂ ಗಮ್ಯಂ ಗುರುಶ್ಚಾಪಿ ನತ್ವಾ ಸೂತ್ರಾರ್ಥ ಉಚ್ಯತೇ॥ ಅಶೇಷಗುಣಪೂರ್ಣತ್ವಂ ಸರ್ವದೋಷ ಸಮುಜ್ಝಿತಿಃ । ವಿಷ್ಣೋರನ್ಯಚ್ಚ ತತ್ತಂತ್ರಂ ಇತಿ ಸಮ್ಯಗ್ವಿನಿರ್ಣಯಃ ॥
ಸದಾಗಮೈಕವಿಜ್ಞೇಯಂ ಸಮತೀತ ಕ್ಷರಾಕ್ಷರಮ್। ನಾರಾಯಣಂ ಸದಾ ವಂದೇ ನಿರ್ದೋಷಾಶೇಷ ಸದ್ಗುಣಮ್॥

15. ಶುದ್ಧಾನಂದೋರು ಸಂವಿದ್ಯುತಿಮತಿ ಬಹುಲೌದಾರ್ಯ ವೀರ್ಯಾದಿದೇಹಂ
ಚಿಂತಾಸಂತಾಪಲೇಪೋದ್ಭವಮೃತಿಮುಖರಾಶೇಷದೋಷಾತಿದೂರಮ್।
ಸದ್ಭಿವೈರಾಗ್ಯಭಕ್ತಿಶ್ರುತಿಮತನಿಯತಧ್ಯಾನ ತಜ್ಜ್ಞಾನಯೋಗಾದ್ಲಮ್ಯಮ್....।

16. ನೈತನ್ನಾರಾಯಣಪದಂ ದೇವದತ್ತಾದಿವತ್ ಸಾಂಕೇತಿಕಮ್ ಭವಿತುಮರ್ಹತಿ; ಕಿಂತು ವಿಶಿಷ್ಟಗುಣಾನಪಿ ಆಚಷ್ಟೇ ಇತ್ಯಾಶಯವಾನ್ ಪಾದಚತುಷ್ಟಯೇನ ತನ್ನಿರ್ವಕ್ತಿ ತಥಾಹಿ ದೋಷಾರಶಬ್ದಯೋರಭಿನ್ನಾರ್ಥತ್ವಾನ್ನಞಶ್ಚ ವಿರುದ್ಧವಾಚಿತ್ವಾತ್। ಅರಾಶ್ರಯೋ ನಭವತೀತಿ ನಾರಾಯಣಃ! ನರಸಂಬಂಧಿಕಾವಕ್ । ನರೀಯತೇಽನೇನೇತಿ ವಾ, ಅರಮಣಂ ಯೇನೇತಿ ವಾ, ನಿರ್ದೋಷವೇದೋತ್ಪನ್ನತ್ವಾದ್ವಾ ನಾರಂ ಜ್ಞಾನಂ। ವಿಷಯತಯಾ ತದಾಶ್ರಯತ್ವಾಚ್ಚ ನಾರಾಯಣಃ। ಅರವಿಧುರತ್ವಾದರರಹಿತತ್ವಾತ್ ಕ್ಷಯರಹಿತತ್ವಾದ್ವಾ ನಾರಾ ಮುಕ್ತಾಃ ತದಾಶ್ರಯೋ ನಾರಾಯಣಃ। —ತತ್ತ್ವಪ್ರಕಾಶಿಕಾ.

ಸರ್ವೋತ್ತಮತ್ವವನ್ನು ಎತ್ತಿ ಸಾರಿರುವುದು ಶಾಸ್ತ್ರಸಮ್ಮತವೂ ಆಗುವುದು. ಇದರಂತೆಯೇ ಪರಮಾತ್ಮನ ಇತರ ನಾಮಗಳೂ ಅವನ ಅನಂತ ಗುಣಗಳನ್ನೇ ಬೋಧಿಸುವುವು. ವಿಷ್ಣುವೆಂದರೆ ಸರ್ವತ್ರವ್ಯಾಪ್ತನೆಂದರ್ಥ, ಬ್ರಹ್ಮನೆಂದರೆ ಗುಣಪೂರ್ಣನೆಂದರ್ಥ, ಇದರಂತೆಯೇ ವೇದವಾಕ್ಯಗಳಲ್ಲಿ ಸರ್ವೋತ್ತಮ ಗುಣಗಳನ್ನು ತಿಳಿಸುವ ವಿಶೇಷಣಗಳು ರುದ್ರ, ಪಿನಾಕಿ, ಇಂದ್ರ ಇತ್ಯಾದಿ ನಾಮಗಳಿಗೆ ಎಲ್ಲಿ ಹೊಂದಿವೆಯೋ, ಆಕಾಶ, ವಜ್ರ ಇವುಗಳಿಗೆ ಹೊಂದಿವೆಯೋ ಆ ವಿಶೇಷಣಗಳೂ, ಆ ವಿಶೇಷ್ಯಗಳೂ ಅಸ್ಥಿ ಮಜ್ಜಾ ಇತ್ಯಾದಿ ಶಬ್ದಗಳೂ ಎಲ್ಲವೂ ಪರಬ್ರಹ್ಮಪರವೆಂದು ತಿಳಿಯಬೇಕು, ಇದೇ ವೈದಿಕ ವಾಙ್ಮಯದಲ್ಲಿ ಬ್ರಹ್ಮಮೀಮಾಂಸೆಯು ಮಾಡುವ ಸಮನ್ವಯ. ಇದೇ ದೃಷ್ಟಿಯಿಂದ ವಿಚಾರಮಾಡಿದರೆ 'ಅಹಂ ಬ್ರಹ್ಮಾಸ್ಮಿ' ಇತ್ಯಾದಿ ಐಕ್ಯಬೋಧಕ ವಾಕ್ಯಗಳೂ ಬೇರೆ ಅರ್ಥಕೊಡುವುವು. ಪರಮಾತ್ಮ ಅಹೇಯನಾದ್ದರಿಂದ 'ಅಹಂ' ಶಬ್ದವಾಚ್ಯನು, ಸ್ವತಂತ್ರ ಸತ್ತಾಕನಾದ್ದರಿಂದ 'ಅಸ್ಮಿ' ಶಬ್ದವಾಚ್ಯನು. ಹೀಗೆ ವಿವೇಕವು. ಆದ್ದರಿಂದ ಜಗತ್ತಿನಲ್ಲಿ ಮೊದಲಿನಿಂದ ಬಂದಿರುವ ಸಕಲ ಶಬ್ದಗಳೂ ಮಹಾಯೋಗ ಮತ್ತು ವಿದ್ವದ್ರೂಢಿಯಿಂದ ಪರಮಾತ್ಮಪರವು. ಆ ಪರಮಾತ್ಮನ ಅನುಗ್ರಹದಿಂದಲೇ ಇತರ ವಸ್ತುಗಳಿಗೂ ಜೀವರುಗಳಿಗೂ ಪ್ರತ್ಯೇಕವಾದ ಹೆಸರು ರೂಢವಾದವು. ಲೌಕಿಕ ಪ್ರಪಂಚದಲ್ಲಿ ಮಾತ್ರ ವ್ಯವಹಾರೋಪಯೋಗಿಯಾದ್ದರಿಂದ ಭಗವದಿತರಪರವಾದ ಅರ್ಥ ಸಂಕುಚಿತ ಮತ್ತು ಅಮುಖ್ಯ. ಭಗವತ್ಪರವಾದ್ದರಿಂದ ವಿದ್ವದ್ರೂಢಿಯೇ ಅತ್ಯಂತ ವಿಸ್ತೃತ ಮತ್ತು ಮುಖ್ಯ. ಇಂತಹ ವಿಶಾಲವಾದ "ಈಶ್ವರ – ಕಲ್ಪನೆ"ಯನ್ನು ಆಚಾರ್ಯರು ಯುಕ್ತಿಯುಕ್ತವಾಗಿಯೂ ಶಾಸ್ತ್ರೀಯವಾಗಿಯೂ ಮಾಡಿ ತೋರಿಸಿರುವರು.

ಪರಮಾತ್ಮನ ಅನಂತಗುಣಗಳನ್ನು ಎಣಿಸುವುದು ಅಶಕ್ಯವು. ಅವನು 'ಸತ್', 'ಸತ್ಯಂ' ಅಂದರೆ ಸ್ವತಂತ್ರವಾದ ಸತ್ಯತ್ವವುಳ್ಳವನು. 'ಜ್ಞಾನಂ' 'ಚಿತ್' ಅಂದರೆ ಜ್ಞಾನರೂಪಿ, ಜ್ಞೇಯ–ಮುಖಜ್ಞೇಯ ವಸ್ತು. 'ಆನಂದ' 'ಅನಂತ' ಆನಂದರೂಪಿ.[17] ನಿತ್ಯವಾದ ಚೇತನರುಗಳಿಗೆ ನಿತ್ಯತ್ವಪ್ರದ. ಆದ್ದರಿಂದಲೇ ನಿತ್ಯರೊಳು ನಿತ್ಯ, ಚೇತನರೊಳು ಚೇತನ[18] ಅವನ ರೂಪ, ಗುಣ, ಕ್ರಿಯಾ ಎಲ್ಲ ಅನಂತ. ಆದ್ದರಿಂದಲೇ ಅವನನ್ನು ಸಂಪೂರ್ಣವಾಗಿ ತಿಳಿಯುವುದು ಯಾರಿಗೂ ಶಕ್ಯವಿಲ್ಲ. ಅಂತೆಯೇ ಅವನು ಅಪ್ರಮೇಯ. ಶ್ರುತಿವಾಕ್ಯಗಳೂ ಅವನನ್ನು ಸ್ತುತಿಸಲಾರದೆ ಹಿಂದಿರುಗುವುವು.[19] ಅವನು ಪ್ರಾಕೃತ ಪದಾರ್ಥಗಳೊಂದಕ್ಕೂ ಸೇರಿದವನಲ್ಲ, ಅವನನ್ನು ಯಾವ ಪರಿಮಿತ ವಸ್ತುವೆಂದೂ

---

17. ಸಚ್ಚಿದಾನಂದಃ ಸತ್ಯಂ ಜ್ಞಾನಮನಂತಂ ಬ್ರಹ್ಮ, ರಸೋ ವೈ ಸಃ ।

18. ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾ ಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್

19. ಯತೋ ವಾಚೋ ನಿರ್ವರ್ತಂತೇ ಅಪ್ರಾಪ್ಯ ಮನಸಾ ಸಹ।

ಹೇಳಲಾಗದು. ಆದುದರಿಂದಲೇ ಉಪನಿಷತ್ತುಗಳು 'ನೇತಿನೇತಿ' ಎಂದು ಅವನನ್ನು ಎಲ್ಲ ಪದಾರ್ಥಗಳಿಂದಲೂ ದೂರನೆಂದು ಹೇಳುವುವು. ಅವನು ನಿರ್ಗುಣ ಅಂದರೆ ಪ್ರಾಕೃತ ಗುಣರಹಿತ. ಅವನು ಇಲ್ಲಿ, ಅಲ್ಲಿ, ಎಲ್ಲೆಲ್ಲೂ ಇರುವನು; ಸರ್ವತ್ರವ್ಯಾಪ್ತ,[20] ಅವನು ದೇಶಕಾಲಗಳಿಗೂ ಸ್ವಾಮಿ,[21] ಅವನು ಸಕಲ ಚರಾಚರ ಜಗತ್ತಿಗೂ ಒಡೆಯ. ಅಂದರೆ ಇದನ್ನು ಸೃಷ್ಟಿಸಿ, ಸಂರಕ್ಷಣೆಮಾಡಿ, ಸಂಹಾರ ಮಾಡುವವನೂ ಅವನೇ[22] ಇಷ್ಟೇ ಅಲ್ಲ; ಸೃಷ್ಟಿ, ಸ್ಥಿತಿ, ಸಂಹಾರ ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷಗಳೆಂಬ ಜಗತ್ತಿನ ಎಂಟು ಧರ್ಮಗಳೂ ಪರಮಾತ್ಮನಿಂದಲೇ ಆಗುವುವು[23] ಚತುರ್ಮುಖ ಬ್ರಹ್ಮನಲ್ಲಿ ನಿಂತು ಸೃಷ್ಟಿಮಾಡುವನು. ರುದ್ರ ದೇವರಲ್ಲಿ ನಿಂತು ಸಂಹಾರ ಮಾಡುವನು. [24] ಇಂತಹ ಅನಂತ ಶಕ್ತನಾದ ಸ್ವಾಮಿಗೆ ಜಗತ್ತಿನಿಂದ ಯಾವ ಪ್ರಯೋಜನವೂ ಇಲ್ಲ. ಇದೆಲ್ಲ ಅವನು ಆನಂದೋದ್ರೇಕದಿಂದ ಎಸಗುವ ಲೀಲೆಯು.[25] ಇದರಿಂದ ಅವನಿಗೆ ದುಃಖಲೇಶವೂ ಇಲ್ಲ. ಅವನು ನಿತ್ಯಾನಂದಸ್ವರೂಪಿ., ಅವನಿಗೆಲ್ಲಿಯ ದುಃಖ? [26] ಆದ್ದರಿಂದಲೇ ಮತ್ಸ್ಯ, ಕೂರ್ಮಾದಿ ದಶಾವತಾರ ಮತ್ತು ಮಹಿದಾಸ, ದತ್ತಾದಿ ವಿಶೇಷ ಅವತಾರ ಮಾಡುವ ಭಗವಂತನಿಗೆ ಪ್ರಾಕೃತ ದುಃಖ ಸ್ಪರ್ಶವೇ ಇಲ್ಲ. ಇಂತಹ ಅಪ್ರಾಕೃತ ಸ್ವಾಮಿ ತಾನೆಂದು ತೋರಿಸಲೋಸುಗವೇ ಭಗವಂತ ವಿಚಿತ್ರವಾದ ನರಸಿಂಹಾವತಾರ ಮಾಡಿದ. [27] ಅಜ್ಞರು ಭಗವಂತನ ಅವತಾರಗಳೆಲ್ಲ ಪಂಚಭೂತಾತ್ಮಕವಾದದ್ದೆಂದು ತಿಳಿಯುವರು. [28] ಅವನ ಅವತಾರಗಳೆಲ್ಲ ಅಭಿನ್ನವಾದವು. ಅವುಗಳಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲ. ಮತ್ಸ್ಯ , ಕೂರ್ಮಾದ್ಯವತಾರಗಳಿಗೆ, ರಾಮ

---

20. ತದ್ದೂರೇ ತದ್ವದಂತಿಕೇ; ದೂರಾದ್ದೂರತರಂ ಯತ್ತು ತದೇವಾಂತಿಕಮಂತಿಕಾತ್।

21. ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ –।

22. ದ್ಯಾವಾಭೂಮೀ ಜನಯನ್ ದೇವ ಏಕಃ; ಯತೋ ಇಮಾನಿ ಭೂತಾನಿ ಜಾಯಂತೇ ಯೇನ ಜಾತಾನಿ ಜೀವಂತಿ ಯತ್ಪ್ರಯಂತ್ಯಭಿಸಂವಿಶಂತಿ; ಅಹಂ ಸರ್ವಸ್ಯ ಪ್ರಭವಃ, ಮತ್ತಸ್ಸರ್ವಂ ಪ್ರವರ್ತತೇ।

23. ಸೃಷ್ಟಿ: ಸ್ಥಿತಿ ಸ್ಸಂಹೃತಿಶ್ಚ ನಿಯಮೋ ಜ್ಞಾನಮಾವೃತಿಃ। ಬಂಧೋ ಮೋಕ್ಷಾ ಯತಃ।

24. ಸ ಬ್ರಹ್ಮಣಾ ವಿಸೃಜತಿ ಸ ರುದ್ರೇಣ ವಿಲಾಪಯತೀ –ಸೂತ್ರಭಾಷ್ಯಮ್.

25. ಲೋಕವತ್ತು ಲೀಲಾಕೈವಲ್ಯಮ್।

26. ಕುತೋ ದುಃಖಂ ಸ್ವತಂತ್ರಸ್ಯ ನಿತ್ಯಾನಂದೈಕರೂಪಿಣಃ।

27. ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ ವ್ಯಾಪ್ತಿಂಚ ಭೂತೇಷ್ವಖಿಲೇಷು ಚಾತ್ಮನಃ। ಅದೃಶ್ಯತಾತ್ಯದ್ಭುತರೂಪಮುದ್ವಹನ್ ಸ್ತಂಭೇ ಸಭಾಯಾಂ ನ ಮೃಗಂ ನ ಮಾನುಷಮ್॥

28. ಪಂಚಭೂತಾತ್ಮಕಂ ದೇಹಂ ವಿಷ್ಣೋಃ ಪಶ್ಯಂತ್ಯಯೋಗಿನಃ। ತಥಾ ನ ಯೋಗಿರಾದ್ಧಾಂತೋ ಜ್ಞಾನಂ ದೇಹೋ ಹರೇರಿತಿ ಷಾಡ್ಗುಣ್ಯೇ –ಭಾಗವತತಾತ್ಪರ್ಯೇ.

ಕೃಷ್ಣಾದ್ಯವತಾರಗಳಷ್ಟೇ ಜ್ಞಾನ, ಬಲ, ತೇಜಸ್ಸು ಉಂಟು. ಅವುಗಳಲ್ಲಿ ಭೇದ ಎಣಿಸುವುದು ತಾತ್ವಿಕ ಅಪರಾಧ; ಮಹಾಪಾಪಕರ. 'ನೇಹನಾ ನಾಸ್ತಿ ಕಿಂಚನ' ಎಂಬ ಶ್ರುತಿಯು ಹೊರಟಿರುವುದೇ ಈ ತತ್ತ್ವ ಘೋಷಣೆಗಾಗಿ. ಪರಮಾತ್ಮನ ಅವಯವಗಳಲ್ಲಿ, ಕ್ರಿಯೆಗಳಲ್ಲಿ, ಜ್ಞಾನದಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲ. ಪರಮಾತ್ಮನ ಕಾಲುಗಳು, ಕೈಗಳು ಬುದ್ಧಿ ಮತ್ತಿನ್ನೆಲ್ಲ ಅವಯವಗಳು ಮಾಡುವ ಕೆಲಸಗಳನ್ನೂ ಮಾಡುತ್ತವೆ. ಇದರಂತೆ ಉಳಿದ ಅವಯವಗಳು. ಅವನಿಗೂ ಅವನ ಗುಣಗಳಿಗೂ ಸಂಪೂರ್ಣ ಐಕ್ಯ. 'ಆನಂದಂ ಬ್ರಹ್ಮಣಃ' ಇತ್ಯಾದಿ ಪ್ರಯೋಗಗಳು ಅತ್ಯಂತ ಔಪಚಾರಿಕ. [29] ಆದ್ದರಿಂದಲೇ ಪೂರ್ಣನೆಂದು ಹೆಸರು. ಅವನು ಯಾವಾಗಲೂ ಅತ್ಯಂತ ಪೂರ್ಣ.[30]

ಆಚಾರ್ಯರ ಈ ಸುಂದರ 'ಈಶ್ವರ–ಕಲ್ಪನೆ'ಯು ಉಪನಿಷತ್ತು, ಗೀತಾ ಇತ್ಯಾದಿ ಸಕಲಶಾಸ್ತ್ರಗಳಿಗೂ ಪರಮ ಸಮ್ಮತವು. ಇಂತಹ ವಿಶಾಲವಾದ ಭಗವತ್ತತ್ತ್ವ ವಿವೇಚನೆ ಇನ್ನಾವ ದಾರ್ಶನಿಕರೂ ಮಾಡಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಇಂತಹ ಸ್ವಯಂ ಪರಿಪೂರ್ಣ ಬ್ರಹ್ಮನನ್ನು ವಿಚಾರಮಾಡಿದ ಆಚಾರ್ಯರು ಯಾವುದೋ ಒಂದು ಪಂಥಕ್ಕೆ ಸೇರಿದವರಲ್ಲ, ಅವರು ವೈದಿಕ ತತ್ತ್ವಗಳನ್ನು, ಶಾಸ್ತ್ರಪ್ರಮೇಯವನ್ನು ಯುಕ್ತಿಸಮ್ಮತವಾಗಿ ಜಗತ್ತಿಗೆ ತೋರಿಸಿಕೊಟ್ಟರು. ಅನಂತ ವೇದಗಳು ಅನಾದಿಕಾಲದಿಂದಲೂ ಸ್ತೋತ್ರಮಾಡುತ್ತಿದ್ದ ಪರಬ್ರಹ್ಮನ ಸ್ವರೂಪವನ್ನೇ ಆಚಾರ್ಯರು ಬಿಚ್ಚಿ ತೋರಿಸಿರುವರು. ಇದರ ಅಂತರಂಗವನ್ನರಿಯದೆ ಗಣಪತಿ, ಶಿವ, ಇತ್ಯಾದಿ ಇತರ ದೇವತೆಗಳಂತೆಯೇ ವಿಷ್ಣುವಿನ ಉಚ್ಛ್ರಾಯವನ್ನು ಆಚಾರ್ಯರು ಎತ್ತಿತೋರಿ ಆ ಪಂಥವನ್ನು ಹೂಡಿದರೆಂಬುದು ಅತ್ಯಂತ ಸಂಕುಚಿತ ದೃಷ್ಟಿ. ಪರಬ್ರಹ್ಮನ ಸ್ವರೂಪವೇನೆಂಬುದು ತಾತ್ತ್ವಿಕ ಪ್ರಶ್ನೆ. ಅವನು ಶೂನ್ಯಸದೃಶನೆಂದರು ಶಂಕರಾಚಾರ್ಯರು. ಅವನು ಸರ್ವಗುಣಪರಿಪೂರ್ಣ; ನಿರ್ದೋಷಿ ಎಂದರು ಆಚಾರ್ಯರು. ಜಗತ್ತಿಗೂ ಅವನಿಗೂ ಇರುವ ಸಂಬಂಧ ಮಿಥ್ಯಾಭೂತವೆಂದು ಶಂಕರಾಚಾರ್ಯರು ಹೇಳಿದರು. ಜಗತ್ತಿನಿಂದ ಅವನಿಗೇನೂ ಪ್ರಯೋಜನವಿಲ್ಲ. ಅವನಿಂದ ಸರ್ವಪ್ರಯೋಜನವೂ ಜಗತ್ತಿಗಿದೆ ಎಂದು ಆಚಾರ್ಯರು ಸಾಧಿಸಿದರು. ಹೀಗೆ ಅದ್ವೈತ ತತ್ತ್ವಪ್ರತಿಪಾದನೆಯಿಂದ ಬರಿದಾದ ಬ್ರಹ್ಮ, ಬ್ರಹ್ಮಾಂಡಗಳನ್ನು ಆಚಾರ್ಯರು ತುಂಬಿತೊಟ್ಟರು. ಚಿರಕಾಲದಿಂದ ಬಂದ ದರ್ಶನ ಸಮಸ್ಯೆಯನ್ನು ಈ ಪರಿಪೂರ್ಣ ಬ್ರಹ್ಮತತ್ತ್ವ ಪ್ರತಿಪಾದನೆಯು ಬಿಡಿಸಿತು. ತಾತ್ತ್ವಿಕವಾದ ಪರತತ್ತ್ವ

ಸ್ತ್ರೀಪುಂಮಲಾಭಿಯೋಗಾತ್ಮಾ ದೇಹೋ ವಿಷ್ಣೋರ್ನ ಜಾಯತೇ।
ಕಿಂತು ನಿರ್ದೋಷಚೈತನ್ಯಸುಖಾಂ ನಿತ್ಯಾಂ ಸ್ವಕಾಂ ತನುಮ್॥
ಪ್ರಕಾಶಯತಿ ಸೈವೇಯಂ ಜನಿರ್ವಿಷ್ಣೋರ್ನಚಾಪರಾ॥ —ತಾ.ನಿ.

29. ಅಭೇದೋ ಹರಿರೂಪಾಣಾಂ ಗುಣಾನಾಂ ಚ ಕ್ರಿಯಾಸು ಚ। —ಋಗ್ಭಾಷ್ಯಮ್

30. ಪೂರ್ಣಮಿದಂ ಪೂರ್ಣಮದಃ ಪೂರ್ಣಾತ್ಪೂರ್ಣಮದಚ್ಯುತೇ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥

ಹಾಗೂ ಮತೀಯವಾದ ಭಕ್ತನು, ಅರಸುವ ಸ್ವಾಮಿಯ ಕಲ್ಪನೆಯು ಆಚಾರ್ಯರು ಸಾಧಿಸಿ ತೋರಿಸಿದ ನಾರಾಯಣನಲ್ಲಿ ಪೂರ್ಣವಾಗಿ ರೂಪಗೊಂಡಿತು.

೩. ಜಗತ್ತು

ಆಚಾರ್ಯರು ಪರಬ್ರಹ್ಮನ ಕಲ್ಪನೆಯನ್ನು ಎಷ್ಟು ಸುಂದರವಾಗಿ, ಸಮ್ಮತವಾಗಿ ಮಾಡಿ ತೋರಿಸಿರುವರೋ, ಜಗತ್ತಿನ ನೈಜ ಚಿತ್ರವನ್ನೂ ಅಷ್ಟೇ ಸಮ್ಮತವಾಗಿ ಚಿತ್ರಿಸಿರುವರು. ಜಗತ್ತು ಸತ್ಯಭೂತವಾದದ್ದು, ಮಾಯಿಕವಲ್ಲ. ಇದರಲ್ಲಿ ಕಾಣಬರುವ ಜೀವ ಜಡರುಗಳು ಬರಿಯ ತೋರಿಕೆಯಲ್ಲ; ಪಾರಮಾರ್ಥಿಕವು. ಇಂತಹ ಸತ್ಯವಾದ ಜಗತ್ತು ಸ್ವತಂತ್ರನಾದ ಆ ಪರಬ್ರಹ್ಮನಿಗೆ ಯಾವಾಗಲೂ ಅಧೀನವಾದದ್ದು. ಇದು ಆಚಾರ್ಯರು ಜಗತ್ತತ್ತ್ವದ ಬಗ್ಗೆ ಹೇಳಿರುವ ಮುಖ್ಯಾಂಶ. ಸ್ವತಂತ್ರನಾದ ಬ್ರಹ್ಮ, ಅಸ್ವತಂತ್ರವಾದ ಜಗತ್ತು ಎಂದು ತತ್ತ್ವಗಳು ಎರಡೇ ವಿಧ.[31] ಜಗತ್ತು ಅಸತ್ಯ, ಸ್ವತಂತ್ರ ಆಕಸ್ಮಿಕವೆಂದು ಹೇಳುವರು ಅಜ್ಞಾನಿಗಳೆಂದು ಗೀತೋಕ್ತಿ.[32] ಈ ಜಗತ್ತು ಸತ್ಯವೇ ಅಲ್ಲವೆಂದು ಕೆಲವರ ವಾದ. ಇದು ಸತ್ಯವಾದರೂ ಪರಾಧೀನವಲ್ಲ; ಇದಕ್ಕೆ ಒಬ್ಬ ಈಶ್ವರನಿಲ್ಲ; ಇದೆಲ್ಲ ಸ್ವಾಭಾವಿಕವಾಗಿ ರೂಪಗೊಂಡುದೆಂದು ಮತ್ತೆ ಕೆಲವರ ವಾದ. ಆಧುನಿಕ ತತ್ತ್ವಶಾಸ್ತ್ರ ಪ್ರಪಂಚದಲ್ಲೂ Creative Evolutionists ಮತ್ತು Dialectical Materialists ಮೊದಲಾದವರು ಈ ಕಾಮಹೇತುಕ ವಾದವನ್ನು ಎತ್ತಿ ಸಾರುವರು. ಆದರೆ ಇವರ ಈ ವಾಕ್ಯಾರ್ಥದಲ್ಲಿ 'ಒಳಿತು ಕೆಡಕುಗಳ ಭೇದ–ವಿಷಮತೆ'ಗೆ ತಕ್ಕ ಸಮಾಧಾನವಿಲ್ಲವೆಂದು ಆಧುನಿಕ ಪಂಡಿತರನೇಕರು ಉತ್ತರ ಹೇಳುವರು. ಆಚಾರ್ಯರು ಇಂತಹ ಎಲ್ಲ ವಾದಕ್ಕೂ ಒಂದು ದೋಷವನ್ನು ಹೊರಿಸಿರುವರು. ಈ ಜಗತ್ತು ಪರಬ್ರಹ್ಮನ ವಶದಲ್ಲಿರದೆ ಸ್ವೇಚ್ಛಾನುಸಾರಿಯಾಗಿದ್ದರೆ, ಇದರಲ್ಲಿ ನಿತ್ಯಸುಖವೇಕಾಗುವುದಿಲ್ಲ?[33] ಇಲ್ಲಿ ವಿಷಮತೆಯೇಕೆ? ಇದು ದುರುದ್ಧರವಾದ ಪ್ರಶ್ನೆ. ಈ ಸತ್ಯಭೂತವಾದ ಜಗತ್ತು ಆ ಪರಬ್ರಹ್ಮನ ಅಧೀನವೆಂದ ಹೊರತು ದರ್ಶನದ ಮುಖ್ಯ ಪ್ರಶ್ನೆ ಬಗೆಹರಿಯದು.

ಜಗತ್ತಿನ ಅಸ್ವಾತಂತ್ರ್ಯವು ಕೇವಲ ಲಾಕ್ಷಣಿಕವಾದುದಾಗಲೀ, ಅಪ್ರಧಾನವಾಗಲೀ ಅಲ್ಲ. ಇದು ಸರ್ವಕಾಲದಲ್ಲಿಯೂ, ಸರ್ವರೀತಿಯಿಂದಲೂ ಪರಮಾತ್ಮನಿಗೆ ಅಧೀನ. ಅಂದರೆ ಅವನ ಅನುಗ್ರಹವಿದ್ದರೆ ಇದು ಇರಬಲ್ಲುದು. ಅದಿಲ್ಲದಿದ್ದರೆ ಇದಾವುದೂ

---

31. ಸ್ವತಂತ್ರಮಸ್ವತಂತ್ರಂ ಚ ದ್ವಿವಿಧಂ ತತ್ತ್ವಮಿಷ್ಯತೇ। ಸ್ವತಂತ್ರೋ ಭಗವಾನ್ ವಿಷ್ಣು:.....।
—ತತ್ತ್ವಸಂಖ್ಯಾನಂ.

32. ಅಸತ್ಯಮಪ್ರತಿಷ್ಠಂತೇ ಜಗದಾಹುರನೀಶ್ವರಮ್।
ಅಪರಸ್ಪರಸಂಭೂತಂ ಕಿಮನ್ಯತ್ಕಾಮಹೈತುಕಮ್॥ —ಗೀತಾ

33 ಯದಿ ನಾಮ ಪರೋ ನ ಭವೇತ್ಸ ಹರಿ: ಕಥಮಸ್ಯ ವಶೇ ಜಗದೇತದಭೂತ್। ಯದಿ ನಾಮ

ಇರಲಾರದು. ಇದು ಪರಮಾತ್ಮನ ಅನಂತ ಶಕ್ತಿಯನ್ನು ತೋರಿಸುವುದು [34] ಪರಮಾತ್ಮನ ಉಪೇಕ್ಷೆಯುಂಟಾದರೆ ದ್ರವ್ಯಾದಿ ಸಮಸ್ತ ಪದಾರ್ಥಗಳೂ ಹೇಳಹೆಸರಿಲ್ಲದೇ ಹೋಗುವುವು. ಹೀಗೆ ಹೇಳಿದ್ದರಿಂದ ಜಗತ್ತಿನ ಸತ್ಯತ್ವ ಔಪಚಾರಿಕವೆಂದ–ಹಾಗಾಗಲಿಲ್ಲ. ಜಗತ್ತಿನ ಸತ್ಯತ್ವ ಪರಮಾತ್ಮಾನಪೇಕ್ಷಿತವಲ್ಲ. ಪರಮಾತ್ಮ ಅನಂತಶಕ್ತನು ಹೇಗೋ ಹಾಗೇ ಸತ್ಯಸಂಕಲ್ಪನೂ ಹೌದು. ಅವನು ಅನಾದಿಕಾಲದಿಂದ ಪ್ರಪಂಚದ ಆಗುಹೋಗುಗಳಲ್ಲಿ ಯಾವ ಸಂಕಲ್ಪ ಮಾಡಿರುವನೋ ಅದರಂತೇಯೆ ನಡೆಯುತ್ತಿರುವುದು. ಅದು ಮುಂದೂ ಯಾವ ಕಾಲಕ್ಕೂ ವ್ಯತ್ಯಾಸವಾಗಲಾರದು. [35]

ಜಗತ್ತು ಜೀವಜಡಾತ್ಮಕವಾದದ್ದು. ಜೀವರುಗಳು ಅನಂತರು. ಜಡಪದಾರ್ಥವು ಅಸಂಖ್ಯಾಕವು. ಒಂದೊಂದು ಜೀವವು ಮತ್ತೊಂದು ಜೀವಕ್ಕಿಂತ ಅತ್ಯಂತ ಭಿನ್ನ. ಜಡದಿಂದಲೂ ಭಿನ್ನ. ಪರಮಾತ್ಮನಿಂದಲೂ ಭಿನ್ನ. ಜಡವೂ ಹೀಗೆ. ಅಂತೂ ಈಶ್ವರ –ಜೀವ–ಜಡ ಇವರುಗಳಲ್ಲಿನ ಪಂಚಭೇದವು ಅನಾದಿಯು, ಶಾಶ್ವತವು ಮತ್ತು ಸತ್ಯವು. ಪಂಚಭೇದಾತ್ಮಕವಾದ್ದರಿಂದಲೇ ಇದಕ್ಕೆ ಪ್ರಪಂಚವೆಂದು ಹೆಸರು. [36] ಪದಾರ್ಥಗಳಲ್ಲಿನ ಭೇದ ಪಾರಮಾರ್ಥಿಕವಷ್ಟೇ ಅಲ್ಲ, ಅದು ಧರ್ಮಿಸ್ವರೂಪ. ಅಂದರ ಚೈತ್ರನಲ್ಲಿ ಚೈತ್ರನಿಗಿಂತ ಭಿನ್ನರಾದವರೆಲ್ಲರ ಭೇದವೂ ಇದೆ. ಹಾಗೆಯೇ ಇತರ ಪದಾರ್ಥಗಳಲ್ಲಿಯೂ ಕೂಡ. ಪದಾರ್ಥಜ್ಞಾನವಾಗುವಾಗ ಇತರ ಭೇದವಿಶಿಷ್ಟವಾಗಿಯೇ ಆಗುವುದು. ಆದ್ದರಿಂದಲೇ ಆಚಾರ್ಯರು ಧರ್ಮ, ಧರ್ಮಿಗಳೆಲ್ಲ ಭಿನ್ನವಾದವೆಂದು ಹೇಳಿರುವರು. [37]

ಜಡಪದಾರ್ಥಗಳ ಮೂಲಕ್ಕೆ ಪ್ರಕೃತಿಎಂದುಹೆಸರು. ಇದಕ್ಕೆ ಲಕ್ಷ್ಮೀದೇವಿ ಅಭಿಮಾನಿದೇವತೆ. ಈಪ್ರಕೃತಿಯು ಸತ್ವರಜಸ್ತಮೋಗುಣವಿಶಿಷ್ಟವಾದುದು. ಸೃಷ್ಟಿಕಾಲದಲ್ಲಿ ಇದರಿಂದ ಅನುಕ್ರಮವಾಗಿ ಮಹತ್, ಅಹಂಕಾರಾದಿ ತತ್ತ್ವಗಳೂ, ಪಂಚಭೂತಗಳು, ಪಂಚತಾನ್ಮಾತ್ರ, ಪಂಚಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯಗಳು ವಿಕಸಿತವಾಗುವುವು. ಇದೇ ಜಡ ಪ್ರಪಂಚದ ರಚನೆ. ಪ್ರತಿಯೊಂದು ಪದಾರ್ಥಕ್ಕೂ, ಒಂದು ಕಾರಣವುಂಟು.

ನ ತಸ್ಯ ವಶೇ ಸಕಲಂ ಕಥಮೇವತು ನಿತ್ಯಸುಖಂ ನ ಭವೇತ್॥– ದ್ವಾದಶಸ್ತೋತ್ರಮ್.

34 ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ। ಯದನುಗ್ರಹತಸ್ಸಂತಿ ನ ಸಂತಿಯದುಪೇಕ್ಷಯಾ॥ —ಅನುವ್ಯಾಖ್ಯಾನಂ.

35. ವಿಶ್ವಂ ಸತ್ಯಂ ವಶೇ ವಿಷ್ಣೋರ್ನಿತ್ಯಮೇವ ಪ್ರವಾಹತಃ।
ನ ಕ್ವಾಪ್ಯನೀದೃಶಂ ವಿಶ್ವಂ ತತ್ತತ್ಕಾಲಾನುಸಾರತಃ॥ —ತತ್ತ್ವೋದ್ಯೋತಮ್.

36. ಪ್ರಪಂಚೋ ಭೇದಪಂಚಕಃ —ಮಾಂಡೂಕ್ಯಭಾಷ್ಯಮ್.

37. ಭಿನ್ನಾಶ್ಚ ಭಿನ್ನಧರ್ಮಾಶ್ಚ ಪದಾರ್ಥಾ ನಿಖಿಲಾ ಅಪಿ । —ಅನುವ್ಯಾಖ್ಯಾನಮ್.

✣ ✣ ✣

ಆ ಕಾರಣಕ್ಕೆ ಇನ್ನೊಂದು ಕಾರಣ. ಹೀಗೆ ಅನಾದಿ ಕಾರ್ಯ ಕಾರಣಭಾವದಿಂದ ಜಗತ್ತು ರಚಿತವಾಗಿದೆ. ಕಾರಣ ಎರಡು ವಿಧ. ಉಪಾದಾನ, ನಿಮಿತ್ತ ಎಂದು. ಒಂದು ವಸ್ತುವಿನ ವಿಕಾರದಿಂದಲೇ ಇನ್ನೊಂದು ವಸ್ತು ಉಂಟಾದರೆ ಅದೇ ಉಪಾದಾನ ಕಾರಣವಾಗುವುದು. ಘಟಕ್ಕೆ ಮಣ್ಣು ಉಪದಾನ ಕಾರಣ. ಹೀಗೆ ಆಗುವ ರಚನೆಗೆ ಒಬ್ಬ ಚೇತನ ವ್ಯವಸ್ಥಾಪಕನಾಗಿರಬೇಕು. ಕುಲಾಲನ ಹೊರತಾಗಿ ಘಟವಾಗಲಾರದು. ಈ ಕುಲಾಲನೇ ಘಟಕ್ಕೆ ನಿಮಿತ್ತಕಾರಣ. ಹೀಗೆಯೇ ಜಗತ್ತಿನ ಕಾರ್ಯಕಾರಣ ಸಂಬಂಧದಲ್ಲಿ ಪರಮಾತ್ಮ ಮುಖ್ಯ ನಿಮಿತ್ತಕಾರಣನು. ಅಷ್ಟೇ ಅಲ್ಲ; ಪ್ರತಿ ಜಡಪದಾರ್ಥದಲ್ಲೂ ಅವನು ಅಂತರ್ಯಾಮಿಯಾಗಿದ್ದು ಅದರ ವ್ಯಾಪಾರವನ್ನು ಮಾಡುವನು. ಅಗ್ನಿಯಲ್ಲಿದ್ದು ಅದಕ್ಕೆ ಔಷ್ಣ್ಯವೆಂಬ ಗುಣವ್ಯಂಜಕನಾಗಿರುವನು. ವಾಯುವಿನಲ್ಲಿಯ ವೀಜನಕ್ರಿಯೆಯನ್ನು ನಡೆಸುವನು. ಆ ಪದಾರ್ಥಗಳಲ್ಲಿ ತಾನು ಮಾತ್ರ ಇರುವನೆಂದಲ್ಲ, ಅವುಗಳಿಗೆಲ್ಲ ಅವಾಂತರ ಅಭಿಮಾನಿ ದೇವತೆಗಳೂ ಇರುವರು. ಪರಮಾತ್ಮನ ಆಜ್ಞಾಪ್ರಕಾರವಾಗಿ ಇವರು ಆಯಾ ಪದಾರ್ಥಗಳಲ್ಲಿದ್ದು ಆಯಾ ಕ್ರಿಯೆಗಳನ್ನು ನಡೆಸುವರು. ಬೆಂಕಿಯಲ್ಲಿ ಅಗ್ನಿದೇವತೆಯೂ, ಜಲದಲ್ಲಿ ವರುಣದೇವತೆಯೂ ಅಧಿಷ್ಠಾತೃಗಳಾಗಿರುವರು. [38]

ಹೀಗೆ ಆಚಾರ್ಯರು ಚೇತನಾಧಿಷ್ಠಿತ ಪ್ರಪಂಚವನ್ನು ಸಾಧಿಸಿ ತೋರಿಸಿದರು. ಶ್ರುತಿಗಳಿಂದ ಇದನ್ನು ಸಮರ್ಥನೆ ಮಾಡಿದರು. ಇದರಿಂದ ಜಡ ಪ್ರಪಂಚಕ್ಕೂ ಪರಮಾತ್ಮನಿಗೂ ಇರುವ ನಿಕಟ ಬಾಂಧವ್ಯವು ವ್ಯಕ್ತಪಡುವುದು.

ಚೇತನರಲ್ಲಿ ಮುಖ್ಯವಾಗಿ ತಾರತಮ್ಯವನ್ನು ಲಕ್ಷದಲ್ಲಿಡಬೇಕು. ಭೇದವು ಧರ್ಮಿಸ್ವರೂಪವಾದ ಮೇಲೆ ಪ್ರತಿಯೊಬ್ಬ ಜೀವನ ಯೋಗ್ಯತೆಯಲ್ಲೂ ತರತಮಭಾವವೇರ್ಪಡುವುದು. ಇದು ಚತುರ್ಮುಖ ಬ್ರಹ್ಮದೇವರಿಂದ ಹಿಡಿದು ತೃಣಪರ್ಯಂತವಾಗಿ ಇರತಕ್ಕದ್ದು. ಜೀವರುಗಳಲ್ಲಿ ಸತ್ವ, ರಜಸ್. ತಮೋ ಭೇದಗಳುಂಟು,

---

38 We do not mean that the mountain stream is self-conscious as it sings, or that the precious stone glows with emotion; We mean to suggest that there may be throughout all the world a something interfused which is not discerned by those scientific methods that catch matter and energy. It slips through the meshes of their net. We mean that there may be in the crystal and the waterfall the analogue of what we call mind in ourselves,. Perhaps all the objects of sense- experience have a meta-kinetic as well as a kinetic side, a mental as well as a physical. Perhaps everything is like a dome with a concave as well as a convex side. Perhaps everything is like a shield, with its side of silver and its side of gold.

-Sir ARTHUR THOMPSON
Science & Religion. P. 44

ಸಾತ್ವಿಕ ಜೀವರುಗಳಿಗೆ ನಿಯಮೇನ ಭಗವತ್ಪ್ರಾಪ್ತಿರೂಪ ಮೋಕ್ಷವೂ, ರಾಜಸರಿಗೆ ಅಂದರೆ ನಿತ್ಯಸಂಸಾರಿಗಳಿಗೆ ಸುಖ ದು:ಖ ಮಿಶ್ರಫಲವೂ, ತಾಮಸರಿಗೆ ಭಗವದ್ವಿರೋಧದಿಂದ ಅಂಧಂ ತಮಸ್ಸು ಪ್ರಾಪ್ತವಾಗುವುದು.[39]

ಜೀವರುಗಳು ಪರಮಾತ್ಮನಿಗೆ ಪ್ರತಿಬಿಂಬರು. ಇದು ಆಚಾರ್ಯರ ಸಿದ್ಧಾಂತದ ವೈಶಿಷ್ಟ್ಯ. ಪರಿದೃಶ್ಯಮಾನವಾದ ಜಗತ್ತಿಗೂ, ಅಂತ್ಯತತ್ತ್ವ(ಈಶ್ವರ)ಕ್ಕೂ ಇರುವ ಸಂಬಂಧವೇನೆಂಬುದು ತತ್ತ್ವಶಾಸ್ತ್ರದ ಅತಿ ಮುಖ್ಯವಾದ ಸಮಸ್ಯೆ. ವಿಜ್ಞಾನವಾದಿಗಳಲ್ಲಿ ಮೊದಲಿಗನಾದ ಪ್ಲೇಟೋ ಈ ಕಾಣುವ ಜಗತ್ತಿಗೆ ಒಂದು ಧ್ಯೇಯ, ಒಂದು ಆದರ್ಶಬೇಕು. ಅದೇ ಪರಬ್ರಹ್ಮವೆನ್ನುವನು. ಅನುಭವಕ್ಕೆ ವಿಷಯವಾಗುವ ಜಗತ್ತು ಭಟ್ಟಿಮಾಡಿ ಭಾವನಾ ಪ್ರಪಂಚಕ್ಕೆ ಇಳಿಸಿದಲ್ಲಿ, ಅನೇಕ 'ಭಾವನೆ'ಗಳು ಹೊರಪಡುವುವು. ಸಂಕುಚಿತವಾದ ಭಾವನೆಗಳು ವಿಶಾಲವಾದ ಭಾವನೆಗಳಲ್ಲಿ ಐಕ್ಯಹೊಂದುವುವು. ಇದು ಕೊನೆಯವರೆಗೂ ಸಾಗಿ ಕೊನೆಗೆ ನಿಲ್ಲುವ ವಿಶಾಲಭಾವನೆಯೇ (Idea) ಬ್ರಹ್ಮ. ಈ ಅದ್ವೈತವಾದವನ್ನು ಪ್ಲೇಟೋ ಸೂಚಿಸಿದ ಪ್ರೀತಿಸುವ ವಸ್ತುವಿಗೂ, ಪ್ರೀತಿಸುವವನಿಗೂ ಇರುವ ಸಂಬಂಧದಂತೆ ಜಗತ್ತು – ಬ್ರಹ್ಮರುಗಳಿಗಿರುವ ಸಂಬಂಧವೆಂದು ಅವನ ಶಿಷ್ಯನಾದ ಅರಿಸ್ಟಾಟಲನು ಹೇಳಿದನು.[40] ಜೀವ ಜಡಗಳೆಂಬ ಅತ್ಯಂತ ಭಿನ್ನವೂ, ಪರಸ್ಪರ ಅನಪೇಕ್ಷಿತವೂ ಆದ ಎರಡು ಪದಾರ್ಥಗಳ ಸಂಯೋಜಕನೇ ದೇವರೆಂದು ಡೇಕಾರ್ಟನು ಹೇಳುವನು. ಸ್ಪಿನೋಜಾ, ಲೀಬ್ನಿಟ್ಸ್, ಕ್ಯಾಂಟ್, ಹೀಗಲ್ಲರು ಅದ್ವೈತವಾದವನ್ನು ಮುಂದೊಡ್ಡಿದರು. ಅದ್ವೈತದ ಪರಾಕಾಷ್ಠದೆಸೆಗೆ ಒಯ್ದುವನು ಬ್ರಾಡ್ಲೆ. ದೇವರಿಗೂ ಜಗತ್ತಿಗೂ ಅದೆಂತೋ (somehow) ಸಂಬಂಧವಾಗಿದೆ ಎಂದು ಇವನು ಹೇಳಿಬಿಟ್ಟ. ಇದು ಶ್ರೀ ಶಂಕರಾಚಾರ್ಯರ ಅವಿದ್ಯೆಯಷ್ಟೇ ದುರ್ಘಟವಾದದ್ದು.

ಭಾರತ ದರ್ಶನದಲ್ಲಿಯೂ ಇದು ಬೃಹತ್ ಪ್ರಶ್ನೆಯೇ. ಸಾಂಖ್ಯರ 'ಪುರುಷ' ನಿಷ್ಪ್ರಯೋಜಕನಾಗಿ ಗಾದೆಯ ಮಾತಾಗಿಬಿಟ್ಟ. ನೈಯ್ಯಾಯಿಕರ ಈಶ್ವರ ಪರಿಮಿತಗುಣವುಳ್ಳವನಾದ. ಮೀಮಾಂಸಕರ ಕರ್ಮವು ಈಶ್ವರನನ್ನೂ ಬದ್ಧಪಡಿಸಿತು.

---

39 ತತ್ವಜ್ಞಾನ್ಮುಕ್ತಿಭಾಜಃ ಸುಖಯಸಿ ಹಿ ಗುರೋ ಯೋಗ್ಯತಾತಾರತಮ್ಯಾತ್
ಆಧತ್ಸೇ ಮಿಶ್ರಬುದ್ಧೀನ್ ತ್ರಿದಿವನಿರಯಭೂಗೋಚರಾ ನ್ನಿತ್ಯಬದ್ಧಾನ್।
ತಾಮಿಸ್ರಾಂಧಾದಿಕಾಖ್ಯೇ ತಮಸಿ ಸುಬಹುಲಂ ದುಃಖಯಸ್ಯನ್ಯಥಾಜ್ಞಾನ್
ವಿಷ್ಣೋರಾಜ್ಞಾಭಿರಿತ್ಥಂ ಶ್ರುತಿಶತಮಿತಿಹಾಸಸಾದಿ ಚಾಕರ್ಣಯಾಮಃ ॥ –ವಾಯುಸ್ತುತಿಃ

ii ಅಸೂರ್ಯಾನಾಮ ತೇ ಲೋಕಾ ಅಂಧೇನ ತಮಸಾ ವೃತಾಃ ।
ತಾಂಸ್ತೇ ಪ್ರತ್ಯಾಭಿಗಚ್ಛಂತಿ ಏಕೇಚಾತ್ಮಹನೋಜನಾಃ ॥

40 God on Aristatle's view, exists and is related to the world, but only as the world is related to the lover. God is the object of the world's desire.
--God & Evil P.P. 230

ಅದ್ವೈತದಲ್ಲಂತೂ ಮಾಯೆಯ ಆಶ್ರಯದಿಂದ ಈಶ್ವರ ತಲೆಮರೆಸಿಕೊಳ್ಳುವಂತಾಯಿತು. ಎಲ್ಲ ದರ್ಶನಗಳನ್ನು ಸಾಮಾನ್ಯವಾಗಿ ಎರಡೇ ಬಗೆಯಾಗಿ ವಿಂಗಡಿಸಬಹುದು. ಅದ್ವೈತಪರವಾದ ದರ್ಶನಗಳಲ್ಲಿ ಜಗತ್ತು ಮಿಥ್ಯೆಯೆಂದು ಹೇಳಿದರೂ ಬ್ರಹ್ಮನನ್ನು ಸತ್ಯವೆಂದು ಒಪ್ಪಬೇಕು. ಆಗ ಸತ್ಯ ಮಿಥ್ಯೆಗಳು ತಾತ್ತ್ವಿಕವಾಗಿ ವಿರೋಧಕೋಟಿಗೆ ಸೇರಿದವಾದ್ದರಿಂದ ಅವುಗಳ ಸಂಬಂಧ ಯಾವ ರೀತಿಯಲ್ಲಾದರೂ 'ದುರ್ಘಟ'ವಾಗಿಯೇ ಉಳಿಯುವುದು. ಜಗತ್ತನ್ನೂ ಸತ್ಯವೆಂದು ಒಪ್ಪಿ, ಪರಮಾತ್ಮನನ್ನೂ ಒಪ್ಪಿದ್ದಲ್ಲಿ ಅವರಿಬ್ಬರ ಸಂಬಂಧದ ಪ್ರಶ್ನೆಯು ಇನ್ನೂ ಜಟಿಲವಾಗುವುದು. ಪರಮಾತ್ಮ ಎಲ್ಲ ವಿಷಯಗಳಲ್ಲಿಯೂ ಶಕ್ತ. ಜಗತ್ತಿನ ಆಗುಹೋಗುಗಳೆಲ್ಲ ಅವನ ಇಚ್ಛಾಧೀನವೆಂದರೆ ಜಗತ್ತಿನ ಸತ್ಯತೆಯು ಔಪಚಾರಿಕವಾಗುವುದು ಎಂದು ಜಗತ್ಸತ್ಯತ್ವವಾದಿಗಳೆಲ್ಲ ಹೆದರಿ, ಜಗತ್ತಿನ ವಿಷಯದಲ್ಲಿ ಪರಮಾತ್ಮನ ಶಕ್ತಿಯನ್ನೂ ಸಂಕುಚಿತಗೊಳಿಸಲೆತ್ನಿಸುವರು. ಶ್ರೀ ರಾಮಾನುಜಾಚಾರ್ಯರು ವಿಶಿಷ್ಟ ಪದಾರ್ಥಗಳನ್ನು ತೆಗೆದುಕೊಂಡು– 'ದೇಹಿ ದೇಹಿ ನ್ಯಾಯ'ದಿಂದ ಜಗತ್ತಿಗೆ ಪರಮಾತ್ಮ ಉಪಾದಾನಕಾರಣನೆಂದು ಹೇಳಿ ಈ ಪ್ರಶ್ನೆಯನ್ನು ಬಗೆಹರಿಸಲು ಸೂಕ್ಷ್ಮವಾದ ಯುಕ್ತಿಯನ್ನು ಉಪಯೋಗಿಸಿದರು. ಆದರೆ ಇದರ ಮೇಲೂ ಅಪರಿಹಾರ್ಯವಾದ ಸಂದೇಹಗಳು ತಲೆಯೆತ್ತುವುವು. ದೇವರು ಸರ್ವಶಕ್ತನಾಗಿದ್ದರೂ ಚಿಂತೆ ಇಲ್ಲ. ಅವನು ಕಲ್ಯಾಣಗುಣಪೂರ್ಣನಾಗಲಿ, ಅವನಿಗೆ ಜಗತ್ತಿನ ಕೆಡುಕಿನ ಮೇಲೆ ಅಧಿಕಾರವಿರದೆ ಹೋಗಲಿ ಎಂದು ನೂತನ ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರು ವಿಚಾರಮಾಡಿರುತ್ತಾರೆ.

ಈ ಪ್ರಶ್ನೆಯಬಗೆಗೆ ಆಚಾರ್ಯರು ದೀರ್ಘವಾದ ಲಕ್ಷ್ಯಕೊಟ್ಟಿರುತ್ತಾರೆ. ಅವರ ಅಭಿಪ್ರಾಯ ಹೀಗಿದೆ :–ಚೇತನರೆಲ್ಲ ಪರಮಾತ್ಮನಿಗೆ ಸರ್ವ ವಿಧದಿಂದಲೂ ಅಧೀನರು. ಪರಮಾತ್ಮ ಜೀವರುಗಳ ಸತ್ತಾಪ್ರದ. [41] ಅಂದರೆ ಜೀವರುಗಳಿಗೆ ಸ್ವರೂಪ ಕೊಡು–ತ್ತಾನೆಂದಲ್ಲ. ಜೀವರು ಪರಮಾತ್ಮನಿಗೆ ಕಾಲತಃ ಸಮರು.[42]

ಆದರೂ ಸಂಪೂರ್ಣವಾಗಿ ಅಧೀನರು. ಅಂದರೆ ಅವರ ಸ್ವರೂಪ, ಪ್ರಮಿತಿ ಮತ್ತು ಪ್ರವೃತ್ತಿ ಇವೆಲ್ಲ ಪರಮಾತ್ಮನ ಇಚ್ಛಾಧೀನವಾದದ್ದು.[43] ಜೀವರ ಅಧೀನತ್ವವನ್ನು

---

41 ಪದ್ಮಾಪದ್ಮಾಸನಾನಂತ ಪ್ರಭೃತೀದಂ ಯದಿಚ್ಛಯಾ।
ಸತ್ತಾದಿ ಲಭತೇ ದೇವಃ ಪ್ರೀಯತಾಂ ಶ್ರೀಪತಿ ಸ್ಸ ಮೇ ॥ —ತತ್ತ್ವಸಂಖ್ಯಾನಮ್.

42 ಯಾವತ್ಪರಮಾತ್ಮಾ ತಿಷ್ಠತ್ಯನಾದ್ಯಮಂತತ್ವೇನ
ಏವಂ ಜೀವೋಪಿ॥ – ಬ್ರ. ಸೂ. ಭಾಷ್ಯಮ್

43 ಸ್ವರೂಪಪ್ರಮಿತಿಲಕ್ಷಣ ಸತ್ತಾತ್ರೈವಿಧ್ಯೇ ಪರಮಾನೇಪೇಕ್ಷಂ
ಸ್ವತಂತ್ರಮ್; ತದಪೇಕ್ಷಮತ್ವತಂತ್ರಮ್। – ತತ್ತ್ವಸಂಖ್ಯಾನಮ್.

ಹೇಳುವುದಕ್ಕಾಗಿಯೇ ಪರಮಾತ್ಮನನ್ನು ಸತ್ತಾಪ್ರದನೆನ್ನುವರು. ಆದ್ದರಿಂದ ಪರಮಾತ್ಮನು ಜೀವರುಗಳಿಗೆ ಉಪಾದಾನಕಾರಣನೂ ಅಲ್ಲ; ಜೀವಾಭಿನ್ನನೂ ಅಲ್ಲ. ಒಂದು ವಸ್ತುವಿನ ಪಡಿನೆಳಲಿದ್ದಂತೆ ಜೀವ ಪರಮಾತ್ಮನಿಗೆ. ಇದರಿಂದಲೇ ಕೆಲವು ಸಲ ಜೀವನಿಗೂ ಪರಮಾತ್ಮನಿಗೂ ಅಭೇದವು ಹೇಳಲ್ಪಡುತ್ತದೆ. ಮೊಸರು ಮಾರುವವಳನ್ನು 'ಮೊಸರು' ಎಂದು ಕರೆದಂತೆ ಇದರ ತಾತ್ಪರ್ಯ.[44]

ಪರಮಾತ್ಮ ಜೀವರುಗಳನ್ನು ನಾಶಮಾಡಿಬಿಡಬಹುದು. ಅವರನ್ನು ಹೊಸದಾಗಿ ಹುಟ್ಟಿಸಬಹುದು. ಇಂತಹ ಶಕ್ತನಾದ ಮೇಲೆ ಭಗವಂತ ಒಂದು ನಿಯಮವನ್ನೇಕೆ ಅಪೇಕ್ಷಿಸುತ್ತಾನೆಂದರೆ, ಅವನು ಸರ್ವಶಕ್ತನಾದರೂ ಕಾರಣಗಳನ್ನು ಇಟ್ಟುಕೊಂಡೇ ಸೃಷ್ಟ್ಯಾದಿ ವ್ಯಾಪಾರವನ್ನು ಮಾಡುತ್ತಾನೆ. ಇದು ಪರಮಾತ್ಮನ ವೈಭವವನ್ನು ತೋರಿಸುವುದು[45] ಈಗಿರುವ ನಿಯಮವನ್ನು ನೋಡಿದರೆ ಪರಮಾತ್ಮ ಸರ್ವಶಕ್ತನೇ? ಎಲ್ಲ ಜೀವರುಗಳು ತಮ್ಮ ಇಚ್ಛಾಪ್ರಕಾರವಾಗಿ ನಡೆಯುವುದಿಲ್ಲವೇ? ಎನಿಸುವುದು. ಪರಮಾತ್ಮನ ಅಧಿಕಾರ ಜಗತ್ತಿನ ರೀತಿಯನ್ನು ಹೊರತಾದುದಲ್ಲ. ಭಗವಂತ ಜೀವರ ವ್ಯಾಪಾರಗಳಿಗೆಲ್ಲ ಪ್ರೇರಕನಾಗಿರುವನು. ಆದ್ದರಿಂದಲೇ ಇಂತಹ ಸರ್ವನಿಯಂತೃತ್ವ ಅವನ ಐಶ್ವರ್ಯದ್ಯೋತಕವಾಗಿರುವುದು[46]. "ಯುಕ್ತೇಃಶಬ್ದಾಂತರಾಚ್ಚ" ಎಂಬ ಸೂತ್ರ ವ್ಯಾಖ್ಯಾನಾವಸಾರದ ಭಾಷ್ಯದ ಟೀಕೆಯಲ್ಲಿ ಇದನ್ನೇ ಸಮರ್ಥಿಸಿರುವರು.[47]. ಆದ್ದರಿಂದ ಜೀವರುಗಳ ಅಸ್ತಿತ್ವವು ಪರಮಾತ್ಮನ ಅಧೀನವಾದರೂ, ಸ್ವಾಭಾವಿಕವಾದ ಜೀವರುಗಳ ಸ್ವರೂಪ, ಪ್ರಮಿತಿ, ಪ್ರವೃತ್ತಿ ಇವುಗಳಿಗೆ ಯಾವ, ಅಡ್ಡಿಯೂ ಇಲ್ಲ. ಅಷ್ಟೇ ಅಲ್ಲ; ಅವುಗಳಿಗೆ ಪ್ರೇರಕಶಕ್ತಿಯಾಗಿರುವವನು ಪರಮಾತ್ಮನೇ. ಜೀವರು ಈಗ ಹೀಗೆ ಬದುಕಿರುವುದು ಪರಮಾತ್ಮನ ಅನುಗ್ರಹದಿಂದ. ಜೀವನಿಗೆ ಇರುವ ಇಚ್ಛಾ, ಪ್ರಯತ್ನಾದಿ ಧರ್ಮಗಳು ಅವನ ಇಚ್ಛೆಯಿಂದ—ಆದರೆ ಜೀವರ ಸ್ವಭಾವಾನುಗುಣವಾಗಿ

---

44 ಯದಧೀನಾ ಯಸ್ಯ ಸತ್ತಾ ತತ್ತದಿವ್ಯೇವ ಭಣ್ಯತೇ। ವಿದ್ಯಮಾನೇ ವಿಭೇದೇಽಪಿ
ಮಿಥೋ ನಿತ್ಯಂಸ್ವರೂಪತಃ॥ ನ ಹಿ ತದಧೀನಂ ಪೃಥಗಿತ್ಯೇ ವೋಚ್ಯತೇ॥ ಭಾ.1.6.2
— ಬೃಹದ್ಭಾಷ್ಯಮ್. iv.4-14.

ಪಾರಮಾರ್ಥಿಕಸತ್ಯತ್ವಂ ಸ್ವಾತಂತ್ರ್ಯಮಭಿಧೀಯತೇ।
ತದ್ವಿಷ್ಣೋರೇವ ನಾನ್ಯಸ್ಯ ತದನ್ಯೇಷಾಂ ಸದಾಸ್ತಿತಾ ॥ —ಭಾ.ತಾ. xi.4-172

45. ಸಾಧನಾನಾಂ ಸಾಧನತ್ವಂ ಯದಾತ್ಮಾಧೀನಮಿಷ್ಯತೇ।
ತದಾ ಸಾಧನಸಂಪತ್ತಿಃ ಐಶ್ವರ್ಯದ್ಯೋತಿಕಾ ಭವೇತ್ ॥—ಸೂ.ಭಾ.ii. 1.39.

46. ನನು ಶಕ್ತಸ್ಯಾಪಿ ಪರಮೇಶ್ವರಸ್ಯ ತನ್ನಿಯಮಾನುಸಾರೇಣೇಚ್ಛಾ ಕುತ ಇತಿ ಚೇತ್‌ಕಿಂ ಕಾರಣಂ ಪೃಚ್ಛಸಿ? ಉತ ಜ್ಞಾಪಕಂ? ಆದ್ಯೇ ಸ್ವಭಾವೋಽಯಮಿತಿ ಬ್ರೂಮಃ; ದ್ವಿತೀಯೇತು ಶ್ರುತಿ ಪ್ರಸಿದ್ಧೇರಿತಿ। —ನ್ಯಾಯಸುಧಾ. ii .299.

47. ತತಸ್ತತ್ಸಾಚಿವ್ಯಮತಿಶಯೇನ ಐಶ್ವರ್ಯದ್ಯೋತಕಮೇವ।

ಹೊರಸೂಸಿದವು. ಆದ್ದರಿಂದಲೇ ಪರಮಾತ್ಮ ಜೀವರ ಬಿಂಬನೆನ್ನುವುದು.[48] ಈಬಿಂಬಪ್ರತಿಬಿಂಬಭಾವ ವಿಚಿತ್ರವಾದದ್ದು. ಲೋಕದಲ್ಲಿ ಬಿಂಬಕ್ಕೂ ಪ್ರತಿಬಿಂಬಕ್ಕೂ ನಡುವೆ ಉಪಾಧಿಯು ಅತ್ಯಂತ ಮುಖ್ಯವು. ಉಪಾಧಿಯನ್ನೇ ಪ್ರತಿಬಿಂಬವು ಅವಲಂಬಿಸಿರುವುದು. ಉಪಾಧಿ ನಾಶವಾದರೆ ಪ್ರತಿಬಿಂಬವೂ ನಾಶವಾಗುವುದು. ಆದರೆ ಜೀವ ಬ್ರಹ್ಮರುಗಳ ಸಂಬಂಧದಲ್ಲಿ ಉಪಾಧಿಯೇ ಇಲ್ಲ. ಜೀವರಿಗೆ ಪರಮಾತ್ಮ ನಿರುಪಾಧಿಕ ಬಿಂಬ. ಅಂದರೆ ಪರಮಾತ್ಮನಿಗೆ ಇವರು ಅಧೀನ ಎಂದರ್ಥ. ಇದರಿಂದಲೇ ಪರಮಾತ್ಮನ ಅಂಶ ಜೀವ ಎಂಬುವ ವ್ಯವಹಾರವೂ ರೂಢವಾಗಿರುವುದು.[49] "ತದ್ಗುಣ ಸಾರತ್ವಾತ್ತು ತದ್ವ್ಯಪದೇಶಃ ಪ್ರಾಜ್ಞವತ್" ಎಂಬ ಸೂತ್ರದಲ್ಲಿ ಪರಮಾತ್ಮನಿಗೂ ಜೀವರಿಗೂ ಉಪನಿಷದ್ವಾಕ್ಯಗಳಲ್ಲಿ ಅಭೇದವನ್ನು ಹೇಳಿರುವುದರ ಉದ್ದೇಶವನ್ನು ಸೂಚಿಸಿರುವರು.[50] ಆದ್ದರಿಂದ ಚೇತನತ್ವೇನ ಪರಮಾತ್ಮನ ಜಾತಿಗೆ ಸೇರಿದ ಜೀವನು ಅನಾದಿಕಾಲದಿಂದಲೂ ಅವನಿಗೆ ಅತ್ಯಂತ ಅಧೀನನಾಗಿರುವುದರಿಂದಲೂ, ಆಯಾ ಜೀವನಲ್ಲಿ ಪರಮಾತ್ಮನು ಆಯಾ ರೂಪದಲ್ಲೇ ಇದ್ದು ಅವರವರ ಸ್ವಭಾವ, ಗುಣ, ಧರ್ಮ ಕ್ರಿಯಾದಿಗಳನ್ನು ಮಾಡಿಸುವುದರಿಂದ ಪರಮಾತ್ಮನಿಗೆ ಬಿಂಬನೆಂದೂ, ಜೀವರುಗಳಿಗೆ ಪ್ರತಿಬಿಂಬರೆಂದೂ ಹೆಸರು. ಈ ವಿಶೇಷ ರೀತಿಯ ಬಿಂಬ ಪ್ರತಿಬಿಂಬ ಭಾವವನ್ನು ಆಚಾರ್ಯರು ಉಪದೇಶಿಸಿದರು. ಬ್ರಹ್ಮ ಜೀವರುಗಳ ಇಂತಹ ಅದ್ಯಧೀನ ಭಾವವು ಅಭೇದಕ್ಕೆ ಎಂದಿಗೂ ಎಡೆಗೊಡುವುದಿಲ್ಲ. "ಅದ್ಯಧೀನ ಭಾವವು ಅಭೇದದಲ್ಲೇ ಪರ್ಯವಸಾನ ಹೊಂದುವುದು. ವಸ್ತು ಸತ್ಯವೆಂದ ಮೇಲೆ ಸ್ವತಂತ್ರವೂ ಆಗಿರಬೇಕು. ನಿರಪೇಕ್ಷ ಸ್ವಾತಂತ್ರ್ಯವು ವಸ್ತುವಿನ ಸತ್ಯತ್ವಕ್ಕೆ ಮುಖ್ಯ ಧರ್ಮ. ಪರಿಮಿತವಾದ

---

48 ಜೀವಃ ಸರ್ವದಾ ಹರ್ಯಧೀನ ಪ್ರವೃತ್ತಿಮಾನ್ ತದಾಭಾಸೋಽಪಿ ಹರಿಪ್ರತಿಬಿಂಬಭೂತಶ್ಚ। —ತತ್ವಮಂಜರೀ.37

49 ರೂಪಂ ರೂಪಂ ಪ್ರತಿರೂಪೋ ಬಭೂವ ವದಸ್ಯ ರೂಪಂ। ಪ್ರತಿಚಕ್ಷಣಾಯ।

50 ತಥಾ ಚ ಈಶ್ವರವಜ್ಜೀವೋಽಪಿ ಜ್ಞಾನಾದಿಮಾನಿತಿ ಕೃತ್ವಾ ಆದಿತ್ಯೋ ಯೂಪಃ ಸಿಂಹಶ್ಚೈತ್ರ ಇತ್ಯಾದಿವದಭೇದಶ್ರುತಿಃ ಸಾದೃಶ್ಯಾದಭೇದಪರೇತ್ಯುಕ್ತಂ ಭವತಿ। —ತತ್ವಮಂಜರೀ.36

ii. ಭಿನ್ನತ್ವ ತದಧೀನತ್ವ ತತ್ಸದೃಶ್ಶೈರೇವ ಸೂರ್ಯಕಾದ್ಯುಪಮಾ ನತೂಪಾಧ್ಯಧೀನತ್ವಾದ್ವಿನಾ । —ಸೂತ್ರಭಾಷ್ಯಮ್ iii 2.18

iii. ಜೀವಸ್ಯ ಪರಮೇಶ್ವರಾಂಶತ್ವಂ ತು, ತತ್ಸಾದೃಶ್ಯಂ ತದಧೀನಸತ್ತಾದಿಮತ್ವಂ ಚೇತ್ಯರ್ಥ: । —ನ್ಯಾಯಸುಧಾ.ii.p 343

iv ತತ್ಸಂಬಂಧಿತ್ವಮೇವ ತದಂಶತ್ವಮಿತಿ ವಕ್ಷ್ಯಾಮ: । ತ.ಪ್ರ II. 343

v. ತತ್ತ್ವಮಸೀತಿ ವಾಕ್ಯೇನ ಪರಮಾತ್ಮಸಾದೃಶ್ಯವಿಶೇಶ: ಪ್ರತಿಪಾದ್ಯತೇ। —ತತ್ತ್ವೋದ್ಯೋತಟೀಕಾ

ಯಾವುದೇ ಧರ್ಮವಾಗಲಿ ಆತ್ಯಂತಿಕವಾಗಿ ಸತ್ಯತ್ವಕ್ಕೆ ಹಾನಿ'' ಎಂದು ಅದ್ವೈವಾದಿಗಳು ಆಕ್ಷೇಪಮಾಡುವರು. ಇದಕ್ಕೆ ಆಚಾರ್ಯರೊಬ್ಬರೇ ಯುಕ್ತಿಯುಕ್ತವಾಗಿ ಉತ್ತರ ಕೊಟ್ಟಿರುವರು. ಅದ್ವೈತಿಗಳು ಮೇಲೆಹೇಳಿದ ಅಕ್ಷೇಪಗಳ "ಅದ್ವೈತ ವ್ಯವಹಾರ''ಕ್ಕೆ ಸರಿಹೋಗುವುವು.[51] ಪರಾಧೀನವಾದ ವಸ್ತು ಸತ್ಯವೇ ಅಲ್ಲವೆಂದು ಹೇಳುವುದು ಯುಕ್ತಿಬಾಹಿರವು. ಸತ್ಯವೆಂದರೆ ಭಾಗವತತಾತ್ಪರ್ಯೋಕ್ತಿಯಂತೆ– 'ಸದಾಸ್ತಿತಾ' ಅಥವಾ 'ಅಬಾಧ್ಯ' ಅಂದರೆ– 'ತ್ರೈಕಾಲಿಕನಿಷೇಧಾಪ್ರತಿಯೋಗಿ' ಸರ್ವ ಕಾಲದಲ್ಲೂ ಇರುವುದು' ಎಂಬ ಈ ಧರ್ಮ ಪರಮಾತ್ಮನಿಗೆಷ್ಟಿದೆಯೋ ಜೀವರುಗಳಿಗೂ ಅಷ್ಟೇ ಇದೆ. ತತ್ತ್ವವು 'ಸ್ವತಂತ್ರ' 'ಅಸ್ವತಂತ್ರ' ಎಂದು ಎರಡು ವಿಧವು. ಅಂದರೆ 'ತತ್ತ್ವವು' ಸ್ವತಂತ್ರ ಪದಾರ್ಥಕ್ಕೆ ಅನ್ವಯಿಸುವಷ್ಟೇ ಅಸ್ವತಂತ್ರ ಪದಾರ್ಥಕ್ಕೂ ಅನ್ವಯಿಸುವುದು. ಅಧೀನತೆಯು ಪದಾರ್ಥದ ಸ್ವರೂಪವನ್ನು ಹಾಳು ಮಾಡಲಾರದು. ಜೀವ ಬ್ರಹ್ಮರುಗಳ ಸಂಬಂಧವನ್ನು ಸ್ಪಷ್ಟಪಡಿಸುವುದಕ್ಕೇ ಬಿಂಬಪ್ರತಿಬಿಂಬಭಾವವನ್ನು ಆಚಾರ್ಯರು ತೋರಿಸಿರುವರು.

ಜೀವರ ಸತ್ಯತ್ವ ವಿಚಾರ ಹೇಗೋ ಹಾಗೆಯೇ ಅವರ ಕರ್ತೃತ್ವ ವಿಚಾರವೂ ಸಹ. ಜಡಕ್ಕಿಂತ ಚೇತನ ಭಿನ್ನವಾಗಿರುವುದು ಅದರಲ್ಲಿರುವ ಕ್ರಿಯೆಯಿಂದ. ಕ್ರಿಯೆ ಚೇತನರ ಮುಖ್ಯಧರ್ಮ.[52] ಇದು ಅನಾದಿ ಕಾಲದಿಂದಲೂ ನಡೆದುಬಂದುದು ಮತ್ತು ಅನಂತ ಕಾಲದವರೆಗೂ ನಡೆಯತಕ್ಕದ್ದು. ಆದರೆ ಇಂತಹ ಕ್ರಿಯೆ ಅವನಿಂದ ಸ್ವತಂತ್ರವಾಗಿ ನಡೆಯುವುದೇ? ಅದರ ಫಲಾಫಲಗಳಿಗೆ ಅವನು ಬಾಧ್ಯನೇ ಎಂಬ ಪ್ರಶ್ನೆಯು ಸಹಜವಾಗಿ ಉದ್ಭವಿಸುವುದು. ಜೀವ ತನ್ನ ಅಸ್ತಿತ್ವಕ್ಕೂ ಸ್ವತಂತ್ರನಲ್ಲದ ಮೇಲೆ ಅವನಿಗೆ ಯಾವ ವ್ಯಾಪಾರಮಾಡುವ ಯೋಗ್ಯತೆಯೂ ಇಲ್ಲದಂತಾಯಿತು. ಅಂದಮೇಲೆ ಪರಮಾತ್ಮನ ಪ್ರೇರಣೆಯಿಂದಲೇ ಎಲ್ಲ ವ್ಯಾಪಾರಗಳೂ ನಡೆಯುತ್ತವೆ. ಜೀವ ಅದಾವುದಕ್ಕೂ ಕರ್ತೃವಲ್ಲ. ಫಲಾಫಲಗಳಿಗೂ ಅವನು ಬಾಧ್ಯನಾಗಬಾರದೆಂದು ಕೆಲವರ ವಾದ. ಇದು ಸಂಗತವಲ್ಲ. ಜೀವರುಗಳಿಗೆ ಯಾವ ವ್ಯಾಪಾರಮಾಡುವುದಕ್ಕೂ ಸ್ವಾತಂತ್ರ್ಯವಿಲ್ಲದಿದ್ದರೂ, ಅವರು ಮಾಡುವ ವ್ಯಾಪಾರವೆಲ್ಲ ಅವರ ಸ್ವರೂಪಕ್ಕನುಸರಿಸಿಯೇ ಇರತಕ್ಕದ್ದು. ಇಲ್ಲದಿದ್ದರೆ ಜಗತ್ತಿನಲ್ಲಿ ಭಿನ್ನಪ್ರವೃತ್ತಿಗಳು ಕಂಡುಬರುತ್ತಿರಲಿಲ್ಲ. ಪರಮಾತ್ಮ ಅನಾದಿಕರ್ಮಕ್ಕನುಸಾರವಾದ ಜೀವರುಗಳ ಪ್ರವೃತ್ತಿಗೆ ಪ್ರೇರಕನಾಗಿ ಅದನ್ನು ಉದ್ಬೋಧನಮಾಡುವನು. ಆದ್ದರಿಂದಲೇ ಅದರ ಫಲಾಫಲಗಳು ಜೀವನಿಗೆ ಸಲ್ಲತಕ್ಕದ್ದು.

---

51 ಅದ್ವೈತಂ ಪರಮಾರ್ಥತಃ ಯದದ್ವೈತಂ ನಾಮೋಚ್ಯತೇ ತತ್ಪರಮಾರ್ಥತಃ
ಭಗವದೇಕ್ಷಯಾ ಇತ್ಯರ್ಥಃ – ಛಾಂದೋಗ್ಯ ಭಾಷ್ಯಂ॥

ii ಪರಮಾರ್ಥಿಕ ಸತ್ಯತ್ವಂ ಸ್ವಾತಂತ್ರ್ಯಮಭಿಧೀಯತೇ।
ತದ್ವಿಷ್ಣೋರೇವ ನಾನ್ಯಸ್ಯ ತದನ್ಯೇಷಾಂ ಸದಾಸ್ತಿತಾ ॥ –ಭಾ. ತಾ. xi 24-17

52 ನ ಹಿ ಕಶ್ಚಿತ್‌ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ॥ –ಗೀತಾ.

"ಕರ್ತಾಶಾಸ್ತ್ರಾರ್ಥವತ್ವಾತ್" ಎಂಬ ಸೂತ್ರದಲ್ಲಿ ಬಾದರಾಯಣರು ಜೀವ ಕರ್ತೃತ್ವವನ್ನು ಸಮರ್ಥಿಸಿರುವರು. ಜೀವ ಕರ್ತೃವಲ್ಲದಿದ್ದಲ್ಲಿ ವಿಧಿ–ನಿಷೇಧಗಳನ್ನು ಬೋಧಿಸುವ ಶಾಸ್ತ್ರಗಳು ವ್ಯರ್ಥವಾಗುವುವು. [53]

ಯಾವುದು ಒಳಿತು ಯಾವುದು ಕೆಡಕು ಎಂಬುದನ್ನು ಜೀವ ಆರಿಸಿಕೊಳ್ಳಬಲ್ಲ. ಅದರಂತೆಯೇ ಭಗವದಧೀನನಾಗಿ ಕ್ರಿಯೆಯನ್ನು ಮಾಡಬಲ್ಲ. ಸ್ವಾತಂತ್ರ್ಯವಿಲ್ಲದ್ದರಿಂದ ಅವನನ್ನು ಕರ್ತೃವಲ್ಲವೆಂದು ಹೇಳಬೇಕೆಂದರೆ, ತನ್ನ ಇಚ್ಛೆಗನುಸಾರವಾದ ಕ್ರಿಯೆಯನ್ನು ಭಗವದಧೀನನಾಗಿಯಾದರೂ ಮಾಡುತ್ತಾನಾದ್ದರಿಂದ ಕರ್ತೃತ್ವದ ಹೊಣೆಯು ಅವನ ಮೇಲೇ ಇರುವುದು.[54] "ಯಥೇಚ್ಛಸಿ ತಥಾ ಕುರು" ಎಂಬ ಗೀತಾವಾಕ್ಯದಲ್ಲಿ ಇಚ್ಛಾಪ್ರಯತ್ನಗಳು ಜೀವನದೆಂಬುದು ಧ್ವನಿತವಾಗಿದೆ.[55] ಇದು ಅನಾದಿ ಕರ್ಮಕ್ಕನುಗುಣವಾಗಿ ಉಂಟಾಗುವುದೆಂಬುದು ಮುಂದಿನ ವಾದ. ಆದರೆ ಈ ಅನಾದಿ ಕರ್ಮವೂ ಪರಮಾತ್ಮಾಧೀನವೇ ಆದ್ದರಿಂದ ಜೀವರ ಭಿನ್ನ ಕರ್ಮಕ್ಕೂ ಅವನೇ ಕಾರಣನಾದಂತಾಯಿತು . [56] ಇದರಿಂದ ಪಕ್ಷಪಾತವು ಅಂದರೆ ವೈಷಮ್ಯ ನೈರ್ಘೃಣ್ಯವು ಅವನಿಗೆ ಬಂದೊದಗಿತೆಂಬ ಆಕ್ಷೇಪವು ಸಹಜವಾಗಿ ತೋರುವುದು. ಆದರೂ ಈ ಬಗೆಯ ವೈಷಮ್ಯ ನೈರ್ಘೃಣ್ಯವು ದೋಷವಲ್ಲ.[57] ಜೀವರುಗಳ ಅನಾದಿಕರ್ಮಾನು

---

53. ಜೀವಸ್ಯ ಕರ್ತೃತ್ವಾಭಾವೇ ಶಾಸ್ತ್ರಸ್ಯ ಅಪ್ರಯೋಜಕತ್ವಪ್ರಾಪ್ತೇಃ ಜೀವೋಽಪಿ ಕರ್ತಾ ಅಸ್ತ್ಯೇವ ಜೀವಸ್ಯಾಪಿ ಕರ್ತೃತ್ವಮ್। —ತ.ಪ್ರ.

54. ಸ್ವಾತಂತ್ರ್ಯಾಭಾವಾಪೇಕ್ಷಯೈವ ಜೀವಸ್ಯ ಅಕರ್ತೃತ್ವಮ್:—"ಸ್ಪಂದನಂ ಯಥಾ ಪಿತ್ರಾಕಾರಿತಂ ಶಿಶುಕರ್ತೃಕಮ್। ಏವಂ ಪೂಜಾ ವಿಷ್ಣ್ವಧೀನಾ ಭವೇಜ್ಜೀವಕೃತೇತ್ಯಪಿ ॥"

ಪ್ರವೃತ್ತೇ ಯಥಾ ಪಿತೃದತ್ತಂ ಪಾಲಕತ್ವಂ ರಾಜಪುತ್ರಾಣಾಮೇವಂ ಪರಮಾತ್ಮದತ್ತಂ ಕ್ರಿಯಾಸ್ವಾತಂತ್ರ್ಯಲಕ್ಷಣಂ– ಕರ್ತೃತ್ವಮ್ । —ಗೀ–ತಾ–ವಿ–679.

ಜೀವಃ ಸದಾ ತದ್ವಶಗಸ್ಸನ್ ಕರ್ತಾ ನ ತ್ವೀಶವತ್ಸ್ವತಂತ್ರಸ್ಸನ್ ಕರ್ತೇತ್ಯರ್ಥಃ। (ಜೀವಃ ತದ್ವಶಗಸ್ಸದಾ) ಅತ್ರ ಸದೇತ್ಯುಕ್ತಿಃ ಜಕ್ಷನ್ ಕ್ರೀಡನ್ ಇತಿ ಮುಕ್ತಾವಪಿ ಕರ್ತೃತ್ವ ಶ್ರವಣೇನ ನ ಕದಾಚಿನ್ನಿವರ್ತತೇ ಇತಿ ಕರ್ತೃತ್ವಂ ತಾತ್ವಿಕಮಿತಿ ವಕ್ತುಮ್ ॥ – ತಂತ್ರದೀಪಿಕಾ.37

55. ಯಥೇಚ್ಛಸಿ ತಥಾ ಕುರು। —ಗೀತಾ

56. ಕರ್ಮಾದೀನಾಂ ಸತ್ವಸ್ಯಾಪಿ ತದಧೀನತ್ವಾತ್.

57. ನ ಪುನರ್ವೈಷಮ್ಯಾದ್ಯಾಪಾತೇನ ದೋಷಃ। ತಾದೃಶ ವೈಷಮ್ಯಾದೇರುಪಲಭ್ಯಮಾನತ್ವಾತ್* ಯದಿ ಕರ್ಮಸತ್ತಾಪಿ ತದಧೀನಾ ತರ್ಹಿ ತದಪೇಕ್ಷಾನಾಮನಪೇಕ್ಷೈವಾರ್ಥಾದ್ಭವತಿ। ತಥಾ ಚ ಪುನರ್ವೈಷಮ್ಯಾದ್ಯಾಪಾತಸ್ಸ್ಯಾತ್। ತಥಾಚ ದೋಷತ್ವಮಿತಿ ಚೇನ್ನ। ಸ್ವಾಧೀನಕರ್ಮಸಾಪೇಕ್ಷಯಾ ಫಲದಾನಸ್ಯ ವೈಷಮ್ಯಾದೇರೀಶ್ವರೇಽದೋಷತಯೈವ– ಶ್ರುತಾನವುಪಲಭ್ಯಮಾನತ್ವಾದಿತಿಭಾವಃ। ಏವಂ ತರ್ಹಿ ಕರ್ಮಸಾಪೇಕ್ಷಾಪಿ ನಿಷ್ಫಲಾ; ತದಭಾವೇಽಪಿ ದೋಷಾಭಾವ ಸಂಭವಾದಿತಿ ಚೇನ್ನೈವಮ್। ಕರ್ಮಾನಪೇಕ್ಷತ್ವೇ ವೇದಾಪ್ರಾಮಾಣ್ಯಪ್ರಸಂಗಾತ್। —ತತ್ತ್ವಪ್ರಕಾಶಿಕಾ.

ಗುಣವಾಗಿಯೇ ಪರಮಾತ್ಮನು ಜೀವರುಗಳನ್ನು ವ್ಯಾಪಾರಮಾಡಿಸುವನು. ಈ ಅನಾದಿಕರ್ಮವು ಪರಮಾತ್ಮಾಧೀನವಾದರೂ ಶುಭಾಶುಭ ನಿಯಂತೃವಾದ್ದರಿಂದ ಪರಮಾತ್ಮನಿಗೆ ಅಂತಹ ವೈಷಮ್ಯವು ದೋಷವಲ್ಲ ಮತ್ತು ಅನಾದಿ ಕರ್ಮ ನಿಷ್ಫಲವೆಂಬುದೂ ಅಂಗೀಕಾರಾರ್ಹವಲ್ಲ. ಇದು ಶ್ರುತಿಗಳಿಗೆ ಅಸಮ್ಮತ.[58]

ಒಟ್ಟಿನಲ್ಲಿ ಪರಮಾತ್ಮನು ಜಡ ಮತ್ತು ಜೀವ–ಇವರುಗಳ ಸ್ವಭಾವಕ್ಕನುಗುಣವಾದ ಧರ್ಮಗಳನ್ನು ಅವರುಗಳಲ್ಲಿ ಪ್ರಕಾಶಕ್ಕೆ ತರುವನು. ಇದೇ ಇತರ ಸಿದ್ಧಾಂತಗಳಲ್ಲಿ ಚರ್ಚಿತವಾಗದ ವಿಷಯ. ಇಷ್ಟು ಅಸ್ವಾತಂತ್ರ್ಯಬಂದರೂ ಜಡ ಮತ್ತು ಜೀವರುಗಳಿಗೆ ವ್ಯಕ್ತಿತ್ವ ಹೋಗಲಾರದು. ಎಲ್ಲ ಜಡ ಮತ್ತು ಚೇತನರುಗಳ ಅಸ್ತಿತ್ವಾದಿಗಳು ಅವನ ಅಧೀನವಾದರೂ ಪರಸ್ಪರ ಭಿನ್ನವಾಗಿವೆ. ಅಷ್ಟೇ ಅಲ್ಲ; ಅವು ಸ್ವತಂತ್ರವಾಗಿವೆಯೇನೋ ಎಂದು ತೋರುವುದು. ಆದ್ದರಿಂದಲೇ ಪ್ರತಿಯೊಂದು ಪದಾರ್ಥವೂ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವುದೆಂದು ಕೆಲ ಆಧುನಿಕರು ವಾದಿಸುವರು. ಆದರೆ ಸ್ವಭಾವವಾದವನ್ನು ಸತ್ಯವೆಂದು ಒಪ್ಪಿಕೊಂಡಲ್ಲಿ ಜೀವರು ತಮಗೆ ಅಹಿತವಾದ ವ್ಯಾಪಾರವನ್ನೇ ಅನೇಕ ಸಲ ಮಾಡುವುದರಿಂದ ಇವರಿಗೆ ಅಧೀಶ್ವರನಾಗಿ ದೇವರು ಇರುವನೆಂದು ಒಪ್ಪಿಕೊಳ್ಳ ಬೇಕಾಗುವುದು. ಜೀವ ಬ್ರಹ್ಮರ ಪ್ರತಿಬಿಂಬ–ಬಿಂಬಭಾವ. ದೇವರ ಅಂತರ್ಯಾಮಿತ್ವ ಇವೆರಡೂ ಆಚಾರ್ಯರ ತತ್ತ್ವಶಾಸ್ತ್ರದ ವೈಶಿಷ್ಟ್ಯ.

---

58 ವೈಷಮ್ಯಂ ನಿರ್ಘೃಣತ್ವಂ ಚ ವೇದಾ ಪ್ರಾಮಾಣ್ಯಕಾರಕಮ್
ನಾಂಗೀಕಾರ್ಯಮತೋನ್ಯಸ್ತು ನ ವೈಷಮ್ಯಾದಿನಾಮಕಮ್॥ —ಅನುವ್ಯಾಖ್ಯಾನಮ್

ದ್ವಿವಿಧಂ ಖಲ್ವಿದಂ ವೈಷಮ್ಯಂ ನಿರ್ಘೃಣತ್ವಂ ಚ । ಏವಂ
ಕರ್ಮಾದ್ಯನಪೇಕ್ಷತಾ ಪ್ರತ್ಯುಕ್ತಮ್। ತತ್ರಾದ್ಯಂ ವೇದಾಪ್ರಾಮಾಣ್ಯಕಾರಕತ್ವೇನ
ದೂಷಣತ್ವಾ ನ್ನಾಂಗೀಕರ್ತುಮುಚಿತಮ್।
ವೇದೋ ಹಿ ಧರ್ಮಂ ಸುಖಸಾಧನಂ ಅಧರ್ಮಂ ದುಃಖಸಾಧನಮಾಹ।
ತತ್ರ ಯದೀಶ್ವರೋ ಧರ್ಮಾವನಪೇಕ್ಷ್ಯ ವಿಷಮೋ ನಿರ್ಘೃಣಶ್ಚ ಸ್ಯಾತ್, ತದಾ
ವೇದೋದಿತ ಧರ್ಮಾಧರ್ಮಯೋಃ ಸುಖದುಃಖ ಸಾಧನಮತ್‌ಸ್ಯಾತ್।
ತಥಾಚ ಕಥಂ ತಸ್ಯ ಪ್ರಾಮಾಣ್ಯಂ ಸ್ಯಾತ್? ಅತಃ ಸೂತ್ರಕಾರೇಣ ಕರ್ಮಾದಿ
ಸಾಪೇಕ್ಷತಾ ಪಕ್ಷಮುರರೀಕೃತ್ಯ ತತ್ಪರಿಹೃತಮ್। ಅತೋನ್ಯಸ್ತು ದ್ವಿತೀಯಂ
ವೈಷಮ್ಯಂ ನೈರ್ಘೃಣ್ಯಂ ಚ ನ ವೈಷಮ್ಯಾದಿ ನಾಮಕಂ; ದೋಷರೂಪಂ ನ ಭವತೀತಿ
ಯಾವತ್। —ನ್ಯಾಯಸುಧಾ

ವಿಷಮತ್ವಂ ತು ದೋಷಾಯ ಶುಭಾಶುಭವಿಪರ್ಯಯೇ।
ಅತಸ್ತಾದೃಶವೈಷಮ್ಯಂ ಬ್ರಹ್ಮಸೂತ್ರೇ ನಿರಾಕೃತಮ್॥
ಶುಭಾಶುಭ ನಿಯಂತೃತ್ವಂ ನ ದೋಷೋ ಗುಣ ಏವ ಸಃ।
ಅತಸ್ತದಿಷ್ಟಂ ಕೃಷ್ಣಸ್ಯ ಬ್ರಹ್ಮಸೂತ್ರಕೃತೋ ವಿಭೋಃ ॥ — ಭಾ. ತಾ. vii -18-12

3. ಸಾಧನೆ

ಮತಗಳಲ್ಲಿ ಮುಖ್ಯ ಪ್ರಮೇಯವಾದ ಈಶ್ವರ–ಜಗತ್ತಿನ ವಿಷಯಗಳನ್ನು ಹೇಳಿದ ಮೇಲೆ ಅದನ್ನು ಸ್ಥಿರಪಡಿಸಲು ದೃಗ್ಗೋಚರವಾದ ಪ್ರಯೋಗಗಳು ಬೇಕು. ಪರಮಾತ್ಮ–ಸರ್ವಜ್ಞ, ಸರ್ವಶಕ್ತ. ಜೀವರುಗಳ ಸುಹೃತ್ತಮ, ಜೀವರು ಅವನ ಅಧೀನರು–ಅಲ್ಪಜ್ಞರು ಎಂಬ ತತ್ತ್ವ ನಿಶ್ಚಯವಾಗುವುದು ಈ ಉಭಯ ವಿಷಯ ಅನುಭವಕ್ಕೆ ಬಂದಮೇಲೆ. ಈಗಿರುವ ಪರಿಸ್ಥಿತಿಯಲ್ಲಿ ಪರಮಾತ್ಮನ ಅನುಭವ ಜೀವರುಗಳಿಗೆ ಆಗುವುದು ದೂರದ ಮಾತು. ಶಾಸ್ತ್ರದಲ್ಲಿ ಉಕ್ತವಾದಂತಹ ಜೀವರುಗಳ ಧರ್ಮಗಳೂ ಅವರ ಅನುಭವಕ್ಕೆ ಗೋಚರವಾಗುತ್ತಿಲ್ಲ. ಜೀವರು ಪರಮಾತ್ಮನಂತೆ ಸಚ್ಚಿದಾನಂದ ಸ್ವರೂಪರು. ಪ್ರಾಕೃತ ಬಂಧವನ್ನು ಕಳೆದುಕೊಳ್ಳಬಲ್ಲರು ಎಂಬುದು ಪುಸ್ತಕದ ಅನುಭವವಾಗಿರುವುದು 'ಧರ್ಮದ' ವಿವಿಧ ವಿಚಾರ ಮಾಡಿರುವ ಬ್ರಹ್ಮಮೀಮಾಂಸಾ ಶಾಸ್ತ್ರದಲ್ಲೇನೋ ಜೀವರ ನೈಜ ಸುಖಾನುಭವದ ವಿಷಯ–ಬ್ರಹ್ಮಸಾಕ್ಷಾತ್ಕಾರ ಪಡೆಯುವ ರೀತಿಯನ್ನು ಅಂದರೆ, ಜೀವನ ಸಾಧನ ಕ್ರಮವನ್ನು ವಿವರವಾಗಿ ತಿಳಿಸಿರುವರು ಮತ್ತು ಅದರಂತೆ ಅನುಷ್ಠಾನಮಾಡಿ ಆಯಾ ಫಲಗಳನ್ನು ಪಡೆದ ಸಜ್ಜೀವರುಗಳ ಇತಿಹಾಸವು ಉಕ್ತವಾಗಿರುವುದು. ಇದು ಎಲ್ಲ ಧರ್ಮಗಳಲ್ಲೂ ಉಕ್ತವಾಗಿರುವುದು. ಹೀಗೆ ಅನೇಕ ಜೀವಿಗಳು ಆತ್ಮದರ್ಶನ ಪಡೆದ ನಿದರ್ಶನದಿಂದಲೇ ಮಹಾಜನರಲ್ಲಿ ಧಾರ್ಮಿಕಮನೋಭಾವನೆಯು ಜಾಗೃತವಾಗಿ ಭಗವದ್ವಿಷಯವು ಸತ್ಯವೆಂಬ ಭಾವನೆ ಉಳಿದಿರುವುದು.[59] ಭಗವತ್ಸಾಕ್ಷಾತ್ಕಾರದ. ವಿಷಯ ಶ್ರುತಿಗಳೂ ವಿಶೇಷವಾಗಿ ಹೇಳಿವೆ.[60] ಆದ್ದರಿಂದ ಭಗವದ್ದರ್ಶನವು ಎಲ್ಲ

---

59 What religion reports, you must remember, always purports to be a fact of experience; the divine is actually Present, religion says, and between it and ourselves relations of give and take are actual. If definite perceptions of facts like this cannot stand on their own feet, surely abstract resoning cannot give them the support they are in need of. Conceptual processes can class facts, define them, interpret them; but they do not produce them, nor can they reproduce their individuality. There is always a plus, a thisness, which feeling alone can answer for.

--Varieties of Religious Experience.

ii First hand experience of a divine and Higher presence are as old as human personality. -Mystical Religion.

iii All religions depend for their origin and continuance directly upon inspiration, that is to say upon direct intercourse.

--Religion of Primitive People 52.

60 ಆತ್ಮಾವಾರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ ।
ಪೂಷನ್ನೇಕರ್ಷೇ ಯಮ ಸೂರ್ಯ ಪ್ರಜಾಪತ್ಯ ವ್ಯೂಹ ರಶ್ಮೀನ್ ಸಮೂಹ।

ಮತಗಳಲ್ಲೂ ಅತಿ ಮುಖ್ಯವಾದ ಸಿದ್ಧಿ. ಇಂತಹ ಸಿದ್ಧಿಯನ್ನು ಪಡೆದವರ ನಿದರ್ಶನವನ್ನು ಎಲ್ಲ ಮತಗಳೂ ತೋರಿಸುವುವು. " ಮತಗಳು ಮನುಷ್ಯನ ಮನೋರಾಜ್ಯದ ಕಲ್ಪನೆಯಿಂದ ಹೊರಸೂಸಿದವು. ಮನುಷ್ಯ ತನ್ನ ಅನುಕೂಲಕ್ಕಾಗಿ ಮತಗಳನ್ನು ಸೃಷ್ಟಿಸಿಕೊಂಡ.'' ಎಂಬ ಅಧುನಿಕ ಪಂಡಿತರ ವಾದವು ಇಂತಹ ನಿದರ್ಶನಗಳಿಂದ ದೂರತೋಪಾಸ್ತವಾಗುವುದು. ಬಡವರ ಮೇಲೆ ಬಲ್ಲಿದರು ನಡೆಸುವ ದಬ್ಬಾಳಿಕೆಗೆ ಮತವೂ ಒಂದು ಸಾಧನವೆಂದ (Dialectical Materialism) ತರ್ಕಬದ್ಧ ಭೌತವಾದವೂ ನಿರಸ್ತವಾಗುವುದು. ಈ ಅಧುನಿಕರು ಹೇಳುವಂತೆ ಮತಗಳು ಕಲ್ಪಿತವಾದಲ್ಲಿ, ಅದರಿಂದ ಭಗವದ್ದರ್ಶನಾದಿ ಫಲಗಳುಂಟಾಗುತ್ತಿರಲಿಲ್ಲ. ದೇವರು, ಧರ್ಮ, ಪುಣ್ಯ ಪಾಪಗಳಲ್ಲಿ ನಂಬಿಕೆ, ಐಹಿಕ ಪ್ರಪಂಚದಲ್ಲಿ ಜಿಹಾಸೆ, ಇದಕ್ಕನುಸಾರವಾದ ಸಾಧನೆ–ಇದರಿಂದ ಪರಮಾತ್ಮಪ್ರಾಪ್ತಿ ರೂಪವಾದ ಫಲ ಉಂಟಾಗುವುದೆಂಬುದು ಆಮ್ಲ ಜಲಜನಕಗಳ ಸರಿಯಾದ ಸಂಯೋಗದಿಂದ ನೀರುಂಟಾಗುವಷ್ಟೇ ಸಹಜಸಾಧ್ಯವೆಂದ ಮೇಲೆ ಆ ಮತೀಯವಿಚಾರಗಳೆಲ್ಲ ಸತ್ಯವೆಂಬುದು ಸ್ಥಿರಪಡುವುದು.

i. ವೈರಾಗ್ಯ

ಈ ಜಗತ್ತಿನಲ್ಲಿ ಸುಖಸಾಧನೆಗಳನ್ನು ಎಷ್ಟೇ ಹೆಚ್ಚಿಸಿ, ಈ ಲೋಕವನ್ನು ನಂದನವನವನ್ನಾಗಿ ಮಾಡುವ ಪ್ರಯತ್ನ ಕೈಕೊಂಡರೂ, ಇದರ ಆಗುಹೋಗುಗಳನ್ನು ಸಂಪೂರ್ಣವಾಗಿ ವಿಚಾರಮಾಡಿಕೊಂಡ ಯಾವೊಬ್ಬ ವಿವೇಕಿಗೂ ಈ ಜಗತ್ತಿನ ನಿಯಮ, ರೀತಿ–ನೀತಿಗಳ ಬಗ್ಗೆ ತೀವ್ರ ಅತೃಪ್ತಿ ಮೂಡದೇ ಇರದು. ಇದಕ್ಕೆ ಎರಡು ಕಾರಣಗಳು. ಈ ಜಗತ್ತೆಲ್ಲ ಅಶಾಶ್ವತವಾದದ್ದು ಮತ್ತು ಮನುಷ್ಯನ ಜೀವಿತವೂ ಅಶಾಶ್ವತವು. ಮನುಷ್ಯ ತನ್ನ ಸುಖಕ್ಕೆಂದು ಮಾಡಿಕ್ಕೊಂಡುದು ಅವನ ದುಃಖಕ್ಕೆ ಕಾರಣವಾಗುವುದು. ಇದರ ಅರಿವಾದಂತೆ ವೈರಾಗ್ಯ ಮೂಡುವುದು. ಕೇವಲ ಪೂರ್ವ ವಯಸ್ಸಿನಲ್ಲೇ ತನ್ನ ಬ್ರಹ್ಮ ತೇಜಸ್ಸಿನ ಬಲದಿಂದ ಮೃತ್ಯುದೇವತೆಯನ್ನು ಕಂಡು ಅಲ್ಲಿ ಭಗವದ್ವಿಚಾರವನ್ನು

ತೇಜೋ ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ । –ಈಶಾವಾಸ್ಯ.
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ। – ಕಠ
ತೇ ಧ್ಯಾನಯೋಗಾನುಗತಾ ಅಪಶ್ಯನ್। –ಶ್ವೇತಾಶ್ವತರ.

It will be found that men of pre-eminent saintliness agree very closely in what they tell us. They tell us that they have arrived at an unshakable conviction not based on inference but on immediate experience, that God is a spirit with whom the human spirit can hold intercourse; that in him meet all that they can imagine of goodness, truth and beauty, that they can see his footprints everywhere in nature and feel his presence within them as the very life of their life.

--Lectures of Christian Mysticism. P. 326

ಪ್ರಾರಂಭಿಸಿದ ದಿಟ್ಟ ನಚಿಕೇತನು ಯಮನು ಐಹಿಕ ಪ್ರಲೋಭಗಳನ್ನೇನು ತೋರಿಸಿದರೂ ಅದನ್ನೆಲ್ಲ ಅಲ್ಲಗಳೆದು ಬ್ರಹ್ಮಜ್ಞಾನವನ್ನೇ ಬಯಸಿದ. ಐಹಿಕ ಪ್ರಲೋಭನಗಳ ದೋಷಗಳನ್ನು ತೋರಿದ.[61] ಆದ್ದರಿಂದ ವಿವೇಕಿಗೆ ವಿಷಯದಲ್ಲಿ ವೈರಾಗ್ಯ ಹುಟ್ಟುವುದು ಸಹಜ. ಈ ಜಿಹಾಸೆಯೊಡನೆ "ದೇವರು–ಧರ್ಮ'' ಇವುಗಳಲ್ಲಿ ಶ್ರದ್ಧೆಯು ಬೆಳೆಯುವುದು. ವಿಷಯ ವೈರಾಗ್ಯದಿಂದ ಅರ್ಧ ಪ್ಲಾವಿತವಾದ, ಅಂತ:ಕರಣವು ಪಾರತ್ರಿಕಸಾಧನಾಂಗವಾದ ವೇದವಿಹಿತ ಸತ್ಕರ್ಮಾನುಷ್ಠಾನಕ್ಕೆ ಎಡೆ ಇಡುವುದು. ಈ ಸತ್ಕರ್ಮಾಚರಣೆಯು ಸೈನಿಕನ ಕವಾಯಿತಿನಂತೆ ಬರಡಲ್ಲ. ಅದರ ರಹಸ್ಯವನ್ನರಿತು ಅದರಲ್ಲಿ ತೊಡಗುವವನಿಗೆ ಕರ್ಮಯೋಗಿಯೆಂದು ಹೆಸರು.

ii. ಕರ್ಮ.

ಯೋಗ್ಯನಾದ ಜೀವಿಯ ಸ್ವರೂಪವು ಆನಂದಮಯವಾಗಿದ್ದರೂ, ಅನಾದಿ ವಾಸನಾವಿಶೇಷದಿಂದ ಅಜ್ಞಾನಾವೃತವಾಗಿ ಸಲ್ಲದ ವಿಷಯಗಳಾದ ಐಹಿಕ ಸುಖ ಸಂಪತ್ತುಗಳಲ್ಲಿ ಮನಸೋತಿರುವುದು. ವಿಚಾರಶೀಲರಿಗೆ ನಿಜವಾದ ಆನಂದವನ್ನು ಹುಡುಕುವ ಹಂಬಲದಿಂದ ತೀವ್ರವಿಚಾರ ತಲೆಯಲ್ಲಿ ತುಂಬಿ ಈ ಬಹಿಶ್ಚಿತ್ತ ಜೀವನ ಹೇಯವೆನಿಸುವುದು. ಆಗ ಬರಿಯಬರಡುಕರ್ಮದಲ್ಲಿಯೂ ವಿರಕ್ತಿ ಬರುವುದು. ಆದರೆ ಕರ್ಮದಿಂದ ಮುಕ್ತಿಹೊಂದಲು ಯಾವ ಚೇತನನಿಗೂ ಸಾಧ್ಯವಿಲ್ಲ. ಚೇತನನಾದಮೇಲೆ ಕರ್ಮಮಾಡಲೇಬೇಕು. ಮಾಡತಕ್ಕ ಕರ್ಮ ತಾನರಸುವ ಭಗವಂತನಿಗೆ ಸಂಬಂಧಿಸಲು ಸಾಧಕ ಹೆಣಗುವನು. ಶಾಸ್ತ್ರೋಕ್ತವಾದ, ತನ್ನ ವರ್ಣಾಶ್ರಮೋಚಿತವಾದ, ದೇಶಕಾಲವಸ್ಥೋಚಿತವಾದ, ಕರ್ಮಗಳನ್ನು ಭಗವದಾರಾಧನ ಬುದ್ಧಿಯಿಂದ ಮಾಡುವನು. ಇದೇ ನಿಷ್ಕಾಮಕರ್ಮವು.[62]

---

61. ಶ್ವೋಭಾವಾ ಮರ್ತ್ಯಸ್ಯ ಯದಂತಕೈತ ತ್ಸರ್ವೇಂದ್ರಿಯಾಣಾಂ ಜರಯಂತಿ ತೇಜ:।
ಅಪಿ ಸರ್ವಂ ಜೀವಿತಮಲ್ಪಮೇವ ತವೈವ ವಾಹಾಸ್ತವ ನೃತ್ತಗೀತಮ್ ॥
ನ ವಿತ್ತೇನ ತರ್ಪಣೀಯೋ ಮನುಷ್ಯೋ ಲಪ್ಸ್ಯಾಮಹೇ ವಿತ್ತಮದ್ರಾಕ್ಷ್ಮಚೇತ್ವಾಂ।
ಅಭಿಧ್ಯಾಯನ್ವರ್ಣ ರತಿಪ್ರಮೋದಾ ನಾತಿದೀರ್ಘೇ ಜೀವಿತೇ ಕೋ ರಮೇತ ॥ —ಕಠ.

62. i ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇ ಚ್ಛತಗು ಸಮಾ:।
ಏವಂ ತ್ವಯಿ ನಾನ್ಯಥೇತೋಸ್ತಿ ನ ಕರ್ಮ ಲಿಪ್ಯತೇ ನರೇ । —ಈಶಾವಾಸ್ಯ.
ii ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ । ಹರಿಪಾದ ವಿನಮ್ರಧಿಯಾ ಸತತಮ್॥
— ದ್ವಾದಶಸ್ತೋತ್ರಂ
iii ನಿಯತಂ ಕುರು ಕರ್ಮತ್ವಂ ಕರ್ಮಜ್ಯಾಯೋ ಹ್ಯಕರ್ಮಣ: ।
ಶರೀರಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣ: ॥ —ಗೀತಾ. 3–8
iv ತಸ್ಮಾದಸಕ್ತಸ್ಸತತಂ ಕಾರ್ಯಂ ಕರ್ಮ ಸಮಾಚರ ।
ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷ: ॥ —ಗೀತಾ. ೩–೧೯
v ಕುರು ಕರ್ಮೈವ ತಸ್ಮಾತ್ತ್ವಂ ಪೂರ್ವೈ: ಪೂರ್ವತರಂ ಕೃತಮ್ ॥ '' ೪–೧೫

ಈ ಕರ್ಮದ ರಹಸ್ಯವನ್ನು ತಿಳಿಸುವುದೇ ಗೀತೆಯ ಹೃದ್ಗತವು. ಇಂತಹ ಪರಿವರ್ತನೆಯಿಂದ ನಿರ್ಜೀವ ಕರ್ಮವು ಸಜೀವವಾಗುವುದು. ಇದು ಭಗವತ್ಸಾಕ್ಷಾತ್ಕಾರವಾದ ಮೇಲೂ, ಮೋಕ್ಷವೆಂಬ ಪರಮಪುರುಷಾರ್ಥ ಸಿದ್ಧಿಸಿದ ಮೇಲೂ ಮಾಡುತ್ತಿರಬೇಕಾದ ಕರ್ಮ. ಕರ್ಮಾಚರಣೆಯಿಂದ ಮುಖ್ಯವಾಗಿ ಅಂತಃಕರಣ ನೈರ್ಮಲ್ಯ ಉಂಟಾಗುವುದು. ಸಾಧಕನಿಗೆ ಕರ್ಮವು ಮುಖ್ಯವಾದ ಅಡಿಗಲ್ಲು. ಸತ್ಕರ್ಮಾಚರಣೆಯಿಲ್ಲದೆ ಎಂತಹ ಜ್ಞಾನ ಸಂಪಾದಿಸಿದರೂ ಅದೆಲ್ಲ ವ್ಯರ್ಥವೆನಿಸುವುದು. ಮಲಾಪಹರಣೆಯಾದ ಮೇಲೆ ಜೀವ ಬ್ರಹ್ಮಜ್ಞಾನಕ್ಕೆ ಅಧಿಕಾರಿಯಾಗುವನು.

ಕರ್ಮದ ಮುಖ್ಯ ಕೆಲಸವು ಮಲಾಪಹರಣ ಮತ್ತು ಭಗದ್ವಿಷಯದಲ್ಲಿ ಜಿಜ್ಞಾಸೆ ಹುಟ್ಟಿಸುವುದು. ಈ ಜಿಜ್ಞಾಸೆಯನ್ನುಂಟುಮಾಡಿ, ಜ್ಞಾನ ಪ್ರಾಪ್ತಿಗೆ ಸಹಕಾರವಾಗುವುದರಲ್ಲೇ ಕರ್ಮದ ಇತಿಕರ್ತವ್ಯತೆ ಇರುವುದು. ಎಲ್ಲೆ ಮೀರಿ ಅದೇ ಧ್ಯೇಯವಾದಲ್ಲಿ ಬರಿಯ ಶುಷ್ಕಾಚರಣೆಯಲ್ಲಿ ಪರ್ಯವಸಾನ ಹೊಂದುವುದು. ಇದರಿಂದ ಜೀವನ ಧ್ಯೇಯವೇ ಮರೆತು ಹೋಗುವುದು. ಆದ್ದರಿಂದಲೇ ಶುಷ್ಕಕರ್ಮಕ್ಕಿಂತಲೂ ಜ್ಞಾನವು ಅತ್ಯಂತ ಶ್ರೇಷ್ಠವೆಂದು ಗೀತೆಯಲ್ಲಿ ಉಕ್ತವಾಗಿರುವುದು.[63]

iii. ಸ್ವಭಾವ

ಜೀವರು ತಮ್ಮ ಗುಣ ಕರ್ಮ ಸ್ವಭಾವಗಳಲ್ಲಿ ಪರಸ್ಪರ ಭಿನ್ನರು. ಒಬ್ಬರಿಗೆ ಹಿತವಾದದ್ದು ಇನ್ನೊಬ್ಬರಿಗೆ ಅಹಿತವಾಗುವುದು. ಒಬ್ಬರಿಗೆ ವಿಶ್ವಾಸಕ್ಕೆಪಾತ್ರವಾದದ್ದು ಇನ್ನೋಬ್ಬರಿಗೆ ದ್ವೇಷಾಸ್ಪದವಾಗುವುದು. ಈ ದೃಷ್ಟಿಯಿಂದ ಸಾತ್ವಿಕರು ರಾಜಸರು ಮತ್ತು ತಾಮಸರೆಂದು ಮೂರು ಭಾಗಗಳುಂಟು. ಮಹಾಭಾರತದಲ್ಲಿ ಜೀವರಾಶಿಗಳನ್ನು ಎರಡೇ ಭಾಗಗಳಾಗಿ ಮಾಡಿ, ವಿಷ್ಣುಭಕ್ತರು ದೈವೀಸಂಪತ್ತಿಗೆ ಸೇರಿದವರೆಂದೂ, ತದ್ವೇಷಿಗಳು ಆಸುರವರ್ಗಕ್ಕೆ ಸೇರಿದವರೆಂದೂ ಹೇಳಿರುವರು.[64] ಅಂದರೆ ಕೆಲಜೀವಿಗಳಿಗೆ ಸ್ವಾಭಾವಿಕವಾಗಿ ಭಗವಂತನಲ್ಲಿ ರತಿ ಇರುವುದು. ಇನ್ನು ಕೆಲವರಿಗೆ ಉದಾಶೀನವೋ, ದ್ವೇಷವೋ ಇರುವುದು. ವಿಷ್ಣುಭಕ್ತರಾದ ಜೀವ ಸಮೂಹಕ್ಕೆ ಅನಾದಿವಾಸನಾಗತ ಸಂಸ್ಕಾರದಲ್ಲೇ ಭಗವಂತನಲ್ಲಿ ರತಿ ಇರುವುದು. ಇವರಿಗೆ ವೇದಾದಿ ಶಾಸ್ತ್ರಗಳು ಭಗವದ್ವಿಷಯವಾದ ವಿಶೇಷ ಜ್ಞಾನವನ್ನು ಮಾಡಿಕೊಡುವುವು. ವೇದಾದಿಗಳ ಉಪದೇಶವು ಏಕಪ್ರಕಾರವಾದರೂ, ಜೀವರುಗಳ ಸ್ವಭಾವಾನುಸಾರವಾಗಿ ಅದರ ಪರಿಣಾಮ ಜೀವರುಗಳ

---

63. ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ಧನಂಜಯ ।
ಬುದ್ಧೌ ಶರಣಮನ್ವಿಚ್ಛ ಕೃಪಣಾ: ಫಲಹೇತವ: ॥ —ಗೀತಾ ೨—೪೯
ನಹಿ ಜ್ಞಾನೇನಸದೃಶಂ ಪವಿತ್ರಮಿಹ ವಿದ್ಯತೇ॥ ,, ೪—೩೮

64. ದ್ವೌ ಭೂತಸರ್ಗೌ ಲೋಕೇऽಸ್ಮಿನ್ ದೈವ ಆಸುರ ಏವ ಚ ।
ವಿಷ್ಣುಭಕ್ತಿಪರೋ ದೇವೋ ವಿಪರೀತ ಸ್ತಥಾಸುರ: ।

ಮೇಲೆ ಆಗುವುದು. ಬ್ರಹ್ಮದೇವರಿಂದ ಏಕಕಾಲದಲ್ಲಿ ಒಂದೇ ಉಪದೇಶ ಪಡೆದಿದ್ದರೂ, ಇಂದ್ರ ಮತ್ತು ವಿರೋಚನರಿಗೆ ಪರಸ್ಪರ ವಿಪರೀತಾರ್ಥವೇ ಆಯಿತು. ಆದ್ದರಿಂದ ಭಗವದ್ವಿಷಯಿಕವಾದ ಜ್ಞಾನವಾಗಲು ಜೀವರುಗಳ ಸ್ವಭಾವವು ಅತಿ ಮುಖ್ಯವಾದದ್ದು.

iv. ಜ್ಞಾನ

ಅದ್ವೈತವೇ ಮೊದಲಾದ ಕೆಲವು ದರ್ಶನಗಳು ಜ್ಞಾನವೇ ಮೋಕ್ಷಕ್ಕೆ ಮುಖ್ಯ ಕಾರಣವೆಂದು ಹೇಳುವುವು. ಜ್ಞಾನದಿಂದ ಮಾತ್ರವೇ ಪರಮಾತ್ಮ ಲಭ್ಯನೆಂಬ ಅಂಶ ಕೆಲವು ಶ್ರುತಿಗಳಲ್ಲಿ ಸೂಚಿತವಾಗಿದೆ.[65] ಆದರೆ ಬರಿಯ ಜ್ಞಾನ ತಾರಕವಲ್ಲ, ಅಂತೂ ಜ್ಞಾನವು ಕರ್ಮಕ್ಕಿಂತ ಶ್ರೇಷ್ಠವೆಂದೂ, ಜ್ಞಾನವೇ ಜೀವನ ಸಾಧನೆಯಲ್ಲಿ ಬೆಳಕು ತೋರುವುದೆಂದೂ ಎಲ್ಲ ಶಾಸ್ತ್ರಗಳೂ ಹೇಳುವುವು; ಎಲ್ಲ ಸಂಪ್ರದಾಯಗಳೂ ನಂಬಿರುವುವು. ಶ್ರುತಿ ಸ್ಮೃತಿ-ಇತಿಹಾಸಾದಿಗಳನ್ನು ವಿಚಾರಮಾಡಿ ಅದರಲ್ಲಿಯ ಮುಖ್ಯಾರ್ಥವನ್ನು ತಿಳಿಸುವುದಕ್ಕಾಗಿಯೇ ಪ್ರವೃತ್ತವಾದ, ಬ್ರಹ್ಮಸೂತ್ರಗಳಲ್ಲಿ ಮೊದಲನೆಯ ಸೂತ್ರದಲ್ಲಿಯೇ "ಅಥಾತೋ ಬ್ರಹ್ಮಜಿಜ್ಞಾಸಾ" ಎಂದು ಹೇಳಿರುವುದರಿಂದ ಜ್ಞಾನದ ಮಹತ್ವವು ಸ್ಪಷ್ಟಪಡುವುದು. ಈ ಸೂತ್ರದ ಅರ್ಥವನ್ನು ಆಚಾರ್ಯರು "ವಿಷ್ಣುರೇವವಿಜಿಜ್ಞಾಸ್ಯ:" ಎಂಬ ವಾಕ್ಯದಿಂದ ಹೇಳಿರುವರು.[66] ನಿಷ್ಕಾಮಕರ್ಮ ಬೋಧಕವಾದುದು 'ಅಥ' ಎಂಬುದು. ಶಮದಮಾದಿ ಸಂಪತ್ತುಳ್ಳವನಾಗಿ ಅಧಿಕಾರ ಸಂಪಾದಿಸಿದ ಮೇಲೆ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೆಂದು ಇದರ ಅರ್ಥವು. ಶ್ರವಣ, ಮನನ, ಮತ್ತು ನಿದಿಧ್ಯಾಸನವೆಂದು ಜಿಜ್ಞಾಸೆಯು ಮೂರು ವಿಧವು.[67] ಜಿಜ್ಞಾಸೆಗೇ ಉಪಾಸನೆಯೆಂದು ಹೆಸರು. ಇದು ಶಾಸ್ತ್ರಾಭ್ಯಾಸ ಮತ್ತು ಧ್ಯಾನವೆಂದು ಎರಡು ವಿಧ. ಶಾಸ್ತ್ರಾಭ್ಯಾಸವು

---

65. ತಮೇವಂ ವಿದ್ವಾನಮೃತ ಇಹ ಭವತಿ ನಾನ್ಯ: ಪಂಥಾ ಅಯನಾಯ ವಿದ್ಯತೇ।
  ii ಏಷೋಣುರಾತ್ಮಾ ಚೇತಸಾ ವೇದಿತವ್ಯ:। —ಮುಂಡಕ.
  iii. ಮನಸೈವೇದಮಾಪ್ತವ್ಯಮ್ —ಕಠ
  iv. ನಾವಿತರತೋ ದುಶ್ಚರಿತಾನ್ನಾಶಾಂತೋ ನಾಸಮಾಹಿತ।
  ನಾಶಾಂತಮನಸೋ ವಾಪಿ ಪ್ರಜ್ಞಾನೇನೈನಮಾಪ್ನುಯಾತ್ ॥ —ಕಠ
  v. ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ॥ —ಗೀತಾ.
  vi. ನಾರಾಯಣಂ ಮಹಾಜ್ಞೇಯಮ್॥ —ನಾ. ಉಪನಿಷತ್ ।

66 ವಿಷ್ಣುರೇವ ದೇಶಕಾಲಗುಣಪರಿಚ್ಛೇದರೂಪವ್ಯಾಪ್ತಿಮಾನ್। ವಿಷ್ಣ್ವಾಖ್ಯೋ ಭಗವಾನೇವ ವಿಜಿಜ್ಞಾಸ್ಯಃ ಅಥಾತಃ ಪದೋಕ್ತಾಭ್ಯಾಂಅಧಿಕಾರಿ ಫಲಾಭ್ಯಾಂ ವಿಶಿಷ್ಟಯಾ ಶ್ರವಣ ಮನನ ಧ್ಯಾನರೂಪ ಜಿಜ್ಞಾಸಯಾ ವಿಷಯೀಕರ್ತವ್ಯಃ ।
—ತತ್ವಮಂಜರಿ

67. i ಸದ್ಭಿರ್ವೈರಾಗ್ಯಭಕ್ತಿ ಶ್ರುತಿಮತಿ ನಿಯತಧ್ಯಾನ್ಯಜಜ್ಞಾನಯೋಗಾದ್ಗಮ್ಯಮ್ ।
—ತತ್ವಪ್ರಕಾಶಿಕಾ.
  ii ಆತ್ಮಾ ವಾರೇ ದ್ರಷ್ಟವ್ಯೋ (ಚೇತ್) ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ —

ಶ್ರವಣ ಮತ್ತು ಮನನವೆಂದು ಎರಡು ವಿಧವು.[68] ಶಾಸ್ತ್ರಾಭ್ಯಾಸವು ಧ್ಯಾನಕ್ಕೆ ಸಾಧನೆಯು.[69]

ವೇದಪುರಾಣೇತಿಹಾಸಗಳು ಸಚ್ಛಾಸ್ತ್ರಗಳು.[70] ಇವು ನಿರ್ಣೇಯ ಗ್ರಂಥಗಳು.

---

iii ಶ್ರವಣಂ ಮನನಂ ಚೈವ ಧ್ಯಾನಂ ಚೇತಿ ಕ್ರಮಾತ್ತ್ರಯಮ್ ।
ಪ್ರಧಾನಾಂಗಂ ಹಿ ಮನಸೋ ದ್ರಷ್ಟವ್ಯೇ ಪರಮಾತ್ಮನಿ । –ಯುಕ್ತಿಮಲ್ಲಿಕಾ ಫಲಸೌ . 6.

iv Reviewing the first-hand declarations of the mysteric, we inevitably notice one prominent feature. Sometimes they speak of three stages of growth through which they pass such as those of beginner, proficient and perfect of phases of spiritual progress in which we first meditate ( ) upon reality then contemplate reality ( ) and at last united with reality ( ). But among most widely separated mystics of the east and west, this three bold experience can merely always be traced.

--Essentials of Mysticism

68 ಸೋಪಾಸನಾ ಚ ದ್ವಿವಿಧಾ ಶಾಸ್ತ್ರಾಭ್ಯಾಸ ಸ್ವರೂಪಿಣೀ ।
ಧ್ಯಾನರೂಪಾ ಪರಾ ಚೈವ ------- ಅನುವ್ಯಾಖ್ಯಾನಮ್ ।

ii ವಿಷ್ಣುಜಿಜ್ಞಾಸಾಪರಪರ್ಯಾಯ ಶ್ರವಣಮನನ ಧ್ಯಾನರೂಪೋಸನಾ ವಿಷಯಃ
ಕಾರ್ಯ ಇತ್ಯುಚ್ಯತೇ । –ತತ್ತ್ವಮಂಜರೀ

ii ಜಿಜ್ಞಾಸಾ ನಾಮ ವಿಚಾರಾಪರಪರ್ಯಾಯಂ ಮನನಂ
ನ ಚ ತಚ್ಛ್ರವಣಮಂತರೇಣ ಸಂಭವತಿ । –ನ್ಯಾಯಸುಧಾ ೩–೩–೧.

69 ಪರೋಕ್ಷಜ್ಞಾನರೂಪಾತ್ತು ಸದಾಧ್ಯಾನಾತ್ಸನ್ನಧೀಃ ।
ಅಪಸಾರ್ಯ ನಿರೋಧಂ ತಂ ಸ್ವಾತ್ಮಾನಂ ದರ್ಶಯೇತ್ಪ್ರಭುಃ । –ಯುಕ್ತಿಮಲ್ಲಿಕಾ. ಫಲ.

ಏತದೇವ ಪ್ರದರ್ಶಯತಿ । ಪರೋಕ್ಷೇತಿ। ಭಗವನ್ಮಹಿಮಾಪ್ರದರ್ಶಕೋಪನಿಷದ್ವಾಕ್ಯಾನಾಂ ಬ್ರಹ್ಮಮೀಮಾಂಸಾಪ್ರದರ್ಶಿತೋಪಕ್ರಮಾದಿಲಿಂಗೈ ರ್ಗುರುಮುಖಾದರ್ಥ ಶ್ರವಣಮ್, ತಸ್ಯೈವಾರ್ಥಸ್ಯ ತಾಭಿರೇವಯುಕ್ತಿಭಿಃ ಪುನಃ ಪುನಃ ಸ್ವಯಮೇವ ಶಾಸ್ತ್ರಾಭ್ಯಾಸೇನ ವಾ ತತ್ತ್ವನಿರ್ಣಯ ಫಲಕವಾದಕಥಯಾ ವಾ ತದಂಗಂ ಧಾರಣಾದಿಕಮಿತಿ ವಚನಾಚ್ಛಾಸ್ತ್ರಾರ್ಥ ಧಾರಣವತಾ ವಾ ಸ್ವಮನಸಾ ವಾ ಕ್ಷಣೇ ಕ್ಷಣೇ ಅನುಚಿಂತನಂ ಮನನಮ್। ಏತಾಭ್ಯಾಂ ಶ್ರವಣ ಮನನಾಭ್ಯಾಂ ನಿರ್ಣೀತ ಭಗವದ್ಗುಣಾನಾಂ ತೈಲಧಾರಾವದವಿಚ್ಛಿನ್ನಯಾ ಭಗವತೋಽನ್ಯತ್ರ ಅಸಾರಬುದ್ಧ್ಯಾ ತತೋ ನಿವರ್ತಿತಯಾ ಭಗವತ್ಯೇವ ಸಸ್ನೇಹಮನುವೃತ್ತಯಾ ಚ ಮನೋವೃತ್ತ್ಯಾ ನಿರಂತರ ಧ್ಯಾನಂ ನಿದಿಧ್ಯಾಸನಮ್ । –ಯುಕ್ತಿಮಲ್ಲಿಕಾವ್ಯಾಖ್ಯಾ.

70. ಇತ್ಯೇವ ಶ್ರುತಯೋಽಶೇಷಾ: ಪಂಚರಾತ್ರಮಥಾಖಿಲಂ। ಮೂಲರಾಮಾಯಣಂ ಚೈವ ಭಾರತಂ ಸ್ಮೃತಿಯೋಽಖಿಲಾ:॥ ವೈಷ್ಣವಾನಿ ಪುರಾಣಾನಿ ಸಾಂಖ್ಯಯೋಗೌ ಪರಾವಪಿ। ಬ್ರಹ್ಮತರ್ಕಶ್ಚ ಮೀಮಾಂಸೇತ್ಯಂತಶ್ಶಬ್ದಸಾಗರಾ:। ಅನಂತಾ ಯುಕ್ತಯಶ್ಚೈವ ಪ್ರತ್ಯಕ್ಷಾಗಮಮೂಲಕಾ:। ಪ್ರತ್ಯಕ್ಷಮೈಶ್ವರಂ ಚೈವ ರಮಾದೀನಾಮಶೇಷತ: ॥ ಮುಕ್ತಾನಾಮಪ್ಯಮುಕ್ತಾನಾಮೇವಮೇಷಾರ್ಥಮುತ್ತಮಮ್। ಅನ್ಯಾವಕಾಶರಹಿತಂ ಪ್ರಕಾಶಯತಿ ಸಾದರಮ್। ಏತದೇವ ಚ ಸಚ್ಛಾಸ್ತ್ರಂ ದು:ಶಾಸ್ತ್ರಂ ತು ತತ: ಪರಮ್ ॥

–ಅನುವ್ಯಾಖ್ಯಾನಮ್. ೩–೩–೧.

ಬ್ರಹ್ಮಸೂತ್ರಗಳು ಇವುಗಳ ಅರ್ಥವನ್ನು ನಿರ್ಣಯಿಸುವ ಗ್ರಂಥವು. ಆಚಾರ್ಯರು. ಬ್ರಹ್ಮಸೂತ್ರಗಳ ಅರ್ಥವನ್ನು ಬಿಡಿಸಿರುವರು. ಸರ್ವಜ್ಞರಾದ ಗುರುಗಳು ದೊರಕಿದಲ್ಲಿ ವೇದಾದಿ ಮೂಲಶಾಸ್ತ್ರ ಶ್ರವಣಮಾಡುವುದು ಯೋಗ್ಯವು. ಅಂತಹ ಗುರುಗಳು ಸಿಕ್ಕುವುದು ದುರ್ಲಭವಾದುದರಿಂದ ಇವುಗಳ ಅರ್ಥವನ್ನು ನಿರ್ಣಯಮಾಡಿರುವ ಆಚಾರ್ಯರ ಗ್ರಂಥಗಳನ್ನು ಓದುವುದೇ ಯುಕ್ತವು. ಇದಕ್ಕೆ ವಿಷ್ಣುಭಕ್ತರೂ, ಆಚಾರ್ಯರ ಸಿದ್ಧಾಂತ ರಹಸ್ಯಬಲ್ಲವರೂ ಆದ ಗುರುಗಳು ಅವಶ್ಯಕವು. ಆ ಗುರುಗಳು ಸಿಕ್ಕುವುದು ದುರ್ಲಭವಾದರೆ, ತನ್ನ ಜ್ಞಾನಕ್ಕೆ ಎಟುಕುವಷ್ಟು ತಾನೇ ಶಾಸ್ತ್ರಾವಲೋಕನಮಾಡಿ, ಶಿಷ್ಯರುಗಳಿಗೂ ಉಪದೇಶಮಾಡಬೇಕು.[71]

ಓದಿದ ಶಾಸ್ತ್ರವನ್ನು ಮನಸ್ಸಿನಲ್ಲಿ ರೂಪಿಸಿಕೊಳ್ಳುವುದೇ ಮನನವು. ಸತತವಾದ ಶ್ರವಣ ಮತ್ತು ಮನನದಿಂದ ಧ್ಯಾನವು ಸಾಧ್ಯವಾಗುವುದು. ಎರಡನೆಯ ಉಪಾಸನಾ ವಿಧಿಯೆಂದು ಹೇಳಿರುವರು. ಧ್ಯಾನವೆಂದರೆ ಯೋಗಶಾಸ್ತ್ರದಲ್ಲಿ ಹೇಳಿದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಮತ್ತು ಇವೆಲ್ಲವೂ ಸೇರುವುದು[72] ಧ್ಯಾನ ಮತ್ತು ಸಮಾಧಿಗೆ ಹೆಚ್ಚು ಭೇದವಿಲ್ಲ.[73] ಯಮನಿಯಮಾದಿಗಳು ಧ್ಯಾನಕ್ಕೆ ಅಂಗಭೂತವಾದವು. ಶಾಸ್ತ್ರಾಭ್ಯಾಸವು ಧ್ಯಾನದಂತೆ ಬ್ರಹ್ಮಸಾಕ್ಷಾತ್ಕಾರಕ್ಕೆ ಸಾಕ್ಷಾತ್ ಸಾಧನವು. ಇದು ರಹಸ್ಯವು.

ಧ್ಯಾನವೆಂದರೆ ತಾನು ಅರಸುತ್ತಿರುವ ಬ್ರಹ್ಮನ ವಿಚಾರವನ್ನು ನಿರ್ಣಯಮಾಡುವ ಶಾಸ್ತ್ರಗಳಿಂದ ತಿಳಿದಮೇಲೆ ಅದನ್ನು ಮನಸ್ಸಿನಲ್ಲಿ ಸತತವಾಗಿ ಚಿಂತನೆಮಾಡುವುದು. ಇದು ಶಾಸ್ತ್ರಾಭ್ಯಾಸದ ಮುಂದಿನ ಹೆಜ್ಜೆಯು. ಈ ಹಂತವನ್ನು ಮುಟ್ಟುವುದರೊಳಗೆ

---

71. ಸ್ವಾಧ್ಯಾಯ ಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ ।

ii ಶ್ರವಣಾದಿ ವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್ । ಅತ್ಯವಶ್ಯಕೇ ತು ನಿದ್ರಾದೌ ಪುನರೇವ ಸಮಾಚರೇತ್ ॥ ಅಭಾವೇ ನಿರ್ಣಯಜ್ಞಸ್ಯ ಸಚ್ಛಾಸ್ತ್ರಾಣ್ಯೇವ ಸರ್ವದಾ । ಶೃಣುಯಾದ್ಯದಿ ಸಚ್ಜ್ಞಾನ ಪ್ರಾಚುರ್ಯಮುಪಲಭ್ಯತೇ ॥ ಮಹದ್ಭ್ಯೋ ವಿಷ್ಣುಭಕ್ತೇಭ್ಯೋ ಯಥಾಶಕ್ತಿ ಚ ಸಂಶಯಾನ್ । ಛಿಂದ್ಯಾತ್ಸತೋಽಧಿಕಾಭಾವೇ ಸ್ವಯಮೇವ ಸಮಭ್ಯಸೇತ್ ॥ ಬ್ರೂಯಾದಪಿ ಚ ಶಿಷ್ಯೇಭ್ಯೋ ಸತ್ಸಿದ್ಧಾಂತ ಮಹಾಪಯನ್ ।

— ಅ ನು. ೩ ೩–೧

72. ಧ್ಯಾನ ಸಮಾಧ್ಯೋರನತಿಭಿನ್ನತ್ವಾದ್ಧ್ಯಾನಶಬ್ದೇನ ಸಮಾಧಿರಪಿ ಗೃಹ್ಯತೇ। ಧಾರಣಾಪ್ರತ್ಯಾಹಾರಪ್ರಾಣಾಯಾಮಾಸನಯಮನಿಯಮಾನಾಮುಪ್ಯುಪಾಸನಾಭೇದಾನಾಂ ಸತ್ವಾ ತ್ಕಥಂ ದ್ವೈವಿಧ್ಯಮಿತ್ಯತ ಆಹ । ತದಂಗಂ ಧಾರಣಾದಿಕಂ' ಇತಿ ತಸ್ಯ ಧ್ಯಾನಸ್ಯ ಅಂಗಮೇವ ನ ತು ಸ್ವತಂತ್ರಮುಪಾಸನಮ್। —ನ್ಯಾಯಸುಧಾ.

73. ಅಭ್ಯಾಸಪಾಟವಾದನಾಯಾಸೇನ ಪ್ರಾಪ್ತಂ ಧ್ಯಾನಂ ಸಮಾಧಿರಿತ್ಯುಚ್ಯತೇ ॥

—ತಂತ್ರಸಾರ.

ಸಂಶಯಾತೀತವಾದ ನಿಷ್ಕೃಷ್ಟಜ್ಞಾನವು ಉಂಟಾಗಿರಬೇಕು. ಇದು ಮನನದಿಂದ ಸಾಧ್ಯವು.[74] ಇಂತಹ ಧ್ಯಾನವು ಅಥವಾ ಅಖಂಡ ಸ್ಮೃತಿಯು ಅಪರೋಕ್ಷಜ್ಞಾನಕ್ಕೆ ಕಾರಣವಾಗುವುದು.[75]

"ಯಮೈವೈಷ ವೃಣುತೇ ತೇನ ಲಭ್ಯಃ'' ಎಂಬ ಶ್ರುತಿಯಲ್ಲಿ ಭಗವತ್ಪ್ರಸಾದವೇ ಬ್ರಹ್ಮಜ್ಞಾನಕ್ಕೆ ಮುಖ್ಯಕಾರಣವೆಂದು ಉಕ್ತವಾಗಿರುವುದು. ಭಗವತ್ಪ್ರಸಾದವು ಸತತವಾದ ಉಪಾಸನೆಯಿಂದ ಉಂಟಾಗುವುದು. ಆದರ ಸಹಿತವಾದ ನಿರಂತರ ಚಿಂತನೆಯೇ ಧ್ಯಾನವೆಂಬ ಉಪಾಸನೆಯು.[76]

V. ಭಕ್ತಿ

ಸಂಸಾರದ ನಿಸ್ಸಾರತೆಯನ್ನು ಅರಿತ ವಿವೇಕಿಗೆ ಇದರಲ್ಲಿ ಸ್ವಾಭಾವಿಕವಾಗಿ ಹುಟ್ಟುವ ಜಿಹಾಸೆಗೇ ವೈರಾಗ್ಯವೆಂದು ಹೆಸರು. ವೇದವಿಹಿತವಾದ ಸತ್ಕರ್ಮಾಚರಣೆಯು ಮುಕ್ತ್ಯನಂತರವೂ ಕರ್ತವ್ಯವೆಂದ ಮೇಲೆ ಸಾಧನೆಯ ಮೊದಲಿಗೆ ಅದರ ಅವಶ್ಯಕತೆಯನ್ನು ಒತ್ತಿ ಹೇಳಬೇಕಾಗಿಲ್ಲ. ಈ ನಿಷ್ಕಾಮ ಕರ್ಮಾಚರಣೆಯಲ್ಲಿ ನಿರ್ಲಿಪ್ತತೆಗೆ ಅತ್ಯಂತ ಮಹತ್ವವಿರುವುದು. ಆ ನಿರ್ಲಿಪ್ತತೆ ಮತ್ತು ಫಲಾಸಂಗತ್ವವು ವೈರಾಗ್ಯದಿಂದಲೇ ಸಾಧ್ಯವು. ಆದ್ದರಿಂದ ವೈರಾಗ್ಯವು ಪ್ರಥಮ ಸೋಪಾನವು. ಈ ಸ್ಥಿತಿಯಲ್ಲಿನ ಸತ್ಕರ್ಮಾಚರಣೆಯೇ ಅಂತಃಕರಣಶುದ್ಧಿಯನ್ನುಂಟುಮಾಡುವುದು ಮತ್ತು ಇದರಿಂದ ಭಗವದ್ವಿಷಯದಲ್ಲಿ ಶ್ರದ್ಧೆಯು ಹೆಚ್ಚುವುದು. ಈ ದೃಢಭಕ್ತಿಯು ಭಗವದುಪಾಸನೆಗೆ ಮಾರ್ಗವಾಗುವುದು. ಶ್ರವಣ, ಮನನ, ಧ್ಯಾನರೂಪವಾದ ಉಪಾಸನೆಯಿಂದ ಭಗವತ್ಪ್ರಸಾದವು ಉಂಟಾಗಿ ಭಗವತ್ಸಾಕ್ಷಾತ್ಕಾರವು ಆಗುವುದು. ಇದೇ ಸಾಧನ ಸೋಪಾನ ಕ್ರಮವು.[77] ಭಗವತ್ಪ್ರಸಾದಸಹಕೃತ ಈ ಸಾಧನ ಸೋಪಾನ ಕ್ರಮದಲ್ಲಿ

---

74. ಅವಿತಥಂ ಬ್ರಹ್ಮಾನುಚಿಂತನಂ ತ ನಿದಿಧ್ಯಾಸನಮ್। ನ ಚ ಅವಿದಿತಸ್ಯಾನುಚಿಂತನಂ ಸಂಭವತೀತಿ ತದ್ವೇದನಾರ್ಥಂ ಶ್ರವಣಮಭ್ಯರ್ಥನೀಯಮ್। ಶ್ರುತೇಚಾರ್ಥೇ ಲಿಂಗಾಭಾಸಂ ಪ್ರತಿಭಾಸೇನ ಸಂಶಯವಿಪರ್ಯಯೋದಯೇನ ವಿತಥಂ ತದ್ಭವತೀತಿ ತದ್ವ್ಯುದಾಸಹೇತು ಮನನಮಪ್ಯೇಷ್ಟವ್ಯಮಿತಿ। —ನ್ಯಾಯಸುಧಾ ೩-೩-೧

75. ಶ್ರವಣದರ್ಶನಜನಿತವಾಸನಾಮಯಿ ವಸ್ತುನೋ ಮನಸಾವಲೋಕನಂ ಸ್ಮೃತಿ। ಸಾ ಚ ದ್ವಿವಿಧಾ । ಖಂಡಸ್ಮೃತಿರಖಂಡಸ್ಮೃತಿಶ್ಚೇತಿ । ತತ್ರಾದ್ಯಾ ಏಕೈಕಾವಯವತ್ ಸ್ಮೃತಿರೂಪಾ ಧಾರಣೇತ್ಯುಚ್ಯತೇ। ತದುಕ್ತಂ ದ್ವತೀಯಸ್ಕಂದೇ —"ಏಕೈ ಕಶೋಂಗಾನಿ ಧಿಯಾನಾನುಭಾವೇಯೇ ತ್ಪಾದಾದಿಯಾವದ್ಧಸಿತಂ ಗದಾಭೃತ'' ಇತ್ಯಾದಿನಾ ದ್ವಿತೀಯಾ ಸಮಗ್ರಾವಯವಸ್ಮೃತಿರೂಪಾ ಪ್ರಯತ್ನಸದಸದ್ಭಾವಾಭಾವಾಭ್ಯಾಂ ಧ್ಯಾನಸಮಾಧಿ ಭೇದೇನ ದ್ವಿವಿಧಾ ಭವತಿ। —ಸಾಧನದೀಪಿಕಾ.

76. ಮೋಕ್ಷಸಾಧನಂ ಚ ಭಗವತ್ಪ್ರಸಾದ ಏವ। ......ಉಪಾಸನಯಾ ಚಾತಿದೀರ್ಘಕಾಲಮನುಷ್ಠಿತಯಾ ಪ್ರಸನ್ನೋ ಭಗವಾನಾತ್ಮಾನಂದರ್ಶಯತಿ । —ನ್ಯಾಯಸುಧಾ

77. ಭಗವತ್ಪ್ರಸಾದ ಸ್ತಾವನ್ಮೋಕ್ಷಸಾಧನಮ್ । ಸ ಚ ತದಪರೋಕ್ಷಾದ್ಭವತಿ । ನ ಚ ತದು ಭಯಂ ವಿಧಾತುಂ ಶಕ್ಯಮ್। ಪುರುಷಪ್ರಯತ್ನಾಗೋಚರತ್ವಾತ್। ಅತೋ ಜ್ಞಾನಸಾಧನಂ ವಿಧೇಯಮ್।

ಒಂದು ವಿಶೇಷ ಉಂಟು. ಭಕ್ತಿ, ಭಗವತ್ಪ್ರಸಾದವು ಸಾಧನೆಯ ಎಲ್ಲ ಅಂಗಳಲ್ಲೂ ಅವಶ್ಯವಾಗಿಇರತಕ್ಕದು.[78]

ವೈರಾಗ್ಯ ಮತ್ತು ಭಕ್ತಿಯು ಉಪಾಸನೆಗೆ ಸಾಧನಮಾತ್ರವಲ್ಲ. "ವೈರಾಗ್ಯತೋ ಭಕ್ತಿದಾರ್ಢ್ಯಂ ತೇನೋಪಾಸಾಯದಾ ಭವೇತ್। ಅಪರೋಕ್ಷ್ಯಂ ತದಾ ವಿಷ್ಣೋಃ" ಎಂಬ ಅನುವ್ಯಾಖ್ಯಾನ ವಚನವ್ಯಾಖ್ಯಾನದಲ್ಲಿ "ಮೀಮಾಂಸಾಧ್ಯಯನಾದ್ವೈರಾಗ್ಯಾತ್ಪ್ರಾಗೇವ ಭಕ್ತಿರ್ಭಾವ್ಯಾದ್ದಾರ್ಢ್ಯಮಿತ್ಯುಕ್ತಮ್" ಎಂಬ ಸುಧಾವಾಕ್ಯದಲ್ಲಿ ಭಕ್ತಿಯು ವೈರಾಗ್ಯಕ್ಕೆ ಪೂರ್ವದಲ್ಲಿಯೂ ಇರುವುದು ಎಂದು ಉಕ್ತವಾಗಿದೆ. ಆದರೆ ಭಕ್ತಿಯೇ ಮುಖ್ಯ ಸಾಧನ ಎಂದು ಅನೇಕ ವಚನಗಳಲ್ಲಿ ಉಕ್ತವಾಗಿದೆ.[79] ಇದರ ವಿವೇಚನೆಯು ಅವಶ್ಯಕವು. ಮುಖ್ಯವಾಗಿ ಭಕ್ತಿಯು ಸಾಧನಾರಂಭದಿಂದ ಅಪರೋಕ್ಷವಾಗುವವರೆಗೂ, ಅಪರೋಕ್ಷ ಮೋಕ್ಷಾನಂತರವೂ ಪ್ರತಿ ಹೆಜ್ಜೆಯಲ್ಲಿಯೂ ಇರಬೇಕೆಂಬುದೇ ತತ್ತ್ವವು.

"ಕರ್ಮಣಾಜ್ಞಾನಮಾತನೋತಿ ಜ್ಞಾನೇನಾಮೃತೀ ಭವತಿ" ಎಂಬ ಶ್ರುತಿಯ ಪ್ರಕಾರ ಕರ್ಮವು ಜ್ಞಾನಕ್ಕೆ ಸಾಧನವು. ನಿಷ್ಕಾಮ ಕರ್ಮದಲ್ಲಿ ಮನಸ್ಸು ಭಗವದಾರಾಧನ

ತಚ್ಚ ಶ್ರವಣ ಮನನ ನಿದಿಧ್ಯಾಸನರೂಪಾ ಜಿಜ್ಞಾಸೈವ। ಜಿಜ್ಞಾಸಾಯಾಂ ಭಗವದ್ಭಕ್ತ ಏವ ಅಧಿಕಾರೀ। ಅನ್ಯಸ್ಯ ತದಸಂಭವಾತ್ । ಭಗವದ್ಭಕ್ತಿಶ್ಚ ಮಾಹಾತ್ಮ್ಯ ಶ್ರವಣೇನ ಸಂಭವತ್ಯಪಿ ವೈರಾಗ್ಯೇಣದೃಢಾಭವತ್ಯತ: ಸಾಧನೇಷು ವೈರಾಗ್ಯಮೇವಾದಾವಪೇಕ್ಷಿತಮ್। —ತ.ಪ್ರ.

78 ಶ್ರವಣ ಮನನಂ ತಸ್ಮಾದ್ಧ್ಯಾನಂ ಸಾಕ್ಷಾತ್ಕೃತಿ ರ್ಹರೇಃ ಭಕ್ತಿಃ ಪ್ರಸಾದ ಇತ್ಯತೇ ಮುಕ್ತೇಸ್ಸೋಪಾನ ಪಂಕ್ತಯಃ । —ಯು.ಮ
ಸಾಕ್ಷಾದುಕ್ತಾನಿ ಉಪಲಕ್ಷಿತಾನಿ ಚ ಸಾಧನಾನಿ ಸಂಗೃಹ್ಣಾತಿ। ಶ್ರವಣಮಿತಿ। ತಸ್ಮಾದುಕ್ತ ಶ್ರುತಿಸ್ಮೃತಿ ಯುಕ್ತ್ಯಾದಿ ಪ್ರಮಾಣ ಸಮುದಾಯಾತ್। ಹರೇರಿತಿ ಪದಂ ಸಾಧನ ಷಟ್ಕೇಽಪಿ ಸಂಭಧ್ಯತೇ। ಭಕ್ತಿಪದಂ ವಿರಕ್ತೇರುಪಲಕ್ಷಣಮ್। ಅಯಮತ್ರ ಕ್ರಮಃ ಪ್ರಥಮಮಿಮಮುದ್ಧರಾಮಿ ಇತಿ ತದ್ಯೋಗ್ಯತಾ ಪರಿಪಾಕೈಕನಿಬಂಧನಾ ಹರೇರನಿಮಿತ್ತ ಕೃಪಾ । ತತಸ್ತಸ್ಮಿನ್ ಮದೀಯೋಽಯಮಿತಿ ಈಷತ್ ಸ್ನೇಹರೂಪಃ ಅನುಗ್ರಹಾಪರರ್ಯಾಯಃ ಹರೇ ಈಷತ್ಪ್ರಸಾದಃ । ತತೋ ಹರೇರನ್ಯತ್ರೇಷದ್ವಿರಕ್ತಿಃ ತತೋ ಹರಾವೀಷದ್ಭಕ್ತಿಃ । ತತಃ ಪುನಃ ಈಷದಭಿವೃದ್ಧೋ ಹರೇ ಪ್ರಸಾದಃ ತತಃ ಶ್ರವಣಂ । ತತಃ ಪುನಃ ಪೂರ್ವತೋಪ್ಯಭಿವೃದ್ಧವಿರಕ್ತಿಪ್ರಸಾದಾಃ । ತತೋ ಮನನನ್ ——— ತತೋ ನಿರಂತರಧ್ಯಾನರೂಪಂ ನಿದಿಧ್ಯಾಸನಂ———। ತೇಭ್ಯಃ ಪ್ರಸನ್ನ ಭಗವತ್ಯೈವಪ್ರತಿ ಬಂಧಕಾವಿದ್ಯಾಯಾ ಮಪಸಾರಿತಾಯಾಂ ತದಪರೋಕ್ಷ ಜ್ಞಾನಮ್। ತತಃ ಸ್ವಯೋಗ್ಯ ಪರಿಪೂರ್ಣ ವಿರಕ್ತಿ ಭಕ್ತಿ ಪ್ರಸಾದಾಃ। ,,,,.. ತತಶ್ಚ ಮಹೋಪಕಾರಕೇ ಹರೌ ಸ್ವರೂಪಭೂತಾ ಫಲರೂಪಾ ಚ ನಿತ್ಯಾ ಭಕ್ತಿಃ। ತನ್ನಿಮಿತ್ತೋಹರೇರ್ನಿತ್ಯಪ್ರಸಾದಶ್ಚೇತಿ ಭಕ್ತಿಪ್ರಸಾದಯೋ ಸ್ಸರ್ವತ್ರಾನ್ವಯ ಪ್ರದರ್ಶನಾಯ ಸಾಮಾನ್ಯೇನೈವ ಕೀರ್ತನಮ್॥ —ಯು.ಮ

79 ಭಕ್ತ್ಯೈವ ವ್ರಣುತೇ ವಿಷ್ಣುಃ ಭಕ್ತ್ಯಾ ದದ್ಯಾನ್ನಿಜಂ ಪದಮ್।
ಭಕ್ತ್ಯೈವ ದೃಶ್ಯತೇ ನಿತ್ಯಂ ಭಕ್ತ್ಯಾ ಭೋಗಾನ್ ದದಾತಿ ಚ ॥ —ಪಾದ್ಮ
ಭಕ್ತ್ಯಾತ್ವನನ್ಯಯಾ ಲಭ್ಯ ಅಹಮೇವಂ ವಿಧೋಽರ್ಜುನ।

ಪರವಾಗಿರಬೇಕು. ಮನಸ್ಸು "ಸನ್ಯಸ್ತಾಖಿಲಕರ್ಮವಾನ್'' ಎಂಬ ಭಾಷ್ಯವಾಕ್ಯದ "ಸನ್ಯಸ್ತ'' ಶಬ್ದಕ್ಕೆ "ವಿಷ್ಣ್ವರ್ಪಿತ'' ಎಂದು ಭಾವದೀಪದಲ್ಲಿ ಅರ್ಥಮಾಡಿದುದರ ತಾತ್ಪರ್ಯವು ಇದೇ. ಗೀತೆಯಲ್ಲಿಯೂ ಇದೇ ಅರ್ಥವು ವ್ಯಕ್ತವಾಗಿದೆ.[80] ಆದ್ದರಿಂದ ನಿಷ್ಕಾಮ ಕರ್ಮಕ್ಕೆ ಭಕ್ತಿ ಅವಶ್ಯಕವೆಂದಹಾಗಾಯಿತು. ಇನ್ನು ಎರಡನೆಯ ಸಾಧನವಾದ ವೈರಾಗ್ಯಕ್ಕೂ ಭಕ್ತಿ ಅವಶ್ಯಕವೆಂಬುದು ಸ್ಪಷ್ಟವಿದೆ. "ಆಬ್ರಹ್ಮಸ್ತಂಭಪರ್ಯಂತಂ ಅಸಾರಂಚಾಪ್ಯನಿತ್ಯಕಮ್। ವಿಜ್ಞಾಯ ಜಾತ ವೈರಾಗ್ಯೋ ವಿಷ್ಣುಪಾದೈಕ ಸಂಶ್ರಯಃ'' ಎಂಬ ಭಾಷ್ಯೋದಾಹೃತ ಭಾಗವತತಂತ್ರವಾಕ್ಯದಲ್ಲಿ ವೈರಾಗ್ಯಭಕ್ತಿಯ ನಿಕಟಸಂಬಂಧವು ಸ್ಪಷ್ಟವಾಗಿರುವುದು. "ವೈರಾಗ್ಯತೋ ಭಕ್ತಿದಾರ್ಢ್ಯಂ ತೇನೋಪಾಸಾ ಯದಾ ಭವೇತ್'' ಎಂಬ ಅನುವಾಖ್ಯಾನ ವಚನಾನುಸಾರ ವೈರಾಗ್ಯದಿಂದ ಮುಂದಿನ ಹೆಜ್ಜೆ ದೃಢತರವಾದ ಭಕ್ತಿ. ಇಂತಹ ಭಕ್ತಿಯೇ ಬ್ರಹ್ಮವಿದ್ಯೆ ಜಿಜ್ಞಾಸೆ ಅಥವಾ ಶ್ರವಣ, ಮನನರೂಪ, ಶಾಸ್ತ್ರಾಭ್ಯಾಸರೂಪ ಉಪಾಸನೆಗೆ ಸಾಧನೆಯೆಂದು ಶಾಸ್ತ್ರಕಾರರ ಮತ.[81] ಹೀಗೆ ಭಕ್ತಿಯು ಪ್ರತಿಯೊಂದು ಸಾಧನೆಗೆ ಪೂರ್ವಭಾವಿಯಾಗಿ ಅವಶ್ಯವಾಗಿರಬೇಕಲ್ಲದೆ ಭವಿಷ್ಯತ್ಪರ್ವ, ಗೀತಾ, ಪಾದ್ಮ ಮೊದಲಾದ ಸ್ಮೃತಿವಚನಗಳು ಮೋಕ್ಷಕ್ಕೆ ಭಕ್ತಿಯೇ ಮುಖ್ಯ ಸಾಧನವೆಂದು ಹೇಳುವುವು.[82] ಇದರತಾತ್ಪರ್ಯವೇನೆಂದರೆ, ಭಕ್ತಿಯನ್ನು ಬಿಟ್ಟ ಕರ್ಮ, ವಿರಕ್ತಿ, ಶ್ರವಣ, ಮನನ, ಧ್ಯಾನ ಇವೆಲ್ಲವೂ ವ್ಯರ್ಥವು. ಭಕ್ತಿಸಹಕೃತವಾದರೆ ಎಲ್ಲವೂ ಸಾರ್ಥಕವು. ಸಕಲ ಸಾಧನಗಳಲ್ಲಿ ಭಕ್ತಿಯೇ ಶ್ರೇಷ್ಠಸಾಧನೆಯು. ಭಕ್ತಿಪ್ರಚುರನಾದ ಸಾಧಕನೇ ಉತ್ತಮ ಅಧಿಕಾರಿಯು.[83] "ಅಮಲಾ ಭಕ್ತಿಶ್ಚ ತತ್ಸಾಧನಮ್' ಎಂಬ ವಚನದಲ್ಲಿ ಚಂದ್ರಿಕಾಚಾರ್ಯರು ಇದನ್ನೆಲ್ಲ ಕ್ರೋಢೀಕರಿಸಿ ಹೇಳಿರುವರು. ತಂತ್ರಸಾರವಾಕ್ಯವೂ ಇದನ್ನೇ ಸಮರ್ಥಿಸುವುದು.[84] ಅಪರೋಕ್ಷಜಾನಾನಂತರದಲ್ಲೂ ಭಕ್ತಿಯು ಅವಶ್ಯಕವು[85] ಮೋಕ್ಷಾನಂತರದಲ್ಲಿಯೂ ಭಕ್ತಿಯು ಬೇಕು. ಆಗ ಇದು ಸಾಧನವಲ್ಲ. ಇದೇ ಆನಂದವು. ಫಲರೂಪವು.[86]

---

80 ಮಯಿ ಸರ್ವಾಣಿ ಕರ್ಮಾಣಿ ಸನ್ಯಸ್ಯಾಧ್ಯಾತ್ಮ ಚೇತಸಾ —ಗೀತಾ।

81 ವಿಷ್ಣುಭಕ್ತಿರಪಿ ಬ್ರಹ್ಮವಿದ್ಯಾಯಾಮಧಿಕಾರ ಇತಿ ಶ್ರುತ್ಯಾಹ। ಯುಮಿತಿ। —ತತ್ವಪ್ರಕಾಶಿಕಾ.

82. ದಾನತೀರ್ಥ ತಪೋ ಯಜ್ಞಪೂರ್ವಾಸ್ಸರ್ವೇಪಿ ಸರ್ವದಾ । ಅಂಗಾನಿ ಹರಿಸೇವಾಯಾಂ ಭಕ್ತಿಸ್ತ್ವೇಕಾ ವಿಮುಕ್ತಯೇ ॥ ಭವಿಷ್ಯತ್ಪರ್ವವಚನ ಮಿತ್ಯೇತದಖಿಲಂ ಪರಮ್ । ಭಕ್ತ್ಯರ್ಥಾನ್ಯಖಿಲಾನ್ಯೇವ ಭಕ್ತಿ ರ್ಮೋಕ್ಷಾಯ ಕೇವಲಾ ॥ —ತಾತ್ಪರ್ಯನಿರ್ಣಯ:

83 ಸಮಾನಾಧಿಕರಣಾನಾಮಧ್ಯಯನ ಶಮಾದಿ ವಿಷ್ಣುಪಾದೈಕ ಸಂಶ್ರಯತ್ವಾದೀನಾಂ ಮಧ್ಯೇ ಯಸ್ಯಾಧ್ಯಯನಂ ಪ್ರಚುರಂ ಅನ್ಯದಪ್ರಚುರಂ ಸೋಽಧಮಃ] ಯಸ್ಯ ವಿಷ್ಣುಪಾದೈಕ ಸಂಶ್ರಯತ್ವಾದಿಕಮೇವಾಪ್ರಚುರಂ ಅಧ್ಯಯನ ಶಮದಮಾದಿಕೇ ತು ಪ್ರಚುರೇ ಸ ಮಧ್ಯಮಃ। ಯಸ್ಯತು ವಿಷ್ಣುಪಾದೈಕಸಂಶ್ರಯತ್ವಾದಿಕಮೇವ ಪ್ರಚುರಂ ಅಧ್ಯಯನ ಶಮಾದಿಕೇತ್ವ ಪ್ರಚುರೇ ಸ ಉತ್ತಮ ಇತಿ । —ಭಾವದೀಸ

84 ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣು ರ್ನಾನ್ಯೇನ ಕೇನಚಿತ್। ಪರಮಸ್ನೇಹ ಸಂಯುಕ್ತಾ ಯಥಾರ್ಥ ಜ್ಞಾನತೋ ಭವೇತ್ ॥ ಸಾ ಭಕ್ತಿರಿತಿ ವಿಜ್ಞೇಯಾ ಸಾಧನಂ ಭೋಗ ಮೋಕ್ಷಯೋಃ ।

VIII. ಭಕ್ತಿಯ ಪ್ರಾಮುಖ್ಯ ವಿವೇಚನೆ.

ಜೀವರುಗಳಿಗೆ ಪಂಚಭೂತಗಳಿಂದ ಸೃಷ್ಟವಾದ ವಿವಿಧ ವೈಚಿತ್ರ್ಯಗಳಿಂದೊಡಗೂಡಿದ ಈ ಜಗತ್ತಿನ ಅನುಭವವನ್ನು ತಂದುಕೊಟ್ಟು ವ್ಯಾಪಾರಮಾಡಲು ಸಹಕಾರಿಯಾದ, ಭೂತಗನ್ನಡಿಯಂತಿರುವ ಈ ದೇಹಗಳು ಪ್ರತ್ಯಕ್ಷಸಿದ್ಧವು. ಇಂತಹ ಜಗತ್ತಿನ ನಾನಾ ಅನುಭವಗಳನ್ನು, ನಾನು ಸುಖಿ, ನಾನು ದುಃಖಿ ಎಂಬ ಅನುಭವಗಳನ್ನೂ ಪಡೆಯುತ್ತಿರುವ ಜೀವರುಗಳು ಸಾಕ್ಷಿಪ್ರತ್ಯಕ್ಷಸಿದ್ಧರು. ಈ ಪ್ರಾಕೃತಿಕ ಜಗತ್ತು ಜೀವನಿಗೆ ಆತ್ಯಂತಿಕ ಸೌಖ್ಯ ತಂದುಕೊಡುವುದಿಲ್ಲವೆಂಬುದೂ ಅನೇಕ ಅನುಭವ, ಯುಕ್ತಿ, ವಿಚಾರಗಳಿಂದ ನಿರ್ಣೀತವು. ಅಂತಹ ಸುಖವನ್ನು ಕೊಡುವ ಅನಂತಕಲ್ಯಾಣಗುಣಾಭಿರಾಮನಾದ, ನಿರ್ದೋಷನಾದ, ಜಗತ್ಸ್ವಾಮಿಯೂ, ವೇದೈಕವೇದ್ಯನೂ ಆದ ಪರಮಾತ್ಮನು ವೇದಾದಿ ಸದಾಗಮಗಳಿಂದ ಸಿದ್ಧನಾಗುವನಲ್ಲದೆ ಜೀವನ ಅನುಭವದಿಂದ ಸಂಭಾವಿತನು. ಇಂತಹ ಪರಮಾತ್ಮ ಪ್ರಾಪ್ತಿಗೆ ಸಾಧನಗಳು ವಿವಿಧ ಪ್ರಕಾರವಾಗಿ ಉಕ್ತವಾಗಿವೆ. ಶಮದಮಾದಿ ಸಂಪತ್ತು, ಅಧ್ಯಯನ, ಯಜ್ಞ, ದಾನ, ತಪಸ್ಸು, ನಿಷ್ಕಾಮಕರ್ಮಾನುಷ್ಠಾನ, ವೈರಾಗ್ಯ, ಶಾಸ್ತ್ರಶ್ರವಣ, ಮನನ ನಿದಿಧ್ಯಾಸನ ಮತ್ತು ಭಕ್ತಿ ಇವೆಲ್ಲ ಜೀವರುಗಳು ಮಾಡಬೇಕಾದ ಸಾಧನೆಗಳು. ಇಷ್ಟಾದರೂ ಭಗವಂತ ತಾನಾಗಿ ಒಲಿದರೇ, ಅವನ ಪ್ರಸಾದ ಲಭ್ಯವಾದರೆ ಅವನು ದೊರಕುವನು. ಇಂತಹ ಪ್ರಸಾದವನ್ನು ಒದಗಿಸಿಕೊಡಬಲ್ಲ ಶಕ್ತಿ ಇರುವುದು ಭಕ್ತಿ ಒಂದಕ್ಕೇ. ಆದ್ದರಿಂದಲೇ ಭಕ್ತಿಯನ್ನು ಉತ್ತಮ ಸಾಧನವೆನ್ನುವುದು. ಇಂತಹ ಸಾಧನೆಗಳೆಲ್ಲ ಭಕ್ತಿ ಸಹ್ಕೃತವಾದರೆ ಮಾತ್ರ ಸಾರ್ಥಕವಾಗುವುವು. ಆದುದರಿಂದ ಭಕ್ತಿಯು ಎಲ್ಲ ಸಾಧನೆಗಳ ಜೀವಾಳವು. ಇದೇ ಭಕ್ತಿಯೇ ಮುಕ್ತಿಯ ಅನಂತರದಲ್ಲಿ

ಮುಖ್ಯಮೇಷೈವನಾನ್ಯಸ್ಯಾ ತ್ಸರ್ವಂ ವ್ಯರ್ಥಂ ತಯಾ ವಿನಾ । ಸೈಕಾ ಹ್ಯಭೀಷ್ಟಫಲದಾ ಮೋಕ್ಷೋ ದರ್ಶನಯುಕ್ತಯಾ। ದರ್ಶನಂ ಚ ತಯಾ ಹೀನಂ ವ್ಯರ್ಥಮನ್ಯತ್ಕಿಮುಚ್ಯತೇ ಯೋಗ್ಯಂತು ದರ್ಶನಂ ನೈವ ತಯಾ ಹೀನಂ ಭವಿಷ್ಯತಿ ।

85 ಅಪರೋಕ್ಷಜ್ಞಾನಿನೋಽಪಿ ಸ್ವಯೋಗ್ಯ ಪರಮಾನಂದಹೇತು ಪರಾಕಾಷ್ಠಾಪನ್ನ ಭಕ್ತ್ಯಭಾವೇ ತತ್ಸಾಧ್ಯ ಮೋಚಕ ಪ್ರಸಾದಸ್ಯ ಅಭಾವೇನ ... । —ನ್ಯಾಯಾಮೃತಮ್

86 ಮುಕ್ತಾನಾಮಪಿ ಭಕ್ತಿ ರ್ಹಿ ನಿತ್ಯಾನಂದಸ್ವರೂಪಿಣೀ॥ —ತಾತ್ಪರ್ಯನಿರ್ಣಯಃ ೧—೧೦—೭ ಸಾಧನಾನಿ ತು ಸರ್ವಾಣಿ ಭಕ್ತಿಜ್ಞಾನ ಪ್ರವೃದ್ಧಯೇ । ನೈವಾನ್ಯಸಾಧನಂ ಭಕ್ತಿಃ ಫಲರೂಪಾ ಹಿ ಸಾ ಯತಃ ॥ — ಬೃಹದ್ಭಾಷ್ಯಮ್.

ii ಹರೇರುಪಾಸನಾ ಚಾತ್ರ ಸದೈವ ಸುಖರೂಪಿಣೀ । ನ ತು ಸಾಧನಭೂತಾ ಸಾ ಸಿದ್ಧಿರೇವಾತ್ರ ಸಾ ಯತಃ । ಸೂ. ಭಾ. ೪೪—೨೧

iii ಭಗವದುಪಾಸನಸ್ಯ ಕಾರಣಸ್ಯ ಸದ್ಭಾವಾ ತ್ಕಥಂ ಕಾರಣಾಭಾವ ಇತ್ಯತ ಆಹ ಹರೇರಿತಿ। ಮುಕ್ತಿಗತೋಪಾಸನಸ್ಯ ಫಲತ್ವಾ ನ್ನ ಸುಖಸಾಧನಮಿತ್ಯರ್ಥಃ ॥ —ಗೀತಾ

ಸುಖರೂಪವಾಗಿ ಫಲವೆನಿಸುವುದು. ಹೀಗೆ **ಉತ್ತಮಸಾಧನತ್ವ, ಇತರ ಸಾಧನಾಂಗತ್ವ** ಮತ್ತು **ಫಲರೂಪತ್ವ** ಈ ಮೂರು ಧರ್ಮಗಳು ಭಕ್ತಿಯ ಮಹತ್ವಕ್ಕೆ ಕಾರಣವಾಗಿವೆ. ಭಕ್ತಿಯ ಸ್ವರೂಪವೇ ಅದಕ್ಕೆ ಇಷ್ಟು ಪ್ರಾಮುಖ್ಯತೆಯನ್ನು ಕೊಡಲು ಕಾರಣವು.

1. ಚೇತನ ಸ್ವಭಾವ

ಜಗತ್ತಿನಲ್ಲಿರುವ ಪದಾರ್ಥಗಳು ಜಡ, ಚೇತನ ಎಂದು ಎರಡು ವಿಧ. ಜ್ಞಾನ, ಇಚ್ಛಾ, ಪ್ರಯತ್ನ ಉಳ್ಳವನು ಜೀವನು. ಅವಿಲ್ಲದ್ದು ಜಡವು. ತಾನು ಚೇತನ ಜಡವಲ್ಲ; ತನ್ನ ದೇಹ, ಅಂಗಾಂಗಗಳು ಜಡ; 'ನಾನು' ಎಂಬ ವಸ್ತು ಇವಕ್ಕಿಂತ ಭಿನ್ನ ಎಂಬ ಅನುಭವವು ಪ್ರತಿಯೊಬ್ಬನಿಗೂ ತಾನೇ ತಾನಾಗಿ ಉಂಟಾಗುವುದು. ಅಷ್ಟೇ ಅಲ್ಲ, ಪ್ರತ್ಯಕ್ಷಕ್ಕೆ ಗೋಚರವಾದ ಹಸು, ಕತ್ತೆ, ನಾಯಿ ಮೊದಲಾದ ಪಶುಗಳೂ ತನ್ನಂತೆ ಚೇತನರು; ನದಿ, ಪರ್ವತ, ಕಂಬ, ಗೋಡೆ–ಇವುಗಳಂತೆ ಜಡವಲ್ಲ ಎಂಬ ಜ್ಞಾನವೂ ಸ್ಫುಟತರವಾಗಿರುವುದು. ತಾನು ಬದುಕಿರಬೇಕು; ಸುಖವಾಗಿರಬೇಕು; ದು:ಖಹೊಂದಬಾರದೆಂಬ ಅಭಿಲಾಷೆಯು ಪ್ರತಿಯೊಬ್ಬನಿಗೂ ಸಹಜವಾಗಿರುವುದು. ತನ್ನಲ್ಲಿ ತನಗೆ ಇರುವ ದೃಢತರವಾದ ಪ್ರೇಮವೇ ಈ ಅಭಿಲಾಷೆಗೆ ಮೂಲ. ತನ್ನ ಬಗೆಗೆ ಒಲವೇ ತನ್ನ ಇರುವಿಗೆ ಕಾರಣವಾದ ಭಾವನೆಯು. ಇಲ್ಲದಲ್ಲಿ ಜೀವನು ಜಡತುಲ್ಯನಾಗಿ ನಾಶಹೊಂದುವನು. ಈ 'ಇರ – ಬಯಕೆ'(will to live)ಯಿಂದಲೇ ಭಕ್ತಿ ಪ್ರೇಮಾದಿಗಳೆಲ್ಲ ಹೊರಹೊಮ್ಮಿದವು.[1] ಆಧುನಿಕ ಪಂಡಿತರು, ವಿಕಾಸವಾದಿಗಳೂ ಸಹ ಚೇತನವಿಕಾಸಕ್ಕೆ ಈ ತೀವ್ರಅಭಿಲಾಷೆ ಕಾರಣವೆಂದು ಹೇಳುವರು. ಇದು ಆದಿಮಾನವನ–ಅಷ್ಟೇ ಅಲ್ಲ. ಆದಿಚೇತನದ ವಿಕಾಸದಿಂದ ಕಂಡುಬರುವ ಅಂಶವೆಂದೂ ಹೇಳುವರು.

ತನ್ನ ಇರುವಿನ ಬಗ್ಗೆ ಇರುವ ಆಸಕ್ತಿಯ ಜತೆಗೆ ತನ್ನ ಬದುಕಿಗೆ ಸಹಕಾರಿಯಾದ ಕೃತಿಗಳಲ್ಲಿ ಆಸಕ್ತಿ ಹುಟ್ಟುವುದೂ ಸ್ವಾಭಾವಿಕವೇ. ಭೋಜನ ನಿದ್ರಾದಿಗಳು ಚೇತನರಿಗೆ ಅಂತೆಯೇ ಪ್ರಿಯವಾದ ಕಾರ್ಯಗಳು. ಇದರಂತೆಯೇ ಆಹಾರಾದಿ ಭೋಗ್ಯವಸ್ತುಗಳೂ ಹಿತವೆನಿಸುವುದು. ಆಹಾರ ನಿದ್ರೆಯಂತೆಯೇ ಮೈಥುನವೂ ಸುಖಪ್ರದವೆಂದು ತಿಳಿದ ಜೀವನಿಗೆ ಮೈಥುನಕ್ರಿಯೆ, ಇದಕ್ಕೆ ವಿಷಯವಾದ ವಸ್ತುವಿನಲ್ಲೂ ಆಸಕ್ತಿ ಹುಟ್ಟುವುದು. ಇದರಂತೆಯೇ ತನ್ನ ಬಳಗಗಳಲ್ಲಿ ತನ್ನವರೆಂಬ ವಿಶ್ವಾಸ, ತನಗೆ ಹಿತೈಷಿಗಳಾದವರೆಲ್ಲರಲ್ಲೂ, ಎಲ್ಲ ಕಾರ್ಯ, ಎಲ್ಲ ಸನ್ನಿವೇಶಗಳಲ್ಲೂ ವಿಶ್ವಾಸ ಬೆಳೆಯುವುದು. ಇವೆಲ್ಲಕ್ಕೂ ಮೂಲ 'ನಾನು–ನನ್ನದು' ''ಅಹಂ–ಮಮತಾ'' ಎಂಬ ಭಾವನೆ ಒಂದೇ ಆದರೂ, ಚೇತನರ ಧರ್ಮ, ಅಭಿರುಚಿ, ಸ್ವಭಾವ ಭಿನ್ನವಾದ್ದರಿಂದ ಬೇರೆ ಬೇರೆ ಚೇತನರ ಪ್ರೀತಿಗೆ

1. The first beginning of all things is a craving. -Evelyn Underhill; Essentials of Mysticism.

We are creatures of Will and desire. Boehme.

ಪಾತ್ರವಾದ ವಸ್ತು, ಕೃತಿಗಳೂ ಭಿನ್ನವಾಗುವುವು. ಕೆಲವರಿಗೆ ಸಿಹಿಯಲ್ಲಿ ಅಭಿರುಚಿಯಾದರೆ ಕೆಲವರಿಗೆ ಖಾರದಲ್ಲಿ. ಕೆಲವರದು ದರ್ಪದ ಮನೋಭಾವವಾದರೆ ಕೆಲವರದು ಶಾಂತ ಸ್ವಭಾವ. ಕೆಲವರಿಗೆ ಅತಿ ನಿದ್ರೆಯಾದರೆ ಮತ್ತೆ ಕೆಲವರಿಗೆ ಅತಿ ಆಹಾರ ಬೇಕು. ಹೀಗೆ ಧರ್ಮಾದಿಗಳು ಬದಲಾಗುವುವು. ಅಂತೂ ಪ್ರತಿಯೊಬ್ಬ ಚೇತನರಿಗೂ ಮೊದಲು ತನ್ನಲ್ಲಿ ಮತ್ತೆ ತನಗೆ ಹೊಂದಿದ ಉಳಿದವರಲ್ಲಿ ಆಸಕ್ತಿ ಮೂಡುವುದು. ಅದರಂತೆಯೇ ತನ್ನ ಸ್ವಭಾವಕ್ಕೆ ಹೊಂದದವರಲ್ಲಿ, ತನಗೆ ಬೇಡದ ಕೃತಿಗಳಲ್ಲಿ ಉದಾಸೀನವೋ ಅಥವಾ ದ್ವೇಷವೋ ಮೂಡುವುದು. ಇದು ನಿತ್ಯವಾದ ಚೇತನಧರ್ಮ ಮತ್ತು ಅನಿವಾರ್ಯವಾದುದು. ಜ್ಞಾನ ಉಳ್ಳದ್ದು ಚೇತನ. ಜ್ಞಾನದ ಜೊತೆಗೆ ಇಚ್ಛೆಯೂ ಇರುವುದರಿಂದ ಇದೂ ಜ್ಞಾನದಷ್ಟೇ ಮುಖ್ಯವಾದ ಚೇತನಧರ್ಮ.

ಹೀಗೆ ಚೇತನನಿಗೆ ಪ್ರಿಯಕರವಾದದ್ದು ಬೆಳೆಯುತ್ತ ಹೋಗಿ ಅವನ ಅವಶ್ಯಕತೆಯ ವರ್ತುಲವನ್ನು ದಾಟಿ ಹೋಗುವುದು. ತನ್ನ ದೃಷ್ಟಿಯಲ್ಲಿ ಯಾವುದು ಉದಾತ್ತವಾದುದು, ಉತ್ಕೃಷ್ಟವಾದುದು, ಶ್ರೇಯಸ್ಕರವಾದುದೋ ಅದರ ವಿಷಯದಲ್ಲಿಯೂ ಅವನಿಗೆ ಅಭಿಮಾನ ಮೂಡುವುದು. ಇತರರಲ್ಲಿ ದಯೆ, ಪರೋಪಕಾರ, ಅದಕ್ಕಾಗಿ ಸ್ವಾರ್ಥತ್ಯಾಗ, ಒಂದು ಮಹತ್ತರವಾದ ಕಾರ್ಯಕ್ಕಾಗಿ ಕಷ್ಟಪಡುವುದು. –ಈ ವ್ಯಾಪಾರಗಳಲ್ಲಿ ಪ್ರವೃತ್ತನಾಗುವನು. 'ನಾನು–ನನ್ನದು' ಎಂಬ ಭಾವನೆಗೆ ಇದು ವಿರುದ್ಧವಾದರೂ ಈ ಧ್ಯೇಯ ಆದರ್ಶಗಳು ಪ್ರತಿಯೊಬ್ಬನಲ್ಲೂ ಅವನವನ ಕಲ್ಪನೆ, ಯೋಗ್ಯತೆಗೆ ತಕ್ಕಂತೆ ಇರುವುವು. ಇದರಂತೆ ಜ್ಞಾನ, ಸುಖದ ಹಂಬಲದಿಂದ ಕೀರ್ತಿಯ ಆಸೆಯಿಂದ ಮಾಡತಕ್ಕ ವ್ಯಾಪಾರಗಳೂ ಉಂಟು. ವಿಜ್ಞಾನದ ಶೋಧನೆಗಳು, ಶಿಲ್ಪಾದಿ ಕಲಾರಚನೆ ಈ ಜಾತಿಗೆ ಸೇರಿದವು. ಇದಕ್ಕೂ ಇಚ್ಛೆ, ಅಭಿಲಾಷೆಗಳೇ ಕಾರಣ.

ತನಗೆ ಸುಖಪ್ರದವಾದ ಸುಂದರವಸ್ತು, ಶಾಂತ ಸನ್ನಿವೇಶ, ಆಕರ್ಷಕಧ್ವನಿ, ಪ್ರಿಯವಾದ ನಡವಳಿಕೆ ಇವುಗಳು ಕಲ್ಪನಾರಾಜ್ಯದಲ್ಲಿ ಬೆಳೆದು ಬೇರೂರಿದ ಅವುಗಳ ವಿಸ್ತೃತಭಾವನೆಗಳೇ ಚೇತನರನ್ನು ಅದರಲ್ಲೂ ಮನುಷ್ಯರನ್ನು ತಲ್ಲೀನರನ್ನಾಗಿ ಮಾಡಿಬಿಡುವುದು. ಇದರಿಂದಲೇ ಸಾಹಿತ್ಯದಲ್ಲಿ ಶೃಂಗಾರ, ವೀರ, ಕರುಣಾದಿ ರಸಗಳೂ, ಸುಂದರವಾದ, ಚಿತ್ರ, ಹಿತವಾದ ಸಂಗೀತ, ಅದ್ಭುತ ವಾಸ್ತು ಮೊದಲಾದ ಲಲಿತ ಕಲೆಗಳೂ, ಮನುಷ್ಯನ ಆವಶ್ಯಕತೆಯ ಮೆಟ್ಟಿಲನ್ನು ದಾಟಿದ್ದರೂ ಅವನ ಪ್ರೀತಿಗೆ ವಿಷಯವಾಗುವುವು. ತನಗೆ ಹಿತವಾಗುವುದೆಂಬ ಭಾವನೆಯೇ ಇವುಗಳಿಗೂ ಮೂಲವು. ಕೆಲ ರಸಿಕರಿಗೆ ಶೃಂಗಾರ ರಸ ಅತಿ ಹಿತವಾದರೆ, ಭವಭೂತಿಯಂತಹ ಮೃದುಮಾನವನಿಗೆ ಕರುಣೆಯೇ ಅತ್ಯಂತ ಪ್ರಿಯರಸ. ಕೆಲವರಿಗೆ ಸಂಗೀತವು ಪ್ರಾಣಕ್ಕಿಂತ ಪ್ರೀತ್ಯಾಸ್ಪದವಾದರೆ ಭರತರಾಜನಿಗ ಜಿಂಕೆಯ ಮರಿಯೊಂದು ಜೀವರತ್ನ.

2. ಮಾರ್ಕ್ಸ‌ನ ವಾದ

ಈ ವಿಚಾರ ವಿಮರ್ಶೆಯಿಂದ ಒಂದು ವಿಷಯವು ಸ್ಪಷ್ಟಪಡುವುದು. ಜಗತ್ತಿನ ನಿತ್ಯ ನೈಮಿತ್ತಿಕವಾದ ವ್ಯವಹಾರಗಳೂ ಆಗುಹೋಗುಗಳೂ, ಈ ವಿಶಾಲಪ್ರಪಂಚದ ರಚನೆಯೆಲ್ಲವೂ ಚೇತನಧರ್ಮವಾದ 'ಆಸಕ್ತಿ– ವಿಶ್ವಾಸ–ಪ್ರೇಮ'ದಿಂದ ಹೊರಹೊಮ್ಮಿದವು. ಮಾರ್ಕ್ಸ‌ನ ತರ್ಕಬದ್ಧ ಭೌತಿಕವಾದವು (Dialectical Materialism) ಮಾತ್ರ ಈ ಅಂಶವನ್ನು ಅಲ್ಲಗಳೆಯುವುದು. ಆರಂಭದಿಂದ ಅನ್ನವಸತಿಗಾಗಿ ನಡೆದ ಹೋರಾಟವೇ ಮಾನವ ಇತಿಹಾಸವೆಂದು ಈ ವಾದದ ಹಾರ್ದ. ಆರಂಭದಿಂದ ಈ ವಾದ ಉದಯವಾಗುವವರೆಗೂ ಮಾನವಜನಾಂಗದಲ್ಲಿ ದಲಿತರಿಗೆ ಅನ್ನವಸತಿಗಳ ಸಮವಾದ ಹಂಚಿಕೆ ಇಲ್ಲದೆ ಬಹುಸಂಖ್ಯಾಕರ ಕಷ್ಟದ ಫಲವನ್ನು ಅಲ್ಪಸಂಖ್ಯಾತರು ಅನುಭವಿಸುತ್ತ ಬಂದಿರುತ್ತಾರೆ. ತಮ್ಮ ಜೀವನಪೋಷಣೆ ನಿರಾತಂಕವಾಗಿ ಸಾಗುತ್ತೆಂಬ ಭರವಸೆಪಡೆದ ಈ ಅಲ್ಪಸಂಖ್ಯಾತರು ತಮ್ಮ ಸುಖದ ಮೋಹಕ್ಕಾಗಿ ಲಲಿತಕಲೆ, ಸಾಹಿತ್ಯ, ಸಂಗೀತ, ಧರ್ಮ, ಸತ್ಯ, ನ್ಯಾಯ ಇವೆಲ್ಲವನ್ನೂ ಸೃಷ್ಟಿಸಿಕೊಂಡರು. ಆದ್ದರಿಂದ ಇದಾವುದೂ ಮಾನವ ಸಂಸ್ಕೃತಿಯ ಮುಖ್ಯ ಅಂಗವಲ್ಲ. ಹುಣ್ಣಿನಮೇಲೆ ಚರ್ಮ ಬೆಳೆದಂತೆ ಇವೆಲ್ಲವೂ ಕೃತಕವಾದುದು. ಹಸಿದವ ಎದುರುಬಿದ್ದಾಗ ಇವೆಲ್ಲ ಮಾಸಿಹೋಗುವುದು. ಈ ಸಮತಾವಾದ ಪ್ರಚಾರಕ್ಕೆ ಬಂದದ್ದರಿಂದ ಇನ್ನು ದಲಿತರು, ದಬ್ಬಾಳಿಕೆ ನಡೆಸುವರೆಂಬ ಭೇದ ಮಾಯವಾಗಿ ಮಾನವ ಇತಿಹಾಸದಲ್ಲಿ ಮೊದಲಿನಿಂದ ಯಾವುದಕ್ಕಾಗಿ ಅವ್ಯಾಹತ ಹೋರಾಟ ಸಾಗುತ್ತಿದೆಯೋ, ಆ ದಾರಿದ್ರ್ಯ ಮುಚ್ಚುವುದು ಎಂದು ಆ ತತ್ತ್ವ ಹೇಳುವುದು. ಚೇತನಧರ್ಮವಾದ ಜ್ಞಾನ, ವಿಶ್ವಾಸ ಇದನ್ನೇ ಈ ವಾದವು ಗಣನೆಗೆ ತಂದಂತೆ ತೋರುವುದಿಲ್ಲ. ಯಂತ್ರವೊಂದು ಚಾಲಕಶಕ್ತಿಯಿಲ್ಲದೆ ಹೇಗೆ ನಡೆಯಲಾರದೋ ಮಾನವಜನಾಂಗ ಅನ್ನವಿಲ್ಲದೆ ನಡೆಯಲಾರದು. ಆದ್ದರಿಂದ ಅನ್ನವೇ ಮನುಷ್ಯನಿಗೆ ಸರ್ವಸ್ವ ಎಂಬ ತತ್ತ್ವವನ್ನು ಇದು ಬೆಳೆಸಿದೆ. ಯದ್ಯಪಿ ಅನ್ನ ಅನಿವಾರ್ಯವೆಂದು ಕಂಡುಬಂದರೂ, ಮನುಷ್ಯನಿಗೆ ಅದು ಮುಖ್ಯವಲ್ಲ. ಕೇವಲ ಪಶುತುಲ್ಯರಾದ ಮನುಷ್ಯರಿಗೆ ಇದೇ ಸರ್ವಸ್ವ. ಮನುಷ್ಯ ತಿಳಿವಳಿಕೆ ಬೆಳೆಸಿಕೊಂಡಂತೆ ಇದರ ಪ್ರಾಮುಖ್ಯತೆ ಕಡಮೆಯಾಗುವುದು. ಉಗ್ರವಾದ ತಪಸ್ಸಿನಲ್ಲಿ ಮಗ್ನರಾದವರು ಕೇವಲ ನೀರು ಗಾಳಿಯಿಂದಲೇ ಜೀವಿಸಿದ್ದರೆಂಬ ನಿದರ್ಶನ ಹೇರಳವಾಗಿದೆ. ಮಾರ್ಕ್ಸನು ತನ್ನ ವಾದವನ್ನು ಮುಂದಿಡುವಾಗ ಮನುಷ್ಯರು ಯಾಂತ್ರಿಕಜೀವನದಲ್ಲಿ ಸಿಕ್ಕು ಉಚ್ಚಧ್ಯೇಯಗಳನ್ನು ಮರೆತು; 'ಇರುವುದೇ ತಿನ್ನಲು' (Live to eat) ಎನ್ನುವ ಸ್ಥಿತಿಯಲ್ಲಿದ್ದರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಾನವ ಇತಿಹಾಸದ ಆರಂಭದಿಂದಲೂ, ಬಲಾ ಚ ಪೃಥ್ವೀ ಎಂಬ ತತ್ತ್ವದಂತೆ ಒಬ್ಬರು ಇನ್ನೊಬ್ಬರ ಮೇಲೆ ಹರಿಹಾಯ್ದ ಘಟನೆಗಳೇ ಹೆಚ್ಚು. ಈ ಸಂಸ್ಕಾರದಲ್ಲಿ, ಅಂತಹ ಸನ್ನಿವೇಶದಲ್ಲಿ ಇಡೀ ಜಗತ್ತಿನ

ಭೂತಭವಿಷ್ಯದ್ವರ್ತಮಾನ ಚಿತ್ರ ಮಾರ್ಕ್ಸನಿಗೆ ಆ ರೀತಿ ತೋರಿದುದರಲ್ಲಿ ಆಶ್ಚರ್ಯವೇನಲ್ಲ. ಆದರೆ **ಅದೇ ಚರಮಸತ್ಯವೆಂದು ಸಾರಿದುದುಮಾತ್ರ ತಪ್ಪು.**

ಮಾನವ ಸಂಸ್ಕೃತಿಗೆ ಮೂಲ ಸ್ರೋತವಾದ ಭಾರತದ ಇತಿಹಾಸದಲ್ಲಿ ಹಿಂದೆ ಯಾವಾಗಲೂ ಇಂತಹ ಪಾಶವೀಕಲಹ ನಡೆಯಲಿಲ್ಲ. ಕೃತ–ತ್ರೇತಾ ಯುಗಗಳಲ್ಲಿ ಯಜ್ಞ, ಯಾಗ, ಸ್ವಾಧ್ಯಾಯ, ಪ್ರವಚನಗಳಲ್ಲಿ ಒಬ್ಬರೊಡನೊಬ್ಬರಿಗೆ ಸೆಣಸಾಟವಿದ್ದಿತೇ ಹೊರತು, ಹಸಿವಿಗಾಗಿ ಹೋರಾಟ ನಡೆಯಲಿಲ್ಲ. ಆದ್ದರಿಂದ ಮಾನವನ ಬದುಕಿನ ರಹಸ್ಯ ಅಲ್ಪವಾದ ಅನ್ನಾದಿಗಳಲ್ಲಿಲ್ಲ. ಮನುಷ್ಯನ ಬದುಕಿಗೆ ಆಧಾರವಾಗಿರುವುದು ಅವನ ಇಚ್ಛೆ, ಆಸಕ್ತಿ, ವಿಶ್ವಾಸ, ಪ್ರೇಮ. ಇದೇ ಅವನ ಆಗುಹೋಗುಗಳನ್ನು ನಿರ್ಧರಿಸುವುದು. ಇದರಿಂದಲೇ ಕಲಹ; ಇದರಿಂದಲೇ ಶಾಂತಿ. ಇದರಿಂದ ಅಶನ ವಸನಗಳು. ಮಾರ್ಕ್ಸನ ವಾದದಲ್ಲಿ **ಕಾರಣವನ್ನು ಬಿಟ್ಟು ಕಾರ್ಯವನ್ನು ಮೂಲವಾಗಿ ಪರಿಗಣಿಸಿರುವುದು ಪ್ರಾಮಾದಿಕ.**

3. ಪ್ರೀತಿಯ ಧರ್ಮ

ತಾನು–ತನ್ನದು ಎಂಬುದರಿಂದ ಆರಂಭವಾಗಿ ಬೆಳೆದ ಆಸಕ್ತಿಗೆ, ಪ್ರೀತಿಗೆ ಯಾವುದಾದರೊಂದು ಪಾತ್ರ ಬೇಕೇಬೇಕು. ಬರಿಯ ಜೀವನ ಪೋಷಣೆಯೇ ಮನುಷ್ಯನ ಸರ್ವಸ್ವವಲ್ಲವೆಂಬುದು ಇದುವರೆಗೆ ಜಗತ್ತಿನಲ್ಲಿ ಬೆಳೆದ ಲಲಿತಕಲೆ, ಸಂಗೀತ, ಸಾಹಿತ್ಯ, ಧರ್ಮಾದಿಗಳ ಇತಿಹಾಸದಿಂದಲೇ ವ್ಯಕ್ತಪಡುವುದು. ಅಶನ ವಸನಾದಿಗಳು ಮತ್ತು ವಿಷಯಸುಖವೂ ಮನುಷ್ಯನ ಸರ್ವಸ್ವವಾಗಲಾರದು. ಅವುಗಳಲ್ಲೇ ಮನುಷ್ಯ ಸಂಪೂರ್ಣ ಆಸಕ್ತನಾಗಿರುವುದೂ ಹುಚ್ಚುತನ. ಅದಕ್ಕೆ ಆದಷ್ಟು ಕಡಿಮೆ ಲಕ್ಷ್ಯ ಕೊಡುವುದು ವಿವೇಕಿಯ ಲಕ್ಷಣ. ಆದರೆ ಜೀವನಿಗೆ ಪ್ರೀತಿಸಲು ಒಂದು ವಸ್ತು ಬೇಕೇಬೇಕು. ಏನಿಲ್ಲದಿದ್ದರೂ ಕೊನೆಗೊಂದು ಜಿಂಕೆಯಮರಿಯಾದರೂ ಗಂಟು ಬಿದ್ದಿತು ಭರತರಾಜನಿಗೆ. ತಾನು, ತನ್ನ ಸುಖ ಅಲ್ಪವೆಂದು ತಿಳಿದವನ ಆಸಕ್ತಿಯು ತನ್ನ ಜನರು, ತನ್ನ ಧ್ಯೇಯದ ಕಡೆ ಹೊರಳುವುದು. ಅರ್ಜುನ ಯುದ್ಧಕ್ಕೆ ಮೊದಲು ಈ ಸ್ಥಿತಿಯಲ್ಲಿದ್ದ. ತನ್ನ ಬಾಂಧವರಿಗಾಗಿ ತಾನು ರಾಜ್ಯಕೋಶಗಳನ್ನು ಬಿಡಲು ಸಿದ್ಧನಾಗಿದ್ದ. ಅವರನ್ನು ಕೊಲ್ಲದಿರಲು ಬೇಕಾದಷ್ಟು ಧರ್ಮಬೋಧನೆಯನ್ನು ಸಂಗ್ರಹಿಸಿಟ್ಟಿದ್ದ. ಅವನು ಹೇಳುವುದು ಸರಿಯಲ್ಲವೆಂದೂ, ಅದೆಲ್ಲ ಅವನ 'ಅಹಂ–ಮಮತಾಭಿಮಾನ'ದ ಫಲವೆಂದೂ ಉಪದೇಶಿಸಿ ಭಗವಂತ ಅವನ ಮೋಹವನ್ನು ಅತ್ತ ಸರಿಸಿದ.

"ಮಾತ್ರಾ ಸ್ಪರ್ಶಾಸ್ತು ಕೌಂತೇಯ ಶೀತೋಷ್ಣ ಸುಖದುಃಖದಾಃ। ಆಗಮಾ ಪಾಯಿನೋಽನಿತ್ಯಾಸ್ತಾನ್ ತಿತಿಕ್ಷಸ್ವ ಭಾರತ॥" ಎಂಬ ಭಗವಂತನ ವಚನವು ಇಡೀ ಗೀತೆಯ ಮುಖ್ಯ ತಳಹದಿ. ಇದರ ಹಿನ್ನಲೆಯನ್ನು ವಿಚಾರ ಮಾಡುವುದು ಅವಶ್ಯಕ.

ನೀರಿನಿಂದ ಹೊರಗೆ ಹೇಗೆ ಮೀನು ಬದುಕಲಾರದೋ, ಹಾಗೆ ಯಾವುದರಲ್ಲೂ ಅನಾಸಕ್ತನಾಗಿ ಮನುಷ್ಯ ಬದುಕಲಾರ. ಅವನ ಆಸಕ್ತಿ ತೀವ್ರವಾದಷ್ಟೂ ಅವನ ಜೀವನ ಪೂರ್ಣವಾಗಿ ವಿಕಸಿತವಾಗುವುದು. ಆದರೆ ಇಂತಹ ಆಸಕ್ತಿ ಮೂಡುವ ಪದಾರ್ಥ ಆಶು ವಿನಾಶಿಯಾದರೆ ಆ ಪ್ರೀತಿಯು ದುಃಖದಲ್ಲಿ ಪರ್ಯವಸಾನ ಹೊಂದುವುದು. ಭರತ ರಾಜರ ಜೀವನವೇ ಇದಕ್ಕೆ ತಕ್ಕ ನಿದರ್ಶನ. ಭರತರಾಜರ ಅತ್ಯಂತ ಪ್ರೀತಿಗೆ ಪಾತ್ರವಾದ ಜಿಂಕೆ ಸತ್ತುಹೋದದ್ದರಿಂದ ಅವರ ಜೀವನವೇ ಶೂನ್ಯವಾಯಿತು. ಅದೇ ಕೊರಗೇ ಬೃಹದಾಕಾರ ತಳೆದು ಅವರ ಜೀವನವನ್ನು ಮುಗಿಸಿ ತಾನು ಜೀವಂತವಾಯಿತು. ಮುಂದೆ ಇದರಿಂದಲೇ ಅವರೂ ಜಂಕೆಯಾದರು. ಮತ್ತೂ ಒಂದು ಜನ್ಮ ಕಳೆಯಬೇಕಾಯಿತು, ಅವರು ಇದರ ಪಾಶದಿಂದ ಮುಕ್ತರಾಗಲು. ಆದ್ದರಿಂದ ಆಸಕ್ತಿ ತೀವ್ರವಾಗಬೇಕಾದುದೇನೋ ಅಪೇಕ್ಷಣೀಯವಾದರೂ, ಅದಕ್ಕೆ ಅಧಿಕರಣವಾದ ಪಾತ್ರ ಆಶು ವಿನಾಶಿಯಾಗಬಾರದು. ಅದು ದೋಷಗ್ರಸ್ತವೂ ಆಗಬಾರದು. ಅದು ಸದೋಷವಾದರೆ ಅದರಲ್ಲಿ ಮಾಡುವ ಪ್ರೀತಿ ಸುಖದ ಹಂಬಲದಿಂದ ಸುರುವಾದರೂ ದುಃಖದಲ್ಲಿ ಅಂತ್ಯವಾಗುವುದು. ವಿಷಯಸುಖಗಳಲ್ಲಿನ ಅಭಿಮಾನ ಈ ಕೋಟಿಗೇ ಸೇರಿದ್ದು. ಇದರಿಂದ ಯಾವ ಸತ್ಪರಿಣಾಮವೂ ಆಗಲಾರದೆಂದು ಭಗವಂತ ಅರ್ಜುನನಿಗೆ ವಿಸ್ತಾರವಾಗಿ ನಿರೂಪಿಸಿದ.

ಮುದ್ದು ಮಗನಲ್ಲಿ ಅತ್ಯಂತ ಮೋಹಗೊಂಡ ಚಿತ್ರಕೇತುರಾಜನಿಗೆ ತೊಟ್ಟಿಲ ಮಗುವೇ ಇದನ್ನು ಉಪದೇಶಿಸಿತು. ಇಂತಹ ವಿಷಯಸುಖಗಳನ್ನು ಬಿಟ್ಟರೆ ಇನ್ನು ಸಾಹಿತ್ಯ, ಕಲೆ, ಸಂಗೀತಾದಿಗಳಲ್ಲಿ ಮನಸ್ಸು ಆಸಕ್ತವಾಗಬೇಕು. ಇದು ಕೇವಲ ವೈಯಕ್ತಿಕ ವಾತಾವರಣದಷ್ಟು ಸಂಕುಚಿತವಲ್ಲದಿದ್ದರೂ ಬರಿಯ ಬಾಯಾಡಿಸಿದಂತೆ "ಆಕಾಶ ರೋಮಂಥನ" ಇದು ವ್ಯರ್ಥವಾಗುವುದು. ಅತ್ಯವಶ್ಯವಾಗಿ ಹರಿಯಲೇ ಬೇಕಾದ ಒಂದು ಪ್ರವಾಹವನ್ನು ಮರಳುಗಾಡಿನಲ್ಲಿ ಹರಿಸಿದಂತೆ ಆಗುವುದು ಇದರ ಪರಿಣಾಮ. ಅದರಿಂದ ಯಾವ ಫಲವೂ ಆಗಲಾರದು. ಆಗುವ ಸುಖವೂ ಕ್ಷಣಿಕ. ಅದೂ ಭಾವನಾಪರವಶವಾದುದು. ಮನುಷ್ಯನ ಜೀವ–ಜೀವಾಳವಾದ, ಆತ್ಮಸ್ರೋತರೂಪವಾದ ಪ್ರೀತಿಗೆ ಸರಿಯಾದ ಅಧಿಕರಣ ಪಾತ್ರ ದೊರತರೇ ಅವನ ಇರವು ಶಕ್ಯ ಮತ್ತು ಸಾರ್ಥಕ. ಆಗ ಅವನದು ತುಂಬುಜೀವನ. ಮಾನವ ಇತಿಹಾಸದಲ್ಲಿ ಮೊದಲಿನಿಂದ ಉದ್ಬುದ್ಧವಾದ ಪ್ರಶ್ನೆಯೇ ಇದು. ಇದಕ್ಕೆ ತಕ್ಕ ಕಾರಣ ದೊರೆತರೆ ಆ ಪ್ರಶ್ನೆ ಪರಿಹಾರವಾದಂತೆಯೇ. ಜೀವನದ ಉಳಿದೆಲ್ಲ ಏರು ಪೇರುಗಳೂ, ಹಂಬಲವೂ ಆಗ ಪೂರೈಸುವುವು. ಅತ್ಯಾಧುನಿಕ ವಾದದಿಂದ ಹುಟ್ಟುವ ಸಮಸ್ಯೆಯೂ ಬಿಡುವುದು.

4. ಪ್ರೀತಿಗೆ ಉತ್ತಮ ಪಾತ್ರ ಭಗವಂತ.

ಮನುಷ್ಯನ ಪ್ರೀತಿಭಾಜನವಾಗುವ ವಸ್ತು ಮನುಷ್ಯನಿಗಿಂತ ಅತ್ಯಂತ ಉದಾತ್ತವಾಗಿರಬೇಕು. ತನಗಿಂತ ಕೀಳಾದವರಲ್ಲಿ ಮಾಡುವ ಪ್ರೀತಿ ಆತ್ಮಪ್ರತಿಷ್ಠೆಯಾಗಿ ತನ್ನಲ್ಲೇ ಬಂದು

ನಿಲ್ಲುವುದು. ತನಗಿಂತ ಉತ್ತಮರಲ್ಲಾದರೆ ಅಲ್ಲೇ ನೆಲೆಸುವುದು. ಪ್ರೀತಿಪಾತ್ರವಾದ ಅಧಿಕರಣವು ಮನುಷ್ಯನ ಕಲ್ಪನೆಗೆ ಮೀರಿ ಶುಭಾವಹವೂ, ಪರಿಪೂರ್ಣವೂ ಆಗಿರಬೇಕು. ಮನುಷ್ಯನ ಜ್ಞಾನವಿಷಯವಾದ ಎಲ್ಲ ಪದಾರ್ಥಕ್ಕಿಂತಲೂ ಅದು ಉತ್ಕೃಷ್ಟತರವಾಗಿರಬೇಕು. ಅದು ಅತ್ಯಂತ ದುರ್ಬಲವಾಗಿದ್ದು ಪ್ರೀತಿಯ ಒಲುಮೆಯಿಂದ ಬಹುಕಾಲ ಸಾಧನೆಯಿಂದ ದೊರಕುವಂತಹುದಾಗಿರಬೇಕು. ಸಾಹಿತ್ಯ–ಸಂಗೀತಾದಿಗಳಲ್ಲಿ ಜೀವನ ಅರಸುವಿಕೆ, ತೊಳಲಾಟ, ತಕ್ಕಮಟ್ಟಿಗೆ ಇರುವುದು. ಆದರೆ ಇದು ಪ್ರಮಾದಜನ್ಯ, ಕ್ಷಣಿಕ.

ಮನುಷ್ಯನ ನಿರಂತರ ಸಾಧನೆಯಿಂದ ದೊರಕಿದ ಪಾತ್ರವು ತನ್ನ ಸ್ವಭಾವಕ್ಕೆ ಅತ್ಯಂತ ಹಿತಕರವಾಗಿರಬೇಕು; ನಿಕಟವರ್ತಿಯಾಗಿರಬೇಕು; ಸ್ನೇಹನಿಧಿಯಾಗಿರಬೇಕು. ಆಗಲೀಗ ಅದನ್ನು ಪಡೆದು ಜೀವ ಕೊನೆಯವರೆಗೂ ಅಲ್ಲೇ ಸಾಂತ್ವನೆಯನ್ನೈದುವನು[2] ಅದೇ ಅವನ ಜೀವನದ ಪರಮ ಧ್ಯೇಯ; ಪರಮ ಪುರುಷಾರ್ಥ, ಪ್ರೀತಿ ಆಗ ಸಾರ್ಥಕವಾಗುವುದು. ಆಗಮವು ಇಂತಹ ವಸ್ತುವನ್ನೇ ದೊರಕಿಸಿಕೊಡುವುವು. ಧರ್ಮಗಳು ಇದನ್ನು ತೋರಲು[3] ಹೊಣಗುವುವು. ಅಂತೆಯೇ ಮಾನವಜೀವನಾಧ್ಯಾಯದಲ್ಲಿ ಅವನ ಅಂತರ್ಯಕ್ಕೆ ಹೊಂದಿದ ಪ್ರಪ್ರಥಮ ಪರಿಚ್ಛೇದವೇ 'ಧರ್ಮ'ಗಳದು. ಜಗತ್ತಿನ ಎಲ್ಲ ಮೂಲೆ ಮೂಲೆಗಳಲ್ಲೂ ಮೊದಲು ಧರ್ಮದಿಂದ ತನ್ನ ಪ್ರೀತಿಯ ಆಶ್ರಯಸ್ಥಾನವನ್ನು ಅರಸುವ ಯತ್ನಮಾಡಿದ ಮಾನವ ಇದರಲ್ಲಿ ಯಶಸ್ವಿಯೂ ಆದ. ಆದರೆ ಇಂತಹ ಉಚ್ಚ ಆದರ್ಶವನ್ನು ಬಹು ಬೇಗ ಮರೆತುಬಿಡುವಂತಹ ದೌರ್ಬಲ್ಯ ಅವನಲ್ಲಿದ್ದು ಅವನೀಗ ಮತ್ತೆ ಪಶುವೃತ್ತಿಯಲ್ಲಿದ್ದಾನೆ.

ಹೀಗೆ ಮಾನವಜೀವಿತದ ಏಕಮಾತ್ರ ಸಂಜೀವಿನಿಯಾದ ಪ್ರೇಮಪ್ರವಾಹಕ್ಕೆ ಪಾತ್ರ ಭಗವಂತ. ಇಂತಹ ಭಗವಂತನೆಡೆಗೆ ಹರಿಯುವ ಪ್ರೇಮಪ್ರವಾಹವೇ ಭಕ್ತಿಯು. ಹಿಂದೆ ವಿವರಿಸಿದಂತೆ ಇದು ಪರಮಾತ್ಮನಲ್ಲಿ ಮಾತ್ರ ಹೋಗಿ ನಿಲ್ಲಬಲ್ಲದು. ಇತರರಿಗೆ ಜೀವನ ಈ ಜೀವಾಳವನ್ನು ಸಾರ್ಥಕಪಡಿಸುವ ಶಕ್ತಿಯಿಲ್ಲ. ಅಂತೆಯೇ ಭಕ್ತಿಯ ಲಕ್ಷಣವನ್ನು ಹೇಳುವಾಗ ಶ್ರೀಟೀಕಾಕೃತ್ಪಾದರು ತನ್ನ ಧ್ಯೇಯದಲ್ಲಿ ಉತ್ಕೃಷ್ಟವಾದ ಪರಮೇಶ್ವರನಲ್ಲಿ

---

2. First the self is inclined to learn true wisdom. It awakes to new needs, is cured of its belief in sham values and distinguishes between real and unreal objects of desire. That craving for more life and more love which lies at the very heart of our selfhood; here slips from the charmed circle of the senses into a wider air. --Essentials of Mysticism.

3. The devine discontent, the hunger for reality, the unwillingness; to be satisfied with the pure animal or the purely social level of consciousness is the first essential stage in the development of the mystical consciousness.

--ibid

ವಿಘ್ನಗಳನ್ನುದೂಡಿ ಹರಿಯುವ ನಿರಂತರಪ್ರೇಮಪ್ರವಾಹವೇ ಭಕ್ತಿಯೆಂದು ಕರೆದಿರುವರು.[4]

5. ಭಕ್ತಿಯ ರೂಪರೇಷೆಗಳು.

ಒಂದು ವಸ್ತುವಿನಲ್ಲಿ ಸ್ವಾಭಾವಿಕವಾದ ಆಸಕ್ತಿ ಅಂಕುರಿಸುತ್ತದೆ. ಆದರ ಸಂಬಂಧ ಹತ್ತಿರವಾದಂತೆಲ್ಲ, ಅದರೊಡನೆ ವ್ಯವಹಾರ ಬೆಳೆದಂತೆಲ್ಲ, ಅದರ ವಿಷಯ ಹೆಚ್ಚು ಹೆಚ್ಚು ತಿಳಿದಂತೆಲ್ಲ, ಆ ಆಸಕ್ತಿ ದೃಢವಾದ ಪ್ರೇಮದಲ್ಲಿ ಪರ್ಯವಸಿತವಾಗುತ್ತದೆ. ಇದು ಲೋಕದಲ್ಲಿ ರೂಢಿ. ಇದರಂತೆ, ಸ್ವಾಭಾವಿಕವಾಗಿ ತನಗೆ ಅರಿವಿಲ್ಲದೆಯೇ ಆ ಭಗವಂತನಲ್ಲಿ ಆಸಕ್ತಿ ಹುಟ್ಟುವ ಜೀವನಿಗೆ, ವೇದಾದಿ ಸಚ್ಛಾಸ್ತ್ರ ಶ್ರವಣಾದಿಗಳಿಂದ ಪರಮಾತ್ಮನ ಮಹಿಮಾತಿಶಯಗಳು ತಿಳಿಯುತ್ತ ಬಂದಂತೆ ಅವನಲ್ಲಿಯ ಪ್ರೇಮ ಗಾಢವಾಗುವುದು. ಆ ಪ್ರೇಮ ಗಾಢವಾಗುತ್ತ ಬಂದಂತೆಲ್ಲ ಆ ಭಗವಂತನ ಪ್ರೀತ್ಯರ್ಥವಾದ ಕೃತಿಯನ್ನು ಮಾಡಲು ಮನಸ್ಸು ಹರ್ಷಗೊಳ್ಳುವುದು. ಭಗವಂತನಿಗೆ ಪ್ರಿಯಕರವಾದ ಆಚರಣೆ, ನಡವಳಿಕೆಯನ್ನೇ ನಡೆಸಬೇಕೆಂಬ ಉತ್ಸಾಹ ಉಂಟಾಗುವುದು. ಆವನ ಭಕ್ತವರ್ಗದವರ ಸಂಗವನ್ನೇ ಮಾಡಬೇಕೆನಿಸುವುದು. ಅವನಿಗೆ ಬೇಕಾದುದು ತನಗೆ ಬೇಕು. ಅವನಿಗೆ ಬೇಡಾದುದು ತನಗೂ ಬೇಡವೆಂಬ ಭಾವನೆ ಬೆಳೆಯುವುದು. ತನಗೆ ಪ್ರೀತ್ಯಾಸ್ಪದರೆಲ್ಲರಿಗಿಂತಲೂ ಅವನಲ್ಲಿ ಸ್ನೇಹ ಅತ್ಯಧಿಕವಾಗುವುದು. ಬರುಬರುತ್ತಾ ಜೀವನವೇ ಅವನಿಗೆ ಮೀಸಲು; ಅವನ ಹೊರತು ಜೀವನ ವ್ಯರ್ಥವಷ್ಟೇ ಅಲ್ಲ; ಅದು ಸಾಧ್ಯವೂ ಅಲ್ಲ ಎಂಬ ಉದ್ರಿಕ್ತ ಸ್ಥಿತಿಯುಂಟಾಗುವುದು. ಅವನ ಸಂಬಂಧವೇ ಎಲ್ಲೆಲ್ಲೂ ಭಕ್ತನ ಕಣ್ಣಿಗೆ ಕಟ್ಟಿರುವುದು. ವಿಕ್ರಮ ಊರ್ವಶಿಯಲ್ಲೇ ತಲ್ಲೀನನಾದಂತೆ ಭಕ್ತನೂ ಭಗವದ್ವಿಷಯದಲ್ಲಿ ತಲ್ಲೀನನಾಗುವನು. ಲೋಕದಲ್ಲಿ ಕಾಂತಾದಿಗಳಲ್ಲಿ ಮಾಡುವ ರತಿ ಎಷ್ಟೇ ಗಾಢವಾದರೂ ದುಃಖಾಮಿಶ್ರವಾಗಲಾರದು. ಏಕೆಂದರೆ ಕಾಂತಾದಿಗಳ ಎಷ್ಟೋ ಸ್ವಭಾವಗಳು ಪ್ರೀತಿಸುವವನಿಗೆ ಹೊಂದುವುದಿಲ್ಲ ಮತ್ತು ಈ ಪ್ರೇಮವೆಲ್ಲ ವಿಷಯಸುಖವನ್ನನುಲಕ್ಷಿಸಿ ಬೆಳೆಯುವುದು. ಈ ಪ್ರೇಮದ ಫಲವಾದ ಸುಖವು ದುಃಖಮಿಶ್ರವು ಮತ್ತು ಕ್ಷಣಿಕವೂ ಆದ್ದರಿಂದ ಈ ಪ್ರೇಮವೂ ವಿಶಕಲಿತವಾಗುವುದು. ಆದರೆ ಭಗವಂತನಲ್ಲಿಯ ಪ್ರೇಮ ಇದೆಲ್ಲ ಸಂಕೋಚಗಳನ್ನೂ ಮೀರಿದುದು; ಆದ್ದರಿಂದಲೇ ಸದಾ ಸುಖಕರವು. ಭಗದ್ವಿಷಯಕವಾದ ಜ್ಞಾನ ಹೆಚ್ಚಿದಂತೆಲ್ಲ ಈ ಪ್ರೇಮಪ್ರವಾಹ ತುಂಬಿಬರುವುದು. ಆದರೆ ಇದು ಪ್ರಾಕೃತ ವಸ್ತುಗಳ ಸ್ನೇಹದಂತೆ ಫಲಾಪೇಕ್ಷಿಯಲ್ಲ;

---

4. ಪರಮೇಶ್ವರ ಭಕ್ತಿರ್ನಾಮ ನಿರವಧಿಕಾನಂತಾನವದ್ಯ ಕಲ್ಯಾಣಗುಣತ್ವಜ್ಞಾನಪೂರ್ವಕಃ ಸ್ವಾತ್ಮಾತ್ಮೀಯ ಸಮಸ್ತ ವಸ್ತುಭ್ಯೋಽನೇಕಗುಣಾಧಿಕಃ ಅಂತರಾಯ ಸಹಸ್ರೇಣಾಪ್ಯಪ್ರತಿಬದ್ಧಃ ನಿರಂತರ ಪ್ರೇಮಪ್ರವಾಹಃ। ಯಮಧಿಕೃತ್ಯ ಯತ್ರಾನ್ಯತ್ಪಶ್ಯತಿ ಸಾ ನಿಶಾ ಪಶ್ಯತೋ ಮುನೇರಿತ್ಯಾದಿ.................. —ನ್ಯಾಯಸುಧಾ.

ಭಕ್ತ ಭಗವಂತನನ್ನು ಪ್ರೀತಿಸುವುದು ಪ್ರೀತಿಸುವ ಸ್ವಾಭಾವವಿರುವುದರಿಂದ ಮತ್ತು ಭಗವಂತನೇ ಪ್ರೀತಿಗೆ ಉತ್ತಮ ಪಾತ್ರನಾದ್ದರಿಂದ. ಆದ್ದರಿಂದಲೇ ಭಗವಂತನಲ್ಲಿಯ ಪ್ರೇಮ ಮಾಗಿ ಹಣ್ಣಾಗಲು ಬಹುಕಾಲ ಬೇಕು.[5] ಭಗವಂತನ ಮಹಾತ್ಮ್ಯಜ್ಞಾನಪೂರ್ವಕವಾದ ಈ ದೃಢತರ ಸ್ನೇಹವು[6] ಭಕ್ತನ ಜೀವನವನ್ನೇ ಮಾರ್ಪಾಟು ಮಾಡುವುದು. ಭಕ್ತ ಎಲ್ಲವನ್ನೂ ಭಗದ್ವಿಷಯವಾಗಿ ನೋಡುವನು. ಅವನಿಗೆ ಎಲ್ಲ ಲೌಕಿಕ ಹವ್ಯಾಸವೂ ಮಾಯವಾಗುವುದು. ಭಗವಂತನ–ತನ್ನ ಸಂಬಂಧದಲ್ಲಿ ದುಃಖವಾದರೆ ಅವನು ಅಳುವನು; ಸಂತೋಷವಾದರೆ ನಗುವನು. ಉತ್ಕಂಠತೆಯಿಂದ ಉನ್ಮತ್ತನಾಗುವನು. ಇದೆಲ್ಲ ಲೋಕವಿರುದ್ಧವಾಗಿರುವುದು.[7] ಭಗವದ್ಭಕ್ತರಲ್ಲಿ ಅಗ್ರಗಣ್ಯರಾದ ಪ್ರಹ್ಲಾದರಾಜರ ವರ್ತನೆಯು ನಿಜವಾದ ಭಕ್ತನ ಲಕ್ಷಣವನ್ನು ತಿಳಿಸುವುದು.[8] ಜಗನ್ನಾಥದಾಸರು ಭಕ್ತರ ಚಿತ್ರವನ್ನು ಹೃದಯಂಗಮವಾಗಿ ಚಿತ್ರಿಸಿರುವರು.[9] ಭಕ್ತನಿಗೆ ಭಗವಂತನ ಹೊರತು

5. ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ —ಗೀತಾ.

6. ಮಹಾತ್ಮ್ಯಜ್ಞಾನಪೂರ್ವಸ್ತು ಸುದೃಢಸ್ಸರ್ವತೋಧಿಕಃ।
ಸ್ನೇಹೋ ಭಕ್ತಿರಿತಿ ಪ್ರೋಕ್ತೊ ತಯಾ ಮುಕ್ತಿರ್ನಚಾನ್ಯಥಾ। —ತಾ.ನಿ.

7. ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ।
ಯಸ್ಯಾಂ ಜಾಗರ್ತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥ —ಗೀತಾ

8. ನ್ಯಸ್ತ ಕ್ರೀಡನಕೋ ಬಾಲೋ ಜಡವತ್ತನ್ಮನ ಸ್ತಥಾ। ಕೃಷ್ಣಗ್ರಹಗೃಹೀತಾತ್ಮಾ ನ ವೇದ ಜಗತೀದೃಶಮ್ ॥ ಆಸೀನಃ ಪರ್ಯಟನ್ನಶ್ನನ್ ಶಯಾನಃ ಪ್ರಾಪಿಬನ್ ಬ್ರುವನ್। ನಾನು ಸಂಧತ್ತ ಏತಾನಿ ಗೋವಿಂದಪದರಂಭಿತಃ ॥ ಕ್ವಚಿದ್ರುದತಿ ವೈಕುಂಠಚಿಂತಾಶಬಲ ಚೇತನಃ। ಕ್ವಚಿದ್ಧಸತಿ ತಚ್ಚಿಂತಾಹ್ಲಾದ ಉದ್ಗಾಯತಿ ಕ್ವಚಿತ್ ॥ ನದತಿ ಕ್ವಚಿದುತ್ಕಂಠೋ ವಿಲಜ್ಜೋ ನೃತ್ಯತಿ ಕ್ವಚಿತ್ । ಕ್ವಚಿತ್ತ ದ್ಭಾವನಾಯುಕ್ತಸ್ತನ್ಮಯೋ ನು ಚಕಾರ ಹ ॥ ಕ್ವಚಿದುತ್ಪುಲಕಸ್ತೂಷ್ಣೀಮಾಸ್ತೇ ಸಂಸ್ಪರ್ಶನಿವೃತಃ। ಅಸ್ಪಂದ ಪ್ರಣಯಾನಂದ ಸಲೀಲಾಮೀಲಿತೇಕ್ಷಣಃ ॥

9 ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ! ಸಂಗಸುಖವಿತ್ತು ಕಾಯೋ ಕರುಣಾಸಾಗರ ಅರಿಯರೋ ನೀನಲ್ಲದೆ ಮತ್ತನ್ಯದೇವರ । ಮರೆಯರೋ ನೀಮಾಡಿದ ಅನಿಮಿತ್ತೋಪಕಾರ॥ ತೊರೆಯರೋ ನಿನ್ನಂಘ್ರಿ ಸೇವೆ ಪ್ರತಿವಾಸರ । ಅರಿಯರೋ ಪರತತ್ತ್ವವಲ್ಲದೆ ಇತರ ವಿಚಾರ ॥ ಮೂಕ ಬಧಿರರಂತಿಪ್ಪರೋ ನೋಳ್ಪ ಜನಕೆ । ಕಾಕುಯುಕುತಿಗಳನವರು ತಾರರೋ ಮನಕೆ ॥ ಸ್ವೀಕರಿಸರನರ್ಪಿತ ಒಂದು ಕಾಲಕ್ಕೆ ॥ ಆ ಕೈವಲ್ಯ ಸುಖಭೋಗ ಅವರಿಗೆ ಬೇಕೇ॥.......... ಕಂಡಕಂಡಗಳಲ್ಲಿ ವಿಶ್ವರೂಪ ಕಾಂಬರೋ। ಉಂಡು ಉಣಿಸಿದ್ದೆಲ್ಲ ನಿನ್ನ ಯಜ್ಞವೆಂಬರೋ ॥ ಬಂಡುಣಿಯಂದದಿ ನಾಮಾಮೃತವ ನಂಬರು। ಹೆಂಡಿರು ಮಕ್ಕಳು ನಿನ್ನ ತೊಂಡರೆಂಬರು॥ ....ನಗುವರೋ ರೋದಿಸುವರೋ ನಾಟ್ಯವಾಡೋರೋ । ಬಗೆಯರೋ ಬಡತನ ಭಾಗ್ಯ ಭಾಗವತರು ॥ ತೆಗೆಯರೋ ನಿನ್ನಲ್ಲಿ ಮನ ಒಮ್ಮೆಯಾದರೂ। ಜಗನ್ನಾಥವಿಠಲ ನಿನ್ನವರೇನು ಧನ್ಯರೋ ॥

ಬೇರೆ ಭಾಗ್ಯವಿಲ್ಲ. ಅವನಿಗೆ ವೈಕುಂಠಾದಿ ಲೋಕಗಳೂ ಬೇಡ. ಭಕ್ತಿಯೇ ಅವನ ಸರ್ವಸ್ವ. ಭಕ್ತಿ ಸಾಧನವಷ್ಟೇ ಅಲ್ಲ, ಸಾಧ್ಯವೂ ಹೌದು.[10]

ಭಕ್ತಿ ಚೇತನಧರ್ಮವೂ ಎಲ್ಲ ಧರ್ಮಕ್ಕಿಂತಲೂ ವ್ಯಾಪಕವೂ ಆದ್ದರಿಂದಲೇ ಕರ್ಮ, ಜ್ಞಾನ, ಧ್ಯಾನ, ಇವೆಲ್ಲವೂ ಭಕ್ತಿಯಿಂದ ಬೆರೆತಿರಬೇಕೆಂಬುದು. ಅತ್ಯಂತ ಆದರಪೂರಿತವಾದ ಸಂಬಂಧ ಭಗವಂತನಲ್ಲಿ ಬೆಳೆದಂತೆ ಅದು ಜೀವವನ್ನು ಸುಮ್ಮನಿರಗೊಡಿಸುವುದಿಲ್ಲ. ಅದು ಕ್ರಿಯಾಶಾಲಿ ಯಾದುದು. ಆದ್ದರಿಂದಲೇ ಅದು ತಕ್ಕ ಕರ್ಮವನ್ನು ಜೀವನಿಂದ ಮಾಡಿಸುವುದು.ತನ್ನ ಪ್ರೀತಿಗೆ ಪಾತ್ರರಾದವರಿಗೆ ಹಿತವಾದ ಕಾರ್ಯಮಾಡಬೇಕೆಂಬ ಹಂಬಲ ಪ್ರತಿಯೊಬ್ಬರಿಗೂ ಇರುವುದು. ತನ್ನ ಪ್ರೀತಿಯ ವಸ್ತುವಿನ ವಿಷಯವನ್ನು ಹೆಚ್ಚು ತಿಳಿಯಲು ತವಕಿಸುವನು. ಆದರ ಬಗ್ಗೆ ವಿಶೇಷ ಚರ್ಚೆ ಮಾಡುವನು. ಏಕಾಂತದಲ್ಲಿ ಅದನ್ನು ಕುರಿತು ಧ್ಯಾನ ಮಾಡುವನು. ಈ ಎಲ್ಲ ವ್ಯಾಪಾರಗಳಿಗೂ ವಿಶ್ವಾಸ–ಅಥವಾ ಭಕ್ತಿಯೇ ಹಿನ್ನೆಲೆ. ಆದ್ದರಿಂದಲೇ ಭಕ್ತಿ ಎಲ್ಲ ಹಂತಗಳಲ್ಲೂ ಸೇರಿದ್ದು, ಮತ್ತು ಸಾಧನಗಳಲ್ಲಿ ಉತ್ತಮ ಸಾಧನವೆನಿಸುವುದು. ಭಕ್ತಿಯೇ ಎಲ್ಲಕ್ಕೂ ಅಳತೆಗೋಲು ಎಂದು ಹೇಳಬಹುದು. ಭಕ್ತಿಯಿಂದ ಕೂಡಿದ್ದರೆ, ಉಳಿದೆಲ್ಲ ಸಾಧನಗಳು ಸಾರ್ಥಕವಾಗುವುವು. ಇಲ್ಲದಿದ್ದರೆ ನಿಷ್ಫಲವಾಗುವುವು. ಭಕ್ತಿಯೊಂದು ಪೂರ್ಣವಾಗಿದ್ದು ಉಳಿದೆಲ್ಲ ಸಾಧನಗಳು ವಿಕಲವಾದರೆ ಅಡ್ಡಿ ಇಲ್ಲ. ಏಕೆಂದರೆ ಉಳಿದೆಲ್ಲ ಸಾಧನಗಳ ಇತಿ ಕರ್ತವ್ಯತೆ ಭಕ್ತಿಪ್ರವೃದ್ಧಿಗಾಗಿ.[11] ಇಡೀ ಚೇತನವರ್ಗವೇ ವಿಷ್ಣು ಭಕ್ತರು ತದನ್ಯರು ಎಂದು ಎರಡು ವಿಧ. ಒಂದು ದೈವೀಸಂಪತ್ತಿನ ಗುಂಪು. ಇನ್ನೊಂದು ಆಸುರೀಸಂಪತ್ತಿನ ಗುಂಪು.[12] ಇದು ಚೇತನಧರ್ಮವಾದ ಭಕ್ತಿಯ ಪರಕಾಷ್ಠತೆಯನ್ನು ತಿಳಿಸುವುದು.

---

10. ಭಕ್ತ್ಯರ್ಥಾನ್ಯಖಿಲಾನ್ಯೇವ ಭಕ್ತಿ ರ್ಮೋಕ್ಷಾಯ ಕೇವಲಾ।
ಮುಕ್ತಾನಾಮಪಿ ಭಕ್ತಿರ್ಹಿ ನಿತ್ಯಾನಂದಸ್ವರೂಪಿಣೀ ॥

11. ಸಾಧನಾನಿ ತು ಸರ್ವಾಣಿ ಭಕ್ತಿಜ್ಞಾನ ಪ್ರವೃದ್ಧಯೇ।
ನೈವಾನ್ಯಸಾಧನಂ ಭಕ್ತಿಃ ಫಲರೂಪಾ ಹಿ ಸಾ ಯತಃ ॥

ii ನಿಶ್ಶೇಷಧರ್ಮಕರ್ತಾಪ್ಯಭಕ್ತಸ್ತೇ ನರಕೇ ಹರೇ।
ಸದಾ ತಿಷ್ಠತಿ ಭಕ್ತಶ್ಚೇತ್ ಬ್ರಹ್ಮಹಾಪಿ ವಿಮುಚ್ಯತೇ ॥

iii ಧರ್ಮೋ ಭವತ್ಯಧರ್ಮೋಽಪಿ ಕೃತೋ ಭಕ್ತೈಸ್ತವಾಚ್ಯುತ ।
ಪಾಪಂ ಭವತಿ ಧರ್ಮೋಽಪಿ ಯೋ ನಃ ಭಕ್ತೈಃ ಕೃತೋ ಹರೇಃ ॥

iv ಅಪಿಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಹಿತೋ ಹಿ ಸಃ ॥

12 ದ್ವೌ ಭೂತಸರ್ಗೌ ಲೋಕೇಸ್ಮಿನ್ ದೈವ ಆಸುರ ಏವ ಚ ।
ವಿಷ್ಣುಭಕ್ತಿಪರೋ ದೇವೋ ವಿಪರೀತಸ್ತಥಾಸುರಃ ॥

6. ಪ್ರಸಾದ

ಪ್ರೀತಿ ಯಾವಾಗಲೂ ಇಮ್ಮುಖವಾದುದು. ತಾನು ಒಂದು ವಸ್ತುವನ್ನು ಪ್ರೀತಿಸಿದರೆ, ಆ ವಸ್ತುವಿನಿಂದ ತನಗೆ ಪ್ರತಿಕ್ರಿಯೆಯುಂಟಾಗುವುದು ಸ್ವಾಭಾವಿಕ. ಹೆಂಡಿರು ಮಕ್ಕಳು, ತಂದೆ ತಾಯಿಗಳು, ಬಂಧು ಬಳಗಗಳ ವಿಷಯ ಹಾಗಿರಲಿ; ಮೂಕಪ್ರಾಣಿಗಳಾದ ಹಸು ನಾಯಿ ಮೊದಲಾದ ಪಶುಗಳಲ್ಲಿ ವಿಶ್ವಾಸಮಾಡಿದರೆ, ಅವೂ ಅದಕ್ಕೆ ಓಗುಟ್ಟುವುವು. ದುಷ್ಟ ಮೃಗಗಳನ್ನೂ ಕೂಡ ನೈಜವಿಶ್ವಾಸದಿಂದ ಆತ್ಮೀಯ ಮಾಡಿಕೊಂಡ ನಿದರ್ಶನಗಳು ಅನೇಕ ಇವೆ. ಆದ್ದರಿಂದ ಪ್ರೀತಿ ಮಾಡುವವನಿಗೆ ಎಷ್ಟು ಸಂಬಂಧಪಟ್ಟಿದೆಯೋ, ಅದಕ್ಕೆ ಪಾತ್ರನಾದವನಿಗೂ ಅಷ್ಟೇ ಸಂಬಂಧಪಡಿಸುತ್ತದೆ. ಲೌಕಿಕ ಜೀವನದಲ್ಲೇನೋ ಇದು ಕೂಡಬಹುದು. ಆದರೆ ಇಂದ್ರಿಯಗಳಿಗೆ ಅಗೋಚರನೂ, ಅಪ್ರಾಕೃತ ಸ್ವರೂಪನೂಆದ ಭಗವಂತನಲ್ಲಿ ಮಾಡಿದ ಪ್ರೀತಿಗೆ ಈ ಬಗೆಯ ಉತ್ತರ ದೊರೆಯುವುದೆಂದು? ಭಕ್ತನ ಪ್ರೀತಿಗೆ ಭಗವಂತನ ಅಂಗೀಕಾರ ದೊರೆಯುತ್ತದೆಯೇ? ಈ ಪ್ರಶ್ನೆಗೆ ಶಾಸ್ತ್ರಗಳು 'ಭಗವಂತ ಇದನ್ನು ಅಂಗೀಕರಿಸುವನೆಂದು' ಹೇಳುವುವು. ಭಕ್ತನೂ ಹಾಗೆ ಹೇಳುವನು.[13] ಅನೇಕ ತೊಡಕುಗಳು ಬಂದರೂ ಭಕ್ತನು ಭಕ್ತಿ ಮಾಡುವುದನ್ನು ಬಿಡುವುದಿಲ್ಲ. ಗರ್ಭವಾಸದಿಂದ ಭಗವಂತನಲ್ಲಿ ಭಕ್ತಿಮಾಡಿದ ಪ್ರಹ್ಲಾದ ತಂದೆಯಪ್ರಶ್ನೆಗೆ ಉತ್ತರವಾಗಿ ಹರಿಯ ಆಶ್ರಯವೇ ಜೀವನದಲ್ಲಿ ಸಾಧುವೆಂದು ತಿಳಿಸಿದ. [14] ಪುನಃ ತಂದೆ ಮಾಡಿದ ಪ್ರಶ್ನೆಗೆ ಹರಿಯ ಸೇವೆಯೇ [15] ಉತ್ತಮಾಧ್ಯಯನವೆಂದು ಉತ್ತರಿಸಿದ. ದೈತ್ಯಬಾಲಕರಿಗೂ ಇದೇ ಉಪದೇಶ ಮಾಡಿದ.[16] ತಂದೆಯ ಆಜ್ಞೆಯಂತೆ ನಾನಾ ಹಿಂಸೆಗಳನ್ನು ಸಹಿಸಿದ ಮೇಲೂ ಅವನ ಉಪದೇಶ ಇಷ್ಟು ತೀವ್ರವಾಗಿತ್ತು. ಮೃತ್ಯುವಿನಂತೆ ಭಯಂಕರನಾಗಿ

---

13. 'ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ
ಕುಳಿತು ಪಾಡಲು ನಿಲುವ ನಿಂತರೆ ಒಲಿವೆ ನಿಮಗೆಂಬ ।
ಸುಲಭನೋ ಹರಿ ತನ್ನವರನರಗಳಿಗೆ ಬಿಟ್ಟಗಲನು ರಮಾಧವ–
ನೊಲಿಸಲರಿಯದೆ ಪಾಮರರು ಬಳಲುವರು ಧರೆಯೊಳಗೆ' ॥–ಹರಿಕಥಾಮೃತಸಾರ. ೨. ೪.

14. ತತ್ಸಾಧು ಮನ್ಯೇಽಸುವರ್ಯ ದೇಹಿನಾಂ ಸದಾ ಸಮುದ್ವಿಗ್ನಧಿಯಾಮಸದ್ಗ್ರಹಾತ್।
ಹಿತ್ವಾತ್ಮಪಾತಂ ಗೃಹಮಂಧಕೂಪಂ ವನಂಗತೋ ಯದ್ಧರಿಮಾಶ್ರಯೇತ ॥

15. ಶ್ರವಣಂ ಮನನಂ ವಿಷ್ಣೋಃ ಕೀರ್ತನಂ ಪಾದಸೇವನಮ್।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಮ್ ॥

16. ನಾಲಂ ದ್ವಿಜತ್ವಂ ದೇವತ್ವಮೃಷಿತ್ವಂ ವಾಸುರಾತ್ಮಜಾಃ। ।
ಪ್ರೀಣನಾಯ ಮುಕುಂದಸ್ಯ ನ ವೃತ್ತಂ ನ ಬಹುಜ್ಞತಾ॥
ನ ದಾನಂ ನ ತಪೋ ನೇಜ್ಯಾ ನ ಶೌಚಂ ನ ವ್ರತಾನಿ ಚ ।
ಪ್ರೀಯತೇಽಮಲಯಾ ಭಕ್ತ್ಯಾ ಹರಿರನ್ಯ ದ್ವಿಡಂಬನಮ್ ॥
ತತೋ ಹರೌ ಭಗವತಿ ದಯಾಂ ಕುರುತ ದಾನವಾಃ।
ಆತ್ಮೌಪಮ್ಯೇನ ಸರ್ವತ್ರ ಸರ್ವಭೂತಾತ್ಮನೀಶ್ವರೇ ॥

ತಂದೆಯು ಎದುರಿಗೆಬಂದು ಪ್ರಹ್ಲಾದನನ್ನುಧರ್ಷಿಸಿ ಪ್ರಶ್ನಿಸಿದಾಗಲೂ ಇದೇ ಉತ್ತರ.[17]

ಹೀಗೆ ಒಮ್ಮೆ ಭಗವಂತನಲ್ಲಿ ಮನಸ್ಸು ಲಗ್ನವಾದರೆ, ಬರುಬರುತ್ತಾ ಗಾಢವಾಗುವುದು. ಇದಕ್ಕೆ ವ್ಯಕ್ತವಾಗಿ ಪರಮಾತ್ಮನಿಂದ ಮಾರುತ್ತರ ದೊರೆಯದಿದ್ದರೂ, ಮನಸ್ಸಿನ ಮುಂದೆ ಭಗವಂತನ ವಾಸನಾಮಯ ಪ್ರತಿಮಾದರ್ಶನಾದಿಗಳಾಗುವುವು. ಮತ್ತು ತನ್ನ ಭಕ್ತಿಯ ಕೂಗು ಭಗವಂತನಿಗೆ ಮುಟ್ಟುವುದು, ಅವನು ತನ್ನ ಭಕ್ತಿಗೆ ಒಲಿದೇ ಒಲಿಯುವನೆಂಬ ದೃಢನಂಬಿಕೆಯು ಭಕ್ತನಿಗೆ ಆಗುವುದು. ಜಗತ್ತಿನಲ್ಲಿ ಪ್ರಿಯ ವಸ್ತುವಿನ ವಿರಹದಲ್ಲಿ ಪ್ರೀತಿಸುವವನಿಗೂ ಪ್ರಿಯ ವಸ್ತುವಿಗೂ ಎಷ್ಟೇ ಅಂತರವಿದ್ದರೂ ಅದರಲ್ಲಿ ಮನಸ್ಸು ಮಾರುಹೋಗುವುದು. ಭಗವಂತನಲ್ಲಿ ಈ ಬಗೆಯ ವಿಶ್ವಾಸವೇರ್ಪಡುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಭಗವಂತನೂ ಭಕ್ತನಲ್ಲಿ ಆರಂಭದಿಂದಲೂ ಅನಿಮಿತ್ತವಾದ ಕೃಪೆತೋರುವನೆಂದು ಶಾಸ್ತ್ರವಚನಗಳು ಹೇಳುವುವು. ಭಕ್ತನ ಭಕ್ತಿ ಹೆಚ್ಚಿದಂತೆ ಅದೂ ಹೆಚ್ಚುತ್ತ ಹೋಗುವುದು. ಭಕ್ತರನ್ನು ಉದ್ಧರಿಸಬೇಕೆಂಬ ಪರಮಾತ್ಮನ ಸಂಕಲ್ಪರೂಪವಾದ ಪ್ರಸಾದವೇ ಜೀವನ ಬಂಧನವನ್ನು ತೆಗೆದು ಮೋಕ್ಷವನ್ನು ಕೊಡಬಲ್ಲದು. ಆದ್ದರಿಂದ ಮುಕ್ತಿಗೆ ಭಗವತ್ಪ್ರಸಾದವೇ ಮುಖ್ಯ ಕಾರಣ. ಆ ಪ್ರಸಾದ ಪ್ರಾಪ್ತ್ಯರ್ಥವಾಗಿ ಕರ್ಮ, ಜ್ಞಾನ ವೈರಾಗ್ಯ, ಎಲ್ಲಕ್ಕಿಂತ ಹೆಚ್ಚಾಗಿ–ಭಕ್ತಿಯು ಎಂದು ಶಾಸ್ತ್ರದಲ್ಲಿ ಉಕ್ತವಾಗಿದೆ.[18] ಕಠಶ್ರುತಿಯು[19] ಪರಮಾತ್ಮ ಪ್ರಸಾದವೇ ಜೀವನಿಗೆ ಪರಮಾತ್ಮ ಪ್ರಾಪ್ತಿಗೆ ಕಾರಣವಾಗುವುದು ಎಂದು ಹೇಳಿದೆ. ಪ್ರಸಾದವು ಪರಮಾತ್ಮನಿಷ್ಠವಾದ್ದರಿಂದ ಜೀವರುಗಳ ಸಾಧನೆಯೆಲ್ಲವೂ ವ್ಯರ್ಥವೆಂಬ ಶಂಕೆ ಬರುವುದು. ಆದರೆ ಭಕ್ತಿಯಿಂದ ಭಗವತ್ಪ್ರಸಾದವಾಗುವುದೆಂದು ಎಲ್ಲ ಆಗಮಗಳೂ ಹೇಳುವುವು. ಅಷ್ಟೇ ಅಲ್ಲ. ಭಕ್ತಿಯಿಂದ ಪರಮಾತ್ಮ ಪ್ರಸಾದ.[20] ಆಗುವುದೆಂಬುದನ್ನು ಗೀತೆಯಲ್ಲಿ ಪರಮಾತ್ಮನೇ ಒಪ್ಪಿಕೊಂಡಿರುವನು. ಇದು ಸಹಜವಾಗಿರುವುದು. ಏಕೆಂದರೆ ಭಕ್ತನಿಗೆ

---

17. ನ ಕೇವಲಂ ಮೇ ಭವತಶ್ಚ ರಾಜನ್ ಸ ವೈ ಬಲಂ ಬಲಿನಾಂ ಚಾಪರೇಷಾಮ್ – – – ||

18. ಮೋಕ್ಷಸಾಧನಂ ಚ ಭಗವತ್ಪ್ರಸಾದ ಏವ ತತ್ಸಾಧನಾನಿ ಚ ವಿಷಯವೈರಾಗ್ಯಂ ಭಗವದ್ಭಕ್ತಿ:।
ತದುಪಾಸನಾ ತತ್ಸಾಕ್ಷಾತ್ಕಾರ ಇತಿ ಚತ್ವಾರಿ || —ನ್ಯಾಯಸುಧಾ ೩–೩–೧

19. ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯ: ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ||

20. ಭಕ್ತ್ಯಾ ತ್ವನನ್ಯಯಾ ಲಭ್ಯ ಅಹಮೇವಂ ವಿಧೋಽರ್ಜುನ । —ಗೀತಾ.

ii. ಭಕ್ತ್ಯೈವ ವೃಣುತೇ ವಿಷ್ಣು: ಭಕ್ತ್ಯಾ । ಭೋಗಾನ್ ದದಾತಿ ಚ ।
ಭಕ್ತ್ಯೈವ ದೃಶ್ಯತೇ ನಿತ್ಯಂ ಭಕ್ತ್ಯಾ ಭೋಗಾನ್ ದದಾ ತಿ ಚ ||

iii ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯೇನ ಕೇನಚಿತ್ || —ಪಾದ್ಮ.

ಎರಡು ಅಂಶಗಳು ನಿರ್ಣೀತವಾಗಿರುತ್ತವೆ. ಪರಮಾತ್ಮ ಅತ್ಯಂತ ಸತ್ಯಭೂತನಾದವನು; ಮಹಾಚೇತನನು ಮತ್ತು ಸುಹೃತ್ತಮನು. ಆದ್ದರಿಂದ ಭಕ್ತ ಮಾಡುವ ಭಕ್ತಿಗೆ ಸುಹೃತ್ತಮನು ಓ ಕೊಡಲೇಬೇಕು. ಭಕ್ತನಿಗೆ ಇತರ ವ್ಯಾಪಾರಗಳಲ್ಲಿ ವಿರಕ್ತಿಯು ಬಲಿತು ಭಗವದ್ಯೈಕನಿಷ್ಠಮನಸ್ಸು ಬಂದಂತೆಲ್ಲ ಭಗವಂತನಿಗೆ ಜೀವನಲ್ಲಿಯ ಅನುಗ್ರಹ ನಿಕಟವರ್ತಿಯಾಗಲೇ ಬೇಕು. ಭಕ್ತನಲ್ಲಿಯ ಸ್ನೇಹಕ್ಕೆ ಭಕ್ತಿಯೆಂದರೆ ಭಗವಂತನಲ್ಲಿಯ ಪ್ರೀತಿಗೆ ಪ್ರಸಾದವೆಂದು ಹೆಸರು. ಆ ಪ್ರಸಾದವು ಅಭಿವ್ಯಕ್ತವಾಗಲೇಬೇಕಾದರೆ ಭಕ್ತಿಯು ಜೀವಂತವಾಗಲೇಬೇಕು. ಈ ಉಭಯನಿಷ್ಠ ಸ್ನೆಹವೂ ಸ್ವಾಭಾವಿಕವೇ. ಇದರಲ್ಲಿ ಒಂದು ವಿಕಲವಾದಲ್ಲಿ ಇನ್ನೊಂದು ವಿಕಲವಾದಂತೆಯೇ. ಭಕ್ತಿ ಹುಟ್ಟಿದ ಹೊರತು ಪ್ರಸಾದಕ್ಕೆ ಅವಕಾಶವೇ ಇಲ್ಲ. ಜೀವನ ಧ್ಯೇಯವೇ ಮೋಕ್ಷ; ಅಂದರೆ ಪರಮಾತ್ಮಪ್ರಾಪ್ತಿ. ಉಭಯನಿಷ್ಠ ಸ್ನೇಹವಿಲ್ಲದಿದ್ದಲ್ಲಿ ಸಾಧ್ಯವಿಲ್ಲ. ಈ ಕಾರಣಗಳಿಂದಲೇ 'ನನ್ನನ್ನು ಭಜಿಸು; ನನ್ನಲ್ಲಿ ಮನಸ್ಸಿಡು' ಇತ್ಯಾದಿಯಾಗಿ ಭಗವಂತ, ಪುನಃ ಪುನಃ ಹೇಳುತ್ತಾನೆ. ಗೀತೆಯಲ್ಲಿ ಭಕ್ತಿಯ ಉಲ್ಲೇಖ[21] ಹೆಚ್ಚಾಗಿದೆ. ಕೊನೆಗೆ ಭಕ್ತಿಯ

---

21. 1 ಚತುರ್ವಿಧಾ ಭಜಂತೇ ಮಾಂ ಜನಾಸ್ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ । 7–17
ತೇಷಾಂ ಜ್ಞಾನೀ ನಿತ್ಯಯುಕ್ತ ಏಕ ಭಕ್ತಿರ್ವಿಶಿಷ್ಯತೇ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥ ಮಹಂ ಸ ಚ ಮಮ ಪ್ರಿಯಃ। 7–10
2. ಪುರುಷಸ್ಸಪರಃ ಪಾರ್ಥ ಭಕ್ತ್ಯಾಲಭ್ಯಸ್ತ್ವನನ್ಯಯಾ ॥ 8–22
3. ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೆ
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ 9–22
4. ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ॥ 9–31
5. ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕರು।
ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ॥ 9–34
6. ಮಚ್ಚಿತ್ತಾ ಮದ್ಗತ ಪ್ರಾಣಾಃ ಬೋಧಯಂತಃ ಪರಸ್ಪರಮ್॥
ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥ 10–9
7. ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥ 1–10
8. ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ। ॥ 10–11
9. ಭಕ್ತ್ಯಾತ್ವನನ್ಯಯಾ ಲಭ್ಯ ಅಹಮೇವಂ ವಿಧೋಽರ್ಜುನ ॥
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ । 11–54
10. ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।
ನಿರ್ವೈರಸ್ಸರ್ವಭೂತೇಷು ಯಸ್ಸ ಮಾಮೇತಿ ಪಾಂಡವ । 11–55
11. ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ॥
ಶ್ರದ್ಧಯಾ ಪರಯೋಪೇತಾ ತೇ ಮೇ ಯುಕ್ತತಮಾ ಮತಾಃ ॥ 12–02
12. ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥
13. ಮಾಂ ಚ ಯೋಽವ್ಯ ಭಿಚಾರೇಣ ಭಕ್ತಿಯೋಗೇನ ಸೇವತೇ।
ಸ ಗುಣಾನ್ಸಮತೀತ್ಯೈತಾನ್ ಬ್ರಹ್ಮಭೂತಾಯ ಕಲ್ಪತೇ॥
14. ಭಕ್ತ್ಯಾ ಮಾಮಭಿಜಾನಾತಿ ಯಾವನ್ಯಶ್ಚಾಸ್ಮಿ ತತ್ತ್ವತಃ ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್ 15–55
15. ತಮೇನಂ ಶರಣಂ ಗಚ್ಛ ಸರ್ವಭಾವೇನ ಭಾರತ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥

ಪರಾಕಾಷ್ಠತೆಯೆಂದು ಭಾಗವತದಲ್ಲಿ ಹೇಳಿದ ಆತ್ಮನಿವೇದನರೂಪವಾದ ಭಕ್ತಿಯನ್ನು ಪ್ರಶಸ್ತವೆಂದು ಭಗವಂತ ಹೊಗಳುತ್ತಾನೆ. ನಮಸ್ಕಾರ, ಯಜನ, ಪೂಜನ, ಮನಃಪ್ರಣಿಧಾನ, ಹೀಗೆ ಎಲ್ಲವೂ ಭಗವತ್ಪರವಾಗಿರಬೇಕೆಂದು ನಿರೂಪಿಸಿರುವನು. ಇಷ್ಟೆಲ್ಲ ಹೇಳಿದಮೇಲೂ ಕೊನೆಗೆ ಸಾರಭೂತವಾದದ್ದನ್ನು ಹೇಳುತ್ತೇನೆಂದು ಇದೇ ಮಾತನ್ನೇ ಉಪದೇಶಿಸಿದ್ದಾನೆ.[22] ಆದ್ದರಿಂದ ಗೀತೆಯಲ್ಲಿ ಭಕ್ತಿ ಭಗವತ್ಪ್ರಸಾದಗಳ ರಹಸ್ಯೋಪದೇಶ ಹೇಳಿದಂತೆ ಮನನಾಟುವ ಹಾಗೆ ಇನ್ನೆಲ್ಲೂ ಇಲ್ಲ.[23]

7. ಭಕ್ತಿಯು–ಅದ್ವೈತವು

ಭಕ್ತಿಮಾರ್ಗವೊಂದೇ ಜೀವನನ್ನು ಪರಮಾತ್ಮನೆಡೆಗೆ ಒಯ್ಯುವುದು. ಕರ್ಮ ಮತ್ತು ಜ್ಞಾನಮಾರ್ಗಗಳೆರಡೂ ಭಕ್ತಿಯನ್ನು ದೃಢಪಡಿಸಲೋಸುಗ ಮಾತ್ರ. ಸ್ವಾಶ್ರಮೋಚಿತವಾದ ಕರ್ಮದಿಂದ ನಿರ್ಮಲವಾದ ವಿಷಯವೈರಾಗ್ಯದಿಂದ ದೃಢತರವಾದ, ಬ್ರಹ್ಮಜಿಜ್ಞಾಸೆಯಿಂದ ಪರಿಪುಷ್ಟವಾದ ಭಕ್ತಿಯು ಪರಮಾತ್ಮನ ಪ್ರೀತಿಗೆ ಕಾರಣವಾಗಿ ಭಗವತ್ಪ್ರಸಾದವನ್ನು ದೊರಕಿಸಿಕೊಡುವುದು. ಇಂತಹ ಸಾಧನಸಂಪತ್ತಿನಿಂದ ಲಭ್ಯವಾಗುವ ಭಗವತ್ಪ್ರಾಪ್ತಿಯೆಂದರೇನೆಂಬ ಸಂಶಯ ಹುಟ್ಟುವುದು. "ತತ್ತ್ವಮಸಿ, ಅಹಂಬ್ರಹ್ಮಾಸ್ಮಿ" ಇತ್ಯಾದಿ ಶ್ರುತಿಗಳಲ್ಲಿ ಆಪಾತತಃ ತೋರುವಂತೆ ಆ ಪರಬ್ರಹ್ಮನೊಂದಿಗೆ ಜೀವ ಐಕ್ಯ ಹೊಂದುವನೇ ಹೇಗೆ? ಈ ಪ್ರಶ್ನೆಯ ತಾತ್ತ್ವಿಕವಿಚಾರ ಹಾಗಿರಲಿ. ಈ ಅಭೇದ ಶ್ರುತಿಗಳಲ್ಲಿ ಹೇಳಿದಂತೆ ಜೀವ ಬ್ರಹ್ಮನಾಗಿಬಿಡುವನೆಂದು ಶಂಕರಾಚಾರ್ಯರೇ ಒಪ್ಪುವುದಿಲ್ಲ. ಜೀವನಲ್ಲಿಯ ಅಲ್ಪಜ್ಞತ್ವ, ದುಃಖಿತ್ವ, ಅಶಕ್ತತ್ವ, ಅಸ್ವಾತಂತ್ರ್ಯಾದಿಗಳೂ, ಪರಮಾತ್ಮನ ಸರ್ವಜ್ಞತ್ವಾದಿ ಗುಣವಿಶೇಷಗಳೂ ಮಾಯೆಯಿಂದ ಬಂದವು. ಜೀವ ಪರಮಾತ್ಮರು ಚಿನ್ಮಾತ್ರರು. ಶಾಸ್ತ್ರ ಶ್ರವಣಾದಿಗಳಿಂದ ಜೀವನಿಗೆ ಜ್ಞಾನ ಉಂಟಾದಂತೆಲ್ಲಾ ತಾನು ಚಿನ್ಮಾತ್ರನೆಂದು ಭಗವಂತನೂ ಚಿನ್ಮಾತ್ರನೆಂದೂ, ಇವೆರಡರ ಭೇದ ಮಿಥ್ಯೆಯೆಂದೂ ಐಕ್ಯಾನುಭವವಾಗುವುದು. ಇದು ಅದ್ವೈತಸಿದ್ಧಾಂತ ಪದ್ಧತಿಯು. ಆದ್ದರಿಂದ ಸಾಕ್ಷಾತ್ ಅದ್ವೈತವು ಸರ್ವಥಾ ಅವಶ್ಯಕವು.[24] ಶಂಕರಾಚಾರ್ಯರು ವಿವರಿಸಿದಂತಹ ಅದ್ವೈತ

---

22 ಸರ್ವಗುಹ್ಯತಮಂ ಭೂಯಃ ಶ್ರುಣು ಮೇ ಪರಮಂ ವಚಃ । ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್ ॥ ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು । ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ । ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ। ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

23. The Gita is the great basic text of Indian theistic Piety. Garbe has translated Gita into German and has Proved that in its pure form it is one of the original texts of Bhakti Piety with its distinctly theistic stamp.

Rudolf Otto; Mysticism East and West.

24. Whether the teaching of the Upanishads is to be called Pantheism or not

ಮುಕ್ತಿಗೆ ಭಕ್ತಿಮಾರ್ಗವು ಹೊಂದುವುದಿಲ್ಲ.[25] ಭಕ್ತಿಯು ಚೇತನನಿಷ್ಠಧರ್ಮ. ಇದು ಕರ್ಮ, ವೈರಾಗ್ಯ, ಜ್ಞಾನಾದಿಗಳಿಂದ ಪುಷ್ಟಿಗೊಂಡು ಪರಿಪೂರ್ಣವಾಗುವುದು. ಮತ್ತು ಭಗವತ್ಪ್ರಾಪ್ತ್ಯನಂತರವೂ ಚೇತನನಲ್ಲಿ ತಾನೇತಾನಾಗಿ ಆನಂದರೂಪವಾಗಿರುವುದು. ಅದ್ವೈತ ಮುಕ್ತಿಯನ್ನು ಒಪ್ಪಿಕೊಂಡಲ್ಲಿ, ಸರ್ವಗುಣಶೂನ್ಯಾವಸ್ಥಾರೂಪವಾದ ಮೋಕ್ಷದಲ್ಲಿ ಶಾಶ್ವತಚೇತನಧರ್ಮವೇ ನಾಶಹೊಂದುತ್ತದೆಂದಹಾಗಾಯಿತು. ಆದರೆ ತನ್ನ ನಾಶಕ್ಕಾಗಿಯೇ ಭಕ್ತಿಯು ವೃದ್ಧಿಹೊಂದಿ ಪರಿಪಾಕವಾಗುತ್ತದೆಂದಂತಾಯಿತು. ಕೊಡಲಿಯ ಕಾವಿನಂತೆ ಇದು ಆತ್ಮನಾಶಕ್ಕೆ ಕಾರಣವಾಗುವುದು. ಚೇತನನಲ್ಲಿಯ ಚೈತನ್ಯದಷ್ಟೇ ಪ್ರಧಾನವಾದ ಧರ್ಮ ಭಕ್ತಿ. ಇದು ನಾಶವಾಗುತ್ತದೆಂದರೆ ಚೈತನ್ಯವೇ ನಷ್ಟವಾಗುವುದೆಂದು ಒಪ್ಪಿಕೊಳ್ಳಬೇಕು. ಆದ್ದರಿಂದ ಭಕ್ತಿ ಅದ್ವೈತಮೋಕ್ಷದೊಂದಿಗೆ ಹೊಂದಿಕೆಯಾಗದು.

---

will depend on the definition of Pantheism. Certainly there are some passages such as those just considered which discribe Brahman as having spread himself in diverse forms in all the objects that we see around us. This might readily be taken as an indication of some form of materialistic Pantheism. But this is one phase of the aspect of matter . It seems to be contradicted by the ideas of Brahman a creator, ruler and controller by whose will everything moves and the order of events is kept in its right place undisturbed.

The question is sometimes asked whether such devotional systems of mysticism are pantheistic. To this no satisfactory reply can be given without a proper definition of pantheism. Without entering into any discussion regarding the meaning of this term or the distinctive metaphysical features of the different systems of Vaishnavism, I can here say only that all these systems in a manner agree to the *duality of God and man*. They consider man as a manifestation of the power of God.Though ultimately sustained and always controlled by God, man is for all empirical purposes different from Him. *This psychological, logical and antological difference between God and man is the basis of devotion, and worship*. In the development of devotion, there may, however, come a stage in the mind of the devotee when he becomes one with the Lord in the exuberance of feelings. But at the next instant, the experience may again be differentiated into a feeling of duality and of distinction between him and God. The devotee may then come to regard himself as a servant of God or His son, or friend or spouse. -Das Gupta, Hindu Mysticism.

25. However pantheistic the mystic may be on the one hand, however absolutist on the other, his communion with God is always personal in this sense; that it is communion with a living Reality, an object of love, capable of response which demands and receives from him a total donation. This sense of a double movement, a self-giving on the divine

ಭಗವತ್ಪ್ರಸಾದವು ಅದ್ವೈತಮೋಕ್ಷದಲ್ಲಿ ಇಂದ್ರಜಾಲದಂತಾಗುವುದು. ಭಗವದ್ವಿಷಕ ಜ್ಞಾನ ಉಂಟಾದಂತೆ ಬ್ರಹ್ಮೈಕ್ಯಾನುಭವ ಬರುವುದೆಂದು ಹೇಳುವ ಸಿದ್ಧಾಂತದಲ್ಲಿ ಭಗವಂತನ ಪ್ರಸಾದಕ್ಕೆ ಅವಕಾಶವೇ ಇಲ್ಲ. ಭಗವತ್ಪ್ರಸಾದವಿಲ್ಲದ ಭಕ್ತಿ ಏಕಮುಖವಾಗುವುದು. ಭಾವನಾಶೂನ್ಯ ಚಿತ್ರವೊಂದನ್ನು ಪ್ರೀತಿಸಿ ಆತ್ಮಾರ್ಪಣೆ ಮಾಡಿದಂತೆ ಅದು ನಿರರ್ಥಕವಾಗುವುದು. "ಯಮೈವೇಶ ವೃಣುತೇ" ಎಂಬ ಶ್ರುತಿಯು ಅಸಂಗತವಾಗುವುದು.

ಜೀವಬ್ರಹ್ಮರುಗಳ ಭೇದ ಭಕ್ತಿಮಾರ್ಗದ, ಮುಖ್ಯತಿರುಳು. ನೀನು ಸರ್ವಜ್ಞ, ನಾನು ಅಲ್ಪಜ್ಞ, ನೀನು ಈಶ, ನಾನು ದಾಸ, ನೀನು ದಾತ, ನಾನು ದೂತ ಎಂಬ ಭಾವನೆ ಬಲಿತು ಬೆಳೆದು ಪರಿಪಕ್ವವಾದರೆ ಭಕ್ತಿಯು ಸಾರ್ಥಕವಾಗುವುದು. ಅದ್ವೈತವು ಇಂತಹ ಭಕ್ತಿಮಾರ್ಗಕ್ಕೆ ಅವಕಾಶ ಕೊಡುವುದಿಲ್ಲ. ಉಪನಿಷತ್ತು, ಗೀತಾ ಇವುಗಳಲ್ಲಿ ಉಕ್ತವಾದ ಭಕ್ತಿಮಾರ್ಗವಷ್ಟೇ ಅಲ್ಲ ಜಗತ್ತಿನ ಯಾವುದೇ ಧರ್ಮದಲ್ಲಾಗಲೀ, ಅದ್ವೈತವು ಭಕ್ತಿಮಾರ್ಗವು ಪರಸ್ಪರ ವಿರೋಧಿಗಳು. ಭಕ್ತಿಮಾರ್ಗದ ಕೈಗನ್ನಡಿಯಂತಿರುವ ಗೀತೆಯನ್ನು ಅದ್ವೈತಪರವಾಗಿ ಅರ್ಥಮಾಡಲು ಶಂಕರಾಚಾರ್ಯರು ವಿಶೇಷ ಶ್ರಮಪಟ್ಟಿದ್ದರೂ ಅವರಲ್ಲಿ ಯಶಸ್ವಿಗಳಾಗಿಲ್ಲವೆಂದು ಅನೇಕ ಪಂಡಿತರು ಅಭಿಪ್ರಾಯಪಟ್ಟಿದ್ದಾರೆ.[26]

---

side answering to the self-giving on the human side is found in all great mysticism. -Evelyn Underhill; Essentials of M.

The practical needs and experience of religion seem to me sufficiently met by the belief, that beyond each man and in a fashion continuous with him, there exists a larger power which is friendly to him and to his ideals. All that the facts-require is that the power should be both other and larger than our conscious selves.

Upholders of Monistic view will say to polytheism which by the way has always been the real religion of common people and is so still to-day that unless there be one all inclusive God, our guarantee of security is left imperfect.

I think in fact that a final philosophy of religion will have to consider the Pluralistic hypothesis more seriously, than it has hither to been willing to consider it. -- Sir Williams James... Varieties of R. Exp

I conclude that in point of logical difficulty the universal consciousness hypothesis has no advantage over the personal God hypothesis: On the contrary, difficulties which it entails are not less, but if possible more overwhelming. - C. E. M. Joad; God and Evil P. 257.

On the other hand, the inducements to believe, in universal consciousness are not impressive. A universal consciousness cannot strengthen, console, help, alter the course of events in ways congenial to the believer, or respond to prayer. In fact, if it is accessible to prayer. -ibid. 259

26. Undoubtedly Sankara rather forces the texts when he attempts to read in it his own teaching of supra personal Brahman. but we must not over look

ಅದ್ವೈತಪಂಥದ ಭಕ್ತಿಮಾರ್ಗದಲ್ಲಿ ಸಾಗಿದ ಸಂತ ತುಕಾರಾಮನೂ ಸಹ ಭಗವಂತನಲ್ಲಿ ಮೊರೆ ಇಡುವಾಗ ಅದ್ವೈತದಲ್ಲಿ ಅರುಚಿಯನ್ನೇ ತೋರಿಸಿದ್ದಾನೆ.[27]

ಅಂತೂ ಯಾವ ರೀತಿಯಿಂದಲಾದರೂ ಭಕ್ತಿಮಾರ್ಗಕ್ಕೂ ಅದ್ವೈತ ಭಾವನೆಗೂ ಮೇಳವಾಗದು. ಅದ್ವೈತವನ್ನು ಸಾಧಿಸುವ ಸಿದ್ಧಾಂತವವೂ ಭಕ್ತಿಮಾರ್ಗಕ್ಕಾಗಿ ದಾಸ ಈಶಭಾವವನ್ನು ಒಪ್ಪಿಕೊಳ್ಳಲೇಬೇಕು. ಭಕ್ತಿಯುಕಲ್ಪನೆಯೇ ಭೇದ ಮತ್ತು ತಾರತಮ್ಯಘಾಟಕವಾದುದು. ಆದ್ದರಿಂದ ಭಕ್ತಿಯು ಮುಕ್ತಿಗೆ ಮುಖ್ಯ ಸೋಪಾನವೆಂದು ಒಪ್ಪಿಕೊಂಡಲ್ಲಿ ಜೀವೇಶ್ವರೈಕ್ಯವು ಅಪಸಿದ್ಧಾಂತವೆಂದು ಅಂಗೀಕರಿಸಲೇಬೇಕಾಗುವುದು.

---

or deny the positive relationship which he adopts towards theism itself.

In reading Sankars's introduction to his commentary on the Gita, it would never occur to one that here a monist is speaking and that the impersional Brahman and absorption into Him is being proclaimed as salvation.

--Rudolf Otto, Mysticism, East and West.

The most famous pioneers of a personal theism, outside the ಸೇಶ್ವರ schools are such men as the Great Ramanuja and Madhva whose communities still exist to-day and are just beginning to show a new zeal. But even with regard to the classical school of Indian Mysticism, the school of Sankara which prefers to be called the school of the absolute Advaita, caution is necessary. For this schools at least in its substructure, represents pronounced theism of a high type. The impersonal Brahman rests here also on theistic basis and this basis is not unimportant for the conception of Brahman itself. It definitely colours the Mystical experience of the school. -- Rudolf Otto: Ibid

27. "Thou shouldst be my Lord and I Thy servant. Thy place should be high, and my place should be low."

"Advaitism pleases me not. Give me the service of they feet. Reserve for me this relation between God and devotee and fill me with happiness-God's service alone would suffice" --Ranade.

--Mysticism in Maharashtra, P. 330

28. "Thus shouldst be my Lord and I Thy servant. They place should be high, and my place should be low." "Advaitism pleases me not. Give me the service of thy feet. Reserve for me this relation between God and devotee and fill me with happiness-God's service alone would suffice"

--Ranade. - Mysticism in Maharashtra, P. 30

✣ ✣ ✣

IX ಯೋಗ–MYSTICISM

1. ಸ್ವರೂಪಕಥನ

ಪಾಶ್ಚಾತ್ಯ ಸಂಸ್ಕೃತಿಯು ಭಾರತ ಸಂಸ್ಕೃತಿಗಿಂತ ಸರ್ವವಿಧದಿಂದಲೂ ಅತ್ಯಂತ ಭಿನ್ನವಾದುದರಿಂದ ಅಲ್ಲಿ ವಿಶಿಷ್ಟಭಾವನೆಗಳನ್ನು ಸೂಚಿಸುವ ಶಬ್ದಗಳಿಗೂ ಭಾರತ ಸಂಸ್ಕೃತಿಯ ಶಬ್ದಗಳಿಗೂ ಮಹದಂತರವು ಕಾಣುವುದು. Religion ಎಂಬ ಪದಕ್ಕೆ ನಮ್ಮ ಭಾಷೆಗಳಲ್ಲಿ ಸಮಾನಾರ್ಥಕ ಪದಗಳಾಗಲೀ 'ಧರ್ಮ' ಎಂಬ ಶಬ್ದಕ್ಕೆ ಪಾಶ್ಚಾತ್ಯ ಭಾಷೆಗಳಲ್ಲಿ ಸಮಾನಾರ್ಥಕ ಪದವಾಗಲೀ ದೊರೆಯಲಾರದು. ಅಂತೆಯೇ Mysticism ಎಂಬ ಪದವೂ ಸಹ. ಯೂರೋಪಿನ ಸಂಸ್ಕೃತಿಯಲ್ಲಿ ಇಂಗ್ಲೀಷು ಭಾಷೆಯಲ್ಲಿ Religion, Philosophy, Mysticism ಈ ಪದಗಳನ್ನು ಪ್ರತ್ಯೇಕ ಭಾವನೆಗಳನ್ನು ಸೂಚಿಸುವುದಕ್ಕಾಗಿ ಉಪಯೋಗಿಸುವುದುಂಟು. ಭಾರತ ಸಂಸ್ಕೃತಿಯಲ್ಲಿ ಇವೆಲ್ಲ ಬೆರೆತುಹೋಗಿದೆ. ಒಂದನ್ನು ಇನ್ನೊಂದರಿಂದ ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಮತವೆಂಬ ಒಂದು ಕಲ್ಪನೆಯಲ್ಲಿ ಈ ಮೂರು ಭಾವನೆಗಳೂ ಅಡಕವಾಗಿವೆ. ಜ್ಞಾನದ ಜೊತೆಗೆ ಅನುಷ್ಠಾನ, ಅದರೊಂದಿಗೆ ಅನುಭವ ಈ ಮೂರೂ ಸೇರಿದರೆ ಒಂದು 'ಸಿದ್ಧಾಂತ'ವಾಗುವುದು.

Mysticism ಎಂಬುದು ಭಕ್ತಿ ಮಾರ್ಗಕ್ಕೂ ಅನ್ವಯಿಸುವುದು; ಬ್ರಹ್ಮಸಾಕ್ಷಾತ್ಕಾರಕ್ಕೂ ಅನ್ವಯಿಸುವುದು. ಸಾಮಾನ್ಯವಾಗಿ 'ಮಿಸ್ಟಿಸಿಸಂ' ಎಂಬ ಶಬ್ದಕ್ಕೆ 'ಅನುಭಾವ' ಎಂದು ಅರ್ಥ ಮಾಡುವುದುಂಟು. ಇದು ಹೊಸ ಶಬ್ದ. ಅನುಭವ ಎಂಬುದು ನಮ್ಮ ವೈದಿಕ ಮತಗಳಲ್ಲಿ ಹೆಚ್ಚಾಗಿ ಉಪಯೋಗಿಸುವ ಶಬ್ದ. ಇದು ಸಾಮಾನ್ಯವಾಗಿ ಬ್ರಹ್ಮಾನುಭವವೆಂಬ ಅರ್ಥದಲ್ಲಿ ಪ್ರಸಿದ್ಧವಾಗಿರುವುದು. ಮಿಸ್ಟಿಸಿಸಂ ಎಂಬುದು ಸಾಧನೆಯಲ್ಲಿ ಸೇರುವುದು. ಆದ್ದರಿಂದ ಇದು ಬ್ರಹ್ಮಾನುಭವಕ್ಕೆ ಸಂಪೂರ್ಣ ಹೊಂದದು. 'ಭಾವ' ಎಂಬ ಶಬ್ದಕ್ಕೆ 'ಅನು' ಉಪಸರ್ಗ ಸೇರಿಸಿದಲ್ಲಿ ಅನುಭಾವವೆಂದರೆ ಕ್ಷಣಿಕವಾದ ಬ್ರಹ್ಮಾನುಸಂಧಾನ ಅಥವಾ ಭಗವಂತನ ಬಾಹ್ಯ ದರ್ಶನದಿಂದ ಉಂಟಾಗುವ ಆನಂದೋದ್ರೇಕದ ಪರಿಸ್ಥಿತಿ ಎಂಬ ಅರ್ಥಸೂಚಕವಾಗುವುದು. ಇದೂ ಅಷ್ಟು ಸಮರ್ಪಕವಾಗಿಲ್ಲ. ಮಿಸ್ಟಿಸಿಸಂ ಎಂಬುದು ಪಾಶ್ಚಾತ್ಯ ದರ್ಶನ ಶಾಸ್ತ್ರದ ಇತಿಹಾಸದಲ್ಲಿ ಇತ್ತೀಚೆಗೆ ಪ್ರಚಾರಕ್ಕೆ ಬಂದ ಶಬ್ದ ಎಂದು ಪಾಶ್ಚಾತ್ಯ ಪಂಡಿತರು ಹೇಳುವರು. ಮಿಸ್ಟಿಸಿಸಂ ಎಂಬುದರ ಅವಯವಾರ್ಥವು ಈಗ ರೂಢವಾಗಿರುವ ಅರ್ಥಕ್ಕಿಂತ ಭಿನ್ನವಾಗಿದೆ. ಈ ದೃಷ್ಟಿಯಿಂದ ವಿಚಾರಮಾಡಿದರೆ ಇದಕ್ಕೆ ನಮ್ಮ ಮತದಲ್ಲಿ ಅತ್ಯಂತ ಹತ್ತಿರವಾದ ಅರ್ಥಕೊಡುವ ಶಬ್ದವನ್ನು ಉಪಯೋಗಿಸುವುದು ಒಳ್ಳೆಯದು. ಯೋಗವೆಂಬ ಶಬ್ದವು ಅತ್ಯಂತ ವ್ಯಾಪಕವಾದರೂ 'ಉಪಾಯ', 'ಸಾಧನ' ಎಂಬುದನ್ನು ಸೂಚಿಸುವುದು. ಏಕಾಂತ ಭಕ್ತರಾಗಿ ಭಗವಂತನನ್ನು ಒಲಿಸಿಕೊಂಡವರನ್ನು ಯೋಗಿಗಳು ಎಂದು ಎಲ್ಲ ಶಾಸ್ತ್ರಗಳಲ್ಲೂ ಕರೆದಿರುತ್ತಾರೆ. ಬರಿಯ ತತ್ತ್ವವಿಚಾರ ಅಥವಾ ಪಾಂಡಿತ್ಯದಿಂದ ಭಗವತ್ಸಾಕ್ಷಾತ್ಕಾರವಾಗಲಾರದು.

ಭಗವತ್ಸಾಕ್ಷಾತ್ಕಾರಕ್ಕೆ ಭಕ್ತಿಯೇ ಮುಖ್ಯಸಾಧನವು. ಇಂತಹ ಭಕ್ತಿ ಮಾರ್ಗವೇ ಯೋಗ; ಇದೇ ಮಿಸ್ಟಿಸಿಸಂ ಎನ್ನುವುದು. ಭಕ್ತಿಯೋಗಿಗಳೇ Mystics ಎಂಬುವರು.

ಧಾರ್ಮಿಕ ಪ್ರವೃತ್ತಿಯವರು ಸತ್ಯವನ್ನು ಕಂಡುಕೊಳ್ಳುವ ವಿಶಿಷ್ಟ ಬಗೆಗೆ ಮಿಸ್ಟಿಸಿಸಂ' ಎಂದು ಸರ್ ವಿಲಿಯಂ ಜೇಮ್ಸರು ಹೇಳುತ್ತಾರೆ. ವೈಯಕ್ತಿಕವಾದ ಧಾರ್ಮಿಕ ಅನುಭವಗಳು ಈ ಮಿಸ್ಟಿಕ್ ಮನೋವೃತ್ತಿಯಿಂದ ಹೊರಹೊಮ್ಮಿದವೆನ್ನುವರು. ಅವಾಚ್ಯತ್ವ, ಜ್ಞೇಯತ್ವ, ಕ್ಷಣಿಕತ್ವ ಮತ್ತು ಜಡತ್ವ ಈ ನಾಲ್ಕು ಮಿಸ್ಟಿಸಿಸಂ ಧರ್ಮವೆಂದು ಅವರ ಅಭಿಪ್ರಾಯ. "ಧರ್ಮದಲ್ಲಿ ನಿಷ್ಠಾವಂತನಾದವನಿಗೆ ಅದರಲ್ಲಿ ತೀವ್ರವಾದ ದೀಕ್ಷೆ ಬೆಳೆದು ಭಗವದ್ದರ್ಶನದ ಹಂಬಲ ಹೆಚ್ಚಿದಂತೆಲ್ಲಾ ಅದರ ಅನುಭವವೂ ಸ್ವಲ್ಪ ಸ್ವಲ್ಪವಾಗಿ ಆಗುವುದು. ಅದರ ವಿಷಯವಾಗಿ ಏನು ಹೇಳುವುದಕ್ಕೂ ಅವನಿಗೆ ಸಾಧ್ಯವಾಗುವುದಿಲ್ಲ. ಆದರೆ ಅವನಿಗೆ ಜ್ಞಾನವಿಷಯವಾದ, ಆ ಅನುಭವವು ಅನಂತರದಲ್ಲಿ ಅತ್ಯಂತಪ್ರಮಾಣಭೂತವಾಗಿ ಪರಿಣಮಿಸುವುದು, ಇಂತಹ ಅನುಭವ ಹೊಂದುವನಿಗೆ ತನ್ನ ಮನೋವ್ಯಾಪಾರವನ್ನು ಮೀರಿದ ಯಾವುದೋ ಬೇರೊಂದು ಚೇತನವ್ಯಾಪಾರವು ತನ್ನಲ್ಲಾದಂತೆ ಭಾಸವಾಗುವುದು"[1]

ಭಗವಂತನೊಂದಗಿನ ಸಂಬಂಧದ ಸಾಕ್ಷಾತ್ಕಾರ ಅಥವಾ ಭಗವತ್ಸಾತ್ಕಾರದ ನೇರವಾದ ತಿಳಿವು—ಇದನ್ನು ತಿಳಿಸುವ ಮತೀಯ ಅಂಶವನ್ನು ಮಿಸ್ಟಿಸಿಸಂ ಎನುತ್ತೇನೆ

1. Religious persons have often, though not uniformally, professed to see truth in a special manner. That manner is known as mysticism.

One may say truly, I think that personal religious experience has its root and centre in mystical states of consciousness.

I simply propose to you four marks which when an experience has them, may justify us in calling it mystical.

(1) Ineffability : The subject of it immediately says that it defies expression, that no adequate report of its contents can be given in words. It follows from this that its quality must be directly experienced.

(2) Noetic quality : Although so similar to states of feeling mystical states seem to those who experience them to be also states of knowledge. They are sights of insights into depths of truths unplumbed by the discursive intellect. As a rule they carry with them a curious sense of authority for after-time.

Two other qualities are less sharpely marked.

(3) Transciency : Mystical states cannot be sustained for long.

(4) Passivity : When the characterstic sort of consciousness has once set in, the mystic feels as if his own will wherein abeyance and indeed sometimes as if he were grasped and held by a superior power.

-Varieties of Religious Experience.

ಎಂದು ರೂಫುಸ್ ಜೋನ್ಸರು ಹೇಳುವರು. ಇದು ಧರ್ಮದ ತೀವ್ರತರ, ಗಂಭೀರ ಮತ್ತು ಜೀವಂತ ಸ್ಥಿತಿಯೆನಿಸುವುದು[2] ಇದನ್ನು ಸಾಧನೆಯ ಸೋಪಾನದಲ್ಲಿ ಕೊನೆಯ ಹಂತವೆನ್ನಬಹುದು. ಇದರ ಹುಟ್ಟು ಬೆಳವಣಿಗೆಯನ್ನು ಎವಿಲಿನ್ ಅಂಡರ್ ಹಿಲ್‌ರವರು ಚೆನ್ನಾಗಿ ಚಿತ್ರಿಸಿದ್ದಾರೆ..[3] ಸಾಧಕನಾದವನು ನಿಜವಾದ ಜ್ಞಾನವನ್ನು ಕಂಡುಕೊಳ್ಳುವನು. ಅಲೌಕಿಕವಾದ, ಉನ್ನತ, ಉದಾತ್ತ ಮತ್ತು ಶಾಶ್ವತಸುಖದ ಕಡೆಗೆ ಅವನ ಗಮನ ಹೋಗುವುದು. ಅದರಿಂದ ಲೌಕಿಕ ವಿಷಯಗಳಲ್ಲಿ ಅವನಿಗೆ ಜೀಹಾಸೆಹುಟ್ಟಿ ಅಲೌಕಿಕ ಸುಖಶಾಂತಿಯ ಕೊರಗುಹತ್ತಿ ಅದನ್ನರಸುತ್ತಾ ಇದ್ದಕ್ಕಿದ್ದಂತೆಯೋ, ನಿಧಾನವಾಗಿಯೋ, ಅವನ ಜೀವನ ಬದಲಾಗುವುದು. ಈ 'ಮಾರ್ಪಾಡು' ಮುಖ್ಯವಾದ ಅಂಗ. ಇದಕ್ಕೆ ವಿಷಯ ವೈರಾಗ್ಯ ಮೊದಲ ಹಂತ.[4] "ಯಾಥೇಷ್ಟಾನಿಷ್ಟ ಪ್ರಾಪ್ತಿ ಪರಿಹಾರೇಚ್ಛೂನಾಂ" ಇತ್ಯಾದಿ ವಾಕ್ಯಗಳಲ್ಲಿ ಯಾವುದು ಇಷ್ಟ, ಪ್ರಾಪ್ಯ, ಯಾವುದು ಅನಿಷ್ಟ, ಹೇಯ ಎಂಬುದನ್ನು ತಿಳಿಸಲು ವೇದಾಂತವು ಸಹಾಯಮಾಡುತ್ತದೆ. ಇದರ ಸಹಾಯದಿಂದ ವೈರಾಗ್ಯಶಾಲಿಯಾಗಬೇಕೆಂದು ವೈದಿಕದರ್ಶನದಲ್ಲಿ ವೈರಾಗ್ಯದ ಮಹತ್ವವನ್ನು ಹೇಳಿರುವರು.

---

2. I shall use the word mysticism to express the type of religion which put the emphasis on immediate awareness of relation with God, or direct and intimate consciousness of the Divine Presence. It is religion in its most acute, intense and living stage.

   --Rufus, M. Jones, Studies in Mystical Religion.

3. First the self is "inclined to learn true wisdom'. It awakes to new needs, is cured of its belief in sham values and distinguishes between real and unreal objects of desire. That craving for more life and more love which lies at the very heart of our selfhood, here slips from the charmed circle of senses into a wider air. When this happens abruptly it is called 'conversion' and may then have the character of psychic conversion and be accompanied by various secondary psychological phenomena.

   So the self is either suddenly or gradually inclined to 'true wisdom' and this change of angle affects the whole character, not only or indeed specially the intellectual outlook, but the ethical outlook too.

   -- Essentials of Mysticism.

4. He who no longer craves for personal possessions, pleasures or powers, is very near to perfect liberty. His attention is freed from its usual concentration on the self's immediate interests and at once he sees the universe in a new more valid, because disinterested light.

   Now this 'perfect charity in life surrendered' however attained is an essential character of the true mystic; without it contemplation is an impossibility or a sham. -Ibid.

ವೈರಾಗ್ಯದ ಜತೆಗೆ ದೇಹದಂಡನೆ ಮತ್ತು ಕರ್ಮಾಚರಣೆಯು ಅವಶ್ಯಕ. ಇದು ತಪಸ್ಸಿನಿಂದ ಸಾಧ್ಯ. ಇಂತಹ ತಪಸ್ವೀ ಜೀವನದಿಂದ ಅಂತ:ಕರಣವು ಧ್ಯಾನಕ್ಕೆ ಅನುಕೂಲವಾಗುವುದು.[5] ವಿರಕ್ತಿ ಮತ್ತು ಸತ್ಕರ್ಮಾಚರಣೆಯಿಂದ ಉಂಟಾದ ಅಂತ:ಕರಣ ನೈರ್ಮಲ್ಯದಿಂದ ಭಗವಂತನ ಕಡೆ ಒಲವು ಬೆಳೆಯುವುದು. ಯೋಗಿಯ ಸಾಧನೆಗಳು ಮತ್ತು ಅನುಭವಗಳು ಕೇವಲ ವೈಯುಕ್ತಿಕವಾದ್ದರಿಂದ ಅವು ಸತ್ಯವೆನಿಸಲಾರವು; ಅದು ಪ್ರತಿವ್ಯಕ್ತಿಗೂ ಭಿನ್ನವಾದುವು ಎಂಬ ಭಾವನೆ ಬರುವುದು ಸಹಜ. ಆದರೆ ಇದು ಸರಿಯಲ್ಲ. ಅನೂಚಾನವಾಗಿ ಬೆಳೆದುಬಂದ ಸಂಪ್ರದಾಯ ಆಗಮಪ್ರಮಾಣವನ್ನು ಆಧಾರವಾಗಿಟ್ಟುಕೊಂಡೇ ಅದರ ಬಲದಮೇಲೇ ಪ್ರತಿಯೊಬ್ಬ ಯೋಗಿಯೂ ತನ್ನ ಧ್ಯೇಯನಾದ ಭಗವಂತನನ್ನು ಕಂಡುಕೊಳ್ಳಬಲ್ಲ. ವೈದಿಕದರ್ಶನಗಳಲ್ಲಿ 'ಔಪನಿಷದ: ಪುರುಷ:' ಇತ್ಯಾದಿ ಶ್ರುತಿಗಳೂ, "ಶಾಸ್ತ್ರಯೋನಿತ್ವಾತ್" ಇತ್ಯಾದಿ ನಿರ್ಣಾಯಕ ಪ್ರಮಾಣಗಳೂ ಸಹ ಬ್ರಹ್ಮಜ್ಞಾನಕ್ಕೆ ಅಪೌರುಷೇಯವಾದ ವೇದಗಳೇ ಮೂಲ; ಅವು ಹೊರತು ಇತರ ಪ್ರಮಾಣಗಳಿಂದ ಬ್ರಹ್ಮನನ್ನು ತಿಳಿಯುವುದು ಅಸಾಧ್ಯವೆಂದು ಸ್ಪಷ್ಟವಾಗಿ ತಿಳಿಸುತ್ತವೆ. "ಉಪಾಸನಾ ಚ ದ್ವಿವಿಧಾ" ಇತ್ಯಾದಿ ಪ್ರಮಾಣಗಳಿಂದ ವೇದಾದಿ ಸಚ್ಛಾಸ್ತ್ರಶ್ರವಣ–ಮನನಜನಿತ ಧ್ಯಾನದಿಂದಲೇ ಪರಮಾತ್ಮ ಗಮ್ಯನೆಂಬ ಅಂಶವು ಸಿದ್ಧಾಂತಿತವಾಗಿದೆ. "ಮಿಸ್ಟಿಸಿಸಂ"ನ ವಿವರಣೆಯನ್ನು ಕೊಡುತ್ತಾ ಅಂಡರ್‌ಹಿಲ್‌ರವರು ಈ ವಿಷಯವನ್ನು ಪುನ: ಪುನ: ಪುಷ್ಟೀಕರಿಸುವರು.[6]

ಆದ್ದರಿಂದ ಪರಂಪರಾಪ್ರಾಪ್ತವಾದ ಸದಾಗಮಗಳಿಂದ ಭಗವದ್‌ಜ್ಞಾನ ಸಂಪಾದಿಸಬೇಕು. ಅನಂತರ ಅವನ ಧ್ಯಾನ ಮಾಡಬೇಕು. ಬರಿಯ ಅನುಚಿಂತನೆಯು ಧ್ಯಾನವೆನಿಸದು. ಅದು ಭಕ್ತಿಯಿಂದ ಕೂಡಿರಬೇಕು. ಇದು ಯೋಗದ ಅತಿ ಮುಖ್ಯವಾದ ಅಂಗ.[7]

---

5. The true asceticism is a gymnastic not of the body, but of the mind. It involves training in the art of real-collection; the concentration of thought, will and love upon the eternal realities which we commonly ignore. -Ibid.

6. The great mystics are the loyal children of the great religious institutions and force us to admit that here as in other departments of human activity, the corporate and the individual life are intimately plaited together.

(ii) The richest and most fruitful types of mystical experience will arise within religious institutions rather than outside them. -Ibid

7. Three fold is the way to God. The first is the way of purification, in which the mind is inclined to learn true wisdom. The second is the way of illumination in which the mind by contemplation is kindled to the burning of love. the third is the union in which the mind by understanding, reason and spirit is led up by God alone.

ಇಂತಹ ಧ್ಯಾನವು ಎರಡನೆಯ ಹಂತ. ಭಕ್ತಿಸಹಕೃತ ಸತತ ಭಗವದನುಚಿಂತನ–ರೂಪಧ್ಯಾನದಿಂದ ಭಗವಂತನ ಛಾಯಾಚಿತ್ರ ಮನೋಪಟಲದ ಮೇಲೆ ಮೂಡುವುದು. ಇದು ಭಗವತ್ಸಾಕ್ಷಾತ್ಕಾರವಲ್ಲ. ಕೇವಲ ವಾಸನಾಮಯ ಪ್ರತಿಮಾದರ್ಶನ ಮಾತ್ರ. ಈ ಹಂತವನ್ನು ಮುಟ್ಟಿದ್ದರಿಂದ ಅಶರೀರವಾಕ್ಯಶ್ರವಣವೇ ಮೊದಲಾದ ಅನೇಕ ಸಾಧಾರಣ ಸಿದ್ಧಿಗಳು ಲಭಿಸುವುವು. ಆದರೆ ಯೋಗದ ಧ್ಯೇಯ ಮಾತ್ರ ಮುಂದುವರಿಯುವುದು. ಇನ್ನೂ ಭಕ್ತಿ ಸಾಮರ್ಥ್ಯದಿಂದ ಈ ವಾಸನಾಮಯ ಪ್ರತಿಮೆಯು ಕಳಚಿ ಭಗವದ್ದರ್ಶನವಾಗುವುದು.[8]

Contemplation which is the traditional name for that concentrated attention in which this phase of reality is revealed is an activity of all our powers, the heart; the will, the mind. -Ibid.

The basis of the mysticial theology is 'orison' or meditation, the methodical elevation of the soul toward God. Through the practice of orison, the higher level of mystical experience may be attained.

-Varieties of Religious Experiences.

8. The first thing to be aimed at in orison is the mind's detachment from outer sensations, for these interfere with its concentration upon ideal things. The disciple should expel sensation by a graduated series of efforts to imagine holy scenes. The acme of this kind of discipline woul d be a semi-hallucinatory mono-idealism........coming fully to occupy the mind. Sensorial images of this sort whether literal or symbolic play an enormous part in mysticism. But in certain cases imagery may fall away entirely and in the very highest raptures it tends to do so. The state of consciousness becomes then insusceptible of any verbal discription.

The kinds of truth communicable in mystical ways whether these by sensible or super-sensible are various, some of them relates to this world. visions of the future, the reading of hearts, the sudden understanding of texts, the knowledge of distant events, for example; but the most important revelations are theological or metaphysical.

-Varieties of Religious Experience.

Here the reality behind appearance is still mediated to the mystic under symbols and forms. The variation of these symbols is great.

Among these symbols we must reckon a large number of the secondary phenomena of mysticism; divine visions and voices and other dramatizations of self's apprehensions and desires.....

We come to the third stage. The true goal of mystical experience; the intuitive contact with that ultimate reality which thelogians mean by the God-head and Philosophers by the Absolute. The claim to this is loftiest claim which can be made by human consciousness. There little we can say of it, because there is little we know. -Essentials.

ಭಗವದ್ದರ್ಶನದ ಅನುಭವವು ಹೆಚ್ಚಾಗಿ ತಿಳಿಯದಿದ್ದರೂ ಅದರ ಸ್ಥೂಲರೂಪವನ್ನು ತಿಳಿಯಬಹುದೆಂದು ಜೇಮ್ಸರು ಹೇಳುವರು.[9] ಇದು ಇಂದ್ರಿಯಾತೀತವೆಂದೂ ಸುಖದ ಪರಮಾವಧಿಯೆಂದೂ ಇವರ ಅಭಿಪ್ರಾಯ. ಆದರೆ ಯೋಗಿಗಳು ತಮ್ಮ ದರ್ಶನಕ್ಕೆ ವಿಷಯವಾದ ಪರವಸ್ತುವಿನ ಬಗೆಯನ್ನೂ ಹೇಳುವುದರಲ್ಲಿ ಅಂತಹ ವೈವಿಧ್ಯಗಳಿರಲು ಕಾರಣವೇನು? ಆ ಪರಬ್ರಹ್ಮನ ಗುಣ, ಸಾಕಾರಮೂರ್ತಿ ಎಂದು ಕೆಲವರು ಹೇಳಿದರೆ, ಇನ್ನೂ ಕೆಲವರು ಇದು ನಿರಾಕಾರ, ಅಜ್ಞೇಯ ಎನ್ನುವರು. ಕೆಲವರು ಆ ಭಗವಂತನ ಅನಂತಶಕ್ತಿಯ ಮುಂದೆ ಭಕ್ತ ಅತ್ಯಲ್ಪನಾಗಿ, ಅವನ ಕೃಪಾಪೋಷಿತನಾಗಿ ತೋರುವನು ಎಂದು ಹೇಳುವರು. ಮತ್ತೆ ಕೆಲವರು ಅವನ ಅನುಭವವಾದಂತೆಲ್ಲ ನಾನು ಎಂಬ ಜ್ಞಾನವು ಮಾಯಯಾವಾಗಿ ಸರ್ವಾಲಂಗಿತವಾದ ಚಿದಾತ್ಮಕ ಶಕ್ತಿಯ ಸಾಕ್ಷಾತ್ಕಾರವಾಗುವುದೆಂದು ಹೇಳುವರು. ಇವೆರಡೂ ಸತ್ಯವಾಗಲಾರವು. ಎಂದಮೇಲೆ ಯಾವುದು ಸತ್ಯ? ನಿಜವಾಗಿಯೂ ಯೋಗಿಗಳು ತಮ್ಮ ಅನುಭವದ ವಿಷಯ ಹೇಳುವುದು ಪಾರಮಾರ್ಥಿಕವೇ? ಇದಕ್ಕೆ ಕೆಲ ಪಂಡಿತರು ಉತ್ತರಕೊಡಲು ಯತ್ನಿಸಿದ್ದಾರೆ.

ಯೋಗಿಗಳ ಅನುಭವವು ರಸಾದಿಳ ಅನುಭವವಿದ್ದಂತೆ. ಸಕ್ಕರೆ ಸಿಹಿಯಾಗಿದೆ ಎಂಬ ವಾಕ್ಯದ ಸಂಪೂರ್ಣ ಅರ್ಥವು ಸಿಹಿಯ ಅವುಭವವೇ ಇಲ್ಲದವನಿಗೆ ಹೇಗೆ ಆಗುವುದಿಲ್ಲವೋ ನೋವೆಂದರೇನೆಂಬುದೇ ತಿಳಿಯದವನಿಗೆ ಹಲ್ಲುನೋವು ಎಂಬುದು ಹೇಗೆ ಅರ್ಥಶೂನ್ಯವೋ ಹಾಗೇ ಆ ಬ್ರಹ್ಮನಲ್ಲಿ ದೃಢತರ ವಿಶ್ವಾಸವಿಲ್ಲದ ಭಾವನಾಶೂನ್ಯನಿಗೆ ಈ ಬ್ರಹ್ಮಾನುಭವದ ಅರ್ಥವೇ ಆಗುವುದಿಲ್ಲ. ಎರಡು ಮತ್ತು ಎರಡು ಸೇರಿದರೆ ನಾಲ್ಕು ಎಂಬ ಜ್ಞಾನದಂತೆ ಇದು ಯುಕ್ತಿಯಿಂದ ಒಪ್ಪಿಸತಕ್ಕುದಲ್ಲ. ಆ ಭಾವನೆಯಾದರೋ ವೈಯುಕ್ತಿಕವಾದದು; ಇನ್ನೊಬ್ಬರಿಗೆ ವಿವರಿಸುವಾಗ ಕೇಳುವವರ 'ಸಹೃದಯತೆ'ಯನ್ನನುಸರಿಸಿ ಇದರ ಅರ್ಥಜ್ಞಾನವಾಗುವುದು.[10]

---

9. The deliciousness of some of these states seemed to be beyond anything known in ordinary consciousness. It is too subtle and piercing a delight for ordinary words to denote God's touches, the wounds of His spear, references to ebriety and to nuptial union to figure in the Phrasoelogy by which it is shadowed forth. Intellect and senses both swoon away in these highest states of ecstacy. St. John of the cross tells us that-"They (touches by which God reaches the substance of the soul) enrich it marvellously. A single one of them may be sufficient to abolish at a stroke certain imperfections of which the soul during its whole life had only tried to rid itself and to leave it adorned with virtues and loaded with supernatural gifts. A single one of these intoxicating consolations my reward it for all the labours undergone in its life even were they numberless.

-Varieties of Religious Experience.

10. Feeling then, unlike reason, is private and personal and one's ability to

ಯೋಗಿಗಳೇನೋ ತಮ್ಮ ಅನುಭವಗಳನ್ನು ತಿಳಿಸಲು ಯತ್ನಿಸುತ್ತಾರೆ. ಆದರೆ ಇದರಲ್ಲಿ ಬಹಳ ತೊಂದರೆಗಳಿವೆ. ಮೊದಲನೆಯದಾಗಿ ಭಾಷೆಯ ಸ್ವರೂಪ, ನಿತ್ಯಬಳಕೆಯ ವಸ್ತುಸಂಬಂಧವಾದ ಜ್ಞಾನವನ್ನುಮಾತ್ರ ಭಾಷೆಯು ಖಚಿತವಾಗಿ ಮಾಡಿಕೊಡುವುದು. ಇದನ್ನು ಮೀರಿದ ಯಾವುದೇ ವ್ಯವಹಾರವನ್ನಾಗಲೀ ಭಾಷೆ ನೇರವಾಗಿ ಅಭಿಧಾವೃತ್ತಿಯಿಂದ ತಿಳಿಸಲಾರದು. ಅದಕ್ಕಾಗಿ ಯೋಗಿಯು ತನ್ನ ಅನುಭವವನ್ನು ತಿಳಿಸಲು ಅಲಂಕಾರಗಳನ್ನು ಲಕ್ಷಣ, ಧ್ವನಿ ಮೊದಲಾದ ವೃತ್ತಿಗಳನ್ನೂ, ಉಪಮಾನಗಳನ್ನೂ ಉಪಯೋಗಿಸುವನು. ಅನುಭವದ ನಿಷ್ಕೃಷ್ಟವಾದ ಅರ್ಥವನ್ನು ತಿಳಿಸಲು ಇದು ಸಮರ್ಥವಾಗಲಾರದು.[11] ಈ ಕಾರಣಗಳಿಂದ ಯೋಗಿಗಳ ಅನುಭವ ಜ್ಞಾನ ಇತರರಿಗೆ ಆಗುವುದರಲ್ಲೂ, ಅವರು ತಮ್ಮ ಅನುಭವಗಳನ್ನೂ ಹೇಳಿಕೊಳ್ಳುವುದರಲ್ಲೂ ವೈವಿಧ್ಯವು ತೋರಿಬರುವುದು. ಆದರೆ ಈ ಅನುಭವ ಅತೀವ ಸುಳ್ಳು ಎನ್ನುವುದು ತಪ್ಪು. ಅದರ ಸ್ವರೂಪ ನಿರ್ಣಯಮಾಡುವ ಭಾರ ಜಿಜ್ಞಾಸುವಿನದು.

ಪಾಶ್ಚಾತ್ಯಧರ್ಮಗಳಿಗಿಂತ ಆರ್ಯರ ಧರ್ಮದಲ್ಲಿ 'ಯೋಗ'ವು, ಧರ್ಮ ಹೊಂದಿಕೊಂಡಿದೆ. 'ಯೋಗ'ದಲ್ಲಿ ಉಕ್ತವಾದ ವಿರಕ್ತಿ, ಭಗವದ್ವಿಷಯಚಿಂತನ, ಧ್ಯಾನ, ಭಕ್ತಿ ಮತ್ತು ಭಗವದ್ದರ್ಶನಾನುಭವ ಇವೆಲ್ಲ ಸನಾತನ ವೈದಿಕಧರ್ಮದ ಸಾಧನ ಕ್ರಮದಲ್ಲೇ ಸೇರಿಹೋಗಿವೆ. ಆರ್ಯಧರ್ಮದಲ್ಲಿ ಯೋಗವು ಧರ್ಮದ ಪ್ರಾಯೋಗಿಕ ಸ್ವರೂಪವು. ಇತರ ಧರ್ಮದಲ್ಲಿ ಇದು ಒಂದು ವಿಶೇಷಭಾಗಮಾತ್ರ

---

convey knowledge of what it is that one is feeling depends upon and is limited by the degree to which the person addressed has experienced a similar feeling. -God & Evil p.245.

11. The reality revealed to the Mystic is ex-hypothesi other than that of the everyday world; in particular, it is a supernatural, not a natural reality.... a general truth about language is that it is a medium of communication disguished to refer to the objects and to convey the meanings appropriate to this world.

When its use is extended beyond the reference to physical things, language can serve the purpose of communication only when it conveys meanings in terms, of concepts related to and derived from this world in terms, for example of civilization which is in the last resort about men, their tastes and their behaviour or the concepts of democracy which is about men and their Government.

The best that the mystic can do is to make abundant use of similies, metaphors, images and myths in which the things and actions of this world are used to symbolize those of another. -God and Evil p.249.

ಹೀಗೆಂದಮಾತ್ರಕ್ಕೆ ಆರ್ಯ–ಧರ್ಮಾನುಯಾಯಿಗಳೆಲ್ಲ ಯೋಗಿಗಳೆಂದರ್ಥವಲ್ಲ.[12] ಏಕೆಂದರೆ ಧರ್ಮ ಎಲ್ಲರಲ್ಲೂ ಮೂರ್ತಿಮತ್ತಾಗಿಲ್ಲ. ಬಹುಜನ ಧರ್ಮದ ಆರಂಭದಶೆಯಲ್ಲೇ ಅಡಿ ಇಡುತ್ತಿದ್ದಾರೆ. ಆದರೂ ಪ್ರತಿಯೊಬ್ಬರೂ ನಿಷ್ಕಾಮಕರ್ಮ–ವಿಷಯವೈರಾಗ್ಯಸಹಕೃತ ಶ್ರವಣ, ಮನನ, ಧ್ಯಾನದಿಂದೊಡಗೂಡಿದ ನಿರ್ಮಲವಾದ ಭಕ್ತಿಯಿಂದ ಭಗವಂತನನ್ನು ಒಲಿಸಿಕೊಳ್ಳುವಂತಹ ಯೋಗಿಗಳಾಗಬೇಕೆಂದೂ, ಭಗವತ್ಪ್ರಾಪ್ತಿಗೆ ಅನುಕೂಲವಲ್ಲದ ಮಾರ್ಗ ಸರ್ವಥಾ ಹೇಯವೆಂದೂ ಅನೇಕ ಶ್ರುತಿವಾಕ್ಯಗಳು ಬೋಧಿಸುವುವು.[13] ಅತೀಂದ್ರಿಯವಾದ ದೇವರು, ಪುಣ್ಯಾಪಾಪ, ಸ್ವರ್ಗ–ನರಕಗಳಲ್ಲಿ ನಂಬಿಕೆಯನ್ನಿಟ್ಟಮಾತ್ರಕ್ಕೆ ಸಾಲದು. ಯೋಗಿಯೂ ಆಗಬೇಕೆಂದು ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿದೆ.[14] ಇದರಿಂದಲೇ ಆರ್ಯಧರ್ಮದಲ್ಲಿಯೇ ಯೋಗವು ಬೆರೆತುಹೋಗಿರುವುದು. ಅಷ್ಟೇ ಅಲ್ಲ; ವೈದಿಕ ಧರ್ಮದಲ್ಲಿ ಜ್ಞಾನ, ಭಕ್ತಿ, ವೈರಾಗ್ಯಾದಿಗಳ ವಿಷಯ ನಿರೂಪಿತವಾಗಿರುವಷ್ಟು ವಿಸ್ತಾರವಾಗಿ ಪಾಶ್ಚಾತ್ಯ 'ಯೋಗ'ದಲ್ಲಿ ಆಗಿಲ್ಲವೆಂದು ಹೇಳಿದರೂ ತಪ್ಪಾಗದು.

ನಮ್ಮ ನಿತ್ಯಜೀವನದಲ್ಲೇ ತೃಪ್ತಿಪಟ್ಟುಕೊಂಡಿರುವುದು ಮಾನವಧ್ಯೇಯವಲ್ಲ. ಇದನ್ನು ಮೀರಿದ ನಮ್ಮ ಇಂದ್ರಿಯಗಳಿಗೆ ಗೋಚರವಾಗದ ವಿಸ್ತಾರವಾದ ಇನ್ನೊಂದು ಪ್ರಪಂಚವಿದೆ. ಅದರ ಅನುಭವವು ನಮಗೆ ಆಗಾಗ್ಗೆ ಆಗುತ್ತಿರುವುದು. ವಿವೇಕಿಯಾದವನು ಅದರಸುಳಿವನ್ನು ಹಿಡಿದು ಭಗವಂತನನ್ನು ಅರಸಲು ಹೆಣಗುವನು. ಇಂತಹ ಪ್ರಯತ್ನದಲ್ಲಿ ಅವನಿಗೆ ಪ್ರಾಪಂಚಿಕವಿಷಯಗಳಲ್ಲಿ ಜಿಹಾಸೆಮೂಡುವುದು. ಭಗವಂತನನ್ನು ತಿಳಿಸುವ ಶಾಸ್ತ್ರಗಳನ್ನು ಶ್ರವಣಮಾಡಿ, ವಿಚಾರಮಾಡಿ, ಅದನ್ನೇ ಧ್ಯಾನಮಾಡುವನು. ಆ ಭಗವಂತನಲ್ಲಿ ಅವನ ನಿತ್ಯವಾದ ಸ್ನೇಹ ಕೂಡುವುದು. ಇದರಿಂದ ಭಗವಂತನ ಬಾಹ್ಯದರ್ಶನವಾಗುವುದು. ಇದಿಷ್ಟು ಪ್ರಪಂಚದ ಎಲ್ಲ ಧರ್ಮಗಳಲ್ಲೂ ಕಂಡುಬರುವ ಅಂಶ. ಹೀಗೆ ಸಾಧನಕ್ರಮದಲ್ಲಿ ತೊಡಗಿ, ಅತೀಂದ್ರಿಯಜ್ಞಾನ ಪಡೆದು, ಭಗವಂತನ ರೂಪದರ್ಶನ ಮಾಡಿದ 'ಯೋಗಿ'ಗಳು ಎಲ್ಲ ಮತಗಳಲ್ಲೂ ಆಗಿಹೋಗಿದ್ದಾರೆ. ಅವರ ಅನುಭವಗಳು ಧರ್ಮದ ಸತ್ಯತೆಗೆ ನಿಷ್ಕೃಷ್ಟವಾದ ಸಾಕ್ಷಿಗಳಾಗಿವೆ.

---

12. ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥

13. ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್ । ನಾಸ್ತ್ಯಕೃತಃಕೃತೇನ
ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್––––॥
ಅಸೂರ್ಯಾ ನಾಮ ತೇ ಲೋಕಾ––––ಯೇಕೇಚಾತ್ಮಹನೋ ಜನಾಃ।

14. ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ ॥ – ಗೀತಾ

2. ಪಾಶ್ಚಾತ್ಯ ಧರ್ಮದಲ್ಲಿ ಯೋಗ

ಪಾಶ್ಚಾತ್ಯಧರ್ಮಗಳಲ್ಲಿ ಮುಖ್ಯವಾಗಿ ಹಿಬ್ರೂಮತ ಮತ್ತು ಕ್ರಿಶ್ಚಿಯನ್ ಮತಗಳಲ್ಲಿ ಯೋಗಿಗಳ ಸಂಖ್ಯೆ ಹೆಚ್ಚಾಗಿ ಕಾಣುವುದು. ಹಳೆಯ ಒಡಂಬಡಿಕೆ (Old Testament) ಎಂಬ ಯೆಹೂದಿ ಮತದ ಮೂಲ ಗ್ರಂಥದಲ್ಲಿ ಭಗವತ್ಸಾಕ್ಷಾತ್ಕಾರದ ಅನುಭವಗಳನ್ನು ತಿಳಿಸುವ ಉಕ್ತಿಗಳೇ ಹೆಚ್ಚಾಗಿದೆ. 'ಪಾಲ್'ನ (Paul) 'ಗಾಸ್ಪೆಲ್' ಎಲ್ಲ ಯೋಗಿಯ ಅನುಭವಗಳನ್ನು ತಿಳಿಸುವುದು[15] ಜಾನ್‌ನ ಮತ ಕ್ರಿಶ್ಚಿಯನ್ ಯೋಗಕ್ಕೆ ತಳಹದಿಯೆಂದು.[16] ಪಂಡಿತರು ಅಭಿಪ್ರಾಯಪಡುತ್ತಾರೆ. ಸಾಕ್ರೆಟಿಸ್. ಪ್ಲೇಟೋ, ಅರಿಸ್ಟಾಟಲ್ ಮತ್ತು ಪ್ಲಾಟೀನಸ್ ಇವರುಗಳ ಪ್ರಭಾವವೂ ಕ್ರಿಶ್ಚಿಯನ್ ಯೋಗದ ಮೇಲೆ ಸಾಕಷ್ಟಾಗಿದೆ. ಕ್ರೈಸ್ತನು ಹುಟ್ಟಿ ಕ್ರೈಸ್ತಮತವನ್ನು ಹರಡಿದ ಮೇಲೆ, ಸೆಂಟ್ ಅಗಸ್ಟೈನನೇ (St. Augustine) ಕ್ಯಾಥೋಲಿಕ್ ಪಂಗಡದ ಯೋಗಿಗಳಿಗೆ ಮೂಲ ಪುರುಷ. ಅವನ ಸುಪ್ರಸಿದ್ಧವಾದ 'ಕನ್‌ಫೆಷನ್ಸ್' ಎಂಬ ಗ್ರಂಥದ ಮೊದಲ ವಾಕ್ಯದಲ್ಲೇ 'ನೀನು ನಿನಗಾಗಿ ನನ್ನನ್ನು ಕರೆತಂದೆ; ನಿನ್ನಲ್ಲಿ ಯೋಗದ ಹೊರತು ನಮ್ಮ ಕರುಳಿಗೆ ತಂಪೆರದಂತಾಗದು' ಎಂದು ಹೇಳಿರುವನು.[17] ಆ ಭಗವಂತನನ್ನು ಅರಸುತ್ತಾ ಅವನು ಹೀಗೆ ನುಡಿದಿರುವನು. 'ನೀನು ನನ್ನ ಅತ್ಯಂತ ಅಂತರಭಾಗಕ್ಕಿಂತ ಸನಿಹದಲ್ಲಿರುವೆ. ಜಾಗ್ರತನಾಗಿ ನಿನ್ನ ಅನಂತರೂಪವನ್ನು ಕಂಡೆ. ಇದು ಈ ಪ್ರಾಕೃತೇಂದ್ರಿಯದಿಂದ ಬಂದುದಲ್ಲ.' [18]

> "What do I love when I love Thee? Not beauty of the body nor harmony of the line, nor brilliancy of the light so pleasant to these eyes, nor sweet melodies of every kind of song nor the sweet scent of flowers and perfumes and spices, not manna and honey, not limbs inviting to fleshly embrace. Not these do I love when I love my God; and yet I love a kind of light and melody and fragrance and food and embrace, when I love my God-- the light, melody, food, fragrance, embrace of my inward man; where there shineth upon my soul,

---

15. It is no straining of the facts to say that Paul's Gospel' was deeply grounded in an immediate, personal experience of the divine Being, who impunged upon him, invaded him and finally became the inward principle and spirit of his very self. -- Mystical Religion.
16. Johannine Christianity has by many writers been regarded as the main source of christian mysticism. --ibid
17. Thou has made us for thyself, and our heart is restless unless it rests in Thee.
18. Thou wert more inward to me than my most inward Part. I awake in Thee and saw thee infinite and this sight was not derived from the flesh.

What space containeth not, and where resoundeth what time stealeth not away, which is fragrance which a breach scattereth not, where there is flavour that eating lesseneth not, and where there is an embrace that satiety rendeth not asunder. This I love when I love my God"

ಭಗವಂತನ ಅರಸುವಿಕೆ ಎಷ್ಟು ತೀವ್ರವಾದದ್ದು; ಭಗವಂತ ಎಲ್ಲಕ್ಕಿಂತಲೂ ಹೇಗೆ ದೂರವಾಗಿದ್ದಾನೆಂಬುದು ಚೆನ್ನಾಗಿ ವರ್ಣಿತವಾಗಿದೆ :-

"I asked the earth for God and it answered me; 'I am not He;' I asked the sea and the depths and the creeping things and they answered we are not thy God, see thou above us."

ಡಯೋನಿಯಸ್, ಸೆಂಟ್ ಫ್ರಾಂಸಿಸ್, ಥಾಮಸ್ ಆಕ್ವಿನಾಸ್ ಇವರುಗಳೆಲ್ಲ ಕ್ರಿಸ್ತಮತದ ದೊಡ್ಡ ಯೋಗಿಗಳು. ಎಕ್ಹಾರ್ಟನು ಹದಿನಾಲ್ಕನೆಯ ಶತಮಾನದಲ್ಲಿದ್ದ ಜರ್ಮನಿಯ ಅತ್ಯಂತ ಪ್ರತಿಭಾಶಾಲಿಯಾದ ಯೋಗಿಯು. ಅವನ ಉಪದೇಶವು ಮುಂದಿನ ತಲೆಮಾರಿಗೆ ಮಾರ್ಗದರ್ಶನವಾಯಿತು.

"Do not think about the world, nor about thy friends, nor about thy past, the present or future; but consider thyself to be outside of the world and alone with God, as if thy soul were already separated from the body and had no longer any interest in peace or war or the state of the world. Leave thy body and fix thy gaze on the uncreated light. Let nothing come between thee and God. The soul in contemplation views the world from a far off, just as when we proceed to God by the way of abstraction, we deny to Him, first of all bodily and sensible attributes, then intelligible qualities and lastly that being which would keep him among created things."

ಈ ವಾಕ್ಯಗಳಲ್ಲಿ ಧ್ಯಾನಪ್ರಕಾರವು ಉಕ್ತವಾಗಿರುವುದು. ಎಕ್ಹಾರ್ಟನು ಭಗವಂತನು ಅವಾಚ್ಯನು ಎಂದು ಹೇಳುವನು. ಇವನು ಸಗುಣ – ನಿರ್ಗುಣ ಬ್ರಹ್ಮರುಗಳು ಬೇರೆ (God & Godhead); ಎಂಬ ಸಗುಣಬ್ರಹ್ಮಸಾಕ್ಷಾತ್ಕಾರಕ್ಕೆ ವಿಷಯನು; ನಿರ್ಗುಣಬ್ರಹ್ಮನು ಅವಾಚ್ಯನು; ಅಜ್ಞೇಯನು ಎಂದು ಹೇಳುವನು. ಎಕ್ಹಾರ್ಟನಾದ ಮೇಲೆ ಟಾಲರ್, ಹೆನ್ರಿಸೂಸೋ, ಜಾನ್‌ರೂಸ್‌ಬರ್ಗ್ ಮೊದಲಾದವರು ಪ್ರಸಿದ್ಧ ಯೋಗಿಗಳಾದರು. ರೂಸ್‌ಬರ್ಗನು ಅತ್ಯಂತಭಾವಜೀವಿ, ಎಲ್ಲರ ಜೀವನವೂ 'ಪ್ರೀತಿಯಲ್ಲಿ ಮುಳುಗಬೇಕೆಂ'ಬುದೇ ಅವನ ಸಿದ್ಧಾಂತ. ಅವನ ವಾಕ್ಯಗಳೂ ಅತ್ಯಂತ ಹೃದಯಸ್ಪರ್ಶಿಯಾಗಿವೆ.

"Lord, I am Thine and I should be Thine as gladly in hell, as in heaven, if in that way I could advance thy glory."

ಇಷ್ಟಾದರೂ ಭಗವದನುಭವದ ಪರಮಾವಧಿಯಲ್ಲೂ ದೇವರೊಡನೆ ಐಕ್ಯವನ್ನು ರೋಸ್‌ಬರ್ಗ್‌ನು ಒಪ್ಪನು. ದೇವರೆಂದೆಂದಿಗೂ ದೇವರೇ. ಜೀವನೆಂದೆಂದಿಗೂ ಜೀವನೇ. ಇವರಿಬ್ಬರಿಗೂ ಸಾದೃಶ್ಯ ಉಂಟೇ ಹೊರತು, ಐಕ್ಯಕೂಡದು. ಭಗವದಪರೋಕ್ಷವಾದರೆ ನಿಜಸುಖಾನುಭವವಾಗುವುದೆಂದು ಅವನ ಅಭಿಪ್ರಾಯ.[19] ಕ್ರೈಸ್ತಯೋಗದ ಇತಿಹಾಸದಲ್ಲಿ Imitation of Christ'ನ ಸ್ಥಾನ ಹಿರಿದು. ಇದರ ಪ್ರಭಾವ ಇಂದಿಗೂ ಅಚ್ಚಳಿಯದೆ ಇದೆ. ಇದರ ಉಚ್ಚಭಾವನೆ, ಭಕ್ತಿಯ ಉದಾತ್ತತೆ, ಭಗವದ್ವಿಷಯದಲ್ಲಿನ ಉದ್ವೇಗ ಅದ್ವಿತೀಯವಾದದ್ದು. ಅಂತೆಯೇ ಇಂದಿಗೂ ಅದು ಮರೆಯದ ಪುಸ್ತಕವಾಗಿದೆ. ಅಂತೂ ಕ್ರೈಸ್ತ ಮತದಲ್ಲಿ ಯೋಗಿಗಳು ಅನೇಕರು ಆಗಿಹೋಗಿದ್ದಾರೆ.

೩ ಇಸ್ಲಾಂ – ಯೋಗ

ಇಸ್ಲಾಂಮತದಲ್ಲೂ ಯೋಗದ ನಿದರ್ಶನ ಹೇರಳವಾಗಿದೆ. ಕೊರಾನಿನ ಅನೇಕ 'ಸುರಾ'ಗಳಲ್ಲಿ ಭಾವಪ್ರಾಧಾನ ವಾಕ್ಯಗಳು ಕಂಡುಬರುವುವು. ಅಬುಬೇಕರ್ ಮತ್ತು ಆಲಿ ಇಸ್ಲಾಂಮತದ ಆರಂಭದಲ್ಲಿ ವಿರಕ್ತರ ತಂಡವನ್ನು ಹರಡಲು ಕಾರಣರಾದರು. ಹಲ್ಲಾಜ್ ಎಂಬುವನು ಇಸ್ಲಾಂ ಮತದ ಅದ್ವೈತ ಪಂಥದ ಯೋಗಿ ಎನ್ನಬಹುದು. ಬಹುದಿನಗಳಿಂದ ಪ್ರಚಾರದಲ್ಲಿದ್ದರೂ ತಪ್ಪಾಗಿ ಅರ್ಥಮಾಡಿಕೊಳ್ಳುತ್ತಿದ್ದ ಇಸ್ಲಾಂ ತತ್ತ್ವಗಳನ್ನೇ ಇವನು ಸರಿಯಾಗಿ ಬೋಧನೆ ಮಾಡಿದ.

ಸೂಫೀಪಂಥದ ಉದಯದಿಂದ ಇಸ್ಲಾಂ 'ಯೋಗ'ದ ಇತಿಹಾಸ ವಿಕಸಿತವಾಯಿತು. ಘಾಜಲಿ (Ghazzali) ಸೂಫೀಪಂಥದ ನಾಲ್ಕು ಸಾಧನವಿಧಾನಗಳನ್ನು ವಿವರಿಸಿ ಅದರಲ್ಲಿ ಭಗವಂತನಿಗೆ ಜೀವನ ಆತ್ಮಸಮರ್ಪಣೆಯನ್ನು ಒತ್ತಿಹೇಳಿದ್ದಾನೆ. ಸೂಫೀ ಪಂಥದ ರೇಬಿಯಾ (Rabia) ಎಂಬ ಭಕ್ತಳು ಭಕ್ತ ಮೀರಾ ಮತ್ತು ಆಂಡಾಳಳಂತೆ ಭಗವಂತನಲ್ಲಿ ಅನುರಕ್ತಳು. ಅರ್ಧರಾತ್ರಿಯಲ್ಲಿ ಏಕಾಂತದಲ್ಲಿ ಅವಳು, "ಪ್ರಭು, ಇದೀಗ ನಲ್ಲನಲ್ಲೆಯರು ಕೂಡಿಹರು. ನಾನೊಬ್ಬಳೇ ನಿನ್ನೊಂದಿಗೆ ಆನಂದ–ಪಡುತ್ತಿರುವೆ"ನೆಂದು ಕೂಗುವಳು.

---

19 But it must be noted that Ruysbrock never taught fushion of the self in God. On the highest height of the ascent the soul never loses its identity- the creature is to the end creature and God is God. The union is one of likeness in love and in spirit not oneness of being. When we live wholly in God, then for the first time, we live wholly in ourselves.

--Mystical Religion.

ii "In this," he says, " consists the nobility of our nature now and everlastingly, that it is impossible for us to **become God** and lose our created essence" "but overwhelmed in love we are one with God"

-Ruysbroek; Book of the Sparking Stone.

"Lord I am for from my own, a captive and an orphan, and my wrist has just been broken. Yet none of these things grieve me. Only this though causes me disquiet; it is that I know not if thou art satisfied with me."

"My lord thou knowest that the desire of my heart is to seek thy approbation and that its only wish is to obey thy commands. If I had liberty of action, I would not remain a single instant without doing thee service; but thou hast delivered me into the hands of a creature and therefore I am hindered into the same."

The marriage contact will be entered into by those who have possession of their free-will. As for me, I have no will to dispose of; I belong to the lord and I rest in the shadow of His Commandments counting myself as nothing."

--Claud Field, Mystics and Saints of Islam.

ಫುದಯಿಲ್ ಬೆನ್ ಅಜಾಜ್ (fudayl Ben Azaz) ಮತ್ತು ಬೂಯಾಜೀಲ್ ಬಸ್ತಾಮಿ (Bayazid Bastami)ಮತ್ತು (Zun)ಜುನ್ ಇವರುಗಳು ರೇಬಿಯಳಾದ ಮೇಲ ಬಂದ ದೊಡ್ಡ ಯೋಗಿಗಳು. ಆದರೆ ಜಲಾಲುಧೀನ್ ರೂಮಿಯ ಖ್ಯಾತಿಯಿಂದ ಇವರೆಲ್ಲ ಮರೆಯಾದರೆಂದು ಹೇಳಬಹುದು, ಜಲಾಲುಧೀನ್‌ರೂಮಿಯು ಪರ್ಷಿಯದ ಅತ್ಯಂತ ಪ್ರತಿಭಾಪೂರ್ಣ ಯೋಗಿ. 26000 ದ್ವಿಪದಿಗಳುಳ್ಳ ಅವನ 'ಮಸ್ನವಿ' ಗ್ರಂಥವು ಬಹಳ ಹೆಸರುವಾಸಿಯಾದುದು. ಭಕ್ತ ಪ್ರಭುವಿಗೆ ಆತ್ಮಾರ್ಪಣೆಮಾಡುವ ಚಿತ್ರ ಇದರಲ್ಲಿ ಸುಂದರವಾಗಿ ಚಿತ್ರಿತವಾಗಿದೆ, ಇವನು ಅದ್ವೈತವಾದಿಯಾದರೂ ಜೀವನ ಸ್ವಾತಂತ್ರ್ಯಕ್ಕೆ ವಿಶೇಷ ಮನ್ನಣೆಕೊಡುವನು. ಭಕ್ತಿಯು ಇವನ ಗ್ರಂಥದಲ್ಲಿ ಹಾಸುಹೊಕ್ಕಾಗಿ ಹರಡಿರುವುದು. ಈಜಿಪ್ಷಿಯನ್ ಯೋಗಿ ಷರಣೆ ಮತ್ತು ಮುಲ್ಲಾಷಾ ಇವರುಗಳೂ ಅತ್ಯಂತ ಪ್ರಸಿದ್ಧರು. ಇಸ್ಲಾಂಯೋಗದ ಇತಿಹಾಸದಲ್ಲಿ ಬಾದಶಹ ಷಹಜಹಾನನ ಮಗ ದಾರಾಷುಕೋನ ಹೆಸರನ್ನು ಮರೆಯುವಂತಿಲ್ಲ. ರಸವಂತಿಗಳಂತಿರುವ ಉಪನಿಷದ್ವಾಕ್ಯಗಳು ಅವನನ್ನು ಮುಗ್ಧಗೊಳಿಸಿದ್ದವು. ವೇದ ಮತ್ತು ಉಪನಿಷತ್ತುಗಳು ಕೊರಾನಿಗಿಂತಲೂ ಪವಿತ್ರಗ್ರಂಥಗಳೆಂದು ಅವನ ಭಾವನೆ. ಇಸ್ಲಾಂಮತದಲ್ಲೂ ಹೀಗೆ ಅನೇಕ ಯೋಗಿಗಳು ಆಗಿಹೋಗಿದ್ದಾರೆ. ಅದರಲ್ಲೂ ಸೂಫಿಪಂಥ ಯೋಗಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿತು. ಇದರಂತೆ ಜಗತ್ತಿನ ವಿವಿಧ ಧರ್ಮಗಳಲ್ಲಿ ಯೋಗಿಗಳು ಹುಟ್ಟಿ ಆಯಾ ಧರ್ಮಗಳನ್ನು ವಿಶೇಷ ಬೆಳಕಿಗೆ ತಂದಿದ್ದಾರೆ.

✣ ✣ ✣

X. ಭಾರತದಲ್ಲಿ ಭಕ್ತಿ

ಭಾರತದಲ್ಲಿ ವೈಷ್ಣವ, ಶೈವ, ಸ್ಕಾಂದ, ಸೌರ, ಗಾಣಾಪತ್ಯ ಮತ್ತು ಶಾಕ್ತವೆಂದು ಆರು ಮತಗಳ ಹೆಸರು ಕೇಳಬಂದರೂ, ಜನತೆಯಲ್ಲಿ ವಿಶೇಷ ಪ್ರಚಾರದಲ್ಲಿರುವುದು ಶೈವ ಮತ್ತು ವೈಷ್ಣವಮತಗಳೆರಡೇ. ವೇದಾದಿ ಶಾಸ್ತ್ರಗಳಲ್ಲಿ ವಿಷ್ಣೂತ್ಕರ್ಷ ಉಕ್ತವಾಗಿದೆಯೆಂದು ಬ್ರಹ್ಮಸೂತ್ರಗಳು ಸಾರುವುವು. ವೈಷ್ಣವ ಮತವು ಭಾರತದ ಎಲ್ಲಾ ಭಾಗಗಳಲ್ಲೂ ವಿಶೇಷ ಪ್ರಚಾರದಲ್ಲಿದೆ. ಕಾಶ್ಮೀರ, ಕರ್ನಾಟಕ, ದ್ರಾವಿಡ ದೇಶಗಳಲ್ಲಿ ಶಕ್ತಿವಿಶಿಷ್ಟಾದ್ವೈತ ವೀರಶೈವ ಮೊದಲಾದ ಶೈವಪಂಥಗಳು ಪ್ರಚಾರದಲ್ಲಿದ್ದು ಅನೇಕ ಶಿವಶರಣರು ಭಕ್ತಿಗೀತೆಗಳನ್ನು ಹಾಡಿದ್ದಾರೆ. ಶೈವಮತದಲ್ಲಿ ಭಕ್ತನ ಕೂಗು "ನಾನು ದಾಸ" ಎಂಬ ಭಾವದಿಂದ ಆರಂಭವಾದರೂ ಕೊನೆಗೆ ಅದ್ವೈತದಲ್ಲೇ ಪರ್ಯವಸಾನ ಹೊಂದುವುದು. ವೈಷ್ಣವ ಮತಕ್ಕೂ ಶೈವಮತಕ್ಕೂ ಇದೇ ವ್ಯತ್ಯಾಸ [1] ಇದರಿಂದ ಭಕ್ತಿಮಾರ್ಗದ ಮುಖ್ಯ ತಳಹದಿಯಾದ ದಾಸ್ಯಭಾವ ಶೈವಮತದಲ್ಲಿ ಲುಪ್ತವಾದಂತಾಯಿತು. ಇದು ಹೋದಲ್ಲಿ 'ಯೋಗ'ದ ಜೀವಾಳವೇ ಹೋದಂತೆನ್ನಬಹುದು.

೧. ಹರಿಶರಣರು

ಭಾರತದ ಹರಿದಾಸರುಗಳೆಲ್ಲರ ಚರಿತೆಯು ಅತ್ಯಂತ ವಿಸ್ತೃತವಾದುದು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಇದು ಎಲ್ಲ ದೇಶಗಳಲ್ಲೂ ಹರಡಿ ಜನಜೀವನದಲ್ಲಿ ಬೆರೆತು, ಸಮಾಜಕ್ಕೆ ಚೈತನ್ಯದಾಯಿನಿಯಾಗಿ ಇಂದಿಗೂ ಜೀವಂತವಾಗಿ ಕಂಗೊಳಿಸುತ್ತಿದೆ. ಉತ್ತರದಲ್ಲಿ ಭಕ್ತೆ ಮೀರಾ, ಸೂರದಾಸ, ತುಳಸೀದಾಸ, ಕಬೀರದಾಸ, ಬಂಗಾಳದ ಜಯದೇವ, ಚಂಡೀದಾಸ, ಚೈತನ್ಯಪ್ರಭು, ಆಂಧ್ರದ ರಾಮದಾಸ, ಪೋತನ, ತ್ಯಾಗರಾಜ, ದ್ರಾವಿಡರ ಆಳ್ವಾರರು, ಮಹಾರಾಷ್ಟ್ರದ ಜ್ಞಾನದೇವ, ತುಕಾರಾಮ, ಏಕನಾಥ, ಗುಜರಾತಿನ ನರಸೀಭಗತ ಮೊದಲಾದವರು ಹರಿಶರಣರ ಶ್ರೇಣಿಯಲ್ಲಿ ಕಂಗೊಳಿಸುತ್ತಿದ್ದಾರೆ. ಅವರ ಜೀವನ, ಅವರ ಕೃತಿಗಳು, ಭಾರತದ ಜನತೆಯಮೇಲೆ ಎಂದೂ ಅಳಿಸದ ಮುದ್ರೆಯನ್ನೊತ್ತಿದೆ. ಹರಿಶರಣರ ಪ್ರವಾಹವು ರಾಜಕೀಯ ಮತ್ತು ಧಾರ್ಮಿಕ ವಾತಾವರಣಕ್ಕೆ ಹೊಂದಿಕೊಂಡೇ ಹೋಗಿದೆಯೆನ್ನಬಹುದು.

ಸಾವಿರಾರು ವರುಷದ ಭಾರತದ ಇತಿಹಾಸದಲ್ಲಿ ಅನೇಕ ವಿದೇಶೀಯರ ದಬ್ಬಾಳಿಕೆ ನಡೆಯುತ್ತಿದ್ದಾಗ, ಈ ಭಕ್ತರುಗಳ ಉದಯ, ಒಳ್ಳೆಯ ಸಂಧಿಕಾಲಗಳಲ್ಲೂ ಹಿಂದೂ ಅರಸೊತ್ತಿಗೆಗಳ ಅಭ್ಯುದಯ ಕಾಲಗಳಲ್ಲೂ ಆಗಿರುವುದು ಗಮನಾರ್ಹವಾಗಿದೆ. ಇದು ಜನತೆಯಲ್ಲಿ ಆಗಾಗ ಲುಪ್ತವಾಗುತ್ತಿದ್ದ ಚೈತನ್ಯವನ್ನು ಪುನಃ ಉತ್ತೇಜನಗೊಳಿಸಿ

1. Vaishnavism is essentially monotheistic while Saivism is often ultimately pantheistic or rather is apt to relapse into pantheism, though it too is monotheistic.

-Encyclopaedia of Religion & Ethics. Vol. 12, p. 871

ಸಾಮಾನ್ಯ ಧರ್ಮದ ಕಡೆಗೆ ಅದರ ಗಮನವನ್ನು ಸೆಳೆಯುತ್ತ ನಡೆಯಿತು. ಅದಕ್ಕೆ ಸರಿಯಾಗಿ ಬೃಂದಾವನದ ಕೃಷ್ಣದೇವಾಲಯಗಳು, ರಾಜಾಸ್ಥಾನದ ಗಿರಿಧರ ಸನ್ನಿಧಿ, ಬಂಗಾಳದ ವೈಷ್ಣವ ಮಂದಿರಗಳು, ಪೂರಿಯ ಜಗನ್ನಾಥ ಮಂದಿರ, ದಕ್ಷಿಣದ ರಂಗನಾಥ ಮೊದಲಾದ ವೈಷ್ಣವ ದೇವಸ್ಥಾನಗಳು, ಪಂಢರಪುರದ ವಿಠ್ಠಲ ದೇವಸ್ಥಾನ, ಬೇಲೂರು ಚನ್ನಕೇಶವ ಸನ್ನಿಧಿ; ತಿರುಪತಿಯ ವೆಂಕಟೇಶನ ದೇವಾಲಯ, ಇವು ಹರಿಶರಣರ ಚೈತನ್ಯದಾಯಿನೀ ಕೇಂದ್ರಗಳು, ಇವುಗಳ ಸುತ್ತಲು ಹರಿಶರಣರ ವಿವಿಧ ಪಂಥಗಳು ಬೆಳೆದು, ಆಯಾ ಭಗವನ್ಮೂರ್ತಿಗಳ ಆರಾಧನೆಯನ್ನು ಮುಖ್ಯವಾಗಿಟ್ಟುಕೊಂಡು ಜನತೆಯಲ್ಲಿ ಹರಿಭಕ್ತಿಯ ಪ್ರಚಾರವನ್ನುಮಾಡಿದವು. ಈ ದೃಷ್ಟಿಯಿಂದ ನೋಡಿದಲ್ಲಿ ಮೂರ್ತಿಪೂಜೆಯ ಪ್ರಾಮುಖ್ಯ ಜನಜೀವನದಲ್ಲಿ ಅವುಗಳು ನೀಡುವ ಸ್ಫೂರ್ತಿ ಎಂತಹುದೆಂಬುದು ತಿಳಿಯುವುದು. ಭಕ್ತಿ ಪರಿಪಾಕದಿಂದ ಬಲಿತಮನಸ್ಸಿನ ಯೋಗಿಗೆ–ಸಾಧಕನಿಗೆ ಹರಿಮಂದಿರಗಳ ಭಗವನ್ಮೂರ್ತಿಗಳ ಅವಶ್ಯಕತೆ ಇಲ್ಲದೆ ಇರಬಹುದು; ಅಂತವರು ಜ್ಞಾನದೀವಿಗೆಯಿಂದ ವಿಮಲಾಂತಃಕರಣರಾಗಿ ವ್ಯಾಪ್ತೋಪಾಸನೆಯನ್ನೇ ಮಾಡಬಹುದು. ಆದರೆ ಜನತೆಗೆ, ಅಜ್ಞರಿಗೆ ಈ ಹರಿಮಂದಿರಗಳು ಅಲ್ಲಿಯ ಉತ್ಸವಾದಿಗಳು ಅವರ ಧಾರ್ಮಿಕ ಮನೋಭಾವನೆಯನ್ನು ಜಾಗ್ರತಗೊಳಿಸಲು ಸಾಧಕವಾಗುವುವು. ಆದ್ದರಿಂದಲೇ ಹರಿಶರಣರು ಇಂತಹ ಹರಿಮಂದಿರಗಳನ್ನು ಕೇಂದ್ರವನ್ನಾಗಿ ಮಾಡಿ ತಮ್ಮ ಭಕ್ತಿಸಂದೇಶವನ್ನು ಜನತೆಯಲ್ಲಿ ಹರಡಿದರು.

ಭಕ್ತಿಯು ಅವೈದಿಕವೇ?

ಭಕ್ತಿಯು ವೈದಿಕಧರ್ಮದಲ್ಲಿಲ್ಲ. ಇದು ದ್ರಾವಿಡರಿಂದ ಬಂದುದೆಂದು ರೆವರೆಂಡ್ ಹೆರಾಸ್ (Rev Heras) Mystic Teachings of the Haridas's of Karnatak ಎಂಬ ಪುಸ್ತಕದ ಮುನ್ನುಡಿಯಲ್ಲಿ ಬರೆದಿರುವರು. ಅವರ ವಾದದ ಸಾರಾಂಶ ಹೀಗಿದೆ.[2]

2. "It is true that in Mandala 10 of the Rigveda, we read that the multiplicity of God is an illusion and that there is only one God who is the creater and father of everything, who is called Prajapathi. Yet this is an evident effect of a totally foreign influence in the doctrines of Rigveda, an influence which undoubtedly hails from the Dravidian people of the country; whose theological doctrine was monotheistic. Even the famous expression ಏಕಂ ಸದ್ವಿಪ್ರಾ ಬಹುಧಾ ವದಂತಿ which is found in Mandala I seems to be a later interpolation as reflecting a theological development totally unknown in that early period. (- Page XI.)
Accordingly it has been suggested that the philosophy of the Upanishads is essentially Dravidian rather than Aryan and plausible grounds can be adduced to this view. In point of fact, some authors have realized this superiority of Dravidian culture by examining the sources of Indian philosophy.

ಭಾರತದ ಅತ್ಯಂತ ಪ್ರಾಚೀನ ಗ್ರಂಥವೆಂದು ಪ್ರಸಿದ್ಧವಿದ್ದರೂ, ಋಗ್ವೇದವು ಕೇವಲ ಭೌತಿಕವಿಷಯಪ್ರಧಾನವಾದ ಗ್ರಂಥ. ಅದರಲ್ಲಿ ಸರ್ವೋತ್ತಮದೇವತೆಯ ವಿಷಯವಾಗಲಿ, ಪಾಗತ್ರಿಕವಿಷಯಗಳ ಪ್ರಾರ್ಥನೆಯಾಗಲಿ ಕಾಣಬರುವುದಿಲ್ಲ. ಅದರ ಮೊದಲನೆಯ ಮಂಡಲದ "ಏಕಂ ಸದ್ವಿಪ್ರಾ ಬಹುಧಾ ವದಂತಿ'' ಎಂಬ ವಾಕ್ಯವೂ, ಹತ್ತನೆಯಮಂಡಲದ ಪುರುಷಸೂಕ್ತ ಮೊದಲಾದವುಗಳೂ ಕೂಡ ವೇದದಬೋಧನೆಗೆ ಅಪರಿಚಿತವಾಗಿದ್ದು ದ್ರಾವಿಡರ ಸಂಪರ್ಕದಿಂದ ಅದರಲ್ಲಿ ಕಾಣಿಸಿಕೊಂಡವು. ಸಂಹಿತೆಗಳಲ್ಲಿನ ವಿಷಯಗಳಿಗೆ ಉಪನಿಷತ್ತಿನ ತತ್ತ್ವಗಳು ಕೇವಲ ವಿರೋಧವಾಗಿವೆ. ಆತ್ಮ, ಕರ್ಮ, ಭಗವತ್ಪ್ರಸಾದ ಮೊದಲಾದ ತತ್ತ್ವವಿಚಾರಗಳು ಆರ್ಯಸಂಸ್ಕೃತಿಯ ಬ್ರಾಹ್ಮಣರಿಗೆ ತೀರ ಹೊಸತು. ಅಂತೆಯೇ ಸಂಹಿತೆಗಳಲ್ಲಿ ಅವು ಕಾಣಿಸಿಕೊಂಡಿಲ್ಲ. ಕ್ಷತ್ರಿಯರ ಬಾಯಿಂದ ಉಪನಿಷತ್ತುಗಳಲ್ಲಿ ಬಂದ ಈ ಉಪದೇಶವು ದ್ರಾವಿಡರದು. ಮೊಹೆಂಜೊದಾರೋ ಅವಶೇಷಗಳ ಉತ್ಖನದಿಂದ ಇದು ಇನ್ನೂ ದೃಢಪಟ್ಟಿತು. ಉಪನಿಷತ್ತುಗಳ ತತ್ತ್ವಗಳಂತೆಯೇ ಭಕ್ತಿಯೂ ಆರ್ಯರಿಗೆ ಹೊಸದು. ಇದು ಮೊದಲಿನಿಂದಲೂ ದ್ರಾವಿಡರಲ್ಲಿ ರೂಢವಾಗಿದ್ದು ದ್ರಾವಿಡರ ಅಧಿದೇವತೆಯಾದ ಶಿವನಲ್ಲಿ ಪ್ರಯೋಗವಿತ್ತು. ಬರಬರುತ್ತಾ ಆರ್ಯ ದ್ರಾವಿಡ ಸಮಾವೇಶವಾಗಿ ಆರ್ಯದೇವತೆಯಾದ ವಿಷ್ಣುವಿನಲ್ಲೂ ಭಕ್ತಿಯ ಪ್ರಚಾರವಾಯಿತು. ಪಂಢರಪುರದ ವಿಠಲ ವಿಷ್ಣುದೇವತೆಯಾದರೂ ಅಲ್ಲಿ ಭಕ್ತಿಯ ಉಗಮವಾದುದು ಲಿಂಗದಿಂದಲೇ. ಲಿಂಗವು ವಿಠಲನ ಹಸ್ತದಲ್ಲಿರುವುದು ಎಂದು ಕೆಲವರೂ, ಅವನ ಮುಕುಟದಲ್ಲಿರುವುದೆಂದು ಇನ್ನು ಕೆಲವರೂ ಹೇಳುವರು. ಆದ್ದರಿಂದ ವಿಠಲನನ್ನು ಅಧಿದೇವತೆಯನ್ನಾಗಿ ಮಾಡಿಕೊಂಡು ಬೆಳೆದ ಕರ್ನಾಟಕ ಹರಿದಾಸರ ಭಕ್ತಿಗೂ, ಶಿವನೇ ಉಗಮಸ್ಥಾನವೆನ್ನಲಡ್ಡಿಯಿಲ್ಲ. ಇತ್ಯಾದಿ ....

Now the asceticism practised in the Upanishads is precisely this sort of asceticism which does not know of Vedic sacrifices. Hence it is not Aryan and therefore we may affirm that the true asceticism of India is of Dravidian origin.

The study of the mystic teachings of Haridasas of Karnatak............discloses many connections of the Kannada Bhakti writers with the old Upanishadic principles. Bhakti is another offshoot of the Dravidian tree of Asceticism. Though the Bhakti writers of Karnataka were Vaishnavas, they are directly influenced by the Dravidian Saiva doctrines.

Krishna who seems to have been the God of the Abhiras (an ancient dravidian tribe;... now known as Abhiras, cowherds) was at a very late time identified with Vishnu by the Vaishnavas in the same way as the An-Siva of the Mohenjo Daro period, was afterwords identified with the Rigvedic Rudra, The Saivait connections of the Kannada Bhaktas are clear from the fact that though they worship Krishna, according to the enjoinments of Madhva, they also worship Siva.

Moreover it is an undeniable fact that there exists some very ancient

ಈ ವಿಮರ್ಶೆಯು ಪಂಡಿತರುಗಳಿಂದ ಬಂದಿದ್ದರೂ ಇದರಲ್ಲಿ ವಿಚಾರಾಂಶಗಳು ಬಹಳವಿದೆ. ವೇದಗಳು ಈಗ ದೊರತಿರುವಷ್ಟೇ ಇರುವುದೆಂದು ಇಟ್ಟುಕೊಂಡು ಇದರಲ್ಲಿ ನಮಗೆ ತೋರಿದ ಪೌರ್ವಾಪರ್ಯ ಕ್ರಮವನ್ನು ಹೇಳಿಕೊಂಡು ಅದರ ಮೇಲೆ ಇತಿಹಾಸವನ್ನು ಕಟ್ಟುವುದು ತಪ್ಪುಹಾದಿ. ಈಗ ಸಿಕ್ಕದೇ ಇರುವ ಮಂತ್ರಭಾಗಗಳು ವೇದದಲ್ಲಿ ವಿಪುಲವಾಗಿವೆ. ಈಗ ಪ್ರಚಾರದಲ್ಲಿರುವ ಮನುಧರ್ಮಶಾಸ್ತ್ರ ಮೊದಲಾದ ಸ್ಮೃತಿಗ್ರಂಥಗಳಿಗೆಲ್ಲ ಮೂಲ ಶ್ರುತಿಗಳೆಂದು ಅವು ಅನೇಕ ಈಗ ಅನುಪಲಬ್ಧವೆಂದು ಪ್ರಾಚೀನ ಸಂಪ್ರದಾಯದ ದೃಷ್ಟಿ. ಈಗ ಉಪಲಬ್ಧವಿರುವ ವೇದವಾಕ್ಯಗಳಲ್ಲಿ ಐತಿಹಾಸಿಕ ಸಂಗತಿಗಳಿಲ್ಲ. ಇದು ಆಧುನಿಕ ಪಂಡಿತರ ಅಭಿಪ್ರಾಯವೇ ಆಗಿದೆ. ಅದರಂತೆಯೇ ಆರ್ಯರು ಹೊರದೇಶದಿಂದ ಇಲ್ಲಿಗೆ ಬಂದರು. ಆಗ ಇಲ್ಲಿ ಸುಸಂಸ್ಕೃತ ದ್ರಾವಿಡರಿದ್ದರು. ಮೊಹೆಂಜೇದಾರೋ ಸಂಸ್ಕೃತಿ ದ್ರಾವಿಡ ಎಂಬುದು ಚರ್ಚಾಸ್ಪದ. ಕೆಲವು ಅಂಶಗಳು ಇದಕ್ಕೆ ವಿರುದ್ಧವಾದ ಸಂಗತಿಗಳನ್ನು ಪುಷ್ಟೀಕರಿಸುತ್ತವೆ. ಇದರಿಂದ ಆರ್ಯ– ದ್ರಾವಿಡ ಪ್ರತ್ಯೇಕ ಮನೋಭಾವನೆಯೇ ಅಶಾಸ್ತ್ರೀಯವಾಗುವುದು. ಆರ್ಯರು ಅನಾದಿಕಾಲದಿಂದಲೂ ಭಾರತನಿವಾಸಿಗಳು. ಮೊಹೆಂಜೇದಾರೋವಿನ ಸೈಂಧವಸಂಸ್ಕೃತಿಯು ವೈದಿಕ ಸಂಸ್ಕೃತಿಯ ಅವಶೇಷ. ದ್ರಾವಿಡ–ಆರ್ಯರ ಭೇದವನ್ನು ಹೇಳುವ Anthropology ಮೊದಲಾದ ಶಾಸ್ತ್ರಗಳನ್ನು ಈ ದೃಷ್ಟಿಯಿಂದ ಪುನರ್ವಿಮರ್ಶಿಸಬೇಕಾಗುವುದು. ಅಲ್ಲದೆ ಭಕ್ತಿಯ ಕುರುಹು ವೇದಗಳಲ್ಲೇ ಕಾಣುವುವು.

೩ ವೇದ – ಪುರಾಣಗಳಲ್ಲಿ ಭಕ್ತಿ

ಈ ವಿಷಯಲ್ಲಿ ಇತಿಹಾಸ ಸಂಶೋಧಕರಾದ ಶ್ರೀ ಆರ್. ಎಸ್. ಪಂಚಮುಖಿಯವರ ವಾಕ್ಯಗಳನ್ನು ಅವರ 'ಹರಿದಾಸ ಸಾಹಿತ್ಯ' ಗ್ರಂಥದಿಂದ ಉದ್ಧರಿಸುವುದು ಸಮಯೋಚಿತವಾಗಿದೆ: – ವೇದಾರ್ಥವನ್ನು ಆಯಾಯಾ ಸಮಯಕಾರರು ತಮ್ಮ ಸಿದ್ಧಾಂತಗಳಿಗೆ ಸರಿಹೋಗುವಂತೆ ಮಾಡಲು ಯತ್ನಿಸುತ್ತಾರೆ. ಪ್ರಕೃತಕ್ಕೆ ಸಂಬಂಧಪಟ್ಟವರಲ್ಲಿ ಮೀಮಾಂಸಕರು ಮಂತ್ರಮಯವಿಗ್ರಹ ದೇವತಾವಿಗ್ರಹವೆಂದು ತಿಳಿಯುತ್ತಾರೆ. ಇವರಲ್ಲಿ

relationship between the God Panduranga Vithala of Pandharapur, the object of devotion of the Haridasas and the Dravidian worship of the Linga. At Pandharapur here is a temple dedicated to the Linga on the Banks of the Bhima river and many images of Vithala are shown either holding a Linga in one of his hands or with a Linga on the top of his Makuta. Perhaps owing to all these links between this Kannada religious sect and the old Dravidian religion and philosophy, the authors of this monograph have boldly stated that Bhakti is pre-Vedic with which statement the author of these lines fully agrees.

- PXLV- Introduction to Mystic Teachings of the Haridasas.

ಸೇಶ್ವರ ನಿರೀಶ್ವರರೆಂದು ಎರಡು ಪಕ್ಷಗಳುಂಟು. ಇವರು ದೇವತೆಗಳಿಗೆ ಕರಚರಣಾದಿ ಅಯವಯಗಳಿರಬೇಕೆಂದು ನಂಬುವುದಿಲ್ಲ. ಆದರೆ ಪೌರಾಣಿಕರು ಭಕ್ತಿಮಾರ್ಗ ಪ್ರಧಾನರಾಗಿದ್ದುದರಿಂದ ದೇವತೆಗಳಿಗೆ ವಿಗ್ರಹಗಳಿಲ್ಲದಿದ್ದರೆ ಭಕ್ತಿಯೇ ಶಕ್ಯವಿಲ್ಲವೆಂದೂ, ಸಂಹಿತೆಗಳಲ್ಲಿ ಕರಚರಣಾದ್ಯವಯವಗಳಿರುವಂತೆ ವರ್ಣನೆಗಳಿರುವುವೆಂದೂ ಪ್ರತಿಪಾದಿಸುತ್ತಾರೆ. ಇವರ ಮತವು ಎಲ್ಲ ವೈದಿಕ ಸಮಯಗಳಿಗೆ ಮಾನ್ಯವಾಗಿದೆ. ಇತಿಹಾಸ ಪುರಾಣಗಳು ಮಂತ್ರಾರ್ಥವನ್ನು ಸ್ಪಷ್ಟೀಕರಿಸುವುದರಿಂದ ಪೌರಾಣಿಕ ಮತವು ವೈದಿಕಮತವನ್ನು ರಕ್ಷಿಸುತ್ತದೆಂದು ತಿಳಿಯಬಹುದು. ಈಗ ಉಪಲಬ್ಧವಾಗಿರುವ ಪುರಾಣಗಳು ಕಾರಣಾಂತರಗಳಿಂದ ಇತ್ತೀಚಿನವೆಂದು ಅರ್ವಾಚೀನ ಸಂಶೋಧಕರ ಅಭಿಪ್ರಾಯವಿದ್ದರೂ ಅವು ಕಾಲಕ್ರಮದಿಂದ ಅಲ್ಲಲ್ಲಿ ರೂಪಾಂತರ ಹೊಂದಿದ ಹೊತ್ತಿಗೆಗಳೆಂದೂ ಅವೆಲ್ಲವುಗಳ ಮೂಲಗಳು ಬಹು ಪ್ರಾಚೀನವಾಗಿರಬೇಕೆಂದೂ ತಿಳಿಯಲು ಪ್ರಬಲಯುಕ್ತಿಗಳುಂಟು. ಅವುಗಳನ್ನು ಇಲ್ಲಿ ವಿಮರ್ಶಿಸುವುದು ಅಪ್ರಾಸಂಗಿಕವಾಗಿರುವುದು, ವೇದ ಮಂತ್ರಗಳಲ್ಲಿಯೂ ಇತಿಹಾಸ–ಪುರಾಣಗಳ ಉಲ್ಲೇಖವಿರುವುದೆಂಬುದು ಗಮನಾರ್ಹವಾದುದು.

"ಋಗ್ವೇದದ ಶ್ರದ್ಧಾಮಂತ್ರದಿಂದ ಶ್ರದ್ಧೆಯು ದೇವತೆಯೆಂದು ವರ್ಣಿಸಲ್ಪಟ್ಟಿದೆ. ಶ್ರದ್ಧಾ, ವಂದನ, ಅರ್ಚನ, ಭಜನ ಇವೇ ಮೊದಲಾದ ಶಬ್ದಗಳು ದೇವತೆಯ ಮೇಲಿದ್ದ ಭಕ್ತನ ಮನಃಪ್ರಾವಣ್ಯವನ್ನು ಸೂಚಿಸುತ್ತದೆ.

ಶ್ರದ್ಧಾಂ ದೇವಾ ಯಜಮಾನಾ ವಾಯುಗೋಪಾ ಉಪಾಸತೇ (ಋ೧೦–೫)
ಭಜೇ ರಥಸ್ಯ ಸ ನೃಪತಿಂ (ಋ. ೧೦–೬೦)
ನಮಸ್ತೇ ವಿಷ್ಣೋ ಸುಮತಿಂ ಭಜಾಮಹೇ (ಋ. ೧೦–೧೫೩)
ಶ್ರದ್ಧಸ್ಮೈಧತ್ತ ಸಜನಾಸ ಇಂದ್ರಃ (ಋ. ೨–೧೨)
ದೇವೋ ವಸಿಷ್ಠೋ ಅಮೃತಾ೯ ವವಂದೇ – (ಋ. ೧೦–೬೬)

ಇತ್ಯಾದಿ ವಾಕ್ಯಗಳು ವೇದಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಸಂಕ್ಷೇಪವಾಗಿ ಹೇಳಲ್ಪಟ್ಟ ಈ ಭಾವನೆಯು ಇತಿಹಾಸ ಪುರಾಣಗಳಲ್ಲಿ ವಿಸ್ತಾರವಾಗಿ ಸ್ಪಷ್ಟಮಾಡಲ್ಪಟ್ಟಿದೆ" ––(ಹರಿದಾಸ ಸಾಹಿತ್ಯ ಪು. ೧೦)

ಇದಲ್ಲದೆ "ಭಕ್ತಿರೇವೈನಂ ನಯತಿ ಭಕ್ತಿರೇವೈನಂ ದರ್ಶಯತಿ ಭಕ್ತಿವಶಃ ಪುರುಷೋ ಭಕ್ತಿರೇವ ಭೂಯಸೀ" ಎಂಬ ಮಾಠರ ಶ್ರುತಿವಾಕ್ಯವು ಭಕ್ತಿಯ ಅವಶ್ಯಕತೆಯನ್ನು ಹೇಳುವುದು. 'ನಾಯಮಾತ್ಮಾ.........' ಎಂಬ ಕಾಠಕಶ್ರುತಿಯಲ್ಲಿ ಭಕ್ತಿಯ ಫಲವಾದ ದೇವತಾಪ್ರಸಾದದ ವರ್ಣನೆ ಇದೆ. ಆದ್ದರಿಂದ ವೈದಿಕ ವಾಙ್ಮಯದಲ್ಲಿ ಭಕ್ತಿಗೆ ಅತ್ಯಂತ ಹೆಚ್ಚಿನ ಸ್ಥಾನವಿತ್ತು. ವೈದಿಕಮತ ಸಮನ್ವಯ ಪರವಾದ ಬ್ರಹ್ಮಸೂತ್ರದಲ್ಲೂ "ಓಂ

ಪರೇಣ ಚ ಶಬ್ದಸ್ಯ ತಾದ್ವಿಧ್ಯಂ ಭೂಯಸ್ತ್ವಾತ್ತ್ವನುಬಂಧಃ'' ಎಂಬ ಸೂತ್ರದಲ್ಲಿ ಭಕ್ತಿಯೇ ಮುಖ್ಯ ಸಾಧನೆಯೆಂಬ ನಿರೂಪಣೆ ಇದೆ. ಭಕ್ತಿಪಂಥಕ್ಕೂ ದ್ರಾವಿಡರ ಅಧಿದೇವತೆಯಾದ ಶಿವನಿಗೂ ವಿಶೇಷ ಸಂಬಂಧವಿದೆಯೆಂದು ಹೇಳುವುದೂ ಅಪರಾಮರ್ಶ ಮೂಲಕವೆಂದು ಹೇಳದೇ ವಿಧಿಯಿಲ್ಲ. ಏಕೆಂದರೆ ಭಕ್ತಿಯ ಭಾವನೆಯು ಚೆನ್ನಾಗಿ ಪರಿಪುಷ್ಟಿಗೊಂಡಿರುವುದು ಪುರಾಣಗಳಿಂದ. ಯದ್ಯಪಿ ಈ ಪುರಾಣಗಳಲ್ಲಿ ಶಿವ, ಬ್ರಹ್ಮ, ಶಕ್ತಿ ಮೊದಲಾದ ಇತರ ದೇವತೆಗಳ ಉತ್ತಮತ್ವವು ಹೇಳಲ್ಪಟ್ಟಿದ್ದರೂ, ವಿಷ್ಣು ಸರ್ವೋತ್ತಮತ್ವವೇ ಪುರಾಣವಾಙ್ಮಯದ ಹೃದ್ಗತವೆಂದು ಧಾರಾಳವಾಗಿ ಹೇಳಬಹುದು. ಪುರಾಣ ಸಲಕ್ಷಣದಲ್ಲಿ ಸೃಷ್ಟಿ ಪ್ರತಿಸೃಷ್ಟಿ ಇತ್ಯಾದಿಗಳು ಹೇಳಲ್ಪಟ್ಟಿದೆ. ಇದರಂತೆ ಪ್ರತಿ ಪುರಾಣದಲ್ಲೂ ಜಗತ್ಸೃಷ್ಟಿವಿಚಾರ ಉಕ್ತವಾಗಿದೆ. ಜಗತ್ಸೃಷ್ಟಿಕಥನದಲ್ಲಿ ವಿಷ್ಣು ಸರ್ವೋತ್ತಮತ್ವವು ಸಿದ್ಧಿಸುತ್ತದೆ. ಪ್ರತಿ ಪುರಾಣದಲ್ಲೂ ಹರಿಯ ದಶಾವತಾರ ವರ್ಣನೆಯೂ ಬರುತ್ತದೆ. ಆದ್ದರಿಂದ ಪುರಾಣಗಳು ವೈಷ್ಣವಮತಪರವಾದವು. ಇವುಗಳಿಂದ ಪೋಷಿತವಾದ ಭಕ್ತಿಯೂ ವಿಷ್ಣುದೇವತೆಗೆ ಹೊಂದಿಕೊಂಡೇ ಬೆಳೆದಿದೆಯೆಂದೂ ಹೇಳಬಹುದು.

ಇತಿಹಾಸ ಬೋಧಕರು ಭಕ್ತಿಯ ಬೆಳವಣಿಗೆಗೆ ಭಾಗವತ ಪುರಾಣವೇ ಮೂಲವೆಂದೂ, ಇದರಿಂದ ಭಾಗವತಪಂಥವೆಂಬುದು ಉದಯಿಸಿತೆಂದೂ ಭಗವದ್ಗೀತೆಯು ಈ ಭಾಗವತ ಪಂಥಕ್ಕೆ ಸೇರಿದ ಗ್ರಂಥವೆಂದೂ ಹೇಳುವರು. ಅವರು ಹೇಳುವುದರಲ್ಲಿ ತಥ್ಯಾಂಶವಿದೆ. ಪುರಾಣಗಳಲ್ಲೆಲ್ಲ ಭಾಗವತವು ಶ್ರೇಷ್ಠವೆನಿಸಿದೆ. ಭಾಗವತದಲ್ಲಿ ಭಕ್ತಿಯ ಬೆಳವಣಿಗೆ ಕಂಡಷ್ಟು ಇತರ ಪುರಾಣಗಳಲ್ಲಿ ಕಂಡಿಲ್ಲ. ಈ ಭಕ್ತಿಯಾದರೋ ವಿಷ್ಣ್ವೇಕ ನಿಷ್ಠವಾದದ್ದು. ಮಧ್ವಾಚಾರ್ಯರು ಭಾಗವತವನ್ನು 'ಭಕ್ತ್ಯಾ ಭಾಗವತಂ ಶಾಸ್ತ್ರಂ '' ಎಂಬ ವಾಕ್ಯದಲ್ಲಿ ಶಾಸ್ತ್ರವೆಂದೇ ಕರೆದಿರುತ್ತಾರೆ. ಇದಕ್ಕೆ ತಾತ್ಪರ್ಯವನ್ನೂ ರಚಿಸಿರುತ್ತಾರೆ. ಅವರ ಅನುಯಾಯಿಗಳಲ್ಲಿ ವಿಜಯಧ್ವಜತೀರ್ಥ, ಯದುಪತ್ಯಾಚಾರ್ಯ, ಸುಧೀಂದ್ರತೀರ್ಥ, ಸತ್ಯಧರ್ಮತೀರ್ಥ, ವ್ಯಾಸತತ್ತ್ವಜ್ಞತೀರ್ಥ, ವಿಷ್ಣುತೀರ್ಥರೇ ಮೊದಲಾದ ಮಹನೀಯರುಗಳು ಭಾಗವತಕ್ಕೆ ವ್ಯಾಖ್ಯಾನಮಾಡಿರುತ್ತಾರೆ. ಇದಲ್ಲದೆ ಶುದ್ಧಾದ್ವೈತಮತಪ್ರವರ್ತಕರಾದ ವಲ್ಲಭಾಚಾರ್ಯರು ಭಾಗವತವೂ ಒಂದು ಪ್ರಸ್ಥಾನವೆಂದು ಕರೆದು ಅದನ್ನು ಅತ್ಯಂತ ಪ್ರಮಾಣತ್ವೇನ ಸ್ವೀಕರಿಸಿ 'ಪುಷ್ಟಿ' ಮಾರ್ಗವೆಂಬ ಭಕ್ತಿಪಂಥಪ್ರವರ್ತಕರಾಗಿದ್ದಾರೆ. ವಿಷ್ಣುಭಕ್ತಿ ನಿರೂಪಣೆಯಲ್ಲಿ ಅಗ್ರಸ್ಥಾನೀಯವಾದ ಭಾಗವತ ಪುರಾಣವು ಭಕ್ತಿಯ ಬೆಳವಣಿಗೆಗೆ ಆಕರವಾಗಿದ್ದು ವಿವಿಧ ಭಕ್ತಿಪಂಥಗಳು ಹಾಗೂ ಹರಿಶರಣರಿಗೆ ಸ್ಫೂರ್ತಿದಾಯಕವಾಗಿದೆ. ಭಕ್ತಿ ಭಾಗವತದಲ್ಲಿ ಪುಷ್ಟವಾಗಿರುವಂತೆ ಇತರ ದೇವತಾಪರವಾದ ದೇವೀಭಾಗವತಾದಿಗಳಲ್ಲಿ ಪುಷ್ಟವಾಗಿಲ್ಲ. ಭಕ್ತಿ ಪ್ರವಾಹಕ್ಕೆ ವೈಷ್ಣವ ಭಕ್ತಿಯೇ ಆಕರವಾಗಿರಬೇಕೆಂಬುದು ಇದರಿಂದಲೂ ಸ್ಥಿರಪಡುವುದು.

ಕ್ರಿ. ಪೂ. ಆರನೆಯ ಶತಮಾನಗಳಲ್ಲಿದ್ದ ವ್ಯಾಕರಣಸೂತ್ರಕರ್ತೃ ಪಾಣಿನಿಯ ಕಾಲದಿಂದಲೂ. ಕ್ರಿ. ಪೂ. ಮೂರನೆಯ ಶತಮಾನಗಳಿಂದ ಬಂದ ಹಥಿಬಾಡ, ನಾನಾಘಾಟ, ಶಾಸನಗಳಲ್ಲಿಯೂ, ಮಥುರೆಯ ಜೈನಶಾಸನ, ಪೊಡಾಗಾಡ, ಬಂಗಾಲದ ಶಿಲಾಲೇಖನಗಳೂ ಕದಂಬ, ಗಂಗರಸ, ರಾಷ್ಟ್ರಕೂಟರ ಶಿಲಾಲಿಪಿಗಳು, ಮೊಗಾಸ್ತನೀಸನ ವರದಿ, ಚೀಣಾ ಯಾತ್ರಿಕರ ಪ್ರಯಾಣವರದಿ—ಇವುಗಳಿಂದ ಭಾರತದ ವಿವಿಧ ಪ್ರಾಂತಗಳಲ್ಲಿ ವಿಷ್ಣುಭಕ್ತಿಯು ಹೇಗೆ ಹರಿದುಬಂದಿತೆಂಬುದನ್ನು ಇತಿಹಾಸ ಶೋಧಕರಾದ ಶ್ರೀ. ಪಂಚಮುಖಿಯವರು ತಮ್ಮ "ಹರಿದಾಸ ಸಾಹಿತ್ಯ" ಗ್ರಂಥದಲ್ಲಿ ಚರ್ಚಿಸಿದ್ದಾರೆ. ಮತ್ತು "ಉತ್ಪನ್ನಾ ದ್ರಾವಿಡೇ ಸಾಹಂ ವೃದ್ಧಿಂ ಕರ್ನಾಟಕೇ ಗತಾ। ಕ್ವಚಿತ್ ಕ್ವಚಿತ್ ಮಹಾರಾಷ್ಟ್ರೇ ಗುರ್ಜರೇ ಜೀರ್ಣತಾಂ ಗತಾ॥ [ಪದ್ಮಪುರಾಣ ೧—೪೮] ಎಂಬ ಪುರಾಣವಚನದ ಪ್ರಕಾರ ಭಾಗವತದ ಭಕ್ತಿಯ ಮೂಲಸ್ವರೂಪವು ಮರೆಮಾಚಿ ಕೆಲಕಾಲಾನಂತರ ದ್ರವಿಡ ದೇಶದ ವೈಷ್ಣವಸಾಧುಸಂತರಲ್ಲಿ ಕ್ರಿ.ಶ. ಆರರಿಂದ ಹನ್ನೆರಡನೆಯ ಶತಮಾನಗಳಲ್ಲಿ ಮತ್ತೆ ಉದಯ ಹೊಂದಿತು; ಕರ್ಣಾಟಕದ ಹರಿದಾಸರಲ್ಲಿ ಬೆಳೆಯಿತು. ಆಗಲೇ ಗುರ್ಜರದೇಶದಲ್ಲಿ ವಲ್ಲಭಾಚಾರ್ಯರ ಪುಷ್ಟಿಮಾರ್ಗ ಮುಂತಾದರೂಪಗಳಲ್ಲಿ ವಿಕಾರಹೊಂದಿ ಮತ್ತೆ ಉತ್ತರ ಹಿಂದೂಸ್ತಾನದಲ್ಲಿ ಜೀರ್ಣವಾಗಿ ನಷ್ಟಬಲವಾಯಿತು." ಎಂಬಂಶವನ್ನು ಇತಿಹಾಸ ಪ್ರಮಾಣಗಳಿಂದ ಸ್ಪಷ್ಟಪಡಿಸಿರುವರು.

೪ ಭಕ್ತಿಯ ನಾನಾ ಭಾವಗಳು

ಹೀಗೆ ಹರಿಭಕ್ತಿ, ನಿರಂತರವಾಗಿ ಹರಿದುಬಂದು ಜನಜೀವನದಲ್ಲಿ ಒಂದಾಗಿದೆ. ಹರಿಭಕ್ತಿ ಮಾಡಿ ಸಂತರುಗಳೆಂದು ಪ್ರಸಿದ್ಧರಾದವರು ಎಲ್ಲ ದೇಶಗಳಲ್ಲೂ ಆಗಿಹೋಗಿದ್ದಾರೆ. ಅವರುಗಳಲ್ಲನೇಕರು ದೇವರನ್ನು 'ಪತಿ'ಯೆಂದೂ, ಮತ್ತೆ ಕೆಲವರು ಪುತ್ರನೆಂದೂ ಉಪಾಸನೆ ಮಾಡಿದ್ದಾರೆ. ಪುರಾಣಗಳಲ್ಲೂ ಗೋಪಿಕಾಸ್ತ್ರೀಯರು ವಸುದೇವ, ಅರ್ಜುನಾದಿಗಳು ಇವರುಗಳು ಮಾಡಿದ ಭಕ್ತಿಯಲ್ಲಿ ವೈಲಕ್ಷಣ್ಯವು ಕಂಡಿದೆ. ಇದರ ಪ್ರಭೇದಗಳನ್ನೂ, ಅವುಗಳ ಅರ್ಥವಿವರಣೆಯನ್ನೂ ಶ್ರೀ ಪಂಚಮುಖಿಯವರು ಯುಕ್ತಿ ಮತ್ತು ಶಾಸ್ತ್ರಸಮ್ಮತವಾಗಿ ಮಾಡಿರುವರು.

"ಜೀವ—ಪರಮಾತ್ಮರ ನಿತ್ಯಸಂಬಂಧವು ಭಕ್ತಿಯೆಂದು ಮೇಲೆ ಹೇಳಿದ್ದೇವೆ. ಅಂದರೆ ಜೀವನು ಅದರಿಂದ ಪರಮಾತ್ಮನ ನಿತ್ಯಚಿಂತನೆಯನ್ನು ಮಾಡಲು ಶಕ್ತನಾಗುವನು. ಶ್ರೀಹರಿಯ ನಿತ್ಯಸ್ಮರಣೆಗೆ ಭಕ್ತಿಯು ಅವಶ್ಯವೆಂದಾಯಿತು. ಭಕ್ತಿಯಲ್ಲಿ ಸ್ನೇಹ ಜ್ಞಾನೋಪಸರ್ಜಗಳಿಂದ ಭೇದಗಳನ್ನು ಮೊದಲೇ ಹೇಳಿದ್ದೇವೆ. ಭಕ್ತಿಯ ಗರ್ಭದಲ್ಲಿ ಸ್ನೇಹ ಜ್ಞಾನಗಳಲ್ಲದೆ ಬೇರೆ ಅಂಗಗಳೂ ಜೀವನ ಯೋಗ್ಯತೆಯ ಮೇರೆಗೆ ಪ್ರಯೋಜನವುಳ್ಳವಾಗಿ ಸೇರುವವೆಂಬುದನ್ನು ವಿವೇಕಿಗಳು ಲೋಕಾನುಭವದಿಂದ

ತಿಳಿಯಬಹುದು. ಲೋಕದಲ್ಲಿ ನಿತ್ಯಾನುಚಿಂತನೆಯು ಅನೇಕ ವಿಧದಿಂದ ಉಂಟಾಗುವುದು. 1. ಕಾಮನೆಯಿಂದ, 2. ಸ್ನೇಹ ಅಥವಾ ಮಹಾತ್ಮ್ಯ ಜ್ಞಾನಪೂರ್ವಕ ನಿರ್ವ್ಯಾಜಪ್ರೇಮದಿಂದ. 3. ಭಯದಿಂದ. 4. ದ್ವೇಷದಿಂದ ಮತ್ತು ಬಂಧುತ್ವ ಅಥವಾ ರಕ್ತಸಂಬಂಧ ನಿಮಿತ್ತವಾಗಿ. ಇವುಗಳಲ್ಲಿ ಸ್ನೇಹವೊಂದು ಮಾತ್ರ ಪರಿಶುದ್ಧಪ್ರಕಾರವು. ದ್ವೇಷ, ಭಯ, ಕಾಮಾದಿಗಳು ಭಕ್ತಿಗೆ ಸಹಕಾರಿಗಳಾದರೆ ಮಾತ್ರ ಅವು ತಮ್ಮ ವಿಷಯಗಳಿಂದ ಆ ವಸ್ತುಗಳ ನಿರಂತರ ಚಿಂತನೆಯನ್ನು ಹುಟ್ಟಿಸುವುವು. ದ್ವೇಷ ಭಯ ಕಾಮಾದಿಗಳು ರಜಸ್ತಮೋಗುಣಕಾರ್ಯಗಳು. ಭಕ್ತಿಯು (ಸ್ನೇಹವು) ಸತ್ತ್ವಗುಣಕಾರ್ಯವು. ಇವುಗಳ ಸಮ್ಮೇಳನವು ಒತ್ತಟ್ಟಿಗೆ ಆಗಲು ಶಕ್ಯವೆಂತು? ಶುದ್ಧ ರಜಸ್ತಮೋಗುಣಪ್ರಧಾನನಾದ ಜೀವನಲ್ಲಿ ಭಕ್ತಿಯ ಸುಳಿವು ಬರಲಾರದು. ಆದರೆ ಕೆಲವು ಕಡೆಗಳಲ್ಲಿ ಇಂಥಾ ಸಮ್ಮೇಳನವು ಕಂಡುಬರುತ್ತದೆ. ಆಗ ಕಾಮದ್ವೇಷಭಯಾದಿಗಳು ಭಕ್ತಿಗೆ ಸಹಕಾರಿಗಳೆಂದು ತಿಳಿಯಬೇಕು. ಈ ಕಾಮ, ದ್ವೇಷ, ಸ್ನೇಹಗಳು ಏಕತ್ರ ಸಮಾವೇಶವಾಗುವುದು ಲೋಕವಿಲಕ್ಷಣವೆನಿಸುವುದಿಲ್ಲವೆ? ಆದರೆ ಶ್ರೀಮದ್ಭಾಗವತ ೭ನೆಯ ಸ್ಕಂದದಲ್ಲಿ;

ಕಾಮಾತ್ಸ್ನೇಹಾದ್ಭಯಾದ್ವೇಷಾತ್ ಯಥಾ ಭಕ್ತ್ಯೇಶ್ವರೇ ಮನಃ।
ಆವೇಶ್ಯ ತದಘಾಂ ಹಿತ್ವಾ ಬಹವಸ್ತದ್ಗತಿಂ ಗತಾಃ ॥
ಗೋಪ್ಯಃ ಕಾಮಾದ್ಭಯಾತ್ಕಂಸೋ ದ್ವೇಷಾಚ್ಚೇದ್ಯಾದಯೋ ನೃಪಾಃ ।
ಸಂಬಂಧಾದ್ವೃಷ್ಣಯಸ್ನೇಹಾದ್ಯೂಯಂ ಭಕ್ತ್ಯಾ ವಯಂ ವಿಭೋ ॥
ಕತಮೋಽಪಿ ನ ವೇನಸ್ಯ ಪಂಚಾನಾಂ ಪೂರುಷಂ ಪ್ರತಿ ।
ತಸ್ಮಾತ್ಕೇನಾಪ್ಯುಪಾಯೇನ ಮನಃ ಕೃಷ್ಣೇ ನಿವೇಶಯೇತ್ ॥ (1. 30–33)

ಕಾಮೋಪರ್ಜನ ಭಕ್ತಿಯಿಂದ ಗೋಪಿಕಾಸ್ತ್ರೀಯರು, ದ್ವೇಷೋಪಸರ್ಜನ ಭಕ್ತಿಯಿಂದ ಶಿಶುಪಾಲ ಮೊದಲಾದ ರಾಜರು, ಬಂಧುತ್ವೋಪಸರ್ಜನ ಭಕ್ತಿಯಿಂದ ವೃಷ್ಣಿಕುಲದಲ್ಲಿ ಹುಟ್ಟಿದ ಯಾದವರು. ಸಮ ತುಲಿತ ಬಹುಮಾನಸ್ನೇಹದಿಂದ ಪಾಂಡವರು, ಸ್ನೆಹೋಪಸರ್ಜನ ಬಹುಮಾನ (ಮಹಾತ್ಮ್ಯಾಜ್ಞಾನ)ದಿಂದ ನಾರದಾದಿ ಋಷಿಗಳು ಪರಮಾತ್ಮನ ಪದವನ್ನು ಹೊಂದಿರುತ್ತಾರೆ. ವೇನರಾಜನಲ್ಲಿ ಈ ಐದು ಪ್ರಕಾರಗಳಲ್ಲಿ ಯಾವುದಾದರೊಂದಾದರೂ ಭಕ್ತಿಯು ಹುಟ್ಟಲ್ಲ. ಆದ್ದರಿಂದ ಯೋಗ್ಯತೆಗನುಸರಿಸಿ ಒಂದು ಪ್ರಕಾರವನ್ನವಲಂಬಿಸಿ ಭಕ್ತಿಯಿಂದ ಶ್ರೀ ಕೃಷ್ಣನಲ್ಲಿ ಮನಸ್ಸನ್ನು ನಿಲ್ಲಿಸಬೇಕು ಎಂದು ಹೇಳಿದೆ. ಸಾತ್ವಿಕಭಕ್ತಿಯು ದ್ವೇಷಾದಿಗಳಿದ್ದಾಗ ಪ್ರಕಟವಾಗುತ್ತಿದ್ದರೆ ಆ ದ್ವೇಷಾದಿಗಳು ಅನ್ಯಾವೇಶನಿಮಿತ್ತವೆಂದು ಜ್ಞಾನಿಗಳು ನಿರ್ಧರಿಸಿರುತ್ತಾರೆ. ಸಾತ್ವಿಕಜೀವನ ಸ್ವರೂಪವು ಹಠಾಖ್ಯಯೋಗ್ಯತೆಗನುಸರಿಸಿ ಭಕ್ತಿಯುಳ್ಳದ್ದಾಗಿದ್ದರೆ ಅದು ಕಡೆಯವರೆಗೂ ನಿಲ್ಲತಕ್ಕುದು. ನಡುವೆ ತೋರುವ ಕಾಮದ್ವೇಷಾದಿಗಳು ಆಗುಂತುಕವಾದ್ದರಿಂದ, ಅವು ಶಾಪಾದಿಗಳಿಂದ ಅನ್ಯಾವೇಶನಿಮಿತ್ತವೆಂದು ತಿಳಿಯಬೇಕು. ಅವು ಸತ್ವರಜಸ್ತ ಮೋಗುಣಕಾರ್ಯಗಳಾಗಿದ್ದರಿಂದ ಅವುಗಳ ಫಲವನ್ನು

ಆವಿಷ್ಟ ಅಸುರನು ಅನುಭವಿಸಬೇಕಾಗುತ್ತದೆ. ಶುದ್ಧ ಸತ್ವಗುಣಕಾರ್ಯವಾದ ಭಕ್ತಿಯ ಫಲವನ್ನು ಸಾತ್ವಿಕಜೀವನು ಹೊಂದುವನು, ವೇನರಾಜನಲ್ಲಿ ಭಕ್ತಿಯ ಗಂಧವೇ ಇರಲಿಲ್ಲ. ಕೇವಲ ವೈರವುಳ್ಳವನಾದ್ದರಿಂದ ಅದರ ಫಲವಾದ ಅಂಧಂತಮಸ್ಸು ಅವನಿಗೆ ಉಂಟಾಯಿತೆಂದು ಪುರಾಣದಲ್ಲಿ ಹೇಳಿದೆ. ಶಾಪಾದಿನಿಮಿತ್ತದಿಂದ ಭಕ್ತಿಯಲ್ಲಿ ಕಾಮದ್ವೇಷಾದಿಗಳ ಸಂಪರ್ಕವು ಕಂಡುಬರುತ್ತದೆ. ಇಲ್ಲದಿದ್ದರೆ ಪರಿಶುದ್ಧವಾದ ಭಕ್ತಿಯು ಕೇವಲ ಜ್ಞಾನಸ್ನೇಹಾಂಗಗಳಿಂದ ಕೂಡಿರುತ್ತದೆಂದೇ ತಿಳಿಯಬೇಕು. ಆದರೆ ಗುಣಕಾರ್ಯವಾದ ಈ ಸಮ್ಮಿಶ್ರ ಸಂಸಾರದಲ್ಲಿ ಸಿಕ್ಕಿ ಸಾತ್ವಿಕಜೀವರು ಮೇಲೆ ಹೇಳಿದ ಐದು ಪ್ರಕಾರಗಳಲ್ಲಿ ಒಂದನ್ನು ಅವಲಂಬಿಸಿ ಭಕ್ತಿಯನ್ನು ಪಡೆಯುತ್ತಾರೆಂದು ಹೇಳಬಹುದು;''

ಆದರೆ ಕಾಮಾದಿಗಳು ಭಕ್ತಿಯನ್ನು ಹುಟ್ಟಿಸುವುದರಲ್ಲಿ ತಮ್ಮ ಇತಿಕರ್ತವ್ಯತೆಯನ್ನು ಕಂಡುಕೊಂಡು ಮುಗಿದುಹೋಗುತ್ತವೆ. ಆಗ ಭಕ್ತನಿಗೆ ಸದೃಢವಾದ ಭಕ್ತಿಯೇ ನೆಲೆಗೊಳ್ಳುತ್ತದೆ. ಶಿಶುಪಾಲನ ದ್ವೇಷಕ್ಕೂ ವೇನರಾಜನ ದ್ವೇಷಕ್ಕೂ ಇದೇ ವ್ಯತ್ಯಾಸ. ಶಿಶುಪಾಲನ ದ್ವೇಷ ಸ್ವರೂಪಭೂತವಾದುದಲ್ಲ. ಆ ದ್ವೇಷ ಭಕ್ತಿಗೆ ಹಾದಿಹಾಕಿ ಕೊಟ್ಟಿತು. ವೇನರಾಜನ ದ್ವೇಷ ಸ್ವರೂಪಭೂತವಾದುದರಿಂದ ಅದು ಅವನ ತಮಸ್ಸಿಗೆ ಕಾರಣವಾಯಿತು ಅದರಂತೆ ಕಾಮಾದಿಗಳು ಉಪಸರ್ಜನವೂ ಭಕ್ತಿಯು ಪ್ರಧಾನವೂ ಆದ್ದರಿಂದ ಗೋಪಿಕಾಸ್ತ್ರೀಯರೇ ಮೊದಲಾದವರ ಭಕ್ತಿಯು ಮುಕ್ತಿಸಾಧಕವೆಂದು ನಿರ್ಣಯವು.

ಹೀಗೆ ನಾನಾ ವಿಧವಾಗಿ ಭಗವಂತನಲ್ಲಿ ಭಕ್ತಿಮಾಡಿದ ಅಂಶ ಮೊದಲಿನಿಂದಲೂ ಭಾರತದ ಇತಿಹಾಸದಲ್ಲಿ ಕಂಡುಬಂದಿದೆ. ವೇದಾದಿಗಳಿಂದ ಉದಯವಾದ ಭಕ್ತಿಸಾಹಿತ್ಯಸೂತ್ರ ಮತ್ತು ಪುರಾಣಗಳ ಕಾಲದಲ್ಲಿ ಅತ್ಯಂತ ಬಲಗೊಂಡು ಸರ್ವತ್ರ ಜೀವಂತವಾಗಿತ್ತು. ಅದು ಅಲ್ಲಿಂದೀಚೆಗೂ ಅವಿಚ್ಛಿನ್ನವಾಗಿ ನಡೆದುಬಂದದ್ದು ಐತಿಹಾಸಿಕ ಅಂಶಗಳಿಂದ ವ್ಯಕ್ತವಾಗಿದೆ. ಇದು ಅನೇಕ ವೈಷ್ಣವ ಪಂಥಗಳಲ್ಲಿ ಅನೇಕ ರೀತಿಯಾಗಿ ರೂಪುಗೊಂಡಿದೆ.

XI ವೈಷ್ಣವ ಸಂತರು.

೧. ಬಂಗಾಲ

ಭಾರತದ ಎಲ್ಲ ವೈಷ್ಣವ ಸಂತರ ಉಕ್ತಿಗಳ ವೈಖರಿಯನ್ನು ವರ್ಣನೆಮಾಡುವುದು ಸಾಧ್ಯವಿಲ್ಲ. ಆದರೂ ಎಲ್ಲ ಸಂತರಲ್ಲೂ ತೋರಿಬರುವ ಹರಿದಾಸ್ಯ, ಹರಿಭಕ್ತಿಯ ಉನ್ಮಾದ, ಅನನ್ಯಶರಣತ್ವ ಇತ್ಯಾದಿ ಸಾಮಾನ್ಯ ಭಾಗಗಳು, ಒಬ್ಬೊಬ್ಬ ಸಂತರ ಒಂದೆರಡು ಮಾತುಗಳನ್ನು ನೋಡಿದರೂ ಹೊರಪಡುವುವು.

ಬಂಗಾಳದ ಶ್ರೀಕೃಷ್ಣಚೈತನ್ಯರು ಭಕ್ತಿಪಂಥದ ಪ್ರವರ್ತಕರು. ಅವರು ಅತ್ಯಂತ ಭಾವನಾಜೀವಿಗಳು. 'ಶ್ರೀ ಹರಿಯ ಪ್ರಸಾದವೇ ಪರಮಧ್ಯೇಯ; ಅದಿಲ್ಲದೆ ಜೀವನ ವ್ಯರ್ಥ; ಆ ಕೃಷ್ಣರೂಪಾನ್ವೇಷಣವಿಲ್ಲದೆ ದಿನಗಳೂ ಎಲ್ಲ ಅವಯವಗಳೂ—ಇಂದ್ರಿಯಗಳು ವ್ಯರ್ಥ; ನಾಚಿಕೆ ಇಲ್ಲದೆ ಇವನ್ನು ಕಲ್ಲು ಅಥವಾ ಕಟ್ಟಿಗೆಗಳಂತೆ ಹೊತ್ತಿದ್ದೇನೆ' ಎಂದು ಆತಂಕಪಡುತ್ತಾರೆ.[1] 'ಅತಿ ಮನೋಹರವಾದ ರೂಪನೋಡಿದೆ; ಇನ್ನು ನಾನು ಮನೆಯಲ್ಲಿ ನಿಲ್ಲಲಾರೆ. ಆದರೂ ಆ ದಿವ್ಯಮೂರ್ತಿ ಯಾರು, ಅವನ ಹೆಸರೇನೆಂಬುದು ತಿಳಿಯದು.[2] ಚಂಡೀದಾಸನ ಉಕ್ತಿಹೀಗಿದೆ – ನಾನು ಪಾಪಿಯೋ ಪುಣ್ಯವಂತನೋ ಎಂಬುದು ನಿನಗೆ ಚೆನ್ನಾಗಿ ತಿಳಿದಿದೆ. ನನ್ನ ಒಳ್ಳೆಯದು ಕೆಟ್ಟುದರ ಅರಿವು ನನಗಿಲ್ಲ ಪ್ರಭುವೇ; ಚಂಡೀದಾಸನು ಹೇಳುತ್ತಾನೆ; ಪಾಪ–ಪುಣ್ಯಗಳು ತಿಳಿಯದ ನನಗೆ ನಿನ್ನ ಚರಣಕಮಲವೇ ಸರ್ವಸ್ವ''[3] 'ಪ್ರಭುವಿನ ನಾಮವೇ ಇಷ್ಟು ಹರ್ಷಗೊಳಿಸಿರುವಾಗ, ಸ್ವಾಮಿಯ ಸ್ಪರ್ಶಭಾಗ್ಯದಿಂದ ನನಗೇನಾಗಬಹುದು!.[4] ಜದುನಾನಂದದಾಸನು ಹೀಗೆ ಹೇಳುತ್ತಾನೆ:– 'ನಿನ್ನ ನಾಮದಲ್ಲಿ ಅತ್ಯದ್ಭುತ ಶಕ್ತಿ ಇದೆ ಪ್ರಭುವೆ.. ಆದರೆ ನಾನು ದುರ್ದೈವಿ. ನನಗೆ ಅದರಲ್ಲಿ ಅನುರಾಗವಿಲ್ಲ.[5] ಬಂಗಾಳದ ಸಂತರು ರಾಧಾಕೃಷ್ಣ ಪ್ರೇಮವನ್ನು

---

1. ಶ್ರೀ ಕೃಷ್ಣರೂಪಾದಿ ನಿಷೇವಣಂ ವಿನಾ ವ್ಯರ್ಥಾನಿ ಮೇಹಾನ್ಯಖಿಲೇಂದ್ರಿಯಾಣಿ ಚ ।
   ಪಾಷಾಣಶುಷ್ಕೇಂಧನ ಭಾರಕಾಣ್ಯಹೋ ಬಿಭರ್ಮಿ ವಾ ತಾನಿ ಕಥಂ ಹತತ್ರಪಃ ॥
2. ಜೇದೇಖಿಲಾಮು ರೂಪ ತಾರ ಘರೇ ಥಾಕಾ ಹೋಲೋಭಾರ ।
   ನಾಮ ನಾಹಿ ಜಾನಿ ತಾರ ॥
3. ಸತೀ ವಾ ಅಸತೀ ತೋಮಾತೇ ಬಿದಿತ। ಭಾಲೋ ಮಂದೋ ನಾಹಿ ಜಾನಿ।
   ಕಹೇ ಚಂಡಿದಾಸ ಪಾಪ ಪುಣ್ಯ ಸಮ ಜುಗಲ ಚರಣ ಮಾನಿ ॥
4. ನಾಮ ಪರತಾಪೇ ಜಾರ ಐಟನ ಕರಲಾಗೇ।
   ಅಂಗೇರ ಪರಶೇ ಕಿಯಾ ಹಯೋ॥
5. ಸರ್ವ ಶಕ್ತ ನಾಮೇ ದಿಲ ಕರಿಯಾ ವಿಭಾಗ।
   ಆಮಾಯ ದುರ್ದೈವ ನಾಮೇ ನಹಿಲ ಅನುರಾಗ ॥

ಹೆಚ್ಚಾಗಿ ಬಣ್ಣಿಸಿ ಆನಂದಪಡುತ್ತಾರೆ. ಅವರಲ್ಲಿ ಪ್ರಖ್ಯಾತನಾದ ಗೋವಿಂದದಾಸನು ಶ್ರೀಕೃಷ್ಣ ವಿರಹದಿಂದಿರುವ ರಾಧೆಯ ವರ್ಣನೆ ಹೀಗೆ ಮಾಡುತ್ತಾನೆ:–[6] "ರಾಧೆಯು ಸುಗಂಧಜಲವನ್ನು ತಂದು ತನ್ನ ಪ್ರೀಯವರನ ಕಾಲುಗಳನ್ನು ತೊಳೆದಳು; ಅದನ್ನು ತನ್ನ ಮೃದುವಾದ ಕೇಶದಿಂದ ಒರಸಿದಳು. ಅವಯವದ ಧೂಳನ್ನು ತನ್ನ ವಸ್ತ್ರದಿಂದ ಒರೆಸಿ, ಪ್ರಿಯನನ್ನು ಆನಂದದಿಂದ ನೋಡಿ ಹೇಳಿದಳು– 'ವರ ಮಾಧವ, ನಾನು ನಿನ್ನ ಮೇಲೆ ಸಿಟ್ಟುಗೊಂಡಿದ್ದೆ, ನಾನೆಷ್ಟು ಅಲ್ಪಳು ಕೃಷ್ಣ; ಎಂತಹ ಮೂಢಳು, ನೀನು ನನ್ನನ್ನು ಪ್ರೀತಿಸುವೆಯೆಂದು ಎಲ್ಲರೂ ನುಡಿದರು. ನನಗೆ ಗರ್ವ ತುಂಬಿಬಂದಿತು. ನಿನ್ನ ಪ್ರೇಮವೇ ನನ್ನ ಅಲ್ಪ ಯೋಗ್ಯತೆಯನ್ನು ಹೆಚ್ಚಿಸಿತು. ನೀನು ಪ್ರೀತಿಸುವೊಡೆ ಯಾರೇನು ಅದನ್ನು ಕುಂದಿಸುವರು ಪ್ರಭು! ಎಲ್ಲ ಅಪರಾಧಗಳನ್ನು ಕ್ಷಮಿಸು, ' ಪ್ರಿಯ ಮಾಧವ. ಈ ಪ್ರಾಣಗಳು ನಿನ್ನ ಪಾದಕ್ಕೆ ಮೀಸಲು'– (ಗೋವಿಂದದಾಸನು ಹೇಳುತ್ತಾನೆ) ಸಾಶ್ರು ನೇತ್ರಗಳಿಂದ ಆ ಪ್ರಭು ಕೃಷ್ಣ ಈ ಮಾತುಗಳನ್ನು ಕೇಳಿದ."

೨ ರಾಜಾಸ್ಥಾನ

ಪತಿವ್ರತೆಯಾದ ಪತ್ನಿ ಪತಿಯ ಪ್ರಸಾದಕ್ಕೆ ಹಾತೊರೆಯುವಂತೆ ಪತಿಯನ್ನಗಲಿದ ವಿರಹವನ್ನು ಒಂದು ಗಳಿಗೆಯೂ ತಾಳಲಾರದಂತೆ, ಬಂಗಾಳದ ಸಂತರು ಭಗವಂತನ ಪ್ರಸಾದಕ್ಕೆ ಹಾತೊರೆಯುತ್ತಿದ್ದರು. ಅವರಿಗೆ ಮೋಕ್ಷ ಬೇಡ; ಗೋಪಿಯರನ್ನು ಆನಂದಪಡಿಸಿದಂತೆ ತನ್ನ ಮುದ್ದುಮೊಗ ದರ್ಶನದಿಂದ ಆ ಕೃಷ್ಣ ಆನಂದಗೊಳಿಸಿದರೆ ಸಾಕು. ಆತನೇ ಪತಿ; ಪರದೈವ. ಈ ಭಾವ ಭಕ್ತ ಮೀರಾಬಾಯಿಯಲ್ಲಿ ಪರಾಕಾಷ್ಠ ದೆಶೆಯನ್ನು ಮುಟ್ಟಿತು. ಯೌವನಪ್ರಾದುರ್ಭಾವದಿಂದಲೂ ಆಕೆಗೆ ಕೃಷ್ಣನೇ ಪತಿ; ಸಿಂಗರಿಸಿಕೊಂಡು, ಸುಗಂಧದ್ರವ್ಯ ಸಿದ್ಧಪಡಿಸಿ ಆ ಪ್ರಿಯ ಗಂಡನಿಗಾಗಿ ಕಾದಿರುವಳು; ಬರದಿರಲು ವಿರಹದಿಂದ ದುಃಖಪಡುವಳು, ಕೊರಗುವಳು;– " ಹೇ ಸಖಿಯೇ, ನಾನು

---

6. ಸುವಾಸಿತ ವಾರಿ ಝಾರಿ ಭರೀ ತೇ ಖಾನೇ। ಆನಲ ರಸವತಿ ರಾಈ ದುಃಖಾನಿ ಚರಣ । ಪಾಖಾಲಿಯಾ ಸುಂದರೀ ಆಪನ ಕೇಶೇ ತೋ ಮೋಟಾಈ। ಅಂಗ ಕಾ ಧೂಲಿ ವಸನ ಹಿ ಝಾಡಈ ಆನಿಮಿಖೇ। ಹೇರಇ ಬಯಾನ ತುಹುಂ ಮನೇ ಮಾನ ಕರನು । ಬರ ಮಾಧವ ಹಾಮ ಅತಿ ಅಲಪ ಪರಾಮು। ರಮಣೀ ಕಾ ಮಾಝೋ ಕಹಹಿ ಶ್ಯಾಮ ಸೋಹಾಗಿನಿ। ಗರಬೇ ಭರಲೋ ಮುಝುದೇ। ಹಾಮಾರಿ ಗರಬ ತುಹು ಅಗೇ ಬಾಡಾಇ ಲಿ ಬಹು ಟೂಟಾಯ ಬಕೇ। ಸಬ ಅಪರಾಧ ಕ್ಷೇಮಹ ಬರ ಮಾಧವ ತು ಆ ಪಾಯ ಸೌಪಿಲು ಪರಾಣ। ಗೋವಿಂದದಾಸ ಕಹ್ನಾ ಕಾನು ಭೇಲ ಹುಟ ಗದಗದ ಹೇರಯಿತೇ ರಾಯಿ ಬಯಾನ ॥

ಪ್ರೇಮೋನ್ಮತ್ತಳು, ಯಾರೂ ನನ್ನ ನೋವನ್ನು ತಿಳಿದಿಲ್ಲ; ಪ್ರಿಯನಿಗೆ ಮಂಚದ ಮೇಲೆ ಶಯ್ಯೆಯು ಸಿದ್ಧವಿದೆ. ಆತನನ್ನು ಹೇಗೆ ಹೊಂದಿಯೇನು! ನೊಂದವನೇ ನೋವನ್ನು ಬಲ್ಲ; ಪರೀಕ್ಷಕರಿಗಲ್ಲದೆ ರತ್ನದ ಬೆಲೆ ಇತರರಿಗೆ ಹೇಗೆ ತಿಳಿದೀತು! ವಿರಹವೇದನೆಯಿಂದ ವನದಿಂದ ವನಕ್ಕೆ ಅಲೆಯುತ್ತಿದ್ದೇನೆ; ಘನಶ್ಯಾಮನು ವೈದ್ಯನಾದರೆ ಮೀರಾಳ ವೇದನೆ ಪರಿಹಾರವಾದೀತು''[7] "ಭಾವ ಭಕ್ತಿಯೆಂಬ ಭೂಷಣಧರಿಸಿ ಶೀಲ ಸಂತೋಷದಿಂದ ಸಿಂಗರಿಸಿಕೊಂಡು ಪ್ರೇಮವಸ್ತ್ರವನ್ನುಟ್ಟು ಗಿರಿಧರನನ್ನು ಗಂಡನನ್ನಾಗಿ ಆಕೆ ಹೊಂದಿದ್ದಾಳೆ.[8] ಈ ಪ್ರಪಂಚದಲ್ಲಿ ತನ್ನವರೆಂಬುವರು ಯಾರೂ ಇಲ್ಲ; ರಘುವರನೊಬ್ಬನೇ ತನ್ನವನು.[9] ರಾಮನಾಮ ಹೊರತು ಬೇರೆ ಯಾವುದೂ ಆಕೆಗೆ ಬೇಡ.[10] ಆ ಪ್ರಿಯ ಕೃಷ್ಣನೇ ಪರಬ್ರಹ್ಮ.[11] ಅವನು ಕೇವಲ ಹತ್ತಿರದಲ್ಲಿದ್ದಾನೆ; ಅವನನ್ನೆಲ್ಲೂ ಹುಡಕಬೇಕಾಗಿಲ್ಲ.[12] ಅವನು ಇಂದಿನ ಪ್ರಭುವಲ್ಲ; ಬ್ರಹ್ಮಾಂಡ ಸೃಷ್ಟಿಯಿಂದ ಒಡೆಯ ಜೀವನ ಮರಣಗಳಲ್ಲೂ ಜೊತೆಯಲ್ಲಿರುವ; ಅವನನ್ನು ಬಿಡುವುದೆಂತು? ಹಿಂದಿನ ಜನ್ಮದ ಜೊತೆಗಾರ, ಯಾವಾಗ ಸೇರೋಣ. ಬಹುಕಾಲ ಅಗಲಿದ ಒಡೆಯ ಮನೆಯಲ್ಲಿ ಸಿಕ್ಕ.[13] ನಂದಕುಮಾರ, ನೇತ್ರಗಳಲ್ಲಿ ವಾಸಿಸಲಿ; ವಿಶಾಲನೇತ್ರದ ಆ ಮೋಹನಮೂರ್ತಿ ಬಹು ಮನೋಹರ; ಮಧುರ ಅಧರವನ್ನು ಮುರಳಿಯು ಅಲಂಕರಿಸಿದೆ. ಹೃದಯಕ್ಕೆ ವೈಜಯಂತಿ ಹೊಂದಿದೆ. ಆ ಕಟಿ ಸಣ್ಣ ಗಂಟೆಗಳಿಂದ ಶೋಭಿಸುತ್ತಿದೆ. ನೂಪುರದ ಶಬ್ದ ಮನೋಹರವಾಗಿದೆ. ಭಕ್ತವತ್ಸಲ; ಭಕ್ತರಿಗೆ ಸುಖಪ್ರದ ಗೋಪಾಲ ಮೀರೆಯ ಪ್ರಭು.[14] ಹಿಗೆ ಭಕ್ತ ಮೀರಾಬಾಯಿಯ ನುಡಿಗಳು ಅಮೃತ ಸ್ಯಂಧಿಯಾಗಿವೆ.

---

7. ಹೇರೀ! ಮೈತೋ ಪ್ರೇಮ ದಿವಾನೀ; ಮೇರೀ ದರದ ನ ಜಾಣ್ಯೆ ಕೋಯ। ಸೂಳೀ ಊಪರ ಸೇಜ ಪಿಯಾ ಕಾ ಮಿಲಣೋ ಕಿಸ ವಿಧ ಹೋಯ। ಘಾಯಲ ಕೀ ಗತ ಘಾಯಲ ಜಾಣ್ಯೆ ಕೀ ಜಿನ ಲಾಈ ಹೋಯ। ಜೌಹರೀ ಕೀ ಗತ ಜೌಹರೀ ಜಾಣೆ। ಕೀ ಜಿನ ಜೌಹರ ಹೋಯ । ದರದ ಕೀ ಮಾರೀ ಬನ ಬನ ಡೋಲೂಂ ಬೈದ ಮಿಲ್ಯೋ ನಹಿ ಕೋಯ। ಮೀರಾ ಕೀ ತಬ ಪೀರ ಮಿಟ್ಯೆ ಜಬಿ ಬೈದ ಸಾವಲಿಯೋ ಹೋಯ॥
8. ಭಾವ–ಭಗತಿ ಭೂಷಣ ಸಜೆ, ಸೀಲ–ಸಂತೋಷ ಸಿಂಗಾರ।
   ಓಢೀ ಚೂನಡ ಪ್ರೇಮ ಕೀ ಗಿರಿಧರ ಜೀ ಭರತಾರ।
9. ಯಾ ಸಂಸಾರ ಸಗೋ ನಹಿ ಕೋಈ ಸೋಚಾ ಸಗಾ ರಘುಬರಜೀ।
10. ಮೇರೇ ತೋ ಏಕ ರಾಮ ನಾಮ ದೂಸರೋ ನ ಕೋಈ;
11. ತುಮ ಪ್ರಭು ಪೂರಣ ಬ್ರಹ್ಮ ಹೋ।
12. ಮೇರೇ ಪಿಯ ಮೋ ಮಾಹಿ ಬಸತ ಹೈ; ಕಹೂ ನ ಆತೀ ಜಾತೀ ।
13. ಆಜ ಕಲ ಕೀ ನಹೀ ಮೈ ರಾಣಾಜೀ ಜಬ ಯಹ ಬ್ರಹ್ಮಾಂಡ ಟಾಯಾ।
    ಮ್ಹಾರೇ ಜನಮ ಮರಣ ಕಾ ಸಾಥೀ, ಥಾನೇ ನಹಿ ಬಿಸರೂಂ ದಿನ – ರಾತ್ರೀ।
    ಪೂರಬ ಜನಮ ಕಾ ಪ್ರೀತ ಪುರಾಣೀ, ಸೋಕಯೂಂ ಲೀಡೀ ಜಾಯ ।
    ಮೀರಾ ಕೇ ಪ್ರಭು ಕಬರೇ ಮಿಲೇಂಗೇ, ಪೂರಬ ಜನಮ ಕೇ ಸಾಥೀ
    ಜುಗನ ಜುಗನ ಸೇ ಬಿಚಡೀ ಮೀರಾ ಘರ ಮೇ ಲೀಹಾಂ ಆಯ ॥

3. ಹಿಂದೂಸ್ತಾನಿ

ಕಬೀರದಾಸರ ಕವಿತೆಗಳು ಬಹು ಅರ್ಥಗರ್ಭಿತ ಮತ್ತು ಹೃದಯಕ್ಕೆ ನೇರವಾಗಿ ನಾಟತಕ್ಕದ್ದು.[15] ಅರವತ್ನಾಲ್ಕು ದೀವಿಗೆಗಳನ್ನು ಹಚ್ಚಿ, ಪ್ರತಿದಿನ ಭಕ್ತಿ ಇಲ್ಲದ ಪೂಜೆಯನ್ನು ಗೋವಿಂದನಿಲ್ಲದ ಮಂದಿರದಲ್ಲೇಕೆ ಮಾಡುವಿರಿ? ಹೂವಿನಲ್ಲಿ ಪರಿಮಳದಂತೆ ಆ ಸ್ವಾಮಿ ನಿಮ್ಮಲ್ಲಿ ಅಂತರ್ಯಾಮಿಯಾಗಿದ್ದಾನೆ. ಕಸ್ತೂರಿಮೃಗ ತನ್ನ ಶರೀರದಲ್ಲಿರುವ ಇಂಪಿನ ಅರಿವಿಲ್ಲದೆ ಹುಲ್ಲಿಗಾಗಿ ಅಲೆಯುತ್ತದೆ. ರಾತ್ರಿ ಸ್ಥಳಬಿಟ್ಟ ಚಕವೀ ಮುಂಜಾಲೆ ಹಿಂತಿರುಗುತ್ತದೆ. ಆದರೆ ರಾಮನಿಂದ ವಿಮುಖನಾದ ಪಾಪಿ ಹಗಲು ರಾತ್ರಿ ಯಾವಾಗಲೂ ಹಿಂದಿರುಗಲಾರ. (ಸದ್ಗತಿ ಹೊಂದಲಾರ). ನಗುನಗುತ್ತಾ [ಉದಾಸೀನವಾಗಿ] ಕಾಂತನನ್ನು ಯಾವಳೂ ಪಡೆಯಲಿಲ್ಲ. ಸತಿಯು ವಿರಹದ:ಖ ತಪ್ತಳಾಗೀ ಪತಿಯನ್ನು ಹೊಂದುವಳು. (ಅಂತರಾಭಿಲಾಷೆಯಿಲ್ಲದ) ನಗುನಗುತ್ತಾ ಹರಿಯನ್ನು ಪಡೆಯಲೆಳಸಿದೊಡೆ ಅವಳಿಗಿಂತ ಪತಿಪರಿತ್ಯಾಗಿ ಯಾರೂ ಇಲ್ಲ, ಅಂದರೆ ದೇವರ ಹುಚ್ಚುಹಿಡಿದು ಕಾಮಕ್ರೋಧಗಳನ್ನು ಜಯಿಸಿ ಕಷ್ಟಪಟ್ಟು ಹರಿಯನ್ನು ಒಲಿಸಿಕೊಳ್ಳುವುದೇ ನಿಜವಾದ ಹರಿಪ್ರಸಾದ ಪ್ರಾಪ್ತಿ. ಅಂತಹ ಹರಿರಸ ಕುಡಿದ ಸಂತರ ಮದವು ಎಂದಿಗೂ ಇಳಿಯಲಾರದು. ಮೈಮೇಲೆ ಪ್ರಜ್ಞೆಯಿಲ್ಲದೆ ಅವರು ಅಮಲಿನಿಂದ ಸುತ್ತುತ್ತಿರುತ್ತಾರೆ.''

ಸೂರದಾಸರ ದಶಮಸ್ಕಂದ ಭಾಗವತದ ಹಿಂದೀಪದಗಳು ಅತಿಪ್ರಸಿದ್ಧವಾದುದು. ತಮ್ಮ ನೀಚತ್ವವನ್ನು ಹೇಳಿಕೊಂಡು ಪರಮಾತ್ಮನಲ್ಲಿ ಭಕ್ತಿಮಾಡೆಂದು ಅವರು

---

14. ಬಸೋ ಮೇರೇ ನೈನ ಮೇಂ ನಂದಲಾಲ।
ಮೋಹೀನೀ ಮೂರುತ ಸಾವೇರೀ ಸೂರತ ನೈನಾ ಬನೇವಿಲಾಸ ।
ಮಧುರ ಅಧರ ಪೈ ಮುರಲಾ ರಾಣತ ಉರ ವೈಜಂತೀ ಮಾಲ।
ಟುದ್ರ ಘಂಟಿಲಾ ಕಟಿತಟ ಸೋಭಿತ ನೂಪುರ ಸಬ್ದ ರಸಾಲ।
ಮೀರಾ ಪ್ರಭು ಸಂತನ ಸುಖದಾಈ ಭಗತ –ಬಟಲ ಗೋಪಾಲ। ।

15. ಚೌಸಠಿ ದೀಪಾ ಜೋಇ ಕರಿ ಚೌಹದ ಚಂದಾ ಮಾಹೀ।
ತಹಿ ಘಾರ ಕಿಸಕೌ ಚಾನಿಣೌ ಜಿಹಿ ಘಾರ ಗೋವಿಂದ ನಾಹಿ।
ಸೋ ಸಾಈ ತನ ಮೈ ಬಸೈ, ಜ್ಯೂಮುಹುಪನ ಮೈಬಾಸ।
ಕಸತೂರೀ ಕೈಮಿರಗಜ್ಯೂಂ ಫಿರಿ ಸೂಂದ್ಯೆ ಘಾಸ।
ಚಕವೀ ಬಿಛುಟೀ ರೈಣಕೀ ಆಯೀ ಮಿಲಾ ಪರಭಾತಿ ।
ಜೇ ಜನ ಬಿಛುಟೇ ರಾಮ ಸೂಂ, ತೇ ಮಿಲೈ ನ ಗತಿ ।
ಹಸಿ ಹಸಿ ಕಾಂತ ನ ಪಾಯಿಯಾಂ ಜಿನಿಪಾಯಾ ತಿನಿರೋಈ।
ಜೋಹಾಸೇ ಹೀ ಹರಿ ಮಿಲೈ ನಹೀ ದುಹಾಗಿನಿ ಕೋಇ।
ಹರೀರಸ ಪೀಯಾ ಜಾಣಿಯೈ ಕಬಹುಂ ನ ಜಾಣಿ ಕುಮಾರಿ।
ಮೈಮತವೂಮತ ರಹೈಂ ನಾಹಿ ತನ ಕೀ ಸಾರೀ।

ಮನವನ್ನು ಕೇಳುತ್ತಾರೆ.[16] ಈಗಮುಳುಗುತ್ತಿರುವ ನನ್ನನ್ನು ನೀನು ಏಕೆ ಉದ್ಧರಿಸದಿರುವೆ ದೀನಬಂಧು; ಕರುಣಾಮಯ; ಜನರ ದುಃಖನಿವಾರಣ ಮಾಡು. ಅಭಿಮಾನವೆಂಬ (ರಾಗ) ಘಟ, ಮೋಹವೆಂಬ ಹನಿ, ಕಾಮವೆಂಬ ಸರಿತ್ತು ಅಪಾರವಾಗಿದೆ; ಮುಳುಗುತ್ತಿದ್ದೇನೆ; ತಾವು ನಾನರಿಯೆ. ಗುರುಗಳ ಉಪದೇಶವನ್ನು ಉದಾಸೀನ ಮಾಡಿದೆ. ಕ್ರೋಧ ಗರ್ಜಿಸುತ್ತಿದೆ; ಲೋಭ ಕೇಕೆಹಾಕುತ್ತಿದೆ. ಇದರಿಂದ ಉದ್ಧಾರ ತೋರುತ್ತಿಲ್ಲ; ಆಶೆಯೆಂಬ ಮಿಂಚು ಕ್ಷಣಕ್ಷಣವೂ ಮಿಂಚುತ್ತಿದೆ; ಅಹರ್ನಿಶಿಯೂ ಈ ದೇಹ ಕೆಡುತ್ತಿದೆ. ಈ ಕಲಿಮಲಜಲವು ಸಾವಿರಾರು ಪ್ರಕಾರದಿಂದ ಹರಿಯುತ್ತಿದೆ. ಪತಿತಪಾವನನೆಂಬ ಬಿರುದನ್ನು ಕಾಪಾಡಿಕೋ ಹೇ ಪ್ರಭು.

ಚಕ್ರವಾಕವೇ, ಪ್ರೇಮವಿಯೋಗವಿಲ್ಲದ ಚರಣಸರೋವರಕ್ಕೆ ನಡೆ; ಅಲ್ಲಿ ಯಾವಾಗಲೂ ರಾಮನಾಮ ವರ್ಷಗರೆಯುತ್ತಿರುವುದು; ಭಯ ರೋಗ ದುಃಖ ಅಲ್ಲಿಲ್ಲ. ಸನಕನೇ ಮೀನು, ಶಿವನೇ ಹಂಸ, ನಖವೆಂಬ ರವಿಪ್ರಕಾಶವಿದೆ. ಕಮಲ ಅರಳಿದೆ, ಒಂದು ನಿಮಿಷವೂ ಚಂದ್ರನ ಭಯವಿಲ್ಲ. ವೇದಗಳೇ ಸುಗಂಧಬೀರುತ್ತಿದೆ. ಯಾವ ಸ್ಥಳದಲ್ಲಿ ಮುಕ್ತಿಯೆಂಬ ಮುಕ್ತಾಫಲದ ರಸ ಕುಡಿಯಬಹುದೋ ಆ ಸ್ಥಳಬಿಟ್ಟು ಹೇ ದುರ್ಬುದ್ಧಿಯೆಂಬ ಪಕ್ಷಿಯೇ ಇಲ್ಲಿ ಇರುವೆಯೇಕೆ? ಅಲ್ಲಿ ಲಕ್ಷ್ಮೀಸಹಿತ ನಿತ್ಯ ಕ್ರೀಡೆ ನಡೆಯುತ್ತಿದೆ. ಈಗ ವಿಷಯರಸ, ಸಮುದ್ರದಂತಹ ಆಶೆ ಸರಿಯಲ್ಲ.''

ಸಂತ ತುಳಸೀದಾಸರ ಭಕ್ತಿಯ ನುಡಿಗಳು ಉತ್ತರ ಭಾರತದಲ್ಲಿ ನಾಣ್ಣುಡಿಯಂತೆ ಆಗಿವೆ. ಅವರ ರಾಮಾಯಣ ಅತಿ ಪ್ರಸಿದ್ಧವಾಗಿದೆ. 'ಜೀವನ ಪತ್ರಿಕೆ' ಎಂಬ ಗ್ರಂಥದಲ್ಲಿ ಅವರು ತಮ್ಮ ಜೀವನವನ್ನೇ ಭಗವಂತನಿಗೆ ಅರ್ಪಿಸಿದ್ದಾರೆ. ಅವರ ರಾಮಾಯಣದಲ್ಲಿ

---

16 ಅಬ ಮೋಹಿ ಭೀಜತ ಕ್ಯೋಂ ನ ಉಬಾರೋ?
ದೀನ ಬಂಧು ಕರುಣಾಮಯ ಸ್ವಾಮೀ ಜನಕೇ ದುಃಖ ನಿವಾರೋ।
ಮಮತಾ ಘಟ ಮೋಹ ಕೇ ಬೂಂದೇ ಸಲಿತಾ ಮೈನ ಅಪಾರೋ।
ಗರಜನಿ ಕ್ರೋಧ ಲೋಭ ಕೇ ನಾರೋ, ಸೂಜತ ಕಹಿ ನ ಉಧಾರೋ ।
ಬೂಡತ ಕೃತಹ್ನು ಥಾಹ ನಹಿ ಪಾವತ ಗುರುಜನ ಓಟ ಅಧಾರೋ।
ತೃಸನಾ ತಡಿತ ಚಮಕ ಛನ ಹೀ ಛನ, ಆಹ ನಿಸಿ ಯತ ತನ ಜಾರೋ।
ಯಹ ಸಬ ಜಲ ಕಲಿ ಮಲ ಹಿ ಗಹೇ ಹೈ ಬೋರತ ಸಹಸ ಪ್ರಕಾರೋ।
ಸೂರದಾಸ ಪತಿತನ ಕೋಂ ಸಂಗೀ ಬಿರದಹಿನಾಥ, ಸಭಾರೋ।
ಚಕಈ ರೀ, ಚಲಿ ಚರಣ ಸರೋವರ ಜಹ್ನಾ ನ ಪ್ರೇಮ ವಿಯೋಗ ।
ನಿಸಿ ದಿನ ಸಮ ರಾಮಕೀ ವರ್ಷಾ ಭಯ ರುಜ ದುಃಖ ನಹಿ ಸೋಗ ।
ಜಹ್ನಾ ಸನಕ ಸೇ ಮೀನ, ಹಂಸ ಶಿವ ನಖ ರವಿ ಪ್ರಭಾ ಪ್ರಕಾಸ ।
ಪ್ರಫುಲಿತ ಕಮಲ, ನಿಮಿಖ ನಹಿ ಸಸಿಡರ, ಗುಂಜತ ನಿಗಮಸುಬಾಸ ।
ಜೇಹಿ ಸರ ಸುಭಗ ಮುಗತಿ ಮುಗತಾ ಫಲ, ಸುಕೃತ ಅಮೃತ ರಸ ಪೀ ಜೈ !
ಸೋಸರ ಛಾಂಡೀ, ಕುಬುದ್ಧಿ ವಿಹಂಗಮ, ಇಹಾ್ನ ಕಹಾ್ನ ರಹಿ ಕೀಜೈ ?
ಲಛಮೀ ಸಹಿತ ಹೋತ ನಿತ ಕ್ರೀಡಾ ಸೋಭಿತ ಸೂರಜುದಾಸ ।
ಅಬ ನ ಸುಹಾತ ವಿಷಯರಸ ಛಿಲರ ವಾ ಸಮುದ್ರ ಕೀ ಆಸು ॥

ಸರ್ವಜ್ಞಶಿರೋಮಣಿಗಳಾದ ಹನುಮಂತ ದೇವರು ಶ್ರೀ ರಾಮಲಕ್ಷ್ಮಣರನ್ನು ಭೇಟಿಮಾಡಿದಾಗ ಶ್ರೀರಾಮರು ತಮ್ಮ ವೃತ್ತಾಂತವನ್ನು ಹೇಳಿ ನೀನಾರೆಂದು ಪ್ರಶ್ನಿಸಲು ಆಂಜನೇಯರು ಹೀಗೆ ಹೇಳುತ್ತಾರೆ: ಪ್ರಭುವೇ ನಾನು ನಿನ್ನನ್ನು ಯಾರೆಂದು ಕೇಳಿದ್ದು ನನಗೆ ಉಚಿತವೇ. ಆದರೆ, ನಾಥ! ತಾವು ಮನುಷ್ಯರಂತೆ ಏಕೆ ಪ್ರಶ್ನಿಸುತ್ತಿರುವಿರಿ. ತಮ್ಮ ಮಾಯೆಯಿಂದ ನಾನು ಮರೆತೆ. ಅಂತೆಯೇ ಪ್ರಭುವನ್ನು ಗುರಿತಿಸದೆ ಹೋದೆ. ನಾನು ಮೂರ್ಖ, ಮೋಹವಶೀ, ದುಷ್ಟಹೃದಯ ಮತ್ತು ಅಜ್ಞಾನೀ, ಪ್ರಭು, ಭಗವನ್, ಹೇ ಧೀನ ಬಂಧು, ನೀನೇ ನನಗೆ ವಿಸ್ಮರಣೆ ಕೊಟ್ಟೆ. ಹೇ ನಾಥ, ನನ್ನ ಅವಗುಣಗಳು ಬಹಳ ಇವೆ. ಆದರೂ ಸ್ವಾಮಿ ತನ್ನ ಸೇವಕರನ್ನು ಮರೆಯಬಹುದೇ? ಸ್ವಾಮಿ, ಜೀವ ನಿನ್ನ ಮಾಯೆಯಿಂದ ಬಂಧಿಸಲ್ಪಡುತ್ತಾನೆ. ನಿನ್ನ ದಯೆಯಿಂದಲೇ ಅವನು ಬಿಡುಗಡೆಯನ್ನೂ ಹೊಂದುತ್ತಾನೆ.[17] ತುಳಸೀದಾಸರು ತಮ್ಮ ನೈಚ್ಯವನ್ನು ಹೀಗೆ ಹೇಳಿಕೊಳ್ಳುತ್ತಾರೆ:– ಎಲೈ ಮನಸ್ಸೇ ನಿನಗೆಷ್ಟು ಮೌಢ್ಯ? ರಾಮಭಕ್ತಿಯೆಂಬ ದೇವಗಂಗೆಯನ್ನು ಬಿಟ್ಟು ಹಿಮಕಣಗಳಿಗೆ ಆಸೆ ಪಡುತ್ತೀ. ಎಲೈಚಾತಕ., ಧೂಮರಾಶಿಯನ್ನು ನೋಡಿ ಏಕೆ ಅತಿಯಾಗಿ ತೃಷಿತನಾಗುತ್ತೀಯೇ? ಅಲ್ಲಿ ಶೈತ್ಯವಿಲ್ಲ; ನೀರಿಲ್ಲ; ಅಲ್ಲದೆ ಅದರಿಂದ ಕಣ್ಣಿಗೆ ಹಾನಿ. ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ತನ್ನ ಆಹಾರವೆಂದು ತಿಳಿದು ಶ್ಯೇನ ಪಕ್ಷಿಯು ಅದರಮೇಲೆ ಬಿದ್ದು ಕನ್ನಡಿಯನ್ನು ನಾಶಮಾಡುವಂತೆ ಈ ಮನವು ಯಾವ ಕುಪಥಕ್ಕೆ ಹೋಗುತ್ತದೆಂಬುದು ನಿನಗೆ ತಿಳಿದೇ ಇದೆ. ನಾನೇನು ಹೇಳಲಿ? ಪ್ರಭು? ಈ ತುಳಸೀದಾಸನ ದುಸ್ಸಹ ದುಃಖವನ್ನು ನೋಡು. ಪತಿತಪಾವನನೆಂಬ ನಿನ್ನ ಬಿರುದನ್ನು ಕಾಪಾಡಿಕೋ.

೪ ಮಹಾರಾಷ್ಟ್ರ

ಮಹಾರಾಷ್ಟ್ರ ಸಂತರಲ್ಲಿಯೂ ಇದೇ ದಾಸ್ಯ, ಇದೇ ಭಕ್ತಿ, ಭಗವದ್ವಿರಹದಿಂದ ಇದೇ ದುಃಖ, ಭಗವದನುಗ್ರಹದಿಂದ ಇದೇ ಸುಖ ಕಾಣುತ್ತದೆ. ವಿಠಲ ಅಲ್ಲಿನ ರಾಷ್ಟ್ರದೈವ; ಅವರ ಮೋಹನಮೂರ್ತಿ. ಧ್ಯಾನೇಶ್ವರನ ಸಿದ್ಧಾಂತ ಭೇದಾಭೇದವಾದರೂ ಆತ ವಿಷ್ಣುಭಕ್ತ. ಕೃಷ್ಣನಿದ್ದೆಡ್ಡೆ ಜಯವೆಂದರ್ಥವನ್ನು ಅವನು ಹೇಳುವನು;– ಚಂದ್ರನಿದ್ದೆಡೆ ಬೆಳದಿಂಗಳಿನಂತೆ ಅಗ್ನಿ ಇದ್ದೆಡೆ ಔಷ್ಣ್ಯವಿದ್ಧಂತೆ ಕೃಷ್ಣಪ್ರಭುವಿದ್ದೆಡೆ ಜಯವಿರುತ್ತದೆ.[18] "ಸ್ವಾಮಿಯು ದುಷ್ಟರನ್ನು ನಿಗ್ರಹಿಸುವನು. ಪಾಪವನ್ನು ಕಳೆಯುವನು.

---

17. ಮೋರನ್ಯಾಡ ಮೈ ಪೂಛಾ ಸಾಈ ತುಮ ಪೂಛಹು ಕಸ ನರಕೀ ನಾಈಂ ।
ತವಮಾಯಾ ಬಸ ಫಿರಉ ಭುಲಾನಾ ತಾತೇಂ ಮೈ ನಹಿ ಪ್ರಭು ಪಹಿಚಾನಾ।
ಏಕಮಂದ ಮೈ ಮೋಹಬಸ ಕುಟಿಲ ಹೃದಯ ಅಗ್ಯಾನ।
ಪುನಿ ಪ್ರಭು ಮೋಹಿ ಬಿಸಾರೇಉ ದೀನಬಂಧು ಭಗವಾನ।
ಜದಪಿ ನಾಥ ಬಹು ಅವಗುನ ಮೋರೇ ಸೇವಕ ಪ್ರಭು ಹಿ ಜನಿ ಭೋರೇ।
ನಾಥ ಜೀವ ತವ ಮಾಯಾ ಮೋಹಾ ಸೋನಿಸ್ತರಇ ತುಮ್ಹಾರೇ ಹಿ ಛೋಹಾ ॥

18. Mysticism in Maharashtra. p. 138

ಭಕ್ತ ಪ್ರಹ್ಲಾದ ಆತನ ನಾಮಸ್ಮರಣೆ ಮಾಡಲು ಆತನ ಉದ್ಧಾರಕ್ಕೆ ಬಂದೊದಗಿದ. ಅವನ ನಾಮ, ಧ್ರುವ, ಅಜಾಮಿಳ, ಗಜೇಂದ್ರ, ವಾಲ್ಮೀಕಿಗಳನ್ನು ಉದ್ಧರಿಸಿತು. ಆ ನಾಮೋಚ್ಚಾರಣೆಗೆ ನಿಯತಕಾಲ, ನಿಯಮಗಳಿಲ್ಲ. ಭಗವದ್ಭಕ್ತರು ಆ ನಾಮಾಮೃತವನ್ನು ಪಾನಮಾಡುತ್ತಾರೆ.[19] "ಇಂದು ರಹಸ್ಯ ಗೊತ್ತಾಯಿತು. ಭಾಗವತ ಧರ್ಮವನ್ನು ಮಾಡೋಣ. ಮನಸ್ಸಿನಲ್ಲಿ ಅವಗುಣಗಳನ್ನು ತುಂಬಿಕೊಂಡು ತೀರ್ಥಯಾತ್ರೆ ಮಾಡಿ ಫಲವೇನು?"[20]

ಸಂತ ನಾಮದೇವ ದೇವರನ್ನು ಒಂದೇ ವರವನ್ನು ಪ್ರಾರ್ಥಿಸುತ್ತಾನೆ :– 'ಆತನ ದಿವ್ಯಾನುಭವ ನಮ್ಮ ಹೃದಯದಲ್ಲಿ ಆಗುತ್ತಿರಲಿ. ನಮ್ಮ ನಾಲಿಗೆ ಅವನ ಅಲೌಕಿಕ ನಾಮವನ್ನೇ ಸರ್ವದಾ ಉಚ್ಚರಿಸುತ್ತಿರಲಿ, ನಮ್ಮ ನೇತ್ರಗಳು ಅವನ ದರ್ಶನವನ್ನೇ ನಿತ್ಯ ಮಾಡುತ್ತಿರಲಿ. ಅವನ ಪಾದಗಳಿಗೆ ನಮ್ಮ ಶಿರಸ್ಸುಗಳು ಶರಣುಹೋಗುತ್ತಿರಲಿ; ನಮ್ಮ ಇಕ್ಕೆಡೆಗಳಲ್ಲಿ ನಮ್ಮ ಹಿಂದೆ ಮುಂದೆ ನಮ್ಮ ಜೀವನದ ಅತಿ ಸಮೀಪದಲ್ಲಿ ಆತ ಕಾಣಲಿ, ಇದು ಹೊರತು ದೇವರನ್ನು ಬೇರೆ ಕೇಳೋಣ ಬೇಡ.[21] ಭಗದ್ವಿಷಯ ಬಂದಾಗ ತುಕಾರಾಮನ ದೈನ್ಯ, ಭಗವಂತನ ಬಲವಿದೆ ಎಂದಾಗ ಅವನ ಅಹಂಕಾರ ಎರಡೂ ಅತಿ ವಿಲಕ್ಷಣ. 'ಜ್ಞಾನಿಗಳೇ, ನಾನೊಂದೂ ಅರಿಯೆ; ನಾನು ನುಡಿಯುವುದು ನನ್ನ ಮಾತಲ್ಲ. ನನ್ನೊಂದಿಗೆ ಸಿಟ್ಟಾಗಬೇಡಿ. ಪಾಂಡುರಂಗ ನನ್ನ ಮೂಲಕ ಮಾತಾಡುತ್ತಾನೆ. ನನ್ನ ನರದಲ್ಲಿಯೂ ಅವನು ತುಂಬಿದ್ದಾನೆ. ಅದಿಲ್ಲದೆ ವೇದಾತೀತನಾದ ಭಗವಂತನನ್ನು ನನ್ನಂತಹ ಅಜ್ಞಾನಿ ಹೇಗೆ ನುಡಿಯಬಲ್ಲೆ! [22] ಪಾಂಡುರಂಗ ನನ್ನಪ್ಪ; ರುಖುಮಾಯಿ ನಮ್ಮಮ್ಮ. ಆದ್ದರಿಂದ ನಾನು ಪರಮ ಪವಿತ್ರ. ಧೈರ್ಯದಲ್ಲೂ ಸಾಹಸದಲ್ಲೂ ನಾನು ಕುಂದಬೇಕಾಗಿಲ್ಲ. ಇನ್ನು ಮೇಲೆ ನಾನು ಅಭಾಗ್ಯನಲ್ಲ; ಪಾಪಿಯಲ್ಲ; ದೇವ ನನ್ನನ್ನು ರಕ್ಷಿಸುವನು.[23] ತಂದೆಯ ಆಸ್ತಿಯನ್ನು ಮಗ ಹೊಂದಲು ಯಾರು ಅಡ್ಡಿ ಮಾಡಬಲ್ಲರು, ನಾನು ಪ್ರಭುವಿನ ತೊಡೆಯಮೇಲೆ ಕುಳಿತು; ನಿಶ್ಚಿಂತ, ನಿರ್ಭೀತ ಮತ್ತು ನಿತ್ಯ ತೃಪ್ತನಾಗಿರುವೆ.[24] ನಿಜವಾದ ಸಹಾಯಕ ಹನುಮಾನ್. ಆರಾಧ್ಯದೇವ ಶ್ರೀ ರಘುನಾಥ, ಗುರು ಶ್ರೀ ರಾಮಸಮರ್ಥ. ಇನ್ನೇಕೆ ದಾಸ್ಯ? ದಾತಾ ರಘುವರನಿರುವಾಗ ಇತರರಲ್ಲೇಕೆ ಬೇಡಬೇಕು? ನಾವು ರಾಮದಾಸರು. ರಾಮನ ಚರಣಗಳಲ್ಲಿ ನಮಗೆ ಅಚಲ ವಿಶ್ವಾಸ. ಆಕಾಶ ಕೆಳಗೆ ಬಿದ್ದರೂ ಇತರರನ್ನು ಧ್ಯಾನಿಸೆವು.[25] ಇಂತಹದು ಅವನ ದೀಕ್ಷೆ.

19. ibid p. 168
20. ಆಹ್ಮಾ ಸಾಂಪಡಲೇ ವರ್ಮ । ಕರೂ ಭಾಗವತ ಧರ್ಮ ।
ಕಾಯ ಕರೂನೀ ತೀರ್ಥಾಟನೇ । ಮನ ಭರಲೇ ಅವಗುಣೇ ।
21. Abhanga. 141. 22. Abhanga. 118
23. Abhanga 1091 24. Abhanga 859
25. ಸಾಹ್ಯ ಆಹ್ಮಾಸೀ ಹನುಮಂತ ಆರಾಧ್ಯದೈವತ ಶ್ರೀ ರಘುನಾಥ।
ಗುರು ಶ್ರೀ ರಾಮ ಸಮರ್ಥ ಕಾಯಡಣೇ ದಾಸಾಸೀ॥

೫. ದ್ರಾವಿಡ

ದ್ರಾವಿಡ ಸಂತರದೂ ಅಗಾಧವಾದ ಸಾಹಿತ್ಯ. ಅಲ್ಲಿಯ ಅಳ್ವಾರರುಗಳ ಅಂದರೆ ಹರಿಭಕ್ತರ ಕೃತಿ ಸಮೂಹಕ್ಕೆ 'ನಾಲಾಯಿರ್ ಪ್ರಬಂಧಂ' ಎಂದು ಹೆಸರು. ಇದು ಸುಮಾರು 4000 ಗೀತೆಗಳಾಗುವುವು. ನಮ್ಮಾಳ್ವಾರ್ ಕುಲಶೇಕರ ಆಳ್ವಾರ್, ತಿರುಮಂಗೈ ಆಳ್ವಾರ್, ಆಂಡಾಳ್ ಮೊದಲಾದವರು ಇವುಗಳನ್ನು ರಚಿಸಿದವರು. ನಮ್ಮಾಳ್ವಾರ್ ಅಥವಾ ಶಠಗೋಪನು ಹೀಗೆ ಹೇಳುವನು:—ಪೂರ್ಣ, ಆನಂದ, ಜ್ಞಾನ, ಪ್ರೇಮದೇಹನಾದ ದಿವ್ಯಜ್ಯೋತಿಸ್ವರೂಪನಾದ, ರಕ್ಷಕನೂ ದೋಷದೂರನೂ ಆದ ಸ್ವಾಮಿಗೆ ಹೇ ಮನವೇ, ಶರಣುಹೋಗು.[26] 'ನೀವು ನಿಮ್ಮ ಯಾವ ಆರಾಧ್ಯದೇವತೆಯನ್ನು ಸ್ತೋತ್ರ ಮಾಡಿದರೂ ಅದು ನಿಜವಾಗಿ ನನ್ನ ದೇವರ ಸ್ತೋತ್ರವೇ' ಎಂದು ಅವನು ಹೇಳುವನು.[27] ಭಕ್ತಿಯಿಂದಲ್ಲದೆ ಆತನನ್ನು ಯಾರು ದರ್ಶನ ಮಾಡಬಲ್ಲರು? [28] ಎನ್ನುತ್ತಾಳೆ ಅಂಡಾಳ್. ರಾಜಸ್ಥಾನದ ಮೀರಾಬಾಯಿಯಂತೆ, ಮಹಾರಾಷ್ಟ್ರದ ಮುಕ್ತಾಬಾಯಿಯಂತೆ ಆಂಡಾಳಳ ಪ್ರೇಮ ಕೃಷ್ಣನಲ್ಲಿ ನಾಟಿತ್ತು. ಆಕೆ ಅವನ ಸಂಗಮಕ್ಕೆ ಹಾತೊರೆಯುತ್ತಿದ್ದಳು. ಆಕೆ ನಿತ್ಯ ಬೆಳಿಗ್ಗೆ ಎದ್ದು ಸ್ನಾನಾದಿಗಳನ್ನಾಚರಿಸಿ ಸಿಂಗರಿಸಿಕೊಳ್ಳುವಳು. ದೇವಾಲಯಕ್ಕೆ ಹೋಗಿ ನಾನಾರೀತಿ ಹಾಡುವಳು. ಹರಿಯನ್ನು ಎಬ್ಬಿಸುವಳು; ತನ್ನ ವಿರಹವನ್ನು ಹೇಳಿ ಕೊಳ್ಳುವಳು. ಹೀಗೆ ಆತ್ಮಾರ್ಪಣೆ ಮಾಡಿಕೊಂಡುದು 'ತಿರುಪ್ಪಾವೈ'ನಲ್ಲಿ ವರ್ಣಿತವಾಗಿದೆ. ಹರಿದಾಸ್ಯದಲ್ಲಿ ನಾನು ನನ್ನದೆಂಬ ಅಹಂಕಾರಕ್ಕೆ ಅವಕಾಶವಿಲ್ಲ. ಸ್ವಾರ್ಥ ಮತ್ತು ವಿಷಯಸುಖಗಳಿಗೆ ಸ್ಥಾನವಿಲ್ಲವೆಂದು ಅವಳು ಹೇಳುತ್ತಾಳೆ.[29] ಅನುಗ್ರಹ ಮಾಡಲಿಲ್ಲೆಂದು ಭಗವಂತನನ್ನು ನಿಷ್ಠುರಿ ಎಂದು ನಿಂದಾಸ್ತುತಿ ಮಾಡುತ್ತಾನೆ ನಮ್ಮಾಳ್ವಾರ್.[30] ಕೊನೆಗೆ ಆ ಸ್ವಾಮಿಯೇ ಧಾರಕ, ಪೋಷಕ ಮತ್ತು ಭೋಗ್ಯ ಎನ್ನುತ್ತಾನೆ[31] ತಮ್ಮ ಮತ್ತು

ದಾತಾ ಏಕ ರಘುನಂದನ ಬರಕಡ ಲಡೀ ದೇಈಲ ಕೋಣ।
ತೇ ಸೋಡೋನಿ ಆಮ್ಹೀಜನ । ಕೋಣಾ ಪ್ರತಿ ಮಾಂಗಾವೇ।
ಮ್ಹಣೋನಿ ಆಮ್ಹೀ ರಾಮದಾಸ ರಾಮ ಚರಣೀ ಅಮಚಾ ವಿಶ್ವಾಸ।
ಕೋಸಲೋ ನಿಪಡೇ ರೇ ಆಕಾಶ । ಆಣೀಕಾಚೇ ವಾಸನ ಪಾಹೂಂ ॥

26. 'ಉಯರ್ವರ ಉಯರ್ನಲಂ ಉದೈಯವನ್ ಎವನ್ ಅವನ್' ಇತ್ಯಾದಿ
—1—1—1 ತಿರುವೈಮೋಲಿ.

27. 'ನುಂ ಇನ್ ಕವಿಕೋಡು ನುನುಂ ಇಟ್ಟಾಟ್ಟೆವಂ ಎಟ್ಟನಾಲ್ ಚೆಮ್ಮಿನ್ ಚುಡರ್ ಮುಡಿ ಎಣ್ ತಿರು ಮಾಲುಕ್ಕು ಚ್ಚೇರುಮೇ' —III 9—6 ತಿರುವೈಮೋಲಿ

28. 'ಅನ್ಬಿಲನ್ರಿ ಆಳಿಯನ್ನೈ ಯಾವರ್ಕಾಣ ವಲ್ಲರೇ? —ತಿರುಪ್ಪಾವೈ.

29. 'ನೀರ್ ನು ಮದೆನ್ರಿ ವೈವರ್ ನುದಲ್ ಮೈಟ್ಟು —ತಿರುಪ್ಪಾವೈ 1—2—3

30. 'ಕಡಿಯಾನ್ ಕೊಡಿಯಾನ್' —V 3—5

31. VI-7-1 ತಿರುಪ್ಪಾವೈ

ಸ್ವಾಮಿಯ ಸಂಬಂಧದಂತೆಂಬ ಅನುಭವಕ್ಕೆ ಬರುತ್ತಾನೆ.[32]

ತ್ಯಾಗರಾಜರ ಭಕ್ತಿಪರವಾದ ಕೀರ್ತನೆಗಳೂ ಇಂದಿಗೂ ಜನಜೀವನದಲ್ಲಿ ಬೆರೆತುಹೋಗಿದೆ. ಇವರು ಉತ್ಕೃಷ್ಟ ರಾಮಭಕ್ತರು. ರಾಮದರ್ಶನ ಪಡೆದ ಭಾಗ್ಯಶಾಲಿಗಳು. ಸರ್ವದಾ ರಾಮಭಜನೆಯಲ್ಲಿ ನಿರತರಾದ ಯೋಗಿಗಳು. ಅಬ್ಬ, ರಾಮಭಕ್ತಿಯ ಮಹಿಮೆಯೆಂತು? ಎಂದವರು ಆಶ್ಚರ್ಯಪಡುವರು. ಈ ಭಕ್ತಿಯ ಸಲಿಗೆ ಇಲ್ಲದಿದ್ದಲ್ಲಿ ಶಬರಿ ಎಂಜಲನುಣಿಸಿಯಾಳೇ? ಚಂದ್ರಧರ ತಲೆತೂಗಿಯಾನೆ? ಅಬಲೆ ಸ್ವಯಂಪ್ರಭೆಗೆ ಅಚಲ ಪದವಿ ದೊರಕೀತೆ? ಈ ಭಕ್ತಿಯ ಒಲುಮೆಯಲ್ಲವೇ ಕಪಿಯನ್ನು ಸಮುದ್ರೋಲ್ಲಂಘನ ಮಾಡಿಸಿದುದು? ಯಶೋದೆ ಇದರ ಸಲುಗೆಯಿಂದಲ್ಲವೇ ಒರಳಿಗೆ ಹರಿಯನ್ನು ಕಟ್ಟಿದುದು! ಎಂದು ಭಕ್ತಿಯ ಹಿರಿಮೆಯನ್ನು ಹೇಳುತ್ತಾರೆ.[33] ಸತ್ಯಸಂಧನಾದ ರಾಮನೇ ದೈವ. ಬ್ರಹ್ಮನಿಂದಲೂ ಅವನು ವಂದ್ಯ. ಆ ಸೀತಾಪತಿಯೇ ಪರಬ್ರಹ್ಮ.[34] ರಾಮಭಕ್ತಿ, ರಾಮನಾಮಗಳೇ ಭಕ್ತನಿಗೆ ರಕ್ಷಣಾ ಸಾಧನ.[35] ಹೀಗೆ ಅವರ ಕೃತಿಗಳಲ್ಲೆಲ್ಲ ಭಕ್ತಿಯ ಪಾರವಶ್ಯತೆ ಕಾಣುವುದು.

32. 'ಕಡಲ್ ಜ್ಞಾನಂ ಸ್ಕೈದೆನುಂ ಯಾನೆ ಯನ್ನುಂ' -- V-6-1 ತಿರುಪ್ಪಾವೈ

33. ಅಪ್ಪ ರಾಮಭಕ್ತಿ ಎಂತೋ-ಗೊಪ್ಪ ರಾಮಾಯಪ್ಪ ॥ ಪ ॥

ತ್ರಿಪ್ಪಟಲನು ದೀರ್ಚಿಕಂಟಿ ರೆಪ್ಪವೆಲೆನು ಗಾಚುನಾಮಾಯಾ ॥ ಅ. ಪ. ॥

ಶಬರಿಯಂಗಲಿಚ್ಚುನಾ ಚಂದ್ರಧರಡು ಮೆಚ್ಚುನಾ ।

ಅಬಲ ಸ್ವಯಂಪ್ರಭುಕು ದೈವಮಚಲ ಪದವಿನಿಚ್ಚುನಾ ॥

ಕಪಿವರಾಬ್ಧಿ ದಾಟುನಾ ಕಲಟಿ ಕೋಟಿ ಗಟ್ಟುನಾ ।

ಅಪರಾಧಿ ತ್ಯಾಗರಾಜುಕಾನಂದಮು ಹೆಚ್ಚುನಾ ॥ ಚ ॥

34. ನಾಡೇ ರಾ ದೈವಮು ಮನಸಾ ॥ ಪ ॥

ಆಡಿನ ಮಾಟಲು ತಪ್ಪಲುಡನು ಚನು ಆಚಂದ್ರಾರ್ಕಮುಗ ಕೀರ್ತಿಗಲಿನ ॥ ಅ. ಪ. ॥

ಧಾತೃವಿನತುಡೈನ ತ್ಯಾಗರಾಜುನಿ ಚೇತ ಪೂಜಲಂದಿ ಬಾಗುಗ ಪ್ರ-

ದ್ಯೋತನಾನ್ವಯಮುನನು ಜನಿಚಿ ಸೀತಾಪತಿಯನಿ ಪೇರುಗಲಿಗಿನ ॥ 1 ॥

35. ಬಂಟುರೀತಿಕೋಲುವಿಯ್ಯವಯ್ಯ ರಾಮ ।

ತುಂಟ ವಿಂಟವಾನಿ ಮೆಂದಲೈನಮದಾದುಲಗೊಟ್ಟಿ ನೆಲಗೂಲ ಜೇಯುನಿಜ ।

ರೋಮಾಂಚಮುನು ಘನಕಂಚುಕಮು ರಾಮಭಕ್ತಡುನು ಮುದ್ರಬಿಳ್ಲಯು ।

ರಾಮನಾಮಮನು ವರಖಡ್ಗಮಿನಿ ರಾಜಿಲ್ಲುನಯ್ಯತ್ಯಾಗರಾಜುನಿಕೇ ॥

✣ ✣ ✣

ಕರ್ಣಾಟಕದ

ಹರಿದಾಸರು

ಭಾಗ ೨.

ಭಾಗ 2.

XII. ಕನ್ನಡ ಹರಿದಾಸರು

೧. ಹರಿದಾಸರ ವೈಶಿಷ್ಟ್ಯ

ಹರಿಶರಣರು ಎಲ್ಲ ದೇಶಗಳಲ್ಲೂ ಆಗಿಹೋಗಿದ್ದಾರೆ. ಹರಿದಾಸ್ಯ, ಹರಿಯ ಅನುಗ್ರಹಕ್ಕೋಸ್ಕರ ಸರ್ವತ್ಯಾಗ, ಹರಿಯ ಪ್ರಸಾದದಿಂದ ಸಂತೋಷ, ಅದು ಮಿತಿಮೀರಿದಲ್ಲಿ ಉದ್ರಿಕ್ತ ಸ್ಥಿತಿ, ಹರಿ ವಿರಹದಿಂದ ಬಳಲಿಕೆ, ಹರಿಭಕ್ತರಲ್ಲಿ ಭಕ್ತಿ, ಐಹಿಕ ಸುಖಗಳಲ್ಲಿ ಔದಾಶೀನ್ಯ, ಸರ್ವದಾ ಹರಿವಿಚಾರಚಿಂತನ, ಹರಿಯನ್ನು ಒಲಿಸಿಕೊಳ್ಳಲು ಪ್ರೇಮ. ಸಖ್ಯ, ಪೈತೃಕ ವಾತ್ಸಲ್ಯ, ಸೇವಕನ ದೈನ್ಯ, ಸಲಿಗೆಯ ಹುಸಿಮುನಿಸು ಇತ್ಯಾದಿ ಧರ್ಮಗಳು ಎಲ್ಲ ಹರಿದಾಸರಲ್ಲೂ ಕಾಣಬಹುದಾದ ಸಾಮಾನ್ಯ ಧರ್ಮಗಳು. ಈ ಬಗೆಯ ಭಕ್ತ್ಯನುಷ್ಠಾನ ಮಾಡಿದ ಅನೇಕ ಸಂತರು ಹರಿದರ್ಶನವೆಂಬ ಸಿದ್ಧಿಯನ್ನು ಪಡೆದಿರುತ್ತಾರೆ. ತ್ಯಾಗರಾಜ, ತುಳಸೀದಾಸ, ತುಕಾರಾಮ ಇವರುಗಳಿಗೆ ದೇವರ ಸಾಕ್ಷಾತ್ಕಾರವಾಗಿದೆ ಎಂದು ಅವರ ಚರಿತ್ರೆಗಳಿಂದ ಕಂಡುಬರುವುದು. ಶಾಸ್ತ್ರವನ್ನು ವಿಚಾರಮಾಡಿದರೆ ಈ ಬಗೆಯ ಭಗವತ್ಸಾಕ್ಷಾತ್ಕಾರವೇ ಜೀವನದ ಮುಖ್ಯ ಧ್ಯೇಯವಲ್ಲವೆಂಬುದು ವ್ಯಕ್ತಪಡುವುದು. ದೇವರು ರಾಮಕೃಷ್ಣಾದಿ ಅವತಾರಗಳನ್ನು ಮಾಡಿದಾಗ, ಕೆಲ ಸಾತ್ವಿಕ ಜೀವಿಗಳು ರಾಮಕೃಷ್ಣಾದಿ ರೂಪಗಳನ್ನು ನೋಡಿ ದೇವರೆಂಬ ಭಾವನೆ ಪಡೆದರೂ, ಆ ಭಾವನೆ ಬಹುಕಾಲ ನಿಲ್ಲದೆ ಮತ್ತೆ ಅವರಿಗೆ ಅಜ್ಞಾನಾವೃತವಾಯಿತು. ಹಾಗೇ ಭಕ್ತನಿಗೆ ಬಾಹ್ಯರೂಪ ದರ್ಶನವಾದರೆ ಭಗವನ್ನಿಷ್ಠತೆ ಏಕಪ್ರಕಾರವಾಗಿರುವುದಿಲ್ಲ. ಆದ್ದರಿಂದಲೇ ಹೃದಯಗುಹೆಯಲ್ಲಿ ತನ್ನ ಸ್ವರೂಪದ ಬಿಂಬದರ್ಶನ ಮಾಡಿದವನೇ ನಿಜವಾದ ಯೋಗಿ; ಸಿದ್ಧನೆಂದು ಶ್ರುತಿಗಳು ಸಾರುವವು.[1] ಹೃದಯ ಗುಹೆಯಲ್ಲಿನ ಪರಮಾತ್ಮನ ವರ್ಣನೆಯು ವಿಸ್ತಾರವಾಗಿ 'ನಾರಾಯಣೋಪನಿಷತ್ತಿ'ನಲ್ಲೂ ಇತರ ಉಪನಿಷತ್ತುಗಳಲ್ಲಿಯೂ ಬಂದಿದೆ.[2] ಈ ಭಗವಂತನ ದರ್ಶನವೇ ಜೀವನ ಮುಕ್ತಿಯು. ಇಂತಹ ಭಗವತ್ಸಾಕ್ಷಾತ್ಕಾರ ಪಡೆದವನಿಗೆ

ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ।

2. ಪದ್ಮಕೋಶಪ್ರತೀಕಾಶ ಹೃದಯಂಚಾಪ್ಯಧೋಮುಖಂ ।
ಅಧೋನಿಷ್ಟ್ಯಾವಿತಸ್ತ್ಯಾಂತೇ ನಾಭ್ಯಾಮುಪರಿ ತಿಷ್ಠತಿ ।
ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ ॥
ಅಂಗುಷ್ಠ ಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ ।
ಈಶಾನೋ ಭೂತಭವ್ಯಸ್ಯ ನ ತತೋ ವಿಜಿಗುಪ್ಸತೇ । ಏತದ್ವೈತತ್
— ಕಾಠಕ ೨-೪-೧೨

ಅಪರೋಕ್ಷಜ್ಞಾನಿ ಎಂದು ಹೆಸರು.[3] ಬ್ರಹ್ಮಸೂತ್ರಗಳಲ್ಲೂ ಬಾದರಾಯಣರು ಸ್ವಯೋಗ್ಯ ಬಿಂಬದರ್ಶನದಿಂದಲೇ ಮೋಕ್ಷ, ಅನ್ಯಥಾ ಇಲ್ಲವೆಂದು ಹೇಳಿದ್ದಾರೆ.[4] ಶ್ರೀಮದಾಚಾರ್ಯರು ಇದಕ್ಕೆ ನಾರಾಯಣತಂತ್ರ ಮತ್ತು ಅಧ್ಯಾತ್ಮ ಪ್ರಕಾಶದ ಪ್ರಮಾಣಗಳು ಸಮರ್ಥನೆಗಾಗಿ ಕೊಟ್ಟಿರುತ್ತಾರೆ.[5] ಆಚಾರ್ಯರ ಅನುಯಾಯಿಗಳೆಲ್ಲ ಆಚಾರ್ಯರ ಅಭಿಪ್ರಾಯವನ್ನೇ[6] ಎತ್ತಿ ಹಿಡಿದಿದ್ದಾರೆ.[7] ಇತರ ದಾರ್ಶನಿಕರು ಇಂತಹ ಹರಿಯ ಬಿಂಬದರ್ಶನದ ವಿಚಾರವನ್ನು ಹೇಳಿದಂತೆ ತೋರುವುದಿಲ್ಲ. ಶ್ರೀಮದಾಚಾರ್ಯರು ಮಾತ್ರ ಈ ವಿಷಯವನ್ನು ಸ್ಪಷ್ಟೀಕರಿಸಿರುವರು. ಅದರಂತೆಯೇ ಭಾರತದ ವೈಷ್ಣವ ಸಂತರಲ್ಲಿ ಇತರರ ಜೀವನದಲ್ಲಿ ಈ ರೀತಿಯಾದ ಬಿಂಬಾಪರೋಕ್ಷವಾದದ್ದರ ನಿದರ್ಶನವಿಲ್ಲ. ಇತರ ಸಂತರ ಉಕ್ತಿಗಳಲ್ಲೂ ಇದರ ಕುರುಹು ತೋರುವುದಿಲ್ಲ. ಕನ್ನಡ ಹರಿದಾಸರುಗಳ ಚರಿತ್ರೆಯಲ್ಲಿ ಹೀಗೆ ಬಿಂಬಾಪರೋಕ್ಷವಾದ ಸಂಗತಿ ಬಹಳ ಮುಖ್ಯವಾಗಿ ಕಂಡು ಬರುತ್ತದೆ. ಅವರ ಕೃತಿಗಳಲ್ಲೂ ಇದನ್ನು ವಿಶೇಷವಾಗಿ ಹೇಳಿದ್ದಾರೆ.

---

3 ಅಂಗುಷ್ಠ ಮಾತ್ರಃ ಪುರುಷೋಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ ....
ತಂ ವಿದ್ವಾ ಚ್ಛ ಕ್ರಮಮೃತಮಿತಿ |
ಪುರುಷ ಏವೇದಂ ವಿಶ್ವಂ ಕರ್ಮ ತಪೋ ಬ್ರಹ್ಮ ಪರಾಮೃತಂ |
ಏತದ್ಯೋ ವೇದ ನಿಹಿತಂ ಗುಹಾಯಾಂ ಸೋಽವಿದ್ಯಾಗ್ರಂಥಿಂ ವಿಕರತಿ ಹಿ ಸೋಮ್ಯ |
—ಮುಂಡಕ ೨-೧-೧೦

4 "ಓಂ ನ ಸಾಮಾನ್ಯಾದಪ್ಯುಪಲಬ್ಧೇಃ ಮೃತ್ಯುವನ್ನ ಲೋಕಾಪತ್ತಿಃ ಓಂ"
— ಬ್ರಹ್ಮಸೂತ್ರಂ ೩-೩-೩೩

5 ದರ್ಶನೇನಾತ್ಮಯೋಗ್ಯೇನ ಮುಕ್ತಿರ್ನಾನ್ಯೇನ ಕೇನಚಿತ್ – ಅಧ್ಯಾತ್ಮ.

6 ಯದಾ ಮುಕ್ತಿ ಪ್ರದಾನಾಯ ಸ್ವಯೋಗ್ಯಂ ಪಶ್ಯತಿ ಧ್ರುವಮ್ |
ರೂಪಂ ಹರೇಸ್ತದಾ ತಸ್ಯ ಸರ್ವಪಾಪಾನಿ ಭಸ್ಮಸಾತ್ ||
ಯಾಂತಿ ಪೂರ್ವಾಣ್ಯುತ್ತರಾಣಿ ನ ಶ್ಲೇಷಂ ಯಾಂತಿ ಕಾನಿಚಿತ್ |
ಮೋಕ್ಷಶ್ಚ ನಿಯತಸ್ತಸ್ಮಾತ್ಸ್ವಯೋಗ್ಯಹರಿದರ್ಶನೇ ||
— ತಾತ್ಪರ್ಯನಿರ್ಣಯ–೧–೧೩೦–೨

7 ಅತ್ರಾಧಿಕರಣೇ ಬಿಂಬಶಬ್ದಿತ ಯೋಗ್ಯಾತ್ಮರೂಪ ವಿಷಯಕಸ್ಯೈವ
ಮುಕ್ತಿಸಾಧನತ್ವಂ ಸಮರ್ಥ್ಯತೇ......| ಪ್ರತಿಜ್ಞಾಂಶಂ ವ್ಯಾಚಷ್ಟೇ ನೇತಿ |
ಅಪಿ ತು ಸ್ವಯೋಗ್ಯಾತ್ಮದರ್ಶನಾದೇವೇತಿ ಶೇಷಃ
— ಭಾಷ್ಯದೀಪಿಕಾ ।

“ಅಂತರಂಗದಲ್ಲಿ ಹರಿಯ ಕಾಣದವ ಹುಟ್ಟುಕುರುಡನೋ” ಮತ್ತು “ಎನ್ನ ಬಿಂಬಮೂರುತಿಯ ಪೂಜಿಪೆ ನಾನು” ಎಂಬ ಶ್ರೀ ಚಂದ್ರಿಕಾಚಾರ್ಯರ ಕೃತಿಗಳೂ, ಬಿಂಬೋಪಾಸನೆಯನ್ನು ಮಾಡುವ ವಿಧಾನವನ್ನು ತೋರಿಸುವ ಪುರಂದರದಾಸರ “ಕಣ್ಣಿನೊಳಗೆ ನೋಡೋ ಹರಿಯು ಒಳಗಣ್ಣಿನೊಳಗೆ ನೋಡೋ ಮುಜ್ಜಗದೊಡೆಯನಾ” ಹೃದಯ ಕಮಲವಿವರ ಮಾನಸಪೂಜೆಯನು ತಿಳಿಸುವ– “ಎಲ್ಲಿ ವಿರಾಟ ಪೂಜೆ ಹೃದಯಕಮಲ ಅಷ್ಟದಳ ಹೃಷೀಕೇಶ ನಾರಾಯಣಾ ಹಂಸಗಮನ” ಮತ್ತು “ಪಿಂಡಾಂಡದೊಳಗಿನ ಗಂಡನ ಕಾಣದೆ ಮುಂಡೇರಾದರು ಪಂಡಿತರೆಲ್ಲ” ಎಂಬ ಕೀರ್ತನೆಗಳೂ, ಅಪರೋಕ್ಷವಾದದ್ದರ ಪ್ರತಿಧ್ವನಿಯಾದ ವಿಜಯದಾಸರ–“ಅಂತರಂಗದ ಕದವು ತೆರೆಯಿತಿನ್ನು” ಎಂಬ ಪದವೂ, ಸ್ವಯಂ ಅನುಭವ ಪಡೆದು, ಬಿಂಬೋಪಾಸನ ಯೋಗವನ್ನು ಅತಿ ಸ್ಪಷ್ಟವಾಗಿ ಹೇಳುವ ಗೋಪಾಲದಾಸರ– “ಧ್ಯಾನವನೆ ಮಾಡು ಬಿಂಬಮೂರುತಿಯ ಆನಂದದಿಂದಲಿ ಕುಳಿತು ಅಂತರಂಗದಲಿ” ಎಂಬ ಕೃತಿಯೂ, ಪರಮಜ್ಞಾನಿಗಳಾದ ಜಗನ್ನಾಥದಾಸಾರ್ಯರ – “ಅಷ್ಟದಳ ಸದ್ಧೃದಯ ಕಮಲಾಧಿಷ್ಠಿತನು ತಾನಾಗಿ” (ಹರಿಕಥಾಮೃತಸಾರ 5–9.) ಮತ್ತು “ಬಿಂಬ ಜೀವಾಂಗುಷ್ಠ ಮಾತ್ರದ ಲಿಂಬುಗೊಂಡಿಹ ಸರ್ವರೊಳು” (ಹ.ಕ.ಸಾರ 9.9) ಎಂಬ ಪದ್ಯಗಳೂ, ಕನ್ನಡ ಹರಿದಾಸರುಗಳಿಗೆ ಬಿಂಬಾಪರೋಕ್ಷಾನುಭವ ಉಂಟೆಂಬುದನ್ನು ತಿಳಿಸುವುದಲ್ಲದೆ, ಇಂತಹ ಅನುಭವವನ್ನು ಅವರು ವಿವರವಾಗಿ ತಿಳಿಸಿರುವರೆಂಬುದನ್ನೂ ಸ್ಪಷ್ಟಪಡಿಸುವುದು. ಅವರು, ಮೇಲೆ ಉದಾಹರಿಸಿದ ಕೃತಿಗಳಲ್ಲಿನ ವಿವರಣೆಯನ್ನು ನೋಡಿದಲ್ಲಿ ಇಂತಹ ಅನುಭವ ಸಂಪೂರ್ಣವಾಗಿ ಸತ್ಯ ಮತ್ತು ಜೀವನದಲ್ಲಿ ಭಗವದನುಗ್ರಹದಿಂದ ಸಾಧಿಸಲೂ ಶಕ್ಯ ಎಂಬುದು ಸುವ್ಯಕ್ತವಾಗುವುದು. ಮತ್ತು ಸಾಧನ ಕ್ರಮದಲ್ಲಿ ಮುಂದುವರೆಯುತ್ತಿರುವ ಅಪರೋಕ್ಷಜ್ಞಾನಿಗಳಲ್ಲದೆ ಇತರ ಹರಿದಾಸರೂ ಈ ಪರಂಪರೆಯನ್ನು ಅನುಸರಿಸಿರುವುದೂ ನಿಜವಾದ ಸಂಗತಿ. ಇಂತಹ ಅಪೂರ್ವ ಸಿದ್ಧಿಯನ್ನು ಪಡೆದಿರುವುದೇ ಕನ್ನಡ ಹರಿದಾಸರ ವೈಶಿಷ್ಟ್ಯ. ಇಂತಹ ಸಿದ್ಧಿ ಪಡೆದವರೇ ಆತ್ಮಾರಾಮರು; ಅಂತರಾರಾಮರು; ಪರಮಸಿದ್ಧರು. ಆನಂದಸ್ವರೂಪನಾದ ಆ ಪರಮಾತ್ಮನನ್ನು ಹೃದಯಗುಹೆಗಳಲ್ಲಿ ದರ್ಶನ ಮಾಡುವುದರಿಂದ ಅಜ್ಞಾನ ಮೂಲಕವಾದ ರಾಗ, ದ್ವೇಷ, ದುಃಖಾದಿ ಸಕಲವೂ ದೂರಾಗುವುವು. ಲಿಂಗದೇಹಾದಿ ಬಂಧಗಳು ಸಡಿಲುವುವು. [8] ಸಂಚಿತಾಗಾಮಿ

---

8 ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ |
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ||

— ಮುಂಡಕ.

ಕರ್ಮಗಳು ನಾಶವಾಗುವುವು; ಇಂತಹ ದರ್ಶನ ಪಡೆದವನು ಅಪರೋಕ್ಷಜ್ಞಾನಿ ಎನಿಸುವನು. ಹರಿಯೇ ಸ್ವತಂತ್ರ ಕರ್ತ, ತಾನು ಅವನ ಸೇವಕನೆಂಬ ದೃಢ ಜ್ಞಾನದಿಂದ ಅಪರೋಕ್ಷ ಜ್ಞಾನಿಯು ದುರಭಿಮಾನವನ್ನು ಬಿಡುವನು.

ಆ ಭಗವದ್ಧ್ಯಾನದಲ್ಲಿ ತಲ್ಲೀನನಾಗಿ ಅಸಂಪ್ರಜ್ಞಾತ ಸಮಾಧಿಸ್ಥಿತಿಯನ್ನೈದುತ್ತಾನೆ. ಲೋಕ ಜೀವನಕ್ಕೆ ಅವನ ಜೀವನ ವಿರುದ್ಧವೆನಿಸಿ ದೇವರಿಗಾಗಿ ಅವನ ಜೀವನ ಮೀಸಲಾಗುತ್ತದೆ. ಕನ್ನಡ ಹರಿದಾಸರ ಜೀವನದಲ್ಲಿ ಇಂತಹ ಅನುಭವಗಳು ಹೇರಳವಾಗಿವೆ. ಹರಿದಾಸರುಗಳು ತಾವು ಅಪರೋಕ್ಷ ಜ್ಞಾನಿಗಳೆಂಬುದನ್ನು ತಮ್ಮ ನಡೆ, ನುಡಿಗಳಲ್ಲಿ ಸ್ಪಷ್ಟವಾಗಿ ತೋರಿಸಿದ್ದಾರೆ. ಅಂತೆಯೇ ಅವರು ಎಲ್ಲ ವೈಷ್ಣವ ಸಂತರಗಿಂತಲೂ ಹಿರಿಯ ಶ್ರೇಣಿಯಲ್ಲಿದ್ದಾರೆ.

೨. ಹರಿದಾಸರ ಪೂರ್ವ ಪರಂಪರೆ.

ಭಾಗವತ ಧರ್ಮಾವಲಂಬಿಗಳಾಗಿ ಸರ್ವದಾ ಹರಿಜ್ಞಾನಾಸಕ್ತರಾದ ಹರಿದಾಸರುಗಳು ಪುರಾಣದಲ್ಲಿ ವಿಶೇಷವಾಗಿ ವರ್ಣಿತರಾಗಿದ್ದಾರೆ. ಲಕ್ಷ್ಮೀ ದೇವಿಯವರು ಹರಿಭಕ್ತರಲ್ಲಿ ಮೊದಲಿಗರು. ಅವರು ನಾನಾರೂಪಗಳಿಂದ ಹರಿಸೇವೆ ಮಾಡುತ್ತಾರೆ [9]. ಅವರ ನಂತರದಲ್ಲಿ ಬ್ರಹ್ಮದೇವರು ಮತ್ತು ವಾಯುದೇವರು. ಇವರಲ್ಲದೆ ಪ್ರಹ್ಲಾದ, ನಾರದ, ವಿಭೀಷಣ, ಧ್ರುವ, ಅಂಬರೀಷ, ಶಿಬಿ, ಬಲಿ, ರುಕ್ಮಾಂಗದ, ಗಜೇಂದ್ರ, ಅಜಾಮಿಳಾದಿಗಳು ಹರಿದಾಸರುಗಳೆಂದು ಪ್ರಸಿದ್ಧರಾಗಿದ್ದಾರೆ.

ಅಸಂಶಯಃ ಸಂಶಯಚ್ಛಿತ್ ಗುರುರುಕ್ತೋ ಮನೀಷಿಭಿಃ ।
ತಸ್ಮಾದ್ಬ್ರಹ್ಮಾ ಗುರುರ್ಮುಖ್ಯಃ ಸರ್ವೇಷಾಮೇವ ಸರ್ವದಾ ॥

ಎಂಬ ಆಚಾರ್ಯರ ವಚನಾನುಸಾರ ಬ್ರಹ್ಮದೇವರೇ ಮುಖ್ಯ ಲೋಕ ಗುರುಗಳಾದ್ದರಿಂದ ಚೇತನವರ್ಗದಲ್ಲಿ ಅವರೇ ಮೊದಲ ಹರಿದಾಸರು.

ಅವರು ಭಗವಂತನನ್ನು ನಾನಾರೀತಿಯಾಗಿ ಕೊಂಡಾಡಿದ್ದಾರೆ. ಹರಿಯೇ ಜಗತ್ತಿನ

---

9 'ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ ।
ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳೋ ।
ಛತ್ರ ಚಾಮರ ವ್ಯಜನ ಪರ್ಯಂಕ ಪಾತ್ರರೂಪದಲಿ ನಿಂದು ।
ಚಿತ್ರ ಚರಿತ್ರನಾದ ಹರಿಯ ನಿತ್ಯಸೇವೆ ಮಾಡುತಿಹಳು, ।
— ಪುರಂದರದಾಸರು.

ಸೃಷ್ಟ್ಯಾದಿಗಳನ್ನು ಮಾಡುವವನೆಂದು ಹಾಡಿದ್ದಾರೆ.[10]. ಪಾಂಚರಾತ್ರಾಗಮದಲ್ಲಿನ ಅವರ ಸ್ತೋತ್ರ ಬಹಳ ಮಾರ್ಮಿಕವಾಗಿದೆ.[11] ಜನ್ಮ–ವೈಷ್ಣವರೆಂದು ಪ್ರಸಿದ್ಧರಾದ ಪ್ರಹ್ಲಾದರಾಜರ ಸ್ತೋತ್ರಗಳೆಲ್ಲ ಉತ್ಕೃಷ್ಟವಾದವೇ. ಅದರಲ್ಲಿ ಭಕ್ತನ ಕೊರಗು ಚೆನ್ನಾಗಿ ಚಿತ್ರವಾಗಿದೆ.[12]

ದೇವರ್ಷಿ ನಾರದರಿಗೆ ಭಾಗವತಧರ್ಮಪ್ರಚಾರಕರೆಂಬ ಬಿರುದಿದೆ. 'ನಾರಾಯಣನೆಂಬ ನಾಮದ ಬೀಜವ ನಾರದ ಬಿತ್ತಿದ ಧರೆಯೊಳಗೆ' ಎಂಬ ಉಕ್ತಿಯಂತೆ ಹರಿದಾಸ್ಯವನ್ನು ಹೇಳಿಕೊಟ್ಟವರೇ ನಾರದರು. ನಾರದರ ಪ್ರಾರ್ಥನೆಯನ್ನು ಲಾಲಿಸಿ ವೇದವ್ಯಾಸರು ಭಾಗವತವನ್ನು ರಚಿಸಿದರು. ನಾರದರೇ ತಮ್ಮ ಭಾಗವತ ವೃತ್ತಿಯನ್ನು ವೇದವ್ಯಾಸರ ಮುಂದೆ ಹೇಳಿಕೊಂಡಿದ್ದಾರೆ. [13] ಗಜೇಂದ್ರನೂ ಮೊಸಳೆ

---

10. ನತೋಽಸ್ಮ್ಯನಂತಾಯ ದುರಂತಶಕ್ತಯೇ ವಿಚಿತ್ರ ವೀರ್ಯಾಯ ಪವಿತ್ರ ಕರ್ಮಣೇ |
ವಿಶ್ವಸ್ಯ ಸರ್ಗಸ್ಥಿತಿ ಸಂಯಮಾನ್ ಗುಣೈಃ ಸ್ವಲೀಲಯಾ ಸಂದಧತೇಽ ವ್ಯಯಾತ್ಮನೇ ||
— ಭಾಗವತಮ್

11 ಕರುಣಾಪೂರ್ಣ ಹೃದಯ ಶಂಖಚಕ್ರಗದಾಧರ |
ಪೂರ್ಣಾಭ್ಯಾಂ ಲೋಚನಾಭ್ಯಂ ವಿಲೋಕಯ |
ಪಿತಾ ಮಾತಾ ಸುಹೃದ್ಬಂಧು ಭ್ರಾತಾ ಪುತ್ರಸ್ತ್ವಮೇವ ಮೇ |
ವಿದ್ಯಾ ಧನಂ ಚ ಕಾಮಶ್ಚ ನಾನ್ಯತ್ಕಿಂಚಿತ್ತ್ವಯಾ ವಿನಾ |
ಯತ್ರ ಕುತ್ರ ಸ್ಥಲೇ ವಾಸೋ ಯೋಷು ಕೇಷು ಭವೋಸ್ತು ಮೇ |
ತವ ದಾಸ್ಯೈಕಭಾವೇಸ್ಯಾತ್ಸದಾ ಸರ್ವತ್ರ ಮೇ ರತಿಃ |

12 ತ್ರಸ್ತೋಽಸ್ಮ್ಯಹಂ ಕೃಪಣ ವತ್ಸಲ ದುಸ್ಸಹೋಗ್ರ–
ಸಂಸಾರ ಚಕ್ರ ಕದನಾದ್ಗ್ರಸತಾಂ ಪ್ರಣೀತಃ |
ಬದ್ಧಃ ಸ್ವಕರ್ಮಭಿರುಶುತ್ತಮ ತೇಽಂ ಘ್ರಿಮೂಲಂ |
ಭೀತಾಪವರ್ಗಮರಣಂ ಸಮಿಯಾಂ ಕದಾ ನು ||
ಯಸ್ಮಾತ್ಪ್ರಿಯಾಪ್ರಿಯವಿಯೋಗ ಸಯೋಗ ಜನ್ಮ ಶೋಕಾಗ್ನಿನಾ
ಸಕಲ ಯೋಗಿಷು ದಹ್ಯಮಾನಃ |
ದುಃಖೌಷಧಂ ತದಪಿ ದುಃಖಮತದ್ಧಿಯಾಹಂ
ಭೂಮಂ ಭ್ರಮಾಮಿ ವದ ಮೇ ತವ ದಾಸ್ಯಯೋಗಮ್ |
— ಭಾಗವತಂ ೮,೪.

13 ಅಂತರ್ಬಹಿಶ್ಚ ಲೋಕಾನ್ ತ್ರೀನ್ ಪರ್ಯೇಮ್ಯ ಸ್ಕಂದಿತ ವ್ರತಃ |
ಅನುಗ್ರಹಾನ್ಮಹಾವಿಷ್ಣೋರವಿಘಾತಗತಿಃ ಕ್ವಚಿತ್ ||
ದೇವದತ್ತಮಿಮಾಂ ವೀಣಾಂ ಸ್ವರಬ್ರಹ್ಮ ವಿಭೂಷಿತಾಮ್ |
ಮೂರ್ಛಯಿತ್ವಾ ಹರಿಕಥಾಂ ಗಾಯಮಾನಶ್ಚರಾಮ್ಯಹಮ್ ||
ಯಮಾದಿಭಿರ್ಯೋಗಪಥೈಃ ಕಾಮಲೋಭಹತೋ ಮುಹುಃ |
ಮುಕುಂದಸೇವಯಾ ಯದ್ವತ್ತಥಾತ್ಮಾದ್ಧಾನಶಾಮ್ಯತಿ ||

ಬಂದು ಹಿಡಿದಾಗ ನಾನಾಪರಿಯಿಂದ ಭಗವಂತನನ್ನು ಪ್ರಾರ್ಥಿಸಿದ್ದಾನೆ.[14] ಕಾಮ ಭಕ್ತಿಯಿಂದ ಗೋಪಿಕಾಸ್ತ್ರೀಯರು ಕೃಷ್ಣನನ್ನು ಒಲಿಸಿಕೊಂಡರು. ಕೃಷ್ಣನನ್ನು ಕಾಣದಾದಾಗ ವಿರಹದಿಂದ ಬಳಲಿ ಅವರುಗಳು ಮಾಡಿದ ಪ್ರಲಾಪ ಅತಿ ಪ್ರಸಿದ್ಧವಾಗಿದೆ[15] ಹೀಗೆ ಭಾಗವತರುಗಳ ಸಂಖ್ಯೆ ಅಪರಿಮಿತವಾಗಿದೆ.

ಅವರು ಮಾಡಿದ ಭಗವಸ್ತೋತ್ರರೂಪ ಗ್ರಂಥಗಳೇ ಭಾಗವತಾದಿ ಪುರಾಣಗಳು. ಈ ಭಾಗವತೋತ್ತಮರೆಲ್ಲ ಪರಮಾತ್ಮನನ್ನು ಗಾಯನ ಕೀರ್ತನ ನರ್ತನಾದಿಗಳಿಂದ ಭಜನಮಾಡುತ್ತಿದ್ದರು. ಹೀಗೆ ಭಜನಮಾಡುವವರೇ ಯೋಗಿಗಳೆಂದು ಭಗವಂತನು ಗೀತೆಯಲ್ಲಿ ವರ್ಣಿಸಿದ್ದಾನೆ.[16] ಭಾಗವತಶ್ರೇಷ್ಠರು ಕೂಡಿ ಹರಿಕೀರ್ತನೆ ಮಾಡುತ್ತಿದ್ದರೆಂದು ಪದ್ಮಪುರಾಣದಲ್ಲಿ ವರ್ಣಿಸಿದ್ದಾರೆ.[17]

೩. ಶ್ರೀಮನ್ಮಧ್ವಾಚಾರ್ಯರು.

ವಾಯ್ವಂಶಸಂಭೂತರಾದ ಶ್ರೀಮಧ್ವಾಚಾರ್ಯರು ಹರಿದಾಸ ಶ್ರೇಷ್ಠರು. ಅವರು ಮಾಡಿರುವ ಸ್ತೋತ್ರದ ಭಾವ ಬಹಳ ಗಂಭೀರವಾದದ್ದು. ಹನುಮ, ಭೀಮ, ಮತ್ತು

---

14 ಓಂ ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಂ |
ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ||
ನ ಯಸ್ಯ ದೇವಾ ಋಷಯಃ ಪುನರ್ವಿದುಃ ಜಂತುಃ ಪುನಃ
ಕೋಽರ್ಹತಿ ಗಂತುಮೀರಿತುಮ್ ||
ಯಥಾ ನಟಸ್ಯಾಕೃತಿಭಿಃ ವಿಚೇಷ್ಟಿತೋ ದುರತ್ಯಯಾನುಕ್ರಮಣಃ ಸಮಾವತು |
ನ ವಿದ್ಯತೇ ಯಸ್ಯ ಚ ಜನ್ಮ ಕರ್ಮ ವಾ ನ ನಾಮರೂಪೇ ಗುಣದೋಷ ಏವ ವಾ ||
ತಥಾಪಿ ಲೋಕತ್ರಯ ಸಂಭವಾಯ ಯಃಸ್ವಮಾಯಯಾ ಯಾನ್ಯನುಕಾಲಮೃಚ್ಛತಿ ||

15 ನ ಖಲು ಗೋಪಿಕಾನಂದನೋಭವಾ ನಿಖಿಲದೇಹಿನಾಮಂತರಾತ್ಮದೃಕ್ |
ವಿಖನ ಸಾರ್ಥಿತೋ ವಿಶ್ವಗುಪ್ತಯೇ ಸಖ ಉದೇಯಿವಾನ್ ಸಾತ್ವತಾಂಕುಲೇ ||
ವ್ರಜಜನಾರ್ತಿಹನ್ ವೀರಯೋಷಿತಾಂ ನಿಜಜನಸ್ಮರಧ್ವಂಸನಸ್ಮಿತ ||
ಭಜ ಸಖೇ ಭವತ್ಕಿಂಕರೀಸ್ಮನೋ ಜಲರುಹಾನನಂ ಚಾರು ದರ್ಶಯ ||

16 ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ |
ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ||

17 ಪ್ರಹ್ಲಾದಸ್ತಾಲಧಾರೀ ತರಲಗತಿತಯಾ ಚೋದ್ಧವಃ ಕಾಂಸ್ಯಧಾರೀ |
ವೀಣಾಧಾರೀ ಸುರರ್ಷಿಃ ಸ್ವರಕುಶಲತಯಾ ರಾಗಕರ್ತಾರ್ಜುನೋಽಭೂತ್ |
ಇಂದ್ರೋಽವಾದೀನ್ಮೃದಂಗಂ ಜಯಜಯ ಸುಕರಾ ಕೀರ್ತಯೇತೇ ಕುಮಾರಾಃ ||
ತತ್ರಾಗೇ ಭಾವಕರ್ತಾ ರಸರಚನತಯಾ ವ್ಯಾಸಪುತ್ರಃ ಶುಕೋಽಭೂತ್ ||

ಮಧ್ವ ಹೀಗೆ ಅವರ ಅವತಾರಗಳೆಲ್ಲ ಹರಿಸೇವೆಗಾಗಿಯೇ ಮೀಸಲಾದವು. ಅವರ ಜೀವನದ ಪ್ರತಿ ಕ್ಷಣವೂ, ಅವರ ದೇಹದ ಪ್ರತಿ ನರವೂ ಹರಿನಾಮದಿಂದ ತುಂಬಿರುವುವು. ಪ್ರತಿ ಜೀವಸ್ಥಿತರಾಗಿ ಅವರು ಪ್ರತಿ ದಿನವೂ 21,600 ಹಂಸಮಂತ್ರ ಜಪಮಾಡುವರು. ಏಳು ಕೋಟಿ ಮಹಾ ಮಂತ್ರಗಳು ಅವರ ವಶವಾಗಿರುವುವು. ಇಂತಹವರ ನಡೆಯೆಲ್ಲ ಹರಿಸೇವೆಯೇ: ನುಡಿಯೆಲ್ಲ ಹರಿಸ್ತೋತ್ರವೇ ಮಧುರಗಾಯನಕ್ಕನುಕಲವಾದ, 'ದ್ವಾದಶ ಸ್ತೋತ್ರ'ವೆಂದು ಪ್ರಸಿದ್ಧವಾದ "ಹರಿಗೀತೆ"ಯಲ್ಲಿ ಪ್ರತಿವಾದಿಗಳಿಗೆ ಕುಠಾರ ಪ್ರಾಯವಾದ ವಾದ ಪುಂಜಗಳನ್ನೊಳಗೊಂಡ " ತತ್ವನಿರ್ಣಯ " ಅನುವ್ಯಾಖ್ಯಾನಾ 'ದಿ ಗ್ರಂಥಗಳಲ್ಲಿ, ಪ್ರಮಾಣ ಸಮುಚ್ಚಯದಿಂದ ಸತ್ಸಿದ್ಧಾಂತ ಸ್ಥಾಪಿಸುವ ಭಾಷ್ಯಾದಿ ಗ್ರಂಥಗಳಲ್ಲಿ ವೇದೇತಿಹಾಸಾದಿ ಮೂಲಶಾಸ್ತ್ರಾಗಳ ನಿಜವಾದ ಅರ್ಥವನ್ನು ತಿಳಿಸುವ ಋಗ್ಭಾಷ್ಯ, ತಾತ್ಪರ್ಯ ನಿರ್ಣಯಾ'ದಿ ಗ್ರಂಥಗಳಲ್ಲಿ, ಕೊನೆಗೆ ಯಜ್ಞ ಯಾಗಾದಿ ಕರ್ಮಮೀಮಾಂಸಾ ಪರವಾದ 'ಕರ್ಮ ನಿರ್ಣಯ' ದಲ್ಲಿ ಎಲ್ಲೆಲ್ಲೂ ಹರಿಸ್ತೋತ್ರ ಒಂದಿಲ್ಲೊಂದು ರೂಪದಿಂದ ಬಂದಿದೆ. ಕೆಲವಡೆ ಸುಲಿದ ಬಾಳೆಹಣ್ಣಿನಂತೆ ಸುಖಕರವಾಗಿ ಸಿಕ್ಕುವಂತಿದ್ದರೆ, ಕೆಲವೆಡೆ ಕಠಿಣವಾದ ಚಿಪ್ಪಿನೊಳಗಿರುವ ಕೊಬ್ಬರಿಯಂತೆ ಅಡಗಿದೆ. ಹರಿಕೀರ್ತನೆ, ಹಯರ್ಯುತ್ಕರ್ಷಸ್ತವ 'ನಮಾಮಿ ನಿಖಿಳಾಧೀಶ ಕಿರೀಟಾಘೃಷ್ಟಪೀಠವತ್'. ಎಂಬ ಹರಿಯ ಆಪಾದಮಸ್ತಕ ವರ್ಣನೆಯೂ 'ಕೇಶನ ಕೇಶವ ಶಾಸಕ ವಂದೇ' 'ಮತ್ಸ್ಯಕರೂಪಲಯೋಧಿ ' ಇತ್ಯಾದಿ ಭಗವನ್ಮೂರ್ತಿ ವರ್ಣನೆಯೂ, ಸಕಲ ಶಾಸ್ತ್ರಾರ್ಥ ಗರ್ಭಿತವಾಗಿಯೂ ಇದ್ದು ಅತ್ಯಂತ ಭಕ್ತಿಪರವೂ ಆಗಿದೆ. ಸಂಗೀತ ಶೈಲಿಯಲ್ಲಿ ರಚಿತವಾದ ಅವರ 'ದ್ವಾದಶ ಸ್ತೋತ್ರವೇ' ಅವರ ಅನುಯಾಯಿಗಳೂ ಶಿಷ್ಯರೂ ಆದ ನರಹರಿತೀರ್ಥರೇ ಮೊದಲಾದ ಕನ್ನಡ ಹರಿದಾಸರುಗಳಿಗೆ ಸ್ಫೂರ್ತಿಯಿತ್ತು ಅಸಂಖ್ಯವಾದ ಪದ, ಪದ್ಯ, ಸುಳಾದಿ. ಉಗಾಭೋಗಗಳ ರಚನೆಗೆ ಕಾರಣವಾಯಿತು.

ಶ್ರೀಮದಾಚಾರ್ಯರ ಗ್ರಂಥಗಳಿಗೆ ಟೀಕೆಯನ್ನು ಬರೆದು 'ಟೀಕಾಚಾರ್ಯ'ರೆಂದು ಪ್ರಸಿದ್ಧರಾದ ಶ್ರೀಮಜ್ಜಯ ತೀರ್ಥರು ಉತ್ಕೃಷ್ಟ ಹರಿದಾಸರ ಶ್ರೇಣಿಯಲ್ಲಿ ಸೇರಿದವರು. ಇದಕ್ಕೆ ಹರಿಮಹಿಮಾ ಪ್ರತಿಪಾದಕವಾದ ಅವರ ಗ್ರಂಥಗಳೇ ಸಾಕ್ಷಿ. ಅಂತೆಯೇ ಅವರು 'ಶ್ರೀಮಧ್ವ–ಜಯಾರ್ಯ, ವ್ಯಾಸಾರ್ಯ'ರೆಂಬ ಮುನಿತ್ರಯರಲ್ಲಿ ದ್ವಿತೀಯರಾಗಿ ಪುರಾಣ ಪ್ರಸಿದ್ಧರಾಗಿದ್ದಾರೆ.[18]

---

18 ಶ್ರೀ ಮಧ್ವಃ ಕಲ್ಪವೃಕ್ಷಶ್ಚ ಜಯಾಚಾರ್ಯಾಸ್ತು ಧೇನವಃ |
ಚಿಂತಾಮಣಿಸ್ತು ವ್ಯಾಸಾರ್ಯಃ ಮುನಿತ್ರಯಮುದಾಹೃತಮ್ ||
—ಶ್ರೀಮುಷ್ಣಮಾಹಾತ್ಮ್ಯಮ್.

೪. ಸಂಸ್ಕೃತ–ಪ್ರಾಕೃತ ವಿಚಾರ.

ವೈದಿಕ ಸಂಪ್ರದಾಯದಲ್ಲಿ ಸಂಸ್ಕೃತ ಭಾಷೆಯನ್ನು ಬಿಟ್ಟು ಪ್ರಾಕೃತ ಭಾಷೆಗಳನ್ನು ಆಶ್ರಯಿಸಿ ತನ್ಮೂಲಕ ಸಾಧನೆ ಮಾಡಿಕೊಳ್ಳುವುದು ನಿಷಿದ್ಧವೆಂಬ ವಾದವೊಂದು ರೂಢವಾಗಿದೆ. ಕೆಲವು ಪುರಾಣ ವಚನಗಳಲ್ಲಿ ಇದೇ ಅಭಿಪ್ರಾಯ ಉಕ್ತವಾಗಿದೆ.[19] ಇದರ ರಹಸ್ಯ ಆಪಾತತಃ ತೋರುವ ಅರ್ಥವಲ್ಲ. ಏಕೆಂದರೆ ಕನ್ನಡದಲ್ಲಿ ದಾಸಸಾಹಿತ್ಯ ರಚನೆ ಮಾಡಿದವರು ಜ್ಞಾನಿಗಳು ಮತ್ತು ದೇವಾಂಶಸಂಭೂತರೆಂಬ ಪ್ರಸಿದ್ಧಿ ಇದೆ. ಅಷ್ಟೇ ಅಲ್ಲ, ಕನ್ನಡದಲ್ಲಿ ದಾಸವಾಙ್ಮಯವನ್ನು ಮೊದಲಿಗೆ ಸೃಷ್ಟಿಮಾಡಿದ ನರಹರಿತೀರ್ಥರು, ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರು, ಮೊದಲಾದವರು ಸಂಸ್ಕೃತದಲ್ಲಿ ದೊಡ್ಡ ಪಂಡಿತರು ಮಾತ್ರವಲ್ಲದೆ, ಉದ್ದಾಮ ಶಾಸ್ತ್ರಗ್ರಂಥಗಳನ್ನು ರಚಿಸಿರುವ ಮಹಾನುಭಾವರು. ಇಂತಹವರು ಅನುಸರಿಸಿದ ಮಾರ್ಗವೆಲ್ಲ ಶಾಸತ್ರವಿಹಿತವೇ. ವೇದಾದಿ ಮೂಲಶಾಸ್ತ್ರಗಳೂ, ನಿರ್ಣಾಯಕ ಶಾಸತ್ರಗಲೂ, ಎಲ್ಲ ಸಂಸ್ಕೃತದಲ್ಲೇ ಇರುವುವು. ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನದಲ್ಲಿ ಸಂಧ್ಯಾದಿನಗಳನ್ನೂ ಶ್ರಾದ್ಧಾದಿನಗಳನ್ನೂ, ಶಾಂತಿ ಪಾಠಗಳನ್ನೂ ಮತ್ತು ಮಂತ್ರಗಳ ಜಪಗಳನ್ನೂ ಯಾರೂ ಕನ್ನಡಾದಿ ಪ್ರಾಕೃತ ಭಾಷೆಗಳಲ್ಲಿ ಆಚರಿಸುವುದಿಲ್ಲ. ಆದರೆ ಭಗವನ್ಮಹಿಮೆಯನ್ನು ತಿಳಿಯಲು ಭಾಷೆ ಒಂದು ಸಾಧನಮಾತ್ರ. ಆ ಸಾಧನೆ ಕನ್ನಡವಾದರೂ ಒಂದೇ ಸಂಸ್ಕೃತವಾದರೂ ಒಂದೇ. ಭಾಷೆಯೇ ಮುಖ್ಯವಾದಂತಹ ಸಾಧನದಲ್ಲಿ ಅಂದರೆ ಸಂಧ್ಯಾದ್ಯನುಷ್ಠಾನದಲ್ಲಿ ಸಂಸ್ಕೃತವೇ ಮಾನ್ಯವಾದುದು ಹರಿದಾಸ ಸಾಹಿತ್ಯವಾದರೋ ಭಗವನ್ಮಹಿಮೆಯನ್ನು ತಿಳಿಸಿ ಭಗವಂತನಲ್ಲಿ ರತಿ ಹುಟ್ಟಿಸುವುದಕ್ಕಾಗಿ ರಚಿತವಾದವು.

---

19 ದಿವ್ಯಭಾಷಾಂ ಪರಿತ್ಯಜ್ಯ ಹ್ಯನ್ಯಭಾಷಾಕೃತಾನಿ ವೈ |
ಶಾಸ್ತ್ರಾಣಿ ಯೇ ಪ್ರಶೃಣ್ವಂತಿ ತೇ ವೈ ನಿರಯಗಾಮಿನಃ ||
ಕರ್ನಾಟಕದ್ರವಿಡೈರ್ಯಾನಿ ರಚಿತಾನ್ಯಾಂಧ್ರಭಾಷಯಾ |
ವಚಾಂಸಿ ಯೇ ಪ್ರಶೃಣ್ವಂತಿ ತೇ ವೈ ನಿರಯಗಾಮಿನಃ ||
— ಶೇಷಧರ್ಮ–೧೦–೩೯.

ಅದು ಸಂಸ್ಕೃತದಲ್ಲಿರಬೇಕಾದ ಅಗತ್ಯವಿಲ್ಲ.[20] ಅಷ್ಟೇ ಅಲ್ಲ; ಸರ್ವರಿಗೂ ಅರ್ಥವಾಗುವ ಭಾಷೆಯಲ್ಲಿ ಇದು ರಚಿತವಾದದ್ದರಿಂದಲೇ ಜನರಲ್ಲಿ ಭಗವದ್ವಿಷಯಕವಾದ ಸಂಸ್ಕಾರವನ್ನು ಮೂಡಿಸಲು ಇದು ಸಹಾಯಕವಾಯಿತು. ಸಂಸ್ಕೃತ ಭಾಷೆಯಲ್ಲಿ ರಚಿತವಾಗಿದ್ದಲ್ಲಿ ಕೇವಲ ಪಂಡಿತಮಾತ್ರಗಮ್ಯವಾಗಿ ಅದರ ಉದ್ದೇಶವೇ ನೆರವೇರುತ್ತಿರಲಿಲ್ಲ. ಸಂಸ್ಕೃತವನ್ನು ತಿರಸ್ಕರಿಸಿ ಪ್ರಾಕೃತವನ್ನು ಅವಲಂಬಿಸಬಾರದು. ಅಂದರೆ ಮೂಲಶಾಸ್ತ್ರಗಳನ್ನು ನಿರಾಕರಿಸಿ ಅವುಗಳಿಗಿಂತ ಕನ್ನಡ ಸಾಹಿತ್ಯವೇ ಶ್ರೇಷ್ಠವೆಂಬುದು ಸರಿಯಲ್ಲವೆಂಬುದು ಸಿದ್ಧಾಂತ.

---

20 i ಮಾಧವನುಣಪೇಳ್ವ ಪ್ರಾಕತ |
ವಾದರೆಯು ಸರಿ ಕೇಳಿ ಪರಮಾ |
ಹ್ಲಾದ ಬಡದಿಪ್ಪರೆ ನಿರಂತರ ಬಲ್ಲಕೊವಿದರು ||
— ಹರಿಕಥಾಮೃತಸಾರ. 17–34.

ಸಂಸ್ಕೃತವಿದಲ್ಲಂದು ಕುಹಕಿ ತಿ–
ರಸ್ಕರಿಸಲೇನಹುದು ಭಕ್ತಿ ಪು–
ರಸ್ಕರದಿ ಕೇಳ್ವರಿಗೆ ಒಲಿವನು ಪುಷ್ಕರಾಕ್ಷ ಸದ ||
— ಹರಿಕಥಾಮೃತಸಾರ. 17–35.

ಕೃತಿಪತಿಕಥಾನ್ವಿತವೆನಿಪ ಪ್ರಾ–
ಕೃತವೇ ತಾ ಸಂಸ್ಕೃತವೆನಿಸಿ ಸ
ದ್ಗತಿಯನೀವುದು ಭಕ್ತಿಪೂರ್ವಕ ಕೇಳಿ ಪೇಳ್ವರಿಗೆ ||
— ಹರಿಕಥಾಮೃತಸಾರ. 17–36.

ii ಸ್ತವ್ಯೈರುಚ್ಚಾವಚ್ಚೈಃ ಶ್ರೋತ್ರೈಃ ಪುರಾಣೈಃ ಪ್ರಾಕೃತೈರಪಿ |
— ಭಾವಗವತಮ್ ೧೭–೩೬

XIII. ಹರಿದಾಸರ ಪರಿಚಯ

1. ಆರಂಭಕಾಲ

ಜಗತ್ತು ಸೃಷ್ಟವಾದಂದಿನಿಂದ ಭಾಗವತಧರ್ಮ ಪ್ರಚಾರವು ಅವ್ಯಾಹತವಾಗಿ ಸಾಗುತ್ತಿದೆ. ಚತುರ್ಮುಖ ಬ್ರಹ್ಮದೇವರೇ ಇದಕ್ಕೆ ಆದಿಪುರುಷರು. ಅವರ ಪುತ್ರರಾದ ನಾರದರು ಭಾಗವತಕ್ಕೆ ಕಾರಣಪುರುಷರಾದದ್ದು ಮಾತ್ರವಲ್ಲದೆ 'ನಾರಾಯಣನೆಂಬುವ ನಾಮದ ಬೀಜವ' ಧರೆಯೊಳಗೆ ಬಿತ್ತಿದರು. ಭಾಗವತ ಶ್ರೇಣಿಯಲ್ಲಿ ಪ್ರಸಿದ್ಧರಾದ ಪ್ರಹ್ಲಾದ. ಧ್ರುವ, ಕುಚೇಲ, ಅಂಬರೀಷ, ರುಕ್ಮಾಂಗದಾದಿಗಳೆಲ್ಲರಿಗೂ ನಾರದರು ಗುರುಗಳೆನ್ನಬಹುದು. ಮುಖ್ಯವಾಗಿ ನಾರದರು ಮತ್ತು ಪ್ರಹ್ಲಾದರಾಜರು ಭಾಗವತ ಧರ್ಮಪ್ರಚಾರಕ್ಕೆ ಬದ್ಧ ಕಂಕಣರಾಗಿ ನಿಂತರು. ಇವರಿಬ್ಬರೇ ಭೂಲೋಕದಲ್ಲಿ ಜನ್ಮತಾಳಿ ಭಾಗವತ ಧರ್ಮವನ್ನು ವಿಶೇಷವಾಗಿ ಪ್ರಚಾರಪಡಿಸಿದರು. ಕರ್ನಾಟಕ ಹರಿದಾಸರ ಸಾಹಿತ್ಯಕ್ಕೆ ಜೀವಕಳೆ ಬಂದುದು ಪ್ರಹ್ಲಾದಾಂಶ ಸಂಭೂತರಾದ ವ್ಯಾಸರಾಜ–ರಾಘವೇಂದ್ರರು ಮತ್ತು ನಾರದಾಂಶ ಸಂಭೂತರಾದ ಪುರಂದರದಾಸರಿಂದ, ಇಂದಿಗೂ ಕನ್ನಡ ಹರಿದಾಸರೆಂದರೆ ಪುರಂದರದಾಸರೆಂಬ ಭಾವನೆ ಎಲ್ಲರಲ್ಲೂ ಮೂಡಿದೆ. ಪ್ರಹ್ಲಾದರಾಜರು ನಾರದರ ಶಿಷ್ಯರಾದರೂ, ವ್ಯಾಸರಾಜರು ಪುರಂದರದಾಸರ ಗುರುಗಳು. ಇವರ ಕಾಲದಲ್ಲಿ ಉಚ್ಛ್ರಾಯಸ್ಥಿತಿಗೆ ಬಂದ ದಾಸಸಾಹಿತ್ಯ ಇವರಿಗಿಂತ ಎರಡು ಶತಮಾನಗಳಿಗೆ ಪೂರ್ವದಲ್ಲೇ ಆರಂಭವಾಯಿತು. ಕನ್ನಡ ಹರಿದಾಸ ಸಾಹಿತ್ಯಕ್ಕೆ ಮಧ್ವಮತವೇ ಜನಕ ಸ್ಥಾನೀಯವು. ಆಚಾರ್ಯರಿಂದ ಸ್ಫೂರ್ತಿಪಡೆದ ಅವರ ಸಾಕ್ಷಾತ್ ಶಿಷ್ಯರಾದ ನರಹರಿತೀರ್ಥರೇ ಮೊಟ್ಟ ಮೊದಲಿಗೆ ಕನ್ನಡದಲ್ಲಿ ಪದಗಳನ್ನು ರಚಿಸಿದವರು.

ನರಹರಿತೀರ್ಥರು.

ಅಚಲಾನಂದ ದಾಸರೆಂಬ ಭಾಗವತ ಸಂಪ್ರದಾಯದ ಭಕ್ತರು ಕ್ರಿ.ಶ. ಒಂಭತ್ತನೆಯ ಶತಮಾನ ಅಂದರೆ ಆಚಾರ್ಯರಿಗಿಂತ ಮುನ್ನೂರು–ನಾನೂರು ವರ್ಷಗಳಿಗೆ ಮುಂಚೆಯೇ ಕನ್ನಡದಲ್ಲಿ ಪದಗಳನ್ನೂ ಉಗಾಭೋಗಗಳನ್ನೂ ರಚಿಸಿರುವರು. ಕನ್ನಡ ದಾಸಸಾಹಿತ್ಯವು ಅವರಿಂದ ಆರಂಭವಾಯಿತೇ ಹೊರತು ನರಹರಿತೀರ್ಥರಿಂದಲ್ಲ' ಎಂದು ಶ್ರೀ ಬೇಲೂರು ಕೇಶವದಾಸರು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಪ್ರಮಾಣವಾಗಿ ಅಚಲಾನಂದ ದಾಸರ ಪದದ ಪುಸ್ತಕದಲ್ಲಿ 'ಕಾಶೀತಿಸಂಖ್ಯಾ' ಎಂಬ ಉಲ್ಲೇಖವನ್ನು ಉದಾಹರಿಸುತ್ತಾರೆ. ಆದರೆ 'ಕಾಶೀತಿ ಸಂಖ್ಯೆ' ಎಂಬ ಸಂಕೇತವು ಶಾ.ಶ. 801 ಎಂಬುದನ್ನು ಸೂಚಿಸದು. ಶಾ.ಶಕ. 1281 ವಿಳಂಬಿ ಸಂವತ್ಸರವನ್ನು ಇದು

ಸೂಚಿಸುವುದು. ಆದ್ದರಿಂದ ಇವರು ಆಚಾರ್ಯರ ತರುವಾಯದಲ್ಲಿ ಮಧ್ವಮತ ಸಂಪ್ರದಾಯದಲ್ಲೇ ಬಂದ ಹರಿದಾಸರು. ಮತ್ತು ಬಹುಶಃ ನರಹರಿತೀರ್ಥರ ಸಮಕಾಲಿಕರು. ಅಲ್ಲದೆ ಇವರ ಪದಗಳನ್ನೊಳಗೊಂಡ ಪ್ರತಿಯೊಂದು ಶ್ರೀ ಹುಲಗೂರು ಕೃಷ್ಣಾಚಾರ್ಯ, ಕಿನ್ನರಿ ವಿದ್ವಾನ್ ಇವರಲ್ಲಿದ್ದು ಅವರ ಪುಸ್ತಕದಲ್ಲಿನ ಪದವೊಂದು 'ಕೇಳೋ ಜೀವನವೇ ನೀ ಮಧ್ವಮತವನುಸರಿಸಿ। ಶ್ರೀ ಲೋಲ ನಂಘ್ರಿಗಳ ನೆನೆದು ಸುಖಿಸೋ' ಎಂದು ಆರಂಭವಾಗುವುದು. [1] ಇದರಿಂದಂತೂ ಇವರು ಮಾಧ್ವರೇ; 'ಭಾಗವತ ಮತಾ'ವಲಂಬಿಗಳಲ್ಲವೆಂಬುದು ವ್ಯಕ್ತವಾಗುವುದು. ನರಹರಿತೀರ್ಥರಾದ ಮೇಲೆ ಆರಾಧ್ಯರೆಂಬ ಅರುವತ್ತು ಶೈವಸಂತರು ಪಂಡರಪುರಕ್ಕೆ ಹೋಗಿ ಮಧ್ವಮತಾವಲಂಬಿಗಳಾದ ಐತಿಹ್ಯವಿದೆ, ಅವರಲ್ಲೊಬ್ಬರು 'ಮಂಗನಕಿತ್ತಂತಾಯಿತು ಜನ್ಮವು। ಲಿಂಗವ ಕಳಕೊಂಡು ಗಂಗೆಯ ತೀರದಿ। ...... ಅದ್ವೈತ ದ್ವಿಜಾರಾಧ್ಯನಾಗಿರೆ ಉದ್ಧರಿಸಿದೆ ಮಧ್ವಮತದವನೆನಿಸಿ' ಎಂದು ಹಾಡಿದ್ದಾರೆ. ಇವರೇ ಮುಂದೆ ಆದ್ಯರೆಂದು ಪ್ರಸಿದ್ಧರಾದರೆಂದೂ, ಅಚಲಾನಂದ ದಾಸರು ಇವರಲ್ಲೊಬ್ಬರೆಂದೂ ಹೇಳುವ ಪರಿಪಾಟಿ ಇದೆ. ಅಂತೂ ನರಹರಿ ತೀರ್ಥರೇ ಹರಿದಾಸಕೂಟಕ್ಕೆ ಆದ್ಯ ಆಚಾರ್ಯರೆಂದು ಹೇಳಬಹುದು.

ನರಹರಿತೀರ್ಥರ ಮೊದಲ ಹೆಸರು ಸ್ವಾಮಿಶಾಸ್ತ್ರಿಗಳು. ಇವರು ನ್ಯಾಯಾದಿ ಶಾಸ್ತ್ರಗಳಲ್ಲಿ ಪಂಡಿತವರೇಣ್ಯರು; ವಾದಾಗ್ರಣಿಗಳೆಂದು ಪ್ರಸಿದ್ಧರಾದವರು; ಕಳಿಂಗ ದೇಶದ ಕಣ್ಣಿನಂತಿದ್ದವರು. ಇಂತಹವರು ಶ್ರೀಮಧ್ವಾಚಾರ್ಯರ ನಿಜಪ್ರತಿಭೆಗೆ, ದೈವೀವರ್ಚಸ್ಸಿಗೆ, ಪಾಂಡಿತ್ಯ ಹಾಗೂ ವಾಕ್ಯಾರ್ಥಕ್ಕೆ ಮನಸೋತು. ಅವರ ಶಿಷ್ಯರಾದರು. ಆಚಾರ್ಯರ ನಾಲ್ಕು ಪ್ರಮುಖ ಶಿಷ್ಯರಲ್ಲಿ ನರಹರಿತೀರ್ಥರು ಎರಡನೆಯವರು. ಲೌಕಿಕದಲ್ಲಾದರೋ ಇವರು ಹನ್ನೆರಡು ವರ್ಷಗಳ ಕಾಲ ಕಳಿಂಗದೇಶಾಧಿಪತ್ಯವನ್ನು ಮಾಡಿದರು. ಆಚಾರ್ಯರ ಗ್ರಂಥಗಳಿಗೆ ವ್ಯಾಖ್ಯಾನವನ್ನು ರಚಿಸಿದರು. ಇಂತಹ ಅದ್ಭುತ ವ್ಯಕ್ತಿತ್ವವುಳ್ಳವರು ಕನ್ನಡದಲ್ಲಿ ಪದಗಳನ್ನು ರಚಿಸಲು ಆರಂಭಿಸಿದರು. ಇವರು ಅನೇಕ ಪದಗಳನ್ನು ರಚಿಸಿದ್ದಿರಬಹುದು. ಆದರೆ ಅವುಗಳಲ್ಲಿ ಈಗ ಒಂದೆರಡು ನಾಮಗಳು ಮಾತ್ರ ಉಪಲಬ್ಧವಾಗಿವೆ.

ಎಂತು ಮರುಳಾದೆ ನಾನೆಂತು ಮರುಳಾದೆ || ಪ ||
ಎಂದು ಮರುಳಾದೆ ಭವದೊಳು ಬಳಲಿದೆ।

---

1. ಹುಲಗೂರು ಕೃಷ್ಣಾಚಾರ್ಯರು 'ಕರ್ನಾಟಕ ಸಂಗೀತ'ವೂ ದಾಸಕೂಟವೂ; ಪುಟ–91

ಸಂತತ ಪೊರೆ ರಘುಕುಲ ತಿಲಕ || ಅ || ಪ ||
ಮಾತಿನಲಿ ಹರಿದಾಸತನ । ನೀತಿಯಲ್ಲಿ ಪ್ರಭುದಾಸತನ ||
ಪ್ರೀತಿ ಧನಾದಿ ವಿಷಯದಲ್ಲಿ। ನಿರ್ಭೀತಿ ದೈವಗುರು ದ್ರೋಹದಲಿ || ೧ ||
ಏಕಾಂತದಲ್ಲಿ ಧನದ ಗೋಷ್ಠಿ। ಲೋಕಾಂತದಿ ವೈರಾಗ್ಯಗೋಷ್ಠಿ ||
ಶ್ರೀಕಾಂತನ ಸೇವೆಗೆ ಅನುಮಾನ। ಭೂಕಾಂತನ ಸೇವೆಗೆ ಸುಮ್ಮಾನ || ೨ ||

★ ★ ★

ಭಜಿಸು ಬ್ರಹ್ಮಾದಿ ವಂದಿತ ಹರಿಯ। ತ್ಯಜಿಸು ಕಾಮಾದಿ ದುರ್ವಿಷಯ ||
ಸುಜನವಂದಿತನಾದ ನರಹರಿಯ। ಭಜಿಸು ಶ್ರೀಶ ಶ್ರೀರಘುಪತಿಯ || ೩ ||

ಈ ಪದದಲ್ಲಿ ಬಳಲುತ್ತಿರುವ ಅಜ್ಞಾನಿ ಜೀವರುಗಳ ಸ್ಥಿತಿ, ದುಷ್ಕರ್ಮದಿಂದ ಅವರಲ್ಲಿ ಹುಟ್ಟುವ ಬುದ್ಧಿ, ಅದರಂತೆ ಪ್ರವೃತ್ತಿ, ಅದಕ್ಕೆ ವಿರೋಧವಾದ ನಿಜವಾದ ಧರ್ಮ ಇವೆರಡು ಒಂದರ ಮಗ್ಗಲಲ್ಲೊಂದು ತೋರಿಸಲ್ಪಟ್ಟು ಅವುಗಳಿಗಿರುವ ಅಂತರ, ಮಹದ್ವಿರೋಧ ಬಹಳ ಹೃದಯಂಗಮವಾಗಿ ಚಿತ್ರಿಸಲ್ಪಟ್ಟಿದೆ. ಈ ಕೃತಿಯಿಂದಲೇ ಇವರೆಂತಹ ಪಕ್ವವಾದ ಹರಿದಾಸರೆಂಬುದು ವ್ಯಕ್ತವಾಗುವುದು.

ii. ಹರಿದಾಸರ ಜೀವನ ವೈಖರಿ

ಭಗವದ್ಭಕ್ತರ ನಡೆ–ನುಡಿಗಳೆ ಕನ್ನಡ ಹರಿದಾಸರ ಜೀವನದಲ್ಲಿ ಕಾಣುವುವು. ಈ ಸಂತರುಗಳ ಜೀವನ ಸಾಮಾನ್ಯ ಜನರ ಜೀವನಕ್ಕಿಂತ ಭಿನ್ನ. ಕೆಲಭಕ್ತರು ಆರಂಭದಿಂದಲೂ ದೇವೋನ್ಮಾದಿಗಳಾಗಿ ಜಡಭರತರಂತೆ, ಪ್ರಹ್ಲಾದರಾಜರಂತೆ ಇರುತ್ತಾರೆ. ಇನ್ನು ಕೆಲವರು ಸಾಮಾನ್ಯಮನುಷ್ಯರಂತೆ ಇದ್ದರೂ, ಕಾಲ ಒದಿದಾಗ ಅವರ ಜೀವನ ಊಹಿಸಲಾಗದಷ್ಟು ಬದಲಾಯಿಸಿಬಿಡುತ್ತದೆ. ಆರಂಭದಲ್ಲಿ ಅವರು ಪುರಂದರದಾಸರಂತೆ ಅತಿ ಧನಿಕರೂ, ಲೋಭಿಗಳೂ ಆಗಿರಬಹುದು; ವಿಜಯ–ಗೋಪಾಲ ದಾಸರಂತೆ ಅತಿ ಬಡವರಾಗಿರಬಹುದು; ಮೋಹನದಾಸರಂತೆ ಕಡು ರೋಗಿಗಳಾಗಿದ್ದು, ಆಮೇಲೆ ಸುಂದರರಾಗಬಹುದು; ಇಲ್ಲವೇ ಜಗನ್ನಾಥ ದಾಸರಂತೆ ಉದ್ದಾಮ ಪಂಡಿತರೋ, ಪ್ರಸನ್ನ ವೆಂಕಟರಂತೆ ಶತದಡ್ಡರೋ ಆಗಿರಬಹುದು. ಹರಿಶರಣರ ಈ ಭಾಗದ ಜೀವ ಅಷ್ಟು ಮುಖ್ಯವಲ್ಲ. ಹೀಗೆ ಜೀವನದ ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆ ಪ್ರಣಾಳಿಗಳಲ್ಲಿ ಬಂದವರು ಕೊನೆಗೆ ಒಟ್ಟುಗೂಡುವರು. ಈ ಪಕ್ವಕಾಲವೇ ಹರಿದಾಸರ ನಿಜವಾದ ಜೀವನ. ಹೀಗೆ ಅಪರೋಕ್ಷಿಗಳಾದಾಗ ಎಲ್ಲದಾಸರ ಜೀವನವೂ ಒಂದೇ ಅಚ್ಚುಕಟ್ಟಿನಲ್ಲಿರುತ್ತದೆ. ಇದಕ್ಕೆ ಆಶ್ಚರ್ಯಪಡಬೇಕಾದ್ದಿಲ್ಲ. ಗುರಿ ಒಂದೇ ಆದ್ದರಿಂದಲೂ, ಹೊಂದಿದ ಸಿದ್ಧಿ ಒಂದೇ

ಜಾತಿಯದ್ದಾದ್ದರಿಂದಲೂ, ಅವರ ಜೀವನಕ್ರಮವೂ ಒಂದೇ ತರಹ; ಸಾಮಾನ್ಯ ಮನುಷ್ಯರಂತೆ ಜೀವನ ನಡೆಸುವ ಈ ಭಕ್ತರುಗಳು ಆಮೇಲೆ ಕೃಷ್ಣಗ್ರಹ ಗೃಹೀತಾತ್ಮರಾಗಿ. ಲೋಕವಿರುದ್ಧವಾಗಿ ನಗುತ್ತಾರೆ; ಲೋಕವಿರುದ್ಧವಾಗಿ ಅಳುತ್ತಾರೆ. ಉನ್ಮತ್ತತನದಿಂದ ಮೆರೆಯುತ್ತಾರೆ; ಅತಿದೀನರಾಗಿ ಬೇಡುತ್ತಾರೆ. ಹೀಗೆ ವಿಪರೀತ ಪರಿಸ್ಥಿತಿ, ವಿಪರೀತಮನೋಭಾವನೆ, ವಿಪರೀತ ವ್ಯಾಪಾರಗಳಿಂದ ತುಂಬಿರುತ್ತದೆ ಅವರ ಜೀವನ.

iii. ಅಂಕಿತ

ಅಂಕಿತವೆಂಬ ಶಬ್ದವು ಕನ್ನಡ ಹರಿದಾಸಪರಂಪರೆಯಲ್ಲಿ ಬಹಳ ಪ್ರಚಾರದಲ್ಲಿದೆ. ಇದರ ಪ್ರಸಕ್ತಿ ಏತಕ್ಕಾಗಿ ಎಂಬುದು ಸ್ಪಷ್ಟವಿದೆ. ಅಪುತ್ರವಂತರು ಪರರ ಮಕ್ಕಳನ್ನು ದತ್ತಕವಾಗಿ ಪಡೆದಲ್ಲಿ ದತ್ತಕವಾದವನು ಹೊಸಗೋತ್ರವನ್ನು ಹೊಂದುತ್ತಾನೆ. ಕನ್ನೆಯರು ಲಗ್ನವಾಯಿತೆಂದು ಕೂಡಲೆ ತಂದೆಯ ಮನೆಯ ಗೋತ್ರವನ್ನು ಬಿಟ್ಟು ಗಂಡನ ಗೋತ್ರಾದಿಗಳನ್ನು ಹೊಂದುತ್ತಾರೆ. ಸನ್ಯಾಸಾಶ್ರಮವನ್ನು ಪಡೆಯುವವರು ತಾವು ಸತ್ತುಹೋದಂತೆ ಭಾವಿಸಿ ಅದಕ್ಕೆ ತಕ್ಕ ಉತ್ತರಕ್ರಿಯೆಗಳನ್ನು ಆಚರಿಸಿ, ಹೊಸವೇಶ, ಹೊಸಹೆಸರನ್ನು ಪಡೆಯುತ್ತಾರೆ. ಇಂತಹ ಆಚರಣೆಯಿಂದ ಹೊರಪಡುವುದೇನೆಂದರೆ; ಈ ಜೀವಿತ ಕಾಲದಲ್ಲೇ ಕೆಲವೊಂದು ಸಂಸ್ಕಾರಗಳನ್ನು ಪಡೆದೋ, ಹೊಸ ಸಂಪ್ರದಾಯವನ್ನುನುಸರಿಸಿಯೋ, ನೂತನ ಅವಸ್ಥೆಯೊಂದನ್ನು ಹೊಂದಿದಲ್ಲಿ ಅದು ಬೇರೆ ಜನ್ಮವಿದ್ದಂತೆಯೇ. ಆದ್ದರಿಂದಲೇ ಇಂತಹ ಸಂದರ್ಭಗಳಲ್ಲಿ ಬೇರೆ ಹೆಸರು, ಕುಲ, ಗೋತ್ರ, ವೇಷಗಳು ಪ್ರಚಾರಕ್ಕೆ ಬರುತ್ತವೆ. ಇದು ಶಾಸ್ತ್ರವಿಹಿತವಾದ ಸಂಸ್ಕಾರಗಳಿಂದ ಏರ್ಪಟ್ಟುದು. ಆದರೆ ಜೀವ ಸಾಧನ ಮಾರ್ಗಾನುವರ್ತಿಯಾಗಿ, ಭಕ್ತಿಯ ಒಲುಮೆಯಿಂದ ಭಗವಂತನನ್ನು ಒಲಿಸಿಕೊಂಡರೆ ಅವನ ಜೀವನ ತಾನೇ ತಾನಾಗಿ ಬದಲಾಯಿಸಿ ಇತರ ಸಾಮಾನ್ಯರ ಜೀವನಕ್ಕಿಂತ ತೀರ ಭಿನ್ನವಾಗುತ್ತದೆ. ಇಂತಹ ನೂತನ ಜೀವನದ ಸಂಕೇತವೇ ಅಂಕಿತ– ಅಂಕಿತವೆಂದರೆ ವಿಶೇಷ ಚಿನ್ಹೆ ಎಂದರ್ಥ. ಭಗವಂತನನ್ನೇ ನಂಬಿ ಅವನ ಪ್ರೀತ್ಯರ್ಥವಾಗಿಯೇ ಬದುಕನ್ನು ಸಾಗಿಸುತ್ತೇನೆಂಬ 'ದೀಕ್ಷೆ'ಯನ್ನು ಸದ್ಗುರುಗಳಲ್ಲಿ ಪಡೆಯುವುದನ್ನು ವಿಶೇಷ ಚಿನ್ಹೆಯಿಂದ ಸೂಚಿಸುವುದೇ ಅಂಕಿತದ ರಹಸ್ಯ. ಗುರುಗಳಿಂದ ಭಗವತ್ತತ್ತ್ವದ ಉಪದೇಶ ಪಡೆದು ದೇವರ ಹೆಸರೊಂದನ್ನು ಗುರುಗಳಿಂದ ಪಡೆಯುವುದು ಪದ್ಧತಿ. ಇದೇ ಪುರಂದರಾದಿ ದಾಸರುಗಳ ಹೆಸರು. ಆ ಅವರ ಪೂರ್ವದ ಹೆಸರು ಮಾಸಿ ಹೋಗುವುದು. ಗುರುಗಳೇ ಇಂತಹ ಹೆಸರನ್ನು ಕೊಡುತ್ತಾರೆ.

ಈ ಭಗವದ್ಭಕ್ತರುಗಳು ಸಮಯಬಂದಾಗ ಅತಿಮಾನುಷ ಮಹಿಮೆಗಳನ್ನು

ತೋರುತ್ತಾರೆ. ಎಲ್ಲ ವಿಭೂತಿ ಪುರುಷರ ಜೀವನದಲ್ಲೂ ಇದೊಂದು ಅಯುತಸಿದ್ಧವಾದ ವಿಷಯ. ಇದರ ವಿಷಯವನ್ನು ಎಲ್ಲ ವಿಮರ್ಶಕ ಪಂಡಿತರೂ ವಿಚಾರಮಾಡಿ ಇದು ಸಹಜ ಮತ್ತು ಆವಶ್ಯಕವೆಂಬ ನಿರ್ಣಯಕ್ಕೆ ಬಂದಿದ್ದಾರೆ. ಕನ್ನಡಹರಿದಾಸರು ತೋರಿಸಿರುವ ಮಹಿಮೆಗಳು ಸ್ವಾರ್ಥಕ್ಕಾಗಿಯಲ್ಲ; ಅಂದರೆ ತಮ್ಮ ದೊಡ್ಡಸ್ತಿಕೆಯನ್ನು ತಮ್ಮ ಕೀರ್ತಿಯನ್ನು ಹೆಚ್ಚಿಸುವುದಕ್ಕಲ್ಲ. ಪ್ರತ್ಯುತ ಭಾಗವತರ ಧರ್ಮವನ್ನು ಸ್ಥಿರಪಡಿಸಲು; ಭಗವಂತನ ಮಾಹಾತ್ಮ್ಯಗಳನ್ನು ಜನಗಳ ಮನಸ್ಸಿನ ಮೇಲೆ ಚೆನ್ನಾಗಿ ಪರಿಣಾಮಕಾರಿಯಾಗುವಂತೆ ಮಾಡಲು ಮತ್ತು ಭಗವಂತನನ್ನು ನಂಬಿದವರಲ್ಲಿ ಯಾವ ಶಕ್ತಿ ಇದೆಯೆಂಬುದನ್ನು ತೋರಿಸಲು.

ಈ ಕೆಲವು ಧರ್ಮಗಳು ಎಲ್ಲ ದಾಸರುಗಳ ಜೀವನವನ್ನು ಸಾಮಾನ್ಯ ರೂಪದಿಂದ ತಿಳಿಸುತ್ತದೆ. ಇಷ್ಟನ್ನು ತಿಳಿದ ಮೇಲೆ ಅವರುಗಳ ಜೀವನದಲ್ಲಿ ಹೆಚ್ಚಿಗೆ ತಿಳಿಯಬೇಕಾದ ಅಂಶಗಳು ಅಷ್ಟಾಗಿರುವುದಿಲ್ಲ.

2. ಉನ್ನತಿಯ ಕಾಲ

i ಶ್ರೀಪಾದರಾಜರು.

ನರಹರಿತೀರ್ಥರ ನಂತರದಲ್ಲಿ ದಾಸಸಾಹಿತ್ಯದಲ್ಲಿ ಶ್ರೀಪಾದರಾಜರೇ ಪ್ರಸಿದ್ಧರಾದ ವ್ಯಕ್ತಿಗಳು. ಶ್ರೀಪಾದರಾಜರಿಂದ ದಾಸಸಾಹಿತ್ಯದ ಉನ್ನತಿಯಕಾಲ ಆರಂಭವಾಗುವುದು. ನರಹರಿತೀರ್ಥರಾದ ಮೇಲೆ ಒಂದು ಶತಮಾನವಾದ ಮೇಲೆ ಶ್ರೀಪಾದರಾಜರಿಂದ ದಾಸಸಾಹಿತ್ಯ ನವಚೈತನ್ಯ ಪಡೆಯಿತು. ಇಂದಿಗೂ ದಾಸಪರಂಪರೆಯಲ್ಲಿ ಶ್ರೀಪಾದರಾಜರ ಹೆಸರೇ ಮೊದಲಿಗೆ ಗಣಿಸಲ್ಪಡುವುದು.[2] ಇವರು ಹದಿನೈದನೆಯ ಶತಮಾನದ ಮಧ್ಯಭಾಗದಲ್ಲಿ ಜನ್ಮತಾಳಿದರು. ಬಾಲ್ಯದಲ್ಲಿಯೇ ಉಪನೀತರಾದ ಇವರು ಆಚಾರ್ಯರ ಮೊದಲ ಶಿಷ್ಯರಾದ ಪದ್ಮನಾಭ ತೀರ್ಥರ ಪರಂಪರೆಯಲ್ಲಿ ಬಂದ ಸ್ವರ್ಣವರ್ಣತೀರ್ಥರಿಂದ ಆಶ್ರಮಪಡೆದರು. ಇವರ ಹೆಸರು ಲಕ್ಷ್ಮೀನಾರಾಯಣ ಯೋಗಿಗಳು. ಆಶ್ರಮವಾದ ಮೇಲೆ ಇವರು ಆಚಾರ್ಯರ ಮುಖ್ಯ ಸಂಪ್ರದಾಯದಲ್ಲಿ ಬಂದ ಪ್ರಸಿದ್ಧ ಪಂಡಿತರಾದ ವಿಬುಧೇಂದ್ರ ತೀರ್ಥರಲ್ಲಿ ವಿದ್ಯಾಭ್ಯಾಸಮಾಡಿದರು. ಕ್ರಿ.ಶ. 1471ರ ಸುಮಾರಿಗೆ ವಿಜಯನಗರದ ಸೇನಾಧಿಪತಿಯಾದ ಸಾಳುವನರಸ ತನ್ನ ಚಂದ್ರಗಿರಿಯ ಸಿಂಹಾಸನದಲ್ಲಿ ನಾರಾಯಣ ಯೋಗಿಗಳನ್ನು ಮಂಡಿಸಿ ಮರ್ಯಾದೆ ಮಾಡಿದ. ಸಿಂಹಾಸನವನ್ನು ಹತ್ತಿದ ಶ್ರೀಪಾದರಾಜರು ಮುತ್ತಿನ ಕವಚ ತೊಟ್ಟು ರತ್ನದ ಕಿರೀಟ ಇಟ್ಟು, ಕರ್ಣಕುಂಡಲ ಧರಿಸಿ

---

2 ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ ||
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ ||

ಗಂಧಲೇಪನ ಮಾಡಿಕೊಂಡಿದ್ದರೆಂದು ಅವರ ಶಿಷ್ಯರಾದ ವ್ಯಾಸರಾಯರು ವರ್ಣನೆಮಾಡಿರುವರು.[3] ಉತ್ತರಾದಿ ಮಠದ ರಘುನಾಥತೀರ್ಥರು ಇವರ ಪಾಂಡಿತ್ಯಕ್ಕೆ ಬೆರಗಾಗಿ ಇವರನ್ನು 'ಶ್ರೀಪಾದರಾಜ'ರೆಂದು ಸ್ತೋತ್ರಮಾಡಿರುವರು. ಸಂಚಾರ ಮುಗಿಸಿಕೊಂಡು ಇವರು ಮೈಸೂರು ದೇಶದ ಮುಳುಬಾಗಿಲಿನಲ್ಲಿ ಹೋಗಿ ನೆಲೆಸಿದರು. ಅಲ್ಲಿಯ ನೃಸಿಂಹ ತೀರ್ಥದಲ್ಲಿ ಭಾಗೀರಥಿಯನ್ನು ತರಿಸಿದರು. ಅಲ್ಲಿ ಇವರು ಶಿಷ್ಯರಿಗೆ ಪಾಠಹೇಳುತ್ತಿದ್ದಾಗ ಬಾಲ ಸನ್ಯಾಸಿಗಳಾದ ವ್ಯಾಸರಾಜರು ಇವರಲ್ಲಿ ಬಂದದ್ದು ಬಹುಕಾಲ ಮದ್ವಶಾಸ್ತ್ರ ವ್ಯಾಸಂಗಮಾಡಿದರು. ವ್ಯಾಸರಾಜರನ್ನು ಅಜಗರವೊಂದು ನುಂಗಲೆತ್ನಿಸಿದಾಗ ಇವರು ಅದನ್ನು ಬಿಡಿಸಿದರೆಂದು ವಿಜಯದಾಸರು ಸ್ತೋತ್ರಮಾಡಿದ್ದಾರೆ.[4] ನ್ಯಾಯ ಸುಧೆಯೆಂಬ ಅತಿ ಪ್ರಸಿದ್ಧವಾದ ಮಾಧ್ವ ಗ್ರಂಥಕ್ಕೆ ಇವರು "ವಾಗ್ವಜ್ರ"ವೆಂಬ ವ್ಯಾಖ್ಯಾನವನ್ನು ರಚಿಸಿದರು. ಆ ನಂತರ ಇವರು ವ್ಯಾಸರಾಜರನ್ನು ಚಂದ್ರಗಿರಿಯ ನರಸಿಂಹನ ಆಸ್ಥಾನಕ್ಕೆ ಕಳುಹಿಸಿದರು. ಇವರಿಗೆ ರಂಗವಿಠಲನು ಸಂಪುಟದಲ್ಲಿ ಒಲಿದಿದ್ದರಿಂದ ಇವರು ರಚಿಸಿರುವ ಕನ್ನಡ ಕೃತಿಗಳಿಗೆ "ರಂಗವಿಠಲ"ನೆಂಬ ಅಂಕಿತ ಹಾಕಿದ್ದಾರೆ.

ಶ್ರೀಪಾದರಾಜರು ಕನ್ನಡ ದಾಸ ಸಾಹಿತ್ಯಪೋಷಣೆಗೆ ಮುಖ್ಯಕಾರಣರು. ಇವರ ಪದಗಳು ಹೆಚ್ಚಾಗಿ ಸಿಕ್ಕಿಲ್ಲ. ಇವರ ಪದಗಳೆಲ್ಲ ರಸ ಪುಷ್ಟವಾಗಿವೆ; ಶೈಲಿಯು ಸರಳವಾಗಿದ್ದು ಮನ ನಾಟುವಂತಿದೆ, ಕನ್ನಡ ಭಾಷೆಯು ಬಹಳ ಲಲಿತವಾಗಿದ್ದರೂ ಬಿಕ್ಕಟ್ಟಾಗಿದೆ. ಅಲಂಕಾರ ಜೋಡಣೆಯು ಸಂದರ್ಭೋಚಿತವಾಗಿದೆ. ಇವರು ರಚಿಸಿರುವ ಪದಗಳಲ್ಲಿ ದೈನ್ಯವೂ, ದೇವರೊಡನೆ ಸರಸವೂ, ಭಗವನ್ಮಹಿಮಾ ವರ್ಣನೆಯೂ ಚೆನ್ನಾಗಿ ಚಿತ್ರಿತವಾಗಿದೆ. ಬರಿಯ ಬಿಡಿ ಪದಗಳಲ್ಲದೆ ಇವರು ಗೋಪೀಗೀತಾ, ವೇಣುಗೀತಾ, ಭ್ರಮರ ಗೀತಾ, ಶ್ರೀಲಕ್ಷ್ಮೀನರಸಿಂಹ ಪ್ರಾದುರ್ಭಾವ ದಂಡಕ, ರುಕ್ಮಿಣಿ ಸತ್ಯಭಾಮಾ ವಿಲಾಸ ಮತ್ತು ಮದ್ವನಾಮ' – ಈ ಕನ್ನಡ ಕಾವ್ಯಗಳನ್ನು ರಚಿಸಿದ್ದಾರೆ. ಇವರಿಂದ ಪೋಷಿತವಾದ ಕನ್ನಡ ದಾಸಸಾಹಿತ್ಯ ಸುಮಾರು ನೂರಿಪ್ಪತ್ತು ವರ್ಷಗಳು ಅವ್ಯಾಹತವಾಗಿಸಾಗಿ ಚೆನ್ನಾಗಿ ಪಸರಿಸಿ, ಅತ್ಯಂತ ತೇಜಸ್ವಿಗಳಾದ ಹರಿದಾಸರುಗಳನ್ನು ಒಟ್ಟಿಗೆ ನೀಡಿತು. ಇವರು ಕ್ರಿ.ಶ. 1480ರ ಸುಮಾರಿಗೆ ಮುಳಬಾಗಿಲಿನಲ್ಲಿ ಕಾಲವಾದರು. ಇವರು 'ಧ್ರುವಾಂಶ'ರೆಂದು ಅಭಿಜ್ಞರ ಮತ.

---

3 "ಮಹಿಮೆ ಸಾಲದೇ ಇಷ್ಟೇ ಮಹಿಮೆ ಸಾಲದೆ |
ಅಹಿಶಯನನ ಒಲುಮೆಯಿಂದ ಮಹಿಯೊಳೆಮ್ಮ ಶ್ರೀಪಾದರಾಜರ ||
ಮುತ್ತಿನ ಕವಚ ಮೇಲ್ಕುಲಾವಿ ರತ್ನ ಕೆತ್ತಿದ ಕರ್ಣಕುಂಡಲ ||
ಕಸ್ತೂರಿ ತಿಲಕ ಶ್ರೀಗಂಧ ಲೇಪನ ವಿಸ್ತಾರದಿಂದ ಮೆರೆದು ಬರುವ"

4 "ಶಿರಿನಾರಾಯಣಯೋಗಿಯು ವ್ಯಾಸಮುನಿಗೆ ಬಂದ ||
ಉರುಗ ಬಾಧೆಯ ಕಳೆದು ಪಾಲಿಸಿದರು ಗಡಾ" ||

ii. ಶ್ರೀ ವ್ಯಾಸರಾಜರು.

ವ್ಯಾಸರಾಜರು ವೈದಿಕ ಮತ್ತು ದಾಸಪರಂಪರೆಯಲ್ಲೂ ಶ್ರೀಪಾದರಾಜರ ಶಿಷ್ಯರು. ಪುರಂದರದಾಸರು ಮತ್ತು ವಿಜಯದಾಸರು ಇವರ ಚರಿತ್ರೆಯನ್ನು ಪದ್ಯ ಮತ್ತು ಸುಳಾದಿಗಳಲ್ಲಿ ರಚಿಸಿದ್ದಾರೆ. ಸೋಮನಾಥನೆಂಬ ಕವಿಯು ಇವರ ಚರಿತ್ರೆಯನ್ನು ಸಂಸ್ಕೃತದಲ್ಲಿ 'ವ್ಯಾಸಯೋಗಿಚರಿತೆ' ಎಂಬ ಹೆಸರಿನ ಕಾವ್ಯವಾಗಿ ರಚಿಸಿದ್ದಾನೆ. ಹರಿಭಕ್ತ ಪ್ರಹ್ಲಾದನು ತ್ರೇತಾಯುಗದಲ್ಲಿ ವಾನರ ಸೈನ್ಯದಲ್ಲಿ ಕಪಿಯಾಗಿ ಹುಟ್ಟಿ ರಾಮಸೇವೆ ಮಾಡಿದನು.

ದ್ವಾಪರಾಯುಗದಲ್ಲಿ ಬಾಹ್ಲೀಕರಾಗಿ ಹುಟ್ಟಿ ಕೌರವರ ಕಡೆ ಇದ್ದು ಮಹಾಭಾರತ ಯುದ್ಧದಲ್ಲಿ ವಾಯುದೇವರ ಅಂಶಭೂತರಾದ ಭೀಮಸೇನದೇವರನ್ನು ಕೇಳಿಕೊಂಡು ಅವರಿಂದಲೇ ಹತನಾದನೆಂದು ಆಚಾರ್ಯರು 'ಮಹಾಭಾರತ ತಾತ್ಪರ್ಯ ನಿರ್ಣಯ'ದಲ್ಲಿ ಹೇಳಿರುವರು. ಸಾಯುವಾಗ ಬಾಹ್ಲೀಕರಾಜನು 'ಕಲಿಯುಗದಲ್ಲಿ ಮತ್ತೆ ಹುಟ್ಟಿ ಹರಿಸೇವೆ ಮಾಡುವಂತೆ' ಅನುಗ್ರಹಿಸಬೇಕೆಂದು ಭೀಮಸೇನದೇವರನ್ನು ಕೇಳಿಕೊಂಡನೆಂದೂ, ಪ್ರಹ್ಲಾದರಾಜನ ರೂಪದಲ್ಲೇ ಹರಿವರ್ಷಖಂಡದಲ್ಲಿ ನರಸಿಂಹದೇವರ ಪೂಜೆಮಾಡುವಾಗ, ನಾರದರನ್ನು ಕಂಡು ಕಲಿಯುಗದಲ್ಲಿ ಹುಟ್ಟಿ ಕೃಷ್ಣಾರಾಧನೆ ಮಾಡಬಯಸಿದನೆಂದೂ, ಆದ್ದರಿಂದಲೇ ಕಲಿಯುಗದಲ್ಲಿ ವ್ಯಾಸರಾಜರಾಗಿಯೂ ರಾಘವೇಂದ್ರಸ್ವಾಮಿಗಳಾಗಿಯೂ, ಅವತರಿಸಿದನೆಂದೂ, ಶಂಖುಕರ್ಣನೆಂಬ ದೇವತೆಯೇ ಪ್ರಹ್ಲಾದರಾಜನ ಪೂರ್ವರೂಪವೆಂದೂ ಪುರಂದರ–ವಿಜಯದಾಸರುಗಳು ಅಭಿಪ್ರಾಯಪಟ್ಟಿದ್ದಾರೆ.[5] ವ್ಯಾಸರಾಜರಿಗೆ ಆಶ್ರಮ ಗುರುಗಳಾದ

ರಾಗ–ಪೂರ್ವಿ. ತಾಳ–ಆಟ.

5. ವ್ಯಾಸರಾಯರ ಸೇವೆ ಲೇಸಾಗಿ ಮಾಡಲು ದಾಸನೆಂದೆನಿಸಿಕೊಂಬ |

★ ★ ★ ★ ★ ★

ಭೂಪಾಳಿ.

ವ್ಯಾಸರಾಜರ ಭಜಿಸಿರೋ |

★ ★ ★ ★ ★ ★

ಬಂದ ನಾರದಗೆ ಪ್ರಹ್ಲಾದದೇವನು ಎರಗಿ
ನಿಂದ ಕರಗಳ ಮುಗಿದು ತ್ರಾ ಹಿ ತ್ರಾಹಿ ಎಂದು |
ಒಂದೊಂದು ವಾಕ್ಯಗಳಿಂದ ಕೊಂಡಾಡಿ ಬೆಸೆಗೊಂಡನಿಮ್ಮಯ ದರುಶನ ||೪ ||

★ ★ ★ ★ ★ ★

ಬ್ರಹ್ಮಣ್ಯತೀರ್ಥರು ಬದರಿಯಲ್ಲಿ ನಾರಾಯಣ ದೇವರಿಂದ ಪುತ್ರವರವನ್ನು ಪಡೆದರು.[6] ಆ ಪ್ರಕಾರವೇ ಮೈಸೂರು ದೇಶದ ಬನ್ನೂರೆಂಬ ಗ್ರಾಮದಲ್ಲಿ ವೃದ್ಧ ದಂಪತಿಗಳಲ್ಲಿ ಮಕ್ಕಳಾಗುವಂತೆ ಅನುಗ್ರಹಿಸಿ, ಅವರಲ್ಲಿ ಹುಟ್ಟಿದ ಮಗುವನ್ನು ಪಡೆದು ತಾವೇ ಗೋಕ್ಷೀರದಿಂದ ಸಾಕಿ 'ಯತಿರಾಜ'ನೆಂದು ಹೆಸರಿಟ್ಟರು. ವ್ಯಾಸರಾಜರ ಜನ್ಮ ಕ್ರಿ.ಶ. 1441ರಲ್ಲಿ ಆಗಿರಬಹುದೆಂದು ಇತಿಹಾಸ ಸಂಶೋಧಕರ ಅಭಿಪ್ರಾಯ.[7]

ಯತಿರಾಜರಿಗೆ ಐದನೆಯವಯಸ್ಸಿನಲ್ಲೇ ಉಪನಯನವಾಯಿತು. ಇವರ ಅಲೌಕಿಕ ಪ್ರತಿಭೆ ಬಾಲ್ಯದಲ್ಲೇ ಪ್ರಕಾಶಕ್ಕೆಬಂದಿತು. ಮಧ್ವಮತದ ತತ್ವಗಳ ಸಂಗ್ರಹವನ್ನು ಒಂದೇ ಶ್ಲೋಕದಲ್ಲಿ [8] ವ್ಯಾಸರಾಜರು ಬಾಲ್ಯದಲ್ಲೇ ಸಂಗ್ರಹಿಸಿದ್ದರೆಂಬ ಐತಿಹ್ಯವಿದೆ. ಇವರಿಗೆ

ಇಕ್ಕೆಲರು ಸಹಜ ಜನಿಸುವ ವೃತ್ತಾಂತ ಅಕ್ಕಟ ಖನೆಂಬೆ ವೃಕೋದರನಿಂದ ದೇಹವನು
ಬಿಡುವಾಗ ಬಾಹ್ಲೀಕರಾಯನಾಗಿ ಪುಟ್ಟಿದ್ದ ಪ್ರಹ್ಲಾದನು
ಉಕುತಿಯಲಿ ಪೊಗಳಿ ವರವನ್ನು ಬೇಡಿದನು। ವೈದಿಕಮಾರ್ಗವನ್ನೆಧರಿಸಿ ||
ಮುಕುತಿಯನು ಸಾಧಿಸಲು ಕಲಿಯುಗದೊಳಗೆ ನಿಮ್ಮ
ಪೂಜಕನಾಗಿ ಬಾಳುವನೆಂದು ತಲೆವಾಗೆ
ಭಕುತಿಗೆ ಮೆಚ್ಚಿ ಸಟೆಯೆಂದಮಾತಿಗೆ ಇಂದು
ಪ್ರಕಟವಾಯಿತು ಧರೆಯೊಳು ||೫ || – ವಿಜಯದಾಸರು.

ರಾಗ–ಸೌರಾಷ್ಟ್ರ ತಾಳ–ಛಾಪು.

6. ಗುರುವ್ಯಾಸರಾಯರ ಮಹಿಮೆಗಳ ಕೇಳಿ |
ಹರಷದಿಂ ಕೊಂಡಾಡಿ ನಲಿದಾಡಿ ಜನರು |
ಅಂದು ಬ್ರಹ್ಮಣ್ಯತೀರ್ಥರಿಗೆ ಬದರಿಯಲಿ
ಮುದದಿಂದಲಿ ನರನಾರಾಯಣರು।
ಕಂದನಾ ಕೊಡುವೆನೆಂದು ಭಿಕ್ಷೆಯನೀಡೆ।
ತಂದೆ ಮಧ್ವೇಶ ನಿನ ದಯವಿರಲಿ ಎಂದೂ || ೧ ||

–ಪುರಂದರದಾಸರು.

7. Vyasa yogi charita - Edited by Sri. B. Venkoba Rao.

8. ಶ್ರೀಮನ್ಮಧ್ವಮತೇ ಹರಿಃಪರತರಃ ಸತ್ಯಂ ಜಗತ್ತತ್ತ್ವತೋ
ಭೇದೊ ಜೀವಗಣಾ ಹರೇರನುಚರಾ ನೀಚೋಚ್ಚಭಾವಂ ಗತಾಃ |
ಮುಕ್ತಿಃ ನೈಜಸುಖಾನುಭೂತಿರಮಲಾಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿ ತ್ರಿತಯಂ ಪ್ರಮಾಣಮಖಿಲಾಮ್ನಾಯೈಕ ವೇದ್ಯೋ ಹರಿ ಃ ||

ಏಳನೆಯ ವಯಸ್ಸಿನಲ್ಲಿಯೇ ಆಶ್ರಮವಾಯಿತು. ಕ್ರಿ.ಶ. 1467ರ ವರೆಗೆ ಇವರು ಬ್ರಹ್ಮಣ್ಯ ತೀರ್ಥರಲ್ಲಿ ವ್ಯಾಸಂಗ ಮಾಡುತ್ತಿದ್ದು ಆ ಮೇಲೆ ಉತ್ತರದೇಶ ಸಂಚಾರಮಾಡಿ ಕಾಶಿ ಗದಾಧರ ಮಿಶ್ರ, ಪಕ್ಷಧರ ಮಿಶ್ರ ಮೊದಲಾದವರನ್ನು ಜಯಿಸಿದರು. ಆಚಾರ್ಯರ ಪರಂಪರೆಯಲ್ಲಿ ಟೀಕಾಕೃತ್ಪಾದರಾದ ಮೇಲೆ ಬಂದ ವಿದ್ಯಾಧಿರಾಜರಿಂದ ಎರಡು ಕವಲೊಡೆಯಿತು. ರಾಜೇಂದ್ರರ ಕವಲಿನಲ್ಲಿ ಅವರ ಶಿಷ್ಯರಾದ ಜಯಧ್ವಜತೀರ್ಥರು ಬಂಗಾಳ ಮತ್ತು ವೃಂದಾವನ ಪ್ರದೇಶದಲ್ಲಿ ವೈಷ್ಣವ ಮತ ಪ್ರಚಾರಮಾಡಿದವರಲ್ಲದೆ ಅಲ್ಲಿ ಲಕ್ಷ್ಮೀತೀರ್ಥರೆಂಬುವವರಿಗೆ ಆಶ್ರಮ ಕೊಟ್ಟರು. ಲಕ್ಷ್ಮೀತೀರ್ಥರ ಪರಂಪರೆಯಲ್ಲಿ ಬಂದವರೇ ಕೃಷ್ಣಚೈತನ್ಯರು. ವ್ಯಾಸರಾಜರು ಈ ವೈಷ್ಣವ ಪಂಥಕ್ಕೆ ವಿಶೇಷ ಪ್ರೋತ್ಸಾಹವಿತ್ತರು. ಆದ್ದರಿಂದ ಚೈತನ್ಯಮತಕ್ಕೆ ಮಧ್ವಮತವೇ ಮೂಲವೆನ್ನಬಹುದು.[9] ವ್ಯಾಸರಾಜರಾದರೂ ಈ ರಾಜೇಂದ್ರರ ಪರಂಪರೆಯಲ್ಲಿ ಬಂದವರೇ. ಶ್ರೀಪಾದರಾಜರ

---

9. It was to the **Maddhi** sect that Bengal owes her great Vaishnava faith, the culminating point of which was reached in the life of Chaitanya. We find in the 'Bhakti Ratnakara' the Vishnupuri, a disciple of Jayadhama, the 10th leader of this sect, popularised the Bhagavatha amongst the Bengalis about the iddle of the 13th Century by his celebrated sanskrit work called 'Bhakti Ratnavali'. This seems to be the first impetus to Vaisnavism that came from the **Maddhi** order in Bengal.
   The 13th Century leader of **Maddhi** sect was Lakshimi Tirtha.
   — D.C. Sen; Chaitanya & his Copanions. P.297

ii The origin of the teaching of the (Chaitanya) sect have been briefly indicated in the first chapter. The principal factor in the development of Vaishnavism in Bengal seems to have been Madhwaite Vishnupuri in the 13th Century and Madhavendrapuri in the 15th century both Madhawas were influential in stimulating the Vaishnava faith. The one by his celebrated work Bhakti Ratnavali made the Bhagavata purana popularly known while the puri helped materially to spread the Krishna cult and gained numerous discipless Among these disciples of Madhavendra puri were all the men who had greatest influence on Chaitanya's life........
   It seems clear therefore that Chaitanya began his religious life as a Madhwa. —Melville T. Kennedy; The Chaitanya movement.p.88.

iii The Sanyasi who Performed the right of initiation (to Chaitanya) was an ascetic named Keshava Bharati who like Iswara Puri, Chaitanya's other Guru belonged to the Madhwasect —ibid p.29.

iv The sect most influential in Bengal before Chaitanya and with which he seems to have had most connection was the Madhwas - ibid.p.10.

ವಿದ್ಯಾಗುರುಗಳಾದ ವಿಬುಧೇಂದ್ರ ತೀರ್ಥರು ವಿದ್ಯಾಧಿರಾಜರ ಎರಡನೆಯ ಕವಲಾದ ಕವೀಂದ್ರರ ಪರಂಪರೆಗೆ ಸೇರಿದವರು. ವ್ಯಾಸರಾಜರು ಆಮೇಲೆ ಮುಳಬಾಗಿಲಿನಲ್ಲಿ ನೆಲೆಇದ್ದ ಶ್ರೀಪಾದರಾಜರಲ್ಲಿ ಬಹುಕಾಲ ಮಧ್ವಶಾಸ್ತ್ರವನ್ನು ಅಭ್ಯಾಸಮಾಡಿದರು. ಹಾಗೆಯೇ ಕನ್ನಡ ದಾಸಸಾಹಿತ್ಯ ಪರಂಪರೆಯನ್ನು ಇವರು ಶ್ರೀಪಾದರಾಜರಿಂದ ಬೆಳೆಸಿದರು. ಸಂಪುಟದಲ್ಲಿದ್ದ ಭಗವನ್ಮೂರ್ತಿ ಇವರ ಮುಂದೆ ನರ್ತನಮಾಡುತ್ತಾ ದರ್ಶನ ಕೊಟ್ಟಿದ್ದರಿಂದ ಇವರು "ಶ್ರೀ ಕೃಷ್ಣ" ಎಂಬ ಅಂಕಿತದಿಂದಲೇ ಕನ್ನಡದಲ್ಲಿ ಪದಗಳನ್ನು ರಚಿಸಿದರು. ಇವರ ಗುರುಗಳಾದ ಶ್ರೀಪಾದರಾಜರ ಆಜ್ಞೆಯ ಮೇರೆಗೆ ಕ್ರಿ.1476ರ ಸುಮಾರಿಗೆ ಚಂದ್ರಗಿರಿಗೆ ಹೋಗಿ ಅಲ್ಲಿ ಸಾಳುವ ನರಸಿಂಹನಿಂದ ವಿಶೇಷವಾಗಿ ಸನ್ಮಾನಿತರಾದರು. 1486 ರಿಂದ 1498ರ ವರೆಗೆ ತಿರುಪತಿ ವೆಂಕಟೇಶ ದೇವಸ್ಥಾನದ ಸರ್ವಾಧಿಪತ್ಯವನ್ನು ವಹಿಸಿಕೊಂಡು ದೇವರನ್ನು ಅರ್ಚಿಸಿದರು. 1498ರಲ್ಲಿ ಸಕಲರಾಜಮರ್ಯಾದೆಗಳೊಡನೆ ವಿಜಯನಗರಕ್ಕೆ ಹೋದರು. ಅಲ್ಲಿ ಆಳುವ, ತುಳುವ ಮನೆತನದ ರಾಜರುಗಳಿಂದ ಪೂಜಿತರಾದರು, ಕೃಷ್ಣದೇವರಾಯ ಇವರನ್ನು ವಿಶೇಷವಾಗಿ ಸನ್ಮಾನಮಾಡಿದ. 1500ರಲ್ಲಿ ದಕ್ಷಿಣಕನ್ನಡದಲ್ಲೆಲ್ಲಾ ಸಂಚರಿಸಿ ಧರ್ಮ ಪ್ರಚಾರಮಾಡಿ ಆ ಪ್ರಚಾರದ ಸಂಕೇತವಾಗಿ 732 ಪ್ರಾಣದೇವರ ವಿಗ್ರಹವನ್ನು ಪ್ರತಿಷ್ಠಿಸಿದರು. ವಿಜಯನಗರದಲ್ಲಿ ರಾಜಗುರುಗಳಾಗಿದ್ದಾಗ ಅಲ್ಲಿ ದೊಡ್ಡ ವಿದ್ಯಾಪೀಠವನ್ನು ಸ್ಥಾಪಿಸಿ ಸಹಸ್ರಾರು ವಿದ್ಯಾರ್ಥಿಗಳಿಗೆ ಜ್ಞಾನದಾನ ಮಾಡಿದರು. ವಿಜಯೀಂದ್ರ, ವಾದಿರಾಜ, ಗೋವಿಂದವಡೆಯರೇ ಮೊದಲಾದವರು ಇವರ ಶಿಷ್ಯರು. ವಿಜಯನಗರದ ಆಸ್ಥಾನಕ್ಕೆ ವಲ್ಲಭಾಚಾರ್ಯರು ಬಂದಾಗ ಇವರು ಅವರಿಗೆ ಪಂಡಿತಯೋಗ್ಯವಾದ ಸನ್ಮಾನಮಾಡಿ ಕಳುಹಿಸಿದರು. ಬಸವಾಭಟ್ಟ, ಲಿಂಗಣ್ಣಮಿಶ್ರ ಮೊದಲಾದ ಶೈವವಾದಿಗಳನ್ನು ಗೆದ್ದರು. ಆಚಾರ್ಯ ಭಾಷ್ಯಕ್ಕೆ ಜಯತೀರ್ಥರಿಂದ ರಚಿತವಾದ ತತ್ತ್ವಪ್ರಕಾಶಿಕೆಗೆ ಚಂದ್ರಿಕೆಯೆಂಬ ಅಮೋಘ ವ್ಯಾಖ್ಯಾನ ರಚಿಸಿದರು. ಇದಲ್ಲದೇ ನ್ಯಾಯಾಮೃತ, ತರ್ಕತಾಂಡವವೆಂಬ ಇನ್ನೆರಡು ಪ್ರೌಢ ಗ್ರಂಥಗಳನ್ನೂ ರಚಿಸಿದರು. ಸಾರ್ವಭೌಮಕವಿ ರಚಿತ ವೇದಾಂತ ಸಂಗ್ರಹ ಗ್ರಂಥಕ್ಕೆ ಖಂಡನವನ್ನು ಮಾಡಿದರು. ಇವರ ವಾದಿದಿಗ್ವಿಜಯ ಮತ್ತು ಜ್ಞಾನ ಪ್ರಚಾರ ಅನ್ಯಾದೃಶ್ಯವಾದುದು. ರಾಜಕೀಯದಲ್ಲಿ ಇವರ ಪಾತ್ರ ಅತ್ಯಂತ ಹಿರಿದಾದುದು. ಇವರು ಕೃಷ್ಣದೇವರಾಯನಿಗೆ ಮುಖ್ಯಗುರುಗಳಾಗಿದ್ದುದು ಮಾತ್ರವಲ್ಲದೆ, ರಾಜಕಾರ್ಯದಲ್ಲಿ ಅವನಿಗೆ ಸಲಹೆ ನೀಡುತ್ತಿದ್ದರು. ಬಿಜಾಪುರ, ದೆಹಲಿ ಮೊದಲಾದ ತುರುಕ ರಾಜರ ರಾಯಭಾರಿಗಳೂ, ಪೋರ್ಚುಗೀಸ್ ಮೊದಲಾದ ವಿದೇಶಿ ರಾಯಭಾರಿಗಳೂ, ಇವರಿಗೆ ನತಮಸ್ತಕರಾಗಿ ಸನ್ಮಾನ ಮಾಡುತ್ತಿದ್ದರು. ಕೃಷ್ಣದೇವರಾಯ ಇವರಿಗೆ ರತ್ನಾಭಿಷೇಕಮಾಡಿದ, 1524 ರಲ್ಲಿ ಕೃಷ್ಣದೇವರಾಯನಿಗೆ ಬಂದ

ಕುಹಯೋಗವನ್ನಿವರು ಪರಿಹರಿಸಿದರು. ಹರಿದಾಸುರುಗಳಾದ ಪುರಂದರ, ಕನಕ ದಾಸರುಗಳು ಇವರ ಶಿಷ್ಯರುಗಳು. ಕನ್ನಡ ಮಹಾಭಾರತ ಕರ್ತೃವಾದ ಗದುಗಿನ ನಾರಾಯಣಪ್ಪನು ತಾನು ರಚಿಸಿದ ಮಹಾಭಾರತವನ್ನು ಇವರಿಗೆ ತೋರಿಸಿ ಇವರ ಮೆಚ್ಚುಗೆಯನ್ನು ಪಡೆದ. ಪುರಂದರ ದಾಸರಂತೂ ಇವರಿಂದಲೇ ದಾಸದೀಕ್ಷೆ ಪಡೆದು 'ಪುರಂದರ ವಿಠಲ'ನೆಂಬ ಅಂಕಿತವನ್ನು ಹೊಂದಿ ಕನ್ನಡದಾಸಸಾಹಿತ್ಯದ ಆಚಾರ್ಯ ಪುರುಷರೆನಿಸಿದರು. ವ್ಯಾಸರಾಜರೇ ತಮಗೆ ಉದ್ಧಾರದ ದಾರಿ ತೋರಿ, ಭಗವತ್ತತ್ತ್ವ ಉಪದೇಶಮಾಡಿ, ಅಂಕಿತಕೊಟ್ಟರೆಂದು ಪುರಂದರದಾಸರೇ ಹೇಳಿಕೊಂಡಿದ್ದಾರೆ. [10]

---

10. ವ್ಯಾಸರಾಯರ ಚರಣಕಮಲ ದರುಶನವೆನಗೆ |
ಏಸುಜನ್ಮದ ಸುಕೃತ ಫಲದಿ ದೊರಕಿತೋ ಎನ್ನ ||
ಸಾಸಿರಕುಲಕೋಟಿ ಪಾವನ್ನವಾಯಿತೋ |
ಶ್ರೀಶನ್ನ ಭಜಿಸುವುದಕಧಿಕಾರಿ ನಾನಾದೆ ||
ದೋಷ ವಿರಹಿತನಾದೆ ಪುರಂದರವಿಠಲನ್ನ |
ದಾಸರಾ ಕರುಣವು ಎನ್ನಮೇಲೆ ಇರಲಾಗಿ ||
ಮಟ್ಟತಾಳ
ಗುರುವುಪದೇಶವಿಲ್ಲದ ಮಂತ್ರ | ಗುರುವುಪದೇಶವಿಲ್ಲದ ಕ್ರಿಯೆಗಳು
ಗುರುವುಪದೇಶವಿಲ್ಲದ ಭಕ್ತಿ | ಉರುಗನ ಉಪವಾಸದಂತೆ ಕಾಣಿರೋ
ಗುರು ವ್ಯಾಸರಾಯರು ಕರುಣದಿಂದೆನಗೆ |
ವರಮಹಾಮಂತ್ರಗಳ ಉಪದೇಶಿಸಿದರು
ಪುರಂದರ ವಿಠಲಪರನೆಂದರುಹಿ ದುರಿತ ಭಯಗಳೆಲ್ಲ ಪರಿಹರಿಸಿದರಾಗಿ ||
ರೂಪಕತಾಳ
ಅಂಕಿತವಿಲ್ಲದ ದೇಹನಿಷಿದ್ಧ | ಅಂಕಿತವಿಲ್ಲದ ಕಾಯಶೋಭಿಸದು
ಅಂಕಿತವಿಲ್ಲದೆ ಇರಬಾರದೆಂದು ಎನಗೆ ಚ | ಕ್ರಾಂಕಿತವೆನಗಿತ್ತ
ಪಂಕಜನಾಭ ಪುರಂದರ ವಿಠಲನ್ನ | ಅಂಕಿತವೆನಗಿತ್ತ ಗುರುವ್ಯಾಸಮುನಿರಾಯ ||
ತ್ರಿಪುಟತಾಳ
ಶೇಷಾವೇಶ ಪ್ರಹ್ಲಾದ ಅವತಾರವೆನಿಸಿದೆ |
ವ್ಯಾಸರಾಯರೆಂಬ ಪೆಸರ ನೀನಾಂತೆ |
• • • • • • •
ಸಿರಿನಾರಾಯಣ ಮುನಿಯಾದ ಶ್ರೀಪಾದರಾಯರಲ್ಲಿ |
ವರ ವಿದ್ಯಾಭ್ಯಾಸವನೆ ಮಾಡಿದ ನೀನು
ಧರೆಯೊಳಗೆ ವಿಜಯೀಂದ್ರ ವಾದಿರಾಜರೆಂಬ |
ಪರಮ ಶಿಷ್ಯರನೆ ಪಡೆದು ನೆರೆದೆ ಕೀರುತಿಯ
ಸುರೇಂದ್ರ ಪುತ್ರಭಿಕ್ಷವಬೇಡೆ ವಿಜಯೀಂದ್ರನ್ನ
ಕರುಣಿಸಿ ಮಠವನುದ್ಧರಿಸಿದ ಕಾರಣ
ಗುರು ವ್ಯಾಸರಾಯರೇ ಪರಮ ಗುರುಗಳು
ಪುರಂದರವಿಠಲನೇ ಪರದೈವ ಕಾಣಿರೋ |

ಇಂತಹ ಮಹೋನ್ನತ ವ್ಯಕ್ತಿತ್ವತೋರಿದ ವ್ಯಾಸರಾಜರನ್ನುಅವರ ಗುರುಗಳೇ ಕೊಂಡಾಡಿದ್ದಾರೆ.[11] ಇವರು 1539ರ ವಿಳಂಬಿ, ಫಾಲ್ಗುಣ ಕೃಷ್ಣಚತುರ್ದಶೀ ಪರಂಧಾಮವ್ಯೆದಿದರು. ಈ ಅಂಶವು ಪುರಂದರ ದಾಸರರಿಂದ ವರ್ಣಿತವಾಗಿದೆ.[12]

ಸಂಸ್ಕೃತ ವಿದ್ಯೆಗೆ, ಮಧ್ವಾಶಾಸ್ತ್ರಕ್ಕೆ, ರಾಜಕಾರಣಕ್ಕೆ, ಶಿಷ್ಯೋದ್ಧಾರಕ್ಕೆ ವ್ಯಾಸರಾಜರು ಎಷ್ಟು ಪ್ರೋತ್ಸಾಹಕೊಟ್ಟರೋ ಕನ್ನಡ ದಾಸಸಾಹಿತ್ಯಕ್ಕೂ ಅಷ್ಟೇ ಮಹತ್ವವನ್ನು ಕೊಟ್ಟರು. ಪುರಂದರದಾಸರು ಇವರಿಗೆ ಉಪಯೋಗಿಸಿದ 'ಪುರಂದರ ವಿಠಲನ್ನ ದಾಸರು' ಪುರಂದರವಿಠಲನ್ನಭಕ್ತರೊಳು ನಾಯಕನೆನಿಸಿಕೊಂಡೆ.' ಪುರಂದರ ವಿಠಲನ ದಾಸರೊಳಗಗ್ಗನೆನಿಸಿಕೊಂಡೆ' ' ಗುರುವ್ಯಾಸರಾಯರೇ ಪರಮಗುರುಗಳು' 'ಜ್ಞಾನಿಗಳರಸೆ ವ್ಯಾಸಮುನಿರಾಯ' 'ಶ್ರೀನಿವಾಸ ಪುರಂದರವಿಠಲ್ಲ ಆನಂದದಿಂದಲಿ ನಿನ್ನ ಮುಂದೆ ಗಾನಮಾಡುತ್ತ ಆಡುತಲಿಪ್ಪನು,' 'ಏಸುಮುನಿಗಳಿದ್ದೇನು ಮಾಡಿದರು ವ್ಯಾಸಮುನಿ ಮಧ್ವಮತವನುದ್ಧರಿಸಿದ' ' ಪುರಂದರವಿಠಲನರಿತೆ ಇವರಿಂದ' ಎಂಬೀ ವಿಶೇಷಣಗಳಿಂದ ಇವರು ಹರಿದಾಸ ಮಕುಟಮಣಿಗಳೆಂಬುದು ಅರ್ಥವಾಗುವುದು. ಇವರು ಭಗವದ್ದರ್ಶನ ಮಾಡಿದ ಮಹಾನುಭಾವರು. ಇವರು ಅನೇಕ ಮಹಿಮೆಗಳನ್ನು ತೋರಿಸಿರುವರು. ಭಗವಂತನ ದರ್ಶನಪಡೆದ ಇವರಿಗೆ ಈ ಮಹಿಮಾ ಪ್ರದರ್ಶನ ಅತಿಶಯವೇನಲ್ಲ.

ವ್ಯಾಸರಾಯರು ಕನ್ನಡ ದಾಸಸಾಹಿತ್ಯದಲ್ಲಿ, ಎಲ್ಲಾ ಭಾಗಗಳಲ್ಲೂ ಪರಿಪುಷ್ಟವಾದ ಸಾಹಿತ್ಯ ಒದಗಿಸುಕೊಟ್ಟಿರುತ್ತಾರೆ. ವೃತ್ತ ಪದ್ಯ, ಸಾಂಗತ್ಯ, ಸುಳಾದಿ ಮತ್ತು ಪದಗಳು— ಎಲ್ಲವನ್ನೂ ರಚಿಸಿರುತ್ತಾರೆ. ಭಗವಂತನ ಲೀಲಾವಿಲಾಸ ವರ್ಣನೆ. ಕೃಷ್ಣಲೀಲೆ, ಭಕ್ತನ ದೈನ್ಯ, ವೈರಾಗ್ಯ, ಸತ್ಕರ್ಮದ ಆವಶ್ಯಕತೆ. ಸಜ್ಜನ ಸಂಗ, ಧ್ಯಾನಾದಿಗಳ ವಿಷಯ, ಸಿದ್ಧಾಂತ ರೀತ್ಯ ಪ್ರಮೇಯಬದ್ಧ ಹರಿಪೂಜಾದಿಗಳು, ಭಗವಂತನ ಅನುಗ್ರಹಕ್ಕೆ ಮೊರೆ, ಆಚಾರ್ಯರ ಸ್ತೋತ್ರ, ಸಿದ್ಧಾಂತದ ದೀಕ್ಷೆ, ಶಿವ, ಗಣೇಶಾದಿಗಳ ಸ್ತೋತ್ರ, ಶಿಷ್ಯರಾದ

---

11 ಸಾಸಿರ ಜಿಹ್ವೆಗಳುಳ್ಳ ಶೇಷನೇ ಕೊಂಡಾಡಬೇಕು ||
ವ್ಯಾಸಮುನಿರಾಯ ಸನ್ಯಾಸದಿರವ ||

★ ★ ★ ★ ★ ★

ಹಗಲಿರುಳೆನ್ನದೆ ಹರಿಪಾದ ಪದ್ಮಯುಗಳನರ್ಚಿಸಿ |ಭಕ್ತಿಯಿಂದ
ರಘುಪತಿಭಜಕ ಬ್ರಹ್ಮಣತೀರ್ಥರ ಕುವರ | ರಂಗವಿಠಲನ
ಬಿಡೆ ಬಿಡೆನು ಎಂಬ ||

—ಶ್ರೀ ಪಾದರಾಜರು

12 ಚಿತ್ಯೈಸಿದ ವ್ಯಾಸರಾಜ | ಚಿತ್ತಜನ್ಯ್ಯನ ಸಭೆಗೆ ||

ಶ್ರೀ ಪುರಂದರವಿಠಲ

ಪುರಂದರದಾಸರ ಪ್ರಶಂಸೆ ಹೀಗೆ ಅವರ ಕೃತಿಗಳಲ್ಲಿ ಎಲ್ಲವು ಅಡಕವಾಗಿವೆ. ಇವರು ಮಾರ್ಗಪ್ರದರ್ಶನಮಾಡಿದ ರೀತಿಯಲ್ಲೇ ಮುಂದೆ ದಾಸಸಾಹಿತ್ಯವು ಎಲ್ಲಾ ಕ್ಷೇತ್ರಗಳಲ್ಲೂ ಬೆಳೆಯಿತು. ಇವರ ಶೈಲಿ, ಪದವಿನ್ಯಾಸ, ಅಲಂಕಾರಾದಿಗಳ ಪ್ರಯೋಗ. ಭಾವರಸ ಪುಷ್ಟಿ ಎಲ್ಲವೂ ಪರಿಪೂರ್ಣವಾಗಿದೆ. ಇವರ ಸಂಸ್ಕೃತ ಶಾಸ್ತ್ರಗ್ರಂಥಗಳಲ್ಲಿ ಎಂತಹ ಪ್ರೌಢಿಮೆಯಿದೆಯೋ, ಕನ್ನಡ ಭಾಷೆಯಲ್ಲಿ ಅಷ್ಟೇ ಸರಳತೆ ಇದೆ. ಇವರ ಕೃತಿಗಳಲ್ಲಿ ಭಗವಂತನಲ್ಲಿ ದೈನ್ಯ, ಸೌಜನ್ಯ, ತುಂಬಿ ತುಳುಕುತ್ತದೆ.

iii. ವಾದಿರಾಜರು

ವಿಜಯೀಂದ್ರರು ಮತ್ತು ವಾದಿರಾಜರು—ಇವರಿಬ್ಬರು ವ್ಯಾಸರಾಜರ ಶಿಷ್ಯರಲ್ಲಿ ಅತಿ ಪ್ರಸಿದ್ಧರು. ಶ್ರೀಮದಾಚಾರ್ಯರು ಉಡುಪಿಯಲ್ಲಿ ಶ್ರೀ ಕೃಷ್ಣ ಪ್ರತಿಷ್ಠೆ ಮಾಡಿದಮೇಲೆ ಆ ಕೃಷ್ಣನ ಪೂಜೆಗಾಗಿ ಎಂಟು ಜನಕ್ಕೆ ಆಶ್ರಮಕೊಟ್ಟರು. ಹಾಗೆ ಆಶ್ರಮ ಸ್ವೀಕರಿಸಿದವರಲ್ಲಿ ಆಚಾರ್ಯರ ತಮ್ಮಂದಿರಾದ ಶ್ರೀವಿಷ್ಣುತೀರ್ಥರೂ ಒಬ್ಬರು. ಶ್ರೀ ವಾದಿರಾಜರು ಇವರ ಪರಂಪರೆಯಲ್ಲಿ ಬಂದವರು. ಇವರ ಗುರುಗಳ ಹೆಸರು ಶ್ರೀ ವಾಗೀಶ ತೀರ್ಥರು. ದಕ್ಷಿಣ ಕನ್ನಡ ಜಿಲ್ಲೆಯ ಕುಂಭಕಾಶಿಯ ಹತ್ತಿರ ಹೂವಿನ ಕೆರೆ ಎಂಬ ಗ್ರಾಮದಲ್ಲಿ ವಾದಿರಾಜರು ಜನಿಸಿದರು. ಇವರು ಚಿಕ್ಕವರಿರುವಾಗಲೇ ಹೆಚ್ಚು ಮೇಧಾವಿಗಳಾಗಿದ್ದರು. ವಾಗೀಶ ತೀರ್ಥರಿಂದ ಆಶ್ರಮ ಪಡೆದ ಮೇಲೆ ಇವರು ವ್ಯಾಸರಾಯರ ಅಮಲ ಕೀರ್ತಿಯನ್ನು ಕೇಳಿ ಅವರಲ್ಲಿ ಹೋಗಿ ವಿಜಯೀಂದ್ರರೊಡಗೂಡಿ ಸಕಲ ಉದ್ಗ್ರಂಥಗಳನ್ನು ಚತುಷಷ್ಠಿ ಕಲೆಗಳನ್ನು ಅಭ್ಯಾಸಮಾಡಿದರು. ಇವರ ವಾಕ್ಚಾತುರ್ಯಪಾಂಡಿತ್ಯ; ಪ್ರತಿಭೆಯನ್ನು ನೋಡಿ ಕೃಷ್ಣದೇವರಾಯ ಇವರನ್ನು 'ಪ್ರಸಂಗಾಭರಣತೀರ್ಥ'ರೆಂದು ಕರೆದ. ವಿದ್ಯಾಭ್ಯಾಸ ಮುಗಿದಮೇಲೆ ಇವರು ವ್ಯಾಸರಾಜರಿಂದ ವ್ಯಾಸ ಮುಷ್ಟಿಕೆಗಳನ್ನು ಪಡೆದು ತಮ್ಮ ಸ್ಥಳವಾದ ಉಡುಪಿಗೆ ತೆರಳಿದರು.

ಉಡುಪಿಗೆ ಹೋದ ಮೇಲೆ ಇವರು ಉಡುಪಿಯ ಅಷ್ಟಮಠಗಳಲ್ಲಿ ಪರ್ಯಾಯ ಪೂಜಾ ಪದ್ಧತಿಯನ್ನೇರ್ಪಡಿಸಿ. ವಿಶೇಷ ಉತ್ಸವಾದಿಗಳ ವ್ಯವಸ್ಥೆ ಮಾಡಿದರು. ಕ್ರಿ. ಶ. 1532 –33 ರ ಸುಮಾರಿನಲ್ಲಿ ತಮ್ಮ ಪರ್ಯಾಯ ಕಾಲದಲ್ಲಿ ಇವರು ಗುರುಗಳಾದ ವ್ಯಾಸರಾಯರನ್ನೂ ವಿಜಯನಗರದ ಅರಸನಾದ ಅಚ್ಯುತದೇವಾರಾಯನನ್ನು ಉಡುಪಿಗೆ ಕರೆಸಿ ವಿಶೇಷ ಸನ್ಮಾನಮಾಡಿದರು. ಇವರ ಕಾಲದಲ್ಲಿ ಕೃಷ್ಣಚೈತನ್ಯರು ದಕ್ಷಿಣ ದೇಶದ ಸಂಚಾರ ಮಾಡುತ್ತಾ ಉಡುಪಿಗೆ ಬಂದು ಅಲ್ಲಿ ಬಹುಕಾಲವಿದ್ದು

ಮಧ್ವಸಿದ್ಧಾಂತ ರಹಸ್ಯಗಳನ್ನು ವಿಚಾರಮಾಡಿ ತಿಳಿದುಕೊಂಡರು.[13] ವಾದಿರಾಜರು ಸ್ವರ್ಣಕಾರರೇ ಮೊದಲಾದ ಕಡಿಮೆ ಜಾತಿಯವರಲ್ಲಿ ಅನುಗ್ರಹಮಾಡಿ, ಅವರಿಗೆ ಸಾಧನೆಗನುಕೂಲವಾಗುವಂತಹ ಅನೇಕ ಸೌಲಭ್ಯಗಳನ್ನೇರ್ಪಡಿಸಿದರು. ಇವರು ಭಾರತದಾದ್ಯಂತ ಸಂಚಾರಮಾಡಿ ತಿರುವಾಂಕೂರು, ಕೊಚ್ಚಿಗಳಲ್ಲಿ ಉತ್ತರ ಭಾರತದಲ್ಲೂ ವೈಷ್ಣವರ ವರ್ಚಸ್ಸನ್ನು ಹೆಚ್ಚಿಸಿದರು. ಬದರಿಗೆ ಹೋಗಿ ತಮ್ಮ ಯೋಗ ಸಾಮರ್ಥ್ಯದಿಂದ ವೇದವ್ಯಾಸರು, ನರನಾರಾಯಣರು ಮತ್ತು ಆಚಾರ್ಯರ ದರ್ಶನ ಮಾಡಿಕೊಂಡು. 'ನಾರಾಯಣ ಭೂತ'ನೆಂಬ ಬ್ರಹ್ಮರಾಕ್ಷಸನನ್ನು ವಶಪಡಿಸಿಕೊಂಡು ಬಂದರು. ಉತ್ತರ ಕನ್ನಡ ಜಿಲ್ಲೆಯಲ್ಲಿನ ಸೋದೆಯೆಂಬ ಪಾಳೆಯಪಟ್ಟಿನ ಅಧಿಪತಿ ಅರಸಪ್ಪ ನಾಯಕನಿಗೆ ಶತ್ರುಭಯವನ್ನು ತಪ್ಪಿಸಿ, ಶೈವವಾದಿಯನ್ನು ನಿಗ್ರಹಿಸಿ, ಸೋದೆಯಲ್ಲಿಯೇ ನೆಲೆಸಿದರು. ಮತ್ತೊಮ್ಮೆ ಸಂಚಾರಮಾಡುವಾಗ ಬೇಲೂರಿನಲ್ಲಿ ಬಹಳಕಾಲವಿದ್ದು ಚೆನ್ನಕೇಶವ ದೇವರನ್ನು ನಾನಾ ರೀತಿ ಸ್ತೋತ್ರ ಮಾಡಿರುವರು. ಅಲ್ಲಿ ವೈಕುಂಠದಾಸರು ಇವರೊಡನಿದ್ದು ಹರಿಭಜನೆ ಮಾಡುತ್ತಿದ್ದರು. ಅರಸಪ್ಪ ನಾಯಕನ ಸಹಾಯದಿಂದ ಸೋದೆಯಲ್ಲಿ ತ್ರಿವಿಕ್ರಮದೇವರನ್ನು ಪ್ರತಿಷ್ಠಾಪಿಸಿ ಫಾಲ್ಗುಣಮಾಸದಲ್ಲಿ ಆ ದೇವರಿಗೆ ರಥೋತ್ಸವಾದಿಗಳ ವ್ಯವಸ್ಥೆಮಾಡಿ ತಾವು ಸಶರೀರರಾಗಿಯೇ ಬೃಂದಾವನ ಪ್ರವೇಶಮಾಡಿದರು. ಕ್ರಿ ಶ. 1480 ರ ಸುಮಾರಿನಲ್ಲಿ ಉದಯಿಸಿದ ವಾದಿರಾಜರು 120 ವರ್ಷಗಳಷ್ಟು ಕಾಲ ದೇಹದಿಂದಿದ್ದು ಕ್ರಿ.ಶ 1600ರಲ್ಲಿ ಸಶರೀರರಾಗಿ ಬೃಂದಾವನ ಪ್ರವೇಶಮಾಡಿದರು.

ಪರಮಾತ್ಮನನ್ನು ಎಲ್ಲಾ ಸಾಧಕರೂ ಭಜಿಸುವರು. ಭಗವಂತನು ಸತ್, ಚಿತ್. ಆನಂದರೂಪಿಯೆಂದೂ ರಾಮಕೃಷ್ಣಾದ್ಯವತಾರನೆಂದೂ ಭಜಿಸುವುದು ಸಾಮಾನ್ಯ ಸಾಧಕರಿಗೆ ಸಾಧ್ಯ. ಹಯಗ್ರೀವಾದಿ ರೂಪಗಳನ್ನು ಉಪಾಸಿಸುವರು ಉತ್ತಮಾಧಿಕಾರಿಗಳು. ತ್ರಿವಿಕ್ರಮರೂಪವೂ ವ್ಯಾಪ್ತರೂಪವಾದ್ದರಿಂದ ಇದರ ಉಪಾಸನೆಯು ವಾಯುದೇವರಿಗೆ ಮಾತ್ರ ಶಕ್ಯವು. ವಾದಿರಾಜರು ಹಯಗ್ರೀವಾರಾಧಕರಾಗಿದ್ದರಲ್ಲದೆ ತ್ರಿವಿಕ್ರಮದೇವೋಪಾಸಕರಾಗಿದ್ದರು. ಈ ಕಾರಣದಿಂದ ಇವರು ಮುಂದೆ ವಾಯುಪದಕ್ಕೆ ಬರುವ ಋಜುಗಣಸ್ಥರಾದ

---

13. Continuing through Kanarese country, he (Chaitanya) came to udipi ..... Here Chaitanya spent many days worshiping at the shrine and discoursing with the Madhwas over the essential Vaishnava doctrines.

-The Chaitanya movement . p. 38.

ಲಾತವ್ಯರೆಂದು ಅಪರೋಕ್ಷ ಜ್ಞಾನಿಗಳ ಅಭಿಮತವು. ಇವರ ಸಂಸ್ಕತ ಗ್ರಂಥಗಳೊ ಅತಿ ಪ್ರೌಢವು. ಇವರು ಯುಕ್ತಿಮಲ್ಲಿಕೆ ಮೊದಲಾದ ಸಿದ್ಧಾಂತ ಗ್ರಂಥಗಳನ್ನೂ ಮಹಾಭಾರತಕ್ಕೆ ಲಕ್ಷಾಭರಣವೆಂಬ ವ್ಯಾಖ್ಯಾನ, ರುಕ್ಮಿಣೀಶ ವಿಜಯ, ತೀರ್ಥಪ್ರಬಂಧಾದಿ ಸಾಹಿತ್ಯ ಗ್ರಂಥಗಳನ್ನೂ, ಸುಮಾರು 50 ಸ್ತೋತ್ರಗಳನ್ನು ರಚಿಸಿರುವರು. ಕನ್ನಡದಲ್ಲಿ ಇವರು ಸಾವಿರಾರು ಪದ–ಪದ್ಯ–ಸುಳಾದಿಗಳನ್ನು ರಚಿಸಿರುವರು. ಅಜ್ಞರುಗಳಲ್ಲಿ ಭಕ್ತಿಮೂಡಿಸಲು ಇವರು ಕನ್ನಡಪದಗಳನ್ನು ಸಾಧನವನ್ನಾಗಿ ಉಪಯೋಗಿಸಿರುವರು. ತಮ್ಮ ಶಿಷ್ಯರಾದ ಅರಸಪ್ಪನಾಯಕನ ಮಗ ಲಗ್ನಮಂಟಪದಲ್ಲಿ ಸರ್ಪದಷ್ಟನಾಗಿ ಮೃತನಾಗಲು ಅಮೃತಮಥನ ಕಥೆಯನ್ನೂ 'ಲಕ್ಷ್ಮೀ ಶೋಭಾನೆ 'ಎಂಬ ಹೆಸರಿನಿಂದ ಪದ್ಯರೂಪವಾಗಿ ಕನ್ನಡದಲ್ಲಿ ರಚಿಸಿ ಅವನನ್ನು ಬದುಕಿಸಿದರು. ಹರಿಮಹಿಮಾವರ್ಣನರೂಪವಾದ 24 ನುಡಿಗಳ 'ಲಕ್ಷ್ಮೀನಾರಾಯಣ' ಎಂಬ ಇವರ ಪದವೂ ಇಂದಿಗೂ ಉಡುಪಿ ಮಠಗಳಲ್ಲಿ ಹಾಡಲ್ಪಡುತ್ತದೆ. ಇವರ ಕನ್ನಡ ಭಾಷೆಯು ನಿತ್ಯ ಬಳಕೆಯಲ್ಲಿನದು. ಅನೇಕ ಸುಂದರ ಗ್ರಾಮ್ಯಭಾಷಾವೈಖರಿಯಿಂದ ಕೂಡಿದುದು; ಅಲ್ಲದೆ ಭಾಷೆಯ ಓಟವೂ ಶ್ಲಾಘ್ಯವಾದುದು. ಅದರಲ್ಲಿ ಸಿದ್ಧಾಂತದ ಗಡುಸಾದ ಪ್ರಮೇಯಗಳನ್ನು ಸೇರಿಸಿರುವರು. ಪೊಟ್ಟಮೊದಲಿಗೆ ಕನ್ನಡಲ್ಲಿ ಪದಪದ್ಯರೂಪವಾಗಿ ಗಾಯನಕ್ಕನುಕೂಲವಾಗಿರುವಂತೆ ಪ್ರಬಂಧಗಳನ್ನು ರಚಿಸಿದವರೆಂದರೆ ವಾದಿರಾಜರೇ, ಇವರು ಆಚಾರ್ಯರ ತಾತ್ಪರ್ಯ ನಿರ್ಣಯವನ್ನು ಕನ್ನಡದಲ್ಲಿ ಹಾಡಿರುವರು. ಅಲ್ಲದೆ ಕನ್ನಡದಲ್ಲಿ ವೈಕುಂಠವರ್ಣನೆ, ಗುಂಡಕ್ರಿಯಾ, ಲಕ್ಷ್ಮಿಶೋಭಾನೆ, ಸ್ವಪ್ನಗದ್ಯ ಮೊದಲಾದ ಅನೇಕ ಕಾವ್ಯಗಳನ್ನು ನಿರ್ಮಿಸಿರುವರು. ಇವುಗಳಲ್ಲಿ ತತ್ತ್ವಭಾಗಗಳು ತುಂಬಿವೆ. ಆದರೆ ಆ ತತ್ತ್ವಗಳನ್ನೆಲ್ಲಾ ಸರಳವಾಗಿ ದೃಷ್ಟಾಂತಗಳಿಂದ ತಿಳಿಸಿ ಹೇಳಿರುವರು. ಗುಂಡಕ್ರಿಯೆಯಲ್ಲಂತೂ ಇತರ ದರ್ಶನಗಳ ವಿವೇಚನೆ ಇರುವುದು. ವಾದಿರಾಜರ ಈ ಮಹೋಪಕಾರದಿಂದ ಸಂಸ್ಕೃತ ಗ್ರಂಥಗಳಲ್ಲಡಗಿದ್ದ ಗಡುಚಾದ ಮಧ್ವಮತತ್ತ್ವಗಳು ಕನ್ನಡಕ್ಕೆ ಬಂದವು. ವಾದಿರಾಜರನ್ನು ವಿಜಯದಾಸರಾದಿಯಾಗಿ ಅನೇಕ ದಾಸರುಗಳು ಸ್ತೋತ್ರ ಮಾಡಿರುವರು. [14]

---

14. ವಾದಿರಾಜ ಧೀರಾ, ಯತಿವರ ವಾದದಿ ಬಹುಶೂರ

ಮೋದ ತೀರ್ಥರ ಮತವ ಪೊಂದಿದ | ಸಾಧುಗಳನ್ನು ಉದ್ಧಾರಮಾಡುವ

.........................ಅಜಪದಕ್ಕೆ ಅರ್ಹ ಋಜುಗಣಪತಿ ಜೀವೋತ್ತಮ

ವಿಜಯ ವಿಠಲದಾಸ ಸುಜನ ಮಂದಾಹಾಸ

— ಶ್ರೀ ವಿಜಯದಾಸರು.

IV. ವಿಜಯೀಂದ್ರ ತೀರ್ಥರು.

ಇವರು ವ್ಯಾಸರಾಯರ ಪ್ರಮುಖ ಶಿಷ್ಯರು; ಇವರ ಹಿಂದಿನ ಹೆಸರು ವಿಷ್ಣುತೀರ್ಥರೆಂದು. ಬಾಲ್ಯದಲ್ಲೇ ಇವರು ಸಕಲ ಗ್ರಂಥಗಳನ್ನೂ ವ್ಯಾಸರಾಯರಲ್ಲಿ ಅಭ್ಯಾಸಮಾಡಿದರು. ಸುರೇಂದ್ರತೀರ್ಥರೆಂಬ ಕವೀಂದ್ರತೀರ್ಥರ ಪರಂಪರೆಯ ಯತಿಗಳು ಅಪೇಕ್ಷಿಸಿದ ಪ್ರಕಾರ, ವ್ಯಾಸರಾಯರು ಇವರನ್ನು ಸುರೇಂದ್ರರಿಗೆ ಒಪ್ಪಿಸಿಬಿಟ್ಟರು. ಅಂದಿನಿಂದ ಇವರು ವಿಜಯೀಂದ್ರರೆಂಬ ಹೆಸರಿನಿಂದ ಪ್ರಸಿದ್ಧರಾದರು. ವಿಜಯೀಂದ್ರರು ಕುಂಭಕೋಣದಲ್ಲಿ ನೆಲೆಸಿ ಶೈವವಾದಿಗಳನ್ನು ಜಯಿಸಿದರು. ಅಲ್ಲಿ ವಿಖ್ಯಾತ ಪಂಡಿತರಾಗಿದ್ದ ಅಪ್ಪಯ್ಯ ದೀಕ್ಷಿತರನ್ನೂ ಗೆದ್ದರು. ದೀಕ್ಷಿತರು ಮಧ್ವಮತಕ್ಕೆ ಖಂಡನರೂಪವಾಗಿ ಬರೆದ ಎಲ್ಲಾ ಗ್ರಂಥಗಳಿಗೂ ತಕ್ಕ ಉತ್ತರಕೊಟ್ಟರು. ಇವರು 104 ಗ್ರಂಥಗಳನ್ನೂ ರಚಿಸಿರುವರೆಂಬ ಪ್ರಸಿದ್ಧಿ ಇದೆ. ಮಾಧ್ವಮತದಲ್ಲಿ ಇಂತಹ ವಿಪುಲ ಗ್ರಂಥಕರ್ತೃಗಳಾರೂ ಇಲ್ಲ. ಇವರ ಗ್ರಂಥಗಳೆಲ್ಲಾ ಅತ್ಯಂತ ಪ್ರೌಢವೂ ತರ್ಕಬದ್ಧವೂ ಆಗಿದ್ದು ಪಂಡಿತರಿಗೂ ದುರ್ಗಮವಾಗಿರುವುದು. ಚತುಷಷ್ಠಿ ಕಲೆಗಳಲ್ಲೂ ಇವರು ಪರಿಪೂರ್ಣರು. ವಿಜಯನಗರದ ಅರಸನಾದ ಅಳಿಯ ರಾಮರಾಯನಿಂದ ರತ್ನಾಭಿಷೇಕ ಮಾಡಿಸಿಕೊಂಡರು. ಉಡುಪಿ ಯಾತ್ರೆಯನ್ನೂ ಕೈಗೊಂಡು ವಾದಿರಾಜರಿಂದ ಸತ್ಕಾರ ಪಡೆದದ್ದಲ್ಲದೆ ಕೃಷ್ಣಮಠದ ಎದುರಿಗೆ ತಮ್ಮದಾದ ಒಂದು ಮಠವನ್ನೂ ಪಡೆದರು. ಇಂತಹ ಪಂಡಿತೋತ್ತಮರಾದ ವಿಜಯೀಂದ್ರರು ಕನ್ನಡದಲ್ಲೂ ಅನೇಕ ಪದ ಪದ್ಯಗಳನ್ನೂ ರಚಿಸಿರುವುದಾಗಿ ಐತಿಹ್ಯವಿದೆ. ಅದರಲ್ಲಿ ಒಂದು ಹಸ್ತ ಪ್ರತಿಯಲ್ಲಿ ಅವರ ಹೆಸರಿನ ಒಂದೇಪದವೂ ಸಿಗುವುದು. ಇದು ಗುರುಗಳಾದ ವ್ಯಾಸರಾಜರ ಸ್ತೋತ್ರವು. ಇದರ ಶೈಲಿ,ಭಾವಗಳಿಂದ ಇದು ಅವರಿಂದಲೇ ರಚಿತವಾಗಿರಬಹುದೆಂದೂ ಊಹಿಸಬಹುದು.[15] ಭಾವಗರ್ಭಿತವೂ ಅಲಂಕಾರಪೂರ್ಣವೂ ಆದ ಈ ಪದವನ್ನು

---

15. ಆನಂದ ಭೈರವಿ ಅಟತಾಳ ||ಪ ||

ಯೋಗಿನರ ವ್ಯಾಸರಾಯರೆಂಬ | ವಿಚಿತ್ರ ಮೇಘ

ಬೇಗ ವಿಷ್ಣು ಪದವ ತೋರಿಸುತ್ತಾ | ಬಂದಿತಿಕೋ ||ಅ ||

ಮಾಯಿಮತವೆಂಬ ತಾರಾಮಂಡಲವ ಮುಸುಕುತ್ತ ||ಅ ||

ವಾಯುಗತಿಯಂತೆ ಗಮಿಸುತ್ತಲೀ |

ಹೇಯ ಕಾಮಾದಿಗಳೆಂಬ ರಜವನಡಗಿಸುತ್ತ|

ನಾಯಕನುಪೇಂದ್ರನಾಜ್ಞೆಯ ಪಡೆದು ||೧ ||

ನೋಡಿದಲ್ಲಿ ಇವರು ಇನ್ನೂ ಅನೇಕ ಪದ ಪದ್ಯಗಳನ್ನು ರಚಿಸಿರಬೇಕೆಂದು ತೋರುವುದು. ಪುರಂದರದಾಸರ ಮಕ್ಕಳಾದ ಗುರಮದ್ವಪತಿದಾಸರು ಇವರನ್ನು ಸ್ತೋತ್ರಮಾಡಿದರು. [16]

iv ಪುರಂದರದಾಸರು.

ಪುರಂದರದಾಸರು ಕನ್ನಡ ದಾಸಸಾಹಿತ್ಯದ ಮಹೋನ್ನತ ವ್ಯಕ್ತಿ. ಪುರಂದರದಾಸರ ಹೆಸರು ದಾಸಸಾಹಿತ್ಯದ ಜೊತೆಗೆ ಒಂದಾಗಿ ಇಂದಿಗೂ ಅಮರವಾಗಿದೆ. ಇವರನ್ನು ಗುರುಗಳಾದ ವ್ಯಾಸರಾಯರೇ ಕೊಂಡಾಡಿದ್ದಾರೆ. ಪುರಂದರದಾಸರೇ ಕೆಲಪದಗಳಲ್ಲಿ ತಮ್ಮ ಚರಿತ್ರೆಯ ಕೆಲ ಅಂಶಗಳನ್ನು

ಅಂಗಜನಯ್ಯನೆ ಪರನೆಂದು | ಘುಡುಘುಡಿಸುತ್ತ |
ಕಂಗಳೆಂಬ ಮಿಂಚುನೆನೆರಹಿ ಲೋಕದಿ |
ಹಿಂಗದೆ ಪರಿವ ಅಜ್ಞಾನವೆಂಬ ಕತ್ತಲೆಯ |
ಭಂಗಿಸಿ ಸುಪಥವ ತೋರಿಸುತ್ತ ||೨||
ಸಿರಿಯರಸನ ಸಂಯಕ್‌ಜ್ಞಾನವೆಂಬ ಪೈರಿಗೆ |
ಬೇರು ಬೀರೆ ಹರಿಕಥೆಯೆಂಬ ಮಳೆಗರೆದು |
ಶಿಷ್ಯನ ಮನವೆಂಬ ಕೆರೆತುಂಬಿಸಿ |
ಕಂಗಳೆಂಬ ಕೋಡಿ ವಾರಿಸುತ್ತಾ **ವಿಜಯೀಂದ್ರನಾ** ಗುರು ||೩||

16. ವಿಜಯೀಂದ್ರ ಮುನೀಂದ್ರನೆಂಬಾಶ್ಚರ್ಯದ
ಗಜೇಂದ್ರ ಬಂದದೆ ಸುಜನರು ನೋಡಬನ್ನಿ ||ಪ||
ಕಲುಷವೆಂಬ ಪಂಕವ ನೀಡಾಡಿ ವಿಮಲ ಹರಿಪದ ತೀರಥವ |
ಜಲಪಾನಮಾಡಿ ಮದ್ವಮತಾಂಬುಧಿಯೊಳು |
ನಲಿದು ನಲಿದು ಕುಣಿಕುಣಿದಾಡುತಲಿ ||೧||
ರಮೇಶಧ್ಯಾನವೆಂಬ ಮದವೇರಿ | ಮಮತೆ ಕದಳಿ ಕಿತ್ತಾಡಿ |
ವಿಮಲ ಶ್ರೀ ಹರಿಪದರಜ ಶಿರದಿ ಧರಿಸಿ |
ಕುಮತಗಳೆಂಬ ತರುಗಳ ಮುರಿಯುತಲಿ | ||೨||
ಗುರು ಸುರೇಂದ್ರ ತೀರಥರೆಂಬ | ವರಮಹತಿಗನಾಜ್ಞೆಯೊಳಿದ್ದು |
ಗುರು ಮಧ್ವಪತಿ ವಿಠಲನ ನವವಿಧ ಭಕ್ತಿ |
ಸರಪಳಿಯೊಳು ನಲಿನಲಿದಾಡುತಲಿ ||೩||

ಹೇಳಿಕೊಂಡಿದ್ದಾರೆ. ಇವರ ಮಕ್ಕಳಾದ ಮಧ್ವಪತಿದಾಸರೂ, ವಿಜಯದಾಸರೇ ಮೊದಲಾದ ಎಲ್ಲ ಹರಿದಾಸರೂ ಇವರನ್ನು ವಿಶೇಷವಾಗಿ ಸ್ತೋತ್ರ ಮಾಡಿರುತ್ತಾರೆ.

ಪುರಂದರದಾಸರು ಕ್ರಿ.ಶ. ಸುಮಾರು 1484 ರಲ್ಲಿ ಜನಿಸಿದರು. ಪುರಂದರಗಡ ಇವರ ಜನ್ಮಸ್ಥಳ,. ಇವರ ತಂದೆಯ ಹೆಸರು ವರದಪ್ಪ ನಾಯಕರು. ಇವರ ಹೆಸರು ಶ್ರೀನಿವಾಸನಾಯಕರು. ಇವರು ಬಾಲ್ಯದಲ್ಲಿ ವಿದ್ಯಾಭ್ಯಾಸಮಾಡಿ, ತಮ್ಮ ಕುಲಕಸುಬಿನಲ್ಲಿ ಪರಿಶ್ರಮಪಡೆದು ಪ್ರಸಿದ್ಧ ಚಿನಿವಾರರಾದರು. ದ್ರವ್ಯಾರ್ಜನೆ ಹೆಚ್ಚಿದಂತೆಲ್ಲಾ ಇವರ ಲೋಭವೂ ಹೆಚ್ಚಿತು. ಆಗ ದೇವರು ಇವರಿಗೆ ಸನ್ಮಾರ್ಗಪ್ರದರ್ಶನ ಮಾಡಲು ಬ್ರಾಹ್ಮಣವೇಷದಿಂದ ಬಂದು ದೇಶಾವರಬೇಡಿ ಇವರಿಗೆ ಇವರ ಹೆಂಡತಿಯ ಔದಾರ್ಯವನ್ನು ತೋರಿಸಿಕೊಟ್ಟ ಹೆಂಡತಿಯ ಔದಾರ್ಯವನ್ನೂ ದೈವಲೀಲೆಯನ್ನೂ ಅರಿತ ಇವರಿಗೆ ಐಶ್ವರ್ಯದಲ್ಲಿ ಜಿಹಾಸೆಹುಟ್ಟಿ ಸರ್ವಸ್ವವನ್ನೂ ಬ್ರಾಹ್ಮಣರಿಗೆ ದಾನಮಾಡಿ ಇವರು ಮಡದಿಮಕ್ಕಳ ಸಹಿತವಾಗಿ ವಿಜಯನಗರಕ್ಕೆ ಬಂದು ವ್ಯಾಸರಾಯರ ದರ್ಶನಮಾಡಿದರು. ಹೆಂಡತಿ ಸರಸ್ವತಿಯೊಡನೆ ಪುರಂದರಗಡ ಬಿಟ್ಟಾಗ ಇವರಿಗೆ 4 ಮಕ್ಕಳಿದ್ದರು. ಆದ್ದರಿಂದ ಇವರಿಗೆ ಆಗ ಬಹುಶ 40ವರ್ಷ ವಯಸ್ಸಾಗಿರಬೇಕು.ಅಂದರೆ ಸುಮಾರು 1520 ರಲ್ಲಿ ವಿಜಯನಗರಕ್ಕೆ ಬಂದಿರಬಹುದು. ಇವರ ವೈರಾಗ್ಯವರ್ಚಸ್ಸನ್ನರಿತು ವ್ಯಾಸರಾಯರು ಇವರಿಗೆ ಮುದ್ರಾಧಾರಣ ಮಾಡಿ, ಮಂತ್ರೋಪದೇಶ ಮಾಡಿ ದಾಸದೀಕ್ಷೆಯನ್ನು ಕೊಟ್ಟರು. ಅಂದಿನಿಂದ ಇವರು ಪುರಂದರದಾಸರಾದರು. ಪುರಂದರದಾಸರು ನಾರದಾಂಶ ಸಂಭೂತರೆಂಬ ವ್ಯವಹಾರವಿದೆ. [17] ಪುರಂದರದಾಸರೇ ತಾವು ಹೆಂಡತಿಯ ಮೂಲಕ

---

17. ಬಂದ ದುರಿತ ವಿನಾಶನ

ಬಂದ ದುರಿತವಿನಾಶವಿಂದು ಪುರಂದರನ
ವಂದಿಸಿ ಅತಿಭಕುತಿಯಿಂದ ಸ್ಮರಿಸುವ ಜನರ
ಹಿಂದು ಮುಂದೇಳು ಕುಲಕೋಟಿಗಳ ಉದ್ಧಾರ
ಸಂದೇಹ ಸಲ್ಲ ಬಲ್ಲವರಿಗಿದು ಹರಿಯೇ

* * *

ವರಪಡೆದು ನಾರದನು ಇರುತಿರಲು ಇತ್ತಲಾ
ಬರಲು ಕಲಿದೊರೆತನವು ಕಾಲಾಂತರಕ್ಕೆ ಸಿರಿ
ವರನನ ದಯದಿಂದಲಿ ಜನಿತರಾದರು
ಪುರಂದರವೆಂಬ ನಗರಿಯಲ್ಲಿ

ವೈರಾಗ್ಯ ತಾಳಿ ದಾಸರಾದ ಸಂಗತಿಯನ್ನು ಪದವೊಂದರಲ್ಲಿ [18] ಹಾಡಿದರು. ಅವರಿಗೆ ವ್ಯಾಸರಾಯರಿಂದ ಅಂಕಿತಗುರೂಪದೇಶವಾದ ವಿಷಯವನ್ನೂ ಸುಳಾದಿಯಲ್ಲಿ ಹೇಳಿದ್ದಾರೆ. ದಾಸತ್ವದೀಕ್ಷೆಪಡೆದು ಭಗವದ್ದರ್ಶನವಾದಾಗ ಒಂದು ಉಗಾಭೋಗವನ್ನು ಮಾಡಿರುತ್ತಾರೆ. [19] ದಾಸರಾದ ಮೇಲೆ ಇವರಿಗೆ ವಿಚಿತ್ರ ಸಿದ್ಧಿಗಳುಂಟಾದವು. ಇವರು ಅಪೇಕ್ಷಿಸಿದ ಶಿಲೆಯೇ ಪರಶೂ ಶಿಲೆಯಾಯಿತು. ಬ್ರಹ್ಮಜ್ಞಾನಿಗಳಿಗೆ ಇಂತಹ ಸಿದ್ಧಿಗಳು ಅಲ್ಪ.

ದಾಸರು ವಿಜಯನಗರದಿಂದ ಹೊರಟು ತಿರುಪತಿ, ಶ್ರೀರಂಗಾದಿ ದಕ್ಷಿಣ ದೇಶದ ಯಾತ್ರೆಗಳನ್ನೆಲ್ಲಾ ಮುಗಿಸಿಕೊಂಡು, ಮೈಸೂರು ದೇಶಕ್ಕೆ ಬಂದು ಅಲ್ಲಿ ಕಳಸ, ಬೇಲೂರು, ನಂಜನಗೂಡು, ಶ್ರೀರಂಗಪಟ್ಟಣವೇ ಮೊದಲಾದ ಕ್ಷೇತ್ರಗಳ ದರ್ಶನ ಮಾಡಿ ಉಡುಪಿಗೆ ಹೋಗಿ ಕೃಷ್ಣ ದರ್ಶನ ಮಾಡಿಕೊಂಡು ಪಂಡರಪುರಕ್ಕೆ ಹೋದರು. ಈ

ಚರಿಸಿದರು ಕೆಲವು ದಿನ ಸಂಸಾರವೃತ್ತಿಯಲಿ
ಜರಿದು ವೈರಾಗ್ಯವನ್ನು ತೊಟ್ಟು ದೃಢಮನಸಿನಲಿ
ತರುಣಿ ಮಕ್ಕಳು ಸೇರಿದರು ಕಿಷ್ಕಿಂಧ
ಗಿರಿತುಂಗ ಪಂಪದಲ್ಲಿ
ವಾಸವನು ಮಾಡಿ ಪ್ರಹ್ಲಾದನವತಾರ
ವ್ಯಾಸರಾಯರ ಬಳಿ ಮುದ್ರೆ ಗುರುಮಂತ್ರ ಉಪ-
ದೇಶವನೆಗೊಂಡು ವೈಷ್ಣವರಾಗಿ
ಪುರಂದರ ದಾಸರೆಂಬೋ ಪೆಸರಿಲಿ
ದೇಶವನೆ ತಿರುಗಿ ಪುಣ್ಯಕ್ಷೇತ್ರಗಳ ಮೆಟ್ಟಿ
ಲೇಸಾಗಿ ಅಲ್ಲಿದ್ದ ಮಹಿಮೆಗಳ ಪೇಳಿ ದು-
ರಾಶಯನೆ ತೊರೆದು ವಿಠಲ ಸನ್ನಿಧಿಯಲ್ಲಿ
ವಾಸವಾದರು ಧರ್ಮನಡತೆಯಲಿ ಬಿಡದೇ

— ವಿಜಯದಾಸರು

ಪಂತುವರಾಳಿ—ಆದಿ

18. ಆದದ್ದೆಲ್ಲ ಒಳಿತೇ ಆಯಿತು ||ಪ ||
ಮಾಧವನಂಘ್ರಿಯ ಸೇವಿಸುವುದಕ್ಕೆ ಸಾಧನ ಸಂಪತ್ತಾಯಿತು ||ಪ ||
ಗೋಪಾಳ ಬುಟ್ಟಿಹಿಡುಯುವುದಕ್ಕ ಭೂಪನೆಂದು ನಾಚುತಲಿದ್ದೆ
ಆ ಪತಿವ್ರತೆ ವ್ರತ ಅತಿಘನವಾಗಲೀ ಗೋಪಾಳ ಬುಟ್ಟೇ ಹಿಡಿಸಿದಳಯ್ಯ ||ಪ ||

★ ★ ★ ★ ★ ★ ★ ★ ★

19. ಇಂದಿನ ದಿನವೇ ಶುಭದಿನವು ಇಂದಿನವಾರ ಶುಭವಾರ
ಇಂದಿನತಾರೆ ಶುಭತಾರೆ ಇಂದಿನಯೋಗ ಶುಭಯೋಗ
ಇಂದಿನ ಕರಣ ಶುಭಕರಣ ಇಂದು ಪುರಂದರವಿಠಲರಾಯನ
ಸಂದರುಶನ ಫಲವೆನಗಾಯ್ತು ಸಂದರುಶನ ಫಲವೆನಗಾಯ್ತು

ಕ್ಷೇತ್ರಗಳಲ್ಲಿನ ಕ್ಷೇತ್ರ ಮೂರ್ತಿಗಳ ಮಹಿಮಾ ವಿಶೇಷವನ್ನು ಇವರು ಹಾಡಿರುವರು, ಪಂಢರ ಪುರದಲ್ಲಿ ದಾಸರು ಬಹುಕಾಲ ನಿಂತರು. ಅಲ್ಲಿ ವಿಠ್ಠಲನು ಇವರೊಂದಿಗೆ ಸರಸವಾಡಿ ತೋರಿದ ಮಹಿಮೆಗಳನ್ನೆಲ್ಲ ಇವರು ಪದಗಳಲ್ಲಿ ಹೇಳಿರುವರು.[20] ತೀರ್ಥಯಾತ್ರೆಗಳನ್ನು ಮುಗಿಸಿಕೊಂಡು ದಾಸರು ವಿಜಯನಗರಕ್ಕೆ ಬಂದರು. ಅಲ್ಲಿ ವ್ಯಾಸರಾಯರಲ್ಲಿ ಇರುವಾಗ ಮಠದ ಕುಹಕಿಗಳು ದಾಸರ ವರ್ಚಸ್ಸನ್ನು ಸಹಿಸಲಾರದೆ ಅಸೂಯೆಯಿಂದ ನಾನಾರೀತಿ ದೂರುತ್ತಿದ್ದರು, ಅಂತಹ ಸಮಯದಲ್ಲಿ ದಾಸರು ತೋರಿದ ಮಹಿಮೆಗಳಿಂದ ಅವರ ಬಾಯಿ ಮುಚ್ಚುತ್ತಿತ್ತು. ಒಮ್ಮೆ ಇವರು ಮಠದ ಕಲಗಚ್ಚನ್ನೇ ದೇವರಿಗೆ ಅರ್ಪಿತವೆನ್ನಲು ವ್ಯಾಸರಾಯರು ಪೂಜಿಸುತ್ತಿದ್ದ ಶ್ರೀ ಗೋಪಾಲಕೃಷ್ಣ ವಿಗ್ರಹದ ಬಾಯಿಂದ ಕಲಗಚ್ಚಿನ ತೊಟ್ಟು ತೊಟ್ಟಲಾರಂಭಿಸಿತು.[21] ದಾಸರು ರಚಿಸಿದ ಪದ-ಪದ್ಯಗಳ ಪುಸ್ತಕವನ್ನು ವ್ಯಾಸರಾಯರು ಪುರಂದರೋಪ

ಪಂತುವರಾಳಿ–ಛಾಪು

20. ಮುಯ್ಯಕ್ಕೇ ಮುಯ್ಯತೀರಿತೋ ||ಪ ||
ಅಯ್ಯ ವಿಜಯಯ್ಯ ಸಲಹಯ್ಯ ಪಂಢರಿರಾಯ ||ಅ ||
ಸಣ್ಣವನೆಂದು ನಾ ನೀರತಾರೆಂದರೆ ಬೆಣ್ಣೆ ಕಳ್ಳಕೃಷ್ಣ ಮರೆವು ಮಾಡಿ
ಚಿನ್ನದ ಗಿಂಡಿಯಲಿ ನೀರ ತಂದಿಡೆ ನಿನ
ಕಣ್ಣು ಕಾಣದೆ ನಾ ಹೊಡೆದೆ ಪಂಡರಿರಾಯ ||೧ ||
ಎನ್ನ ಪೆಸರಿನಿಂದ ಸೂಳೆಗೆ ಕಂಕಣವನ್ನು ನೀನಿತ್ತು ನಿಜರೂಪದಿ
ಸನ್ನುತ ಈಪರಿ ಭಂಡು ಮಾಡಿ ಈ
ಮಾನವರೊಳು ಎನ್ನ ಮಾನಗೊಂಡೆ ಕೃಷ್ಣ ||೨ ||
ಭಕ್ತವತ್ಸಲನೆಂಬ ಬಿರುದುಬೇಕಾದರೆ ಭಕ್ತರಾಧೀನ ನೀ ನಿರಬೇಡವೆ
ಯುಕ್ತಿಯಲಿ ನಿನ್ನಂಥ ದೇವರ ನಾಕಾಣೆ
ಮುಕ್ತೀಶ ಪುರಂದರ ವಿಠಲ ಪಂಡರಿರಾಯ ||೩ ||

ii ಎಂದಪ್ಪಿಕೊಂಬೇ ರಂಗಯ್ಯನ ಎಂದಪ್ಪಿಕೊಂಬೇ
ಅಪ್ಪಣ್ಣ ಭಾಗವತನ ರೂಪನು ತಾನಾಗಿ
ತುಪ್ಪದ ಬಿಂದಿಗೆ ತಂದಪ್ಪ ಮುಕುಂದನ ||೨ ||

21. ಅಚ್ಯುತಾರ್ಪಿತವೆಂದು ದಾಸರೆಂನಲು ಕಲ
ಗಚ್ಚು ಕುಡಿದ ಕಣೋ ವಿಜಯ ವಿಠಲ ಮೆಚ್ಚಿ

ನಿಷತ್ತೆಂದು ಕರೆದು ಗೌರವದಿಂದ ತಮ್ಮ ವ್ಯಾಸಪೀಠದಲ್ಲಿ ಇತರ ಶಾಸ್ತ್ರಗ್ರಂಥಗಳ ಮೇಲಿಟ್ಟರು. ಇದು ಮಠದಲ್ಲಿನ ವಿದ್ವಾಂಸರಿಗೆ ಸಹಿಸದೆ, ಅದನ್ನು ತೆಗೆದೆಸೆದರು. ಆದರೆ ಆ ಪುಸ್ತಕವು ಮತ್ತೆ ಹಾರಿ ಬಂದು ವ್ಯಾಸಪೀಠದಲ್ಲಿ ಕೂತಿತು.[22] ಈ ಮಹಿಮೆಯಿಂದ ದಾಸಸಾಹಿತ್ಯ ಮಾನ್ಯವಾಯಿತು. ದಾಸರ ಮನೆಯಮುಂದೆ ನಿತ್ಯ ಬೆಳಗಿನ ಜಾವ ಗಂಗಾ, ಯಮುನಾದಿ ನದೀ ದೇವತೆಗಳು ಸಾರಿಸಿ ರಂಗವಲ್ಲಿ ಹಾಕುತ್ತಿದ್ದರಂತೆ. ವ್ಯಾಸರಾಯರೊಡನೆ ಮಾತಾಡುತ್ತಿದ್ದ ದಾಸರು, ವಿಜಯ ವಿಠಲನ ಗುಡಿಯಲ್ಲಿನ ಪರದೆಗೆ ಬೆಂಕಿ ಹತ್ತಿಕೊಂಡರೆ ತಮ್ಮ ಅಂಗವಸ್ತ್ರವನ್ನುಜ್ಜಿ ಅದನ್ನಾರಿಸಿದರಂತೆ.[23] ಹೀಗೆ ದಾಸರು ತೋರಿದ ಮಹಿಮೆಗಳು ಅನೇಕವಿದೆ. ಇವರು ಕ್ರಿ.ಶ. 1564ನೆಯ ರಕ್ತಾಕ್ಷಿ ಸಂವತ್ಸರದ ಪುಷ್ಯ ಬಹುಳ ಅಮಾವಾಸ್ಯೆಯ ದಿನ ಹಂಪೆಯಲ್ಲಿ ಕೃಷ್ಣ ಪದಾರವಿಂದವನ್ನು ಸೇರಿದರು.[24]

---

22. ಪದಗಳ ಬರೆದ ವಹಿಗಳ ಮುಂಕೊಂಡು
ಮಧ್ವಶಾಸ್ತ್ರದಮೇಲೆ ಕುಳಿತಿರಲದ ಕಂಡು
ಹದವನರಿಯದ ದಿಂಡೆಯನೊಬ್ಬನು
ಪದದ ವಹಿಯನ್ನು ತೆಗೆದು ಬಿಸಾಟನಾಗ
ಎರಡಾವರ್ತಿ ಬಿಸಾಡಲಾಗಿ
ಅದು ತಿರಿಗಿ ತಿರುಗಿ ಬಂದು ಮೇಲೆ ಕುಳ್ಳಿರಲು
ಗುರುವ್ಯಾಸರು ನೋಡಿ ಹರುಷದಿಂದ
ಪುರಂದರ ಉಪನಿಷತ್ತೆಂದು ಕರೆದರು

23. ಗುರುರಾಯರು ದಾಸರನೋಡುತಿರಲಾಗ
ಅರಿವೆಯನೊರೆಸಲು ಕರದಿಂದ ಬೇಗ
ಕರೆದು ಕೇಳಲು ಶಿರಿವಿಠಲನ ಗುಡಿಯಲ್ಲಿ
ಪರದೆ ಹತ್ತಿದ ಉರಿ ಆರಿಸಿದೆನೆಂದರು

— ಗುರುಮಧ್ವ ಪತಿದಾಸರು.

ಭೈರವಿ—ಛಾಪು

24. ತೆರಳಿದರು ಪುರಂದರ ದಾಸರಾಯರು ||ಪ||
ತೆರಳಿದ ಭೇರಿ ದುಂದುಭಿ ಮೊರೆಯುತಲಿರೆ
ಪುರಂದರ ದಾಸರು ನಿಜವೈಕುಂಠಕ್ಕೆ ||ಅ||
ವಿದ್ಯಾನಗರದಿ ವಿಠ್ಠಲನ ಸನ್ನಿಧಿಯಲ್ಲಿ
ಪೊಂದಿದ್ದ ಭಾಗವತರ ಸಮ್ಮೇಳನದಿ ||೧||
ವೈಕುಂಠಕೆ ಭೂಮಿಗೆ ಹರಿನಾಮದ ಸೋಪಾನಮಾಡಿ
ಭಕ್ತರಿಗೆ ಮಾರ್ಗವ ತೋರಿ ||೨||
ಅಚ್ಚಗನ್ನಿಕೆಯರಾರತಿರಗಳನೆತ್ತಲು ಅಚ್ಯುತನಿದ್ದೆಡೆಗತಿ ಸಂಭ್ರಮದಿಂದ ||೩||
ರಕ್ತಾಕ್ಷಿ ಸಂವತ್ಸರದ ಪುಷ್ಯ ಬಹುಳದತಿಶಯದಮಾವಾಸ್ಯ ಮಂದವಾರ ||೪||
ಗುರು ಮಧ್ವಪತಿವಿಟ್ಠಲನ ಧರೆಗೆ ತೋರಿ ||೫||
ಪುರಂದರ ದಾಸರು ನಿಜ ವೈಕುಂಠಕ್ಕೆ

ಪುರಂದರದಾಸರ ಹೆಸರು ದಾಸಸಾಹಿತ್ಯ ಪರಂಪರೆಯಲ್ಲಿ ಚಿರಸ್ಥಾಯಿಯಾಗಿ ನಿಲ್ಲಲು ಅವರು ನೀಡಿರುವ ಅಮೋಘ ಸಾಹಿತ್ಯವೇ ಕಾರಣ. ಒಟ್ಟು ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ ಪದಗಳನ್ನು ರಚಿಸಿರುವುದಾಗಿ ಅವರೇ ಹೇಳಿಕೊಂಡಿದ್ದಾರೆ.[25]

---

25. ವಾಸುದೇವನ ನಾಮವಳಿಯ ಕ್ಲಪ್ತಿಯನು |
ವ್ಯಾಸರಾಯರ ದಯದಿಂದ ಬಣ್ಣಿಪೆನು |
ಕೇದಾರ ರಾಮೇಶ್ವರ ಕೇರಳ ಭೂತಳದ |
ಪಾದಾರವಿಂದಕ್ಷೇತ್ರ ಪ್ರತಿಕ್ಷೇತ್ರವು |
ಆದರದಿ ಲಕ್ಷದಿಪ್ಪತ್ತೈದು ಸಾವಿರ ಕೃತಿಯು |
ವೇದಶಾಸ್ತ್ರ ಪುರಾಣ ಸಮ್ಮತದಿಂದ | ||೧||

ಮದ್ವರಾಯರ ಮಹಿಮೆ ಮಹ ಗುರು ಪರಂಪರೆ |
ಪ್ರಸಿದ್ಧ ವ್ಯಾಸರಾಯರ ಪರಿಯಂತವು |
ಶುದ್ಧ ತಂತ್ರ ಸಾರೋಕ್ತಿ ಸೇವಕ ತಾರತಮ್ಯ, |
ಉದ್ಧರಿಸಿದ್ದೈದು ಸಾವಿರನ ಪೇಳಿದೆನು | ೨

ಬ್ರಹ್ಮಲೋಕ ಕೈಲಾಸ ಭರದಿ ದಿಕ್ಪಾಲಕರ |
ಪೇಮ್ಮತೊಂಭತ್ತು ಸಾವಿರದಿ ಪೇಳಿದೆನು |
ಸಮ್ಮತದಿ ಹಲವು ಕಥಾಸಾರ ತೊಂಭತ್ತು ಸಾವಿರ |
ಒಮ್ಮನದಿ ಪೇಳಿದೆನು ಕೇಳಿ ಜನರು | ೩

ಅವರವರ ಮೂರ್ತಿಧ್ಯಾನ ಅವರವರ ಕೀರ್ತಿಮಾನ |
ವಿವರದಿಂದಲಿ ನಾ ನಿಮಗೆ ವಿಸ್ತರಿಸಿದೆನು |
ಘನತೆ ಅಗಣಿತ ಗಂಡಕಿಯ ಶಿಲಾಮೂರ್ತಿ |
ಅನಘ ಕಲ್ಯಾಣ ಕಥೆ ಅರವತ್ತು ಸಾವಿರ | ೪

ಅಹ್ನಿಕ ಗುಣವು ಜನ್ಮಾಷ್ಟಮಿ ಏಕಾದಶಿಯ |
ನಿರ್ಣಯವನು ಶ್ರುತಿ ಸ್ಮೃತಿಯ ಸಹಿತದಿ |
ವರ್ಣಿಸಿದೆ ಕ್ಷೀರಾಬ್ಧಿಶಯನ ಅಹೋಬಲ |
ನರಸಿಂಹ ಮೂರ್ತಿಗಳ ಶ್ರೀನಾಮಗಳ | ೫

ಸುಳಾದಿ ಅರವತ್ತು ನಾಲ್ಕು ಸಾವಿರ ಬಹುತರ |
ನಾಮಾವಳಿಯು ಇಪ್ಪತ್ತೈದುಸಾವಿರವಾಗಿವೆ |
ತಿಳಿದು ಶ್ವೇತದ್ವೀಪ ಅಂತಾಸನ ವೈಕುಂಠ |
ಸೆಲೆ ಶೇಷನ ಚರಿತ್ರೆಯನು ಪೇಳಿದೆನು | ೬

ಇಂತು ನಾಲ್ಕುಲಕ್ಷ ಎಪ್ಪತ್ತೈದು ಸಾವಿರ ಕೃತಿಯು |
ಕಂತುಜನಕನ ನಾಮ ಘನಮಹಿಮೆ |
ಸಂತಸದಿ ಶ್ರುತಿಸ್ಮೃತಿ ಸಮ್ಮತದಿಂದ |
ಪುರಂದರ ವಿಠ್ಠಲ ವ್ಯಾಸಮುನಿಗಳು ಪೇಳಿಸಿದರು | ೭

ಇಷ್ಟು ಹೆಚ್ಚಿನದಾದ ಸಾಹಿತ್ಯ ರಚನೆಯನ್ನು ಇನ್ನಾರು ಮಾಡಿಲ್ಲ. ಇನ್ನೂ ಇಪ್ಪತ್ತೈದು ಸಾವಿರ ಪದಗಳನ್ನು ರಚಿಸಿ ಐದು ಲಕ್ಷಕ್ಕೆ ಪೂರ್ಣಮಾಡಬೇಕೆಂದು ಇವರ ಅಭಿಪ್ರಾಯವಿತ್ತೆಂದೂ, ಆ ಉಳಿದ ಇಪ್ಪತ್ತೈದುಸಾವಿರ ಪದಗಳನ್ನು ಮಾಡಲು ಮಗನಾದ ಮದ್ವಪತಿಗೆ ಹೇಳಿದರೆಂದೂ, ಅವರೇ ಮುಂದೆ ವಿಜಯದಾಸರಾಗಿ ಅದನ್ನು ಪೂರೈಸಿದರೆಂದೂ ಐತಿಹ್ಯವಿದೆ. ಈ ನಾಲ್ಕು ಮುಕ್ಕಾಲು ಲಕ್ಷ ಪದಗಳಲ್ಲಿ ಎಲ್ಲ ಭಾಗಗಳೂ ಅಡಕವಾಗಿವೆ. ಇದರಲ್ಲಿ ಸಾವಿರದೊಂದು ಭಾಗವೂ ಈಗ ಉಪಲಬ್ಧವಿಲ್ಲ ಈಗ ಉಪಲಬ್ಧವಿರುವುದರಲ್ಲಿ ಅನೇಕ ಪದಗಳನ್ನು ಇತರರು ಅವರ ಹೆಸರಿನಲ್ಲಿ ಮಾಡಿ ಸೇರಿಸಿರುವುದೂ ಉಂಟು, ಹೀಗಾಗಿ ಇವುಗಳಲ್ಲಿ ಕೃತಕವಾದುದು ಯಾವುದು ನೈಜವಾದುದು ಯಾವುದು ಎಂಬುದನ್ನು ಶೋಧನೆ ಮಾಡಬೇಕಾಗಿದೆ. ಅವರು ರಚಿಸಿರುವ ಪದಗಳ ವಿವರ ಹೀಗಿದೆ–

1	ಕೇದಾರದಿಂದ ರಾಮೇಶ್ವರ ಪರ್ಯಂತ ಎಲ್ಲ ತೀರ್ಥ ಕ್ಷೇತ್ರಗಳ ಮಹಿಮೆ–ಸ್ಥಳ ಪುರಾಣ ಸಹಿತ	125000
2	ಆಚಾರ್ಯರು ಮತ್ತು ಅವರ ಪರಂಪರೆಯಲ್ಲಿ ವ್ಯಾಸರಾಯರವರೆಗೆ ಸ್ತೋತ್ರ, ತಂತ್ರಸಾರ, ದೇವತಾರತಮ್ಯ	5000
3	ಬ್ರಹ್ಮಲೋಕಾದಿ ದೇವತಾ ಲೋಕಗಳ ವರ್ಣನೆ	90000
4	ಪುರಾಣ ಕಥೆಗಳ ಸಾರ	90000
5	ದೇವತಾ ಮೂರ್ತಿಧ್ಯಾನ, ಅವರ ಕೀರ್ತಿಮಾನ, ಗಂಡಕೀ ಮಹಾತ್ಮೆ, ಕಲ್ಯಾಣ ಚರಿತ್ರೆಗಳು	60000
6	ಆಹ್ನೀಕ ಪದ್ಧತಿ, ಏಕಾದಶೀ, ಜಯಂತೀ ನಿರ್ಣಯ, ಶ್ರುತಿಸ್ಮೃತಿಗಳ ಸಹಿತ	16000
7	ಸುಳಾದಿಗಳು	64000
8	ದೇವರ ನಾಮಗಳು	25000

ಇಷ್ಟು ವಿಸ್ತಾರವಾದ ಸಾಹಿತ್ಯ ಒದಗಿಸಿ ಕೊಟ್ಟಿದ್ದರಿಂದಲೇ ವ್ಯಾಸರಾಯರು ಇದನ್ನು ಪುರಂದರೋಪನಿಷತ್ತೆಂದು ಕರೆದರು. ಇವರು ಶಿಷ್ಯರಾದರೂ ಇವರನ್ನು ಮುಕ್ತಕಂಠದಿಂದ ಹೊಗಳಿದ್ದಾರೆ.[26] ಪುರಂದರದಾಸರ ಶೈಲಿ ಅತ್ಯಂತ, ಸರಳ; ಭಾವ

26. ದಾಸರೆಂದರೆ ಪುರಂದರ ದಾಸರಯ್ಯ
ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವಾ
ಕಂಗಳಿಗೆ ಹಬ್ಬವಾಯಿತಯ್ಯ
ಮಂಗಳಾತ್ಮಕ ಪುರಂದರ ದಾಸರ ಕಂಡು
ಪನ್ನಂಗಶಯನ ಸಿರಿ ಕೃಷ್ಣನ್ನ ದಾಸರನ
ಉನ್ನತದಿ ಸ್ಮರಿಸಿ ಪಾವನ್ನನಾದೆನಿಂದು–

–ವ್ಯಾಸರಾಯರು.

ಬಹಳ ಚೇತೋಹಾರಿ, ಅಂತೆಯೇ ಇಂದಿಗೂ ಅವರ ನೂರಾರು ಪದಗಳು ಕನ್ನಡಿಗರ ಬಾಯಿಯಲ್ಲಿ ತಾನೇತಾನಾಗಿ ನೆಲೆಸಿ ಹೋಗಿವೆ.

ಪುರಂದರ ದಾಸರ ನಾಲ್ಕು ಮಕ್ಕಳೂ ದಾಸದೀಕ್ಷೆಯನ್ನು ಪಡೆದು ಹರಿದಾಸರಾದರು. ವರದಪುರಂದರ, ಗುರುಪುರಂದರ, ಅಭಿನವ ಪುರಂದರ ಮತ್ತು ಗುರು ಮದ್ವಪತಿ ಎಂಬ ಈ ನಾಲ್ಕು ಜನರು ಕ್ರಮವಾಗಿ ಚಂದ್ರ, ಸೂರ್ಯ, ಬೃಹಸ್ಪತಿ, ಮತ್ತು ಭೃಗುಋಷಿಗಳ ಅಂಶವೆಂದು ವಿಜಯದಾಸರು ಹೇಳಿರುವರು.[27] ಈ ನಾಲ್ವರೂ ಅನೇಕ ಪದಪದ್ಯಗಳನ್ನು ಮಾಡಿಡಿರುವರು. ಪುರಂದರದಾಸರ ಜೀವನಕ್ಕೆ ಸಂಬಂಧಪಟ್ಟ ಅನೇಕ ಅಂಶಗಳನ್ನು ಇವರುಗಳು ತಿಳಿಸಿರುವರು. ಇವರುಗಳಲ್ಲಿ ಕಡೆಯವರಾದ ಮದ್ವಪತಿ ಎಂಬುವರು ಹೆಚ್ಚು ಪದಗಳನ್ನೂ ಮಾಡಿದಂತೆ ತೋರುವುದು. ಇವರು ಅನೇಕ ಮಹಿಮೆಗಳನ್ನು ತೋರಿಸಿದ ಐತಿಹ್ಯವಿದೆ.

vi. ಗದಗಿನ ನಾರಾಯಣಪ್ಪ.

ಗದಗಿನ ನಾರಾಯಣಪ್ಪನು ಪುರಂದರದಾಸರ ಸಮಕಾಲಿಕ. ಇವನು ಗದುಗಿನ ವೀರನಾರಾಯಣನ ಭಕ್ತ. ಇವನು ಹತ್ತು ಪರ್ವ ಭಾರತವನ್ನು ಕನ್ನಡಕ್ಕೆ ಅನುವಾದ ಮಾಡಿರುವನು. ಇವನ ಕಾಲದ ವಿಚಾರದಲ್ಲೂ ಅವನ ಮತದ ವಿಚಾರದಲ್ಲೂ ಹೆಚ್ಚಿನ ಚರ್ಚೆಯಾಗಿದೆ. ಶ್ರೀ ನರಸಿಂಹಾಚಾರ್ಯರು ಮತ್ತು ಶ್ರೀ ಕೃಷ್ಣಪ್ಪನವರು ಇವನನ್ನು ಅದ್ವೈತಿಯೆನ್ನುವರು. ಶ್ರೀ ಸುಬ್ಬರಾಯಶಾಸ್ತ್ರಿಗಳು ಉದ್ಯೋಗಪರ್ವದ ಅವತರಣಿಕೆಯಲ್ಲಿ ಚಾಮರಸನ ಪ್ರಭು ಲಿಂಗಲೀಲೆ, ಚೋರ ಬಸವ ಚರಿತ್ರೆ, ಗುರುರಾಜ ಚಾರಿತ್ರ್ಯ ಮೊದಲಾದ ವೀರಶೈವ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಚಾಮರಸಕವಿಯೆಂದು ಭಾರತವನ್ನು ರಚಿಸಿದ್ದನೆಂದೂ, ಅದು ನಾರಾಯಣಪ್ಪನ ಭಾರತಕ್ಕಿಂತ ಶ್ರೇಷ್ಠವಾಗಿತ್ತೆಂದೂ ಚಾಮರಸನ ತಂಗಿಯ ಗಂಡನೇ ನಾರಾಯಣಪ್ಪನಾದ್ದರಿಂದ ಅವನು ಹೆಂಡತಿಯನ್ನು ಒತ್ತಾಯಮಾಡಿ ಅದನ್ನು ಸುಡಿಸಿ ತಾನು ರಚಿಸಿದ ಭಾರತವನ್ನು ಮೆರೆಸಿದನೆಂದೂ, ಚಾಮರಸ, ಭೀಘಾಪಾಂಕ, ಓರಗಲ್ಲುರಾಜ ಪ್ರತಾಪರುದ್ರ ದೇವ ಮೊದಲಾದವರು ಸಮಕಾಲಿಕನಾದ್ದರಿಂದ ನಾರಾಯಣಪ್ಪನೂ ಇವರ ಸಮಕಾಲಿಕನು, ಅಂದರೆ ಕ್ರಿ.ಶ. 13ನೆಯ ಶತಮಾನದವನೆಂದೂ ಇವನು ಮತ್ಸರಿಯೂ, ಸ್ವಾರ್ಥಿಯೂ, ದಾಂಭಿಕನೂ

---

27. ವರದಪ್ಪನೇ ಸೋಮ ಗುರುರಾಯ ದಿನಕರನು
ಗುರುಮದ್ವಪತಿಯೇ ಭೃಗು, ಅಭಿನವನೇ ಜೀವ

—ವಿಜಯದಾಸರು

ಆಗಿದ್ದನೆಂದೂ ಚಿತ್ರಿಸಿ , ಇವನನ್ನು ವೀರಶೈವನನ್ನಾಗಿ ಮಾಡಿದ್ದಾರೆ. ಅಲ್ಲದೆ ಅರಣ್ಯಾ ಪರ್ವದ ಕಿರಾತಾರ್ಜುನೀಯ ಮೊದಲಾದ ಕೆಲಸಂದರ್ಭಗಳಲ್ಲಿ ಇವನು ಶಿವ ಸರ್ವೋತ್ತಮತ್ವವನ್ನು ಹೇಳಿರುವುದರಿಂದಲೂ ಅದ್ವೈತ ಪ್ರಮೇಯವನ್ನು ಹೇಳುವ–

ಜೀವಪರಮರ ಭೇದವನು ಸಂಭಾವಿಸದೆ ವೇದಾಂತ ಶಾಸ್ತ್ರವ
ನಾವಮುಖವೆಂದರಿಯದೇ ದಾಸೋಹವೆಂದೆನುತೆ।
ಕೋವಿದರ ಸಂಗವನುಳಿದು ಮಾಯಾವಿಲಾಸದ ಬಗೆಯನೋಡದೆ
ಸಾವುತಿಹುದ್ಯೆ ದ್ವೈತಮತವವನೀಪಾಲ ಕೇಳೆಂದ। ।

–ಉ.ಪ. ೪–೭೭.

ಎಂಬಿವೇ ಪದ್ಯಗಳಿಂದಲೂ ಇವನು ಅದ್ವೈತಿಯೆನ್ನುವುದುಚಿತವೆಂದು ಅವರ ಅಭಿಪ್ರಾಯ. ಇವನ ಗ್ರಂಥವನ್ನು ವಿಚಾರ ಮಾಡಿದರೆ ಇವನು ಮಾಡಿರುವ ಮಂಗಳಾಚರಣದ–

ವಂದಿತಾಮರಸೇವ್ಯನಾಯಕ ನಂದಮುನಿ ಯತಿ (ಕುಲ) ಚರ್ಕವರ್ತಿಯ
ಕಂದ ನತಸಂಸಾರಕಾನನ ಘಾನದಪಾನಳನು।
ನಂದನಂದನ ಸನ್ನಿಭನು ಸಾನಂದಿಂದವೆ ನಮ್ಮವನು ಕೃಪೆ
ಯಿಂದ ಸಲಹುಗೆ ದೇವ ಜಗದಾರಾಧ್ಯ ಗುರುರಾಯ। ।

ಎಂಬ ಪದ್ಯ ಮಧ್ವಾಚಾರ್ಯರಿಗೇ ಅನ್ವಯಿಸುವುದೆಂದೂ, ಇವನು ತನ್ನ ಗ್ರಂಥದ ಅನೇಕ ಸ್ಥಳಗಳಲ್ಲಿ ಮಧ್ವಮತಪ್ರಮೇಯವನ್ನು ಎತ್ತಿಸಾರಿರುವನೆಂದೂ, ಆದ್ದರಿಂದ ಇವನು ಮಾಧ್ವನಿರಬೇಕೆಂದೂ ಯುಕ್ತಿ ಯುಕ್ತವಾಗಿ ಪಂಡಿತ. ವಿ. ಶಾಮಾಚಾರ್ಯರು ಆದಿಪರ್ವದ ಅವತರಣಿಕೆಯಲ್ಲಿ ವಿಚಾರ ಮಾಡಿದ್ದಾರೆ.

ಯಾವುದೇ ವಿಷಯವನ್ನಾಗಲೀ ವಿಮರ್ಶೆಮಾಡುವಾಗ ಅಂತರಂಗ ಪ್ರಮಾಣಗಳನ್ನು ಮೊದಲು ವಿಮರ್ಶಿಸಬೇಕು. ಇದು ಪ್ರಬಲವಾದ ಪ್ರಮಾಣವು. ಇದರ ಅನಂತರದಲ್ಲಿ ಬಹಿರಂಗ ಪ್ರಮಾಣಗಳು. ನಾರಾಯಣಪ್ಪನ ಭಾರತವು ವೈಷ್ಣವಗ್ರಂಥವು. ಯದ್ಯಪಿ ಭಾರತವು ಸಕಲ ಪ್ರಮೇಯಗಳನ್ನೊಳಗೊಂಡಿದ್ದರೂ ವಿಷ್ಣೂತ್ಕರ್ಷವೇ ಅದರ ಮುಖ್ಯ ತಾತ್ಪರ್ಯ. ಇದರ ಕೆಲವೊಂದು ಅಂಶಗಳಾದ ಹರಿಶ್ಚಂದ್ರ ನಳ ಮೊದಲಾದ ಉಪಾಖ್ಯಾನಗಳು ಸರ್ವಮತಸ್ಥರಿಗೂ ಸಾಮಾನ್ಯವಾದ್ದರಿಂದ ಎಲ್ಲರಿಂದಲೂ ಗ್ರಾಹ್ಯವು. ಅಂತೆಯೇ ವೀರಶೈವನಾದ ರಾಘವಾಂಕನು ಹರಿಶ್ಚಂದ್ರ ಕಾವ್ಯವನ್ನೂ ರಚಿಸಿದನು. ಆದರೆ ನಾರಾಯಣಪ್ಪನ ಭಾರತವಾದರೋ ಕೇವಲ ವಿಷ್ಣುಭಕ್ತರಿಂದ ಮಾತ್ರ ರಚಿಸಿರಬಹುದಾದಂತಹ ಗ್ರಂಥದಂತಿದೆ ಇದು ವೀರಶೈವ ಕವಿಯಿಂದ ರಚಿತವಾಗಿದೆಯೆಂಬದು ಕೇವಲ

ಅಸಂಭಾವಿತವು. ಇದು ಸಮಗ್ರ ವೀರಶೈವಸಾಹಿತ್ಯ ಸರಣಿಗೆ ವಿರುದ್ಧವಾಗುವುದು. ಈಗ ಉಪಲಬ್ಧವಿರುವ ನಾರಾಯಣಪ್ಪನ ಭಾರತವಾದರೋ ಕಾವ್ಯದೃಷ್ಟಿಯಿಂದ ಅತ್ಯಂತ ರಸಗರ್ಭಿತವೂ, ಅಲಂಕಾರ ಪೂರ್ಣವೂ, ಪದಪ್ರೌಢವೂ, ಆಗಿದ್ದು ಕನ್ನಡ ಸಾಹಿತ್ಯದಲ್ಲೇ ಅತ್ಯುತ್ತಮದರ್ಜೆಯ ಕಾವ್ಯವೆನಿಸಿದೆ. ಇದಕ್ಕಿಂತಲೂ ಚಾಮರಸ ರಚಿತ ಭಾರತವು ಉತ್ತಮವಾಗಿತ್ತೆಂಬುದು ಬರಿಯ ಊಹೆಯಾಗುವುದು. ಚಾಮರಸನಾದರೂ ಕನ್ನಡದ ಶ್ರೇಷ್ಠ ಕವಿಯು. ನಾರಾಯಣಪ್ಪನೂ, ಚಾಮರಸನೂ ಅತ್ಯಂತ ಆಪ್ತರಾಗಿದ್ದಲ್ಲಿ ದೊಡ್ಡಕವಿಗಳಾದ ಅವರು ಪರಸ್ಪರ ದ್ವೇಷದಿಂದ ಕಾದಾಡಿದರೆಂಬುದು ಗರ್ಹಣೀಯವಾದ ವಿಚಾರ. ಇದು ಚಾಮರಸನಿಗೂ ಶೋಭಾವಹವಲ್ಲ. ಆದ್ದರಿಂದ ಗುರುರಾಜಚಾರಿತ್ರ್ಯದಲ್ಲೂ ಚೋರಬಸವ ಚರಿತ್ರೆಯಲ್ಲೂ ಯಾರೋ ಇತ್ತೀಚಿನ ವೀರಶೈವರು ಈ ಕಥೆಯನ್ನು ಕಲ್ಪನೆಮಾಡಿ ಸೇರಿಸಿರಬೇಕು. ನಾರಾಯಣಪ್ಪನು ವ್ಯಾಸರಾಯರ ಸಮಕಾಲಿನಾದ್ದರಿಂದ 13 ನೆಯ ಶತಮಾನದ ಚಾಮರಸನಿಗೂ, 16 ನೆಯ ಶತಮಾನದ ನಾರಾಯಣಪ್ಪನಿಗೂ ಯಾವ ಸಾಮಾನಾಧಿಕರಣ್ಯವೂ ಇಲ್ಲವೆಂಬುದೇ ಸಿದ್ಧಾಂತವು.

ನಾರಾಯಣಪ್ಪನು ವೀರನಾರಾಯಣನ ಕಿಂಕರನೆಂದು ಪುನಃ ಪುನಃ ಹೇಳಿಕೊಂಡಿದ್ದಾನೆ. ವೀರನಾರಾಯಣನಿಗೇ ಮಂಗಳಮಾಡಿರುತ್ತಾನೆ. ಅದೇ 'ವರ–ಅಂಕಿತ'ವನ್ನೇ ಹೊಂದಿದ್ದಾನೆ. ಭಾರತವನ್ನು 'ಕೃಷ್ಣಕಥೆ'ಯೆಂದೂ ಹೇಳಿರುವನು.

ಇದ ವಿಚಾರಿಸೆ ಬರಿಯ ತುಳಸಿಯ ಉದಕದಂತಿರೆ ಇಲ್ಲಿ ನೋಳ್ಪುದು
ಪದುಮನಾಭನ ಮಹಿಮೆ ಧರ್ಮವಿಚಾರ ಮಾತ್ರವನು।

ವೀರಶೈವ ಅಥವಾ ಅದ್ವೈತಿ ಕವಿಯ ಬಾಯಿಂದ ಇಂತಹ ಮಾತು ಎಂದಿಗೂ ಬರಲಾರದು. ಕಾವ್ಯದಲ್ಲಿ ಬಂದಿರುವ ಹರಹರ ಮಹದೇವ, ಶಿವಶಿವ ಎಂಬ ಪದಗಳು ಕಾವ್ಯಮರ್ಯಾದೆಯನ್ನನುಸರಿಸಿ ಬಂದುವು. ಕಿರಾತಾರ್ಜುನೀಯ ಮೊದಲಾದ ಘಟ್ಟಗಳಲ್ಲಿನ ಶಿವಪಾರಮ್ಯೋಕ್ತಿಯು ಮಿಶ್ರಸ್ಥಳವಾದ್ದರಿಂದ ಅಂತರ್ಯಾಮಿ ವಿವಕ್ಷಯಾ ಉಕ್ತವಾದುದು. ಅದು ಈ ಕವಿಯ ಮತದ ಬಗ್ಗೆ ಪ್ರಾಮಾಣಿಕ ಸಮರ್ಥನೆಯಾಗದು. ಇವನು ಮಂಗಳಾಚರಣೆಯಲ್ಲಿ ಮೊದಲೆರಡು ಪದ್ಯಗಳಲ್ಲಿ ಭಗವಂತ ಆಮೇಲೆ ಲಕ್ಷ್ಮೀ, ಬ್ರಹ್ಮಾ, ಸರಸ್ವತಿ, ಶಿವ, ಪಾರ್ವತಿ, ಗಣೇಶ, ವ್ಯಾಸರು ಮತ್ತು ಮಧ್ವಾಚಾರ್ಯರು ಈ ಕ್ರಮದಲ್ಲಿ ದೇವತಾ ಸ್ತೋತ್ರಮಾಡಿರುವುದರಿಂದ ಈ ತಾರತಮ್ಯಜ್ಞಾನವು ಮಧ್ವಮತ ಪ್ರಮೇಯಬಲ್ಲವರಾಗಿ ಇದರಲ್ಲಿ ಪ್ರಾಮುಖ್ಯ ಬುದ್ಧಿಯುಳ್ಳವರಿಂದಲೇ ಸಾಧ್ಯವು. ಅಂದರೆ ಕವಿಯು ಮಧ್ವಮತಾವಲಂಬಿಯೆಂದು ಹೇಳಲು ಹಿಂಜರಿಯಬೇಕಾದುದಿಲ್ಲ. ಚತುರ್ಮುಖ ಬ್ರಹ್ಮದೇವರ ಸ್ತೋತ್ರದಲ್ಲಿ

'ಭಾರತೀರಮಣ' ಎಂಬ ವಿಶೇಷಣವು ಬ್ರಹ್ಮ. ವಾಯುಗಳಿಗಿರುವ ಸರಿ ಸಮಾನತೆಯೆಂಬ ಮಾಧ್ವಪ್ರಮೇಯವನ್ನು ಸೂಚಿಸುವುದು. ಭೀಮೋತ್ಪತ್ತಿ ಪ್ರಕರಣದಲ್ಲಿ.

ಎಂದಬಳಿಕರವಿಂದಲೋಚನೆಯೆಂದು ಸಾಕ್ಷಾದ್ದೇವ ಮಧ್ವರ
ತಂದೆಯನು ರುಜುಗುಣದ ಮುಖ್ಯಪ್ರಾಣದೇವನನು।
ಇಂದುಮುಖಿ ವರಮಂತ್ರದಿಂದವೆ ಕಂದೆರೆದು ಕಳುಹಿದಳು ತಾ ಕಡು
ಮಿಂದು ಬಾಹ್ಯಾಂತರದಿ ವರಶುಚಿಯಾಗಿ ಕೈಮುಗಿದು। ।

ಎಂಬ ಪದ್ಯವು ಭಾರತದ ಕೆಲ ಪ್ರತಿಗಳಲ್ಲಿಸಿಗುವುದು. ಇದರಲ್ಲಿನ "ಸಾಕ್ಷಾದ್ದೇವ ಮಧ್ವರ ತಂದೆಯನು" ಎಂಬ ಪದವು ಇವನ ಮತದ ಬಗೆ ನಿಸ್ಸಂಶಯವಾದ ಬೆಳಕನ್ನು ತೋರುವುದು. ಇದರಂತೆಯೇ ಅಮೃತಮಥನ ಕಾಲದಲ್ಲಿ ವಿಷವುದ್ಭವಿಸಿದಾಗ ವಾಯುದೇವರು ಅದನುಂಡು ಶಿವನಿಗೆ ಕೊಟ್ಟರೆಂಬ ಕಥೆ, ಐರಾವತ ಮತ್ತು ದಶಾವತಾರ ಕಥೆಗಳು ಇವೆಲ್ಲ ಇವನು ವೈಷ್ಣವನೆಂಬುದನ್ನು ಸಮರ್ಥಿಸುವುವು. ದ್ರೌಪದಿಯ ಪೂರ್ವಜನ್ಮದ ವೃತ್ತಾಂತವನ್ನು ಹೇಳುವಾಗಲೂ ನಾರಾಯಣಪ್ಪನು ಶ್ರೀ ಮಧ್ವಾಚಾರ್ಯರು ತಾತ್ಪರ್ಯ ನಿರ್ಣಯದ 18ನೆಯ ಅಧ್ಯಾಯದಲ್ಲಿ ಹೇಳಿರುವುದನ್ನೇ ಅನುಸರಿಸಿರುವನು. ಹಿಡಿಂಬಿಯನ್ನು ಭೀಮಸೇನನು ಲಗ್ನವಾಗುವ ಸಂದರ್ಭದಲ್ಲಿ ನಾರಾಯಣಪ್ಪನು ಬರೆದಿರುವ ಪದ್ಯಗಳು ಗಮನಾರ್ಹವಾಗಿವೆ.

ವಾರಿತವ ತನಗಣ್ಣ ನಿರೆ ನಾ ಧಾರುಣಿಯೊಳಗಿದ ಮಾಡಬಹುದೆನೆ
ಮಾರುತಾತ್ಮಜ ಕೇಳು ನೀನೇ ಹಿರಿಯನೆಲ್ಲರಿಗೆ।
ನಾರಿಯಾದರೆ ದೇವವಧು ದೈತ್ಯಾರಿಗಗ್ಗದ ಭಕ್ತೆ ದನುಜನ
ವೀರಕಾಣಿಕೆ ಬಂದಳಿಲ್ಲಿಗೆ ನಿನಗೆ ವಧುವೆನಿಸಿ ||೨೮||

ಹಿರಿಯ ನೀ ಧರ್ಮಜಗೆ ನೀನೆಲೆ ನಿರುತ ಕಾರಣ ಪ್ರಕೃತಿ ಪುರುಷರ
ನೆರವಣಿಗೆ ಹರಿಸಿರಿಯುನಿಬ್ಬರನುಳಿದು ಭೂಗುಣಕೆ।
ಮಾರುತಾತ್ಮಜ ನಿನಗೆ ಸರಿಯಿಾ ಧರೆಯ ಜೀವರೊಳಾರುಯೆಂದೊಡೆ
ಸರಸಿಜಾಸನ ಪಿತಗೆ ಬಿನ್ನಹ ಮಾಡಿದನು ಭೀಮ ||೨೯||

ಜನನ ಮೊದಲೆನಗಾಗದೇತಕ್ಕೆನಲು ಮುನಿಯಿಂತೆಂದ ಮೊದಲಲಿ
ಜನನವಾದರೆ ರಾಜಕಾರಿಯ ನಡೆವುದಿಲ್ಲೆಂದ।
ಜನಪ ತನ್ನಜ್ಞಾನಹರಿಯಲಿ ಕನಲಿಸುತ ನಿನಗಿಲ್ಲ ಸಂಶಯ
ವನಜಲೋಚನನಲ್ಲಿಯಾಗಳು ಮುಖ್ಯಧರ್ಮಗಳು ||೩೦||

ಸಾರಲರಿಯಪದಕ್ಕೆ ಜೀವರ ಮಾರಿಯಹೆಯನ್ಯಾಯಕಂಡರೆ
ಧಾರುಣಿಯ ಸುರಕಾರ್ಯಕೋಸುಗ ಹಿರಿಯಧರ್ಮಜನು।
ಸಾರಿ ನಯದಲಿ ತಿಳಿಯಹೇಳಿ ಕುಮಾರ ಸಂಭವ ಮಾಡಿಯೆಂದೇ
ನಾರಿಯನು ಗಂಟಿಕ್ಕಿ ತಿರುಗಿದ ಭೀಮಸೇನುಂಗೆ ||೩೧||

—ಆದಿಪರ್ವ. ೨೩ನೇ ಸಂಧಿ.

ಕವಿಯು ವೀರಶೈವನೋ ಅದ್ವೈತಿಯೋ ಆಗಿದ್ದಲ್ಲಿ ಈ ಮಾತುಗಳು ಅವನ ಬಾಯಲ್ಲಿ ಬರುತ್ತಿರಲಿಲ್ಲ. ಭೀಮಸೇನದೇವರ ಶ್ರೇಷ್ಠತೆಯನ್ನು ಅಂದರೆ ಜೀವೋತ್ತಮತ್ವವನ್ನು ಒಪ್ಪುವರು ಮಾಧ್ವರೊಬ್ಬರೇ. ಭೀಮಸೇನ ದೇವರನ್ನು ಹಿರಿಯರನ್ನಾಗಿ ಮಾಡದೇ ಧರ್ಮಜನನ್ನು ಹಿರಿಯನನ್ನಾಗಿ ಮಾಡಿದುದಕ್ಕೆ ಶ್ರೀ ಮಧ್ವಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ ಯಾವ ಯುಕ್ತಿಯನ್ನು ಹೇಳಿರುವರೋ ಈ ಕವಿಯೂ ಅದೇ ಯುಕ್ತಿಯನ್ನೇ ಹೇಳಿರುವನು.

कीर्त्यर्थमेव निजधर्म परिप्रहाणे प्राप्तेऽग्रजस्य वचनात्प्रविहातुमेव ।
भीमस्य दोषमुभयं प्रविहन्तुमीशो ज्येष्ठश्चकार हरिरत्र सुतं वृषस्य ।।

।।१९-३९।।

हन्तव्यतामुपगतेषु सुयोधनादिष्वन्योवधान्नहि भवेन्निज धर्म एवं।
पूर्व वधेन हि समस्तश एव दोषा स्तेषां प्रयान्ति विवृतिं च तदर्थतोऽपि

।।३०।।

ಆಚಾರ್ಯರ ವಚನವು ಹೀಗಿರುವುದರಿಂದ ನಾರಾಯಣಪ್ಪನು ಮಾಧ್ವ ತತ್ತ್ವರಹಸ್ಯವನ್ನರಿತ ಕವಿಯೆಂಬುದು ನಿರ್ವಿವಾದ, ನಾರಾಯಣಪ್ಪನ ಸುಮಾರು ಕ್ರಿ.ಶ.1508—1530ರ ಕಾಲದಲ್ಲಿದ್ದವನೆಂದು ಹೇಳಬಹುದು. ಏಕೆಂದರೆ ಇವನು ಮಹಾಭಾರತವನ್ನು ರಚಿಸಿ ಕೃಷ್ಣದೇವರಾಯನ ಆಸ್ಥಾನಕ್ಕೆ ಬಂದು ಅಲ್ಲಿ ವ್ಯಾಸರಾಯರಿಗೆ ಇದನ್ನು ತೋರಿದನೆಂದೂ ಅವರು ಇದನ್ನು ಆಮೂಲಾಗ್ರವಾಗಿ ಕೇಳಿ ಸಂತೋಷಪಟ್ಟು 'ಅರಸುಗಳಿಗಿದು ವೀರ'ವೆಂಬ ಪದ್ಯವನ್ನು ರಚಿಸಿಕೊಟ್ಟು ಈ ಕವಿಯನ್ನು 'ಕುಮಾರವ್ಯಾಸ'ನೆಂದು ಕರೆದರೆಂಬ ಐತಿಹ್ಯವಿದೆ. ಅದೇ ಸಮಯದಲ್ಲಿದ್ದ ಪುರಂದರದಾಸರು ನಾರಾಯಣಪ್ಪನನ್ನು ಸುಳಾದಿಯೊಂದರಲ್ಲಿ ಪ್ರಸಂಸೆ

ಮಾಡಿರುವರು. [28] ನಾರಾಯಣಪ್ಪನ ಭಾರತವು ಶ್ರೇಷ್ಠದರ್ಜೆಯ ಹರಿದಾಸ ಸಾಹಿತ್ಯವು ಇದರಲ್ಲಿ ಕೃಷ್ಣನೇ ನಾಯಕನಾಗಿರುವುದೂ, ಹರಿ ಸ್ತೋತ್ರಾದಿಗಳು ಪ್ರಧಾನವಾಗಿರುವುದರಿಂದಲೂ, ಭಕ್ತಿರಸ ಪ್ರಧಾನ ಕಾವ್ಯವಾದ್ದರಿಂದಲೂ, ಇದು ಹರಿದಾಸಸಾಹಿತ್ಯಕ್ಕೆ ಸೇರಿಸಬೇಕಾದ ಕೃತಿಯೆಂದೂ, ನಾರಾಯಣಪ್ಪನು ಶ್ರೇಷ್ಠ ಹರಿದಾಸನೆಂದೂ ಹೇಳುವುದಕ್ಕೆ ಅಡ್ಡಿಯಿಲ್ಲ. ಪುರಂದರದಾಸರೇ ಇವನನ್ನು ಹಾಗೆ ಪ್ರಶಂಸೆ ಮಾಡಿರುವರು.

Vii. ವೈಕುಂಠದಾಸರು.

ವೈಕುಂಠದಾಸರು ಪುರಂದರದಾಸರ ಸಮಕಾಲಿಕರು. ಶ್ರೀ ವೈಷ್ಣವ ಬ್ರಾಹ್ಮಣರಾದ ಇವರು ಬೇಲೂರಿನಲ್ಲಿ ಹುಟ್ಟಿಬೆಳೆದು ಅಲ್ಲೇ ವಾಸವಾಗಿದ್ದರು. ಮೊದಲಿಂದಲೂ ದೇವೋನ್ಮಾದಿಗಳಾಗಿದ್ದು, ದೇವರ ದರ್ಶನಕ್ಕಾಗಿ ಹಾತೊರೆಯುತ್ತಿದ್ದರು. ಇವರ

---

28. ಹರಿಶರಣರೆನ್ನ ಮನೆಯಮೆಟ್ಟಲು ಮನೆ। ಪರಮಪಾವನ್ನವಾಯಿತು ಆಆಆ
ಹರಿಶರಣರೆನ್ನ ಕೂಡಿ ಮಾತನಾಡೆ ಮನವು। ಕರಣಂಗಳು ಪಾವನ್ನ ಆಆಆ
ಹರಿಶರಣರೆನ್ನ ಮನೆಯಲ್ಲುಂಡರೆ। ಎನ್ನವರ ಇಪ್ಪತ್ತೊಂದುಕುಲ ಪಾವನ ಆಆ
ಹರಿಗದುಗಿನ ವೀರನಾರಾಯಣಸ್ವಾಮಿ । ಹರಿ ಪುರಂದರ ವಿಠಲರೇಯ ಆಆ ||

ಮಠ್ಯತಾಳ.

ಭಾರತ ಆಗಮಗೋಚರವೆಂದು ವಿಚಾರಿಸೆ ಮನುಜರಿಗೆ ಗೋಚರವಪ್ಪಂತೆ ।
ವೀರನಾರಾಯಣ ನೀ ಕವಿಯೆನಿಸಿದೆ ಕುಮಾರವ್ಯಾಸನಿಂದ ಭಾರತವ ವಿರಚಿಸಿದೆ ।

ಅಟತಾಳ

ಭಾರತಮಲ್ಲ ಭೀಮನೆಂಬರು ಗಡ । ಭಾರತಮಲ್ಲ ಅರ್ಜುನನೆಂಬರು ಗಡ।
ಭಾರತಮಲ್ಲ ಕರ್ಣನೆಂಬರು ಗಡ । ಭಾರತಮಲ್ಲ ಇವರಾರು ಅಲ್ಲಗಡ
ಭಾರತಮಲ್ಲ ಗದುಗಿನ ವೀರ ನಾರಾಯಣನು ಗಡ ಪುರಂದರವಿಠಲ । ।

ಆದಿತಾಳ

ಯದುಕುಲದಲ್ಲುದಿಸಿ ಗೋಪೇರನೊಲಿಸಿದ । ಗದುಗಿನ ವೀರಪುರಂದರ ವಿಠಲ

ಜತೆ

ಪದುಮನಾಭ ಸಿರಿಪುರಂದರವಿಠಲ ಗದುಗಿನ ವೀರನಾರಾಯಣಸ್ವಾಮಿ। ।

ಭಕ್ತಿಗೆ ಮೆಚ್ಚಿ ಚೆನ್ನಕೇಶವಸ್ವಾಮಿ ಇವರಿಗೆ ಬಾಹ್ಯದರ್ಶನವನ್ನಿತ್ತ. ಇವರು ಸದಾಕಾಲ ಚೆನ್ನಕೇಶವನ ಸನ್ನಿಧಾನದಲ್ಲಿ ಕಾಲಕಳೆಯುತ್ತಿದ್ದರು. ಜಾತ್ಯಾ ಇವರು ಶ್ರೀವೈಷ್ಣವರಾಗಿ ಕೇಶವೈಂಗಾರರೆಂಬ ಹೆಸರಿನವರಾದರೂ, ಇತರ ಹರಿದಾಸರುಗಳಂತೆ ಇವರು ಭಗವತ್ಸಾಕ್ಷಾತ್ಕಾರವಾದಂದಿನಿಂದ ವೈಕುಠದಾಸರೆನಿಸಿ, 'ವೈಕುಂಠ' ಎಂಬ ಅಂಕಿತದಿಂದಲೇ ಪದಗಳನ್ನು ರಚಿಸಿದುದಾಗಿ ತಿಳಿದು ಬರುತ್ತದೆ. ವೈಕುಂಠದಾಸರು ರಚಿಸಿದ ಅನೇಕ ಪದಗಳು ಅವರ ದೋಹಿತ್ರವಂಶದಲ್ಲಿ ಇದ್ದುದಾಗಿ ಶ್ರೀ ಬೇಲೂರು ಕೇಶವದಾಸರು ಬರೆಯುತ್ತಾರೆ. ಅದರಲ್ಲಿ ಅನೇಕಪದಗಳಲ್ಲಿ ಕೇಶವಸ್ವಾಮಿಯು ಪರಿಪರಿಯ ಲೀಲೆಗಳನ್ನು ತೋರಿಸುತ್ತಿದ್ದನೆಂಬ ವರ್ಣನೆ ಇದೆ. ಇವರು ಅರ್ಜುನಾಂಶರೆಂಬ ಪ್ರತೀತಿ ಇದೆ. ಇವರು ಒಮ್ಮೆ ಪುರಂದರದಾಸರ ಜೊತೆಗಿದ್ದಾಗ ಆನೆಯೊಂದರಿಂದ ಪಾರಾಗಿ ಅಪಮೃತ್ಯುವನ್ನು ಕಳೆದು ಕೊಂಡಿದ್ದರಿಂದ ಮತ್ತೊಮ್ಮೆ ಹುಟ್ಟಬೇಕಾಗಿಬಂದಿತೆಂದೂ, ಇದಕ್ಕಾಗಿ ಇವರೇ ಮುಂದೆ ಪಂಗನಾಮದ ತಿಮ್ಮಣ್ಣದಾಸರಾದರೆಂದೂ ಹೇಳುವ ವಾಡಿಕೆ ಇದೆ. ಇವರ ಪದಗಳೂ ಅತ್ಯಂತ ಭಕ್ತಿರಸಪ್ರಧಾನವಾಗಿವೆ.

Viii. ಕನಕದಾಸರು.

ಕನಕದಾಸರು ವ್ಯಾಸರಾಯರ ಶಿಷ್ಯರು. ಇವರು ಜಾತಿಯಿಂದ ಕುರುಬರು. ಧಾರವಾಡದ ಜಿಲ್ಲೆಯ ಬಾಡವೆಂಬ ಗ್ರಾಮದವರು. ಅನೇಕ ಗ್ರಾಮಗಳ ಢಣಾಯಕರು. ಇವರ ಹೆಸರು ಭೀರಪ್ಪ, ಇವರು ಬೇಟೆ, ಬಿಲ್ಲು ಬಿಡುವುದು. ಕತ್ತಿವರಸೆ, ಕಾಳಗಗಳಲ್ಲಿ ನುರಿತವರು. ನಿಧಿಯೊಂದು ಇವರಿಗೆ ದೊರಕಿದ್ದರಿಂದ ಇವರು ಕನಕನಾಯಕರಾದರು. ಇವರು ತಿರುಪತಿ ಯಾತ್ರೆಗೆ ಹೋಗಿ ಬರುವ ರೂಢಿ ಇತ್ತು. ಅಲ್ಲಿಯ ಉತ್ಸವಾದಿಗಳನ್ನು ನೋಡಿ, ಇವರು ತಮ್ಮೂರಹತ್ತಿರ ಕಾಗಿನೆಲೆಯಲ್ಲಿ ದೊಡ್ಡದೊಂದು ದೇವಸ್ಥಾನ ಕಟ್ಟಿಸಿ ಅಲ್ಲಿ ಕೇಶವ ದೇವರನ್ನು ಪ್ರತಿಷ್ಠೆಮಾಡಿಸಿ. ವಿಶೇಷ ಉತ್ಸವಾದಿಗಳ ವ್ಯವಸ್ಥೆ ಮಾಡಿದರು. ಇವರು ದೇವರ ಆಜ್ಞೆಯ ಮೇರೆಗೆ ಹರಿದಾಸರಾಗಿ, ಕನಕದಾಸರೆನಿಸಿದರು. ತಮ್ಮ ಐಶ್ವರ್ಯ. ಆಡಂಭರಗಳೆಲ್ಲವನ್ನೂ ಬಿಟ್ಟು ಕಂಬಳಿಹೊದ್ದು ಕೈಯಲ್ಲಿ ಏಕತಾರೆಯನ್ನು ಹಿಡಿದು ವ್ಯಾಸರಾಯರಲ್ಲಿ ಹೋಗಿ ಮಾಧ್ವದೀಕ್ಷೆಯನ್ನು ಪಡೆದರು. ಇದಕ್ಕೆ ಮೊದಲು ಇವರು ಶ್ರೀ ವೈಷ್ಣವ ಪಂಥಾನುಯಾಯಿಗಳಿರಬಹುದು. ಇವರು ರಚಿಸಿರುವ ಮೋಹನತರಂಗಿಣಿಯಲ್ಲಿ ಆ ಮತದ ಅನೇಕ ಪ್ರಮೇಯಗಳಿರುವುದಲ್ಲದೆ, ಇವರು ಅದರಲ್ಲಿ ರಾಮಾನುಜಾಚಾರ್ಯರಿಗೆ ನಮಸ್ಕಾರಮಾಡಿರುತ್ತಾರೆ. ಇವರು ಆರಂಭದಿಂದಲೇ ಕನ್ನಡಪದಗಳನ್ನು ರಚಿಸುತ್ತಿದ್ದುದಾಗಿ ತೋರುವುದು, 'ಬಾಡದಾದಿ ಕೇಶವ', 'ಕಾಗಿನೆಲೆಯಾದಿಕೇಶವ'ವೆಂಬ ಅಂಕಿತಗಳು ಇವರ ಪದಗಳಲ್ಲಿ ಕಾಣುವುವು.

ವಿಜಯನಗರದಲ್ಲಿ ವ್ಯಾಸರಾಯರ ಸನ್ನಿಧಾನದಲ್ಲೇ ಇವರು ಬಹುಕಾಲ ಇದ್ದರು. ಆ ಸಂದರ್ಭಧಲ್ಲಿ ಇವರು, ಪುರಂದರದಾಸರು ಮತ್ತು ವ್ಯಾಸರಾಯರು ಒಟ್ಟಿಗೆ ಸೇರಿ ಭಗವದ್ವಿಚಾರ ಚರ್ಚೆಮಾಡುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ವ್ಯಾಸರಾಯರು ಇವರಿಗೆ ಕೊಡುತ್ತಿದ್ದ ಪುರಸ್ಕಾರವನ್ನು ನೋಡಿ ಸಹಿಸಲಾರದೆ ಮಠೀಯರು ಇವರ ಮೇಲೆ ಸ್ವಾಮಿಗಳ ಮುಂದೆ ದೂರುಹೇಳುತ್ತಿದ್ದರು. ಆಗ ಕನಕದಾಸರು ತೋರಿಸುತ್ತಿದ್ದ ಅನೇಕ ಅದ್ಭುತ ಚಮತ್ಕಾರಗಳನ್ನು ನೋಡಿದ ಮೇಲೆ ಅವರುಗಳು ಲಜ್ಜಿತರಾಗಿ ಸುಮ್ಮನಾದ ಪ್ರಸಂಗಗಳು ಈಗಲೂ ಪರಂಪರೆಯಲ್ಲಿ ರೂಢವಾಗಿವೆ. ಪುರಂದರದಾಸರು ಇದನ್ನು ಒಂದು ಪದವಾಗಿ ರಚಿಸಿರುವರು.[29] ವಿಜಯನಗರದಿಂದ ಇವರು ಪ್ರತಿವರುಷವೂ ತಪ್ಪದಂತೆ ತಿರುಪತಿಗೆ ಯಾತ್ರೆ ಹೋಗುತ್ತಿದ್ದರು, ತಿರುಪತಿಯಲ್ಲಿ ದೇವರು ಇವರೊಡನೆ ಅನೇಕ ಅದ್ಭುತ ಲೀಲೆಗಳನ್ನು ನಡೆಸಿದ ಸಂದರ್ಭಗಳಿವೆ. ತಿರುಪತಿಯಲ್ಲದೆ ಇವರು ಅನೇಕ ದಕ್ಷಿಣ ಯಾತ್ರೆಗಳನ್ನು ಮಾಡಿಕೊಂಡು ಬೇಲೂರಿಗೆ ಬಂದು ಅಲ್ಲಿ ಅನೇಕ ದಿನ ವಾಸವಾಗಿದ್ದರು. ಬೇಲೂರಿನಲ್ಲಿ ವೈಕುಂಠದಾಸರಿಗೂ ಇವರಿಗೂ ವಿಶೇಷ ಮೈತ್ರಿಯೇರ್ಪಟ್ಟಿತು. ಅಲ್ಲಿಂದ ಕನಕದಾಸರು ಉಡುಪಿಗೆ ಹೋದರು. ಅಲ್ಲಿ ಸುಲಭವಾಗಿ ದೇವರ ದರ್ಶನವಾಗದಿದ್ದುದರಿಂದ ಇವರು ಹಿಂದಿನ ಕಿಟಕಿಯ ಹತ್ತಿರನಿಂತು ಮೊರೆಯಿಟ್ಟರು. ಆಗ ಶ್ರೀ ಕೃಷ್ಣಪ್ರತಿಮೆ ಇವರ ಕಡೆ ಮುಖ ತಿರುಗಿಸಿತು. ಅಂದಿನಿಂದ ಆ ಸಣ್ಣ ಕಿಟಕಿಗೆ ಕನಕನಕಿಂಡಿಯೆಂದೇ ಹೆಸರಾಯಿತು. ಉಡುಪಿಯಲ್ಲಿ ವಾದಿರಾಜರು ಇವರನ್ನು ಸನ್ಮಾನಿಸಿದರು. ಇವರು ವಾದಿರಾಜರಲ್ಲೇ ಚಕ್ರಾಂಕನ ಮಾಡಿಸಿಕೊಂಡಂತೆ ತೋರುವುದು. ತಾವು ತ್ರಿವಿಕ್ರಮದಾಸರ (ವಾದಿರಾಜರ) ದಾಸರೆಂದು ಇವರು ಕೊಂಡಾಡಿದ್ದಾರೆ.[30]

---

29. ಕನಕದಾಸನ ಮೇಲೆ ದಯಮಾಡು, ವ್ಯಾಸ–
ಮುನಿ ಮಠದವರೆಲ್ಲ ದೂರಿಕೊಂಬುವರೋ ||ಪ ||
ತೀರ್ಥವನು ಕೊಡುವಾಗ ಕನಕನ್ನ ಕರೆಯೆನಲು
ಧೂರ್ತರಾಗಿದ್ದ ವಿದ್ವಾಂಸರೆಲ್ಲ,
ಸಾರ್ಥಕವಾಯ್ತು ಇವರ ಸನ್ಯಾಸಿತನವೆಲ್ಲ।
ಪೂರ್ತ್ಯಾಗಲೆಂತೆನಲು ಯತಿಯು ನಗುತಿದ್ದನು ||೧ ||

30. ನಕ್ರ ಕಂಠವನುತ್ತರಿಸಿ ಗಜೇಂದ್ರನ। ವಕ್ತ್ರವಿಶರಣೆಗೈದ
ಚಕ್ರಪಾಣಿಯ ಕುರ್ತು ಕೃತಿಪೇಳುತನಗೆ ತ್ರಿವಿಕ್ರಮದಾಸಸ್ಯದಾಸ ||

– ಮೋಹನ ತರಂಗಿಣಿ.

ಕನಕದಾಸರು ಬಿಡಿಯಾಗಿ ಸಾವಿರಾರು ಪದಗಳನ್ನು ಮಾಡಿರುವುದಲ್ಲದೆ ಮೋಹನತರಂಗಿಣೀ, ಹರಿಭಕ್ತಿಸಾರ, ನಳಚರಿತ್ರೆ, ನೃಸಿಂಹಸ್ತವ, ರಾಮಧ್ಯಾನ ಚರಿತ್ರೆ ಎಂಬ ಪ್ರಬಂಧಗಳನ್ನು ರಚಿಸಿರುವರು. ಕನಕದಾಸರ ಮುಂಡಿಗೆಗಳೆಂಬವು ಪಂಡಿತರಿಂದಲೂ ಬಿಡಿಸಲಾರದ ಸಮಸ್ಯೆಗಳು. ಇವರ ಕೃತಿಗಳಲ್ಲಿ ಲಾಲಿತ್ಯ, ಶಬ್ದಕ್ಕಿಂತಲೂ ಹೆಚ್ಚಾಗಿ ಅರ್ಥದ ಬಿಕ್ಕಟ್ಟು, ಹೃದಯಕ್ಕೆ ನಾಟುವಂತಹ ಪದಗಳು, ನಿರ್ದಾಕ್ಷಿಣ್ಯ ಮಾತುಗಳು ಎದ್ದು ತೋರುವುವು, ಮಾರಿ ಮಸಣಿ ಮೊದಲಾದ ಕ್ಷುದ್ರದೇವತೆಗಳನ್ನೂ ಪೂಜಿಸುವ ಅಸಂಸ್ಕೃತರೂ ಶೂದ್ರರೂ ಆದವರ ಮನಸ್ಸಿನ ಮೇಲೆ ಪರಿಣಾಮಮಾಡುವಂತಹ ಅನೇಕ ಪದಗಳನ್ನು ರಚಿಸಿರುವರು. ಈ ಪದಗಳಲ್ಲಿನ ಶಬ್ದಗಳು ಆ ಜನರಲ್ಲಿ ನಿತ್ಯ ಬಳಕೆಯಲ್ಲಿರುವಂತಹವೇ. ಇವರು ಆ ಜನರಲ್ಲಿದ್ದ ಎಷ್ಟೋ ಅಂಧಾಚಾರಗಳನ್ನೂ ನಿಲ್ಲಿಸಿ ಅವರಲ್ಲಿ ಹರಿಭಕ್ತಿ ಮೂಡುವಂತೆ ಮಾಡಿದರು. ಇದೊಂದು ದೊಡ್ಡ ಸಮಾಜ ಸುಧಾರಣೆ ಎಂದೇ ಹೇಳಬೇಕು. ಇವರು ಯಮಾಂಶರೆಂಬ ಹೇಳಿಕೆ ಇದೆ.

ಇಲ್ಲಿಗೆ ದಾಸಸಾಹಿತ್ಯದ ಮೊದಲನೆಯ ಮತ್ತು ಮಹೋನ್ನತವಾದ ಅಧ್ಯಾಯ ಮುಗಿಯಿತು. ಕ್ರಿ.ಶ. ಹದಿಮೂರನೆಯ ಶತಮಾನದಲ್ಲೇ ನರಹರಿತೀರ್ಥರಿಂದ ಆರಂಭವಾದ ಕನ್ನಡದಾಸಸಾಹಿತ್ಯ ಶ್ರೀಪಾದರಾಜರಿಂದ ಮುಂದೆ ಪುಷ್ಪಫಲ ಭರಿತವಾಯಿತು. ಶ್ರೀಪಾದರಾಜರಿಂದ ಕನಕದಾಸರು ಪೂರ್ತಿಯಾಗಿ ದಾಸಸಾಹಿತ್ಯದ **ಸುವರ್ಣಾಕ್ಷರ ಯುಗವೆಂದು** ಹೇಳಬಹುದು. ಈ ಯುಗದಲ್ಲಿ ಬಂದ ಬಹುಜನದಾಸರು ಬರಿಯ ದೇವೋನ್ಮಾದಿಗಳಷ್ಟೇ ಅಲ್ಲದೆ ಭಗಪದಪರೋಕ್ಷ ಜ್ಞಾನಿಗಳೂ, ದೇವಾಂಶ ಸಂಭೂತರೂ ಆಗಿದ್ದು, ಅವರ ರಚನೆಗಳೆಲ್ಲವೂ ಹರಿದಾಸಸಾಹಿತ್ಯಕ್ಕೆ ಅಮೂಲ್ಯಕಾಣಿಕೆಯಾಗಿವೆ. ಇವರ ಒಂದೊಂದು ವಾಕ್ಯವೂ ಹರಿದಾಸ ಸಾಹಿತ್ಯಕ್ಕೆ ಅಮೂಲ್ಯಕಾಣಿಕೆಯಾಗಿವೆ. ಇವರ ಒಂದೊಂದು ವಾಕ್ಯವೂ ಉಪನಿಷತ್ತಿನ ವಾಕ್ಯಗಳಂತೆ ಬಹುಸರಳವೂ ಬಹ್ವರ್ಥಗರ್ಭಿತವೂ ಆಗಿರುವುವು. ಇವರುಗಳಲ್ಲಿ ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರು, ವಿಜಯೀಂದ್ರರಂತಹ ಪೀಠಾಧಿಪತಿಗಳೂ, ಪಂಡಿತರೂ, ತತ್ವಜ್ಞಾನಿಗಳೂ, ಪುರಂದರದಾಸರಂತಹ ದಾಸಶ್ರೇಷ್ಠರೂ, ಕನಕದಾಸರಂತಹ ಶೂದ್ರಜನ್ಮದ ಅಪರೋಕ್ಷ ಜ್ಞಾನಿಗಳೂ, ನಾರಾಯಣಪ್ಪನಂತಹ ಕವಿಶ್ರೇಷ್ಠರೂ, ಇದ್ದು ಜೀವನದ ಎಲ್ಲ ಕ್ಷೇತ್ರಗಳಲ್ಲೂ ಪರಿಣತರಾಗಿದ್ದವರು ಹರಿದಾಸ್ಯ ದೀಕ್ಷೆ ಪಡೆದು ಕನ್ನಡಸಾಹಿತ್ಯವನ್ನು ಪೋಷಿಸಿದ್ದು ಕನ್ನಡ ದೇಶದ ಭಾಗ್ಯೋದಯವೆಂದೇ ಹೇಳಬೇಕು. ಇಂತಹ ಅಪೂರ್ವಜ್ಞಾನಿಗಳಿಗೆ ಆಶ್ರಯದೊರೆತುದು ಕರ್ಣಾಟಕ ಸಾಮ್ರಾಟನಾದ ಕೃಷ್ಣದೇವರಾಯನಲ್ಲಿ. ಅದು ಮತ್ತೊಂದು ಕನ್ನಡಸಾಹಿತ್ಯದ ವೈಶಿಷ್ಟ್ಯ. ಇಂತಹ ಜ್ಞಾನಿಗೋಷ್ಠಿ ಮಾಧ್ವ ಸಮಾಜಕ್ಕೂ

ಅತ್ಯಂತ ಉಪಕಾರಕವಾಯಿತು. ಹಿಂದೆ ಪುರಾಣಗಳಲ್ಲಿ ಉತ್ತಮವಾದಂತಹ ಪ್ರಹ್ಲಾದಾದಿ ಭಾಗವತ ಶ್ರೇಷ್ಠರುಗಳ ಸಮ್ಮಿಲನ ನರದೇಹದಲ್ಲಿ ಈಗ ಮತ್ತೊಮ್ಮೆಯಾದುದರಿಂದಲೇ ಇಂತಹ ಶ್ರೇಷ್ಠ ಭಕ್ತಿಸಾಹಿತ್ಯ ಹೊರಹೊಮ್ಮಿ ತೆನ್ನಲೇನೂ ಅಡ್ಡಿಯಿಲ್ಲ. ಇದರ ಪರಿಣಾಮವು ಕನ್ನಡ ಸಾಹಿತ್ಯ ಮತ್ತು ಜನತೆಯ ಮೇಲೆ ಶಾಶ್ವತವಾಗಿ ಆಯಿತೆಂದೂ ಧಾರಾಳವಾಗಿ ಹೇಳಬಹುದು.

3. ವಿಸ್ತಾರಕಾಲ

ದಾಸಸಾಹಿತ್ಯದಲ್ಲಿ ಎರಡನೆಯ ಅಧ್ಯಾಯ ಆರಂಭವಾಗುವ ಮುನ್ನ ಪುರಂದರಾದಿ ದಾಸರುಗಳಿಂದ ಬಂದ ದಾಸಸಾಹಿತ್ಯವನ್ನು ಮುಂದಿನ ತಲೆ ಮಾರಿಗೆ ಒದಗಿಸಿಕೊಟ್ಟ ಮಹಾನುಭಾವರಾದ ಶ್ರೀ ರಾಘವೇಂದ್ರಸ್ವಾಮಿಗಳ ವಿಷಯ ಅವಶ್ಯವೇದ್ಯವಾದುದು. ಇವರ ವಿಚಾರವನ್ನು ಅತ್ಯಂತ ಸುಂದರವಾಗಿ ಹೇಳಿರುವ ಶ್ರೀ. ಪಂಚಮುಖಿಯವರ ಮಾತನ್ನೇ ಇಲ್ಲಿ ಉದ್ಧರಿಸುವುದು ಸೂಕ್ತವಾಗಿದೆ–

i. ಶ್ರೀ ರಾಘವೇಂದ್ರ ತೀರ್ಥರು.

[ಮುದ್ರಿಕೆ ಧೀರವೇಣುಗೋಪಾಲ]

ಇವರು ರಾಯರು ಅಥವಾ ಮಂತ್ರಾಲಯದ ರಾಯರೆಂದು ಪ್ರಖ್ಯಾತರಾಗಿದ್ದಾರೆ. ಇವರ ಮಹಾತ್ಮ್ಯವನ್ನು ಕೇಳದ ವೈಷ್ಣವರೇ ಇಲ್ಲವೆನ್ನ ಬಹುದು. ಇತರ ಮತೀಯರೂ ಪರಧರ್ಮೀಯರೂ ಸಹ ಇವರ ಪ್ರಭಾವಕ್ಕೆ ಬೆರಗಾಗಿ ತಮ್ಮ ತಮ್ಮ ಮನೆಗಳಲ್ಲಿ ಅವರ ಚಿತ್ರವನ್ನಾಗಲೀ. ವೃಂದಾವನವನ್ನಾಗಲೀ ಇಟ್ಟು ಪೂಜಿಸುತ್ತ ಅಭೀಷ್ಟ ಸಿದ್ಧಿಯನ್ನೂ ಪಡೆಯುತ್ತಾರೆ. ಇವರು ವಿಜಯೀಂದ್ರ ತೀರ್ಥರ ಶಿಷ್ಯರಾದ ಸುಧೀಂದ್ರ ತೀರ್ಥರ ಕರಕಮಲ ಸಂಜಾತರು. ಇವರ ತಪೋಬಲವೂ ಜ್ಞಾನಭಕ್ತಿ ವಿರಕ್ತಿಗಳೂ ಅಪ್ರತಿಮವಾಗಿದ್ದು ಶ್ರೀ ಹರಿಯ ಪ್ರಸಾದವನ್ನು ಸಂಪಾದಿಸಿದವು. ಇವರು ಪ್ರಹ್ಲಾದನ ಅವತಾರವೆಂದೂ ಎಲ್ಲರೂ ತಿಳಿದಿರುವರು. ಅಪರೋಕ್ಷ ಜ್ಞಾನಿಗಳೆಂದು ಪ್ರಸಿದ್ಧರಾದ ವಿಜಯದಾಸ, ಜಗನ್ನಾಥದಾಸ, ಪ್ರಸನ್ನ ವೆಂಕಟದಾಸರು ಈ ಮಹಾನುಭಾವರನ್ನು ಕುರಿತು ಅನೇಕ ಪದಗಳನ್ನು ರಚಿಸಿರುತ್ತಾರೆ. ಅವುಗಳಿಂದ ಶ್ರೀರಾಯರ ಅನೇಕ ಚಾರಿತ್ರಿಕ ಅಂಶಗಳು ಗೊತ್ತಾಗುವುವು. ನಾರಾಯಣಾಚಾರ್ಯರಿಂದ ರಚಿತವಾದ 'ರಾಘವೇಂದ್ರ ವಿಜಯವೂ', ವಾದೀಂದ್ರರಿಂದ ರಜಿತವಾದ 'ಗುರುಗುಣ ಸ್ತವನ'ವೂ ರಾಯರ ಜೀವನ ಚರಿತ್ರೆಯನ್ನು ತಿಳಿದುಕೊಳ್ಳಲಿಕ್ಕೆ ಅವಶ್ಯಕವಾದ ಆಧಾರಗಳಿರುವುವು. ಇವಲ್ಲದೆ ರಾಯರಿಗೆ ಆ ಕಾಲದ ರಾಜರು ಕೊಟ್ಟ ತಾಮ್ರಶಾಸನಗಳೂ, ಪರಂಪರಾಗತ ಐತಿಹ್ಯವೂ ಈ ಸಂದರ್ಭದಲ್ಲಿ ಬಹಳ ಸಹಾಯವನ್ನು ಕೊಡುವುವು. ಪ್ರಕೃತ ದಾಸಸಾಹಿತ್ಯಕ್ಕೆ

ಸಂಬಂಧಪಟ್ಟ ಅಂಶವನ್ನು ಮಾತ್ರ ಇಲ್ಲಿ ನಿರೂಪಿಸುವೆವು.

ಶ್ರೀರಾಘವೇಂದ್ರ ತೀರ್ಥರು ಪುರಂದರದಾಸರ ಗುಂಪಿಗೂ, ವಿಜಯದಾಸಾದಿ ಹರಿಭಕ್ತರಗುಂಪಿಗೂ ಮಧ್ಯವರ್ತಿಗಳಾಗಿದ್ದು ಪರಂಪರೆಯಿಂದ ಬಂದ ದಾಸ–ವ್ಯಾಸಕೂಟಗಳ ತಿರುಳನ್ನು ಮುಂದಿನ ಭಕ್ತವೃಂದಕ್ಕೆ ನೀಡುವ ಜೀವನಳಿಕೆಯಂತಿದ್ದರೂ. ಇವರಿಂದ ವ್ಯಾಸಕೂಟ ದಾಸಕೂಟಗಳು ಚಿಗುರಿದವು. ನಾರದರು ಬಿತ್ತಿದ ಹರಿಭಕ್ತಿ ಬೀಜವು ಧ್ರುವನಿಂದ ಅಂಕುರಿಸಿ ಪ್ರಹ್ಲಾದನಿಂದ ಮೊಳಕೆಯಾದಂತೆ, ನಾರದಾವತಾರಿಗಳಾದ ಪುರಂದರದಾಸರಿಂದ ಜನರಲ್ಲಿ ಉಪದೇಶಿಸಲ್ಪಟ್ಟ ಹರಿಭಕ್ತಿ, ಹರಿದಾಸ್ಯಗಳು ಪ್ರಹ್ಲಾದಾವತಾರಿಗಳಾದ ಶ್ರೀವ್ಯಾಸ ತೀರ್ಥರ ವಿದ್ಯಾಕೇಂದ್ರದಲ್ಲಿ ವ್ಯಾಸಕೂಟದ ಜೀವಿಕೆಯಿಂದ ಪುಷ್ಟವಾಗಿದ್ದರೂ, ಅವರ ನಂತರ ಅವು ಪ್ರಚಾರಹೊಂದದೆ ಉಳಿದದ್ದರಿಂದ ಅವುಗಳನ್ನು ಉಜ್ಜೀವಿಸಿದವರು ಭಕ್ತಾಗ್ರಣಿಗಳೂ ದಾಸಶ್ರೇಷ್ಠರೂ ಆದ ಶ್ರೀರಾಘವೇಂದ್ರ ತೀರ್ಥರು.

ವಿಜಯನಗರದ ಸಾಮ್ರಾಜ್ಯವು ಅಳಿದಮೇಲೆ ತತ್ತ್ವವಿವೇಚನೆ.ಯಲ್ಲೂ, ರಾಜನೀತಿಯಲ್ಲೂ ಅವ್ಯವಸ್ಥೆಯಾಗಿ ವಿಚಾರಸಾಂಕರ್ಯವುಂಟಾಯಿತು. ಕ್ರಿ.ಶ. 1565ರಲ್ಲಿ ಅಳಿಯರಾಮರಾಯನು ಮಡಿದಮೇಲೆ ಅರಾಜಕತೆಯಿಂದ ಮ್ಲೇಂಛರು ವಿಜಯನಗರವನ್ನು ಮುತ್ತಿ ಅವನ ರಾಜ್ಯವನ್ನು ಅಕ್ರಮಿಸಲು ಹವಣಿಸಿದರು. ವಿಜಯನಗರದ ಮಾಂಡಲಿಕರು ಅಲ್ಲಲ್ಲಿ ಪಾಳೆಯಗಳನ್ನ ಕಟ್ಟಿಕೊಂಡು ಸ್ವತಂತ್ರರಾದರು. ಹೀಗೆ ರಾಜಕೀಯ ಕ್ಷೇತ್ರವು ಬಹು ಅಸ್ತವ್ಯಸ್ತವಾಗಿತ್ತು. ಶ್ರೀ ರಾಮಾನುಜೀಯ ಶ್ರೀ ಶಂಕರ ಮತೀಯರಲ್ಲೂ ವೀರಶೈವರಲ್ಲಿಯೂ ಅನೇಕ ವಿದ್ವಾಂಸರೂ ಸಾಧುಸಂತರೂ ಹುಟ್ಟಿ ಗ್ರಂಥಗಳನ್ನು ರಚಿಸಿದರು. ಧರ್ಮ ಮತಗಳ ಪರಸ್ಪರ ಸಂಘರ್ಷದಿಂದ ತತ್ತ್ವವಿವೇಚನೆಯಲ್ಲಿ ಸ್ಥಿರತೆಇಲ್ಲಾಯಿತು. ಈ ಸಂದರ್ಭದಲ್ಲಿ ಹರಿಭಕ್ತರ ತತ್ತ್ವವಾದವೂ, ವೈದಿಕಸಂಪ್ರದಾಯವೂ ಲುಪ್ತವಾಗಹತ್ತಿದವು. ಅವುಗಳನ್ನು ರಕ್ಷಿಸಿದ ಮಹಾನುಭಾವರು 17ನೆಯ ಶತಮಾನದಲ್ಲಿ ಅವತರಿಸಿದ ಶ್ರೀ ರಾಘವೇಂದ್ರ ತೀರ್ಥರು. ಆ ನಡುವಿನ ಕಾಲದಲ್ಲಿ ಉದಯಹೊಂದಿದ್ದ ಶ್ರೀ ಅಪ್ಪಯ್ಯದೀಕ್ಷಿತರಂತಹ ಉದ್ದಾಮ ಶೈವ ವಿದ್ವಾಂಸರೂ ಮೀಮಾಂಸಕರೂ ಶ್ರೀವಿಜಯೀಂದ್ರ ತೀರ್ಥರ ಸಮಕಾಲಿಕರಾಗಿದ್ದರು. ಶ್ರೀವಿಜಯೀಂದ್ರತೀರ್ಥರು ಅವರ ಗ್ರಂಥಗಳನ್ನು ಖಂಡಿಸಿ ಅಲ್ಲಿ ಪುರಸ್ಕರಿಸಲ್ಪಟ್ಟ ಶೈವಪಾಖಂಡಮತವನ್ನು ನಿರಸನಮಾಡಿ 104 ಸ್ವತಂತ್ರ ಪ್ರಬಂಧಗಳನ್ನೂ ಗ್ರಂಥಗಳನ್ನೂ ರಚಿಸಿದರು. ಅವರ ಪ್ರಶಿಷ್ಯರಾದ ರಾಘವೇಂದ್ರ ತೀರ್ಥರ ಕಾಲದಲ್ಲಿ, ತಂಜಾವೂರು ನಾಯಕರ ಆಸ್ಥಾನದಲ್ಲಿ ಮಂತ್ರಿ ಗೋವಿಂದದೀಕ್ಷಿತರ ಮಗ ಯಜ್ಞನಾರಾಯಣದೀಕ್ಷಿತರು ಒಳ್ಳೇ ಪ್ರಖ್ಯಾತ ಶೈವಾದ್ವೈತ ಪಂಡಿತರಾಗಿದ್ದರು, ಉದ್ದಾಮಪಂಡಿತರೆಂದು ಪ್ರಸಿದ್ಧಿ ಹೊಂದಿದ್ದ ರಾಘವೇಂದ್ರ

ತೀರ್ಥರು ಅವರನ್ನು ವಾದದಲ್ಲಿ ಸೋಲಿಸಿದರು. ಶ್ರೀ ರಾಯರು ಸ್ವೀಯ ವೈಷ್ಣವರಲ್ಲಿ ತತ್ತ್ವನಿಶ್ಚಯವೂ, ಉಪಾಸನಾ ಭಾಗವೂ ಲೋಪಹೊಂದುತ್ತ ಬಂದದ್ದನ್ನು ನೋಡಿ ಅನೇಕ ಅನ್ಯಮತೀಯ ವಿದ್ವಾಂಸರ ಪ್ರಭಾವಕ್ಕೆ ಬೆರಗಾಗಿ ತತ್ತ್ವವಾದದಲ್ಲಿ ಸಂಶಯವುಳ್ಳ, ಜಿಜ್ಞಾಸುಗಳಿಗೆ ಉಪಕಾರವಾಗುವಂತೆ ಆಗುಂತಕ ಪೂರ್ವಪಕ್ಷಗಳನ್ನು ನಿವಾರಿಸಿ ಶ್ರೀ ಮಧ್ವಾಚಾರ್ಯರ ಗ್ರಂಥಗಳಿಗೂ ಉಪನಿಷತ್ತುಗಳು, ಶ್ರೀ ವೇದವ್ಯಾಸರ ಬ್ರಹ್ಮಸೂತ್ರ ಗೀತಾದಿ ಗ್ರಂಥಗಳಿಗೂ ಸುಲಭವಾದ, ಅರ್ಥಗಂಭೀರವಾದ ಟೀಕೆ ಟಿಪ್ಪಣಿ, ವಿವೃತ್ತಿಗಳನ್ನೂ, ಖಂಡಾರ್ಥಗಳನ್ನೂ ರಚಿಸಿದರು. ವೇದಗಳಿಗೆ ವ್ಯಾಖ್ಯಾನ ಬರೆದು, ಮೀಮಾಂಸಕ ಪ್ರಕ್ರಿಯೆಯು, ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಾ ನಡೆದದ್ದನ್ನು ನೋಡಿ, ಜೈಮಿನೀಯ ಸೂತ್ರಗಳಿಗೆ 'ಭಾಟ್ಟಸಂಗ್ರಹ'ವೆಂಬ ಟಿಪ್ಪಣಿಯನ್ನು ಬರೆದರು. ಹೀಗೆ ಅನೇಕ ಗ್ರಂಥಗಳನ್ನು ರಚಿಸಿ, ಮದ್ವಸಿದ್ಧಾಂತವು ಪಂಡಿತರುಗಳಿಗೂ ವಿದ್ಯಾರ್ಥಿಗಳಿಗೂ ಸುಗಮವಾಗುವಂತೆ ಮಾಡಿದರೂ. ಇವರ ವಿವೃತ್ತಿ, ಟಿಪ್ಪಣಿಗಳೂ, ತರ್ಕಮೀಮಾಂಸಾದಿ ಪರಿಭಾಷೆಗಳಿಗೆ ಮರುಳಾಗದೆ ಕೇವಲ ವೇದಾಂತ ಮರ್ಯಾದೆಯಿಂದಲೂ, ಅ ಪರಿಭಾಷೆಯಿಂದಲೂ ಬರೆಯಲ್ಪಟ್ಟವೆಯಾದ್ದರಿಂದ ಇವರ ಗ್ರಂಥಗಳಿಂದ ಶ್ರೀ ಮಧ್ವಾಚಾರ್ಯರಿಗೆ ಮತ್ತು ಟೀಕಾಚಾರ್ಯರಿಗೆ ಸಂಪ್ರತಿಪನ್ನವಾದ ತತ್ತ್ವವಾದದ ಪ್ರಮೇಯಗಳನ್ನೂ ತಿಳಿದುಕೊಳ್ಳಬಹುದು.

ವ್ಯಾಸ ಕೂಟವು ಇವರಿಂದ ಕಳೆಗೊಂಡಿತು. ಇದರಂತೆ ದಾಸಕೂಟದಲ್ಲಿಯೂ ರಾಯರು ಜೀವಕಳೆಯನ್ನು ತುಂಬಿದರು. ವಿಜಯನಗರದಲ್ಲಿ ವ್ಯಾಸತೀರ್ಥರು ತತ್ತ್ವವಾದದ ಮತ್ತು ಹರಿಭಕ್ತಿಯ ಕೇಂದ್ರವನ್ನು ಸ್ಥಾಪಿಸಿದಂತೆ ಶ್ರೀರಾಯರು ಮಂತ್ರಾಲಯದಲ್ಲಿ ಇದನ್ನು ಬೆಳೆಸಿದರು. ಇವರ ಉಪದೇಶದ ಪ್ರಭಾವದಿಂದ ಮಂತ್ರಾಲಯದ ಸುತ್ತಲಿನ ಪ್ರದೇಶದಲ್ಲಿ ಅನೇಕ ದಾಸಾಗ್ರಣಿಗಳು ಉದಯ ಹೊಂದಿದರು. ಆ ಪರಂಪರೆಯಲ್ಲಿ ಮಾನವೀಯ ಹತ್ತಿರ ಚೀಕಲ ಪರವಿಯ ವಿಜಯದಾಸರೂ, ಬ್ಯಾಗವಟ್ಟಿಯ ನರಸಿಂಹದಾಸರೂ, ಅವರ ಮಗ ಜಗನ್ನಾಥ ದಾಸರೂ, ಪಂಗನಾಮ ತಿಮ್ಮಣ್ಣದಾಸರೂ, ಗೋಪಾಲದಾಸರೂ, ಮೋಹನದಾಸರೂ, ವೇಣೀಸೋಮಪುರದ ಶ್ರೀವ್ಯಾಸತತ್ತ್ವಜ್ಞ ತೀರ್ಥರೂ ಸುಮಾರು ಒಂದೇ ಕಾಲದಲ್ಲಿ ದಾಸಕೂಟವನ್ನು ಅಲಂಕರಿಸಿದರು. ಆದ್ದರಿಂದ ಪುರಂದರದಾಸರ ದಾಸಕೂಟಕ್ಕೂ ವಿಜಯದಾಸರ ದಾಸಕೂಟಕ್ಕೂ ನಡುವೆ ಇದ್ದು ದಾಸಕೂಟದ ಬೆಳವಣಿಗೆಗೆ ಜೀವಕಳೆಯನ್ನು ತಂದುಕೊಟ್ಟ ಭಾಗ್ಯವು ಶ್ರೀ ಮಂತ್ರಾಲಯದ ಪ್ರಭುಗಳಾದ ಶ್ರೀ ರಾಘವೇಂದ್ರ ತೀರ್ಥ ಶ್ರೀಪಾದಂಗಳವರಿಗೆ ಉಂಟು. ಪುರಂದರದಾಸರು ನಾರದರ ಅವತಾರವೆಂದೂ ಅವರ ಕಾಲದಲ್ಲಿದ್ದ ವ್ಯಾಸತೀರ್ಥರನ್ನು ಪ್ರಹ್ಲಾದರ ಅವತಾರವೆಂದೂ ವಿಜಯದಾಸ ಜಗನ್ನಾಥದಾಸರು ವರ್ಣಿಸಿರುವರು. ಮೇಲೆ ಹೇಳಿದಂತೆ ನಾರದರ

ಭಕ್ತಿಯ ಬೀಜವು ಪ್ರಹ್ಲಾದನಿಂದ ಮೊಳಕೆಯೊಡದಂತೆ ಪುರಂದರದಾಸರ ಭಕ್ತಿ ಕೂಟವು ಶ್ರೀವ್ಯಾಸತೀರ್ಥರ ತತ್ತ್ವವಾದದ, ಜ್ಞಾನೋಪದೇಶಕ ಗ್ರಂಥಗಳಿಂದಲೂ, ಪದಪದ್ಯಗಳಿಂದಲೂ ಕಳೆಗೊಂಡಿತು. ಇದು ಮತ್ತೆ ಪ್ರಹ್ಲಾದಾವತಾರಿಗಳಾದ ಶ್ರೀ ಮಂತ್ರಾಲಯಪ್ರಭುರಾಯರಿಂದ ಉಜ್ಜೀವಗೊಂಡಿತು. ಇದು ಜ್ಞಾನಸಾಂಕರ್ಯದ ಕಾಲವಾದ್ದರಿಂದ ಉಪದೇಶದ ಬೀಜವು ಜನರ ಮನಸ್ಸಿನಲ್ಲಿ ದೃಢವಾಗಿ ನಿಲ್ಲುತ್ತಿದ್ದಿಲ್ಲ. ಪುರಂದರದಾಸರ ಮಕ್ಕಳಾದ ಮಧ್ವಪತಿ ವಿಠಲರ ಅವತಾರವೆಂದು ಪ್ರಸಿದ್ಧರಾದ ವಿಜಯದಾಸರ ಅವತಾರಕಾಲದಲ್ಲಿ ಷಟ್ ಶಾಸ್ತ್ರಪಂಡಿತರೂ ಭಕ್ತಾಗ್ರಣಿಗಳೂ ಪ್ರಹ್ಲಾದನ ತಮ್ಮನಾದ ಸಹ್ಲಾದನ ಅವತಾರವೆಂದೂ ಹೆಸರಾದ ಜಗನ್ನಾಥದಾಸರಿಂದ ಮತ್ತೆ ಬಲಗೊಂಡಿತು.

ಇದೇ ಕಾಲದಲ್ಲಿ ಪ್ರಸನ್ನವೆಂಕಟದಾಸರು ಚಿಕ್ಕ ಪುರಂದರದಾಸರೆಂದು ಪ್ರಸಿದ್ಧರಾಗಿದ್ದರು. ಈ ಎಲ್ಲಾ ದಾಸವೃಂದಕ್ಕೆ ಉಪದೇಶಕ್ಕೂ ಶ್ರೇಯೋಭಿವೃದ್ಧಿಗೂ ಮಂತ್ರಾಲಯವು ಮಾನ್ಯವಾದ ಕೇಂದ್ರವಾಯಿತು. ಈಗಲೂ ದಾಸಸಂಪ್ರದಾಯಿಗಳೂ, ವ್ಯಾಸಕೂಟದ ವಿದ್ವಾಂಸರೂ, ಯತಿಗಳೂ, ತವರುಮನೆಯಂತೆ ಒತ್ತಟ್ಟಿಗೆ ಸೇರಿ ಸೇವೆಯನ್ನು ಆ ಮಹಾನುಭಾವರಿಗೆ ಸಲ್ಲಿಸಿ ಶ್ರೀಹರಿಯ ಊಳಿಗದವರೆಂದೂ ಬಿರುದನ್ನು ಪಡೆಯುವರು. ಅಂತು ಮಂತ್ರಾಲಯಸ್ವಾಮಿಗಳೂ ವ್ಯಾಸಕೂಟ ದಾಸಕೂಟಗಳ ಜೀವತಂತುವಾಗಿರುವರೆಂಬುದನ್ನು ಈ ವಿವರಣೆಯಿಂದ ತಿಳಿದುಕೊಳ್ಳಬಹುದು. — ಹರಿದಾಸರ ಸಾಹಿತ್ಯ ಪುಟ 68–70.

ರಾಯರ ಮೇಲೆ ದಾಸರುಗಳು ರಚಿಸಿರುವಷ್ಟು ಪದಗಳನ್ನು ಇನ್ನಾವ ಗುರುಗಳಮೇಲೂ ರಚಿಸಿಲ್ಲವೆನ್ನಬಹುದು. ಅದರಲ್ಲೂ ವಾದಿರಾಜರಂತೆ ರಾಯರು ಸಶರೀರರಾಗಿ ಬೃಂದಾವನ ಪ್ರವೇಶಮಾಡಿದುದಲ್ಲದೆ, ಆ ಬೃಂದಾವನದಲ್ಲಿ ಸನ್ನಿಹಿತರಾಗಿದ್ದುಕೊಂಡು ಭಕ್ತಜನರ ಇಷ್ಟಾರ್ಥಗಳನ್ನು ಪೂರ್ಣಮಾಡುತ್ತಿರುವುದರಿಂದ ಅವರ ಬೃಂದಾವನದ ಮಹಿಮೆಗಳನ್ನು ಸ್ತೋತ್ರಮಾಡಿರುವುದೇ ಹೆಚ್ಚು.[31]

---

31. ನೋಡಿದೆನು ಗುರುರಾಘವೇಂದ್ರರ ಮಾಡಿದೆನು ಭಕುತಿಯಲಿ ವಂದನೆ
ಬೇಡಿದೆನು ಕೊಂಡಾಡಿ ವರಗಳ ಈಡುಇಲ್ಲದೆ ಮೆರೆವ ಗುರುಗಳ
ಅಲವಬೋಧಮಿಕ್ಕಾದ ಮಹ ಮುನಿಗಳು ಸು ಅಂಶರು ಒಂದುರೂಪದಿ
ನೆಲೆಯಾಗಿ ನಿತ್ಯದಲ್ಲಿ ಇಪ್ಪರು ಒಲಿಸಿಕೊಳ್ಳುತಲಿ ಹರಿಯಗುಣಗಳ
ತಿಳಿದು ತಿಳಿಸುತ ತಮ್ಮ ತಮ ಗಿಂದಧಿಕರಿಂದುಪದೇಶ ಮಾರ್ಗದಿ
ಕಲಿಯುಗದೊಳು ಕೇವಲ ಕತ್ತಲೆಯು ಹರಿಸುವ ಸೊಬಗ ಸಂತತ

— ವಿಜಯದಾಸರು.

ರಾಯರು ಕನ್ನಡದಲ್ಲಿ ರಚಿಸಿರುವ ಪದಗಳಲ್ಲಿ ಈಗ ಒಂದೇ ಉಪಲಬ್ಧವಿರುವುದು.

ii. ಪ್ರಸನ್ನ ವೆಂಕಟದಾಸರು.

ಕ್ರಿಸ್ತಶಕ ಹದಿನೇಳನೆಯ ಶತಮಾನದಿಂದ ದಾಸಸಾಹಿತ್ಯದ ಎರಡನೆಯ ಯುಗವು ಆರಂಭವಾಗುವುದು. ಇದಕ್ಕೆ ಮೂಲಪುರುಷರು ವಿಜಯದಾಸರು. ಪ್ರಸನ್ನ ವೆಂಕಟದಾಸರು ಇವರ ಸಮಕಾಲೀಕರು. ವಿಜಯದಾಸರ ಪರಂಪರೆ ಬೆಳೆದಂತೆ ಪ್ರಸನ್ನ ವೆಂಕಟರ ಪರಂಪರೆ ಬೆಳೆಯಲಿಲ್ಲ. ಪ್ರಸನ್ನ ವೆಂಕಟರ ಹೆಸರೂ ವಿಜಯದಾಸರಷ್ಟು ಹೆಚ್ಚು ಪ್ರಚಾರಕ್ಕೆ ಬರಲಿಲ್ಲ. ಇದಕ್ಕೆ ಇನ್ನೂ ಒಂದು ಕಾರಣವನ್ನು ಊಹಿಸಬಹುದು. ಯದ್ಯಪಿ ಪುರಂದರ ದಾಸರಾದ ಮೇಲೆ ನೂರಾರು ವರ್ಷಗಳ ನಂತರ ವಿಜಯದಾಸರು ಬಂದರೂ, ಅವರು ವ್ಯಾಸಕಾಶಿಯಲ್ಲಿ ಪುರಂದರದಾಸರಿಂದಲೇ ಸ್ವಪ್ನದ್ವಾರಾ ಅಂಕಿತ ಪಡೆದು ದಾಸತ್ವ ದೀಕ್ಷೆ ವಹಿಸಿದ್ದರಿಂದ ಇವರೇ ಪುರಂದರದಾಸರ ತರುವಾಯ ದಾಸಸಾಹಿತ್ಯದ ಪಟ್ಟವನ್ನು ವಹಿಸಿದರೆನ್ನಬಹುದು. ಇದರಿಂದಲೇ ವಿಜಯದಾಸರ ಹೆಸರೂ ಹೆಚ್ಚು ಪ್ರಚಾರವಾಗಿರಬೇಕು. ಆದರೆ ವಿಜಯದಾಸರು ಪ್ರಸನ್ನ ವೆಂಕಟದಾಸರು ಇವರಿಬ್ಬರಿಗೂ ಪ್ರೇರಕ ಶಕ್ತಿಯಾಗಿ ದಾಸಸಾಹಿತ್ಯ ಬೆಳೆಸಿಕೊಟ್ಟ ಕೀರ್ತಿರಾಯರಿಗೆ ಸೇರಿದ್ದು, ಪ್ರಸನ್ನದಾಸರೂ, ವಿಜಯದಾಸರೂ ಅಂತೆಯೇ ರಾಯರನ್ನು ವಿಶೇಷವಾಗಿ ಸ್ತೋತ್ರ ಮಾಡಿದರು.

ಪ್ರಸನ್ನ ವೆಂಕಟದಾಸರ ಹೆಸರು ವೆಂಕಪ್ಪನವರು. ಇವರು ಬಾಗಲ ಕೋಟೆಯ ಹತ್ತಿರ ಕಾಂಡಿಕೆಯೆಂಬ ಗ್ರಾಮದವರು. ಆದರೆ ಬಾಗಿಲ ಕೋಟೆಯಲ್ಲೇ ಬಂದು ನೆಲೆಸಿದ್ದರು. ಬಾಲ್ಯದಲ್ಲಿ ಅಣ್ಣ–ಅತ್ತಿಗೆಯರ ಪೋಷಣೆಯಲ್ಲಿದ್ದ ವೆಂಕಪ್ಪನವರು ಹೆಚ್ಚಿನ ಸಂಸ್ಕೃತಿ ಪಡೆಯಲಿಲ್ಲ. ಆದರೆ ಸ್ವಾಭಾವಿಕವಾಗಿ ಇವರಿಗೆ ತಿರುಪತಿ ವೆಂಕಟೇಶನಲ್ಲಿ ಬಲು ಭಕ್ತಿ. ಮನೆಯಲ್ಲಿ ಬೇಸರ ಬಂದು ಇವರು ತಿರುಪತಿಗೆ ಹೋಗಿ ಅಲ್ಲಿ ವೆಂಕಟೇಶನ ಅನುಗ್ರಹ ಪಡೆದು ಪ್ರಸನ್ನ ವೆಂಕಟನೆಂಬ ಅಂಕಿತದಿಂದ ಪದಪದ್ಯಗಳನ್ನ ರಚಿಸಿದರು. ಇವರು ರಚಿಸಿದ ಪದಗಳ ಹಳೆಯವಹಿಯು ಇವರ ವಂಶಜರಲ್ಲಿ ಈಗಲೂ ಇವೆ. ಅನೇಕ ಪದಗಳಲ್ಲದೆ ಇವರು ದಶಮಸ್ಕಂದ ಭಾಗವತವನ್ನು ಕನ್ನಡಿಸಿರುವರು. ಇವರ ಪದಗಳಲ್ಲಿ ಪದಪ್ರೌಢಿಯೂ, ಅಲಂಕಾರವೂ, ಪ್ರಾಸವೂ ಹೆಚ್ಚಾಗಿ ಕಂಡುಬರುವುದು.

"ಮಾಧವ ನಾನೇನು ಓದಿದವನಲ್ಲ ಶ್ರೀಪಾದವೆ ಗತಿಯೆಂಬೆ ಬಾಧಿಸುತ್ತೈದಾರೆ" ಎಂದು ಅವರೇ ಹೇಳಿಕೊಂಡಿರುವಂತೆ,ಅವರು ವಿದ್ಯಾಭ್ಯಾಸ ಮಾಡದಿದ್ದರೂ. ಹರಿಯ ಅನುಗ್ರಹ ಬಲದಿಂದ ಉತ್ತಮ ಕವಿತಾಶಕ್ತಿಯನ್ನೂ, ಅದಕ್ಕಿಂತಲೂ ಹೆಚ್ಚಾಗಿ ಭಗವದ್ಭಕ್ತಿಯನ್ನೂ ಪಡೆದರು. ಇವರು ಕ್ರಿ.ಶ. 1674ನೆಯ ಭಾದ್ರಪದ ಶುದ್ಧ

ದ್ವಾದಶಿಯ ದಿನ ವೈಕುಂಠವಾಸಿಗಳಾದರೆಂದು ಇವರ ವಂಶಜರಲ್ಲಿಯ ಕಾಗದ ಪತ್ರಗಳಿಂದ ತಿಳಿದುಬರುತ್ತದೆ. ಇವರ ಮುಂದೆ ಎರಡು ತಲೆಮಾರಿನವರೆಗೂ ಹರಿದಾಸರಾಗಿದ್ದರು.

iii. ವಿಜಯದಾಸರು. 1687–1755.

ವಿಜಯದಾಸರು ಹುಟ್ಟಿದ್ದು ರಾಯಚೂರು ಜಿಲ್ಲೆಯ ಮಾನವಿಯ ಹತ್ತಿರದ ಚೇಕಲ ಪರಿಯೆಂಬ ಗ್ರಾಮ. ಇವರು ಶ್ರೀನಿವಾಸಪ್ಪ ಕೂಸಮ್ಮ ಎಂಬ ದಂಪತಿಗಳಲ್ಲಿ ಜನಿಸಿದರು. ಬಡತನದ ನಿಮಿತ್ತ ಲೌಕಿಕ ಈತಿ ಬಾಧೆಗಳಿಗೆ ಸಿಕ್ಕು ಬೆಂಡಾಗಿ ಕಾಶಿಗೆ ಹೋಗಿ, ಅಲ್ಲಿ ಗಂಗೆಯನ್ನು ದಾಟಿ, ವ್ಯಾಸಕಾಶಿಯನ್ನು ಸೇರಿದರು. ಅಲ್ಲಿ ಪುರಂದರದಾಸರು ಇವರ ಸ್ವಪ್ನದಲ್ಲಿ ಕಾಣಿಸಿಕೊಂಡು ಇವರಿಗೆ ವಿಜಯವಿಠಲನೆಂಬ ಅಂಕಿತವನ್ನು ಕೊಟ್ಟು ಗುರೂಪದೇಶಮಾಡಿದರು. ದಾಸಪ್ಪನು ಅಂದಿನಿಂದ ವಿಜಯದಾಸರಾದರು, ಇವರ ಚರಿತೆಯೇ ಆಗಿನಿಂದ ಬದಲಾಯಿಸಿತು. ಇವರೊಬ್ಬ ಸಂಸ್ಥಾನಾಧಿಪತಿಗಳಂತೆ ಇರಹತ್ತಿದರು. ಇವರು ಹೊದೆಡೆ ನೂರಾರು ಬ್ರಾಹ್ಮಣರ ಭೋಜನಗಳಾಗುತ್ತಿದ್ದವು. ನೂರಾರು ಜನ ಭಕ್ತರು ಇವರನ್ನು ಹಿಂಬಾಲಿಸುತ್ತಿದ್ದರು. ಇವರು ಅನೇಕಬಾರಿ ತಿರುಪತಿಯ ಯಾತ್ರೆಯನ್ನು ಮಾಡಿದರು. ಕಂಚಿ, ಕಾಳಹಸ್ತಿ ಶ್ರೀರಂಗಮೊದಲಾದ ಅನೇಕ ಕ್ಷೇತ್ರಗಳಿಗೂ, ಉತ್ತರದಲ್ಲಿ ಕಾಶಿಮೊದಲಾದ ಕ್ಷೇತ್ರಗಳಿಗೂ ಅನೇಕ ಸಲ ಹೋಗಿದ್ದರು. ಇವರು ಅನೇಕ ಅದ್ಭುತ ಮಹಿಮೆಗಳನ್ನು ತೋರಿದರು. ಮಂತ್ರಾಲಯದಲ್ಲಿ ರಾಯರ ಬೃಂದಾವನದಲ್ಲಿ ಇವರು ಸಕಲಗುರುಗಳ ದರ್ಶನಪಡೆದು ಹಾಡಿದರು. ತಾವು ಪೂರ್ವದಲ್ಲಿದ್ದ ಸ್ಥಿತಿಯನ್ನೂ ಗುರ್ವನುಗ್ರಹವಾದ ಮೇಲಿನ ತಮ್ಮ ಸ್ಥಿತಿಯನ್ನೂ ವಿಜಯದಾಸರೇ ಹೇಳಿಕೊಂಡು[32] ಇದೆಲ್ಲ ತಮ್ಮ ಗುರುಗಳಾದ ಪುರಂದರದಾಸರ ಅನುಗ್ರಹವೆಂದಿದ್ದಾರೆ.[33] ಇವರ ಶಿಷ್ಯರಾದ

ಸೌರಾಷ್ಟ್ರ –ಆಟ

32. ನಿನ್ನ ಒಲುಮೆಯಿಂದ ನಿಖಿಲಜನರು ಬಂದು ಮನ್ನಿಸುವರೋ ಮಹಾರಾಯ ||ಪ||
ಎನ್ನ ಪುಣ್ಯಗಳಿಂದ ಈ ಪರಿಯುಂಟೇನೋ ನಿನ್ನದೇ ಸಕಲ ಸಂಪತ್ತು ||ಅ||
ಒಬ್ಬ ಹೆಂಗಸಿನ ಹೊಟ್ಟೆಗೆ ಹಾಕುವುದಕೆನ್ನು ತಬ್ಬಿಬ್ಬುಹೊಂದೆನೋ ಹಿಂದೆ
ನಿರ್ಭರದಿಂದಲಿ ಸರ್ವರಕೂಡುಂಬೋ ಹಬ್ಬವನುಣಿಸುವಿ ಹರಿಯೇ ||೧||
• • • • • • • • • • • • • • • • • •
ವೈದಿಕ ಪದವಿನೀವಗೆ ಲೌಕಿಕ ಐದಿಸುವುದು ಬಹುಖ್ಯಾತೆ |
ಮೈದುನಗೊಲಿದು ಶ್ರೀವಿಜಯವಿಠಲರ ನಿನ್ನ ಪಾದ ಸಾಕ್ಷಿಯನುಭವವೋ ||೭||

33. ದಾಸರಭಾಗ್ಯವಿದು ಪುರಂದರದಾಸರ ಭಾಗ್ಯವಿದು |
ಸರ್ವದೇಶದೊಳು ತುಂಬಿಸೂಸುತಲಿದೆ ||
ಶ್ರವಣಕೀರ್ತನ ವಂದನೆ ಸ್ತೋತ್ರ ಹರಿನಾಮ ತವಕದಿಂದ ನುಡಿವ ಕನವ |
ನವನವ ವಚನವು ಮಂತ್ರ ಸಂಕಲ್ಪರು ಸವಿದು ಸ್ಮರಿಸಿ ನಾ ಬಾಳುವುದಿಲ್ಲ ||

ಗೋಪಾಲ, ಮೋಹನ, ಜಗನ್ನಾಥ ದಾಸಾದಿಗಳು ಅತ್ಯಂತ ಪ್ರಸಿದ್ಧರಾದ ಹರಿದಾಸರಾದರು. ಇವರು ಪೂರ್ವದಲ್ಲಿ ಏನೂ ಓದಿದವರಲ್ಲದಿದ್ದರೂ, ಗುರ್ವನುಗ್ರಹವಾದ ಮೇಲೆ ಇವರಿಗೆ ದಿವ್ಯಜ್ಞಾನವಾಯಿತು. ಅಷ್ಟೇ ಅಲ್ಲ, ಇವರು ಅನುಗ್ರಹಿಸಿದ ಹುಲುಮನುಜರೂ ಸಹ ಶಾಸ್ತ್ರಾನುವಾದ ಮಾಡಲು ಶಕ್ತರಾದರು. ಇವರು ಚತುರ್ಮುಖ ಬ್ರಹ್ಮದೇವರನ್ನು ಸ್ತೋತ್ರಮಾಡಿದ್ದಾರೆ. ಇದರಿಂದಲೂ, ಮೋಹನದಾಸರಿಗೆ ಅಪಮೃತ್ಯು ನಿವಾರಣೆಮಾಡಲು ಯಮಲೋಕದಲ್ಲಿ ಇವರು ಭೃಗುಋಷಿಗಳ ರೂಪದಿಂದ ಕಾಣಿಸಿಕೊಂಡರೆಂಬ ಐತಿಹ್ಯದಿಂದಲೂ, ಇವರ್ನು ಭೃಗುಋಷಿಗಳ ಅಂಶವೆಂತಲೂ, ಪುರಂದರದಾಸರ ಮಕ್ಕಳಾದ ಮಧ್ವಪತಿಗಳ ಪುನರವತಾರವೆಂತಲೂ ಹೇಳುವ ವಾಡಿಕೆ ಇದೆ. ಇವರು 25 ಸಾವಿರ ಕೃತಿ ರಚಿಸಿರುವರು. ಅದರಲ್ಲಿ ಈಗ ಉಪಲಬ್ಧವಿರುವುದು ಬಹಳ ಸ್ವಲ್ಪ. ಈಗಿರುವಷ್ಟು ಸಾಹಿತ್ಯವೇ ಅತ್ಯಂತ ಮಹತ್ವದ್ದೆನ್ನಬಹುದು. ಇದರಲ್ಲಿ ತಮ್ಮ ಗುರುಗಳಾದ ಪುರಂದರದಾಸರು, ರಾಘವೇಂದ್ರಸ್ವಾಮಿಗಳು, ವ್ಯಾಸರಾಯರು ಮೊದಲಾದ ಗುರುಸ್ತೋತ್ರ, ಭಗವಂತನ ಸ್ತೋತ್ರಾದಿಗಳು ಪ್ರಸಿದ್ಧವಾಗಿವೆ. ವಿಜಯದಾಸರ ಪದಗಳಿಗಿಂತಲೂ ಸುಳಾದಿಗಳ ಪ್ರಸಿದ್ಧಿ ಹೆಚ್ಚು. ಇವರ ಸುಳಾದಿಗಳು ಅತ್ಯಂತ ವಿಸ್ತಾರವಾಗಿದ್ದು ಅವುಗಳಲ್ಲಿ ಇವರು ಬಹುಜಟಿಲವಾದ ಹಾಗೂ ಸೂಕ್ಷ್ಮವಾದ ಪ್ರಮೇಯಗಳನ್ನೂ, ಧ್ಯಾನ, ಉಪಾಸನಾಪ್ರಕಾರಗಳನ್ನೂ ತೀರ್ಥಕ್ಷೇತ್ರಗಳ ಮಹಿಮೆಯನ್ನೂ, ಚಕ್ರಾಬ್ಜಾದಿಕಮಂಡಲ ಮೊದಲಾದ ಮಂತ್ರ ರಹಸ್ಯಗಳನ್ನೂ ತಿಳಿಸಿರುವರು. ಇವರಿಂದ ಮಧ್ವಮತವು ಬಹುಮಟ್ಟಿಗೆ ಜನರ ನೆಚ್ಚಿನ ಮತವಾಯಿತೆನ್ನಬಹುದು. ಹೀಗೆ ಅನೇಕ ವಿಧವಾಗಿ ಭಾಗವತಧರ್ಮದಪ್ರಚಾರಮಾಡಿ ಗುಂತಕಲ್ಲಿನ ಹತ್ತಿರ ''ಚಿಪ್ಪಗಿರಿ''ಯೆಂಬ ಗ್ರಾಮದಲ್ಲಿ ಇಹಲೋಕದ ವ್ಯಾಪಾರವನ್ನು ಮುಗಿಸಿದರು. [34] ಇವರ ಶಿಷ್ಯರುಗಳು ಇವರನ್ನು ಪರಿಪರಿಯಾಗಿ ಸ್ತೋತ್ರ

ಕಾಂಬೋಧಿ—ಝಂಪೆ.

34. ತೆರಳಿದರು ವಿಜಯರಾಯರು ವಿಠಲನ ।
ಪುರದೊಳಗೆ ಪರಮಭಕ್ತರ ಕಾಣಬೇಕೆನುತ ।
ಯುವಸಂವಸ್ಸರದ ಕಾರ್ತಿಕ ಶುದ್ಧ ದಶಮಿ ।
ವಿಭಕರವು ಗುರುವಾರ ಪ್ರಥಮ ಸುಯಾಮದೀ ।
ಪವನಾಂತರಾತ್ಮಕ ಶ್ರೀಹರಿಯ ದರ್ಶನೋತ್ಸವ
ಸಂಪಾದಿಸುವ ಬಲು ಲವಲವಿಕೆಯಿಂದಲಿ

— ಜಗನ್ನಾಥದಾಸರು,

ಮಾಡಿದ್ದಾರೆ.[35]

iv. ಹೆಳವನ ಕಟ್ಟೆ ಗಿರಿಯಮ್ಮ

ಹೆಳವನಕಟ್ಟೆ ಗಿರಿಯಮ್ಮನು ವಿಜಯದಾಸರ ಕಾಲದಲ್ಲೇ ಇದ್ದ ಮಹಾ ಭಗವದ್ಭಕ್ತಳು. ಈಕೆ ಹುಟ್ಟಿದ್ದು ರಾಣೀ ಬೆನ್ನೂರಿನಲ್ಲಿ. ಮದುವೆಯಾದದ್ದು ಹರಿಹರ ತಾಲ್ಲೂಕಿನ ಕುಲಕರಣಿ ತಿಪ್ಪರಸನೆಂಬವನನ್ನು. ಧರ್ಮಶಾಸ್ತ್ರವಚನಾನುಸಾರ ಸಾಮಾಜಿಕ ರೀತಿನೀತಿಗಳಿಗನುಸರಿಸಿ ಗಿರಿಯಮ್ಮ ಲಗ್ನವಾಗಿದ್ದರೂ, ಆಕೆ ಪತಿಯೊಡನೆ ವೈವಾಹಿಕ ಜೀವನ ನಡೆಸಲಿಲ್ಲ. ಮೊದಲಿನಿಂದಲೂ ಈಕೆ ದೇವೋನ್ಮಾದಿನಿ ಯಾಗಿದ್ದುದೇ ಇದಕ್ಕೆ ಕಾರಣ. ಇವಳ ಗಂಡನು ಇವಳ ಭಗವದ್ಭಕ್ತಿಯನ್ನು ಕಂಡು ಇವಳನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದ. ಗಿರಿಯಮ್ಮ ಸಮೀಪದಲ್ಲಿದ್ದ ಹೆಳವನಕಟ್ಟೆ ಗ್ರಾಮದ ರಂಗನಾಥದೇವರನ್ನು ಆರಾಧಿಸುತ್ತಿದ್ದಳು. ದೇವರ ವಿವಿಧರೂಪ ಗಳನ್ನು ರಂಗವಲ್ಲಿಯಿಂದ ರಚಿಸಿ ಅದಕ್ಕೆ ಆಭರಣಾದಿಗಳ್ನು ರಂಗವಲ್ಲಿಯಿಂದ ಚಿತ್ರಿಸಿ ಆ ಮೂರ್ತಿಯನ್ನು ಪೂಜಿಸುತ್ತಾ ಹಾಡಿಕುಣಿಯುವಳು. ಇವಳ ಭಕ್ತಿಗೆ ಮೆಚ್ಚಿ ದೇವರು ಮಗುವಾಗಿ ದರ್ಶನವೀಯುತ್ತಿದ್ದನೆಂಬ ಐತಿಹ್ಯವಿದೆ. ಇಂತಹ ಭಾಗವತ ಶಿರೋಮಣಿಯಾಗಿದ್ದರೂ ಗಿರಿಯಮ್ಮನು ಸಾಮಾನ್ಯ ಹೆಂಗಸರಂತೆ ಮನೆಗೆಲಸಗಳನ್ನು ಮಾಡಿಕೊಂಡು ನಿತ್ಯ ಅಡಿಗೆಯನ್ನು ಮಾಡುತ್ತಿದ್ದುದಲ್ಲದೆ, ಗಂಡ ಅತ್ತೆ, ಮಾವಂದಿರು ಮತ್ತು ಓರಗಿತ್ತಿಯರ ಸೇವೆಯನ್ನು ಮಾಡುತ್ತಿದ್ದಳು. ಆ ಸಮಯದಲ್ಲಿ ಆ ಪ್ರಾಂತ್ಯದಲ್ಲಿ ಸಂಚರಿಸುತ್ತಿದ್ದ ಶ್ರೀ ರಾಘವೇಂದ್ರ ಸ್ವಾಮಿಗಳ ಪರಂಪರೆಯ ಶ್ರೀಸುಮತೀಂದ್ರತೀರ್ಥ ಶ್ರೀಪಾದಂಗಳವರು ಅಲ್ಲಿಗೆ ದಿಗ್ವಿಜಯ ಮಾಡಿದಾಗ ಗಿರಿಯಮ್ಮನು ಮೂಲರಾಮನ ದರ್ಶನ ಪಡೆದು ಆನಂದದಿಂದ ಹಾಡಿದಳುಃ—

'ರಾಮ ಶ್ರೀ ರಘುನಂದನ ಕೌಸಲ್ಯಾರಾಮ
ಮದನಕೋಟಿ ಮೋಹನಾಂಗ ಮಾಧವ ಪುಣ್ಯಚರಿತ ಕರುಣಾಪಾಂಗ
ಕದ್ದನವಿಕ್ರಮ ಬಾಹುದ್ಧೃತ ಕೋದಂಡ ಸದಾನಂದಸುಮ—
ತೀಂದ್ರ ಹೃದಯ ಪಂಕಜ ಭೃಂಗ । '

---

35. ಸ್ಮರಿಸುವೆ ನಾ ನಿನ್ನ ಚರಣಕಮಲ ಗುರುವಿಜಯರಾಯ ||ಪ ||
ಶರಣ ಜನರ ಪ್ರಿಯ ಪರಮಕರುಣಾನಿಧಿ ವಿಜಯರಾಯ ||ಅ ||
ಭಾಗವತಧರ್ಮವಹಿಸಿ ತ್ರಿರಾವರ್ತಿ ವಿಜಯರಾಯ ||
ಭಾಗೀರಥಿಯ ಚೆನ್ನಾಗಿ ಸೇವಿಸಿದಯೋ ವಿಜಯರಾಯ ||೩ ||
ಗುರು ನಿನ್ನ ಕರುಣಕವಚ ತೊಟ್ಟೆ ಭಗತರ್ಗೆ ವಿಜಯರಾಯ |
ಸಿರಿವರ ಗೋಪಾಲವಿಠಲ ಕೈಪಿಡಿವನೋ ವಿಜಯರಾಯ ||

— ಗೋಪಾಲ ದಾಸರು.

ಎಂಬ ಈ ಕವಿತೆಯನ್ನು ಕೇಳಿ ಸುಮತೀಂದ್ರರಿಗೆ ಅತೀವ ಆನಂದವಾಯಿತು. ಗಿರಿಯಮ್ಮ ಶ್ರೀಗಳವರಿಗೆ ಮಗುವಾಗಿ ಕಾಣಿಸಿಕೊಂಡು ಬಾಲಗೋಪಾಲನ ದರ್ಶನಮಾಡಿಸಿದಳೆಂಬ ಹೇಳಿಕೆ ಇದೆ. ಮೇಲಿನ ಪದದಲ್ಲಿ ಸುಮತೀಂದ್ರರ ಹೆಸರು ಸ್ಪಷ್ಟವಾಗಿ ಹೇಳಿರುವುದರಿಂದ ಗಿರಿಯಮ್ಮನು ಅವರ ಕಾಲದವಳೆಂಬುದರಲ್ಲಿ ಸಂಶಯವಿಲ್ಲ. ಸುಮತೀಂದ್ರರ ಕಾಲ ಕ್ರಿ.ಶ. 1692 ರಿಂದ 1725. ಈಕೆಯಾದರೂ ಆ ಕಾಲದಲ್ಲೇ ಇದ್ದಿರಬೇಕು. ಗೋಪಾಲದಾಸರಿಗೂ ಗಿರಿಯಮ್ಮನಿಗೂ ಭೇಟಿಯಾಯಿತೆಂಬ ಕತೆಯೊಂದು ರೂಢಿಯಲ್ಲಿರುವುದು. ಗೋಪಾಲದಾಸರ ಕಾಲ 1722 ರಿಂದ 1765ರ ವರೆಗೆ. ಇದರಿಂದ 1700ರ ಸುಮಾರಿಗೆ ಗಿರಿಯಮ್ಮ ಹುಟ್ಟಿರಬಹುದೆಂದೂ ಆಕೆಯ ಪೂರ್ವ ವಯಸ್ಸಿನಲ್ಲಿ ಸುಮತೀಂದ್ರರ ದರ್ಶನಮಾಡಿರಬೇಕೆಂದೂ, ಆಕೆಯ ನಲವತ್ತು ವಯಸ್ಸಿನಿಂದಾಚೆ ಗೋಪಾಲದಾಸರ ಭೇಟಿಯಾಗಿರಬಹುದೆಂದೂ ಊಹಿಸಬಹುದು, 'ಹಳೆವನಕಟ್ಟೆ ರಂಗ' ನೆಂಬ ಅಂಕಿತದಿಂದ ಈಕೆ ಪದಗಳನ್ನೂ ರಚಿಸಿರುವಳು. ಈ ಕವಿತೆಗಳಲ್ಲಿ ಭಗವದ್ಭಕ್ತಿ ಚೆನ್ನಾಗಿ ಒಡಮೂಡಿದೆ. ಈಕೆಯು ಭಗವದ್ಭಕ್ತಳಾದುದರಿಂದ ಅನೇಕ ಪವಾಡಗಳು ನಡೆದಿರುವುದೂ ಉಂಟು. ಮಳೆಯಿಲ್ಲದ ಸಮಯದಲ್ಲಿ ಈಕೆಯು ಮೊರೆಯಂತೆ ಮಳೆ ಬಂದೂ, ಕಣ್ಣಿಲ್ಲದವನಿಗೆ ಈಕೆಯ ದೇವರ ಪ್ರಾರ್ಥನೆಯಿಂದ ಕಣ್ಣು ಬಂದುದೂ ಕಥೆಯಲ್ಲಿ ತೋರಿಬರುತ್ತವೆ.[36] ಭಕ್ತರುಗಳು ಗಿರಿಯಮ್ಮನನ್ನು ಯಶೋಧೆಯ ಅವತಾರವೆಂದು ಭಾವಿಸುತ್ತಾರೆ. ಆಕೆ ದೇವರನ್ನು ಮಗುವೆಂದು ಆಡಿಸಿದ ಮಹಾಮಾತೆ; ಕರ್ನಾಟಕ ಹರಿದಾಸ ಸಾಹಿತ್ಯದಲ್ಲಿ ದೊರೆಯುವ ಅಪೂರ್ವ ಸ್ತ್ರೀರತ್ನ.

ಮುಖಾರಿ

36. ಮಳೆಯು ದಯಮಾಡೋ ರಂಗ ನಿನ್ನ ಕರುಣತಪ್ಪಿದರೆ ಉಳಿಯದು ಲೋಕ
ಸಂದುಹೋದವು ಜ್ಯೇಷ್ಠ ಆಷಾಢ ಶ್ರಾವಣಬಂದಿದೆ ಭಾದ್ರಪದಮಾಸವೀಗ |
ಇಂದು ಪುರಂದರಗೆ ಹೇಳಿ ವೃಷ್ಟಿಯತರಿಸೋ
ಸಂದೇಹವ್ಯಾಕೆ ಹೆಳವನ ಕಟ್ಟೆಯರಂಗ ||೨||

ii ತೋರಬಾರದೆ ನಿಮ್ಮ ಚರಿತೆಯ ನರರೊಳು ನಗೆಗೀಡು ಮಾಡದೆ ||ಪ||
ನೀನೇ ಗತಿಯೆಂದು ಬಂದ ಭಕ್ತನ ಕಣ್ಣೂನವತಿದ್ದಿ ನಿಜವ ತೋರಿಸಯ್ಯ
ದೀನದಯಾಳೋ ಹೇಳವನಕಟ್ಟೆ ರಂಗಯ್ಯ
ದಾನಿ ಎನ್ನೊಡೆಯ ದೊಡ್ಡವನೆಂದು ಹೊಗಳುವೆ ||೨||

V. ಮೋಹನದಾಸರು.

ವಿಜಯದಾಸರ ತಮ್ಮಂದಿರಾದ ಆನಂದ ತೀರ್ಥಪ್ಪನವರೂ ವಿಜಯದಾಸರಿಂದಲೇ ದಾಸದೀಕ್ಷೆ ಪಡೆದು 'ಹಯವದನ ವಿಠಲ'ನೆಂಬ ಅಂಕಿತದಿಂದ ಅನೇಕ ನಾಮಗಳನ್ನು ರಚಿಸಿದ್ದಾರೆ. ಅಣ್ಣಂದಿರಾದ ವಿಜಯದಾಸರ ಇತಿಹಾಸವನ್ನು ಪದರೂಪದಲ್ಲಿ ಹಾಡಿರುತ್ತಾರೆ.

ವಿಜಯದಾಸರ ಅನುಗ್ರಹದಿಂದಲೇ ಬದುಕಿ ಹರಿದಾಸರಾದ ಭಾಗ್ಯ ಮೋಹನದಾಸರದು. ಬಡತನದ ಬೇಗೆ, ಸಂಘದಲ್ಲಿ ಆದ ಅವಮಾನ ತಾಳಲಾರದೆ ಇವರ ತಾಯಿ ಮಗುವಾಗಿದ್ದ ಇವರನ್ನು ಕಟ್ಟಿಕೊಂಡು ತುಂಗಭದ್ರೆಯ ಗರ್ಭದಲ್ಲಿ ಸೇರಬೇಕೆನ್ನುವಷ್ಟರಲ್ಲಿ ವಿಜಯದಾಸರು ಕಾಣಿಸಿಕೊಂಡು ಆ ಮಗುವನ್ನು ಆಕೆಯಿಂದ ಪಡೆದು ಆಕೆಗೆ ಆಶ್ರಯವಿತ್ತು ಸಲಹಿದರು. ಆ ಮಗುವನ್ನು ತೊಡೆಯ ಮೇಲಿಟ್ಟು

'ಚಿರಂಜೀವಿಯಾಗೆಲವೋ ಚೆಣ್ಣ ನೀನು |
ಪರಮಭಾಗವತರ ಪದಧೂಳಿಧರಿಸುತಲಿ' ||

ಎಂದು ಹರಸಿ ಆಶೀರ್ವಾದಮಾಡಿದರು. ಅಂದಿನಿಂದ ರೋಗದ ಕೂಸು ನವಮನ್ಮಥನಾದನು. ಮೋಹನನೆಂದು ಆ ಕೂಸಿನ ಹೆಸರಾಯಿತು, ವಿಜಯದಾಸರಿಂದ ಅಂಕಿತ ಪಡೆದು 'ಮೋಹನ ವಿಠಲ'ನೆಂಬ ಮುದ್ರಿಕೆಯಿಂದ ಇವರು ಅನೇಕ ಪದಗಳನ್ನು ರಚಿಸಿದರು. ಮೋಹನದಾಸರಿಗೆ ಅಪಮೃತ್ಯು ಬಂದೊದಗಿದಾಗ, ವಿಜಯದಾಸರು ತಮ್ಮ ನಿಜರೂಪದಿಂದ, ಭೃಗುಋಷಿಳಾಗಿ ಯಮಲೋಕಕ್ಕೆ ಹೋಗಿ, ಅವರಿಗೆ ಜನ್ಮಪ್ರದಾನ ಮಾಡಿದರು. ಮೋಹನದಾಸರೇ ಇದನ್ನು ಒಂದು ಪದದಲ್ಲಿ ವರ್ಣಿಸಿದ್ದಾರೆ.[37] ಅನೇಕ ಪದಪದ್ಯಗಳ ಜೊತೆಗೆ ಇವರು 217 ನುಡಿಯ 'ಕೋಲುಹಾಡ'ನ್ನು ರಚಿಸಿದ್ದಾರೆ. ಇದು ಕೃಷ್ಣಾರ್ಜುನರ ಮತ್ತು ಸುಭದ್ರೆ–ರುಕ್ಮಿಣಿಯರ

ಸುರಟಿ–ಆದಿ.

37 ತಂದೆ ವಿಜಯರಾಯ ವೇಳೆಗೆ ಬಂದೆ ವಿಜಯರಾಯ ||ಪ ||
ಹಿಂದೇಸು ಜನ್ಮವೋ ಮುಂದೇ ಸುಜನ್ಮವೋ
ಒಂದು ತಿಳಿಯದು ಎಂದೆಂದಿಗು ಎನ್ನ ||ಅ.ಪ. ||
ಸೂರ್ಯನಸುನಂತೆ ಅಲ್ಲಿ ಮಹಾಕಾರ್ಯದೂತರಂತೆ
ಕಾರ್ಯಾಕಾರ್ಯವ ತಿಳಿಯದೆ ನಿನ್ನ ಪರಿಚರ್ಯನೆಳೆಯುತಿರೆ |
ಭಾರ್ಯಳು ಮೊರೆ ಇಡೆ ಸಿರಿ ಮೋಹನ್ನ ವಿಠಲನ
ಪದವ ತೋರಿ ಧರೆಗೆ ತಂದು ಬಿಟ್ಟೆ ಕರುಣಾಳುವೆ ಎನ್ನ ||

ಸರಸಸಂಭಾಷಣವು. 'ಭಕ್ತಿಯಲ್ಲ ಭಾಗಣ್ಣ–ಯುಕ್ತಿಯಲಿ ಮೋಹನ್ನ ಶಕ್ತಿಯಲಿ ತಿಮ್ಮಣ್ಣ'ನೆಂಬುದು ದಾಸಸಂಪ್ರದಾಯದಲ್ಲಿ ರೂಢವಾದ ಗಾದೆಯು. ಮೋಹನ ದಾಸರ ಉಕ್ತಿಗಳಲ್ಲಿ ಸ್ವಾರಸ್ಯವಾದ ಯುಕ್ತಿಗಳಿರುವುವು. ಇವರ ವಂಶ ವಿಸ್ತಾರವಾಗಿ ಬೆಳೆಯಿತೆಂದು ಹೇಳುವರು.

ವಿಜಯದಾಸರ ಸಾಕ್ಷಾತ್ ಶಿಷ್ಯರಲ್ಲಿ ಕಲ್ಲೂರು ಸುಬ್ಬಣ್ಣಾಚಾರ್ಯರೂ ಒಬ್ಬರು. ಇವರು ದೊಡ್ಡಪಂಡಿತರು, ಒಮ್ಮೆ ಇವರು ಸುಧಾಮಂಗಳ ಮಾಡುವಾಗ, ವಿಜಯದಾಸರು ಅಡಿಗೆಯವರಾಗಿ ಬಂದು, ಒಬ್ಬ ಮೂಕನನ್ನು ಸ್ಪರ್ಶಮಾಡಿ, ಅವನ ಬಾಯಿಂದ ಸುಧಾನುವಾದ ಮಾಡಿಸಿದರು. ದಾಸರೆಂದರೆ ಹೀಯಾಳಿಸುತ್ತಿದ್ದ ಸುಬ್ಬಣ್ಣಾಚಾರ್ಯರು ದಾಸರ ಮಹಿಮೆಗೆ ಮಾರುಹೋಗಿ ತಮ್ಮ ಔದ್ಧತ್ಯವನ್ನು ಕ್ಷಮಿಸಬೇಕೆಂದೂ, ತಮ್ಮಲ್ಲಿ ಅನುಗ್ರಹಮಾಡಿ ದಾಸದೀಕ್ಷೆಯನ್ನು ಕೊಡಬೇಕೆಂದು ವಿಜಯದಾಸರನ್ನು ಪ್ರಾರ್ಥಿಸಿ, 'ವ್ಯಾಸವಿಠಲ'ನೆಂಬ ಅಂಕಿತ ಪಡೆದು ಅನೇಕಪದಗಳನ್ನು ರಚಿಸಿದರು.

VI. ಗೋಪಾಲದಾಸರು

ಗೋಪಾಲದಾಸರು ವಿಜಯದಾಸರ ಸಮಸಾಮಯಿಕರಾಗಿದ್ದು, ಅವರ ಅಂತರದಲ್ಲಿ ದಾಸಸಾಹಿತ್ಯ ಪಟ್ಟವನ್ನಲಂಕರಿಸಿ ಸುಪ್ರಸಿದ್ಧರಾದ ದಾಸವರೇಣ್ಯರು. ಇವರ ಕಾಲ ಕ್ರಿ.ಶ. 1722–1765. ಇವರು ಹುಟ್ಟಿದ್ದು ರಾಯಚೂರು ಜಿಲ್ಲಾ ದೇವದುರ್ಗ ತಾಲ್ಲೂಕು ಮೊಸರು ಕಲ್ಲೆಂಬಳ್ಳಿ. ಇವರೇ ಹಿರಿಯ ಮಕ್ಕಳು. ಇವರಿಗೆ ಮೂರು ಜನ ತಮ್ಮಂದಿರು. ಇವರ ಮೊದಲ ಹೆಸರು ಭಾಗಣ್ಣ, ಇವರ ತಂದೆಯ ಹೆಸರು ಮುರಾರಿರಾಯ; ಗೋತ್ರ ಹರಿತಸ, ಇವರ ತಾಯಿ ವೆಂಕಮ್ಮನು ಗಂಡನನ್ನು ಕಳೆದುಕೊಂಡು ನಿರ್ಘೃಣರಾದ ದಾಯಾದಿಗಳಿಂದ ತಿರಸ್ಕೃತಳಾಗಿ ಚಿಕ್ಕಮಕ್ಕಳನ್ನು ಕಟ್ಟಿಕೊಂಡು ಹೊಟ್ಟೆಗಿಲ್ಲದೆ, ಸಂಕಾಪುರಕ್ಕೆ ಬಂದು ಅಲ್ಲಿ ಊರಹೊರಗಿನ ಮಾರುತಿಯ ದೇವಾಲಯದಲ್ಲಿದ್ದು ಊರಲ್ಲಿ ಭಿಕ್ಷೆಬೇಡುತ್ತ ಅತಿಕಷ್ಟದಿಂದ ಜೀವನ ಸಾಗಿಸುತ್ತಿದ್ದಳು. ಭಾಗಣ್ಣನಿಗೆ ಚಿಕ್ಕವಯಸ್ಸಿನಲ್ಲೇ ಧರ್ಮೋಪನಯನವಾಯಿತು. ಬಡತನದಿಂದ ಬೇಸತ್ತ ಭಾಗಣ್ಣ, ಅಂದಿನಿಂದ ಗಾಯತ್ರೀ ಪುನಶ್ಚರಣ ಮಾಡಿ ವಾಕ್ಸಿದ್ಧಿಯನ್ನು ಪಡೆದರು. ಆ ಪ್ರಭಾವದಿಂದ ಜನರಿಗೆ ಭವಿಷ್ಯ ಹೇಳಲಾರಂಭಿಸಿದರು. ಇದರಿಂದ ದ್ರವ್ಯಾರ್ಜನೆ ಯಾಯಿತು ಮತ್ತು ಅದ್ಭುತ ಕವಿತಾ ಶಕ್ತಿಯೂ ಬಂದಿತು. ಗದ್ವಾಲರಾಜನು ಇವರನ್ನು ಸನ್ಮಾನಿಸಿದನು. ಅಲ್ಲಿಂದ ಮುಂದೆ ಇವರು ತಮ್ಮ ತಾಯಿ ಮತ್ತು ತಮ್ಮಂದಿರೊಂದಿಗೆ ಉತ್ತನೂರಿನಲ್ಲಿ ಹೋಗಿ ವಾಸಮಾಡಿದರು. ಇವರ ಬಡತನ ನೀಗಿ ದ್ರವ್ಯಾರ್ಜನೆ ಆರಂಭವಾದ್ದರಿಂದ ಇವರು ವಿಶೇಷ ಅನ್ನದಾನ ಮಾಡಲಾರಂಭಿಸಿದರು. ಇಷ್ಟು

ಹೊತ್ತಿಗೆ ಇವರು ವಿಜಯದಾಸರ ಶಿಷ್ಯತ್ವವನ್ನುವಹಿಸಿ ದಾಸದೀಕ್ಷೆಪಡೆದು, "ಗೋಪಾಲ ವಿಠಲ"ನೆಂಬ ಅಂಕಿತವನ್ನು ಹೊಂದಿದ್ದರು. ಉತ್ತನೂರಿನ ಹತ್ತಿರವಿರುವ ವೇಣೀಸೋಮಪುರದಲ್ಲಿದ್ದ ವೆಂಕಟ ನರಸಿಂಹಾಚಾರ್ಯರೆಂಬ ದೊಡ್ಡ ಪಂಡಿತರ ಮಗ ವೆಂಕಟ ರಾಮಾಚಾರ್ಯರಿಗೆ ಗೋಪಾಲದಾಸರ ಒಡನಾಟವಾಯಿತು. ಗೋಪಾಲದಾಸರು ಎಲ್ಲಕ್ಷೇತ್ರಗಳನ್ನು ಸಂದರ್ಶಿಸಿದ್ದರೂ, ಪಂಡರಪುರಕ್ಕೆ ಹೋಗದಿದ್ದುದರಿಂದ, ವಿಠಲ ಅಶ್ವಾರೋಹಿಯ ವೇಷದಿಂದ ಇವರಿಗೆ ದರ್ಶನ ಕೊಟ್ಟು 'ಅಲೇನಾಹಿ' ಎಂದು ಪಂಡರಪುರಕ್ಕೆ ಬರುವಂತೆ ಆಜ್ಞೆ ಮಾಡಿ ಮರೆಯಾದನು. ಅದರಂತೆಯೇ ಇವರು ಪಂಡರಪುರಕ್ಕೆ ಹೋದರು. ಅಲ್ಲಿ ವಿಠಲನ ದರ್ಶನ ಪಡೆದು ಉಡುಪಿಗೆ ಹೊರಟರು. ಇವರು ತೀರ್ಥ ಕ್ಷೇತ್ರಗಳಿಗೆ ಹೋಗುವಾಗ ಜೊತೆಗೆ ನೂರಾರು ಜನ ಹಿಂಬಾಲಿಸುತ್ತಿದ್ದರು. ಉಡುಪಿಯಲ್ಲಿ ಅನೇಕ ಪದ, ಸುಳಾದಿಗಳನ್ನು ರಚಿಸಿ ಮತ್ತೆ ಉತ್ತನೂರಿಗೆ ಬಂದರು. ಗುರುಗಳಾದ ವಿಜಯದಾಸರ ಆಜ್ಞೆಯಂತೆ ಬ್ಯಾಗವಟ್ಟಿ ಶ್ರೀನಿವಾಸಾಚಾರ್ಯರೆಂಬುವರಿಗೆ ತಮ್ಮ ಆಯುಸ್ಸಿನಲ್ಲಿ 40 ವರ್ಷ ಆಯುರ್ದಾನ ಮಾಡಿದರು. ಅವರೇ ಮುಂದೆ ಜಗನ್ನಾಥದಾಸರೆಂದು ಪ್ರಸಿದ್ಧರಾದರು. ಜಗನ್ನಾಥ ದಾಸರಿಗಿದ್ದ ಉದರ ಶೂಲೆಯು ಗೋಪಾಲದಾಸರಿಗೆ ಬೆನ್ನು ಹತ್ತಿತು. ಇವರ ತಮ್ಮಂದಿರಾದ ದಾಸಪ್ಪನವರು, 'ವಿಜಯ ವಿಠ್ಠಲರೇಯ। ಅಸ್ಮದ್ಗುರೋರ್ಗುರು ವಿಜಯರಾಯರ ಪ್ರಿಯಾ' ಎಂದು ದೇವರನ್ನು ಸ್ತೋತ್ರ ಮಾಡಿದರು. ಅದರಿಂದ ಇವರ ಉದರಶೂಲೆ ಪರಿಹಾರವಾಯಿತು.

ಗೋಪಾಲ ದಾಸರು ತಮ್ಮ ಮೂರು ಜನ ತಮ್ಮಂದಿರಿಗೂ ದಾಸ ದೀಕ್ಷೆಕೊಟ್ಟು ದಾಸಪ್ಪ, ಸೀನಪ್ಪ, ರಂಗಪ್ಪನವರಿಗೆ ಕ್ರಮವಾಗಿ, 'ಗುರು ಗೋಪಾಲ ವಿಠಲ,' 'ವರದ ಗೋಪಾಲ ವಿಠಲ ಮತ್ತು 'ತಂದೆ ಗೋಪಾಲ ವಿಠಲ'ರೆಂದು ಅಂಕಿತ ಕೊಟ್ಟರು. ಅದರಲ್ಲಿ ಮೊದಲ ಇಬ್ಬರು ತಮ್ಮಂದಿರೂ ಇವರಂತೆ ಮಹಾಜ್ಞಾನಿಗಳೆನಿಸಿದರು, ಕೊನೆಯವರಾದ ರಂಗಪ್ಪನವರ ವಂಶವೊಂದೇ ಮುಂದೆ ಬೆಳೆದುದು. ಇವರ ತಮ್ಮಂದಿರೂ ಅನೇಕ ಪದಪದ್ಯಗಳನ್ನು ರಚಿಸಿರುವರು. ಆ ಕಾಲದಲ್ಲಿ ಉತ್ತರಾದಿ ಮಠದಲ್ಲಿದ್ದ ಶ್ರೀ ಸತ್ಯಬೋಧ ಸ್ವಾಮಿಗಳು ಗೋಪಾಲದಾಸರು ಮತ್ತು ಅವರ ತಮ್ಮಂದಿರಿಬ್ಬರನ್ನು ಕರೆಸಿ, ಇವರ ಜ್ಞಾನವನ್ನು ಪರೀಕ್ಷೆಮಾಡಲೋಸುಗ ಮೂವರನ್ನೂ ಬೇರೆ ಬೇರೆ ಸ್ಥಳಗಳಲ್ಲಿ ಕೂಡಿಸಿ, ಒಂದು ಪದವನ್ನು ಪೂರ್ತಿಮಾಡಬೇಕೆಂದು ಆಜ್ಞೆಮಾಡಿದರು, ಇವರು ಒಬ್ಬರಿಗೊಬ್ಬರು ದೂರದಲ್ಲಿದ್ದರೂ, ಅಸಾವೇರಿ ರಾಗದಲ್ಲಿ ಸತ್ಯಬೋಧಸ್ವಾಮಿಗಳ ಮೇಲೆ, ಗೋಪಾಲದಾಸರು ಪಲ್ಲವಿ ಮತ್ತು ಕೊನೆಯ ನುಡಿಯನ್ನೂ ಅವರ ತಮ್ಮಂದಿರಿಬ್ಬರೂ ಎರಡು ನುಡಿಗಳನ್ನೂ ರಚಿಸಿದರು. ಸ್ವಾಮಿಗಳು ಇವರುಗಳ ಕವಿತೆಯನ್ನು ಕೇಳಿ ಇವರ

ಜ್ಞಾನಕ್ಕೆ ತಲೆದೂಗಿದರು. ಹೀಗೆ ಇವರು ಅನೇಕ ಮಹಿಮೆಗಳನ್ನು ತೋರಿ, ಉತ್ತನೂರಿನಲ್ಲಿ 1765ರಲ್ಲಿ ಚಿತ್ರಭಾನು ಸಂವತ್ಸರದ ಪುಷ್ಯ ಬಹುಳ ಅಷ್ಟಮಿಯಂದು ವೈಕುಂಠವಾಸಿಗಳಾದರು. ಅವರ ತಮ್ಮಂದಿರಾದ ಸೀಪ್ಪನವರು ಒತ್ತರಿಸಿ ಬಂದ ದುಃಖದಿಂದ ಇದನ್ನು ಹಾಡಿರುವರು.[38]

ಗೋಪಾಲದಾಸರ ಪದಗಳು ಮತ್ತು ಸುಳಾದಿಗಳು ಅತ್ಯಂತ ಪ್ರಸಿದ್ಧವಾದವು. ಇವೊಂದೊಂದೂ ಭಾವಗರ್ಭಿತವೂ ಪ್ರಮೇಯಪುಷ್ಟವೂ ಭಗವದ್ಭಕ್ತಿ ಪೂರಿತವೂ ಆಗಿರುವುದು. ಇವರ ಆಧ್ಯಾತ್ಮ ಪರಪದಗಳು ಸುಪ್ರಸಿದ್ಧವಿರುವುವು. ಇವರ ಸುಳಾದಿಗಳಲ್ಲಿ ಹರಿಮಹಿಮೆಯು, ಶಾಸ್ತ್ರಾರ್ಥವು ಅತ್ಯಂತ ವಿಸ್ತೃತವಾಗಿ ವರ್ಣಿತವಾಗಿರುವುವು, ದಾಸಸಾಹಿತ್ಯದಲ್ಲಿ ಇವರ ಕೃತಿಗಳಿಗೆ ಅತಿಮಹತ್ವದ ಸ್ಥಾನವಿದೆ. ಇವರು ಗಣೇಶಾಂಶರೆಂದು ಅಭಿಜ್ಞರ ಅಭಿಪ್ರಾಯ.

Vii. ವರದೇಂದ್ರರು.

ಕರ್ನಾಟಕದಲ್ಲಿ ಮೊದಲಿಗೆ ಹರಿದಾಸ ಸಾಹಿತ್ಯ ಬೆಳೆಸಿದವರು ನರಹರಿತೀರ್ಥರು. ಅವರಾದಮೇಲೆ ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರು, ವಿಜಯೀಂದ್ರರು, ರಾಯರು ಇವರುಗಳೂ ಪುರಂದರಾದಿ ದಾಸರುಗಳ ಜೊತೆಗೆ ದಾಸಸಾಹಿತ್ಯವನ್ನು ಚೆನ್ನಾಗಿ ಪೋಷಿಸಿದರು. ಇವರೆಲ್ಲರೂ ವೈದಿಕ ಸಾಮ್ರಾಜ್ಯಾಧಿಪತಿಗಳಲ್ಲದೆ, ಮಧ್ವಶಾಸ್ತ್ರವನ್ನು ಅನೇಕ ಗ್ರಂಥರತ್ನಗಳಿಂದ ಬೆಳೆಸಿದರು. ಇತ್ತೀಚೆಗೆ ಬೆಳೆದುಬಂದ

---

38 ಅಣ್ಣ ಭಾಗಣ್ಣ ನೀ । ಕಣ್ಣಿಗೇ ಮರೆಯಾಗಿ ।
ಪುಣ್ಯಲೋಕವ ಸೇರಿದ್ಯಾ । ಗುರುವೇ ||ಪ.||

ಸಣ್ಣವರು ನಾವು ಅನುಗುಣ್ಯಾ ನಿನ್ನಯ ಚರಣ
ನನ್ನು ಬಿಟ್ಟಲಾರವೋ । ಗುರುವೇ ||ಅ.||

ಚಿಕ್ಕಂದಿನಿಂದ ಬಲು ಅಕ್ಕರದಿ ನೀನೆಮಗೆ
ದಿಕ್ಕೆಂದು ನಂಬಿದ್ದೆವೋ । ಗುರುವೇ

ಕಕ್ಕಸದ ಯಾತನೆಯ ಕರಕರೆಯ ಸಂಸಾರ
ಹೊಕ್ಕುನೋಡಿನ್ನರಿಯವೋ । ಗುರುವೇ

ಮಕ್ಕಳಾಟಿಕೆಮಾಡಿ ಠಕ್ಕಿಸಿ ನಮ್ಮನಿಲ್ಲಿಕ್ಕಿ
ಪೋಪುದನರಿಯವೋ । ಗುರುವೇ

ಪಕ್ಕಿವಾಹನ ನಿನ್ನ ಕರೆದೊಯ್ದನೇ ಅಕಟ
ದಿಕ್ಕುಗೇಡಿಗಳಾದೆವೋ । ಗುರುವೇ ||೨||

ದಾಸಕೂಟ–ವ್ಯಾಸಕೂಟವೆಂಬ ಭೇದವು ಕೃತಕವಾದುದೆಂದು ಇದರಿಂದಲೇ ಅರ್ಥವಾಗುವುದು. ಬರಿಯ ಯತೀಶ್ವರರಲ್ಲದೆ ಕಲ್ಲೂರು ಸುಬ್ಬಣ್ಣಾಚಾರ್ಯರು, ಬ್ಯಾಗವಟ್ಟಿ ಶ್ರೀನಿವಾಸಾಚಾರ್ಯ (ಜಗನ್ನಾಥದಾಸರು)ರಂತಹ ವೈದಿಕರೂ ದಾಸಸಾಹಿತ್ಯದ ಪರಿಪುಷ್ಟಿಗೆ ಕಾರಣರಾದರು. ದಾಸಸಾಹಿತ್ಯದ ಎರಡನೆಯ ಹಂತದಲ್ಲಿ ದಾಸಕೂಟಕ್ಕೆ ಮುಖ್ಯ ಆಶ್ರಯ ದೊರೆತುದು ಶ್ರೀ ರಾಘವೇಂದ್ರಸ್ವಾಮಿಗಳು ಮತ್ತು ಇವರ ಪೀಠಸ್ಥರಾದ ಯತಿಗಳಿಂದ ಎನ್ನಬಹುದು. ಈ ಪರಂಪರೆಯಲ್ಲಿ ದಾಸಸಾಹಿತ್ಯಕ್ಕೆ ವಿಜಯೀಂದ್ರರೇ ಹಿಂದೆ ಆಶ್ರಯದಾತರಾಗಿದ್ದರು. ರಾಯರು ಇದರ ಪುನರುಜ್ಜೀವನಗೊಳಿಸಿ ತಮ್ಮ ಪದದಿಂದ ಚೈತನ್ಯ ತಂದುಕೊಟ್ಟರು. ಇವರ ಅನಂತರ ಶ್ರೀ ಸುಮತೀಂದ್ರರು ಗಿರಿಯಮ್ಮನಿಗೆ ಅನುಗ್ರಹಿಸಿ ದಾಸಸಾಹಿತ್ಯಕ್ಕೆ ಬೆಂಬಲವಿತ್ತರು. ವಾದೀಂದ್ರರೂ ಅನೇಕ ಪದಗಳನ್ನು ರಚಿಸಿರುವರು. ಅವುಗಳಲ್ಲಿ ದೊರೆತಿರುವ ನಾಲ್ಕಾರುಪದಗಳಲ್ಲಿ ತಮ್ಮ ಉಪಾಸ್ಯಮೂರ್ತಿಯಾದ ಶ್ರೀ ಮೂಲರಾಮಚಂದ್ರ ದೇವರ ಮೇಲೆ ರಚಿಸಿದ ಒಂದು ಪದ ಹೀಗಿದೆಃ–

ರಾಗ–ಕಲ್ಯಾಣಿ ತಾಳ–ಝಂಪೆ

ಮುನ್ನೇನು ಸುಕೃತವ ಮುದದಿ ರಚಿಸಿದ್ದನೋ |
ನಿನ್ನನರ್ಚಿಸಲಾದೆನೋ || ||ಅ||
ಸನ್ನುತ ಶುಭಗುಣಸಂದೋಹ ರಘುಕುಲ |
ರನ್ನ ಮಹಿತ ಮೂಲರಾಮಚಂದ್ರನೆ ನಾನು ||ಅ ಪ.||

ಗಂಗಾದಿ ಶುಭ ತೀರ್ಥಗಳನು ಮರತಾರು ತಿಂಗಳು ಧರಿಸಿದ್ದನೋ |
ಮಂಗಳವನು ನಮಗೆ ಮನ್ನಿಸಿಕೊಡುವ ಶ್ರೀರಂಗಾದಿಗಳಲ್ಲಿದ್ದನೋ |
ಶೃಂಗಾರನಿಧಿಯಾದ ಸಿರಿದೇವಿಯರಸ ನಿಮ್ಮಂಗವ ಭಜಿಸಿದ್ದೆನೋ |
ಹಿಂಗಾದೆ ಹರಿಗುರು ಹಿರಿಯಾರ ಪದಾಂಭೋಜ
ಸಂಗತಿಯನು ಬಲು ಸಂಪಾದಿಸಿದ್ದೆನೋ ಹ್ಯಾಗೋ ||೧||

ಪರಿಪರಿಯಲಿ ಬಂದ ಪಾತ್ರರಲ್ಲು ್ಯಚಿತವ
ನರಿತು ವಾಂಛಿತವಿತ್ತೆನೋ
ಪರಿಮೆಯಿಲ್ಲದೆ ವಾಜಿಪೇಯಾದಿ ಮಖದಿಂದ |
ಧರೆಯಲಿ ಎಜಿಸಿದ್ದೆನೋ |
ಹರಿಕಥೆಗಳ ಕೇಳಿ ಹಸನಾಗಿ ಮನದಲ್ಲಿ ಧರಿಸಿ ಹುರುಷದಲ್ಲಿದ್ದೆನೋ |
ವರ ತಪೋವನದಲಿ ವರ್ತಿಸಿ ಹೃದಯದಲಿ
ಚಿರಕಾಲದಿ ನಿನ್ನ ಚಿಂತಿಸಿದ್ದೆನೋ ಹ್ಯಾಗೋ ||೨||

ಆ ದೇಶಿಕಾಶ್ರಮದಾರ್ಯೋದಿತಮತ ಭೇದವನರಿತಿದ್ದನೋ
ವೇದಮೂರುತಿ ರಾಘವೇಂದ್ರದೇಶಿಕರ ಶ್ರೀಪಾದವ ಪಿಡಿದಿದ್ದನೋ
ಉದಾರ ಗುರು ಉಪೇಂದ್ರ ಉತ್ತಮ ಗುಣವುಳ್ಳ
ಮೋದವ ಪಡೆದಿದ್ದನೋ ।
ವಾದೀಂದ್ರ ಯತಿಕುಲವರಿಯನಾಳುವ ನಿಮ್ಮ
ಸಾದರ ಭಜನೆಯ ಸಾಧಿಸಿದ್ದನೋ ಹ್ಯಾಗೋ ॥೨॥

ಇವರ ಪ್ರಶಿಷ್ಯರಾದ ವರದೇಂದ್ರ ಸ್ವಾಮಿಗಳು ಜಗನ್ನಾಥದಾಸರು ಮತ್ತು ಪ್ರಾಣೇಶದಾಸರಿಗೆ ಗುರುಗಳೂ ಆಶ್ರಯದಾತರೂ ಆಗಿದ್ದರಲ್ಲದೆ; ತಾವೇ ಕನ್ನಡದಲ್ಲಿ ಪದಗಳನ್ನು ರಚಿಸಿರುವರು. ವರದೇಂದ್ರಸ್ವಾಮಿಗಳ ಕಾಲ 1761 ರಿಂದ 1785 ಕ್ರಿಸ್ತಾಬ್ಧದವರೆಗೆ. ಇವರ ಗುರುಗಳಾದ ವಸುಧೇಂದ್ರಸ್ವಾಮಿಗಳು ಸಂಸ್ಕೃತದಲ್ಲಿ ತಂತ್ರಸಾರಕ್ಕೆ ವ್ಯಾಖ್ಯಾನವನ್ನು ರಚಿಸಿದರು. ಜಗನ್ನಾಥದಾಸರು ವರದೇಂದ್ರ ತೀರ್ಥರನ್ನು 'ತಂತ್ರಸಾರ'ವನ್ನು ಕನ್ನಡದಲ್ಲಿ ರಚಿಸಬೇಕೆಂದು ಪ್ರಾರ್ಥಿಸಿದರು. ಅದರಂತೆ ಇವರು ಓಂಕಾರ ಮತ್ತು ಮಂತ್ರವರ್ಣಗಳ ಉತ್ಪತ್ತಿಯನ್ನು 29 ನುಡಿಯ ಪದದಲ್ಲಿ ವರ್ಣಿಸಿರುವರು.

ಸಾವೇರಿ—ಝಂಪೆ

"ಪಾಹಿ ಪಂಕೇರುಹೇಕ್ಷಣ ಸರ್ವ ಕಾಮದಾ
ಪಾಹಿ ಪದ್ಮಾಲಯ ನಿಕೇತನ ಸದಾ"

ಎಂದು ಆರಂಭವಾಗುವ ಈ ಪದದ 22 ನುಡಿಗಳಲ್ಲಿ ವಿಷಯಗಳಿದ್ದು ಇನ್ನು 7 ನುಡಿಗಳಲ್ಲಿ ಅವರಿಂದಲೇ ರಚಿಸಲ್ಪಟ್ಟ ಫಲಸ್ತುತಿಯೂ ಇರುವುದು. ಆ ಫಲಸ್ತುತಿಯಿಂದ ಈ ಪದ ಇವರದೇ ಎಂಬುದು ಸ್ಪಷ್ಟಪಡುವುದು.

ಸೀತಾರಮಣ ಮೂಲರಾಮನತಿಹರುಷದಿ
ವಿಧಾತಗುಪದೇಶಿಸಿದ ಈ ತೆರೆದಲಿ ।
ಪ್ರೀತಿಯಿಂದಲಿ ನಿರಂತರದಲಿ ಇದು ಪಠಿಸೆ
ಶೇಷಾತಪತ್ರನು ಕಾಮಿತಾರ್ಥವೀವ ॥೨೩॥

ಬ್ಯಾಗವಾಟದ ರಂಗ ಒಲಿದ ಶ್ರೀ ನರಸಿಂಹ
ಭಾಗವತರಣುಗ ಶ್ರೀ ಜಗನ್ನಾಥದಾಸ ।
ಬಾಗಿ ವಿಜ್ಞಾಪಿಸಲು ಕೈಕೊಂಡು ಪರಮಾನು—

ರಾಗದಲಿ ಪೇಳಿದೆವು ತಂತ್ರಸಾರ ||೨೪||

ಕರುಣಾಬ್ಧಿ ವಸುಧೇಂದ್ರ ರಾಯರ ಕೃಪಾಬಲದಿ
ವಿರಚಿಸಿದೆವೀಗ್ರಂಥ ಪದರೂಪದಿ |
ಅರಸಿಕನು ನಿಂದಿಸಲು ಕುಂದಾವುದಿದಕೆ
ಭಾಸ್ಕರನುದಯ ಘೂಕ ದೂಷಿಸಿದ ತೆರವು ||೨೫||

ಧರ್ಮಾರ್ಥ ಕಾಮ ಮೋಕ್ಷಗಳೀವ ಗ್ರಂಥವಿದು
ನಿರ್ಮಾಣ ಮಾಡಿಸಿದ ರಾಮಚಂದ್ರ |
ಧರ್ಮಗರ್ಭಗೆ ಪೊಲಿದು ಪೇಳಿದ ಮಹಾಮಂತ್ರ
ಮರ್ಮಗಳನರಿತು ಜಪಿಸುವನೇ ಧನ್ಯ ||೨೬||

ವರದೇಂದ್ರಮುನಿ ರಚಿತ ಈ ತಂತ್ರ ಸಾರವನ್ನು
ಬರೆದೋದಿ ಕೇಳಿ ಮೋದಿಪ ಸುಜನರ |
ವರ ಮೂಲರಾಮ ವೇದವ್ಯಾಸರಿಹಪರದಿ
ಕರುಣಿಪರು ಬೇಡಿದಿಷ್ಟಾರ್ಥಗಳನು

ಮಂಗಳ ರಮಾಪತಿಗೆ ಮಂಗಳ ದ್ರುಹಿಣಪತಿಗೆ
ಮಂಗಳ ದಶಪ್ರಮತಿ ಮುನಿಮಾನ್ಯಗೆ |
ಮಂಗಳ ಶಿವೇಂದ್ರಾದಿ ಸುರನಿಕರ ಪೂಜ್ಯಗೆ
ಮಂಗಳ ಜಗದ್ವಿಲಕ್ಷಣಮುರ್ತಿಗೆ ||೨೮||

ಈ ಪದವನ್ನು ಜಗನ್ನಾಥದಾಸರು ರಚಿಸಿದ್ದೆಂದು 1926ನೆಯ ಇಸವಿಯಲ್ಲಿ ಪ್ರಿಂಟಾದ ಶ್ರೀ ಪಾಂಪಂಜೆಗುರುರಾಯರು 'ಜಗನ್ನಾಥದಾಸರ ಕೀರ್ತನೆ'ಗಳಲ್ಲಿ ಪ್ರಕಟಿಸಿದ್ದಾರೆ. 1937ರಲ್ಲಿ ಪ್ರಕಟವಾದ 'ಕರ್ಣಾಟಕ ಭಕ್ತ ವಿಜಯ' ಭಾಗ ೨ರಲ್ಲಿ ಶ್ರೀ ಬೇಲೂರು ಕೇಶವದಾಸರು ಈ ಪದವನ್ನು ಜಗನ್ನಾಥದಾಸರು ರಚಿಸಿರುವರೆಂದು ಪುಟ ೨೨೮–೨೩೩ರಲ್ಲಿ ಉದಾಹರಿಸಿರುವರು. ಇದರಲ್ಲಿ 27 ನುಡಿಗಳಿದ್ದು 24ನೆಯ ನುಡಿಯಾದ 'ಬ್ಯಾಗವಾಟದ ರಂಗ' ನೆಂಬದೂ 'ವರದೇಂದ್ರ ಮುನಿ ರಚಿತ' ಎಂಬ 27ನೆಯ ನುಡಿಯೂ ಸೇರಿಲ್ಲ. ಅಲ್ಲದೆ 28ನೆಯ ನುಡಿಯ ಕೊನೆಯಲ್ಲಿ 'ಮಂಗಳ ಜಗದ್ವಿಲಕ್ಷಣ ಮೂರ್ತಿಗೆ' ಎಂಬಲ್ಲಿ 'ಮಂಗಳ ಜಗನ್ನಾಥ ವಿಠಲಯ್ಯಗೆ' ಎಂತ ಇದೆ. ಕೊನೆಯ ನುಡಿಯಲ್ಲಿ ''ಇಪ್ಪತ್ತರೊಂಭತ್ತು ಪದಗಳೆಂದೆನಿಪ'' ಎನ್ನುವುದಕ್ಕೆ ಬದಲಾಗಿ 'ಇಪ್ಪತ್ತರೇಳೆನಿಪ' ಎಂದು ಇದೆ. ಆದರೆ ಇದಕ್ಕೆ ಹದಿಮೂರು ವರ್ಷಗಳ ಹಿಂದೆಯೇ ಪ್ರಕಟವಾದ'' ಜಗನ್ನಾಥದಾಸರ ಕೀರ್ತನೆ''ಗಳಲ್ಲಿ ''ಮಂಗಳ , ಜಗನ್ನಾಥ

ವಿಠಲಯ್ಯಗೆ'' ಎನ್ನು ಬದಲಾವಣೆಯೊಂದು ವಿನಹ ಇನ್ನಾವ ವ್ಯತ್ಯಾಸವೂ ಇಲ್ಲ. 1948ರಲ್ಲಿ ಶ್ರೀ ಗೋರೇಬಾಳ ಹನಮಂತರಾಯರು ''ಸೃಷ್ಟಿಪ್ರಕರಣ ಸುಳಾದಿಗಳು'' ಎಂಬ ಪುಸ್ತಕದಲ್ಲಿ ಇದು ವರದೇಂದ್ರಮುನಿ ವಿರಚಿತವೆಂದು ಉದಾಹರಿಸಿರುವರು. ಈ ವಿವಾದದಲ್ಲಿ ಕೆಲವಂಶಗಳು ವಿಚಾರಾರ್ಹ.

ಈ ಪದವು 29 ನುಡಿಗಳದೆಂಬುದು ಪ್ರಾಚೀನವಾದ ಪಾನವಂಜೆಯವರ ಪುಸ್ತಕದಿಂದಲೇ ಹೊರಪಡುವುದು. ಅಲ್ಲದೆ ಬೇಲೂರು ಕೇಶವದಾಸರು ಬರೆದಂತೆ 27 ನುಡಿಗಳೇ ಇರುವುದೆಂದು ಒಪ್ಪಿಕೊಂಡರೂ ಇದು ವರದೇಂದ್ರ ವಿರಚಿತವೆಂದೇ ಹೇಳಬೇಕಾಗುತ್ತದೆ. ಏಕೆಂದರೆ ಮೊದಲನೆಯದಾಗಿ ಜಗನ್ನಾಥದಾಸರು ವರದೇಂದ್ರಸ್ವಾಮಿಗಳ ಶಿಷ್ಯರು. ಅವರು 'ವಸುದೇಂದ್ರರಾಯರ ಕೃಪಾಬಲದಿ' ಎಂದು ಹೇಳಿರಲಾರರು. ವರದೇಂದ್ರ ಸ್ವಾಮಿಗಳಾದರೋ ತಮ್ಮ ಗುರುಗಳನ್ನು ಸ್ಮರಿಸುವುದು ಸ್ವಾಭಾವಿಕವಾದುದು. ಅಲ್ಲದೆ ಜಗನ್ನಾಥದಾಸರು ಈ ಪದವನ್ನು ಮೂಲರಾಮನಿಗೆ ಅರ್ಪಿಸುವುದು ಅನುಚಿತವು. ಹಾಗೆ ಅವರು ಅರ್ಪಣೆ ಮಾಡಿದ್ದು ಎಲ್ಲೂ ಕಂಡಿಲ್ಲ. ಸಾಮಾನ್ಯವಾಗಿ ಎಲ್ಲರೂ ತಮ್ಮ ತಮ್ಮ ಕೃತಿಗಳನ್ನು ಅವರವರ ಉಪಾಸ್ಯ ಮೂರ್ತಿಗೆ ಅರ್ಪಿಸುವುದು ಸಹಜ, ವರದೇಂದ್ರಸ್ವಾಮಿಗಳಾದರೋ, ಸಂಸ್ಥಾನ ಮುಖ್ಯ ಪ್ರತಿಮಾಸ್ಥನಾದ ಮೂಲರಾಮನೇ ಉಪಾಸ್ಯನಾದ್ದರಿಂದ ಅವರು ಮೂಲರಾಮನಿಗೆ ಈ ಪದವನ್ನು ಅರ್ಪಿಸಿರುವುದು ಅತ್ಯಂತ ಉಚಿತವಾಗಿದೆ. ಮೇಲೆ ಉದಹರಿಸಿದ ಫಲಸ್ತುತಿಯಲ್ಲಿ ಮೂರು ನಾಲ್ಕು ಕಡೆ ಮೂಲರಾಮನ ಹೆಸರು ಬಂದಿರುವುದರಿಂದ ಇದು ವರದೇಂದ್ರ ಮುನಿರಚಿತವೆನ್ನುವುದರಲ್ಲಿ ಸಂದೇಹವಿಲ್ಲ. ಜಗನ್ನಾಥದಾಸರ ''ಮೂಲರಾಮರ ಪಾದ ಕೀಲಾಲಜ ಮಧುಪ'' ''ಫಾಲ ಲೋಚವಿನುತ ಮೂಲರಾಮನ ಶೀಲಸದ್ಗುಣನುತಿಪ ಮೇಲು ಭಕುತನ'' ''ವಸುಧೇಂದ್ರಾರ್ಯಪ್ರಿಯಾ ಕವಿಜನಗೇಯಾ'' ಎಂಬ ಉಕ್ತಿಗಳು ಅದಕ್ಕೆ ಉಪೋದ್ಬಲಕವಾಗಿರುವುವು. ಅಲ್ಲದೆ 'ಬ್ಯಾಗವಾಟದ ರಂಗ' ಎಂದು ಆರಂಭವಾಗುವ ಈ ಪದದ 24ನೆಯ ನುಡಿಯಲ್ಲಿ ಜಗನ್ನಾಥದಾಸರ ಪ್ರಾರ್ಥನೆಯಂತೆ ಇದನ್ನು ತಾವು ರಚಿಸಿದುದಾಗಿ ವರದೇಂದ್ರ ಸ್ವಾಮಿಗಳ ಉಕ್ತಿ ಇರುವುದು, ಇದು ಈ ಪದ ರಚಯಿತೃಗಳ ವಿಷಯದಲ್ಲಿ ಸ್ಪಷ್ಟವಾದ ಅಭಿಪ್ರಾಯ ಕೊಡುವುದು.

ವರದೇಂದ್ರ ಸ್ವಾಮಿಗಳು ಇದಲ್ಲದೆ ಅನೇಕ ಪದಪದ್ಯಗಳನ್ನು ರಚಿಸಿರಬಹುದು. ಇವರು ಪುಣೆಯಲ್ಲಿ ಬೃಂದಾವನಸ್ಥರಾದರೂ, ಲಿಂಗಸೂರಿಗೂರಿನ ಪ್ರಾಣೇಶದಾಸರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು, ಅವರ ಮನೆಯ ಹಿತ್ತಲಿನ ಹುಲ್ಲಿನ ಬಣಿವೆಯೊಳಗಿರುವ ತುಳಸೀಗಿಡದಲ್ಲಿ ಬಂದು ಇರುತ್ತೇವೆಂದು ಹೇಳಿದರು. ಆ ಪ್ರಕಾರ ಅಲ್ಲಿ ಅವರ

ಬೃಂದಾವನ ಪ್ರತಿಷ್ಠಿಸಿ ಪೂಜಿಸಿದರು. ಪ್ರಾಣೇಶದಾಸರು ಮತ್ತು ಅವರ ಶಿಷ್ಯರು ವರದೇಂದ್ರಸ್ವಾಮಿಗಳ ಮೇಲೆ ಅನೇಕ ಪದಗಳನ್ನು ರಚಿಸಿದ್ದಾರೆ.

Viii. ವ್ಯಾಸತತ್ತ್ವಜ್ಞತೀರ್ಥರು.

ವರದೇಂದ್ರ ಸ್ವಾಮಿಗಳಂತೆ ದಾಸಸಾಹಿತ್ಯಯವನ್ನು ಅಭಿವೃದ್ಧಿಗೊಳಿಸಿದ ಇನ್ನೊಬ್ಬ ಯತೀಶ್ವರರೆಂದರೆ–ವ್ಯಾಸತತ್ತ್ವಜ್ಞರು. ವ್ಯಾಸತತ್ತ್ವಜ್ಞರು ಗೋಪಾಲದಾಸರ ಒಡನಾಡಿಗಳು. ಇವರ ಪೂರ್ವಾಶ್ರಮದ ಹೆಸುರು ವೆಂಕಟರಾಮಾಚಾರ್ಯರೆಂದು. ಗೋಪಾಲದಾಸರ ಭಗವದ್ಭಕ್ತಿಯನ್ನು ನೋಡಿ ಇವರು ಅವರೊಡನೆಯೇ ಇದ್ದರು. ಇವರು ಪೂರ್ವಾಶ್ರಮದಲ್ಲೇ ದೊಡ್ಡ ಪಂಡಿತರಾಗಿದ್ದರು ಮತ್ತು ವರದೇಂದ್ರ ಸ್ವಾಮಿಗಳ ಶಿಷ್ಯರಾದ ಭುವನೇಂದ್ರಸ್ವಾಮಿಗಳಲ್ಲಿ ಆಶ್ರಮ ಪಡೆದು, ಅವರಿಂದ ನೃಸಿಂಹದೇವರನ್ನು ಪೂಜೆಗೆ ಪಡೆದರು. ಅಂದಿನಿಂದಲೇ ಇವರ ಹೆಸುರ ವ್ಯಾಸತತ್ತ್ವಜ್ಞರೆಂದಾಯಿತು. ಇವರು ಆಚಾರ್ಯರ 'ತತ್ತ್ವನಿರ್ಣಯ'ದ ಟೀಕೆಗೆ ಲಘುಪ್ರಭಾ, ಗುರುಪ್ರಭಾ ಎಂಬ ವ್ಯಾಖ್ಯಾನಗಳನ್ನು ರಾಯರ 'ಪರಿಮಳ'ಕ್ಕೆ 'ದ್ರಾಕ್ಷಾಪಾಕ' ವೆಂಬ ವ್ಯಾಖ್ಯಾನವನ್ನೂ, ನ್ಯಾಯಾಮೃತ ಖಂಡನೆಯಾದ 'ಮಕ್ಷಿಕಾ' ಗ್ರಂಥಕ್ಕೆ 'ವ್ಯಜನ'ವೆಂಬ ಪ್ರತಿಖಂಡನ ಗ್ರಂಥವನ್ನು ರಚಿಸಿದರು. ಭಾಗವತಕ್ಕೆ ಅಪೂರ್ವ ''ಮಂದನಂದಿನಿ'' ಎಂಬ ವ್ಯಾಖ್ಯೆಯೊಂದನ್ನು ಬರೆದಿರುವರು. 'ಮಾನಸಪೂಜಾ ಪದ್ಧತಿ'ಯೆಂಬ ಗ್ರಂಥವನ್ನು ರಚಿಸಿರುವರು. ದಾಸಸಾಹಿತ್ಯದಲ್ಲಾದರೋ ಇವರು **'ವಾಸುದೇವ ವಿಠಲ''** ನೆಂಬ ಅಂಕಿತದಿಂದ ಅನೇಕ ಪದಪದ್ಯಗಳನ್ನು ರಚಿಸಿರುತ್ತಾರೆ. ಇವರನ್ನು ಪೂರ್ವಾಶ್ರಮದಲ್ಲೇ ಗೋಪಾಲದಾಸರು 'ಕಂಡೆ ನಾ ಕರುಣಿಗಳೊಳ ಗ್ರೇಸರಾದ ಪಂಡಿತ ರಾಮಾರ್ಯರ' ಎಂದು ಸ್ತುತಿಸಿದ್ದಾರೆ. ಜಗನ್ನಾಥ ದಾಸರು ಸ್ತೋತ್ರಮಾಡಿರುವುದಲ್ಲಿದೆ, [39] ಇವರ ನಿರ್ಯಾಣವನ್ನು ಒಂದು ಪದದಲ್ಲಿ

---

39. ಕೃತಕೃತ್ಯನಾದೆನಿಂದಿನ ದಿನದೊಳು
ಕ್ಷಿತಿಸುರ ವೆಂಕಟರಾಮಾರ್ಯರನೆ ಕಂಡು ||
ಷಣ್ಣವತ್ಯಬ್ದ ಪರ್ಯಂತ ಹರಿಮಹಿಮೆಗಳ
ಸನ್ನುತಿಯಲ್ಲಿ ಶ್ರುತಿಸ್ಮೃತಿಗಳಿಂದ |
ಧನ್ಯರೆಂದೆನಿಸಿ ಮಹಿಮೆಯೊಳಗೆ ಪೂಜಿತರಾದ
ಪುಣ್ಯಚರಿತರ ದಿವ್ಯಪಾದವನೆ ಕಂಡು ||೨ ||

–ಜಗನ್ನಾಥದಾಸರು

ವರ್ಣಿಸಿದ್ದಾರೆ.[40]

ವಿಜಯದಾಸರ ಶಿಷ್ಯರಾಗಿ ಗೋಪಾಲದಾಸರ ಸಮಕಾಲಿಕರಾಗಿದ್ದ ಇನ್ನೊಬ್ಬ ಹರಿದಾಸರು ತಿಮ್ಮಣ್ಣನವರು. ಆದವಾನಿ ನವಾಬ್ ಬಸಾಲತ್ ಜಂಗನಿಗೆ ಇವರು ದಿವಾನರಾಗಿದ್ದರು. ರಾಜಕೀಯದಲ್ಲಿ ಇವರ ವರ್ಚಸ್ಸು ಅಧಿಕವಾಗಿದ್ದರೂ, ಇವರ ಮಗನನ್ನು ಬಲಾತ್ಕರವಾಗಿ ಇಸ್ಲಾಂ ಮತಕ್ಕೆ ಸೇರಿಸಿದ್ದರಿಂದ ಇವರು ಅತ್ಯಂತ ದುಃಖಿತರಾಗಿ ಜೀವನದಲ್ಲಿ ಜಿಗುಸ್ಸೆಗೊಂಡರು. ವಿಜಯದಾಸರು ಇದೇ ಸಮಯದಲ್ಲಿ ಆದವಾನಿಗೆ ಬಂದು 'ಪುನು ಪಂಗನಾಮದ ತಿಮ್ಮಣ್ಣ' ಎಂದು ಇವರನ್ನು ಸಂಬೋಧಿಸಿದರು. ಹಿಂದೇ ಇವರೇ ವೈಕುಂಠದಾಸರಾಗಿದ್ದರೆಂತಲೂ, ಆಗ ಮೂರುನಾಮ ಹಾಕುತ್ತಿದ್ದರಿಂದ ಈಗ ಇವರನ್ನು 'ಪಂಗನಾಮ'ವೆಂಬ ಅಡ್ಡ ಹೆಸರಿನಿಂದ ಕರೆದರೆಂತಲೂ ಐತಿಹ್ಯವಿದೆ. ತಿಮ್ಮಣ್ಣದಾಸರು ವಿಜಯದಾಸರ ಶಿಷ್ಯರಾಗಿ 'ವೇಣುಗೋಪಾಲ' ವಿಠಲನೆಂಬ ಅಂಕಿತ ಪಡೆದು "ನಿನ್ನ ನಂಬಿದ ಮೇಲೆ ಅನ್ಯರಾಶ್ರಯವೇಕೋ ತಂದೆ ಗುರುವಿಜಯರಾಯಾ" ಎಂದು ಗುರುಗಳನ್ನು ಸ್ತೋತ್ರಮಾಡಿರುವರು. ಇವರ ಅನೇಕ ಪದಗಳು ಸುಪ್ರಸಿದ್ಧವಿದೆ. ಇವರು ಪಾದಿರಾಜರನ್ನು ಸ್ತೋತ್ರ ಮಾಡಿರುವ ಪದ ಒಂದರಲ್ಲಿ ತಮ್ಮ ಪೂರ್ವಜನ್ಮದ ಸೂಚನೆಯನ್ನು ಮಾಡಿರುವರು.[41] ಇವರೇ ಮುಂದೆ ಮೊದಲಕಲ್ಲು ಶೇಷದಾಸರಾಗಿ ಹುಟ್ಟಿದರೆಂದು ಹೇಳುವ ವಾಡಿಕೆ ಇದೆ.

ಬಿಲಹರಿ – ಝಂಪ

40. ತೆರಳಿದರು ವ್್ಯಾಸತತ್ತ್ವಜ್ಞರಿಂದು|
ಪುರುಷೋತ್ತಮನ ಗುಣಗಳರುಪಿ ಸುಜನರಿಗೆ ||
ವರರೌದ್ರಿ ನಾಮ ಸಂವತ್ಸರ ಶ್ರಾವಣ ಪರಪಕ್ಷ ಅಷ್ಟಮಿಾ ಭೌಮವಾರ |
ಭರಣಿ ನಕ್ಷತ್ರ ಪ್ರಾತಃಕಾಲದಲಿ ಸೋಮ |
ಪುರದಲಿ ಗೋಪಾಲಕೃಷ್ಣನ ಪಾದಸನ್ನಿಧಿಗೆ ||೧ ||

–ಜಗನ್ನಾಥದಾಸರು.

41. ಅಂಕದಲ್ಲಿದ್ದ ಬಾಲಕನ ಬರುತಲೆ ಕಂಡು
ಶಂಖಚಕ್ರಾಂಕಿತನು ಈತನೆಂದು
ಶಂಕಿಸದೆ ಎನಗೆಪ್ರಾಗ್ಜನ್ಮದಲಿ ಪೇಳ್ದೆ.
ಅಕಳಂಕ ಸನ್ಮಹಿಮ ದಶಮುಖನ ದಾಸಾಗ್ರಣೀಯೋ

IX. ಜಗನ್ನಾಥರು.

ದಾಸಸಾಹಿತ್ಯದಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದವರಲ್ಲಿ ಜಗನ್ನಾಥದಾಸರೇ ಕಡೆಯವರು. ಅಂತೆಯೇ ಇವರು ದಾಸಕೂಟಕ್ಕೆ ಶಿಖರಪ್ರಾಯವಾಗಿರುವರೆಂಬುದರಲ್ಲಿ ಸಂದೇಹವಿಲ್ಲ. ಇವರಲ್ಲಿ ವ್ಯಾಸ–ದಾಸಸಾಹಿತ್ಯಗಳೆರಡೂ ಸಮಾವೇಶಗೊಂಡಿದ್ದವು. ದಾಸಸಾಹಿತ್ಯದಲ್ಲಿ ಇವರೊಬ್ಬ ಟಿಪ್ಪಣ್ಯಾಚಾರ್ಯರಿದ್ದಂತೆ. ಇವರ ಕಾಲ ಕ್ರಿಸ್ತಶಕ 1727–1809ರ ವರೆಗೆ. ಇವರ ತಂದೆಗಳಾದ ನರಸಿಂಹಾಚಾರ್ಯರು ಪಂಗನಾಮದ ತಿಮ್ಮಣ್ಣನ ವರಿಂದ 'ನರಸಿಂಹವಿಠಲ'ನೆಂಬ ಅಂಕಿತ ಪಡೆದು ಹರಿದಾಸರಾಗಿದ್ದರು. ಶ್ರೀನಿವಾಸಾಚಾರ್ಯರೆಂದು ಜಗನ್ನಾಥದಾಸರ ಹೆಸರು. ಇವರು ವರದೇಂದ್ರ ಸ್ವಾಮಿಗಳಲ್ಲಿ ಸಂಸ್ಕೃತ ವಿದ್ಯಾಭ್ಯಾಸಮಾಡಿ, ನಾಲ್ಕು ಶಾಸ್ತ್ರಗಳಲ್ಲೂ ಪಾಂಡಿತ್ಯವನ್ನು ಪಡೆದರು. ಪಂಡಿತರಾದ ಮೇಲೆ ಶ್ರೀನಿವಾಸಚಾರ್ಯರು ಮಾನವಿಯಲ್ಲಿ ಪಾಠಪ್ರವಚನ ಮಾಡಿಕೊಂಡಿದ್ದರು. ಇನ್ನೂ ವಿದ್ಯಾರ್ಥಿಗಳಾಗಿದ್ದಾಗಲೇ, ವರದೇಂದ್ರಸ್ವಾಮಿಗಳ ಮೇಲೆ 'ವರದೇಂದ್ರ ಪಂಚರತ್ನ'ವೆಂಬ ಕವಿತೆಯನ್ನೂ ರಚಿಸಿದ ಇವರ ಕವಿತಾಶಕ್ತಿಯೂ ಹೆಸರಾದುದು. ಇವರ ಪ್ರಾರಬ್ಧ ಕರ್ಮನಿಮಿತ್ತದಿಂದ ಒಮ್ಮೆ ಇವರು ಮಾನವಿಗೆ ಬಂದಿದ್ದ ವಿಜಯದಾಸರನ್ನು ತೃಣೀಕರಿಸಿ ಅಪಚಾರಮಾಡಿದ್ದರಿಂದ ಇವರಿಗೆ ಉದರ ವ್ಯಾಧಿಮೊದಲಾಯಿತು. ಇದರ ಪರಿಹಾರಕ್ಕಾಗಿ ಇವರು ಘಟಿಕಾಚಲ, ಮಂತ್ರಾಲಯಗಳಲ್ಲಿ ಸೇವೆಮಾಡಿ, ಚೀಕಲ ಪರಿಯಲ್ಲಿದ್ದ ವಿಜಯದಾಸರಲ್ಲಿ ಹೋಗಿ ಕ್ಷಮೆಬೇಡಿದರು. ಅವರು ಇವರನ್ನು ಗೋಪಾಲದಾಸರಲ್ಲಿ ಕಳುಹಿಸಿದರು. ಗುರುಗಳಾದ ವಿಜಯದಾಸರಿಗೆ ಅಪಚಾರವಾದ್ದರಿಂದ ಉಪವಾಸಮಾಡುತ್ತಿದ್ದ ಗೋಪಾಲ ದಾಸರು, ಶ್ರೀನಿವಾಸಾಚಾರ್ಯರನ್ನು ಕ್ಷಮಿಸಿ ಅವರಿಗೆ ರೊಟ್ಟಿಯೊಂದನ್ನು ಅಭಿಮಂತ್ರಿಸಿಕೊಟ್ಟರು. ಇದನ್ನು ಸೇವಿಸಿದ್ದರಿಂದ ಅವರ ಉದರ ವ್ಯಾಧಿ ಪರಿಹಾರವಾಯಿತು. ಗೋಪಾಲದಾಸರೊಂದಿಗೆ ಇವರು ತಿರುಪತಿಗೆ ಹೋದರು. ಅತಿಶಯ ದೇಹಾಯಾಸದಿಂದ ಇವರಿಗೆ ಅಲ್ಲಿ ಮರಣಪ್ರಾಪ್ತವಾಯಿತು, ವಿಜಯದಾಸರ ಅಪ್ಪಣೆಯಂತೆ ಗೋಪಾಲದಾಸರು, ಶ್ರೀನಿವಾಸಾಚಾರ್ಯರಿಗೆ ತಮ್ಮ ಆಯುಸ್ಸಿನಲ್ಲಿ 40 ವರುಷಗಳನ್ನು ದಾನಮಾಡಿದರು. ಆದ್ದರಿಂದ ಶ್ರೀನಿವಾಸಾಚಾರ್ಯರು ಮತ್ತೆ ಬದುಕಿದರು ಮತ್ತು ತಮಗೆ ದಾಸದೀಕ್ಷೆ ಕೊಡಬೇಕೆಂದು ಕೇಳಿಕೊಂಡರು. ಗೋಪಾಲದಾಸರು ಇವರನ್ನು ಪಂಡರಪುರಕ್ಕೆ ಕಳುಹಿಸಿದರು. ಅದರಂತೆ ಇವರು ಪಂಡರಪುರಕ್ಕೆ ಹೋಗಿ, ಅಲ್ಲಿ ಭೀಮರಥಿಯಲ್ಲಿ ಸ್ನಾನಮಾಡುವಾಗ 'ಜಗನ್ನಾಥ ವಿಠಲ'ನೆಂಬ ಅಂಕಿತ ಉಳ್ಳ ಶಿಲೆಯೊಂದು ಇವರಿಗೆ ಲಭ್ಯವಾಯಿತು. ಅಂದಿನಿಂದಲೇ ಇವರು ಜಗನ್ನಾಥದಾಸರಾಗಿ 'ಎಂದು ಕಾಂಬೆನೋ ಪಾಂಡುರಂಗ ಮೂರುತಿಯ',

'ಕಂಡೆ ಪಂಡರಿರಾಯನ' 'ಪಾಲಿಸು ಪಂಡರಿಪುರಿರೇಯ' ಇತ್ಯಾದಿ ಪದಗಳನ್ನು ರಚಿಸಿದರು. ಇವರು ತಿರುಪತಿಯಲ್ಲಿದ್ದಾಗ ಶ್ರೀನಿವಾಸದೇವರು ಇವರಿಗೆ ಗೋಪಾಲದಾಸರ ವೇಷದಿಂದ ಬಂದು ಉಣಿಸಿದ್ದನು. ಅದರಂತೆ ಪಂಡರಪುರದಲ್ಲೂ ವಿಠಲನು ಇವರಿಗೆ ಉತ್ತಮ ಔತಣವನ್ನೇರ್ಪಡಿಸಿದ್ದನು. ಇಂತಹ ಮಹಿಮರು ಜಗನ್ನಾಥದಾಸರು. ಇವರು ಗುರುಗಳಾದ ಗೋಪಾಲದಾಸರನ್ನು ಸ್ತೋತ್ರಮಾಡಿರುವ ಒಂದು ಪದದಲ್ಲಿ ತಮ್ಮ ಪೂರ್ವಚರಿತ್ರೆಯನ್ನು ಸೂಚಿಸಿದ್ದಾರೆ.[42] ಇವರ ಅಪಮೃತ್ಯುವನ್ನು ಪರಿಹಾರಮಾಡುವಾಗ ಗೋಪಾಲದಾಸರು ದೇವರನ್ನು ಸ್ತೋತ್ರಮಾಡಿರುವರು.[43]

ವಿಜಯದಾಸರು ತಮ್ಮಲ್ಲಿ ಮಾಡಿದ ಅನುಗ್ರಹಕ್ಕಾಗಿ ಜಗನ್ನಾಥದಾಸರು ಅವರನ್ನು ಸ್ತೋತ್ರಮಾಡಿರುವರು,[44] ಗೋಪಾಲದಾಸರ ಆಯುರ್ದಾನದಿಂದ ಜಗನ್ನಾಥದಾಸರು 82 ವರ್ಷಗಳು ಬದುಕಿದ್ದರು. ಆ ಅವಧಿಯಲ್ಲಿ ಇವರು ಅನೇಕ ತೀರ್ಥಕ್ಷೇತ್ರಗಳನ್ನು

---

42. ಗೋಪಾಲದಾಸರಾಯ ನಿನ್ನಯಪಾದ ನಾ ಪೊಂದಿದನೋ ನಿಜ್ಜಯ |
ಈ ಪೀಡಿಸುವ ತಾಪಗಳೋಡಿಸಿ ಕೈಪಿಡಿದೆನ್ನನು ನೀ ಪಾಲಿಸುವುದು ಜೀಯಾ ||
ಘೋರವ್ಯಾಧಿಗಳನೋಡಿ ವಿಜಯರಾಯ ಭೂರಿಕರುಣವಮಾಡಿ |
ತೋರಿದವರೇ ಉದ್ಧಾರಕರ್ತರೆಂದೆಂದಿನಾರಭ್ಯ
ತವ ಪಾದ ಸಾರಿದೆ ಸಲಹೆಂದು ||
ಸೂರಿಜನಸಂಪ್ರೀಯ ಸುಗುಣೋದ್ಧಾರ ದುರುಳನ ದೋಷನಿಚಯವ |
ದೂರಗೈಸು ದಯಾಂಬುನಿಧೇ ನಿವಾರಿಸುತ ಕೈಪಿಡಿದು ಕರುಣದಿ ||೧||
ಅಪಮೃತ್ಯುವನು ಪರಿದೆಯೆನ್ನೊಳಗಿದ್ದ ಅಪರಾಧಂಗಳ ಮರೆದೆ |
ಚಪಲಚಿತ್ತನಿಗೊಲಿದು ವಿಪುಲಮತಿಯನಿತ್ತು
ನಿಪುಣನೆಂದೆನಿಸಿದೆ ತಪಸಿಗಳಿಂದಲಿ ||
ಕೃಪಣವತ್ಸಲ ನಿನ್ನ ಕರಣಿಕೆ ಉಪಮೆಗಾಣೆನೋ ಸಂತತವು ಕಾ–
ಶ್ಯಪಿಯೊಳಗೆ ಬುಧರಿಂದ ಜಗದಾಧಿಪನ ಕಿಂಕಿರನನಿಸಿ ಮೆರೆದೆ ||೨||

43. ಎನ್ನಬಿನ್ನಪಕೇಳೋ ಧನ್ವಂತ್ರಿದಯಮಾಡೋ ಸಣ್ಣವನು ಇವ ಕೇವಲ ||
ಬನ್ನ ಬಡಿಸುವ ರೋಗವನ್ನು ಮೋಚನೆಮಾಡಿ
ಚೆನ್ನಾಗಿ ಪಾಲಿಸುವುದೋ ಕರುಣೀ ||
• • • • • • • • • • • • • • • • • • •
ಎನ್ನ ಮಾತಲ್ಲ ಇದು ಎನ್ನ ಹಿರಿಯರಮಾತು ಮನ್ನಿಸಬೇಕು ಕರುಣೀ
ಅನ್ನಂತಗುಣಪೂರ್ಣ ಗೋಪಾಲವಿಠ್ಠಲ್ಲ ಇನ್ನೆಪನೆ ಪಾಲಿಸುವುದೋ ಪ್ರಭುವೇ ||

44. ರತುನ ದೊರಕಿತಲ್ಲ ಎನಗೆ ದಿವ್ಯ।
ರತುನದೊರಕಿತು ಎನ್ನ ಜನ್ಮಪವಿತ್ರವಾಯಿತು ಈದಿನದಿ ನಾ।
ಯತ್ನಗೈಯುತ ಬರುತಿರಲು ಪ್ರಯತ್ನವಿಲ್ಲದೆ ವಿಜಯರಾಯರೆಂಬ ||

ಸಂದರ್ಶಿಸಿದರು. ರಾಯರಲ್ಲಿ ಇವರಿಗೆ ಅಸದೃಶವಾದ ಭಕ್ತಿ. ಇವರು ರಾಯರಮಠದ ಶಿಷ್ಯರಲ್ಲದೆ ಆ ಮಠದ ಮೂರು ನಾಲ್ಕು ಸ್ವಾಮಿಗಳಿಗೆ ಅತ್ಯಂತ ಪ್ರಿಯರಾಗಿದ್ದರು. ಪ್ರಾಣೇಶದಾಸರು ಮತ್ತು ಕರ್ಜಗಿದಾಸರು ಇವರಿಗೆ ಮುಖ್ಯ ಶಿಷ್ಯರು.

ಜಗನ್ನಾಥ ದಾಸರು ಅನೇಕ ಪದ, ಪದ್ಯ, ಸುಳಾದಿಗಳನ್ನು ರಚಿಸಿದ್ದಾರೆ. ಅವು ಅತ್ಯಂತ ಪ್ರೌಢವೂ ಸಂಸ್ಕೃತ ಜಟಿಲವೂ ಆಗಿವೆ, ಇವೆಲ್ಲಕ್ಕಿಂತ ಇವರಿಂದ ರಚಿತವಾದ "ಹರಿಕಥಾಮೃತಸಾರ" ದಿಂದ ಇವರ ಹೆಸರು ಅತ್ಯಂತ ಪ್ರಸಿದ್ಧವಾಯಿತು. ಉಪನಿಷತ್ತುಗಳು, ಪುರಾಣಗಳು ಪಂಚರಾತ್ರಾಗಮ, ಪ್ರಕಾಶಸಂಹಿತೆಯೇ ಮೊದಲಾದ ಅನೇಕ ಗ್ರಂಥಗಳ, ಶಾಸ್ತ್ರಗಳ ಸಾರವೆಲ್ಲ ಇದರಲ್ಲಿ ಸಂಗೃಹೀತವಾಗಿರುವುವು. ಇಂಥಹ ಗ್ರಂಥ ಹರಿದಾಸ ಸಾಹಿತ್ಯದಲ್ಲಿ ಹಿಂದೆಂದೂ ರಚಿತವಾಗಿರಲಿಲ್ಲ. ಮುಂದೂ ರಚಿತವಾಗಲಿಲ್ಲ. ಇದರಲ್ಲಿ ಮಧ್ವಮತದ ಅಂತ್ಯಂತ ಕ್ಲಿಷ್ಟ ಪ್ರಮೇಯಗಳು ವಿಸ್ತಾರವಾಗಿ ನಿರೂಪಿತವಾಗಿವೆ. ಇದು ವಿವರಣೆಯಿಲ್ಲದೆ ಅರ್ಥವಾಗಲಾರದು. ಕರ್ಜಗಿದಾಸರು ಇದಕ್ಕೆ ಫಲಸ್ತುತಿಯನ್ನು ರಚಿಸಿರುತ್ತಾರೆ. ಹರಿಕಥಾಮೃತಸಾರವಲ್ಲದೆ ಇವರು 600 ನುಡಿಗಳ "ತತ್ತ್ವಸುವಾಲಿ" ಎಂಬ ಪ್ರಬಂಧವನ್ನೂ ರಚಿಸಿರುವರು. ಇದು ಭಗವದ್ಭಕ್ತಿಯನ್ನು ಹುಟ್ಟಿಸುವ, ಪ್ರಮೇಯ ಗರ್ಭಿತವಾದ, ಸರಸ ತ್ರಿಪದೀಕಾವ್ಯ, ಪಂಡರಪುರದಲ್ಲಿ ವಿಠಲನ ಅನುಗ್ರಹಕ್ಕೆ ಇವರು ಪಾತ್ರರಾದ್ದರಿಂದ ಇವರಿಗೆ "ರಂಗನೊಲಿದದಾಸ"ರೆಂದು ಹೆಸರಾಯಿತು. ಪ್ರಾಣೇಶದಾಸರು ಇವರನ್ನು ಸಹ್ಲಾದಾಂಶರೆಂದು ಸ್ತೋತ್ರಮಾಡಿರುತ್ತಾರೆ.[45]

X. ಪ್ರಾಣೇಶದಾಸರು.

ಜಗನ್ನಾಥದಾಸರ ಶಿಷ್ಯರಲ್ಲಿ ಪ್ರಾಣೇಶದಾಸರೇ ಹಿರಿಯರು, ಇವರ ಹೆಸರು ಯೋಗೀಂದ್ರಪ್ಪ. ಇವರು ಲಿಂಗಸೂಗೂರಿನ ಕುಲಕರಿಣಿಗಳು; ಜಗನ್ನಾಥದಾಸರಲ್ಲಿ ಸೇವೆ ಮಾಡಿ ಅವರಿಂದ "ಪ್ರಾಣೇಶ ವಿಠಲ"ನೆಂಬ ಅಂಕಿತ ಪಡೆದರು. ಇವರು ಪಾಂಡುರಾಜನ ಅಂಶವೆಂದು ಪ್ರತೀತಿ. ಇವರ ಮೇಲೆ ವರದೇಂದ್ರಸ್ವಾಮಿಗಳ ಅನುಗ್ರಹ ಬಹಳ, ಇವರೂ ಅನೇಕ ಪದಪದ್ಯಗಳನ್ನೂ ಗ್ರಂಥಗಳನ್ನೂ ರಚಿಸಿರುವರು.

---

45. ತಿಳಿಯನು ಎಂದೆಂದಿಗನ್ಯ ರಂಗ ಒಲಿದದಾಸರು ಜಗನ್ನಾಥನ್ಯ
ಹಿರಣ್ಯ ಕಶ್ಯಪುಜ ಸಹ್ಲಾದನೆವೇ ಎರಡನೇ ಜನ್ಮಶಲ್ಯನಾದ
ಗುರುವಾದಿರಾಜರನರ್ಚಿಸಿದ ಪುರಂದರದಾಸರಲ್ಲುದಯಿಸಿದ
ಅಯ್ದನೆಯ ರೂಪವೀಗುಂದಂತೆ ಏಳುಜನ್ಮಮುಂದಂತೆ ||

—ಪ್ರಾಣೇಶದಾಸರು.

ಈ ವಿಷಯದಲ್ಲಿ ಪ್ರಾಣೇಶದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸಿದ ಶ್ರೀ ಹನುಮಂತ ರಾವ್ ಗೋರೇಬಾಳರ ವಾಕ್ಯಗಳನ್ನು ಇಲ್ಲಿ ಉದ್ಧರಿಸುವುದು ಸೂಕ್ತವಾಗಿದೆ.

"೧. ಗಾಲವಚರಿತ್ರೆ, ೨. ಕಾಲಿಯಾಮರ್ದನ ಕಥೆ, ೩. ಬುಡ್ಡಿಬ್ರಹ್ಮನ ಕಥೆ, ೪. ಗೋಪಿಕಾ ವಿಲಾಸ, ೫. ಭ್ರಮರಗೀತಾ, ೬. ಮುಯ್ಯದಪದ, ೭. ಶ್ರೀಹರಿವಾಯುಸ್ತುತಿ, ೮. ಸೀತಾಸ್ವಯಂವರ, ೯. ಕಾಳೀಸ್ವಯಂವರ, ೧೦. ಹನುಮದ್ವಿಲಾಸ, (ಗರುಡಗರ್ವಹರಣ) ೧೧. ಭೀಮಸೇನ ವಿಲಾಸ,(ಕೀಚಕನ ವಧೆ) ೧೨.ವೀರಭದ್ರ ವಿಲಾಸ.೧೩ ಪಾರ್ಥ ವಿಲಾಸ, ೧೪. ಅನಿರುದ್ಧವಿಲಾಸ, ೧೫.ವಶಿಷ್ಠವಿಶ್ವಾ ಮಿತ್ರಾಖ್ಯಾನ, ೧೬. ಊರ್ಧ್ವಪುಂಡ್ರ ಮಹಾತ್ಮ್ಯ, ೧೭. ತಿಥಿತ್ರಯ ನಿರ್ಣಯ ಮುಂತಾದ ಕಥೆಗಳನ್ನು ಬಹು ರಸಭರಿತವಾಗಿಯೂ, ಭಕ್ತ್ಯುದ್ರೇಕವಾಗುವಂತೆಯೂ ರಚಿಸಿರುವರು, ದಾಸಾರ್ಯರ ಕೆಲವು ಕವಿತೆಗಳು ಶುದ್ಧ ಕನ್ನಡದಲ್ಲಿಯೂ, ಕೆಲವು ಹಳೆಗನ್ನಡದಲ್ಲಿಯೂ, ಕೆಲವು ಬಹಳ ಸರಳವಾಗಿಯೂ, ಕೆಲವು ಬಹು ಪ್ರೌಢಗಿಯೂ, ಕೆಲವು ಶುದ್ಧ ಸಂಸ್ಕೃತದಲ್ಲಿಯೂ ಇರುವುವು. ಕೆಲವು ಕವಿತೆಗಳು ಅನೇಕ ಪ್ರಮೇಯಗಳಿಂದಲೂ, ಅನೇಕ ಮಹಾಪುರಾಣ, ಉಪಪುರಾಣೋಕ್ತ ಕಥೆಗಳಿಂದಲೂ, ದಾಸರ ಗೌಪ್ಯಗೋಷ್ಠಿಗಳಿಂದಲೂ ಕೂಡಿರುವುದರಿಂದ ಅರ್ಥವಾಗುವುದೇ ಬಹಳ ಕಷ್ಟವಾಗಿದೆ. ಇದೆಲ್ಲ ಕವಿತೆಗಳನ್ನು ನೋಡುವುದರಿಂದ ಇವರು ಹಳೆಗನ್ನಡ ಹಾಗೂ ಸಂಸ್ಕೃತದಲ್ಲಿ ಪೂರ್ಣ ಯೋಗ್ಯತೆಯುಳ್ಳವರೂ ಭಗವದಪರೋಕ್ಷಿಗಳೂ, ಇದ್ದರೆಂಬುದು ಸಹಜವಾಗಿಯೇ ವ್ಯಕ್ತವಾಗುತ್ತೆ."

ಪ್ರಾಣೇಶದಾಸರ ಮಕ್ಕಳಾದ ವೆಂಕಟದಾಸರೆಂಬುವರು ತಂದೆಗಳಿಂದ "ಗುರುಪ್ರಾಣೇಶ ವಿಠಲ"ರೆಂಬ ಅಂಕಿತಪಡೆದ ಜ್ಞಾನಿಗಳೆಂದು ಹೇಳುವರು. ವೆಂಕಟದಾಸರ ಸೋದರಳಿಯಂದಿರಾದ ರಾಮದಾಸರು ಮೊದಲು ಮುಗ್ಧ ಭಾವದಿಂದಿದ್ದು, ಆಮೇಲೆ ಜ್ಞಾನಿಗಳಾಗಿ, ಗುರು ಪ್ರಾಣೇಶದಾಸರಿಂದ "ಶ್ರೀಶ ಪ್ರಾಣೇಶ ವಿಠಲ"ರೆಂದು ಅಂಕಿತಪಡೆದರು.

ಜಗನ್ನಾಥದಾಸರು ಪ್ರಾಣೇಶದಾಸರೊಡಗೂಡಿ ಸಂಚಾರಮಾಡುತ್ತಾ ಕರ್ಜಗಿ ಗ್ರಾಮಕ್ಕೆ ಬಂದಾಗ್ಯೆ ಅಲ್ಲಿ ದಾಸಪ್ಪನೆಂಬವರು ವೇಶ್ಯಾಲೋಲುಪರಾಗಿ ಅನಾಚಾರಿಗಳಾಗಿದ್ದರು. ಪ್ರಾಣೇಶದಾಸರು ಇವರನ್ನು ನೋಡಿ 'ಆದದ್ದಾಯಿತು ಇನ್ನಾದರೂ ಒಳ್ಳೇ ಹಾದಿಹಿಡಿಯೋ ಪ್ರಾಣಿ' ಎಂಬ ಪದ ರಚಿಸಿ ನುಡಿದರು. ಅದರಿಂದ ದಾಸಪ್ಪನಿಗೆ ವೈರಾಗ್ಯಹುಟ್ಟಿ ಮರುದಿನವೇ ಅವರು ತಮ್ಮ ಎಲ್ಲ ದುರ್ನಡತೆಗಳಿಗೂ ತಿಲಾಂಜಲಿ ಕೊಟ್ಟು ಜಗ್ನಾಥದಾಸರ ಶಿಷ್ಯರಾದರು. ಜಗನ್ನಾಥದಾಸರಿಂದ ಇವರಿಗೆ

'ಶ್ರೀದವಿಠಲ'ನೆಂಬ ಅಂಕಿತ ದೊರೆಯಿತು. ಇವರು ದೊಡ್ಡ ಜ್ಞಾನಿಗಳೆನಿಸಿ ಅನೇಕ ಪದಗಳನ್ನು ರಚಿಸಿರುವರು. ರಾಯರ ಮೇಲಿನ ಇವರ ಪದಗಳು ಪ್ರಸಿದ್ಧವಾಗಿವೆ. ಇಲ್ಲಿಗೆ ದಾಸಸಾಹಿತ್ಯದಲ್ಲಿ ಜ್ಞಾನಿಗಳ ರಚನೆಗಳು ಮುಗಿದುವು. ಪ್ರಾಣೇಶದಾಸರವರಿಗೆ ಅಪರೋಕ್ಷಜ್ಞಾನಿಗಳ ಪರಂಪರೆ ನಡೆದು ಬಂದಿತೆನ್ನಬಹುದು. ಇಲ್ಲಿಂದ ಮುಂದಕ್ಕೆ ದಾಸಸಾಹಿತ್ಯ ಬೆಳೆಯುವುದರ ಬದಲು ಕ್ಷೀಣದೆಸೆಗೆ ಬರಹತ್ತಿ ಹತ್ತೊಂಭತ್ತನೆಯ ಶತಮಾನದ ಅಂತ್ಯದಲ್ಲಿ ನಿಂತು ಹೋಯಿತು.

4. ಅವನತಿಯ ಕಾಲ

ದಾಸಸಾಹಿತ್ಯದ ಕ್ಷೀಣದೆಸೆಯಲ್ಲಿ ಕೆಲದಾಸರ ಹೆಸರನ್ನು ಇಲ್ಲಿ ಉಲ್ಲೇಖಿಸಬಹುದು. ಪ್ರಸನ್ನವೆಂಕಟದಾಸರ ಊರಾದ ಕಾಖಂಡಕಿಯಲ್ಲಿ ಮಹಿಪತಿರಾಯರೆಂಬುವರು ಜ್ಞಾನಿಗಳೆಂದು ಪ್ರಸಿದ್ಧರಾಗಿ ಅನೇಕ ಪದಗಳನ್ನು ರಚಿಸಿರುವರು. ದಕ್ಷಿಣದೇಶ, ಮೈಸೂರು ದೇಶಗಳಲ್ಲಿನ ಮೈಸೂರು, ದೊಡ್ಡಬಳ್ಳಾಪುರ ಹೊನ್ನಾಳಿ, ಚಿಕ್ಕೇರಳ್ಳಿ, ಚಿತ್ರದುರ್ಗ, ಕದಿರಮಂಡಿಗೆ, ಬಳ್ಳಾರಿ, ಸುರಪುರ, ಇಭರಾಂಪುರ, ಮೊದಲಕಲ್ಲು ಮೊದಲಾದ ಅನೇಕ ಸ್ಥಳಗಳವರು ವಿಜಯದಾಸರು ಮತ್ತು ಮೊಹನ ದಾಸರ ಶಿಷ್ಯಪಂಪರೆಯಲ್ಲಿ ಬಂದರು. ಈ ಪರಂಪರೆಯೂ ಅನೇಕ ಕಾಲ ಬೆಳೆಯಿತಲ್ಲದೆ, ಈಗಲೂ ಇದರ ಅವಶೇಷಗಳು ಅಲ್ಲಲ್ಲಿ ಕಂಡುಬರುವುವು. ಅಂತೂ ಈ ಅವನತಿಯ ಕಾಲದಲ್ಲೂ ಕೆಲವು ಜ್ಞಾನಿಗಳು ಆಗಿಹೋಗಿದ್ದಾರೆ. ಅಭಿನವ ಜನಾರ್ದನವಿಠಲ, ಅನಂತಾದ್ರೀಶ, ಇತ್ಯಾದಿ ಮುದ್ರಿಕೆಯುವರೂ, ಸುರಪುರದ ಆನಂದದಾಸರು ಇಭರಾಮಪುರದ ಕೃಷ್ಣಾಚಾರ್ಯರು. ಮೊದಲಕಲ್ಲು ಶೇಷದಾಸರು ಹೀಗೆ ಪ್ರಸಿದ್ಧವಾಗಿರುವರು. ಅಭಿನವ ಜನಾರ್ಧನವಿಠಲರು ರಾಯರ ಪರಮಭಕ್ತರು. ರಾಯರ ಮೇಲಿನ ಇವರ ಪದಗಳು ಇಂದಿಗೂ ಜನಜನಿತವಾಗಿವೆ. ಸೃಷ್ಟಿ ಪ್ರಕರಣಾದಿ ಜಟಿಲ ಪ್ರಮೇಯಯುಕ್ತ ಪದಗಳನ್ನು ಇವರು ರಚಿಸಿರುತ್ತಾರೆ. ರಾಯರಿಗೆ ಇವರು ಅತ್ಯಂತ ಪ್ರೀತಿಪಾತ್ರರಾದ್ದರಿಂದ ಇವರಿಗೆ ಪ್ರೇಮದಾಸರೆಂದು ಮತ್ತೊಂದು ಹೆಸರು. ಅನಂತಾದ್ರೀಶಾಂಕಿತದಾಸರು ವೆಂಕಟೇಶ ದೇವರ ಮೇಲೆ ಅನೇಕ ಪದಗಳನ್ನು ರಚಿಸಿರುವರು, ಸುರಪುರದ ಆನಂದದಾಸರು ಸುರಪುರಸಂಸ್ಥಾನದಲ್ಲಿ ಪ್ರಸಿದ್ಧ ಸಂಸ್ಕೃತ ಪಂಡಿತರು ಮತ್ತು ಉತ್ತಮ ಗಾಯಕರು. ಇವರಿಗೆ ಶ್ರೀಶವರದವಿಠಲರೆಂಬ ದಾಸರ ಸಂಪರ್ಕದಿಂದ ದಾಸದೀಕ್ಷೆ ಬಂದು "ಕಮಲೇಶವಿಠಲ"ರೆಂಬ ಮುದ್ರಿಕೆ ದೊರೆಯಿತು. ಇವರಿಂದ ರಚಿತವಾದ ಕನ್ನಡಪದಗಳು ಅತ್ಯಂತ ರಸಯುಕ್ತವಾಗಿವೆ. ಇವರ ಗುರುಗಳು ಇಭರಾಂಪುರದ ಕೃಷ್ಣಾಚಾರ್ಯರು. ಕೃಷ್ಣಾಚಾರ್ಯರು ರಾಯರ ಪರಮಭಕ್ತ ಪರಿಮಳಾಚಾರ್ಯರೆಂದು ಅವರ ಪ್ರಸಿದ್ಧಿಯು. ಇವರು ಪ್ರಸಿದ್ಧರೂ

ಮಂತ್ರಸಿದ್ಧರೂ ಮತ್ತು ಅನೇಕ ಮಹಿಮೆಗಳನ್ನು ತೋರಿರುವರು. ಇವರನ್ನು "ಅಪ್ಪಾವರು" ಎಂದೂ ಕರೆಯುವುದುಂಟು. ಮೊದಲಕಲ್ಲು ಶೇಷದಾಸರು ದೊಡ್ಡ ಜ್ಞಾನಿಗಳು. ಗದ್ವಾಲಸಂಸ್ಥಾನದ ದರೂರೆಂಬ ಗ್ರಾಮದ ಕರಣಿಕರಾಗಿದ್ದವರು. ರಾಜನಿಂದ ಅಪಮಾನಿತರಾಗಿ ವೈರಾಗ್ಯತಾಳಿ, ಪ್ರಾಣದೇವರ ಉಪಾಸನೆ ಮಾಡಿ, ವಿಜಯದಾಸರಿಂದ ಸ್ವಪ್ನದ್ವಾರಾ 'ಗುರು ವಿಜಯವಿಠಲ'ರೆಂಬ ಅಂಕಿತ ಪಡೆದು ಅನೇಕ ಪ್ರಮೇಯಯುಕ್ತ ಪದಸುಳಾದಿಗಳ್ನೂ ಪಂಚಭೇದ, ಮುಕ್ತಪ್ರಕಾರಣಾದಿ ಗ್ರಂಥಗಳನ್ನು ರಚಿಸಿದರು.

ಈಚೆಗೆ ಆಗಿಹೋದ ದಾಸರುಗಳಲ್ಲಿ ಮೈಸೂರಿನ ಶ್ರೀನಿವಾಸದಾಸರೂ, ಗುರುರಾಮ ವಿಠಲಾಂಕಿತರಾದ ದಾಸರು ಹೆಸರುವಾಸಿಯಾಗಿದ್ದಾರೆ. ಶ್ರೀನ್ಯಾಸ ರಾಜಪೀಠದಲ್ಲಿ ಈಗ ವಿರಾಜಮಾನರಾಗಿರುವ ಶ್ರೀ ವಿದ್ಯಾಪ್ರಸನ್ನ ತೀರ್ಥರ ಪೂರ್ವಾಶ್ರಮ ಪಿತೃಗಳು ಪರಮ ಗುರುಗಳೂ ಆದ ಶ್ರೀವಿದ್ಯಾರತ್ನಾಕರತೀರ್ಥರು 'ಗೋಪಾಲಕೃಷ್ಣ' 'ನಾಮಗಿರೀಶ' ಮುದ್ರಿಕೆಗಳಿಂದ ಪದಗಳನ್ನು ರಚಿಸಿದ್ದಾರೆ. ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮಿಗಳೂ ಸಹ 'ಪ್ರಸನ್ನ' ಮುದ್ರಿಕೆಯಿಂದ ರಚಿಸಿರುವ ವಿವಿಧ ರಸಯುಕ್ತ ಪದಗಳು ಅತ್ಯಂತ ಚೇತೋಹಾರಿಯಾಗಿವೆ.

ಕ್ರಿಸ್ತಶಕ ಹದಿಮೂರನೆಯ ಶತಮಾನದಲ್ಲಿ ನರಹರಿತೀರ್ಥರಿಂದ ಆರಂಭವಾದ ಕನ್ನಡ ಹರಿದಾಸಸಾಹಿತ್ಯವು, ಮಧ್ಯ ಮಧ್ಯದಲ್ಲಿ ಅಲ್ಪ ಸ್ವಲ್ಪ ವಿಚ್ಛಿತ್ತಿ ಬಂದರೂ ಹತ್ತೊಂಬತ್ತನೆಯ ಶತಮಾನದವರೆಗೂ ಜೀವಂತವಾಗಿಬೆಳೆದುಬಂದಿತಲ್ಲದೆ, ಇನ್ನೂ ಅಲ್ಪ ಸ್ವಲ್ಪ ಬೆಳೆಯುತ್ತಿದೆ. ಹೀಗೆ ಸುಮಾರು ಏಳನೂರು ವರ್ಷದ ಇತಿಹಾಸದಲ್ಲಿ ೩೦೦–೪೦೦ ವರುಷಗಳಷ್ಟು ಕಾಲ ಈ ಸಾಹಿತ್ಯವು ಅತ್ಯಂತ ಚೇತನಯುಕ್ತವಾಗಿ ಪುಷ್ಟಿಗೊಂಡಿತು. ಸರಿಯಾದ ಜ್ಞಾನಿಗಳು ಉದಯಿಸಿ ಸನ್ನಿವೇಶ ಸೌಲಭ್ಯಗಳು ದೊರೆತರೆ ಮುಂದೆಯೂ ಈ ಸಾಹಿತ್ಯವು ನವಚೈತನ್ಯ ಹೊಂದಿ, ಬೆಳೆಯುವುದೆಂಬುದು ಇದರ ಹಿಂದಿನ ಇತಿಹಾಸದಿಂದ ವ್ಯಕ್ತಪಡುವುದು. ಭಾಗವತ ಧರ್ಮಪ್ರಚಾರವೇ ಜೀವಾಳವಾಗಿರುವ ಈ ದಾಸಾಹಿತ್ಯಕ್ಕೆ ಸರಿಯಾದ ಪ್ರೋತ್ಸಾಹ ಅತ್ಯಗತ್ಯ. ರಾಜಾಶ್ರಯಕ್ಕಾಗಿ ಇದು ಎಂದೂ ಕಾದಿಲ್ಲ. ತಕ್ಕ ಸನ್ನಿವೇಶ ಒದಗಿದಲ್ಲಿ ಇದು ಹೊಸ ಅಧ್ಯಾಯ ಪ್ರಾರಂಭಿಸುವುದು, ಭಾರತ ಸಂಸ್ಕೃತಿಯ ಪ್ರತಿಬಿಂಬವಾದ ಇದನ್ನು ರಕ್ಷಿಸಬೇಕಾದುದಲ್ಲದೆ, ಮುಂದೂ ಪೋಷಿಸಿ ಬೆಳೆಸಬೇಕಾದುದು ಅವಶ್ಯಕವಾದದ್ದು.

★ ★ ★ ★ ★ ★ ★

XIV. ಹರಿದಾಸ ಸಾಹಿತ್ಯ ಸರಣಿ

ದಾಸಸಾಹಿತ್ಯವು ಅತ್ಯಂತ ವಿಸ್ತಾರವಾದದ್ದು, ಪುರಂಧರದಾಸರೊಬ್ಬರೇ ನಾಲ್ಕು ಮುಕ್ಕಾಲು ಲಕ್ಷ ಪದ-ಪದ್ಯ ಸುಳಾದಿಗಳನ್ನು ರಚಿಸಿರುವರು. ಅಂದರೆ ಮಹಾಭಾರತದ ನಾಲ್ಕೈದರಷ್ಟಾಯಿತು. ಇದರ ಜೊತೆಗೆ ಇತರ ದಾಸರ ಕೃತಿಗಳೂ ಸೇರಿದಲ್ಲಿ, ಅತ್ಯಂತ ವಿಸ್ತಾರವಾದ ಸಾಹಿತ್ಯವಾಗುವುದು. ಇಷ್ಟು ದೊಡ್ಡ ವಾಙ್ಮಯ ಜಗತ್ತಿನಲ್ಲೆಲ್ಲೂ ಇಲ್ಲವೆಂದೂ ಹೇಳಬಹುದು. ಬರಿಯ ಮನರಂಜನೆಗೆ ಬರೆಯುವ ಅತ್ಯಂತ ದೊಡ್ಡ ಕತೆ-ಕಾದಂಬರಿಕಾರರೂ ಇಷ್ಟು ದೊಡ್ಡ ಇಷ್ಟು ಹೆಚ್ಚಿನ ಸಾಹಿತ್ಯ ಸೃಷ್ಟಿ ಮಾಡಲಾರರು. ದಾಸರುಗಳ ಜೀವನಚರಿತ್ರೆಯನ್ನು ನೋಡಿದರೆ, ಅವರು ಇದಕ್ಕಾಗಿ ಲೇಖನಿಯನ್ನು ಹಿಡಿದು ಕುಳಿತವರಲ್ಲ. ಭಗವಂತನಲ್ಲಿಯ ಭಕ್ತಿಪಾರವಶ್ಯದಿಂದಾದ ಭಾವೋನ್ಮಾದದಿಂದ ಸ್ಫುರಿಸಿದ ಕವಿತೆಗಳೇ ಅಪರೋಕ್ಷಜ್ಞಾನಿಗಳಾದ ಈ ದಾಸರ ಕೃತಿಗಳು. ಈ ಬೃಹದ್ವಾಙ್ಮಯದಲ್ಲಿ ಈಗ ಸಹಸ್ರಾಂಶವೂ ಉಪಲಬ್ಧವಿಲ್ಲ. ಈಗ ಉಪಲಬ್ಧವಿರುವುದೆಲ್ಲ ಅಚ್ಚಾಗಿ ಪ್ರಕಟವಾಗಿಲ್ಲ. ಈಗ ಪ್ರಕಟವಾಗಿರುವುದಷ್ಟನ್ನೇ ತೆಗೆದುಕೊಂಡರೂ ಇದು ವಿಫಲಸಾಹಿತ್ಯವೆನಿಸುವುದು. ಇದರಲ್ಲಿ ಭಗವಂತನ ಮಹಿಮೆಗಳು, ಭಗವಂತನ ಸ್ತೋತ್ರ, ಉಪಾಸನೆ, ಸಾಧನಕ್ರಮ, ಮಧ್ವಮತ ಪ್ರಮೇಯಗಳಲ್ಲಿ ಸೃಷ್ಟಿಕ್ರಮ, ಪಂಚಭೇದ, ತಾರತಮ್ಯ ಇತ್ಯಾದಿ, ಆಧ್ಯಾತ್ಮಿಕಪರ ಪದಗಳು, ಸಮಸ್ಯೆಗಳು ಲೋಕನೀತಿಗಳು ಹೀಗೆ ಸರ್ವವಿಧ ಸಾಹಿತ್ಯವೂ ಅಡಕವಾಗಿದೆ. ಇವುಗಳನ್ನು ಸಾಮಾನ್ಯವಾಗಿ ಎಲ್ಲ ದಾಸರ ಕೃತಿಗಳಲ್ಲೂ ಕಾಣಬಹುದು. ಆದ್ದರಿಂದ ಬೇರೆಬೇರೆ ದಾಸರುಗಳ ಕೃತಿಗಳನ್ನು ಪ್ರತ್ಯೇಕವಾಗಿ ವಿಚಾರ ಮಾಡುವುದಕ್ಕಿಂತ, ಬೇರೆಬೇರೆ ವಿಷಯಗಳನ್ನಧಿಕರಿಸಿ ಎಲ್ಲ ದಾಸರ ಕೃತಿಗಳನ್ನು ಆಯ್ದುಕೊಂಡು ಅದನ್ನು ವಿಚಾರಮಾಡುವುದೇ ಯುಕ್ತವು. ಇದರಿಂದ ಸಮಗ್ರ ದಾಸಸಾಹಿತ್ಯದ ಸೂಕ್ಷ್ಮವಾದ ಪರಿಚಯವಾಗುವುದು.

1. ಮಧ್ವಮತ ಪ್ರಶಂಸಾ.

ಕನ್ನಡದ ಹರಿದಾಸರುಗಳು ಮಧ್ವಮತದ ಅಚ್ಚುಕಟ್ಟಿಗೆ ಸೇರಿದವರು. ಅವರಲ್ಲಿ ಮಧ್ವಮತದ ಮುಖ್ಯಸಂಸ್ಥಾನಾಧಿಪತಿಗಳಿರುವರು. ಅವರು ಮಧ್ವಮತದ ಪ್ರಮೇಯಗಳನ್ನು ಘಂಟಾಘೋಷವಾಗಿ ಎತ್ತಿಸಾರಿರುವರೆಂಬುದರಲ್ಲಿ ಸಂದೇಹವಿಲ್ಲ. ಸಾಹಿತ್ಯದಲ್ಲಿ ಸನಾತನ ಧರ್ಮದ ಮುಖ್ಯ ಅಂಗಗಳಾದ ವರ್ಣಾಶ್ರಮಧರ್ಮ, ವೇದ ಪ್ರಾಮಾಣ್ಯ, ಶಮದಮಾದಿ ಸದ್ಗುಣವಿಷಯ, ಸ್ನಾನ-ಜಪ-ತಪಾದಿ ಸಾಧನ, ಭಗವದ್ಭಕ್ತಿ, ಇವುಗಳ ಜೊತೆಗೆ ವೈಷ್ಣವಮತ ಪ್ರಕ್ರಿಯೆಯೂ ಇದೆ. ವಿಷ್ಣು ಪರದೇವವೆಂದು ಹೇಳುವ ಇತರ ವೈಷ್ಣವಮತ ಸಾಮಾನ್ಯ ಪ್ರಕ್ರಿಯೆಗಳ ಜೊತೆಗೆ

ಜಗತ್ಸತ್ಯತ್ವ, ತಾರತಮ್ಯ, ವಾಯು ಜೀವೋತ್ತಮತ್ವ. ಪಂಚಭೇದವೇ ಮೊದಲಾದ ಮಧ್ವಮತ ಪ್ರಮೇಯಗಳು ವಿಶೇಷವಾಗಿವೆ. ಇದರ ಜೊತೆಗೆ ಮಧ್ವಶಾಸ್ತ್ರದ ಅತಿ ಗಹನವಾದ ಉಪಾಸನಾಭಾಗ, ಭಗವಂತನ ವ್ಯಾಪ್ತಿ, ಅಂತರ್ಯಾಮಿತ್ವಾದಿ ವಿಶೇಷ ಮಹಿಮೆಗಳೂ ಉಕ್ತವಾಗಿವೆ. ಅದರಿಂದ ಮಧ್ವಮತದ ಅಚ್ಚುಕಟ್ಟಿನಲ್ಲಿಯೇ ದಾಸಸಾಹಿತ್ಯವನ್ನು ಪರ್ಯಾಲೋಚಿಸುವುದೇ ನ್ಯಾಯವಾದುದು. ಇದನ್ನು ಮತೀಯವಾದ ಸಂಕುಚಿತದೃಷ್ಟಿ ಎನ್ನುವುದು ಅಸಂಗವಾಗುವುದು.

ಕನ್ನಡ ಹರಿದಾಸರೆಲ್ಲರೂ ಮಧ್ವಮತವನ್ನು ಪ್ರಶಂಸಿಸದೇ ಇಲ್ಲ. ಪುರಂದರ ದಾಸರು ಜಗತ್ತಿನ ಮತಗಳೊಳಗೆಲ್ಲ ಮಧ್ವಮತವು ಶ್ರೇಷ್ಠವೆಂದು ಬಹಳ ಸರಳವಾಗಿ ಹೇಳುವರು.

ರೇಗುಪ್ತಿ–ಝಂಪೆ

ಮತಗಳೊಳಗೆ ಒಳ್ಳೆಯಮತ ಮಧ್ವಮತವು ||ಪ||
ರಘುಪತಿ ಪೂಜಾವಿಧಾನಕ್ಕೆ ಪಾವನ ಮತವು | ಇದು ಪಾಮನಮತವು ||ಅ||
ನಾರಾಯಣನ ನಾಮಸ್ಮರಣೆ ನಂಬಿದಾ ಮತವು | ಇದು ನಂಬಿದಾ ಮತವುಪಾರಾಯಣಕೆ ಅನುಕೂಲಮತವು | ತಾರಮ್ಯದಿ ಉದ್ಧರಿಸಿ ಶ್ರುತಿಗಳನೊರೆದ ಧಾರಿಣಿಯ ಸುರರ ಸಂತೋಷದ ಮತವು ||೧||
ಅಕಳಂಕ ಶ್ರೀಹರಿಗೆ ವಜ್ರಾಂಕಿತ ಮತವು | ಇದು ಮುದ್ರಾಂಕಿತ ಮತವು ಸಕಲ ದೇಶಕ್ಕೆ ಸತ್ಕೃತವಾದ ಮತವು | ಅಕುಟಿಲ ಶುಕ–ಸನಕಾದಿ ಮುನೀಂದ್ರರ ನಿಖಿಲ ಕ್ರಿಯಾಪದವೀವ ನಿರ್ಮಲಮತವು ||೨||
ಸರಸ ಸದ್ಗುಣ ಸಾತ್ವಿಕವೀ ಮತವು | ಇದು ಶುದ್ಧ ಸಾತ್ವಿಕಮತವು ಗುರುಶಿಷ್ಯರಿಗೆ ಅನುಕೂಲವಾದ ಮತವು | ಪರಮತ ಖಂಡಿಸಿ ಪಂಡಿತರು ಪೇಳಿದ ಪುರಂದರ ವಿಠಲನ ಮತವೇ ಪಂಡಿತರ ಮತವು ||೩||

– ಉಡುಪಿ ; ಪುರಂದರದಾಸರ ಕೀರ್ತನೆ ಭಾಗ ೨–೧೦೭

ಇದರಲ್ಲಿ ಹರಿಯ ಸರ್ವೋತ್ತಮತ್ವವೇ ಮುಖ್ಯ ಪ್ರಮೇಯವೆಂಬುದನ್ನು ಮೊದಲಿಗೆ ತಿಳಿಸಿ ಈ ಮತವು ಸಾಧಕರಿಗೆ ಅನುಕೂಲವಾದುದೆಂದೂ ಪರಮಭಾಗವತರುಗಳಾದ ಸನಕಾದಿ ಮುನಿಶ್ರೇಷ್ಠರುಗಳಿಗೆ ಸಮ್ಮತವಾದುದೆಂದೂ; ಇದೇ ಭಗವಂತನ '**ಮತ**'ವೆಂದೂ ಹೇಳಿರುವರು.

ವರಮಧ್ವಶಾಸ್ತ್ರವೇ ಸಕಲಶಾಸ್ತ್ರಾಧಿಕವೆಂದು | ಶಿರವರಿದು ಮುಂದಿರಿಸಲೋ |
ಪರಮತಜಾಲಗಳು ವೇದವಿರುದ್ಧವೆಂದು | ಶರಧಿಯನು ನೆರೆದಾಟಲೋ ಪ್ರಾಣಿ |

– ಬೆಂಗರೂರು; ವಾದಿರಾಜಸ್ವಾಮಿಗಳ ಕೀರ್ತನೆ–೧೬.

ವಾದಿರಾಜರಿಗೆ ಮಧ್ವಮತದಲ್ಲಿ ಇಂತಹ ದೀಕ್ಷೆ, ಇತರ ಸಿದ್ಧಾಂತಗಳು

ಅಪಸಿದ್ಧಾಂತಗಳೆಂದು ಅವರು ಧೈರ್ಯವಾಗಿ ನುಡಿದಿರುವರು. ವಿಜಯದಾಸರು ಅದ್ವೈತಮತವು ವೇದವಿರುದ್ಧವಾದ್ದರಿಂದ ಅದನ್ನು ಬಿಟ್ಟು ವೈಷ್ಣವ ಸಿದ್ಧಾಂತವನ್ನೆ ಅನುಸರಿಸಿರೆಂದು ಉಪದೇಶಿಸಿರುವರು.

ಅದ್ವೈತಮತವನು ಅಧ್ವರಮಾಡುವ | ನ ದ್ವೇಷವನ್ನು ಬಳಿದು ಸದ್ವಚನವ ಕೇಳು | ದ್ವೈತಮತದಲ್ಲಿ ಸದ್ವೈಷ್ಣವೋತ್ತಮನಾಗು | ಸದ್ವಿಚಾರದಲ್ಲಿ ತದ್ವಿಧಿ ಯಾಚರಿಸು | ಮಧ್ವರಾಯರ ಪಾದದ್ವಯವ ಭಜಿಸಿ | ಊರ್ಧ್ವಲೋಕಕೆ ಪೋಗುವ ದ್ವಾರಮಾಡು | ಅದ್ವೈತಮಹಿಮ ದಾನವಧ್ವಂಸಿ ವಿಜಯವಿಠಲ |ವಿದ್ವತ್ತಮನ ನೀ ಹೃದ್ವನಜದೊಳಗಿರಿಸೋ | — ಸಾಧನಭಾಗ ಸುಳಾದಿಗಳು, ಭಾಗ ೧. ಪು.೭೦.

ಪುರಂದರ ದಾಸರೂ ಇಷ್ಟೇ ತೀವ್ರತೆಯಿಂದ ಉಪದೇಶಿಸಿದ್ದಾರೆ.

"ಮಧ್ವಮತದ ಸಿದ್ಧಾಂತದಪದ್ದತಿ ಬಿಡಬೇಡಿ ಬಿಡಬೇಡಿ |

ಬಿಟ್ಟು ಕೆಡಬೇಡಿ ಕೆಡಬೇಡಿ ಬಿಟ್ಟರೆ ಯಮ ಬೆನ್ನಟ್ಟುವ ಮೂಢ ||

ಇದಕ್ಕೆ ಕಾರಣವೇನೆಂಬುದನ್ನು ಸಯುಕ್ತಿಕವಾಗಿ ಅವರೇ ಇನ್ನೊಂದು ಸುಳಾದಿಯಲ್ಲಿ ತಿಳಿಸಿದ್ದಾರೆ.

; ಒಬ್ಬ ಆಚಾರಿಯನು ದೈವವೇ ಇಲ್ಲವೆಂದ | ಒಬ್ಬ ಆಚಾರಿಯನು ದೈವಕೆಂಟೇ ಗುಣವೆಂದ | ಒಬ್ಬ ಆಚಾರಿಯನು ನಿರ್ಗುಣ ನಿರಾಕಾರ | ನಿರವಯವನೆಂದ ಕಡೆಯಲಿ ತಾನೇ ದೈವವೆಂದ | ಒಬ್ಬರು ವೇದಾರ್ಥವರಿತು ಅರಿಯರು | ಒಬ್ಬ ಮಧ್ವಾ ಚಾರ್ಯರೇ ಪುರಂದರ ವಿಠಲ | ನೊಬ್ಬನೇ ದೈವವೆಂದು ತೋರಿಕೊಟ್ಟರಾಗಿ |

ವೈದಿಕಮತದಲ್ಲಿ ನಡೆದೇವೆಂದು ತಾವು | ವೈಷ್ಣವವಂ ಬಿಟ್ಟುಕೊಟ್ಟರು ಕೆಲವರು |ವೈಷ್ಣವ ಮತದಲ್ಲಿ ನಡೆದೇವೆಂದು ತಾವು | ವೈದಿಕವಂ ಬಿಟ್ಟುಕೊಟ್ಟರು ಕೆಲವರು | ವೈದಿಕ ವೈಷ್ಣವ ಒಂದೆಂದು ಮಧ್ವಮುನಿ | ಪ್ರತಿವಾದಿಸಿದ ಪುರಂದರ ವಿಠಲ ಮೆಚ್ಚೆ | —ಬೆಂಗಳೂರು. ಪು.ii ಸುಳಾದಿ೩.

ಶ್ರೀಮದಾಚಾರ್ಯರ "ದೇವರ ಕಲ್ಪನೆ" ಪೂರ್ಣವೂ ನಿರ್ದುಷ್ಟವೂ ಆಗಿರುವುದು; ವೇದಗಳು ವಿಷ್ಣೂತ್ಕರ್ಷವನ್ನು ಹೇಳುವುದೆಂಬುದು ಸಿದ್ಧಾಂತಿತವು. ಪುರಂದರ ದಾಸರು ಮೇಲಿನ ಸುಳಾದಿಯಲ್ಲಿ ಇದೇ ವಿಷಯವನ್ನೇ ಸೂಚಿಸಿದ್ದಾರೆ.

೩. ಹರಿಸರ್ವೋತ್ತಮತ್ವ.

ಮಧ್ವಮತಪ್ರಮೇಯಗಳಲ್ಲಿ, 'ಭಗವಂತ ಸ್ವತಂತ್ರ, ಗುಣ ಪೂರ್ಣ, ದೋಷದೂರ. ಜೀವರು ಅಸ್ವತಂತ್ರರು, ಅವನ ಅಧೀನರು, ಅವನ ದಯೆಯಾಗಬೇಕಾದಲ್ಲಿ ಜೀವರುಗಳು ವೈರಾಗ್ಯ, ಸತ್ಕರ್ಮಾನುಷ್ಠಾನ, ಜ್ಞಾನ–ಭಕ್ತ್ಯಾದಿಗಳಿಂದ ಅವನನ್ನು ಒಲಲಿಸಿಕೊಳ್ಳುವ ಯತ್ನಮಾಡಬೇಕು' ಎಂಬುದೇ ಮುಖ್ಯವಾದದ್ದು. ದಾಸಸಾಹಿತ್ಯ ದಲ್ಲಾದರೂ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯಕಾಣುವುದು. ಪರಮಾತ್ಮನ ಅನಂತಕಲ್ಯಾಣ

ಗುಣಗಳನ್ನೊಳಗೊಂಡ ಮಹಾಮಹಿಮೆ, ಅವನ ಪ್ರಸಾದಕ್ಕಾಗಿ ಜೀವರು ವೈರಾಗ್ಯಾದಿ ಅನೇಕ ಸಾಧನೆಗಳೊಂದಿಗೆ ಅನನ್ಯ ಶರಣರಾಗಿ ಆ ಭಗವಂತನಲ್ಲಿ ಮೊರೆ ಇಡುವುದು– ಇದೇ ಸಮಗ್ರ ಹರಿದಾಸಸಾಹಿತ್ಯದ ಅಂತರ್ಯ. ಉಳಿದ ವಿಷಯಗಳೆಲ್ಲ ಆನುಷಂಗಿಕ ಹಾಗೂ ಅಪ್ರಧಾನವಾಗಿ ಕಾಣುವುವು. ಹರಿಯೇ ಪರದೈವವೆನ್ನುವ ಮೊದಲ ಪ್ರಮೇಯ ದಾಸಸಾಹಿತ್ಯದಲ್ಲಿ ಅತ್ಯಂತ ವಿಸ್ತಾರವಾಗಿ ನಿರೂಪಿತವಾಗಿದೆ.

ಸಾವೇರಿ–ಝಂಪೆ

ಹರಿಯೇ ಸರ್ವೋತ್ತಮ ಹರಿಯೇ ಪರದೇವತೆ |
ಹರಿಸರ್ವವಿಶ್ವಮಯಂ ಜಗತು । || ಪ ||
ಹರಿಯಿಲ್ಲದನ್ಯತ್ರ ದೈವಗಳಿಲ್ಲವೆಂದು |
ಉರುಗನ ಹೆಡೆಯನ್ನು ಹಿಡಿದು ಹೇಳುವೆನಯ್ಯ || ಪ ||

ಜಗವ ಪುಟ್ಟಿಸುವ ಬ್ರಹ್ಮನಿನ್ನ ಮಗ | ಜಗವ ಸಂಹರಿಸುವ ರುದ್ರ ಮೊಮ್ಮಗನು | ಜಗದಪಾವನೆ ಭಾಗೀರಥಿ ನಿನ್ನ ಮಗಳಯ್ಯ | ಜಗದಜೀವರಮಾತೆ ನಿನ್ನರಸಿಯೋ ದೇವ || ೧ ||

ವಿಶ್ವತೋಮುಖ ನೀನೇ ವಿಶ್ವತಶ್ಚಕ್ಷು ನೀನೇ | ವಿಶ್ವತೋಬಾಹು ವಿಶ್ವಪಾದನು ನೀನೇ | ವಿಶ್ವ ಉದರನೀನೇ ವಿಶ್ವವ್ಯಾಪಕ ನೀನೇ | ವಿಶ್ವನಾಟಕ ಸೂತ್ರಧಾರಿಯೇ ವಿಷ್ಣುವೇ || ೨ ||

ಆಗಮ ನಿಗಮ ಪುರಾಣಗಳೆಲ್ಲವು | ಯೋಗಿಜನಗಳೆಲ್ಲ ಪೊಗಳುತ್ತಿರೆ | ನಾಗಶಯನ ಭೋಗಿಭೂಷಣವಂದಿತ | ಭಾಗವತರಪ್ರಿಯ ಪುರಂದರ ವಿಠಲ|| ೩ ||

ಪುರಂದರದಾಸರು ಈ ಪದದಲ್ಲಿ "ಅಹಂರುದ್ರಾಯಧನುರಾತನೋಮಿ...... ಮಮ ಯೋನಿರಪ್ಸ್ವಂತಸ್ಸಮುದ್ರೇ" ಎಂಬ ಅಂಭ್ರಿಣೀಸೂಕ್ತದ ಮತ್ತು "ವಿಶ್ವತಶ್ಚ ಕ್ಷುರುತವಿಶ್ವತೋ ಮುಖೋ"........... ಮತ್ತು "ಸಹಸ್ರಾಕ್ಷಸ್ಸಹಸ್ರಪಾತ್" ಎಂಬ ಅರ್ಥವನ್ನು ಹೇಳಿರುವರು.

ಮುಂದಿನ ಪದದಲ್ಲಿ ಪುರಾಣೋಕ್ತ ಅನೇಕ ನಿದರ್ಶನಗಳನ್ನು ಆಯ್ದು ಅದರಿಂದ ಹರಿಸರ್ವೋತ್ತಮತ್ತ್ವವು ಸ್ಥಾಪಿತವಾದುದನ್ನು ಪುರಂದರದಾಸರು ಪ್ರಸ್ತಾಪಿಸಿರುವರು.

ಸೌರಾಷ್ಟ್ರ–ಆದಿ

ಅಂದೇ ನಿರ್ಣಯವಾದುದಕೆ ಸಿರಿ |
ಇಂದಿರಾಪತಿ ಪರದೈವತೆಯೆಂದು || ಅ ||

ಅಂದು ಸ್ವಯಂವರದಲ್ಲಿ ಬ್ರಹ್ಮ |ರುದ್ರಾದಿ ಇಂದ್ರಾದಿಗಳೆಲ್ಲರ ಜರಿದು | ಇಂದಿರೆ ನಿತ್ಯಾನಂದ ನಿರ್ದೋಷ ಗುಣ | ಪೂರ್ಣನೆಂದು ಮಾಲೆಯ ಹಾಕಿದಳು ೧

ಸರಿಸಿಜೋದ್ಭವ ಹರಿಪಾದವ ತೊಳೆಯಲು |ಹರಿಭಕ್ತಿಯಿಂದ ಹರಿಪಾದ

ತೀರ್ಥವ | ಹರುಷದಿ ಸುರಮುನಿಗಳೆಲ್ಲರ ಮುಂದೆ | ಧರಿಸಿದನಂದು ಶಿರಸ್ಸಿನಲ್ಲಿ ೨

ವೃಕನೆಂಬಾಸುರಗೆ ಹರ ವರನೆಕೊಟ್ಟು | ಚಕಿತನಾಗಿ ಓಡಿ ಬಳಲುತ್ತಿರೆ | ರುಕುಮಿಣಿಪತಿ ವೃಕಾಸುರನ ಭಸ್ಮವಮಾಡಿ | ಭಕುತ ರುದ್ರನೆಂದು ಪಾಲಿಸಿದ ೩

ಕರಿಯಾದಿಮೂಲಗೆ ಮೊರೆ ಇಡಲದಕೇಳಿ | ಸುರರು ತಾವಲ್ಲವೆಂದು ಸುಮ್ಮ ನಿರಲು | ಗರುಡನಪೆಗಲೇರಿ ಹರಿ ಬೇಗನೆ ಬಂದು | ಕರಿರಾಜನಂದು ತಾ ರಕ್ಷಿಸಿದ ೪

ಹರಿಹರವಿರಂಚರ ಲೋಕಗಳಿಗೆ ಪೋಗಿ | ಹರಿಹರವಿರಂಚರ ಪರಿಗಳನು | ಹರು ಷದಿ ಭೃಗುಮುನಿ ತಿಳಿದು ಬೇಗದಿಬಂದು | ಸರಸ್ವತೀತೀರದಿ ಋಷಿಗಳಿಗೊರೆದ ೫

ನಾಮತ್ರಯ ಪ್ರಭಾವದಿಂದಲಿ ಬೇಗ | ಸೋಮಧರನು ವಿಷವನೆಧರಿಸಿ | ರಾಮನಾಮವೆಂಬ ಅಮೃತಪಾನದಿಂ | ಕಾಮಾರಿ ತಾ ಮೃತ್ಯುಂಜಯನಾದ ೬

ಸಂದೇಹಾತ್ಮಾಪಿ ನಶ್ಯತಿ ಎಂಬ ಶ್ರುತಿ | ವೃಂದಗಳೆಲ್ಲವು ಸಾರುತ್ತಿದೆ | ಪುರಂದರ ವಿಠಲ ಸರ್ವೋತ್ತಮನೆಂಬಲ್ಲಿ ಸಂದೇಹವಬಿಟ್ಟು ಸುಖಿಸಲೋ ಜೀವ ೭–ಉ.ಪು. ii,

ವಿಷ್ಣುವಿನ ಅಗಾಧ ಮಹಿಮೆಯನ್ನು ಚತುರ್ಮುಖ ಬ್ರಹ್ಮನೇ ಮೊದಲಾದ ಇತರ ದೇವತೆಗಳೇ ಆಗಲಿ ಜೀವರುಗಳಾಗಲೀ ಹೇಗೆ ತಿಳಿದುಕೊಂಡಾರು ಎಂದು ವ್ಯಾಸರಾಯರು ಈ ಪದದಲ್ಲಿ ಉದ್ಗಾರತೆಗೆದಿದ್ದಾರೆ.

ಸಾವೇರಿ—ಆದಿ

ಹರಿ ನಿನ್ನ ರೋಮಕೂಪದಲ್ಲಿ ಜೀವಿಪ | ಸರಸಿಜಭವಾಂಡ ಕೋಟಿಯಲಿ | ತುರುಗಿಪ್ಪ ಬ್ರಹ್ಮರುದ್ರಾದಿ ಜೀವರುಗಳು | ಹರಿ ನಿನ್ನ ಮಹಿಮೆಯ ಪೇರ್ಮೆಯಬಲ್ಲರೆ || ಪ ||

ನೊರಜುಮೊದಲಾಗಿ ಗರುಡಪರ‍್ಯಂತ | ಪರಿಪರಿಜಾತಿಯ ಪಕ್ಷಿಗಳು | ತೆರೆದಲಿ ಹಾರುವರಲ್ಲದೆ ಗಗನದ | ಪರಿಣಾಮವೆಂತೆಂದು ಬಲ್ಲವೇ ಕೃಷ್ಣ || ೩ ||

ಹರಿಯೇ ಪರದೈವವೆನ್ನಲು ಬೇಕಾದ ಶಪಥವನ್ನು ಮಾಡುವೆನೆಂದು ವ್ಯಾಸಮುನಿಗಳು ಪಣತೊಡುತ್ತಾರೆ.

ಕಾಂಬೋದಿ—ಆದಿ

ಉಕ್ಕುವ ತುಪ್ಪಕ್ಕೆ ಕೈಯಿಕ್ಕುವೆ ನಾನು |
ಚಕ್ರಧರ ಪರಮಾತ್ಮನೊಬ್ಬ ಸಲ್ಲದಿಲ್ಲವೆಂದು || ಪ ||

ಪೊರೆಯೋ ಪರದೈವವೆಂದು ಕರಿಮೊರೆ ಇಡಲು ಕಂಡು | ನೆರೆದ ಬೃಂದಾರಕರು ಅಂದು ಪೊರೆದರೆ ಬಂದು | ಕರದಲೊಪ್ಪುವ ಮುತ್ತಿಗೆ ಕನ್ನಡಿಯು ನೊಡಲೇಕೆ |ಭರದಿ ಗಜೇಂದ್ರನ್ನಕಾಯ್ದ ಹರಿಯೇ ಪರದೈವವೆಂದು || ೧ ||

ಮತಾಂತರದಲ್ಲಿ ಭಗವದ್ಗೀತೆಯನದ್ವೈತವೆಂದು | ವಾತಗುದ್ದಿ ಕೈಗಳೆರಡ ನೋಯಿಸಲೇಕೆ |ಏತತ್ಸರ್ವಾಣಿ ಭೂತಾನ್ಯೆಂಬ ಶ್ರುತ್ಯರ್ಥವ ತಿಳಿದು |ಜ್ಯೋತಿರ್ಮಯ

ಕಿರೀಟಿ ಅಚ್ಯುತಾಂತರ್ಯಾಮಿ ಎಂದು || ೨ ||

ತಾನೇ ಪರಬ್ರಹ್ಮನೆಂಬ ಮನುಷ್ಯಾಧಮನು ತಾನು | ಜ್ಞಾನಹೀನನಾಗೆ ಲೋಕ ದಾನವೆಂದು | ಭಾನುಕೋಟಿ ತೇಜೋತ್ತಮ ವರದ ಶ್ರೀ ಹರಿಯೆಂಬ | ಜ್ಞಾನವೇ ಕೈವಲ್ಯದ ಸೋಪಾನವೆಂದು ಸಭೆಯಲ್ಲಿ || ೩ ||

ತಪ್ಪಾದ ವಿಚಾರದಿಂದ ತತ್ತರವ ಪಡಲೇಕೆ | ತಪ್ಪುಶಾಸ್ತ್ರ ಓದಿ ದೇಹ ದಂಡಿಸಲೇಕೆ | ಕಲ್ಪಕಲ್ಪಾಂತರದಲ್ಲಿ ವಟಪತ್ರಶಯನನಾಗಿ | ಮುಪ್ಪು ಮೊದಲಿಲ್ಲದ ಮುಕುಂದನಲ್ಲದಿಲ್ಲವೆಂದು || ೪ ||

ಶಕ್ತಿಶೂನ್ಯನಿವನೆಂದು ಸಂಶಯವ ಪಡಲೇಕೆ | ಕೃತ್ಯದಿಂದ ನೋಡೆ ಶ್ರೀ ಕೃಷ್ಣನೊಬ್ಬನೇ | ಹತ್ತಾರುಸಾವಿರ ನೂರು ಗೋಪಸ್ತ್ರೀಯರನ್ನು ಆಳಿ | ನಿತ್ಯಬ್ರಹ್ಮಚಾರಿ ಎನಿಪ ನಿಷ್ಕಳಂಕನೊಬ್ಬನೆಂದು || ೫ ||

ರಾಜಸೂಯಾಯಾಗದಲ್ಲಿ ಶ್ರೀಕೃಷ್ಣನಿಗೆ ಅಗ್ರಪೂಜೆಯಾಗಬೇಕೆಂದು ಭೀಷ್ಮಾಚಾರ್ಯರು ಹೇಳಿದುದನ್ನು ಉಲ್ಲೇಖಿಸಿ ಶ್ರೀಪಾದರಾಜರು ಹರಿಯ ಉತ್ತಮತ್ವವನ್ನು ಸಾರುತ್ತಾರೆ.

ಬಿಡಿ ಬಿಡಿ ಸಂದೇಹವ ಪೊಡವಿ ಮನುಷ್ಯರೆಲ್ಲ |
ಒಡೆಯನೊಬ್ಬನೇ ಜಗಕೆಲ್ಲ ರಂಗವಿಠಲ ||

ರಾಜಸೂಯವ ಧರ್ಮರಾಜಮಾಡುತ | ಪೂಜೆಗೆ ಅರ್ಹನಾರೆನ್ನಲು | ಭಾಜನನು ಸದ್ಗುಣನು ಕೃಷ್ಣನೊಬ್ಬನೆ ಎಂದು | ರಾಜಿಸುರವ್ರತ ನುಡಿದ ನಿಜವರಿಯ || ೧೦ ||

ಕನಕದಾಸರಪದವೂ ಹರಿಸರ್ವೋತ್ತಮತ್ವವನ್ನು ಎತ್ತಿಹಿಡಿಯುವುದು.

ಜಗದಂತರ್ಯಾಮಿ ಎಂದೆಂದು ನಿಮ್ಮ |
ನಿಗಮ ಸಾರುವಮಾತು ಪುಸಿಯೇ ರಂಗ || ಪ ||

ಭೇದವಿಲ್ಲದೆ ಸಕಲಜೀವರನ್ನು ಪೊತ್ತಿಹಳು | ಭೂದೇವಿ ಎಂಬಾಕೆ ನಿಮ್ಮ ಅರ್ಧಾಂಗಿಯು | ಸಾಧನವು ಸಿರಿಯು ಸಂಪತ್ತು ಭಾಗ್ಯವನೀವ | ಆ ದಯಾಮಯಿ ಲಕ್ಷ್ಮಿ ನಿನ್ನ ಸತಿ ದೇವ || ೧ ||

ಎಂಭತ್ತು ನಾಲ್ಕು ಲಕ್ಷ ಜೀವರಾಶಿಗಳನ್ನು | ಬೊಂಬೆಗಳ ಮಾಡಿ ಭವದಿಂದಲಿ | ತುಂಬಿಕಲೆಗಳನೊತ್ತಿ ನೊಸಲಬರಹವ ಬರೆವ | ಅಂಬುಜೋದ್ಭವನು ನಿಮ್ಮ ಹೆಮ್ಮೆಗನು ದೇವ || ೨ ||

ಸಕಲ ಜೀವರಾಶಿಗಳ ಕಲ್ಪಿಸುವ ಬೀಜ|ಸುಖದಿಂದ ಮಾಯಾಂಗನೆಯ ರೊಡಲೊಳು | ಅಕ್ಕರದಿ ಪಿಂಡಾಂಡಗಳಕಟ್ಟಿ ಬಲಿಸುವ | ಮಕರಾಂತಕನೆಂಬುವನು ನಿಮ್ಮ ಕಿರಿಮಗ ದೇವ || ೩ ||

ಜಂಗಮ ಸ್ಥಾವರಕ್ಕಾಧಾರವಾಗಿಹಳು |ಭಂಗಪಡುವ ಜನರ ಕರ್ಮವ ಕಳೆವಳು |

ಹಿಂಗದೆ ಜಗವ ಪಾವನಮಾಡುವ ಪುಣ್ಯ | ಗಂಗೆಯೆಂಬವಳು ನಿನ್ನಮಗಳು ದೇವ || ೪ ||

ಇಂತು ಅಣುರೇಣು ತೃಣಕಾಷ್ಠದೊಳಗೆಲ್ಲ | ಸಂತೋಷವಾಗಿಹುದು ನಿಮ್ಮ ಸ್ಮರಣೆ | ಯಂತ್ರವಾಹಕವೆಂಬ ಬಿರುದುಸಲ್ಲದು ಇಮಗೆ | ಚಿಂತಾಯಕನೆ ನೆಲೆಯಾದಿ ಕೇಶವನೆ || ೫ ||

'ಈಶ್ವರಸ್ಸರ್ವಭೂತಸಾಂ....' ಎಂಬ ಗೀತಾ ಶ್ಲೋಕಾರ್ಥವೇ ಈ ಪದದ ಕೊನೆಯ ನುಡಿಯಲ್ಲಿ ಪ್ರತಿಪಾದಿತವಾಗಿದೆ. ಹರಿಸರ್ವೋತ್ತಮತ್ವದ ತಾತ್ವಿಕ ವಿಚಾರವು ವ್ಯಾಸರಾಯರ ಸುಳಾದಿಯಲ್ಲಿ ಕಾಣುವುದು.

ಧ್ರುವತಾಳ

ತಾಯಿ ಈ ಲೋಕಕ್ಕೆ ಶ್ರೀಹರಿ ಕಾಯದಿ ಜಗವನಿಟ್ಟನಾಗಿ
ತಂದೆ ಈ ಲೋಕಕ್ಕೆ ಶ್ರೀಹರಿ ಅಂದೆ ಬೊಮ್ಮಾದಿಗಳ ಸೃಷ್ಟಿಸಿದನಾಗಿ
ಒಡೆಯನೀಲೋಕಕ್ಕೆ ಶ್ರೀಹರಿ ಅಂದೇಬೊಮ್ಮಾಮದಿಗಳ ಸೃಷ್ಟಿಸಿದನಾಗಿ
ಗತಿ ಈ ಲೋಕಕ್ಕೆ ಶ್ರೀಹರಿ ಶ್ರೀಪತಿ ತನ್ನ ನೆನೆವರಿಗಭಯವನೀವನಾಗಿ
ಈಶ ಈ ಲೋಕಕ್ಕೆ ಶ್ರೀಹರಿ ವ್ಯಾಸಾದಿರೂಪದಿ ಜ್ಞಾನವನೀವನಾಗಿ
ದೈವವೀಲೋಕ್ಕೆ ಶ್ರೀಹರಿ ಸರ್ವಧರ್ಮಂಗಳಿಂದ ಸೇವ್ಯನಾಗಿ
ಪರತತ್ತ್ವವೀ ಲೋಕಕ್ಕೆ ಶ್ರೀಕೃಷ್ಣ ಓರ್ವನೆ ಸತ್ಯ ವ್ಯಾಪಕನಾಗಿ

ಮಠ್ಯತಾಳ

ಪತಿಯೆಂದುಪಾಸ್ಯ ಪದುಮಜಾತೆಗೆ | ಪಿತನೆಂದುಪಾಸ್ಯ ಪದಮಜಂಗೆ | ಶ್ವಶುರನೆಂಧುಪಾಸ್ಯ ಸರಸ್ವತಿಗೆ ಪಿತಾಮಹನೆಂದುಪಾಸ್ಯ ಪಿನಾಕಧರಗೆ | ಸ್ವಾಮಿ ಯೆಂದುಪಾಸ್ಯ ಸರ್ವರಿಗೆ | ಸಿರಿಕೃಷ್ಣ ಈ ಮಹಿಮೆಗುಪಾಸ್ಯನುಗ್ರಸೇನಗಡ |

ರೂಪಕ

ಸರಸಿಜಾಕ್ಷನು ವಿರಂಚಗೆ ಗುರು | ಪುರಹನಿಗೆ ಪರಮಗುರು ಮಿಕ್ಕ | ಸುರತತಿಗೆಲ್ಲ ಆದಿಗುರು | ನರೋತ್ತಮರಿಗೆಲ್ಲ ಮೂಲಗುರು | ಪರದೇವ ಶ್ರೀಕೃಷ್ಣಗೆ ಗುರುವಾದ ಸಾಂದೀಪಗಡ |

ಝಂಪೆ

ಶೋಕಾದಿ ದೋಷಾತಿದೂರನೆಂಬ | ಜ್ಞಾನೈಕದಿವ್ಯರಸ ಮೂರುತಿಯೆಂಬ | ಲೌಕಿಕಾ ಮಂದಾನಂದ ಸಾಂದ್ರನೆಂಬ | ಸಾಕುವ ತನ್ನ ನಿಜಸ್ವಾಮಿ ಎಂಬ | ನಾಲ್ಕು ಬಗೆಯ ಉಪಾಸನವಿಲ್ಲದವಗೆ | ಶ್ರೀಕೃಷ್ಣ ತನ್ನ ಮೂರುತಿಯ ತೋರಗಡ |

ಜಗತ್ತಿನ ಆಗುಹೋಗುಗಳೆಲ್ಲ ನವಗ್ರಹಗಳಿಗೆ ಸೇರಿದವೆಂಬುದು ಸಾಮಾನ್ಯ ನಂಬಿಕೆ. ಪುರಂದರದಾಸರು ಈ ನವಗ್ರಹಗಳೆಲ್ಲ ಹರಿಯೇ ಒಡೆಯನೆಂದಿದ್ದಾರೆ.

ಕಾಂಬೋಧಿ – ಆಟ

ಸಕಲಗ್ರಹಬಲ ನೀನೇ ಸರಸೀಜಾಕ್ಷ | ನಿಖಿಲವ್ಯಾಪಕ ನೀನೇ ವಿಶ್ವರಕ್ಷ ||ಪ||

ರವಿ ಚಂದ್ರ ಬುಧ ನೀನೇ ರಾಹುಕೇತುವು ನೀನೇ | ಕವಿ ಗುರುಶನಿಯು ಮಂಗಳನು ನೀನೇ | ದಿವರಾತ್ರಿಯೂ ನೀನೇ ನವ ವಿಧಾನವುನೀನೆ | ಭವರೋಗಹರ ಭೇಷಜನು ನೀನೆ ||೧||

ಪಕ್ಷ ಮಾಸವು ನೀನೆ ಪರ್ವಕಾಲವು ನೀನೆ | ನಕ್ಷತ್ರಯೋಗ ತಿಥಿಕರಣ ನೀನೆ |ಅಕ್ಷಯವೆಂದು ದ್ರೌಪದಿಯ ಮಾನವಕಾಯ್ದ | ಪಕ್ಷಿವಾಹನ ದೀನರಕ್ಷಕನು ನೀನೆ ||೨||

ಋತು ವತ್ಸರವು ನೀನೆ | ಕೃತಿಯುಗಾದಿಯು ನೀನೆ | ಕ್ರತುಹೋಮ ಯಜ್ಞ ಸದ್ಗತಿಯು ನೀನೆ | ಜತವಾಗಿ ಎನ್ನೊಡೆಯ ಪುರಂದರ ವಿಠ್ಠಲನೆ | ಶ್ರುತಿಗೆ ಶಿಲುಕದ ಅಪ್ರತಿಮ ಮಹಿಮನು ನೀನೆ ||೩||

ಹರಿಯು 'ಎಲ್ಲದೇವರಗಂಡ ಮಿಕ್ಕ ಚೆಲ್ಲರೆದೇವರಮಿಂಡ'ನೆಂಬುದು ಎಲ್ಲ ದಾಸರ ಮತ. ಅದಕ್ಕೇ ಪುರಂದರದಾಸರು.

"ಹೊಯ್ಯೋ ಡಂಗೂರವ ಜಗದಯ್ಯನಯ್ಯ | ಶ್ರೀಹರಿಯಲ್ಲದಿಲ್ಲವೆಂದು | ಅಷ್ಟೈಶ್ವರ್ಯದ ಲಕ್ಷ್ಮಿಯ ಅರಸನೆ ಸೃಷ್ಟಿಸ್ಥಿತಿಲಯಾದ್ಯಷ್ಟಕರ್ತ"

ಎಂದು ಘೋಷಿಸಿದ್ದಾರೆ. ಹರಿಯೇ ಪರದೈವತೆಯೆಂದು ಸಾರುವ ಭಾಗವತರುಗಳ ಪಟ್ಟಿಯನ್ನೇ ಕೊಡುತ್ತಾರೆ ಶ್ರೀ ಪುರಂದರದಾಸರು.

ಪಂತುರಾವಳಿ–ಆಟ

ಅರಿಯರು ಮನುಜರರಿಯರು | ||ಪ||

ಅರಿಯರು ಮನುಜರರಿತೂ ಅರಿಯರು |

ಧರೆ ಈರೇಳಕ್ಕೆ ಹರಿಯಲ್ಲದಿಲ್ಲವೆಂದು ||ಅ||

ನಾರದಮುನಿಬಲ್ಲ ವಾರಿಜೋದ್ಭವಬಲ್ಲ | ಪಾರಾಶರಬಲ್ಲ ಮನುಬಲ್ಲನು |ಧೀರ ಭೀಷ್ಮನುಬಲ್ಲ ಪಾರ್ವತಿ ಬಲ್ಲಳು | ಕಾರುಣಿಕನು ಶ್ರೀಹರಿಯಲ್ಲದಿಲ್ಲವೆಂದು ಶಿವಬಲ್ಲ ಧ್ರುವಬಲ್ಲ ದ್ರೌಪದಿ ಬಲ್ಲಳು | ಅವನಿಪಾಲಕ ಜನಕನೃಪಬಲ್ಲನು | ಯುವತಿಗೆ ಶಾಪವ ಇತ್ತ ಗೌತಮಮುನಿ ಬಲ್ಲ ಭವರೋಗವೈದ್ಯ ಶ್ರೀಹರಿಯಲ್ಲದಿಲ್ಲವೆಂದು ||೨||

ದಿಟ್ಟ ಪ್ರಹ್ಲಾದ ಬಲ್ಲ ಕೆಟ್ಟ ಅಜಮಿಳ ಬಲ್ಲ |ಸಿಟ್ಟಿನಿಂದಲಿ ಒದ್ದ ಭೃಗುಬಲ್ಲನು| ಕೊಟ್ಟ ಬಲಿ ಬಲ್ಲ ಮೊರೆಯಿಟ್ಟ ಗಜೇಂದ್ರ ಬಲ್ಲ | ಸೃಷ್ಟೀಶ ಪುರಂದರವಿಠಲನೇ ದೈವನೆಂದು ||೩||

"ವಿಧಾತೃದೇವತೆಗಳೆಲ್ಲ ವಿಷ್ಣುವಿನ ಹಿಂದೆ |ಇದಕೆ ನಾ ಫಣಿಪಣ ಕೈಯಾಗಿ ಪಿಡಿವೆ" ಎಂದು ದಾಸರ ಶಪಥ.

ರಾಮ ಶ್ರೀರಾಮ ರಾಮೇತಿ ರಮೇ ಎಂಬ | ಆ ಮಹಾದೇವ ಭಗವದ್ಭಕ್ತ ನಲ್ಲವೇನೋ | ಸ್ವಾಮಿ ತನ್ನ ಭೃತ್ಯರನ್ನು ಪ್ರತಿಷ್ಟಿಸಿದ ನಿ | ಸ್ಸೀಮ ಕರುಣಾಂಬುಧಿ ಮಹಮಹಿನೆಂಬರು | ಭ್ರಾಮಕದ ನುಡಿಗಳಿಗೆ ಮರುಳಾಗದಿರು ಹಯವದನ | ರಾಮಚಂದ್ರನೆ ಕಾಶಿಯ ಬೊಮ್ಮಕಾಣಿರೋ ||

ರಾಮೇಶ್ವರ ಮೊದಲಾದ ಸ್ಥಳಗಳಲ್ಲಿ ಶಿವಪಾರಮ್ಯ ತೋರುವ ನಿದರ್ಶನಗಳನ್ನು ವಿಚಾರಮಾಡಿ ವಾದಿರಾಜರು ಹೀಗೆ ಹರಿಯೇ ಸರ್ವೋತ್ತಮನೆಂದು ಸ್ಥಾಪಿಸಿದ್ದಾರೆ.

೩. ಭಗವದವತಾರಗಳು

ಆಧುನಿಕ ವಿಮರ್ಶಕ ಪಂಡಿತರು ಹೇಳುವಂತೆ "ಅವತಾರ ಕಲ್ಪನೆ" ಕಾಲ್ಪನಿಕವಲ್ಲ. ಇದು ಯಥಾರ್ಥವಾದುದು. ಭಗವಂತನಿಗೆ ಅನಂತ ರೂಪವೂ, ಅನಂತಗುಣ ಕ್ರಿಯೆಗಳೂ, ಅನಂತಾನಂತ ಮಹಿಮೆಗಳೂ ಶ್ರುತಿಗಳಲ್ಲಿ ಉಕ್ತವಾಗಿವೆ. ಭಗವಂತನ ಹೆಸರೇ "ಅನಂತ". ಸಕಲ ವೇದಗಳ ಸಾರವೆನಿಸಿದ "ಪುರುಷಸೂಕ್ತ"ದಲ್ಲಿ ಪರಮಾತ್ಮನ ಆಕಾರ ವರ್ಣನೆ ಮಾಡುವಾಗ "ಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್" ಎಂದು ಅವನ ಅವಯವಗಳ ಆನಂತ್ಯಪ್ರತಿಪಾದಿತವಾಗಿದೆ. ದೇಶತಃ ಕಾಲತಃ ಲಕ್ಷ್ಮೀದೇವಿಯು ಹರಿಗೆ ಸಮಳೆನಿಸುವಳು. ಅಂತೆಯೇ ಅವಳಿಗೆ "ಸಮನಾ" ಎಂದು ಹೆಸರು. ಆದರೆ ಹರಿಯ ಗುಣಗಳು, ಮಹಿಮೆ ಇವು ಅವಳಿಗೂ ತಿಳಿಯಲಶಕ್ಯವು. ಆದ್ದರಿಂದ ಭಗವಂತನ ಅನಂತರೂಪಗಳು ಅನಾದಿ ಕಾಲದಿಂದ ವೇದಾದಿಗಳಲ್ಲೂ ಸುಪ್ರಸಿದ್ಧವಾಗಿರುವುವು.

ಭಗವಂತನ ಇಂತಹ ಅದ್ಭುತ ರೂಪಗಳಲ್ಲಿ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಭಾರ್ಗವ, ರಾಮ, ಕೃಷ್ಣ, ಬುದ್ಧ, ಕಲ್ಕಿ ಎಂಬ ದಶಾವತಾರಗಳ ವರ್ಣನೆಯು, ಪುರಾಣಗಳಲ್ಲಿ ವಿಶೇಷವಾಗಿ ಬರುವುದು, ದಾಸರುಗಳೂ ಕೂಡ ಭಗವಂತನನ್ನು ಸ್ತೋತ್ರ ಮಾಡುವಾಗ ದಶಾವತಾರಗಳ ವಿಷಯವನ್ನೇ ಹೆಚ್ಚಾಗಿ ಪ್ರಸ್ತಾಪಿಸಿರುವರು. ಈ ದಶಾವತಾರಗಳಲ್ಲದೆ ಹರಿಯ "ಕೇಶವಾದಿ" ಇಪ್ಪತ್ನಾಲ್ಕು ರೂಪಗಳು, ಕಪಿಲ, ದತ್ತಾತ್ರೇಯಾದಿ ರೂಪಗಳೂ ಪ್ರಸಿದ್ಧವಿರುವುವು. ಹರಿಯ ಈ ಪ್ರಸಿದ್ಧ ರೂಪಗಳನ್ನು ದಾಸರುಗಳು ಗಣನೆಮಾಡಿದ್ದಾರೆ.

ಶ್ರೀಮತ್ಸ್ಯಕೂರ್ಮ ಭೂವಹವ ನರಸಿಂಹ ದಧಿ– ವಾಮನ ತ್ರಿವಿಕ್ರಮಾ ಪರಶುರಾಮ | ರಾಮ ಯಾದವ ಕೃಷ್ಣ ಬೌದ್ದ ಕಲ್ಕಿ ಹಯಾಸ್ಯ– | ನಾಮತಾಪಸ ಉಪೇಂದ್ರ ಅಜಿತಾದಿಗಳಿಗಾನಮಿಪೆ ||

ವಾಸುದೇವಚ್ಯುತಾನಂತ ಗೋವಿಂದ ಮಹಿ– | ದಾಸ ಹರಿ ಹಂಸ ಧನ್ವಂತ್ರಿ ದತ್ತಾ | ವ್ಯಾಸ ಕಪಿಲಾತ್ಮಾಂತರಾತ್ಮ ಪರಮಾತ್ಮ ಯ– ಜ್ಞೇಶ ವೈಂಕುಂಠ ನಾರಾಯಣಾದ್ಯವತಾರಕಾನಮಿಪೆ ||

ನಾರಾಯಿಣೀ ಋಷಭ ಐತರೇಯಾ ಶಿಂಶು– ಮಾರ ಯಜ್ಞ ಪ್ರಾಜ್ಞ ಸಂಕರ್ಷಣಾ | ಕ್ಷೀರಾಬ್ಧಿನಿಲಯ ಯದುನಂದನ ಕೃಷ್ಣ ಹರಿನಾರಾಯಣಾದ್ಯಮಿತ ಧರ್ಮ ರೂಪಾದಿಗಳಿಗಾನಮಿಪೆ || –ಜಗನ್ನಾಥದಾಸರು

ಅನಿರುದ್ಧಾದಿರೂಪ ವಿಶ್ವಾದಿ ಅಜಿತಾದಿ | ಸನತ್ಕುಮಾರಾದಿ ಆಜಾದಿ ಕೋಲೆ । ಸನತ್ಕುಮಾರಾದಿ ಆಜಾದಿರೂಪನಾದ | ಘನಮಹಿಮನ್ನ ಬಲಗೊಂಬೆ ಕೋಲೆ | ಹಯಗ್ರೀವ ದತ್ತ ಋಷಭ ಸಂಕರ್ಷಣ | ಭಯರಹಿತ ಬಾದರಾಯಣ ಕೋಲೆ। ಭಯರಹಿತ ಬಾದರಾಯಣ ಮಹಿದಾಸ | ವೈಕುಂಠಹರಿಯ ಬಲಗೊಂಬೆ ಕೋಲೆ ||

ಆತ್ಮಾದಿ ವಾಸುದೇವಾದಿ ಮೂರುತಿ | ಶ್ರೀ ತರುಣೀಶ ವಿಶ್ವೇಶ ಕೋಲೆ । ಶ್ರೀ ತರುಣೀಶ ವಿಶ್ವೇಶನಾದ | ಜ್ಯೋತಿರ್ಮಯನ ಬಲಗೊಂಬೆ ಕೋಲೆ || ಮುನಿವೇದವ್ಯಾಸ ಸನತ್ಕುಮಾರ ಮೂರ್ತಿ ಮಿನುಗುವ ದತ್ತಾತ್ರೇಯನೇ ಕೋಲೆ । ಮಿನುಗುವ ದತ್ತಾತ್ರೇಯ ಹಯಗ್ರೀವ ದನುಜಾಂತಕನ್ನ ಬಲಗೊಂಬೆ ಕೋಲೆ || ಮೋಹನದಾಸರು

[ಅ] ದಶಾವತಾರಗಳು

ವಾದಿರಾಜರು ಶ್ರೀ ಹರಿಯ ದಶಾವತಾರಗಳನ್ನು ಸ್ವಲ್ಪ ವಿವರವಾಗಿ ಹೇಳಿರುವರು.

ಮುಖಾರಿ – ಆದಿ

ನಾರಾಯಣ ನಾರಾಯಣ ನಾರಾಯಣ
ನಾರಾಯಣ ನಾರಾಯಣ ನರಹರಿಯೇ || || ಅ ||
ನಾರಾಯಣ ನರಹರಿಯೇ ಹಯವದನ
ಸ್ವಾಮಿ ನೀ ನನಗೆ ದಯವಾಗೋ ||
ನಿಗಮವ ಕದ್ದೊಯ್ದವಿಗಡದೈತ್ಯನಕೊಂದು
ಆಗಮವ ತಂದು ಅಜಗಿತ್ತೆ |
ಆಗಮವ ತಂದು ಅಜಗಿತ್ತೆ ಹಯವದನ
ಸ್ವಾಮಿ ನೀ ನನಗೆ ದಯವಾಗೋ || ೧ ||
ಕೂರ್ಮಾವತಾರದಿ ಆ ಗಿರಿಎತ್ತಿದಿ
ಪ್ರೇಮದಿ ಸುರರಿಗೆ ಅಮೃತವ.... |ದಯವಾಗೋ || ೨ ||
ಕ್ರೋಢರೂಪಿಲಿ ಬಂದು ಮೂಢದೈತ್ಯನ ಕೊಂದು
ರೂಢಿಯ ನೆಗೆಹಿ ತಂದಿತ್ತೆ || ೩ ||
ಶಿಶುವಬಾಧಿಸುತಿಪ್ಪ ಕಶಿಪುವ ಖಂಡಸಿ
ಕುಶದಿ ಕರುಳ ಮಾಲೆಯ || ೪ ||
ವಾಮನರೂಪಿಲಿ ಭೂಮಿ ಈರಡಿ ಮಾಡಿ
ವ್ಯೋಮಕ್ಕೆ ಚರಣವ ನೀಡಿದೆ || ೫ ||

ಕೊಡಲಿಯ ಪಿಡಿದು ಕಡಿದೆ ನೃಪರ
ಹಡೆದ ತಂದೆಯುಮಾತು ಸಲಿಸಿದೆ || ೬ ||
ಸೀತೆಗೋಸ್ಕರ ಪೋಗಿ ಸೇತುವೆ ಕಟ್ಟಿದೆ
ಭೂತ ರಾವಣನ ಮಡುಹಿದೆ || ೭ ||
ಗೊಲ್ಲರೊಡನೆ ಆಡಿಡ ಖುಲ್ಲ ಕಂಸನ ಕೊಂದೆ
ಮಲ್ಲರೊಡನೆ ಕಾದಿ ಮಡುಹಿದೆ || ೮ ||
ತ್ರಿಪುರಸತಿಯರಿಗುಪದೇಶವನಿಕ್ಕಿ
ತ್ರಿಪುರರನಲ್ಲರ ಮಡುಹಿದೆ || ೯ ||
ವಾಜಿಯನೇರಿ ರಾವುತನಾಗಿ ನೀ ಬಂದೆ
ಮೂಜ್ಜಗಕೆ ಕಲ್ಕಿ ಎನಿಸಿನೆ || ೧೦ ||

ವಾದಿರಾಜರಿಗೊಲಿದು ಸ್ವಾದಿಪುರದಿನಿಂದು | ವೇದದ ಕಥೆಗಳನರುಹಿದೆ | ವೇದದ ಕಥೆಗಳನರುಹಿದೆ ಹಯವದನ | ವೇಲಾಪುರಿ ಚೆನ್ನ ದಯವಾಗೋ || ೧೧ ||

ದಶಾವರತಾಸ್ತೋತ್ರ ದಾಸಸಾಹಿತ್ಯದಲ್ಲೆಲ್ಲೆಲ್ಲೂ ತುಂಬಿದೆ. ಹೀಗೆ ಸ್ತೋತ್ರ ಮಾಡುವಾಗ ಅನೇಕ ಭಾವಗಳು ಒಡಮೂಡುತ್ತವೆ. ಪುರಂದರದಾಸರು ಮಾಡಿರುವ ಸ್ತೋತ್ರದಲ್ಲಿನ ಭಾವ ಸ್ವಾರಸ್ಯವಾಗಿವೆ.

ಸೌರಾಷ್ಟ್ರ—ಆಟ

ಕೇಶವ ಮಾಧವ ಗೋವಿಂದ ವಿಠಲೆಂಬ ದಾಸಯ್ಯ ಬಂದಕಾಣೆ || ಪ ||
ದೋಷರಹಿತ ನರವೇಷವ ಧರಿಸಿದ ದಾಸಯ್ಯ ಬಂದ ಕಾಣೆ || ಅ ||

ಖಳನು ವೇದವನೊಯ್ಯೆ ಪೊಳೆವಕಾಯನಾದ ದಾಸಯ್ಯ ಬಂದ ಕಾಣೆ | ಘಳಿಗೆಲನೆ ಕೂರ್ಮ ತಾನಾಗಿ ಗಿರಿಯ ಪೊತ್ತ ದಾಸಯ್ಯ ಬಂದ ಕಾಣೆ || ೧ ||

ಛಲದಿ ಕಂಬದಿ ಬಂದ ಅಸುರನ ಸೀಳಿದ ದಾಸಯ್ಯಬಂದ ಕಾಣೆ | ಬಲಿಯ ದಾನವ ಬೇಡಿ ನೆಲನ ಅಳೆದು ನಿಂದ ದಾಸಯ್ಯ ಬಂದ ಕಾಣೆ || ೨ ||

ಲಲನೆಯನೊಯ್ಯೆ ತಾ ತಲೆ ಹತ್ತನ ಕೊಂದ ದಾಸಯ್ಯ ಬಂದ ಕಾಣೆ | ನೆಲಕೊತ್ತಿ ಕಂಸನ ಬಲವ ಸಂಹರಿಸಿದ ದಾಸಯ್ಯ ಬಂದ ಕಾಣೆ ||೩ ||

ಪುಂಡತನದಿ ಪೋಗಿ ಪುರವನುರುಪಿ ಬಂದ ದಾಸಯ್ಯ ಕಾಣೆ | ಲಂಡರ ಸದೆಯಲು ತುರಗವನೇರಿದ ದಾಸಯ್ಯ ಬಂದ ಕಾಣೆ ||೪ ||

ಹಿಂಡುವೇದಗಳೆಲ್ಲ ಅರಸಿಯ ನೋಡಲು ಸಿಗಿದ ದಾಸಯ್ಯ ಬಂದ ಕಾಣೆ | ಪಾಂಡುರಂಗ ನಮ್ಮ ಪುರಂದರ ವಿಠ್ಠಲ ದಾಸಯ್ಯ ಬಂದ ಕಾಣೆ ||೫ ||

ವ್ಯಾಸರಾಯರು ಕೆಳಗಿನ ಪದಗಳಲ್ಲಿ ಗೋಪಿಯೊಬ್ಬಳ ವಿರಹವೇದನೆಯಲ್ಲಿ ದಶಾವತಾರವನ್ನು ಸುಂದರವಾಗಿ ಚಿತ್ರಿಸಿದ್ದಾರೆ.

ಶಂಕರಾಭರಣ—ಆದಿ

ರಂಗ ಬಾರ ಬಾಲೆ ಕುರಂಗನಯನೆ ಕೇಳೆ | ||ಪ ||

ಹಿಂಗಿರಲಾರೆ ಶ್ರೀ ಹರಿಯ ಸಂಗವ ಬಿಟ್ಟಮೇಲೆ ಈ | ತಂಗಾಳಿಯ ದಾಳೆ ಬೆಳದಿಂಗಳನ ಥಾಳೆ | ಗಿಳಿ ಭೃಂಗನ ಸ್ವರಗಳೆ ದೇವಾಂಗನಾಗಾಯನಗಳೇ ಅ | ನಂಗಗಿದು ಪೇಳೆ ||ಅ ||

ಅನ್ನ ಉದಕ ತೊರೆದೆ ನಾ ಚಿನ್ನದೊಸ್ತುವ ಮರೆದೆ |ಮನ್ನಣಿಂದ ಉಡುವ ತೊಡುವ ಬಣ್ಣದೊಸನವ ಜರಿದೆ | ಸಣ್ಣವಳಮಾಡಿ ಆ ರನ್ನೆಯಳ ಕೂಡಿ | ಎನ್ನ ಮೇಲೆ ಕೋಪದಿಂದ ಭಿನ್ನ ನುಡಿಗಳನಾಡಿ | ಕಣ್ಣು ತೆರೆದು ನೋಡಿ ಕಾಠಿಣ್ಯರೂಪವ ಮಾಡಿ ಮಣ್ಣ ಕೆದರೀಡ್ಯಾಡಿದುರಳನ್ನುದರ ತೋಡಿ | ಬಲಿಯನ್ನು ದಾನವ ಬೇಡಿ ತಾ ತನ್ನೊಳು ಕಡಿದಾಡಿ ಅ | ರಣ್ಯವಾಸವ ಮಾಡಿ ಪರ ಹೆಣ್ಣುಗಳನೆ ಕೂಡಿ | ಬಲು ಬಣ್ಣಗೆಟ್ಟೋಡ್ಯಾಡಿ ಕಲಿಯನ್ನು ಸಂಹಾರವ ಮಾಡಿ || ೧ ||

ಯುಗಸ್ತನಳಗಳ ಮೇಲೆ ಬಳ್ಳಿಯ ಮುಗಿಲು ಮಲ್ಲಿಗೆ ಮಾಲೆ | ಬಗೆ ಬಗೆ ಅಲಂಕಾರದಿ ಸೊಗಸಲಿದ್ದ ವೇಳೆ ಖಗವಾಹನನು ಬಂದ ಎನ್ನ ಬಿಗಿದಪ್ಪುವನೆಂದ | ನಗುತ ಮಾತಾಡಿ ಅವಳು ಸುಗುಣೆಯಲ್ಲವೆಂದ | ನಿಗಮಚೋರನ ಕೊಂದ ನಗವ ಬೆನ್ನಿಲಿ ತಂದ | ಜಗವ ನೆಗಹುವೆನೆಂದ ಜಿಗಿದು ಕಂಬದಿ ಬಂದ | ಮಗುವಿನಂದದಿ ನಿಂದ ಯಾತ್ರೆಗಳ ಮಾಡುವೆನೆಂದ ಅ | ನ್ನಗಳನೊಲೆನೆಂದ ಬೆಣ್ಣೆಗಳ ಕದ್ದು ತಿಂದ | ನಗುತ ಬತ್ತಲೆನಿಂದ ತಾ ಸಿಗದೆ ಓಡುವೆನೆಂದ || ೨ ||

ನಾರಿ ಈಗ ನಾನು ಮುರಾರಿಯನು ಕಂಡೆನು | ವಾರಿಜಾಕ್ಷ ಬಾ ಎನ್ನಲು ಶಿರವಬಾಗಿದನೆ। ಮಾರನಯ್ಯನು ಜಾಣ ಎನ್ನ ಮೋರೆಯ ನೋಡಿದನೆ। ಜಾರನಾರಿ ಇವಳೆಂದು ಸೇರದೆ ಪೋದನೆ। ನೀರೊಳಡಗಿದನೆ ಮೋರೆ ಮುಚ್ಚಿದನೆ। ಕೋರೆ ತೋರಿದನೆ ಅಘೋರರೂಪಾದನೆ। ಬ್ರಹ್ಮಚಾರಿ ಎಂತೆಂದನೆ ಕ್ಷತ್ರಿಯರ ಸವರಿದನೆ। ವಾರಧಿಯ ದಾಟಿದನೆ ಬಹುಜಾರನೆನಿಸಿದನೆ। ನಾನೇರ ವ್ರತವಳಿದನೆ ಕು|ದುರೆ ಏರಿದ ಶ್ರೀಕೃಷ್ಣನೆ ||೩ ||

ಮೇಲಿನ ಪದದಲ್ಲಿ ಮೂರು ನುಡಿಗಳಲ್ಲೂ ದಶಾವತಾರವರ್ಣನೆಯು ಮೂರು ಸಲ ಬಂದಿದೆ. ಪುರಂದರದಾಸರ ಕೆಳಗಿನ ಪದಗಳಲ್ಲಿ ದೇವರೊಂದಿಗೆ ಸಲಿಗೆ ವಾತ್ಸಲ್ಯಭಾವ ಹೊರಸೂಸುವುದು.

ಮೋಹನ—ಆಟ

ಬಿಡೆ ನಿನ್ನ ಪಾದವ ಬಿಂಕವಿನ್ನೇಕೋ ।
ಕೊಡುಮನದಿಷ್ಟವ ಕೋಪವಿದೇಕೋ ||ಅ ||

ನೀರ ಪೊಕ್ಕರು ಬಿಡೆ ಬೆನ್ನೊಳು ಬಲು |ಭಾರಪೊತ್ತೆನೆಂದರು ಬಿಡೆನು। ಕೋರೆಯ ಮಸೆಯುತ ಕೆಸರು ಕೊಂಡರು ಬಿಡೆ|ಘೋರರೂಪವ ತಾಳಿ ಘುರುಘುಡಿಸಲುನಾನು |

ತಿರುಕನೆಂದರು ಬಿಡೆ ತಿಳಿದು ತಾಯ। ಕೊರಳ ತರಿಕನೆಂದರು ನಿನ್ನ ನಾಬಿಡೆನೋ। ಪೊರಯೆ ಪಿತನ ವಾಕ್ಯ ಕಾಡು ಸೇರಲು ಬಿಡೆ। ದುರುಳ ಮಡುವಿನಲ್ಲಿ ಧುಮುಕಿದರೆಯು ನಾನು ||

ಕಡುಬತ್ತಲಾಗಿ ಎನ್ನ ಕೈಲಿ ಕಾಸಿಲ್ಲವೆಂದರು। ಒಡನೆ ಹಯವೇರಿ ಓಡಿದರು ಬಿಡೆನು। ಪೊಡವಿಯೊಳಗೆ ನಮ್ಮ ಪುರಂದರ ವಿಠ್ಠಲನೆ। ಕಡೆ ಹಾಯಿಸುವ ಭಾರ ನಿನ್ನದಯಕೆ ನಾನು ||

ನಾದನಾಮಕ್ರಿಯೆ–ಆದಿ

ಇವನ ನೀ ಹಿಡಕೊಂಡು ಹೋಗೆಲೋ ಜೋಗಿ।

ಇವ ನಮ್ಮ ಮಾತು ಕೇಳದೆ ಪುಂಡನಾದ ||ಅ||

ಅಡುತಾಡುತ ಪೋಗಿ ನೀರಲ್ಲಿ। ಮುಳುಗಿದ। ಬೇಡವೆಂದರೆ ಬೆಟ್ಟ ಬೆನ್ನಿಲಿ ಹೊತ್ತ। ದಾಡೆಯ ಮೇಲೆ ತಾ ಧರಣಿ ನೆಗಹಿದ। ನೋಡಿದವರಿಗೆ ಬಾಯ ತೆರೆದಂಜಿಸಿದ ||೧||

ಹುಲ್ಲಲ್ಲಿ ವಿಪ್ರನ ಕಣ್ಣು ತಿವಿದ ಬುದ್ಧಿ। ಇಲ್ಲೆಂದರೆ ಕೈಲಿ ಕೊಡಲಿಯ ಪಿಡಿದ। ಬಿಲ್ಲು ಪಿಡಿದು ತಾನು ರಕ್ಕಸರ ಕೊಂದ ಬಹು। ಬಲ್ಲಿದ ಮಾವನ ಶಿರವ ಛೇದಿಸಿದ ||೨||

ಬತ್ತಲೆ ಕುದುರೆಯ ಹತ್ತಬೇಡವೆಂದರೆ। ಹತ್ತಿದನು ಈತನು ಚಂದ ದಿಂದ। ಭಕ್ತವತ್ಸಲ ಶ್ರೀ ಪುರಂದರ ವಿಠಲನ್ನ ಎತ್ತಲಾದರೂ ಕೊಂಡು ಹೋಗೆಲೊ ಜೋಗಿ ||೩||

ಭೂಪಾಳಿ ರಾಗದಿಂದ ಹಾಡಿ ದೇವರನ್ನು ಎಬ್ಬಿಸುವಾಗಲೂ ದಶಾವತಾರ ವರ್ಣನೆಯೇ ಭಕ್ತರಿಗೆ ಮೆಚ್ಚು.

ಭೂಪಾಳಿ–ಝಂಪೆ

ಏಳಯ್ಯ ಬೆಳಗಾಯಿತು ||ಪ||

ವೇದವನು ತರಲೇಳು ಮಂದರವ ಪೊರಲೇಳು। ಭೇದಿಸುತಗೆ ಅಸುರರನು ದಾಡೆಯಿಂತಲೇಳು। ಕಾಡಿ ಹಿರಣ್ಯಕನ ಕರುಳು ಕೊರಳೊಳ ಧರಿಸೇಳು। ಕಾಯ್ದು ಬಲಿ ಬಾಗಿಲದೊಳು ||೧||

ಭೇದಿಸಿ ಭೂಮಿ ತ್ರಿಪಾದದಿಂದಳೆಬೇಕು ಛೇದಿಸಿ ಕ್ಷತ್ರಿಯರ ಕೊಡಲಿಂದ ಕಡಿ ಯೇಳು |ಸಾಧಿಸಿಶರಧಿಯಲಿ ಸೇತುವೆಯ ಕಟ್ಟೇಳು। ನಂದಗೋಪನ ಉದರದಿ||೨||

ಪುರ ಮೂರು ಗೆಲಬೇಕು ಅರವಿಯನೆ ಕಳೆಯೇಳು। ದುರುಳನ ಕೊಲ್ಲಬೇಕು

ತುರಗ ವಾಹನನಾಗು। ಪರಿಪರಿಯ ಕೆಲಸಗಳ ಮಾಡಲುದ್ಯೋಗಿಸಿ। ಮರೆದು ನಿದ್ರೆಯ ಗಯ್ವಿರೇ ||೩ || —ಪುರಂದರದಾಸರು.

ಕನಕದಾಸರ ಪದಗಳಲ್ಲಿ ದಶಾವತಾರದ ಸ್ತೋತ್ರ ಹೆಚ್ಚು. ಅನೇಕ ಭಾವ ಭಂಗಿಗಳಲ್ಲಿ ಅವರು ಸ್ತೋತ್ರಮಾಡಿರುವರು. ಅವರು ಜನ್ಮದಿಂದ ಕುರುಬರು, ಕುರುಬರು ತಮಟೆ ಬಾರಿಸಿಕೊಂಡು ತಮ್ಮ ಕುಲದೇವತೆಯನ್ನು ಭಜಿಸುವ ಧಾಟಿಯಲ್ಲಿ ಕನಕದಾಸರು ದಶಾವತಾರ ಸ್ತುತಿ ಮಾಡಿರುವರು

ನಾದನಾಮಕ್ರಿಯೆ—ಆಟ

ತಾಳಲಲ್ಲಲ್ಲಲ್ಲಲ್ಯೋ ಮೈಸುತ್ತ ಳಲ್ಲಲ್ಲಲ್ಲಲ್ಯೋ ||ಪ ||

ಹೆಚ್ಚಿನ ತಮನೆಂಬೋ ದನುಜ ವೇದವ ಕದ್ದು ಬಚ್ಚಿಟ್ಟು ನೀರೊಳು ಮುಳುಗಿರಲು। ಮಚ್ಛರೂಪದಿಂದ ಪೋಗಿ ಅವನ ಕೊಂದ ಅಚ್ಚುಯತರಾಯ ನೆಂಬೋ ಮಾಸಾಳಮ್ಮ ||೧ ||

ಕನಕದಾಸರ ಈ ಕೆಳಗಿನ ದಶಾವತಾರ ಸ್ತೋತ್ರ ಸ್ವಾರಸ್ಯವಾದ ಜನಪದ ಗೀತೆಯಂತಿದೆ.

ಆನಂದ ಭೈರವಿ—ಅಟ

ದೇವಿ ನಮ್ಮ ದ್ಯಾವರು ಬಂದವ್ರ ಬನ್ನಿರೇ ನೋಡಬನ್ನಿರೇ ||ಪ ||

ಬನ್ನಿರೇ ನೋಡಬನ್ನಿರೇ ನೋಡಬನ್ನಿರೇ ನೋಡಬನ್ನಿರೇ ||ಅ ||

ಕೆಂಗಣ್ಣ ಮೀನನಾಗಿ ನಮ್ಮ ರಂಗಗುಂಗಾಡಿ ಸೋಮಾನ ಕೊಂದನ್ಮ್ಯ।

ಗುಂಗಾಡಿ ಸೋಮನ ಕೊಂದು ವೇದವ ಬಂಗಾರದೊಡಲಿಗಿತ್ತಾನ್ಮ್ಯ ||೧ ||

ದೊಡ್ಡಮಡುವಿನೊಳಗೆ ನಮರಂಗ ಗುಡ್ಡವಹೊತ್ತು ಕೊಂಡು ನಿಂತಾನ್ಮ್ಯ।ಗುಡ್ಡವ ಹೊತ್ತು ಕೊಂಡು ನಿಂತು ಸುರರನ್ನು ದೊಡ್ಡವರನು ಮಾಡಾನ್ಮ್ಯ ||೨ ||

ಡೋಲಿನ ಮೇಲ್ಕಯ್ಯ ಭರಮಪ್ಪ ಹಾಕ್ಯಾನು ತಾಳವ ಶಿವಪ್ಪ ತಟ್ಯಾನ್ಮ್ಯ। ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನು ಚೆಲುವ ಕನಕಪ್ಪ ಕುಣಿದಾನ್ಮ್ಯ

ಕನಕದಾಸರ ದಶಾವತಾರ ಸ್ತೋತ್ರದಲ್ಲಿನ ನಿಂದಾಸ್ತುತಿ ಅತಿ ಚಮತ್ಕಾರವಾಗಿದೆ.

ಆನಂದ ಭೈರವಿ—ಆಟ

ನಿನ್ನನಾನೇನೆಂದೆನೋ ರಂಗಯ್ಯರಂಗ ನಿನ್ನನಾನೆಂದೆನೋ ||ಪ ||

ನಿನ್ನನಾನೇನೆಂದೆ ನಿಗಮ ಗೋಚರ ಸ್ವಾಮಿ |

ಪನ್ನಂಗಶಯನ ಪಾಲ್ಗಡಲೊಡಯನೆ ರಂಗ ||ಅ ||

ಧೀರಸೋಮಕ ವೇದ ಖಳನ ಸೀಳಿ ವಾರಿಧಿಗಿಳಿದು ಪರ್ವತವನೆತ್ತಿ।ಧಾರುಣಿಯನ್ನು ಕದ್ದ ದನುಜದಲ್ಲಣನಾದ ನಾರಸಿಂಹ ನಮೋ ನಮೋ ಎಂದನಲ್ಲದೆ । ನೀರಪೊಕ್ಕ ವನೆಂದರೆ ಬೆನ್ನಿನ ಮೇಲೆ ಭಾರಪೊತ್ತವನೆಂದೆನೆ। ಬೇರ ಮೆದ್ದವನೆಂದನೆ ರಕ್ಕಸನೊಳು

ಹೋರಿಹೊಯ್ದನೆಂದು ಹೊಗಳಿದೆನಲ್ಲದೆ ||೧||

ಧರೆಯ ದಾನವ ಮಾಡಿ ಧರಣಿ ಈರಡಿ ಮಾಡಿ ಪರಶು ಪಿಡದ ಕ್ಷತ್ರಿಯರ ಕಾಡಿ | ಚರಣದಿ ಪಾಷಾಣ ಪೆಣ್ಣ ಮಾಡಿದ ಪುಣ್ಯಚರಿತನಾದಯಾದವಪತಿ ಶರಣೆಂದಲ್ಲದೆ। ತಿರುಕಹಾರವನೆಂದನೆ ಜಿತ್ತ ತಾಯಕೊರಳಕೊಯ್ದವನೆಂದನೆ ವನ ವಾಸದಿ। ಧುರಕೆ ನೆರೆದವನೆಂದೆನೆ ಪೂತಣಿಯನ್ನು ಸರಕು ಮಾಡದೆ ಕೊಂದ ಹರೆಯೊಂದನಲ್ಲದೆ ||೨||

ಚಿತ್ತ ಜಕೊಟಿಲಾವಣ್ಯತೇಜದಿ ಬಂದು ಉತ್ತಮ ಸ್ತ್ರೀಯರ ವ್ರತವಳಿದು। ಮತ್ತೆ ಕಲ್ಕಿಯಾಗಿ ಮಧುಪರ ಮಡುಹಿ ಹತ್ತಾವತಾರದ ಹರಿಯೆಂದೆನಲ್ಲದೆ। ಬತ್ತಲಿದ್ದ ವನೆಂದೆನೆ–ತೇಜಿಯನೇರಿ ಒತ್ತಿ ಅಳ್ದವನೆಂದನೆ ಬಾರಿಬಾರಿಗೂ। ಮತ್ತೆ ಪುಟ್ಟಿದೆ ನೆಂದೆನೆ–ಆದಿಕೇಶವ ಭಕ್ತವತ್ಸಲನೆಂದು ಪೊಳಿದೆನಲ್ಲದೆ. ||೩||

ಈ ಪದದಲ್ಲಿ ಒಂದೊಂದು ಅವತಾರದ ವಿಷಯಗಳನ್ನು ಸ್ತೋತ್ರ ಪರವಾಗಿಯೂ, ನಿಂದಾಸ್ತುತಿ ಪರವಾಗಿಯೂ ಹೇಳಿದ್ದಾರೆ. ಗೋಪಾಲದಾಸರು ಉಗಾಭೋಗದಲ್ಲಿ ಅತಿ ಚಮತ್ಕಾರವಾಗಿ ದಶಾವತಾರದ ನಿಂದಾಸ್ತುತಿ ಮಾಡಿರುತ್ತಾರೆ.

ನೀರಿನಲಿ ನಿಂತು ನಿಡಗುಟ್ಟು ನಾರವಗೆ ಗಂ। ಬರಿಕೂಸ್ತೂರಿ ಲೇಪನದ ಮದವೋ। ಭಾರ ಬೆನ್ನಲಿ ಪೊತ್ತು ಕಾಲು ಕೈಮುದುರಿದಗೆ ಧೀರ ಶೇಷಶಯನದ ಮದವೋ। ಮೊರೆಯಲಿ ನೆಲಕೆದರಿ ಬೇರುಗಳ ಮೆಲುವವಗೆ। ಸಾರ ಷಡ್ರಸ ಭೋಜನದ ಮದವೋ। ಕಾರು ಕರುಳನು ವನಮಾಲೆ ಹಾಕಿದವಗೆ। ಹಾರ ಪದಕಾ ದಿಗಳ ಹಾಕಿದ ಮದವೋ || ಮೂರಡಿಯ ಭೂದಾನವನ್ನು ಬೇಡಿದವಗೆ |ಸಾರಿದರ ಭೀಷ್ಟಗಳ ಕೊಡುವ ಮದವೋ| ಧಾರುಣಿಯನಿತ್ತು ಕುಳ್ಳಿರೆ ಸ್ಥಳವಿಲ್ಲದವಗೆ। ಈರೇಳು ಲೋಕಗಳನಾಳ್ವ ಮದವೋ| ನಾರಿಯನು ಬಿಟ್ಟು ವನವನವ ಸಂಚರಿ ಸಿದಗೆ| ಮೂರು ಧಾಮದಿ ರಮೆಯ ಭೋಗದ ಮದವೋ |ಊರನಾರಿಯರಿಂದ ಬೈಸಿಕೊಂಬು ವಗೆ| ವಾರಿಜಭವ ಸುರರ ವಂದನೆಯ ಮದವೋ || ಊರೆಲ್ಲ ಬೆತ್ತಲೆಯಾಗಿ ನಿಂತ ವಗೆ | ಚಾರುಪಿತಾಂಬರ ಉಡುವ ಮದವೋ | ಘೋರ ತುರಗವನೇರಿ ಹಾರಿಸ್ಯಾಡುವಗೆ| ವೀರಸಿಂಹಾಸನದಿ ಕುಳಿತಿರುವ ಮದವೋ| ಬಾರದಲೆ ತಪ್ಪದೋ ಹಿಂದಣ ಭವಣೆಗಳು| ದೂರವಿಚಾರಿಸಿಕೋ ಮಾರಮಣನೇ | ಮೂರುದಿನದರಸುತನ ಸ್ಥಿರವೆಂದುನೀನೆಚ್ಚಿ |ಸೇರಿದವರನು ಬಿಡುವುದುಧರ್ಮವೇನೋ | ಶ್ರೀರಂಗ ರಾಜ ಗೋಪಾಲವಿಠಲರೇಯ ಸಾರಿದವರನು ಪೊರೆದುಕೀರುತಿಯ ಪಡೆಯೋ ||

ಹರಿಯ ಮತ್ತು ಲಕ್ಷ್ಮೀದೇವಿಯರ ಸರಸ ಸಂಭಾಷಣೆಯಲ್ಲಿ, ಉರುಟಣೆ ಮತ್ತು ಬಾಗಿಲು ಕಟ್ಟುವ ಹಾಡುಗಳಲ್ಲಿ, ಗೋಪಿಕಾಸ್ತ್ರೀಯರ ವಿರಹದಲ್ಲಿ, ದಶಾವತಾರಸ್ತುತಿ ಬಹಳ ಸರಸ ಹಾಗೂ ಸಂದರ್ಭೋಚಿತವಾಗಿ ಹೊಂದಿಸಲ್ಪಟ್ಟಿದೆ. ವಾದಿರಾಜ

ಸ್ವಾಮಿಗಳ ಉರುಟಣೆಯ ಹಾಡುಗಳಲ್ಲಿ ಇದು ಸ್ವಾರಸ್ಯವಾಗಿ ವರ್ಣಿತವಾಗಿದೆ.

ಲಕ್ಷುಮಿ ರಮಣಗೆ ಮಾಡಿದಳು ಉರುಟಾಣಿ ||ಪ ||
ಇಳೆಯೊಳಗತಿಜಾಣೆ, ಸುಂದರ ಫಣಿವೇಣಿ ||ಅ.ಪ. ||
ಮಚ್ಛ ಕಚ್ಛಪಕಿರನೆ ಕೇಸರಿಯಿಂದದ ಮುಖನೆ ।
ಸ್ವಚ್ಛ ಮುಖವ ತೋರ್ರೈ, ಕುಂಕುಮ ಹಚ್ಚುವೆನು ||೧ ||
ಬಲಿಯದಾನವ ಬೇಡಿ ಇಳೆಯ ಈರಡಿಮಾಡಿ ।
ಅಳೆದಡಿಗಳ ತೋರ್ರೈ ಕುಂಕುಮ ಹಚ್ಚುವೆನು ||೨ ||

ನೀರೊಳು ಮುಳುಗಿ ನಿಗಮ ಚೋರನ ಗೆದ್ದ । ನೀರಜಾಕ್ಷನೆ ಭಾಮೆ, ನಾ ನೀರಜಾಕ್ಷನೆ ಭಾಮೆ । ನಾರುಪ ಮೈಯನು ಎನ್ನಲ್ಲಿ ತೋರದೆ । ಸಾರು ಸಾರು ನೀ ದೂರ ರಂಗ ಸಾರು ಸಾರು ನೀದೂರ । ವರ ತುರಗವನೇರಿ ಧರೆಯೆಲ್ಲ ಚಲಿಸಿದ ದೊರೆ ವೀರನೋಡೆ ಭಾಮೆ, ನಾ ಧೊರೆ ವೀರ ನೋಡೆ ಭಾಮೆ । ತುರಗದ ಚಾಕರಿಯೊಳಗಿರುವಗೆ ಒಬ್ಬ ತರುಣಿಯ ಭೋಗವು ಬೇಕೆ ರಂಗ ತರುಣಿಯ ಭೋಗವು ಬೇಕೆ || ಸರುವ ಪ್ರಾಣಿಗಳ ಉದರದೊಳಿಂಬಿಟ್ಟು ಶರಧಿಯೋಳ್ ಮಲಗಿದೆ ಭಾಮೆ ನಾ ಶರಧಿಯೋಳ್ ಮಲಗಿದೆ ಭಾಮೆ || ಧೊರೆ **ಹಯವದನನ** ಚರಣಕ್ಕೆರಗುತೆ ತೆರೆದಳು ಬಾಗಿಲ ಭಾಮೆ ಆಗ ತೆರೆದಳು ಬಾಗಿಲ ಭಾಮೆ.||

ಪ್ರಾಣೇಶದಾಸರು ಪುರಾಣಗಳಲ್ಲಿ ಉಕ್ತವಾದುದನ್ನು ಆಯ್ದು ದಶಾವತಾರಗಳ ಕಾಲ ದಿನಗಳನ್ನು ವರ್ಣನೆ ಮಾಡಿರುವರು.

ವ್ಯಾಸೋಕ್ತಿ ಅನುಸರಿಸಿ ಹತ್ತು ಅವತಾರವನು | ಶ್ರೀಶ ಮಾಡಿದ ದಿನದ ಕ್ಲುಪ್ತಿಯಿಂದ ಬರೆವೆ ಸಂ। ತೋಷದಿಂ ಕೇಳ್ವುದೆಲ್ಲರು ಪೊರವ ಹರಿಯು ಅಭಿಲಾಷೆ ಪೂರೈಸಿ ಬಿಡದೆ ||೧ ||

ಕೃತಯುಗ ಪ್ರಭುವ ಮಧು ಶುದ್ಧ ಪ್ರತಿಪದ ಜಲಧಿಸುತವಾರ ರೇವತೀವಿಷ್ಕಂಭ ಹಗಲುಸಂಯುತ ಹನ್ನೆರಡು ಗಳಿಗೆಗವತರಿಸಿ ಶ್ರೀಮತ್ಸ್ಯ ಹತಮಾಡಿತಮನೆಂಬನಾ | ಚತುರಾಸ್ಯವೈವಸ್ವತರಿಗೊಲಿದು ಮೆರೆದ ನೀ|ಕ್ಷಿತಿಯೊಳಗೆ ಮತ್ತಾಯುಗದಿ ಕೂರ್ಮರೂಪದಿಂ ಚ್ಯುತಿರಹುತಮವಾತಾರ ಮಾಡಿ ಮಾಡಿದವತಾರ ಮತಿವಂತರಿಗೆ ಪೇಳುವೆ. || ೨ || — ಪ್ರಾಣೇಶದಾಸರು..

ಹೀಗೆ ಹತ್ತವತಾರಗಳಾದ ಯುಗ, ವರ್ಷ, ಮಾಸಾದಿಗಳ ಸಂಪೂರ್ಣ ವಿವರಗಳನ್ನು ಹೇಳಿರುವರು. ಹರಿಯು ದಶಾವತಾರ ಸ್ತುತಿಯನ್ನು ಇಷ್ಟು ವಿಶೇಷವಾಗಿ ದಾಸರು ಹಾಡಲು ಇನ್ನೊಂದು ಹಿನ್ನೆಲೆಯುಂಟು. ಆಚಾರ್ಯರಿಂದ ರಚಿತವಾದ ದಶಾವತಾರ ಸ್ತೋತ್ರವೇ ಕನ್ನಡದಾಸ ಸಾಹಿತ್ಯಕ್ಕೆ ಹೆಚ್ಚಿನ ಸ್ಪೂರ್ತಿಯನ್ನಿತ್ತಿತು. ಈ ಸ್ತೋತ್ರದಲ್ಲಿ ಎರಡು ಸಲ ದಶಾವತಾರ ವರ್ಣನೆಯು ಬೇರೆ ಬೇರೆ ಧಾಟಿಗಳಲ್ಲಿ

ವರ್ಣಿತವಾಗಿದೆ. ವಾದಿರಾಜರು ದಶಾವತಾರ ಸ್ತೋತ್ರವನ್ನು ಅಶ್ವಧಾಟಿಯಲ್ಲಿ ರಚಿಸಿರುವುದು ಅತ್ಯಂತ ಪ್ರಸಿದ್ಧವಾಗಿದೆ. ಶ್ರೀರಾಯರು ನಿರಂತರ ರಾತ್ರಿ ಮಂಗಳಾರತಿ ಮಾಡಿ ದಶಾವತಾರ ಸ್ತೋತ್ರ ಮಾಡುತ್ತಿದ್ದರೆಂದು 'ರಾಘವೇಂದ್ರ ವಿಜಯ' ಗ್ರಂಥ ಕರ್ತರು ವರ್ಣಿಸಿದ್ದಾರೆ. ಹರಿಯ ಲೀಲಾವಿಲಾಸಗಳಲ್ಲಿ ದಶಾವತಾರ ಲೀಲೆ ಹೆಚ್ಚಿನ ಮಹತ್ವ ಹೊಂದಿದೆ. ಅಂತೆಯೇ ದಾಸರುಗಳು ಇದನ್ನು ಇಷ್ಟು ವಿಶೇಷವಾಗಿ ವರ್ಣಿಸಿರುತ್ತಾರೆ. ಹೀಗೆ ವರ್ಣನೆಮಾಡುವಾಗ ತಾತ್ವಿಕವಾಗಿ ರಸಭಾವ ಪೌಷ್ಟಿಕವಾದ ಅಂಶಗಳು ತಾನೇ ತಾನಾಗಿ ಹೊರಸೂಸುತ್ತದೆ.

[ಆ] ಚತುರ್ವಿಂಶತಿ ರೂಪವರ್ಣನೆ

ಹರಿಯ ದಶಾವತಾರ ಸ್ತುತಿಯನ್ನು ಬಿಟ್ಟರೆ, ಕೇಶವ, ನಾರಾಯಣ, ಗೋವಿಂದ ಇತ್ಯಾದಿ ಚತುರ್ವಿಂಶತಿ ರೂಪಗಳ ಸಮಷ್ಟಿ ವರ್ಣನೆಯು ದಾಸಸಾಹಿತ್ಯದಲ್ಲಿ ಹೆಚ್ಚಾಗಿ ಬರುವುದು. ಪುರಂದರದಾಸರು ಇಪ್ಪತ್ನಾಲ್ಕು ನಾಮಗಳನ್ನು ನೆನೆಸಿ ಹರಿಯ ಗುಣವರ್ಣನೆ ಮಾಡಿ ಪ್ರಾರ್ಥನೆಮಾಡುರುವರು.

ಮಧ್ಯಮಾವತಿ – ಆಟ

ಅಚ್ಯುತತಾನಂತ ಗೋವಿಂದ ಹರಿಸಚ್ಚಿದಾನಂದಸ್ವರೂಪ ಮುಕುಂದ ||ಪ ||
ಕೇಶವ ಕೃಷ್ಣ ಮುಕುಂದ ಹರಿ ವಾಸುದೇವ ಗುರು ಜಗದಾದಿ ವಂದ್ಯ।
ಯಶೋದೆಯ ಸುಕೃತಕಂದ ಸ್ವಾಮಿ ಶೇಷಶಯನ ಭಕ್ತ ಹೃದಯಾನಂದ ||೧ ||
ಕೃಷ್ಣನೆಂಬೋ ಸೊಲ್ಲಕೇಳಿ ನಷ್ಟವಾಯಿತು ಎನ್ನ ಪಾಪಗಳೆಲ್ಲ। ಮುಟ್ಟಿಭಜಿಸಿರೋ ನೀವೆಲ್ಲ ಪುರಂದರವಿಠಲನಲ್ಲದೆ ಮತ್ತೆ ಬೇರಿಲ್ಲ ||೨೪ ||

ಕನಕದಾಸರ ಪದವಂತೂ ನಿತ್ಯಪಠಣೆಗೆ ಬಹಳ ಅನುಕೂಲವಾಗಿ ಅತ್ಯಂತ ಸಳವೂ ಹೃದಯಸ್ಪರ್ಶಿಯೂ ಆಗಿದೆ.

ಈಶ ನಿನ್ನ ಚರಣ ಭಜನೆ ಆಶೆಯಿಂದ ಮಾಡುವೆನು
ದೋಷರಾಶಿ ದೂರಮಾಡು ಶ್ರೀಶ ಕೇಶವ ||ಪ ||
ಶರಣುಹೊಕ್ಕೆನಯ್ಯ ಎನ್ನ ಮರಣಸಮಯದಲ್ಲಿ ನಿನ್ನ । ಚರಣ ಸ್ಮರಣೆ ಕರುಣಿಸಯ್ಯ ನಾರಾಯಣ। ಶೋಧಿಸೆನ್ನ ಭವದ ಕಲುಷ ಬೋಧಿಸಯ್ಯ ಜ್ಞಾನವೆನಗೆ। ಬಾಧಿಸುವ ಯಮನ ಬಾಧೆ ಬಿಡಿಸು ಮಾಧವ ||
ಮರೆಯದಲೆ ಹರಿನಾಮ ಬರೆದೂ ಓದಿ ಕೇಳಿದರ್ಗೆ
ಕರೆದು ಮುಕ್ತಿಕೊಡುವ ನೆಲೆಯಾದಿಕೇಶವ || —ಕನಕದಾಸರು

ಕೇಶವಾದಿ ನಾಮಗಳು ಬರಿಯ ಸಾಂಕೇತಿಕವಲ್ಲ. ಪ್ರತಿಯೊಂದು ನಾಮವೂ ಅರ್ಥ ಪೂರ್ಣವಾಗಿದೆ. ಕೇಶವನೆಂದರೆ (ಕ =) ಬ್ರಹ್ಮ, [ಈಶ =] ರುದ್ರ–ಇವರಿಬ್ಬರಿಗೂ ಒಡೆಯ. ನಾರಾಯಣನೆಂದರೆ [ನಾರಾ =] ನೀರಿನಲ್ಲಿ, [ಆಯನ =] ಮನೆಮಾಡಿ

ಕೊಂಡಿರುವವನು.. ಸಮುದ್ರಶಾಯಿ ಎಂದರ್ಥ. ಹಾಗೆಯೇ ಮಾಧವನೆಂದರೆ ರಮೆಯರಸ, ಗೋವಿಂದನೆಂದರೆ, ವೇದಪ್ರತಿಪಾದ್ಯ. ವಿಷ್ಣುವೆಂದರೆ ವ್ಯಾಪ್ತನೆಂದು ಅರ್ಥವಾಗುವುದು. ಮೋಹನದಾಸರು ಈ ಅರ್ಥವನ್ನು ವಿವರಿಸಿರುವರು.

ಈಶ ಬ್ರಹ್ಮರಿಗೆ ನಿಯಾಮಕನಾಗಿದ್ದು ಪೋಷಿಸುತ್ತಿಪ್ಪ ಪರಮಾತ್ಮ ಕೋಲೆ।
ಪೋಷಿಸುತ್ತಿಪ್ಪ ಪರಮಾತ್ಮನಾದ ಶ್ರೀ ಕೇಶವನ ಮೊದಲೆ ಬಲಗೊಂಬೆ ಕೋಲೆ ||೧ ||

ನೀರಿಗಾಶ್ರಯನಾಗಿ ನೀರೊಳು ಮಲಗಿಪ್ಪ ನೀರಜನೇತ್ರ ನಿಗಮಾತ್ಮ ಕೋಲೆ
ನೀರಜನೇತ್ರ ನಿಗಮಾತ್ಮನಾದ ಶ್ರೀ ನಾರಾಯಣನ್ನ ಬಲ ಬೊಂಬೆ ಕೋಲೆ ||೨ ||

ಸಾಕಾರ ಮೂರುತಿ ಸರ್ವೇಂದ್ರಿಯನಿಯಾಮಕ ನಾಕೇಶವಂದ್ಯ ನಳಿನಾಕ್ಷ ಕೋಲೆ।
ನಾಕೇಶವಂದ್ಯ ನಳಿನಾಕ್ಷನಾದ ಹೃಷೀಕೇಶ ಹರಿಯ ಬಲಗೊಂಬೆ ಕೋಲೆ ||

ಕ್ಷರಾಕ್ಷರದೊಳು ಪರಮೋತ್ತಮನಾದ ಕರಿರಾಜವರದ ಕವಿಗೇಯ ಕೋಲೆ।
ಕರಿರಾಜವರದ ಕವಿಗೇಯನಾದ ಶ್ರೀ ಪುರುಷೋತ್ತಮನ್ನ ಬಲಗೊಂಬೆ ಕೋಲೆ||

"ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ! ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಕ್ಷರ ಉಚ್ಯತೆ" "ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇ ತ್ಯುದಾಹೃತಃ !',

ಎಂಬ ಗೀತೋಕ್ತಿಯ ಅರ್ಥವನ್ನು ಮೇಲಿನ ನುಡಿಯಲ್ಲಿ ವರ್ಣಿಸಿರುವರು, ಕೃಷ್ಣಶಬ್ದ ವರ್ಣನೆ ಮಾಡುತ್ತಾ ಮೋಹನ ದಾಸರು–

ಶಿಷ್ಟ ಪಾಲಕ ಉತ್ಕೃಷ್ಟ ಜ್ಞಾನಾನಂದ ಕೃಷ್ಣೆಯ ಕಷ್ಟಬಿಡಿಸಿದ ಕೋಲೆ ! ಕೃಷ್ಣೆಯ ಕಷ್ಟಬಿಡಿಸಿದ ನಮ್ಮ ಶ್ರೀ ಕೃಷ್ಣನ್ನ ಮೊದಲೆ ಬಲಗೊಂಬೆ ಕೋಲೆ||

ಕಷ್ಟಪರಿಹಾರನೆಂಬರ್ಥವನ್ನು ಸೂಚಿಸಿರುವರು, ವಿಜಯದಾಸರ 'ಕಾಶಿಯ ಹಾದಿಯಲಿ ಕೇಶವನಿದ್ದಾನೆ ರಾಮರಾಮ' ಎಂಬ ಪದವು ವಿವಿಧ ಕ್ಷೇತ್ರಗಳನ್ನು ಈ ರೂಪವರ್ಣನೆಯ ಜೊತೆಗೆ ಸ್ಮರಣೆಗೆ ತಂದು ಕೊಡುವುದು.

(ಇ) ವಿಶಿಷ್ಟ ಭಗವದ್ರೂಪವರ್ಣನೆ.

ದಾಸರುಗಳು ಪ್ರತ್ಯೇಕವಾಗಿಯೂ ಭಗವದ್ರೂಪಗಳನ್ನು ವರ್ಣನೆ ಮಾಡಿರುವರು, ಇದರಲ್ಲಿ ಕೃಷ್ಣಮಹಿಮಾನುವರ್ಣನೆಯೇ ಹೆಚ್ಚು. ಕೃಷ್ಣರೂಪವಲ್ಲದೆ ನೃಸಿಂಹ, ಕಪಿಲ, ವರಾಹ, ಹಯಗ್ರೀವ, ವೇದವ್ಯಾಸಾದಿ ರೂಪಗಳನ್ನು ವರ್ಣಿಸಿರುವರು.

(i) ನೃಸಿಂಹ

ನೃಸಿಂಹದೇವರನ್ನು ಸ್ತೋತ್ರ ಮಾಡುವಾಗ ದಾಸರುಗಳು ನೃಸಿಂಹಪೂರ್ವೋತ್ತರ ತಾಪಿನೀ ಉಪನಿಷತ್ತುಗಳ ವಿಷಯವನ್ನು ಆಯ್ದುಕೊಂಡಿರುವರು. ವಿಜಯದಾಸರು ಪದ ಮತ್ತು ಸುಳಾದಿಯಲ್ಲಿ ನೃಸಿಂಹದೇವರ ಕರಾಳರೂಪವನ್ನೂ ಅವತಾರ ಕಾಲದ ವರ್ಣನೆಯನ್ನೂ ಚೆನ್ನಾಗಿ ವರ್ಣಿಸಿದ್ದಾರೆ.

ಭೈರವಿ–ಅಟ

ರಂಗ ಮಾನವ ಸಿಂಗನಾದನು ||ಪ ||

ರಂಗ ಮಾನವ ಸಿಂಗನಾಗಲು | ಭಂಗಾರಗಿರಿಯ ಶೃಂಗಗಳಲ್ಲಾಡೆ | ಹಿಂಗದೆ ಎಂಟು ಮಾತಂಗ ಸಪುತದ್ವೀ | ಪಂಗಳು ಕಂಪಿಸಿ ವಿಗಡದಿ ||ಅ ||

ವನಜಭವನಂದನರಾನಂದದಿ ವನಧಿಯೊಳಿದ್ದ ವನಜನಾಭನ । ವನಜಾಂಘ್ರಿ ದರುಶನಕೋಸ್ಕರದಿ ಘನ ವೈಕುಂಠಪಟ್ಟಣ ಸಾರೆ ವಿನಯರಲ್ಲದ ಜಯನು ವಿಜಯ ನವರನು ತಡೆಯಲು ಮುನಿದೀರ್ವರಿಗೆ । ದನುಜಾಂಗದಿಂದ ಜನಿಸಿರೋ ಎಂದು ಮುನಿಗಳು ಶಾಪವನ್ನು ಈಯೆ ||೧ ||

ತುಟಿಯು ನಡುಗೆ ಕಟಕಟನೆ ಪಲ್ಲು ಕಟನೆ ಕಡಿದು ನೇಟನೆ ಚಾಚುತ ! ಪುಟಪುಟ ನಾಸಪುಟದ ರಭಸ ಕಠಿಣ ಹೂಂಕಾರ ಘಟುಕಾರ । ನಿಟಿಲನಯನಸ್ಫುಟಿತ ಕಿಡ್ಗಿಡಿ ಮಿಟಿಯೆ ಹುಬ್ಬಿನ ನಿಟಿಲ ರೋಷದಿ ಛಟಛಟ ಚಂಚುಪುಟದಂತೆ ರೋಮ ಚಟುಲ ವಿಕ್ರಮುದ್ಧಟದೇವ ||೬ ||

ನಡು ಕಂಬದಿಂದ ಒಡೆದು ಮೂಡಿದ ಕಡುದೈವವು ಸಂಗಡಲೇ ಚೀರಲು| ಬಡಜೀವಿಗಳು ನಡುಗಿ ಭಯವ ಪಡುತಲಿ ಬಾಯಬಿಡುತಿರೆ|| ಕಡೆಯಲ್ಲೋ ಹಿರಿಡಬಲ್ಲವರಾರೋ ತುಡುಗಿ ದುಷ್ಟನು ಪಡೆದವರವ ಪಿಡಿದು ಅವನ ಕೆಡಿಸಿ ಹೊಸ್ತಿಲೊಡ ಗೆಡಹಿದನು ಪವಾಡದಲಿ ||೭ ||

ವೈರಿಯಪಿಡಿದು ಊರುಗಳಲಿಟ್ಟು ಘೋರ ನರಕದಿಂದ ತೊರೆದು ಉದರವ| ದಾರುಣ ಕರುಳಹಾರ ಕೊರಳಲ್ಲಿ ಚಾರುವಾಗಿರಲು ಮಾರಮಣ ಸಾರಿದ ಭಕ್ತಗೆ ಕಾರುಣ್ಯಮಾಡಿ ಶ್ರೀ ನಾರೀಶನಾನಂದದಿ ತೋರುತಿರೆ| ಸುರವದರ್ನೆರೆದು ಅಪಾರ ಸ್ತುತಿಸಿ ಪೂಧಾರೆವರುಷ ವಿಸ್ತಾರೆರೆಯೆ ||೮ ||

ನರಸಿಂಹ ಸುಳಾದಿ.

ಝಂಪೆ–ತಾಳ

ಲಟಲಟಾಲಟಾಲಟಕರಿಸಿ ವನಜಜಾಂಡ| ಕಟಹ ಪಟಪಟಾಪಟತ್ಕುಟದಿ ಬಿಚ್ಚುತಿರಲು| ಪುಟಪುಟಾಪುಟನೆಗೆದು ಚೀರಿಹಾರುತ ಪಲ್ ಕಟಕಟಾಕಟ ಕಡಿದು ರೋಷದಿಂದ | ಮಿಟಿಮಿಟಿಮಿಟಿಮಿಟನೆ ರಕ್ತಾಕ್ಷಿಯಲಿ ನೋಡಿ | ತಟಿಕ್ಕೋಟಿಉದ್ಧಟನೆ ಆರ್ಭಟವಾಗಿ ತೋರಲು| ಕುಟಿಲರಹಿತವ್ಯಕ್ತ ವಿಜಯವಿಠಲ ಶಕ್ತ | ಧಿಟನಿಟಿಲನೇತ್ರ ಸುರಕಟಕಪರಿಪಾಲ ||

ತ್ರಿಪುಟ

ಬೊಬ್ಬರಿಯೆ ವೀರಧ್ವನಿಯಿಂದ ತರುಗಿರಿ| ಹಬ್ಬಿ ಮಂಚೂಣಿ ಉರಿ ಹೊಗರೆದ್ದು ಸುತ್ತೆ| ಉಬ್ಬಸ ರವಿಗಾಗೆ ಅಬ್ಧಿಜ ನಡಗುತಿರೆ| ಅಬ್ಧಿಸಮಿ ಉಕ್ಕಿ ಹೊರಚೆಲ್ಲಿ

ಬರುತಿರೆ | ಅಬ್ಜಭವಾದಿಗಳು ತಬ್ಬಿಬ್ಬುಗೊಂಡರು | ಅಬ್ಬರವೇನೆನುತ ನಭದಗುಳೆಯು ತೆಗೆಯೆ | ಶಬ್ದ ತುಂಬಿತು ಅವ್ಯಾಕೃತಾಕಾಶಪರಿಯಂತ | ನಿಬ್ಬರತರುಗಿರಿಗಳುಜಜ್ಜರಿಸೆ ! ಒಬ್ಬರಿಗೊಶವಲ್ಲದ ಹೋ ಹೋ ವಿಜಯ ವಿಠಲ | ಇಬ್ಬಗೆಯಾಗೆ ಕಂಬದಿಂದಲಿ ಪೊರವಂಟ ||

ಜತೆ

"ಪ್ರಹ್ಲಾದವರದ ಪ್ರಸನ್ನ ಕ್ಲೇಷಭಂಜನ | ಮಹಹಂಸ ವಿಜಯ ವಿಠಲ ನರಮೃಗ ರೂಪ | "ಶ್ರೀಪಾದರಾಜರ "ಲಕ್ಷ್ಮೀ ನರಸಿಂಹ ಪ್ರಾದುರ್ಭಾವ ದಂಡಕ"ವು ಭಾಗವತ ಸಪ್ತಮಸ್ಕಂದಕ್ಕೆ | ಕನ್ನಡ ಅನುವಾದ. ಅದರಲ್ಲಿ ಪ್ರಹ್ಲಾದಚರಿತೆಯು ವಿಸ್ತಾರವಾಗಿ ಬಂದಿದೆ. ದಂಡಕದ ಶೈಲಿಯು ಗಂಗಾಪ್ರವಾಹದಂತೆ ಓಡುವುದು.

ಶ್ರೀ ರಮಾಮಾ ನೀನಿ ಮಾನಸೇಂದೀವರೋತ್ಫಲ್ಲ ಸಂಫುಲ್ಲ ಚಂದ್ರಾ ! ಚಿದಾನಂದ ಸಾಂದ್ರಾ | ಸದಾಸನ್ನುತೇಂದ್ರಾ | ನಮೋಪೇಂದ್ರ ನಿಸ್ತಂದ್ರ ನೀ ಕೇಳು ||

—ಹೀಗೆ ದಂಡಕವು ಆರಂಭವಾಗುವುದು.

"ತಂದೆ ಕೇಳಯ್ಯ ಬ್ರಹ್ಮಾದಿ ಆಸ್ತಂಭಪರ್ಯಂತವುಂ ಜಂಗಮ ಸ್ಥಾವರಾತ್ಮಕ ಪ್ರಪಂಚೋಚ್ಚ ನೀಚ ಪ್ರಜಾನೀಕ ಯಾವತ್ತದಾವಾತನಾಧೀನದಲ್ಲಿಪ್ಪುದೋ ಆತನೇ ಎನ್ನಗೇ ನಿನ್ನಗೇ ಇನ್ನು ಮಿಕ್ಕಾದ ಚೈತನ್ಯಕೆಲ್ಲಾ ಬಲಶ್ರೀಯು ತಾನಾದನೇ." 'ಈ ಭಾಗದಲ್ಲಿ

"ನಕೇವಲಂ ಮೇ ಭವತಶ್ಚ ರಾಜನ್ ಸವೈ ಬಲಂ ಬಲಿನಾಂ ಚಾಪರೇಷಾಂ ! ಪರೇವರೇ Sಮೀಸ್ಥಿರಜಂಗಮಾ ಯೇ ಬ್ರಹ್ಮಾದಯೋ ಯೇನ ವಶಂ ಪ್ರಣೀತಾಃ ||' ಇತ್ಯಾದಿಯಾಗಿ ಪ್ರಹ್ಲಾದರಾಜರು ತಂದೆಗೆ ಉಪದೇಶಿಸುವುದನ್ನೂ ವಿವರಿಸುತ್ತಾರೆ.

"ಕ್ವಾಸೌ ಯದಿ ಸ ಸರ್ವತ್ರ ಕಸ್ಮಾತ್ಸ್ತಂಭೇನ ದೃಶ್ಯತೇ|" ಎಂದು ಹಿರಣ್ಯಾ ಕಶಿಪು ಕೇಳುವ ಸಂದರ್ಭವನ್ನು ಹೀಗೆ ವರ್ಣಿಸಿದ್ದಾರೆ.

ಆತನೆಲ್ಲಿಪ್ಪ ಸರ್ವತ್ರದಲ್ಲಿಪ್ಪ ನೀನೆಂದಡೆ ಡಿಂಭಕಾಡಂಬಕಾಡೋನಗಳ್ ಸಾಕು ಮಾಡಿನ್ನು ಮೇಲೀ ಸಭಾ ಸ್ತಂಭದಲ್ ಶೀಘ್ರ ಸಂರಂಭದಲ್ ತೋರು ನೀ ತೋರದೆ ಪೋದೆಯಾ ಇನ್ನು ನೀ ಮಾರು ಮಾತಾಡದ್ದಾಗೇ ಶಿರಚ್ಛೇದ ಮಾಡುವೇನೋ' |

"ಸತ್ಯಂವಿಧಾತುಂ ನಿಜೆಬೃತ್ಯಭಾಷಿತಮ್" ಎಂಬ ನೃಸಿಂಹಾವತಾರ ಶ್ಲೋಕವು ಈ ಭಾಗದಲ್ಲಿ ಸುಂದರವಾಗಿ ವರ್ಣಿತವಾಗಿದೆ.

ಮೂರ್ಲೋಕವೆಲ್ಲ ಸಮುಲ್ಲೋಕವಾಗಿಪ್ಪುದಾವೇಳೆ ತದ್ಭೃತ್ಯ ವಾಕ್ಸತ್ಯವಂ ಮಾಡಬೇಕಾಗಿ ಸರ್ವತ್ರ ರ್ತಾ ತನ್ನ ವ್ಯಾಪ್ತತ್ವಮಂ ಪಥ್ಯವಾಗಿಪ್ಪವೋಲ್ ಅದ್ಭುತಾಕಾರ ಪೊತ್ತಂ ಜಗದ್ಭರ್ತ ತಾನೊಂದೆ ಸಿಂಹಾಕೃತೀ ಆಗದೇ ಮರ್ತ್ಯ ಮೂರ್ತ್ಯಲ್ಲದೆ ತತ್ಸಭಾಸ್ತಂಭಂದಲ್ ಡಿಂಭಸಂಭಾವನಕ್ಕಾಗಿ ಸಂಭೂತನಾದಂ ||

ನೃಸಿಂಹರೂಪವರ್ಣನೆಯಂತೂ ಮಹೋನ್ನತವಾಗಿದೆ. ಕೊನೆಗೆ ಹೀಗೆಮುಗಿಸಿದ್ದಾರೆ.

ಶ್ರೀನೃಸಿಂಹಾತ್ಮನಾಗಿದ್ದು ನೀನೀವೆಯೋ ಸ್ವಾಮಿಯೇ ತಲ್ಪ| ಶೈಲೇಂದ್ರ ಸದ್ಧಾಮಿಯೇ| ರಂಗವಿಠಲ ಸದ್ಧಾಮಿಯೆ| ಶ್ರೀರಮಾಕಾಮಿಯೇ| ಪ್ರೇಮಿಯೇ ತ್ವಾನ್ನಮಸ್ತೇ ನಮಸ್ತೇ ನಮಃ|

ಶ್ರೀಪಾದರಾಜರ ಈ 'ದಂಡಕ'ವು ಬಹು ವಿಸ್ತಾರವೂ ವಿಷಯಾಲಂಕಾರ ಗರ್ಭಿತವೂ ಆಗಿರುವುದು.

ತೊರವೆಯ ನರಸಿಂಹನನ್ನು ದರ್ಶನ ಮಾಡಿದ ಪುರಂದರದಾಸರು ಎರಡು ಪದಗಳನ್ನು ಬಹಳ ಸ್ವಾರಸ್ಯವಾಗಿ ರಚಿಸಿದ್ದಾರೆ.

ದರ್ಬಾರ್—ಅಟ

ಇದು ಏನಂಗ ಮೋಹನಾಂಗ| ಮದನ ಜನಕ ತೊರವೆಯ ನರಸಿಂಗ| ಸುರರು ಸ್ತುತಿಸಿ ಕರೆಯೆ ತುಟಿಯ ಮಿಸುಕದವ|ಬರಿದೆ ಏತಕೆ ಬಾಯಿ ತೆರೆದೆ ಹೇಳೊಮ್ಮೆ೧

ವರನಿಲಯ ಮುತ್ತು ಮಾಣಿಕ ಹಾರಳಿರೆ| ಕೊರಳಲ್ಲಿ ಕರುಳಮಾಲೆಹಾಕಿ ಮೆರೆವುದು ||೨ ||

ತೊರವೆಯ ನರಹರಿ ಪುರಂದರ ವಿಠಲ|
ಸಿರಿಯಿಪ್ಪ ತೊಡೆಯೊಳು ಅರಿಯನಿಟ್ಟಿರುವುದು ||೩ ||

ತೋಡಿ—ಆದಿ

ದಾನವನ ಕೊಂದದ್ದಲ್ಲ ಕಾಣಿರೋ|
ಗಾನವಿನೋದಿ ನಮ್ಮ ತೊರವೆಯ ನಾರಸಿಂಹ ||ಅ ||
ಅಚ್ಚಪುರುಷನೆಂಬ ಸ್ವಚ್ಛರತ್ನ ಒಡಲೊಳು|
ಬಿಚ್ಚಿನೋಡಿದರಿನ್ನೆಷ್ಟು ಇದ್ದಾವೋ ಎಂದು ||೧ ||
ನೆಂಟತನವು ಬೆಳೆಯಬೇಕೆಂದು ಕರುಳ ಕೊರಳೊಳು|
ಗಂಟುಹಾಕಿಕೊಂಡನಲ್ಲದೆ ದೇಹಸಂಬಂಧದಿಂದ ||೨ ||
ತೊರವೆಯ ನಾರಸಿಂಹ ಪ್ರಹ್ಲಾದಪಾಲಕ|
ಉರಿಮೋರೆ ದೇವ ನಮ್ಮ ಪುರಂದರವಿಠಲ ||೩ ||

'ನರಸಿಂಹ ಪಾಹಿ ಲಕ್ಷ್ಮೀನರಸಿಂಹ' ಎಂಬ ಪದದಲ್ಲಿ ಜಗನ್ನಾಥ ದಾಸರು ನೃಸಿಂಹಸ್ತುತಿಯನ್ನು ಮಾಡಿರುವರು.

[ii] ಮೋಹಿನಿ

ದೇವಾಸುರರಿಗೆ ಅಮೃತವನ್ನು ಹಂಚುವಾಗ ಭಗವಂತ ಮೋಹಿನೀ ರೂಪ ತಾಳಿದ್ದನ್ನು ಪುರಂದರದಾಸರು ವರ್ಣಿಸಿರುತ್ತಾರೆ.

ಭೈರವಿ—ಆದಿ

ಇಂಥಾ ಹೆಣ್ಣಿನ ನಾನೆಲ್ಲೂ ಕಾಣೆನೋ| ಹೊಂತಕಾರಿ ಕಾಣಿರೋ ||ಪ ||

ಸಂತತ ಸುರರಿಗೆ ಅಮೃತವನುಣಿಸಿದ |ಪಂಕ್ತಿಯೊಳಗೆ ಪರವಂಚನೆಮಾಡಿದ ||ಅ||

ಮಂದರಗಿರಿ ಸಿಂಧೂವಿನೊಳಗಿಟ್ಟು ಚಂದದಿ ಕಡೆದು ಅಮೃತವ ತೆಗೆದು | ಇಂದು ಮುಖಿಯೇ ನೀ ಬಡಿಸೆಂದು ಕೊಟ್ಟರೆ ದಂಧನಗಳಮಾಡಿ ದೈತ್ಯರ ವಂಚಿಸಿದ ||೧ ||

ವಿಶ್ವಾಸದಿಂದಲಿ ಅಸುರಗೆ ವರವಿತ್ತು ತ್ರಿಶೂಲಧರ ಓಡಿ ಬಳಲುತಿರೆ | ನಸು ನಗುತಲಿ ಬಂದು ಭಸ್ಮಾಸುರನಿಗೆ ಭೋಗದಾಸೆಯ ತೋರಿ ಭಸ್ಮವಮಾಡಿದ ||೨ ||

ವಸುಧೆಯೊಳಗೆ ಹೆಣ್ಣು ಒಸಗೆಯಾಗದ ಮುನ್ನ| ಬಸರಿ ಆ ಬ್ರಹ್ಮನ ಪಡದ ಪಳಿವಳು | ಕುಸುಮನಾಭ ಶ್ರೀಪುರಂದರವಿಠಲನ | ಪೆಸರಪೊತ್ತಿಹಳು ಈ ಪೊಸ ಕನ್ನಿಕೆಯು ||೩ ||

ಉಡುಪಿ ಶ್ರೀ ಕೃಷ್ಣನ ಮೋಹಿನೀ ಅಲಂಕಾರವನ್ನು ವಿಜಯದಾಸರು ಅದ್ಭುತವಾಗಿ ವರ್ಣಿಸಿದ್ದಾರೆ.

ಶಂಕರಾಭರಣ--ಆಟ

ನೋಡಿದ್ಯಾ ರಂಗಯ್ಯನ ನೋಡಿದ್ಯಾ ||ಪ ||

ನೋಡಿದ್ಯ ಮನವೆ ನೀನಿಂದು ಕೊಂಡಾಡಿದ್ಯ| ಎದುರಲಿ ನಿಂದು ಮಾ ! ತ್ಯಾಡಿದ್ಯಾವರಗಳ ಬೇಡಿದ್ಯ ನಿನ್ನೊಳು| ಕೂಡಿ ನಲಿನಲಿದಾಡುವ ಸ್ತ್ರೀರೂಪ ||ಅ ||

ಚರಣತಲದಲ್ಲಿಕೆಂಪು| ಶುದ್ಧ ಅರವಿಂದ ಧ್ವಜವಸ್ತ್ರ ಸೊಂಪು| ಸ್ತುತಿಪರಿಗೆ ಸುರಂಪ್ರಿ ಪತಂಪು | ನೋಡಲರಸಿ ಕಾಣದೋ ವೇದ ಗುಂಪು | ಅಹ | ಹರಡಿ ಹಿಂಬಳಿ ಸಾಲ್ಬೆರಳ್ಮೆದರ ಮೇಲೆ| ಸುರುಚಿರ ರೇಖೆ ಚಂದ್ರಮನ ಸೋಲಿಪ ನಖ ||೧ ||

ಸಕ್ಕರೆ ತುಟಿ ಕೂರ್ಮ ಕದಪು| ಕಣ್ಣಿಗಿಕ್ಕಿದ ಸೊಬಗಿನ ಕಪ್ಪು| ತಲೆ ಹಿಕ್ಕಿ ಬಾಚಿದ ಕೇಶ ಥಳಪು| ಸರ್ವದಿಕ್ಕು ಮೋಹಿಸುವಂಥ ವಲಪು| ಅಹ | ಲಕ್ಕುಮಿದೇವಿಯ ಲೆಕ್ಕಿಸದೆ ಮಗನ| ಪೊಕ್ಕುಂಳಿಂದಲಿ ಪೆತ್ತ ಅಕ್ಕಜದ ಬಲೆಯು ||೧೧ ||

[iii] ಕಪಿಲ

ಭಗವಂತನ ರೂಪಗಳಲ್ಲಿ, ಗುಣಗಳಲ್ಲಿ, ಕ್ರಿಯೆಗಳಲ್ಲಿ ಯಾವ ಭೇದವೂ ಇಲ್ಲ, ಆದರೂ ಒಂದೊಂದು ರೂಪವನ್ನು ಎತ್ತಿ ಹೇಳುವುದುಂಟು "ನೃಸಿಹ್ಮಾದಿಕಮನ್ಯಚ್ಚ ದುರಿತಾದಿನಿವೃತ್ತಯೇ'' ಎಂಬ ಭಾಷ್ಯೋಕ್ತಿಯಂತೆ ದುರಿತನಾಶಕ್ಕೆ ನೃಸಿಂಹ ಸ್ತೋತ್ರವು ಎತ್ತಿದ್ದು. ಹಾಗೆಯೇ ಸಂತಾನಕ್ಕೆ ಗೋಪಾಲಕೃಷ್ಣನ ಧ್ಯಾನವು ವಿಶೇಷವು. ಅಂತೆಯೇ ವೇದವ್ಯಾಸ, ದತ್ತ, ಕಪಿಲ, ಹಯಗ್ರೀವ, ಮಹಿದಾಸಾದಿ ಭಗವದವ ತಾರಗಳು ಜ್ಞಾನಕಾರ್ಯಕ್ಕೆ ಮೀಸಲು, ಅದರಲ್ಲಿ ಕಪಿಲರೂಪದ ಚರಿತೆಯು ಭಾಗವತದಲ್ಲಿ ದೇವಹೂತಿಯ ಅಖ್ಯಾನದಲ್ಲಿ ಕಪಿಲರು ತಮ್ಮ ತಾಯಿಯಾದ ದೇವಹೂತಿಗೆ ಉಪದೇಶಮಾಡಿದ ಸಂದರ್ಭದಲ್ಲಿ ಉಕ್ತವಾಗಿದೆ. ವಿಜಯದಾಸರು ಕಪಿಲದೇವರನ್ನು ಕುರಿತು ಒಂದು ಸುಳಾದಿಯನ್ನೇ ರಚಿಸಿದ್ದಾರೆ.

ಕಪಿಲ ಸುಳಾದಿ.

ಸಿದ್ಧಿದಾಯಕ ಶಿಷ್ಟಜನ ಪರಿಪಾಲ ಪರಮ | ಶುದ್ಧಾತ್ಮ ಸುಗುಣಸಾಂದ್ರ ಸುಖ ವಾರಧಿ | ನಿದ್ರಾರಹಿತ ಭದ್ರಾರಮಣ ನಿರ್ವಿಕಾರ | ಚಿದ್ದೇಹ ಸರ್ವಕುಲ ಸುಂದರ ಸಾರ | ಪದ್ಮಸಂಭವ ಬಲಿಪ್ರಕ್ಷಾಲಿತ ಪಾದ | ಹೃದ್ರೋಗನಾಶ ವೈಕುಂಠವಾಸ |

ಕರ್ದಮ ಮುನಿಸೂನು ವಿಜಯವಿಠಲ | ನಿರ್ದೋಷ ಕರುಣಾಬ್ಧಿ ಸಂತರೋದ್ಧಾರಿ |

ಮಠ್ಯತಾಳ

ಆದಿಮನ್ವಂತರದಿ ಉದಿಸಿದ ಮಹಾದೇವ | ಆದಿ ಪರಬೊಮ್ಮ ಬೊಮ್ಮನಯ್ಯ ಜೀಯ | ಸಾಧುಜನ ಪ್ರಿಯ ಸಂತತ ಮುನಿ ತಿಲಕ |ಬೋಧಶರೀರ ಭಕುತ ಮನೋಹರ | ಮಾಧವ ಸಿರಿ ವಿಜಯವಿಠಲ ವಿಮಲೇಶ | ಮೋದಮತಿಯ ಕೊಡುವ ಕಪಿಲ ಭಗವನ್ಮೂರ್ತಿ |

ಜತೆ

ತಮ ಪರಿಚ್ಛೇದ ಈತನ ಸ್ಮರಣೆ ಮಾಡೆ ಹೃ
ತ್ಕಮಲದೊಳಗೆ ಕಪಿಲ ವಿಜಯ ವಿಠಲ ಪೊಳೆವ ||

ಕಪಿಲದೇವರ ವಿಭೂತಿರೂಪವನ್ನು ಯಾವ ಯಾವ ಸ್ಥಳಗಳಲ್ಲಿ ಚಿಂತಿಸ ಬೇಕೆಂಬುದನ್ನು ಈ ಸುಳಾದಿಯಲ್ಲಿ ಹೇಳಿದ್ದಾರೆ.

[iv] ಹಯಗ್ರೀವ.

ವಾದಿರಾಜರು ಹಯಗ್ರೀವೋಪಾಸಕರು. ಅವರು ಹಯಗ್ರೀವ ದೇವರನ್ನು ಸ್ತೋತ್ರಮಾಡಿರುವರು.

ಪೂರ್ವಿ—ಛಾಪು

ಕುದುರೆ ಬಂದಿದೆ ಚಲ್ವ ಕುದುರೆ ಬಂದಿದೆ ||ಪ ||
ವಾದಿರಾಜಗೊಲಿದುಬಂದು ಸ್ವಾದಿಪುರದಲಿ ನಿಂದ ||ಅ ||
ಮುಂಗಾಲುಗೆದರಿ ಕುಣಿವ ಕುದುರೆ | ಹಿಂಗಾಲಿಲಸುರರೊದೆವ ಕುದುರೆ ! ರಂಗನೆಂದರೆ ಸಲಹೋ ಕುದುರೆ | ತುಂಗ ಹಯವದನ್ನ ಕುದುರೆ ||೧ ||

[V] ವೇದವ್ಯಾಸ.

ಅಸಾವೇರಿ—ಆಟ

ಮಧ್ವಾಂತರ್ಗತ ವೇದವ್ಯಾಸ ಕಾಯೋ
ಶುದ್ಧ ಮೂರುತಿಯೇ ಸರ್ವೇಶ ||ಪ ||
ಶುದ್ಧಮನದಲ್ಲಿ ನಿನ್ನ ಭಜಿಸುವ ಭಕ್ತರಿಗೆ
ಬುದ್ಧ್ಯಾದಿಗಳ ಕೊಟ್ಟು ಸಲಹೋ ದೇವರದೇವ ||ಅ ||
ದ್ವಾಪರದಲಿ ಒಬ್ಬ ಮುನಿಪ ತನ್ನ | ಕೋಪದಿಂದಲಿ ಕೊಡಲು ಶಾಪ | ಸ್ಥಾಪಿಸಲು

ಅಜ್ಞಾನಲೋಪ | ಅಪಾರ ತತ್ತ್ವಸವರೂಪ | ಶ್ರೀಪತಿಯೇ ಪೊರೆಯೆಂದು ಮೊರೆಯಿಡೆ | ಷಾಪಿ ವಿರಹಿತಳಾದ ಯಮುನೆಯ | ದ್ವೀಪದಲೆ ಅಂಬಿಗರಹೆಣ್ಣಿನ | ರೂಪಕೊಲಿದವರಲ್ಲಿ ಜನಿಸಿದ ||೧ ||

ವೇದವಾದಿಗಳೆಲ್ಲ ಕೆಡಲು ತತ್ತ್ವ | ವಾದಿ ಜನರು ಬಾಯ ಬಿಡಲು | ಮೇದಿನಿ ಸರರು ಕಂಗೆಡಲು ನಾನಾ | ವೇದ ವಿಭಾಗ ವಿರಚಿಸಲು | ಮೊದದಿಂದ ತದರ್ಥಬೋಧಕ | ವಾದ ಶಾಸ್ತ್ರಪುರಾಣ ರಚಿಸಿ ವಿ | ವಾದಗಳ ನಿರ್ವಾದ ಮಾಡಿದ ಸಾಧುವಂದಿತ ಬಾದರಾಯಣ ||೨ ||

ಸಮತಿಗಳಿಗೆ ಬೋಧಿಸಿದೆ ಮಿಕ್ಕ | ಕುಮತಿಗಳಿಗೆ ಭೇದಿಸಿದೆ | ಕ್ರಿಮಿಯಿಂದ ರಾಜ್ಯವಾಳಿಸಿದೆ | ಜಗತ್ಸ್ವಾಮಿ ನೀಯೆಂದು ತೋರಿಸಿದೆ | ವಿಮಲರೂಪನೆ ಕಮನಲಾಭನೆ | ರಮೆಯ ಅರಸನೆ ರಮ್ಯ ಚರಿತನೆ | ಮಮತೆಯಲಿ ಕೊಡು ಕಾಮಿತಾರ್ಥವ | ನಮಿಸುವೆನು ಹಯವದನ ಮೂರುತಿ || – ಶ್ರೀ ವಾದಿರಾಜರು.

ವಿಜಯದಾಸರ 'ವೇದವ್ಯಾಸಸುಳಾದಿ' ಪ್ರಮೇಯ ಸಂಗ್ರಹವಾಗಿದೆ.

ಧ್ರುವತಾಳ

ಯತಿಗಳ ಶಿರೋರತನ ಸತಿಯ ಅವಿಯೋಗಿ | ರತಿಪತಿ ಜನಕ ಸ್ವರತ ಸ್ವಪ್ರಕಾಶಿಕ | ಅತೀತಾದ್ಭುತ ಮಹಿಮ ಪತಿತಪಾವನ ನಾಮ | ನತಜನಾಶ್ರಯಧೇನು ದಿತಿಜತಿಮಿರಭಾನು | ಅತಿದೂರಾದ್ದೂರಸಂತತ ದಯಾಪಾರಾವಾರ | ಚತುರಾನನ ಸಿರಿಪತಿ ಕಮಲಾಕರಾರ್ಚಿತಪಾದ ಸುಂದರ ದೀನಜನಮಂದಾರ | ಪ್ರತರ್ದನಾಮ ನಮ್ಮ ವಿಜಯ ವಿಠಲ ಸತ್ಯ | ವತೀಸುತ ಜಗದೊಳು ಪ್ರತಿ ಇಲ್ಲದಾತ ||

ಮಠ್ಯತಾಳ

ಜ್ಞಾನಮಯ ಕಾಯ ಜ್ಞಾನಮಯೈಶ್ವರ್ಯ | ಜ್ಞಾನಮಯಾನಂದ ಜ್ಞಾನ ಮಯವರ್ಣ | ಜ್ಞಾನಮಯತೇಜ ಜ್ಞಾನಮಯಶಕ್ತಿ | ಜ್ಞಾನಮಯಬುದ್ಧಿ ಜ್ಞಾನ ಮಯವಾಣಿ | ಗಾನ ವಿಲೋಲ ನಾಮ ವಿಜಯ ವಿಠಲ ರೇಯ | ನೀನೇ ನಿನಗೆ ಸಮ ಮೌನಿಧೃತವ್ರತನೆ ||

ಜತೆ

ಬಾದರಾಯಣ ಸುಖಕಾರಣ ಭಕುತರ್ಗೆ |
ವೇದವ್ಯಾಸನೆ ವಿಷ್ಣು ವಿಜಯ ವಿಠ್ಠಲ ವ್ಯಾಸ ||

ಮೋಹನದಾಸರು ಇದೇನು ನಿನ್ನ ವೇಷವೆಂದು ವೇದವ್ಯಾಸರನ್ನು ಸಂಬೋಧಿಸಿರುವರು.

ಆರಭಿ–ಆದಿ

ಏನೋ ಈ ವೇಷ ವೇದವ್ಯಾಸ |

ಭಾನುಕೋಟಿಪ್ರಕಾಶ ಬದರೀ ನಿವಾಸ ||ಅ ||
ದ್ರೌಪದಿ ಕರೆಯಲಪಾರವಸ್ತ್ರವನಿತ್ತೆ |
ಕೌಪೀನ ಧರಿಸಿದ ಕೌತುಕವೇನಯ್ಯ ||೧ ||
ಮುತ್ತು ಮಾಣಿಕ್ಯ ನವರತ್ನ ಮುಕುಟವಿರೆ |
ನೆತ್ತಿಲಿ ಕೆಂಜಡೆ ಪೊತ್ತು ಕೊಂಡಿಪ್ಪದು ||೨ ||
ವರವೈಕುಂಠಬಿಟ್ಟು ಮೋಹನ್ನ ವಿಠಲ |
ಧರೆಯೊಳು ಬೋರೆಯಮರದಡಿಲಿರುವುದು ||೩ ||

ಜಗನ್ನಾಥದಾಸರು ಮಾಡಿರುವ ವೇದವ್ಯಾಸ ದೇವರ ಸ್ತೋತ್ರದಲ್ಲಿ 'ವೇದವ್ಯಾಸರು ಕುರುಕುಲಪಿತಾಮಹರಾಗಿ ಭಾರತವನ್ನು ರಚಿಸಿದ' ಅಂಶವನ್ನು ವರ್ಣಿಸಿರುವರು.

ವರಾಳಿ—ಅಟ

ಮಧ್ವಾಂತರ್ಗತ ವೇದವ್ಯಾಸ ಮಮ ಸದ್ವನರುಹ ಸನ್ನಿವಾಸ ||ಪ ||
ಸದ್ಬುದ್ಧಿ ಕೊಡು ಶ್ರೀಕೃಷ್ಣದ್ವೈಪಾಯನ |
ಚಿದಚಿದ್ವಿಲಕ್ಷಣ ತ್ವತ್ಪಾದದ್ವಯಾಬ್ಜವ ತೋರೋ ||ಅ ||
ಹರಿತೋಪಲಾಭ ಶರೀರ ಪಾರಾಶರ | ಮುನಿವರ್ಯ ಸುಕುಮಾರ ಪರಮಪುರುಷ ಕಾರ್ತಸ್ವರ ಗರ್ಭ ಪ್ರಮುಖ | ನಿರ್ಜರಗಣ ಮುನಿನುತ ವರಪಾದ ಪಂಕಜ | ಕುರುಕುಲದಿ ಧೃತರಾಷ್ಟ್ರ ಪಾಂಡು ವಿದುರರ | ಪಡೆದೈವರಿಗೊಲಿದು ಸಂಹರಿಸಿ | ದುರ್ಯೋಧನನ ಭಾರತ | ವಿರಚಿಸಿದ ಸುಂದರ ಕವೀಂದ್ರ ||೨ ||

(ಉ) ಕ್ಷೇತ್ರಸ್ಥ ಭಗವದ್ರೂಪ ವರ್ಣನೆ

ಕನ್ನಡ ಹರಿದಾಸರುಗಳು ಆಸೇತು ಹಿಮಾಚಲ ತೀರ್ಥಯಾತ್ರೆ ಮಾಡಿ, ವಿವಿಧ ಕ್ಷೇತ್ರಸ್ಥ ಭಗವನ್ಮೂರ್ತಿಗಳನ್ನು ಸ್ತುತಿಸಿದ್ದಾರೆ. ಹೀಗೆ ಸ್ತೋತ್ರ ಮಾಡಿರುವುದರಲ್ಲಿ ತಿರುಪತಿ, ಉಡುಪಿ, ಪಂಢರಪುರ ಈ ಮೊದಲಾದ ಕ್ಷೇತ್ರಗಳು ಎಲ್ಲರಿಗೂ ಹೆಚ್ಚು ಪ್ರಿಯವಾಗಿದ್ದಂತೆ ತೋರುವುದು. ಈ ಮೂರು ಕ್ಷೇತ್ರಗಳು ಕರ್ನಾಟಕದ ಎಲ್ಲೆಕಟ್ಟಾಗಿರುವುದಲ್ಲದೆ, ದಾಸಕೂಟದ ಕೇಂದ್ರಗಳೂ ಹೌದು, ಪುರಂದರ ದಾಸರಂತೂ ಹೆಚ್ಚುಕಾಲ ಪಂಢರಪುರದಲ್ಲೇ ವಾಸವಾಗಿದ್ದರು. ಜಗನ್ನಾಥದಾಸರಿಗೆ ಅಂಕಿತ ಲಭ್ಯವಾದುದು ಅಲ್ಲೇ. ತಿರುಪತಿ ವೆಂಕಟೇಶನ ಸನ್ನಿಧಿಗಂತೂ ಎಲ್ಲ ದಾಸರೂ ವಿಶೇಷವಾಗಿ ಹೋಗುತ್ತಿದ್ದರು. ವ್ಯಾಸರಾಯರು ಆ ದೇವಸ್ಥಾನದ ಸರ್ವಾಧಿಪತ್ಯವನ್ನು ವಹಿಸಿ ಹನ್ನೆರಡು ವರ್ಷಗಳ ಕಾಲ ವೆಂಕಟೇಶನನ್ನರ್ಚಿಸಿದರು. ಗೋಪಾಲದಾಸರು ಪ್ರತಿವರುಷವೂ ಬ್ರಹ್ಮೋತ್ಸವಕ್ಕೆ ತಿರುಪತಿಗೆ ಹೋಗುವ ನಿಯಮ ಮಾಡಿಕೊಂಡಿದ್ದರು. ಕನಕದಾಸರಿಗೆ ವೆಂಕಟೇಶ ಅನೇಕ ಮಹಿಮೆಗಳನ್ನಲ್ಲಿ ತೋರಿದ. ಆದ್ದರಿಂದ ಅದು ದಾಸರುಗಳೆಲ್ಲರಿಗೂ ವಿಶೇಷ ಆಕರ್ಷಕವಾದ ಕ್ಷೇತ್ರ. ಆಚಾರ್ಯರಿಂದ ಪ್ರತಿಷ್ಠಿಸಲ್ಪಟ್ಟ

ಉಡುಪಿಕೃಷ್ಣನೂ ಹರಿದಾಸರ ಇಷ್ಟದೈವ, ವಾದಿರಾಜರೂ ಸ್ವಯಂ ಕೃಷ್ಣಾರಾಧಕರೇ, ಕನಕದಾಸರ ಭಕ್ತಿಗೆ ಮೆಚ್ಚಿ ಉಡುಪಿಕೃಷ್ಣ ಮೋರೆಯನ್ನು ತಿರುಹಿ 'ಕನಕನ ಕಿಂಡಿ' ಯೆಂಬ ಪ್ರಸಿದ್ಧಿಯನ್ನಿತ್ತ. ರಾಯರು ಉಡುಪಿಯಲ್ಲಿ ಬಹುಕಾಲ ವಾಸಮಾಡಿದರು.

[i] ವರಾಹ.

ತಿರುಪತಿಯಲ್ಲಿ ವೆಂಕಟೇಶನಲ್ಲದೆ, ಆದಿವರಾಹಸ್ವಾಮಿಯೂ ಭಕ್ತರಿಗೆ ಆರಾಧ್ಯನಾಗಿದ್ದಾನೆ, ಪುರಂದರದಾಸರು ವರಾಹದೇವರನ್ನು ಹೀಗೆ ಸ್ತುತಿಸಿದ್ದಾರೆ.

ಕಾಂಬೋಧಿ—ಆದಿ

ಆದಿವರಾಹನ ಚಲುವಪಾದವ ಕಾಣದೆ ಕಣ್ಣು||
ವೇದನೆಯಾಗುತಿದೆ ಒಳಬಂಧಿಸುತಲಿದೆ ಎನ್ನ ||

ದಂಡಕಾರಣ್ಯ ಭೂಮಿಲಿ ತೋಂಡಮಂಡಲದೊಳಗೆ। ಹಿಂಡು ಹಿಂಡು ಅಟ್ಟಿಡಿಂದ। ದಂಡಕಾಸುರ ಪಡೆಯ ಖಂಡಿಸಿ ದೈತ್ಯರನ್ನೆಲ್ಲ। ತುಂಡು ತುಂಡು ಮಾಡಿದನುದ್ದಂಡ ಶ್ವೇತವರಾಹನು ||೫ ||

ಕಂಡು ಭಜಿಸಿರೋ ಗಜಗಂಡು ಸಯಜ್ಞ ಮೂರುತಿ। ಕೊಂಡಾಡಿದ ಭಜಕರ ಮಂಡೆ ಪೂಬಾಡದೆಂದೆಂದು। ಪುಂಡರೀಕಸ್ವಾಮಿ ತಾನು ಉಂಡು ಮಿಕ್ಕಪ್ರಸಾದವ ಪ್ರ। ಚಂಡ ಹನುಮಂತಗೆ ಕೊಟ್ಟ ||೬ ||

ಜಗನ್ನಾಥದಾಸರು ವರಾಹಸ್ವಾಮಿಯ ಮೋರೆ ತಿರುಗಿರುವುದಕೆ ಬಗೆಬಗೆಯಾಗಿ ಉತ್ಪ್ರೇಕ್ಷಿಸುತ್ತಾರೆ.

ಕಾಂಬೋಧಿ—ಝಂಪೆ

ಆವಕಾರಣ ಮೊಗವ ತಿರುಹುದ್ಯೋ ಪೇಳು |
ಭೂವರಹ ಸ್ವಾಮಿ ಪುಷ್ಕರಣಿತೀರಗನೆ ||ಅ ||

ರಥಸಮೂಹಗಳೇರಿ ನೀ ಪ್ರಕಾಶಿಪ ಬಗೆಯೋ | ಸತಿಯ ಲಾವಣ್ಯಾತಿಶಯವ ನೋಡುವ ಬಗೆಯೋ | ಮಿತಿಯಿಲ್ಲದ ಸುರರ ಉಪೇಕ್ಷಮಾಡುವ ಬಗೆಯೋ | ಪತಿತಪಾವನ ಪೂರ್ಣಕಾಮು ನಿನಗೆ |ನುತಿಸಿ ಬಿನ್ನೈಸುವೆನು ಪೇಳೋ ಗುಣ ಧಾಮ ||೧ || — ಜಗನ್ನಾಥದಾಸರು.

[ii] ವೆಂಕಟೇಶ.

ತಿರುಪತಿ ಶ್ರೀನಿವಾಸ ಕಲಿಯುಗದ ಇಷ್ಟದೈವ, ವೈಕುಂಠದಿಂದ ಶ್ರೀಹರಿ ಬಂದು ಶೇಷಾಚಲದಲ್ಲಿ ನೆಲಸಿದ. ಭಗವಂತನ ದೇಹವೇ ಈಗ ಅಜ್ಞರ ಕಣ್ಣುಗಳಿಗೆ ಶಿಲಾರೂಪದಲ್ಲಿ ಕಾಣುತ್ತಿದೆ. ಅಂತೆಯೇ ದಾಸರುಗಳು ವೆಂಕಟೇಶನನ್ನು ಸ್ತೋತ್ರಮಾಡಿರುವುದು ಹೆಚ್ಚು. ಶ್ರೀನಿವಾಸ ಭಕ್ತರಿಂದ ಹಣ ವಸೂಲು ಮಾಡುವುದರಲ್ಲಿ ಗಟ್ಟಿಗನೆಂದು ವಾದಿರಾಜರು ಸ್ತೋತ್ರ ಮಾಡುತ್ತಾರೆ.

ಪೂರ್ವ—ಆದಿ

ಶ್ರೀಶ ನೀನಹುದೋ ಶೇಷಾಚಲವಾಸ ನೀನಹುದೋ ||ಪ ||
ಶೇಷಶಯನ ಸುರೇಶವಂದಿತಾಶೇಷಜನರನು ಪಾಲಿಸಿ ಬಡ್ಡಿ
ಕಾಸುಸೇರಿಸಿ ಗಂಟುಕಟ್ಟುವ ಕ್ಯಾಸಕ್ಕಿ ತಿಮ್ಮಪ್ಪ ನೀನೆ ||ಅ || — ವಾದಿರಾಜರು.

ವಿಜಯದಾಸರ ಮಂಗಳವೂ ಇನ್ನೂ ಸ್ವಾರಸ್ಯವಾಗಿದೆ.

ಬೈರವಿ—ಆದಿ

ಜಯಮಂಗಳಂ ನಿತ್ಯಶುಭಮಂಗಳಂ ||ಪ ||

ತೊಳಸದಕ್ಕಿಯತಿಂಬ ಕಿಲುಬುತಳಿಗೆಯಲುಂಬ । ಕೊಳಗದಲಿ ಹಣಗಳನು ಅಳೆದುಕೊಂಬ ।ಇಲ್ಲ ಕಾಸು ಎಂದು ಸುಳ್ಳುಮಾತಾಡಿದರೆ। ಎಲ್ಲವನ್ನು ಕಸಕೊಂಬ ಕಳ್ಳಧೊರೆಗೆ ||೧ ||

ತನ್ನನೋಡೇನೆಂದು ಮುನ್ನೂರುಗಾವುದಬರೆ । ತನ್ನ ಗುಡಿಯುಪೊಕ್ಕ ಜನರಿಗೆಲ್ಲ । ಹೊನ್ನುಹಣಗಳ ಕೊಂಡು ತನ್ನದರುಶನ ಕೊಡದೆ ಬೆನ್ನೊಡೆಯ ಹೋಯಿಸುವ ಅನ್ಯಾಯಕಾರಿಗೆ ||೨ ||

ಪುರಂದರದಾಸರು ಶ್ರೀನಿವಾಸದೇವರನ್ನು ಹೀಗೆ ವರ್ಣಿಸುತ್ತಾರೆ.

ಖರಹರಪ್ರಿಯ—ಏಕತಾಳ

ತಿರುಪತಿ ವೆಂಕಟರಮಣ ನಿನಗೇತಕೆ ಬಾರದು ಕರುಣ ||ಪ ||
ನಂಬಿದೆ ನಿನ್ನಯ ಚರಣ ಪರಿಪಾಲಿಸಬೇಕೋ ಕರುಣ ||ಅ ||

ಮೂಡಲಗಿರಿಯಲಿ ನಿಂತ । ಮುದ್ದು । ವೆಂಕಟಪತಿ ಬಲವಂತ
ಈಡಿಲ್ಲ ನಿನಗೆ ಶ್ರೀಕಾಂತ । ಈ । ಈರೇಳು ಲೋಕಕನಂತ ||೩ ||
ಕಾಶಿರಾಮೇಶ್ವರದಿಂದ । ಅಲ್ಲಿ । ಕಾಣಿಕೆ ಬರುವುದು ಚಂದ
ದಾಸರ ಕೂಡೆ ಗೋವಿಂದ । ಅಲ್ಲಿ । ದಾರಿನಡೆವುದೇ ಚಂದ ||೭ ||
ಎಲ್ಲದೇವರ ಗಂಡ । ಅವ । ಚೆಲ್ಲರೆ ದೈವದ ಮಿಂಡ
ಬಲ್ಲಿದವರಿಗೆ ಉದ್ದಂಡ । ಶಿವ । ಬಿಲ್ಲುಮುರಿದ ಪ್ರಚಂಡ ||೮ ||
ಕಾಸುತಪ್ಪಿದರೆ ಪಟ್ಟಿ। ಬಡ್ಡಿ । ಕಾಸುಬಿಡದೆ ಗಂಟುಕಟ್ಟಿ
ದಾಸನೆಂದರೆ ಬಿಡ ಗಟ್ಟಿ। ನಮ್ಮ। ಕೇಸಕ್ಕಿ ತಿಮ್ಮಪ್ಪಶೆಟ್ಟಿ ||೯ ||

ವಿಜಯದಾಸರು ಶ್ರೀನಿವಾಸದೇವರ ರಥೋತ್ಸವ ವರ್ಣನೆಯನ್ನು ಮಾಡುತ್ತಾರೆ.

ರೇಗುಪ್ತಿ—ಅಟ

ಬಾಬಾ ಭಕುತರ ಹೃದಯಮಂದಿರ ಬಾಬಾ ಜಗದೋದ್ಧಾರ ||ಪ ||
ಬಾಬಾ ವೆಂಕಟಾಚಲ ವಿಹಾರ ಬಾಬಾನೇಕಾವತಾರ ಧೀರ—ಶೂರ ||ಅ ||
ದಕ್ಷಕಮಲಾಕ್ಷ ರಾಕ್ಷಸಕುಲಶಿಕ್ಷ ಲಕ್ಷ್ಮಣಾಗ್ರಜ ಲಕ್ಷ್ಮೀವಕ್ಷ । ಪಕ್ಷಿವಾಹನಪೂರ್ಣ

ಲಕ್ಷಣ ಸರ್ವೇಶ ಮೋಕ್ಷದಾಯಕ ಪಾಂಡುಪಕ್ಷ |ಅಕ್ಷಯವಂತ ಸೂಕ್ಷ್ಮಾಂಬರ ಧರಾಧ್ಯಕ್ಷ ಪ್ರತ್ಯಕ್ಷದ ದೈವ |ಅಕ್ಷತನಾರೇರ ತಕ್ಷಣದಲಿ ತಂದ ಅಕ್ಷರಪುರುಷ ಗೋವಿಂದ೧

ಮೂರುನಾಮಂಗಳ ಧರಿಸಿದ ದಾಸರು ವೀರಮಾರುತಿಮತದವರು । ಸಾರುತ್ತ ಬೊಮ್ಮಾದಿಸುರರುಗಳನ್ನು ತಾರತಮ್ಯದಿಂದ ತಿಳಿದು । ಬಾರಿ ಬಾರಿಗೆ ನಿಮ್ಮ ಹಾರೈಸಿ ಆನಂದವಾರಧಿಯಲಿ ಮಗ್ನರಾಗಿ । ತಾರರು ಮನಸಿಗೆ ಮುರಡು ದೇವತೆಗಳ ಸಾರಹೃದಯರು ನಿಂದಿಹರು ||೫ ||

ಬಂಗಾರರಥದೊಳು ಶೃಂಗಾರವಾದ ಶ್ರೀಮಂಗಳಾಂಗ ಕಾಳಿಂಗ । ಭಂಗ ನರಸಿಂಗ ಅಂಗಜಜನಕ ರಥಾಂಗಪಾಣಿ । ಸಂಗ ನಿಸ್ಸಂಗ ಮಾತಂಗ ವಿಹಂಗ ಪ್ಲವಂಗ ನಾಯಕ ಪರಿಪಾಲ । ಸಂಗೀತಲೋಲ ಗೋಪಾಂಗನೆಯರ ಅಂತರಂಗ ಸಂತಾಪವಿದೂರ |೭|

ಸಾವೇರಿ—ಆಟ

ನಡೆದುಬಾರೈಯ್ಯ ನೀನು ||ಪ ||

ನಡೆದುಬಾರೈಯ್ಯ ಭವಕಡಲಿಗೆ ಕುಂಭಸಂಭವ । ಸಡಗರದಿಂದಲಿ ಮೆಲ್ಲಡಿಯನಿಡುತ ಬೇಗ । ಎಡಬಲದಲಿ ನಿನ್ನ ಮಡದೇರಿಂದೊಪ್ಪುತ । ತಡಮಾಡದಲೆ ಬಾ ಮೃಡಸಖವೆಂಕಟ ||ಅ ||

ವಿಜಯದಶಮಿ ಅಶ್ವಿಜಮಾಸ ಶುದ್ಧದಲ್ಲಿ ನಿಜರಥಾರೂಢನಾಗಿ ಸುಜನರಿಂದೊಡಗೂಡಿ । ಗಜಸಿಂಹಮಯೂರ ದ್ವಿಜಸಿಂಗಸಾರಂಗ ಮಜ ಭಾಪುರೇ ಎನಲು ತ್ರಿಜಗವು ತಲೆದೂಗೆ । ಅಜನು ಸ್ತುತಿಯ ಮಾಡೆ ಖಜಗಣಾಧಿಪಪಾಡೆ ಗಜಮುಖನಯ್ಯ ನಿಜಾಲಯದಲಾಡೆ । ಭುಜಗಶ್ರೇಷ್ಠದ್ವಿಜರಾಜರು ಜಯವನ್ನೆ ಕುಜನರೆದೆಯ ಮೆಟ್ಟಿ ರಜತಮ ಕಳೆಯುತ ||೧ || — ಗೋಪಾಲದಾಸರು.

ಗೋಪಾಲದಾಸರ ತಮ್ಮಂದಿರಾದ ಗುರು ಗೋಪಾಲದಾಸರು ಶ್ರೀನಿವಾಸದೇವರ ಮೇಲೆ ರಚಿಸಿರುವ ವೃತ್ತನಾಮವು ಅತ್ಯಂತ ಪ್ರೌಢವಾಗಿದೆ.

ನಾದನಾಮಕ್ರಿಯ—ಆಟ

ರಕ್ಷಿಸೋ ವೆಂಕಟಗಿರಿರಾಜ ರವಿಶತತೇಜ ಅಶ್ರಿತಕಲ್ಪಭೂಜ

ಶ್ಲೋಕ

ಶ್ರೀಮಾನ್ ಶೇಷಧರಾಧರಾಧಿಪ ಸದಾ ಶ್ರೀಮಾನ್ ಸುಸೌಖ್ಯಪ್ರದಾ
ಶ್ರೀಮಾಯಾಜಯಶಾಂತಿಕಾಂತಸ್ವರತಾ ಶ್ರೀವಿಷ್ಣುಸಿದ್ಧೇಶ್ವರಾ ।
ಶ್ರೀಮತ್ಪದ್ಮಜ ಪಾರ್ವತೀಶವಿನುತಾ ಶ್ರೀಪಾದಪದ್ಮದ್ವಯಾ
ಸ್ವಾಮಿನ್ ದೇಹಿ ಸದಾ ತ್ವದೀಯ ಭಜನಂ ಶ್ರೀಕಾಂತ ತ್ವಂ ಪಾಹಿ ಮಾಂ

ಪದ

ಹಾಟಕಮುಖರಿಸರಿತ್ತೀರ ಕೃತಮಂದಿರ ವೈಕುಂಠಾಗಾರ । ಕೋಟಿಮನ್ಮಥ ಚಂದ್ರ

ಭಾಸ್ಕರದ್ಯುತಿ ತಿರಸ್ಕಾರ ಶ್ರಿತಮೋಹನಕಾರ |ಕೂಟಸ್ಥ ಅಖಿಲಲೋಕಾಧಾರ ಸಂತತ ಪರಾತ್ಪರ ಮನೋಹರ ಕೈಟಭಮುಖಖಳಜಲಧರ, ಚಂಡಸಮೀರ ದೀನ ಜನಮಂದಾರ ||೧ ||

ಭಜಿಪಜನರ ಭಾಗ್ಯೋದಯಾ ಭಾಗವತಧ್ಯೇಯ ಶುಭಗುಣಗಣನಿಲಯ ವಿಜಯಸಾರಥಿ ವೀತಾಖಿಲಹೇಯ ವಿನಿರ್ಜಿತಮಾಯಾ ವಿಪ್ರಗೋಸುರಪ್ರಿಯ। ತ್ರಿಜಗದೀಶನ ಅಪ್ರಾಕೃತಕಾಯ ಕವಿಜನಗೇಯ ವೆಂಕಟಗಿರಿರಾಯಾ। ನಿಜಗುರು ಗೋಪಾಲವಿಠಲಯ್ಯ ನಮೋ ನಮೋ ಜೀಯ ಬೇಗ ಪಿಡಿ ಎನ್ನಕೈಯ ||೨ ||

ಕಮಾಚ್—ಏಕ

ವೆಂಕಟೇಶ ಪಾಲಿಸು ಕಿಂಕರನ ವೆಂಕಟೇಶ ||ಪ ||

ಸುವರ್ಣಮುಖರಿಲಿ ಶಿವನುತಪದಾಬ್ಜ ಸುವರ್ಣಗಿರಿ ವೆಂಕಟೇಶ। ನವ್ಯ ಚಂದನಮೃಗನಾಭಿಚರ್ಚಿತಗಾತ್ರ ಅವ್ಯಾಕೃತನೆ ವೆಂಕಟೇಶ ||೧ ||

— ಪ್ರಸನ್ನ ವೆಂಕಟೇಶದಾಸರು.

ಜಗನ್ನಾಥದಾಸರು ಈ ಕೆಳಗಿನ ಪದದಲ್ಲಿ ಶ್ರೀನಿವಾಸದೇವರು ಮಹಿಮೆದೋರಿ ಬೇರೆ ಬೇರೆ ಭಕ್ತರುಗಳ ಅಭೀಷ್ಟವನ್ನು ಕೊಟ್ಟುದನ್ನು ವರ್ಣಿಸುತ್ತಾರೆ.

ಶಂಕರಾಭರಣ—ಆದಿ

ಆ ವೆಂಕಟಗಿರಿ ನಿಲಯನಂಘ್ರಿ। ರಾಜೀವಯುಗಳಿಗಾನಮಿಸುವೆನು ||ಪ ||

ಸೇವಿಪಜನರಿಗಮರತರುವೆನಿಸಿ ಧ। ರಾವಲಯಾಖ್ಯ ದಿವಿಯೊಳೆಸೆವ ||ಅ ||

ಅವನಂಘ್ರಿ ಜಲ ಸಕಲಜಗತ್ತಿಗೆ ಪಾವನಕರವೆಂದೆನಿಸುವುದು। ಶ್ರೀವಿಧಿ ಭವ ಶಕ್ರಾದ್ಯಮರಾವನ ಸೇವಕಜನರೆಂದೆನಿಸುವರು। ದೇವೋತ್ತಮ ತಾನಾಗಿ ನಿಖಿಳ ಜಡ ಜೀವ ಭಿನ್ನಕರ್ಮವ ಮಾಳ್ಪ। ಸ್ಥಾವರಜಂಗಮದೊಳಗೆ ನಿಂತು ವೇದಾವಳಿಯಿಂದ ತುತಿಸಿಕೊಂಬ ||೧ ||

ಭೂಸುರನೋರ್ವನ ತೋಂಡಮಾನ ಧರಣೀಶನ ನಿಲಯದಿರಿಸಿ ಸತಿಯ। ಕಾಶಿಗೆ ಪೋಗಲು ನೃಪತಿಮರೆಯೆ ನಿಶ್ವಾಸವನ್ಯೈದಿದಳಾ ಸತಿಯು। ಆ ಸಮಯದಿ ದ್ವಿಜವರ್ಯನು ಬೆಸಗೊಳೆ ಕ್ಲೇಷದಿ ಭೂಮಿಪ ಸಂಸ್ತುತಿಸೆ। ಕೇಶವತಾನಸ್ಥಗಳ ತರಿಸಿ ಸುವಾಸಿನಿ ಶಿಶುಸಹ ವಲಿದಿತ್ತಾ ||೪ ||

ವಿಜಯದಾಸರ ವೆಂಕಟೇಶದೇವರ 'ಉದಯ ರಾಗ' ಬಹಳ ಸುಂದರವಾಗಿದೆ.

ಭಕ್ತಜನ ಸಂರಕ್ಷಣ ||ಪ ||

ಭಕ್ತಜನ ಸಂರಕ್ಷ ಭವದುರಿತ ಸಂಹಾರಿ। ಭಕ್ತರಾಸುರಧೇನು ತರುವೆ ಚಿಂತಾ ಮಣಿಯೋ। ಭಕ್ತರಾಧೀನನೆಂಬೋ ಬಿರುದು। ಅನುಕಾಲಪೊತ್ತ ತಿಮ್ಮಪ್ಪ ಏಳೋ ||

ಇದರಲ್ಲಿ 'ಉಪ್ಪವಡ'ದ ವೈಭವವೆಲ್ಲ ಬಹಳ ಚೆನ್ನಾಗಿ ಚಿತ್ರಿತವಾಗಿದೆ.ವಾದಿ

ರಾಜರು ವೆಂಕಟೇಶದೇವರ ದರ್ಶನಮಾಡಿದುದನ್ನು ಒಂದು ಸುಳಾದಿಯಲ್ಲಿ ಪೂರ್ತಿ ವರ್ಣಿಸಿದ್ದಾರೆ.

ಧ್ರುವತಾಳ

ಅರಳಿದ ಕೆಂದಾವರೆಯ ಇರವ ಧಿಕ್ಕರಿಸುವ । ಗಿರಿಯ ತಿಮ್ಮರಾಯನ ಚರಣಗಳ ಕಂಡೆನಾ । ಅರುಣತಳದಲ್ಲಿಪ್ಪ ಅಂಕುಶಧ್ವಜ ವಜ್ರಾದಿ । ಸುರಚಿರ ರೇಖೆಗಳ ಸೊಬಗನು ಕಂಡೆನಾ । ಕಿರುಗೆಜ್ಜೆ ಕಡಗ ಪೆಂಡೆಯದ ಪ್ರಭೆಯನು ಕಂಡೆನಾ ।

ಹೀಗೆ ಆಪಾದಮಸ್ತಕವನ್ನು ವರ್ಣಣೆ ಮಾಡಿರುತ್ತಾರೆ. ಪುರಂದರ ದಾಸರು ಶ್ರೀನಿವಾಸದೇವರು ಬೇಟೆಗೆ ಹೋದ ಕಥೆಯನ್ನು ಬಹಳ ಸುಂದರವಾಗಿ ವರ್ಣಿಸಿದ್ದಾರೆ.

ಕಾಂಬೋಧಿ–ಏಕ

ಡಂಗುರವತೀಡಿ ಮೈಯೊಳು ಗಂಧ ಪೂಸಿದ । ಸ್ವಾಮಿ । ಗಂಧ ಪೂಸಿದ ||೧ ||
ಪುನಗು ಜಿವ್ವಾಜಿ ಕೂಸ್ತುರಿ ಹಚ್ಚಿದ । ಸ್ವಾಮಿ । ಕಸ್ತೂರಿ ಹಚ್ಚಿದ ||೨ ||
ನೊಸಲ ಮೇಲೆ ಮೃಗನಾಭಿತಿಲಕ ಧರಿಸಿದ ! ಸ್ವಾಮಿ । ತಿಲಕಧರಿಸಿದ ||೩ ||
ಓರೆ ತುರುಬ ಓರೆ ಜಡೆಯ ಗೊಂಡೆಕಟ್ಟಿದ । ಸ್ವಾಮಿ । ಗೊಂಡೆಕಟ್ಟಿದ ||೪ ||
ದಿಟ್ಟವೆಂಕಟೇಶ ಬೇಟೆಯಾಡ ಹೊರಟನೇ । ಸ್ವಾಮಿ ಬೇಟೆಯಾಡ ಹೊರಟನೆ ೧೧
ಸ್ವಾಮಿ ವೆಂಕಟೇಶ ತಾನು ಬೇಟೆಯಾಡಿದ । ಸ್ವಾಮಿ । ಬೇಟೆಯಾಡಿದ ||೬೨ ||
ಅಪ್ಪ ವೆಂಕಟೇಶ ತಾನು ಒಪ್ಪದಿಂದಲೆ । ಸ್ವಾಮಿ । ಗಿರಿಗೆ ಬಂದನೆ ||೬೩ ||
ಶ್ರೀಶ ಪುರಂದರವಿಠಲನೆಂದು ಹಾಗೆ ನಿಂದನೆ । ಸ್ವಾಮಿ |ಹಾಗೆ ನಿಂದನೆ ||೬೪ ||

ಶ್ರೀನಿವಾಸದೇವರ ದರ್ಶನಮಾಡಿದುದನ್ನ ಪುರಂದರದಾಸರು ಹೃದಯಂಗಮ ವಾಗಿ ವರ್ಣಿಸುತ್ತಾರೆ.

ಮೋಹನ–ಆಟ

ನಿನ್ನದಿವ್ಯ ಮೂರುತಿಯ ಕಣ್ಣುದಣಿಯ
ನೋಡಿಧನ್ಯನಾದೆನೋ ಧರೆಯೊಳು ||ಪ ||
ಇನ್ನು ಈಭವಭಯಕೆ ಅಂಜಲೇತಕೋ । ಚನ್ನಗಿರಿವೆಂಕಟೇಶ । ಶ್ರೀಶ ||ಅ ||
ಏಸುಜನುಮ ಪುಣ್ಯ ಬಂದೊದಗಿತೋ । ಶ್ರೀಸ್ವಾಮಿ ಪುಷ್ಕರಣಿಯೊಳ್ ಸ್ನಾನಜಪತಪಮಾಡಿ ವರಹದೇವರ ನೋಡಿ ಶ್ರೀಸ್ವಾಮಿಮಹಾದ್ವಾರಕೆ । ಈ ಶರೀರವನು ಈಡಾಡಿ ಪ್ರದಕ್ಷಿಣೆಮಾಡಿ ಲೇಶದಿಂಪೊಗಳುತಲಿ । ಅಸುವರ್ಣಾದ ಗರುಡಗಂಭವನೆ ನೋಡಿ ಸಂತೋಷದಿಂ ಕೊಂಡಾಡಿದೆ । ಬಿಡದೆ ||೧ ||

(iii) ವಿಠ್ಠಲ

ವಿಠ್ಠಲಮೂರ್ತಿ ಕಟಿಯ ಮೇಲೆ ಕೈಯಿಟ್ಟಿದುದಕ್ಕೆ ಪುರಂದರದಾಸರು ನಾನಾ ಕಾರಣ ಗಳನ್ನು ಊಹಿಸುತ್ತಾರೆ.

ತೋಡಿ–ಝಾಪು

ಕಟಿಯಲ್ಲಿ ಕರವಿಟ್ಟನು ಜಗದೀಶನು ||ಪ ||

ರಾಜಸೂಯ ಯಾಗದಲ್ಲಿ ರಾಜೇಶ್ವರ ರಾಜರು ಮೊದಲಾದ ಸುರರೆಲ್ಲರು। ಭೋಜನವನ್ನೆ ಮಾಡಿದೆಂಜಲು ಮೊದಲಾದ್ದು ರಾಜೀವಾಕ್ಷನು ಎತ್ತಿದಾಯಾಸದಿಂದಲೋ ||೧ ||

ಧರುಣಿಯನು ತಂದ ದನುಜನ ಹಿರಣ್ಯಾಕನ ಕೋರೆ ದಾಡಿಯಿಂದ ಸೀಳಿದಿಂದಲೋ ಪಾರಿಜಮುಖಿ ಸರ್ವಕಾಲದಲಿ ನಿಂತು ಸೇರಿ ಸುರತ ಮಾಡಿದಾಸೆಯಿಂದಲೋ||೩ ||

ಮಮತೆಯಿಂದಲಿ ಭಕ್ತಜನರನು ನಿಮ್ಮ ಚರಣಕಮಲ ಯುಗವನು। ಮಮತೆಯಿಂದಿ ಬಂದು ಅಭಯಗಳನೆ ಕೊಟ್ಟು ಕಮಲನಾಭ ಶ್ರೀ ಪುರಂದರ ವಿಠಲ ||೫ ||

ವಿಜಯದಾಸರ ಉಪಾಸ್ಯ ಮೂರುತಿ 'ವಿಜಯ ವಿಠಲ' ದೇವರನ್ನು ಗುರುಗೋಪಾಲದಾಸರು ಭಾವಗಂಭೀರ ಶೈಲಿಯಲ್ಲಿ ಸ್ತೋತ್ರ ಮಾಡಿದ್ದಾರೆ.

ಮಧ್ಯಮಾವತಿ–ತ್ರಿಪುಟ

ವಿಜಯ ವಿಠ್ಠಲರೇಯ–ಅಸ್ಮದ್ಗುರೋರ್ಗುರು ವಿಜಯರಾಯರ
ಪ್ರೀಯಾ। ಶ್ರುತಿಶ್ರವಣವಂದ್ಯನೆ ಭಜನೆ ತಿಳಿಯದು ಜೀಯ–
ಒಲಿದೆನ್ನ ಪಾಲಿಸೋ ವಿಜಯಸಖಸುಖದಾಯ ನಿರ್ಧೂತಮಾಯಾ ||ಪ ||

ತ್ರಿಜಗಧೀಶ್ವರ ತ್ರಿಗುಣವಿರಹಿತ ವ್ರಜಜನಾರ್ತಿಹರ ಸತತ ಶ್ರೀವಧುಭುಜ ಕುಜಾಶ್ರಿತ ಕುಂಕುಮಾಂಕಿತ ನಿಜಪದಾಂಬುಜ ತೋರೋ ಮನದಲಿ ||ಪ ||

ಇಂದ್ರಭವಮುಖ ಅಮರತಾರಾನಿಕರದೊಳು। ಚಂದ್ರನಂತಿಹ ಧೀರ ಪುರುಷೋತ್ತಮನೆ ಖಚ। ರೇಂದ್ರಸ್ಕಂಧವಿಹಾರ ಮಮ ಸ್ವಾಮಿ ಸತತ ಫ। ಣೀಂದ್ರ ಶಯ್ಯಾಗಾರ ಸೌಂದರ್ಯಸಾರ। ಚಂದ್ರಮಂಡಲಮಧ್ಯವರ್ತಿಯೆ| ಚಂದ್ರ ಮಂಡಲನಿಭಶುಭಾನನ। ಚಂದ್ರಸೋದರಿರಮಣ ಯದುಕುಲಚಂದ್ರ ಗೋಪಾಂಗನೇರ ಹೃದಯ। ಚಂದ್ರಕಾಂತ ಮಣಿ ಸಮೂಹಕೆ ಚಂದ್ರ ಮುನಿಹೃತ್ಕು ಮುದ ಕೋರಕ। ಚಂದ್ರ ಚಕ್ರ ಗಧಾಬ್ಜಧರ ಶರಚ್ಚಂದ್ರಪಾಣಿ ಸುಜನಚಕೋರಕ ಚಂದ್ರಚಂದ್ರ ಕುಲಾಬ್ಧಿ ಚಂದ್ರನೆ ಚಂದ್ರ ವಿಸ್ಮರರಂತೆ ಪ್ರಭ ಅಜ। ಚಂದ್ರಶೇಖರ ನುತಚರಣನಖ ಚಂದ್ರಚಂದ್ರಿಕೆ ತೋರೋ ಮನದಲಿ ||೧ ||

ಜಗನ್ನಾಥದಾಸರು 'ರಂಗನೊಲಿದ ದಾಸರೆಂ'ದು ಪ್ರಸಿದ್ಧರು. ವಿಠಲನ ಮೇಲೆ ಅವರು ಅನೇಕ ಪದಗಳನ್ನು ರಚಿಸಿರುವರು. ಪಾಂಡುರಂಗ ವಿಲಾಸವೆಂಬ ಮುಕ್ತಕ ಪ್ರಬಂಧವನ್ನೇ ರಚಿಸಿದ್ದಾರೆ. ವಿಠಲನನ್ನು ಕಾಣುವ ಕುತೂಹಲ, ವಿಠ್ಠಲನ ದರ್ಶನವಾದ ಮೇಲೆ ಅವರ ಭಾವೋದ್ರೇಕ, ಅವರ ಪದಗಳಲ್ಲಿ ಸ್ಪಷ್ಟವಾಗಿ ಒಡಮೂಡಿವೆ.

ಮಧ್ಯಮಾವತಿ–ಆದಿ

ಎಂದು ಕಾಂಬೆನು ಪಾಂಡುರಂಗ ಮೂರುತಿಯ ।

ಇಂದು ಭಾಗನಿವಾಸ ನರರ ಸಾರಥಿಯ ||ಪ ||

ಅರುಣಾಬ್ಜೋಪಮಚಾರುಚರಣಾಂಗುಲಿನಖರತರುಣೇಂದುಛವಿ । ತಿರಸ್ಕರಿಸುವ ಪ್ರಖರ ಕಿರುಗೆಜ್ಜೆಖಡೆಯಾ ನೂಪುರಪೊಡೆಶಫರತೆರೆಜಂಘೆಜಾನುಭಾಸ್ವರ ರತ್ನಮುಕುರ

ಪೂರ್ವಿ–ಆದಿ

ಧನ್ಯನಾದೆ ವಿಠಲನ ಕಂಡು ||ಪ ||

ಧನ್ಯನಾದೆ ಕಾಮನ್ನಪಿತನ ಲಾವಣ್ಯಮೂರುತಿಯ ಕಣ್ಣಿಲಿಕಂಡು ||ಅ ||

ದೇವವರೇಣ್ಯ ಸದಾವಿನೋದಿ ವೃಂದಾವನ ಸಂಚರಿ ಸೋವನಕಂಡು ||೧ ||

ಮಾತುಳಾಂತಕ ವಿಧಾತಪಿತ ಜಗನ್ನಾಥ ವಿಠಲ ವಿಖ್ಯಾತನಕಂಡು ||೫ ||

ಕರಹಪ್ರಿಯ–ಆದಿ

ಕಂಡೆ ಪಂಢರಿರಾಯನಾ । ತನ್ನನು । ಕೊಂಡಾಡುವರ ಪ್ರಿಯನಾ ||ಪ ||

ಗೋಕುಲಪೋಷಕನಾ । ಮುನಿಪುಂಡಲೀಕ ಗೊಲಿದು ಬಂದನಾ । ಲೋಕ

ವಿಲಕ್ಷಣನಾ । ಶರಣರ ಶೋಕವಿನಾಶಕನಾ || ೩ ||

[IV] ಉಡುಪಿ ಕೃಷ್ಣ

ರಂಗಬಂದ ವೃಂದಾವನದಲಿ । ನಿಂದ ಕೊಳಲಿನ ಧ್ವನಿ ಬಹುಚೆಂದ || ಪ ||

ಮಧುರೆಯಿಂದಲಿ ಬಂದ ಮಾವನ್ನಕೊಂದ । ಕಡೆಗೋಲನೇಣ ಕೈಲಿ ಪಿಡಿದ ದ್ವಾರಕಾವಾಸ । ಹಡಗಿನಿಂದಲಿ ಬಂದ ಉಡುಪಿಲಿ ನೆಲೆಸುತ । ಬಿಡದೆ ಪೂಜೆಗೊಂಬ ಒಡೆಯ ಶ್ರೀಕೃಷ್ಣ || ೩ || —ವ್ಯಾಸರಾಯರು

ವ್ಯಾಸರಾಯರು ಉಡುಪಿ ಕೃಷ್ಣಗೆ ಮಾಡಿದ ಮೋಹಿನಿಯಲಂಕಾರವನ್ನು ವರ್ಣಿಸಿರುವುದು ಬಹಳ ಸುಂದರವಾಗಿದೆ.

ರೇಗುಪ್ತಿ–ಗದ್ಯ–ಅಟ

ಮರುಗ ಮೊಲ್ಲೆ ಮಲ್ಲಿಗೆ ಜಾಜಿ ಸಂಪಿಗೆ । ತುರುಬಿಲೊಪ್ಪುವ ಚಂಡಾರುತನ ಮಾಣಿಕದ । ಮರೆವ ಚಂದ್ರಸೂರಿಯ ಮುಡಿಯಲೊಪ್ಪೆ । ಕುರುಳು ಕೂದಲು ಬೈತಲೆ ಥಳಪುಗಳ । ಮೃಗನಾಭಿತಿಲಕ ನೊಸಲಲಿ ಹಚ್ಚಬಟ್ಟು । ಮದನ ಸಿಂಗಾಡಿ ಸೋಲಿಸುವ ಪರ್ಬುಗಳ ।

ನಿರುತ ಸೇವಿಪ ನಮ್ಮ ಗುರುಮಧ್ವಮುನಿಯ ಹೃದಯಕಮಲವಾಸವಾಗಿಪ್ಪ ಕೃಷ್ಣನ ಪದುಮ ಚರಣಕ್ಕೆ ನಮೋ ನಮೋ ಎಂಬೆನಾ ||

ನೀಲಾಂಬರಿ–ಅಟ

ಕಂಡೆನಾ ಉಡುಪಿಯ ಕೃಷ್ಣರಾಯನ್ನ ಭೂ

ಮಂಡಲದೊಳಗೆ ಉದ್ದಂಡ ಮೋಹಿಪನ || ಪ ||
ಉಂಗುರ ಉಡಿದಾರ ಉಡಿಗಂಟೆ ನಾ ಕಂಡೆ । ನಾನು । ರಂಗು ಮಾಣಿಕ್ಯದ ನವರತ್ನ ಮಾಲೆ ಕಂಡೆ । ಧಿಂಧಿಮಿಧಿಮಕೆಂದು ಕುಣಿವ ಕೃಷ್ಣನ್ನ ಕಂಡೆ । ನಾನು । ಪುರಂದರ ವಿಠಲನ್ನ ಪಾದಕಮಲವ ಕಂಡೆ || ೭ ||

ಅರಭಿ–ಝಂಪೆ

ಈ ಮುದ್ದು ಕೃಷ್ಣ ಕ್ಷಣದ ಸುಖವೇ ಸಾಕು ।
ಶ್ರೀಮಧ್ವಮನಿ ತಂದ ಉಡುಪೀಶನ || ಪ ||
ಚಲುವ ಚರಣದ್ವಂದ್ವ ಜಂಘೆಜಾನೂರು ಕಟಿವಳಿ ಪಂಕ್ತಿಜಠರ ವಕ್ಷಸ್ಕಂಬು ಕಂಧರದಿ । ನಳಿತೋಳು ಮುದ್ದುಮು ಖನಯನ ನಾಸಿಕ ಕರ್ಣಸುಳಿಗುರುಳು ಮಸ್ತಕದ ನಳಿನನಾಭನ ಸೊಬಗು || ೧ || – ವಾದಿರಾಜರು

ವಾದಿರಾಜರು ಉಡುಪಿ ಕೃಷ್ಣನನ್ನು ಅನೇಕ ಪದಗಳಲ್ಲಿ ಹಾಡಿರುವರು. ಕನಕದಾಸರೂ ಕೃಷ್ಣನ ಮೇಲೆ ಅನೇಕ ಪದಗಳನ್ನು ರಚಿಸಿದ್ದಾರೆ.

ಮುಖಾರಿ–ಝಂಪೆ

ಪೂರ್ವಜನ್ಮದಲಿ ನಾ ಮಾಡಿದ ಕರ್ಮದಿಂ
ಉರ್ವಿಯೊಳು ಜನಸಿದೆನೋ ಕೃಷ್ಣ || ಪ ||
ರಾಕೆಂದು ಮುಖಿ ದ್ರೌಪದಿಯ ಮಾನವನು ಕಾಯ್ದು ಆಕೆಗಕ್ಷಯವಿತ್ತೆ ಕೃಷ್ಣ ಪಿ ।
ನಾಕಿಯಸಖ ಉಡುಪಿ ಆದಿಕೇಶವರಾಯ ಸಾಕಾರ ಮೂರುತಿಯೇ ಕೃಷ್ಣ || ೩ ||

ಶ್ರೀರಾಗ–ತ್ರಿಪುಟ

ಎಂದು ಕಾಂಬೆನು ಎನ್ನಸಲಹುವ ತಂದೆ ಉಡುಪಿಯ ಜಾಣನ || ಪ ||
ಮಂದಹಾಸಪ್ರವೀಣನ ಇಂದಿರಾಭೂರಮಣನ || ಅ ||
ಕಡಲದಡದೊಳು ಎಸೆವ ರಂಗನ ಕಡೆಗೋಲ್ನೇಣ ಪಿಡಿದನ ಮೃಡ ಪುರಂದರೊಡೆಯನ ಈರಡಿಗಳಲ್ಲಿ ಶಿರವಿಡುವೆನಾ || ೧ ||
ದೇವಕಿಯ ಜಠರದಲಿ ಬಂದನ । ಆವಪಳ್ಳಿಲಿ ನಿಂದನಾ । ಮಾವ ಕಂಸಾಸುರನ ಕೊಂದನಾ । ಕಾವನ್ಯೆಯ್ಯ ಮುಕುಂದನ || ೨ ||
ಪೂರ್ಣಪ್ರಜ್ಞರಿಗೊಲಿದು ದ್ವಾರಕೆಮಣ್ಣಿನೊಳುಪ್ರಕಟಿಸಿದನ । ಭವಾರ್ಣವಕ್ಕೆ ಪ್ಲವನಾದನ ಪ್ರಸನ್ನ ವೆಂಕಟಕೃಷ್ಣನ || ೩ || – ಪ್ರಸನ್ನ ವೆಂಕಟೇಶದಾಸರು.

[V] ಹರಿಹರ

ಈ ಕ್ಷೇತ್ರ ಮೂರ್ತಿಗಳಲ್ಲದೆ ಶ್ರೀರಂಗ, ಶ್ರೀರಂಗಪಟ್ಟಣ, ಬೇಲೂರು, ಶ್ರೀಮುಷ್ಣ ಮೊದಲಾದ ಕ್ಷೇತ್ರಮೂರ್ತಿಗಳನ್ನು ದಾಸರುಗಳು ಹಾಡಿದ್ದಾರೆ. ಕನಕದಾಸರು ಮಾಡಿರುವ 'ಹರಿಹರ' ಸ್ತುತಿಯು ಸ್ವಾರಸ್ಯವಾಗಿದೆ.

ಕಾಂಬೋಧಿ—ಝಂಪೆ

ಆರು ಬಲ್ಲರು ಹರಿಹರಾದಿಗಳ ಮಹಿಮೆಯನು
ವಾರಿಜೋದ್ಭವ—ಸುರೇಂದ್ರಾದಿಗಳಿಗಳವಲ್ಲ || ಪ ||

ಭೋಗಿಶಯನನು ಆಗಿಭೋಗಿ ಭೂಷಣನಾಗಿ । ವಾಗೀಶನಾಗಿ ಸೃಷ್ಟಿಸ್ಥಿತಿ ಲಯ । ಕ್ಕಾಗು ಕಾರಣಕಾರ್ಯ ಕರ್ಮಾದಿರೂಪಕ್ಕೆ । ಕಾಗಿನೆಲೆಯಾದಿಕೇಶವನ ಮಹಿಮೆಯನು || ೩ ||

ಮೇಲಿನ ಪದದಲ್ಲಿ ಹರಿ, ಹರ, ಬ್ರಹ್ಮ—ಈ ಮೂವರ ಐಕ್ಯ ಹೇಳಿದಂತೆ ತೋರುವುದು. ಸಾಮಾನ್ಯವಾಗಿ ಹರಿಹರರಿಗೆ ಅಭೇದವುಂಟೆಂದು ತಿಳಿಸಲೇ 'ಹರಿಹರ' ಮೂರ್ತಿಯ ಪ್ರಸಿದ್ಧಿಯುಂಟಾಗಿದೆಯೆಂದು ಕೆಲವರ ವಾದ. ಇದು ಸರಿಯಲ್ಲ, ಗುಹನೆಂಬ ಅಸುರ ಹರಿ, ಹರ, ಇವರಿಬ್ಬರಿಂದಲೂ ಮರಣ ಕೂಡದೆಂದು ಕೇಳಿಕೊಂಡಿದ್ದರಿಂದ ಅವನ ಸಂಹಾರಾರ್ಥವಾಗಿ ಹರಿಯು ಹರಿಹರರ ರೂಪವನ್ನು ಧರಿಸಿದನು. ನರಸಿಂಹ ರೂಪದಂತೆ ಇದೊಂದು ಹರಿಯ ವಿಚಿತ್ರರೂಪವೇ ಹೊರತು, ಹರಿಹರರಿಬ್ಬರ ಐಕ್ಯವಲ್ಲ, ಸೃಷ್ಟಿ ಸ್ಥಿತಿ,ಲಯ ಈ ಮೂರನ್ನು ಬ್ರಹ್ಮ, ರುದ್ರರುಗಳಲ್ಲಿ ನಿಂತು ಹರಿಯೇ ನಡೆಸುತ್ತಾನೆ. ಅದಕ್ಕೇ ಕನಕದಾಸರು 'ಹರಿಹರ'ನ ಸ್ತೋತ್ರಮಾಡುವಾಗ ತ್ರಿಮೂರ್ತಿಗಳನ್ನೂ ವರ್ಣನೆ ಮಾಡಿರುವರು. ಹರಿಹರರ ಐಕ್ಯ ಕನಕದಾಸರಿಗೆ ಅಭಿಪ್ರೇತವಾಗಿದ್ದಲ್ಲಿ 'ಹರಿಯ ನಿಂದಿಸಿ ಹರ ಘನನೆಂದು ನರಕಕ್ಕೆ ಬಿಳಬಾರದು' ಎಂದು ಅವರೇ ಮತ್ತೊಂದು ಪದದಲ್ಲಿ ಹೇಳುತ್ತಿರಲಿಲ್ಲ. ಈ ವಿಷಯದಲ್ಲಿ ಜಗನ್ನಾಥದಾಸರ ಪದವು ಸ್ಪಷ್ಟವಾಗಿದೆ.

ಶಂಕರಾಭರಣ—ಆಟ

ಮುರಪುರ ಹರಿ ಪಾಹಿ |ಮುರಪುರಹರ |ಮುರಪುರಹರ ಲಕ್ಷ್ಮಿಗಿರಿಜಾರಮಣ |
ಪರತರ ಶಿವ ಇಂದ್ರಾವರಜಾ । ಅಹಾ || ಪ ||
ಅರಿಶೂಲಧರಾಭಯಕರ ಚತುಷ್ಟಯ ಗಂಗಾ
ಗಿರಿಚಂದ್ರಾಧರ ಪಾಲಿಪುದೆಮ್ಮ || ಅ ||

ಜನನಾದಿದೋಷ ವಿದೂರ । ಗೋವರ್ಧನಧರ ನವನಿತಚೋರ । ಅನಿಮಿಷಾದಿ ಚೇತನಾಚೇತನಗಳೊಳು । ಪ್ರನಿವಿಷ್ಠನಾಗಿ ಸದ್ಗುಣರೂಪ ಕ್ರಿಯೆಗಳ । ನನುಸರಿಸಿ ಕ್ರೀಡಿಸುವ ಮಹಾಮಹಿಮನೆ ಮೃಡನಾರೂಪವ ಧರಿಸಿ ಗುಹ । ದನುಜನುದರವ ಬಗೆದು ಭೂಸಜ್ಜನರಿಗಭಯವನಿತ್ತು ಪೊರೆದೇ || ೨ ||

[VI] ಮೂಲರಾಮ.

ದಾಸರುಗಳೆಲ್ಲ ಮಧ್ವಮತಾನುಯಾಯಿಗಳಾದ್ದರಿಂದ ಅವರಲ್ಲಿ ಬೇರೆ ಬೇರೆ ಯವರು ಬೇರೆ ಬೇರೆ ಮಠದ ಶಿಷ್ಯರು. ಆದ್ದರಿಂದ ಆಯಾದಾಸರುಗಳು ಬೇರೆಬೇರೆ

ಮಠದ ಗುರುಗಳನ್ನು ಆಯಾ ಮಠದಲ್ಲಿನ ಪ್ರತಿಮೆಗಳನ್ನು ವರ್ಣಿಸಿದ್ದಾರೆ. ಅದರಲ್ಲೆಲ್ಲ ರಾಘವೇಂದ್ರಸ್ವಾಮಿಗಳ ಮಠದಲ್ಲಿನ ಮೂಲರಾಮದೇವರನ್ನು ಎಲ್ಲ ದಾಸರೂ ವರ್ಣಿಸಿದ್ದಾರೆ. ಚತುರ್ಮುಖ ಬ್ರಹ್ಮದೇವರು ಆರಾಧಿಸಿದ ಮೂಲರಾಮ ಪ್ರತಿಮೆಯು ಕಳಿಂಗದೇಶದ ಗಜಪತಿಭಂಡಾರದಲ್ಲಿದ್ದು ಆಚಾರ್ಯರ ಆಜ್ಞೆಯಂತೆ ನರಹರಿ ತೀರ್ಥರು ಅವುಗಳನ್ನು ತಂದುಕೊಟ್ಟರು. ಆಚಾರ್ಯರು ಆ ಪ್ರತಿಮೆಗಳನ್ನು ಪೂಜಿಸಿದ ತಮ್ಮ ಶಿಷ್ಯರಾದ ಪದ್ಮನಾಭ ತೀರ್ಥರಿಗೆ ಕೊಟ್ಟರು. ಇದು ಪರಂಪರೆಯಿಂದ ಬಂದ ಕ್ರಮವನ್ನು ಪುರಂದರಾದಿದಾಸರು ವರ್ಣನೆ ಮಾಡಿದ್ದಾರೆ.

ಮಲಹಾರಿ—ಝಂಪೆ

ನರಹರಿತೀರ್ಥ ಮಹಿಮೆ ಕೇಳಿರೋ । ನರದೇಹವನ್ನು ಸಾರ್ಥಕ ಮಾಡಿರೋ ಪ

ಕಾರ್ಯಸ್ಥ ಬ್ರಹ್ಮಮಾಡಿಸಿ ಪೂಜಿಸಿಕೊಡಲು । ಆರ್ಯಜಾಬಾಲಿ ಮುನಿಗ ಪ್ರಸನ್ನನಾಗಿ । ಭಾರ್ಯಸಹಿತ ಶರ್ವಪೂಜಿಸಿ ಸೌಭರಿಗೆ ಕೊಡಲು । ಸೂರ್ಯವಂಶಕೆ ರಾಮಸೀತೆಬರಲು || ೧ ||

ಗುರುಪದ್ಮನಾಭ ರಾಜ್ಯದಲ್ಲಿಂದ ಒಂಬತ್ತು । ವರುಷ ಮ್ಯಾಲೈವತ್ತು ಮೂರು ದಿನವು । ಧರಣಿ ಜಯ ಮೂಲರಾಮನಂಘ್ರಿಯ ಭಜಿಸಿ । ಪುರಂದರ ವಿಠಲನ ಪ್ರೀತಿ ಪಡೆದ || ೨ || — ಪುರಂದರದಾಸರು

ಮಧ್ವವಲ್ಲಭ ಜೀಯ ಸದ್ವೈಷ್ಣವರ ಪ್ರಿಯಾ ।
ಅದ್ವೈತಮಹಿಮ ಜಗದ್ವಿಲಕ್ಷಣರಾಮ ।
ನರಹರಿತೀರ್ಥಗೆ ಒಲಿದ ವಿಜಯವಿಠಲ ।
ಸ್ಮರಿಸಿದವರ ಕಾವ ನಿತ್ಯ ರಘುರಾಮ । — ವಿಜಯದಾಸರು.

ವಿಜಯದಾಸರು ಮೇಲಿನ ಸುಳಾದಿಯಲ್ಲಿ ರಾಮದೇವರನ್ನು ಚತುರ್ಯುಗಗಳಲ್ಲಿ ಯಾರಾರು ಪೂಜಿಸಿದರೆಂಬುದನ್ನು ವಿವರವಾಗಿ ತಿಳಿಸುತ್ತಾರೆ. ಪುರಂದರದಾಸರು, ವ್ಯಾಸರಾಯರ ಸಮಕಾಲಿಕರಾದ, ಅವರಿಂದ ವಿಜಯೀಂದ್ರತೀರ್ಥರನ್ನು ಪಡೆದ ಸುರೇಂದ್ರ ತೀರ್ಥರು ಮೂಲರಾಮ ದೇವರ ದರ್ಶನಮಾಡಿಸಿದ ಬಗೆಯನ್ನು ಈ ಕೆಳಗಿನ ಪದದಲ್ಲಿ ವರ್ಣಿಸಿದ್ದಾರೆ.

ಬಿಲಹರಿ—ರೂಪಕ

ಇಂದಿನದಿನ ಸುದಿನವಾಯಿತು || ಪ ||
ಇಂದಿರೇಶ ಮೂಲರಾಮಚಂದ್ರನ ಪದಕಮಲ ಕಂಡು || ಅ.ಪ ||
ಈತನ ಪದಕಮಲಗಳ ವಿ । ಧಾತ ತನ್ನ ಸದನದೊಳಗೆ ।
ಸೀತೆಯ ಸಹ ಪೂಜಿಸಿ । ಇಕ್ಷ್ವಾಕು ನೃಪತಿಗಿತ್ತನು ।
ಆತನನ್ವಯ ನೃಪತಿಗಳು ಸು । ಪ್ರೀತಿಯಿಂದ ಪೂಜಿಸಿ ರಘು ।

ನಾಥ ವೇದಗರ್ಭಗಿತ್ತ । ಮೂರ್ತಿಯ ಪದಕಮಲ ಕಂಡು ॥ ೧ ॥
ಗಪಜತಿ ಭಂಡಾರದಲ್ಲಿ । ಅಜಕರಕಮಲಾರ್ಚಿತ ಭೂ ।
ಮಿಜೆ ಸಹಿತ ರಾಮನಿರಲು । ನಿಜ ಜ್ಞಾನದಿ ತಿಳಿದು ಬೇಗ ।
ದ್ವಿಜರ ಗುರುಗಳೆನಿಸುವ । ಸುಜನವಂದ್ಯ ನರಹರಿ ಮುನಿ ।
ರಜನಿಯಲ್ಲಿ ತಂದ ಸುಲೋಹಜ ಪ್ರತಿಮೆಯನ್ನು ಕಂಡು ॥ ೨ ॥
ಅಂದವುಳ್ಳ ಮೂಲರಾಮ । ಚಂದ್ರನ ಅತಿ ಭಕುತಿಯಿಂದ ।
ವೃಂದಾರಕ ವಂದ್ಯ ಪವನ । ನಂದನ ಗುರು ಶ್ರೀ ಮದಾ ।
ನಂದ ತೀರ್ಥರರ್ಚಿಸಿ ದಯ । ದಿಂದ ನಿಜಾನ್ವಯದೊಳಿಟ್ಟ ಪು ।
ರಂದರ ವಿಠ್ಠಲನ ಸು । ರೇಂದ್ರ ಮುನಿಯು ತಂದು ತೋರಲು ॥ ೩ ॥

ಈ ಪದವು ಈಗ ಅಚ್ಚಾಗಿರುವ ಪುಸ್ತಕಗಳಲ್ಲಿ ಕಂಡು ಬರುವುದಿಲ್ಲ. ಈಗ ಶೋಧಿಸಿದ ಹಳೆಯ ಹಸ್ತಪ್ರತಿಯೊಂದರಲ್ಲಿ ಇದು ಕಂಡುಬರುವುದು.* ಈ ಪದದ ಶೈಲಿ, ವಿಷಯ ಮತ್ತು ಕಾಲಗಳ ವಿಚಾರಮಾಡಿದಲ್ಲಿ ಇದು ಪುರಂದರದಾಸರದೇ ಎನ್ನುವುದರಲ್ಲಿ ಏನೂ ಅಭ್ಯಂತರವಿಲ್ಲ. ಈ ಕೆಳಗಿನ ಪದವು ವಿವಾದಕ್ಕಾಸ್ಪದವಾಗಿರುವುದು. ಇದು ಉಡುಪಿ ಪ್ರತಿಯಲ್ಲಿ ಪ್ರಕಟವಾಗಿರುವುದು.

ಕಾಂಬೋಧಿ–ಝಂಪೆ

ಮಧ್ವರಾಯರ ದೇವತಾರ್ಚನೆಯ । ಪ್ರ ॥ ಪ ॥
ಸಿದ್ಧ ರಘುನಾಥರು ಪೂಜಿಸುವ ಸೊಬಗಿನ (ನೋಡಿ) ॥ ಅ.ಪ ॥
ಮೂಲರಘುಪತಿ ಒಂದು । ಮುದ್ದು ಜಾನಕಿ ಒಂದು ।
ಲೀಲೆ ದಿಗ್ವಿಜಯರಾಮಮೂರ್ತಿ ಒಂದು
ಸಾಲಿಗ್ರಾಮ ಹಯಗ್ರಿವ । ಮೊದಲಾದವು ನಾಲ್ಕು ।
ಚೆಲವು ಸುದರ್ಶನಗಳೆರಡು । ಚಕ್ರಾಂಕಿತಗಳೈದು ॥ ೧ ॥
ಅಭಿಷೇಕ ಶಂಖ ಒಂದು ಅಕ್ಷಯ ಪಾತ್ರೆಯು ಒಂದು।
ಶುಭನಿಧಿಯ ಬಲುಮುರಿ ಶಂಖ ಒಂದು ।
ಉಭಯ ಪಶ್ಚಿಮಧೇನು ಒಂದು (ಎರಡು) ಉತ್ತಮವಾದ ಮುದ್ರೆ
ಒಂದು । ಚಕ್ರಾಂಕಿತಗಳೆರಡು ಬಾಣವೆರಡು ॥ ೨ ॥

---

* ಈ ಪದವನ್ನು ಡಾ. ಹೆಚ್.ಕೆ. ವೇದವ್ಯಾಸಾಚಾರ್ಯರು ಶೋಧಿಸಿ ಸಂಪಾದಿಸಿದ ಮೇಲೆ ಲಿಂಗಸೂಗೂರಿನ ಶ್ರೀ ವರದೇಂದ್ರ ಸಾಹಿತ್ಯಮಂಡಲದ ಅಧಿಕಾರಿಗಳಾದ ಶ್ರೀಗೋರೇಬಾಳ ಹನುಮಂತರಾಯರು ಮತ್ತು ಬೇರೆ ಒಬ್ಬಿಬ್ಬರು ತಮ್ಮಲ್ಲಿಯೂ ಪ್ರಾಚೀನವಾದ ಪ್ರತಿಗಳಲ್ಲಿ ಈ ಪದವಿರುವುದಾಗಿ ತಿಳಿಸಿದ್ದಾರೆ. — ಪ್ರಕಾಶಕ

ವೇದವ್ಯಾಸ ಮೂರ್ತಿನಾಲ್ಕು ಕ್ಷೀರದಿಲೋಲ್ಯಾಡುವ
ಕೂರ್ಮ ಒಂದು ಸ್ಮರಿಸಿ ಇಪ್ಪತ್ತೆಂಟು ಮೂರ್ತಿಗಳನು
ಪೂರಂದರ ವಿಠಲನ ಪೂರ್ಣ ಭಕ್ತರೆಂಬ
ಈ ರಘುನಾಥತೀರ್ಥರು (ರ ಪೂಜೆಯ ಸೊಬಗಾ)
ಎಷ್ಟು ಪುಣ್ಯವಂತರೋ || ೩ ||

ಈ ಪದದಲ್ಲಿ ಉತ್ತರಾದಿಮಠದ ಸ್ವಾಮಿಗಳಾದ ರಘುನಾಥತೀರ್ಥರು ಮೂಲರಾಮದೇವರನ್ನು ಪೂಜಿಸಿದ್ದುದಾಗಿ ವರ್ಣನೆ ಇದೆ. ಪುರಂದರದಾಸರ ಈ ಎರಡು ಪದಗಳಲ್ಲಿ ಪರಸ್ಪರ ವಿರೋಧಾಭಿಪ್ರಾಯಗಳು ಕಂಡು ಬಂದಿರುವುದರಿಂದ ಇವೆರಡರಲ್ಲಿ ಯಾವುದಾದರೊಂದು ನಿಜವಿದ್ದು ಇನ್ನೊಂದು ಪ್ರಕ್ಷಿಪ್ತವಾಗಿರಬೇಕು. ಮೊದಲ ಪದದಲ್ಲಿ ಶೈಲಿ, ಪ್ರಾಸಾದಿಗಳೆಲ್ಲ ಶುದ್ಧವಾಗಿದೆ. ವಿಷಯ ಐತಿಹಾಸಿಕವಾಗಿದೆ. ವ್ಯಾಸರಾಯರ ಸಮಕಾಲೀನರೂ ಅವರ ಒಡನಾಡಿಯವರೂ ಸುರೇಂದ್ರ ತೀರ್ಥರಾದ್ದರಿಂದ ಪುರಂದರದಾಸರ ಕಾಲಕ್ಕೂ ಅವರ ಕಾಲಕ್ಕೂ ಹೊಂದಿಕೆಯಾಗುವುದು. ಆದರೆ ಎರಡನೆಯ ಪದದಲ್ಲಿ ಕೆಲವು ದೋಷಗಳಿರುವುವು, ಇದರಿಂದ ಈ ಪದವು ಕೃತಕವೆಂದು ನಿರ್ಣಯ ಮಾಡಬೇಕಾಗುವುದು.

1. ಈ ಪದದಲ್ಲಿ ಕಡೆಯ ನುಡಿಯಲ್ಲಿ ಎರಡನೇ ಅಕ್ಷರದ ಪ್ರಾಸವಿಲ್ಲ.
2. ಇಪ್ಪತ್ತೆಂಟು ಮೂರ್ತಿಗಳನ್ನೂ ಸ್ಮರಿಸಿ ಎಂದು ಹೇಳಿರುವ ಈಪದದಲ್ಲಿ ಇಪ್ಪತ್ತೇಳು ಪದಾರ್ಥಗಳಾಗುವುವು.
3. ಇಪ್ಪತ್ತೆಂಟು ಮೂರ್ತಿಗಳ ಲೆಕ್ಕದಲ್ಲಿ ಮೂರ್ತಿಗಳಲ್ಲದ ಅಭಿಷೇಕ ಶಂಖ ಅಕ್ಷಯ ಪಾತ್ರ, ಮುದ್ರೆ, ಬಾಣ, ಇವು ಸೇರುವುದು ಉಚಿತವಲ್ಲ.
4. ಬಾಣ ಮೊದಲಾದ ಪದಾರ್ಥಗಳನ್ನು ಸೇರಿಸುವುದರ ಜೊತೆಗೆ, ಉತ್ತರಾದಿ ಮಠದಲ್ಲಿರುವ ಆಚಾರ್ಯರ ಕಾಲದಿಂದಲೂ ಬಂದ 'ವಂಶರಾಮ' ಮತ್ತು 'ವಿಠ್ಠಲ'ರ ಗಣನೆಯೇ ಈ ಪಟ್ಟಿಯಲ್ಲಿಲ್ಲದಿರುವುದು ದೊಡ್ಡದೋಷ.
5. ರಘುನಾಥ ತೀರ್ಥರ ಕಾಲ ಪುರಂದರದಾಸರ ಕಾಲಗಳು ಹೊಂದುವುದಿಲ್ಲ.
   (ಅ) ಸತ್ಯಥಾ ಪ್ರಕಾರ ರಘುನಾಥತೀರ್ಥರ ಕಾಲ 1444–1502 A.D.
   (ಆ) 'Mystic Teachings of the Haridasas of Karnatak' ಎಂಬ ಪುಸ್ತಕದ ಪ್ರಕಾರ 1486–1556 A.D.
   (ಇ) ವ್ಯಾಸರಾಯರ ಕಾಲ ವ್ಯಾಸಯೋಗಿ ಚರಿತೆಯ ಮುನ್ನುಡಿಯ ಪ್ರಕಾರ 1446–1539 A.D.
   (ಈ) ಪುರಂದರದಾಸರಿಗೆ ರಘುನಾಥತೀರ್ಥರು ಕಾಲವಾಗುವಾಗ ಕೇವಲ 16 ವರುಷ. ಆದರೆ ಅವರಿಗೆ ನಾಲ್ವರು ಮಕ್ಕಳಾಗಿ ಅವರೆಲ್ಲ ದೊಡ್ಡವ

ರಾದ ಮೇಲೆ ಹೆಂಡಿರು ಮಕ್ಕಳು ಸಹಿತ ಸುಮಾರು ತಮ್ಮ ನಲವತ್ತನೆಯ ವಯಸ್ಸಿನಲ್ಲಿ ಅಂದರೆ 1525ರ ಸುಮಾರಿಗೆ ವ್ಯಾಸರಾಯರ ಭೇಟಿ ಮಾಡಿ ಆಮೇಲೆ ದಾಸರಾದರು. ಆದ್ದರಿಂದ ಪುರಂದರದಾಸರು ದಾಸರಾದ ಮೇಲೆ ರಘುನಾಥತೀರ್ಥರು ಬದುಕಿರಲಿಲ್ಲ. ಈ ಕಾರಣಗಳಿಂದ ಮೇಲಿನ ಪದವು ಕೃತಕವೆಂದೇರ್ಪಡುವುದು. ಗುರುಗೋಪಾಲದಾಸರೂ, ಜಗನ್ನಾಥ ದಾಸರೂ ಮೂಲರಾಮನನ್ನು ಸ್ತೋತ್ರ ಮಾಡಿರುತ್ತಾರೆ.

ಭೈರವಿ—ಆದಿ.

ರಾಮನ ನೋಡಿರೈ ರಘುಜಲಲಾಮನ ಪಾಡಿರೈ || ಪ ||
ಶ್ರೀಮನೋಹರ ಅಜವ್ಯೋಮೌಳಕ ಸುರ। ಸ್ತೋಮಾ । ನುತಗುಣಧಾಮಾ| ಅ |
ಗುರುಮುಖವಿಘ್ನಾಚರಿಸಿದ ಖಳರ । ಶಿಕ್ಷಿಸಿದ ಕ್ರತು ರಕ್ಷಿಸಿದ
ಗುರುವರದೇಂದ್ರರ ಕರಕಮಲಾರ್ಚಿತ ಚರಣಾ । ಮಾರುತಿ ಶರಣಾ
ಗುರುಕರುಣದಿ ತನ್ನನು ನಂಬಲು ಅಘಕಡಿವಾ । ರಿಪುಗಳ ಕಡಿವಾ
ಗುರುಗೋಪಾಲವಿಠಲರಾಮಾ ನಮ್ಮನು ಕಾವಾ । ಅತಿಮುದವೀವಾ || ೩ ||
— ಗುರುಗೋಪಾಲದಾಸರು.

ಭೈರವಿ—ಆದಿ.

ರಾಮನ ನೋಡಿರೈ ನಿಮ್ಮಯ ಕಾಮಿತ ಬೇಡಿರೈ ।
ತಾಮರಸಖಸುವಂಶಾಬ್ಧಿ ತಾಮರಸಖಸುವಂಶಾಬ್ಧಿಶರತ್ಸೋಮಾ ಕಮಲಾಧಾಮಾ
ಅಲವಬೋಧಮುನಿ ಅತಿಮೋದದಲಿರ್ಚಿಸಿದ ಸೆಲೆ ಮೆಚ್ಚಿಸಿದ । ಇಳೆಯೊಳು ಬಹುಯತಿಗಳಕರ ಪೂಜಿತನಾದ । ಲೀಲವಿನೋದ । ಬಲುನಂಬಿದ ಭಕುತರ ಕಲಿಮಲಗಳ ಕಳೆದ । ಮನದೊಳು ಪೊಳೆದ । ಸುಲಲಿತಗುಣನಿಧಿ ವಸುಧೇಂದ್ರಾರ್ಯರಪ್ರಿಯಾ । ಕವಿಜನಗೇಯಾ || ೨ || — ಜಗನ್ನಾಥದಾಸರು.

ಹೀಗೆ ಎಲ್ಲ ದಾಸರುಗಳಿಂದಲೂ ಸ್ತುತಿಸಲ್ಪಟ್ಟ ಮೂಲರಾಮ ವಿಗ್ರಹವು ಅತಿ ಮಹಿಮೆಯುಳ್ಳದ್ದು. ಶ್ರೀರಂಗದ ಉತ್ಸವ ವಿಗ್ರಹದಷ್ಟೇ ಇದೂ ಮಹಿಮೋಪೇತವಾದುದು.

4. ಕೃಷ್ಣಾವತಾರ ಮಹಿಮೆ.

ಕೃಷ್ಣಾವತಾರವು ಭಗವಂತನ ಇತರ ಅವತಾರಗಳಲ್ಲೊಂದಾಗಿದ್ದರೂ, ಇದು ಅತ್ಯಂತ ವಿಸ್ತೃತವಾದ್ದರಿಂದಲೂ, ನಾನಾ ಮುಖಗಳಲ್ಲಿ ಇದು ಬೆಳೆದು ಬಂದುದರಿಂದಲೂ ಇದೊಂದು ಪ್ರತ್ಯೇಕ ವಿಭಾಗವೇ ಎನ್ನಬಹುದು. ಕೃಷ್ಣನ ಬಾಲಲೀಲೆ, ಗೋಪಿಕಾಸ್ತ್ರೀಯರೊಂದಿಗಿನ ಶೃಂಗಾರಭಾವ, ಯೋಗೀಶ್ವರ ಕೃಷ್ಣನ

ನಡೆನುಡಿಗಳು, ಹೀಗೆ ಕೃಷ್ಣಾವತಾರ ಕಥೆಯಲ್ಲಿ ಅನೇಕ ಮುಖಗಳಿವೆ.

ಹರಿಯ ಅವತಾರಗಳಲ್ಲಿ ಯಾವ ಭೇದವಿಲ್ಲದಿದ್ದರೂ, ಈ ಕಲಿಯುಗಕ್ಕೆ ಕೃಷ್ಣಾವತಾರದ ಮಹಿಮೆ ಹೆಚ್ಚು. "ಕಲೌ ಕೃಷ್ಣಃ ಪ್ರಶಸ್ಯತೇ" ಎಂಬುದು ಶಾಸ್ತ್ರವಚನ. ಧರ್ಮಗ್ಲಾನಿಯಾಗುವಾಗಲೆಲ್ಲ ಅವತಾರ ಮಾಡಿ ಧರ್ಮೋದ್ಧಾರಮಾಡುನೆಂದು ಭಗವಂತ ಹೇಳಿದ್ದರೂ, ಧರ್ಮಗ್ಲಾನಿ ವಿಶೇಷವಾಗಿ ನಡೆಯುತ್ತಿರುವ ಈ ಕಲಿಯುಗದಲ್ಲೇ ಭಗವದವತಾರವಿಲ್ಲ. ಅಯೋಗ್ಯರಲ್ಲಿ ಧರ್ಮವು ಅನ್ಯಾಕ್ರಾಂತ ವಾಗುತ್ತಿದ್ದುದನ್ನು ತಪ್ಪಿಸಲು ಕಲಿಯುಗಾರಂಭದಲ್ಲಿ ಬೌದ್ಧಾವತಾರವಾಯಿತು. ಮೋಹಕವಾದ ವ್ಯಾಪಾರಗಳೇ ಈ ಅವತಾರದಲ್ಲಿ ಕಾಣುವುವು. ಈ ಇಪ್ಪತ್ತೆಂಟನೆಯ ಕಲಿಯುಗದ ಹಿಂದಿನ ದ್ವಾಪರಯುಗದಲ್ಲೇ ಕೃಷ್ಣಾವತಾರವಾದುದು. ಅಂತೆಯೇ ಈ ಕಲಿಯುಗಕ್ಕೆ ಆ ಕೃಷ್ಣನೇ ಯುಗದೇವತೆ. ಕಲಿಯುಗದಲ್ಲಿ ಪಾಮರರ ಉದ್ಧಾರಾರ್ಥವಾಗಿ ವೈಕುಂಠದಿಂದ ತಿರುಪತಿಯಲ್ಲಿ ಬಂದು ನಿಂತ ಪದ್ಮಾವತಿಯೊಡನೆ ವಿವಾಹಮಾಡಿಕೊಂಡ ಶ್ರೀನಿವಾಸ ತಾನು ಕೃಷ್ಣನೆಂದೇ ಹೇಳಿಕೊಂಡ. ಆಚಾರ್ಯರೂ ಕೃಷ್ಣನನ್ನು ಉಡುಪಿಯಲ್ಲಿ ಪ್ರತಿಷ್ಠಿಸಿದರು. ಆಚಾರ್ಯರ ಪ್ರತಿನಿಧಿಗಳಂತೆ ಇದ್ದ ಚಂದ್ರಿಕಾಚಾರ್ಯರು ಮತ್ತು ರಾಯರು ಕೃಷ್ಣಾರಾಧನೆ ಮಾಡಿದರು. ಆದ್ದರಿಂದ ಕೃಷ್ಣ ಎಲ್ಲರಿಗೂ ಇಷ್ಟದೈವ, ಭಗವಂತನ ಇತರ ಅವತಾರಗಳ ಜಯಂತ್ಯುತ್ಸವಕ್ಕಿಲ್ಲದ ನಿಯವ ಕೃಷ್ಣಜಯಂತಿಗೆ ಉಂಟು. ಅದನ್ನು ವ್ರತವಾಗಿ ಆಚರಿಸುವ ರೂಢಿ ಇದೆ. ಹರಿತತ್ತ್ವಪ್ರಚಾರಕ್ಕಾಗಿ ರಚಿತವಾದ ಭಾಗವತಪುರಾಣದಲ್ಲಿ ಕೃಷ್ಣನ ಮಹಿಮೆಗೆ ಹೆಚ್ಚು ಪ್ರಾಶಸ್ತ್ಯ. ಈ ಕಾರಣಗಳಿಂದ ಕನ್ನಡ ದಾಸರುಗಳು ಕೃಷ್ಣನ ಮಹಿಮಾವರ್ಣನೆಗೆ ಹೆಚ್ಚು ಗಮನ ಕೊಟ್ಟಿರುತ್ತಾರೆ. ಕನ್ನಡದೇಶದಲ್ಲಷ್ಟೇ ಅಲ್ಲ, ಭಾರತದ ಇತರದೇಶದ ಹರಿಶರಣರಲ್ಲೂ ಕೃಷ್ಣಭಕ್ತಿ ಹೆಚ್ಚು. ಸೂರದಾಸರು ಕೃಷ್ಣಲೀಲೆಯನ್ನು ವರ್ಣಿಸುವ ದಶಮಸ್ಕಂಧ ಭಾಗವತವನ್ನು ಪ್ರಾಕೃತದಲ್ಲಿ ರಚಿಸಿದರು. ಭಕ್ತೆ ಮೀರಾಬಾಯಿಯು ಕೃಷ್ಣನನ್ನು ಪತಿತ್ವೇನ ಆರಾಧಿಸಿದಳು. ಜಯದೇವನ 'ಗೀತ ಗೋವಿಂದವು' ಕೃಷ್ಣರಾಧೆಯರ ಪ್ರಣಯವನ್ನು ಸುಂದರವಾಗಿ ಚಿತ್ರಿಸಿದೆ. ಬಂಗಾಳದ ಚೈತನ್ಯಪಂಥದ ಮುಖ್ಯ ಸೂತ್ರವೇ ಕೃಷ್ಣಭಕ್ತಿ.

ಕನ್ನಡದಾಸರುಗಳಲ್ಲೂ ಪ್ರಸನ್ನವೆಂಕಟರು ದಶಮಸ್ಕಂಧ ಭಾಗವತವನ್ನು ಕನ್ನಡೀಕರಿಸಿರುವರು. ಶ್ರೀಪಾದರಾಜರು, ವ್ಯಾಸರಾಜರು, ಪುರಂದರದಾಸರಂತೂ ನೂರಾರು ಪದಗಳಲ್ಲಿ ಕೃಷ್ಣಲೀಲೆಯನ್ನು ಹಾಡಿರುವರು. ಹೀಗೆ ಹಾಡುವಾಗ ಪ್ರತಿಪದದಲ್ಲೂ ಕೃಷ್ಣ ಪರಬ್ರಹ್ಮನೆಂಬುದನ್ನು ತೋರದೆ ಬಿಟ್ಟಿಲ್ಲ. ಕೃಷ್ಣಾವತಾರ ವಾದುದೇ ಅತಿ ವಿಚಿತ್ರಕ್ರಮದಿಂದ. ಹುಟ್ಟಿದಕೂಸು ಚತುರ್ಭುಜಯುಕ್ತವಾಗಿ ಚಕ್ರ, ಶಂಖ, ಗಧಾ—ಪದ್ಮಧಾರಿಯಾಗಿ ಕಂಗೊಳಿಸಿ, ತನ್ನನ್ನು ಗೋಕುಲಕ್ಕೆ ಕರೆದೊಯ್ಯುವಂತೆ

ತಂದೆಯೆನಿಸಿದ ವಸುದೇವನಿಗೆ ಆಜ್ಞೆಮಾಡಿತು. ಗೋಕುಲದಲ್ಲಿ ಯಶೋದೆ ಕೃಷ್ಣನನ್ನು ಸಾಕಿದಳು. ಹರಿಭಕ್ತರಾಗಿ ಹರಿಯ ಅಂಗಸಂಗವನ್ನು ಅಪೇಕ್ಷಿಸಿ, ತಪಸ್ಸುಮಾಡಿ ಗೋಪಿಕಾಸ್ತ್ರೀಯರಾಗಿ ಹುಟ್ಟಿದ ಋಷಿಗಳನ್ನು ತನ್ನ ಬಾಲ್ಯದಲ್ಲೇ ಸಂತೈಸಿ, ಸುಖಪಡಿಸಿ, ಕಾಲಿಯಮರ್ದನನಾಗಿ ಭಗವಂತ ಅದ್ಭುತ ವ್ಯಾಪಾರವೆಸಗಿದ. ಮಧುರೆಗೆ ಹೋಗಿ ಮಾವನಾದ ಕಂಸನನ್ನು ಸಂಹಾರಮಾಡಿದ. ಆಮೇಲೆ ರುಕ್ಮಿಣೀ, ಸತ್ಯಭಾಮಾ, ನೀಲಾ, ಜಾಂಬವತೀ ಮೊದಲಾದ ಅಷ್ಟಮಹಿಷೆಯರನ್ನೂ ನರಕಾಸುರನ ಅಂತಃಪುರದಲ್ಲಿದ್ದ ಹದಿನಾರುಸಾವಿರದ ನೂರು ಮಹಿಷೆಯರನ್ನೂ ವರಿಸಿದ, ಸೂತ್ರಧಾರಕನಾಗಿ ನಿಂತು ಪಾಂಡವಪ್ರಾಣನಾಗಿ, ಅರ್ಜುನನ ಸಾರಥ್ಯಮಾಡಿ ಮಹಾಭಾರತ ಯುದ್ಧಮಾಡಿಸಿದ, ಯುದ್ಧಕಾಲದಲ್ಲಿ ಅರ್ಜುನನಿಗೆ ಆವೃತವಾದ ಮೋಹವನ್ನು ಗೀತಾಬೋಧೆಯಿಂದ ತೊಡೆದುಹಾಕಿದ. ಹೀಗೆ ಕೃಷ್ಣಾವತಾರದಲ್ಲಿ ಬಹುಮುಖವಾದ ವ್ಯಾಪಾರಗಳು ನಡೆದವು. ಕೃಷ್ಣಬಹುಜಾರನೆಂದು ಅಜ್ಞರು ಹೀಯಾಳಿಸುವಂತೆ ಯೋಗೀಶ್ವರನೆಂದು ಜ್ಞಾನಿಗಳು ಕೊಂಡಾಡುತ್ತಾರೆ. ಮೋಸಗಾರನೆಂದು ಅಲ್ಪರು ಭಾವಿಸುವಂತೆ ಮುಚುಕುಂದ ವರದನೆಂದು ಭಕ್ತರು ಸಾರುತ್ತಾರೆ, ದೇವರ ಅಘಾಟಿತಘಟನಾರೂಪ ಅಗಮ್ಯ ಮಹಿಮೆಯನ್ನು ಕೃಷ್ಣಾವತಾರವು ಸೂಚಿಕೆಯಂತೆ ಪ್ರತಿಬಿಂಬಿಸುತ್ತದೆ. ಭಕ್ತರುಗಳು ಅವರಿಗೆ ಪ್ರಿಯವೆನಿಸಿದ ನಾನಾ ಭಾವಭಂಗಿಗಳಲ್ಲಿ ಭಗವಂತನನ್ನು ಆರಾಧಿಸಲು ಹರಿಯ ಅನೇಕ ಮುಖವಾದ ಈ ಲೀಲಾವಿನೋದಗಳು ಸಾಧಕವಾಗಿದೆಯೆಂದು ಧಾರಾಳವಾಗಿ ಹೇಳಬಹುದು, ಕನ್ನಡ ಹರಿದಾಸರುಗಳಲ್ಲಿ ಕೃಷ್ಣನನ್ನು ಕಂದನಂತೆ ಆರಾಧಿಸಿದ ಹೇಳವನಕಟ್ಟೆ ಗಿರಿಯಮ್ಮನೇ ಇದಕ್ಕೆ ಸಾಕ್ಷಿ.

(i) ಬಾಲ ಲೀಲೆ.

ಪುರಂದರದಾಸರು ಯಶೋದೆ ಮಗುವನ್ನಾಡಿಸಿದ ಬಗೆಯನ್ನು ಸರಳವಾಗಿಯೂ ತಾತ್ವಿಕವಾಗಿಯೂ ವರ್ಣಿಸಿದ್ದಾರೆ.

ಜಗದುದ್ಧಾರನ ಆಡಿಸಿದಳೆಶೋದೆ || ಪ ||
ಜಗದುದ್ಧಾರನ ಮಗನೆಂದು ತಿಳಿಯುತ
ಸುಗುಣಾಂತರಂಗನ ಆಡಿಸಿದಳೆಶೋದೆ || ಅ ||
ನಿಗಮಕೆ ಸಿಲುಕದ ಅಗಣಿತ ಮಹಿಮನ
ಮಗುಗಳ ಮಾಣಿಕ್ಯನ ಆಡಿಸಿದಳೆಶೋದೆ || ೧ ||
ಅಣೋರಣೀಯನ ಮಹತೋ ಮಹೀಯನ
ಅಪ್ರಮೇಯನ ಆಡಿಸಿದಳೆಶೋದೆ || ೨ ||
ಪರಮಪುರುಷನ ಪರವಾಸುದೇವನ

ಪುರಂದರವಿಠಲನ ಆಡಿಸಿದಳೆಶೋದೆ || ೩ ||

ಕೃಷ್ಣನನ್ನು ಲಾಲಿಸುವಾಗಿನ ಯಶೋದೆಯ ಭಾವನೆಗಳನ್ನು ಪ್ರಾಣೇಶದಾಸರು ಹೀಗೆ ವ್ಯಕ್ತಮಾಡಿದ್ದಾರೆ.

ಯಶೋದೆ ಮಜ್ಜಿಗೆಮಾಡುತ ಮುದದಿಂದ
ಶೋಕನಮಲಸುಲೀಲೆಯನು || ಪ ||
ವಿಶೇಷಭಕ್ತಿಂದಾಡುವಳಾಕಥಾರಸಯಥಾಮತಿ ರಚಿಸುವೆನು || ಅ ||
ಹತ್ತವತಾರದಿ ಮತ್ತರ ಶಿಕ್ಷಿಸಿ ಉತ್ತಮರನು ಸಂತೈಸಿದನು
ಭೃತ್ಯಭವಾರ್ಣವ ಬತ್ತಿಸುವಿವನನು ಎತ್ತುವೆನತಿ ಧನ್ಯಳು ನಾನು || ೧ ||
ಅಗಣಿತರೂಪವನಂಗದಿ ಕಂಡಳು ಜಗದಂಬೆಂಬರು ಸಜ್ಜನರು
ಮಗುವೆಂದನುದಿನ ಮುದ್ದಿಸಿಕಂಕಳೊಳಗಿಡುವೆ ಯೆನಗೇನೆಂಬುವರೋ || ೪ ||
ಮೀನಾಂಬಕಿ ಈ ಪರಿಯಿಂದಲಿ ಶ್ರೀ ಪ್ರಾಣೇಶವಿಠಲನ ಪಾಡುವಳು ಈ ನುಡಿಯಾದರದಿಂ ಕೇಳಲು ಭವಕಾಣರು ಪರದಲಿ ಸುಖ ಬಹಳ || ೫ ||

ಯಶೋದೆ ಕೃಷ್ಣನಿಗೆ ಮಾಡುತ್ತಿದ್ದ ಅಲಂಕಾರವನ್ನು ವ್ಯಾಸರಾಯರು ಬಹಳ ಸುಂದರವಾಗಿ ವರ್ಣಿಸಿದ್ದಾರೆ.

ಕಾಂಬೋಧಿ–ಝಂಪೆ

ಎಷ್ಟು ಜನ್ಮದಲಿ ಮಾಡಿದಳೋ ಗೋಪಿ ಶ್ರೀ ।
ಕೃಷ್ಣನ ಲೀಲೆಯನು ನೆನೆದು ಹಿಗ್ಗುವ ಸುಕೃತ || ಅ ||

ಅಂಬುರುಹನಾಭನಿಗೆ ಅರಳೆಲೆಯಂಕರಿಸಿ । ತುಂಬೆಗುರುಳಿಗೆ ಸುತ್ತಜಡೆಯನು ಹೆಣೆದು । ಸಂಭ್ರಮದಿ ಚಂಡಿಕೆಗೆ ಸರಸಮಲ್ಲಿಸುತ್ತಿ । ನಂಬಿಸುತ ನಗಿಸಿ ಮುದ್ದಾಡುವೋ ಸುಕೃತ || ೧ ||

ಕಸ್ತೂರಿ ಇಟ್ಟು ಕಂಗಳಿಗೆ ಕಾಡಿಗೆ ಹಚ್ಚಿ । ಮತ್ತೆ ಕದಪಿನಲಿ ಕುಂಕುಮಪನೊತ್ತಿ । ಮುತ್ತಿನಂದದೊಳಿರುವ ಬೆವರ ಸೆರಗಿನೊಳೊರಿಸಿ । ಮುದ್ದುತಾರೈ ಎಂದು ಮುದ್ದಾಡುವೊ ಸುಕೃತ || ೩ ||

ಪನ್ನಂಗಶಯನ ಆನೆಯನಾಡು ಶ್ರೀಕೃಷ್ಣ । ಹೊನ್ನುತಾ ಹೊನ್ನುತಾ ಗುಬ್ಬಿ ಎಂದೆನುತ । ತನ್ನ ಕರಗಳಲಿ ತಾರತಮ್ಮಯ್ಯನಾಡಿಸುತ । ರನ್ನ ರಂಗಯ್ಯ ತೋಳಾಡು ಎಂಬುವ ಸುಕೃತ || ೧೧ ||

ದಿನಕರ ನಿಭಾಂಗ ಕೇಶವರಾಮಚಂದ್ರ । ಮುನಿಸನಕಾದಿವಿನುತ ಕುಣಿದಾಡು ಎನುತ । ತನ್ನ ಕರಗಳಲಿ ತಕ್ಕೈಸಿ ಕೃಷ್ಣನ ದಿವ್ಯ । ಘನ್ನಚರಿತೆಯ ಪಾಡಿ ಪೊಗಳುವೋ ಸುಕೃತ || ೧೨ ||

ಈ ಪದದಲ್ಲಿ ಮಕ್ಕಳಾಟಿಕೆಯನ್ನು ಸ್ವಾಭಾವಿಕವಾಗಿ ಚಿತ್ರಿಸಿದ್ದಾರೆ.

ಪ್ರಸನ್ನವೆಂಕಟರು ಕೃಷ್ಣನ ಮುದ್ದುರೂಪವನ್ನು ವರ್ಣಿಸುತ್ತಾರೆ.

ರೇಗುಪ್ತಿ–ಆಟ

ಧ್ಯಾನವಿದು ಮೌನಿಧ್ಯಾನವಿದು । ಮಾನವರ್ಗದಮೃತದ ಪಾನವಿದು ‖ ಪ ‖
ಮೊಳೆವಲ್ಲೊಗುವ ಜೊಲ್ಲಬಟ್ಟು ಬಾಯಾ । ಪಲ್ಲವಾಧರದೆಡ ಗಲ್ಲದ ಛಾಯಾ ।
ಚೆಲ್ವಮುಂದಲೆಯಲಿ ಅಳಕದ ಸೊಂಪು । ಚೆಲ್ಲಗಂಗಳು ನೋಡುವರಿಗೆ ಇಂಪು |೧|
ತಿದ್ದಿದಹುಬ್ಬು ಕಾಮನಬಿಲ್ಲಮಾಟಾ । ಸ್ನಿಗ್ಧಭಾವವೆಸುಖವಾರಿಧಿ ಮಾಟಾ ।
ಗದ್ದವೆಂಬುದು ಸವಿಮುದ್ದಿನಗಂಟು । ಮುದ್ದಿನ ಮುಖ ಮೋಕ್ಷದಜನ ನಂಟು ‖೨‖
ಥಳಥಳಿಸುವ ಇಂದ್ರನೀಲದ ಬಿಂಬ । ಜಲಧಿಶಯನನಂತ ಜೀವದ ಬಿಂಬ ।
ನಳಿನ ಮುಖಿ ಗೋಪಿನೋಡಿ ದಣಿಯಳು । ಲಲಿತ ಶ್ರೀಕೃಷ್ಣಲಾವಣ್ಯಾಬ್ಧಿರತಳು ‖೪‖

— ಪ್ರಸನ್ನ ವೆಂಕಟರು.

ವಾದಿರಾಜರು ಯಶೋದೆ ಕೃಷ್ಣಗೆ ಮಾಡುತ್ತಿದ್ದ ಬಾಲಸಹಜೋಪಚಾರಗಳನ್ನು ಬಣ್ಣಿಸುತ್ತಾ ಹರಿಮಹಿಮಾತಿಶಯದ್ಯೋದತಕವಾದ ವಿಶೇಷಣಗಳಿಂದ ವಿರೋಧಾಭಾಸಾಲಂಕಾರವನ್ನು ಚಿತ್ರಿಸಿದ್ದಾರೆ.

ಧನ್ಯಾಸಿ–ಝಂಪೆ

ಏನು ಸುಕೃತವ ಮಾಡಿದಳೋ ಯಶೋದೆ ‖ ಪ ‖
ಶ್ರೀನಿಧಿಯಾದ ಕೃಷ್ಣನ ಕರದೆತ್ತಿ ಮುದ್ದಿಪಳಂತೆ ‖ ಅ ‖
ಗಂಗಾಜನಕಗೆ ಗಡಿಗೆನೀರನೆರವಳಂತೆ । ಮಂಗಳಾಂಗಗೆ ಭಾಮೆ ಶೃಂಗರಿಪಳಂತೆ । ತುಂಗಭೂಧರನ ತೊಟ್ಟಿಲೊಳಿಟ್ಟು ಮಲಗಿಪಳಂತೆ । ಕಂಗಳಿಗಗೋಚರನ ಎತ್ತಿ ಮುದ್ದಿಪಳಂತೆ ‖ ೧ ‖
ಚತುರಾಸ್ಯನಪಿತನ ಸುತನೆಂದೆಂತ್ತುವಳಂತೆ । ಶ್ರುತಿವಿನುತಗೆ ಜೋಗುಳವ ಪಾಡುವಳಂತೆ । ಶತರವಿತೇಜಗಾರತಿಯನೆತ್ತುವಳಂತೆ । ಗತಭೀತನಿಗೆ ಭಾಮೆ ರಕ್ಷೆ ಇಕ್ಕುವಳಂತೆ ‖ ೨ ‖
ಜಗವನೆತ್ತಿದವನ ಮಗುವೆಂದೆತ್ತುವಳಂತೆ । ನಿಗಮಗೋಚರನ ಈಕ್ಷಿಸುವಳಂತೆ ಅಗಣಿತಸದ್ಗುಣನ ಹಗ್ಗದಿ ಕಟ್ಟುವಳಂತೆ । ನಿತ್ಯ ತೃಪ್ತಗೆ ಪಾಲನ್ನೆರವಳಂತೆ ‖ ೩ ‖
ಬಹುಮುಖನಿಗೆ ಭಾಮೆ ಮುದ್ದನೀಡುವಳಂತೆ । ಅಹಿತಲ್ಪನಿಗೆ ಹಾವತುಳದೀಯೆಂಬುವಳಂತೆ । ಬಹುದೈತ್ಯಸಂಹರಗೆ ಭಯವ ತೋರುವಳಂತೆ । ಮಹಿಮನರಸಿಂಹಗೆ ಗುಮ್ಮನ ತೋರುವಳಂತೆ ‖ ೪ ‖

ಭೈರವಿ–ಆಟ

ಕಣ್ಣುಮುಚ್ಚೆನ್ನಾ ಆಡಿಸೆ । ಸಣ್ಣವರನ್ನು ಹೊರಗಡಗಿಸೆ ‖ ಅ ‖
ಗಟ್ಟಿಹುಡುಗರು ಅವರೆಲ್ಲ ಮುಟ್ಟಿ ಮಾಯಾಗಿಹೋದರು

ಥಟ್ಟನೆದ್ದು ಎನ್ನಕೈಯವರ ಮುಟ್ಟಿಸದಿರೆ ಬಿಡೆ ಎನ್ನಾ || ೧ ||
ಪಾಯಿಸ ಹೋಳಿಗೆ ಮಾಡಿ ಬಾಯಿಗೆ ಕೈದೋರಿ ಗೋಪಿ ।
ನಾ ಎರೆಯುವೆ ನಿನ್ನ ತಲೆಗೆ ನೀ ಎರೆಕೊಳ್ಳೊಳ್ಳವಲ್ಲೆ ಎನ್ನೆ || ೨ ||
ಅಣ್ಣನರಂಭಿಸಿ ಕರೆದು ಹಣ್ಣುಗಳವಗೆ ಕೊಡಬೇಡೆ ।
ಚಿನ್ನದಗೊಂಬೆ ಬಾ ಎದು ಬಣ್ಣ ಬಣ್ಣದಲೆನ್ನಕರಿಯೆ || ೩ ||
ಎನ್ನಪಾಪ ನೀನಾಗಿ ತಿನಲಿಕ್ಕಪ್ಪಚ್ಚಿ ನೀ ಬೇಡೆ ।
ಮಣಿಗೂಡೆನಗೆ ಕೊಡು ಎಂದು ಮುನಸುಗುಟ್ಟೆನ್ನನು ಕಾಡೆ || ೪ ||

ಕೃಷ್ಣ ತೊದಲ್ನುಡಿಗಳಲ್ಲಿ ತಾಯನ್ನು ಕೇಳುವುದನ್ನು ಪುರಂದರ ದಾಸರು ಚಮತ್ಕಾರವಾಗಿ ಚಿತ್ರಿಸಿದ್ದಾರೆ.

ಶಂಕರಾಭರಣ—ಆಟ

ಗುಮ್ಮನ ಕರೆಯದಿರೆ ಅಮ್ಮ ನೀನು ಗುಮ್ಮನ ಕರೆಯದಿರೆ || ಪ ||
ಸುಮ್ಮನೆ ಇದ್ದೇನು ಅಮ್ಮಿಯ ಬೇಡೇನು
ಮುಮ್ಮು ಉಣುತೇನೆ ಅಮ್ಮ ಅಳುವದಿಲ್ಲ || ಅ ||
ಭಾವಿಗೆ ಹೋಗೆಕಾಣೆ ಅಮ್ಮ ನಾನು । ಹಾವಿನೊಳಾಡೆ ಕಾಣೆ । ಆವಿನ ಮೊಲೆಯೂಡೆ ಕರುಗಳ ಬಿಡೆ ನೋಡೆ ದೇವರಂತೆ ಒಂದು ಠಾವಿಗೆ ಕೂಡುವೆ|| ೨ ||

ನಾದನಾಮಕ್ರಿಯೆ—ಆದಿ

ತೆಗೆ ನಿನ್ನ ಮುಸಕವನು || ಪ ||
ತೆಗೆ ನಿನ್ನ ಮುಸಕವ ನಗುತುಂಬೆ ಮೊಲೆಯನು
ಜಗವನೆಲ್ಲವ ತಿರುಗಿ ಬಾಯಾರಿ ಬಂದೆನು || ಅ ||
ಗೋವಕಾಯಲು ಪೋಗಿ ಧಾವತಿ ಪಟ್ಟು
ಬಹುದೇವಕಿದೇವಿಯೆ ಈವಾಗ ಬದೆಂನು || ೧ ||
ವಿಷದಮೊಲೆಯನುಂಡು ಕಸಿವಿಸಿ ಪಡುತಿಹೆ
ನಸು ನಗುತಲಿ ಉಂಬೆ ಹಸವೆ ಬಹಳಾಗಿದೆ || ೪ ||
ತ್ವರದಿತೊಡೆಯ ಮೇಲೆ ಕರೆದು ಕೂಡಿಸು ತಾಯೆ
ಪುರಂದರವಿಠಲವರದ ಸರ್ವೋತ್ತಮಗೆ || ೫ ||

ಕೃಷ್ಣ ತಾಯಿ ಯಶೋದೆಯನ್ನ ಗುಮ್ಮನೆಲ್ಲಿದ್ದಾನೆಂದು ಕೇಳುವ ನೆಪದಲ್ಲಿ ತನ್ನ ಪರಬ್ರಹ್ಮತ್ವ ಪ್ರದರ್ಶನಮಾಡುವುದನ್ನು ಪುರಂದರ ದಾಸರು ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ತೋಡಿ—ಆದಿ

ಗುಮ್ಮನೆಲ್ಲಿಹ ತೋರಮ್ಮ ಸುಮ್ಮನಂಜಿಸಬೇಡಮ್ಮ || ಪ ||

ಪಂಚಾಶತ್ಕೋಟಿ ವಿಸ್ತೀರ್ಣದ ಭೂಮಿಯ । ವಂಚನೆ ಇಲ್ಲದೆ ತಿರುಗಿ ಬಂದೆನೆ ನಾನು । ಹಂಚಿಸಿಕೊಟ್ಟೆನೆ ಅವರವರಿಗೆ ನಾ । ಹಾಂಗೂ ನೋಡಿದರೂ ಕಾಣನೆ ಗುಮ್ಮನ ॥ ೧ ॥

ಸಿಂಧುವಿನೊಳಗೆ ಆನಂದದಿ ಮಲಗಿದ್ದೆ । ಒಂದು ನಾಭಿಕಮಲದಿ ಬೊಮ್ಮನ ಪುಟ್ಟಿಸಿದೆ । ಅಂಧಕಾರದಿ ಪೋಗಿ ಒಬ್ಬನೆ ಮಲಗಿದೆ । ಹಾಂಗೂ ನೋಡಿದರೂ ಕಾಣೆನೆ ಗುಮ್ಮನ ॥ ೨ ॥

ಈ ಕೆಳಗಿನ ಪದದಲ್ಲಿ ಇದಕ್ಕೆ ವಿಪರೀತವಾಗಿ ಮುಗ್ಧತೆ ತುಬಿದೆ.

ಭೈರವಿ—ಆದಿ

ಯಶೋದೆಯಮ್ಮ ಎನ್ನನು ಎತ್ತಿಕೊಳ್ಳಮ್ಮ ॥ ಪ ॥

ಬಿಸಿನೀರು ಕಾಸಬೇಡೆ ಅಮ್ಮ ನೀನು ಗುಕ್ಕುಚ್ಚಿ ಮಾಡಬೇಡೆ । ಬಿಸಿಮೊಮ್ಮು ಉಪ್ಪುಕಾಯಿ ಅಮ್ಮ ನಾನು । ಉಣಲಾರೆ ಉತ್ತುತ್ತೆ ಹಣ್ಣು ಬೆಣ್ಣೆತಿಂದೇನೆ ॥ ೧ ॥

ಕಳ್ಳಕೃಷ್ಣ ಎನ್ನುತಾರೆ ಬಂದನೆಂದು ಬೇಗ ಬೇಗ ತಿನ್ನುತ್ತಾರೆ । ಗಲ್ಲ ಕಚ್ಚಿ ಕಚ್ಚಿ ಎನ್ನ ಹಲ್ಲು ಬಾಯಿ ನೋಯುತಿದೆ । ವಲ್ಲಭೇರು ಎನ್ನ ಗೋಪಿ ಕೊಲ್ಲುತ್ತಾರೆ.॥೨ ॥

ಸುಮ್ಮನೆ ಮಲಗಬೇಡೆ ಅಮ್ಮಾ ನೀನು ಎನ್ನ ಕಡೆ ಮೋರೆ ಮಾಡೆ । ಚಿಕ್ಕಾವು ಕಂಡೇನೇ ಅಂಜಿಕೆ ಬರುತಿದೆ। ಕ್ಷಣ ಹೊತ್ತು ಎನ್ನ ಕೂಡೆ ಮಾತನಾಡೆ ॥೩ ॥

ನಕ್ಷತ್ರ ತಂದುಕೊಡೇ ಚಂದ್ರಮನ ಇತ್ತಿತ್ತ ಕರೆದುತಾರೆ । ಈಕ್ಷಿಸಿ ನಲಿವಂಥ ಪುರಂದರವಿಠಲನ । ಒಂದುಬಾರಿ ಮುದ್ದಾಡಿ ಚಂದ್ರನೋಡೆ ॥೪ ॥

ಕೃಷ್ಣ ಮಣ್ಣು ತಿಂದಿಲ್ಲವೆಂದು ತಾಯಿಗೆ ಬಾಯ್ದೆರೆದು ಜಗವೆಲ್ಲ ಕಾಣುವಂತೆ ತೋರಿದುದು ತಾಯಿಗೆ ಮೋಹ ಪರಿಹಾರವಾಗಲೆಂಬ ಉದ್ದೇಶದಿಂದ. ಇದು ಮುಂದಿನ ಪದದಲ್ಲಿ ಇರುವ ವಿಷಯ.

ಕಾಮಾಜ್—ಅಟ

ಕಂದ ಬೇಡವೋ ಮಣ್ಣು ತಿನ್ನಬೇಡವೋ ॥ಪ ॥
ಕಂದ ಬೇಡವೋ ಮಣ್ಣು ತಿನ್ನಬೇಡವೋ
ಸುಂದರಾಂಗನೆ ನಿನಗೆ ಹೊಟ್ಟೆ ನೋಯುವುದಯ್ಯ ॥ಅ ॥
ಅಮ್ಮಯ್ಯ ಕೇಳೆಲೇ ಬಾಯಲಿ ಮಣ್ಣಿಲ್ಲ
ಗುಮ್ಮನು ಬರಬೇಡ ಸುಮ್ಮನೆ ಇರುತೇನೆ ॥೪ ॥
ಮಗುವೆ ಬಾ ಬಾ ಎಂದು ಬಣ್ಣಿಸಿ ಕರೆದಳು
ಮಗುವಿನ ಬಾಯ ಶೋಧಿಸಿದಳು ಬೇಗನೆ ॥೫ ॥
ಬಾಯಲಿ ಕಂಡಳು ಹದಿನಾಲ್ಕು ಲೋಕವ
ಕಾಯಮರತಳಯ್ಯ ಮರುಳಿಗೆ ವಶವಾಗಿ ॥೬ ॥

ಮತ್ತು ಕಂಡಳು ಅವಳು ಗೋಕುಲವೆಲ್ಲವ
ಅತ್ತ ಕಂಡಳು ತನ್ನ ಕೃಷ್ಣ ಬಲಗಲಿ ||೬ || —ಪುರಂದರದಾಸರು.

ಆದರೂ ಭಗವಂತನ ಬಾಲಲೀಲೆಗಳು ಎಲ್ಲರನ್ನೂ ಮೋಹಗೊಳಿಸುತ್ತಿದ್ದವು. ಅವನೂ ಎಲ್ಲರಂತೆ ಗೋಲಿ ಗಜ್ಜುಗಗಳನ್ನಾಡುತ್ತಿದ್ದ.

ಕೇದಾರಗೌಳ—ಝಾಪು

ಗಜುಗನಾಡುತಲಿರ್ದನು ನಮ್ಮ ರಂಗ
ವ್ರಜದ ಮಕ್ಕಳಕೂಡ ಹರುಷದಿಂದಲಿ ಬಲು ||ಪ ||
ಒಂದನ್ನೇ ಹಾರಿಸಿದ ವೇಗದಿ ಮತ್ತೊಂದರಲಿ ತಾ ಬಡೆದ ||
ಒಂದೇ ಬಾರಿಗೆ ಎಲ್ಲಾ ಗಜುಗವಗೆಲಿದನು. —ಪುರಂದರದಾಸರು.

ಆಡುತ್ತಾಡುತ್ತಾ ಹೊರಗೆಹೋದ ಕೃಷ್ಣನನ್ನು ಯಶೋದೆ ಅರಸಿಕೊಂಡು ನೆರೆಹೊರೆಯವರ ಮನೆಯಲ್ಲಿ ಹೋಗಿ ಕೇಳುವಳೆಂದು ಪುರಂದರದಾಸರು ಭಾವಿಸಿ ಬಣ್ಣಿಸಿದ್ದಾರೆ.

ಸೌರಾಷ್ಟ್ರ—ಆದಿ

ಅಮ್ಮ ನಿಮ್ಮ ಮನೆಗಳಲ್ಲಿ ನಮ್ಮರಂಗನ ಕಾಣಿರೆನಮ್ಮ ||ಪ ||
ಬ್ರಹ್ಮಮೂರುತಿ ನಮ್ಮ ಕೃಷ್ಣನು ನಿಮ್ಮ ಕೇರಿಯೊಳಿಲ್ಲವೆ ||ಅ ||
ಕಾಶೀಪೀತಾಂಬರ ಕೈಯಲ್ಲಿ ಕೊಳಲು । ಪೂಸಿದ ಶ್ರೀಗಂಧ ಮೈಯೊಳಗಮ್ಮ
ಲೇಸಾಗಿ ತುಳಸಿಯ ಮಾಲೆಯ ಧರಿಸಿದ |ವಾಸುದೇವನು ಬಂದ ಕಾಣಿರೆನಮ್ಮ||೧ ||

ಕೃಷ್ಣನನ್ನು ಕಾಣದೆ ಹಲುಬಿದ ಯಶೋದೆ ಮನೆಗೆ ಬಂದ ಕೃಷ್ಣನನ್ನು ಕಂಡು ತವಕದಿಂದ ಕೇಳುವುದನ್ನು ಶ್ರೀಪಾದರಾಜರು ಸರಳ ರೀತಿಯಲ್ಲಿ ನುಡಿದಿದ್ದಾರೆ.

ಖರಹರಪ್ರಿಯ—ಆಟ

ಎಲ್ಲಾಡಿ ಬಂದೆ ಎನ್ನ ಕೃಷ್ಣಯ್ಯನೀ || ಪ ||
ಎಲ್ಲಾಡಿಬಂದೆ ಎನ್ನ ರಂಗಯ್ಯ ।
ಬಾಲಯ್ಯ ನೀ ಎನ್ನ ಕಣ್ಣಮುಂದಾಡದೆ || ಅ ||
ಅಲಯದೊಳಗೆ ನೀನಾಡದೆ ಬೆಣ್ಣೆ ಪಾಲು ಸಕ್ಕರೆ ನೀ ಬೇಡದೆ ಇಲ್ಲಿ।
ಬಾಲರಿಂದೊಡಗೂಡಿ ಆಡದೆ ಇಲ್ಲಿ ಬಾಲಯ್ಯ ನೀ ಎನ್ನ ಕಣ್ಣ ಮುಂದಾಡದೆ
ಅಷ್ಟದಿಕ್ಕಲಿ ಅರಸಿ ನಾಕಾಣದೆ ದೃಷ್ಟಿ ಗೆಟ್ಟೆನೋ ನಿನ್ನ ನೋಡದೆ ಇನ್ನೆಷ್ಟು ಹೇಳಲಿ
ಕೇಳಬಾರದೆ ರಂಗ ವಿಟ್ಠಲ ನೀನೆನ್ನ ಕಣ್ಣಮುಂದಾಡದೆ || ೩ ||

ಕೃಷ್ಣ ತುಸು ಕಣ್ಮರೆಯಾದರೆ ಯಶೋದೆಗೆ ಅತಿ ಕಿರಿಕಿರಿ, ಅವಳ ಹೆದರಿಕೆಗೆ ತಕ್ಕಂತೆ ಪೂತನಿಯ ಸಂಹಾರದಂತಹ ಅದ್ಭುತಕಾರ್ಯಗಳು ನಡೆಯುವುವು. ಅಂತಹ ಸಮಯದಲ್ಲಿ ಮೋಹದಿಂದ ಯಶೋದೆ ರಕ್ಷೆ ಇಡುವಳು. ಭಗವಂತನೂ ಅದಕ್ಕೆ

ತಕ್ಕಂತೆ ಸರಿಯಾಗಿ ಆಡಹೋದರೆ ಜೊತೆಯವರು ತನ್ನನ್ನು ದೂರುವರೆಂದೂ ತಾಯಿಯ ಮುಂದೆ ಹೇಳಿಕೊಳ್ಳುವನು.

ಹಿಂದೂಸ್ತಾನಿ ದೇಶಿ – ಆಟ

ಆಡಹೋದಲ್ಲೇ ಮಕ್ಕಳು ಆಡಕೊಂಬುವರು ನೋಡಮ್ಮ ||ಪ||
ನೋಡಿ ನೋಡಿ ಎನ್ನ ಮುಖವ ನೋಡಿ ಕಣ್ಣಮಿಟುವರಮ್ಮ ||ಅ||
ದೇವಕಿ ಹೆತ್ತಳಂತೆ ವಸುದೇವನೆಂಬವ ಪಿತನಂತೆ
ಕಾವಲಲ್ಲಿ ಹುಟ್ಟಿದೆನಂತೆ ಮಾವಗಂಜಿಲ್ಲಿ ತಂದರಂತೆ ||೧||
ನೀನೆನ್ನ ಹಡೆದಿಲ್ಲವಂತೆ ನಾನಿನ್ನ ಮಗನಲ್ಲವಂತೆ
ಧೇನುಕಾಯುವರಿಲ್ಲವೆಂದು ಸಾನುರಾಗದಿ ಸಲುಹಿದೆಯಂತೆ ||೨||
ಹದ್ದು ಎನ್ನ ವಾಹನವಂತೆ ಹಾವು ಎನ್ನ ಹಾಸಿಗೆಯಂತೆ
ಕದ್ದು ಬೆಣ್ಣೆಯ ನಾ ತಿಂದನಂತೆ ಮುದ್ದು ಪುರಂದರವಿಠಲನಂತೆ ||೩||

ಓರಿಗೆಯವರು ಹೀಗೆ ಆಡಿಕೊಳ್ಳುತ್ತಾರೆಂದು ಯಶೋದೆಯೇ ಹೇಳುವಳು.

ಕೂಡಿ ಕೊಂಡಾಡಲೊಲ್ಲ ಹೇ ರಂಗಯ್ಯ ನಿನ್ನ ಕೇಡಿಗ ನಮ್ಮ ಕೆಲಸ ಕೆಡಿಸುವನೆಂದು । ತನ್ನ ತಾಯ ಒಡಹುಟ್ಟಿದಣ್ಣನ ಕೊಂದವನೆಂದು ಅನ್ನಿಗರ ಬಿಡುವನೆ ಎಂದೆಲ್ಲರ್‍ಯಾತಾಡಿಕೊಂಡು ||

ಕೃಷ್ಣ ಜೊತೆಯವರೊಡಗೂಡಿ ಮನೆ ಮನೆಗಳಿಗೆ ಹೋಗಿ ಹಾಲೂ ಮೊಸರು ಮೆದ್ದು ಗೋಪಿಯರನ್ನು ಸುಖಪಡಿಸಿ ತನ್ನ ಬಾಲಲೀಲೆಗಳನ್ನು ತೋರುತ್ತ ಜಗದಾನಂದಕಾರನಾಗಿದ್ದುದನ್ನು ದಾಸರುಗಳು ವಿವಿಧ ರೀತಿಯಿಂದ ಪಾಡಿ ಪೊಗಳಿದ್ದಾರೆ. ಬೆಕ್ಕಿನಂತೆ ಕೂಗಿ ಕದ್ದು ಹಾಲು ಕುಡಿದ ಪರಿ ಇದು.

ಧನಶ್ರೀ–ಆಟ

ಕಾಬಿಸಿ ಕಾಬಿಸಿ ಮ್ಯಾಂ ಮ್ಯಾಂ ಮ್ಯಾಂ ಮ್ಯಾಂ ||ಪ||
ಮಾರ್ಜಾಲಕಾಟವನ್ನು ತಡೆಯಲಾರೆವು ಕೃಷ್ಣ ||ಅ||
ಅಡಿಗೆಮನೆಯಲ್ಲಿ ಗಡಬಡ ಬರುವುದು ಗಡಿಗೆ
ಒಡೆದು ಹಾಲು ಮೊಸರು ಕುಡಿಯುವುದು ||೧||
ಹಾಲು ಕೊಡುವ ಬಗೆ ಮೂಲೆಲಿ ಕೂತುಕೊಂಡು
ಹಾಲಿನ ಮೇಲಿನ ಕೆನೆ ಕಾಲಲಿ ತಿಂದು ||೨||
ಹಾಗಲು ಹೀಗಲು ಮೀಸಲ್ಹಾಕಿದ ಹಾಲು
ಪುರಂದರ ವಿಠಲಗೆ ಸೇರಿತು ಮಾಲು ||೩||

ಕೃಷ್ಣ ಮನೆಯಲ್ಲಿ ಮಾಡಿದ ಗಡಿಬಿಡಿ ಕಂಡು ರೇಗಿ ಒಬ್ಬ ಗೋಪಿ ಹೀಗೆ ಸಿಡುಗುಟ್ಟುತ್ತಾಳೆ.

ಶಂಕರಾಭರಣ—ಆದಿ

ತಾಳು ತಾಳಲೋ ರಂಗಯ್ಯ ನೀ ತಾಳು ತಾಳಲೋ ರಂಗಯ್ಯ ||ಪ ||
ನಾಳೆ ನಮ್ಮನೆಗೆ ಬಂದರೆ ನಿನ್ನ ಕಾಲು ಕಂಭಕೆ ಕಟ್ಟಿ ಹೇಳುವೆ ಗೋಪಿಗೆ||ಪ ||
ದೊರೆಗಳ ಮಗನೆಂಬುದಕೇನೋ ಬಹು ದೂರದಿ ಮನೆಯ ಪೊಕ್ಕ ಪರಿ
ಯೇನೋ । ದುರುಳ ಬುದ್ಧಿ ನಿನಗೆ ತರವೇನೋ ಹಿಂದೆ ತಿರುಗಿ ಬೇಡ್ಯುಂಡದ್ದು
ಮರೆತೆಯೇನೋ ರಂಗ ||೧ ||
ಕಟ್ಟಿದಾಕಳ ಮೊಲೆಗಳುಂಡು ಕರಬಿಟ್ಟು ಹೇಳುವುದೇನೆಲೋ ರಂಗ । ಸೃಷ್ಟಿ
ಗೊಡೆಯ ಶ್ರೀಪುರಂದರ ವಿಠ್ಠಲ ನೀಕಟ್ಟಲ್ಲಿ ನಿಂತ ಕಾರಣವೇನೋ ರಂಗ ||೩||

ಕೃಷ್ಣ ಬಂದು ಹಾಲು ಮೊಸರೆಲ್ಲ ಲೂಟಿ ಮಾಡಿಹೋದ ಕುರುಹನ್ನು ಒಬ್ಬ ಗೋಪಿ ಹೀಗೆ ಅರಹುತ್ತಾಳೆ.

ಸೌರಷ್ಟ—ಆಟ

ಯಾರೆ ಬಂದವರು ಮತ್ಯಾರೆ ಬಂದವರು ||ಪ ||
ನಾರಾಯಣ ಕೃಷ್ಣನಾಥನಲ್ಲದೆ ಬೇರೆ ||ಅ ||
ವಜ್ರರೇಖೆಗಳಿವೆ ಮನೆಯಲ್ಲಿ ಕಾಲು ಗೆಜ್ಜೆ ಧ್ವನಿ ಕೇಳಿಬರುತಿದೆ । ವಜ್ರ ಮಾಣಿಕ
ವೆಲ್ಲ ಹರಿದುಬಿದ್ದಿವೆ ಮಜ್ಜಿಗೆಯೊಳಗೆ ಕಾಣ್ವ । ಬೆಣ್ಣೆಯ ಕಾಣೆ ||೧ ||

— ಪುರಂದರದಾಸರು.

ಗೋಪಿಯರಿಗೆ ಕೃಷ್ಣ ಪರಬ್ರಹ್ಮನೆಂಬುದು ತಿಳಿದಿತ್ತು. ಅದರ ಲಕ್ಷಣಗಳನ್ನು ದಾಸರು ಅವಕಾಶವಾದಾಗಲೆಲ್ಲ ತೋರಿಸುವರು, ಕೃಷ್ಣಗೆ ಸಿಗದಂತೆ ಬೆಣ್ಣೆಯನ್ನೆಲ್ಲಿ ಬಚ್ಚಿಲಿಡಲೆಂದು ಗೋಪಿ ಹೇಳುವಳು.

ಕೇದಾರಗೌಳ—ಆಟ

ಎಲ್ಲಿ ಬೆಣ್ಣೆಯ ಬಚ್ಚಿಡಲಿ ನಾ । ಕಳ್ಳ ಕೃಷ್ಣನ ಹಾವಳಿ ಘನವಾಯಿತು||ಪ ||
ನೆಲವು ನಿಲುಕದೆಂದಿಡುವೆನೆ ಈ | ಬೆಳಿಯಾಲಾಜಾಂಡವಾಡಿಯೊಳಿಲ್ಲ ತಿಳಿಯದೆ
ಕೆಳದಲ್ಲಿ ಈಸುವೆನೆ ಈ । ಬೆಳಕುಗಳೆಲ್ಲ ಇವನ ಕಗಂಳಾಧಾಳಾ

(ii) ಶೃಂಗಾರಭಾವ

ಕೃಷ್ಣ ಗೋಪಿಯರೊಡನೆ ಮಾಡಿದ ಶೃಂಗಾರ ಚೇಷ್ಟೆಗಳನ್ನು ದಾಸರುಗಳು ಅತಿ ಚಮತ್ಕಾರವಾಗಿ ಬಣ್ಣಿಸಿದ್ದಾರೆ. ಒಬ್ಬ ಗೋಪಿ ತನ್ನ ಸಖಿಯ ಮುಂದೆ ತನ್ನ ಅನುಭವಗಳನ್ನು ಹೀಗೆ ಹೇಳುತ್ತಾಳೆ.

ಶ್ರೀರಾಗ—ರೂಪಕ

ದಾರ ಮಗನಮ್ಮ ರಂಗಯ್ಯ ದಾರಮಗನಮ್ಮ ।
ದಾರಿಯ ನೋಡುತ್ತಾ ದಾರು ಈತನು ದಾರು ತಿಳಿಯದು ||ಅ ||

ಅರವಿಂದಾನನೆ ಕೇಳ್ ಅರಮೊರೆಯಾದರೆ ಅರಿಯಂದದದಿ
ಬಂದು ಅಧರ ಮುದ್ದಾಡಿದ । ದಾರ । ||೧ ||
ಸರಸಿಜಾಕ್ಷಿ ಕೇಳ್ ರಾತ್ರಿವ್ಯಾಳ್ಯದಿ ಸರಸರನೆ ಬಂದು
ಸರಸವಾಡಿ ಪೋದ । ದಾರ । ||೪ ||

ಮೋಹನ ಕಲ್ಯಾಣಿ—ಅಟ

ಚಿಕ್ಕವನೇ ಇವನು ನಮ್ಮ ಕೈಗ ಸಿಕ್ಕದೆ ಓಡುವನು ||ಪ ||
ಅಕ್ಕಯ್ಯ ಮಕ್ಕಳು ಹುಟ್ಟುವ ಮರ್ಮವ ಫಕ್ಕನೆ
ಎನಕೂಡೆ ಹೇಳು ಹೇಳೆನುತಾನೆ ||ಅ ||
ನೀರಿಗೆ ಪೋಗುವಾಗ ನಿಂತುಕೊಡು ಯಾರೂ ಇಲ್ಲದೆ ಕರೆದ
ದಾರಿಗೆ ಅಡ್ಡವ ಕಟ್ಟಿ ಕೂಡಿಕೊ ಎನುತಲೆ
ಹೋರಾಟವಮಾಡಿ ಹೋಗಾಸಿದ ನಮ್ಮ । ಚಿಕ್ಕವನೇ ||೧ ||

ಮೊಸರನ್ನೆ ಕಡೆಯುವಾಗ ಬೆನ್ನಲಿ ಬಂದು ಕಣ್ಣಮುಚ್ಚಿಕಾಡುವ | ಬೆಣ್ಣೆಯ ತಾ ರೆಂದು ಕುಚಗಳ ಪಿಡಿಯುತ | ಬಣ್ಣಿಸಿ ಬಣ್ಣಿಸಿ ತಾ ಪ್ರಣಯ ಮಾಡಿದನಮ್ಮ||೨ ||

ನಿದ್ದೆ ಗಣ್ಣಿಲಿ ನಾನಿದ್ದೆ ಗಂಡನೆಂದು ಬುದ್ಧಿಯಿಲ್ಲದೆ ಕೂಡಿದೆ | ಎದ್ದು ನೋಡಲು ಅವನ ಎಡಗೈಯ ಪಿಡಿಯುತ್ತ | ಮುದ್ದು ಶ್ರೀ ಪುರಂದರ ವಿಠಲ ಕಾಣಮ್ಮಾ||೩ ||

ಇನ್ನೊಬ್ಬಗೋಪಿ ಸೆರಗ ಹಿಡಿದ ಕೃಷ್ಣನನ್ನು ಬಿಡೆಂದು ಪ್ರಾರ್ಥಿಸಿ ಕೊಳ್ಳುತ್ತಾಳೆ.

ಕೇದಾರ ಗೌಳ—ಆಟ

ಸೆರಗಬಿಡೋ ರಂಗ ಸೆರಗ ಬಿಡೋ । ಕರವಮುಗಿವೆನೊಮ್ಮೆ ಸೆರಗಬಿಡೋ ಪ
ಅತ್ತೆಕಂಡರೆ ಎನ್ನಹತ್ತಿರ ಸೇರಳು ಹರಿಯೆ । ಚಿತ್ತದೊಲ್ಲಭ ಎನ್ನಸೆರಗಬಿಡೋ೧
ಮಾವ ಕಂಡರೆ ಎನ್ನ ಜೀವಬಿಡನು ಹರಿಯೆ । ಚಿತ್ತದೊಲ್ಲಭ ಎನ್ನಸೆರಗಬಿಡೋ೨
ಗಂಡಕಂಡರೆ ಎನ್ನ ಗುಂಡಿಕ್ಕಿಕೊಲ್ಲುವ |ಪುಂಡರೀಕಾಕ್ಷ ಪುರಂದರವಿಠಲ ಬಿಡೋ೩

ಪುನ್ನಾಗವರಾಳಿ—ಆಟ

ಹಾಲು ಉಕ್ಕಿತೋ ರಂಗ ಹಾದಿಯ ಬಿಡೋ ।
ಹಾಲು ಬೇಕೇನೋ ನಿನಗೆ ಸೆರಗಬಿಡೋ ||ಅ ||

ಕರವಪಿಡಿದರೆನ್ನ ಸಾರಸ ಮುತ್ತಿನ ಸರಗಳು । ಹಿರಿದಾವು ಮುಟ್ಟದಿರೋರಂಗ । ಭರದಿಮುದ್ದು ಕೊಡುವರೇನೋ ಅತ್ತತ್ತ। ಸರಿಯೋ ನಮ್ಮವರು ಕಂಡಾರು ಕೃಷ್ಣ ೧

ಪುರುಷನುಳ್ಳವಳು ನಾ ಪುರುಷರು ಕೇಳ್ಯಾರು । ಗುರುತುಕಂಡರೆ ಕೊಲೆಯ ಕೊಂದಾರು । ಸರವಾಡಲು ಬೇಡ ಸಡಲೋವು ಮುಡಿಕುಪ್ಪು । ಸುರತ ಬೇಕಾದರೆ ಬರುವೆ ವನದೊಳಗೆ ||೨ ||

ತಟ್ಟನೇತುಟಿಯ ಚುಂಬಿಸುವರೇನೋ ನೀನು । ರಟ್ಟುಮಾಡದಿರೋ ರಾಜ್ಯದೊಳಗೆ

ಗುಟ್ಟಿನಿಂದಲಿ ತವಕದಿ ಎನ್ನಕೂಡೋ । ಅಟ್ಟಹಾಸದಿ ಮೆರವ ಪುರಂದರವಿಠಲ ೩

ಗೋಪಿ ಕೃಷ್ಣನನ್ನು ಚಿತ್ತದೊಲ್ಲಭನೆಂದು ಕರೆದು ಮಾರು ಹೋಗುತ್ತಾಳೆ. ಅವನ ಅಂಗಸಂಗಕ್ಕಾಗಿ ಗೋಪಿ ಅನವರತ ಹಾ ತೊರೆಯುತ್ತಾಳೆ. ಕೃಷ್ಣಬರದಿದ್ದಲಿ ಹೀಗೆ ಕಾತರಿಸುತ್ತಾಳೆ.

ಆನಂದ ಭೈರವಿ—ಛಾಪು

ಇದೇ ಸಮಯ ರಂಗ ಬಾರೆಲೋ । ಇದೇ ಸಮಯ ಕೃಷ್ಣ ಬಾರೆಲೋ ||ಪ ||
ಅತ್ತಿಗೆ ಲಕ್ಷಬತ್ತಿ ಶೀಲಳೋ । ಅಷ್ಟಾಗದೆ ಅವಳೇಳಲೋ ।
ಅತ್ತೆ ಪುರಾಣದಿಲೋಲಳೋ । ಸರಿಹೊತ್ತಿನ ವೇಳೆಗೆ ಬರುವಳೋ ||೧ ||
ಮಾವ ಎನ್ನಲಿ ಅವಿಶ್ವಾಸಿಯೋ । ಮದುವೆಯಾದ ಗಂಡ ಉದಾಸಿಯೋ
ಭಾವನು ಎನ್ನ ಸೇರ ಹೇಸಿಯೋ ನೀನೀ ವೇಳೆಗೆ ಬಂದರೆ ವಾಸಿಯೋ ||೨ ||
ತಂದೆ ತಾಯ ಆಸೆಮಾಡೆನೋ । ಎನ್ನ ಕಂದನ ಮೇಲೆ ಮನಸಿಡೆನೋ
ಮಂದರಧರ ಪುರಂದರವಿಠಲ ನೀ ಬಂದರೆ ಚರಣಸೇವೆ ಮಾಳ್ಪೆನೋ ||೩ ||

ಕೃಷ್ಣನಿಗಾಗಿ ಆತ್ಮಾರ್ಪಣೆ ಮಾಡಿದ್ದರಿಂದ ಗೋಪಿ ಅವನಿಗಾಗಿ ಇಷ್ಟು ಹಲಬುವಳು, ಆದರೂ ಪ್ರಪಂಚದ ಕಟ್ಟುಗಳು ಅನಿವಾರ್ಯ. ತನ್ನನ್ನು ಚೌರ್ಯದಿಂದ ರಮಿಸಿದ ಕೃಷ್ಣನನ್ನು ಗದ್ದಲಮಾಡಬೇಡೆಂದು ಒಬ್ಬ ಗೊಲ್ಲತಿ ಬೇಡಿಕೊಳ್ಳುತ್ತಾಳೆ.

ಕಲ್ಯಾಣಿ—ಆಟ

ಸದ್ದು ಮಾಡಲಿಬೇಡವೋ ನಿನ್ನ ಕಾಲಿಗೆ ನಾ ಬಿದ್ದು ಬೇಡಿಕೊಂಬೆ
ನಿದ್ದೆಗೆಯ್ಯುವರೆಲ್ಲ ಎದ್ದರೆ ನೀನುಬಂದದ್ದು ಕಂಡರೇನೆಂಬುವರೋರಂಗ ||ಅ ||
ಬಳೆ ಘಲ್ಲುಕೆನ್ನದೇನೋ ಕೈಯಪಿಡಿದು ಎಳೆಯದಿರೋ ಸುಮ್ಮನೆ ಮೊಲೆಗಳ
ಮೇಲಿನ ಸೆರಗನೆಳಿಯಲು ಕೊರಳಪದಕಗಳು ಧ್ವನಿಗೈಯುವುವು ರಂಗ ||೧ ||
ನೆರಿಗೆ ಕೈ ಕೊಡದಿರೋ ಕಾಂಚಿಯದಾಮ ಉಡಿಗಂಟು ಧ್ವನಿಗೈಯದೆ
ಕರದುಟಿಯನು ಸವಿದು ಚಪ್ಪರಿಸಲು ತರವಲ್ಲ ಗಂಡ ಮತ್ಸರಪ ತಾಳುವನಲ್ಲ
ನಾಡ ಮಾತುಗಳೇತಕೋ ಸಂಗೀತವು ಪಾಡುವ ಸಮಯವೇನೋ | ಗಾಡಿಕಾರ
ಶ್ರೀಪುರಂದರವಿಠಲನೆ ಗಾಡಿ ಪಂಥಗಳೊಡಗೂಡುವ ಸಮಯಕ್ಕೆ ||೩ ||

ಆದರೊಬ್ಬ ಗೋಪಿಗೆ ಆತ್ಮಾಭಿಮಾನ ಸ್ವಲ್ಪ ಹೆಚ್ಚು. ಅವಳು ಅಷ್ಟು ಸಲಿಗೆ ಕೊಡಲಾರಳು.

ಗೌಳಪತುರಾವಳಿ—ಆಟ

ಏಕೆ ನಿನಗಿಷ್ಟು ಗಾಂಜಾಲ ಬಿಡೋ ಹರಿಯೇ ||ಅ ||
ಚಿಕ್ಕವಳೆಂದು ನೀ ಠಕ್ಕು ಮಾಡಲಿಬೇಡ
ಕಕ್ಕಸಕುಚಗಳ ಕೈಯಲಿ ಕೊಡುವಳಲ್ಲ ||೧ ||

ಸದರ ಬೇಡ ನಿನ್ನ ಬಗೆಯೆಲ್ಲಾ ನಾ ಬಲ್ಲೆ
ಬೆದರಿಸಿದರೆ ನಾನು ಅಂಜುವ ಹೆಣ್ಣಲ್ಲ ||೨ ||
ಸಾಕು ನಿನ್ನ ಸರಸಸಲ್ಲಾಪವು ಬೆರೆತು
ಬೇಕೆಂದು ಬರುವೆನು ಪುರಂದರವಿಠಲ ||೩ ||

ಬಾಣಂತಿಯಾದ ಗೋಪಿಯೊಬ್ಬಳು ತನ್ನ ದೆಸೆಯನ್ನು ಹೀಗೆ ಹೇಳಿಕೊಳ್ಳುತ್ತಾಳೆ.

ಕಾಂಬೋಧಿ—ಛಾಪು

ಬಾಣಂತಿ ಎನ್ನ ಬಾ ಎಂತಿ ||ಪ ||

ಬಾಣಂತಿ ಎಂಬೊ ಬಗಯ ನೀನರಿತು |ಬಾರೆಂದು ಕರೆಯೋದುಚಿತವೇ ರಂಗಅ

ಖಾರಕಷಾಯಂಗಳು ಕೇಳಲೋ ರಂಗ ಒಪ್ಪತ್ತಿನಾಹಾರವು । ಯಾರು ಹೇಳಿದರೂ ನೀ ತಿರುಗಿ ಹೇಳುತ್ತಿದ್ದೆ । ಊರನಾರಿಯರೆಲ್ಲ ನಗರೇನೋ ರಂಗ ||೨ ||

ಗುಟ್ಟು ಗುಮ್ಮತಲಿದೆಯೋ ಕೇಳಲೋ ರಂಗ । ಮೈಯೊಳು ಕಷ್ಟವಾಗುತಲಿದೆಯೋ । ಎಷ್ಟು ಹೇಳಿದರೂ ಮತ್ತಷ್ಟು ಹೇಳುತಲಿದ್ದೆ । ನಿಷ್ಠೂರವೇತಕ್ಕೆ ಬೇಡ ರಂಗಯ್ಯ ||೩ ||

ಕಟ್ಟಿದ ಮಂಡೆಕಟ್ಟು ಕೇಳಲೋ ರಂಗ ಪಣೆಯೊಳಿಟ್ಟ ಸಾದಿನಬೊಟ್ಟು । ತೊಟ್ಟಿ ಕುಪ್ಪಸವೆಲ್ಲ ಗುಷ್ಟು ಎಣ್ಣೆ ಮಣುಕು ಮುಟ್ಟಬೇಡ ಸಿರಿ ಪುರಂದರವಿಠಲ ||೫ ||

ಕೃಷ್ಣಗೋಪಿಯರ ಶೃಗಾರಕೇಳಿಯ ಸಂವಾದವನ್ನು ದಾಸರು ಸರಸವಾಗಿ ಚಿತ್ರಿಸಿದ್ದಾರೆ.

ಶ್ಯಾಮ ಕಲ್ಯಾಣಿ—ಛಾಪು

ಕಾಲಿಗೆ ಬಿದ್ದೆನೋ ಕೈಯಬಿಡೋ । ಬಾಳು ಬದುಕು ಮುತ್ತೈದಾಗಿ ಅಧರ ಚುಂಬಿಸದಿರೋ ರಂಗಯ್ಯ । ಅಧರ ಸವಿಯೊಂದು ಸವಿದೇನೆ ।
ಎದೆಯಮುಟ್ಟದಿರೋ ರಂಗಯ್ಯ । ಅದು ಮರದ ಮೊಗ್ಗೆಂದು ಪಿಡಿದೇನೆ ।
ಅತ್ತೆ ಕಂಡರೆ ರಚ್ಚೆನಿಕ್ಕೊಳು ಅವಳಿತ್ತ ಬಂದರೆ ಮರುಳಾಗುವಳೇ ।
ಗಂಡ ಕಂಡರೆ ಎನ್ನ ಕೊಂದಾನು ಎದೆ । ಗುಂಡಿಗೆಷ್ಟು ಇಲ್ಲಿ ಬರಲಿಕ್ಕೆ ।
ನಾದಿನಿ ಎನ್ನನು ಸೇರಳು ಅತಿಮೋದವಾಗಿ ಇಬ್ಬರಾಳುವೆ ।
ಮನವೇ ಕೊಂಬರೆಲ್ಲದೆ ರಗಳು ಎನ್ನ ಪುರಂದರವಿಠಲನೆಂದರಿಯೇನೆ ||

ಯದುಕುಲಕಾಂಬೋಧಿ—ಆಟ

ಋತುಮತಿ ಬಿಡೊ ಸೆರಗ ನೀ । ಋತುವಾದರೆ ನಾ ರತಿ ಕೊಡಬರುವೆ ।
ಅಣ್ಣಯ್ಯ ಕೃಷ್ಣ ಬಿಡೋ ಸೆರಗ ನಾ । ಅಣ್ಣನಲ್ಲವೇ ನಿನ್ನ ಅಣ್ಣನ ಭಾವ ।
ಭಾವಯ್ಯ ಕೃಷ್ಣ ಬಿಡೋ ಸೆರಗ ನಾ । ಭಾವನಲ್ಲವೇ ನಿನ್ನ ಭಾವನ ತಮ್ಮ ।
ತಮ್ಮಯ್ಯ ಕೃಷ್ಣ ಬಿಡೋ ಸೆರಗ ನಾ । ತಮ್ಮನಲ್ಲವೇ ನಿನ್ನ ತಮ್ಮನ ಬೀಗ

ಬೀಗಯ್ಯ ಕೃಷ್ಣ ಬಿಡೋ ಸೆರಗ ನಾ । ಬೀಗನಲ್ಲವೇ ನಿನ್ನ ಬೀಗನ ಬೀಗ ।
ಮಾವಯ್ಯ ಕೃಷ್ಣ ಬಿಡೋಸೆರಗ ನಾ । ಮಾವನಲ್ಲವೇ ನಿನ್ನ ಮಾವನಮಗನು ।
ಕಂದಯ್ಯ ಕೃಷ್ಣಬಿಡೋ ಸೆರಗ ನಾ । ಕಂದನಲ್ಲವೇ ನಿನ್ನ ಕಂದನ ತಂದೆ ।
ಗಂಡಯ್ಯ ಕೃಷ್ಣ ಬಿಡೋ ಸೆರಗ ನಾ । ಗಂಡನಲ್ಲವೇ ನಿನ್ನ ಗಂಡನಮಿಂಡ ।
ಅರಸಯ್ಯ ಕೃಷ್ಣ ಬಿಡೋ ಸೆರಗ ನಾ । ಅರಸನಲ್ಲವೇ ನಿನ್ನ ಸರಸಕ್ಕೆ ಬಂದೆ ।
ಗೊಲ್ಲರ ಗೋಕುಲದೊಳಗೆ ಎನ್ನ । ಫುಲ್ಲಲೋಚನ ಶ್ರೀ ಪುರದರವಿಠಲ ||

ಸೌರಾಷ್ಟ್ರ—ಅಟ

ಗೋಕುಲದೊಳಗೊರ್ವ ರಾಕೆಂದುಮುಖಿ ತಾನು । ಜೋಕೆಲಿ ಕೊಡವ ಪೊತ್ತು ।
ಬೇಕಾದವರಿಗೆ ನಾ ಕೊಡುವೆನು । ಹಾಲೆಂದಾಕೆ ಸಾರುತ ಬಂದಳು ||ಅ ||
ಕನ್ನಡಿ ಕದಪಿನ ಎಣ್ಣೆಗಂಟಿನ ಜಾಣೆ ಕಣ್ಣಿಗೆ ಕಪ್ಪನ್ಹಚ್ಚಿ
ಚಿನ್ನಬಣ್ಣವನಿಟ್ಟು ಬಿನ್ನ ಬಿಳಿದನುಟ್ಟು ಬೆಣ್ಣೆಮಾರುತ ಬಂದಳು ||೧ ||
ಪನ್ನಗಶಯನನು ಸಣ್ಣ ನಾಮವನಿಟ್ಟು ರನ್ನದ ಕೊಳಲ ಪಿಡಿದು
ಕನ್ನೆ ಹೆಣ್ಣುಗಳ ಕೈಸನ್ನೆಯ ಮಾಡುತ ಚನ್ನ ಕೇಶವ ಬಂದನು ||೨ ||
ಪಟ್ಟಣದೊಳು ನಿನ್ನ ಬಿಟ್ಟವನಾರೆಲೆ ಕೊಟ್ಟು ಪೋಗೆಲೆ ಸುಂಕವ
ಸಿಟ್ಟು ಬಂದರೆ ನಿನ್ನ ಬಟ್ಟಕುಚದ ಮೇಲೆ ಪೆಟ್ಟುಹಾಕುವೆನೆಂದನು ||೩ ||
ಪೆಟ್ಟುಹಾಕುವುದಕ್ಕೆ ಬಿಟ್ಟಿಗೆ ಬಿದ್ದಿಲ್ಲ ಇಷ್ಟು ಮಾತುಗಳೇತಕೋ
ಪಟ್ಟದರಸಿಗ್ಹೇಳಿ ಕಟ್ಟಿಸುವೆನು ಕೈಯ ಗುಟ್ಟಲಿ ಸುಮ್ಮನಿರು ||೬ ||
ತಡೆಯದೇ ಕೊಡುಬೇಗ ಬಿಡುವವ ನಾನಲ್ಲ ಕುಡುತೆ ಕಣ್ಣವಳೇಕೇಳಿ ಬಡನಡುವಿ
ನೊಳಿಟ್ಟ ಉಡುಗೆಯಸೆಳೆದು ನಿನ್ನೊಡಗೂಡಿ ಬಿಡುವೆನೆಂದ —ಪುರಂದರದಾಸರು

ಕೃಷ್ಣ ಓಕಳಿಯಾಡಿದುದನ್ನು ಹರಿಗೋಲು ನಡೆಸಿದುದನ್ನು ಹೀಗೆ ಚಿತ್ರಿಸುತ್ತಾರೆ.

ಪೂರ್ವಿ—ಆಟ

ಅಡಿದನೊಕುಳಿಯ ನಮ್ಮ ರಂಗ ಆಡಿದನೋಕುಳಿಯ ।
ರಂಭಿಸಿ ಕರೆದು ಚುಂಬಿಸಿ ಒಗೆದನು ರಂಭೇರಿಗೋಕುಳಿಯ ||

ಧನಶ್ರೀ—ಆದಿ

"ಆಡಿಸು ನೀ ಬಾರೋ ಹರಿಗೊಲ್ಹಾಕಿಸು ನೀ ಬಾರೋ"

ಗೋಪಿಯರ ಸೀರೆಗಳನ್ನು ಅಪಹರಿಸಿ ಮರದ ಮೇಲೆ ಬಚ್ಚಿಟ್ಟುದನ್ನು ಹೀಗೆ ವರ್ಣಿಸಿದ್ದಾರೆ.

ಕಾಪಿ—ಆದಿ

ತೋರೋ ವಸನ ಎಷ್ಟೋ ವಿನೋದ ||
ಕಡಹದ ಮರನೇರಿ ಕಾಡುವುದುಚಿತವೇ ತಡವಾಗುವುದೈ ಒಡೆಯರುಳ್ಳವರಿಗೆ ।

ಚಿತ್ತಜನ್ಯೆಯನೆ ಮತ್ತಗಮನೆಯರ ಬತ್ತಲೆ ನಿಲ್ಲಿಸುವುದುತ್ತಮವಲ್ಲವೋ ||
ಪರಮಪುರುಷ ನಿನ್ನವರು ಎಂದಿಗೂ ನಾವು । ಕರುಣಿಸು ಎಮ್ಮ ಸಿರಿ
ವಿಜಯವಿಠಲ ||೩|| — ವಿಜಯದಾಸರು.

ಹೀಗೆ ಕೃಷ್ಣ ಗೋಪಿಯರ ಶೃಂಗಾರಭಾವ ಬಣ್ಣಬಣ್ಣವಾಗಿ ಚಿತ್ರಿಸಿದ್ದಾರೆ. ಗೋಪಿಯರಿಗೆ ಹರಿಯ ಈ ಲೀಲೆಗಳು ಅತಿ ಹಿತ. ಆದರೆ ಲೋಕ ರೂಢಿಯಂತೆ ಅವರು ಯಶೋದೆಯ ಮುಂದೆ ಕೃಷ್ಣನನ್ನು ದೂರುವರು.

iii. ಗೋಪಿಯರ ದೂರು

ಕಾಂಬೋಧಿ—ಆದಿ

ಕೇಳೆ ಯಶೋದೆ ನಿನ್ನ ಮಗನ ಲೂಟಿಯ ||ಪ||

ತಾಳಲಾರದೆ ನಾವು ತರಳನ ದುಡುಕು । ಪೇಳಬಾರದೆ ಗೋಪಾಲ ಕೃಷ್ಣಗೆ ಬುದ್ಧಿ। ಅಮ್ಮ ಇದು ಚೆನ್ನಾಯಿತು ತಿಳದವನಲ್ಲವೆ । ನೀ ಕೇಳೆ ಯಶೋದೆ ನಿನ್ನ ಮಗನ ಲೂಟಿಯ ||ಅ||

ಬಾಲಕನೆಂದು ಲಾಲಿಸಿ ಕರೆದರೆ ಮೂಲೆ ಮನೆಯೊಳಗೆ ಪೊಕ್ಕು ಪಾಲುಮೊಸರು ಬೆಣ್ಣೆಗಳ ಮೆದ್ದು ಕೋಲಿಲಿ ನೀರಕೊಡಗಳೊಡೆದ । ನೀಲವರ್ಣನಿವ ದಿಟ್ಟ ನಿತ್ಯ ವೀ ಹೋರಾಟ । ಬಾಲೆಯರಲ್ಲಿ ನೋಟ ಬಹಳ ಬಗೆಯಲ್ಲಿ। ತಿಳಿದೆವೆಂದರೆ ಮೇಲೆ ಎಂಜಲುಗುಳಿಪೋದ ಅಮ್ಮಾ। ತಿಳಿದವನಲ್ಲವೆ ನೀ ಕೇಳೆ — ವ್ಯಾಸರಾಯರು

ಗೋಪಿಯರ ದೂರಿನಲ್ಲೂ ನಾನಾ ಭಾವಗಳು ಚಿತ್ರಿತವಾಗಿವೆ.

ಬೇಗಡೆ—ಛಾಪು

ಸೈರಿಸಲಾರನೆ ಗೋಪಿ ನಿನ್ನ ಮಗನ ಲೂಟಿ ಏನೆಂದು ಪೇಳಲಮ್ಮ । ವಾಸುದೇವನು ಬಂದು ಮೋಸದಿಂದಲಿ ಎನ್ನವಾಸವ ಸೆಳಕೊಂಡು ಓಡಿಪೋದನಮ್ಮ ||ಅ||

ದೇವರ ಪೆಟ್ಟಿಗೆ ತೆಗೆದು ಸಾಲಿಗ್ರಾಮ ಸಾವಿರ ನುಂಗುವನೆ ಭಾವಜನಯ್ಯ ಇದೇನೆಂದರೆ ನಿಮ್ಮಕಾಮದೇವನಾ ಕೇಳಿಕೊ ಎಂಬನೆ ||೧||

ಅಟ್ಟಡುಗೆಯನೆಲ್ಲ ಉಚ್ಛಿಷ್ಟಮಾಡಿ ಅಷ್ಟು ತಾ ಬಳಿದುಂಬನೆ । ಕೃಷ್ಣದೇವರ ನೈವೇದ್ಯವೆಂದರೆ ನಿಮ್ಮ ಇಷ್ಟದೇವರು । ತೃಪ್ತನಾದನೆಂತೆಂಬನೆ ||೩||

ಋತುವಾದ ಬಾಲೆಯರು ಪತಿಯೆಡೆಗೆ ಪೋಪಾಗ ಪಥದೊಳಡಗಿರುವ । ಮತಿಗೆಟ್ಟಹೆಣ್ಣೆ ಸುಂಕವ ಕೊಡು ಎನುತಲಿ । ರತಿಯಿಂದ ಮಾನವಸೂರೆಗೊಂಬುವನೆ ಳ

ಅಚ್ಚ ಪಾಲ್ಮೊಸರು ನವನೀತವು ಮಜ್ಜಿಗೆ ರಚ್ಚಮಾಡಿ ಕುಡಿದ । ಸ್ವಚ್ಛ ಶ್ರೀಪುರಂದರ ವಿಠಲರಾಯರ ಇಚ್ಛೆಯಿಂದಲಿ ನಿನ್ನ ಮನೆಗೆ । ಕರೆದುಕೊಳ್ಳೆ ||೫||

ಕೇದಾರಗೌಳ—ಆದಿ

ಗೋಪಿ ನಿನ್ನ ಮಗಗಂಜುವೆನಮ್ಮ

ಪರಮಾತ್ಮನು ಬೆಣ್ಣೆಯ ಬೇಡುತ್ತಲಿಹನೆ । ಗೋಪಿ ||ಪ ||

ಕಡೆವುತ್ತಪಾಡಲು ಅತಿಶಯ ಹರುಷದಿ ಕಡಗ ಪೆಂಡೆಯು ಕಾಲ್ ಝುಣರೆನುತ ಕಡೆಯದೆ ಕೈಯಾಡದೆ ಸುಮ್ಮನಿರಲು ತುಡುಕಿ ಬೆಣ್ಣೆಯ ಮೆದ್ದುಓಡಿಹೋದ ||೧||

ಮುಂಗಾಲ ಮಕ್ಕಳ ತೊಟ್ಟಿಲೊಳಗೆ ಹಾಕಿ । ತಿಂಗಳ ಶಿಶುವ ನೆಲಕೆಡಹಾಕುವ । ಅಂಗಳದೊಳಗೆಲ್ಲ ಚಾಲವಾರೀ ವ್ಯಾಪಾರ । ಹೆಂಗಳೊಡನೆ ಮಾತನೊಲಿದಾಡುವ

ಅರೆವ ಗುಂಡ ದೇವರ ಜಗುಲಿಯೊಲಿಟ್ಟು । ಹರಿಗಳ ತಂದು ರಾಯಕಲ್ಲ ಮೇಲಿಟ್ಟು । ಮರೆದೊರಗಿದ್ದ ಮಕ್ಕಳ ಬಡಿದೆಬ್ಬಿಸಿ ಅರಿಯದಂತೆ ಬೊಬ್ಬಿಡುವ ||೩||

— ಪುರಂದರದಾಸರು

ಕೇದಾರಗೌಳ—ಅಟ

ಬೇಡವೇ ನೀನು ಹೀಗೆ ಕಾಡುವ ಕೃಷ್ಣನ ಕರೆದು ಬುದ್ದಿಯಪೇಳೆ ||

ಎಣ್ಣೆ ಮಂಡೆಯಲಿ ಬಣಬಚ್ಚಲೊಳಗಿರೆ । ಬಣ್ಣಿಸಿ ನೆರವೆನೆಂದರೆ ಚದುರತೆಯಿಂದ ಬೆನ್ನನೊರೆಸಲು ಬಂದು ಬೆದೆರುವಳ ತನುವ ತಕ್ಕಯ್ಸಿನಿಂದು । ಗೋಪಮ್ಮ ಕೇಳು ಚಿಣ್ಣ ಜಾರನೋಡೆ ಎನ್ನ ನಾಚಿಕೆಗೊಂಡ ||೧||

ಸೌರಾಷ್ಟ್ರ—ಅಟ

ನಿನ್ನ ಮಗನ ಮುದ್ದು ನಿನಗಾದರೆ ಗೋಪಿ ಯಾರಿಗೇನೇ ಅಮ್ಮ।
ಎನ್ನ ಕೂಡೆ ತಾ ಸರಸವಾಡುತಾನೆ ಸಾರು ನೀನೆ ||
ಹೆಚ್ಚಿನ ಸತಿಯರ ಕಚ್ಚೆಯ ಬಿಚ್ಚುವ ಹುಚ್ಚನೇನೆ ಅಮ್ಮ।
ಇಚ್ಛೆಯರಿತು ನಮ್ಮ ಗಲ್ಲವ ಕಚ್ಚುವ ನಲ್ಲನೇನೆ ||

ಮೋಹನ—ಆದಿ

ಮೆಲ್ಲಮೆಲ್ಲನೆ ಬಂದನೆ ಗೋಪಮ್ಮ ಕೇಳೆ ಮೆಲ್ಲಮೆಲ್ಲನೆ ಬಂದನೆ ||
ಮೆಲ್ಲಮೆಲ್ಲನೆ ಬಂದು ಗಲ್ಲಕೆ ಮುದ್ದುಕೊಟ್ಟು |
ನಿಲ್ಲದೆ ಓಡಿ ಹೋದ ಕಳ್ಳಗೆ ಬುದ್ಧಿಪೇಳೆ ||೧||

ಧನಶ್ರೀ—ಆಟ

ಕಳವು ಕಲಿಸಿದೆಮ್ಮ ಗೋಪಿ ಕಮಲನಾಭಗೆ
ಉಳಿಸಿಕೊಂಡ್ಯ ನಿಮ್ಮ ಮನೆಯ ಪಾಲುಬೆಣ್ಣೆಯ ||ಅ||

ಆರು ಏಳಾದ ಮುನ್ನ ಎಬ್ಬಿಸಿ ಶೃಂಗಾರವ ಮಾಡಿ । ಗೀರು ಗಂಧವ ಹಚ್ಚಿ ಹಾರವ ಹಾಕಿ । ಕೇರಿಕೇರಿ ಹಾಲು ಬೆಣ್ಣೆ ಸೂರೆ ಮಾಡಿ ಬಾರೆನ್ನುತ । ಪಾರಿಜನಾಭನ ಕಳುಹಿದೆಮ್ಮ ವನಜನಯ್ಯನ ||೧||

ಪಾರಿಜನಾಭ ಮಾಡಿದಂಥ ದೂರು ಹೇಳಿದರೆ । ನಿಮಗೆ ಬಾಯಿ ಬಡಕರೆಂದು ಗೋಪಿ ಬೈವೆ ನಮ್ಮನು । ಊರು ಮಾಡಿದ ಕೊಳಗ ತಾಯಿ ಮಾಡಿದ ಹೊಟ್ಟೆ ।

ಪಾರಿಜನಾಭನ ಕರೆದು ಗೋಪಿ ಬುದ್ಧಿಯ ಹೇಳೆ ||೪|| – ಪುರಂದರದಾಸರು

ಧನಶ್ರೀ–ಆದಿ

ಯಶೋದೆ ನಿನ್ನ ಕಂದಗೆ ಏನು ರೂಪವೇ ।

ಶಿಶುವಲ್ಲ ನಿನ್ನ ಮಗ ಕೃಷ್ಣ ಜಗತ್ಪತಿಯೇ ||ಪ||

ಹಸುಗಳ ಕರೆವಲ್ಲಿ ಹಲವು ರೂಪ ತೋರುವ–ಬಿಸಿಯ ಹಾಲಿಡು । ವಲ್ಲಿ ಬೆನ್ನ ಹಿಂದಿರುವ । ಮೊಸರ ಕಡೆಯುವಲ್ಲಿ ಮುಂದೆ ತಾ ನಿಂದಿರುವ । ಹಸನಾಗಿ ಮೋಸವ ಮಾಡಿ ಬೆಣ್ಣೆಯ ಮೆಲ್ಲುವ ||೧||

ಒಬ್ಬರ ಮನೆಯಲ್ಲಿ ಮಲಗಿ ತಾನಿರುವ । ಒಬ್ಬರ ಮನೆಯಲ್ಲಿ ಬೆಣ್ಣೆ । ಕದ್ದು ಮೆಲುವ । ಒಬ್ಬರ ಮನೆಯಲ್ಲಿ ರತಿಕ್ರೀಡೆಯಾಡುತಲಿರುವ । ಒಬ್ಬರ ಮನೆಯಲ್ಲಿ ಪುಟ ಚೆಂಡನಾಡುವ ||೨||

ಹಿಂದೆ ತಾ ನಿಂದಿರುವ ಮುಂದೆ ಹೋಗುತ್ತಿರುವ । ಇಂದು ಮುಖಿ । ಯರ ಕೂಡೆ ಸರಸವಾಡುವ । ಬಂದು ನೋಡೆ ಯಶೋದೆ ಬಣ್ಣದ । ಮಾತಲ್ಲ । ನಂದ ಗೋಪನ ಕಂದ ಪುರಂದರ ವಿಠಲ ||೩||

ಈ ಪದದಲ್ಲಿ ಪರಿಪರಿ ಲೀಲೆಯಾಡಿದ ಕೃಷ್ಣ "ತದೇಜತಿ ತನ್ನೇಜತಿ ತದ್ದೂರೆ ತದ್ವದಂತಿಕೆ'' ಎಂಬ ಉಪನಿಷತ್ಪ್ರತಿಪಾದ್ಯನಾದ ಭಗವಂತನೆಂದು ಗೋಪಿಯರು ಅರಿತಿದ್ದರೆಂದು ದಾಸರು ಸೂಚಿಸಿದ್ದಾರೆ.

ಗೋಪಿಯರು ಬಾಡಿ ಹೇಳಿದ ಪರಿಯನ್ನು ಕನಕದಾಸರು ಚಮತ್ಕಾರವಾಗಿ ಚಿತ್ರಿಸಿದ್ದಾರೆ.

ನೆರೆದು ಗೋಪಿಯರೆಲ್ಲರು ಶ್ರೀಕೃಷ್ಣನ ಸೆರಗು ಪಿಡಿದುಕೊಂಡು ||ಪ||

ಭರದಿಂದ ಬಂದು ಯಶೋದೆಗೆ ಬಾಡಿಯನರುಹಿದರತಿವೇಗದಿ ||ಅ||

ಬಲು ಕಳ್ಳ ನಿನ್ನ ಮಗ ಗೋಪಮ್ಮ ಕೇಳೆ ಹಾಲು ಕರೆಯುತಿರಲು

ತೊಲೆಗೆ ನಿಚ್ಚಣಿಕೆಯ ಹಾಕದೆ ಸುರಿದನು ನೆಲುವಿನ ಪಾಲ್ಮೊಸರ ||೧||

ಅಮ್ಮಯ್ಯ ಇಲ್ಲ ಕಾಣೆ ಇವಳು ಎನ್ನ ಸುಮ್ಮನೆ ದೂರುವಳೆ

ಹಮ್ಮಿಂದ ನಾನವಳಟ್ಟಕ್ಕೆ ನೆಗೆವರೆ ಬೊಮ್ಮಜಟ್ಟಿಗನೇನಮ್ಮ ||೨||

ಮಾಂಜಿ–ಆಟ

ಎನ್ನಾಣೆ ಬೇಡ ಬೇಡವೋ ರಂಗ ನಿನಗಿನ್ನು

ಚೆನ್ನಗಿತ್ತೇರಮನೆ ಗೋವಿಂದ ಚೆನ್ನಗಿತ್ತೇರಮನೆ ||ಪ||

ನಿನ್ನಯ ಬಿನ್ನಾಣ ಪೇಳು ತಲ್ಲೈದಾರೆ ಚೆಣ್ಣ ನೀ

ಪೋಗಬೇಡ ಗೋವಿಂದ ಚೆಣ್ಣನೀ ಪೋಗಬೇಡ ||ಅ||

ಗೋಪೇರ ಮನೆಗಳ ಪೊಕ್ಕು ನೀ ಪರಿಲೂಟಿ । ಮಾಡುವರೆ ಕಂದ ಗೋವಿಂದ

ಲೂಟಿ ಮಾಡುವರೆ ಗೋವಿಂದ । ಕಪಟಿಶಟವೇರ ಮಾತನು ಕೇಳಿ ಕೋಪಿಸ ಬೇಡವಮ್ಮ। ಗೋಪೆಮ್ಮ ಕೋಪಿಸಬೇಡವಮ್ಮ । ||೧||

ಮಲಗಿದ್ದ ತುರುಗಳೆಬ್ಬಿಸಿ ಕರುಗಳ ಬಿಚ್ಚಿ ದುರುಳತನವ । ಮಾಡೋರೇ ಮುರಾರೇ ದುರುಳತನವ ಮಾಡೋರೇ । ಮಲಗಿದ್ದ ಮಕ್ಕಳೇಳುವ ಗುಲ್ಲುಗಳಿಂದ ತುರುಕರು । ಬೆದರಿತಮ್ಮ ಗೋಪೆಮ್ಮ ತುರುಕರು ಬೆದರಿತಮ್ಮ । ||೨||

ಅಣ್ಣಯ್ಯ ಬಲರಾಮ ಬಿನ್ನಾಣೆ ಸುದ್ದಿಯ ಚೆನ್ನಾಗಿ ಪೇಳಿದನೋ ಗೋವಿಂದ ಚೆನ್ನಾಗಿ ಪೇಳಿದನೋ । ಉನ್ನಂತ ದಾಯಾದಿಯ ಮಾತುಗಳ ಕೇಳಿ ಮನ್ನಿಸ ಬೇಡವಮ್ಮ। ಗೋಪೆಮ್ಮ ಮನ್ನಿಸಬೇಡವಮ್ಮ ||೬ || — ವಾದಿರಾಜರು.

ಗೋಪಿಯರ ದೂರಿಗೆ ಪ್ರತಿಯಾಗಿ ಕೃಷ್ಣ ದೂರು ಹೇಳುವ ಪರಿ ಸ್ವಾರಸ್ಯವಾಗಿದೆ.

ಮೋಹನ–ಛಾಪು.

ಗೊಲ್ಲತಿಯರೆಲ್ಲ ಕೂಡಿ ಗೋಪಮ್ಮ ಕೇಳೆ
ಕಳ್ಳನೆಂದು ದೂರುತಾರೆ ಎನ್ನ ಮೇಲೆ ||ಪ||
ಇಲ್ಲದ್ದ ಪುಟ್ಟಿಸಿ ಎನ್ನ ಕೊಲ್ಲಬೇಕೆಂದು ಬಗೆಯೆ ||ಅ||
ಹರವಿ ಹಾಲು ಕುಡಿಯಲು ಎನ್ನ ಹೊಟ್ಟೆ ಕೆರೆಯೇನೆ ಹೇಳಮ್ಮಯ್ಯ
ಕರೆದು ಅಣ್ಣನ ಕೇಳಮ್ಮ ಉಂಟಾದರೆ ಒರಳಿಗೆ ಕಟ್ಟಮ್ಮಯ್ಯ ||೧||
ಮೀಸಲು ಬೆಣ್ಣೆಯನು ಮೆಲುವುದದು ಎನಗೆ ದೋಷವಲ್ಲವೇನಮ್ಮಯ್ಯ
ಆಸೆ ಮಾಡಿದರೆ ದೇವರು ಕಣ್ಣ ಮೋಸದಿ ಕುಕ್ಕುವನಮ್ಮಯ್ಯ ||೨||
ಪುಂಡುತನವಮಾಡಲು ನಾನು ದೊಡ್ಡವನೇನೆ ಹೇಳಮ್ಮಯ್ಯ ।
ಕಂಡವರು ದೂರುತಾರೆ ಗೋಪೆಮ್ಮನಾ
ನಿನ್ನ ಕಂದನ್ನಲ್ಲವೆ ಹೇಳಮ್ಮಯ್ಯ ||೪|| — ವ್ಯಾಸರಾಯರು

ವಸಂತ ಭೈರವಿ

ಗೋಕುಲದಲ್ಲಿ ನಾನಿರಲಾರೆ ಗೋಪಮ್ಮ ಕೇಳೆ ||ಪ||
ಹಾಲುಮೊಸರ ನಾನೊಲ್ಲೆಂಬೆ ಭರದಿಂದಲಿ
ಬಂದು ಕಾಲಲಿ ಬಿದ್ದು ಕುಡಿಸುವರು ||ಅ||

ಮಂದಗಮನೇರು ತಾವು ಬಂದು ಕೈ ಹಿಡಿದುಕೊಂಡು ಬಾ ಗೋವಿಂದನೆಂದು ಕರೆದು ಸದನದೊಳಗೆ । ಮಿಂದು ಹಾಸಿಗೆ ಹಾಸಿ ನಮ್ಮಧರಸವಿದು ಅವರ । ಅಧರಧರಕ್ಕೆ ನಾ ಗಡ ಗಡ ನಡುಗಿದೆ. ||೨|| — ಪುರಂದರದಾಸರು.

ತನ್ನ ಮಗ ತಪ್ಪಿತಸ್ಥನಲ್ಲವೆಂದು ಗೋಪಮ್ಮ ಹೇಳಿಕೊಳ್ಳುವಳು.

ಕಲ್ಯಾಣಿ – ಅಟ

ಏಕೆ ದೂರುವಿರೆ ರಂಗಯ್ಯನ ಏಕ ದೂರುವಿರೆ ।

ಸಾಕು ನಿಮ್ಮ ದೂರನು ಬಲ್ಲೆನು ಈ ಕುವರನಾಕೃತ್ಯ ಮಾಳ್ಪನೇ ||ಅ ||
ದಟ್ಟಡಿ ಇಡಲರಿಯ ಗೋವತ್ಸನ ಬಿಟ್ಟು ಚಲಿಸಬಲ್ಲನೆ | ಗಟ್ಟಿಯಾಗಿ
ಗೂತ್ತಿನಲಿ ಕಟ್ಟಿನೊಳು | ಕಟ್ಟಿದ ಕರುಗಳ ಬಿಟ್ಟನೇ ಈ ಕೃಷ್ಣನ
ಮೇ |ಲೆಷ್ಟು ಹೊಟ್ಟೇಕಿಚ್ಚೇ ನಿಮಗೆ ||೧ ||
ಕೆನೆಹಾಲು ಬೆಣ್ಣೆಯನು ಇತ್ತರೆ ಆದಿನವೊಲ್ಲನು ಊಟವ ಮನೆ ಮನೆ
ಗಳನು ಪೊಕ್ಕು ಬೆಣ್ಣೆಪಾಲ್ಮೊಸರನು ತಿನ್ನುತ ವನಿತೆಯರ ಕೂಡಾಡಿ
ದನೆಂದನೆಲು ನಿಮಗೆ ನಾಚಿಕೆಲ್ಲವೇ ||೨ || —ಶ್ರೀಪಾದರಾಜರು

iv ಕೃಷ್ಣ ಲೀಲೆ

ಕಾಳಿಂಗನ ಮೆಟ್ಟಿದ್ದು, ದನಗಾವುದು, ಕೊಳಲುದುವುದು, ಇವು ಕೃಷ್ಣಲೀಲೆಗಳಲ್ಲಿ ಅತಿ ಪ್ರಸಿದ್ಧವಾದವು. ಇವುಗಳ ವೈಭವವನ್ನು ದಾಸರುಗಳು ಬಹಳ ಹೃದಯಂಗಮವಾಗಿ ವರ್ಣಿಸಿದ್ದಾರೆ.

ಸೌರಾಷ್ಟ್ರ – ಅಟ

ಕಾಳಿಂಗನ ಮೆಟ್ಟಿ ನಾಟ್ಯವಾಡಿದ ಕಂಜನಾಭ ಕೃಷ್ಣನು || ಪ ||
ಯೋಗಿಗಳೆಲ್ಲ ಜಯ ಜಯ ಜಯವೆನ್ನೇ | ಭೋಗಿಗಳೆಲ್ಲ ಭಯ ಭಯ
ವೆನ್ನೇ | ನಾಗಕನ್ಯೆಯರು ಅಭಯ ಅಭಯವ್ನೇ | ನಾಗಶಯನ ಸಿರಿ
ಕೃಷ್ಣಜನನಿಯಕಂಡು |ಬೇಗನೆ ಬಿಗಿದಪ್ಪಿ ಮುದ್ದನು ತೋರುತ ||ವ್ಯಾಸರಾಯರು

ಆರಭಿ – ಆದಿ

ಆಡಿದನೆ ರಂಗ ಅದ್ಭುತದಿಂದಲಿ ಕಾಳಿಂಗನ ಫಣೆಯಲಿ || ಪ ||
ಪಾಡಿದವರಿಗೆ ಬೇಡಿದವರಗಳ ನೀಡುತಲಿ ದಯ
ಮಾಡುತಲಿ ನಲಿದಾಡುತಲಿ ಬೆಣ್ಣೆ ಬೇಡುತಲಿ ಕೃಷ್ಣ ||ಅ ||
ಅಂಬುರುಹೋದ್ಭವ ಅಖಿಲಸುರರುಕೂಡಿ ಅಂಬರದಲಿನಿಂತು ಅವರ್‌ಸ್ತುತಿಸೆ |
ರಂಭೆ ಊರ್ವಸಿ ರಮಣಿಯರೆಲ್ಲರು ಚೆಂದದಿಂ | ಭರತನಾಟ್ಯ ನಟಿಸೆ | ಝುಂತಟ
ತಕಧಿಮಿ ತಧಿಗಿಣಿ ತೋಂಎಂದು ಝುಂಪೆತಾಳದಿ ತುಂಬುರನೊಪ್ಪಿಸೆ | ಧಾಮ ಪಪಾ
ಧಸ ರೀ ಎಂದು ಧ್ವನಿಯಿಂದ ನಾರದ ತುಂಬುರುರ್ಗಾನಮಾಡಲು ನಂದಿಯು ಮದ್ದಲೆ
ಚೆಂದದಿಹಾಕಲು ||೧ ||
ಫಣವಮೆಟ್ಟಿ ಬಾಲವ ಕೈಯಲಿಪಿಡಿದು ಫಳಫಳಿಸುತ್ತ ನಾಟ್ಯವನಾಡೆ | ಚಂದ್ರ
ಮಂಡಲದಂತೆ ಪೊಳೆಯುವ ಮುಖದೊಳು ಚಲಿಸುವ ನೀಲ ಕೇಶಗಳಾಡೆ | ಕಾಲಂದು
ಗೆಗೆಜ್ಜೆ ಘಲುಘಲು ಘಲಿರೆನುತ ಉಡಿಗೆಜ್ಜೆ ಗಂಟೆಗಳಾಡೆ | ದುಷ್ಟಕಾಳಿಂಗನ ಮೆಟ್ಟಿ
ಭರದಿಂದ ಪುಟ್ಟಪಾದವ ಇಟ್ಟು ಕೃಷ್ಣನು ಮೆಟ್ಟಿದನು ತಕಧಿಮಿ ತಧಿಕೆನುತ ||೨||

ಈ ಪದದಲ್ಲಿ ಕೃಷ್ಣ ಪರಬ್ರಹ್ಮನೆಂಬುದನ್ನು ಪುರಂದರದಾಸರು ಚೆನ್ನಾಗಿ

ತೋರಿಸಿದ್ದಾರೆ. ಭಗವಂತನ ಒಂದು ವ್ಯಾಪಾರಕ್ಕೆ ಇಡೀ ಜಗತ್ತೆಲ್ಲಾ, ದೇವವೃಂದವೆಲ್ಲ ಹೇಗೆ ಮಾರ್ದನಿಕೊಡುವುದು; ಅಂತೆಯೇ ಕೃಷ್ಣನು ಪರಬ್ರಹ್ಮನು, ಅಖಿಲ ಲೋಕಾಧೀಶನು ಎಂದು ಅವರು ಸೂಚಿಸಿದ್ದಾರೆ. ದಾಸರುಗಳು ಎಷ್ಟೇ ಸರಸ ಶೃಂಗಾರವನ್ನು ವರ್ಣನೆ ಮಾಡಿದರೂ ಅವನು ಪರಬ್ರಹ್ಮ, ಗೋಪಿಯರು ಅವನ ಭಕ್ತರು, ಕಾಮೋಪಾಸನೆಯಿಂದ ಭಗವಂತನನ್ನು ಹೊಂದುವಸಲುವಾಗಿಯೇ ಹೆಣ್ಣುಜನ್ಮ ಹೊತ್ತ ತಪಸ್ವಿಗಳು, ಎಂಬುದನ್ನು ದಾಸರು ತೋರಿಸದೇ ಇಲ್ಲ. ಈ ಪ್ರಣಯದಲ್ಲೂ ಒಂದು ಅಲೌಕಿಕವ್ಯಾಪಾರವು ಪ್ರಕಟವಾಗಿದೆ. ಕೃಷ್ಣನು ಉಪನಯನ ಸಂಸ್ಕಾರವಾಗುನ ಮೊದಲೇ ಅಂದರೆ ಐದಾರುವಯಸ್ಸಿನಲ್ಲೇ ತರುಣನಂತೆ ಅವರೊಂದಿಗೆ ಬೆರೆತಂತೆತೋರಿ ಅವರಿಗೆ ಪ್ರಣಯಸೌಖ್ಯಕೊಟ್ಟುದು ಅತ್ಯಂತ ವಿಚಿತ್ರದ ಸಂಗತಿ. ಗೋಪಿಯರ ಮಾತಿನಲ್ಲಿ, ಮತ್ತು ಯಶೋದೆಯ ಮಾತಿನಲ್ಲಿ ಅಲೌಕಿಕವಾಗಿ ಬಾಲಕೃಷ್ಣ ಪ್ರಣಯಲೀಲೆಗೈದುದರ ಪ್ರಸ್ತಾಪ ಬಂದಿದೆ. ಗೋಪಿಯರಿಗೆ ಈ ಪ್ರಣಯದಿಂದ ವ್ಯಭಿಚಾರಾದಿದೋಷಗಳು ಕೂಡುವುದಿಲ್ಲವೆಂಬುದು ಇದರಿಂದಲೇ ವ್ಯಕ್ತಪಡುವುದು.

ಕೃಷ್ಣನು ದನಗಾವ ಬಗೆಯಲ್ಲೂ ವೈಚಿತ್ರವನ್ನು ನೋಡುತ್ತಾರೆ ಹರಿದಾಸರು. ಸುಂದರವಾಗಿ ಅಲಂಕರಿಸಿಕೊಂಡು ಕೃಷ್ಣ –ವೇಣುನಾದ ಮಾಡುತ್ತ ದನಗಳನ್ನು ಬಿಡಿರೆಂದು ಹೇಳುತ್ತ ಬಂದರೆ ಲೋಕವೇ ಬೆರಗಾಗುತ್ತಿತ್ತು. ಮೊದಲೇ ಅವನಲ್ಲಿ ಅನುರಕ್ತರಾದ ಗೋಪಿಯರು ಇದರಿಂದ ವಿಭ್ರಾಂತರಾಗುತ್ತಿದ್ದರು.

ತುರುಗಾಯ ಬಂದ ಗೋಪಿಯ ಕಂದ ಆನಂದದಿಂದ
ಸುರನರ ತರುಮೃಗ ಜಲಚರ ಮೋಹಿಸೆ
ತರಳೆರ ಮನ ಸೂರೆಯಾಗೆ ಕೊಳಲಿನಿಂದ || –ಶ್ರೀಪಾದರಾಜರು

ಭೈರವಿ – ಅಟ

ಜಯ ಜಯ ಶ್ರೀರಾಮ ನಮೋ ಜಯ ಜಯ ಶ್ರೀಕೃಷ್ಣ ನಮೋ ||ಪ||
ಸಿರಿಯರಸನು ಶೃಂಗಾರವ ಮಾಡಿ ಶ್ರೀಗಂಧವನ ಹಣೆಗಿಟ್ಟು ತರುಣ
ತುಳಸಿವನಮಾಲೆಯಧರಿಸಿ ಕರುತರುಗಾಯಲು | ಹೊರಗೆಹೊರಟನು ||ಅ||
ಹೊತ್ತು ಹೋಯಿತು ತುರುಬಿಡಿರೆನ್ನತ ಅಚ್ಚುತನುಡಿದ ಗೋಪಿಯರೊಡನೆ |
ತುತ್ತುರಿನಾದವು ತುರುತುರುರೆನ್ನುತ ಒತ್ತಿ ಸ್ವರದಿ ಪೊಂಗೊಳಲೂದಲು ||೧||
ಹರಿಸ್ವರವೆನ್ನುತ ಒಬ್ಬಳು ಪೇಳಿ ನೆರೆಮನೆಗ್ಹೋಗಿ ತಾ ಕೇಳಿದಳು |
ಒರಳ ಕೊಟ್ಟೀರಾ ಪರಮಾನ್ನಮಾಡಿ ತ್ವರದಿ ಮರಳಿತಂದಿಪ್ಪೆನನುತಲಿ ||೨||
ವನಿತೆ ಸೌಟನೊಳಕ್ಕಿಯ ತೊಳಿಸಿ ಒನಕೇಲಿ ಓಗರ ಹದನೋಡಿ
ಘನತರ ಸೀರೆ ತಲೆಗೆ ಸುತ್ತಿಕೊಂಡು ತನುವಿಗೆ ಕುಪ್ಪಸ ಸುತ್ತುತಲಿ ||೩||
ಅಟ್ಟೆವೆಂದ್ಹತ್ತಿ ಅಗಳಿಯ ಮೇಲೆ ಇಟ್ಟಳು ಸಾದೆಂದು ಸಗಣಿಯನು |

ಕಟ್ಟಬಾಯಿಗೆ ಕಾಡಿಗೆಹಚ್ಚಿ ಕೃಷ್ಣನ ಸ್ಮರಿಸುತ ಹೊರಗ್ಹೊರಟಳು ಸಖಿ ||೮||
ಮಾನಿನಿ ಒಬ್ಬ ಸನ್ಯಾಸಿಯ ಕಂಡು ಧ್ಯಾನಿಸಿ ಕೂಸೆಂದತ್ತ ಬರಲು ಏನು ಗಾಳಿ
ಅವರಿಗೆ ಸೋಕಿತೇ ಎಂದು ಪುರಂದರವಿಠಲ ತನ್ನೊಳು ನಗುತ್ತಿದ್ದನು. ||೯||

ಹರಿಯೇ ತುರುಗಾದರೆ ಆ ಪರಿ ಇನ್ನೆಂತು ? ವಿಜಯದಾಸರು ಅದನ್ನು ಸ್ಮರಣೆಗೆ ತರುತ್ತಾರೆ.

ಯಮುನಾ – ರೂಪಕ

ಕಾದನಾ ವತ್ಸವ ಹರಿ ಕಾದನಾ ||ಪ||
ವೇದವೇದ್ಯ ಸಾಧುವಿನುತ ರಾಧಿಕಾರಮಣ ಕೃಷ್ಣ ||ಅ||
ಎಳೆಯ ಗರಿಕೆ ಇರುವ ಸ್ಥಳದಿ ನೆರೆದು ವಸ್ತುಗಳ ನಿಲ್ಲಿಸಿ
ಕೊಳಲು ತನ್ನ ಕೈಲಿ ಪಿಡಿದು ಮುರಳಿಗಾನ ಮಾಡುತ ||೧||
ತನ್ನ ಸೆರೆಗು ತೆಗೆದು ಕೃಷ್ಣ ಕರುಗಳನ್ನೆ ಬೆನ್ನೋರೆಸಿ
ತಿನ್ನು ತಿನ್ನು ಪುಲ್ಲು ಎನ್ನುತ ಘನ್ನ ಕರಗಳೊಳಪ್ಪುತ ||೨||
ಉಡುಗಳಂತೆ ಕರುಗಳು ನಡುವೆ ಚಂದ್ರ ಧರೆಯೊಳು
ಪೊಡವಿಯೊಳಗೆ ಬೆಳಗಲು ಆ ಮೃಡನು ಕೊಂಡಾಡಲು ||೩||
ಒಂದು ತಿಂಗಳ ಕರುಗಳು ಇಂದಿರೇನು ಮೇಯಿಸಲು
ಒಂದು ವರುಷ ಕರುಗಳಂತಾನಂದದಿಂದ ಬೆಳೆದವು ||೪||
ಕನಕ ರಜತ ಸರಪಳಿ ದನಕರುಗಳ ಕೊರಳಲ್ಲಿ
ಮಿನುಗುತಿಪ್ಪ ಅರಳೆಲೆ ಅನೇಕ ನಾದದಿಂದಲಿ ||೫||
ಅಜಗಳಂಥಾ ಕರುಗಳು ಗಜಗಳಂತೆ ಆದವು
ತ್ರಿಜಗದೊಡೆಯ ವಿಜಯವಿಠಲ ವ್ರಜಕೆ ದೊರೆಯಾಳುವ ||೬||

ಕೃಷ್ಣ ಜೊತೆಯ ಗೊಲ್ಲರೊಡನೆ ಆಕಳುಗಳನ್ನು ಹೊಡೆದುಕೊಂಡು ಸಂಜೆಗೆ ಗೋಕುಲಕ್ಕೆ ಮರಳುತ್ತಿದ್ದುದು ವ್ಯಾಸರಾಯರ ಪದದಲ್ಲಿ ಬಹಳ ಕಮನೀಯವಾಗಿದೆ. ಅವರು ಉಪಯೋಗಿಸಿರುವ ಅಲಂಕಾರಗಳು, ವಾಗ್ವೈಭವಗಳು, ಭಾವನೆಗಳು ಎಲ್ಲವೂ ಉದಾತ್ತವಾಗಿದೆ.

ಪೂರ್ವಿ– ಅಟ

ಅಂಗಜನಯ್ಯನು ಗೋಕುಲಪೋಗುವಾಗ |
ಕಂಗಳ್ಹಬ್ಬದ ಉಬ್ಬಿನೇನ ಬಣ್ಣಿಸಲಿ ವಾ ||ಪ||
ಎಳೆಗರುಗಳ ಝುಂಗುಗಳನ್ನು ಮತ್ತೆ ಮಲೆವ ಗೂಳಿಗಳ ಗೂರಾಟ
ವನ್ನು |ಒಲಿವಾವಿನ ಕೆಚ್ಚಿನ ಸಂದಣಿಯಲ್ಲಿ ನಲಿವ ಮರಿಗರುಗಳ
ನೋಡುತಲಿ ||೧||

ಆಡಿಸುವ ಮೊಗಬದಿಗಳ ತುರಿಸುತ್ತ | ಝಡಿಸುವಾಕಾರ ಬೆದರು ನೋಟ | ಏಡಿಸುವ ಹುಬ್ಬಿನ ಗೋವಳರ | ಕೋಡಂಗಿ ಆಟಕ್ಕೆ ಕುಲುಕಿ ನಗುತ ||೨ ||

ಕೆಲರು ಕೋಗಿಲೆಯಂತೆ ಕೆಲನರು ನವಿಲಿನಂತೆ | ಕೆಲರು ಹಂಸದಂತೆ ಸಾರಸದಂತೆ ಗಳರವವದಿಂ ಗೋಪರು ಕೂಗೆ ಋತುಗಳು | ನಳಿನಾಕ್ಷಸೇವೆಗೆ ಕೂಡಿದಂತಿರೆ ||೪ ||

ರಸತುಂಬಿ ತುಳುಕುವ ಕೊಳಲರವಂಗಳು | ಹಸುಗಳ ಕೊರಳ ಗಂಟೆಗಳ ನಿನಾದ ಎಸೆವೆಳಗಂದಿಯ ಅಂಬಾರವಂಗಳು | ಪಸರಿಸೆ ಗೋವಳೆಯರು ಸಡಗರಿಸಿ ||೮ ||

ತುರುಗಾತಿಯರ ನೋಟದ ಬೇಟಂಗಳು | ಹರಿಯ ಮುಖೇಂದುವಿನಲ್ಲಿ ಚಕೋರಗಳು | ಹರಿನಾಭಿ ಸರೋವರದಲ್ಲಿ ಮೀನ್ಗಳು | ಹರುಪಾದ ಪದುಮದಿ ತುಂಬಿಗಳಾಗೆ ||೧೪ ||

ಇತ್ತ ಗೋವಳರಾಟಕೆ ತಲೆದೂಗುತ್ತ | ಅತ್ತ ದೇವತೆಗಳ ಸ್ತುತಿ ಕೇಳುತ್ತ | ಇತ್ತ ಗೋವಳೆಯರ ನಗಿಸುತ್ತ ನಗುತ್ತ | ಅತ್ತಿತ್ತ ಮುನಿಗಳ ಸ್ತುತಿ ಕೇಳುತ ||೧೫ ||

ಕಂಜಾಸನ ನಮಿಸಲು ಕೈ ಹಿಡಿದೆತ್ತಿ ಮೃ| ತ್ಯುಂಜಯ ವಂದಿಸೆಬಾರೆನ್ನುತ | ಅಂಜಲಿ ಪೂಂಜದ ಇಂದ್ರಾದಿಗಳನ್ನು | ಕಂಜನೇತ್ರಗಳ ಸನ್ನೆಯಲಿ ಮನ್ನಿಸುತ ||೧೬ ||

ಈ ಪದದಲ್ಲಿ ಕೃಷ್ಣದೇವೋತ್ತಮನೆಂಬ ಭಾವ ಉಪಪಾದಿತವಾಗಿದೆ. ಕೃಷ್ಣ ಕೊಳಲೂದುವ ಬಗೆಯನ್ನು ದಾಸರುಗಳು ಬಹಳ ಚಮತ್ಕಾರವಾಗಿ ವರ್ಣಿಸಿದ್ದಾರೆ. ಅವನು ಕೊಳಲೂದುವ ಭಂಗಿ, ಅದರ ರಾಗ ವೈಖರಿ, ವೇಣುವಾದದಿಂದ ಗೋಪಿಯರಿಗಾಗಿ ವಿರಹ, ಯುಮುನಾನದಿ, ಗೋಕುಲ, ವೃಂದಾವನ, ಮತ್ತು ಹಸುಗಳ ಮೇಲೆ ವೇಣುನಾದದಿಂದಾಗುವ ಪರಿಣಾಮ, ಇವುಗಳು ರಮ್ಯವಾಗಿ ಚಿತ್ರಿತವಾಗಿವೆ. ಕೃಷ್ಣ ಕೊಳಲೂದುವ ಪರಿಯನ್ನು ವರ್ಣಿಸಿದ್ದಾರೆ. ಇದರಲ್ಲಿ ಸ್ವಭಾವೋಕ್ತ್ಯಲಂಕಾರಾದಿಗಳ ಚಿತ್ರಣ ಸೊಗಸಾಗಿದೆ.

ಶ್ರೀರಾಗ –ಅಟ

ಕಣ್ಣಿಗೆ ಕಟ್ಟಿದಂತಿದೆ ಬಣ್ಣದ ಕೊಳಲ ಭಾವಿಸಿ ನೋಡಬಾರದೆ ||ಪ ||

ಕೂಡಿಹ ಸೋಗೆಗರಿಯ ಕಡುಸೊಂಪು ಸೊಗಸು |ವಡೆದ ಸುಳಿಗುರುಳಿನ ಗುಂಪು| ಆಡುವ ಮರುಹುಮಾಗಾಯ್ಗಳ ಪೆಂಪು |ಕೂಡಿಕುಣಿವ ಕೂಡಿ ಹುಬ್ಬಿನಲಂಪು||೧ ||

ಕೊಳಲೆಡೆಗೆಡೆಗೆ ತೋರುನ ಕೆಂಬೆರಳು | ಕೊನಬುಪಡೆವ ಕೊಂಕಿದ ಗೆರೆಗೊರಳು | ಥಳಥಳಿಸುವ ತೇಲಿದ ಕಣ್ಣರಳು |ತನುಗಂಪನು ಸೂಸುವ ಸುಯ್ಯೆಲರು ||೨ ||

ಸಿರಿಯೆದೆಯಲಿ ತೊಳಲುವ ಪುಲಿಯುಗುರು ಸಿ೦ | ಗರಿಸಿದ ಸಿರಿಗಂಧದ ತಿಗುರು | ಕೊರಳದಂಡೆಯ ತುಳಸಿಯ ಹೊಸ ಚಿ |ಗುರು ಕೊನೆಮುಸುಕಲು ಪೊನುಗುರಿನ ಪೊದರು. ||೩||

ಒಂದಡಿನೆಲದೊಳು ನಿಂದಿಹ ನಿಲುವು | ತಂದೆ ಶ್ರೀಕೃಷ್ಣನಂದಿಗೆ

ಪಾದದೊಲವು | ಮುಂದೆ ಪಶುಗಳ ಮನ್ನಿಪ ನಿಲುವು | ತಂದೆ ಶ್ರೀಕೃಷ್ಣನಂದಿಗೆ ಪಾದದೊಲವು ||೫ ||

ಮಧ್ಯಮಾವತಿ – ಆದಿ

ಶ್ರೀಕೊಳವನೂದಿದನಂದು ಶ್ರೀಧರನಿಂದು ||ಪ ||

ವಾಸವವಂದಿತ ವಾತಜ ಸೇವಿತ

ವಾಸುಕಿಶಯನನನ್ನು ವಾರೆಸುನೋಟದಿ ||ಅ ||

ಬೆರಳಸಂದಿಲಿ ಮುರಳಿ ಪಿಡಿದು ಮುರಾರಿ ತಾನು | ಹರುಷದಿಂದಲಿ ಸ್ವರವನುಡಿದು ವಾರಿಜನೇತ್ರ | ಅರಳು ಮಲ್ಲಿಗೆ ಸರಗಳ ಮುಡಿದು | ಕೊರಳ ಪದಕಹಾರ ಕೌಸ್ತುಭ ಶೋಭಿತ ಮರಳುಮಾಡುತ ಮಡದಿಯರೆಲ್ಲ ||೧ ||

ಗೌಳಿ ಗಾಂಧಾರಿ ಗೌಳ ಪಂತು ಗೌರೀಶ ಭೂಷಣ | ಶೌರಿ ಸಾರಂಗ ಮೋಹನವಿಂತು ಸಾವೇರಿ ಸುರುಟಿ ಭೈರವಿ | ಬ್ಯಾಗಡೆ ಊದುತನಿಂತು ಮಾರಜನಕತಾಮಾಂದದಿಂದಲಿ ವೀರ ಶ್ರೀಕಷ್ಣನು ವಿಧ ವಿಧ ರಾಗದಿ ||೨ ||

ನಾದರತುಂಬರ ನಾಟ್ಯವನಾಡೆ ನಳಿನನಾಭನ | ಗಿರಿಜಾಪತಿಯು ವಂದಿಸಿ ಬೇಡೆ ಗೋಪಾಲಕೃಷ್ಣನ | ಭಾರತಿಪತಿ ತಾ ಕೊಂಡಾಡೆ ವರಗುರು ವಂದಿತ ವಿಜಯ ವಿಠಲರೇಯ ಹರುಷವ ಪಡಿಸುತ ವನಿತೆಯರೆಲ್ಲರ ||೩ ||

ಮೋಹನ–ಆದಿ

ಕೊಳಲನೂದುವ ಚದುರನಾರೇ ಪೇಳಮ್ಮಯ್ಯ

ತಳಿರಂದದಿ ತಾ ಪೊಳೆವ ಕರದಿ ಪಿಡಿದು ||ಪ ||

ನಾದದಿ ತುಂಬಿತು ಗೋನರ್ಧನಗಿರಿ ಯಾದವ | ಕುಲಘನ ಒರೆದಿತು ಖಗಕುಲ | ಸಾಧಿಸಿ ನೋಡಲು ಕೃಷ್ಣನ ಈಗಲೇ | ಸಾಧ್ಯವೇನೇ ಬೃಂದಾವನದೊಳು ||೧ ||

ಮೇವು ಮರೆತವು ಗೋವುಗಳಲ್ಲವೂ | ಸಾವಧಾನದಿ ಹರಿದಳು ಯಮುನಾ | ಆವು ಕಾವುತಲಿ ಗೋವಳರೆಲ್ಲರ | ಹಾವಭಾವದಿ ಬೃಂದಾವನದೊಳು ||೨ ||

ಸುರರು ಸುರಿದರಾಕಾಶದಿ ಸುಮಗಳ | ಸರಿದು ಪೋಗಿ ನೋಡೆ ವೃಂದಾವನದೊಳು| ಸಾರಿ ಸಾರಿ ಈ ಕೃಷ್ಣನು ಈಗಲೆ ತುರುಗಳ ಕಾ.ಯ್ವ ಕದಂಬವನದೊಳು ||೩ ||

ಹರಿಯ ವೇಣುಗಾನದ ಪರಿಣಾಮವು ಈ ಪದದಲ್ಲಿ ವರ್ಣಿತವಾಗಿದೆ.

ಆರಭಿ–ಏಕ

ರಂಗಕೊಳಲನೂದಲಾಗಿ ಮಂಗಳ ಮಯವಾಯ್ತು ಧರೆ ಜಗಂಗಳು ಚೈತನ್ಯಮರೆದು ಅಂಗಪರವಶವಾದವು ||ಪ ||

ತೀಡುತ ಮಾರುತ ಮಂದಗತಿಗೆಯ್ಯೆ |ಬಾಡಿದಬರಲು ಫಲಗೊಂಚಲು ಬಿಡೆ | ಪಾಡಲೋಲ್ಲವಳಿಕುಳುಗಳು | ಬಾಡಿದ ಮಾಮರ ಚಿಗುರೊಡೆಯೆ | ಹೇಡಿಕೊಂಡವು

ಜಾಣ್ನುಕ್ಕಿ ಗಿಳಿ ಮಾತಾಡದೆ ಕಳೆಗುಂದಿದವು ಕೋಗಿಲೆ | ಓಡಾಟ ವೈರಾಟ ಬಿಟ್ಟು ಬಿಟ್ಟು ಖಗಮೃಗ | ಗಾಢನಿದ್ರಾವಶವಾದವು ||೧ ||

ತಳದುದಕ ಉಕ್ಕೇರಿಬಂದವು | ತುಳುಕಿ ಚೆಲ್ಲಾಡಿನಿಂದಳು ಯಮುನೆ | ಮೇಲೆ ಮೇಲೋಡಿ ಮೇಘಾಳಿ | ಧಾಳಿಟ್ಟುವು ಕಲ್ಲುಕರಗಿ ನೀರಾದವು | ನಳಿನ ಚಂಪಕ ನಾಗ ಪುನ್ನಾಗ ಪಾಟಲ ಶಾವಂತಿಗೆ ಕುಂದ ಬ | ಕುಳವು ಮಾಲತಿ ಜಾಜಿ ಪರಿಮಳಗೂಡಿತು| ನೀಲಾಂಗನಂಘ್ರಿಗೆರಗಿದವು ||೨ ||

ಮುದ್ದು ಮೋಹನನ ಮಂಜುಳ ಸಂಗೀತ | ಸದ್ದ ನಾಲೈಸಿ ಗೋಪಾಂಗನೆಯರೆಲ್ಲ| ಬುದ್ಧಿಸೂರಾಡಿ ಆನಂದವಾರಿಧಿಯಲ್ಲಿ |ಬಿದ್ದು ಪರವಶರಾದರು | ಸಿದ್ಧ ಮುನಿಜನರಿದ್ದ ಸಮಾಧಿಯೊಳೆದ್ದು ಕುಣಿದರು ಸಮಾಧಿಯೊಳೆದುರೆದುರಾಗಿ ಗದ್ದುಗೆಯರಸನೋ ಲೈಸಿಕೊಂಡರು ಗೆದ್ದರು ಭವನಸಮುದ್ರವ ||೩||

ಧಾಮವನಮಾಲೆ ಬರ್ಹಿಭೂಷಿತ ಸ್ವಾಮಿ ಪುರಂದರವಿಠಲರಾಯನು | ನಾಮ ಕ್ರಿಯಮೇಘರಂಜನಿಪಾಡೆ ಸಾಮವೇದ ನಮೋ ನಮೋ ಎನ್ನೆ ||೪||

V ಗೋಪಿಯರ ವಿರಹ

ವೃಂದಾವನದಲ್ಲಿ ಗೋಪಿಯರೊಂದಿಗೆ ಕೃಷ್ಣ ರಾಸಕ್ರೀಡೆ, ಜಲಕ್ರೀಡೆ ಗಳನ್ನಾಡಿದುದೂ ಭಾಗವತದಲ್ಲಿ ವರ್ಣಿತವಾಗಿದೆ. ಆ ಸಮಯದಲ್ಲಿ ಕೃಷ್ಣನನ್ನು ಕಾಣದೆ ವಿರಹದಿಂದ ಬಳಲುವ ಗೋಪಿಯರ ವಿರಹಾಲಾಪ 'ಗೋಪೀಗೀತೆ'ಯು ಕಥಾವಸ್ತು. ದಾಸರುಗಳು ಇದನ್ನು ವಿಶೇಷವಾಗಿ ಬಳಸಿಕೊಂಡಿದ್ದಾರೆ.

ಮೋಹನ–ಆದಿ

ತುರುಗಾಯಬಂದ ಗೋಪಿಯಕಂದ ಆನಂದದಿಂದ ||ಪ ||

ಮದನಶತಕೋಟಿತೇಜನು ಬಂದ ಸ್ತ್ರೀಯರೆದುರಿಲಿನಿಂದ | ಅಧರಾಮೃತ ಪಾನವಾಡಿರೆಂದ ಬಾಯಾರಿದಿರೆಂದ | ಬದಿಯಲ್ಲಿ ಬಂದು ಕುಳ್ಳಿರಿಯೆಂದ ಅವರಿವರನೆ ನೋಡ್ದ | ಚದುರೇರ ಮೋಹಕನೆ ನಾನೆಂದ ವಾದ್ಯದರವದಿಂದ ಸದಯನೆದುರು | ರಂಭೆ ಊರ್ವಸಿ ಮೇನಕೆ | ಒದಗಿ ನಾಟ್ಯಗಳ ಚೆದುರತನದಲಾಡೆ | ಮಧುಸೂದನ ಭಕ್ತರ ಕಾಯ್ದುವದಕೀವಿಧದೊಳಗಾಡಿದ ರಂಗವಿಠಲ ||೩ ||

ಶ್ರೀರಾಗ--ಆದಿ

ಕೊಳಲನು ಊದುತ ಬಂದ ಯಶೋದೆಯ ಕಂದ ||ಪ ||

ಕೊಳಲಧ್ವನಿಗೆ ವಿರಹವು ನಾರಿಯರಿಗೆ

ಕಳವಳವಾಗಲು ಕಳಕಳಿಸುತ ಬಂದ ||ಅ ||

ಬಂಗಾರಬಟ್ಟಲೊಳಗೆ ಅಂದು ಕ್ಷೀರವತಂದು | ರಂಗಗರ್ಪಿಸುವೆವು ನಾವೆಂದು ಹರುಷದೊಳೆಂದು | ತುಂಗವಿಕ್ರಮನ ಪದಂಗಳಿಗೆರಗಲು | ರಂಗ ನಗಹಿ ಕರಂಗ

ಳ್ಹಿಡಿಯೆ ಮೋಹಂಗಗಳಿಂದ ವಿರ | ಹಂಗಳ್ಹೆಚ್ಚಿ ರವಿಕೆಂಗಳುಡಿಯೆ ಕುಚಂಗಳು ಬಿಟ್ಟಾ ಲಿಂಗಿಸುತಿರೆ ಶ್ರೀರಮಂಗಳಾಂಗಗೆ | ಪುಷ್ಪಂಗಳಿಂದ ವರುಷಂಗಳು ಮೇಲೆ ಸುರ ರಂಗಳು ಸುರಿಯೆ ಉ |ತ್ತುಂಗಮಹಿಮ ಹರುಷಂಗಳಬೀರುತ ಅಂಗನೆಯರಿಗೆ ||೨ ||

ತಮ್ಮನ್ನು ತಿರಸ್ಕರಿಸಿಹೋದ ಕೃಷ್ಣನನ್ನು ಗೋಪಿಯರು ಅತಿದೈನ್ಯದಿಂದ ಪ್ರಾರ್ಥನೆಮಾಡುತ್ತಾರೆ..

ಆನಂದಭೈರವಿ—ರೂಪಕ

ನಿನ್ನನಗಲಿಪೋಗೆವೋ ನೀರಾಜಾಕ್ಷ ನಿನ್ನ ಸೇರಿ ಸುಖಿಸಬಂದೆವೋ ||ಪ ||
ಮನ್ನಿಸದೆ ಮಮತೆಯಿಂದ ಭಿನ್ನನುಡಿಗಳಾಡಿ ನಮಗೆ |
ಹಣ್ಣುತೋರಿ ಕಾಳಕೂಟವನ್ನು ಕೊಡುವರೇನೋ ಕೃಷ್ಣ ||ಅ ||

ಬಂಧುವರ್ಗವನ್ನು ಬಿಡುವುದು ಸ್ತ್ರಿಯರಿಗೆ | ನಿಂದ್ಯವೆಂದು ಶಾಸ್ತ್ರಪೇಳ್ವುದು | ಎಂದೆಂದಿಗೆಮಗೆ | ನೀನೇ ಬಂಧುವೆಂದು ಬಂದಿಹೆವೋ |ಸಿಂಧುಶಯನ ಎಮ್ಮನ್ಯಾಕೆ | ಇಂದು ಹೋಗಿರೆಂಬೆ ನೀನು ||೨ ||

ಅನಘ ನಿನ್ನ ನೋಡಿ ಮೋಹಿಸಿ ಅಂತರಾತ್ಮ| ತನುವು ಮನವು ನಿನಗೆ ಅರ್ಪಿಸಿ ಜನನ ಮರಣದಿಂದ ಜನರು | ದಣಿವರೇನೋ ಕಾಂತನಮ್ಮ ಮನಸಿನಂತೆ ಒಲಿದು ಸಲಹೋ | ವನಜನಾಭ ವಿಜಯವಿಠಲ ||೫ ||

ಕಲ್ಯಾಣಿ—ಆದಿ

ಎಲ್ಲಿ ಮಾಯವಾದನೇ ರಂಗಯ್ಯನು ಎಲ್ಲಿ ಮಾಯವಾದನೇ ||ಪ ||
ಎಲ್ಲಿ ಮಾಯವಾದ ಫುಲ್ಲನಾಭ ಕೃಷ್ಣ
ಚೆಲ್ಲೆಗಂಗಳೆಯರು ಹುಡುಕಹೋಗುವ ಬನ್ನಿ ||ಅ ||

ಮಂದಗಮನೆಯರೆಲ್ಲ ಕೃಷ್ಣನಕೂಡಿ | ಚಂದದಿ ಇದ್ದೆವಲ್ಲ| ಕಂದರ್ಪ ಬಾಧೆಗೆ ಗುರಿಯ ಮಾಡಿದನಲ್ಲ | ಮಂದಮತಿ ನಮಗೆ ಬಂದು ಒದಗಿತಲ್ಲ ||೧ ||

—ವ್ಯಾಸರಾಯರು.

ಪೂರ್ವಿ—ಆದಿ

ಅಗಲಿಸೈರಿಸಲಾರೆವೋ ವೇಣುಗೋಪಾಲ ನಿನ್ನನಗಲಿ ಸೈರಿಸಲಾರೆವೋ ||ಪ ||
ನಗಧರ ಪನ್ನಗನಗಧೀಶ | ಮೃಗಮದತಿಗುರಿದ
ನಗೆಮೊಗ ಚೆನ್ನಿಗ ನಿಗಮುಗಳಿಗೆ ಸಿಗದಗಣಿತ ಸುಗುಣ | ನಿನ್ನ ||ಅ ||

ಅನಘ ನಿನ್ನಣುಗರಕೂಡಿ ವನಸುತ್ತಸುಳಿಯಲು ನೋಡಿ | ಕೊನೆಗಣ್ಣ ಸನ್ನೆಯನೆಮಾಡಿ ಮನೆಕೆಲಸವಲ್ಲಿಲ್ಲೀಡ್ಯಾಡಿ | ವನಿತೇರೆಲ್ಲರು ಮಾತನಾಡುತ್ತ ಚೆಲುವ ಮೂರುತಿಯ | ಮನದೊಳು ಧ್ಯಾನವ ಮಾಡುತ್ತ ಊದುವ ಕೊಳಲಧ್ವನಿಯ ಕರ್ಣದಿಂದ ಕೇಳುತ್ತ ಬಂಧುಗಳ ಮಾತಗಣನೆಮಾಡದಲೆ ಮೀರುತ್ತ | ನಿನ್ನರಸುತ್ತ |

ವನ ವನ ತಿರುಗುತ ಬಂದೆವೋ । ಮನಸಿಜಕೇಳಿಗೆ ಸಂದೆವೋ । ತನು ನಿನಗೊಪ್ಪಿಸಿ ನಿಂದೆವೋ । ಕ್ಷಣವನು ಅಗಲದಿರೆಂದೆವೋ । ಚಿನುಮಯ ಗುರುಗೋಪಾಲವಿಠಲ ಮಾಮನೋಹರ ಮುನಿಜನಮನಮಂದಿರ ನಿನ್ನ ॥ 3 ॥

ಒಬ್ಬೊಬ್ಬ ಗೋಪಿಯೂ ಒಂದೊಂದು ವಿಧವಾಗಿ ವಿರಹ ವ್ಯಥೆಪಡುವಳು.

ತುಂಬಿತು ಬೆಳದಿಂಗಳು ಈ ವನದೋಳು ತುಂಬಿತು ಬೆಳದಿಂಗಳು ॥ ಪ ॥

ತುಂಬಿತು ಬೆಳದಿಂಗಳೀವನದೊಳಗೆಲ್ಲ ಅಂಬುಜನಾಭನು ಬಾರಕಾಣಕ್ಕ ॥ ಅ ॥

ಮಾಗಿ ಹೋಗಿ ವಸಂತವು ಬರುತಿದೆ ಕೋಗಿಲೆ ತುಂಬಿಲ್ಲಿ ಕೂಗುತಿದೆ ।
ಆಗಲೆ ಎಳೆಮಾವು ತಳಿರೇಳುತಿದೆ ನಾಗಶಯನಕೃಷ್ಣ ಬಾರಕಾಣಕ್ಕ ॥ 1 ॥

ಕಾದನೀರು ಎಲ್ಲ ಆರಿಹೋಗುತಲಿದೆ ಕಾಯ್ದುಮಲ್ಲಿಗೆಹೂವು ಬಾಡುತಿದೆ ।
ಮದನನ ಬಾಧೆಯು ಬಹಳವಾಗಿದೆ ಈಗ ಮದನನಯ್ಯನುಕಾಣಬಾರಕಾಣಕ್ಕ ॥ 3 ॥

ಹಾಸಿಪ್ಪಾಸಿಗೆ ಮಂಚ ಹದಗಟ್ಟೋಗುತ್ತಿದೆ । ಪೂಸಿದ ಶ್ರೀಗಂಧ ಬೆವರುತಿದೆ ।
ಲೇಸಾದ ನಮ್ಮೆದೆ ಮಿಂಚೇರುತಲಿದೆ । ವಾಸುದೇವನು ಕೃಷ್ಣಬಾರಕಾಣಕ್ಕ ॥ 5 ॥

ಆಹೇರಿ

ಶ್ರೀಕೃಷ್ಣರಾಯನ ತೋರಿಸೆ ಮಾತನಾಡಿಸೆ ॥

ಶ್ಲೋಕ

ಧೀರರಂಗನು ಬಾರದೆ ಇಹನೇಸೆ ಮಾರನಯ್ಯಗೆ ಮಾಡಿದ ತಪ್ಪು ಏನೇ ।
ವಾರಿಜಾಕ್ಷಿ ನೀನೊಂದು ಮಾತನಾಡಿಬಾರೆ ನೀರಾಜಾಕ್ಷನ ನಿಮಿಷದಿಕರದುತಾರೆ ॥

ಪದ

ಗಂಧ ಕಸ್ತೂರಿ ತಾರೆಂದನೇ ಪೂಸೆಂದನೇ ಘಳಿಗೆ ತಾಳೆಂದನೇ ।
ಅಂದಮಾತಿಗೆ ತಾ ಮುನಿದನೇ ಅರವಿಂದನೇ ಪೂರ್ಣೇಂದುವದನೇ ॥

- ಪುರಂದರದಾಸರು

ಆಹೇರಿ-ಆಟ

ಒಲ್ಲೆನಮ್ಮ ನಮ್ಮನಲ್ಲ ಬಾರದಿರೆ ತನು ಹೊರೆಯನೊಲ್ಲೆನವ್ವ ।
ಹಾರ ಕೊರಳಿಗೆ ಭಾರ ಹುವ್ವಿನ ಭಾರ ಸೈರಿಸಲಾರೆನೇ ।
ಮಾರಸೈಯ್ಯನು ಬಾರದಿದ್ದರೆ ಮಾರನಂಬಿಗೆ ಗುರಿಯಮಾಡಿ ॥

- ಪಾದರಾಜರು

ಸೌರಾಷ್ಟ್ರ

ಕೊಂಬುಕೊಳಲನೂದುತ ನಂಬಿಸಿ ಪೋದನೆಯವ್ವ
ಅಂಬುಜನಾಭಗೆ ಮನಹಂಬಲಿಸುತ್ತಿದೆಯವ್ವ ॥ ಪ ॥

ನಡೆಯಲಾರೆನೆಯವ್ವ ಅಡಿಇಡಲಿಷಟವಿಲ್ಲ
ಬೆಡಗುಗಾರನ ಕೂಡೆ ನುಡಿ ತೆರಳಿತೆಯವ್ವ ॥ 5 ॥

ಈ ಪರಿಯಲ್ಲಿರುತಿರೆ ತಾಪ ಘನವಾಯಿತವ್ವ
ತಾಪ ಹಿತವಾಗುವುದೆ ಶ್ರೀಪತಿರಂಗವಿಠಲ್ಲ - ಶ್ರೀಪಾದರಾಯರು

ಮಧ್ಯಕಾಲದ ಅಲ್ಪ ವಿರಹದಿಂದಲೇ ಹೀಗೆ ಬಳಲುತ್ತಿದ್ದ ಗೋಪಿಯರಿಗೆ ಬಿಲ್ಲಿನ ಹಬ್ಬಕ್ಕೆ ಅಕ್ರೂರ ಕೊಟ್ಟ ಆಹ್ವಾನವನ್ನು ಅಂಗೀಕರಿಸಿ ಕೃಷ್ಣ ಮಥುರೆಗೆ ಹೋಗುವನೆಂಬ ಸುದ್ದಿ ವಜ್ರಘಾತದಂತೆ ಬಡಿಯಿತು. ಇದನ್ನೇ ವಿಶೇಷವಾಗಿ ಅವರು ಪ್ರಲಾಪಿಸುವರು.

ಮೋಹನ-ಆದಿ

ಅಕ್ಕ ನಂದಗೋಪನ ಅರಮನೆಯೊಳಗೊಬ್ಬ ಆಕ್ರೂರ ಬಂದನಂತೆ ॥ ಪ ॥
ಪೊಕ್ಕು ಬಲಸುವಳಲ್ಲ ಹುಸಿಯಾಸಾಡುವಳಲ್ಲ

ಅಕ್ಕೋ ಬಾಗಿಲಮುಂದೀಗ ರಥವಕಂಡೆ ॥ ಅ ॥

ಮಥುರಾಪಟ್ಟಣವಂತೆ ಮಾನಕರೆಸಿದನಂತೆ । ನದಿಯ ದಾಟಲು ಬೇಕಂತೆ ಬದಲು ಮಾತಿಲ್ಲವಂತೆ ಏನೆಂಬೆ ಏಣಾಕ್ಷಿ । ಉದಯದಿ ಪಯಣವಂತೆ ಹೇ ಕಾಂತೆ ॥ 1 ॥

ತಾಳಲಾರೆವೇ ನಾವು ಪುರಂದರವಿಠಲನ । ಬಾಲತನದಿಂದ ಭಾಳನಂಬಿದೆವಮ್ಮ । ಕಾಲದಲಿ ಒಂದಾಗಿ ಕಾಮಿನಿಜನರೆಲ್ಲ । ಆಲೋಚನೆಮಾಡಿ ಆಣೆ ಇಡುವ ಬನ್ನಿ ॥ 5 ॥

ಆನಂದಭೈರವಿ-ಅಟ

ಅಕ್ಕ ಎತ್ತಣ ಬಿಲ್ಲುಹಬ್ಬಬಂತೆಮಗೆ ಪ್ರಾಣಕಾಂತನ ಕರೆಯೊಯ್ವರು ಮಥುರೆಗೆ ಅಕ್ಕ ಮಥುರಾಪಟ್ಟಣದ ನಾರಿಯರು । ಅಕ್ಕ ಚದುರೆ ಚಲುವೆ ಚಪಲೆಯರು । ಅಕ್ಕ ಮದನಶಾಸ್ತ್ರದಿ ನಿಪುಣೆಯರು । ಸಿಕ್ಕ ಮಾಧವನ ಕಂಡರೆ ಅವಿರ್‍ಬಿಡರು ॥ 1 ॥

- ಪುರಂದರದಾಸರು

ಮೋಹನ-ಝಂಪೆ

ಮಾನನಿಧಿ ಶ್ರೀಕೃಷ್ಣ ಮಥುರೆಗ್ಹೋಗುವನಂತೆ
ಏನು ಪಥವಮ್ಮ ನಮಗೆ ॥ ಪ ॥

ಮಾನವೇನಿದಕೆ ಮಾನಿನಿಯರೆಲ್ಲರೂ ಕೂಡಿ
ಆಣೆಯನ್ನು ಕಟ್ಟನ ಅಡ್ಡನಿಲಿಸುವ ಬನ್ನಿ ॥ ಅ ॥

ಬೇಗ ಮಥುರೆಗೆ ಪೋಗಬೇಡೆಲವೋ ಶ್ರೀಕೃಷ್ಣ ಬೇಡಿಕೊಂಬೆವೊ ದೈನ್ಯದಿ । ನೋಡು ನಮ್ಮೊಳು ದಯಮಾಡು ಮದನಂಗೆ ಗುರಿ ಮಾಡುವುದುಚಿತವೇ ಮಾಧವ ಕೃಪಾಕರನೆ ॥ 4 ॥

ಪಾಲಿಸುವುದವ್ವಣೆಯ ಪಾಟಲ ಸುಗಂಧಿಯರೆ । ಕಾಲಹರಣವ ಮಾಡದೆ । ನಾಳೆ ಉದಯಕೆ ಪೋಗಿ ನಾಲ್ಕೆಂಟುದಿನದೊಳೇ । ವೇಳೆಗಿಲ್ಲಿಗೆ ಬರುವೆ ಕಾಳಾಹಿ ವೇಣಿಯರೇ ॥ 5 ॥

ಹಲವು ಮಾತುಗಳೇಕೆ ಜಲಜಾಕ್ಷ ನಿಮ್ಮಪದ । ಜಲಜವನು ನೆರೆ ನಂಬಿಹ ।

ಒಲುಮೆಯಲಿ ಇರುತಿಪ್ಪ ಲಲನಾವ್ಯೂಹವಬಿಟ್ಟು । ಕಳೆಯಬೇಡೆಮ್ಮನು ರಂಗ ವಿಠಲರೇಯ ॥ 12 ॥ - ಶ್ರೀಪಾದರಾಜರು

ಕೃಷ್ಣ ಮಧುರೆಗೆ ಹೋದಮೇಲಿನ ವಿರಹವ್ಯಥೆಯಂತೂ ಅತಿತೀವ್ರ. ಗೋಪಿಯರು ಆ ಅಗಲುವಿಕೆಯನ್ನು ಸಹಿಸದೆ ಬಹಳ ಪರಿತಪಿಸುವರು.

ಉದಯರಾಗ

ಗೋಪಿಯರು ಕೃಷ್ಣನ ವಿರಹ ಪ್ರ ।
ಲಾಪದಿಂದ ಮಥುರಾಪುರದ ಬಿಲ್ಲುಹಬ್ಬವ ಜರೆದರು ॥ ಪ ॥

ಆಕ್ರೂರನೆಂಬ ಕಲಿಹೃದಯ ಬಂದು ನಮ್ಮ ನ । ತಿಕ್ರಮಿಸಿ ಕೃಷ್ಣನ ಪುರಕೆ ನಡೆಸಿದ । ವಕ್ರವಾದನು ನಮ್ಮ ಕ್ರೀಡೆಗಳಿಗಕಟ । ಈಕ್ರೂರಗಕ್ರೂರ ಪೆಸರೇತಕೆನುತ ॥ 1 ॥

ರಥವ ನಿಲ್ಲಿಸದೆ ಮೋಸಹೋದೆವಲ್ಲ ಮನೋ । ರಥಸಿದ್ಧಿ ಕೊನೆಗಾಗಲಿಲ್ಲ । ರತಿಪತಿಪಿತನಗಲಿ ಕೆಟ್ಟೆವಲ್ಲ ಇನ್ನು । ಗತಿಯಾರು ನಮ್ಮ ಸಂತೈಪರಾರೆನುತ ॥ 2 ॥

ಯುಗವೊಂದು ನಿಮಿಷವಾಗಿದ್ದವಲ್ಲ ಅವನ । ನಗೆನೋಟ ಕೂಟ ಬೇಟೆಗಳಿಂದ । ಅಗಲಿ ಪೋದನು ಕೃಷ್ಣ ಇಂದು ನಮಗೆ ನಿಮಿಷ । ಯುಗವಾಗಿ ತೋರಿ ತಿನ್ನೇನುಪಾಯವೆನುತ ॥ 5 ॥

- ಪುರಂದರದಾಸರು

ಸುಳಾದಿ

ಈ ನವದೆಡೆಗಳು ಈಲತೆವನಗಳು । ಈ ಸುರತರು ನೆಳಲೀಶಶಿ ಕಲೆಗಳು । ಈಸದೀ ಪುಲಿನಗಳೀ ಶುಕ ಪಿಕರವ । ಮಾಧವನ ಮರೆಯಾಲಯವಿದೆ ಕಳದೀವನದೆಡೆಗಳು । ಈ ಮುಗುಳುನಗೆಯ ಆ ಸೊಬಗ ಈ ಸುರತರು ನೆಳರತಿಯ । ಈ ಸುರತವನರಿದ ಬಾಲೆಯರೆಂತೆ । ಈ ಗುಣಮಯ ರಂಗ ವಿಠಲನೆ ಕರುಣೆಯೋ ಈ ವನದೆಡೆಗಳು ॥

ಇನ್ನು ರಂಗನಂಗಸಂಗವು ಎತ್ತಣದು ಗೋಪಿಯರಿಗೆ । ಮಥುರಾಪುರದ ಮಾನಿನಿಯರ ಬಲೆಯಲ್ಲಿ ಸಿಲುಕಿದವನ । ಮಥುರಾಪುರಮಾನಿನಿಯರ । ರತಿ ವಿದಗ್ಧರಾದ ಮಾನಿನಿಯರ ರಸಿಕ ರಂಗ ವಿಠಲನ್ನ । ಮಥುರಾಪುರ ಮಾನಿನಿಯರ ॥

ಜೊತೆ

ಅವನ ಹಂಬಲವೆ ಎಮಗೆ ಜೀವನವೇ ಆ ।
ಭುವನ ಮೋಹನ ರಂಗವಿಠಲನೇ ಕರುಣೆಯೇ ॥ - ಶ್ರೀಪಾದರಾಯರು

ಆನಂದಭೈರವಿ-ಆದಿ

ವಿಧಿಗೆ ದಯವಿಲ್ಲವಕ್ಕ ಎನ್ನ ಮೇಲೆ
ಯದುಪತಿಯನಗಲಿಸಿದನೊಮ್ಮಿಂದ ಒಮ್ಮೆ ॥ ಪ ॥

ಹಕ್ಕಿಯ ಮೇಲುಳ್ಳದಯವನ್ನು ನಮ್ಮ ಮೇಲೆ । ಇಕ್ಕದೆ ಹೋದೆಯೇತಕ್ಕೊ

ವಿಧಿಯೇ । ಅಕ್ಕಟಕ್ಕಟರೆಕ್ಕೆ ಎರಡುಳ್ಳರೆ ಮಥುರೆಗೆ ಪೋಗಿ । ಗಕ್ಕನೆ ಶ್ರೀಹರಿಯನ್ನು ಕೂಡುತ್ತಿದ್ದೆವಲ್ಲ ॥ 2 ॥ - ಶ್ರೀಪಾದರಾಯರು

ಮಥುರೆಗೆ ಹೋದ ಕೃಷ್ಣನನ್ನು ನೆನೆದು ಭ್ರಮರವೊಂದನ್ನು ಸಂಬೋಧಿಸಿ ಗೋಪಿಯರು ಮಾಡುವ ವಿರಹಾಲಾಪ 'ಭ್ರಮರಗೀತೆ'ಯೆಂದು ಭಾಗವತದಲ್ಲಿ ಪ್ರಸಿದ್ಧವಾಗಿರುವುದು. ಶ್ರೀಪಾದರಾಯರು ಅದನ್ನು ಕನ್ನಡದಲ್ಲಿ ಬಹಳ ಸುಂದರವಾಗಿ ಚಿತ್ರಿಸಿದ್ದಾರೆ.

ಮುಖಾರಿ-ಆಟ

ಭೃಂಗ ನಿನ್ನಟ್ಟಿದೆನೇ ಶ್ರೀರಂಗ ಮಧುರಲಿ ನಿಂದು ।
ಅಂಗಜಲುಬ್ಧಕ ಪೊಂಗೊಳಲ ತಡೆಯನಿಕ್ಕಿ ।
ಹಿಂಗೈಸತ್ತೈದಾನೆ ಆಸುವ ಹೇ ಕಿತವ ॥ ಪ ॥

ವಜ್ರಾಂಕುಶ ಧ್ವಜಾಂಕಿತ ಹೆಜ್ಜೆಯನ್ನೇ ತಿಳಿದ ನಮ್ಮಬ್ಜಾಕ್ಷಿಯರೊಡನೆ ರತಿ ಕಜ್ಜದುಪವನದಲ್ಲಿ ನಿರ್ಜರೋತ್ತಂಸರೊಡನೆ । ಮಜ್ಜನ ಕ್ರೀಡ್ಯಾಡುವ ಸಾಯುಜ್ಯ ಸುಖವೆತ್ತಲಿಹುದೋ ಶ್ರೀಹರಿಯ । ಅಬ್ಜಭವ ಮುನಿಜನ ಪೂಜ್ಯನಗಲಿದ ಮೇಲೆ । ನಿರ್ಜೀವಿಗಳಾಗಿ ಕಣ್ಣ ಕಜ್ಜಲ ಕಲಕಿಕೊಂಡು । ಲಜ್ಜೆಗೆಟ್ಟು ತನುವನತಿ ಜರ್ಝರಿತದಿ ಜೀವಿಸೆ । ವಜ್ಜರ ಎದೆಯಲ್ಲವೇ ನಮ್ಮೆದೆ ಹೇ ಕಿತವ ॥ 2 ॥

ಲಕ್ಷುಮಿರಮಣನವ ಸೂಕ್ಷ್ಮದ ಗೊಲ್ಲಿತಿಯರು ನಾವು । ಕುಕ್ಷಿಯೊಳು ಬೊಮ್ಮಾಂಡ ವವಗೆ ಮಕ್ಷಕಗಳಂತೆ ನಾವು । ಮೋಕ್ಷಿಗಳರಸನವ ಗೋಕ್ಷೀರ ವ್ರತರಾವು । ಲಕ್ಷಿಸಿವನಂತೋ ನಮ್ಮ ಶ್ರೀಹರಿಯು । ರಕ್ಷಿಸಲುದಿಸಿ ಜನ ರಕ್ಷಣೆಗೆ ಪಾಲ್ಬೆಣ್ಣೆಯ । ಭಕ್ಷಿಸಿ ನಿರುತ ನಮ್ಮ ಅಕ್ಷಿಗೆ ಹಬ್ಬವನುಣಿಸಿ । ಈ ಕ್ಷೋಣಿಭಾರಹಾರಿ ಯಮಶಿಕ್ಷೆಗೆ ನರರ ಸಾಮ್ಯ ವಕ್ಷಮಾಣರಾದೆವೋ ಮುರ್ಖರೋ ಹೇ ಕಿತವ ॥ 7 ॥

ವೃಂದಾವನದ ವರ್ತಮಾನ ತಿಳಿದು ಬರಲು ಮಧುರೆಯಿಂದ ಕೃಷ್ಣ ತನ್ನ ಮಿತ್ರ ಉದ್ಧವನನ್ನು ಕಳಹುವನು. ಅವನ ಮುಂದೆ ಗೋಪಿಯರು ತಮ್ಮ ವಿರಹ ವ್ಯಥೆಯನ್ನು ಹೇಳಿಕೊಳ್ಳುವರು.

ಶಹನ-ಛಾಪು

ಯಾಕೆ ವೃಂದಾವನ ಯಾಕೆ ಗೋಕುಲ ನಮಗೆ
ಯಾಕೆ ಬಂದೆಯೋ ಉದ್ಧವ ॥ ಪ ॥

ಯಾಕೆ ಸ್ನೇಹದ ಮಾತು ಲೋಕಮೋಹಕ ತಾನು
ಆ ಕುಬ್ಜೆಯನು ಕೂಡಿದ ಉದ್ಧವ ॥ ಅ ॥

ಬಿಲ್ಲುಗಾರನಯ್ಯನ ಬಾಟೆ ನಗೆ ನಡೆನೋಟ । ಇಲ್ಲದಂತಾಯಿತಲ್ಲ । ತಲ್ಲಣಿಸುತಿದೆ ತಾಪ ಮೈಯಲಿ ಹಚ್ಚಿ ಪರವಶವಾಯಿತಲ್ಲ । ಎಲ್ಲರನಗಲಿಸಿದ ಖಿಲ್ಲ ಅಕ್ರೂರ

ನಮ್ಮ । ವಲ್ಲಭನ ಕರೆದೊಯ್ದನೊ । ಮಲ್ಲರ ಮರ್ದಿಸಿದ ಮಾವ ಕಂಸನ ಕೊಂದ ।। ವಲ್ಲಭನ ತೋರಿಸಯ್ಯ ಉದ್ಧವ ।। 1 ।। - ವ್ಯಾಸರಾಯರು

ಗೋಪಾಲದಾಸರ ಪದದಲ್ಲಿ ಭಕ್ತನೊಬ್ಬ ಆರಾಧ್ಯ ದೇವತೆಯನ್ನು ಕಳೆದುಕೊಂಡು ಅರಸುವಂತಹ ದೈನ್ಯ ಗೋಪಿಯರ ವಿರಹಾಲಾಪದಲ್ಲಿ ತೋರುವುದು. ಕೃಷ್ಣ ಪರಬ್ರಹ್ಮ, ಅವನ ನಿಜಮರ್ಮವನ್ನರಿಯದೆ ಮೋಹಕ್ಕೆ ವಶವಾದ ತಮ್ಮ ಪ್ರಮಾದವನ್ನು ಸ್ತ್ರೀಯರು ಧಿಕ್ಕರಿಸಿಕೊಳ್ಳುವರು. ಗೋಪಿಯರ ಈ ದೈನ್ಯ, ಈ ಬಳಲುವಿಕೆ, ಸಹೃದಯರ, ಭಾವುಕರ, ಭಕ್ತರ ಕಣ್ಣೀರು ಮಿಡಿಸುವುದು.

ಮೋಹನ-ಆದಿ

ನಾಳೆ ಬರುವೆನೆಂದು ಪೇಳಿ ಮಥುರೆಗೆ ಪೋದ
ಬಹಳ ದಿನವಾಯಿತಲ್ಲೋ ಉದ್ಧವ ।। ಪ ।।

ಕೇಳಿದ್ಯ ನೀ ಬಾಹವೇಳೆಯಲಿ ಕೃಷ್ಣನ
ಆಲೋಚನೆಯೊಳಿದ್ದೆವೋ ಉದ್ಧವ ।। ಅ ।।

ಪಳ್ಳಿವಾಸಿಗಳು ನಾವು ಪರಿಪರಿಯಲಂಕರಿಸಿ । ಒಲಿಸಿಕೊಂಬುದನಾವರಿಯವೋ ಉದ್ಧವ । ಗೊಲ್ಲಸತಿಯರು ಸದಾ ಗೋರಕ್ಷಕರು ಮೈಯ । ಗೊಲ್ಲು ತೊಳೆಯಲು ಅರಿಯವೋ ಉದ್ಧವ । ಬಲ್ಲಿದನ ಸಹವಾಸ ಮಾಡ್ಯವನ ಮಹಿಮೆಗಳ । ಎಲ್ಲ ತಿಳುಹಿಸಿಕೊಂಡೆವೋ ಉದ್ಧವ । ಚೆಲ್ವಗಂಗಳ ಚಪಳೆಯರು ಮಥುರೆನಾರಿಯರ ಒಲುಪೆಗೆ ನಾವೆದುರೆನೋ ಉದ್ಧವ । ।। 1 ।।

ಚೊಕ್ಕನಾದ ನಿತ್ಯತೃಪ್ತವಿಗೆ ಬೆಣ್ಣೆ ಕಳ । ವಿಕ್ಕಿದೆವಲ್ಲವೋ ಉದ್ಧವ । ಸಿಕ್ಕಿಸಿಕೊಂಡು ರಾಸಕ್ರೀಡೆಯಲಿ ಅವಗೆ ಸೊಕ್ಕಿ । ಉಕ್ಕಿ ಸುಡಿದೆವೋ ಉದ್ಧವ । ಕಕ್ಕುಲಾತಿಲಿ ಕಾಮಾಸಕ್ತನಾಗ್ಯವನಮಗೆ । ದಕ್ಕಿದನು ಎಂತಿದ್ದೆವೋ ಉದ್ಧವ । ವಕ್ರಗತಿಯಾಗಿ ಅಕ್ರೂರ ಬಂದು ನಮ್ಮ । ಚಕ್ರಧರನಗಲಿಸಿದನೋ ಉದ್ಧವ । ।। 2 ।।

ಧೀರ ಸ್ವರಮಣ ದೋಷದೂರನ್ನ ಅಲ್ಪ ಬಹುಜಾರವೆಂದರಿದೆವಲ್ಲೋ ಉದ್ಧವ । ಆರಾರ ಮನಕಿನ್ನು ತೋರದವನ ನಮ್ಮ ಓರಿಗೆಯವನೆಂದರಿದೆವೋ ಉದ್ಧವ । ಮಾರಾರಿ ಅಜಪರಿವಾರದೊಡೆಯುವ ನಾವು । ಪೋರನಂದಾಡಿದೆವೋ ಉದ್ಧವ । ವಾರಿಯರುನಾವಲ್ಪದಾರಿದ್ರ ದಿಟ್ಟರಿಗೆ । ಶ್ರೀರಮಣನೆಂತೊದಗುವನೋ ಉದ್ಧವ ।

ನಿಧಿಯು ಬದಲಿದ್ದರೂ ವಿಧಿಸುವುದನರಿಯದೇ ಮಡೆಯವರಾದೆವೆಲ್ಲೊ ಉದ್ಧವ । ಮದನನಾಟಕೆ ಮನವನಿಕ್ಕಿ ಅವನಿಂದೊಂದು ವಿಧಿ ತತ್ವ ತಿಳಿಯಲಿಲ್ಲೋ ಉದ್ಧವ । ಚದುರೆಯರು ನಮ್ಮ ಬಿಟ್ಟು ಕದಲದಿವನೆಂದೆಂಬೊ । ಮುದದಿ ಮೋಸಹೋದೆವೋ ಉದ್ಧವ । ಮಥುರೆಯಿಂದೆಮ್ಮ ತಮ್ಮ ಹೃದಯದೊಳಿಪ್ಪನೆಂದು । ಚದುರ ಪೇಳಿಹನಂತಲೋ ಉದ್ಧವ । ।। 4 ।।

ಮತಿತಪ್ಪಿದೆವೋ ನಾವು ಸತಿಯರೆಲ್ಲೊಂದಾಗಿ । ರಥವ ನಿಲ್ಲಿಸದೆ ಹೋದೆವೋ ಉದ್ಧವ । ಹಿತರಾರು ನಮಗೆ ಸಾರಥಿ ನೀನು ದೊರೆತಿರೆ । ಯತನ ಮಾಡುತಲಿದ್ದೆವೋ ಉದ್ಧವ । ಪಥವ ತೋರಿಸೋ ನಮಗೆ ಮುಂದೆಮ್ಮ ಚೆಲ್ವ ಶ್ರೀ । ಪತಿಯು ಬಂದೊದಗುವಂತೆ ಉದ್ಧವ । ಗತಿಯಾರೋ ಅವನ್ಹೊರತು ಗೋಪಾಲವಿಠಲಾಚ್ಯುತನ ಮಹಿಮೆ ಕಾಣೆವೋ ಉದ್ಧವ ॥ 5 ॥ - ಗೋಪಾಲದಾಸರು

ಅಂತೂ ಕೃಷ್ಣ-ಗೋಪಿಯರ ಪ್ರಣಯ ಮತ್ತು ವಿರಹ ಅತಿ ವಿಚಿತ್ರವಾದದ್ದು. ಸಾಮಾನ್ಯ ಕಾವ್ಯದಲ್ಲಿ ನಾಯಕ - ನಾಯಕಿಯರಂತಲ್ಲ ಅವರ ಸಂಬಂಧ. ಸ್ವಾಮಿಭೃತ್ಯ ನ್ಯಾಯವೇ ಇಲ್ಲಿ ಸರಿತೋರಿವುದು. ಆದ್ದರಿಂದಲೇ ಭಾಗವತರುಗಳು ಸಾಲಿನಲ್ಲಿ ಗೋಪಿಯರ ಗಣನೆಯಾಗಿರುವುದು.

(v) ಭಾರತದ ಕೃಷ್ಣ

ಕೃಷ್ಣ ಚರಿತ್ರೆಯ ಉತ್ತರಾರ್ಧದಲ್ಲಿ ಮಹಾಭಾರತದ ಯುದ್ಧವು ಅತ್ಯಂತ ಮುಖ್ಯವಾದದ್ದು. ಕೃಷ್ಣ ಅದರಲ್ಲಿ ಯೋಧನಾಗಿ ಭಾಗವಹಿಸದಿದ್ದರೂ ಅದರ ಮುಖ್ಯಚಾಲಕನಾಗಿದ್ದ. ಅವನಿಂದ ಮಹಾಭಾರತದ ಯುದ್ಧವು ಹೇಗಾಯಿತೆಂಬುದನ್ನು ಕನಕದಾಸರು ಬಣ್ಣಿಸಿದ್ದಾರೆ.

ಕಾಂಬೋಧಿ-ಝಂಪೆ

ಬೊಂಬೆಯಾಟವನಾಡಿಸಿದೆ ಮಹಾಭಾರತವ ॥ ಪ ॥

ಅಂಬುಜಭವಾದಿ ಅಮರರು ನೋಡುತಿರಲು ॥ ಅ ॥

ಕುರುಭೂಮಿಯೆಂಬ ಪುರವೀಧಿಯನು ವಿರಚಿಸಿ । ಮರೆಯಮಾಯದ ಐದು ತೆರೆಯ ಹರಿ । ಧರಣೀಶರೆಂಬ ನರಪ್ರತಿಮೆಗಳ ಅಳವಡಿಸಿ । ನರನ ರಥವಾಜಿಯ ಸೂತ್ರವನೆ ಹಿಡಿದು ॥ 1 ॥

ಓದುವನು ನಾರದನು ವಾದ್ಯಗಾರನು ಶಂಭು । ಬಾದರಾಯಣ ದೇವ ಕಥಾಪ್ರಸಂಗಿ । ಮೇದಿನಿಯರ ಹೊರೆಗೆಳಿವ ಮೃತ್ಯುವಿನ ಹಾಸ್ಯರಸ ವೇದನಿಕರಗಳು ಕೈವಾರಿಸುತ್ತಿರಲು ॥ 2 ॥

ಹದಿನೆಂಟು ಅಕ್ಷೋಹಿಣೀನಾರ್ಬಲವ ನೆರೆಸಿ । ಹದಿನೆಂಟು ದಿನ ಕದನ ನಾಟ್ಯ ನಡೆಸಿ । ಅದರೊಳೈವರಿನುಳಿಸಿ ಭೂಮಿಭಾರವನಿಳಿಸಿ । ಮುದದಿ ಬ್ರಹ್ಮಕಪಾಲವನು ತೃಪ್ತಿಗೊಳಿಸಿ ಲೋಕದೊಳಗಿದನೈದನೆಯ ವೇದವೆನಿಸಿ । ಪಾಕಶಾಸನ ಸಭೆಯನ್ನು ಮೆಚ್ಚಿಸಿ ಈ ಕತೆಯ ಕೇಳ್ದ ಜನಮೇಜಯನ ಪತಿಕರಿಸಿ ತಾ । ಕಪಟನಾಟಕದ ಸೂತ್ರಧರನೆನಿಸಿ ॥ 4 ॥

ಇಂತೆಸೆವ ಲೀಲಾವಿನೋದಗಳಿಂದ ಲೋಕಾಂತರಗಳನು ಸಂಚರಿಸುತ ಸಂತಸದಿ ಭರತಸಂಸಾರವನು ಪೊರೆವ ಕೃಪೆಯಿಂತೆಸೆವ ಕಾಗಿನೆಲೆಯಾದಿ ಕೇಶವರಾಯ ॥ 5 ॥

ಮಹಾಭಾರತದಲ್ಲಿ ಭಗವದ್ಗೀತೆಯು ಸಾರಭೂತವಾದದ್ದು. ಅದನ್ನು ಕನ್ನಡದಲ್ಲಿ ಪರಿವರ್ತಿಸುವ ಪ್ರಯತ್ನ ಎಷ್ಟೇ ಇದ್ದರೂ, ಅತಿ ಸಂಗ್ರಹವಾಗಿ ಒಂದೇ ಪದದಲ್ಲಿ ಅದನ್ನು ಅಡಗಿಸಿ ಹೇಳುವ ಸಾಮರ್ಥ್ಯ ಬರಿಯ ಪಾಂಡಿತ್ಯದಿಂದ ಬರತಕ್ಕದ್ದಲ್ಲ. ಆಚಾರ್ಯರು ಮಹಾಭಾರತದ ತಾತ್ಪರ್ಯ ನಿರ್ಣಯದಲ್ಲಿ ಹದಿನೇಳು ಶ್ಲೋಕಗಳಲ್ಲಿ ಗೀತಾರ್ಥವನ್ನು ಸಂಗ್ರಹಿಸಿರುವರು. ವ್ಯಾಸರಾಯರಾದರೋ ಒಂಭತ್ತು ನುಡಿಗಳ ವೃತ್ತನಾಮ ಒಂದರಲ್ಲಿ ಗೀತೆಯ ಸಾರವನ್ನು ಸಂಗ್ರಹಿಸಿರುವರು. ಇದು ಅತ್ಯಂತ ಸರಳಶೈಲಿಯಲ್ಲಿರುವುದಾದರೂ, ಗೀತೆಯಲ್ಲಿ ಉಕ್ತವಾದ ಮುಖ್ಯ ತತ್ವಗಳನ್ನೆಲ್ಲಾ ಗರ್ಭೀಕರಿಸಿರುವುದು. ದಾಸವಾಙ್ಮಯದಲ್ಲೇ ಇದೊಂದು ಅಪೂರ್ವ ಕೃತಿಯೆನ್ನಲೇನೂ ಅಡ್ಡಿಯಿಲ್ಲ. ಕೆಲಸಂಧಿಭಾಗದಲ್ಲಿ ಇವರ ಶಬ್ದ ಪ್ರಯೋಗವೇ ನಿಷ್ಕೃಷ್ಟವಾದ ಅರ್ಥವನ್ನು ತೋರಿಸುವುದು. ಕನ್ನಡ ಸಾಹಿತ್ಯಸಿರಿಯನ್ನಿದು ಹೆಚ್ಚಿಸಿರುವುದು.

ಕೇಳಯ್ಯ ಎನ್ನಮಾತ ಪಾರ್ಥನೆ ಗೀತಾದರ್ಥನೆ ॥ ಪ ॥

ಶ್ಲೋಕ

ಕುರುಕ್ಷೇತ್ರದಿ । ಎನ್ನವರು ಪಾಂಡವರು । ಪೇಳೋ ಸಂಜಯ
ಏನು ಮಾಡುವರು ಕೂಡಿ । ಕೇಳೈ ಅರಸನೇ । ನೋಡು ಪಾಂಡವರ
ಸೇನಾ । ಮಾತಾಡಿದ ನಿನ್ನಯ ಸುತಗೆ ದ್ರೋಣನಿಂದು ॥

ಪದ

ಕೇಳಿತಾ ಪಾರ್ಥನು ಕುರುದಂಡ । ರಣದಲಿ ಚಂಡ । ಗಾಂಡೀವಕರ ದಂಡ । ಅಚ್ಯುತ ಪಿಡಿ ರಥ ನಡೆ ಮುಂದೆ । ಬಹುತ್ವರದಿಂದ । ನೋಡುವೆ ನೇತ್ರದಿಂದ । ಗುರುಹಿರಿಯರ ಕೂಡೆ ಯಾಕೆಂದ । ಯುದ್ಧ ಸಾಕೆಂದ । ಭಿಕ್ಷವೇ ಸುಖವೆಂದ । ಕುಂತಿಸುತ ಈ ಮಾತು ಉಚಿತಲ್ಲ । ನಿನಗಿದು ಸಲ್ಲ । ಪಿಡಿ ಗಾಂಡೀವ ಬಿಲ್ಲ ॥ 1 ॥

ಶ್ಲೋಕ

ಬಾಲ್ಯಯೌವನ ಮುಪ್ಪುತನ ದೇಹದಲ್ಲಿ । ಇಂತಾದೇಹಕೆ ಮೋಹ ಮತ್ಯಾಕಲ್ಲಿ । ಕಾಯ್ದು ಕೊಲ್ಲುವ ನಾನು ಇರುತಿರಲು ಇಲ್ಲಿ । ಬಿಲ್ಲು ಪಿಡಿದು ಕೀರ್ತಿಪಡೆ ಲೋಕದಲ್ಲಿ ।

ಪದ

ಶಸ್ತ್ರದಂಜಿಕೆ ಇಲ್ಲ ಜೀವಕ್ಕೆ । ಈ ದೇಹಕ್ಕೆ । ಪಾವಕತ ದಾಹಕ್ಕೆ ಉದಕಗಲಿಂದ ವೇದನೆ ಯಾಕೆ । ಈ ಜೀವಕ್ಕೆ । ಮಾರುತದ ಶೋಷಕ್ಕೆ । ನಿತ್ಯ ಅಬೇಧ್ಯ ತಾಜೀವನ । ಸನಾತನ ವಸ್ತ್ರದ್ಹಾಂಗೆ ಈ ತನುವು । ಆದವು ಪೋದಾವು ನಿನಗಯ್ಯ । ಆದನಾ ಬಲ್ಲೆನಯ್ಯ ॥ 2 ॥

ಶ್ಲೋಕ

ಜ್ಞಾನ ದೊಡ್ಡದು ಕರ್ಮ ಬಂಧವ ಬಿಟ್ಟು । ಕರ್ಮಬಿಟ್ಟರೆ ಪ್ರತ್ಯವಾಯವೆಷ್ಟು ।

ಫಲಬಿಟ್ಟು ನೀ ಮಾಡು ಕರ್ಮಗಳ । ಸಮದೇಹಕೆ ಫಲ ಕರ್ಮ ಕಾರಣವಲ್ಲ ।।

ಪದ

ಕರ್ಮದಲ್ಲೇ ನಿನಗಧಿಕಾರ । ಫಲತಾ ದೂರ । ಧನಂಜಯಗೋಸ್ಕರ । ಜ್ಞಾನ ದೊಡ್ಡದು ಕರ್ಮ ದೂರಯ್ಯ । ಇತ್ತ ಬಾರಯ್ಯ । ಯೋಗ ಬುದ್ಧಿ ಮಾಡಯ್ಯ । ಜಿತ ಬುದ್ಧಿ ಯಾವುದೈ ಕೇಶವ । ಜಗತ್ಪಾಶವ । ನೋಡಿದೆ ಪರಮೇಶ । ಗೋವಿಂದನಲ್ಲಿ ಮನವಿಟ್ಟವ ಕಾಮಬಿಟ್ಟವ । ಜಿತದೇಹ ತಾ ನಾವ । ।। 3 ।।

ಶ್ಲೋಕ

ಜ್ಞಾನ ದೊಡ್ಡದು ಕರ್ಮದಲ್ಯಾಕೆ ಎನ್ನ । ಬುದ್ಧಿ ಮೋಹಿಸೀ । ಕೃಷ್ಣ ಕೇಳಯ್ಯ ಬಿನ್ನ । ಕರ್ಮವಿಲ್ಲದೆ ಮೋಕ್ಷ ಫಲವುಂಟೆ ಇನ್ನ । ಕರ್ಮ ಮೋಕ್ಷದ ಬುದ್ಧಿಗೆ ಬಿಜವಲ್ಲೇ ।

ಪದ

ಯುದ್ಧ ಕರ್ಮವ ಮಾಡೋ ಪಾಂಡವ । ರಣ ತಾಂಡವ । ವೈರಿ ಷಂಡನೆನ್ನುವ । ಜನರೆಲ್ಲ ಮಾಳ್ಪರೋ ನಿನ್ನ ನೋಡಿ । ಮತ್ತೆ ನನೋಡಿ । ಸೋಡಿದರೆ ನೀ ಬೇಡಿ । ಎನಗ್ಯಾಕೆ ಪೇಳಯ್ಯ ಜನಕರ್ಮ । ಕ್ಷತ್ರಿಯ ಧರ್ಮ ನಷ್ಟವಾಗುವುದು ಧರ್ಮ । ಅರ್ಪಿಸು ಎನ್ನಲ್ಲಿ ಸರ್ವವು ಬಿಟ್ಟು ಗರ್ವವು । ತಿಳಿ ಎನ್ನೊಳು ಸರ್ವವು ।। 4 ।.

ಶ್ಲೋಕ

ಯೋಗ ಸನ್ಯಾಸವೆರಡು ಮುಕ್ತಿಗೆ ದೃಢವು । ಭೋಗವರ್ಜಿತ ಕೇಳು ಸನ್ಯಾಸಿ ಇರುವು । ಹ್ಯಾಗೆ ಪದ್ಮಕೆ ಪಾಣಿಯಲೇಪವಿಲ್ಲ । ಹಾಗೆ ಭಕ್ತಿಗೆ ಸಂಸ್ಕೃತಿಯು ಇಲ್ಲ ।।

ಪದ

ಅಜದಲ್ಲಿ ದ್ವಿಜನಲ್ಲಿ ಗಜದಲ್ಲಿ । ಸಮ ನಾನಲ್ಲಿ । ಭಜಿಪರ ಮನದಲ್ಲಿ । ಮನಸು ಯಾರ ಜೀವಕೆ ಬಂದು । ಇತ್ತಬಾರದೆಂದು ಮತ್ತೆ ವೈರಿದಾರೆಂದು । ಲೋಷ್ಟ ಕಾಂಚನ ನೋಡು ಸಮಮಾಡಿ । ಆಸನ ಹೂಡಿ । ನಾಸಿಕ ತುದಿ ನೋಡಿ । ಧ್ಯಾನಮಾಡು ಹರಿ ಅಲ್ಲಿಹ । ಅವನಲ್ಲಿಹ । ಯೋಗಸನ್ನಿಹಿತನವನೆ । ।। 5 ।।

ಶ್ಲೋಕ

ಭಕ್ತಿಯು ಎನ್ನ ಪಾದಾಬ್ಜದಲ್ಲಿ । ಘೋರ ಸಂಸಾರಯಾತನೆ ಅವರಿಗಿಲ್ಲ । ಶರೀರವೇ ಕ್ಷೇತ್ರವೆಂದೆಂದು ತಿಳಿಯೋ । ಮರೆಯದೇ ಕ್ಷೇತ್ರಜ್ಞನೆಂದೆನ್ನ ತಿಳಿಯೋ ।।

ಈ

ಶರೀರದೊಳಗಿದ್ದು ಪಾಪಿಲ್ಲ । ದುಃಖಲೇಪಿಲ್ಲ । ಆಕಾಶವು ಎಲ್ಲಾ । ಯಾತರಿಂದ್ಹುಟ್ಟಿತು ಈ ಗುಣ । ಮೂರು ಸದ್ಗುಣ ಕೇಳಯ್ಯ ಫಲ್ಗೂಣ । ಸುಖದುಃಖ ಸಮಮಾಡಿ ನೋಡಿನೀ

ಗುಡಕೇಶಯ್ಯ ಈಡ್ಯಾಡು ನೀ । ಬ್ರಹ್ಮನ ನೋಡೋ ನೀ । ಚಂದ್ರಸೂರ್ಯರ ತೇಜ ನನದಯ್ಯ । ಅನ್ನ ಪಚನೆನದಯ್ಯ ॥

ಶ್ಲೋಕ

ನಾನೇ ಉತ್ತಮ ಮನಸು ಎನ್ನಲ್ಲಿ ಮಾಡೋ । ಜ್ಞಾನ ವಿಜ್ಞಾನ ಪೇಳುವೆ ತಿಳಿದು ನೋಡೋ । ಜ್ಞಾನದುರ್ಲಭ ಅವರ ಭಕ್ತಿಗಳಂತೆ । ನಾನು ಕೊಡುವೆನು ಫಲವ ಮನಸು ಬಂದಂತೆ ।

ಪದ

ಸ್ಮರಣೆ ಮಾಡುತ ದೇಹಬಿಡುವೋರೋ । ಎನ್ನ ಪಡೆವೋರೋ । ಬಲು ಭಕ್ತಿ ಮಾಡುವರೋ । ಅನಂತ ಚೇತನ ಸುಳಿವೇನು । ಹರಿಸುಲಭನು । ಮತ್ತೆ ಜನನವಿಲ್ಲವಗೆ । ಎನ್ನ ಭಕ್ತರಿಗಿಲ್ಲ ನಾಶವು । ಸ್ವರ್ಗದಾಶವು । ಬಿಟ್ಟು ಚರಣ ಭಕ್ತಿಯು ॥ 7 ॥

ಶ್ಲೋಕ

ಕೃಷ್ಣ ತೋರಿಸೋ ನಿನ್ನ ವಿಭೂತಿರೂಪ । ಇಷ್ಟಪೂರತಿಯೂಗಲೋ ನಿನಗೆ ಶ್ರೀಪರಾಮ ನಾನಾಯ್ಯ ರಾಜರ ಗುಂಪಿನಲ್ಲಿ ಸೋಮ ನಾನಾಯ್ಯ ತಾರಕಮಂಡಲದಲ್ಲಿ ॥

ಪದ

ಅಕ್ಷರದೊಳಗೆ ಅಕಾರನು । ಗುಣಸಾರನು । ಪಕ್ಷಿಗಳಲ್ಲಿ ನಾನು । ಗರುಡನು ಸಕಲಜಾತಿಗಳಲ್ಲಿ । ಶ್ರೇಷ್ಠತನದಲ್ಲಿ । ಎನ್ನ ರೂಪ ತಿಳಿಯಲ್ಲ । ತೋರಿಸೋ ಶ್ರೀಕೃಷ್ಣ ನಿನ್ನ ರೂಪ । ನಾನಾರೂಪ । ಅರ್ಜುನ ನೋಡೋ ರೂಪ । ಕಂಡನು ತನ್ನನು ಸಹಿತಾದಿ । ಹರುದೇಹದಿ । ಬ್ರಹ್ಮಾಂಡಗಳಲ್ಲಿ ॥ 8 ॥

ಶ್ಲೋಕ

ಕ್ಷರ್ರ್ಯಅಕ್ಷರ ಎರಡಕ್ಕೂ ಉತ್ತಮನು । ಘೋರನರಕಕೆ ಲೋಭಕಾಮನ ನಾನು । ಸಾರದಾನವು ಸಜ್ಜನರ ಹಸ್ತದಲ್ಲಿ । ಭೂರಿದಕ್ಷಿಣೆ ನೀಡೋ ಸತ್ಪಾತ್ರದಲ್ಲಿ ॥

ಪದ

ಸರ್ವಾದಾನದಕಿಂತ ಎನ್ನ ಭಕ್ತಿ । ಕೇಳೋ ಭೂಶಕ್ತಿ । ಮಾಡಯ ವಿರಕ್ತಿ । ಕಷ್ಟಹರಣವಾಯ್ತು ನಿನ್ನಿಂದ । ಮೋಹ ಎನ್ನಿಂದ । ಬಹುಸೂವಾಕ್ಯದಿಂದ ಕೃಷ್ಣ ಭೀಮಾರ್ಜುನರ ಸಂನಾದ । ಮಹಾ ಸುಖಪ್ರದ । ಧೃತರಾಷ್ಟ್ರ ಕೇಳಿದ ಬಲ್ಲೇನು ವ್ಯಾಸರದಯದಿಂದ । ಮನಸೀನಿಂದ । ಕೃಷ್ಣನಲ್ಲೇ ಜಯವೆಂದ ॥

5. ಪಾದಾದಿ ಅವಯವ ವರ್ಣನೆ

ಭಗವಂತನ ಅಂಗವರ್ಣನೆ ಮಾಡುವುದು ದಾಸರುಗಳಲ್ಲಿ ವಿಶೇಷವಾಗಿ ಕಂಡುಬರುವುದು. ಹರಿಯ ಅವಯಗಳೊಂದೊಂದೂ ಅನಂತವೂ, ಪರಸ್ಪರ ಅಭಿನ್ನವೂ,

ಪೂರ್ಣವೂ ಆದವು. ಹರಿಯ ಸ್ವರೂಪಗಳಿಗೂ, ಅವನ ಅವಯವಗಳಿಗೂ ಭೇದವಿಲ್ಲ. ಆದರೂ ಹರಿಯ ಸುಂದರ ರೂಪವನ್ನು ಮನಸ್ಸಿಗೆ ಭಾವಿಸಿಕೊಂಡಾಗ ವಿವಿಧ ಅವಯವಗಳ ಮಹತ್ವದ ಅರಿವಾಗುವುದು. ಅದನ್ನೇ ದಾಸರು ಮಾಡಿಸಿರುವರು. ಹೀಗೆ ವರ್ಣನೆ ಮಾಡುವುದರಲ್ಲಿ ಹರಿಯ ಪಾದವರ್ಣನೆಗೇ ಹೆಚ್ಚಳ ಕಾಣುವುದು. ತ್ರಿವಿಕ್ರಮನಾಗಿ ಮೂಲೋಕವಳೆದುದು, ಪಾದಸ್ಪರ್ಶದಿಂದ ಶಿಲೆಯಾದ ಅಹಲ್ಯೆಯನ್ನು ಉದ್ಧರಿಸಿದುದು. ಕಾಳಿಂಗನ ಮೆಟ್ಟಿದುದು, ಇವೇ ಮೊದಲಾದ ಮಹಿಮೆಗಳನ್ನು ದಾಸರು ಸ್ತುತಿಸುತ್ತಾರೆ.

ಮಧ್ಯಮಾವತಿ-ಏಕ

ಇಕ್ಕೋ ನೋಡೆ ರಂಗನಾಥನ ಚಿಕ್ಕ ಪಾದವ ॥ ಪ ॥

ಸಿಕ್ಕಿತೆ ಶ್ರೀಲಕ್ಷ್ಮೀಪತಿಯ ದಿವ್ಯ ಪಾದವ ॥ ಅ ॥

ಶಂಖಚಕ್ರಗದಾಪದ್ಮ ಅಂಕಿತ ಪಾದವ । ಅಂಕುಶ ಕುಲಿಶ ಧ್ವಜರೇಖಾ ಅಂಕಿತ ಪಾದವ । ಪಂಕಜಾಸನ ಹೃದಯದಲ್ಲಿ ನಲಿಯುವ ಪಾದವ । ಸಂಕಟಹರಣ ವೆಂಕಟೇಶನ ದಿವ್ಯಪಾದವ ॥ 1 ॥

ಲಲನೆ ಲಕ್ಷ್ಮಿಯಂಕದಿ ನಲಿಯುವ ಪಾದವ । ಜಲಜಾಸನನಭೀಷ್ಟವೆಲ್ಲವ ಸಲಿಸುವ ಪಾದವ । ಮಲ್ಲರ ಗೆಲಿದು ಕಂಸಾಸುರನ ಕೊಂದ ಪಾದವ । ಬಲಿಯ ಮೆಟ್ಟಿ ಭಾಗೀರಥಿಯ ಪಡೆದ ಪಾದವ ॥ 2 ॥

ಬಂಡೆಯ ಬಾಲೆಯ ಮಾಡಿದ ಉದ್ದಂಡ ಪಾದವ । ಬಂಡಿಲಿದ್ದ ಸಕಟಾಸುರನ ಒದ್ದ ಪಾದವ । ಅಂಡಜ ಹನುಮರ ಭುಜದೊಳು ಒಪ್ಪುವ ಪಾದವ । ಕಂಡೆವೆ ರಂಗವಿಠಲನ ದಿವ್ಯಪಾದವ ॥ 3 ॥ - ಶ್ರೀಪಾದರಾಯರು

ಅಠಾಣ-ಅಟ

ಎಂಥಾ ಪಾವನಪಾದವೋ ರಂಗಯ್ಯ ಇನ್ನೆಂಥಾ ಚಲುವ ಪಾದವೋ ॥ ಪ ॥

ಎಂಥಾ ಪಾವನ ಪಾದ ಇಂತು ಜಗದಿ ಕೇಳು
ಪಂಥದೊಳಿಹ ಕುರುಪತಿಯನುರುಳಿಸಿದ ॥ ಅ ॥

ಒಲಿದು ಗಯಾಸುರನ ಶಿರದೊಳಿಟ್ಟ ಹಲವು ಭಕ್ತರ ಪೊರೆದ

ನೆಲೆಸಿ ಉಡುಪಿಲಿ ಎನ್ನ ಹೃದಯ ಕಮಲದಲ್ಲಿ
ತೊಲಗದೆ ಇರುತಿಪ್ಪ ಸುಲಭ ಹಯವದನನ ॥ 5 ॥ - ವಾದಿರಾಜರು

ಭಗವಂತನ ಪಾದಕ್ಕೆ ವಾದಿರಾಜರು ಎಚ್ಚರಿಕೆ ಹೇಳುತ್ತಾರೆ.

ಸೌರಾಷ್ಟ್ರ-ಅಟ

ಅಜನು ತೊಳೆದು ಅರ್ಚಿಸುವ ಶ್ರೀಪಾದಕ್ಕೆ ಎಚ್ಚರಿಕೆಚ್ಚರಿಕೆ ॥ ಪ ॥

ಧ್ವಜವಜ್ರರೇಖೆಯಿಂದೊಪ್ಪುವ ಪಾದಕ್ಕೆ ಎಚ್ಚರಿಕೆಚ್ಚರಿಕೆ ॥ ಅ ॥

ಸರಸಿಜಾಕ್ಷಿ ರಮೆಯೊತ್ತುವ ಪಾದಕ್ಕೆ ಎಚ್ಚರಿಕೆಚ್ಚರಿಕೆ
ಸುರರೆಲ್ಲರು ಬಂದೆರುಗುವ ಪಾದಕ್ಕೆ ಎಚ್ಚರಿಕೆಚ್ಚರಿಕೆ ॥ 1 ॥

ಶಿಲೆಯಸ್ತ್ರೀ ಮಾಡಿದ ಶೃಂಗಾರ ಪಾದಕ್ಕೆ ಎಚ್ಚರಿಕೆಚ್ಚರಿಕೆ
ಚಲುವ ಹಯವದನ ಚರಣಾರವಿಂದಕ್ಕೆ ಎಚ್ಚರಿಕೆಚ್ಚರಿಕೆ ॥ 5 ॥

ೄಾಂಬೋಧಿ-ಝಂಪೆ

ಭಜಿಸಿ ಬದುಕೆಲೊ ಮಾನವ ॥ ಪ ॥

ಅಜಭವೇಂದ್ರಾದಿಗಳು ಪೂಜಿಸುವ ಪಾದವನು ॥ ಅ ॥

ಶಿಲೆಯಾದ ಹಲ್ಯೆಯನು ಶುದ್ಧ ಮಾಡಿದ ಪಾದ । ಒಲಿದು ಪಾರ್ಥನ ರಥವನೊತ್ತಿದ ಪಾದ । ಕಲಿ ಓಲಿಗದಿ ಕೆಡಹಿದ ಪಾದ । ಕಲಕಿ ಕಾಳಿಂಗನ ಪಡೆ ತುಳಿದ ಪಾದವನು ಗರುಡಶೇಷಾದಿಗಳು ಪೊತ್ತಿ ತಿರುಗುವ ಪಾದ । ಧರೆಯ ಈರಡಿ ಮಾಡಿ ಅಳೆದ ಪಾದ । ಸಿರಿ ತನ್ನ ತೊಡೆಯ ಮೇಲಿರಿಸಿ ಒತ್ತುವ ಪಾದ । ಸಿರಿ ಕಾಗಿನೆಲೆಯಾದಿಕೇಶವನ ಪಾದವನು ॥ 3 ॥

- ಕನಕದಾಸರು

ಸುಳಾದಿ

ಅಜಭವ ಸುರಮಕುಟ ಸಂಘಟಿತದ । ರಜದಿಂದ ವಿರಾಜಿತ ಚರಣ । ನಿಜಸತಿ ಶ್ರೀವನಿತೆ ಶ್ರೀಕರಾಂಬುಜಗಳಿಗೊಪ್ಪುವ । ಕುಚಕುಂಕುಮಾಂಕಿತ ಚರಣ ಗಜಮುಖನಯ್ಯನ ಮೌಲಿಯ ಸಾ । ಕಜನ ನಿಮ್ನಗಾ ಪಡೆದ ಶ್ರೀಚರಣ । ದ್ವಿಜಪತಿ ಆಂಜನೇಯರ ಕರಾಂ । ಬುಜಗಳಲೊಲ್ಲಪ್ಪುವ ಶುಭಚರಣ । ಧ್ವಜವಜ್ರಾಂಕುಶ ಹಲ । ಯವ ಅಂ । ಬುಜರೇಖೆಯಿಂಲಾಂಛಿತ ಚರಣ । ಕುಜನ ಕೈರವನಿಕರಾಂಬುಜ ಸಖ ಮಾಧ್ಯಂದಿನ ಚರಣ । ಭುಜಗಾಚವಲ್ಲಭ ವೇಂಕಟ ಗುರು ಗೋಪಾಲ ವಿಠ್ಠಲ । ತ್ರಿಜಗೇಶ್ವರ ಎನ್ನ ಹೃದಯಾಂಬುಜದಲ್ಲಿ ನಿಲ್ಲಿಸೋ ನಿನ್ನ ಚರಣ ॥ - ಗುರುಗೋಪಾಲದಾಸರು

ಜಗನ್ನಾಥದಾಸರು ಹರಿಯ ಅವಟ

ವಾರಿಜಾನನೆ ಇವನಾರು ಪೇಳಮ್ಮ । ಮಾರಜನಕ ಮುರಾರಿ ಕಾಣಮ್ಮ ॥ ಅ ॥

ಅರುಣಚರಣಕಳದಿರವು ಅಂಕುಶ ಧ್ವಜ । ಅರವಿಂದರೇಖಾಂಕ ಪುರುಷನಾರಮ್ಮ । ಉರಗಶಯನ ಕರಸರೋಜಮಧ್ಯದೊಳಿಟ್ಟು । ಸುರರಿಂದ ಅರ್ಚನೆಗೊಂಬ ಹರಿಯು ಕಾಣಮ್ಮ ॥ 1 ॥

ಪೊಳೆವ ಉದಯ ಶಶಿ ಬೆಳಗು ಸೋಲಿಪ ನಖಾ । ವಳಿಯಿಂದ ಒಪ್ಪುವ ಚೆಲುವನಾರಮ್ಮ । ಕುಲಿಶಪಾಣಿಗೆ ಒಲಿದಿಳೆಯೊಳು ಬಂದು ಖಂ । ಜಲವ ಪಡೆದಾನಂದ ಕಾಣಮ್ಮ ॥ 2 ॥

ಕಡಗ ಅಂದುಗೆಜ್ಜೆ ಕಡದ ಪೊನ್ನೂಪುರ । ತೋಡದಿಂದ ಬರುತಿಹ ಪ್ರೌಢನಾರಮ್ಮ ದೃಢಭಕ್ತರೆಡೆಯಲ್ಲಿ ಬಿಡದೆ ನಲಿಯುತಿಪ್ಪ । ಮೃಡಸುರು ಆದ್ಯರ ಪತಿಯು ಕಾಣಮ್ಮ ॥ 3 ॥

ಕರಿಪಲ್ಲಿನಂತೆ ಸುಂದರ ಜಂಘ ಜಾನುಗ । ಳೆರಡು ಕರಣೆಯಂತೆ ಇರುವಾನಾರಮ್ಮ । ಪರಮೇಷ್ಠಿ ಪ್ರಳಯದಿಸಿರಿಯಿಂದ ನುತಿಗೊಂಬ । ಪರಮಪುರುಷ ನರಹರಿಯು ಕಾಣಮ್ಮ ॥ 4 ॥

ಇಭವರ ಕರದಂತೆ ಉಭಯ ಊರುಕಟಿ । ಪ್ರಭೆವಸನವನುಟ್ಟ ಸುಭಗನಾರಮ್ಮ । ರಭಸದಿಂದಲಿ ಕಂಭಜಿಗಿದು ಪ್ರಹ್ಲಾದಗೆ । ಅಭಯವಿತ್ತ ಸುರಪ್ರಭುವು ಕಾಣಮ್ಮ ॥ 5 ॥

ವಲಿಮಿಕ ಬಿಲದಂತೆ ಸುಳಿನಾಭಿಜಠರ ತ್ರಿ । ವಳಿಗಳಿಂದಲಿ ಬಲು ಪೊಳೆವನಾರಮ್ಮ । ನಳಿನೋದ್ಭವನ ಪುತ್ರಾಖಿಲಲೋಕ । ತಾಳದಾಹಾಲಾ ಹಲಕಂಠನ ಗೆಳೆಯ ಕಾಣಮ್ಮ ॥ 6 ॥

ಸಿರಿವತ್ಸಕೌಸ್ತುಭ ವೈಜಯಂತೀ ಸರ । ಸಿರಿಯಿಂದಲೋಪ್ಪೋ ನಿರೆಯನಾರಮ್ಮ ಪರಭೃಗುಮುನಿಪನ ಸ್ಪರುಶವನು ತಾಳ್ದ । ಕರುಣಾ ಸಾಗರ ಸಿರಧರನು ಕಾಣಮ್ಮ ॥ 7 ॥

ಚತುರಹಸ್ತದಿ ಗದೆ ಶತಪತ್ರ ಆರಿಶಂಖ । ಸತತ ಪಿಡಿದಿಹ ಚತುರನಾರಮ್ಮ । ದಿತಿ ಜರ ಸದೆದು ದೇವತೆಗಳ ಸಲಹಿದ । ಚತುರಾತ್ಮ ಕೃತಿದೇವಿಪತಿಯು ಕಾಣಮ್ಮ ॥ 8॥

ಧರತೇರ ಕಂಧರಸುಚಿರಬಿಂಬ ಅ । ಧರದಿಂದಲೋಪ್ಪತಿಹ ಪಿರಿಯ-ನಾರಮ್ಮ । ಸಿರಿಯ ಒಡನೆ ಕ್ಷೀರಶಧಿಯೊಲೊರಗಿಪ್ಪ । ಶರಣರ ವಜ್ರಪಂಜರನು ಕಾಣಮ್ಮ ॥ 9 ॥

ಸುಕಪೋಲ ನಾಸರಜನಯನ ಪು । ಬ್ಬೆರಡು ಕುಂಡಲಯುಗ ಧರನು ಯಾರಮ್ಮ । ಶರಧಿಮಥನದಲ್ಲಿ ತರುಣಿಯಾಗಿ ಅ । ಸುರರನು ಮೋಹಿಸಿದ ಅಜರನು ಕಾಣಮ್ಮ ॥ 10 ॥

ಬಾಲಶಶಿಯಂತೆ ಫಾಲಕಸ್ತೂರಿನಾಮ । ಮೌಳಿಸುಳಿಕೇಶ ಬಾಲನಾರಮ್ಮ । ಮೂಲೇಶನಾದ ಜಗನ್ನಾಥವಿಠ್ಠಲ । ಮೂರ್ಲೋಕಾಧಿಪ ಶ್ರೀಗೋಪಾಲ ಕಾಣಮ್ಮ ॥ 11 ॥

ಉಗಾಭೋಗ

ನಿನ್ನಗುಂಟವು ಬೊಮ್ಮಾಂಡವನೊಡೆಯಿತು । ನಿನ್ನ ನಡೆ ಜಗವ ಈ - ರಡಿ ಮಾಡಿತು । ನಿನ್ನ ಪೊಕ್ಕಳು ಸರಸಿಜನಾಭನ ಪಡೆಯಿತು । ನಿನ್ನ ವಕ್ಷಸ್ಥಳ

ಸಿರಿಲಕುಮಿಗೆಡೆಯಾಯಿತು । ನಿನ್ನನಳಿದೊಳು ಸಿರಿ ಲಕುಮಿಯ ಬಿಗಿದಪ್ಪಿತು । ನಿನ್ನ ಕುಡಿನೋಟ ಸಕಲ ಜೀವರ ಪೊರೆಯಿತು । ನಿನ್ನ ತೊದಲು ನುಡಿ ಸಕಲವೇದವ ಸವಿಯಿತು ನಿನ್ನ ಅವಯವಂಗಳ ಮಹಿಮೆಯನು ಒಂದೊಂದು ಪೊಗಳನಳವಲ್ಲ ಸಿರಿಪುರಂವರ- ವಿಠಲರೇಯ । ನಿನ್ನ ಅಪಾರ ಮಹಿಮೆಗೆ ನಮೋ ನಮೋ ಎಂಬೆ ॥

೬. ಹರಿಯ ವಿಶೇಷ ಮಹಿಮೆಗಳು

ಹರಿಯೇ ಪರದೈವಸೆಂಬುದು, ಹರಿಯ ಅವತಾರ ಕಥೆಗಳು, ಇವೆಲ್ಲ ವೈಷ್ಣವ ಮತದ ಸಾಮಾನ್ಯ ಪ್ರಮೇಯಗಳು. ಆ ಭಗವಂತ ಜಗತ್ತಿಗೆ ಸರ್ಜಕನಾಗಿ, ಪಾಲಕನಾಗಿ, ಸಂಹಾರಕನಾಗಿ, ಜೀವ ಜಡ ಪದಾರ್ಥಗಳಲ್ಲಿ ಅನಂತರೂಪದಿಂದ ಅಂತರ್ಯಾಮಿ-ಯಾಗಿದ್ದುಕೊಂಡು ಅವುಗಳ ವ್ಯಾಪಾರಮಾಡುತ್ತಾ ಇದ್ದು ಜೀವರುಗಳಿಗೆ ಅವರ ಯೋಗ್ಯತಾನುಸಾರ ಫಲಗಳನ್ನು ಉಣಿಸುವನೆಂಬ ಹರಿಯ ವ್ಯಾಪ್ತತ್ವ, ಸರ್ವಸ್ವಾತಂತ್ರ್ಯಾದಿ ಗಹನವಾದ ಪ್ರಮೇಯಗಳು ಮಧ್ವಮತದ ವಿಶೇಷಗಳು. ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣರೆಂಬ ಭಗವಂತನ ಪಂಚವ್ಯೂಹ, ವಿಶ್ವ, ತೈಜಸ, ಪ್ರಾಜ್ಞ, ಆತ್ಮ, ಅಂತರಾತ್ಮಾದಿ ವಿಶೇಷ ರೂಪಗಳ ವ್ಯಾಪಾರಗಳು ಇವೆಲ್ಲ ಈ ಪ್ರಮೇಯಗಳಲ್ಲಿ ಇರುವವು. ಉಪನಿಷತ್ತುಗಳು, ಗೀತಾ, ಬ್ರಹ್ಮಸೂತ್ರಗಳು, ಪಂಚರಾತ್ರಾಗಮ, ಪುರಾಣಗಳು ಪ್ರಕಾಶಸಂಹಿತಾದಿ ಸಚ್ಛಾಸ್ತ್ರಗಳಲ್ಲಿ ಉಕ್ತವಾದ ಈ ಸೂಕ್ಷ್ಮ ಪ್ರಮೇಯಗಳನ್ನು ದಾಸರುಗಳು ಸುಲಭವಾಗಿ ನಿರರ್ಗಳ ಶೈಲಿಯಲ್ಲಿ ಹೇಳಿಬಿಟ್ಟಿರುವರು. ಇಂತಹ ಗಹನವಾದ ತತ್ವಗಳನ್ನು ತಿಳಿಸಲು ದಾಸರುಗಳು ಪದಗಳಿಗಿಂತ ಹೆಚ್ಚಾಗಿ ಸುಳಾದಿಗಳನ್ನು ರಚಿಸಿರುವರು. ಅನೇಕ ತಾಳಗಳಲ್ಲಿ ಓಡುವ ಸುಳಾದಿಗಳು ಸರಳ ಛಂದಸ್ಸುಳ್ಳವೂ, ಹೆಚ್ಚು ವಿಸ್ತಾರವೂ ಆದ್ದರಿಂದ ಗೂಢ ವಿಷಯಗಳನ್ನು ವಿವರವಾಗಿ ತಿಳಿಸಲು ಯೋಗ್ಯವಾದ ಕವಿತೆಯು. ಭಗವಂತ ಅರ್ಜುನನಿಗೆ ತೋರಿಸಿದ ವಿಶ್ವರೂಪವನ್ನು ಗೋಪಾಲದಾಸರು ಸುಳಾದಿಯೊಂದರಲ್ಲಿ ವರ್ಣಿಸಿದ್ದಾರೆ.

ವಿಶ್ವರೂಪ ಸುಳಾದಿ

ಧ್ರುವತಾಳ

ಒಂದು ರೂಪವ ನೋಡೆ ಅನಂತಪೂರ್ಣ ಇನ್ನು । ಒಂದು ಅವಯವವೆ ಪೂರ್ಣವಯ್ಯ । ಒಂದು ರೂಪದೊಳಗೆ ಅನಂತರೂಪಗಳು ಒಂದು ರೂಪದಿಂದ ಭೇದಾಭೇದನಾಗಿಪ್ಪ । ಒಂದು ಧನುರ್ಧರ ಒಂದು ಅರಿಶಂಖಧರ । ಒಂದು ಚತುರ್ಭುಜ ಒಂದು ದ್ವಿಭುಜರೂಪ । ಒಂದು ಚರುಹಸ್ತ ಒಂದು ದ್ವಿಹಸ್ತ । ಒಂದು ಏಕಮುಖ ಚತುರಮುಖ । ಒಂದು ಸಾಸಿರಮುಖ ಒಂದು ಗಜಮುಖ । ಒಂದು ಮತ್ಸ್ಯಮುಖ ಒಂದು ಸೂಕರ ಮುಖ ।

ಒಂದು ಕ್ರೂರಮುಖ ಒಂದು ಶಾಂತಮುಖ । ಒಂದು ಶ್ಯಾಮವರ್ಣ ಒಂದು ರಕ್ತವರ್ಣ । ಒಂದು ಪೀತವರ್ಣ ಒಂದು ಶುಭ್ರವರ್ಣ । ಒಂದು ಭಯಪ್ರದ ಒಂದು ಅಭಯಪ್ರದ । ಒಂದು ಅಣುವಾಗಿಪ್ಪುದು ಒಂದು ಮಹತ್ತಾಗಿಪ್ಪುದು । ಒಂದು ಕುಳಿತಿಪ್ಪುದು ಒಂದು ನಿಂತಿಪ್ಪುದು । ಒಂದು ಕೇವಲ ಲಘು ಒಂದು ಮಹಾಗುರು । ಒಂದು ಕಡೆ ಓಡ್ಯಾಟ ಒಂದು ಕಡೆ ಸಂಹಾರ । ಒಂದು ಕಡೆ ಸೃಷ್ಟಿಯು ಒಂದು ಕಡೆ ಪಾಲನೆ । ಒಂದು ರೂಪದಲ್ಲಿನ್ನು ನಿಂದು ನಾನಾ ವೈಚಿತ್ರ್ಯನಾಗಿ ತೋರುವ ದೈವಸುಂದರಮೂರಿತಿ ಗೋಪಾಲವಿಠಲ । ಒಂದೊಂದನಂತ ರೂಪ ಅನಂತ ಒಂದೇ ರೂಪ ॥

ಮಠ್ಯತಾಳ

ಒಂದು ರವಿಯ ತೇಜ । ಒಂದು ದ್ವಿರವಿ ತೇಜ । ಒಂದಕ್ಕೊಂದು ಅಧಿಕ ಹತ್ತು ರವಿಯ ತೇಜ । ಒಂದು ಬಲಜ್ಞಾನಪೂರ್ಣವಾದ ರೂಪ । ನಿಂದಿಪೆ ಮಲಗಿವೆ ಮಲಗಿ ತಿರುಗಿವೆ । ಪೊಂದಿಕೊಂಡಿಹವೇಕಪೆಂದಿಗೂ ಭೇದಗಳಿಲ್ಲ । ಮಂದಜನರ ಮನಕೆ ಮಹಾಕಳಂಕ ಗಂಧಾದಿ ಶಬ್ದವೆಲ್ಲ ಸ್ವರೂಪಭೂತ । ಇಂದ್ರಿಯಗಳೆಲ್ಲ ಒಂದೊಂದು ಪೂರ್ಣವು । ಪೊಂದಿಪ್ಪುವು ನೋಡಾನಂತ ಬೊಮ್ಮಾಂಡಗಳು । ಇಂದಿನ ಅತೀತಾನಗತವೆಲ್ಲ । ಒಂದೊಂದು ರೂಪದಿ ಪೊಂದಿಕೊಂಡಿಪ್ಪವು । ಒಂದು ಆದರೂ ಅಂತಕಂಡೆನೆಂಬುವನಾರು । ನಂದನಂದನ ಕಂದ ಗೋಪಾಲವಿಠ್ಠಲ । ಬಂದು ತೋರುವ ತತ್ತದ್ಯೋಗ್ಯತೆಯ ನುಸಾರ ॥

ರೂಪಕತಾಳ

ಒಂದು ಕಡೆಯಲ್ಲಿ ರಾವಣನ ಸಂಹಾರ ಮಾಡು । ಒಂದು ಕಡೆಯಲ್ಲಿ ತತ್ತ್ವಜ್ಞಾನ ಬೋಧಿಸುವ । .... ಒಂದು ಕಡೆಯಲ್ಲಿ ಕುರುಪಾಂಡವರ ಕಡಿದಾಡಿಸುವ । .... ಕಂದರ್ಪಜನಕ ಗೋಪಾಲವಿಠಲ ತನ್ನ । ಪೊಂದಿದ್ದವರನ್ನು ಮನಕೆ ಬಂದನಂತಾಗಿ ತೋರ್ಪ ।

ಝುಂಪೆತಳ

ಒಂದು ಕಡೆಯಲ್ಲಿ ದ್ರೋಣ ಭೀಷ್ಮಾದಿಗಳನ್ನೆಲ್ಲ ಕೊಂದು । ಕೊಂದರ್ಜುನನ ಕೊಲ್ಲು ನೀನೆನುತಿರ್ಪ । .... ಮಂದಾಕಿನೀಜನಕ ಗೋಪಾಲವಿಠಲ ಹೀಗೆಂದು ತಿಳಿದ ಜೀವರ್ಗೆ ಬಂಧನವನೆ ಕಳೆವ ॥

ತ್ರಿಪುಟತಾಳ

ಮತ್ಸ್ಯಾದಿ ಕೇಶವಾದಿ ಅನಿರುದ್ಧಾದಿ ಅಜಾದಿ । ವಿಶ್ವಾದಿ ಹಯಾದಿ ಶಿಂಶುಮಾರಕಪಿಲ ವ್ಯಾಸ । ಸ್ವಚ್ಛವಾದಾನಂತ ರೂಪಗಳೆಲ್ಲವು । ನಿಚ್ಚ ಕೃಷ್ಣನಲ್ಲೇ ನಿತ್ಯವಾಗಿ ಎಚ್ಚತ್ತಿಪ್ಪವು ಕಾಣೋ ಲೇಶ ಸಂಶಯವಿಲ್ಲ । ಅಚ್ಚನಿಟ್ಟಂತೆ ಮತ್ತೊಂದೆ ಪಾದದಲಿನ್ನು ಅಚ್ಯುತನರೂಪ ಒಂದೊಂದು ದುರ್ಬಲ ಪ್ರಬಲ ನೀ । ಚೊಚ್ಚವಿಲ್ಲವು ನಿತ್ಯವ್ಯಕ್ತ । ಅಚ್ಚುಬೆಲ್ಲವು ಒಂದು

ಅವಕಡೆ ತಿಂದರೂ । ಹುಚ್ಚ । ಒಂದು ಕಡೆ ಹುಳಿ ಸಿಹಿ ಎನಿಪುದೇ । ಮಚ್ಚರಜನರಿಗೆ ಮರುಳುಗೊಳಿಸಿ ಹೀಗೆ ನಿಚ್ಚವಾದ ನಿರಯಪೊಂದಿಸುವ । ಸ್ವಚ್ಛ ಮೂರುತಿ ನಮ್ಮ ಗೋಪಾಲವಿಠ್ಠಲ । ಅಚ್ಛ ಕರುಣಿ ಕಾಣೋ ಆರ್ತಜನಕೆ ನಿತ್ಯ ।

ಅಟತಾಳ

ಅಣು ಪರಮಅಣು ಅತ್ಯಣು ಬಲುಅಣುಉ । ಘನ ಘನ ಘನರೂಪ ಘನತರ ಘನತಮ । ಅಣುರೂಪದ ದ್ರವ್ಯ ಮನಸಿಗೆ ಒಂದನು ಎಣಿಕೆ ಹಿಡಿದೆನೆನೆಲು ಮನಕೆ ನಿಲ್ಲುವುದಿಲ್ಲ । ಘನರೂಪದ ದ್ರವ್ಯ ಆಕಾರದೊಳಗಿನ್ನು । ಅಣುವಾಗಿ ತೋರುವುದು ಅವ್ಯಾಕೃತದ್ರವ್ಯ ಘನವ್ಯಾಪ್ತಿ ಉಳ್ಳದ್ದಾದರೂ ಸರಿಯೇವೆ । ಘನಹರಿ ದ್ರವ್ಯದಲ್ಲಿ ಅಣುವಾಗಿ ತೋರೊದು । ಚಿನುಮಯ ಹರಿತಾನು ಚಿದ್ರೂಪಕೆ ಬಿಂಬ । ಎನೆ ಸಲ್ಲ ಮನುಜ ಘನಸೋಜಿಗವುಂಟು । ಅನುವಾದ ಪಂಚಮಹಾಭೂತ ಅವ್ಯಕ್ತಕೆ । ಮನಸಿಜನಯ್ಯ ತಾ ಬಿಂಬನಾಗಿಪ್ಪನು । ಎಣಿಸಿ ಎಣಿಸುವರಿಗೆ ಎಲ್ಲಕ್ಕೆ ಹರಿಬಿಂಬ । ಘನಜನಕೆ ತಾನಯ್ಯ ಗಣನೆ ಮಾಡಲು ಅನ್ಯ । ಸನಕಾದಿಗಳೊಡೆಯ ಗೋಪಾಲವಿಠ್ಠಲ । ಅನಿಮಿಷರಿಗೆ ತಿಳಿಯ ಅಗೋಚರನಯ್ಯ ।

ಆದಿತಾಳ

ಚತುರವಿಂಶತಿತತ್ತ್ವಸ್ವರೂಪಭೂತವು । ಪತಿತಪಾವನನಾದ ಹರಿಯಲ್ಲಿ । ಇಪ್ಪದು ತತು ತತುರೂಪ ತದ್ವರ್ಣ ತದಾಕಾರ । ಗತಿಗೆ ನಿಯಾಮಕ ಸತತಿ ಬಿಂಬನಾಗಿ । ಖತಿಗೊಳಗಾಗದೆ ಖಂಡಾಖಂಡನಾಗಿ । ಜಿತವಾದ ತನ್ನ ಸ್ವರೂಪದಿಂದಲೇವೆ । ಇತರಾಪೇಕ್ಷೆಯು ಇಲ್ಲ ಇವರಿಂದಲಿ ಬಂದ । ಅತಿಶಯ ಬೇಕಿಲ್ಲ ಆಶ್ರಿತಜನಪಾಲ । ಜೀತವಾದ ಜಡಕೆ ಬಿಂಬನಾದ ಬಳಿಕಿನ್ನ ತತುವ ಜೀವರಿಗೆ ಬಿಂಬನಾಗೋದಾಶ್ಚರ್ಯವೆ । ಇತರ ಜೀವರಿಗೆಲ್ಲ ನಿಶ್ಚಯ ನಿತ್ಯದಿ । ಗತಿಬೇಕಾದವನಿಗೆ ಇದೆ ಚಿಂತನೆ ಉಪಾಯ । ಇತರ ದೇವರ ಗಂಡ ಗೋಪಾಲವಿಠಲ । ಚ್ಯುತಿದೂರ ಆಶ್ರೀತಜನಪಾಲ ।

ಜೊತೆ

ವಿಶ್ವರೂಪ ದರುಶನಾಧಿಕಾರಿಗಳರಿದು ।
ವಿಶ್ವನಾಮಕ ಗೋಪಾಲವಿಠಲನ ಭಜಿಸಿ ॥

ಪುರಂದರದಾಸರು ಹರಿಯ ಅಗಮ್ಯಮಹಿಮೆಯನ್ನು ಸರಳವಾಗಿ ಹೇಳಿರುವರು.

ಉಗಾಭೋಗ

ಅಣುವಾಗಬಲ್ಲ ಮಹತ್ತಾಗಬಲ್ಲ ಅಣುಮಹತ್ತೆರಡೊಂದಾಗಬಲ್ಲ । ರೂಪನಾಗಬಲ್ಲ ಅರೂಪನಾಗಬಲ್ಲ । ರೂಪ ಅರೂಪ ಎರಡೊಂದಾಗಬಲ್ಲ । ಸಗುಣನಾಗಬಲ್ಲ ।

ನಿರ್ಗುಣನಾಗಬಲ್ಲ । ಸಗುಣನಿಗುಣ ಎರಡೊಂದಾಗಬಲ್ಲ । ವ್ಯಕ್ತನಾಗಬಲ್ಲ । ಅವ್ಯಕ್ತನಾಗಬಲ್ಲ ವ್ಯಕ್ತ ಅವ್ಯಕ್ತ ಎರಡೊಂದಾಗಬಲ್ಲ । ಘಟಿತಾಘಟಿತಚಿಂತ್ಯಾದ್ಭುತ । ಸ್ವಗತಸ್ವರೂಪ ನಮ್ಮ ಪುರಂದರವಿಠಲ ॥

ಉಗಾಭೋಗ

ಅಣುರೇಣುತೃಣದಲ್ಲಿ ಪರಿಪೂರ್ಣನಾಗಿರುವ । ಗುಣವಂತನೆ ನಿನ್ನ ಮಹಿಮೆ ಗಣನೆ ಮಾಡುವರ್‍ಯಾರು । ಎಣಿಸಿನೋಡುವಳಿನ್ನು ಏಣಾಕ್ಷಿಸಿರಿದೇವಿ ಜ್ಞಾನಸುಗುಣ ತತ್ತ್ವ । ವೇಣುಗೋಪಾಲಹರೇ । ಕಾಣೆಸೋ ನಿನ್ನ ಮಹಿಮೆ ಪುರಂದರವಿಠಲ ।

ಹರಿಯ ವ್ಯಾಪ್ತಿಯನ್ನು ವಿಜಯದಾಸರು ಸ್ಥೂಲವಾಗಿ ಹೇಳಿದ್ದಾರೆ.

ಶಂಕರಾಭರಣ-ಅಟ

ಧ್ಯಾನಿಸು ಶ್ರೀಹರಿಯ ಧ್ಯಾನಿಸು ॥ ಪ ॥

ಧ್ಯಾನಿಸು ಮನವೆ ಶ್ರೀಹರಿಯ ಪಾದಧ್ಯಾನವಂತರ್ಯಾಮಿಹರಿಯ ಅಹ । ಪ್ರಾಣಾಪಾನ ವ್ಯಾನೋದಾನಸಮಾನರ್ಗೆ ಪ್ರಾಣನಾಗಿಹ ಮುಖ್ಯಪ್ರಾಣಾಂತರ್ಗತನ ॥ ಅ ॥

ಪರಮಾಣು ಪ್ರದೇಶದಲ್ಲಿ ಪ್ರಾಣಿರಾಶಿ ಅನಂತುಂಟಲ್ಲಿ । ಹೀಗೆ ಪರಲುತಿದೆ ವೇದದಲ್ಲಿ । ದೃಷ್ಟಾಂತರವ ಪೇಳುವೆ ದೃಷ್ಟಾಂತರವ ಪೇಳುವೆ ದೃಢದಲ್ಲಿ । ಅಹ । ಪರಮಸೂಕ್ಷ್ಮ-ವಟತರುದಲ್ಲಿಹ ಪರಿಮಿತಲ್ಲದ ಬೀಜದಿರವನರಿತು ನಿತ್ಯ ॥ 1 ॥

ನಿರುತ ಸವರುಣಬ್ರಹ್ಮಾಂಡದಲ್ಲಿ ಪರಿಪೂರ್ಣನಾಗಿ ಅಖಂಡವಾಗಿ ಮೆರವುತಲಿಪ್ಪ ಮಾರ್ತಾಂಡ । ದಿವ್ಯ ಕಿರಣದಂತಿರುವ ಪ್ರಚಂಡ । ಅಹ । ಹೊರಗೆ ಒಳಗೆ ಹರಿಯು ಚಲಿಸವ ಪರಿಯ ನೀನರಿತು ಆವಾಗಲು ದೊರಕಿದ ಸ್ಥಳದಲ್ಲಿ ॥ 2 ॥

ಸಲಿಲ ಭೂ ಗಿರಿ ಲತೆ ನಾನಾ । ವೃಕ್ಷ ಫಲ ಮೃಗ ಪಕ್ಷಿ ಕಾನನ ಮುಕ್ತ ಸ್ಥಳಗಳವ್ಯಾಕೃತಗಗನ । ತೃಣ ಜಲ ಪಾವಕ ತರು ಪವನ । ಅಹ ಒಳಗೆ । ಹೊರಗೆ ಎಲ್ಲ ಸ್ಥಳದಲ್ಲಿ ಹರಿಮಯನೆಲೆಯ ನೀ ನಲವಿಂದತಿಳಿದು ಅವಾಗಲು ॥ 3 ॥

ಕೇಶವ ವಿಶ್ವ ಮತ್ಸ್ಯಾದಿ ತೇಜೋರಾಶಿ ಹಯಗ್ರೀವಾದಿ । ಜೀವರಾಶಿಯೊಳಿದ್ದು ಅನಾದಿ । ಸರ್ವದೇಶ ಭೇದಿಸುವಂಥ ವೇದಿ । ಅಹ । ಈ ಸಮಸ್ತ ಮೂರ್ತಿ ಶ್ರೀಶರಂಗನೆಂದು ವಾಸನಾಮಯದಿಂದ ನೀ ಸೇವಿಸುತ ನಿತ್ಯ ॥ 4 ॥

ಸಪ್ತಾವಣದೇಹದಲ್ಲಿ । ದಶಸಪ್ತ ದ್ವಿ ಸಹಸ್ರನಾಡಿಯಲಿ । ದಶಸಪ್ತ ದ್ವಿ ಸಹಸ್ರ ರೂಪದಲಿ । ಹರಿವ್ಯಾಪ್ತ ನಿರ್ಲಿಪ್ತ ಸ್ಥಾನದಲಿ । ಅಹ ಆಪ್ತನಂದಿಪ್ಪನು ಸು । ಷುಪ್ತಿ ಜಾಗರದೊಳು ತಪ್ತ ಕಾಂಚನದಂತೆ ದೀಪ್ತಿಸುತಿಪ್ಪನು ॥ 5 ॥

ಜೀವರಿಂದತ್ಯಂತಭೇದ । ಪ್ರತಿಜೀವಾಂತರದಲ್ಲಿ ಮೋದನಾಗಿಯಾವಾಗಲಿರುತಿಹ ವೇದ । ದಲ್ಲಿ ಪೇಳುವುದು ಸತ್ಯಂಭಿದ । ಅಹ । ಈ ವಿಧ ವೇದಾರ್ಥ ಸಾವಧಾನದಿ

ತಿಳಿದು । ಶ್ರೀವಾಯುಮತದ ಸುಕೋವಿದರೊಡಗೂಡಿ ||೬ ||

ಶ್ರೀಕೇಶವನೆ ಮೂಲರಾಶಿ । ಶ್ರುತಿ ಏಕೋ ನಾರಾಯಣ ಅಸೀತ್ ನಾನಾಲೋಕ ಸೃಷ್ಟಿಪ ಧಾತಾನಾಸೀತ್ ಜಗದೇಕ ತಾರಕಉಪದೇಶಿ ಅಹ ನೀಕೇಳಿನಿಗಮಾರ್ಥನೀಕರಿಸು ಸಂಶಯ । ಏಕಮೇವಾದ್ವಿತೀಯ ಶ್ರೀಕೃಷ್ಣನಂಪ್ರಿಯ ||೭ || — ವಿಜಯದಾಸರು

ಧ್ರುವತಾಳ

ಪ್ರಸ್ಥಮಾಡುವಂಥ ಕರ್ತನಾನಲ್ಲವಯ್ಯ । ವಸ್ತುಬೇರೆ ಇದ್ದಾನೆ ಒಳಗೊಳಗೆ ನೋಳ್ಪುದು । ಪುಸ್ತಕವಲ್ಲವಿದು ಬಿಚ್ಚಿತೋರುವುದಕ್ಕೆ । ವಿಸ್ತರಿಸಿನೋಡಿ ವಿವೇಕರು । ಅಸ್ತಮಾನುದಯತನಕ ಅದರಿವೆಯಾಗೊಬ್ಬ ಗೃ । ಹಸ್ಥ ನಮಗೆಲ್ಲರಿಗೆ ಒಡೆಯ ಕಾಣೋ ।

ಮಠ್ಯತಾಳ

ಒಂದು ಜೀವನಲ್ಲಿ ಕರ್ತೃವಾಗುವನು । ಒಂದು ಜೀವನದಲ್ಲಿ ಭೋಕ್ತೃವಾಗುವನು । ಒಂದೊಂದು ಪದಾರ್ಥದಲ್ಲಿ ತಾನೇ ಇದ್ದು ಒಂದೊಂದು ರೂಪದಿ ಒಂದೊಂದಾಗಿ ಬಂದು । ಒಂದಕ್ಕೊಂದು ಭೋಗ ಒಂದು ವಿಷಯದಲ್ಲಿ । ಒಂದೇ ಒಂದಾಗುವನೊಂದರಲ್ಲಿ ನೋಡಾ ಒಂದರ ದ್ವಾರದಿ ಒಂದಕ್ಕೆ ಫಲವೀವ । ಒಂದರಲ್ಲುಣಿಸುವ ಒಂದರಲ್ಲಿಪ್ಪ ಒಂದರಲ್ಲಿ ಇಲ್ಲವೆಂಬ ವಚನಸಲ್ಲ । ಒಂದೇ ದೈವ ನಮ್ಮ ಗೋಪಾಲವಿಠಲ ವಂದಿಸಿ ತಿಳಿದವರಿಗಾನಂದಬಡಿಸುವ ।

ರೂಪಕತಾಳ

ತಾ ಎಂದೆನಿಸಿಕೊಂಡು ತಾನೇತಾಹುವನು । ಬಾ ಎಂದೆನಿಸಿ ಕೊಂಡು ತಾನೇ ಬಾಹುವನು । ಪೋ ಎಂದೆನಿಸಿಕೊಂಡು ತಾನೇ ಪೋಗುವನು ಕೋ ಎಂದೆನಿಸಿಕೊಂಡು ತಾನೇ ಕೊಂಬುವನು । ಅ ಎಂದು ಕ್ಷ ಎಂದು ಐವತ್ತೊಂದಕ್ಷರ ಬಾಯಿಂದ ಉಚ್ಚರಿಸಿ ಕಾಯಶುದ್ಧಿಯ ಮಾಡಿ ಮಾಯಾಪೊಂದಿಸದಂತೆ ತತ್ತ್ವಗಳ ತೋರಿಸಿ । ತಾ ಇಸುಕೊಂಬುವನು ತಡವಿಲ್ಲದೆ ಭಕುತಿ । ಬಾಯ ಬಡಿಯ ಭಕ್ತರಿಂದ ಆದಕರ್ಮ । ಬಾಯಬಡಿವ ಭಕ್ತರಲ್ಲದವರ ನಿನ್ನು । ನಾಯಕನಾಗಿ ಸರ್ವರಂತ ರಂಗದಿ ನಿಂತು । ನಿಯಾಮಕ ನಾಗಿ ನಿತ್ಯ ಕುಣಿಸ್ಯಾಡುವ । ಮಾಯಾರಹಿತ ದೇವ ಗೋಪಾಲವಿಠ್ಠಲ ತಾಯಿ ಲಾಲಿಸಿದಂತೆ ತನ್ನವರ ಪೊರೆವಾ ||

ಈ ಸುಳಾದಿಯಲ್ಲಿ ಗೋಪಾಲದಾಸರು ಮಧ್ವಮತದ ಮುಖ್ಯ ಪ್ರಮೇಯವಾದ ಭಗವಂತನ ಅಂತರ್ಯಾಮಿತ್ವವನ್ನು ಹೃದಯಂಗಮವಾಗಿ ಹೇಳಿರುವರು. ಈಶ, ಆತ್ಮ ಎಂಬೆರಡು ಭಗವದ್ರೂಪಗಳು ಪ್ರಸಿದ್ಧವು. ಹರಿ ಈಶನಾಗಿದ್ದುಕೊಂಡು ಜಗತ್ತಿನ ಸೃಷ್ಟಿ—ಸ್ಥಿತಿ—ಲಯಗಳನ್ನು ನಡೆಸಿ, ಕರ್ಮಾಧ್ಯಕ್ಷನಾಗಿ ಜೀವರುಗಳ ಕರ್ಮಗಳಿಗೆ ತಕ್ಕ ಫಲಗಳನ್ನು ಕೊಡುತ್ತಿರುವನು. ಆತ್ಮರೂಪನಾಗಿ ಸಕಲ ಜೀವರುಗಳ

ಅಂತರ್ಯಾಮಿಯಾಗಿದ್ದು, ಅವರವರ ವ್ಯಾಪಾರಗಳನ್ನು ನಡೆಸುವನು. ಈ ಅಂತರ್ಯಾಮಿವಾದವು ತತ್ತ್ವಶಾಸ್ತ್ರದ ಅತ್ಯಂತ ಹಿರಿದಾದ ಪ್ರಮೇಯ. ಪುನಃ ಪುನಃ ದಾಸರುಗಳು ಇದನ್ನೇ ಒತ್ತಿಹೇಳುವರು.

ಸರ್ವವ್ಯಾಪ್ತಿ ಸುಳಾದಿ.

ಧ್ರುವತಾಳ

ಎಲ್ಲಿ ನೋಡಲು ನೀನು ಇಲ್ಲದ ಸ್ಥಳವಿಲ್ಲ। ಎಲ್ಲರಂತರ್ಯಾಮಿ ಎಲ್ಲಿಯೂ ನೀನೆ। ಹುಲ್ಲು ಕಾಷ್ಠ ಜಡ ಚೇತನಗಳಲ್ಲಿ ನೀ। ನಿಲ್ಲದಿಲ್ಲವೆಂದು ಎಲ್ಲ ಸ್ತುತಿ ಸುತಿದೆ। ಸಲ್ಲದ ಮನುಜನು ನಿನಗೆ ತನಗೆ ಭೇದ। ವಿಲ್ಲದೆಂಬುವನಿಗೆ। ಏನೆಂಬೆ ಹರಿಯೇ। ಜಲ್ಲಜ ನೀರೊಳಗಿದ್ದು ಲೇಪವಿಲ್ಲದಂತೆ। ಎಲ್ಲ ಪ್ರೇರಕನೂ। ಎಲ್ಲರ ಲ್ಲಿಯೂ ನೀನೇ। ಚೆಲ್ಲರೆ ದೈವರಗಂಡ ಗೋಪಾಲವಿಠ್ಠಲ। ನಿನ್ನ। ಬಲ್ಲವರೆ ಬಲ್ಲರು ಎಲ್ಲವರರಿಯರು।

ಮಠ್ಯತಾಳ

ವಿಶ್ವತೋಮುಖ ನೀನೇ ವಿಶ್ವತಶ್ಚಕ್ಷು ನೀನೇ ವಿಶ್ವತೋ ಬಾಹು ನೀನೇ ವಿಶ್ವತಚ್ಛ್ರವಣ ನೀನೇ ವಿಶ್ವೋಹಸ್ತ ನೀನೇ ವಿಶ್ವಧಾರಕ ನೀನೇ ವಿಶ್ವವ್ಯಾಪಕ ಸರ್ವವಿಶ್ವಮಯನು ನೀನೆ। ವಿಶ್ವನಾಮಕಹರಿ ಗೋಪಾಲವಿಠ್ಠಲ। ವಿಶ್ವಾಸಕೊಡು ನಿನ್ನ ವಿಶ್ವಚರಣದಲ್ಲಿ ||

ತ್ರಿಪುಟತಾಳ

ಅಂಗುಷ್ಠಾಗ್ರಮಾತ್ರ ಪರಮಾಣುಮೂರುತಿ ನೀನೆ। ರಂಗ ಆತ್ಮ ಅಂತರಾತ್ಮ ಮೂರುತಿ ನೀನೆ। ಲಿಂಗದೇಹಭಂಗಪಾಗುವದಕೆ ಸಾಧುಸಂಗದಲ್ಲಿ ಇಡುವ ಉತ್ತುಂಗ ಮಹಿಮ ನೀನೆ। ಗಂಗಾತೀರ್ಥದಲ್ಲಿದ್ದ ಸುಜನರ ದೋ। ಷಂಗಳ ಕಳೆವುದಕೆ ಮಂಗಳಾತ್ಮಮೂರುತಿ ನೀನೆ। ಸ್ವಾಂಗಾಯನಾಮ ನಮ್ಮ ಗೋಪಾಲವಿಠ್ಠಲ್ಲ ಸಂಗದಲ್ಲಿರಿಸೋ ನಿನ್ನ ಡಿಂಗರಿಗರೊಡನೆ।

ಅಟತಾಳ

ಸಿರಿಯಲ್ಲಿಯು ನೀನೆ ಪರಮೇಷ್ಟಿಯಲ್ಲಿಯೂ ನೀನೆ। ಮರುತ ವಾಣಿ ಭಾರತಿ ಎಲ್ಲರಲ್ಲಿಯೂ ನೀನೆ। ಉರಗನಲ್ಲಿಯೂ ನೀನೆ ಗರುಡನಲ್ಲಿಯೂ ನೀನೆ। ಗಿರಿಜಾ ಪತಿಯಲ್ಲಿಯೂ ಸುರಪತಿಯಲ್ಲಿಯೂ ನೀನೆ। ವರಸಿದ್ಧ ಸಾಧ್ಯಾಕಿನ್ನರಲ್ಲಿಯೂ ನೀನೆ। ಗಿರಿಗುಹೆಗುಹೆಗಳಲ್ಲಿ ಒಳಗೆ। ಹೊರಗೆ ಎಲ್ಲ। ಕರೆದರೆ ಓಂ ಎಂಬ ಪ್ರತಿಶಬ್ದವು ನೀನೆ। ಪರಶುರಾಮನಾಗಿ ಪಾವಕನಲಿ ನಿನೇ ಬಹುರಂತರ್ದಶದಿಕ್ಕುಗಳಲಿ ನೀನೆ। ನೋಡಲು ಕರಿ ಸಿಂಹ ಶಾರ್ದೂಲ ಮೊದಲಾದ ಸರುವ ಜೀವರಲ್ಲಿ ಪರಿಪೂರ್ಣನೀನೆ। ಮರಮೃಗ ಮೊದಲಾದ ಅಖಿಲರಲ್ಲಿಯೂ ನೀನೆ। ಕರ್ಮಾನುಸಾರವಾದ ದುಷ್ಟರಂತಕ ನೀನೆ। ಧುರವಿಕ್ರಮ ನಮ್ಮ ಗೋಪಾಲವಿಠ್ಠಲ। ದೂರ

ದೂರ ಅತಿದೂರತರನು ನೀನೆ ಅಂತಿಕಾಂತಿಕ ನೀನೆ ।

ಗೋಪಾಲದಾಸರು ಈ ಪದದಲ್ಲಿ ಹರಿಯ ಅತ್ಯದ್ಭುತಸ್ವಾತಂತ್ರ್ಯಶಕ್ತಿಯನ್ನು ವಿವರಿಸಿದ್ದಾರೆ.

ಮುಖಾರಿ–ಝಂಪೆ

ಮುಖ್ಯ ಕಾರಣ ವಿಷ್ಣು ಸ್ವತಂತ್ರನೆ ಸತ್ಯ ।
ಸಖ್ಯರಪೋಷ ಸಿರಿ ಅಜದಭವ ಅಮರೇಶ || ಅ ||

ತಿಳಿವೆಂಬವನೀನೆ ತಿಳಿದು ತಿಳಿಸುವ ನೀನೆ । ತಿಳಿವ ವಸ್ತುವುನೀನೆ ತೀರ್ಥಪದನೆ । ತಿಳಿದುದಕೆ ಫಲನೀನೆ ತಿಳಿಯಗೊಡದವ ನೀನೆ ತಿಳಿವ ಸ್ವತಂತ್ರ ನಿನ್ನದು ತಿಳಿಸೋ ಸರ್ವೇಶ || ೧ ||

ಧ್ವನಿಯು ವರ್ಣೋದಯ ಶಬ್ಧವಾಚ್ಯನು ನೀನೆ । ಗುಣ ದೇಶ ಕರ್ಮಗಳು ನೀನೆ । ಅಣು ಮಹಜ್ಜಗದ ಬಹಿರಂತರಾತ್ಮಕನೆ || ೨ ||

ವ್ಯಾಸ ಕಪಿಲ ಹಯಾಸ್ಯ ಧನ್ವಂತ್ರಿ ವೃಷಭ ಮಹಿ । ದಾಸ ದತ್ತಾತ್ರೇಯಾದ್ಯಮಿತ ರೂಪ ಈಸುರೂಪದಿ ಜ್ಞಾನವಧಿಕಾರಿಗಳಿಗೊರೆದು ಪೋಷಕನು ಆದೆ ಕೃಪಾಳುವೇ ಶ್ರೀಶ

ಚೇತನನು ಅಹುದು ನೀ ಚೇಷ್ಟೆಯನು ಮಾಡಿಸಲ । ಚೇತನನು ಸರಿ ನೀನು ಸುಮ್ಮನಿರಲು । ಯಾತರವ ನಾನಲ್ಲ ನಿನ್ನಂಘ್ರೀ ನಡೆಯಲ್ಲ ಚೇತನನಹುದು ನೀ ಚಲಿಸೆ ಚಲಿಸುವೆನು || ೪ ||

ತಿಳಿಯೆನ್ನ ಕದಕಾಗಿ ತಿಳಿಯತಕ್ಕದು ನೀನೇ ತಿಳಿಸೋ ಸೊತ್ತಮರೆಲ್ಲ ತಿಳಿದಶೇಷ ತಿಳಿವಲ್ಲತಿಳಿಪಲ್ಲಿ ತಿಳಿವಳಿಕೆನೀನಾಗಿ ಚಲಿಸದಲೆ ಮನನಿಲಿಸೋ ಗೋಪಾಲವಿಠಲ || ೫ ||

ಈ ಪದದಲ್ಲಿ ಗೋಪಾಲದಾಸರು ಜ್ಞಾನ, ಜ್ಞೇಯ, ಜ್ಞಾತೃ, ಈ ಮೂರರಲ್ಲಿಯೂ ಪರಮಾತ್ಮ ಹೇಗೆ ವ್ಯಾಪ್ತನಾಗಿದ್ದಾನೆಂದು ತಿಳಿಸಿದ್ದಾರೆ. ಇದರಂತೆ ಸಕಲ ಇಂದ್ರಿಯಗಳು, ವಿಷಯಗಳು ಇವೊಂದೊಂದರಲ್ಲೂ ಹರಿ ಇದ್ದು ವ್ಯಾಪಾರ ಮಾಡುವನೆಂದು ಕನಕದಾಸರು ಒಗಟಿನಂತೆ ಹೇಳುತ್ತಾರೆ.

ಕಾಂಬೋಧಿ–ಝಂಪೆ

ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ ।
ನೀ ದೇಹದೊಳಗೋ ನಿನ್ನೊಳು ದೇಹವೋ || ಪ ||

ಬಯಲು ಆಲಯದೊಳಗೋ ಆಲಯವು ಬಯಲೊಳಗೋ । ಬಯಲು ಆಲಯವೆರಡು ನಯನದೊಳಗೋ । ನಯನ ಬುದ್ಧಿಯೊಳಗೋ ಬುದ್ಧಿ । ನಯನದೊಳಗೋ ನಯನಬುದ್ಧಿಗಳೆರಡು ನಿನ್ನೊಳಗೋ ಹರಿಯೇ || ೧ ||

ಸವಿಯು ಸಕ್ಕರೆಯೊಳಗೋ ಸಕ್ಕರೆಯು ಸವಿಯೊಳಗೋ । ಸವಿಯು

ಸಕ್ಕರೆಯೆರಡು ಜಿಹ್ವೆಯೊಳಗೋ ಜಿಹ್ವೆ । ಮನಸಿನೊಳಗೋ ಮನಸು ಜಿಹ್ವೆಯೊಳಗೋ ಜಿಹ್ವೆಮನಸುಗಳೆರಡು ನಿನ್ನೊಳಗೊ ಹರಿಯೇ ॥ ೨ ॥

ಕುಸುಮದೊಳು ಗಂಧವೋ ಗಂಧದೊಳು ಕುಸುಮವೋ ಕುಸುಮಗಂಧಗಳೆರಡು ಘ್ರಾಣದೊಳಗೋ । ಅಸಮಭವ ಕಾಗಿನೆಲೆಯಾದಿಕೇಶವರಾಯ ಉಸುರಲೆನ್ನೊಶವೇ ಸರ್ವವು ನಿನ್ನೊಳ್ಹರಿಯೆ ॥ ೩ ॥

ಪರಮಾತ್ಮ ಪಂಚಭೂತಗಳಲ್ಲಿರುವನೆಂದು ಜಗನ್ನಾದಾಸರು ಸ್ತೋತ್ರಮಾಡುತ್ತಾರೆ

ಪೂರ್ವಿ—ಆದಿ

ಶ್ರೀವೆಂಕಟಶೈಲಾಧಿಪ ನಮೋ ರಾಜೀವಭವಭವಾರಾಧ್ಯನಮೋ ॥ ಅ ॥

ಕುಸ್ಥನಮೊ ಆಪಸ್ಥನಮೊ । ತೇಜಸ್ಥನಮೊ ವಾಯುಸ್ಥ ನಮೋ । ಖಸ್ಥನಮೋ ಆಶಾಸ್ಥನಮೋ ಮಧ್ಯಸ್ಥನಮೋ ಸ್ವಸ್ಥನಮೋ ಮಸ್ಥನಮೋ । ಕಮಲಸ್ಥ ನಮೋ ಕರಣಸ್ತನಮೋಕ್ರಿಯಾಸ್ತ ನಮೋ ಗೋಸ್ಥನಮೋ ಕಾಲಸ್ಥ ನಮೋ । ದೇವಸ್ಥನಮೋ ಸರ್ವಸ್ಥ ನಮೋ ॥ ೩ ॥ — ಜಗನ್ನಾಥದಾಸರು

ಅನಿರುದ್ಧ ಪ್ರದ್ಯುಮ್ನಾದಿ ಪಂಚರೂಪಗಳ ವ್ಯಾಪಾರಗಳನ್ನು ಜಗನ್ನಾಥದಾಸರು ವರ್ಣಿಸುತ್ತಾರೆ.

ಪಂತುರಾವಳಿ—ಆದಿ

ಬಯಸದಿರಹಿತಸುಖಗಳನು ದಿನ ನಿರ್ಭಯದಿ ಭಜಿಸು ಹರಿಯ ॥ ಅ ॥

ಅನಿರುದ್ಧನು ನಿಜವನಿತೆ ಸಹಿತ ಧನಧಾನ್ಯದೊಳಿಪ್ಪಾ । ಅನುಬಂಧಿಗಳೊಳು ಕೃತಿಪತಿ ಪ್ರದ್ಯುಮ್ನನು ಸುಖಗಳತೋರ್ಪಾ ಗುಣವಂತರೊಳು ಜಯಾಪತಿ ಸಂರ್ಕಣ ಕರ್ಮವಮಾಳ್ಪಾ । ಕುನರರು ಮಾಡುವ ಧರ್ಮಕರ್ಮಗಳ ಕೊನೆಗೆ ತಾನುಒಪ್ಪಾ ॥ ೨ ॥

ವಾಸುದೇವ ವಿಜಯಪ್ರದನಾಗಿ ನರರ ಶರೀರದೊಳಾ । ವಾಸಪ್ಪಾಗಿ ಮಾಯಾಪತಿ ಸರ್ವದ ಕ್ಲೇಶ ಪುಣ್ಯಗಳ । ತಾ ಸಮನಿಸುವನು ಸಂದೇಹಿಸದಿರು ಆಶಾಪಾಶಗಳ । ತಾ ಸಡಲಿಸುವನು ಪ್ರತಿಕ್ಷಣ ಕರುಣಾಸಮುದ್ರ ಕೇಳಾ । ॥ ೩ ॥

ನಾರಾಯಣ ತನ್ನಾರಾಧಿಪರಿಗೆ ದೂರಗೈದು ದುರಿತಾ । ಕಾರುಣಿಕ ಕೈವಲ್ಯ ಪ್ರದಾಯಕ ತೋರುವ ಸರ್ವಜಿತ । ಹಾರೈಸದಿರಲ್ಪಾಹಿಕ ಸುಖವನು ನರಕ ದ್ವಾರನಿರತಾ ಸೂರಿಗಳನು ಸಂಸೇವಿಸು ಮುಕ್ತಿಗೆ ದ್ವಾರವಹುದು ಸತತಾ ॥ ೪ ॥

ಪಂಚರೂಪ ಪರಮಾತ್ಮನು ತಾ ಷಟ್ಪಂಚ ರೂಪದಿ ಪೊರೆವಾ । ಪಂಚಜ್ಞಾನ ಕರ್ಮೇಂದ್ರಿಯಜನ್ಯಾದ್ವಿಪಂಚಪಾತಕ ತರಿವಾ ಸಂಚಿತಅಗಾಮಿಗಳಪರಾಧವ ಮುಂಚಿನವರಿಗೀವಾ । ವಾಂಛಿತಪ್ರದ ಜಗನ್ನಾಥವಿಠ್ಠಲನು ಮಿಂಚಿನಂದದಿ ಪೊಳೆವಾ ॥ ೫ ॥

೭ ನಾಮ ಮಹಿಮೆ.

ದಾಸಸಾಹಿತ್ಯದಲ್ಲಿ ಹರಿ ಮಹಿಮೆಗೆಷ್ಟು ಮಹತ್ವವಿದೆಯೋ, ಹರಿ ನಾಮೋಚ್ಚಾರಣೆಗೂ ಅಷ್ಟೇ ಮಹತ್ವವಿದೆ. ಭಗವಂತನ ಅನುಗ್ರಹ ಸಂಪಾದಿಸಲು ಜ್ಞಾನ, ಭಕ್ತಿ, ವೈರಾಗ್ಯಾದಿಗಳು ಮುಖ್ಯಸಾಧನಗಳೆಂದು ಶಾಸ್ತ್ರಗಳು ಹೇಳುವುವು. ಇಂತಹ ಸಾಧನಗಳು ಸರಿಯಾದ ವಾತಾವರಣವಿಲ್ಲದಲ್ಲಿ ವಿಕಲವಾಗುವುವು. ಐಹಿಕ ಜೀವನವೇ ಸರ್ವಸ್ವವಾಗಿ ದೈವದ ಭೀತಿಯೇ ಇಲ್ಲದಂತಾಗಲಿರುವ ಈ ಕಲಿಯುಗದಲ್ಲಿ ಪೂರ್ವೋಕ್ತ ಸಾಧನೆಗಳು ಬಹಳ ಕಷ್ಟಸಾಧ್ಯವಾಗುವುವು. ಅಂತೆಯೇ "ಕಲೌ ತನ್ನಾಮ ಕೀರ್ತನಮ್'' ಎಂದು ಸಕಲ ಸಾಧನಗಳಿಗಿಂತಲೂ ಭಕ್ತಿ ಸಹಿತವಾಗಿ ಹರಿ ನಾಮೋಚ್ಚಾರಣೆ ಮಾಡುವುದು ಕಲಿಯುಗದಲ್ಲಿ ಉತ್ತಮ ಸಾಧನೆವೆಂದು ಶಾಸ್ತ್ರಗಳಲ್ಲಿ ಹೇಳಿರುವರು. ದಾಸರುಗಳು ಈ ರಹಸ್ಯವನ್ನು ಚೆನ್ನಾಗಿ ಅರಿತವರಾದ್ದರಿಂದ ತಮ್ಮ ಸಾಹಿತ್ಯದಲ್ಲಿ ಇದಕ್ಕೆ ವಿಶೇಷ ಪ್ರಾಶಸ್ತ್ಯವನ್ನು ಕೊಟ್ಟಿರುವರು.

ಜಯಾಜಯಾ ಹರಿ ಎಂಬುವೇ ಸುದಿನವು। ಜಯ ಹರಿ ಹರಿ ಎಂಬುವುದೇ ತಾರಾಬಲವು। ಜಯ ಹರಿಯೆಂಬುವುದೇ ಚಂದ್ರ ಬಲವು। ಜಯ ಹರಿಯೆಂಬುವುದೇ। ವಿದ್ಯಾಬಲವು। ಜಯ ಹರಿಯೆಂಬುವುದೇ ದೈವಬಲವು। ಜಯ ಹರಿ ಪುರಂದರವಿಠಲನ ಬಲವಯ್ಯ ಸುಜನರಿಗೆ।

ಪುರಂದರದಾಸರು ಈ ಪದದಲ್ಲಿ ಹರಿನಾಮೇ ಸಕಲಬಲವೆಂದು ಹೇಳಿದ್ದಾರೆ. ಅಷ್ಟೇ ಅಲ್ಲ. ಅವರು ಭಗವಂತನಿಗೇ ಸವಾಲು ಹಾಕಿ 'ರಂಗ ನೀನೇಕೆ ? ನಿನ್ನ ಹಂಗೇಕೆ ? ನಿನ್ನ ನಾಮದ ಬಲವೊಂದಿದ್ದರೆ ಸಾಕು' ಎಂದು ಹೇಳುತ್ತಾರೆ.

ಕಾನಡ –ಆದಿ

ನೀನೇಕೊ ನಿನ್ನ ಹಂಗೇಕೋ
ನಿನ್ನ ನಾಮದಬಲವೊಂದಿದ್ದರೆ ಸಾಕೋ ॥ ಅ ॥
ಕರಿ ಮಕರಿಗೆ ಸಿಲುಕಿ ಮೊರೆ ಇಡುತ್ತಿರುವಾಗ
ಆದಿಮೂಲನೆಂಬೋ ನಾಮವೇಕಾಯ್ತೋ ॥ ೧ ॥
ಪ್ರಹ್ಲಾದನಪಿತ ಬಾಧಿಸುತಿರುವಾಗ
ನರಹರಿಯೆಂಬೋ ನಾಮವೇಕಾಯ್ತೋ ॥ ೨ ॥
ಸಭೆಯಲಿ ಬಾಲೆಯ ಶಾಲೆಯಸೆಳೆವಾಗ
ಕೃಷ್ಣಕೃಷ್ಣ ನೆಂಬೊ ನಾಮವೇಕಾಯ್ತೋ ॥ ೩ ॥
ಯಮನದೂತರು ಬಂದು ಅಜಮಿಳನೆಳೆವಾಗ।
ನಾರಾಯಣನೆಂಬೊ ನಾಮವೇಕಾಯ್ತೋ ॥ ೪ ॥
ಆ ಮರ ಈ ಮರ ಧ್ಯಾನಿಸುತಿರುವಾಗ।

ರಾಮರಾಮನೆಂಬೋ ನಾಮವೇಕಾಯ್ತೋ || ೫ ||
ಹಸುಳೆ ಆ ಧ್ರುವರಾಯ ಅಡವಿಗೆ ಪೋಪಾಗ ।
ವಾಸುದೇವನೆಂಬ ನಾಮವೇಕಾಯ್ತೋ || ೬ ||
ನಿನ್ನ ನಾಮಕೆ ಸರಿಗಾಣೆನೇ ಜಗದೊಳು
ಘನ್ನ ಮಹಿಮ ಸಿರಿಪುರಂದರ ವಿಠಲ || ೭ ||

ಕಲಿಯುಗದಲ್ಲಿ ಹರಿನಾಮಸ್ಮರಣೆಯೇ ತಾರಕವೆಂದು ಶ್ರೀಪಾದರಾಯರು ಹೇಳುತ್ತಾರೆ.

ಉಗಾಭೋಗ

ಧ್ಯಾನವು ಕೃತಯುಗದಲ್ಲಿ । ಯಜ್ಞವು ತ್ರೇತಾಯುಗದಲ್ಲಿ । ದಾನವಾಂತಕನ ದೇವತಾರ್ಚನೆಯು ದ್ವಾಪರಯುಗದಲ್ಲಿ । ಕಲಿಯುಗದಿ । ಗಾನದಿ ಕೇಶವನೆಂದರೆ । ಕೈಗೂಡುವನು ರಂಗವಿಠಲ ||

ಧ್ರುವತಾಳ

ಹರಿನಾಮ ಪ್ರಹ್ಲಾದನ ಮೊರೆಕೇಳಿ ಸಲಹಿತು । ಹರಿನಾಮ ಗಜೇಂದ್ರನ ಆಪತ್ತುಹರಿಸಿತು । ಹರಿನಾಮ ಅಜಾಮಿಳನ ಪಾತಕ ಕೆಡಿಸಿತು । ಹರಿನಾಮ ನಾರದನ ನೀಚಯೋನಿ ಬಿಡಿಸಿತು ||

ಹರಿನಾಮ ಒಂದಿರಲು ಮತ್ತೊಂದುಪಾಯವೇ ಹರಿನಾಮ ಭಯ ನಿವಾರಣವಯ್ಯ । ಹರಿನಾಮ ಮನಸಿಗೆ ನಿರ್ಮಲಕಾರಣ । ಹರಿನಾಮ ಸರ್ವದೇವ ರ್ಗಗಳಿಂದಧಿಕವೋ । ಹರಿನಾಮ ಅಜಭವಾದಿಗಳಿಗೆ ಗತಿಪ್ರದ । ಹರಿನಾಮ ಸಮಸ್ತ ಪ್ರಾಯಶ್ಚಿತ್ತಕ್ಕೆ ಮೊದಲು । ಹರಿನಾಮ ನಂಬಿದರೆ ಕೇಡಿಲ್ಲ ಕೇಡಿಲ್ಲ । ಹರಿನಾಮ ನೆನದವರ ಕುಲಕೋಟಿ ಉದ್ಧಾರ । ಹರಿನಾಮ ನೆನದರೆ ಸರ್ವ ರೋಗಂಗಳು । ಉರಳಿಪೋಗುವುದು ನೀ ಕೇಳೋ ಎಲೆ ಕೇಳೋ । ಹರಿನಾಮ ನಿಜಸ್ವಾಮಿ ವಿಜಯ ವಿಠಲನಂಪ್ರಿ ಪರಿಶುದ್ಧನಾಗಿ ನೆನೆ ನಿತ್ಯ ಮನದಲ್ಲಿ ||

ಅಟತಾಳ

ಹರಿನಾಮ ಇದ್ದಲ್ಲಿ ಹರುಷವೇ ಎಂದಿಗೂ । ಸುರಾದಿಗಳು ಬಲ್ಲರು ಬಹು ಕಾಲದಿ । ನಿರೆಯರು ಕೇಳಿದರು ಕಡೆಹಾಕುವುದು ಆ । ದರದಿಂದಲಿ ಪಾಲಿಸಿ ಪರವಪ್ರೀತಿಯಿಂದ । ನಿರುತ ಜ್ಞಾನ ಭಕುತಿ ವೈರಾಗ್ಯ ಕೊಡುವುದು । ಬರಿದಾಗದು ಕಾಣೋ ತುಂಬಿದ್ದ ಭಂಡಾರ । ಪಿರಿದಾಗಿ ಎಂಥೆಂಥ ಧರೆಯರಾಯರನೆಲ್ಲ । ಅರೆಕ್ಷಣದಲ್ಲಿ ಕಾಯಿತು ಕಾಯಿತು । ಧರಣಿಪಾಲಕ ನಮ್ಮ ವಿಜಯವಿಠ್ಠಲರೇಯ । ಹೊರಗೆ ಒಳಗೆ ಇದ್ದು ಆನಂದ ಬಡಿಸುವ ।

ಆದಿತಾಳ

ಒಂದೊಂದು ಹರಿನಾಮ ಪಾಡಿದರೆ ನಮಗೆ
ಸಂದಿಸಂದಿಯಲಿದ್ದ ರೋಗಂಗಳು ಪರಿಹಾರ...... ||

ಧ್ರುವತಾಳ

ಹರಿನಾಮ ಲಕ್ಷ್ಮೀಕಾಣೋ ದಾರಿದ್ರ್ಯಜನರಿಗೆ । ಹರಿನಾಮ ಬೊಮ್ಮಕಾಣೋ ಅಲ್ಪಾಯುವುಳ್ಳ ಜನಕೆ । ಹರಿನಾಮ ಪವನಕಾಣೋ ದುರಿತಘನಾವಳಿಗೆ । ಹರಿನಾಮ ಗರುಡಕಾಣೋ ಕಾಲಾಖ್ಯಸರ್ಪಗಳಿಗೆ । ಹರಿನಾಮ ಸರ್ಪಕಾಣೋ ಜ್ಞಾನಧನಪಾಲಿಪುದಕೆ । ....। ಹರಿನಾಮ ನೆನೆದವರ ಅಶುಭ ಓಡಿಸುವುದು । ಹರಿನಾಮ ನಂಬಿದರೆ ಸರ್ವದೃಷ್ಟಿಗೋಚರ । ಹರಿನಾಮ ಆವಾವ ಅಪೇಕ್ಷೆ ಕೊಡುವುದು । ಹರಿಮೂರುತಿ ರಂಗ ವಿಯವಿಠಲರೇಯ

ಹರಿಯೆಂದ ಮನುಜಗೆ ಹರುಷಪ್ರವಾಹವೆನ್ನಿ

ವ್ಯಾಸರಾಯರು ಹರಿನಾಮದಿಂದ ಅವಾವಪಾಪ ಹೋಗುವುದೆಂಬುದನ್ನು ಹೇಳುತ್ತಾರೆ.

ಉಗಾಭೋಗ

ಜಾರತ್ವವನು ಮಾಡಿದ ಪಾಪಗಳಿಗೆಲ್ಲ । ಗೋಪೀಜನ । ಜಾರನೆಂದರೆ ಸಾಲದೇ । ಚೋರತ್ವನು ಮಾಡಿದ ಪಾಪಗಳಿಗೆಲ್ಲ ನವನೀತ । ಚೋರನೆಂದರೆ ಸಾಲದೆ । ಕ್ರೂರತ್ವವನು ಮಾಡಿದ ಪಾಪಗಳಿಗೆಲ್ಲ ಮಾವನ ಕೊಂದವನೆಂದರೆ ಸಾಲದೆ । ಪ್ರತಿದಿವಸ ಮಾಡಿದ ಪಾಪಗಳಿಗೆಲ್ಲ ಪತಿತಪಾವನನೆಂದರೆಸಾಲದೆ । ಇಂತಿಪ್ಪ ಮಹಿಮೆಯೊಳೊಂದನಾದರು ಒಮ್ಮೆ ಸಂತತ ನೆನೆವರ ಸಲಹುವ ಸಿರಿ ಕೃಷ್ಣ ।

ಮುಖಾರಿ–ಆದಿ

ಕೃಷ್ಣಕೃಷ್ಣಕೃಷ್ಣ ಎಂದು ಮೂರು ಬಾರಿ ನೆನೆಯಿರೋ ಸಂ |ಪ|
ತುಷ್ಟನಾಗಿ ಮುಕುತಿ ಕೊಟ್ಟು ಮಿಕ್ಕ ಭಾರ ಹೊರುವೊನೋ |ಅ|

ಸಕಲವೇದಶಾಸ್ತ್ರ ಪಠಿಸಿ ಸಾರವನ್ನು ತಿಳಿದರೇನು । ಮಕರಕುಂಡಲ ನಾಮಧರನ ನಾಮಕೆ ಸರಿಯಿಲ್ಲವೋ || ೧ || — ಪುರಂದರದಾಸರು.

ಲಾಭವಹುದು ಹರಿಕಥಾಮೃತ ಪದುಮನಾಭನ ಪದದ ಪಥದಿ ಅಹುದು ಸಜ್ಜನ ಗಣಕೆ ಸತ್ಯ । ಎರಡುಗಳಿಗೆ ಖಟ್ವಾಂಗರಾಯ ಕರಣಪುಟದಿ ಕೃಷ್ಣ ಕಥೆಯ । ಸ್ಮರಿಸಿ ಮುಕ್ತನಾದ ಮೇಲೆ ನಿರುತ ಕಥೆಯ ಕೇಳಬೇಕು || — ಪುರಂದರದಾಸರು.

ರಾಮನಾಮ ಮಹಿಮೆ ಎಂಥದೆಂಬುದನ್ನು ದಾಸರು ಹೇಳುತ್ತಾರೆ.

ಪೂರ್ವಿಕಲ್ಯಾಣಿ—ಆಟ

ಸೋಮಶೇಖರ ತಾನೆ ಬಲ್ಲ
ಶ್ರೀ ರಾಮನಾಮಾಮೃತ ಸವಿಯಬಲ್ಲ || ಪ ||
ಮದನಪಿತಾ । ಎಂದು ಕುಣಿಕುಣಿದಾಡಲು । ಕೆದರಿದ ಕೆಂಜಡೆಗಳ ಪುಂಜದಿ । ಒದಗಿದ ಗಂಗೆ ತುಂತುರು ಹನಿಗಳ ಕಂಡು । ಪದುಮಜಾಂಡಹಿತ ರಾಮ ರಾಮಾ ಎಂಬ || ೧ ||
ಒಮ್ಮೆ ಹರಿ ಗುಣ ಅಜಪೇಳಲಾ ಎಂಬ ಒಮ್ಮೆ ನಾರದಪಾಡೆ ತತ್ಥೈ ಎಂಬ । ಒಮ್ಮೆ ರಾಣಿಗೆ ಪೇಳಿ ಶಿರವನೊಲಿದಾಡುವ । ಒಮ್ಮೆ ತನ್ನೊಳು ನೆನೆಸಿ ರಾಮರಾಮಾ ಎಂಬ || ೬ ||
ಅರಸಂಚೆಯ ಕಂಜಪುಂಜಗಳಲ್ಲಿಪ್ಪ । ಅರೆ ಮುಚ್ಚಿದ ಹದಿನೈದುನೇತ್ರಗಳಿಂ । ಹರಿಯಕೊಂಡಾಡುತ ಪಂಚಮುಖಗಳಿಂದ । ಸಿರಿಕೃಷ್ಣ ಮುಕುಂದ ನರಹರಿರಾಮಾ ಎಂಬ || ೭ || — ವ್ಯಾಸರಾಯರು.

ಧನ್ಯಾಸಿ—ಆದಿ

ರಾಮರಾಮ ಎಂಬೆರಡಕ್ಷರ ಪ್ರೇಮದಿ ಸಲಹಿತು ಸುಜನರನು || ಪ ||
ಹಾಲಾಹಲವನು ಪಾನವೆ ಮಾಡಿದ ಫಾಲಲೋಚನನೆ ಬಲ್ಲವನು ।
ಆಲಾಪಿಸುತ ಶಿಲೆಯಾಗಿದ್ದಹಲ್ಯೆಯ ಕೇಳೇನು || ೧ ||
ಅಂಜಿಕೆ ಇಲ್ಲದೆ ಗಿರಿಸಾರಿದ ಕಪಿಕುಂಜರ ರವಿಸುತ ಬಲ್ಲವನು ।
ಎಂಜಲಫಲಗಳ ಹರಿಗರ್ಪಿಸಿದ ಕಂಜಲೋಚನೆಯ ಕೇಳೇನು || ೨ ||
ಕಾಲವನರು ಸೇವೆಯ ಮಾಡಿದ ಲೋಲಲಕ್ಷ್ಮಣನೆ ಬಲ್ಲವನು ।
ವ್ಯಾಳಶಯನ ಶ್ರೀವಿಜಯವಿಠಲನ ಲೀಲೆ ಶರಧಿಯಕೇಳೇನು || ೨ ||
— ವಿಜಯದಾಸರು.

ಕಾಂಬೋಧಿ—ಝಂಪೆ

ರಾಮ ಎಂಬುವ ಎರಡಕ್ಷರದ ಮಹಿಮೆಯನು
ಪಾಮರರು ತಾವೇನು ಬಲ್ಲರಯ್ಯ || ಪ ||
ರಾ ಎಂದ ಮಾತ್ರದೊಳು ರಕ್ತಮಾಂಸದೊಳಿದ್ದ
ಆಯಸ್ಥಿಗತವಾದ ಅತಿಪಾಪವನ್ನು ।
ಮಾಯಾವನು ಮಾಡಿ ಮಹರಾಯ ಮುಕ್ತಿಯ ಕೊಡುವ ।
ದಾಯವನು ವಾಲ್ಮೀಕಿ ಮುನಿರಾಯ ಬಲ್ಲ || ೧ ||
ಮತ್ತೆ ಮಾ ಎಂದೆನ್ನಲು ಹೊರಬಿದ್ದ ಪಾಪಗಳು
ಒತ್ತಿ ಒಳ ಪೊಗದಂತೆ ಕವಾಟವಾಗಿ ।

ಚಿತ್ತಕಾಯಗಳ ಪವಿತ್ರಮಾಡುವ ಪರಿಯ
ಭಕ್ತವರಹನುಮಂತನೊಬ್ಬ ತಾಬಲ್ಲ || ೨ ||
ಧರೆಯೊಳಿನಾಮಕ್ಕೆ ಸರಿಮಿಗಿಲು ಇಲ್ಲೆಂದು
ಪರಮವೇದಗಳೆಲ್ಲ ಪೊಗಳು ಹವು ।
ಸಿರಿಯರಸ ಪುರಂದರವಿಠ್ಠಲನ ನಾಮವನು
ಸಿರಿಕಾಶಿಯೊಳಗಿಪ್ಪ ಶಿವನು ತಾ ಬಲ್ಲ || ೩ || — ವಿಜಯದಾಸರು.

ಹರಿನಾಮ ಎಂತವರಿಗೆ ದೊರಕುವುದೆಂಬುದನ್ನು ದಾಸರು ಹೇಳುವರು. "ಹರಿಕಥಾಮೃತ ಸೇವೆ ಹರಿದಾಸರಲ್ಲದೆ ಮರಳ ಮೂಢರು ಬಲ್ಲರೆ'' ಎಂದು ಪುರಂದರ ದಾಸರು ಪ್ರಶ್ನಿಸುವರು.

ಆನಂದ ಭೈರವಿ–ತ್ರಿಪುಟ

ಸುಮ್ಮನೆ ದೊರಕುವುದೆ ಶ್ರೀರಾಮನ ದಿವ್ಯನಾಮವು । || ಪ ||
ಜನ್ಮ ಜನ್ಮಾಂತರದ ದುಷ್ಕರ್ಮಹೋದವಗಲ್ಲದೆ || ಅ ||
ಭಕ್ತಿರಸದಲಿ ತನ್ನ ಚಿತ್ತಪರವಶವಾಗಿ
ಅಚ್ಯುತನ ನಾಮವ ಬಿಚ್ಚಿಟ್ಟು ಕೊಂಡವಗಲ್ಲದೆ || ೧ ||

ಹರಿನಾಮಸ್ಮರಣೆಯ ಇಯತ್ತೆಯನ್ನು ಹೇಳುತ್ತಾರೆ ವಿಜಯದಾಸರು.

ಕಾಂಭೋಧಿ–ಝಂಪೆ

ಹರಿಯ ನೆನೆಸಿದ ದಿವಸ ಶುಭಮಂಗಳ |
ಹರಿಯ ನೆನೆಸದ ದಿವಸ ಅವಮಂಗಳ || ಅ ||
ಹರಿಯ ನೆನೆಸಿದ ನಿಮಿಷ ಆವಾಗಲೂ ಹರುಷ |
ಹರಿಯ ನೆನೆಸದ ನಿಮಿಷ ದುರ್ಮಾನಸ || ೧ ||
ಹರಿಯ ನೆನೆಸಿದ ಘಳಿಗೆ ಮುಕ್ತಿಗೆ ಬೆಳವಣಿಗೆ |
ಹರಿಯ ನೆನೆಸದ ಘಳಿಗೆ ಅದು ಯಮನ ಬಳಿಗೆ || ೨ ||
ಹರಿಯ ನೆನೆಸಿದ ದಿನವೂ ನರನಿಗೆ ಸುದಿನವು |
ಹರಿಯ ನೆನೆಸದ ದಿನವು ದುರ್ದಿನವು || ೩ ||
ಹರುಯ ನೆನೆಸಿದ ನರನು ಅವನೆ ಕೃತಕರ್ಮನು
ಹರಿಯ ನೆನೆಸದ ನರನು ಜನ್ಮವ್ಯರ್ಥನು || ೪ || —ವಿಜಯದಾಸರು

ಆರಭಿ–ಆಟ

ನಾರಾಯಣ ನಿನ್ನ ನಾಮವೊಂದಿರುತಿರೆ ಬೇಕೆಂದು ನಾಮವಿನ್ನ್ಯಾತಕಯ್ಯ । ಬೆಲ್ಲವು ಕರದೊಳಿರುತಿರೆ ಕಾಡಕಲ್ಲನ್ನು ಕಡೆಯಲಿನ್ನ್ಯಾತಕಯ್ಯ । ಬಲ್ಲಿದ ನೆಲೆಯಾದಿ ಕೇಶವನಿರುತಿರೆ ಚಲ್ಲರೆ ದೈವದ ಹಂಬಲ್ಯಾಕಯ್ಯ || ೩ || —ಕನಕದಾಸರು

ಮುಖಾರಿ–ಝಂಪೆ

ನರಸಿಂಹಮಂತ್ರವೊಂದಿರಲು ಸಾಕು ।
ದುರಿತಕೋಟಿಯು ತರಿದು ಭಾಗ್ಯವನು ಕೊಡುವ || ಅ ||
ಹಿಂಡುಭೂತವತರಿದು ತುಂಡುಮಾಡುವ ಮಂತ್ರ ।
ಕೊಂಡಾಡೋಲೋಕಕೆ ಪ್ರಚಂಡ ಮಂತ್ರ ।
ಗಂಡುಗಲಿ ಕದನ ಉದ್ದಂಡ ವಿಕ್ರಮಮಂತ್ರ ।
ಪುಂಡರಾಕಾಕ್ಷ ಸಿರಿ ಪುರಂದರ ವಿಠಲ ಮಂತ್ರ || ೩ || –ಪುರಂದರದಾಸರು
ವೆಂಕಟೇಶ ನಿನ್ನನಾಮಕೆ ಮೊದಲು ನಾಲ್ಕಕ್ಷರನೋಡ್ಯೆ ।
ಬಿಂಕವಾದ ವೇದ ಶಾಸ್ತ್ರ ಪುರಾಣಳಿದರಿಂದ್ಯೆ || –ಪುರಂದರದಾಸರು

ನಾಮಸ್ಮರಣೆಯೇ ಸಕಲ ಸಾಧನಗಳಿಗಿಂತಲೂ ಶ್ರೇಷ್ಠವೆಂದು ಪುರಂದರದಾಸರು ಹೇಳುತ್ತಾರೆ.

ಶಂಕರಾಭರಣ–ಆದಿ

ಹರಿಹರಿಹರಿ ಎಂದು ಸ್ಮರಿಸುವ ಜನರಿಗೆ ।
ದೂತವೆತ್ತಣದು ದುರ್ಗತಿ ಬಹುದು || ಪ ||
ಸ್ನಾನ ವೇತಕೆ ಸಂಧ್ಯಾಜಪ ತಪವೇತಕೆ
ಮೌನವೇತಕೆಮೇಲೆ ವ್ರತವೇತಕೆ ।
ಮಾನಸದಲ್ಲಿ ವಿಷ್ಣುಪದ ಧ್ಯಾನಿಸುವ ಮಹಾ
ಜ್ಞಾನಿಗಳಾ ಸಂಗಸುಖದೊಳಿರ್ಪರಿಗೆ || ೧ ||
ಯಾತೆಯೇತಕೆ ಕ್ಷೇತ್ರ ತೀರ್ಥಗಳೇತಕ್ಕೆ
ಗೋತ್ರ ಧರ್ಮದ ಪುಣ್ಯಫಲವೇತಕೆ ।
ಸೂತ್ರದಿಂ ಜಗವ ಮೋಹಿಸುವ ಮುರಾರಿಯ
ಸ್ತೋತ್ರದಿಂ ಪೊಗಳಿ ಹಿಗ್ಗುವ ಭಾಗವತರಿಗೆ || ೨ ||
ಅಂಗದಂಡನೆಯೇಕೆ ಆತ್ಮಾಘಾತದ ಒಂದು
ತಿಂಗಳ ಚಾಂದ್ರಾಯಣವು ಏತಕೆ ।
ಮಂಗಳಮೂರುತಿ ಪುರಂದರ ವಿಠಲನ್ನ
ಹಿಂಗದೆ ಅರ್ಚನ ಮಾಡುವ ಭಕುತರಿಗೆ || ೩ ||

ನಾಮಸ್ಮರಣೆಯ ಈ ಮಹಾಮಹಿಮೆಯು ಕಲಿಯುಗಕ್ಕೆ ವಿಶೇಷವು.

ಕಲಿಯುಗದಲ್ಲಿ ಹರಿನಾಮುನ ನೆನೆದರೆ ।
ಕುಲಕೋಟಿಗಳುದ್ಧರಿಸುವುವು || –ಪುರಂದರದಾಸರು.

ಕಲ್ಯಾಣಿ—ಅಟ

ಒಂದೇ ನಾಮವು ಸಾಲದೆ ಶ್ರೀಹರಿಯೆಂಬ ಒಂದೇ ನಾಮವು ಸಾಲದೆ |
ಒಂದೇ ನಾಮವವು ಭವಬಂಧನ ಬಿಡಿಸುವುದೆಂದು |ವೇದಂಗಳು
ಆನಂದದಿ ಸ್ತುತಿಸುವ ||ಪ ||
ಒಂದೇ ನಾಮದೊಳಡಗಿದವೋ ಅಡಗಿದವೋ ಆ
ನಂದದಿಂದುಸುರುವ ಅಖಿಳವೇದಗಳು ||೧ ||
ಮತ್ಸ್ಯಾದ್ಯವಂತ ಅವತಾರ ಅವತಾರ
ಸ್ವಟ್ಬಾಷ್ಟದಶ ಪುರಾಣಸಾರ |
ಕಟ್ಟಪನಾಗಿ ಮೂಜಗಕೆ ಆಧಾರ
ಸ್ವೇಚ್ಛೆಯಿಂದಲಿ ಹರಿಮಾಡೋ ವ್ಯಾಪಾರ ||೨ || —ಪುರಂದರದಾಸರು.

ಸಕಲ ಸಾಧನಗಳುಳ್ಳವನಿಗೆಷ್ಟೇ ನಾಮಸ್ಮರಣೆಯು ಉತ್ತಮ ಸಾಧನವಲ್ಲ. ಸಾಧನೆಯನ್ನು ಮಾ ಡದಿದ್ದವನಿಗೂ ಇದು ಉತ್ಕೃಷ್ಟವಾದುದು..

ಆರಭಿ—ಅಟ

ಗಂಗಾದಿ ಸಕಲತೀರ್ಥಂಗಳಿಗಧಿಕ ಹರಿಯನಾಮ ||ಪ ||
ಹಿಂಗದೆ ನೆನೆವರ್ಗೆ ಮಂಗಳ ಫಲವೀವ ಹರಿಯನಾಮ ||ಅ ||
ಸ್ನಾನಜಪಗಳ ಸಾಧಿಸದವನಿಗೆ ಹರಿಯನಾಮ |
ಜಗದಾದಿಪುರುಷನ ಪೂಜಿಸದವನಿಗೆ ಹರಿಯನಾಮ ||೧ ||
ವೇದಶಾಸ್ತ್ರಂಗಳ ನೋಡದ ಮನುಜರ್ಗೆ ಹರಿಯನಾಮ
ಸಾಧನಗಳ ನಾಲ್ಕು ಸಾಧಿಸದವನಿಗೆ ಹರಿಯನಾಮ ||೨ ||
ಕಾಲನ ದೂತರ ತರಿದು ಸಾಧಿಸದವನಿಗೆ ಹರಿಯನಾಮ
ಲೋಲ ಶ್ರೀ ಪುರಂದರ ವಿಠಲನ ಒಲುಮೆಗೆ ಹರಿಯನಾಮ ||೩ ||

ಹರಿಯ ನಾಮ ಬಾಯಲ್ಲಿರುವಾಗ ಇನ್ನೇತರ ಭಯವೆಂದು ದಾಸರು ಹೇಳುತ್ತಾರೆ.

ಇನ್ನೇಕೆ ಯಮನ ಭಾಧೆಗಳು |
ಎನ್ನ ಜಿಹ್ವೇಲಿ ಹರಿನಾಮಸ್ಮರಣೆ ಒಂದಿರಲು || ಅ ||
ಪತಿತಪಾವನನೆಂಬ ನಾಮ | ಅತಿ ಹಿತದಿಂದ ಮುನಿಗಳಸ್ತುತಿಸುನವಾಮ |
ಕ್ರತುಕೋಟಿ ಫಲವೀವ ನಾಮ | ಸದ್ಗತಿಗೆ ಸಾಧನನಾಗುವ ಹರಿಯನಾಮ || ೧ ||
ಮುನ್ನೊಬ್ಬ ಪ್ರಹ್ಲಾದಸಾಕ್ಷಿ ಆ ಕನ್ಯಾಶಿರೋಮಣಿ ದ್ರೌಪದಿ ಸಾಕ್ಷಿ |
ಚೆಣ್ಣನೆಂದಜಮಿಳ ಸಾಕ್ಷಿ | ನಿಜ ಪುಣ್ಯಲೋಕವನಾಳ್ವ ಧ್ರುವರಾಯ ಸಾಕ್ಷಿ || ೨ ||

ದಾಸರುಗಳು ಹರಿನಾಮವನ್ನು ಔಷಧಿ ಪಾನಕ, ಮಿಠಾಯಿ, ಹಣ್ಣು ಕಲ್ಲುಸಕ್ಕರೆ, ಅರಗಿಣೆ, ರತ್ನಹಾರ ಇತ್ಯಾದಿ ಅನೇಕ ರೂಪಗಳಿಂದ ವರ್ಣನೆ ಮಾಡಿದ್ದಾರೆ.

ಪಂತುವರಾಳಿ—ಆಟ

ಭವರೋಗ ಹರವಾದೊಂದೌಷಧಿ ತ್ರೈ |
ಭುವನ ವಿಖ್ಯಾತನಾಗಿದೆ ಬುದ್ಧಿವಂತರಿಗೆ || ಪ ||
ಚತುರವೇದ ಶಾಸ್ತ್ರಮೇಣಷ್ಟಾದಶವಾದ |
ಸ್ಮೃತಿ ಕರ್ತ ಪೌರಾಣ ದಡವಿಯಲ್ಲಿ |
ಮತಿವಂತ ಮುನಿಗಳಾರಿಸಿ ತಂದು ತಾವು |
ಪ್ರತಿ ಗಂಡು ಲೋಕಕ್ಕೆ ಹಿತನಾಗಿ ತೋರುವ || ೧ ||
ಒಮ್ಮೆ ಸೇವಿಸೇ ಜನ್ಮ ಜನ್ಮಂದಳ ದು |
ಷ್ಕರ್ಮ ಸವೆದು ಸಕಲಾನಂದವೀವ |
ಘಮ್ಮನೆ ಕೃಷ್ಣರಾಯನ ಪುರದಲಿ ಬಿಡ |
ದೆಮ್ಮ ರಕ್ಷಿಪ ಮುದ್ದು ಕೃಷ್ಣ ಕೃಷ್ಣ ಎಂಬ || ೩ || —ವ್ಯಾಸರಾಯರು

ಕಾಂಬೋಧಿ—ಝಂಪೆ

ಇದಗೊಳ್ಳಿ ಭವರೋಗಕೌಷಧವನು
ಇಂದ್ರಿಯವನು ಜೈಸುವುದಕೆ ಇದಕೆ ಇಚ್ಛಾಪಥ್ಯ || ಅ ||
ನಾಸುದೇವನ ನಾಮ ವಾತವಿಧ್ವಂಸಿನೀ |
ಜನಾರ್ದನನ ನಾಮ ಜ್ವರಾಂಕುಶ |
ಮಾಧವನ ನಾಮವೇ ಮನಗಂಡ ಮಂಡೂರ |
ಮಂಗಳಾತ್ಮನ ನಾಮ ಮಾಲ್ಯವಸಂತ || ೧ ||
ಚಿಂತಾಯಕನ ನಾಮ ತ್ರೈ ಲೋಕ್ಯ ಚಿಂತಾಮಣಿ |
ಭುಜಗಶಯನ ನಾಮ ಭೂಪತಿ ಮಾತ್ರೆ |
ರಾಜೀವಲೋಚನನ ನಾಮ ರಸಕರ್ಪೂರ |
ಸೀತಾಪತಿಯ ನಾಮ ದಿವ್ಯ ಸಿಂಧೂರ || ೨ ||
ಇದನು ಕೊಂಡವರಪೆಸರನು ಪೇಳುನೆನು ಕೇಳಿ |
ಮುದದಿ ಪ್ರಹ್ಲಾದ ಮುಚುಕುಂದ ಧ್ರುವನು |
ಸದಮಲೆ ದ್ರೌಪದಿಯು ಅಜಮಿಳನು ಬದುಕಿದನು |
ಪುದುಮಾಕ್ಷ ಪುರಂದರ ವಿಠಲನೆಂಬೌಷಧವ || ೩ ||

ವಾದಿರಾಜರು ಹರಿನಾಮವನ್ನು ಖಂಡ್ಯ ಪಾನಕವೆಂದಿರುವರು.

ನಾದನಾಮಕ್ರಿಯ—ಆದಿ

ಪಾವನ ಮಾಡುವುದು ನಾಮಾಮೃತರಸ ಪಾವನಮಾಡುವುದು || ಅ ||

ಸಕ್ಕರೆ ಬೆರೆಸಿದ ಚೊಕ್ಕ ಪಾನಕದಂತೆ |
ಮುಕ್ಕುಮಾಣಿಸುತಿದೆ ರಕ್ಕುಸಾರಿಯ ಧ್ಯಾನ || ೨ ||
ಕದಳಿಖರ್ಜೂರ ದ್ರಾಕ್ಷಿ ಇಮ್ಮಿಗಿಲಾಗಿ |
ಮುದಕೊಡುವುದು ಜಿಹ್ವೆಗೊದಗಿದ ತಕ್ಷಣ || ೩ || —ವಾದಿರಾಜರು

ಕಮಾಚ್—ಆಟ

ನಂದತನಯ ಗೋವಿಂದನ ಭಜಿಪುದು ಆನಂದವಾದ ಮಿಠಾಯಿ
ಧಧಿಘೃತ ಕ್ಷೀರಕ್ಕಿಂತಲೂ ಬಹು ಇದು ಅಧಿಕವಾದ ಮಿಠಾಯಿ
ಕದಳಿದ್ರಾಕ್ಷಿಖರ್ಜೂರ ರಸಗಳನು ಮೀರಿವುದೀ ಮಿಠಾಯಿ || ೧ ||
—ಪುರಂದರದಾಸರು

ಕಲ್ಯಾಣಿ—ಅಟ

ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲರೋ
ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲರೋ || ಪ ||
ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು
ಫುಲ್ಲಲೋಚನ ಶ್ರೀ ಕೃಷ್ಣನಾಮವೆಂಬ || ಅ ||
ಸಂತೆ ಸಂತೆ ಸಂತೆಗೆ ಹೋಗಿ ಶ್ರಮಪಡಿಸುವದಲ್ಲ |
ಸಂತೆಯೊಳಗೆ ಇಟ್ಟು ಮಾರುವುದಲ್ಲ |
ಸಂತತ ಭಕ್ತರ ನಾಲಿಗೆ ಸವಿಗೊಂಬ |
ಕಾಂತ ಪುರಂದರ ವಿಠಲನ ನಾಮವೆಂಬ || ೩ || —ಪುರಂದರದಾಸರು.

ಪಂತುವರಾಳಿ—ಏಕ

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ |
ವಿಠಲ ನಾಮ ತುಪ್ಪವ ಬೆರೆಸಿ ಕಲಸಿ ಬಾಯಿ ಚಪ್ಪರಿಸಿರೋ || ಅ ||
ಹೃದಯವೆಂಬೋ ಮಡಕೆಯಲ್ಲಿ ಭಾವವೆಂಬೋ ಹೆಸರಿಟ್ಟು |
ಬುದ್ಧಿಯಿಂದ ಪಾಕಮಾಡಿ ಹರಿವಾಣಕೆ ಬಡಸಿಕೊಂಡು |
ಆನಂದ ಆನಂದವೆಂಬ ತೇಗುಬಂದಿತು ಕಾಣಿರೋ |
ಆನಂದಮೂರುತಿ ನಮ್ಮ ಪುರಂದರವಿಠಲನ್ನ ನೆನೆಯಿರೋ ||೩ ||

ಕೇದಾರಗೌಳ —ಆಟ

ನಿನ್ನ ನಾಮವೆ | ನನಗೆ ಅಮೃತಾನ್ನವು
ಇನ್ನು ಹಸಿದಿರಲೇಕೆ ಎನಗೆ ನೀನೊಲಿದಿರಲು ||ಅ ||
ಓಂಕಾರವೆಂಬ ನಿನ್ನ ನಾಮ ಉಪ್ಪಿನಕಾಯಿ
ಶೇಷಶಾಯಿಪಾಣಿಯು ನಾಮ ಶಾಖಾದಿಸೂಪ |

ಸಂಕರ್ಷಣ ಎಂಬ ನಾಮ ದಿವ್ಯ ಶಾಲ್ಯನ್ನವು |
ಪಂಕಜಾಕ್ಷ ನಿನ್ನ ನಾಮ ಪಳದ್ಯಸಾರು || ೧ || —ಪುರಂದರದಾಸರು.

ಪಂತುವರಾಳಿ—ಛಾಪು

ಹಣ್ಣು ಬಂದಿದೆ ಜನರು ಹಣ್ಣು ಕೊಳ್ಳಿರೋ |
ಹಣ್ಣು ಎಂಬೋ ಹರಿಯ ನಾಮ ಎಂಬೋ ಶ್ರುತಿಯ ನಿಂಬೆಯ || ಅ ||
ಹರಿಯ ನಾಮವನ್ನು ನಿತ್ಯ ಸ್ಮರಿಸಬಲ್ಲ ವಿಪ್ರರಿಗೆ |
ಸುರರು ಮುನಿಗಳೆಲ್ಲ ಬಾಗುವರೆಲ್ಲಯ್ಯ |
ಗಿರಿಯ ಮೇಲಿಪ್ಪ ಅಲಿಮೇಲುಮಂಗ |
ಅರಸನಾದ ಪುರಂದರವಿಠಲನೆಂಬ ಜಂಬುನೇರಳೆ || ೩ ||

ಕಾಂಬೋಧಿ—ಅಟ

ರಾಮನಾಮ ರತ್ನಹಾರದೊರಕಿತೆಗೆನಗೆ | ಪೂರ್ವಪುಣ್ಯಫಲಕೆ || ಅ ||
ಮಚ್ಛನೆಂಬ ಮಾಣಿಕ್ಯದ ಹರಳು | ಕೂರ್ಮನೆಂಬೋ ಕುಸುರಿಗಳು |
ನರಹನೆಂಬೋ ಹೊಸಮೋಹನದ ಚಿನ್ನ | ನರಹರಿ ಎಂಬೋ ನಾಮದ
ಸರಮುತ್ತು || ೧ || —ಪುರಂದರದಾಸರು

ಕಾಂಬೋಧಿ—ಅಟ

ಹರಿನಾಮದರಗಿಣಿಯು ಹಾರುತಿದೆ ಜಗದಿ |
ಪರಮಭಾಗವತರು ಬಲೆಯ ಬೀಸುವರು || ಅ ||
ಎಷ್ಟು ವರ್ಣಿಸಲಿ ನಾನೀ ಮುದ್ದು ಅರಗಿಣಿಯ | ಹೊಟ್ಟೆಯೊಳಗೀರೇಳು
ಜಗನನಿಂಬಿಟ್ಟು | ಸೃಷೀಶ ಪುರಂದರ ವಿಠಲನಂ ನೆನೆನೆನೆದು |
ಮುಟ್ಟಿಭಜಿಸುವುದು ಈ ಮುದ್ದಿನರಗಿಣಿಯ || ೩ ||
ಹೀಗೆ ನಾಮಮಹಿಮಯು ಅನೇಕ ರೀತಿಯಾಗಿ ವರ್ಣಿತವಾಗಿದೆ.

೮. ಭಗವಂತನ ಸೃಷ್ಟಿ ವೈಚಿತ್ರ್ಯ

ಪರಿದೃಶ್ಯಮಾನವಾದ ಪೃಥ್ವಿವಾಯದಿ ಜಡ, ಸಕಲಚೇತನರು, ಕಾಲ, ದೇಶ. ಇವೆಲ್ಲವೂ ಕೂಡಿ ಜಗತ್ತೆಂದು ವ್ಯವಹರಿಸಲ್ಪಡುತ್ತದೆ. ಈ ಜಗತ್ತು ಸತ್ಯವೆಂದೂ, ಭಗವಂತನಿಗೆ ಸರ್ವವಿಧದಿಂದಲೂ ಅಧೀನವೆಂತಲೂ ಆಚಾರ್ಯರು ಸಿದ್ಧಾಂತ ಮಾಡಿರುವರು. ಈ ಜಗತ್ತು ಭಗವಂತನಿಂದ ಸೃಷ್ಟವಾಗಿ ಪಾಲಿತವಾಗಿ, ಅವನಿಂದಲೇ ನಾಶಹೊಂದುವುದು. ಈಜಗತ್ತಿನ ಸೃಷ್ಟಿಯೇ ಮೊದಲಾದ ಎಂಟುಕ್ರಿಯೆಗಳಿಗೆ ಯಾರು ಒಡೆಯನೋ ಅವನೇ ಬ್ರಹ್ಮನೆಂದ "ಜನ್ಮಾದ್ಯಸ್ಯಯತಃ'' ಎಂಬ ಬ್ರಹ್ಮಸೂತ್ರವು ಬೋಧಿಸುವುದು. ಸತ್ಯಭೂತವಾದ ಈ ಜಗತ್ತನ್ನು ಸೃಷ್ಟಿಸುವುದರಿಂದ ಪರಮಾತ್ಮನಿಗೆ ಯಾವ ವಿಧವಾದ ಪ್ರಯೋಜನವೂ ಇಲ್ಲ. ಪೂರ್ಣನಾದ ಹರಿಯು ಕೇವಲ ತನ್ನ

ಆನಂದದ ಉದ್ರೇಕದಿಂದಲೇ, ಹುಚ್ಚನು ಸಂತೋಷದಿಂದ ಕುಣಿದಾಡುವಂತೆ ಈ ಜಗತ್ತನ್ನು ಸೃಷ್ಟಿಸುವನೆಂದು ಲೋಕವತ್ತುಲೀಲಾಕೈವಲ್ಯಮ್ ಎಂಬ ಸೂತ್ರದಲ್ಲಿ ನಿರೂಪಿಸಿರುವರು. ಭಗವಂತ ಜಗತ್ತನ್ನು ಸೃಷ್ಟಿಸುವ ಕ್ರಮವೂ ಉಪನಿಷತ್ತುಗಳಲ್ಲೂ ಪ್ರಕಾಶಸಂಹಿತಾದಿ ಗ್ರಂಥಗಳಲ್ಲೂ, ಪಾಂಚರಾತ್ರಾಗಮ, ಪುರಾಣಗಳು, ಇವುಗಳಲ್ಲಿ ವರ್ಣಿಸಿರುವರು. ಇದನ್ನೆಲ್ಲಾ ಕ್ರೋಢೀಕರಿಸಿ ಆಚಾರ್ಯರು ನಿರ್ಣಯಾದಿ ಗ್ರಂಥಗಳಲ್ಲಿ ಸೃಷ್ಟಿಕ್ರಮವನ್ನು ತಿಳಿಸಿರುವರು. ಇದರ ಆಧಾರದ ಮೇಲೆಯೇ ದಾಸರುಗಳು ಸೃಷ್ಟಿಯ ವೈವಿಧ್ಯವನ್ನು ಅನೇಕ ಪದ ಸುಳಾದಿಗಳಲ್ಲಿ ಅತ್ಯಂತ ವಿಸ್ತಾರವಾಗಿ ಬಣ್ಣಿಸಿರುವರು.

ಸೃಷ್ಟಿಯು ಅನೇಕ ವಿಧವೂ, ಅನೇಕ ಮುಖವೂ ಆದುದು. ಅದರಲ್ಲಿ ಮೊದಲು ಪರಮಾತ್ಮನ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವಾದಿ ರೂಪಗಳು ಒಂದರಿಂದ ಒಂದು ಪ್ರಾದುರ್ಭವಿಸುವುವು. ಹೀಗೆ ಪ್ರಾದುರ್ಭೂತವಾದ ಹರಿಯ ಎಲ್ಲ ರೂಪಗಳೂ, ಅನಾದಿ ನಿತ್ಯವೂ ಪೂರ್ಣವೂ ಆದವು. ಪ್ರಾದುರ್ಭಾವ ಎಂಬ ಶಬ್ದವೇ ಆರೂಪಗಳು ಯಾವಾಗಲೂ ಇದ್ದು, ಕಾಲವಿಶೇಷಗಳಲ್ಲಿ ಲೋಕಕ್ಕೆ ಅಭಿವ್ಯಕ್ತವಾಗುವುವು ಎಂಬ ಅರ್ಥವನ್ನು ಸೂಚಿಸುವುದು. ಹರಿಯ ರೂಪ, ಜ್ಞಾನ, ಗುಣ, ಕ್ರಿಯೆ, ಶಕ್ತಿಗಳಲ್ಲಿ ಸ್ವಲ್ಪವೂ ಭೇದವಿಲ್ಲವೆಂದು ಶ್ರುತಿಗಳು ಸಾರುವುವು. ಹರಿಯ ಈ "ಆತ್ಮಸೃಷ್ಟಿ"ಯ ಪ್ರಕಾರವನ್ನು ಆಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದ ಆದಿಯಲ್ಲಿ ಹೇಳಿರುವರು.

ಇತ್ಥಂ ವಿಚಿತ್ಯಂ ಸಪರಃ ಸತು ವಾಸುದೇವ ನಾಮಾ ಬಭೂವ ನಿಜ ಮುಕ್ತಿಪದ ಪ್ರದಾತಾ ।

ತಸ್ಯಾಜ್ಞಯೈವ ನಿಯತಾಥ ರಮಾಪಿರೂಪಂ
ಬಭ್ರೆ ದ್ವಿತೀಯಮಪಿ ಯತ್ಪ್ರವದಂತಿ ಮಾಯಾಮ್ ||
ಸಂಕರ್ಷಣ ಃ ಸತುಬಭೂವ ಪುನಸ್ಸುನಿತ್ಯ ಃ
ಸಂಹಾರ ಕಾರಣವಪುಸ್ತದನುಜ್ಞಯೈವ ।
ದೇವೀ ಜಯೇತ್ಯನು ಬಭೂವ ಸಸೃಷ್ಟಿಹೇತೋ ಃ
ಪ್ರದ್ಯುಮ್ನತಾ ಮುಪಗತಃ ಕೃತಿತಾಂಚದೇವೀ ||
ಸ್ಥಿತ್ಯೈ ಪುನಃ ಸ ಭಗನಾನಿರುದ್ಧನಾಮಾ
ದೇವೀಚ ಶಾಂತಿರಭವಚ್ಛರದಾಂ ಸಹಸ್ರಮ್ ।
ಸ್ಥಿತ್ವಾ ಸ್ವಮೂರ್ತಿರಮೂಭಿರಚಿಂತ್ಯ ಶಕ್ತಿ ಃ
ಪ್ರದ್ಯುಮ್ನರೂಪಕ ಇಮಾಂಶ್ಚ ರಮಾತ್ಮನೇ Sದಾತ್ ||
ಪಂಚಾತ್ಮಕಃ ಸ ಭಗವಾನ್ ದ್ವಿಷಡಾತ್ಮಕೋಭೂತ್
ಪಂಚದ್ವಯೇ ಶತಸಹಸ್ರತರೋ S ಮಿತಶ್ಚ ।

ಏಕಃ ಸಮೋಪ್ಯಖಿಲದೋಷಸಮುಜ್ಝಿತೋಪಿ
ಸರ್ವತ್ರ ಪೂರ್ಣಗುಣಕೋ S ಪಿ ಸಮುಜ್ಝಿತೋಭೂತ್ ||

ದಾಸರುಗಳು ಆತ್ಮಸೃಷ್ಟಿಯನ್ನು ವಿವರಿಸಿದ್ದಾರೆ. ಎರಡನೆಯದಾಗಿ ಸಾಮಾನ್ಯ ಸೃಷ್ಟಿ ಕ್ರಮವನ್ನು ಹೇಳುತ್ತಾರೆ. ಮಹಾಪ್ರಳಯದಲ್ಲಿ ಪರಮಾತ್ಮ ಬಾಲರೂಪನಾಗುವನು. ಹರಿಸೇವೆಗಾಗಿ ಲಕ್ಷ್ಮೀದೇವಿಯು ವಟಪತ್ರರೂಪವನ್ನು ಪಡೆಯುವಳು. ಹರಿಯು ವಟಪತ್ರದ ಮೇಲೆ ಪವಡಿಸುವನು. ಅನಂತರ ಉದರಸ್ಥ ಜೀವರುಗಳ ಉದ್ಧಾರಾಕ್ಕಾಗಿ ಸೃಷ್ಟಿ ಮಾಡಬೇಕೆಂದು ಇವನು ಇಚ್ಛಿಸುವನು. ದುರ್ಗಾದೇವಿಯೂ ಹರಿಯನ್ನು ಪ್ರಾರ್ಥಿಸುವಳು. ಆಗ ಹರಿಯ ನಾಭಿಕಮಲದಿಂದ ಚತುರ್ಮುಖಬ್ರಹ್ಮದೇವರು ಉದಯಿಸುವರು. ತಪಸ್ತಪಃ, ಎಂಬ ಭಗವಾದಾಜ್ಞೆಯಂತೆ ಅವರು ಬಹುಕಾಲ ತಪಸ್ಸನ್ನಾಚರಿಸುವರು. ಆಮೇಲೆ ಜಗತ್ತಿನ ಸೃಷ್ಟಿಕೈಗೊಳ್ಳುವರು. ಇದರಲ್ಲಿ ಪದ್ಮಕಲ್ಪ, ಶ್ವೇತವರಾಹಕಲ್ಪ–ಹೀಗೆ ಕಲ್ಪ ಭೇದದಿಂದ ಸೃಷ್ಟಿಯಲ್ಲೂ ಸ್ವಲ್ಪ ವ್ಯತ್ಯಾಸವಾಗುವುದು. ಈ ಬಗೆಯ ಸೃಷ್ಟಿ ವರ್ಣನೆಯು ಎಲ್ಲಾ ಪುರಾಣದಲ್ಲೂ ಇರುವುದು. ದಾಸರುಗಳೂ ಇದನ್ನು ವಿಸ್ತಾರವಾಗಿ ಹೇಳಿರುವರು. ಈ ಬಗೆಯ ಸೃಷ್ಟಿಯಲ್ಲಿ ರುದ್ರದೇವರಿಂದ ಹಿಡಿದು ಪುಷ್ಕರಾಂತವಾಗಿ ಸಕಲ ದೇವತೆಗಳೂ ಹೇಗೆ ಸೃಷ್ಟರಾದರೆಂಬುದನ್ನು ದಾಸರುಗಳು ತಿಳಿಸಿದ್ದಾರೆ.

ಪರಮಾತ್ಮ ಈಜಗತ್ತಿನೊಳಗಿದ್ದು ಮಾತ್ರ ವ್ಯಾಪ್ತನಾಗಿರುವುದಲ್ಲದೆ, ಈಬ್ರಹ್ಮಾಂಡದ ಹೊರಗೂಇದ್ದು ಇದನ್ನು ಧಾರಣೆಮಾಡಿದ್ದಾನೆ. ಈ ಪ್ರಾರ್ಥಿವ ಜಗತ್ತಿನರಚನೆಯೂ ವಿಚಿತ್ರಾವಾದದ್ದು. ಮೇರುಪರ್ವತ, ಅದಕ್ಕೆ ಹೊಂದಿಕೊಂಡಿರುವ ನವಖಂಡಗಳೂ, ಸಪ್ತದ್ವೀಪಗಳೂ, ಭೂರ್ಭುವಾದಿ ಸಪ್ತ ಊರ್ಧ್ವ ಲೋಕಗಳೂ. ಅತಲವಿತಲಾದಿ ಸ್ಪ್ತ ಅಧೋಲೋಕಗಳೂ, ಇವುಗಳಿಗೆ ಸುತ್ತ ಗೋಡೆಯಂತಿರುವ ಲೋಕಾಲೋಕಾಪರ್ವತ, ಘನೋದಕ, ಪೃಥ್ವಿವ್ಯಾದಿ ಪಂಚತತ್ತ್ವಾವರಣ ಮತ್ತು ಶ್ವೇತದ್ವೀಪ, ಅನಂತಾಸನ, ವೈಕುಂಠವೆಂಬ ಪರಮಾತ್ಮನ ತ್ರಿಧಾಮಗಳು– ಇವುಗಳ ಸುಧೀರ್ಘವರ್ಣನೆಯನ್ನು ದಾಸರು ಮಾಡಿರುವರು.

ಸರ್ವಮೂಲವಾದ ಓಂಕಾರದಲ್ಲಿ ಪರಮಾತ್ಮನ ರೂಪಗಳು, ಅದರಿಂದ ಹೊರಹೊಮ್ಮಿದ ವ್ಯಾಹೃತಿ, ಗಾಯಿತ್ರಿ, ಪುರುಷಸೂಕ್ತ ಚತುರ್ವೇದಗಳು, ಪಂಚಾಶದ್ವರ್ಣಗಳು, ನಾರಾಯಣಾಷ್ಟಾಕ್ಷರಾದಿ ಮಂತ್ರಗಳು–ಇವುಗಳಲ್ಲಿರುವ ಅಜಾದಿ, ಕೃದ್ದೋಲ್ಕಾದಿ ರೂಪ ವಿಶೇಷಗಳನ್ನೂ ದಾಸರು ವರ್ಣಿಸಿರುವರು. ಅಂತೂ ವಿವಿಧ ಸೃಷ್ಟಿಗಳ ವಿಚಾರಗಳನ್ನೊಳಗೊಂಡ ಈ ಪ್ರಕರಣವು ಅತ್ಯಂತ ಗಹನವೂ, ಪ್ರಮೇಯಜಟಿಲವೂ ಆಗಿರುವುದು.

i ಆತ್ಮ ಸೃಷ್ಟಿ

ಧ್ರುವತಾಳ

ಆದಿಮೂರುತಿ ಪುರುಷ ಪೂರ್ಣಗುಣಾಂಬೂಧಿ ಪ್ರಳ | ಯೋದಕಾತೀತ ವಟಪತ್ರಶಾಯಿ | ಮೋದಾಪ್ರಮೋದಕಾಯ ಶ್ರೀ ಭೂದುರ್ಗೆಶ ಅ | ನಾದಿ ಪ್ರಸಿದ್ಧ ಶದ್ಧಾಂತಿಕಾಂತಿಕಾ | ವೇದವೇದಾಂತಗರ್ಭ ಗಂಭೀರ ಮಹಿಮಾ ಮಧು | ಸೂದನ ಪಾಪಸೂದ ಸುಲಭಾಸುಹೃತ್ | ಆದಿತ್ಯಾವರ್ನಕೋಟಿ ಅಪ್ರತರ್ಕ ಅಪ್ರತಿ | ಆದಿ ವರ್ಣಾಪ್ರತಿಪಾದ್ಯ ಪುಣ್ಯಶ್ಲೋಕ | ಪಾದತ್ರಿಪಾದ ಭಿನ್ನಾಭಿನ್ನಾವಂಶರೂಪ ಪ್ರ | ಸಾದ ವಿಗ್ರಹ ದೈತ್ಯಕುಲಭಾಸ್ಕರೀ | ಪಾದವ ನಂಬಿದ ಜನರ ಯಾವಸ್ಸಂಶಯ | ಟೇದಾಯಕಾ ಟೆತ್ರಾಧೀಶ ಪ್ರಭುವೇ | ಆದಾನಾದಿಕರ್ತ ಆಶೇಷಸಾಕ್ಷಿ ವಿ | ನೋದ ನಾನಾವತಾರ ವಿಷ್ಣುತುರ್ಯ | ಯಾದವ ಶಿತೋರನ್ನ ಅಮೃತಾರ್ಣಾವಾಸ ಪ್ರಹ। ಲ್ಲಾದ ರಕ್ಷಕ ಗೋವತ್ರಾಣ ಪ್ರಾಣಾ ಪಾದೋದರ | ಪರಿಯಂಕ ವಿಜಯ ವಿಠಲ ದಾ | ಮೋದರ ಸರ್ವವ್ಯಾಪ್ತನೆಂದು ಉಪಾಸನೆಮಾಡು. ||

ಮಠ್ಯಾತಾಳ

ಶೂನ್ಯ ನಾಮಕನಾಗಿ ಮಲಗುವ ಮಹದ್ದೈವ | ಕನ್ಯಾ ಶಿರೋಮಣಿ ಲಕುಮಿಗೆ ಕೃಪೆಯಿಂದ | ಉನ್ನತವಾಗಿದ್ದ ಸೌಭಾಗ್ಯವ ಕೊಟ್ಟು | ತನ್ನಿಚ್ಛೆಯಿಂದ ಕ್ರೀಡಿ ಯಾಡುವೆನೆಂದು | ಅನಂತ ಜೀವರಾಶಿಗಳನೋಡಿ | ಪುಣ್ಯಾಪಾಪವುಳ್ಳ ಜೀವ ಕರ್ಮಗಳಿಂದ | ಭಿನ್ನಲಿಂಗಗಳನ ಮಾಡುವೆನೆಂದು ಪ್ರ | ಸನ್ನನಾದನು ಕಾಣೋ ಪ್ರಕೃತಿಯ ಮಾತಿಗೆ | ಪನ್ನಗಶಾಯಿ ವಿಜಯ ವಿಠಲರೇಯ | ಬಿನ್ನಾಣದಿಂದ ಮೆರೆವ ಮನ್ಮಥನಯ್ಯ ||

ತ್ರಿವಿಡಿ ತಾಳ

ಆತ್ಮಸರ್ಗವ ಮಾಡಿಮುಕ್ತರ ಸಂಗಡ | ಅತ್ಯಂತ ಕ್ರೀಡೆಯನಾಡಿದ ಇರಳೂ। ಮತ್ತೆ ಆ ತರುವಾಯ ಏಕೀಭೂತನಾಗಿ | ಉತ್ತಮ ಶ್ಲೋಕನು ನಗುತ ಬೇಗ | ಹೊತ್ತು ಉಳಿದಿರಲಾಗಿ ಪ್ರಥಮ ವಾಸುದೇವ | ವ್ಯಕ್ತಿಯಾದನು ಕಾಣೋ ಶೂನ್ಯನಿಂದ ಇತ್ತಲಾಲಿಸುವುದು ಈತನೆ ಸರ್ವರ | ಪೆತ್ತ ಪುರುಷದೇಹ ಧಾರಿಗಳ | ಪ್ರತ್ಯೇಕ ರೂಪಗಳ ಧರಿಸಿ ಅನಿರುದ್ಧಾದಿ | ಮೂರ್ತಿಯಿಂದ ಲಿಂಗೋಪಾದಾನವೋ | ಸತ್ಯವೇ ಸರಿಯಿದು ಮರುಳೆ ಸರ್ವರನ್ನು ಮಾ | ರುತ್ತನಿಂದಲಿ ಕೇಳಿ ಪದವಿಯಿತ್ತ| ಚಿತ್ತದಲಿ ತಿಳಿ ಪುರುಷ ಸೂಕ್ತಗಳಿಂದ | ಸೋತ್ರ ಮಾಡಿಸಿಕೊಂಡ ಹಯಗ್ರೀವನೋ ನಿತ್ಯ ಚತುರ ಮೂರ್ತಿ ಒಂದಾಗಿ ಸರ್ವರನ್ನ | ತುತ್ತು ಮಾಡಿದ ಕಾಣೋ ಅರಣೋ ದಯ | ಚಿತ್ಪ್ರಕೃತಿಯ ತನ್ನ ದೇಹದಿಂದ |ಪುಟ್ಟಿಸಿದ ವಿಜಯ ನಾಮಕವಾರಿಯಾ |ಸತ್ವ ಜೀವಿಗಳಿಗೆ ಸ್ನಾನಮಾಡಿಸಿ ಲಿಂಗ | ಕಿತ್ತಿಪೋಗುವಂತೆ ನಿರ್ಣೈಸಿದ | ಸತ್ಯಸಂಕಲ್ಪನು

ನಿಶ್ಚೇಷ್ಟವಾಗಿದ್ದ | ಚಿತ್ತುಗಳಿಗೆ ಜ್ಞಾನಿಚ್ಛೆಪ್ರಯತ್ನ | ಇತ್ತಾನು ಸ್ವಸ್ವ ಯೋಗ್ಯತಾದನಿತು ಅಂತಾ | ರಾತಮ ವಾಸುದೇವನು ಪ್ರಥಮದಲ್ಲಿ | ತತ್ತ್ವಕಿ ನೇಮಿಸಿದ ಒಬ್ಬೊಬ್ಬ ಸುರರಿಗೆ | ಕರ್ತ ನಮ್ಮಾ ವಿಜಯವಿಠಲರೇಯಾ | ಕೀರ್ತಿಪುರುಷ ಇಂತು ನಲಿದಾ ನಂದದಿಂದ ||

ಅಟ್ಟತಾಳ

ಈತನಿಂದಲಿ ದೇವಾ ನಾರಾಯಣ ದೇವಾ | ಜಾತನಾದನು ಕಣೋ ಕ್ಷೋಭಕ ಸರ್ವಾ | ತೀತ ಸಮಸ್ತ ವರ್ತಮಾನರಿಗೆ ಕ್ಷು | ತಾತುರ ಪಿಪಾಸಾ ಪುಟ್ಟಿಸಿದನು ಅಂದು | ಚೇತನರಾಶಿಯ ಉದ್ಭವ ಮಾಡಿ ಈ | ಗಾತುರ ಮೊದಲಾದ ಜೀವರಾಶಿಯ ದೇಹ | ತಾ ತೋರಿಸಿಕೊಟ್ಟು ಸರ್ವರನು ನರಾ | ಗಾತುರದೊಳು ಪ್ರವಿಷ್ಟಮಾಡಿಸಿ ತನ್ನ ' ಗಾತುರದೊಳಗಿಟ್ಟು ಅಲ್ಲಿಂದ ಚತುರ ಮೂ | ರುತಿಯಾದನು ವಾಸುದೇವ ಸಂಕರುಷಣ | ಖ್ಯಾತಪ್ರದ್ಯುಮ್ನ ಅನಿರುದ್ಧ ನಾಮದಿ | ಶ್ವೇತ ರಕ್ತ ಪೀತ ಕೃಷ್ಣ ವರ್ಣದಿಂದ | ಭೂತಿ ಉಳ್ಳವನಯ್ಯ ಸಕಲ ರೂಪ ಸಮ | ಮಾತೃಕಾಲಾನಗೆ ಭೇದವೆಂಬೋದಿಲ್ಲ | ಈತೆರದಲಿ ಕೇಳದ್ವಿತೀಯ ವಾಸುದೇವ | ಪ್ರಾತಃಕಾಲದಲ್ಲಿ ಪುರುಷನಾಮಕ ಅಜಾ | ಜಾತನ್ನ ಪಡೆದನು ಮಹಾ ಲಿಂಗೋಪಾದಾನಾ | ಸೂತ್ರ ನಾಮಕ ಪ್ರಾಣನ್ನ ಸಂಕರುಷಣ | ಪೋತಪ್ರೋತ ಮಾರುತಗೀಶಗೆಂಬರು | ಮಾತು ಪುಶಿಯಲ್ಲ ಪ್ರದ್ಯುಮ್ನ ದೇವರಿಗೆ | ಜಾತರಾದರು ಕನ್ಯೆಯರು ಈರ್ವರು ನಿಜಾ | ವಾತ ಧಾತಗೆ ರಾಣಿಯರೆನಿಸಿ ಬಲು | ಆತುರದಿಂದಲಿ ಸಂತಾನ ಪಡೆದರು | ನೀತಿಯನ್ನು ನೋಡು ಪರಂಪರೆಸರ್ಗವ | ಚಾತುರ್ಯ ಪ್ರದ್ಯುಮ್ನ ಅರ್ಧನಾರಿರೂಪ | ತಾ ತಾಳಿ ಸರ್ವಜೀವರನುಂಗಿ ತನ್ನಯ | ಗಾತುರ ಎಡಬಲಗಳಿಂದ ಪುಂಪೆಂಗಳ | ಜಾತನರ್ವಾ ಶ್ರಮ ಪುಟ್ಟಿಸಿದನು ಗಡ | ಭೂತಳಾಧಿಪ ನಮ್ಮ ವಿಜಯವಿಠ್ಠಲರೇಯಾ| ದಾತಾನು ಕಾಣೋ ಸರ್ವಜೀವರಿಗೆ |

ಆದಿತಾಳ .

ಅನಿರುದ್ಧದೇವನು ಸರ್ವರಿಗೆ ಲಿಂಗದಿಂದ | ತನುವು ಪಾಲಿಸಿದನು ಅವರವರತಕ್ಕದ್ದು | ಮನಸುಮೊದಲಾಗಿ ಪ್ರಥವಿಪರಿಯಂತ | ತನವು ಪಾಲಿಸಿಧನು ಯಿಲ್ಲಿಗೆ ಲಿಂಗಾಸರ್ಗ | ಘನವಾಗಿ ತಿಳಿವಿದು ಹರಿ ಏಕ ಭೂತನಾಗಿ | ಪುನರಾವರ್ತಿ ವ್ಯಕ್ತನಾದ ಚತುರ ರೂಪ | ಗುಣ ಉಪಾದಾನದಿಂದ ಸರ್ವ ಜೀವರಿಗೆ ಸಾ | ಧನ ಕರ್ಮ ಪಾಪ ಪುಣ್ಯ ಭೋಗದೇಹವನ್ನಿತ್ತು | ಜನನ ಮರಣ ರೋಗಕೆ ಕಾರಣವೆನಿಸಿಧ ಜೀ | ವನ ರಾಶಿಗಣದವರನ್ನ ಸುತ್ತಿಸುವ ಪೊಳಗಿದ್ದು | ಅಣೋರಣಿ ಮಹಾಪುರುಷ ಜಡತತ್ತ್ವದಿಂದಲಿ ಯೋ | ಚನೆ ಇಲ್ಲದೇವೆ ಪಂಚಕೋಶವರ್ಣ ಮಾಡ್ಡು | ಮಿನುಗುವ ಐದು ರೂಪಾ ಕೇಳಿ ದೈವ ನಾರಾ | ಯಣ ದ್ವಿತೀಯ ವಾಸುದೇವ ಸಂಕರುಷಣ

ಪ್ರದ್ಯುಮ್ನ |ಅನಿರುದ್ಧಾದಿಗಳಿವೆ ಅನಂದಮಯಾದಿಗಳೋ | ನೆನೆಸಿ ಅವ್ಯಕ್ತ ತತ್ತ್ವಾದಿ ಚತುರ್ವಿಂಶತಿ | ವನಜಜಾಂಡಕೆ ಇದೆ ಆವರ್ಕ ರೂಪವೆನ್ನಿ | ಆನಿಮಿಷ ಗುಣವುಂಟು ತತ್‌ಸ್ಥಾನ ತರತಮ್ಯ | ಗುಣವಂತ ಈ ಪರಿತಿಳಿದ್ಯೆದು ರೂಪಗಳ | ಮನದಲ್ಲಿ ನಿಲಿಸ ಕೊಂಡಾಡಲು ಅಪರೋಕ್ಷ | ತೃಣಭಿಗಿಲಾಗುಗುವುದು ಆದ್ಯಂತ ಕಾಲಜ್ಞಾನ |ಮುನಿ ವ್ರಜವಂದ್ಯಮನ್ನ ವಿಜಯವಿಠಲರೇಯಾ |ದಿನ ರಾತ್ರಿಯಲ್ಲಿ ಒಡನೆ ತಿರುಗುವಾ ಬಂದು|

ಜತೆ

ಇರುಳು ಹಗಲು ಇದನೆ ಯೋಚಿಸು ಮನದಲ್ಲಿ |ಕರುಣಾಕರಮೂರ್ತಿ ವಿಜಯ ವಿಠಲ ವೊಲಿವ

ವಾದಿರಾಜರು ಸೃಷ್ಟಿಯನ್ನು ಸಂಕ್ಷೇಪವಾಗಿ ವರ್ಣಿಸುತ್ತಾರೆ

ಧ್ರುವತಾಳ

ಚಿನುಮಯ ಮೂರುತಿ ಪ್ರಳಯ ಜಲಧಿಯೊಳು | ವನಿತೆ ಶ್ರೀ ಭೂಮಿ ದುರ್ಗೆಯ ರೊಡನೆ | ತನು ವುದರದಲ್ಲಿ ಲಿಂಗವಿಶಿಷ್ಟರಾದ | ಇನಿತು ಜೀವರ ಹಿಡಿದು ತುಂಬಾ ಕೊಂಡು | ತನಯನ ನೂರು ವರುಷ ಪರಿಯಂತದಿ | ವನಜಾಕ್ಷ ವಟಪತ್ರಶಯನ ನಾಗಿ | ಜನವೆಲ್ಲ ತಮ್ಮ ತಮ್ಮ ಗತಿಗೆ ತಕ್ಕ ಸಾ | ಧನವ ಸಾಧಿಸಿಕೊಳ್ಳಲೆಂದು ಕರುಣಿ ಪುನರಪಿ ಸೃಷ್ಟಿಯ ಮಾಡುವೆನೆಂದು ಲಾ | ಲನಿಗೆ ಪ್ರಕೃತಿಯ ಮಮತೆ ಇತ್ತು | ಗುಣತ್ರಯಾತ್ಮಕ ಸೂಕ್ಷ್ಮತತ್ತ್ವ ರಾಶಿಯ ಜೀವ | ರನು ಸೃಜಿಸಿದ ಹಯವದನಪ್ರಭು|

ಮಠ್ಯತಾಳ

ಮಹತತ್ತ್ವವ ಸೃಜಸಿ ಮರುತ ಬ್ರಹ್ಮರಿಟ್ಟ | ಅಹಂಕಾರಾದಿ ಗರುಡ ಶೇಷ ರುದ್ರರಿಟ್ಟ | ಅಹಂಕೃತಿ ತೃತಿಯ ಭಾಗವನೆ ಮಾಡಿ | ಶ್ರೀ ಹಯನದನ ಭೂತೇಂದ್ರಿಯಗಳ ಮಾಡಿದ |

ರೂಪಕತಾಳ

ತಾಮಸದಿಂದ ಪಂಚಭೂತಂಗಳ ಸೃಜಿಸಿ | ಯೋಮಾಂತರದಿ ಪಂಚ ದೇವರ ಕೂಡಿಸಿ | ಆ ಮುನ್ನೆ ತೈಜಸದಿ ಸಾಧಿಸಿದ ದಶೇಂದ್ರಿಯ | ಸೋಮ ಸೂರ್ಯಾದಿ ದೇವತೆಗಳನೆ ನೆಲಿಸಿ

ತ್ರಿವಿಡಿತಾಳ

ಇಂತೀತತ್ತ್ವವೆ ಸೃಷ್ಟಿಗೆ ಮೊದಲು | ಕಾಂತೆಯರಪ್ಪಿಕೊಂಡಿಪ್ಪ ಶ್ರೀ ಕೃಷ್ಣ ತಾನೆ | ಅಂತವಿಲ್ಲ ಸ್ವರೂಪವಿಲ್ಲರೂಪನಲ್ಲಾ | ನಂತ ಮೂರುತಿ ಸಿರಿಹಯವದನ |

ಶ್ಲೋಕ (ಝಂಪೆತಾಳ)

ತಥಾಸುರಾಣಾಂ ವಿಶದಾಸುರಾಣಾಂ | ರೂಪೇಣ ತೇಷಾಂ ಬಲವೀರ್ಯ ಚೋದಿ

ಶಾಮ್ | ವಂದೇ ಪರಂದೇವಗುಣೈಕ ವಿಷ್ಣೋ |ದೇವೇನ ನಾಗೇಂದ್ರಮತಃ ಪರೇಣ|

ಪದ

ತಥಬ್ರಹ್ಮ ರುದ್ರಾದಿ ಜೀವರ ಸೃಜಿಸಿ | ತತ್ತ್ವಸ್ವರೂಪವ ಪೊಕ್ಕು ನಡೆಸಿದನು ಹಯವದನ |

ಅಟ್ಟತಾಳ

ಆದರಿಂದ ತತ್ತ್ವ ದೇವತೆಗಳೆಲ್ಲರು ಕೂಡಿ | ಮುದದಿ ಬ್ರಹ್ಮಾಂಡ ಮಾಡಲರಿಯದೇ ಪೋಗಿ | ಪದುಮನಾಭನ ತುತಿಸಲು ಅವರೊಳು ಪೊಕ್ಕು | ಅದುಭುತ ಬ್ರಹ್ಮಾಂಡವನು ರಚಿಸಿದನು | ಅದರೊಳು ಬಂದು ಬಹುಕಾಲ ಪರ್ಯಂತರ | ಉದಕಶಾಯಿಯಾದ ಮುದದಿ ಹಯವದನ |

ಆದಿತಾಳ

ಶಿಷ್ಟರನು ಶುಭಪಥಕೆ ನಡೆಸಿ ಉ | ತ್ಕೃಷ್ಟಸುಗತಿಯನು ಕಡಿಯಲ್ಲೀವನು | ದುಷ್ಟರನ್ನು ದುರ್ಗತಿಯೈದಿಸುವನು | ಹೃಷ್ಟಮೂರುತಿ ಶ್ರೀ ಹಯವದನ ಈ | ಸೃಷ್ಟಿಯೊಳು ಮಧ್ಯಮರನು ಮಾಡಿದ ಯೆ | ಳ್ಳಷ್ಟು ವೈಷಮ್ಯವಿಲ್ಲ ಕಾಣಿರೋ |

ಜತೆ

ಇಂತೀತತ್ತ್ವ ಸೃಷ್ಟಿಯ ನೆನೆವ ಮಹಾತ್ಮರ
ಸಂತತ ಪೊರೆವ ಶ್ರೀ ಕಾಂತಹಯವದನ

ಈ ಸುಳಾದಿಯಲ್ಲಿ ವಾದಿರಾಜರು ಜಡಸೃಷ್ಟಿಯನ್ನು ಪ್ರಸ್ತಾಪಿಸಿರುವರು. ಬ್ರಹ್ಮದೇವರು ಮಹತ್ತತ್ತ್ವಾಭಿಮಾನಿಗಳು. ಮಹತ್ತತ್ತ್ವದಿಂದ ಅಹಂಕಾರತತ್ತ್ವವೂ, ಆದರಿಂದ ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ ಪಂಚತನ್ಮಾತ್ರ ಮತ್ತು ಪಂಚಭೂತಗಳು ಸೃಷ್ಟವಾದವು. ಪುರಂದರದಾಸರು ಈ ವಿಷಯವನ್ನು ವಿವರಿಸುತ್ತಾರೆ.

ii ಜಡಸೃಷ್ಟಿ

ಧ್ರುವತಾಳ

ಪ್ರಳಯೋದಕದಲ್ಲಿ ವಟಪತ್ರಶಯನನಾಗಿದ್ದ ಕಾಲದಲ್ಲಿ | ಶ್ರೀದೇವಿಯರು ಶ್ರೀ ಭೂರೂಪದಿನಿಂದು | ದಕ್ಷಿಣಾಯಜ್ಞನಾಮದಿಂದ ವೇದಗಳಿಂದ | ಕೊಂಡಾಡುವ ಮುಖ್ಯಾಭಿಮಾನಿಯಾಗಿ | ವರ್ಣಾತ್ಮಕದಿಂದ ನಿತ್ಯ ನಿಗಮಾರ್ಥಗಳಿಂದ | ಸ್ತುತಿಸುವಳು ಅ ಆ ಆ ತ್ರಿಪ್ರಕಾರ | ಮಿತಿಯೆಂದು | ಬೊಮ್ಮನನೂರರೊಳೆಂಟು ಭಾಗದೊಳೊಂದು | ಭಾಗವೀ · ಲಕುಮಿದೇವಿಗೆ ತಾ ಪ್ರೇರಿಸಲಾಗಿ | ತುತಿಸು ನಂದದಿ | ಪ್ರೇರಕನಾಗಿ ಪ್ರಾರ್ಥನೆ ಕೈಕೊಂಡು | ತಮ್ಮ ತಮ್ಮ ಸಾಧನೆಗಳನ್ನು

ಮಾಡಿಕೊಂಬಲ್ಲಿ ನಿರೂಪಿಸಿದನು ಪುರಂದರ ವಿಠ್ಠಲ |

ಮಠ್ಯತಾಳ

ನೂರು ವರುಷವು ಇಂದಾಯಿತೆನಲು | ಉದಯ | ಕಾಲದಿ ಚತುರ್ದಶಭುವನಾತ್ಮಕವಾದ ಕಮಲ | ದಲ್ಲಿ | ಚತುರ್ಮುಖ ಬೊಮ್ಮನ ಪಡೆದೆ ನೀನು | ಒಮ್ಮೆ ಬಂದು ನೀನು ಪ್ರಳಯೋದಕವನು | ಧರೆಗಳ ನೋಡಿ ಏನು ಕಾಣದೆ ಪೊಕ್ಕು ನಾಳದಲ್ಲಿ | ಮತ್ತೊಮ್ಮೆ ಬರಲು ನಿನ್ನ ಘೋರವಾದ | ನಿನ್ನ ರೂಪವು ಕಂಡು ಅಂಜಿ ಮತ್ತೆ | ನಿನ್ನ ಮನವೇನೆಂದು ಬಂದದ ಕಂಡು ಉದರ ಪ್ರವೇಶವಾದ ಒಂದು ಭಯವು ಎರಡು ಅಜ್ಞಾನವು | ನಿನ್ನ ವಿಷಯದಲಿ ಉಂಟಾದದಾಗಲಿ ಕಂತುಜನಕ ನೀನೇ ತಪ ತಪವೆನಲಾಗ | ತಪವನು ಮಾಡಿದ ಪುರಂದರ ವಿಠಲನ್ನ | ಒಲಿಸಿ ಸೃಷ್ಟಿಯ ಮಾಡಿದ ಸರಸಿಜ ಸಂಭವನು |

ರೂಪಕತಾಳ

ಸೂಕ್ಷ್ಮರೂಪವಾದ ಇಪ್ಪತ್ತು ನಾಲ್ಕು ತತ್ತ್ವಗಳ ಹೊರಗೆ | ಪಂಚಭೂತಗಳಿಗಭಿಮಾನಿಯಾದ ಗಣೇಶ | ಮೊದಲಾದ ಪಂಚಭೂತಗಳ ಸೃಷ್ಟಿಸಿದನಾಗ | ಒಂದೊಂದು ವರ್ಣದ ಅಭಿಮಾನಿಗಳಿಂದ ಮಹತತ್ತ್ವ ಕೇಶ | ಅಹಂಕಾರಧೀಶನೆಂದು | ಬೊಮ್ಮಾಂಡವನಿರ್ಮಾಣ | ಮಾಡಿ | ಪೂರ್ವದಂತೆ ಅ ದೇವತೆಗಳ ಸೃಜಿಸಿ ಬೊಮ್ಮಾಂಡವಾಧಾರವಾಗಿ ತನ್ನ ದೇಹವ ಬೆಳಿಸಿದ। ಚತುರ್ಮುಖನಾಗ । ಮೂಲ ರೂಪದ ಪುರಂದರವಿಠ್ಠಲ್ಲ। ವಿರಾಟದಲ್ಲಿ ವಾಸವಾಗಿ ನಿಂದ ಜಗದಾಧಾರ |

ಝಂಪೆತಾಳ

ಹಳೆಯ ಬೊಮ್ಮೊಗ ಅಂದು ಅವ್ಯಾಕೃತದಲ್ಲಿ ವಿರಜೆಯಲಿ ಮುಳಗಿಸಿ ಉದರದಲ್ಲಿ ಪ್ರವೇಶ ಬೊಮ್ಮಾದಿ | ಗಳು ಇರಲು ಕೆಲವು ಲೋಕಂಗಳು ಸೃಷ್ಟಿ ಯಾದ | ಬಳಿಕಶ್ವೇತ ದ್ವೀಪದಲಿ ಇದ್ದ ಮೂರುತಿಯ | ದರುಶನದಿ ಮುಕುತರೆನಿಸಿಕೊಂಡು | ಐದಿದರು ಪುರಂದರವಿಠಲನ್ನ ಚರಣಕಮಲವ |

ತ್ರಿವಿಡಿತಾಳ

ಗಣನೆ ಇಲ್ಲದ ಅಪಾರರೂಪಂಗಳಲ್ಲಿ | ಒಂದು ರೂಪದಿ ಚತುರ್ಮುಖನಿಗೆ | ಸರ್ವಾಂಗ ಸಾಯಾಜ್ಯ ವಿತ್ತ | ಪುರಂದರ ವಿಠಲ ಭಕುತ ರೊಡಿಯ ನೀನು | ಭಕುತರಧಿಪ ನೀನು ಸಾಯುಜ್ಯವಿತ್ತೆ |

iii. ದೇವತೆಗಳ ಸೃಷ್ಟಿ

ವಿಜಯದಾಸರು ಕೆಳಗಿನ ಸುಳಾದಿಯಲ್ಲಿ ಬ್ರಹ್ಮ, ವಾಯು, ಗರುಡ ಶೇಷಾದಿ ದೇವತೆಗಳ ಮತ್ತು ಜೀವರ ಸೃಷ್ಟಿಯಾದ ಕ್ರಮವನ್ನು ವಿವರಿಸುತ್ತಾರೆ.

ತ್ರಿವಿಡಿತಾಳ

ಪುರುಷ ನಾಮಕ ಬ್ರಹ್ಮ ಪ್ರಕೃತಿನಾಮಕಳಾದ | ಸರಸ್ವತಿಯಲಿ ಜೀವನಾಮಕ ಸರ್ಪ | ಮರುತ ಸೂತ್ರ ಶ್ರದ್ಧೆಳೆಂಬೊ ಭಾರತಿಯಲ್ಲಿ | ಗರುಡನು ಜನಿಸಿದ ಜೀವಕಾಲ ನಾಮಕನೆಂದು | ಮರುಳೆ ಪ್ರಮೇಯ ತಿಳಿ ಪುರುಷ ನಾಮಕ ವಿರಂಚಿ | ಸರಸ್ವತಿಗೆ ದೇವಿಗೆ ಪುಟ್ಟಿದ ಬಲಾಖ್ಯ ದಲಿ । ಮರುತ ದೇವನು ತನ್ನ ಅರ್ಧಾಂಗಿನಿಸಹಿತ ಚರಿಯಾದಲ್ಲಿ ಮೆರೆದ ಬಲನೆಂಬೋ ಮಾರುತಗೆ | ತಿರುಗಿ ಪುಟ್ಟಿದಜೀವ ಅಜನಿಂದ ಪುಟ್ಟಿದವ | ಅರಿತು ಪೂಜೆಯ ಮಾಡಿ ಈತನೆ ಫಣಿ ರಾಜ | ವರವಾಸುದೇವನಲಿ ಪುಟ್ಟಿದ ಬ್ರಹ್ಮ ಹರಿರೂಪ ಪ್ರದ್ಯುಮ್ನ ಕೃತಿಗೆ ಕುವರನಾದ | ಪರಮ ರಹಸ್ಯವೋ ಇದೆ ಬ್ರಹ್ಮ ನಿಜತಳೋ | ದುರಿಯಾದ ಸಾವಿತ್ರಿಯು ಸರಸ್ವತಿಯೆಂದೆಂಬೋ | ಎರಡೊಂದು ರೂಪವ ಧರಿಸಿರೆ ಅಮೋಘ ವೀರ್ಯವಿಟ್ಟು | ಎರಡೊಂದು ರೂಪ ವೊಂದೆಯಾಗಿ ನಿಂದು ಹೆರದಾಳೆ ಬೊಮ್ಮ ವಾಯುಗಳೀರ್ವರ | ಚರಿಯ ತೋರಿದ ತನ್ನ ಹೆಂಡತಿಯಲಿ ತಾನೆ | ತರುಳನಾಗಿ ಪುಟ್ಟಿ ಮೆರೆದ ಮಹಿಮ | ಕುರುಹು ತಿಳಿಯಬೇಕು ತನಗೆ ತಾನೆ ಜನಿಸಿದ | ಸುರಜೇಷ್ಠ ತನ್ನ ಹೆಂಡತಿ ಗಾಯತ್ರಿ |ನೆರೆದು ಪ್ರಾಣನಿಂದ ಹುಟ್ಟಿದ ಜೀವನಾಮಕ | ಉರಗೇಂದ್ರ ಮತ್ತೆ ವೈಕಾರಿಕ ರುದ್ರ | ಸರಿಯಾಗಿ ಜನಿಸಿದರು ತಮ್ಮ ಹೆಂಡಿರ ಸಹಿತ | ಸ್ಥಿರವೆನ್ನು ಬ್ರಹ್ಮನಿಗೆ ಪುಟ್ಟಿದ ಬಲನಿಂದ | ಗರುಡನೆಂಬೊ ಕಾಲ ತೈಜಸ ರುದ್ರನು | ತರುಣೇರ ಒಡಗೂಡಿ ಉದ್ಭವರಾದರು | ಸರಸಿಜೋದ್ಭವನಿಂದ ಪುಟ್ಟಿದ ಜೀವ ನಾಮಕ । ಉರಗನಿಂದಲಿ ತಾಮಸ ರುದ್ರ ಪಾರ್ವತಿ | ಭರದಿಂದ ಜನಿಸಿದರು ಅಂಶಅಂಶಿಗಳಿಂದ | ಇರುತಿಪ್ಪರು ಅವರವರ ತಿಳಿವೋದು ಹರಗೆ ಕಮಲಾಸನ ಪ್ರಾಣ ಪನ್ನಗನಿಂದ | ಎರಡೊಂದು ರೂಪಗಳಾದ ಪದಕೊ ಕರೆಸಿಕೊಂಡೆವು ವೈಕಾರಿಕ ತೈಜಸ ತಾಮಸವೆಂದು | ನಿರುತ ಕ್ರತುಭೋಕ್ತ ವಿಜಯ ವಿಠಲರೇಯ ತಾನೆ | ಉತ್ಪತ್ತಿರಹಿತನಾಗಿ ಸರ್ಗವನು ಮಾಡಿದ ಕೇಳಿ |

ಅಟ್ಟತಾಳ

ಶಿವನು ತ್ರಿರೂಪ ಧರಿಸಿದ ವಿಷ್ಣು ಕಂಜೋ | ದ್ಭವ ಬ್ರಹ್ಮೇಶಾನನೆಂದು ಗುಣ ಪ್ರಾಚುರ್ಯದ ರುದ್ರ | ಕುವರರ ಪಡೆದನು ಬುದ್ಧಿಗಭಿಮಾನಿ | ಯುವತಿಯ ಸಂಗಡ ರಮಿಸಿ ಪ್ರೇಮದಿಂದ | ದಿವಿಜೇಶಮನುಮಥ ಅಹಂಕಾರಿಕ ಪ್ರಾಣ | ದಿವಿಜ ಕುಲಚಾರ್ಯ ಶಚಿ ಶುಕ್ರ ಅನಿರುದ್ಧ | ಪವಮಾನ ಸಖ ನಿರುಋುತಿ ಗಣಪತಿ ವೈ | ಶ್ರವಣ ರುದ್ರರು ಸ್ವಹ ಸ್ವಧಾ ಬುಧ ಅನಿರುದ್ಧ ಕರ್ಮಪ | ಅವನಿ ಪಿತೃರು ಗಂಧರ್ವ ಸಮಸ್ತ | ಪ್ರವರ ಜೀವರ ಮುಕ್ತಿಯೋಗ್ಯರ ಪಡೆದ ವಿಷ್ಣು ನೆಂ | ಬವ ರುದ್ರ ಪ್ರತ್ಯೇಕವಾಗಿ ಜನಿಸಿದರು | ಪವನಸೂತ್ರನಾಮ ಭಾರತಿಯಲಿ ಸಂಭವಿಸಿದರು ಗರುಡ

ಇಂದ್ರಾದ್ಯರು | ಪವಿತ್ರವಾದಂಥ ಯಾಗಾಭಿಮಾನಿ ಲೋಕ |ಧವಳಾಸ್ಯ ಸೌಪರಣಿ ದೇವಿಗೆ ಹರಿಯದ್ವಾರ | ದವರು ಜಯಾದ್ಯರೂ | ವಿಶ್ವಕ್ಸೇನ ಮಿಕ್ಕಾ ದವರು ಮಕ್ಕಳಾಗಿ ಸಮಸ್ತರು ವೊಪ್ಪೆ ||

ಇಲ್ಲಿಂದ ಮುಂದೆ ಬ್ರಹ್ಮದೇವರಿಂದ ಕ್ರಮವಾಗಿ ಇತರ ದೇವತೆಗಳು ಎಷ್ಟು ಕಾಲದಲ್ಲಿ ಹುಟ್ಟಿದರೆಂಬುದನ್ನು ತಿಳಿಸುತ್ತಾರೆ.

ಸವೆದು ಪೋದವು ಹತ್ತು ಅಜನ ಶಬ್ದಯಿಲ್ಲಿಗೆ | ವಿವರ ತಿಳಿವದು ಚತುರಾನನ ಉ | ದ್ಭವಿಸಿದ ಎರಡು ಸಂವತ್ಸರ ಪೋಗಲು | ಪವಮಾನ ಪುಟ್ಟಿದನೀತ ಪುಟ್ಟಿದ ಮ್ಯಾ | ಲಿವರು ಸರಸ್ವತಿ ಭಾರತೀದೇವೇರು | ದ್ಭವವಾದರು ಕೇಳಿ ಯರಡೊಂದು ವರುಷಕ್ಕೆ | ಇವರ ತರುವಾಯ ಜೀವ ಕಾಲಾಖ್ಯರು |ಲವಲವಿಕೆಯಿಂದ ಎರಡು ವತ್ಸರಕೆ ದೇ | ಹವ ಧರಿಸಿದರೆಂದು ತದನಂತರದಲ್ಲಿ ತ್ರಿ | ಭುವನ ಶ್ರೇಷ್ಠನು ಪ್ರದ್ಯುಮ್ನ ಕೃತಿಗೆ ಮತ್ತೆ |ಕುವರನಾದನು ಒಂದು ವತ್ಸರಕೆ ವೇಗ ಅವಸರವಾಗಿದೆ ಇಲ್ಲಿಂದಿತ್ತಲು ಕೇಳು | ತ್ರಿವಿಧ ಅಹಂಕಾರ ಉತ್ಪತ್ತಿ ಜೀವಾದ್ಯರು ಶಿವನು | ವೈಕಾರಿಕ ರೂಪ ಧರಿಸಿ ಕ್ರೀಡೆಯಿಂದ | ದಿವಿಜೇಶ ಪಿಡಿದು ಗಂಧವ ಪರಿಯಂತ | ಪವಮಾನ ನಿಂದ ಪುಟ್ಟಿದ ಇಂದ್ರಾದ್ಯರು ಕವಿಯಿಂದ | ನೋಡಲು ಜೀವ ಕಾಲಾಖ್ಯರು |ದ್ಭವಿಸಿದ ಎರಡು ವತ್ಸರಕೆ ಇವರು ಕಾಣೋ | ವಿವರಿಸೆ ಹತ್ತು ವರುಷ ಲೆಕ್ಕದಿಂದಲಿ | ನವ ನವ ಮೋಹನ ವಿಜಯ ವಿಠ್ಠಲನ್ನ | ಸ್ತವನ ಮಾಡುವರು ತಮ್ಮ ಸಾಧನದಿಂದ

iv ಲೋಕಸೃಷ್ಟಿ

ವಿಜಯ ದಾಸರು ಭೂಗೋಲ ವಿಚಾರವನ್ನು ವಿಸ್ತಾರವಾಗಿ ನರ್ಣಿಸುತ್ತಾರೆ.

ಧ್ರುವತಾಳ

ಮೇರು ಪರ್ವತ ಲಕ್ಷಣ ಯೋಜನೋಚ್ಛ್ರಿತ ಹದಿ | ನಾರು ಸಾವಿರ ಯೋಜನ ಭೂಮಗ್ನಾ | ಚಾರುವಾಗಿಪ್ಪದು ಕನಕ ಮಯದಿಂದ | ಸಾರಿರೈ ಉಳಿದ ಲೆಕ್ಕ ಊರ್ಧ್ವಭಾಗವಿ | ಸ್ತಾರವಾಗಿದೆ ನಾಲ್ಕು ಎಂಭತ್ತು ಸಹಸ್ರ ವಿ | ಚಾರ ಯೋಜನವಲ್ಲಿ ಸುರ ಮಂದಿರ | ಈರೆರಡು ನಾಲ್ಕು ಶೃಂಗದಿಂದೊಪ್ಪುವುದು....

ಹೀಗೆ ಅಷ್ಟದಿಕಾಲ್ಪಕರ ವಾಸಸ್ಥಳಗಳನ್ನು ತಿಳಿಸಿ ಮುಂದೆ ಹೀಗೆ ವರ್ಣನೆ ಮಾಡುತ್ತಾರೆ.

ಆರಾರು ಕಡಿಮೆ ಸಹಸ್ರ ಯೋಜನ ವಿ |ಸ್ತಾರ ಚತುರಶ್ರವಾದ ಮಧ್ಯ ಖಂಡ | ಧಾರಳಾ ಇಳಾವೃತ್ತ ವೆಂಬ ಪೆಸರು ಉ | ದ್ಧಾರವಾಗಿದೆ ಪಿಂತೆ ನುಡಿದದೆಲ್ಲ........

ಮಟ್ಟತಾಳ

ಪೊಳೆವ ಇಳಾವೃತ್ತ ಖಂಡದ ಸುತ್ತಲು | ಉಳಿದ ಅಷ್ಟವರ್ಷ ಉಂಟಾಗಿವೆ ನೋಡು | ತಿಳಿವೋದು ಭದ್ರಾಶ್ವ ಕೇತು ಮಾಲ ಉಭಯ | ನೆಲೆ ಮೂವತ್ತೊಂದು

ಸಾವಿರ ಯೋಜನೆ ವೆ | ಗ್ಗಳ ಗುಣಿಸು ಪೂರ್ವ ಪಶ್ಚಿಮ ದಿಕ್ಕು ಭಾಗ | ನಿಲಿವರ ಹರಿವರ್ಷಕಿಂಪುರುಷ ನಾಭಿ | ಜಲಜಾಪ್ತನ ಸುತನ ಭಾಗಕೆ ಉತ್ತರಕೆ | ತಿಳಿಪುವೆ ರಮ್ಯ ಹಿರಣ್ಮಯ ಕುರುಖಂಡ | ನೆಲೆ ಒಂದೊಂದು ಉದಧಿ ಪರ್ಯಂತ | ಸಲೆ ಒಂಬತ್ತು ಸಾವಿರ ಯೋಜನಗಣನೆ | ಬಲಿಸಿಕೊಂಡಪ್ಪುವು ಆರು ವರುಷ ಇನಿತು | ಬಳಿಬಳಿಯಲ್ಲಿ ಪೂರ್ವ ಪಶ್ಚಿಮ ದೀರ್ಘ| ಒಳಿತಾಗಿ ಒಂದೊಂದು ಧನುರಾಕಾರವು | ಉಳಿದ ನಾಲ್ಕು ಖಂಡ ಸ್ವಲ್ಪು ಸಮ ವಿಷಮಾ | ಜಲಜನಾಭ ರಂಗ ವಿಜಯ ವಿಠಲರೇಯ | ಸುಲಭಮತಿಗಳಿಗೆ ಮನದಿಂದ ನುಡಿಸುವನು | ಮರಿಯದೆ ಪರ್ವತ ಒಂದೊಂದು ವರುಷಕ್ಕೆ | ಸ್ಥಿರವಾಗಿಪ್ಪವು ಕೇತು ಮಾಲಾಭದ್ರಾಶ್ವ | ಎರಡು ಖಂಡಕ್ಕೆ ಮಾಲ್ಯವಂತ ಗಂಧಮಾದನ | ಗಿರಿಗಳಿವೆ ಉದ್ದ ವಿಸ್ತಾರದ್ವಯ | ಸಾವಿರ ಯೋಜನ ನೀಳ ಮೂವತ್ತು ನಾಲ್ಕು | ಇರತಕ್ಕ ಯೋಜನ ಇಳಾವರ್ತದಂತೀವೆ | ಪರಿಮಿತ ದಕ್ಷಿಣೋತ್ತರದಿ ಕೈಲಾಸದ | ಗಿರಿಯ ತಪ್ಪಲ ವೈಶ್ರವಣನ ಮನೆಯುಂಟು | ಮಿರುಗುವ ಮಹಾ ಬದರಿಕಾಶ್ರಮದಲ್ಲಿ ಶ್ರೀಹರಿ ಅವತಾರ ವೇದವ್ಯಾಸ ನಿಜನರಸಿಂಹ ಕಾಣೋ ಯಿಂದ್ರಾದಿಗಳೆಲ್ಲ ಪೋದುವರು ವಿದ್ಯ | ಗುರುತು ಗಂಧಮಾದನಗಿರಿ ಪೂರ್ವಕ್ಕೆ | ಮರಳಿ ಮಿಕ್ಕಾರು ಖಂಡಕ್ಕೆ ಉಳಿದ ಮರಿ ಯಾದವ | ಗಿರಿಗಳು ಇದರಲ್ಲಿ ದಕ್ಷಿಣ ಭಾಗಕೆ ನಿಷಧ | ಸರಿ ಹೇಮಕೂಟ ಹಿಮಾಲಯ ಪೆಸರು ಉ | ತ್ತರಕೆ ನೀಲಶ್ವೇತ ಶೃಂಗ ಮಾಲ್ಯವಂತವೆಂದು | ಕರೆಸಿಕೊಳ್ಳುತಿಪ್ಪವು ಒಂದೊಂದು ಯೋಜನ | ಎರಡುಸಾವಿರ ಉದ್ದ ವಿಸ್ತೀರ್ಣ ಅಷ್ಟೇ ನಿಂ | ದಿರದೆ ನೀಳ ಲಕ್ಷ ತೊಂಭತ್ತಾರು ಸಾ | ವಿರ ಮತ್ತೆ ಒಂದಕ್ಕೆ ಹತ್ತು ಕಡಿಮೆ ಲೆಕ್ಕ | ಚರಿಯವಾಗಿದೆ ಪೂರ್ವ ಅಪರಭಾಗಕೆ ಆರು | ಸರಧಿಪರಿಯಂತ ಸಮ್ಮಂಧವಾಗಿದೆ | ಭರತ ಖಂಡಗಳಲ್ಲಿ ಪಾಪ ಪುಣ್ಯಗಳಿಂದ !........ | ಎರಡೇಳು ಖಂಡಾತುಮಕ ಜಂಬೂದ್ವೀಪಕ್ಕೆ | ಪರಿವೇಷ್ಟವಾಗಿದೆ ಲಕ್ಷಯೋಣ ಲವಣ | ಶರದಿ ಎನಿಸುತಿದೆ ಇದರ ಮಧ್ಯದಲಿನ್ನು | ಪುರಗಳೆಂಟು ಉಪದ್ವೀಪ ನಾಮವೆಂದು ಕರೆಸಿ | ಸ್ವರ್ಣಪ್ರಸ್ಥ ಚಂದ್ರ ಶುಕಾಪರ್ತನ | ಉರಗ ಸೇರಿದ ರಮಣಕಮದಹರಣ ಆಮ್ಯಾಲೆ | ವಿರಚಿಸುವ ಪಾಂಚಜನ್ಯ ಸಿಂಹದ ಮುಖದ ಶ | ಶಿರನು ಇಳಿದ ನಗರ ಲಂಕಾದ್ವೀಪವು ಸತ್ಯ | ತುರುಗ ವರಿಸಲಿ ಪೋಗಿ ಸಗರನ ಮಕ್ಕಳು | ಅರವತ್ತು ಸಾವಿರ ಜನವೊಂದಾಗಿ ಅಂದು | ಶರನಿಧಿ ಖನನವ ಮಾಡಿ ಹಾಕಿದ ಮೃತ್ತಿಕೆ | ಯಿರತಕ್ಕ ವಾದವು ಉಪದ್ವೀಪಗಳೆಂದು | ಕರುಣಿಗಳು ಕೇಳಿಜೇಬೂದ್ವೀಪದ ಮಹಿಮೆ | ಸರುವ ಬಗೆಯಿಂದ ವಿಸ್ತರಿಸಬೇಕಾದರೆ | ಮರಿಯಾದೆ ಕಾಣನೋ ಪೇಳಿದರೆ ಉಂಟು | ಉರಗಶಾಯಿ ನಮ್ಮ ವಿಜಯವಿಠಲನ್ನ | ಚರಾಣಾಬ್ಜ ಬಲಗೊಂಡು ಪ್ಲಕ್ಷ ವರ್ಣಿಸಬೇಕು.

ಜಂಬೂದ್ವೀಪದ ವಿವರಗಳನ್ನು ಹೇಳಿದಂತೆ, ಪ್ಲಕ್ಷ ಶಾಲ್ಮಲಿ, ಕುಶ,ಕ್ರೌಂಚ, ಅನುಶಾಕ, ಪುಷ್ಕರಸ್ಥ, ದ್ವೀಪಗಳ ಪರಿಮಿತಿಯನ್ನು ಆಯಾ ದ್ವೀಪಗಳಲ್ಲಿನ ಭಗವದ್ಭಕ್ತರುಗಳು ಮತ್ತು ಭಗವದ್ರೂಪಗಳ ವರ್ಣನೆಯನ್ನು ಮಾಡಿರುತ್ತಾರೆ. ಇವರು ಮಾಡಿರುವ ಈ ವರ್ಣನೆ ಭಾಗವತಾದಿ ಪುರಾಣೋಕ್ತವಾದುದು. ಮೇರು ಪರ್ವತವು ಚಕ್ರದ ಅಕ್ಷದಂತೆ ಮಧ್ಯದಲ್ಲಿ ಇರತಕ್ಕದ್ದು. ಇದಕ್ಕೆ ನವಖಂಡಾತ್ಮಕವಾದ ಜಂಬೂದ್ವೀಪವು ಹತ್ತಿಕೊಂಡಿರುವುದು. ಈ ಜಂಬೂದ್ವೀಪದ ದಕ್ಷಿಣಭಾಗದಲ್ಲೇ ಭರತಖಂಡವಿರುವುದು. ಜಂಬೂದ್ವೀಪವು ಲವಣಸಮುದ್ರದಿಂದ ಆವೃತ ವಾಗಿರುವುದು. ಲವಣ ಸಮುದ್ರದಾಚೆ ಪ್ಲಕ್ಷ ದ್ವೀಪವು ವಲಯಕಾರದಲ್ಲಿರುವುದು. ಹೀಗೆ ಸಪ್ತಸಮುದ್ರಗಳೂ, ಸಪ್ತದ್ವೀಪಗಳೂ ಇದ್ದು, ಅದರಾಚೆ ಲೋಕಾಲೋಕ ಪರ್ವತ, ಅಂಧಂತಮಸ್ಸು, ಘನೋದಕ, ವೈಕುಂಠಗಳು ಇರುವುವೆಂದು ಪುರಾಣದಲ್ಲಿ ಉಕ್ತವಾಗಿದೆ. ಈಗಿನ ಭೂಗೋಲ, ಖಗೋಲ ಶಾಸ್ತ್ರಗಳ ತೀರ್ಮಾನವು ತಾತ್ಕಾಲಿಕ ವಾದ್ದರಿಂದ ಈ ಉಭಯ ಶಾಸ್ತ್ರಗಳ ಸಮನ್ವಯಯವು ದುಸ್ತರವು. ದಾಸರುಗಳು ಪುರಾಣೋಕ್ತವಾದ ವಿಷಯಗಳನ್ನೆಲ್ಲಾ ಕ್ರೋಢಿಕರಿಸಿ, ಭೂಗೋಲ ವಿಚಾರವನ್ನು ಅತ್ಯಂತ ವಿಸ್ತಾರವಾಗಿ ಹೇಳಿರುವುದು ಅವರ ಜ್ಞಾನದ ವ್ಯಾಪಕತೆಗೆ ನಿದರ್ಶನವಾಗಿದೆ.

V ಕಾಲಸೃಷ್ಟಿ

ದಾಸರುಗಳು ಕ್ಷಣಲವಾದಿಕಾಲದ ಪರಿಮಾಣವನ್ನು ವರ್ಣಿಸಿರುವರು.

ಧ್ರುವತಾಳ

ಅಣುದ್ವಯ ಪರಮಾಣು ಇಂಥಾದೇ ತ್ರಯವಾಗೆ | ತ್ರಣು ಎನಿಸು ಕೊಂಬೋದು ಇದೆ ತೃಸ ರೇಣು | ಮನುಜಾಗೋಚರವೆನ್ನು ಜಾಲಾರ್ಕ ಕಿರಣಾದಲ್ಲಿ | ಘನವಾಗಿ ಚರಿಸುವ ದೇಶ ಭೇದ | ಇನಿತು ತ್ರಸರೇಣು ತೃಟಿ ತೃಟಿ ಮೂರು ಎಂಬೋದು | ಅನಿಸಿಕೊಳುತಲಿದೆ ವೊಂದು ವೇಧ | ತ್ರಣೆ ವೇಧವೊಂದು ಲವಇಂಥವು ಮೂರಾಗೆ | ಎಣಿಸು ನಿಮಿಷವೆಂದು ನಿಮಿಷಾ ಮೂರು | ಕ್ಷಣವಾಗುವುದು ಕೇಳಿ ಮರಳಿ ಚೆನ್ನಾಗಿ ಐದು | ಕ್ಷಣ ಕೂಡಿದರೆ ಒಂದು ಕಾಷ್ಟಾ ಎನ್ನಿ | ಅನುಮಾನ ಮಾಡಸಲ್ಲ ಹದಿನೈದು ಕಾಷ್ಟಾಲೋ | ಚನವೊಂದು ಲಘುವು ಸಿದ್ಧ ವಕ್ಕು | ಗುಣಿಸು ಹದಿನೈದು ಲಘುವು ಒಂದು ನಾಡಿಯೆಂದು |ಇನಿತು ಆರೇಳು ಎಂಟು ಒಂದು ಯಾಮಾ | ಎಣಿಕ್ಕೆಗೆಯೋ ಇಂಥಾಯಾಮ ಚತುಷ್ಟವಾಗೆ | ದಿನಮಣಿ ಅಸ್ತಂಗತ ಹನ್ನೆರಡು ತಾಸು |ಇನಿತು ಹನ್ನೆರ ಡಾಗೆ ಇರಳುನಾಲ್ಕುಝಾವ | ಎಣಿಸವುದು ಒಂದು ವಾಸರಕೆ | .... ಅನಿಮಿಷ ತತಿಗಳಿಗೆ ಮತ್ತೆ ಬಗೆ ಒಂದು ವತ್ಸರ |ದಿನವೊಂದು ಹಗಲಿರಳು ಆಗೋ ವೆಂದು | ವನಜಗರ್ಭನ್ನ ತನಕ ಈ ಪರಿ ಎಂದೆಣಿಸಿ ಗುಣಿಸಿ ತಿಳಿಯ | ಬೇಕು ಕಾಲ ಪ್ರಭಾ |

ಅಣುಮಹತ್ತು ರೂಪ ವಿಜಯ ವಿಠಲರೇಯ | ಗುಣನಿಧಿ ಸರ್ವಕಾಲ ದೊಡನೆ ತಿರುಗುತಿಪ್ಪ |

ಮಠ್ಯತಾಳ

ಮೂರೊಂದು ಯುಗವುಂಟು ಮನುಜಮಾನದಲ್ಲಿ | ಸಾರುವೆ ವರ್ಷಂಗಳು ವಿವರ ವಿವರವಾಗಿ | ಆರಂಭ ಯುಗಕೆ ಹದಿನೇಳು ಲಕ್ಷ | ಈರೈದು ಹತ್ತು ಎಂಟುಸಾವಿರವೆನ್ನಿ | ಚಾರು ದ್ವಿತೀಯಯುಗಕೆ ಲಕ್ಷದ್ವಾದಶ ತೊಂಭ | ತ್ತಾರು ಸಾವಿರ ವೈಯ್ಯ | ಮೂರನೆ ಯುಗಕೆ ಯೆಂಟು ಲಕ್ಷಮ್ಯಾಲೆ | ಈರೆರಡರವತ್ತು ಸಾವಿರ ವರುಷಗಳು | ಈರೀತಿ ಗ್ರಹಿಸು ನಾಲ್ಕನೆ ಯುಗಕೆ ವಿ | ಚಾರ ನಾಲ್ಕು ಲಕ್ಷ ತ್ರಿಂಶತಿದ್ವಯ ಸಾಹಸ್ರ | ಹಾರೈಸು ಎಲ್ಲ ಕೂಡಿ ಗುಣಿಸೆ ವಿ |ಸ್ತಾರವಾಗಿದೆ ನಾಲ್ಕು ಹತ್ತು | ಮೂರು ಲಕ್ಷದದಶ ಸಾವಿರವೋ | ಬ್ಯಾರೆ ಬ್ಯಾರೆ ಯುಗದ ಪೆಸರಂಗಳು ಶ್ರಂ | ಗಾರದಿಂದಲಿ ಕೇಳಿ ಕೃತತ್ರ್ಯೆತ ದ್ವಾಪರ ಕಲಿ | ಸಾರ ಹೃದಯರೊಲಿದು ಸಂತತ ಕರುಣದಲಿ | ಶ್ರೀ ರಮಣ ನಮ್ಮ ವಿಜಯವಿಠ್ಠಲರೇಯ | ಮೂರೊಂದು ವತ್ಸರ ನಾಮಕ ಕಾಣೋ |

ರೂಪಕತಾಳ

ಏಕತ್ರಯ ಒಮ್ಮೆ ತಿರುಗಿದರು ಮಹಯುಗ | ನಾಕಮಾನದಲ್ಲಿ ದ್ವಾದಶ ಸಹಸ್ರವೋ | ಲೋಕದೊಳಗೆ ಸಿದ್ಧ ಇಂಥ ಮಹಯುಗ ಸಾವಿರ | ಶ್ರೀ ಕಾಂತನಿಂದಲಿ ತಿರುಗಿದರದು ಅಂದು | ಲೋಕೇಶಗಾಗುವುದು ಒಂದು ಹಗಲು ಶಬ್ದ | ವಾಕುಲಾಲಿಸಿ ನಾನೂರ ಮೂವತ್ತೆರಡು ಕೋಟಿ | ಈ ಕಾಲದಂತೆ ಸಾವಿರಾವರ್ತಿ ತಿರುಗಿದರು | ನೂಕಿಪೋಯಿತು ಇರುಳು ಕಮಲಾಸನಗೆ | ನಾಲ್ಕು ನೂರು ಮೂವತ್ತೆರಡುಕೋಟಿ ಶ್ಲೋಕಾರ್ಧದಿಂದಲಿ ಇತ್ತಂಡ ಕೂಡಿಸಿ | ನಾಲ್ಕೆರಡು ಅರವತ್ತು ನಾಲ್ಕು ಕೋಟಿ ಗುಣಿತ | ವಾಕೋಷ ಚಕತುರ್ಮುಖಗೆ ನಿಜವೊಂದು ದಿವಸವೋ | ಸಾಕಾರ ಮೂರ್ತಿ ಸಿರಿವಿಜಯವಿಠ್ಠಲರೇಯ | ಲೌಕಿಕ ಮಾನದಲ್ಲಿ ಇಷ್ಟು ವರ್ಷಗೈದ |

vi. ಅಕ್ಷರ ವಿಕಾಸ

ಓಂಕಾರದಿಂದ ಪಂಚಾಶದ್ವರ್ಣಗಳು ವ್ಯಾಹೃತ್ಯಾದಿಗಳು ಹೇಗೆ ಉತ್ಪನ್ನವಾದವು, ಇವುಗಳಲ್ಲಿ ಯಾವ ಯಾವ ಭಗವದ್ರೂಪಗಳಿರುವುವು ಎಂಬುದನ್ನು ಶ್ರೀ ವರದೇಂದ್ರ ಸ್ವಾಮಿಗಳವರು ವಿವರವಾಗಿ ಹೇಳಿರುವರು.

ಸಾವೇರಿ—ಝಂಪೆ

ಪಾಹಿ ಪಂಕೇರುಹೇಕ್ಷಣ ಸರ್ವಕಾಮದಾ | ಪಾಹಿ ಪದ್ಮಾಲಯ ಶ್ರೀನಿಕೇತನ ಸದಾ ||

ಜಯತು ಚತುರಾನನ ಭವೇಂದ್ರಾದಿಬುಧನುತ | ಜಯತು ಚತುರಾನನ ರಮಾ

ವಲ್ಲಭಾ | ಜಯತು ಸುಖಪೂರ್ಣ ಚಿತ್ಸುಖ ಮುಖ ಸುಗುಣನಿಲಯಾ | ಜಯತು ಜನ್ಮಾದಿಕಾರಣ ದೋಷಃ | ಕಮಲಾಕ್ಷ ಪರಮ ಸಂಭ್ರಮದಿಂದ ಲಕ್ಷ್ಮೀಕರಕಮಲದಿಂ

ಸೇವೆಗೊಳುತಿರಲು ಆಗ | ಅಮರನಿಕರಾರಾಧ್ಯ ಕಮಲಾಸನು ಬಂದು | ನಮಿಸಿ ಬಿನ್ನೈಸಿದನು ತನ್ನ ಪಿತಗೆ ೨

ಆವ ಸರ್ವೋತ್ತಮನು ಆವಾವ ಗುಣಗಳಿಹ್ಯವಾವಾ ಶಬ್ದವಾಚ್ಯಾವರೀತೆ ಈ ವಿಚಾರವನು ಪೇಳೆನೆಲು ನಸುನಗುತ ರಾಜೀವ ಸಂಭವಗೆ ಇನಿತೆಂದು ನುಡಿದ ೩

ವನಜಸಂಭವ ಕೇಳು ನಾನೇ ಸರ್ವೋತ್ತಮನು ಯೆನಗನಾಂತಾನಂತ ಮಂಗಳಗುಣ

ಪ್ರಣವವ್ಯಾಚನು ನಾನೇ ಅಷ್ಟವರುಣೋಪೇತ ಪ್ರಣವವಿಚಾರವನುಪೇಳ್ವೆ ನಿನಗೆಳ

ಸಾದರದಿ ಕೇಳಿನ್ನು ಕಾರುಕಾರಮಕಾರನಾದ ಬಿಂದು ಘೊಷ ಶಾಂತತಿ ಶಾತಪು

ಆದಿವ್ಯ ವರ್ಣದಲಿ ವಿಶ್ವತೈಜಸ ಪ್ರಾಜ್ಞ ಮೋಹಮಯತುರ್ಯಾತ್ಮಅಂತರಾತ್ಮಃ

ಪರಮಾತ್ಮ ಜ್ಞಾನಾತ್ಮ ಎಂಬಷ್ಟರೂಪದಿಂದಿರುತಿಹನು ವೇದಾದಿಯ ಸರ್ವದ

ಪರಮ ಋಷಿಗಳು ಈಮಹಮಂತ್ರ ಜಪಿಸೆನ್ನಪುರವನ್ನೈದಿದರೊ ಸತ್ವರದಿಂದಲಿ ೬

ವಾರಿರುಹ ಸಂಭವನೆ ಕೇಳಕಾರದಲಿ ಹದಿನಾರು ಅಚ್ಚುಗಳು ಜನಿಸಿದವೊ ಕ್ರಮದಿ

ಚಾರು ಅಜ ಆನಂದ ಇಂದ್ರೇಶ ಮೊದಲಾದ ಈರೆಂಟುರೂಪಗಳು ವಿಶ್ವಜನಿತ೭

ಉಮ ನಾದ ಬಿಂದು ಘೋಷಗಳಿಂದ ಕಚಟತಪವಿಮಲವರ್ಗಗಳು ಪುಟ್ಟಿದವು ಐದು | ಕಮಲಭವ ಕೇಳು ತೈಜಸ ಪ್ರಾಜ್ಞ ತೂರ್ಯ ಆತುಮ ಅಂತರಾತುಮ ಮೂರ್ತಿಗಳಿಂದಲಿ ೮

ಪಂಚ ವಿಂಶತಿರೂಪ ಅಭಿವ್ಯಕ್ತವಾದವು ವಿರಂಚಿಕೇಳ್ ಶಾಂತದಿಂಯರಲವಗಳು | ಸಂಚೆಂಕಸ್ಯತಿ ಶಾಂತದಿಂದ ಶಷಸಹಳ ಪಂಚಾಕ್ಷರಗಳು ಜನಿಸಿದವೊ ಇಲ್ಲೀ

ಪರಮಾತ್ಮ ಜ್ಞಾನಾತ್ಮ ರೂಪದಿಂದೊಭತ್ತು ನಿರುಪಮ ಸ್ವಮೂರ್ತಿಗಳು ಶೋಭಿಸಿದವು. | ಪರಮೇಷ್ಠಿ ನಾರಾಯಣಾಷ್ಟಾಕ್ಷರ ಮಂತ್ರವರವೆ ನಿನಗಾನು ಸಾಂಗೋಪಾಂಗದಿಂ ೧೦

ತಾರಗತ ಅಷ್ಟವರ್ಣಗಳಿಂದ ಓಂ ನಮೋ ನಾರಾಯಣಾಯ ಎಂಬೀ ಮಂತ್ರವು | ಚಾರು ಆಷ್ಟಾರ್ಣತದ್ವಾಚ್ಯ ಮೂರ್ತಿಗಳೆಂಟು ಸಾರ ವಿಶ್ವಾದಿ ಪ್ರಣವಸ್ಥಭಿನ್ನ ೧೧

ಓಂಭೂಃ ಓಂಭುವಃ ಓಂ ಸ್ವಹಃ ಓಂ ಭೂರ್ಭುವಃ ಸ್ವಹಃ ಈ ವ್ಯಾಹೃತೀ | ಅಂಬುಜೋದ್ಭವ ಪ್ರಣವಾದಿ ನಾಲ್ವರಣದಿಂ ಸಂಭವಿಸಿತೀ ಮಂತ್ರ ಸುಲಭದಿಂದ೧೨

ತನಯ ಕೇಳೀ ಮಂತ್ರಗತ ನಾಲ್ಕುರೂಪಗಳು ಅನಿರುದ್ಧಪ್ರದ್ಯುಮ್ನಸಂಕುರುಷಣ | ಅನಘಶ್ರಿವಾಸುದೇವನ ಮೂರ್ತಿಗಳು ಚಿಂತನೆಮಾಡೋ ವ್ಯಾಹೃತಿಯಲಿ ಬಿಡದೆ೧೩

ನಿಗಮಾದಿ ಮೊದಲು ನಾಲ್ವರ್ಣದಿಂ ಓಂನಮೋ ಭಗವತೇ ವಾಸುದೇವಯಾ ಎಂಬಾ |ಯುಗಳ ಆರಕ್ಷರಾತ್ಮಕ ಮಂತ್ರಪ್ರತಿಪಾದ್ಯ ಭಗವದ್ರೂಪಗಳ ಪೇಳುವೆ

ನಿನಗೆ ಕೇಳು ೧೪

ಕೇಶವ ನಾರಾಯಣನು ಮಾಧವನು ಗೋವಿಂದ ಕ್ಲೇಶನಾಶನ ವಿಷ್ಣು ಮಧು ಸೂಧನ । ಶ್ರೀಶತ್ರಿವಿಕ್ರಮನು ವಾಮನ ಶ್ರೀಧರ ಹೃಷೀಕೇಶಾಂಬುರುಹನಾಭ ದಾಮೋದರ ೧೫

ತೃತಿಯ ಆವರ್ತಿ ಅಸ್ಟಾರ್ಣದಿ ।ನೂರು ವ್ಯಾಹೃತಿಯಿಂದ ದ್ವಿಷಡಕ್ಷರ ಎರಡರಿಂದ ಚತುರಾಸ್ಯ ಕೇಳು ಗಾಯತ್ರಿ ಉತ್ಪನ್ನವಾಯಿತು ಕೇಶವಾದಿ ಕೃಷ್ಣಾಂತರೂಪ ೧೬

ವಿತತವಾದವು ಪುರುಷಸೂಕ್ತ ಗಾಯಿತ್ರಿಯಿಂದತುಳ ಈ ಪುರುಷ ಸೂಕ್ತದಲಿ ವೇದ ತತಿಗಳುದಿಸಿದವು ನಿಗಮಾದಿ ಬ್ರಹ್ಮಸೂತ್ರ ಭಾರತ ಪಂಚರಾತ್ರಾದಿ ಆಗಮಗಳು ೧೭

ಶತಕೋಟಿ ಮೂಲರಾಮಾಯಣ ಪುರಾಣಗಳು ಸ್ಮೃತಿಸಮೂಹಗಳು ಪ ಪುರಾಣ ಗಳು ಇತರ ವೇದೋಕ್ತ ಸುಶಬ್ದ ಜನಿಸಿದವು ಸಂತತವಾಚ್ಯ ನಾನೆ ಸಂದೇಹವಿಲ್ಲ೧೮

ಉದಯಿಸುವ ರವಿಯವೋಲ್ ಕಾಂತಿ ಜ್ಞಾನಾನಂದ ಮುದಮೋದ ದಿವ್ಯಗುಣ ಮಯ ಶರೀರ । ಸುದರುಶನ ದರಗದಾಂಬುಜಗಳಾಯುಧವೆನಗೆ ತ್ರಿದಶಗುಣ ಮಯನು ಸರ್ವೇಶ ನಾನು ೧೯

ಇದ್ದೆಸೆಯಲೆನ್ನ ಸೇವಿಪರು ಶ್ರೀ ಭೂದೇವಿ ಕೃದ್ಯೋಲ್ಕ ವಿಶ್ವಕೇಶವ ಮತ್ಸಾದಿ । ಮದ್ರೂಪಗಣಮಧ್ಯಗನು ನಾನು ಬ್ರಹ್ಮ ಫಣಿಪಾದ್ಯತತಿ ಭಕ್ತಿಸೇವ್ಯನು ಸಮರ್ಥ೨೦

ಆರಿದರವರ ಭಯಾಂಕಿತ ಚತುರ್ಭುಜನು ನಾಲ್ಕೆರಡುರೂಪಂಗಳು ಪ್ರದೀಪ ವರ್ಣ । ಸರ್ವಾಭರಣವಿಭೂಷಿತವಾದ ಮದ್ರೂಪ ನಿರುತ ಮೇಯವು ಮುಮುಕ್ಷು ಗಳಿಂದಲಿ ೨೧

ತಾರ ನಾರಾಯಣಾಷ್ಟಾಕ್ಷುರವು ವ್ಯಾಹೃತಿಯು ಈರಾರುವರ್ಣ ಗಾಯಿತ್ರಿಮಂತ್ರ । ಸಾರಮಾತೃಕ ಪುರುಷಸೂಕ್ತ ವೈಷ್ಣವಗಳಿವು ನೀರಜಾಸನ ಕೇಳು ಮಹಮಂತ್ರವೋ೨೨

ಹೀಗೆ ಜಡ ಪ್ರಭೇದಗಳಾದ ಪ್ರಕೃತಿ, ಕಾಲ, ದೇಶ, ವರ್ಣ, ಇವುಗಳ ಸೃಷ್ಟಿಕ್ರಮವನ್ನು, ದೇವತೆಗಳ ಸೃಷ್ಟಿಕ್ರಮವನ್ನು ದಾಸರುಗಳು ವಿವರಿಸಿರುತ್ತಾರೆ. ಈ ಜಡ ಪದಾರ್ಥಗಳ ಸ್ಥೂಲ ಸ್ವರೂಪಗಳು ಈ ವಿವರಣೆಯಿಂದ ಸ್ವಲ್ಪ ಸ್ಪಷ್ಟಪಡುವುವು.

9. ತಾರತಮ್ಯ

ಚೇತನವರ್ಗದಲ್ಲಿ ತಾರತಮ್ಯವು ಮುಖ್ಯ ಧರ್ಮವು. ಜೀವರುಗಳು ಪರಸ್ಪರ ಭಿನ್ನರು, ನಿತ್ಯರು, ಅನಾದಿಕರ್ಮದಿಂದ ಬದ್ಧರೆಂದಮೇಲೆ ಅವರಲ್ಲಿ ತರತಮಭಾವವನ್ನು ಒಪ್ಪಿಕೊಳ್ಳಲೇ ಬೇಕು. ಆಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಜೀವರುಗಳ ತರತಮ ಭಾವವನ್ನು ದಿಕ್ಪ್ರದರ್ಶನ ಮಾಡಿರುವರು. ಅದನ್ನನುಸರಿಸಿಯೇ ದಾಸರುಗಳು

ತಾರತಮ್ಯವನ್ನು ವಿಸ್ತಾರವಾಗಿ ನಿರೂಪಿಸಿರುವರು. ಪುರಂದರದಾಸ ಆರೋಹಣ ಕ್ರಮದಲ್ಲಿ ಜೀವರ ತಾರತಮ್ಯವನ್ನು ಹೇಳಿದ್ದಾರೆ.

ಕಾಪಿ–ರೂಪಕ

ಸತ್ಯ ಜಗತಿದು ಪಂಚಭೇದವು ನಿತ್ಯಸಿರಿ ಗೋವಿಂದನಾ ||ಪ ||
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕನೆಂದು ಸಾರಿರೈ ||ಅ ||
ಜೀವ ಈಶಗೆ ಭೇದ ಸರ್ವತ್ರ ಜೀವ ಜೀವಕೆ ಭೇದವೋ
ಜೀವ ಜಡರೋಳ್ ಭೇದ ಸರ್ವತ್ರ ಜೀವಜಡ ಪರಮಾತ್ಮಗೆ ೧
ಮಾನುಷೋತ್ತಮರಧಿಕ ಕ್ಷಿತಿಪರು ಮನುಷ್ಯ ದೇವಗಂಧರ್ವರೂ
ಆಜಾನುಪಿತರಾಜಾನುಕರ್ಮಜ ದಾನವಾರಿ ಸತ್ವಾತ್ಮರು ೨
ಗಣಪ ಮಿತ್ರರು ಸಪ್ತಋಷಿಗಳು ವಹ್ನಿನಾರದ ವರುಣನೂ
ಧರ್ಮಗೇಸಮ ಚಂದ್ರಸೂರ್ಯರು ಶತರೂಪ ಪ್ರವಹರೂ ೩
ದಕ್ಷ ಸಮ ಅನಿರುದ್ಧ ಗುರು ಶಚಿ ರತಿ ಸ್ವಯಂಭುವರಾರ್ವರೂ
ಪ್ರಾಣಕಿಂತಾ ಅಧಿಕ ಕಾಮನು ಕಿಂಚಿತಧಿಕನು ಇಂದ್ರನೂ ೪
ದೇವ ಇಂದ್ರಗೆ ಅಧಿಕ ಮಹರುದ್ರದೇವ ಸಮ ಶೇಷಗರುಡನೂ
ಕೇವಲವು ಈ ಶೇಷರುದ್ರಗೆ ದೇವಿ ಹೆಚ್ಚು ಸರಸ್ವತೀ ೫
ವಾಯುರಿಗೆ ಸಮರಿಲ್ಲ ಜಗದೊಳು ವಾಯುದೇವರೆ ಬ್ರಹ್ಮರು
ವಾಯುಮುಕ್ತಾಕೋಟಿಗಳಿಂದಧಿಕಶಕ್ತಳು ಶ್ರೀರಮಾ ೬
ಅನಂತಾನಂತ ಗುಣದಿ ಲಕುಮಿಗೆ ಅಧಿಕ ಪುರಂದರವಿಠಲನೂ ೭
ಘನರು ಸಮರಾರಿಲ್ಲ ಲೋಕದಿ ಹನುಮಹೃತ್ಪದ್ಮವಾಸಿಗೆ ೮

'ಅನಿಮಿಷ ವಿಷ್ಣು ಶ್ರೀ ಬ್ರಹ್ಮವಾಯು' ಎಂಬ ಪದದಲ್ಲಿ ಜಗನ್ನಾಥದಾಸರು ಬೃಹತ್ತಾರತಮ್ಯವನ್ನು ಹೇಳಿರುವರು. ತಾರತಮ್ಯದಲ್ಲಿ 'ಗುಣ ತಾರತಮ್ಯ, ಕಕ್ಷಾ ತಾರತಮ್ಯ, ಆವೇಶಾವತಾರ ತಾರತಮ್ಯ, ಆರೋಹಣ ತಾರತಮ್ಯ ಅವರೋಹಣ ತಾರತಮ್ಯ,' ಇತ್ಯಾದಿ ಪ್ರಭೇದಗಳುಂಟು. ಇದಲ್ಲದೆ ರುದ್ರ, ಶೇಷ, ಬ್ರಹ್ಮ ಪದವಿಗೆ ಬರುವ ಜೀವರುಗಳು ಎಷ್ಟೆಷ್ಟು ಕಲ್ಪ ಹೇಗೆ ಸಾಧನ ಮಾಡಿಕೊಳ್ಳು ತ್ತಾರೆಂಬುದೂ ದಾಸರ ಪದಪದ್ಯಗಳಲ್ಲಿ ವರ್ಣಿತವಾಗಿದೆ. ದೇವತೆಗಳ ತಾರತಮ್ಯವಿದ್ದಂತೆ ದೈತ್ಯ ತಾರತಮ್ಯವೂ ಉಂಟು. ಈ ವಿಧದ ತಾರತಮ್ಯ ಜ್ಞಾನವು ಸಾಧಕನಿಗೆ ಅವಶ್ಯವು. ಇವುಗಳ ಸಮೀಚೀನ ಜ್ಞಾನದಿಂದ ಸೋತ್ತಮರ ಅನುಗ್ರಹಪಡೆದು ತದ್ದ್ವಾರಾ ಭಗವತ್ಪ್ರಸಾದ ಪಡೆಯಲು ದಾರಿಯಾಗುವುದು.

ತಾರತಮ್ಯ ವಿಶಿಷ್ಟರಾದ ಜೀವರುಗಳಲ್ಲಿ ಸಾತ್ವಿಕ, ರಾಜಸ, ತಾಮಸವೆಂದು ಮೂರು ವರ್ಗಗಳುಂಟು. ಈ ಮೂರು ಗುಣಗಳು ಅನಾದಿಕಾಲದಿಂದಲೂ ಜೀವರುಗಳ

ಸ್ವಭಾವ ಧರ್ಮವಾಗಿರುವುದು. ದೇವತೆಗಳು, ಋಷಿಗಳು, ಮನುಷ್ಯೋತ್ತಮರುಗಳು ಸಾತ್ವಿಕರು. ಮನುಷ್ಯರಲ್ಲಿ ಕೆಲವರು ರಾಜಸಜೀವಿಗಳು, ಮನುಸ್ಯಾಧಮರು, ದೈತ್ಯರುಗಳು ತಮೋಯೋಗ್ಯ ಜೀವಿಗಳು **"ದ್ವೌ ಭೂತಸರ್ಗೌ ಲೋಕೇಸ್ಮಿನ್ ದೈವ ಅಸುರ ಏವ ಚ । ವಿಷ್ಣುಭಕ್ತಿ ಪರೋದೇವಃ ವಿಪರೀತಸ್ತಥಾಸುರಃ "** ಎಂಬ ವಾಕ್ಯದ ಪ್ರಕಾರ ವಿಷ್ಣುಭಕ್ತಿ, ತದಭಾವವೇ ಜೀವರುಗಳಲ್ಲಿನ ಈ ಭಿನ್ನವರ್ಗಕ್ಕೆ ಕಾರಣವಾದುದು. ತಮೋಯೋಗ್ಯ ಜೀವಿಗಳಾದ ಕಲಿಯೇ ಮೊದಲಾದ ದೈತ್ಯರಿಗೆ ಪರಮಾತ್ಮನ ವಿಷಯದಲ್ಲಿ ಅನ್ಯಥಾಜ್ಞಾನವೇ ಸ್ಥಿರವಾಗಿರುವುದು.

"ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಂ ।
ಅಪರಸ್ಪರ ಸಂಭೂತಂ ಕಿಮನ್ಯತ್ಕಾಮಹೈತುಕಂ । "

ಇತ್ಯಾದಿ ಗೀತಾವಾಕ್ಯದಂತೆ, ಜಗತ್ತು ಮಿಥ್ಯೆ, ಪರಮಾತ್ಮನಿಗೆ ಅಧೀನವಲ್ಲ ಎಂಬ ಜ್ಞಾನವೇ ತಾಮಸ ಜೀವಿಗಳಲ್ಲಿರುವುದು. ಭಗವಂತನಲ್ಲಿ ಇವರಿಗೆ ಅಂತರಂಗ ದ್ವೇಷವಿರುವುದು. ದುರ್ಯೋಧನನಿಗೆ ಕೊನಗಾಲಕ್ಕೂ ಕೃಷ್ಣ ದ್ವೇಷ ತಪ್ಪಲಿಲ್ಲ. ಇಂತಹ ತಮೋಯೋಗ್ಯಜೀವಿಗಳಲ್ಲಿ ಕಲಿಯೇ ಅಗ್ರಗಣ್ಯ. ಇತರ ದೈತ್ಯರು ಅವನಿಗಿಂತ ಅಲ್ಪರು. ತ್ರಿವಿಧಜೀವರುಗಳ ಆಹಾರ, ವಿಹಾರ, ಅಭಿರುಚಿ, ಶ್ರದ್ಧೆ, ಯಜ್ಞ, ದಾನ, ತಪಸ್ಸು, ಇವೆಲ್ಲ ಭಿನ್ನವಾಗಿರುವುದೆಂದು ಗೀತೆಯಲ್ಲಿ ಭಗವಂತನು ಹೇಳಿರುವನು. ರಜೋಗುಣದಿಂದ ಕೂಡಿದ ಜೀವಿಗಳಿಗೆ ನಿತ್ಯ ಸಂಸಾರಿಗಳೆಂದು ಹೆಸರು. ಇವರಿಗೆ ಪರಮಾತ್ಮ ವಿಷಯದಲ್ಲಿ ಮಿಶ್ರಜ್ಞಾನವಿರುವುದರಿಂದ ಸ್ವರ್ಗ, ನರಕ, ಭೂ, ಈ ಲೋಕಗಳಲ್ಲೇ ಇವರು ಸುತ್ತುತ್ತಿರುವರು. ತಮೋಯೋಗ್ಯ ಜೀವಿಗಳಿಗೆ ಅಂಧಂ ತಮಸ್ಸೆಂಬ ದುಃಖಕರವಾದ ಲೋಕವು ಪ್ರಾಪ್ತಿಯಾಗುವುದು. ದೇವತೆಗಳು, ಋಷಿಗಳ, ಪಿತೃಗಳು, ಚಕ್ರವರ್ತಿಗಳು, ಗಂಧರ್ವರು ಮತ್ತು ಮನುಷ್ಯೋತ್ತಮರುಗಳು ಸಾತ್ವಿಕ ಚೇತನರು. ಇವರುಗಳು ಸ್ವರೂಪತಃ ವಿಷ್ಣುಭಕ್ತರು ಮತ್ತು ಕೊನೆಯಲ್ಲಿ ವೈಕುಂಠಾದಿ ಭಗವಂತನ ಲೋಕಗಳನ್ನು ಹೊಂದುವರು.

10. ಸಾಧನೆ

ಸಾತ್ವಿಕಜೀವಿಗಳೂ ಪ್ರಾಕೃತಬಂಧಕ್ಕೆ ಒಳಗಾಗಿರುವರು. ದೇವತೆಗಳಾದರೂ ಮನುಷ್ಯಯೋನಿಯಲ್ಲಿ ಹುಟ್ಟಿರುವಾಗ ಸಾಮಾನ್ಯವಾಗಿ ತಿರೋಹಿತಜ್ಞಾನರಾಗಿ. ಶಾಪಗ್ರಸ್ತರಾಗಿ ರಾಗದ್ವೇಷಗಳಿಂದ ವಿಷಯಭೋಗ ಮಾಡುತ್ತಾ ಇರುವರು. ಆದ್ದರಿಂದ ಯೋಗ್ಯರಾದ ಜೀವಿಗಳಿಗೆ ತಮ್ಮ ಸ್ವರೂಪ ಸುಖವನ್ನು ಪಡೆಯಲು ಮತ್ತು ಭಗವತ್ಸಾಕ್ಷಾತ್ಕಾರ ಪಡೆಯಲು ಶಾಸ್ತ್ರಗಳು ಅನೇಕ ಸಾಧನೆಗಳನ್ನು ಹೇಳಿರುವುವು.

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ । ಕಾರ್ಯಾಕಾರ್ಯವ್ಯವಸ್ಥಿತೌ ।

ಎಂದು ಗೀತೆಯಲ್ಲಿ ಭಗವಂತನು ಉಪದೇಶಿಸಿರುವನು. ಶಾಸ್ತ್ರೋಕ್ತವಾದ ಸಾಧನೆಗಳು ಅನೇಕ ಬಗೆಯಾಗಿರುವುವು. ಅವುಗಳನ್ನು ಹೀಗೆ ವಿಂಗಡಿಸಬಹುದು:–

1. ವಿಷಯ ವೈರಾಗ್ಯ :– ಈ ಜಗತ್ತಿನ ಆಗುಹೋಗುಗಳು, ರೀತಿ ನೀತಿಗಳು ಐಹಿಕಜೀವನ ಇವುಗಳಲ್ಲಿ ತೀವ್ರ ಅತೃಪ್ತಿ ಮತ್ತು ಜಿಹಾಸೆ ಮೂಡುವುದು.

2. ಸತ್ಕರ್ಮಾಚರಣೆ– ಈ ಜಿಹಾಸೆ ಬಲಿತಂತೆ ಅಲೌಕಿಕವಾದ, ಪಾರಮಾರ್ಥಿಕವಾದ ವಿಷಯಗಳಲ್ಲಿ ಶ್ರದ್ಧೆ ಬೆಳೆದು, ಅದಕ್ಕೆ ಹೊಂದಿಕೊಂಡ ಶಾಸ್ತ್ರವಿಹಿತವಾದ, ವರ್ಣಾಶ್ರಮವಿಹಿತವಾದ ಸಂಧ್ಯಾದಿಕರ್ಮಗಳು, ತೀರ್ಥಯಾತ್ರಾ, ಸಜ್ಜನಸಂಗ, ದಾನ, ಏಕಾದಶ್ಯಾದಿ ವ್ರತಾಚರಣೆ ಇವುಗಳ ಆಚರಣೆಯಲ್ಲಿ ತತ್ಪರನಾಗುವನು.

3. ಹರಿಮಹಿಮೆ ಅಥವಾ ಬ್ರಹ್ಮವಿಚಾರ :– ಜಿಜ್ಞಾಸಾ–ಶ್ರವಣ–ಮನನ ಮತ್ತು ಧ್ಯಾನರೂಪವಾದದ್ದು.

4. ಹರಿಭಕ್ತಿ ಮತ್ತು ಆದರಿಂದ ಹರಿಪ್ರಸಾದ.

ಕರ್ಮಕ್ಕಿಂತಲೂ ಜ್ಞಾನ ಶ್ರೇಷ್ಠ. ಈ ಜ್ಞಾನಕ್ಕೆ ಭಕ್ತಿ ಹಿನ್ನೆಲೆಯಾಗಿರಬೇಕು. ಜ್ಞಾನವು ಗುರುಗಳಿಂದ ಲಭ್ಯವಾಗಬೇಕು. ಆಗಲೇ ಅದು ಫಲಪ್ರದವಾಗುವುದು. ಇದರಿಂದ ಪ್ರಸನ್ನನಾದ ಹರಿಯು ಬಿಂಬಾಪರೋಕ್ಷರೂಪವಾದ ತನ್ನ ದರ್ಶನವನ್ನು ಕೊಡುವನು. ಇದೇ ಜೀವನ್ಮುಕ್ತಿಯು. ಸಾಧನದ ಈ ವಿವಿಧಹಂತಗಳನ್ನೆಲ್ಲಾ ಜಗನ್ನಾಥದಾಸರು ಕ್ರೋಢೀಕರಿಸಿ ಹೇಳಿದ್ದಾರೆ.

ಸಾವೇರಿ–ಝಂಪೆ

ಇನಿತೆಂದುಶಾಸ್ತ್ರಪೇಳುವುವು ಪುನಹ | ಪುನಹ ಭಗವತ್ಪ್ರಾಪ್ತಿ ಬೇಕೆಂಬುವರಿಗೆ ಅ

ಅನುಬಂಧಿಗಳಲಿ ಮಮತೆಯನು ಬಿಡು ವಿಷಯವಾಸನೆಯನೀಡಾಡು ಸುಜ್ಞಾನ ಭಕ್ತಿಯ ಬೇಡು | ಮನದಲ್ಲಿ ಹರಿಯ ಮೂರ್ತಿಯನೆ ನೆರೆ ನೋಡು | ಸುಜ್ಞನರನು ಕೊಂಡಾಡು ಅಜ್ಞಾನಿಗಳ ಸಹವಾಸ ಸುಡು | ವನಜನಾಭನ ಪೂಜೆಮಾಡು ಪ್ರತಿಕ್ಷಣ ಬಿಡದೆ ಭಗವದ್ಗುಣಗಳ ಕೊಂಡಾಡು ೧

ಪರಮಾಣು ಮೊದಲ್ಗೊಂಡವ್ಯಕ್ತತತ್ವದೊಳ ಹೊರಗೆ ವ್ಯಾಪಕನಾಗಿ ತದ್ರೂಪನಾಮದಿಂ | ಕರಿಸು ತಲಿತದ್ವಿಕಾರಗಳಲ್ಲದಲೆ ಸೃಷ್ಟಿ ಪರಿಪಾಲನ ವ್ಯಯಗಳನೆ ಮಾಡಿ ಮೋದಿಸುತಾ | ಪರಮಾತ್ಮನೊಬ್ಬನಿಹನೆಂದು ಹರಿಗೆ ಮರಿಯದಲೆ ಮಹಿಮೆಗಳು ಪೊಗಳುತಿರು ಮನುಜ ೨

ಹರಿಭಕ್ತರಿದ್ದೆಡೆಗೆ ಹರಿದು ಹೋಗಲುಬೇಕು | ತಿರ್ಯಕ್ಪುಂಡ್ರ ಧಾರಿಗಳ ನಿಂದಿಸಾಬೇಕು | ಹರಿಯ ನಾಮತ್ರಿಯಾಕಿಂತರಿಗೆರಗಲುಬೇಕು ಗುರುಹಿರಿಯರವ ಗುಣಗಳೆಣಿಸದಿರಬೇಕು | ಮ | ತ್ಸರವ ಬಿಡಬೇಕು ಭಕ್ತರಲಿ ಹೀಗೆ ವರದೊಂದು ಪೇಳುವರು ಬುಧರು ನಿಸ್ಪೃದಲಿ ೩

ನಿತ್ಯನೈಮಿತ್ತಕ ಸುಕರ್ಮ ಮಾಡಲುಬೇಕು। ಕೃತ್ಯವಲ್ಲದೆ ಲೋಕವಾರ್ತೆಗಳ ಬಿಡಬೇಕು । ಚಿತ್ತದಲಿ ಹರಿಪಾದ ಚಿಂತಿಸುತಿಲಿರಬೇಕು । ವಿತ್ತದೇಹಾಗಾರ ಭಗವಂತನದೆಂದು ದೇ । ಹತ್ಯಾಗ ಪರ್ಯಂತ ಮಾಳ್ಪಕರ್ಮ ಸತ್ಯ ಸಂಕಲ್ಪಕೆವು ಪೂಜೆಯೆನಬೇಕು ೪

ಶೀತೋಷ್ಣ ಸುಖದುಃಖ ಮಾನಾಪಮಾನ ಜಯ ಭೀತಿ ನಿರ್ಭೀತಿ ಅಪಜಯ ಜ್ವಾರಾಪಸ್ಮಾರ । ಭೂತ ಬಾಲಗ್ರಹ ಮೃಗ ಸರ್ಪನೃಪಚೋರಯಾತನೆಗೆ ಭಯಪಡದೆ ಸರ್ವತ್ರದಲಿ ಜಗ । ನ್ನಾಥ ವಿಠ್ಠಲನ ಸ್ಮರಿಸುತಿರು ಮಹಾಪಾತಕವ ಪರಿಹರಿಸಿ ಪೊರೆವ ದಯದಿಂದಾ ೫

ಶ್ರೀ ಪಾದರಾಜರೇ ಮೊದಲಾಗಿ ಎಲ್ಲ ಹರಿದಾಸರೂ ಇದರಂತೆ ಸಾಧನ ವಿಷಯವನ್ನು ಪ್ರಸ್ತಾಪಿಸಿರುವರು. ಪ್ರತ್ಯೇಕವಾದ ಸಾಧನಗಳ ವಿಷಯವನ್ನು ಹರಿದಾಸರು ವಿಸ್ತಾರವಾಗಿ ನಿರೂಪಿಸಿರುವರು.

(ಅ) ವೈರಾಗ್ಯ

ವೈರಾಗ್ಯವೇ ಸಾಧನಗಳಲ್ಲಿ ಮೊದಲನೆಯದು. ಈಸಂಸಾರ, ಐಹಿಕ ಜೀವನ, ರೂಪ, ಗಂಧ, ಮೊದಲಾದ ವಿಷಯಗಳು. ಹೆಂಡಿರು–ಮಕ್ಕಳು, ಧನ–ಧಾನ್ಯಗಳು ಕೊನೆಗೆ ತನ್ನ ದೇಹ. ಇವು ತನಗೆ ಸುಖಪ್ರದವಲ್ಲ; ಸುಖದಬಲೆಬೀಸಿ ಜೀವನನ್ನು ಗೋಂದಲಕ್ಕೆ ಸಿಕ್ಕಿಸಿ ಹಣ್ಣುಮಾಡಿಬಿಡುವುದು. ಇವೆಲ್ಲ ಅಸ್ಥಿರ; ಇವುಗಳನ್ನು ನೆಚ್ಚಬಾರದೆಂದು ವಿರಾಗವೇ ವೈರ್ಯಾಗ್ಯವೆನಿಸುವುದು. ಈ ಜಗತ್ತಿನ ವಿಷಯದಲ್ಲಿ ಸಲ್ಲದ ಪೂಜ್ಯ ಬುದ್ಧಿ ಹೋಗಿ ಅಲಂಬುದ್ದಿ–ಹೇಯತಾ ಜ್ಞಾನ ಉಂಟಾಗುವುದು. ವೈರಾಗ್ಯದಿಂದ, ಇಂತಹ ವೈರಾಗ್ಯ ಬೋಧನೆ ಸಾಮಾನ್ಯವಾಗಿ ಭಾರತದ ಎಲ್ಲ ದರ್ಶನಗಳಲ್ಲೂ ಕಂಡುಬರುವುದು. ಈ ವೈರಾಗ್ಯ ಕಲ್ಪನೆಯು ಭಾರತದ ರಾಷ್ಟ್ರಜೀವನಕ್ಕೆ ವಿಘಾತಕವಾಗಿ, ಜನತೆಯನ್ನು ಸತ್ವಹಿನರಾಗಿಮಾಡಿ ನಿರಾಶ ಭಾವನೆಯನ್ನು ಬೆಳೆಸುವುದೆಂದು ಪಾಶ್ಚಾತ್ಯ ಪಂಡಿತರನೇಕರು ಆಕ್ಷೇಪಿಸಿದ್ದಾರೆ. ಇದು ಸರಿಯಾದುದಲ್ಲ. ಈ ಪ್ರಪಂಚದ ಬಗ್ಗೆ ಸಲ್ಲದ ಪ್ರಲೋಭನೆಗಳನ್ನು ತೋರಿ, ಅದೇ ಸರ್ವಸ್ವವೆಂದು ನಂಬುವಂತೆ ಬೋಧಿಸುವ ನೀತಿಯೇ ಅಸಾಧುವಾದುದು. ಈಲೋಕದ ಇತಿಮಿತಿಯ ಅರಿವನ್ನು ಚೆನ್ನಾಗಿ ಮಾಡಿಕೊಟ್ಟು, ಈ ಪ್ರಪಂಚದಲ್ಲಿ ಪ್ರತಿಯೊಬ್ಬನ ಕರ್ತವ್ಯವೇನೆಂಬುದನ್ನು ತಿಳಿಸುವುದೇ ನಿಜವಾದ ಹಿತಸಾಧನೆ. ಇದಕ್ಕಾಗಿಯೇ ಗೀತೆಯು ಪ್ರವೃತ್ತವಾಯಿತು. ಯುದ್ಧದಲ್ಲಿ ಜಿಹಾಸೆ ಮೂಡಿ ಶಸ್ತ್ರಗಳನ್ನು ಚಲ್ಲಿಕೊಟ್ಟ ಅರ್ಜುನನಿಗೆ ಯುದ್ಧ, ಜಯ ಇವುಗಳ ಶುಭಫಲಗಳನ್ನು ಉತ್ಪ್ರೇಕ್ಷೆಮಾಡಿ ಅವುಗಳಲ್ಲಿ, ಅರ್ಜುನನಿಗೆ ಆಸೆಹುಟ್ಟುವಂತೆ ಭಗವಂತ ಮಾಡಲಿಲ್ಲ ಇದಲ್ಲದರ ಇಯತ್ತೆಯನ್ನು ತಿಳಿಸಿ , ಕ್ಷತ್ರಿಯನಾದ ಅರ್ಜುನನ ಕರ್ತವ್ಯವೇನೆಂಬು ಭಗವಂತ

ವಿವರವಾಗಿ ತಿಳಿಸಿದನು. ಇದರಿಂದಲೇ ಅರ್ಜುನನ ಮೋಹವು ನಷ್ಟವಾಯಿತು. "ನಿನ್ನ ಮಾತನ್ನು ನಡೆಸುತ್ತೇನೆಂದು'' ಮೈಕೊಡವಿಕೊಂಡರು ಎದ್ದ. ಇದೀಗ ವೈರ್ಯಾಗದ ಇತಿ ಕರ್ತವ್ಯತೆ. ದಾಸರುಗಳೊಬ್ಬೊಬ್ಬರೂ ಮಹಾ ವಿರಕ್ತರಾದ್ದರಿಂದಲೇ ಅವರಿಗೆ ವೈರಾಗ್ಯದ ಮಹತ್ವ ಚೆನ್ನಾಗಿ ತಿಳಿದಿದ್ದಿತು. ಅಂತೆಯೇ ಅವರು ಪುನಃ ಪುನಃ ಈಪ್ರಪಂಚದಲ್ಲಿ ಸಾಧಕನಿಗೆ ಅಲಂಬುದ್ಧಿ ಉಂಟಾಗುವಂತಹ ಉಪದೇಶಗಳನ್ನೊಳಗೊಂಡ ಪದಗಳನ್ನು ರಚಿಸಿದರು. ಹಿಂದುಮುಂದಿನ ಅಲೋಚನೆ ಇಲ್ಲದೆ ಗರ್ವಿಷ್ಟನಾದವನನ್ನು ದಾಸರು 'ನಿನಗೆ ಏನಿದೆಯೆಂದು ಇಷ್ಟು ಉನ್ಮತ್ತನಾಗಿದ್ದೀ' ಎಂದು ಪ್ರಶ್ನಿಸುತ್ತಾರೆ

ಕಾಂಬೋಧಿ–ಝಂಪೆ.

ಗರುವವ್ಯಾತಕೋ ನಿನಗೆ ಪಾಮರ ಮನುಜನೆ ಪ

ಧರೆಯೊಳಗೆ ಕುರುಪತಿಗೆ ಸರಿಯೆನ್ನಬಹುದೇ ಅ

ಬಲದಲ್ಲಿ ಹಲಧರನೆ ಛಲದಲ್ಲಿ ರಾವಣನೆ | ಕುಲದಲ್ಲಿ ವಸಿಷ್ಠ ಗೌತಮನೆ | ನೆಲೆಯಲ್ಲಿ ಭೃಗುಮುನಿಯೇ ನೇಮ | ದಲಿ ಗಾಂಗೇಯನೆ ಬಲುಮೆಯಲ್ಲಿ ವಾಲ್ಮೀಕಿ ಮುನಿಯೇನೊ ನೀನು ೧

ಹಟದಲ್ಲಿ ಪ್ರಹ್ಲಾದನೆ ದಿಟದಲ್ಲಿ ಧ್ರುವರಾಯನೆ ಶಠದೊಳಗೆ ವಿಶ್ವಾಮಿತ್ರನೇ ನೀನು | ನಿಟರೊಳು ಮನ್ಮಥನೆ ವೀರರೊಳು ಪ್ರಾರ್ಥನೆ | ಕುಟಿಲ ತನದಲ್ಲಿ ಶಕುನಿಯೇ ನೀನು ೨

ದಾನದೊಳು ಕರ್ಣನೆ ಗಾನದೊಳು ನಾರದನೆ | ಜ್ಞಾನದೊಳು ವ್ಯಾಸ ಶುಕಮುನಿಯೇ | ನೀನು ದೀನರಕ್ಷಕ ನಮ್ಮ ಪುರಂದರ ವಿಠ್ಠಲನ್ನ | ಧ್ಯಾನದೊಳು ಇದ್ದು ಭವ ನೀಗು ನೀನು ೩

ಸಂಸಾರದಲ್ಲಿ ತಂದೆತಾಯಿಗಳು, ಬಂಧುಗಳು, ಇಷ್ಟಮಿತ್ರರು, ಧನಧಾನ್ಯ ಇವರಾರೂ ಮನುಷ್ಯನ ಉದ್ಧಾರಕ್ಕೆ ಕಾರಣರಾಗಲಾರರು. ಆದ್ದರಿಂದ ಇವರುಗಳನ್ನು ಅಪೇಕ್ಷಿಸಿ ಫಲನೇನೆಂದು ಗೋಪಾಲದಾಸರು ಕೇಳುತ್ತಾರೆ.

ಧನ್ಯಾಸಿ–ಛಾಪು

ಏನಬೇಡಲಿ ನಿನ್ನ ಬಳಿಗೆಬಂದು | ನೀನಿತ್ತ ಸೌಭಾಗ್ಯ ನಿಬಿಡವಾಗಿದೆ ಪ

ಜನನಿಯಕೊಡು ಎಂದು ಜಗದೀಶ ಬೇಡುವೆನೆ ಜನನಿಏನಿತ್ತಳಾ ಧ್ರುವರಾಯಗೆ |
ಜನಕನಕೊಡು ಎಂದು ಜಯವಂತ ಬೇಡುವನೆ ಜನಕನೇನಿತ್ತನಾ ಪ್ರಹ್ಲಾದಗೆ ೧

ಅನುಜನಾಕೊಡು ಎಂದು ಅತಿಶಯದಿಬೇಡುವವನೆ ಅನುಜನೇನಿತ್ತನೈ ಆವಾಲಿಗೆ ಧನದನೇಕೊಡು ಎಂದು ಧೈನ್ಯದಿಲಿಬೇಡುವನೇ ಧನಗಳಿಸಿದ ಸುಯೋಧನ ನೇನಾದಕೊನೆಗೆ ೨

ಸತಿಯಳಕೊಡು ಎಂದು ಮತಿವಂತಬೇಡುವೆನೆ ಸತಿಯಿಂದ ದ್ಯುನಾಮ ವಸು

ಏನಕಂಡ | ಸುತರನೇಕೊಡು ಎಂದು ಸುಖದಿ ನಾಬೇಡುವೆನೆ ಸುತರಿಂದ ಧೃತರಾಷ್ಟ್ರ ಗತಿಯೇನು ಕಂಡ ೩

ಬಂಧಗಳಕೊಡು ಎಂದು ಚೆಂದದಲಿಬೇಡುವೆನೆ ಬಂಧುಗಳೇನಿತ್ತ ರಾಗ ಜರಾಜಗೆ ಅಂದಣವ ಏರುವ ಭಾಗ್ಯವನೆ ಬೇಡುವನೆ ಅಂದಣೇರಿದ ನಹುಷ ಏನಾದಕೊನೆಗೆ ೪

ಈ ಸಂಸಾರದಲ್ಲಿ ಅನಂತಸುಖವನ್ನು ಕಾಣಬೇಕೆಂಬ ಹವಣಿಕೆಯಿಂದ ಅನೇಕ ಸುಖಸಾಮಗ್ರಿಗಳನ್ನು ಸಾಧಿಸಿ, ಅವಾವುದರಿಂದಲೂ ಸುಖವನ್ನು ಕಾಣದೆ ಬವಣೆ ಪಟ್ಟವರ ನಿದರ್ಶನದಿಂದಲೂ ಸಂಸಾರ ಸುಖಕರವೆಂಬ ನೆಚ್ಚಿಗೆಯನ್ನು ಬಿಡೆಂದು ಶ್ರೀಪಾದರಾಜರು ಹಿತೋಕ್ತಿಗಳನ್ನು ನುಡಿದಿದ್ದಾರೆ.

ಕಲ್ಯಾಣಿ—ಝಂಪೆ.

ಅಕಟಕಟ ಸಂಸಾರವನುನೆಚ್ಚಿಕೆಡಬೇಡ |ವಿಕಟದಲಿಮಾನವರು ಕೆಟ್ಟರೆಲ್ಲರುನಿಜ |

ಮುನ್ನ ನರಕಾಸುರನು ಬಡಿದು ಚಿಂತಾಮಣಿಯ ತಂದು | ಮನೆಯಲಿ ತಂದು ನಿಲಿಸಿ ನೃಪರ | ಕನ್ಯೆಯರ ಷೋಡಶಸಹಸ್ರವನೆ ತಂದಾತ | ಹೆಣ್ಣನೊಬ್ಬಳ ನೈದಲಿಲ್ಲವೋ ನೋಡೋ | ೧

ಸಾವಿರ ಕರಪಡೆದ ಕಾರ್ತವೀರ್ಯಾರ್ಜುನನು | ಭೂವಲಯದೊಳಗೊಬ್ಬನೆ ವೀರನೆನಿಸಿ | ರಾವುಣನ ಸೆರೆಯಿಟ್ಟು ಕಾಮಧೇನುವ ಬಯಸಿ | ಸಾವಾಗ ಏನು ಕೊಂಡೋಯ್ದನೋ ನೋಡೋ | ೨

ಇದರಂತೆ ದುರ್ಯೋಧನ ನಹುಷರ ದೃಷ್ಟಾಂತಕೊಟ್ಟು, ಇದಕ್ಕೆ ವಿಪರೀತವಾಗಿ ವಿಭೀಷಣ ಹನುಮಂತ ದೇವರುಗಳು ಹೇಗೆ ಉದ್ಧೃತರಾದರೆಂದು ತಿಳಿಸಿದ್ದಾರೆ.

ಆನಂದಭೈರವಿ—ತ್ರಿಪುಟತಾಳ

ಗೋವಿಂದಾ ನಮೋ ಗೋವಿಂದಾ ನಮೋ ಗೋವಿಂದಾ ನಾರಾಯಣ ಪ

ಗೋವರ್ಧನಗಿರಿಯನೆತ್ತಿದ ಗೋವಿಂದ ನಮ್ಮ ರಕ್ಷಿಸೈ ಅ

ಮಂಚಬಾರದು ಮಡದಿಬಾರಳು ಕಂಚುಕನ್ನಡಿಬಾರದು ಸಂಚಿತಾರ್ಥದ ದ್ರವ್ಯಬಾರದು ಮುಂಚೆ ಮಾಡಿರೋ ಧರ್ಮವ ೧

ಪುರಂದರದಾಸರ ಈ ಪದವು ವಿಷ್ಣುತೀರ್ಥರದೆಂದು ಪ್ರಸಿದ್ಧರಾಗಿ ಭಾಗವತ ಸಾರೋದ್ಧಾರ ರಚನೆ ಮಾಡಿದ ಮಹನಿಯರಿಗೆ ವೈರಾಗ್ಯವನ್ನು ಹುಟ್ಟಿಸಿತೆಂಬ ಐತಿಹ್ಯವು ಸುಪ್ರಸಿದ್ಧವಾಗಿದೆ. ಕನ್ನಡನಾಣ್ನುಡಿಯಲ್ಲಿ ಹೆಣ್ಣು, ಹೊನ್ನು, ಮಣ್ಣು ಎಂಬುದು ಪ್ರಸಿದ್ಧವಾದುದು. ಈ ಮೂರೂ ಮನುಷ್ಯನಿಗೆ ದುಃಖಕೊಡುವುದೇ ಹೊರತು, ಇವುಗಳಲ್ಲಿ ಯಾವುದೂ ಸುಖವನ್ನು ತಂದೀಯಲಾರದೆಂದು ಶ್ರೀ ಪುರಂದರದಾಸರು ಹೇಳುತ್ತಾರೆ.

ಮುಖಾರಿ–ಝಂಪೆ.

ಆರು ಹಿತವರು ನಿನಗೆ ಮೂರು ಮಂದಿಗಳೊಳಗೆ | ನಾರಿಯೋ ಧಾರುಣಿಯೋ ಬಲುಧನದ ಸಿರಿಯೋ | ಪ

ಅನ್ಯರಲಿ ಜನಿಸಿರ್ದ ಅಂಗನೆಯ ಕರೆತಂದು | ತನ್ನ ಮನೆಗವಳ ಯಜಮಾನಿ ಯೆನಿಸಿ| ಭಿನ್ನವಿಲ್ಲದರ್ದದೇಹವನಿಸುವ ಸತಿಯು | ಕಣ್ಣಿನಲಿ ನೋಡಲಮ್ಮಳು ಕಾಲವಶದಿ | ೧

ಮುನ್ನ ಶತಕೋಟಿ ರಾಯರುಗಳಾಳಿದ ನೆಲವು| ತನ್ನದೆಂದನುತ ಶಾಸನವ ಬರೆಸಿ | ಬಿನ್ನಣದ ಮನೆಕಟ್ಟಿ ಕೋಟೆಕೊತ್ತಲವಿಕ್ಕಿ | ಚೆನ್ನಿನಗನಸುವಳಿಯೆ ಹೊರಗೆ ಹಾಕುವರು ೨

ಉದ್ಯೋಗ ವ್ಯವಹಾರ ನೃಪಸೇವೆ ಕುಶಲಗತಿ | ಕ್ಷುದ್ರತನ ಕಳವು ಪರ ದ್ರೋಹದಿಂದ | ಬುದ್ಧಿಯಿಂದಲೆ ಗಳಿಸಿ ಸಿಕ್ಕದಂತರ್ಥವನು | ಸದ್ಯದಲ್ಲಾರು ಎಂಬವರ್ಹೇಳು ಮನುಜ ೩

ಮನುಷ್ಯ ಜೀವಿತದ ಚರಿತ್ರೆಯನ್ನು ಮೊದಲಿನಿಂದ ನೋಡಿದಲ್ಲಿ ಅವನು ಕೇವಲ ಅಸಹಾಯ, ಅವನ ಹತ್ತಿರದ ಸಾಮಗ್ರಿಗಳೆಲ್ಲ ಅಶಾಶ್ವತ, ಯಾವುದೂ ಅವನಿಗೆ ಹಿತಪ್ರದವಲ್ಲವೆಂದು ಪುರಂದರದಾಸರು ಹೇಳುವರು.

ಮುಖಾರಿ–ಝಂಪೆ.

ಸಾಕು ಸಾಕಿನ್ನು ಸಂಸಾರ ಸುಖವು |
ಶ್ರೀಕಾಂತ ನೀನೊಲಿದು ಕರುಣಿಸೈ ಹರಿಯೇ ಪ

ಉದಸಿದವು ಪಂಚಭೂತಗಳಿಂದ ಔಷಧಿಗಳುದಿಸಿದವು ಔಷಧಿಗಳಿಂದನ್ನವು | ಉದಿಸಿದವು ಅನ್ನದಿಂ ಶುಕ್ಲಶೋಣಿತವೆರಡು ಉದಿಸಿದವು ಸತಿ ಪತಿಗಳ್ಳೀರೊಳು ಹರಿಯೇ ೧

ಸತಿಪತಿಗಳೊಂದಾಗಿ ರತಿಕ್ರೀಡೆಗಳಮಾಡೆ | ಪತನವಾದಿಂದ್ರಿಯವೆ ಹೊಲೆ ರಕ್ತವು | ಋತುಕಾಲದೊಳಗೆರಡು ಏಕತ್ರ ಸಂಧಿಸಲು ಗತಿಸಿದವು | ಮಾಸ ಒಂದಿರ್ವರೊಳು ಹರಿಯೇ ೨

ಬಾಲ್ಯದಲಿ ಕೆಲವು ದಿನ ಬರಿದೆ ಹೋಯಿತು ಹೊತ್ತು ಮೇಲೆ ಗೋಳಿಟ್ಟು ವಿದ್ಯೆಗಳ ಕಲಿತು | ಮೇಲೆ ಯೌವನ ಬರಲು ತನು ಮೂಲವನೆ ಮರೆತು | ಬಾಲೆಯರ ಬಯಿಸಿ ನಾ ಮರುಳಾದೆ ಹರಿಯೇ ೩

ದಿಟ್ಟತನದಲಿಗಳಿಸಿ ತರುವಾಗ ಸತಿಸುತರು ಕಟ್ಟಿಕೊಂಡಿಹರು ತನುವು ಬಿಟ್ಟ ಬಳಿಕ | ಕಟ್ಟಿಕೊಂಡಳು ಪ್ರಹೋಯೆಂದು ಗೋಳಿಟ್ಟಂಜಿ ಮುಟ್ಟದೆ ದೂರದಲೆ ನಿಂದಿಹರು ಹರಿಯೇ ೧೦

ಶಂಕಾರಭರಣ—ಝಂಪೆ

ನೆಚ್ಚದಿರು ಸಂಸಾರಕಡೆಗೆ ಹಾಕುವುದಲ್ಲ |ಮಚ್ಚುಗೊಳಿಸುವುದು ವಿಷಯದಲಿ | ಎಚ್ಚತ್ತು ಪ್ರವರ್ತಿಸು ಇನ್ನಾದರೂ ಸರಿ |ಅಚ್ಚುತನ ಪಾದವನು ನಂಬೋ ಪ್ರಾಣಿ | ಅ

ಆ ದೀರ್ಘ ಪದದಲ್ಲಿ ವಿಜಯದಾಸರು ಮಾರ್ಮಿಕವಾಗಿ ಉಪದೇಶಿಸಿದ್ದಾರೆ. ತನ್ನ ದೇಹವು ಇಷ್ಟೇ ಎಂದು ಕನಕದಾಸರು ನುಡಿದಿದ್ದಾರೆ.

ಮಧ್ಯಮಾವತಿ

ತಾನ್ಯಾರೋ ತನ್ನದೇಹವ್ಯಾರೋ ದಿವ್ಯ |ಜ್ಞಾನದಿಂದ ತಿಳಿದವನೆ ಪರಮಯೋಗಿಪ

ಸೂತಿಕಾವಸ್ಥೆಯಲಿ ನವಮಾಸ ತುಂಬಿದ ಬಳಿಕ | ಭ್ರಾಂತಿಯಲಿ ಬಂದು ಒಂದೊಡಲವರೆಸಿ | ಪಾತಕವೆ ಬಂದು ಮೂರುತಿಯಾದ ತನುವೆಂದು | ತಾ ತಿಳಿದು ಸಿಕ್ಕದವನೆ ಪರಮ ಯೋಗಿ ೧

ಘೋರ ನರಕದ ತನುವು ಎಂದು ಮನದಲಿ ತಿಳಿದು | ಗೇರುಹಣ್ಣಿನ ಬೀಜದಂತೆ ಹೊರಗಿದ್ದು | ಮಾರಪಿತ ಕಾಗಿನೆಲೆಯಾದಿಕೇಶವ ಪಾದ | ವಾರಿಜವ ನೆನೆದವನೆ ಪರಮಯೋಗಿ ೩

ತನ್ನ ದೇಹವೇ ಇಷ್ಟು ಘೃಣಾಸ್ಪದವಾದ ಮೇಲೆ ಅದಕ್ಕೆ ಸುಖ ಕೊಡುವ ಹೆಣ್ಣಿನ ಮೋಹ, ವಿಷಯದ ಹಂಬಲದ ಪರಿ ಇನ್ನೇನು ? ಅದನ್ನು ಗೋಪಾಸದಾಸರು ಮಾರ್ಮಿಕವಾಗಿ ವರ್ಣಿಸುತ್ತಾರೆ.

ಮೋಹನ—ಝಂಪೆ.

ವಿಷಯಸಂಗದಲಿಂದ ಕುಶಲವನು ಬಯಸಿದರೆ
ಹಸನಾಗಿ ತೋರುವುದೆ ನಿನಗೆ ಪ
ಅಸಮ ಜ್ಞಾನಿಗಳಧಿಯು ಮಸುಳಿ ಮರಳಾಗುವುದು
ಮಶಕ ನಿನಗಾವನೆಲೆಯೋ ಮನುಜ ಅ

ಭರತರಾಯನ ನೊಡು ಹರಿಣ ಕುಣಪನು ಪೋಗೆ ಒಲಲೊರಲಿ ಪ್ರಾಣ ಬಿಡನೆ ಮರಳಿ ಎರಳೆಯ ಜನ್ಮವನುಭವಿಸಿ ಸಂಗವನು ಥರೆವಲ್ಲವೆಂದು ಮೊರೆಯಿಡನೆ ಮನುಜ ೧

ಮೌನಿವಿಶ್ವಾಮಿತ್ರ ತಾನು ಊರ್ವಸಿಕೂಡಿ | ಶ್ವಾನನಾಗುತ ಪೋದನು ಏನೆಂಬೆ ದೇಹದಲಿ ಹೀನತ್ವವೈದಿ ನಿತ್ರಾ | ಣನಾದನು ನೋಡಲೋ ಮನುಜ ೨

ವಿಷಯದಲಿ ಮನಸ್ಸನ್ನಿಕರ್ಷಕವಾದರೆ ನಿನ್ನ | ವಶಕೆ ಬರಬರಿಯದಯ್ಯ ಎಸವ ಶ್ರುತಿ ಸ್ಮೃತಿಯೆಂಬ ನಿತ್ರಾಣದಲಿ | ಮಸೆ ಮಸೆದಿ ವಶ ಮಾಡಿಕೋ ಬಿಡದಲೇ ಮನುಜ ೬

ಈಶಣತ್ರಯ ನಿನಗೆ ಮೋಸಗೊಳಿಸಿ ಕಡೆಗೆ | ನಾಶವಾಗುವುದು ಕಾಣೋ |ವಾಸು

ದೇವನ ಪರಮದಾಸರ ಕರುಣವನು । ಲೇಸಾಗಿ ಪೊಂದಿ ಸುಖಿಸೋ ಮನುಜ ೮

ಇಷ್ಟು ದುಃಖಕ್ಕೆ ಕಾರಣವಾದ ಅಸ್ಥಿರವಾದ ದೇಹ, ಬಂಧುಗಳು, ವಿಷಯಸುಖ ಇವನ್ನು ನಂಬದೇ ಹರಿಯ ಪಾದವನ್ನು ಭಜಿಸಿ ಉದ್ಧೃತರಾಗಬೇಕೆಂದು ವಾದಿರಾಜರು ಉಪದೇಶಮಾಡಿರುವರು.

ಕಾಂಭೋದಿ–ಝಂಪೆ.

ಗುರು ಹಿರಿಯರನುಸರಿಸಿ ಹರಿಯ ಮನದೊಳಗಿರಿಸಿ
ಪರಗತಿಯ ಬೇಗ ಸಾಧಿಸಿ ಕೊಳ್ಳಿರೋ ಪ

ಕಂಬಳಿಯ ಬುತ್ತಿಯಂತೀದೇಹದೊಳಗೆ ಸುಖವೆಂಬುದಿಲ್ಲವು ಎಲ್ಲ ದುಃಖ ಭರಿತ ಅಂಬುಜಾಕ್ಷನ ದಿವ್ಯ ।ಮಂಗಳ ಕಥಾಮೃತವನುಂಬ ಸಂಭ್ರಮಕೆ ನಾಸರಿ ಗಾಣೆನಯ್ಯ೧

ಮಕ್ಕಳುಗಳಳುವಾಗ ಮಡದಿಯರು ಜರಿಯುವಾಗ ಭಿಕ್ಷುಕರು ಒಂದೆಮ್ಮ ಬೈಯುವಾಗ ।ಇಕ್ಕಿ ಪೊರೆವುದಕೆ ದಾರಿದ್ರರಿಗೆ ಸೌಖ್ಯವೆತ್ತಣದೋ ಮನುಜಾನ್ನ ಭೋಕ್ತರಿಗೆ೨

ಜರೆ ಬಂದು ಕಡೆಯಲ್ಲಿ ಘುರು ಘುರುರೆನಿಸಲು ತಮ್ಮಶರೀರ ಸಂಬಂಧಿಗಳ ಹಲವು ಕಾಟ ।ತರುಣಿಯರ ಮೇಲಾಸೆ ತಮ್ಮ ಹಿತವರಿಯದೆ ನಿರಯದಲಿ ಬೀಳುವುದೇ ಫಲಸಿದ್ಧಿಯೈಯ್ಯ ೩

ವೇದ ವೋದಣವಿಲ್ಲ ಶಾಸ್ತ್ರ ಜಪ ಹೋಮಾದಿ ಸಾಧು ಸತ್ಕರ್ಮಗಳ ಸರಕು ಇಲ್ಲ । ಮಾಧವನ ಪೂಜಿಸಿ ಮೋದಪಟ್ಟದ್ದಿಲ್ಲ ಪಾದದಲಿ ತೀರ್ಥಯಾತ್ರೆಗೆ ಪೋಗಲಿಲ್ಲ. ೪

ಒಂಭತ್ತು ಛಿದ್ರವಾಗಿಹ ದೇಹಭಾಂಡದೊಳು ತುಂಬುತ್ತು ವಾಯು ತಾ ಸ್ಥಿರವಲ್ಲವು । ನಂಬಿ ನೆಚ್ಚಿರಬೇಡ ಹಯವದನ ಹರಿಯ ಪಾದಾಂಬುಜಗಳ ಬಿಡದೆ ಸೇರಿ ಬದುಕಿರೈಯ್ಯ ೫

ಆದ್ದರಿಂದ ಈ ಪ್ರಪಂಚದಲ್ಲಿ ಯಾವುದನ್ನು ಬಿಡಬೇಕು ಯಾವುದನ್ನು ಆಚರಿಸಬೇಕೆಂಬುದನ್ನು ಹೇಳುತ್ತಾರೆ.

ಮೋಹನ–ಆಟ

ವಿಷಯದ ವಿಚಾರಬಿಡು ವಿಹಿತ ಕರ್ಮವ
ಮಾಡು ವೈರಾಗ್ಯ ಭಾಗ್ಯಬೇಡು ಪ
ವಿಷವೆಂದು ಕಾಮಕ್ರೋಧಗಳೆಲ್ಲ ನೀಡಾಡು ।
ಮಸಣಮನವೇ ಮಾಧವನ್ನ ಕೊಡಾಡು ಅ

ಅನುದಿನವು ಹರಿಕಥೆಯ ಕೇಳಿ ಸಂತೋಷಪಡು ।ವಿನಯದಿ ಸಜ್ಜನರ ಕೂಡು । ಮನಮುಟ್ಟಿ ದುರಾಚಾರ ಮಾಳ್ಪರನು ನೀ ಕಾಡು । ಹಣ ಹೊನ್ನು ಪರಹೆಣ್ಣು ಹೆಂಚೆಂದು ನೋಡು ೧

ವೇದ ಶಾಸ್ತ್ರಾರ್ಥತತ್ವದವಿಚಾರವ ಮಾಡು | ಮಾಧವನ ಭಕ್ತಿ ಬೇಡುಪಾದದಿಂದಲಿ | ತೀರ್ಥಯಾತ್ರೆಗಳ ನೀ ಮಾಡು | ಖೇದಪಡದನುದಿನದಿ ಸಂತೋಷ ಕೂಡು೨

ನಂಬದಿರು ಈ ದೇಹ ಅಂಬುಗುಳ್ಳೆಯಂತೆ | ನಂಬಿ ನೀ ಕೆಡಲು ಬೇಡ ಕೊಂಬುವರು | ಬಂದರೆ ಕೊಡರೊಂದು ರುಪ್ಪಿಯನು ಅಂಬುಜಾಕ್ಷ ಪುರಂದರ ವಿಠ್ಠಲನ್ನ ನೆನೆಮನವೆ ೩

ವೈರಾಗ್ಯವೆಂದರೆ ಬಲಾತ್ಕಾರದಿಂದ ಹೊರಗಿನ ಸಂಪರ್ಕವನ್ನು ಬದಿಗೊತ್ತಿ, ಮನಸ್ಸಿನಲ್ಲೇ ವಿಷಯಗಳಿಗಾಗಿ ಹಾತೋರೆಯುವ ಮಾರ್ಗವಲ್ಲ. ಅಂತಹ ವೈರಾಗ್ಯ ಮನುಷ್ಯನ ವ್ಯಕ್ತಿತ್ವವನ್ನು ಸುಂಡಿಸಿಬಿಡುವುದು. ವಿಷಯಗಳ ತುಚ್ಛತೆಯನ್ನು ಮನವರಿಕೆಮಾಡಿಕೊಂಡು, ಅವುಗಳ ಮಧ್ಯದಲ್ಲಿದ್ದರೂ ಅವುಗಳಲ್ಲಿ ಅಭಿಲಾಷೆಯನ್ನು ಸಂಪೂರ್ಣನಾಗಿ ತ್ಯಜಿಸಿದರೆ ವೈರಾಗ್ಯವನ್ನು ಸರಿಯಾಗಿಪಡೆದಂತೆ. ಗೀತೆಯಲ್ಲಿ ಇದರ ಸ್ಪಷ್ಟವಾದ ವಿವರಣೆಯಿರುವುದನ್ನು ಗೋಪಾಲದಾಸರು ವೈರಾಗ್ಯ ಸುಳಾದಿಯಲ್ಲಿ ವೈರಾಗ್ಯದ ವಿಸ್ತಾರವಾದ ನಿರೂಪಣೆಯನ್ನು ಕೊಟ್ಟಿರುವರು.

ಧ್ರುವತಾಳ

ವೈರಾಗ್ಯಮಾರ್ಗ ಕೇಳು ದಾರಿದ್ರ್ಯ ಮಾರ್ಗ ಕೇಳು | ಶ್ರೀ ರಮಣನ ಪದ ವಾರಾಧಿಸುವುದಕ್ಕೆ | ನಾರಿಯರು ಧಾರಿಣಿಯ ಧನವ ಬಿಟ್ಟರಾಯಿತೆ | ವೈರಾಗವಲ್ಲ ಕಂಡ ಧೀರರಿಗೆ | ಶರೀರಕಾ—ಪಾದಭಸ್ಮ ಧರಿಸಿಕೊಂಡು ಚೇರವಸ್ತ್ರವನುಟ್ಟು ತಿರುಗಾಡುತಿರಲಾಗ | ಆರಾದರೂ ಅವನ ಅವಧೂತನೆಂತೆಂದು | ಸಾರಿ ಸಾರಿಗೆ ಇನ್ನು ಕರೆವರಯ್ಯ | ವೈರಾಗ್ಯ ವೆಂಬಂಥ ವಾರುತೆ ಯೊಂದಲ್ಲದೆ | ನಾರಾಯಣಗೆ ಇದು ಪ್ರಿಯವಲ್ಲ | ನಾರಿ ಸುತರುಗಳು ಶರೀರ ಸಂಬಂಧಿ | ಗರು ಎಂತಂದಿರಬೇಕು | ನೀರಿನೊಳಗೆ ಇನ್ನು ಕಮಲವು ಇದ್ದಂತೆ | ಕಾರಣವಾಗಿ ಕಾಯವಿಲ್ಲದಿರಲಿ ಬೇಕು | ಮಾರಜನಕ ನಮ್ಮ ಗೋಪಾಲವಿಠ್ಠಲನು | ತೋರಿಕೊಟ್ಟ ವೈರಾಗ್ಯವನು ತೋರುವೆನು |

ಮಠ್ಯತಾಳ

ಸ್ವಯೋಗ್ಯತೆಯೊಳಗೆ ಆಯತವಾದದ್ದು | ನೋಯದೆ ಉಣವುದೆ ನ್ಯಾಯದ ವೈರಾಗ್ಯ | ಆಯಾಸ ಪಡದೆ ಪರರ ಶ್ರೇಯಸ್ಸು ನೋಡಿ | ಶ್ರೀಯರಸನಿತ್ತನೆಂಬುದೆ ವೈರಾಗ್ಯ | ನೇಹದಿ ಹರಿಯಿತ್ತ ಕರ್ತೃತ್ವವು ಎನಗೆ | ನೀಯಲ್ಲದೆ ಎನ್ನಿಂದಾಗದೆಂತಿಪ್ಪುದೆ ನ್ಯಾಯದ ವೈರ್ಯಾಗ್ಯ | ಮಾಯಾರಹಿತ ದೇವಗೋಪಾಲ ವಿಠನ್ನ | ಪ್ರೀಯದಿ ನೆಚ್ಚಿ ಅನ್ಯಕೆರಗದಿಪ್ಪುದೆ ವೈರಾಗ್ಯ |

ಅಟತಾಳ

ಆಗ ಭೋಗಂಗಳು ಆಗದೆ ಇರಲೇಕೆ | ಯಾಗಂಗಳನು ಮಾಡಿ ಹರಿಗರ್ಪಿಸಿ ಸಮ | ಭಾಗವೆರಡು ಹರಿಯಿಂದಾದುದು ಎಂದು | ಭೋಗಿಸುತಿಪ್ಪುದೇ ವೈರಾಗ್ಯ

ವೈರಾಗ್ಯ | ಕಾಗೆಯಂತೆ ಮೈಯ್ಯ ಕರ‍್ರಗೆ ಮಾಡಿಕೊಂಡು | ರೋಗ ಬಂದೆಮ್ಮೆಯಂತೆ ನಾಮ ಬರೆದುಕೊಂಡು | ಭೋಗದವಸ್ತು ಪರಿತ್ಯಾಗವ ಮಾಡಿನ್ನು | ಆಗುವ ಕಾರ್ಯಗಳಾಗುತ್ತಲಿರೆ ಅಂತೆ | ಹೇಗೆ ಜನರ ಕಾಂಬಹಾಗೇವೆ ಬಾಹಿರ | ವೈರಾಗ್ಯವನ್ನು ಮಾಡೆ ವೈರಾಗ್ಯವಲ್ಲವೋ | ನಾಗಶಯನ ನಮ್ಮ ಗೋಪಾಲವಿಠ್ಠಲ ನಮ್ಮ | ತಾಗಿ ಉಣಿಸಿದ್ದುಂಡು ಇಪ್ಪುದೆ ವೈರಾಗ್ಯ |

ಜೊತೆ

ಅರಿಯದ ವೈರಾಗ್ಯ ಹರಹಿಕೊಂಬುದಕಿಂತ |
ಅರಿತು ಮೊರೆಹೋಗಿರೋ ಗೋಪಾಲವಿಠಲನ್ನ |

(ಆ) ಸತ್ಕರ್ಮಾಚರಣೆ

ಸ್ನಾನ, ಸಂಧ್ಯಾ, ಜಪ–ತಪಾದಿಕರ್ಮಾನುಷ್ಟಾನವು ವೈರಾಗ್ಯಕ್ಕೆ ಹೊಂದಿಕೊಂಡಿರುವ ಸಾಧನ. "ಗಹನಾ ಕರ್ಮಣೋ ಗತಿಃ'' ಎಂಬ ಗೀತೋಕ್ತಿಯಂತೆ ಕರ್ಮದ ಸೂಕ್ಷ್ಮವು ಗಹನವಾದದ್ದು. ಇದರಲ್ಲಿ ಅನುಸರಿಸಬೇಕಾದ ನಿಯಮ ಬಹಳ. ಧರ್ಮಶಾಸ್ತ್ರಗಳಲ್ಲಿ ಇವುಗಳ ವಿಸ್ತಾರವಾದ ನಿರೂಪಣೆಯು ಕಂಡುಬರುವುದು. ದಾಸರುಗಳು ಇವನ್ನೆಲ್ಲಾ ಸಂಗ್ರಹಿಸಿರುವರು.

(i) ದೀಕ್ಷೆ

ಸತ್ಕರ್ಮಾಚರಣೆಗೆ ಮೊದಲ ಅಂಗವಾಗಿ ದಾಸರುಗಳು ಮತದೀಕ್ಷೆಯವಿಚಾರ ಬಹಳ ಹೇಳಿರುವರು. ವಿಜಯದಾಸರ ದೀಕ್ಷ ಸುಳಾದಿಯು ಈ ವಿಷಯದಲ್ಲಿ ಸ್ಪಷ್ಟವಾಗಿದೆ.

ಧ್ರುವತಾಳ

ಹರಿಯೇ ನಿನ್ನಾಧೀನ ಜ್ಞಾನೇಂದ್ರಿಯಂಗಳು | ಹರಿಯೇ ನಿನ್ನಾಧೀನ ಕರ್ಮೇಂದ್ರಿಯಂಗಳು | ಹರಿಯೇ ನಿನ್ನಾಧೀನ ಪಂಚಭೂತಾತ್ಮಗಳು | ಹರಿಯೇ ನಿನ್ನಾಧೀನ ಮನಚಿತ್ತಾದಿಗಳು | ಹರಿಯೇ ನಿನ್ನಾಧೀನ ಸಕಲ ಚೇತನವು | ಹರಿಯೇ ನಿನ್ನಾಧೀನ ಸಕಲ ಚೇಷ್ಟೆಗಳು | ಹರಿಯೇ ನೀ ನೇಮಿಸಿದ ಕಾರಣ ಎನ್ನ ಶ | ರೀರದೊಳಗೆ ಭರಿತವಾಗಿದೆ ಹೊರಗಿದ್ದ | ಸರಕು ಬೆಲೆ ಮಾಡಿದಂತೆ ಈ | ಸರಕು ಧನವನಿತ್ತು ತುಂಬಲಿಲ್ಲ ಎನ್ನ | ಮರೆದುಬಿಡವದಲ್ಲ ಬಿರುದುಳ್ಳ ದೈವವೇ | ಕುಣಿಸಿದರೆ ಕುಣಿವೆ ನಗಿಸಿದರೆ ನಗುವೇ | ಮಣಿಸಿದರೆ ಮಣಿವೆ ಅಳಿಸಿದರೆ ಅಳುವೆ | ಉಣಿಸಿದರೆ ಉಣುವೆ ಉಡಿಸಿದರೆ ಉಡುವೆ | ಮನುಜವೇಷನೆ ಸಿರಿ ವಿಜಯವಿಠಲ ನೀನೆ | ದಣಿಸಿದರೆ ದಣಿವೆ ನೆನವಿತ್ತರೆ ನೆನೆವೆ |

ತ್ರಿಪುಟತಾಳ

ತಪ್ತಮುದ್ರೆಗಳಿದಂಥ ಮಾನವ ನಿನ್ನ | ಅಪರೋಕ್ಷೀಕರಿಸಿ ಪ್ರತ್ಯಕ್ಷ ಕಾಣುತಿ

ರಲು | ಉಪಚಾರವನುಮಾಡೆ ಜನ್ಮಾಂತರಕೆ ನಾನು | ತಪಸಿಯಾದರು ನಾನು ನಮಿಸೆನೋ ನಮಿಸೇನೋ | ಅಪವರ್ಗವಾಗಲಿ ಸ್ವರ್ಗವಾಗಲಿ ಯಮನು | ಕುಪಿತದಲಿವ್ವೆದು ತಪಿಸಿದರಾದರು | ಕಪಿಯ ಕೈಯಲ್ಲಿ ಮಣಿಯ ಜಪಮಾಲೆ ಸಿಕ್ಕಿದಂತೆ | ತಪ್ತಮುದ್ರಾಹೀನ ನಿನ್ನ ನೋಡಿದರೇನು | ಗುಪಿತಮಹಿಮ ಎನ್ನ ಒಡೆಯ ವಿಜಯ ವಿಠಲ | ಕೃಪೆಮಾಡಿದರು ಲೇಸೆ ಇಲ್ಲದಿದ್ದರೂ ಲೇಸೆ |

ಅಟತಾಳ

ಶಿವನ ತ್ರಿಶೂಲ ವೈಶ್ರವಣನ ಖಡ್ಗವು | ಜವನ ದಂಡ ವೃದ್ಧಶ್ರವನ ವಜ್ರಾಯುಧ | ಪವನ ಸಖನ ಶಕ್ತಿ ವರುಣನ ಪಾಶವು | ಕೋಪದಲ್ಲಿ ದಾನವನು ಪಿಡಿದ ಕುಂತ | ದಿವಿಜರ ಮಿಕ್ಕಾದ ನಿವಹಕ್ಕೈದುಗಳೆಲ್ಲ | ತನಕದಿಂದ ಬಂದವಗಡಿಸಿದ ರೇನು | ಪವಮಾನ ಮತವನ್ನು ಮಾನವನು ತೊರೆದಿರೆ | ಅವನ ವಹಿಸಿಕೊಂಡು ಇವು ಎಲ್ಲಾ ಬರಲ್ಯಾಕೆ | ಪವಮಾನಗತಿ ಪ್ರೀಯ ವಿಜಯ ವಿಠ್ಠಲರೇಯ | ಅವರ ಪ್ರೇರಕ ನಿನ್ನವರ ಪಾಲಕನೀ |

ಆದಿತಾಳ

ಗುರು ಮುನಿದರೆ ಕಾಯಲರಿಯ ಹರಿಯೆಂಬೋರು | ಹರಿಮುನಿದರೆ ಗುರು ಪರಿಹರಿಸುವನೆಂದು | ಚರಾಚರದಲಿ ಇದೇ ಸ್ಥಿರವಾಗಿ ಇರಲಿಕ್ಕೆ | ಹರಿ ನಿನ್ನ ನೆನಿಸಿ ವೃಕೋದರನ ನೆನೆಸದವನು | ಹಿರಿಯನಾದರೆ ಏನು ಕಿರಿಯನಾದರೆ ಏನು | ಥರವಲ್ಲ ಮನ್ನಣೆಗೆ ಪರಕೆದೂರನು ಕಾಣೋ | ಸರಿವೆ ಅವನಲ್ಲಿ ಕುಳ್ಳಿರೆ ಮನವಾಗದು | ಕರುಣವಾರಿಧಿ ನಮ್ಮ ವಿಜಯ ವಿಠ್ಠಲರೇಯ | ಗುರುವೆ ಪವಮಾನನೆಂಬ ಬಿರುದು ಡಂಗುರ ಹೊಯಿಸೆ |

ಜೊತೆ

ಪವಮಾನ ಮತಪಿಡಿದು ನಿನ್ನ ಶ್ರವಣ ಮಾಡುವರ |
ಸಂಗಪಾಲಿಸು ವಿಜಯ ವಿಠ್ಠಲವಲಿದು |

(ii) ಶೌಚ, ಸ್ನಾನ ಇತ್ಯಾದಿ

ಪುರಂದರದಾಸರ ಈ ಉಗಾಭೋಗಗಳು ಪ್ರಾತಃಕಾಲದಲ್ಲಿ ಎದ್ದ ಮೊದಲುಗೊಂಡು ಸ್ನಾನ, ಜಪ, ಮಾಡುವ ಪರ್ಯಂತರ ಯಾವ ಕ್ರಮವನ್ನನು ಸರಿಸಬೇಕೆಂಬುದನ್ನು ತಿಳಿಯ ಹೇಳುವುವು.

ಪ್ರಾತೃಕಾಲದ ನಿದ್ರೆ ಪರಿಹರಿಸಿ ಹರಿಯ ಸ್ಮರಿಸಿ | ನಾಥ ಗೋವಿಂದಗೆ ಪ್ರದಕ್ಷಿಣೆ ಮಾಡಿ | ಪ್ರೀತಿಯೊಳತಿಥಿ ಪೂಜೆಗೈದು ಪುರಾಣ ಶಾಸ್ತ್ರವ ಕೇಳಿ | ನಾಥ ಶ್ರೀ ಪುರಂದರ ವಿಠಲಗೆ ನಮೋ ನಮೋ ಎನ್ನು

ಹರೇ ಗೋವಿಂದ ಎಂದೇಳು ಹತ್ತಾವತಾರವ ಪೇಳು ಮೂಡಲದೆಸೆನಡೆ | ಗೋವಿಪ್ರ ತುಳಸಿಗೆರಗು ಬಂದು ನೈಋತಿಯಲ್ಲಿ ತೃಣವಿಟ್ಟು ಶೌಚಮಾಡು | ಗುರುಪರಂಪರಾ ಎಲ್ಲ ಒಂದು ಪುರಂದರವಿಠ್ಠಲ ಎನ್ನು

ಮಲಮೂತ್ರ ಮಾಡುನಾಗ ಕರದಲ್ಲಿ ಜಲವಿರೆ | ಮಲಕೆ ಸಮಾನ ಅದು ಶುದ್ಧ ವಲ್ಲ | ವಿಲಸಿತ ಕರ್ಮವಾಚರಿಸಿ ಹರಿಯ ನೆನೆಯಲು ಒಲಿವ ಪುರಂದರ ವಿಠ್ಠಲ ನಿತ್ಯ

ನುಡಿವೆ ಲಿಂಗ ಶೌಚಕ್ಕೊಮ್ಮೆ ಗುದಕ್ಕೆ ಮೂರು ನೆಲ್ಲಿಕಾಯಷ್ಟು ಮಣ್ಣು | ಸಾಲಿಸಿ ನೀರೊಳು ತೊಳೆದು ಬಲಗೈಗೆ ಐಯ್ದು ಮಣ್ಣು | ಎಡಗೈಗೆ ಏಳು ಮಣ್ಣು | ಜೋಡು ಪಾದಕ್ಕೆ ಐದೈದು ಮಣ್ಣು | ಅಯಿದು ಕಡೆಯೊಳಿಟ್ಟು ಪುರಂದರವಿಠ್ಠಲ ಎನ್ನು

ಹಲ್ಲು ಬೆಳಗುವಲ್ಲಿ ಬಿಂಬ | ಪ್ಲಕ್ಷಪತ್ರ ನೆಲ್ಲು ನಿಲ್ಲು | ಮಹಾಲಯ ಪುಣ್ಯ ದಿವಸದಿ | ಬಲ್ಲಿದೇಕಾದಶೀ ಪಾರ್ವಣ ಅಮಾವಾಸ್ಯೆ ಇಟ್ಟು ಶಶಿ ರವಿಗ್ರಹಣದಲ್ಲಿ ಅಲ್ಲದೆಯ್ಯ | ದಂತಕಾಷ್ಟ ಮಲಿನಗಳಿಗೆ ಝುಲ್ಲಿಸ ನೀರು ಮುಕ್ಕಳಿಸಿ ಹನ್ನೆರಡು | ಬಲ್ಲ ಬುಧರಿಗೆ | ಪುರಂದರವಿಠ್ಠಲ ಇಲ್ಲಿ ಒಲಿವ ಇದ ಚರಿಸೆ

ಹಲವು ಕರ್ಮಗಳಿಗೆ ಹವಣೆ ಎರಡಾಚಮನ ಮಲಮೂತ್ರ ವಿಸರ್ಜನೆಯಲಿ, ಮಾಡು ಮೂರಾಚಮನೆ | ನಲಿದುಂಡ ಮೇಲೆ ಮತ್ತೆ ಮಾಡು ನಾಲ್ಕಾಚಮನ ಲಲ ನೇರ ಸಂಗಕ್ಕೆ ಮಾಡು ಆಯಿದಾಕಚಮನೆಯೆಂದ ಲಕ್ಷ್ಮೀಪತಿ ಪುರಂದರ ವಿಠಲೇಶ್ವರ.

ಆಕಳಕಿವಿಗೆಣೆ ಅಂಗೈಯ ಹಳ್ಳ ಇರಬೇಕು | ಉದ್ದು ಮುಣುಗುವಂತೆ ಇರಬೇಕು ನೀರು | ಸಾಕಾಗದೇ ಹೆಚ್ಚು ಕಡಿಮೆ ಸಾಕೆಂದುಕುಡಿದರೆ ಅದನು ಸಾಕಾರ ಪುರಂದರ ವಿಠಲ ಮದ್ಯ ಸಮಮಾಡುವ

ಹತ್ತೈದುಘಳಿಗೆಮೇಲ್ ಮತ್ತೈದು ಬರಲೆದ್ದು | ಚಿತ್ತಜನಯ್ಯನನ್ನು ಚಿತ್ತದಿ ಧ್ಯಾನಿಸಿ | ಅತ್ತ ಉದಯಕ್ಕೆ ಘಳಿಗೆ ಎರಡಿರುವಲ್ಲಿ| ನಿತ್ಯ ಸ್ನಾನವ ಮಾಡ್ಯಾದಿತ್ಯಗರ್ಘ್ಯವನಿತ್ತು | ಉತ್ತಮಜನರು ಪೊತ್ತಿದ್ದ ಪಾಪಗಳನ್ನೆಲ್ಲ ಉತ್ತರಿಸುವೆನೆಂದಾ ಪುರಂದರವಿಠಲ

ರಮೆಯರಮಣನು ತಾನು ಬೊಮ್ಮಾದಿಗಳನೆಲ್ಲ| ಸುಮನಸರೊಳು ಸೂರ್ಯ ಗರ್ಘ್ಯವನಿತ್ತು | ನಿಮ್ಮ ಪಾಪಗಳನೆಲ್ಲ ಚಿಮ್ಮಿ ಕಳೆಯಿರಿ ಎಂದು | ಬೊಮ್ಮ ಮೂರುತಿ ತಾ ಘಮ್ಮನೆ ಪೇಳಿರೆ ನಿಮ್ಮ ಜ್ಞಾನದಿಸಿಲುಕಿ ಸುಮ್ಮನೆ ಕೆಡದಿರಿ | ನಿಮ್ಮ ಶಿಕ್ಷಿಪನು ಪುರಂದರವಿಠಲ

ನಕ್ಷತ್ರಸೂಸಿಕಂಡರೆ ನರಗೆ ಉತ್ತಮ ಸಂಧ್ಯಾ | ನಕ್ಷತ್ರ ಒಂದೆರಡು ಕಂಡನರಗೆ ಮಧ್ಯಮ ಸಂಧ್ಯಾ | ನಕ್ಷತ್ರ ದೂರಕಾಣದ ನರಗೆ ಅಧಮ ಸಂಧ್ಯಾ | ನಕ್ಷತ್ರ ಬಿಟ್ಟರೆ ನಾರಾಯಣ ಪುರಂದರವಿಠಲ ಬಿಡುವಾ

ಕೂಪದಲ್ಲಾದರೂ ಕೊಳದಿ ಮುಣಗಿದಲ್ಲಾದರೂ | ವಾಪಿಯಲ್ಲಾದರೂ

ಅಶುಚಿಯಲ್ಲಾದರೂ | ಪತ್ನಿ ನೆರೆದಾದರೂ ಗೋಪಿಚಂದನದ ಸಂಪರ್ಕವಿದ್ದರೆ ಮುಖ್ಯವಿದುಕಾಲ ಸಂಧ್ಯಾ ಎಂದು | ಲಕ್ಷ್ಮೀಪತಿ ಪುರಂದರ ವಿಠಲ ಪೇಳ್ವ |

ಅನಾಮಿಕಾಖ್ಯಮಧ್ಯದಿ ಎರಡನೆಯಗೆರೆಯಾದಿ | ಇನಿತುಮಧ್ಯಾಂಗುಲಿ ಕೊನೆಗೆರೆ ಕೂಡಿಸಿ | ಮನಮೂರ್ತಿಪರಿಮಾಣ ಅಂಗುಷ್ಠದಿಂದಲಿ | ಎಣಿಸು ತರ್ಜನಿ ಮೂಲ ಪರ್ಯಂತರ | ಘನ ಹತ್ತುಗೆರೆ ಜಪ ಪುರಂದರವಿಠಲಗೆ ಮನದಿ ಅರ್ಚಿಸುತ ಗಾಯಿತ್ರೀ ಜಪವ

ಉದಯಕಾಲದ ಜಪ ನಾಭಿಗೆ ಸರಿಯಾಗಿ | ಹೃದಯಕ್ಕೆ ಸರಿಯಾಗಿ ಮಧ್ಯಾಹ್ನದಿ | ವದನಕ್ಕೆ ಸಮನಾಗಿ ಸಾಯಂಕಾಲದಿ ನಿತ್ಯ | ಪದುಮನಾಭ ತಂದೆ ಪುರಂದರವಿಠಲಗೆ | ಇದೆ ಗಾಯಿತ್ರಿಯಿಂದ ಜಪಿಸಬೇಕೋ

(iii) ಆಹ್ನಿಕ

ಆಹ್ನೀಕದ ಆರಂಭದಲ್ಲಿ ಗುರುಮಂತ್ರ ಜಪ ಮಾಡಿಕೊಳ್ಳಬೇಕು. ಇದರಲ್ಲಿ ಪಾಪಪುರುಷ ವಿಸರ್ಜನೆಯು ಸೇರಿರುವುದು. ಗುರುಮಂತ್ರವಾದ ಮೇಲೆ ತತ್ತ್ವನ್ಯಾಸ, ಮಾತೃಕಾನ್ಯಾಸ, ಗಾಯಿತ್ರೀ ಜಪ, ಪ್ರಣವ, ನಾರಾಯಣಾಷ್ಟಾಕ್ಷರಾದಿ ಮಂತ್ರಗಳನ್ನು ಜಪಿಸಬೇಕು. ವಿಜಯದಾಸರು ಇದನ್ನು ವಿಸ್ತಾರವಾಗಿ ಹೇಳಿದ್ದಾರೆ.

ಮಠ್ಯತಾಳ

ಕರಿಯ ರೂಪದ ಪಾಪಿ ಅರುಣ ನಯನ ಐ | ದರಿಯಿಂದ ಉದಭವಿಸಿ ಪರಿ ಪರಿಯ ಉಪ | ದುರಿತಾಂಗ ರೋಮ ಕರಾಳ ಹಲಿಗೆ | ಕರದಲ್ಲಿ ಪಿಡಿದು ಶಿರ ಕೆಳಗಾಗಿ ಈ ಪುರದೊಳು ಎಡದಲ್ಲಿ | ಪರಿಶೋಭಿಸುತಿಪ್ಪಕರಣಕೆ ಭೀತಿಯನು | ಸುರಿದು ಕಂಗೆಡಿಸುವ | ಸುರರಿಪು ರಿಪು | ನಾಮಾ ವಿಜಯವಿಠಲ ನಿನ್ನ | ಧೊರೆತನದ ಭೀತಿಯನರಿಯದ ದುರುಳನು

ರೂಪಕತಾಳ

ಮೂರು ಹುರಿಯಾಸಿಟ್ಟಿಪಾಶದಲ್ಲಿ ಕಲಿಯ | ಆರು ಕೋಣೆಗೆ ಶಳತಂದು ನಿಲ್ಲಿಸಿ | ಭೋರನೆ ಬೀಸುವ ಸಮೀರದಲ್ಲಿ ಅವನ | ಶರೀರ ಶೋಷಿಸಿ ಮೇಲಕ್ಕೆ ಎಳೆತಂದು | ಕ್ರೂರ ಪುರುಷನಾಕಾರವನೇಗಲಿ | ಧಾರನಾಕೃತಿಯಿಂದ ದಹಿಸಿ ಕಳೆಯೋ | ವಾರಣನಾಮ ಸಿರಿ ವಿಜಯವಿಠ್ಠಲಸುಧಾ | ಧಾರಿಯ ಮ್ಯಾಲಿಂದಗರದು ಶುದ್ಧನಮಾಡು

ಜತೆ

ಸಂತತ ಕ್ರೂರನ್ನಕೊಂದು ನಿನ್ನನಾಮ ಅಂತೆಕಾಲಕ್ಕೆ ನಿಯೋಶಾಂತ ವಿಜಯವಿಠಲ||

ಎಲ್ಲ ಸದಾಚರಣೆಗೂ ಮೊದಲು ಆಚಮನ, ಅನಂತರ ಪ್ರಾಣಾಯಾಮ

ಅವಶ್ಯಕವಾಗಿ ಆಚರಿಸಬೇಕು. ಪ್ರಾಣಾಯಾಮವು ಯೋಗದಲ್ಲಿ ಮುಖ್ಯ ಅಂಗವು. ವೈದಿಕಮಾರ್ಗಾವಲಂಬಿಗಳೆಲ್ಲರಿಗೂ ಇದು ಆದರಣೀಯವಾದ ಆಚರಣೆಯು.

ಧ್ರುವತಾಳ

ಪ್ರಣವಪೂರ್ವಕದಿಂದ ಆಸನವಿಟ್ಟು ಮೂರರೊಳೊಂ | ದನೆ ತಿಳಿದು ವಾಯುಧಾರಣೆ ಮಾಡು ವಿವೇಕನಾಗಿ | ಬಿನುಗು ಇಂದ್ರಿಯಗಳು ಮನದಲ್ಲಿ ಕೂಡಿಟ್ಟು | ಅನುನಯದಿಂದ ಸಾಧನಕೆ ಮಾರ್ಗವ ಬಯಸೋ | ಘನಿಭೂತವಾದ ಭಕುತಿಯನು ಸಂಪಾದಿಸಿ ನಿತ್ಯ | ತನುವೆ ನಿರ್ಮಲನಾಗಿ ಜನರಹಿತಸ್ಥಳದಲ್ಲಿ | ಅನುದಿನದ ಯೋಚನೆ ತೊರೆದು ಚಿನುಮಯನಾಗಿಪ್ಪ ವಿಜಯವಿಠಲನ್ನ | ಮನದಣಿಯ ನೀಕ್ಷಿಸುವಾಲೋಚನೀಯ ಮಾಡು ಬಿಡದೆ

ಮಠ್ಯತಾಳ

ಹಿರಿಯನಾಡಿಯಿಂದ ಮರುತನ ಮೆಲ್ಲನೆ | ಶಿರಸ ಪರಿಯಾಂತರ ತರಲುಪಾಯವನ್ನು | ಅರಿದು ಎರಡು ಎಂಟು ಪರಿಮಿತವಾದ ಮಾ | ತುರತನಕ ರೇಚಕ ಆ ತರುವಾಯದಲಿ ಮೂವ | ತ್ತೆರಡುಮಾತುರತನಕ ವರ ಪೂರಕ ತಿಳಿದು | ಅರವತ್ತುನಾಲಕು ಮೆರೆವಮಾತ್ರ ಕದನಿತು | ಇರುತಿಪ್ಪ ಕುಂಭಕ ಎರಡು ಅದರ ಅರ್ಧ | ಪರಿಯವನೋಡಿ ಪರಿಯಲಿ ಸಾಧಿಸುತ್ತ | ನಿರುತರ ಬಿಡದಲೆ ವರ ಸಮಾಧಿಯಲ್ಲಿ | ಕರಣಶುದ್ಧನಾಗೀ ಪರಿಚಿಂತಿಸಬೇಕು | ಪರಮಮೂರ್ತಿ ಧ್ಯಾನ ವಿಜಯವಿಠ್ಠಲ ಹರಿಯ | ಕುರುಹುನಿಕ್ಷಿಸಿ ಪತಿಕರಿಸಿ ಸಜ್ಜನಸಂಗ

ತ್ರಿವಿಡಿತಾಳ

ಇದಕಿಂತ ಮೊದಲಿಗೆ ತುರಿಯನಾಮಕನ ಶ್ರೀ | ಪದದಲ್ಲಿ ವನಧಿಯ ಸತಿಯನ್ನು ನೆನೆದು | ಒದಗಿ ಹನ್ನೊಂದನೆ ದ್ವಾಪರದಲ್ಲಿ ಇಳಿಸಿ | ಹೃದಯ ದಾಕಾಶಕ್ಕೆ ಕೊಂಡು ಒಯ್ದು | ಮುದದಿಂದ ಮಂಗಳ ಸ್ನಾನವನ್ನೆಗೈದು | ಉದರದೊಳಗಿದ್ದ ಕಾಮಾದಿಗಳನ್ನೆ ಕಳೆದು | ಗುದಭಾಗ ಪಿಡಿದು ಶಿರ ಮೂಲ ಪರ್ಯಂತ | ತುದಿ ಮೊದಲು ಒಂದೇ ಸಮಾನವಾಗಿಪ್ಪ | ಸದಮಲ ಪ್ರಧಾನ ನಾಡಿಯ ಮಧ್ಯದಲಿ | ಪದುಮರಾಗ ಮಯವಾದ ಎಂಟು ದಳದಿ | ಅಧೋ ಮೊಗವಾಗೆ ಇರುತಿಪ್ಪಪದುಮಾನೆತ್ತಿ | ಉದಯಭಾಸ್ಕರ ನೆಂಬೋ ಜ್ಞಾನದಿಂದ | ಚದುರ ಮನನೀ ನಿಂದ ವಿಕಸಿತ ಮಾಡೋದು |ಇದೆ ಬಿಂಬಾ ಮೂರುತಿ ಇಪ್ಪ ಸ್ಥಾನ | ಸದಾ | ಬ್ಯಾರನಾಗಿ ಶ್ರೀ ವಿಜಯವಿಠ್ಠಲನ್ನ | ಅಣುರೂಪಧ್ಯಾನ ಪಡಿಯ ಬೇಕು |

ಅಟ್ಟತಾಳ

ಅರೆಗಣ್ಣುಮಾಡಿ ಪಲ್ಲುಗಳು ಕೂಡಿಸದಲೆ | ಕೊರಳು ಬಾಗದೆ ಕದಲದಂತೆ

ಕುಳಿತು | ಕರಗಳು ತೊಡೆಯ ಮೇಲಿಟ್ಟು ತೀವ್ರದಿಂದ | ಬೆರಳುಗಳು ಸ್ವಲ್ಪ ಮಾತ್ರ ತಗ್ಗಿಸಿ | ನಿರುಪದ್ರವಾಗಿದ್ದ ಭೂಮಿಯನ್ನು ಸೇರಿ | ಸರಸದಲ್ಲಿ ತನ್ನ ಮೂರ್ತಿ ಎದಿರಲಿಟ್ಟು | ಮರಳೆ | ಮರಳೆ ನಾಸಿಕ ಕೊನೆಯಲ್ಲಿ ದೃಷ್ಟಿ ಇಟ್ಟು | ಪರಬೊಮ್ಮನಾದ ಶ್ರೀ ವಿಜಯವಿಠ್ಠಲನ್ನ ಚರಣ ಮೊದಲು | ಮಾಡಿ | ಸ್ಮರಿಸು ನಿನ್ನೊಳಗೆ

ಆದಿತಾಳ

ಮಧ್ಯಮಧ್ಯದಲ್ಲಿ ಮನ ಎದ್ದು ಪೋಗಲಾಗಿ | ಅಧೈರ್ಯವಿಲ್ಲದೆ ಇದ್ದು ವಿನಯ ದಿಂದಲಿ | ತಿದ್ದಿ ಮನ ಮೆಲ್ಲನೆ ಪೊದ್ದಿಸಿಕೊಂಡು ದುರಾಸಿಯ | ಗೆದ್ದು ಸ್ವಧರ್ಮಬಿಡದೆ ಸಿದ್ಧನಾಗೊಧ್ಯಾನದ | ಶುದ್ಧಮೂರುತಿ ನಮ್ಮ ವಿಜಯವಿಠಲರೇಯ ಪೊಳೆದು | ಉದ್ಧರಿಸುವ ತನ್ನ ಚಿದ್ದರೂಪವತೊರಿಕೊಳುತ

ಜೊತೆ

ಬಹಿರಶೂನ್ಯನಾಗಿ ಚರಿಸು, ಅಂತರದಲ್ಲಿ | ಮಹದೈವ ವಿಜಯವಿಠಲನ್ನು ಪಾದವಕಾಣು

(iv) ಮಂತ್ರಾನುಷ್ಠಾನ

ಓಂಕಾರ ಎಲ್ಲ ಲೌಕಿಕ ವಾಙ್ಮಯಕ್ಕೂ ಮೂಲ, ಇದರಿಂದ ವ್ಯಾಹೃತಿ, ಪುರುಷ ಸೂಕ್ತ, ಸಮಗ್ರವೇದ ಉದ್ಭವಿಸಿತು. ಮಂತ್ರಾಲಯದ ಶ್ರೀ ರಾಯರು ಈ ವಾಕ್ಯದಲ್ಲಿ ಯಾವ ಮಂತ್ರಕ್ಕೆ ಯಾವುದು ವ್ಯಾಖ್ಯಾನರೂಪವೆಂದು ತಿಳಿಸಿದ್ದಾರೆ.

ಲೌಕಿಕ ವೈದಿಕ ಭೇದ ಭಿನ್ನ ವರ್ಣಾತ್ಮಕ | ಧ್ವನ್ಯಾತ್ಮಕಾಶೇಷ ಶಬ್ದಾರ್ಥ |ಋಗಾದಿ ಸರ್ವವೇದಾರ್ಥ | ಪುರುಷ ಸೂಕ್ತಾರ್ಥ | ಗಾಯತ್ರ್ಯರ್ಥ | ವಾಸುದೇವ ದ್ವಾದಶಾಕ್ಷರ ಮಂತ್ರಾಂತರ್ಗತಾದ್ಯಾಷ್ಟಾಕ್ಷರಾರ್ಥ | ಶ್ರೀಮನ್ನಾರಾಯಣಾಷ್ಟಾಕ್ಷರ ಮಂತ್ರಾರ್ಥ| ವಾಸುದೇವ ದ್ವಾದಶಾಕ್ಷರ ಮಂತ್ರಾಂತರ್ಗತಾಂತ್ಯಚತುರಕ್ಷರಾರ್ಥ | ವ್ಯಾಹೃತ್ಯರ್ಥ | ಮಾತೃಕಾಮಂತ್ರಾರ್ಥ ಪ್ರಣವೋಪಾಸಕಾನಾಂ :—(ಪ್ರಾತ ಃ ಸಂಕಲ್ಪಗದ್ಯ)

ವಿಜಯದಾಸರು ಪ್ರಣವದ ಮಹಾಮಹಿಮೆಯನ್ನು ತಿಳಿಸಿ ಆ ಮಂತ್ರಗಳ ಜಪ ವಿಧಾನವನ್ನು ಹೇಳುತ್ತಾರೆ.

ಧ್ರುವತಾಳ

ತಾರಮಂತ್ರವ ಜಪಿಸು ತವಕದಿಂದಲಿ ಭವ | ತಾರವಾಗುವುದು ಲಾಲಿಸು ಚೆನ್ನಾಗಿ | ಈರೆರಡು ಶೀರ್ಷಪಿಂಡೀಕೃತವಾದ ಓಂ | ಕಾರ ನಿರಂತರ ಸಾರವೆನ್ನು ಏಕಾವರ್ಣ | ಶ್ರೀ ರಮಣ ನಾರಾಯಣನ ಪ್ರತಿಪಾದಿಸುತ್ತಿದೆ | ಮೀರಿದ ದೈವವೆಂದು ಒಲಿಸಿ ಒಲಿಸಿ | ತಾರತಮ್ಯವೆ ಉಂಟು ಇದನೆ ಗ್ರಹಿಸುವಲ್ಲಿ | ಆಕಾರತಕ್ಕಯೋಗ್ಯತೆ ಸಾಧನ | ಭಾರತದಲ್ಲಿ ಕೇಳು ವೈದಿಕ ಲೌಕಿಕ ವ್ಯವ | ಹಾರ ಮಾತಿಗೆ ಇದೆ ಪ್ರಥಮ

ವ್ಯಕ್ತಿ | ಕಾರಣ ಕಾರ್ಯದಲ್ಲಿ ವ್ಯಾಪ್ತವಾಗಿದೆ ವಿ | ಸ್ತಾರ ಬೊಮ್ಮಾಂಡದೊಳು ನಿಬಿಡಿಯಾಗಿ | ದ್ವಿರಷ್ಟ ಪಂಚ ಪಂಚ ಚತುರಷ್ಟಾ ಚಮುಂತಾಗಿ ಚಾರು ಪ್ರಕಾಶದಿಂದ ಅಭಿವ್ಯಕ್ತಿಯೋ | ಆರು ಎರಡರಿಂದ ತಿಳಿಯಬೇಕು | ಮೂರುತಿ ವಿಶ್ವತೈಜಸ ಪ್ರಾಜ್ಞತೂರ್ಯಾತ್ಮ ಅಂ | ತರಾತ್ಮ ಪರಮಾತ್ಮ ಜ್ಞಾನಾತ್ಮ ಹರಿಯ | ಈ ರೀತಿ.ಯಲ್ಲಿ ನೆನೆಸು ಒಂದೊಂದು ಸ್ಥಾನದಲ್ಲಿ | ವಾರವಾರಕೆ ಬಿಡದೆ ಹೃದಯದಲ್ಲಿ | ನಾರಾಯಣ ದೇವ ವಿಜಯವಿಠಲರೇಯ | ಪಾರತಂತ್ರರಹಿತ ಸರ್ವಭೂತಸ್ಥ ಕಾಣೋ |

ಮಠ್ಯತಾಳ

ಪ್ರತಿ ಪ್ರತಿ ಮಂತ್ರಕೆ ಪ್ರಣವನುಡಿಯಬೇಕು | ಅತಿಶಯವನೇಕೇಳು ಅನಾದಿ ಇದೆ ಸಿದ್ಧ | ಯತಿಗಳಿಗೆ ಪ್ರಣವ ಮುಖ್ಯಸಾಧನ ಕಾಣೋ | ಇತರಾಶ್ರಮ ಜನಕೆ ಯೋಗ್ಯ ತಕ್ಕನಿತು | ಸತತಚರಿಸಬೇಕು ಮನನಿರ್ಮಳನಾಗಿ | ಕ್ಷಿತಿಯೊಳಗೆ ಕೇಳಿ ಒಂದಾ ರಂಭಿಸಿ | ಚತುರ್ದಶ ಪರ್ಯಂತ ಪ್ರಣವ ಪೇಳಲಿಬೇಕು | ಅತುಳ ಉಚ್ಚಾರಣೆ ಸಗರ್ಭ ಅಗರ್ಭವೊ | ಗತಿಚಿಂತಿಸುವುದು ಆದಿ ಮಧ್ಯಾಂತರದಲಿ | ಕೃತಭುಜ ರೊಡೆಯಾ ಸಿರಿವಿಜಯವಿಠಲರೇಯನ | ತುತಿಸಿಕೊಂಡಾಡುವುದು ಸಮೂರ್ತ್ಯಾದಿವೊಡನೆ |

ತ್ರಿವಿಡಿತಾಳ

ಪ್ರಣವದಿಂದಲಿ ವ್ಯಕ್ತಿ ವ್ಯಾಹೃತಿ ನಾರಾ | ಯಣ ಮಂತ್ರ ಈರ್ವದಲ್ಲಿ ವಾಸುದೇವ ಮಂತ್ರ | ..... ತೃಣಿ ವಿಜಯವಿಠಲ ಸನ್ನಿಧಿಯಾಗಿ ಪ್ರಪಂಚ ಭೇದದ ತುತಿಗೆ |

ಅಟ್ಟತಾಳ

ಅಂಗ ಅಂಗುಲಿನ್ಯಾಸ ಹೃಚ್ಛಿರಸರ್ವಾಂಗ | ಇಂಗಡ ನಾಲ್ಕೈದು ಆರೆಂಟು ಹತ್ತುಸಹಿತು | ತ್ತುಂಗವಾಗಿ ಗಾತುರದಿಂದಲಿ ದ್ವಾತ್ರಿಂಶತಿ | ಇಂಗಿತವಾಗಿ ನ್ಯಾಸಗಳು ಬಗೆ ಬಗೆ | ಮಂಗಳವಾಗಿ ದೇಹಧಾವಲಿ ಕೃದ್ಧೋಲ್ಕಾದಿ | ತುಂಗ ಮಂತ್ರವರ್ಣ ಏಕೇಕ ದಿವ್ಯರೂ | ಪಂಗಳು ವಿಶ್ವಾಕಾಶವ ಕೇಶವಾದಿ | ಕಂಗೊಳಿಸುತಿಪ್ಪ ಜ್ಞಾನ ಐಶ್ವರ್ಯಾದಿ | ಶ್ರಿಂಗಾರ ಸೂಕ್ತತತ್ತ್ವ ಮಾತೃಕಾನ್ಯಾಸ | ಸಂಗೀತಲೋಲ ಶ್ರೀವೈಷ್ಣ ವೋಕ್ತಿಗೆ ಉಂಟು | ಸಾಂಗೋಪಾಂಗದಿಂದ ಅನ್ಯ ಮಂತ್ರಕೆ ಕೆಲವು | ತಿಂಗಳನಂತೆ ಶೋಭಿಸುತಿವೆ ಈ ಮಂತ್ರ | ಮಂಗಳಮೂರುತಿ ವಿಜಯವಿಠಲಗೆ | ಉತ್ತುಂಗ ಪ್ರತಿಮೆಯನ್ನು ಸರ್ವವರ್ಣಗಳು |

ಜೊತೆ

ಪರಮ ಮುಖ್ಯಾ ಮುಖ್ಯ ಅಮುಖ್ಯ ಮಂತ್ರಗಳ | ಕರಣಶುದ್ಧಿಲಿಮಾಡು ವಿಜಯ ವಿಠಲನೊಲಿವ |

(v) ದೇವತಾರ್ಚನೆ

ಆಚಾರ್ಯರು ತಂತ್ರಸಾರದಲ್ಲಿ ಹೇಳಿದ ಕ್ರಮವನ್ನನುಸರಿಸಿ ದಾಸರುಗಳು ದೇವತಾರ್ಚನ ಪದ್ಧತಿಯನ್ನು ವರ್ಣಿಸಿದ್ದಾರೆ. ದೇವರ ಅಭಿಷೇಕ ಕ್ರಮವನ್ನು ಪುರಂದರದಾಸರು ಹೀಗೆ ಹೇಳುತ್ತಾರೆ.

ಅಪರಾಧ ಹತ್ತಕ್ಕೆ ಅಭಿಷೇಕ ಉದಕ | ಅಪರಾಧನೂರಕ್ಕೆ ಕ್ಷೀರಹರಿಗೆ ಅಪರಾಧ ಸಹಸ್ರಕ್ಕೆ ಹಾಲು ಮೊಸರು ಕಾಣೋ | ಅಪರಾಧ ಲಕ್ಷ ಜೇನುಘೃತ | ಅಪರಾಧ ಹತ್ತು ಲಕ್ಷಕ್ಕೆ ಬಲು ಪರಿಕ್ಷೀರ | ಅಪರಾಧ ಕ್ಷಮೆಗೆ ಅಚ್ಚ ತೆಂಗಿನ ಹಾಲು | ಅಪರಾಧಕೋಟಿಗೆ ಸ್ವಚ್ಛ ಜಲ | ಅಪರಾಧ ಅನಂತ ಕ್ಷಮೆಗೆ ಗಂಧೋದಕ | ಉಪಮೆ ರಹಿತ ನಮ್ಮ ಪುರಂದರವಿಠಲಗೆ ಶಾಂತಮನವಯ್ಯ ಶಾಂತವಾಕ್ಯ |

ತುಳಸಿಯು ದೇವರ ಪೂಜೆಗೆ ಅತ್ಯಂತ ಪ್ರಿಯವೆಂದು ಹೇಳುತ್ತಾರೆ.

ಕಲ್ಯಾಣಿ—ಟಾಪು

ಒಲ್ಲನೋ ಹರಿಕೊಳ್ಳನೋ; ಎಲ್ಲ ಸಾಧನವಿದ್ದು ತುಳಸಿ ಇಲ್ಲದ ಪೂಜೆ ||ಅ ||

ಕಮಲ ಮಲ್ಲಿಗೆ ಜಾಜಿ ಸಂಪಿಗೆ ಕೇದಿಗೆ | ವಿಮಲ ಘಂಟೆ ಪಂಚ ವಾದ್ಯವಿದ್ದು ಅಮಲ ಪಂಚಭಕ್ಷ್ಯ ಪರಮಾನ್ನಗಳಿದ್ದು ಕಮಲನಾಭನು ಶ್ರೀತುಳಸಿ ಇಲ್ಲದ ಪೂಜೆಳ

ಪೂಜೆಯ ಮಾಡದೆ ತುಳಸಿ ಮಂಜರಿಯಿಂದ | ಮೂಜಗದೊಡೆಯ ಮುರಾರಿಯನು | ರಾಜಾಧಿರಾಜನೆಂಬ ಮಂತ್ರ ಪುಷ್ಪಗಳಿಂದ ಪೂಜಿಸಿದರು ಒಲ್ಲ ಪುರಂದರವಿಠಲನು. ॥

ಪೂರ್ವಿ—ಅಟ

ಧೂಪರ ತಿಯ ನೋಡುವ ಬನ್ನಿ ನಮ್ಮ ಗೋಪಾಲ ಕೃಷ್ಣನ ಪೂಜೆಯ ಸಮಯದಿ | ಢಣ ಢಣವೆಂಬ ತಾಳ ದಂಡಿಗೆ ಭೇರಿ | ಝಣಕು ಧಿಮಿಕು ಎಂಬ ಮದ್ದಲೆಯು | ಝಣಿ ಝಣಿಸುವ ರವ ವೀಣೆ ಕಿನ್ನರಿಸ್ವರ ಘನ ರಾಗದಿಂದಲಿ ಹಾಡುತ ಪಾಡುತಲಿ

ಪೂರ್ವಿ—ಝಂಪೆ

ಏಕಾರತಿಯ ನೋಡುವ ಬನ್ನಿ ನಮ್ಮ | ಲೋಕನಾಥನ ಸಿರಿಪಾದಕ್ಕೆ ಬೆಳಗುವ |

ಈ ಪದಗಳಲ್ಲಿ ಪುರಂದರದಾಸರು ಧೂಪಾರತಿ ಏಕಾರತಿಗಳನ್ನು ವರ್ಣನೆ ಮಾಡಿದ್ದಾರೆ. ದೇವಾತಾರ್ಚನ ಪದ್ಧತಿಯಲ್ಲಿ ನೇವೇದ್ಯ ಅತಿ ಮುಖ್ಯವಾದ ಅಂಗ. ಇದಕ್ಕೆ ಹೆಚ್ಚಿನ ಏಕಾಗ್ರತೆ, ಅನುಸಂಧಾನ, ಭಕ್ತಿ ಇವುಗಳು ಅವಶ್ಯಕ. ಉತ್ತಮರ ಜ್ಞಾನಿಗಳು ಇರುವಾಗ ನೇವೇದ್ಯದ ಭಾರವನ್ನು ಅವರಿಗೇ ವಹಿಸುವ ಪದ್ಧತಿ

ಬಂದಿರವುದು ಇದಕ್ಕಾಗಿಯೇ. ಅದು ಈಗ ಬದಲಾಗಿ ಯಾರು ನೇವೇದ್ಯ ಮಾಡುತ್ತಾರೋ ಅವರೇ ಶ್ರೇಷ್ಠರೆಂಬ ಭಾವನೆ ಬೆಳೆದಿದೆ. ನೇವೇದ್ಯದ ಅನುಸಂಧಾನ ಕ್ರಮವನ್ನು ತಿಳಿಸುವುದಕ್ಕಾಗಿಯೇ ವಿಜಯದಾಸರು ಆತ್ಮಯಜ್ಞ ಸುಳಾದಿಯೆಂಬುವ ಸುಳಾದಿಯೊಂದನ್ನು ರಚಿಸಿದ್ದಾರೆ .

ಧ್ರುವತಾಳ

ನಿತ್ಯ ತೃಪ್ತ ಸರ್ವಸಾರಭೋಕ್ತ ಪುರುಷೋತ್ತಮ ಆ | ಚಿಂತ್ಯಮಹಿಮ ಭಕ್ತ ವತ್ಸಲ | ಸತ್ಯ ಸಂಕಲ್ಪ ಹರಿಗೆ ನಾನೋಪಚಾರದಿಂದ | ಭಕ್ತಿ ವೆಗ್ಗಳವಾಗಿ ಮಜ್ಜನಾದಿಯ ಮಾಡಿ | ಚಿತ್ತ ನಿರ್ಮಲದಿಂದ ನಾನಾ ಸೌಖ್ಯವಾಗಿದ್ದ | ಉತ್ತಮ ಪದಾರ್ಥ ಸುಪಕ್ವಗೈಸಿ | ಆತ್ಮನ ಮುಂಭಾಗದೊಳಗಿರಿಸಿ ಸ್ತೋತ್ರಗಳಿಂದ | ತುತ್ತು ಸಮರ್ಪಿಸಿ ಧ್ಯಾನಮಾಡಿ ತೆತ್ತಿಗ ನಾನೆಂದು ಅಡಿಗಡಿಗೆ ಹಿಗ್ಗಿ ತನ್ನ | ಸತ್ಯವೃತ್ತಿಗೆ ಹರಿಯೆ ಎಂದು | ವಿಸ್ತಾರವಾಗಿ ತಿಳಿದು ನಿಜವಾಗಿ ಬ್ರಹ್ಮಾದಿ ದೇ | ವತ್ತೆಗಳಿಗೆ ಸನಕಾದಿಗಳಿಗೆ | ಮತ್ತೆ ಶುಕ ಮೊದಲಾದ ಅವತಾರ ಜನಕೆ ತಾ | ರತ್ತಮ್ಯಾ ದಿಂದ ಕೊಡಲಿಬೇಕೋ ಮನುಜ | ಇತ್ತರೆ ನಿನ್ನಿಂದ ಅವರವರು ಕೈಕೊಂಡು ಮಾ | ರುತ್ತ ಪರಿಯಂತ ಒಪ್ಪಿಸಿಕೊಡುವರೋ | ಅತ್ತಣಕಾರ್ಯಕೇಳಿ ಲಕುಮಿದ್ವಾರದಿಂದ | ಉತ್ತಮ ಶ್ಲೋಕನು ಕೈಕೊಂಬನಯ್ಯ | ಪ್ರತ್ತೀಕದಲ್ಲಿ ಮನಸು ಅಗ್ನಿಯಲಿ ವಾಕು | ಆತ್ಮದಲಿ ಗಾತ್ರಧ್ಯಾನ ಅವಧಾನ | ಭುಕ್ತಿ ಚಿತ್ರ ವಿಚಿತ್ರ ಉಂಟು ಇದರೊಳ ಗನುಭವ | ಪುತ್ರ ಜನಕರೊಬ್ಬ ಸುಂದರನಾರಿಯ | ಹತ್ತಿಲಿ ಇದ್ದವಳ ಸ್ಪರ್ಶ ಮಾಡಿದರಾಗೆ ಮಾತ್ರ | ಭಾವ ಒಬ್ಬನಿಗೆ ಪತ್ನಿಭಾವ ಒಬ್ಬನಿಗೆ | ಅತ್ಯಂತ ವಾಗಿಪ್ಪುದು ವಿವೇಕರಿಗೆ........... |

ಹೀಗೆ ಹರಿಗೆ ನೇವೇದ್ಯ ಸಮರ್ಪಣೆ, ರಮಾದಿ ಇತರ ದೇವತೆಗಳಿಗೆ ಸಮರ್ಪಣೆ ಮಾಡಿ ದೇವತಾರ್ಚನೆ ಮುಗಿಸಿ ತರುವಾಯ **ಭುಕ್ತ ಶೇಷಂ ಭಗವತೋ ಭೃತ್ಯಾ ತಿಥಿ ಪುರಸ್ಸರ ಃ | ಭುಂಜೀತಹೃದ್ಗತಂ ವಿಷ್ಣುಂ ಧ್ಯಾಯನ್ನೇವಾರ್ಚಯೋದ್ಧರಿಂ** ಎಂಬ ಆಚಾರ್ಯರ ವಚನಾನುಸಾರ ಅತಿಥಿ ಬಂಧುಮಿತ್ರರುಗಳೊಡನೆ ಭೋಜನ ಮಾಡಬೇಕು. ಸಾಧಕ ಮಾಡುವ ಪ್ರತಿಯೊಂದು ಕರ್ಮವೂ ಹರಿಪೂಜೆಯೆನಿಸುವುದು. ಭೋಜನವೂ ಅನುಸಂಧಾನದಿಂದ ಮಾಡಿದಲ್ಲಿ 'ಆತ್ಮಯಜ್ಞ'ವೆನಿಸುವುದು. ಯುಕ್ತ ದೇಶ ಕಾಲದಲ್ಲಿ ಮಾಡುವ ಸ್ವ ಸ್ತ್ರೀ ಸಂಭೋಗವೂ ವಾಮದೇವಯಜ್ಞನಿಸುವುದು.

(iv) ಭೋಜನ– ಅತಿಥಿ ಸತ್ಕಾರ

ಭೋಜನ ಮಾಡುವ ರೀತಿಯನ್ನು, ಆ ಅನುಸಂಧಾನವನ್ನು ವಿಜಯದಾಸರು ಹೀಗೆ ತಿಳಿಸಿದ್ದಾರೆ.

ಹೊತ್ತು ಹೊತ್ತಿಗೆ ಇದನೆ ಸ್ಮರಿಸಿ ವೇಗದಿಂದಲಿ | ತೀರ್ಥದಾನವಮಾಡಿ ಜ್ಞಾನಿಗಳೊಡನೆ | ಸುತ್ತಬಳಗದ ಕೂಡೆ ಕುಳಿತು ಭಗ |ವತ್ಪಾದಿ ಪೆತ್ತ ದೇವನಸ್ಮರಣೆ ಮಾಡಿಕೊಳ್ಳುತ | ಆತ್ಮಯಜ್ಞವ ಮಾಡೋ ತುಳಸಿಮಿಳಿತದಲಿ | ಹತ್ತೆಂಟುದಳ ನಿನಗೆ ಸತತ ಬೇಕೋ | ಹತ್ತದನೆ ಸಲ್ಲಕೇಶಾದಿ ದೋಷದಿಂದ | ಮೃತ್ಯು ಬರುತ್ತಿದ್ದರೂ ನಿವಾರಣ......|

ತ್ರಿಪುಟತಾಳ

ಸಾರ ಹೃದಯನಾಗಿ ಶುದ್ಧ ಸಾಲಿಗ್ರಾಮದ | ವಾರಿಯ ಹಸ್ತದೊಳಗೆ ಧರಿಸಿ | ನಾರಾಯಣ ಮಂತ್ರದಿಂದ ಅನ್ನಕೆ ಹಾಕಿ |ಆರೆಂಟು ಆವರ್ತಿಯಲಿಜಪಿಸಿ| ನೀರ ತೆಗೆದುಕೊಂಡು ಸುತ್ತತಿರುಹಿ ಮನೋ | ಹಾರದಿಂದಲಿ ಮೂರು ಲೋಕಶಬ್ದ | ತಾರಕ ಮಂತ್ರದಿಂದ ತ್ರಿಪಾದ ದೇವಿಯ | ಹಾರೈಸು ಪಾತ್ರೆಗೆ ಚತುರಂಗಲಿಯ ಬಿಟ್ಟು | ಬೇರೆ ಬೇರೆ ಇದ್ದ ಸಂಪ್ರದಾಯವತಿಳಿದು | ಪೂರೈಸಿ ಚಿತ್ರಗುಪ್ತಾದ್ಯರಿಗೆ ಆ | ಹಾರ ಬೋರೆ ಫಲದನಿತುಕೊಟ್ಟು | ನೀರೆರದು ವಿಚಾರಗೈಯೋ ಆಹುತಿ ಗೆಂಬೋದಿಕ್ಕು ಗ | ಳಾ ರಂಭದಲ್ಲಿ ತಕ್ಕೋ ಅಂಗುಟತರ್ಜನಿ ಮಧ್ಯಮ |

ಮೂರು ಬೆರಳಿನಿಂದ ಪೂರ್ವ ಭಾಗದ ಅನ್ನ |

....

ಈ ರೀತಿಯಾದ ಮೇಲೆ ಪಂಚಾಂಗುಳಿಯಿಂದ ಸೇವಿಸಿರೋ

ಊರ್ಧ್ವಭಾಗದ ಓದನ |

....

ವಿಸ್ತಾರವಾಗಿ ಮಧ್ವಾಂತರ್ಯಾಮಿ ನಾರಾಯಣ ಕೃಷ್ಣ ಎಂದು

ನೆನೆದು ಸಾರದೂರದಲ್ಲಿದ್ದ ಲೋಕ ಕೇಳುವಂತೆ |

ವೈರಾಗ್ಯದಿಂದಲಿ ಉಣಲಿಬೇಕೋ | ಕಾರುಣ್ಯವಂತರಾಗಿದ್ದಭಿಮಾನಿ ಗಳ |

ಬಾರಿ ಬಾರಿಗೆ ಅನ್ನಗಳಲ್ಲಿ ನೆನೆಯೊ |

ಈಗಿನ ಸ್ವಾತಂತ್ರ್ಯ ಯುಗದಲ್ಲಿ ಕೇವಲ ವ್ಯಕ್ತಿ ಸ್ವಾತಂತ್ರ್ಯಕ್ಕೊಳಪಟ್ಟ ಭೋಜನ ಕ್ರಿಯೆಯನ್ನು ಇಷ್ಟು ಕ್ಲಿಷ್ಟಕರವಾಗಿ ಹೇಳಿ ಅದೂ ಭಗವತ್ಸೇವೆಯನ್ನುವುದು ವಿಲಕ್ಷಣವಾಗಿತೋರಬಹುದು. ಆದರೆ ದೀರ್ಘವಾಗಿ ವಿಚಾರ ಮಾಡಿದರೆ ಇದು ಸತ್ಯವೆನಿಸುವುದು. ಮನುಷ್ಯನ ಎಲ್ಲ ವ್ಯಾಪಾರಗಳೂ ಭಗವಂತನಿಗೆ ಸಂಬಂಧ ಪಟ್ಟಂತೆ ಆಗಬೇಕು. ಉಣ್ಣುವ ಊಟವು ಅವನ ಸೇವೆಯೇ ಆಗಿರಬೇಕು. ಇಂದಿನ ಸನ್ನಿವೇಶದಲ್ಲೂ ಸೈನ್ಯದಲ್ಲಿರುವವರಿಗೆ ಆಹಾರ, ವೇಷ, ಭೂಷಣಗಳ ನಿಯಮ ವೇರ್ಪಟ್ಟಿದೆ. ಇದು ಸೈನ್ಯದ ಹಿತಕೋಸ್ಕರ. ದೊಡ್ಡ ದೊಡ್ಡ ವ್ಯಾಪಾರಿ ಸಂಸ್ಥೆಗಳಲ್ಲಿ ಉನ್ನತಾಧಿಕಾರಿಗಳಾಗಿರವವರಿಗೆ ಬಲಾತ್ಕಾರದ ನಿಶ್ರಾಂತಿಗಳು ಲಭಿಸುತ್ತಿರುವುದು

ಸಾಮಾನ್ಯವಾಗಿದೆ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಜೀವನವನ್ನೇ ಭಗವಂತನ ಸೇವೆಗಾಗಿ ಮೀಸಲಾಗಿಡುವುದರ ಅರ್ಥ ಮನವರಿಕೆಯಾಗದೆ ಇರದು, ಆದ್ದರಿಂದಲೇ ಸ್ನಾನ, ಜಪ, ಆಹಾರ, ವಿಹಾರಗಳೆಲ್ಲದರಲ್ಲೂ ವಿಶಿಷ್ಟವಾದ ನಿಯಮಗಳು ವಿಧಾಯಕವಾಗಿವೆ. ಭೋಜನವು ಅಂತೆಯೇ ಹಿರಿದಾದ ಹರಿ ಪೂಜೆಯೆನಿಸುವುದು. ಇದಕ್ಕೆ ಇಷ್ಟು ಮಹತ್ವವಿರುವುದರಿಂದಲೇ ಅನ್ನದಾನ, ಅತಿಥಿಸತ್ಕಾರಕ್ಕೂ ಹೆಚ್ಚಿನ ಮಹತ್ವ ಬಂದಿದೆ. ದಾಸರೂ ಆ ಕಡೆ ಲಕ್ಷ್ಯ ಕೊಟ್ಟಿದ್ದಾರೆ.

ಧ್ರುವತಾಳ

ಉತ್ತಮರಿಗೆ ಒಂದು ತುತ್ತನ್ನ ದಾನದಿಂದ । ಇತ್ತವನ ಕುಲ ಹತ್ತು ಹತ್ತು ಒಂದು ಸ । ಪುತ ಗೋತ್ರಾಖಿಳ ಹತ್ತಿ ಹೊಂದಿದವರು । ಸುತ್ತಣ ಪರಿವಾರ ಎತ್ತಲೆತ್ತ ಉಳ್ಳವರು । ಅತ್ಯಂತವಾದ ಪಾಪ ಮೊತ್ತದಾಸಕ್ತರಾಗಿ । ಮೃತ್ಯುಲೋಕದಲ್ಲಿ ಆಪತ್ತು ಬರುತಲಿರೆ । ಹೆತ್ತ ಜನನಿಯಂತೆ ಎತ್ತಿ ಕೊಂಡೊಯ್ದು ಪುನರಾ । ವರ್ತಿ ಇಲ್ಲದ ಲೋಕದತ್ತ ಸೇರಿಸುವುದು । ಎತ್ತಲು ಸರಿಗಾಣೆ ಕ್ಷುಧಾತುರ್ಯರಾಗಿ ಬಂದ । ಸ್ತೋತ್ತಮರಿಗಿತ್ತ ಫಲ ಚಿತ್ತದಲಿ ಎಣಿಸೆ । ಹತ್ತಾವತಾರ ಸಿರಿ ವಿಜಯವಿಠ್ಠಲರೇಯನ । ನಿತ್ಯ ಕರುಣ ಪಡೆದು ಸತ್ಯದಲಿ ನಡೆದ ।

ತ್ರಿವಿಡಿತಾಳ

ಬಂದ ಅತಿಥಿಯನ್ನು ತನ್ನಯ ಬಾಗಿಲ । ಮುಂದೆ ಕಾಣುತ್ತಲರೆ ನಿಂದು ಎದಿರುಗೊಂಡು । ವಂದನಿಕರ ಮುಗಿದು ದ್ವಂದ್ವ ಪಾದಕ್ಕೆರಗಿ । ತಂದೆ ಆವಲ್ಲಿಂದ ದಯಮಾಡಿ ಬಂದಿರೀ ಎಂದು । ಒಂದೊಂದು ಮಾತನು ನಂದಾದಿಂದಲಿ ಪೇಳಿ । ತಂದು ಪೀಠವನಿತ್ತು ಚಂದದಿಂದಲಿ ನಡು । ಮಂದಿರದೊಳಗೆ ವಸುಂಧರ ವಿಬುಧನ್ನ । ಮಂದಹಾಸದಲಿ ನಯದಿಂದ ಕುಳ್ಳಿರಿಸಿ ಜಲ । ದಿಂದ ಚರಣ ತೊಳೆದಾನಂದಮಯದಿಂದ ಸಂದೇಹಬಿಟ್ಟು ಸೊಬಗಿನಿಂದ ಶಿರದ ಮೇಲೆ । ಬಿಂದುಮಾತುರಜಲ ಬಂಧುಬಳಗ ಕೂಡಿ । ಕುಂದದೆ ಧರಿಸಿ ತಾ ಮಂದಿರದಲಿ ಚೆಲ್ಲಿ । ಒಂದೊಂದು ಪರಿಯಲ್ಲಿ ಪೊಂದಿ ಸುಖದಲ್ಲಿರುವ । ಮಂದರಧರ ನಮ್ಮ ವಿಜಯವಿಠಲ ಹರಿಯ ಎಂದೆಂದಿಗೆ ಬಿಡದೆ ವಂದಿಸು ಮನದಲ್ಲಿ ।

ಆದಿತಾಳ

ಅನ್ನಯಿತ್ತರದು ಭವನ್ನವಾಗಿ ತೋರೋದು । ಅನ್ನವೀಯದಿರೆಕಾನನ್ನಕ್ಕೆ ಸರಿಯೆನ್ನು । ಅನ್ನದಿಂದಲಿ ಬಂದ ಘನ ದುರಿತಹರ । ಅನ್ನದಿಂದಲಿ ಸರ್ವಪುಣ್ಯ ಫಲಿಸುವುದು । ಅನ್ನಯಿತ್ತವನು ಕೀರ್ತಿ ಉನ್ನತವಾಗಿ ತ್ರಿಭು । ವನದೊಳಗೆ ತುಂಬಿ ಚೆನ್ನಾಗಿ ಪೊಳೆವುದಯ್ಯ । ಅನ್ನದಾನಕ್ಕಿಂತ ಇನ್ನು ಮಿಗಿಲೆ ಇಲ್ಲ । ಹೊನ್ನ ಹಣಾದಿ ಕೊಡಲು ಗಣ್ಯ ಅನ್ನದಾನಕ್ಕೆ ।

ಅನಂತಕಾಲ ಮುಖವನ್ನ ಮಾಡಲು ವಿಪ್ರ । ಗುಣಿಸಿದುದಕ್ಕೆ ಸರಿಯೆನ್ನಬಹುದೋ ತಿಳಿದು । ಅನಂತಮೂರುತಿ ವಿಜಯವಿಠಲರೇಯ । ತನ್ನವನಿವನೆಂದು ಮನ್ನಿಸಿ ಸಲಹುವ ।

ಜೊತೆ

ಅತಿಥಿ ಅಭ್ಯಾಗತಿಯ ಸಂತೋಷ ಬಡಿಸಲು । ಸತತಪೊಳೆವ ವಿಜಯವಿಠಲ ಮನಸಿನೊಳು ।

(vii) ಏಕಾದಶೀ

ವೈಷ್ಣವಮತದಲ್ಲಿ ಏಕಾದಶೀ ವ್ರತದ ಮಹತ್ವ ಬಹಳ. ವಿಷ್ಣು ಪ್ರೀತಿಕರವಾದ ಆ ವ್ರತಾಚರಣೆಯ ಮಹಿಮೆಯನ್ನ ಎಲ್ಲ ದಾಸರೂ ಮುಕ್ತಕಂಠದಿಂದ ಹೊಗಳಿರುವರು.

ಆರಭಿ-ಝಂಪೆ

ಹರಿದಿನ ಪಾತಕ ಪರಿಹಾರದ ಸುಜನರ ಕರುಣಕ್ಕೆ ಕಾರಣ ನಂಬೆಲೊ ಮನುಜ ॥ ಪ ॥

ಗಂಗೆ ಮೊದಲಾದ ತೀರ್ಥಂಗಳೆಣೆಯೇ ಶ್ರೀರಂಗ ಮೊದಲಾದ ಕ್ಷೇತ್ರವು ಸರಿಯೇ ಉತ್ತುಂಗ ಜಪತಪ ಹೋಮಂಗಳೆದುರೆ ಶ್ರೀರಂಗನಾಥನ ದಿನದೊಂದುಪವಾಸಕೆ ॥ 1 ॥

ಹಿಂದೆ ಮಾಡಿದ ಪಾಪ ಪರಿಹಾರವು ನೀನಿಂದು ಮಾಡಿದ ಸುಕೃತ ಬೆಳೆಸು ಮುಂದಣ ಮುಕುತಿಗೆ ಕಲ್ಪಲತಾಂಕುರ ಇಂದಿರೇಶನ ದಿನದೊಂದುಪಾವಸಕೆ ॥ 2 ॥

ರುಕುಮಾಂಗದ ಮೊದಲಾದ ಭಕುತರೆಲ್ಲ ಸಕಲವ ಬಿಟ್ಟು ಏಕಾದಶಿ ವ್ರತವ ಭಕುತಿಯಿಂದ ಕೂಡಿ ಶ್ರೀಕೃಷ್ಣನ ಮೆಚ್ಚಿಸಿ ಮುಕುತಿ ಸೂರೆಯಗೊಂಡರೆಂಬುದನರಿಯ ॥ 3 ॥

ದಶಮಿ, ಏಕಾದಶೀ, ದ್ವಾದಶೀ ಈ ಮೂರೂ ದಿನಗಳಿಗೂ ದಿನತ್ರಯವೆಂದು ಹೆಸರು. ಏಕಾದಶಿವ್ರತದಲ್ಲಿ ಈ ಮೂರೂ ದಿನಗಳ ವಿಶೇಷ ಕರ್ಮಗಳು ಸೇರಿವೆ. ದಶಮೀ ಮತ್ತು ದ್ವಾದಶೀ ಏಕಭುಕ್ತ ಮತ್ತು ಬ್ರಹ್ಮಚರ್ಯ ವ್ರತಪಾಲನೆ, ಏಕಾದಶೀ ನಿರಶನ, ರಾತ್ರಿ ಜಾಗರ, ದ್ವಾದಶೀ ಉದಯಕಾಲಕ್ಕೆ ಸರಿಯಾಗಿ ಪಾರಣೆ - ಇವು ದಿನತ್ರಯದ ಮುಖ್ಯ ಕರ್ಮಗಳು.

ಏಕಾದಶೀ ವ್ರತವ । ಏಕಾದಶೀ ವ್ರತವ ಸಾಧಿಸಿ ಶೋಧಿಸಿ । ಏಕಭಕುತಿಯಿಂದ ಹಾಡಿರೋ ಪಾಡಿರೋ । ಲೋಕದೊಳಗೆಲ್ಲ ಸಾರುತ ಬೀರುತ ಶ್ರೀಕಾಂತನ ಭಜಿಸಿ । ॥ ಅ ॥

ದಶಮೀ, ಏಕಾದಶೀ, ದ್ವಾದಶೀ, ದಿನತ್ರಯ । ವಸುಧೆಯೊಳಗೆ ಮಹವ್ರತವೆಂದು ತಿಳಿದು ತ್ರಿ । ದಶರು ಕೈಕೊಂಡು ಮಾಡಿದರಂದು ರಾಜಿಸುವ ಸತ್ಕರ್ಮದಲಿ । ಬಿಸಜನಾಭನು ಲಕುಮಿಗೆ ಪೇಳಿದ ವಾರ್ತೆ । ಹಸನಾಗಿ ಬೊಮ್ಮಗೆ ಅರುಹು ಮಾಡಲು ದೇವ । ಖುಷಿಗೆ ಪೇಳಲು ಆ ಮುನಿ ಬೀರಿದ ದಶದಿಶಗಳೊಳಗೆ ತಾನಂದು ॥ 1 ॥

ಈ ಪದ್ಯದಲ್ಲಿ ವಿಜಯದಾಸರು ಏಕಾದಶಿ, ಉಪೋಷ್ಯ, ಜಾಗರ ದ್ವಾದಶಿ ಪಾರಣೆಯ ವಿಷಯ ಹೇಳಿದ್ದಾರೆ.

(೯) ತೀರ್ಥಯಾತ್ರಾ

ಸಾಧಕನ ಸಾಧನೆಗಳಲ್ಲಿ ತೀರ್ಥಯಾತ್ರೆ ಮುಖ್ಯವಾದ ಅಂಗ. ಇದರಿಂದ ಜೀವನದಲ್ಲಿ ಸಾಕಷ್ಟು ಅನುಭವ ಉಂಟಾಗಿ ಸಂಕುಚಿತ ಭಾವನೆ ದೂರಾಗುವುದು. ಮುಖ್ಯವಾಗಿ ತೀರ್ಥಕ್ಷೇತ್ರಗಳಲ್ಲಿ ಸಜ್ಜನರ ಸಮಾಗಮ ಉಂಟಾಗಿ ಅವರ ಸಂಪರ್ಕದಿಂದ ಜೀವನವೇ ಬದಲಾಗುವುದು. ಆದಕ್ಕಾಗಿಯೇ ವಿಜಯದಾಸರು 'ನಿನ್ನ ದರುಶನಕ್ಕೆ ಬಂದವನಲ್ಲವೋ, ಪುಣ್ಯವಂತರ ದಿವ್ಯಚರಣ ನೋಡಲಿ ಬಂದೆ' ಎಂದು ಹಾಡಿದ್ದಾರೆ. ಇಂತಹ ಸಾಧುಗಳ ಸನ್ನಿಧಾನದಿಂದಲೇ ತೀರ್ಥಗಳಲ್ಲಿ ಪಾವಿತ್ರ್ಯ ಉಂಟಾಗುವುದೆಂದು "ನಹ್ಯಂ ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾ ಮಯಾಃ ತೇ ಪುನಃ ತ್ಯು ರುಕಾಲೇನ ದರ್ಶನಾದೇವ ಸಾಧವಃ" ಎಂಬ ಪುರಾಣ ವಚನಗಳು ಹೇಳುವುವು. ಇದಲ್ಲದೆ ವಿವಿಧ ಕ್ಷೇತ್ರಸ್ಥ ಹರಿಯು ಪ್ರತೀಕ ದರ್ಶನಾದಿಗಳಿಂದ ಮನಃಪರಿಪಾಕವಾಗಿ ನಿರ್ಬೀಜ ಪಾಪಗಳು ಪರಿಹಾರ ಹೊಂದುವುವು. ವಿಜಯದಾಸರು 'ನಿನ್ನ ನೋಡಲಿ ಬಂದೆ ನಿತ್ಯ ತೃಪ್ತ' ಎಂಬ ಪದದಿಂದ ಇದನ್ನು ಸೂಚಿಸಿರುವರು. ಅವರಲ್ಲೂ ಗಂಗಾಸ್ನಾನವಂತೂ ಪ್ರತಿಯೊಬ್ಬ ಭಾರತೀಯನಿಗೂ ಅತ್ಯಂತ ಪವಿತ್ರ ಸಾಧನ ಮತ್ತು ಅನದ್ನು ನೆರವೇರಿಸುವುದೊಂದು ಜೀವನದಲ್ಲಿನ ದೊಡ್ಡ ಸಿದ್ಧಿ. ಆದ್ದರಿಂದ ಕಾಶೀಯಾತ್ರೆ ಮಾಡುವುದು ಹಿಂದೆ ವಾಡಿಕೆಯಾಗಿ ಹೋಗಿತ್ತು. ಭಾರತದ ವಿವಿಧ ಭಾಗಗಳಲ್ಲಿನ ಬೇರೆ ಬೇರೆ ತೀರ್ಥಕ್ಷೇತ್ರ ಮಹಿಮೆಗಳನ್ನು ಆಯಾಯ ಕ್ಷೇತ್ರ, ಸ್ಥಳ ಪುರಾಣಗಳು ಎತ್ತಿ ಸಾರುವುವು. ಇವು ಹೇಳುವ ಅನಿತರ ಸಾಧಾರಣ ಮಹಿಮೆ ಜನಗಳಿಗೆ ಅವುಗಳಲ್ಲಿ ಪ್ರವೃತ್ತಿಯನ್ನುಂಟು ಮಾಡುವುದಕ್ಕಾಗಿಯೇ. ದಾಸರುಗಳು ಸಾಮಾನ್ಯವಾಗಿ ಭಾರತದ ಎಲ್ಲ ತೀರ್ಥಕ್ಷೇತ್ರಗಳ ಮಹಿಮೆಗಳನ್ನು ಬಣ್ಣಿಸಿರುವರು. ಈ ಕೆಲವು ಪದಗಳಿಂದ ಅವುಗಳ ದಿಗ್ದರ್ಶನವಾಗಬಹುದು.

ಜಗನ್ನಾಥದಾಸರು ಕೆಳಗಿನ ಪದ್ಯಗಳಲ್ಲಿ ತೀರ್ಥಗಳ ಮತ್ತು ಕ್ಷೇತ್ರಗಳ ಎಣಿಕೆ ಮಾಡಿದ್ದಾರೆ.

ಭೂಪಾಳಿ-ಝಂಪೆ

ವಾರ್ಧಿಕ ಷಟ್ಪದಿ

ಸ್ಮರಿಸಿ ತೀರ್ಥಕ್ಷೇತ್ರ ಸಜ್ಜನರು ನಿರುತದಲಿ । ಅರುಣೋದಯದಲೆದ್ದು ಭಕ್ತಿಪೂರ್ವಕವಾಗಿ । ಕರಣತ್ರಯದಿ ಮಾಳ್ಪ ಪಾಪರಾಶಿಗಳ ಬಗೆಹರಿಸಿ ಸಂತೈಸುವ । ಭಾಗೀರಥೀ, ಸರಸ್ವತಿ, ಯಮುನ, ವಾರುಣಾ । ಶ್ರೀ ಗೋದ ಫಲ್ಗುಣೀ ಶ್ರೋಣಭದ್ರಾ ನರ್ಮ । ದಾ ಗಂಡಕಿ ಭೀಮರಥಿ ತುಂಗಭದ್ರಾ ಪ್ರಯಾಗ ತ್ರಿವೇಣಿ ಹೇಮಾ । ವೇಗವತಿ

ಗಾಯತ್ರೀಕೌಸಕೀಮಣಿಕರಣಿ । ಕಾ ಗೌತಮೀ ವಿಯದ್ಗಂಗಾ ಕುಮದ್ವತೀ । ಕಾಗಿನೀ ನೇತ್ರಾವತಿ
ವೈತ್ರವತಿ ಹೈಮವತಿ ಸಿಂಧು ಪಾಪಾಘನಾಶೀ ॥ 1 ॥

ಹೀಗೆ ತೀರ್ಥಗಳನ್ನು ವರ್ಣನೆ ಮಾಡಿ ಕ್ಷೇತ್ರಗಳನ್ನು ವರ್ಣಿಸುತ್ತಾರೆ. ಈ ತೀರ್ಥಗಳಲ್ಲಿ ತಾರತಮ್ಯ ಉಂಟು. ಈ ತಾರತಮ್ಯವನ್ನು ಜಗನ್ನಾಥದಾಸರೂ ಪ್ರಾಣೇಶದಾಸರೂ ವರ್ಣನೆ ಮಾಡಿದ್ದಾರೆ.

ಭೂಪಾಳಿ-ಝಂಪೆ

ಭಾಗೀರಥ್ಯಾದಿ ನದಿಗಳ ತಾರತಮ್ಯ ನಿಜ । ಭಾಗವತ ತಿಲಕ ನಿಮಿರಾಜಗೊಲಿದು ವಸಿಷ್ಠ । ಯೋಗೀಶ ಪೇಳ್ದಸುಕಥಾ ಕುತೂಹಲವನ್ನು ರಾಗದಲಿ ಕೇಳಿ ಜನರು ಅಯ್ಯ । ಹರಿಪಾದನಖದ ಸಂಸ್ಪರ್ಶ ಮಾತ್ರದಿಂದಲಿ । ಸುರತರಂಗಿಣಿ ಶ್ರೇಷ್ಠಳೆನಿಸುವಳು ನದಿಗಳೊಳು । ದರರಥಾಂಗ ಗದಾ ವಿಧೃತ ಪಾಣೀ ಮಾಧವನು ಧೊರೆಯೆನಿಪಸಾ ತೀರ್ಥಕೆ । ಸರಿತಾಗ್ರಗಣ್ಯ ಗೋದಾವರಿ ನಳಿನಿಗಿಂತ । ಕೊರೆಯೆನಿ ಪಳೈವತ್ತು ಗುಣದಲಿ ಶಂಖ । ಚರಣ ಸುಗದಾಬ್ಜ ಶೋಬಿತ ವೀರನಾರಾಯಣ ನೆನಿಪನಾಸಲಿಲಕೇ ।

ಹೀಗೆ ಗೋದಾವರಿಗಿಂತ, ಕೃಷ್ಣ, ಯಮುನ, ಕಾವೇರಿ ಕಡಿಮೆ ಎಂಬೀ ತಾರತಮ್ಯವನ್ನು ಹೇಳಿರುವರು. ತೀರ್ಥಗಳನ್ನು ಸ್ಮರಿಸಿ ಅವುಗಳ ತಾರತಮ್ಯವನ್ನು ಪರಿಗ್ರಹಿಸಿ ಅಲ್ಲಿ ಸ್ನಾದಿಗಳನ್ನು ಮಾಡಿದಲ್ಲಿ ಅನೇಕ ಪಾಪಗಳನ್ನು ಪರಿಹಾರವಾಗಿ ಅಂತಃಕರಣ ನೈರ್ಮಲ್ಯವುಂಟಾಗುವುದು.

(ಈ) ಅಹಂಕಾರ ತ್ಯಾಗ

ಅಂತಃಕರಣ ನೈರ್ಮಲ್ಯ ಉಂಟಾಗಲು ಮನುಷ್ಯ ಅರಿಷಡ್ವರ್ಗಗಳನ್ನೂ, ಅಹಂಕಾರವನ್ನೂ ತ್ಯಜಿಸಬೇಕು. ತನಗಿಂತ ಧೈರ್ಯದಲಿ, ಶಕ್ತಿಯಲ್ಲಿ, ಐಶ್ವರ್ಯ ಜ್ಞಾನಾದಿಗಳಲ್ಲಿ ಉತ್ತಮರೆನಿಸಿದವರನ್ನು ನೋಡಿ ತನ್ನ ಅಲ್ಪತೆಯನ್ನು ಮನವರಿಕೆ ಮಾಡಿಕೊಳ್ಳಬೇಕು. ಇದಕ್ಕಾಗಿಯೇ ದಾಸರುಗಳು 'ಗರುವವ್ಯಾತಕೋ ಮನುಜ' ಇತ್ಯಾದಿ ಪದಗಳನ್ನೂ ರಚಿಸಿರುವರು. ಅಹಂಕಾರವು ಪ್ರತಿಯೊಬ್ಬರಲ್ಲೂ ರೂಢಮೂಲವಾಗಿರುವುದು. ಇದೇ ಕ್ರಿಯಾಶಕ್ತಿಯಾಗಿರುವುದು. ಆದರೆ ಇದರೊಂದಿಗೆ ಅವಿವೇಕ ಬೆರೆತಲ್ಲಿ ಎಲ್ಲೆ ಮೀರಿ ಹೋಗಿ ನಾಶಕ್ಕೆ ಕಾರಣವಾಗುವುದು. ಆದ್ದರಿಂದ ಪುನಃ ಪುನಃ ಅಹಂಕಾರ ತ್ಯಾಗಕ್ಕೆ ಯತ್ನ ಮಾಡಬೇಕು. ಅದಕ್ಕಾಗಿಯೇ ವಿಜಯದಾಸರು ಹೀಗೆ ಹೇಳಿದ್ದಾರೆ.

ಮಟ್ಟತಾಳ

ಅಹಂಕಾರವಳಿಯದೋ ಅಹಂಕಾರವಳಿಯದೋ । ಅಹಂಕಾರವಳಿದರೆ ದೇಹಕ್ಕೆ ನಿರ್ಮಲವೂ । ಅಹಂಕಾರದಿಂದಲಿ ಬಾಹ ಫಲಂಗಳು । ಬಹುದೂರವಾಗಿ ಸಹಗತಿಗೊದಗವು । ಅಹ ಸಂವತ್ಸರನೆ ವಿಜಯವಿಠಲ ಇಂಥ । ದ್ರೋಹಿಗೆ ಇನ್ನಾವ ಸಹಾಯ ಸಂಪತ್ತು ।

ಆನಂದಭೈರವಿ-ಆಟ

ಮದಮತ್ಸರ ಬಿಡದಾ ತನಕಾ। ವಿಧ ವಿಧದ ಸಾಧನ ದಿನದಿನ ಮಾಡಲೇನೋ॥ ಅ ॥

ವೇದಶಾಸ್ತ್ರಗಳೋದಲೇನು ಗಂಗಾ ಗೋದಾವರಿಯಲಿ ಸ್ನಾನ ಮಾಡಲೇನು ।
ಸಾಧುಕರ್ಮವಾಚರಿಸೇನು ವಿಷ್ಣುಪಾದದಿ ಪಿಂಡದಾನವ ಮಾಡಲೇನೋ ॥ 1 ॥

ಸನ್ಯಾಸಾಶ್ರಮ ಧರಿಸಲೇನೋ ಗೋಹಿರಣ್ಯಾದಿಗಳಲ್ಲಿ ಮಮತೆ ಬಿಟ್ಟರೇನು ।
ಪುಣ್ಯಕ್ಷೇತ್ರಕೆ ಪೋಗಲೇನು ಅನ್ನಕನ್ಯಾದಿಗಳ ದ್ರವ್ಯ ದಾನ ಮಾಡಲೇನು - ಜಗನ್ನಾಥದಾಸರು

ಮೊದಲಿಗೆ ಶ್ರದ್ಧೆಯೆಂಬುದು ಅವಶ್ಯಕ. ಅದು ಗೀತೆಯಲ್ಲಿ ಹೇಳಿದಂತೆ ಆಯಾ ಜೀವರ ಸಂಸ್ಕಾರಕ್ಕನುಸರಿಸಿ ತ್ರಿವಿಧವಾದುದು. ಸಾತ್ವಿಕರಾದ ಜೀವರಿಗೆ ಸ್ವಾಭಾವಿಕವಾಗಿ ಭಗವಂತನಲ್ಲಿ ಭಕ್ತಿ, ಶಾಸ್ತ್ರಗಳಲ್ಲಿ ಗೌರವ ಇದ್ದು ಶಾಸ್ತ್ರೋಕ್ತ ಆಚರಣೆಯಲ್ಲಿ ದೀಕ್ಷೆಯುಂಟಾಗುವುದು. ಸತ್ಕರ್ಮಾಚರಣೆಯಿಂದಲೂ, ತೀರ್ಥಯಾತ್ರೆಯಿಂದಲೂ ಅಂತಃಕರಣ ನೈರ್ಮಲ್ಯ ಉಂಟಾಗಿ ಬಹಿರಂಗ ಪಾಪಗಳು ನಾಶವಾಗುವುವು. ಶಮದಮಾದಿ ಗುಣಗಳನ್ನು ಅಭಿವೃದ್ಧಿಗೊಳಿಸಿಕೊಂಡಲ್ಲಿ ಆಗ ಬ್ರಹ್ಮಜ್ಞಾನಕ್ಕೆ ಅಧಿಕಾರ ಪ್ರಾಪ್ತವಾಗುವುದು. ಇದನ್ನೇ 'ಓಂ ಅಥಾತೋ ಬ್ರಹ್ಮ ಜಿಜ್ಞಾಸಾ' ಎಂಬ ಸೂತ್ರದಲ್ಲಿ 'ಅಥ' ಎಂಬ ಪದದಿಂದ ನಿರೂಪಿಸಿರುವರು. ಇಷ್ಟೂ ಆಸ್ತಿಭಾರ ಹಾಕಿದಂತೆ. ಇದರ ಮೇಲೆ ಕಟ್ಟಡ ನಿರ್ಮಾಣ ಮಾಡಬೇಕು. ಬರಿಯ ಕರ್ಮವೇ ಮನುಷ್ಯನಿಗೆ ತಾರಕವಾಗಲಾರದು. ಇದು ಜ್ಞಾನಕ್ಕೆ ಹಾದಿ ಹಾಕಿಕೊಡುವುದು. ಆದ್ದರಿಂದಲೇ "ಕರ್ಮಣಾ ಜ್ಞಾನಮಾತನೋತಿ, ಜ್ಞಾನೇನ ಅಮೃತೀಭವತಿ" ಎಂಬ ವಚನವು ಪ್ರಸಕ್ತವಾಗಿರುವುದು. "ದೂರೇಣಾಹ್ಯವರಂ ಕರ್ಮ" ಎಂಬ ಗೀತಾವಚನವೂ ಇದನ್ನೇ ತಿಳಿಸುವುದು. ಅಂತೂ ಮೂಲಾಚರಣೆ ಸತ್ಕರ್ಮದಿಂದ ಆಗಬೇಕು. ಅದಾಗದೇ ಬರಿಯ ಕರ್ಮ ಮಾಡುವುದು ವ್ಯರ್ಥವಾಗುವುದು.

ಮಟ್ಟತಾಳ

ಎಲೆ ಮನವೆ ನಿತ್ಯ ಮಲವ ತೊಳೆಯದಲೆ । ಹಲವು ಕರ್ಮಗಳು ಒಲಿದು ಮಾಡಿದರೇನು । ಸುಲಭದ ಸದ್ಗತಿಗೆ ನೆಲೆಯಾಗುದೇನು । ತಿಳಿದು ಈ ಪರಿಯಲ್ಲಿ ಇಳೆಯೊಳಗೆ ಕರ್ಮಾ । ವಳಿಗಳ ಧರಿಸಿ ತೊಳಲಬೇಕಲ್ಲದೆ । ಮಲಿನ ಹೋಗದು ಮನವೆ । ಎಳೆ ಭಕುತಿಯಿಂದ ವಿಜಯವಿಠ್ಠಲ ಹರಿಯ । ಜಲಜ ಪಾದವ ನಂಬೆ ಕರ್ಮವು ಯಾತಕ್ಕೆ ।

ಝಂಪೆತಾಳ

ಕೃತಯಾತ್ರೆ ತೀರುಥ ನಿತ್ಯ ಓದನ ದಾನ । ಉತ್ತಮ ಜಪತಪರತುನ ತುಲಾಭಾರ । ಅತಿಶಯವಾದ ಭಾರತ ರಾಮಾಯಣ । ಶ್ರುತಿ ಬಹು ಕಥೆ ಮಂಗಳಾರತಿ ಮೊದಲಾದ ವಿ । ಹಿತ ಧರ್ಮಗಳೆಲ್ಲ ಪ್ರತಿದಿನದಲಿ ಉ । ನ್ನತವಾಗಾಚರಿಸಲು ಗತಿಗೆ ಸಾಧನವಲ್ಲ ।

ಕ್ಷತಿಯೋಳು ಜ್ಞಾನಭಕ್ತಿ ವೈರಾಗ್ಯವ । ಮುಕುತಿಗೆರಕವಾಗಿ ಮಾರುತಮತದ ಸ । ಮ್ಮತದಲಿ ತಿಳಿದು ಶಾಶ್ವತವೆನ್ನೊ ಮನವೆ । ಯತಿವಂದ್ಯ ವಿಜಯವಿಠ್ಠಲರೇಯ । ಶಾಂತಮೂರುತಿಯ ಪಾದಕೆ ನಮಿತನಾಗೋ ಬಿಡದೇ ।

ಜತೆ

ದಾರಿಯ ಪಿಡಿದು ಕಡೆಗೆದ್ದವರ ಕಾಣೆ । ನಿರ್ಮಾಲಾತ್ಮಕ ವಿಜಯವಿಠ್ಠಲನ್ನ ನೀ ತಿಳಿ ।

(ಉ) ಗುರು ಮತ್ತು ಸಜ್ಜನ ಸಂಗ

ಜ್ಞಾನ ಸಂಪಾದನೆಗೆ ಮುಖ್ಯವಾಗಿ ಬೇಕಾದದ್ದು ಸಜ್ಜನರ ಸಂಗ. ಅದಿಲ್ಲದೆ ಜ್ಞಾನವುಂಟಾಗಲಾರದು. ಸತ್ಸಹವಾಸದ ಮಹಿಮೆಯನ್ನು ದಾಸರುಗಳು ವಿಪುಲವಾಗಿ ಹೇಳಿದ್ದಾರೆ.

ಶಂಕರಾಭರಣ-ರೂಪಕ

ಸಂಗವಾಗಲೀ ಸಾಧುಸಂಗವಾಗಲಿ । ಸಂಗದಿಂದ ಲಿಂಗದೇಹ ಭಂಗವಾಗಲಿ ॥ ಅ ॥

ಅಚ್ಯುತಾಂಘ್ರಿ ನಿಷ್ಠರ ಯದೃಚ್ಛಲಾಭತುಷ್ಟರ । ನಿಶ್ಚಯಾತ್ಮ ಜ್ಞಾನವುಳ್ಳಅಚ್ಚ ಭಾಗವತರ ॥ 1 ॥

ತಂತ್ರಸಾರ ಅಷ್ಟಮಹಾಮಂತ್ರ ಪರಿಪೂರ್ಣ ಸ್ನೇಹಯಂತ್ರದಿಂದ ಬಿಗಿದು ಸ್ವತಂತ್ರ ಮೂರ್ತಿ ತಿಳಿದವರ ॥ 2 ॥

ಪಂಚಭೇದ ಸಂಸ್ಕಾರ ಪಂಚ ಭೂತಾತ್ಮವಾದ ಪಂಚಭೇದ ಕೃಷ್ಣರಾಯನ ಪಂಚಮೂರ್ತಿ ತಿಳಿದವರ ॥ 3 ॥

ಕನಕದಾಸರು ಎಂತಹವರ ಸಂಗ ಮಾಡಕೂಡದೆಂಬುದನ್ನು ವರ್ಣಿಸುತ್ತಾರೆ.

ಕಾಂಬೋಧಿ-ಝಂಪೆ

ಸಜ್ಜನರ ಸಂಗದೊಳಗಿರಿಸೆನ್ನ ರಂಗ । ದುರ್ಜನರ ಸಂಗನಾನೊಲ್ಲೆ ಮಂಗಳಾಂಗ । ಆಗಮದ್ವಯವನರಿಯದವ । ಸಂಗ ರೋಗದಲಿ ಆವಾಗ ಮುಲುಗುವನಂಗ ಕಾಗಿನೆಲೆಯಾದಿ ಕೇಶವನ ನೆನೆಯದಿಹ ಭಾಗವತರಸಂಗ ಬಲುಭಂಗ ಎಲೊ ರಂಗ ॥ 3 ॥

ಸದ್ಗುರುಗಳಿಂದಲೇ ಜ್ಞಾನ ಹೊಂದಬೇಕೆಂದು ಶಾಸ್ತ್ರಗಳ ಅಣತಿ. ಗುರು ಉಪದೇಶ ಇಲ್ಲದ ಮಂತ್ರ । ಭಕ್ತಿ ಗುರು ಉಪದೇಶವಿಲ್ಲದ ಭಕ್ತಿಗುರುಕ್ರಿಯೆಗಳು । ಉರಗನ ಉಪವಾಸದಂತೆ ಕಾಣಿರೋ ॥

ಎಂದು ಪುರಂದರದಾಸರು ನುಡಿದಿದ್ದಾರೆ. ಗುರುಗಳಲ್ಲಿ ಪ್ರಸನ್ನನಾಗಿಯೇ ಉದ್ಧೃತನಾಗಬೇಕೆಂಬುದು ಎಲ್ಲ ದಾಸರ ಏಕಾಭಿಪ್ರಾಯ.

ಲಾವಣಿ ಚಾಲ್-ಆದಿ ·

ಗುರುವಿನ ಗುಲಾಮನಾಗದ ತನಕ ದೊರಯದಣ್ಣ ಮುಕುತಿ ॥ ಪ ॥

ಪರಿಪರಿ ಶಾಸ್ತ್ರವ ನೋಡಿದರೇನು ವ್ಯರ್ಥವಾಯಿತು ಭಕುತಿ1 ॥ ಅ ॥

ಆರು ಶಾಸ್ತ್ರವನೋದಿದರಲ್ಲ ಮೂರಾರ್‍ಪುರಾಣ ಮುಗಿಸಿದರಿಲ್ಲ । ಸಾರಸ್ಯಾಯ ಕಥೆಗಳ ಕೇಳಿದರಿಲ್ಲ ಧೀರನಾಗಿ ನಾ ಪೇಳಿದರಿಲ್ಲ । ಗುರುವಿನ ಧರ್ಮಕೊರಾಣ್ಯದ ಭಿಕ್ಷ ಅರಿತು ನೀಡಲು ಮೋಕ್ಷ । ಮರೆತುಬಿಟ್ಟರೆ ಕಪಾಳಮೋಕ್ಷಯಮನಲ್ಲಾಹೋದುಶಿಕ್ಷ ।

ಎಂದು ಮೋಹನದಾಸರು ಹೇಳಿದ್ದಾರೆ.

(ಊ) ಜ್ಞಾನ ಮತ್ತು ಭಕ್ತಿ

ಜ್ಞಾನ ಮತ್ತು ಭಕ್ತಿಗಳು ಒಂದಕ್ಕೊಂದು ಹೊಂದಿಕೊಂಡಿರುವುವು. ಜ್ಞಾನದ ಬಗೆಯೇ. ಶ್ರವಣ, ಮನನ, ಧ್ಯಾನಗಳು. ಭಕ್ತಿಯು ಇವೆಲ್ಲದರೊಂದಿಗೂ ಬೆರೆತಿರಬೇಕು. ಮಹಾತ್ಮಜ್ಞಾನಪೂರ್ವಕವಾದ ದೃಢತರ ಸ್ನಹೇವೇ ಭಕ್ತಿಯು. ಆದ್ದರಿಂದ ಸಾಧಕನಿಗೆ ಜ್ಞಾನ, ಭಕ್ತಿಗಳೆರಡೂ ಅತ್ಯವಶ್ಯಕವೆಂದು ಶಾಸ್ತ್ರಗಳು ಸಾರುವುವು. ಜ್ಞಾನವಿಲ್ಲದೆ ಯಾವ ಸಾಧನೆ ಮಾಡಿದರೂ ವ್ಯರ್ಥವೆಂದು ದಾಸರು ಹೇಳಿರುವರು. 'ಏನು ಮಾಡಿದರೇನು ಜ್ಞಾನವಿಲ್ಲದೆಲೆ, ಆನೆಗೆ ಮಜ್ಜನವನು ಮಾಡಿಸಿದ ತೆರದಿ' ಎಂದು ಮೋಹನದಾಸರು ಹೇಳಿರುವರು. ವಿಜಯದಾಸರು ಇದನ್ನೇ ಹೇಳಿದ್ದಾರೆ.

ಆನಂದಭೈರವಿ-ಛಾಪು

ಏನಾದರೇನು ಮೋಕ್ಷವಿಲ್ಲ ಜ್ಞಾನವಿಲ್ಲದೆ ॥ ಪ ॥

ವೇದ ಓದಿದರೇನು ಶಾಸ್ತ್ರ ನೋಡಿದರೇನು ಕಾದಿ ಕಾದಾಡಿ ಗೆದ್ದರೇನು ಜ್ಞಾನವಿಲ್ಲದೆ ॥ 1 ॥

ಕಾಶಿಗೆ ಹೋದರೇನು ಕಾನನ ಸೇರಿದರೇನು ಕಾಶಿಪಿತಾಂಬರ ಉಟ್ಟರೇನು ಜ್ಞಾನವಿಲ್ಲದೆ ॥ 2 ॥

ಜಪತಪ ಮಾಡಲೇನು ಜಾಣತನ ಮೆರೆದರೇನು ವಿಜಯವಿಠ್ಠಲನ ಸಾರಿದರೇನು ಜ್ಞಾನವಿಲ್ಲದೆ ॥ 3 ॥

ಭಕ್ತಿಯೆಂಬುದು ಜೀವನ ಮುಖ್ಯವ್ಯಾಪಾರ. ಹರಿಯಲ್ಲಿ ಸಂಪೂರ್ಣ ಮಗ್ನ ಮಾಡುವುದೇ ಭಕ್ತಿಯ ಇತಿಕರ್ತವ್ಯತೆ. ಅದು ಹೇಗೆ ಎಂಬುದನ್ನು ಭಕ್ತಿ ಸುಳಾದಿಯಲ್ಲಿ ವಿಜಯದಾಸರು ನಿರೂಪಿಸಲಿದ್ದಾರೆ.

ಧ್ರುವತಾಳ

ಚಿಂತೆ ಮಾಡುವುದಲ್ಲ ಚಿನ್ಮಯಮೂರ್ತಿ ಪಾದ । ಕ್ರಾಂತನಾಗಿದ್ದ ಮೇಲೆ ಎಲೆ ಮನವೆ । ಎಂತಾಗುವುದೋಗತಿ ನಿನಗೆಂದು ವ್ಯಾಕುಲದಿ । ಸಂತತ ಬಳಲದಿರು ದೃಢವಾಗಿ

ತಿಳಿದು । ಚಿಂತಾಮಣಿಯ ಒಲಿದು ಬೆಂಬಿಡದೆಲೆ ಇದ್ದು । ನಿಂತಲ್ಲಿ ನಿಧಾನಿಗರುಹುತಿರೆ । ಭ್ರಾಂತನಾಗಿ ಬರಿದೆ ಕಂಡದ್ದು ಹಂಬಲಿಸಿ । ಅಂತವಿಲ್ಲದ ನರಕಕ್ಕಿಳಿಯದಿರು । ಮಂತ್ರತಂತ್ರಕ್ಕೆ ಸಿಲುಕ ಮಹಾದಾದಿಗಳ ಒಡೆಯ ಸಂತೈಸುವ ನೋಡು ಗೆಳೆಯನಾಗಿ ।

ಮಠ್ಯತಾಳ

ಉತ್ತಮಗುಣನಿಧಿ ವಿಜಯವಿಠ್ಠಲರೇಯ । ಪೆತ್ತ ಜನಕನಂತೆ ಹಗಲಿರುಳು ಬಿಡದೆ । ತುತ್ತುಮಾಡಿ ತಂದು ಉಣಿಸುವ ಸತ್ಯವೋ ।

ತ್ರಿಪುಟತಾಳ

ಸರ್ವಾಧಿಷ್ಠಾನದಲ್ಲಿ ಹರಿಯೇ ಸಂತವಿದ್ದು । ಶರ್ವಾದಿಗಳ ಕೈಯ ವ್ಯಾಪಾರವ । ನಿರ್ವಹಿಸಿಕೊಂಬವನು ನಿರ್ದೋಷನಾಗಿ ಬಲು । ಉರ್ವಿಯೊಳಗೆ ತಾನೆ ಪ್ರಾಪ್ತನಾಗಿ । ದುರ್ವಿವಿಷಯಂಗಳು ನಿನಗೆತ್ತಲೋ ಮನವೆ.... ।

ಅಟತಾಳ

ನುಡಿವನು ವರುಣನು ಮೆಲ್ಲುವ ಪಾವಕ । ಪಿಡಿವನು ದಕ್ಷನು । ಕೇಳುವ ದಿಗ್ದೇವ । ನಡೆವನು ಜಯಂತ ನೋಡುವ ಸೂರ್ಯನು । ಬಿಡದೆ ಅಪ್ಪಿಕೊಂಬ ಅಹಂಕಾರಿಕಪ್ರಾಣ । ಒಡನೆ ಗುಹ್ಯಗಳಲ್ಲಿ ಮನುಮಿತ್ರ ಮನದಲ್ಲಿ । ಬಿಡದೆ ಇಂದ್ರನು ಇಪ್ಪ ಅಹಂಕಾರದಲ್ಲಿ ರುದ್ರ । ಅಡಿ ತೊಲಗದಲಿ ವರಿದಂತಾಗುತಲಿರೆ । ಪೊಡವಿಯೊಳಗೆ ನಿನಗಾವುದೋ ಅಧೀನ । ಕಡಲಶಾಯಿ ನಮ್ಮ ವಿಜಯವಿಠ್ಠಲನಲ್ಲಿ । ದೃಢಭಕುತಿಯ ಮಾಡು ಇದೆ ಸಾಧನ ಸಿದ್ಧ ।

ಆದಿತಾಳ

ನಾನೆ ಪೋಗುತಲಿಪ್ಪೆ ನಾನೆ ಬರುತಲಿಪ್ಪೆ । ನಾನೆ ಕೊಡುತಲಿಪ್ಪೆ ನಾನೆ ಕೊಳ್ಳುತಲಿಪ್ಪೆ । ನಾನೆ ಭುಂಜಿಸುತಿಪ್ಪೆ ನಾನೆ ಬಲವಂತನಿಪ್ಪೆ । ನಾನೆ ಧನವಂತನಿಪ್ಪೆ ನಾನೆ ಶ್ರೇಷ್ಠನಿಪ್ಪೆ । ನಾನೆ ನಾನೆ ಎಂದು ಪೇಳುವ ಮನುಜನು । ನಾನಾ ಯಾತನೆಗಳ ಪಡುವನು. ಅನುದಿನ । ದೀನ ಮಂದಾರ ಸಿರಿ ವಿಜಯವಿಠ್ಠಲರೇಯ । ನೀನೆ ಮಾಳ್ಪುವನೆಂಬ ಭಕ್ತರ ಕೈ ಬಿಡ ।

ಜೊತೆ

ಭಕ್ತಿಯೇ ಪ್ರಧಾನವಾದ ಚಿಂತೆಯ ಮಾಡು

ಮುಕ್ತಿದಾಯಕ ದೇವ ವಿಜಯವಿಠ್ಠಲ ಒಲಿವ

ಸತ್ಕರ್ಮಾಚರಣೆಯಿಂದ ಅಂತಃಕರಣ ನೈರ್ಮಲ್ಯ ಉಂಟಾಗಿ ಶಮದಮಾದಿ ಸಂಪತ್ತಿನಿಂದ ಅಧಿಕಾರ ಪ್ರಾಪ್ತವಾದ ಮೇಲೆ, ಹರಿಯ ವಿಷಯವನ್ನು ಜಿಜ್ಞಾಸೆ ಮಾಡಬೇಕು.

ಶಾಸ್ತ್ರದಲ್ಲಿ ಉಕ್ತವಾದಂತಹ ಭಗವನ್ಮಹಿಮೆಗಳನ್ನು ಪುನಃ ಪುನಃ ಕೇಳಿ ಕೇಳಿ ಅದನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಂತೆ, ಹರಿಯಲ್ಲಿ ಮನಃಪ್ರಾವಣ್ಯ ಉಂಟಾಗುವುದು. ತನ್ನ ಅಲ್ಪತೆಯ ಅರಿವಾಗುವುದು. ಆಗ ಸಾಧಕನು ಆರ್ತನಾಗಿ ಭಕ್ತಿಯಿಂದ ದೇವರಲ್ಲಿ ಮೊರೆ ಇಡುವನು.

೧೧. ಇತರ ದೇವತೆಗಳ ಸ್ತೋತ್ರ

ದೇವರ ಪ್ರಾರ್ಥನೆಗೆ ಮುನ್ನ ತಾರತಮ್ಯ ಕ್ರಮವನ್ನನುಸರಿಸಿ ಎಲ್ಲ ದೇವತೆಗಳನ್ನು ದಾಸರುಗಳು ಸ್ತೋತ್ರ, ವಂದನೆ ಮಾಡಿದ್ದಾರೆ. ವಾಯುದೇವರಿಂದಲೇ ಜೀವರುಗಳು ಉದ್ಧೃತರಾಗುತ್ತಾರೆಂಬುದು ಮಧ್ವಮತದ ಮುಖ್ಯ ಪ್ರಮೇಯವಾದ್ದರಿಂದಲೂ, ಮಧ್ವಾಚಾರ್ಯರು ವಾಯುದೇವರು ಅವತಾರರಾದ್ದರಿಂದಲೂ, ವಾಯುದೇವರ ಮತ್ತು ಹನುಮದ್ಭೀಮಮಧ್ವರಸ್ತೋತ್ರವು ದಾಸಸಾಹಿತ್ಯದಲ್ಲಿ ವಿಶೇಷವಾಗಿ ವಿಜೃಂಭಿಸುತ್ತಿದೆ.

(ಅ) ಲಕ್ಷ್ಮೀದೇವಿ

ಭಗವಂತನ ಅನಂತರದಲ್ಲಿ ಲಕ್ಷ್ಮೀದೇವಿ ಉತ್ತಮಳು. ಲಕ್ಷ್ಮೀದೇವಿ ಅಕ್ಷರ ತತ್ತ್ವಾಭಿಮಾನಿ. ಜಡ ಪ್ರಕೃತಿಗೆ ನಿಯಾಮಕಳು ಮತ್ತು ಚಿತ್ಪ್ರಕೃತಿಯೆನಿಸುವಳು. ಈಶಕೋಟಿ ಪ್ರವಿಷ್ಟಳು. ಕಾಲತಃ ದೇಶತಃ ಹರಿಗೆ ಸಮಳು. ಪ್ರಳಯಕಾಲದಲ್ಲಿ ಪ್ರಳಯೋದಕಳಾಗಿ ಹರಿಗೆ ಮಲಗಲು ವಟಪತ್ರಳಾಗುವಳು. ಶ್ರೀಭೂದುರ್ಗಾ ರೂಪತ್ರದಿಂದ ಸೃಷ್ಟಿಸ್ಥಿತಿಲಯಗಳಲ್ಲಿ ಹರಿಯ ಇಚ್ಛೆಯಂತೆ ವ್ಯಾಪರ ಮಾಡುವಳು. ಹರಿಯ ಅಧೀನಳಾದರೂ ನಿತ್ಯಮುಕ್ತಳು, ಅಜ್ಞಾನಾದಿ ದೋಷರಹಿತಳು. ಹರಿಗೆ ಕೆಲವು ವಿಷಯಗಳಲ್ಲಿ ಸಮಳಾದ್ದರಿಂದ ಸಮನಾ ಎಂಬ ಹೆಸರುಳ್ಳವಳು. ಬ್ರಹ್ಮಾದಿ ದೇವತೆಗಳನ್ನೂ ಬ್ರಹ್ಮಾಂಡವನ್ನೂ ಭ್ರೂಚಾಲನ ಮಾತ್ರದಿಂದ ಸೃಷ್ಟಿಸಿ, ಸಂಹಾರಗೈಸಲು ಶಕ್ತಳು. ಅದರಲ್ಲೂ ಹರಿಯ ಗುಣಗಳನ್ನು ಸಂಪೂರ್ಣವಾಗಿ ಅರಿಯಳು.

ನವರೋಜು-ಆದಿತಾಳ

ಶ್ರೀಮಹಾಲಕ್ಷ್ಮೀ ಮಾತೆ ತ್ರಿಭುವನ ಜನನಿ
ಶ್ರೀಮಂತ ವಿಷ್ಣು ವಾಮಾಂಕ ಸದನಿ ॥ ಪ ॥

ತಾಮರಸಾಸನವ್ಯೋಮಾಳಕ ಸುರಸ್ತೋತಮ
ವಿನುತೆ ಹೇ ಸೋಮ ಸಹೋದರಿ ॥ ಅ ॥

ಗುಣತ್ರಯಾತ್ಮಕ ಚೂಲಿಯನು ಅಲಂಕರಿಸಿ ವನಜ ಭವಾಂಡ ಪಾತ್ರಯನಲ್ಲಿರಿಸಿ ।
ಗಣನೆಯಿಲ್ಲದ ಜೀವಧಾನ್ಯ ತುಂಬಿರಿಸಿ ಜನರ ಯೋಗ್ಯತೆ ಉದಕವನಲ್ಲಿ ಬೆರೆಸಿ । ಮಿನುಗುವ
ಕರ್ಮ ಇಂಧನ ಕಾಲುವೆ ಮಹಾ ಅನಳಜನರ ಸಾಧನವೆಂಬ ದರ್ವಿಲಿ ಇನಿತು । ಪಾಕವ ಮಾಡಿ
ಘನ ಮಹಿಮನ ಭೋಜನಕ ಕೂಲಮಾಡ್ದ ನವರುಹನಯನೆ ॥ 1 ॥

ಮೋಹನ-ಅಟ

ಯಲ್ಲಮ್ಮ ನೆನಬೇಡವೆ ಸಿರಿದೇವಿಯು ಎಲ್ಲಾರಮ್ಮನಲ್ಲವೆ

ಬಲ್ಲಿದರಾಗಿಪ್ಪ ಬ್ರಹ್ಮಾದ್ಯರಿಗೆಲ್ಲ ಶ್ರೀಲಕುಮಿಯೆ ಅಮ್ಮನಲ್ಲದೆ ಮತ್ತಿಲ್ಲ ॥ ಅ ॥

ಆಲದೆಲೆಯ ಮೇಲೆ ಪರಮ ಪುರುಷನಂದು ಕಾಲವರಿತು ಬಂದು ಪವಡಿಸಲು । ಬಾಲಗವನು ಮಾಡಿಕೊಂಡಾಡಿ ಜೀವರ ಮೂಲಕರ್ಮಗಳ ತೀರುವಂತೆ ಮಾಡಿದ ॥ 1 ॥

ಅಮೋಘವೀರ್ಯನ ಗರ್ಭದಿ ಧರಿಸಿ ತಾ ಬೊಮ್ಮಾಂಡವನು ಪೆತ್ತಲೋಕಮಾತಾ । ಸುಮನ ಸರಿಗೆ ಕಡೆಗಣ್ಣು ಸೋಟದಿ ಆ ಮಹಾಪದವಿ ಕೊಡುವ ಭಾಗ್ಯವಂತೆ ॥ 2 ॥

ಎರಡೊಂದು ಗುಣದಿ ಪ್ರವಿಷ್ಟಳಾಗಿ ಜೀವರ ಯೋಗ್ಯತೆಯಂತೆ ಪಾಲಿಪಳ ಪರಮಪುರುಷ ಶ್ರೀವಿಜಯವಿಠ್ಠಲನ್ನ ಕರುಣದಿಂದಲಿ ಅನಂತಕಲ್ಪಕೆ ನಿತ್ಯ ॥ 3 ॥

ಮೇಲಿನ ಎರಡು ಪದ್ಯದಲ್ಲಿ ದಾಸರು ಲಕ್ಷ್ಮೀದೇವಿಯು ಮಾಡುವ ಸೇವೆಯನ್ನು ಪುರಂದರದಾಸರು ಸಹಾ 'ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ' ಎಂಬ ಪದದಲ್ಲಿ ಯಾವ ಪರಿಯಲ್ಲಿ ಹರಿಯ ಸೇವೆ ಮಾಡುತ್ತಾಳೆಂಬುದನ್ನು ವರ್ಣಿಸಿದ್ದಾರೆ.

ದುರ್ಗಾ ದುರ್ಗೆಯೆ ಮಹಜನ ದುಷ್ಟ ಸಂಹಾರಿ । ದುರ್ಗಾಂತರ್ಗತ ದುರ್ಗೆ ದುರ್ಲಭ ಸುಲಭೆ । ದುರ್ಗಮವಾಗಿದೆ ನಿನ್ನ ಮಹಿಮೆ ಬೊಮ್ಮ । ಭರ್ಗಾದಿಗಳಿಗೆಲ್ಲ ಗುಣಿಸಿದರು । ಸ್ವರ್ಗ ಭೂಮಿ ಪಾತಾಳ ಸಮಸ್ತ ವ್ಯಾಪ್ತ ದೇವಿ । ......

ಈ ದುರ್ಗಾ ಸುಳಾದಿಯಲ್ಲಿ ವಿಜಯದಾಸರು ದುರ್ಗಾದೇವಿಯ ರೂಪ, ಗುಣ, ಕ್ರಿಯೆಗಳನ್ನು ವಿವರವಾಗಿ ವರ್ಣಿಸಿದ್ದಾರೆ. ಈ ಕೆಳಗಿನ ಪದದಲ್ಲಿ ಲಕ್ಷ್ಮೀದೇವಿಯ ಅಂಗವರ್ಣನೆ ಇದೆ.

ರೇಗುಪ್ತಿ-ಆದಿ

ಕಮಲಮುಖಿಯೆ ಕಮಲಾಲಯೆ ಕಮಲೆ ಕಮಲಾಕ್ಷಯೇ ಕೋಮಲೆ ॥ ಪ ॥

ಕಮಲನಾಭನ ಪಾದಕಮಲಯುಗಳ ಮಧುಪೆ । ಕಮಲಜ ಜನನಿಯೆ ಕಮಲಮಿತ್ರ ಪ್ರಭೆ । ಅರುಣನ ಪೋಲುವ ಚರಣವು ಬಾಲಚಂದಿರನ ಸೋಲಿಪ ನಖವು । ಬೆರಳಲ್ಲಿ ಪಿಲ್ಯ ಕಾಲುಂಗುರ ಮೆಂಟಿಕೆ ಕಿರುಗೆಜ್ಜೆಯೊಂದಿಗೆ ಪೆಂಡೆಯು । ಕರಿಯ ದಂತದಂತೆ ಜಾನು ದರ್ಪಣ ಜಂಘೆ ಉರದ ದಟ್ಟೆಯು ನೆರಿಗೆಯು । ಹರಿನಡು ಕಿಂಕಿಣಿ ಭರದಿ ಒಡ್ಯಾಣವುದರ ತ್ರಿವಳಿ ರೇಖೆ ವರಕಂಚುಕಧಾರಿ ॥ 1 ॥

ಕೆಳಗಿನ ಪದಗಳಲ್ಲಿ ಲಕ್ಷ್ಮೀದೇವಿಯ ಪ್ರಾರ್ಥನೆಯಿರುವುದು.

ಝಂಪೆ-ಆದಿ

ದುರ್ಗೆ ಪಾಲಿಸೆ ಮಾತೆ ನಂಬಿದೆ ಬ್ರಹ್ಮ ಭರ್ಗಾದಿ ಸುರವಿನುತೆ । ದುರ್ಗಮ

ಭವದಿಂದ ನಿರ್ಗಮಗೈಸು ಹೇ ಭಾರ್ಗವಿ ಸ್ವರ್ಗ ಪವರ್ಗ ಪ್ರದಾತೆ ॥ ಅ ॥

ಸಿರಿಸಾರಸಿಂಹನ ರಾಣಿ ನರ ನೀಲವೇಣಿ ಪರಮ ಕಲ್ಯಾಣಿ ಗುಣಶ್ರೇಣಿ । ಪರತರ ಗುರು ಗೋಪಾಲವಿಠ್ಠಲನ ಚರಣಕಮಲದಲಿ ದೃಢವಾದ ಭಕುತಿಯ ನೀಡೆ । ನಿನಗೀಡೆ ನಲಿದಾಡೆ ದಯಮಾಡಿ ನೋಡೆ ॥ 3 ॥

ಶ್ರೀರಾಗ-ಆಟ

ಪಾಲಿಸೆ ಎನ್ನನು ಶ್ರೀಮಹಾಲಕ್ಷ್ಮೀ ಪಾಲಿಸೆ ಎನ್ನನು ಪಾಲಾಬ್ಧಿ ಸಂಜಾತೆ ॥ ಪ ॥

ಲಲಿತಾಂಗಿ ಶುಭೆದೇವಿ ಮಂಗಳೆ ದೇವಿ ॥ ಅ ॥

ವೇದಾಭಿಮಾನಿ ಸಾರಸಾಕ್ಷಿ ಶ್ರೀಧರ ರಮಣಿ । ಕಾದುಕೋ ನಿನ್ನ ಪಾದಸೇವಕರನ್ನು ಆದಿಶಕ್ತಿ ಸರ್ವಾಧಾರೆ ಗುಣಪೂರ್ಣೆ ॥ 1 ॥

ದಯದಿಂದ ನೋಡೆ ಭಜಿಪ ಭಕ್ತ ಭಯದೂರ ಮಾಡೆ । ದಯಪಾಲಿಸೆ ಮಾತೆ ತ್ರೈಲೋಕ್ಯ ವಿಖ್ಯಾತೆ ಜಯದೇವಿ ಸುವ್ರತೆ ಹಯವದನನ ಪ್ರೀತೆ ॥ 2 ॥

ನಿನಲ್ಲದನ್ಯ ರಕ್ಷಿಪರನು ಕಾಣೆನಾ ಮುನ್ನ । ದಾನವಾಂತಕ ಸಿರಿ ಪುರಂದರವಿಠಲನ ಧ್ಯಾನಿಪ ಭಕುತರ ಮಾನ ನಿನ್ನದು ತಾಯೆ ॥ 3 ॥

ಮಧ್ಯಮಾವತಿ

ಮದ್ದು ಮಾಡಲರಿಯೇ ಮುದ್ದು ರಮಾದೇವಿ ॥ ಪ ॥

ಮುದ್ದು ಬಾಲಕೃಷ್ಣನಲ್ಲಿ ಮನಸಿದ್ಧವಾಗಿ ನಿಲ್ಲುವಂತೆ ॥ ಅ ॥

ವಚನಗಳೆಲ್ಲ ವಾಸುದೇವನ ಕಥೆಯೆಂದು ರಚನೆ ಮಾಡುವಲ್ಲಿ ಶಕ್ತಿ ನಿಲ್ಲೋಹಾಂಗೆ ॥ 1 ॥

ಸಂತೆನೆರಹಿದ ಸತಿಸುತರು ತನ್ನವರೆಂಬ ಭ್ರಾಂತಿಬಿಟ್ಟು ನಿಶ್ಚಿಂತನಾಗೋ ಹಾಂಗೆ ॥ 2 ॥

ಎನ್ನೊಡೆಯ ಸಿರಿಪುರಂದರವಿಠಲನ್ನ ಸನ್ನತಿಯಿಂದ ನಾಹಾಡಿಪಾಡೋ ಹಾಗೆ ॥ 3 ॥

ಈ ಕೆಳಗಿನ ಪದದಲ್ಲಿ ಲಕ್ಷ್ಮೀದೇವಿಯ ನಿಂದಾಸ್ತುತಿ ಕಾಣುವುದು.

ಮಧ್ಯಮಾವತಿ-ಆದಿ

ಮರುಳು ಮಾಡಿಕೊಂಡಿಯಲ್ಲೇ ಮಾಯಾದೇವಿಯೇ ॥ ಪ ॥

ಇರುಳು ಹಗಲು ಏಕವಾಗಿ ಹರಿಯು ನಿನ್ನ ಬಿಡದಿಪ್ಪಂತೆ ॥ ಅ ॥

ಜ್ಞಾನಿಗಳು ನಿತ್ಯ ಅನ್ನಪಾನಾದಿಗಳನ್ನೂ ಬಿಟ್ಟು ನಾನಾವಿಧ ತಪವಿದ್ದರೂ ಧ್ಯಾನಕ್ಕೆ ಸಿಲುಕದವನ ॥ 1 ॥

ಸರ್ವಸಂಗ ಬಿಟ್ಟು ಸನ್ಯಾಸಿಯಾದ ಕಾಲಕ್ಕೂ ಸರ್ವದಾ ತನ್ನೆದೆಯ ಮೇಲೆ ಬಿಡದೆ ಧರಿಸಿಪ್ಪಂತೆ ॥ 2 ॥

ಮಕ್ಕಳ ಪಡೆದರೆ ನಿನ್ನ ಚೊಕ್ಕತನವು ಪೋಪುದೆಂದು ಪೊಕ್ಕುಳೊಳು ಮಕ್ಕಳ ಪಡೆದು

ಕಕ್ಕುಲಾತಿ ಪಡುವಂತೆ, ಎಂದೆಂದಿಗೂ ಮರೆಯೆ ನಿಸ್ಸಾನಂದದಿ ಜನರಿಗೆಲ್ಲ ತಂದುತೋರೆ ಸ್ವಾಧೀನ ಪುರಂದರವಿಠಲರಾಯನ ॥3॥

(ಆ) ಬ್ರಹ್ಮದೇವರು

ಜೀವಕೋಟಿಯಲ್ಲೆಲ್ಲ ಬ್ರಹ್ಮದೇವರು ಶ್ರೇಷ್ಠರು. ಪರಬ್ರಹ್ಮನಿಂದ ಮೊದಲಿಗೆ ನಾಭಿಕಮಲದಲ್ಲಿ ಹುಟ್ಟಿದವರು. ಜಗತ್ಸರ್ಜಕರು. ಜಗತ್ತಿನಲ್ಲಿ ಅವರ ಅವತಾರ ಪೂಜೆಗಳಿಲ್ಲ. ಸಾಮಾನ್ಯವಾಗಿ ಅವರ ಸ್ತೋತ್ರವೂ ಇಲ್ಲ. ಸಾಹಿತ್ಯದಲ್ಲೆಲ್ಲ ವಿಜಯದಾಸರೊಬ್ಬರೇ ಬ್ರಹ್ಮದೇವರನ್ನು ಒಂದು ಪದದಿಂದ ಸ್ತೋತ್ರ ಮಾಡಿರುವರು.

ತೋಡಿ-ಆದಿ

ವಾಣಿಯರಸ ಪರಮೇಷ್ಠಿ ನಿರುತ ನಿಷ್ಠಿ ಮಾಣದೆ ಕೊಡಮನ ಮುಟ್ಟಿ ॥ ಪ ॥

ನಾನಾ ನಾಡಿಸೊಳು ನೀನೆ ಪಿರಿಯನೆಂದು ಆನಂದ ಮತಿಯಿಂದ ಗಾಯನ ಮಾಡುವೆ ॥ ಅ ॥

ಪುರುಷನಾಮಕ ವಿಧಾತ ಹಂಸವರೂಢ ಸರಸಿಜಗರ್ಭ ಶಿವತಾತ । ಪರಮ ಗುರುವೆ ವಿಖ್ಯಾತಪೂರ್ವ ಮರುತ ತಾರತಮ್ಯದೊಳುನ್ನತ । ಹರಿಸಿರಿದೇವಿಯ ಚರಣರಜವನ್ನು ಪರಮಾಣು ಪ್ರದೇಶವರ ಶಬ್ದ ಪಿಡಿದು । ತರುವಾಯ ಬಹುವಿಧ ಪರಿಯಿಂದಲಿ ಸರಿಸಿಕೊಳ್ಳುತ ಮೈ ಮರೆವ ಶತಾನಂದ । ॥1॥

(ಇ) ವಾಯುದೇವರು

ವಾಯುದೇವರು ಬ್ರಹ್ಮದೇವರ ನಂತರದ ತಾರತಮ್ಯದಲ್ಲಿ ದೊಡ್ಡವರು. ಬ್ರಹ್ಮದೇವರಿಗೆ ಸಮಾನ ಕಕ್ಷ್ಯಾಪನ್ನರು. ಬ್ರಹ್ಮದೇವರು ಇವರಿಗಿಂತಲೂ ಪದವಿಯಲ್ಲಿ ಮಾತ್ರ ಹಿರಿಯರು. ವಾಯುದೇವರು ಪ್ರಾಣಾದಿ ಪಂಚವಾಯುಗಳಿಗೆ ಅಧಿಪತಿಗಳು. ಸೃಷ್ಟಿಕಾರ್ಯದಲ್ಲಿ ವಾಯುದೇವರು ಮತ್ತು ಅವರ ಪತ್ನಿ ಭಾರತೀದೇವಿಯರೂ ಸಹಾ ಭಗವಂತನ ಇಚ್ಛಾನುಸಾರವಾಗಿ ಬೇರೆ ಬೇರೆ ಪದಾರ್ಥಗಳಿದ್ದು ವ್ಯಾಪಾರ ಮಾಡುವರು. ಪ್ರಾಣದೇವರು ಈ ಮಹಿಮೆಯನ್ನು ಐತರೇಯ, ಷಟ್ಪ್ರಶ್ನಾದಿ ಉಪನಿಷತ್ತುಗಳಲ್ಲಿ ವಿಸ್ತಾರವಾಗಿ ಹೇಳಿರುವರು. ಪ್ರಾಣದೇವರೇ ತ್ರೇತಾಯುಗದಲ್ಲಿ ಹನುಮಂತದೇವರಾಗಿ ಹುಟ್ಟಿ ರಾವಣಾದಿಗಳನ್ನೂ, ದ್ವಾಪರಯುಗದಲ್ಲಿ ಭೀಮಸೇನರಾಗಿ ದುರ್ಯೋಧನಾದಿ ದೈತ್ಯರುಗಳನ್ನು ಸಂಹಾರ ಮಾಡಿದರೂ ಕಲಿಯುಗದಲ್ಲಿ ಮಧ್ವಚಾರ್ಯರಾಗಿ ಅವತರಿಸಿ ದುಶ್ಶಾಸ್ತ್ರಗಳನ್ನುಖಂಡಿಸಿ ವೇದ, ಉಪನಿಷತ್ತು, ಬ್ರಹ್ಮಸೂತ್ರ, ಗೀತಾ ಮೊದಲಾದವುಗಳಿಗೆ ಸರಿಯಾದ ಅರ್ಥವನ್ನು ಉಪದೇಶ ಮಾಡಿದರು. ವಾಯುದೇವರ ಈ ಅವತಾರತ್ರಯ ಮಹಿಮೆಯು ಬಳಿತ್ಥಾಸೂಕ್ತದಲ್ಲಿ ಉಕ್ತವಾಗಿದೆ. ವಾಯುದೇವರ ಅವತಾರತ್ರಯ ಮಹಿಮೆಯನ್ನು ಎಲ್ಲ ದಾಸರುಗಳೂ ವಿಶೇಷವಾಗಿ ಹಾಡಿದ್ದಾರೆ.

ಉದಯರಾಗ

ಜಯ ಜಯ ಜಗತ್ರಾಣ ಜಗದೊಳು ಸುತ್ರಾಣ ಅಖಿಲಗುಣ ಸದ್ಧಾಮ ಶ್ರೀಮಧ್ವನಾಮ ॥ ಪ ॥

ಆವಕಚ್ಛಪರೂಪದಿಂದಲಂಡೋದಕದಿ ಓವಿಧರಿಸಿದ ಶೇಷ ಮೂರುತಿಯನು ಅವನ ಬಳಿ ಪಿಡಿದು ಹರಿಯ ಸುರರೈದುವರೋ ಆ ವಾಯು ನಮ್ಮ ಕುಲಗುರುರಾಯರು ॥ ಅ ॥

ಹೀಗೆ ನಾಲ್ಕು ನುಡಿಗಳಲ್ಲಿ ವಾಯುದೇವರ ಉಪನಿಷದುಕ್ತ ಮಹಿಮೆಯನ್ನು ಹೇಳಿ ಐದನೆಯ ನುಡಿಯಿಂದ ಹನುಮದವತಾರವನ್ನು ವರ್ಣಿಸಿದ್ದಾರೆ.

ತ್ರೇತೆಯಲಿ ರಘುಪತಿಯ ಸೇವೆಗೋಸುಗ ಬಂದು । ವಾತಸುತ ಹನುಮಂತನೆಂದೆನಿಸಿದ । ಪೋತಭಾವದಿ ತರಣಿ ಬಿಂಬಕ್ಕೆ ಲಂಘಿಸಿದ । ಈತಗೆಣೆಗಾಣೆ ಮೂಲ್ಲೋಕದೊಳಗೆ ॥

ಹನುಮದವತಾರವನ್ನು ಎಂಟು ನುಡಿಗಳಲ್ಲಿ ವರ್ಣನೆ ಮಾಡಿ ಭೀಮಾವತಾರ ಕಥೆಯನ್ನು ಹೇಳುತ್ತಾರೆ.

ಆ ಮಾರುತನೆ ಭೀಮನೆನಿಸಿ ದ್ವಾಪರದಲ್ಲಿ । ಸೋಮಕುಲದೊಳು ಜನಿಸಿ ಪಾರ್ಥರೊಡನೆ । ಭೀಮ ವಿಕ್ರಮ ರಕ್ಕಸರ ಮುರಿದೊಟ್ಟಿದ । ಆ ಮಹಿಮೆ ನಮ್ಮ ಕುಲಗುರುರಾಯನು ।

ಹತ್ತು ನುಡಿಗಳಲ್ಲಿ ಭೀಮಾವತಾರ ಕಥೆ ಹೇಳಿದ ಮೇಲೆ ಮುಂದೆ ಆರು ನುಡಿಗಳಲ್ಲಿ ಮಧ್ವಾವತಾರ ಕಥೆಯನ್ನು ಹೇಗೆ ಹೇಳುತ್ತಾರೆ.

ದಾನವರು ಕಲಿಯುಗದೊಳವತರಿಸಿ ವಿಬುಧರೊಳು । ವೇನನ ಮತವ ನರುಹಲದನರಿತು ಜ್ಞಾನಿ ತಾಪವಮಾನ ಭೂತದೊಳವತರಿಸಿ ಮಾನನಿಧಿ ಮಧ್ವಾಖ್ಯನೆಂದೆನಿಸಿದ ತುಂಗ । ಕುಲಗುರುವರನ ಹೃತ್ಕಮಲದೊಳಗಿರಿಸಿ ಭಂಗವಿಲ್ಲದ ಸುಖವ ಸಜ್ಜನರಿಗೆ ಹಿಂಗದೆ ಕೊಡುವ ನಮ್ಮ ಮಧ್ವಾಂತರಾತ್ಮಕ ರಂಗವಿಠಲನೆಂದು ನೆರೆ ಸಾರಿರೈ॥ 27 ॥

ಇದು 'ಮಧ್ವನಾಮ'ವೆಂಬ ಹೆಸರಿನಿಂದ ಮಾಧ್ವರಲ್ಲಿ ಪ್ರಸಿದ್ಧವಾಗಿರುವುದು. ಇದನ್ನು ಇಂದಿಗೂ ಅನೇಕರು ನಿತ್ಯದಲ್ಲೂ ಪಠಿಸುವರು. ಜಗನ್ನಾಥದಾಸರು;

ಶ್ರೀಪಾದರಾಯರು ಪೇಳಿದ ಮಧ್ವನಾಮ ಸಂತಾಪ ಕಳೆದಖಿಳ ಸೌಖ್ಯವನೀವುದು । ಶ್ರೀಪತಿಜಗನ್ನಾಥವಿಠ್ಠಲನ ತೋರಿ ಭವಕೂಪಾರದಿಂದ ಕಡೆ ಹಾಯಿಸುವುದು ॥

ಎಂಬುದಾಗಿ ಮೂರು ನುಡಿಗಳಲ್ಲಿ ಇದಕ್ಕೆ ಫಲಸ್ತುತಿಯನ್ನು ರಚಿಸಿರುವರು. ಅವತಾರತ್ರಯ ಚರಿತ್ರೆಯನ್ನು ಎಲ್ಲ ದಾಸರೂ ವರ್ಣಿಸಿರುವರು. ಈ ಅವತಾರಗಳ ಪ್ರತ್ಯೇಕ ಸ್ತೋತ್ರಗಳೂ ಸಹ ಹೇರಳವಾಗಿವೆ.

ನವರೋಜು-ಆದಿ

ಎಷ್ಟು ಸಾಹಸವಂತ ನೀನೆ ಬಲವಂತ । ದಿಟ್ಟ ಮೂರುತಿ ಭಳಿ ಭಳಿರೆ ಹನುಮಂತ । ಅಟ್ಟಹಾಸದಿಂದಸುರರ ತಲೆಗಳ ಕುಟ್ಟಿ ಚಂಡಾಡಿದೆ ಘಟ್ಟರೇವಂತ ।

ಲಂಕಾದಹನ ಕಥೆಯನ್ನು ಈ ಪದದಲ್ಲಿ ವರ್ಣಿಸಿ ಕೊನೆಗೆ ವಾದಿರಾಜರು ಹೀಗೆ ಹೇಳುತ್ತಾರೆ.

ಶಂಖದೈತ್ಯನ ಕೊಂದೆ ಶರಣು ಶರಣ್ಯೆಯ । ಶಂಖಗಿರಿಯಲಿ ನಿಂದೆ ಹನುಮಂತರಾಯ । ಪಂಕಜಾಕ್ಷ ಹಯವದನ ಕಟಾಕ್ಷದಿ ಲಂಕೆಯ ಸುಟ್ಟೆ ಸೈ ಸಂಜೀವ ॥ 23 ॥

ಧನ್ಯಾಸಿ-ಆದಿ

ಧೀರನ ನೋಡಿರೈ ಕರುಣಾಪೂರನ ಪಾಡಿರೈ ಪ । ವಾರಿಜವದನ ಸಮೀರನ ಕಪಿನೃಪದ್ವಿಜನ ಭಾವಿ ಅಜನ । ಕಣಕಾಲಂದಿಗೆ ಒಪ್ಪುವ ಸರ ಕಂಠಮಮಣಿಯ ವಜ್ರದ ಖಣಿಯ । ಮಣಿಯದ ಬಹಳ ಕಠಿಣ ದಿತಿಜರನ್ನೆಲ್ಲ ಹಣಿಯಬೇಕೆಂಬ ಧಣಿಯ । ಪ್ರಣಿತಿಸಿ ನಾರಾಯಣ ಪದ ಭಕ್ತಾಗ್ರಣಿಯ ಚಿಂತಾಮಣಿಯ । ತೃಣೀಕೃತ ಮರಪತಿ ವಿಶೋಮಾಧವ ಫಣಿಯ-ಕಪಿಶಿರೋಮಣಿಯ - ವ್ಯಾಸರಾಯರು

ಪ್ರಾಣದೇವರ ಚರಣ, ಕರ, ವರ್ಣನಾಪರವಾದ ವಿಜಯದಾಸರ ಸುಳಾದಿಗಳು ಅತ್ಯಂತ ಪ್ರಸಿದ್ಧವು.

ಧ್ರುವತಾಳ

ಅಂದಿಗೆ ಪೊಂಗೆಜ್ಜೆ ಬಿರುದಿನ ಕಾಲ್ಪೆಂಡೆ । ಯಿಂದ ಝುಗ ಝುಗಿಸುವ ಅರುಣಕಾಂತಿಯ ಚರಣ । ಇಂದುವಿನ ಸೋಲಿಸುವ ಪ್ರಕಾಶಮಣಿಮಯ । ದಿಂದ ಬ್ರಹ್ಮಾಂಡವನ್ನೂ ಬೆಳಗುತಿಪ್ಪ ಚರಣ । ತಂದನ್ನ ತಾಯೆಂದು ಕೈಲಿ ಕಿನ್ನರಿ ಧರಿಸಿ । ಅಂದವಾಗಿ ಶ್ರೀಹರಿಯ ಮುಂದೆ ಕುಣಿವ ಚರಣ । ಇಂದು ಮೌಳಿ ಸುರಾದ್ಯರಿಂದ ಆ । ನಂದವಾಗಿ ನಿತ್ಯಪೂಜೆಗೊಂಬ ಚರಣ । ಮಂದಮಾನವರಿಗೆ ಪ್ರೀತಿ ಬಡಿಸಿ ಸುಖ । ಸಿಂಧುವಿನೊಳಿಟ್ಟು ದಯಮಾಳ್ಪುದೀ ಚರಣ ॥

ಜೊತೆ

ಚಿತ್ತದಲಿ ಚರಣ ನಂಬಿದ ಜನರಿಗೆ ನಿತ್ಯಾಯು ಉತ್ಸಾಹ ವಿಜಯವಿಠ್ಠಲ ನೀವ ।

ಧ್ರುವತಾಳ

ಕಡಗಕಂಕಣದಿಂದ ಶೋಭಿತವಾದ ಹಸ್ತ । ಪೊಡವೀಶಾ ರಘುರಾಮಗೆರಗಿದ ಹಸ್ತ । ಒಡನೆ ಕುರುಹುಗೊಂಡು ಸೀತೆಗಿತ್ತ ಹಸ್ತ ।

ಜೊತೆ

ಮೂರವತಾರದಲಿ ಕಾರ್ಯ ಮಾಡಿದ ಹಸ್ತ । ಧೀರ ಶ್ರೀವಿಜಯವಿಠ್ಠಲಗೆ ಮುಗಿದ ಹಸ್ತ ।

ಈ ಕೆಳಗಿನ ಸುಳಾದಿಯಲ್ಲಿ ವಿಜಯದಾಸರು ಪ್ರಾಣದೇವರ ಮಹಿಮೆಯನ್ನು ಅಲಂಕಾರವಾಗಿ ತೋರಿಸುತ್ತಾರೆ.

ಧ್ರುವತಾಳ

ಜಲಜಸಂಭವನ ಪಟ್ಟಕ್ಕೇರುವ ಗುರುವೇ । ಇಳೆಯೊಳು ಕೋತಿಕಾಯ ಧರಿಸಿ ಪುಟ್ಟಿದುದೇನೋ । ಬಲು ಪ್ರಳಯದಲಿ ಜಾಗ್ರತನಾಗಿಪ್ಪಮಾರುತ । ಕುಲಿಶಧರ ನಿಂದ ನೊಂದು ಮೂರ್ಛೆಗೊಂಡಿದ್ದೇನೋ ।

ಹರಿಯ ವ್ಯಾಪರದಂತೆಯೇ ಹನುಮ ವ್ಯಾಪಾರವೆಂದು ಕನಕದಾಸರು ಸ್ವಾರಸ್ಯವಾಗಿ ವರ್ಣಿಸಿದ್ದಾರೆ.

ಕೇದಾರಗೌಳ-ಆಟ

ಅರಸಿನಂತೆ ಭಂಟನೋ ಹನುಮರಾಯ । ಅರಸಿನಂತೆ ಭಂಟ ತಾನೆಂಬುದನ್ನು ಕುರುಹು ತೋರಿದ । ಮೂರ್ಲೋಕದಿ ಹನುಮಂತ ॥ ಅ ॥

ಒಡೆಯನಂಬುಧಿಯೊಳು ಪೊಕ್ಕ ದೈತ್ಯನಕೊಂದು । ತಡೆಯದೆ ಶ್ರುತಿಯ ಜಗಿತ್ತನೆಂದು । ಸಡಗರದಿಂದ ಕಡಲದಾಂಟಿ ಮಹಿಜೆ ಪೇರ್ಮುಡಿಯ । ಮಾಣಿಕವ ರಾಘವಗಿತ್ತ ಹನುಮ ನೀ ॥ 1 ।

ಸಿರಿಧರವರ ಕಾಗಿನೆಲೆಯಾದಿಕೇಶವ । ಸುರರಿಗಮೃತವನ್ನು ಎರೆದನೆಂದು । ವರಸಂಜೀವನವನ್ನು ತಂದು ಕಪಿಗಳ ಪ್ರಾಣ ಕರೆದು । ಶ್ರೀರಾಮದೂತನಾದ್ಯೋ ಹನುಮ ನೀ ॥ 2 ॥

ಮುಖ್ಯಪ್ರಾಣದೇವರು ಕೈ ಮುಗಿದು ನಿಂತ ಭಂಗಿಯನು ನೋಡಿ ಪುರಂದರದಾಸರು ಹೀಗೆ ಊಹೆ ಮಾಡುತ್ತಾರೆ.

ಕಾನಡ-ತ್ರಿಪುಟ

ಕರವ ಮುಗಿದ ಮುಖ್ಯಪ್ರಾಣ ಕರವ ಮುಗಿದ । । ಪ ॥

ಕರಮುಗಿದ ಶ್ರೀಹರಿಯ ಎದುರಾಗಿ ದುರುಳರ ಸದೆದು ಶರಣರ ಪೊರೆ ಎಂದು ॥ ಅ ॥

ತಾರತಮ್ಯ ಪಂಚಭೇದ ಸತ್ಯವೆಂದು ಮಾರುತಿಮತ ಪೊಂದಿದವರನು ಸಲಹೆಂದು ॥ 3 ॥

ಹರಿಮಾಡೋ ವ್ಯಾಪಾರಬಲ್ಲ ಕಾರಣ ನಮ್ಮ ಪುರಂದರವಿಠ್ಠಲನ್ನು ಚರಣಕ್ಕೆರಗಿ ನಿಂದು ॥ 5 ॥

"ಬಿಡುವೆನೇನಯ್ಯ ಹನುಮ ನಿನ್ನ ಬಿಡುವೇನೇನಯ್ಯ" ಎಂಬ ಪದದಲ್ಲಿ ದಾಸರು

ಸಲಿಗೆಯನ್ನು ತೋರಿಸಿದ್ದಾರೆ. "ಹನುಮ ನಮ್ಮ ತಾಯಿ ತಂದೆ ಭೀಮ ನಮ್ಮ ಬಂಧು ಬಳಗ । ಆನಂದತೀರ್ಥರೇ ನಮ್ಮ ಗತಿ ಗೋತ್ರವಯ್ಯ" ಎಂಬ ಪದದಲ್ಲಿ ಭಕ್ತನ ಶರಣತ್ವವನ್ನು ಪುರಂದರದಾಸರು ತೋರಿಸಿರುವರು. ಈ ಕೆಳಗಿನ ಪದವು ವಾತ್ಸಲ್ಯಭಾವವನ್ನು ಚೆನ್ನಾಗಿ ಹೊರಸೂಸುವುದು.

ಸಾದನಾಮಕ್ರಿಯೆ-ಆದಿ

ಕೂಸಿನ ಕಂಡಿರ್ಯಾ ಮುಖ್ಯಪ್ರಾಣನ ಕಂಡಿರ್ಯಾ ॥ ಪ ॥

ಬಾಲನ ಕಂಡಿರ್ಯಾ ಬಲವಂತನ ಕಂಡಿರ್ಯಾ ॥ ಅ ॥

ಅಂಜನಗರ್ಭದಿ ಪುಟ್ಟಿತು ಕೂಸು । ರಾಮರ ಚರಣಕೆ ಎರಗಿತು ಕೂಸು । ಸೀತೆಗೆ ಉಂಗುರ ಕೊಟ್ಟಿತು ಕೂಸು । ಲಂಕಾಪುರವನೆ ಸುಟ್ಟಿತು ಕೂಸ ॥ 1 ॥

ಭೀಮಾವತಾರ ವರ್ಣನೆಯನ್ನೂ ದಾಸರು ವಿಶೇಷವಾಗಿ ಮಾಡಿದ್ದಾರೆ. ಕೀಚಕವಧೆಯು ದಾಸರಿಗೆ ಪ್ರಿಯವಾದ ಕಥಾವಸ್ತು. ವಾದಿರಾಜರು ಮತ್ತು ವಿಜಯದಾಸರಿಬ್ಬರೂ ಅದನ್ನು ವರ್ಣಿಸುತ್ತಾರೆ.

ಭೈರವಿ-ಅಟ

ಭೀಮಸೇನ ಕಾಮಿನಿಯಾದನು

ಭೀಮಸೇನ ಕಾಮಿನಿಯಾಗಲು ಪ್ರೇಮದ ಸತಿಯ ಕಾಮಿಸಿದವನ ಝುಮರಾತ್ರಿಗೆ ಸೀಳುವೆನೆನ್ನುತ ಸಾಮಜವರದನ ಪಾಡುವೆನೆನುಲತಲಿ ॥ ಅ ॥

ಕೀಚಕನಾಡಿದ ನೀಚ ನುಡಿಯ ಕೇಳಿ ನಾಚಿ ಪತಿಯೊಳು ಸೂಚಿಸಬೇಕೆಂದು । ಯೋಚಿಸಿ ಸುಮ್ಮನೆ ಈಚೆ ಬರುತಿರೆ ನಿಶಾಚರ ಕರವ ಚಾಚಿದನು ॥ 9 ॥

ಕಾಳಗದ ಮನೆಯೊಳಗೆ ಬಾರೆಂದು ಪೇಳಿದ ಸುಳುಹನು ಪೇಳಲು ಭೀಮಗೆ । ಖೂಳನ ಕಾಯವ ಸೀಳಲು ತಕ್ಕಂಥ ವೇಲೆ ಬಂತೆನುತ ತೋಳ ಹೊಯ್ದ ॥ 13 ॥

ಕ್ರೂರನು ಮೋಹಿಪ ತೆರದಲೆ ತೆರದಲೆ ನಗೆ ನಾರಿಯರೂಪ ಶೃಂಗಾರಿಸು ನೀನೆಂದು । ವಾರಿಜಮುಖಿಯಳ ಮೋರೆಯ ನೋಡಲು ನೀರೆ ದ್ರೌಪದಿ ತಾ ನಾಚಿದಳು ॥ 14 ॥

ಬಟ್ಟ ಮುಖಕೆ ತಾನಿಟ್ಟಳು ಸಾದಿನ ಫಣೆಯೊಳು ಇಟ್ಟ ಕಣ್ಣುಕಪ್ಪು ಪಟ್ಟ ಪೀತಾಂಬರ ಉಟ್ಟುಕೋ ಸ್ತ್ರೀರೂಪ ನೋಡಲು ಖೂಳನು ಕೂಡದೆ ಪ್ರಾಣವ ಬಿಡನೆಂದಳು ॥ 16 ॥

ಹೀಗೆ ಅತ್ಯಂತ ಚಮತ್ಕಾರವಾಗಿ ವರ್ಣನೆ ಮಾಡಿದ್ದಾರೆ.

ಜಯ ಜಯ ಭೀಮಸೇನ ಮದ್ದುರು ರಾಯ । ಜಯ ಜಯ ಭೀಮಸೇನ ದುರ್ಜಯ ಪರಾಕ್ರಮ ವೀರ । ಜಯ ಪಯೋನಿಧಿಯೆ ನಿರ್ಭಯ ವೈಷ್ಣವಾಗ್ರಣಿ ।

ಎಂಬ ಪದದಲ್ಲಿ ಗುರು ಗೋಪಾಲದಾಸರು ಭೀಮಾವತಾರ ಕಥೆಯನ್ನು ವಿಸ್ತಾರವಾಗಿ ಹೇಳಿದ್ದಾರೆ. ಭೀಮಸೇನ ದೇವರು ಸೌಗಂಧಿಕ ಪುಷ್ಪ ತಂದ ಕಥೆಯನ್ನು ಪುರಂದರದಾಸರು ಬಣ್ಣಿಸಿದ್ದಾರೆ. ಇದರಂತೆಯೇ ಮಧ್ವಾಚಾರ್ಯರ ಮಹಿಮಾನುಗಾನವೂ ಕಂಡುಬರುವುದು.

ಕಾಂಬೋಧಿ–ಝಂಪೆ

ಆರು ನಿನಗಿದಿರಧಿಕ ಧಾರುಣಿಯೊಳಗೆ
ಸಾರ ಶಾಸ್ತ್ರವ ನೆರೆದ ಸರ್ವಜ್ಞ ಮುನಿರಾಯ |

ಆರಾರು ಮೇಲೊಂದು ಅಧಿಕ ಲೆಕ್ಕದ ಗ್ರಂಥ | ಸಾರವನು ರಚಿಸಿ ಸಜ್ಜನರಿಗಿತ್ತ | ಪಾರಮಾರ್ಥಿಕ ಭೇದ ಪಂಚಕ ಸ್ಥಾಪಿಸಿದೆ ಉ | ದಾರ ಶ್ರೀ ಕೃಷ್ಣನ ದಾಸರೊಳು ಹರಿಯೇ ೩

ಪಂತುವರಾಳಿ–ಆಟ

ಒಂದು ಬಾರಿ ಸ್ಮರಣೆ ಸಾಲದೆ ಆ | ನಂದತೀರ್ಥರ ಪೂರ್ಣ ಪ್ರಜ್ಞರ
ಸರ್ವಜ್ಞರಾಯರ ಮಧ್ವ ರಾಯರ | ಅ |
ಹಿಂದನೇಕ ಜನ್ಮದಲ್ಲಿ ನೊಂದು ಯೋನಿಯಲ್ಲಿ ಬಂದು |
ಇಂದಿರೇಶನ ಪಾದವನ್ನು ಹೊಂದಬೇಕೆಂಬುವರಿಗೆ || –ವಾದಿರಾಜರು

ಕಾಂಬೋಧಿ–ಝಂಪೆ

ಮಧ್ವರಾಯರ ಕರುಣ ಪಡೆಯದವ ಧರೆಯೊಳಗೆ ಇದ್ದರೇನು ಇಲ್ಲದಿದ್ದರೇನು | ಮಧ್ವ ಮತವೇ ಮತವು ಸಕಲ ಶ್ರುತಿ ಸಮ್ಮತವು | ಮಧ್ವರಾಯರ ಧ್ಯಾನ ಅಮೃತ ಪಾನ | ಮಧ್ವ ರಾಯರ ಲೀಲೆ ನವರುತನದ ಮಾಲೆ | ಮಧ್ವರಾಯರ ಕರುಣೆ ಕುಲಕೋಟಿ ಉದ್ಧರಣೆ ೧ –ವಿಜಯದಾಸರು

ಮುಖಾರಿ–ಝಂಪೆ

ಈ ಮಹಿಮಯೊಳಗೆ ಗುರುಗಳೆನಿಪರೆಲ್ಲ | ನಮ್ಮ ಶ್ರೀ ಮಧ್ವಾಚಾರ್ಯ ಗುರುಶಿಖರ ಮಣಿಗೆ ಸರಿಯೇ | ಗುರುಗಳೆನಿಸಿಕೊಂಬ ಭರದಲ ನ್ಯೋನ್ಯಮತ್ಸರದ ಶಾಸ್ತ್ರ ವಿರಚಿತ ಸಡಗರೆಲ್ಲ ಗುರು ಪುರಂದರವಿಠಲ ಪರಿತುಷ್ಟಿಗಾಗಿ ಸಜನರ ಪೊರೆವ ಗುರು ನಂದತೀರ್ಥರಿಗೆಣೆಯೇ ೫

ಈ ಕೆಳಗಿನ ಪದದಲ್ಲಿ ಗುರುಗೋಪಾಲದಾಸರು ಉಪನಿಷತ್ತಿನಲ್ಲಿ ಉಕ್ತವಾದ ಪ್ರಾಣ–ರಯಿಯರ ಮಹಿಮೆಯನ್ನು ಉದಹರಿಸಿ ಸನ್ಯಾಸಿಗಳಾದದ್ದನ್ನು ನಿಂದಾಸ್ತುತಿಯಿಂದ ಪೊಗಳಿದ್ದಾರೆ.

ಭೈರವಿ—ಆದಿ

ಯತಿಯು ನೀನಾದದ್ದು ಕ್ಷಿತಿಯೊಳು ನಾ ಬಲ್ಲೆ |
ಪತಿತ ಪಾಮರ ಪಾವನ, ಪವಮಾನ ಪ
ಸತಿ ನಿನ್ನ ನಡತೆಗೆ ಪ್ರತಿಕೂಲಳೆಂತೆಂಬ ಅತಿಶಯವೇ ಕಾರಣ ಪವಮಾನ ಅ
ಹಗಲುತ್ತರಾಯಣ ಮಿಗೆ ಶುಕ್ಲಪಕ್ಷ ಭಾನುಗಳ ನೀನಾಶ್ರಯಿಸೆ ಪವಮಾನ |
ಸುಗುಣೆ ಕೃಷ್ಣಪಕ್ಷ ಗಗನೇಂದು ರಾತ್ರಿಯೋಳ್ ಪೊಗೆ ದಕ್ಷಿಣಾಯನದಿ ಪವಮಾನ |
ವಿಗಡ ಹೆಂಡತಿ ಮಾರ್ಗತೆಗೆದಳು ಬೇರ್ಥೊಂದು ಒಗೆತನವೇತಕೆಂದು ಪವಮಾನ |
ಬಗೆ ಬಗೆಗಳ್ಯಾಗಿ ಚರಿಸಿ ಜಗವನೆಲ್ಲ ದುಗುಡುತನದಲ್ಲಿ ಬಂದು ಪವಮಾನ ೧
ಅನ್ನಲೇತಕೆ ಇಂಥದನ್ನಂತಚರ್ಯವು ನಿನ್ನೊಳಗುಂಟ ಕೇಳೋ ಪವಮಾನ |
ಮನ್ನಿಸದಿದ್ದರೆ ಎನ್ನನು ಈ ಬನ್ನ ಮನ್ನೆ ಮನ್ನೆಗೆ ದೂರುವೆ ಪವಮಾನ | ಎನ್ನೊಡೆಯ
ಗುರು ಗೋಪಾಲವಿಠ್ಠಲನ್ನ ಪಾದಾಬ್ಜಗಳ ಪವಮಾನ | ನಿನ್ನವ ನೆನಿಸಿ ಹೃದ್ವನ್ನಜದಲಿ
ತೋರೋ ಅನ್ಯಥ ನೋಡದಲೆ ಪವಮಾನ ೩

ಈ ಕೆಳಗಿನ ಪದಗಳಲ್ಲಿ ಭಕ್ತನ ಆರ್ತ ಪ್ರಾರ್ಥನೆಯು ಕಾಣುವುದು.

ಕಾಂಬೋಧಿ—ಝಂಪೆ

ಮಧ್ವಮುನಿಯೇ ಎನ್ನ ಹೃತ್ಕುಮುದಚಂದ್ರ |
ಅದ್ವೈತಮತಾರಣ್ಯ ದಹನ ಗುಣಸಾಂದ್ರ ಅ
ಹಿಂದೆಎಪ್ಪತ್ನಾಲ್ಕುಯೋನಿಗಳಲ್ಲಿ ಒಂದೇಪ್ರಕಾರ ಸಂಚರಣೆಯಿಂದ |ಒಂದೊಂದು
ಕರ್ಮಗಳನರಸಿ ನೋಡಲು ಆದರಿಂದ ಭವಾಬ್ದಿಗೆ ಒಂದು ಪಾಯವಕಾಣೆ ೧
ನೀರು ಚಳ ಪಳ ಕಾಸಿ ಅರಲಿಟ್ಟು ಹೆಪ್ಪು ನೀರಿನಿಂದಲಿ ಕೊಡಲು ಒಪ್ಪದೇನೋ |
ಮಾರುತೀ ನಿನ್ನ ಕೃಪೆ ಪಡೆಯದೆಲೆ ಉಳಿದವರ ಕಾರುಣ್ಯವಾಗಲು ಮೋಕ್ಷ
ಸಾಧನವಿಲ್ಲ ೨
ಅಪರಾಧ ವೆಣಿಸದಲೆ ಕಾಯಬೇಕೋ | ಕೃಪಣ ವತ್ಸಲನೆ ಶ್ರೀ ಮಧ್ವಮುನಿ
ರಾಯ | ಏನನರಿಯದ ಮೂಢ ಮಾನವನು ನಾನು | ಸುಜ್ಞಾನವರ್ಯನು ನೀನೇ
ಕಾಯಬೇಕು | ಮಾನನಿಧಿ ಜಗನ್ನಾಥ ವಿಠ್ಠಲನ ಪದ ಯುಗಳ ಧ್ಯಾನ ಮಾಡುವ
ಧೀರ ಪ್ರಾಣಪಂಚಕರಾಯ ೩

ವಾಯುದೇವರು ಸರ್ವದಾ ಮನುಷ್ಯರ ಶರೀರದಲ್ಲಿದ್ದು ಹಂಸ ಮಂತ್ರ ಜಪ ಮಾಡುತ್ತಿರುತ್ತಾರೆ. ಇಂತಹ ವಾಯುದೇವರ ಅನಂತ ಮಹಿಮೆಯನ್ನು ಜಗನ್ನಾಥದಾಸರು ಈ ಪದದಲ್ಲಿ ತಿಳಿಸಿದ್ದಾರೆ.

ಕಲ್ಯಾಣಿ—ಆಟ

ಭಾರತಿರಮಣಾ ಮನ್ಮನದಲ್ಲಿ ತೋರು ತವ ಚರಣಾ | ಪ

ಮೂರೇಳುಸಾವಿರದಾರು ಜಪವೋರಂತೆ ಜಪಿಸಿ |ಉದ್ಧಾರ ಮಾಡುವಿಯೆಮ್ಮ ಅ
ಮೂರುವಿಧ ಜೀವರೊಳ ಹೋರನೀ ಪ್ರೇರಕ ದೇವ |
ಮಾರಮಣನ ಆರಾಧಿಪರೊಳುಗಾರು ನಿನಗೆ ಸಮರರೇಳುಲೋಕದಿ ೧
ಲೋಕರೂಪನೆ ಜಗದೊಳುಗಾನೇಕ ಚರಿತನೆ
ನೀ ಕರುಣಿಸಲು ಪಿನಾಕಿ ಸುರೇಂದ್ರದಿವೈಕಸರೆಮ್ಮನು ಸಾರುವರನುದಿನ ೨
ಪ್ರಾಣ ಪಂಚಕರೂಪಕ ದೈತ್ಯಶ್ರೇಣಿ ವಂಚಕ ಕ್ಷೋಣಿಯೊಳಗೆ ಕೃಷ್ಣ
ವೇಣಿ ತರಂಗಿಣಿ ತ್ರಾಣವಗೈದು ನಿರ್ವಾಣ ಪ್ರದಾಯಕ ೩
ಚತುರವಿಂಶತಿತ್ವೇಶರ ಪತಿಯೇ ನೀ ನತಿನುತಿಪೆ ಉಪೇಂದ್ರನು
ಯತಿಕರ ಪೂಜಿತ ಖತಿಯು ಕಳೆದೆಮಗೆ ಗತಿ ಇತ್ತು ಸಲಹೋ ೪
ಭೂತತ್ರಯ ವಪುಷಾ ಭವಿಷ್ಯತಿಧಾತಾ ಗತದೋಷಾ
ಮಾತರಿಶ್ವನುಜಾತಾ ಹನುಮ ಜಗನ್ನಾಥ ವಿಠಲನ ಪ್ರೀತಿಲಿ ತೋರೋ ೫

ಶಂಕರಾಭರಣ—ಟಾಪು

ಪವಮಾನ ನಮ್ಮ ಗುರುಪವಮಾನ ಪ

ನಾಗಕೂರ್ಮಾ ದೇವದತ್ತಾ ಕೃಕಲಯೋಗಿವರ್ಯಯುಕ್ತಾ ಮುಕ್ತ ಕ್ಲಪ್ತ |
ಭೋಗಂಗಳೀವ ಸುಶಕ್ತ ತಲೆಬಾಗಿ ಬೇಡುವೆ ಸರ್ವೋದ್ರಿಕ್ತಾ | ಆಹ | ಪೋಗುತಲಿದೆ
ಹೊತ್ತು ಜಾಗು ಮಾಡದೆ ನಿಜ ಭಾಗವತರೊಳಿಡೊ ಮೈಗಣ್ಣ ಪದನಾಳ್ದ | ೨
ಮೂರುಕೋಟಿ ರೂಪಧರನೆ ಲೋಕಧಾರಕ ಲಾವಣ್ಯಕರನೆ | ಸರ್ವ
ಪ್ರೇರಕ ಭಾರತೀವರನೆ ತ್ರಿಪುರಾರಿಗೆ ವಜ್ರ ಪಂಜರನೆ | ಆಹ |
ನೀರಜಜಾಂಡದಿ ಮೂರೇಳು ಸಾವಿರದಾರುನೂರು ಜಪ ಬೇರೆಬೇರೆ ಮಾಳ್ಪ ೪

(ಈ) ಸರಸ್ವತಿದೇವಿ

ತಾರಮ್ಯದಲ್ಲಿ ವಾಯುದೇವರಾದಮೇಲೆ ಸರಸ್ವತಿಯರು ದೊಡ್ಡವರು. ಬ್ರಹ್ಮ ನರಸಿಯರಾದ ಇವರು ವಿದ್ಯಾಭಿಮಾನಿಯು.

ತೋಡಿ—ಆದಿ

ವಾಣೀ ಪರಮ ಕಲ್ಯಾಣಿ ವಾರಿಜೋದ್ಭವನ ರಾಣಿ ನಾರೀ ಶಿರೋಮಣಿ ಪ
ಕ್ಷೋಣಿಯೊಳಗೆ ಸರಿಗಾಣೆನೆ ನಿನಗೆ ಸುಪ್ಪಾಣಿಯೆ ಹರಿಪರರೇಣುಧರಿಪೆ ಸದಾ | ಅ
ಸರಸ್ವತಿ ನಿತ್ಯ ಸಾವಿತ್ರಿ ಸರಸಿಜಳ ಸುನೇತ್ರಿ |
ಸುರಮುನಿ ಕರಸ್ತೋತ್ರಿ ಕರುಣಾಸಾಗರೆ ಪವಿತ್ರಿ |
ಚರಣದಂದಿಗೆ ಪಂಚಬೆರಳು ಭೂಷಣ ಧ್ವನಿಸರವು ಕನಕಗೆಜ್ಜೆ ಸರಪಳಿ ಪೊಳೆವಾಂ|
ಬರಧರೆ ಸುಂದರಿ ಎರಗುವೆ ಎನ್ನನು ಎರವುಮಾಡದೆ ತ್ರಿಕರಣ ಶುದ್ಧನಮಾಡೆ ೧

ನಗೆಮೊಗದೆ ಜಗದಂಬೆ ನೀಗಂಧಲೇಪಿ ನಿಗಮಾಭಿಮಾನಿ ಸುಜ್ಞಾನಿ |
ಬಗೆ ಬಗೆ ವಿದ್ಯಾಭಾಸಿನಿ ಶುಭಲಕ್ಷಣೆ ಅಗಣಿತ ಫಲದಾಯಿನಿ |
ಝಗಝಗಿಸುವ ಕರಯುಗಳ ಭೂಷಣ ಪನ್ನಗವೇಣಿ ಕುಂಕುಮಮೃಗಮದ ವೊಪ್ಪಲು | ಜಗತ್ಪತಿ ಪ್ರದ್ಯುಮ್ನ | ವಿಜಯ ವಿಠ್ಠಲನ ಮಗಳೆ ಸುಖಾತ್ಮಕೆ ಜಗದಿ ಸುಶ್ರೋಣಿ ೩

(ಉ) ಭಾರತೀದೇವಿ

ವಾಯುದೇವರ ಪತ್ನಿಯಾದ ಭಾರತೀದೇವಿಯು ಸರಸ್ವತಿಗೆ ಸಮ. ಪುರಂದರ ದಾಸರು 'ಎಂತಹ ಗಂಡನನ್ನು ವರಿಸಿದೆಯೆಂದು' ಹಾಸ್ಯವಾಗಿ ಭಾರತೀದೇವಿಯ ಸ್ತೋತ್ರ ಮಾಡಿದ್ದಾರೆ

ಕಾಂಬೋಧಿ–ಝಂಪೆ

ಏನು ಮರುಳಾದೆಮ್ಮ ಎಲೆ ಭಾರತಿ |
ವಾನರ ನಿಕರದೊಳು ಶ್ರೇಷ್ಠನಾದವನಿಗೆ ಅ
ಕಣ್ಣಿಲ್ಲದವಳ ಗರ್ಭದಲಿ ಜನಿಸಿ ಬಂದು | ನಿನ್ನ ತೊರೆದು ಬ್ರಹ್ಮಚಾರಿಯಾಗಿ | ಹಣ್ಣಿಗಾಗಿ ಹೋಗಿ ವನವಕಿತ್ತೀಡಾಡಿ ಉಣ್ಣೋಭರದಲಿ ಎಂಜಲೆಲೆಯನೊಯ್ದವಗೆ ೧
ಹುಟ್ಟಿದನು ಗುರುತಲ್ಪಗಮನ ಕುಲದಲ್ಲಿ ತಾನಟ್ಟಿರುಳುಒಬ್ಬ ಅಸುರೆಯ ಕೂಡಿದ | ಹೊಟ್ಟೆಗಿಲ್ಲದೆ ಹೋಗಿ ಭಿಕ್ಷದನ್ನವನುಂಡು ಅಟ್ಟು ಹಾಕುವನಾಗಿ ಸುಕುಲ ಅಂತಕಗೆ ೨
ಮಂಡೆ ಬೋಳಾಗಿ ಭೂಮಂಡಲವ ತಿರುಗಿದ ಕಂಡವರು ಯಾರೆ ಈತನ ಗುಣಗಳ | ಪುಂಡರೀಕಾಕ್ಷ ಶ್ರೀಪುರಂದರವಿಠಲನ ಕೊಂಡಾಡು ತಲೆ ಬೋರೆಮರದ ಕೆಳಗಿದ್ದವಗೆ ೩

ದ್ರೌಪದಿಯು ಭಾರತಿಯ ಅಂಶ ಸಂಭೂತಳು. ದ್ರೌಪದಿಯ ಚರಿತ್ರೆಯು ಆಶ್ಚರ್ಯಕರವಾಗಿದೆ: ಅವಳು ಒಬ್ಬಳೇ ಒಬ್ಬಳು ಐವರು ಗಂಡಂದಿರನ್ನು ಮದುವೆಯಾಗುತ್ತಾಳೆ. ಇದು ಪುರಾಣದಲ್ಲಾಗಲಿ ಇತಿಹಾಸದಲ್ಲಾಗಲೀ ಇನ್ನೆಲ್ಲೂ ಕಂಡಿಲ್ಲ. ಅಷ್ಟೇ ಅಲ್ಲದೇ **ಪಂಚ ಮೆ ಪತಯಃ ಸಂತಿ | ಷಷ್ಠಂ ಮೇ ರೋಚತೆ ಮನಃ** ಅಂದರೆ ನನಗೆ ಐವರು ಗಂಡಂದಿರಿದ್ದರೂ ಆರನೆಯವನಲ್ಲಿ ಮತ್ತೆ ಅಪೇಕ್ಷೆ ಯುಂಟಾಗುತ್ತದೆಯೆಂದು ಕೃಷ್ಣನಿಗೆ ದ್ರೌಪದಿ ಹೇಳುತ್ತಾಳೆ. ಸ್ವಾಭಾವಿಕವಾಗಿ ಸರಿಯಾಗಿರುವ ಶ್ಲೋಕಗಳಿಗೇ ಮನಬಂದಂತೆ ಅರ್ಥ ಮಾಡುವ 'ವಿಮರ್ಶಕ'ರಿಗೆ ಈ ಶ್ಲೋಕ ಬಹಳ ಅನುಕೂಲವಾಗಿದೆ. ಹೆಣ್ಣಿನ ಜಾತಿಗಾಗಲೀ, ಗಂಡಿನ ಜಾತಿಗಾಗಲೀ, ತನಗೆಷ್ಟು ಕಾಮತೃಪ್ತಿ ಸಾಮಗ್ರಿ ಇದ್ದರೂ ಇತರ ನೂತನ ಕಾಮತೃಪ್ತಿ ವಿಧಾನವನ್ನು ಅಪೇಕ್ಷಿಸುವ ಹಂಬಲ ಇದ್ದೆ ಇರುತ್ತದೆ. ಸಿಗ್ಮಂಡ್ ಫ್ರಾಯಿಡ್ ಈ ಸೂಕ್ಷ್ಮತತ್ವದ

ಆಧಾರದ ಮೇಲೆ 'ಕಾಮ ಪ್ರವೃತ್ತಿಯೇ ಜಗತ್ತಿನ ಎಲ್ಲ ವ್ಯಾಪಾರಗಳಿಗೂ ಮೂಲ' ಎಂಬ ಸಿದ್ಧಾಂತವನ್ನು ಮಾಡಿದ್ದಾನೆ. ದ್ರೌಪದಿಯ ಈ ಮಾತುಗಳು ಈ ವಿಷಯದ ಸೂತ್ರಪ್ರಾಯವಾಗಿದೆಯೆಂದು ಕೆಲ ವಿಮರ್ಶಕರು ಹೇಳುತ್ತಾರೆ. ಮತ್ತೆ ಕೆಲವರು ದ್ರೌಪದಿಗೆ ಮೊದಲಿನಿಂದಲೂ ಕರ್ಣನಲ್ಲಿ ಅನುರಾಗವಿತ್ತು. ಅವನು ಸೂತಪುತ್ರನೆಂಬ ಕಾರಣದಿಂದ ಅವನನ್ನು ಅವಳು ವರಿಸಲಿಲ್ಲ. ಆದರೂ ಅವನಿಗಾಗಿ ಅವಳ ಮನಸ್ಸು ಹಾತೊರೆಯುತ್ತಿತ್ತು. ಅದನ್ನೇ ಈ ಮಾತಿನಲ್ಲಿ ಆಡಿ ತೋರಿಸಿದ್ದಾಳೆ ಎಂದು ಹೇಳುತ್ತಾರೆ. ಈ ಅಭಿಪ್ರಾಯವನ್ನು ಈಚಿನ 'ಸಾಹಿತಿ' ಗಳೆಂದು ಹೇಳಿಕೊಳ್ಳುವರು ಪುಷ್ಟೀಕರಿಸಿ ದ್ರೌಪದಿ, ಕರ್ಣನ ಹತ್ತಿರ ಹೋಗಿ ಅವನನ್ನು ತನ್ನ ಕಾಮಾಗ್ನಿ ಶಮನಕ್ಕಾಗಿ ಕರೆಯುತ್ತಾಳೆಂದೂ, ಅವನು ಅವಳ ಹೀನ ಪ್ರಾರ್ಥನೆಯನ್ನು ಸಚ್ಚರಿತ್ರನಾದ್ದರಿಂದ ನಿರಾಕಿಸಿರಿದ್ದಾನೆಂದು ಹೇಳಿದ್ದಾರೆ. ಅದರ ಪೂರ್ವಪರ ಕಥೆಯನ್ನು ವಿಚಾರ ಮಾಡಿದರೆ ಅದರ ತಥ್ಯಾಂಶ ಗೊತ್ತಾಗುವುದು. ಗಂಡಂದಿರಲ್ಲದೆ ಇತರ ಪುರುಷರ ಆಸೆ ದ್ರೌಪದಿಗೆ ಇದ್ದಲ್ಲಿ ಕೀಚಕ, ದುರ್ಯೋಧನರಿಗೇಕೆ ಅವಳು ಒಲಿಯಲಿಲ್ಲ ? ಕರ್ಣನಲ್ಲಿ ಅಷ್ಟು ಅವಳಿಗೆ ಮನಸ್ಸಿದ್ದಲ್ಲಿ ಪಣವೇ ಇಲ್ಲದೆ ಅವನನ್ನು ವರಿಸಬಹುದಾಗಿತ್ತು. ಗಂಡಂದಿರು ಐವರಾದರೂ ಒಬ್ಬೊಬ್ಬರೊಡನೆ ಒಂದೊಂದು ವರ್ಷವೇ ಅವಳು ಸಂಪರ್ಕವಿಟ್ಟುಕೊಂಡಿರುತ್ತಿದ್ದಳು. ದ್ರೌಪದಿ ಯುಧಿಷ್ಠರನೊಡನೆ ಏಕಾಂತ ದಲ್ಲಿದ್ದುದನ್ನು ನೋಡಿದ ಅರ್ಜುನ ಆ ಪಾಪದ ಪ್ರಾಯಶ್ಚಿತ್ತಕ್ಕಾಗಿ ತೀರ್ಥಯಾತ್ರೆಗೇಕೆ ಹೊರಟ ? ಇದೆಲ್ಲದರ ರಹಸ್ಯವೇನು ?ಇದನ್ನು ಗರುಡ ಪುರಾಣ ಬ್ರಹ್ಮ ಕಾಂಡದಲ್ಲಿ ವಿವರವಾಗಿ ಹೇಳಿದ್ದಾರೆ. ಅದರಲ್ಲಿ ಪಾರ್ವತಿ, ಶಚಿ, ಶ್ಯಾಮಲಾ, ಉಷಾ ಈ ನಾಲ್ಕು ಜನ ಹೆಂಗಸರು ಒಂದೇ ಶರೀರದಲ್ಲಿದ್ದು ತಂತಮ್ಮ ಪತಿಗಳೊಂದಿಗೆ ಉಪಭೋಗಿಸುವ ಶಾಪ ಮತ್ತು ವರನನ್ನು ಪಡೆದು ಭಾರತೀಯ ಶರಿರವನ್ನು ಆಶ್ರಯಿಸುತ್ತಾರೆ. ಅದರಲ್ಲಿ ಪಾರ್ವತಿಗೆ ಮಾತ್ರ ಗಂಡನ ಸಂಪರ್ಕವಿಲ್ಲದಂತಾಗಿ, ರುದ್ರಾಂಶರಾದ ಅಶ್ವತ್ಥಾಮಾ ಚಾರ್ಯ ಬ್ರಹ್ಮಚಾರಿಗಳಾಗಿ ಉಳಿದರೆಂಬ ಕಥೆಯನ್ನು ವಿಸ್ತರಿಸಿದ್ದಾರೆ. ಆರನೆಯವನಲ್ಲಿ ನನಗೆ ಅಪೇಕ್ಷೆಯಿದೆಯೆಂಬ ದ್ರೌಪದಿಯ ಮಾತಿಗೆ ರುದ್ರದೇವರೆ ಲಕ್ಷ್ಯವೆಂದು ಅರ್ಥಮಾಡಿಕೊಳ್ಳಬೇಕು. ಬ್ರಹ್ಮಕಾಂಡದ ಈ ಕತೆಯನ್ನು ಆಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ನಿರೂಪಿಸಿದ್ದಾರೆ. ನಾರಾಯಣಪ್ಪನೂ ಈ ಕತೆಯನ್ನು ಕನ್ನಡ ಭಾರತದಲ್ಲಿ ಸೇರಿಸಿದ್ದಾನೆ. ಜಗನ್ನಾಥದಾಸರು ಭಾರತಿದೇವಿ ಯರನ್ನು ಸ್ತೋತ್ರಮಾಡುವಾಗ ದ್ರೌಪದಿಯ ಪೂರ್ವಜನ್ಮದ ಹೆಸರುಗಳನ್ನು ಸೂಚಿಸಿದ್ದಾರೆ.

ಶಂಕರಾಭರಣ—ಅಟ

ಭಾರತಿ ಮಜ್ಜನನೀಯೆ ಭಾರತಿ ಪ

ಭಾರತಿ ಭರತನರ್ಧಾಂಗಿ ಕರುಣಾರಸ ಪೂರಿತಪಾಂಗಿ । ಆಹ ।

ತಾರಕ್ಷಪ್ರಮುಖ ವೈಕಾರಿಕ ದೇವಗಣಾರಾಧಿತಾಂಘ್ರಿ ಸರೋರುಹೇ ಪಾಲಿಸೆ ಪ

ಕಾಳಿ ದ್ರೌಪದಿ ಶಿವಕನ್ಯಾಮನ್ಮನಾಲಯದೊಳು ನಿಲ್ಲೆ ಘನ್ನಾ ಪ್ರಾಜ್ಞ | ಮೌಳಿಮಣಿಯೆ ನಿತ್ಯ ಎನ್ನ ಪರಿಪಾಲಿಸೆ ನಂಬಿದೆ ನಿನ್ನ | ಆಹ | ಶೈಲಜೆ ಶ್ಯಾಮಲೆ ಪೌಲೊಮಿ ಉಷರಿಂದ ವೋಲಗ ಕೈಕೊಂಬ ಕಾಲಾಭಿಮಾನಿಯೇ ೩

ವಂದಿಪೆ ನಿನಗಿಂದ್ರಿಯಶಯನ ನಳನಂದಿನಿ ಕರುಣಿಸು ಜ್ಞಾನ | ಶ್ರೀಮುಕುಂದನ ಪರಮ ಕಲ್ಯಾಣಾಗುಣಾಸಿಂದವಿನೊಳಗೆ ಪಾರೀಣಾ | ಆಹ | ನಂದದಿ ಚರಿಸುವ ಗಂಧವಾಹನರಾಣಿ ಸಿಂಧೂರಗಮನ ಪುರಂದರಾರಾಧಿತೆ ೪

ರಮಾದೇವಿ, ಬ್ರಹ್ಮ–ವಾಯು, ಸರಸ್ವತಿ–ಭಾರತಿ, ಇವರಿಗೆ ಪರಶುಕ್ಲತ್ರಯರೆಂದು ಹೆಸರು. ಇವರುಗಳಲ್ಲಿ ಎಂದಿಗೂ ಅಜ್ಞಾನಾದಿ ದೋಷಗಳಿಲ್ಲ. ಕಲಿವ್ಯಾಪಾರವಿಲ್ಲ. ಇವರ ನಂತರ ಗರುಡ, ಶೇಷ, ರುದ್ರರು ತಾರತಮ್ಯದಲಿ ಬರುವರು. ಈ ಮೂವರೂ ಸಮಾನರು. ಗರುಡ ಮತ್ತು ಶೇಷರು ಸರ್ವವಿಧದಿಂದಲೂ ಸಮಾನರು. ರುದ್ರದೇವರು ಇವರಿಬ್ಬರಿಗಿಂತಲೂ ಸ್ಥಾನದಲ್ಲಿ ಕಡಿಮೆ. ಮುಂದೆ ರುದ್ರದೇವರು ಶೇಷದೇವರ ಸ್ಥಾನಕ್ಕೆ ಬರುತ್ತಾರೆ. ಗರುಡನಿಗೆ ಭೂಲೋಕದಲ್ಲಿ ಅವತಾರವಿಲ್ಲ. ಜಗನ್ನಾಥದಾಸರು ಗರುಡ ಶೇಷರನ್ನು ಸ್ತೋತ್ರ ಮಾಡುತ್ತಾರೆ.

(ಊ) ಗರುಡ–ಶೇಷ–ರುದ್ರರು

ಕಾಂಬೋಧಿ–ಝಂಪೆ

ಅತಿ ಶೋಭಿಸುತಿದೆ ಶ್ರೀಪತಿ ವಾಹನಾ | ಚತುರದಶಭುವನಕಪ್ರತಿವಾಹನಾ ಪ

ಕಾಲನಾಮಕನಾಗಿ ಕಮಲ ಭವನದಲಿ ಪುಟ್ಟಿ | ಕಾಲಾತ್ಮ ಹರಿಯ ಸೇವಿಪವಾಹನ | ಕಾಳಗದಿ ಕಪಿವರರ ಕಟ್ಟು ಬಿಡಿಸಿದ ವಾಹನಾ | ವಾಲಖಿಲ್ಯರು ಪಡೆದ ವರವಾಹನ ೧

ವಿನತೆಕಶ್ಯಪ ಮುನಿಯ ತನಯನೆನೆಸಿದ ವಾಹನ | ಅನುಜನರ ಕದ್ದೊಯ್ದ ಆದ್ಯವಾಹನಾ | ವನಧಿ ಮಧ್ಯದಿ ನಾವಿಕರ ಭಕ್ಷಿಸಿದ ವಾಹನಾ | ಜನಕನಾಜ್ಞದಿ ಕೂರ್ಮಗಜನುಂಗಿದ ವಾಹನ | ೨

ಬಲಹರಿ–ಝಂಪೆ

ಬಲುರಮ್ಯವಾಗಿಹುದು ಹರಿಯ ಮಂಚ | ಯಲರುಣಿಕುಲರಾಜ ರಾಜೇಶ್ವರನ ಮಂಚ |

ಪವನ ತನಯನು ಎನಿಪ ಪಾವನ್ನತರ ಮಂಚ | ಪ

ಭುವನತ್ರಯವ ಪೊತ್ತ ಭಾರಿಮಂಚ | ಪವಿಗಳಿಲ್ಲದ ಮಂಚ ಶ್ರೀನಿಕೇತನ ಮಂಚ | ಶಿವ ರೂಪದಲಿ ಹರಿಯ ವೊಲಿಸಿದ ಮಂಚ | ೧

ವಾರುಣೀ ದೇವಿಗೆ ವರನೆನಿಸುವಾ ಮಂಚ |
ಕಾರುಣ್ಯ ನಿಧಿ ಜಗನ್ನಾಥವಿಠಲನ ವಿಹಾರಕ್ಕೆ ಯೋಗ್ಯವಾದ ಶೇಷಮಂಚ ೫

ರುದ್ರದೇವರು ತಾರತಮ್ಯದಲ್ಲಿ ಗರುಡ ಶೇಷರಿಗೆ ಸಮರು. ಆದರೂ ಅವರ ಪ್ರಸಿದ್ಧಿ ಪ್ರಪಂಚದಲ್ಲಿ ಬಹಳ. ಅವರ ಅನುಯಾಯಿವರ್ಗ ಹೆಚ್ಚು, ಶೈವಮತ ಅತ್ಯಂತ ಪ್ರಭಾವ ಶಾಲಿಯಾದುದು. ಆದರೆ ಶಾಸ್ತ್ರಗಳನ್ನು ವಿಚಾರಮಾಡಿದರೆ ರುದ್ರದೇವರು ವಿಷ್ಣುಭಕ್ತಾಗ್ರಣಿಗಳೆಂದೂ, ಭಗವಂತ ವಾಯುದೇವರು ಇವರಿಬ್ಬರಿಗಿಂತಲೂ ಅವರರೆಂದೂ ಅರ್ಥವಾಗುವುದು. ದಾಸರುಗಳು ರುದ್ರದೇವರನ್ನು ಅನೇಕ ವಿಧವಾಗಿ ಸ್ತೋತ್ರ ಮಾಡಿರುತ್ತಾರೆ.

ಶಂಕರಾಭರಣ—ಆದಿ

ನಮೋ ಪಾರ್ವತಿಪತಿ ನುತಜನವರ ನಮೋ ವಿರೂಪಾಕ್ಷ ಪ
ರಮಾರಮಣನಲಮಲ ಭಕುತಿ ಕೊಡು ನಮೋ ವಿಶಾಲಾಕ್ಷ ಅ

ನೀಲಕಂಠ ತ್ರಿಶೂಲ ಡಮರುಹಸ್ತಾಲಂಕೃತ ರಕ್ಷ | ಫಾಲನೇತ್ರ ಕಪಾಲ ರುಂಡ ಮಣಿ ಮಾಲಾಧೃತ ವಕ್ಷ | ಶೀಲರಮ್ಯ ವಿಶಾಲ ಸುಗುಣ ಸಲ್ಲೀಲ ಸುರಾಧ್ಯಕ್ಷ | ಶ್ರೀಲಕುಮಿಶನ ಓಲೈಸುವ ಭಕ್ತಾವಳಿಗಳ ಪಕ್ಷ | ೧

ವಾಸವನುತ ಹರಿದಾಸ ಈಶ ಕೈಲಾಸ ವಾಸದೇವ | ದಾಶರಥಿಯ ಔಪಾಸಕನು ಜನರ ಪೋಷಿಪ ಪ್ರಭಾವ | ಭಾಸಿಸುತಿಹದಶೇಷ ಜೀವರಿಗೆ ಈಶ ನೆಂಬಭಾವ | ಶ್ರೀಶನಲ್ಲಿ ಕೀಲಿಸುವಮನವ ಗಿರಿಜೇಶ ಮಹಾದೇವ | ೨

ಮೃತ್ಯುಂಜಯ ನಿನ್ನುತ್ತುಮ ಪದಯುಗ ಭೃತ್ಯನೊ ಸರ್ವತ್ರ |
ಹತ್ತಿರ ಕರೆದು ಅಪತ್ಯನಂದದಿ ಪೊರೆಯುತ್ತಿರೋ ತ್ರಿನೇತ್ರ |
ತೆತ್ತಿಗನಂತೆ ಕಾಯುತ್ತಿಹೆ ಬಾಣನ ಸತ್ಯದಿ ಸುಚರಿತ್ರ |
ಕರ್ತೃ ಉಡುಪಿ ಸರ್ವೋತ್ತಮ ಕೃಷ್ಣನ ಪೌತ್ರ ಕೃಪಾ ಪಾತ್ರ | ೩

ರುದ್ರದೇವರ ವೈಭವವನ್ನು ಕೆಳಗಿನ ಪದದಲ್ಲಿ ವಿಜಯದಾಸರು ವರ್ಣಿಸುತ್ತಾರೆ.

ಧನಾಸರಿ—ಟಾಪು

ಲಿಂಗಾ ಎನ್ನಂತರಂಗ | ಮಂಗಳಾಂಗ ಸರ್ವೋತ್ತುಂಗಮಾರಾಮ ಮಂದಾಕಿನೀ ಧರಗೆ | ಗಂಗಾಂಬು ಮಜ್ಜನವೆ ಚಂದ್ರಾಮೌಳಿಗೆ ಗಂಧ ಕುಸುಮಾರ್ಪಣೆಯೋ |ಇಂದು ರವಿನೇತ್ರಗೆ ಕರ್ಪೂರಾರತಿಯೋ ಕಂದರ್ಪಜಿತಗೆ ಮಿಗಿಲಾಪೇಕ್ಷೆಯೋ ರಾಮಾ ೧

ಘನ ವಿದ್ಯಾ ಚತುರಗೆ ಮಂತ್ರದಾ ಕಲಾಪವೆ ಧನಪತಿಯ ಸಖನಿಗೆ ಕೈಗಾಣಿಕೆಯೋ | ಮನೆ ರಜತಪರ್ವತಗೆ ಫಣಿಯ ಆಭರಣವೆ ಮನೋನಿಯಾಮಕಗೆ ಬಿನ್ನಹವೆ ರಾಮ ೨

ವೈರಾಗ್ಯ ನಿಧಿಗೆ ಈ ವಿಷಯ ಪದಾರ್ಥವೆ ಗಿರಜೆ ಪತಿಯಾದವಗೆ ಈ ಸ್ತೋತ್ರವೇ | ವೀರ ರಾಘವ ವಿಜಯ ವಿಠ್ಠಲನ ನಿಜಹಸ್ತವಾರಿರುಹದೊಳಗೆ ನೀನೆಲೆಸಿದ್ಯೋ ಶ್ರೀ ಮಹಾ ೩

ಕಾಂಬೋಧಿ—ಝಂಪೆ

ಏಕಭಿಕ್ಷೆವೋ ಚರ್ಮಚೇಲ ನಿನಗೆ ಶ್ರೀಕಂಠ ನಿನ್ನಷ್ಟು ಸಹಾಯ ಒಬ್ಬರಿಗಿಲ್ಲ ಅ

ಕನಕಾಚಲವೋ ನಿನ್ನಕರದೊಳಗಿಹ ಧನವು ಮನೆಯ ರಜತಾತಚಲವು | ಅನ್ನ ಪೂರ್ಣೆ ನಿನಗೆ ಪಟ್ಟದ ರಾಣಿಯ ಲೋಕವಿಘ್ನವ ಕಳೆವ ಗಣನಾಥ ನಿನ್ನ ಮಗ ಶಿವರೂಪಿ ನೀನು ೧

ರಾಜಶೇಖರ ನೀನು ಸಕಲ ಕೋಶಾಧ್ಯಕ್ಷ ರಾಜರಾಜನು ನಿನಗೆ ಪರಮ ಸಖನು | ಮೂಜಗತ್ಪಾವನಳು ಸುರಗಂಗೆ ಜಡೆಯೊಳಗೆ ಸೋಜಿಗವಿದೇನಯ್ಯಾ ಜಗದೊಳು ಶಂಕರನೆ ೨

ತ್ರಿಣಯನನು ನೀನು ಪಂಚಾಸ್ಯ ಬ್ರಹ್ಮನ ಮಗನು ನಿನಗೊಬ್ಬನಿಹನು ಆರುಮೊಗನು | ಅನಿಮಿಷಪ್ರಿಯ ಗುರು ಗೋಪಾಲವಿಠಲ ನಿನಗೆ ಅತ್ಯಂತ ಪ್ರಿಯನಾಗಿರಲು ದೇವ

ನಾದನಾಮಕ್ರಿಯೆ—ಆದಿ

ಎಂಥಾ ಚೆಲುವಗೆ ಮಗಳನು ಕೊಟ್ಟನು ಗಿರಿರಾಜನು ನೋಡಮ್ಮ ಪ

ಕಂತುಹರ ಶಿವನೆ ಚೆಲುವನೆನ್ನುತ ಮೆಚ್ಚಿದನು ನೋಡಮ್ಮಮ್ಮ ಅ

ಮೋರೆ ಐದು ಮೂರು ಕಣ್ಣುವಿಪರೀತವ ನೋಡಮ್ಮಮ್ಮ | ಕೊರಳೊಳು ರುಂಡ ಮಾಲೆಯ ಧರಿಸಿದ ಉರಗಭೂಷಣನ ನೋಡಮ್ಮಮ್ಮ ೧

ಮನೆಯೆಂಬೋದುಸ್ಮಶಾನನೋಡೆ ಗಜಚರ್ಮಾಂಬರವಮ್ಮಮ| ಹಣ ಒಂದಾದರು ಕೈಯೊಳಗಿಲ್ಲ ಕಪ್ಪುರವನು ನೋಡಮ್ಮಮ್ಮ | ನಂದಿವಾಹನ ನೀಲಕಂಠನ ನಿರ್ಗುಣನ ನೋಡಮ್ಮ |ಇಂದಿರೆರಮಣ ಶ್ರೀಪುರಂದರವಿಠಲನ ಪೊಂದಿದವನ ನೋಡಮ್ಮಮ್ಮ ೩

(ಋ) ಪಾರ್ವತಿ ದೇವಿ

ನಾದನಾಮ ಕ್ರಿಯೆ—ಆದಿ

ಪಾರ್ವತಿ ಪಾಲಿಸೆನ್ನ ಮಾನಿನಿರನ್ನೆ ಪಾರ್ವತಿ ಪಾಲಿಸೆನ್ನೆ ಪ

ಪಾರ್ವತಿ ಭಕ್ತರ ಸಾರಥಿ ವಂದಿಸೆ ಸುರಪತಿ ಗಜಮೂರೂತಿ ಮಾತೆ ಅ

ಮನದಭಿನಮಾನಿಯೇ ನೆನೆವೆನೆ ನಿನ್ನನು ಅನುಕರುಸೆನ್ನನು ಅಂಬುಜಪಾಣಿ ೧

ಮಂಗಳೆ ಮೃಡನಂತರಂಗಳೆ ಹರಿಪದ ಭೃಂಗಳೆ ಪನ್ನಗವೇಣಿ ೨

ಗುಣಪೂರ್ಣ ವೇಣುಗೋಪಾಲವಿಠಲನ್ನ ಕಾಣಿಸಿಕೊಡುವಂಥ ಶೂಲಿಯರಾಣಿ ೩

(ಋ) ಇತರರು

ವೈಷ್ಣವಧರ್ಮದಲ್ಲಿ ತುಳಸಿಯ ಸ್ಥಾನ ಬಹಳ ಹಿರಿಯದು. ತುಳಸಿಯ ಅರ್ಚನೆಯಿಲ್ಲದ ಹರಿಪೂಜೆ ವ್ಯರ್ಥ. ತುಳಸಿ ಪರಮಾತ್ಮನ ಆನಂದಬಾಷ್ಪದಿಂದ ಹುಟ್ಟಿ ಪರಮಾತ್ಮನನ್ನೇ ವರಿಸಿದಳು. ವಿಜಯದಾಸರು ತುಳಸಿಯ ಮಹಾತ್ಮ್ಯವನ್ನು ವಿಸ್ತಾರವಾಗಿ ಹೇಳಿರುವರು.

ಉದಯರಾಗ– ವಾರ್ಧಿಕ

ಶ್ರೀ ತುಳಸಿಯ ಸೇವಿಸಿ ||

ಶ್ರೀ ತುಳಸಿಯ ಸೇವೆ ಪ್ರೀತಿಯಿಂದಲಿ ಮಾಡೆ ಗಾತರದ ಮಲವಳಿದು | ಮಾತೆಯಂ | ಬನಿತರೊಳು ಪಾತಕ ಪರಿಹರಿಸಿ ಪುನೀತರನು ಮಾಡುವಳು. ಯಾತಕಿನ್ನನು ಮಾನವಯ್ಯ ಅ

ಸುಧೆಗಡಲ ಮಥಿಸುವ ಸಮಯದಲ್ಲಿ ವೈದ್ಯನಾಗಿ ಪದುಮನಾಭನು ತಾನು ಉದುಭವಿಸಿಬರಲಂದು | ಉದುರಿದವು ಕಣ್ಣಿಂದ ಉದಕ ವುತ್ಸಹದಿಂದಲದೆ ತುಳಸಿ ನಾಮವಾಗೆ | ತ್ರಿದಶರೊಂದಿಸುತ ಮೋದದಿಂ ಕೊಂಡಾಡಿದರು ಒದಗಿ ಸುಜನರು ತಮ್ಮ ಸದನದಲ್ಲಿ ನಿತ್ಯ ಸತ್ಪದವಿಗೆ ಸಿದ್ಧವೆಂದು ಮುದದಿಂದ ತಿಳಿದು ವೃಂದಾವನವ ರಚಿಸಿದರ್‍ಯೆಯ ೧

ಉದಯಕಾಲದೊಳೆದ್ದು ಆವನಾದರೂ ತನ್ನ ಹೃದಯ | ನಿರ್ಮಲನಾಗಿ ಭಕುತಿ ಪೂರ್ವಕದಿಂದ | ಸದಾಮಲಾ ತುಳಸಿಯನು ಸ್ತೋತ್ರ ಮಾಡಿದ ಕ್ಷಣವೆ | ಮದರ್ಗವ ಪರಿಹಾರವೋ

ಇದೇ ತುಳಸಿ ಸೇವಿಸಲು ಪೂರ್ವದಲಿ ಕಾವೇರಿನದಿಯ ತೀರದಲೊಬ್ಬ ಭೂಸುರ | ಪದಕೆ ಪೋದ | ಪದೆ ಪದೆಗೆ ಸಿರಿ ವಿಜಯವಿಠ್ಠಲಗೆ ಪ್ರಿಯಳಾದ ಮದನತೇಜಳ ಭಜೀಸಿರ್‍ಯೆ ೧೧

ಗಣಪತಿ ವಿಘ್ನನಿವಾರಕನೆಂಬುದು ಸರ್ವತ್ರ ಪ್ರಸಿದ್ಧವು. ಗಣಪತಿಯು ಸರ್ವ ಮತೀಯರಿಂದಲೂ ಪೂಜ್ಯದೇವತೆಯು. ಸರ್ವ ಕಾರ್ಯಗಳಿಗೂ ಮೊದಲು ವಿಘ್ನೇಶ್ವರನ ಪೂಜೆ ಮಾಡುವುದು ಸ್ವಾಭಾವಿಕವು. ದಾಸರುಗಳು ವಿಘ್ನೇಶ್ವರನನ್ನು ಸ್ತೋತ್ರ ಮಾಡಿರುತ್ತಾರೆ.

ನಾಟಿ–ತ್ರಿಪುಟ

ಶರಣು ಶರಣು ||

ಶರಣು ಗಜಮುಖ ಆಖುವಾಹನ ಶರಣು ಸುರಗುಣ ಸೇವಿತ | ಶರಣು ಸಕಲಾ ಭೀಷ್ಟದಾಯಕ ಶರಣು ವಿಘ್ನ ವಿನಾಯಕ ೧

ಹೇಮ ಖಚಿತ ಕಿರೀಟ ಕುಂಡಲ ಕಾಮಿತ ಫಲದಾಯಕ | ಅಮಿತ ಸೌಲಭ್ಯ ಪ್ರಬಲ ಶಾಸ್ತ್ರೋದ್ಧಾಮ ವಿದ್ಯಾಶರನಿಧೇ ೨

ಪಾಶಮೋದಕ ಪರಶುಧರ ಮಣಿಭೂಷ ಪಾರ್ವತಿ ನಂದನ | ವಾಸವಾರ್ಚಿತ ವಿಜಯ ವಿಠ್ಠಲನ ದಾಸ ಭೋ ಗಣನಾಯಕ ೩

ಜಗನ್ನಾಥರದಾಸರು ಹರಿಮಂದಿರದ ದ್ವಾರಪಾಲಕರನ್ನು ಸ್ತೋತ್ರ ಮಾಡಿದ್ದಾರೆ.

ಕಾಂಬೋಧಿ–ಝಂಪೆ

ದ್ವಾರಪಾಲಕರಿಗಾನಮಿಪೆ ನಿತ್ಯಾ |
ಶ್ರೀರಮಣ ನಾರಾಯಣನ ಪುರತ್ರಯದೊಳಿಹ ಅ

ಜಯ ವಿಜಯ ಬಲ ಪ್ರಬಲ ಚಂಡ ಪ್ರಚಂಡ ನಿರ್ಭಯನಂದ ಸುನಂದ ಕುಮುದ ಕುಮುದಾ | ನಯನ ಭದ್ರ ಸುಭದ್ರ ಧಾಮ ಸುಧಾಮ ಸಂಪ್ರಿಯತಮನ ಆಜ್ಞಾ ಧಾರಕರೆಂದೆನಿಸುವಾ ೧

ದ್ರುಹಿಣ ಮೊದಲಾದ ಸುಮನಸಪೂಜ್ಯ ಚರಣಾಬ್ಜಮಹಿಮ ಮಂಗಳಚರಿತ ಸುಗುಣಭರಿತಾ | ಅಹಿರಾಜಶಯನ ಜಗನ್ನಾಥ ವಿಠ್ಠಲನ ಸನ್ಮಹಿಮೆಗಳ ತಿಳಿಸಿ ತೋರಿಸಲಿ ಮನ್ಮನದಿ ೩

ನವಗ್ರಹಗಳ ಸ್ತೋತ್ರ ಹೀಗಿದೆ.

ಆದಿತ್ಯದೇವ ತ್ವತ್ಪಾದಯುಗಳಕ್ಕೆ ಅಭಿವಂದನೆಯ ಮಾಳ್ಪೆನು ಅನುದಿನ | ಅನುದಿನಾ ಸಜ್ಜನರ ವ್ಯಾಧಿಗಳ ಕಳೆದು ಸುಖವೀಯೋ ೧

ದತ್ತ ದೂರ್ವಾಸನನುಜತ್ರಿಸಂಭವನೆ ತ್ವದ್ಭೃತ್ಯ ನಾನಯ್ಯ ಎಂದೆಂದು ಎಂದೆಂದು ಪ್ರಾರ್ಥಿಸುವೆ ಹೃತ್ತಿಮಿರಕಳೆದು ಸಂತೈಸೊ

ನುತಿಸಿಬೇಡುವೆ ಬೃಹಸ್ಪತಿಗುರುವೆ ಎನ್ನ ದುರ್ಮತಿಯ ಪರಿಹರಿಸಿ ಸುಜ್ಞಾನ | ಸುಜ್ಞಾನವಿತ್ತು ಶ್ರೀಪತಿಯ ತೋರೆನ್ನ ಮನದಲ್ಲಿ ೧೩

ಐಹಿಕ ಪಾರತ್ರದಲ್ಲಿ ನರಹರಿಯ ದಾಸರನಾ ನವಗ್ರಹದೇವತೆಗಳು ದಣಿಸೋರೆ | ದಣಿಸಬಲ್ಲರೆ ಇವರೆ ಸಹಿತರೆಂದು ಕೆಡಬೇಡಿ ೨೨

ಇದರಂತೆ ಅಗ್ನಿ ಸ್ತೋತ್ರವನ್ನು ಮಾಡಿರುವರು. ಈ ದೇವತೆಗಳ ಸ್ತೋತ್ರವಲ್ಲದೆ ದಾಸರುಗಳು ಗಂಗಾ, ಗೋದಾವರಿ, ತುಂಗ, ಕಾವೇರಿ, ಮೊದಲಾದ ನದಿಗಳನ್ನು ಸ್ತೋತ್ರ ಮಾಡಿದ್ದಾರೆ. ಟೀಕಾಕೃತ್ಪಾದರು, ಶ್ರೀಪಾದರಾಯರು, ಶ್ರೀವ್ಯಾಸರಾಯರು, ವಾದಿರಾಜರು, ರಾಘವೇಂದ್ರಸ್ವಾಮಿಗಳು, ಸತ್ಯಬೋಧರು, ವರದೇಂದ್ರರು ಮೊದಲಾದ ಸ್ವಾಮಿಗಳ ಸ್ತೋತ್ರವೂ ಪುರಂದರದಾಸರು ವಿಜಯದಾಸರು ಮೊದಲಾದ ದಾಸರುಗಳ ಸ್ತೋತ್ರವೂ ಅವರುಗಳ ಶಿಷ್ಯರುಗಳಿಂದ ಮಾಡಲ್ಪಟ್ಟಿವೆ. ಇದರಲ್ಲೆಲ್ಲ ರಾಘವೇಂದ್ರಸ್ವಾಮಿಗಳ ಸ್ತೋತ್ರವು ಹೆಚ್ಚು. ರಾಯರು ಇತರರಂತೆ ಬರಿಯ

ಯತಿಗಳಷ್ಟೇ ಆಗಿಯಾಗಲಿ, ಮಹನೀಯರಾಗಿಯಾಗಲಿ ಉಳಿಯದೆ, ವೈಷ್ಣವ ಸಾಮಾನ್ಯರಿಗೇಕೆ ಇತರರಿಗೂ ಇಷ್ಟದೇವತೆಯಾಗಿದ್ದಾರೆ. ಹರಿವಾಯುಗಳು ಇವರ ಮೇಲೆ ಮಾಡಿರುವ ವಿಶೇಷಾನುಗ್ರಹವೇ ಇದಕ್ಕೆ ಕಾರಣ. ಆದ್ದರಿಂದ ರಾಯರ ಸ್ತೋತ್ರ ದಾಸರುಗಳೆಲ್ಲರಿಗೂ ಅತ್ಯಂತ ಪ್ರಿಯವಾಗಿರುವುದು.

ಭಗವಂತನ ಅನುಗ್ರಹ ಸಂಪಾದನೆಗೆ ಅವನನ್ನು ಭಜಿಸುವುದೇ ಮುಖ್ಯ ಉಪಾಯವೆಂದು ಶಾಸ್ತ್ರಗಳು ಹೇಳುವುವು. **ಯಸ್ಯ ದೇವೆ ಪರಾ ಭಕ್ತಿಃ ಯಥಾದೇವೇ ತಥಾಗುರೌ** ಎಂಬ ವಚನಾನುಸಾರ ಭಗವಂತನ ಭಜನೆಯಂತೆ ಅವನ ಪರಿವಾರವಾದ ರಮಾದಿದೇವತೆಗಳ ಭಜನೆಯೂ, ಆಚಾರ್ಯರಾದಿಯಾಗಿ ಎಲ್ಲ ಗುರುಗಳ ಭಜನೆಯೂ ಆವಶ್ಯಕ. ಅಂತೆಯೇ ಕನ್ನಡ ಹರಿದಾಸರುಗಳು ಎಲ್ಲ ದೇವತೆಗಳನ್ನು ಅವರವರ ತಾರತಮ್ಯ ಪ್ರಕಾರ ಭಜನೆ ಮಾಡಿರುವರು.

12. ಪ್ರಾರ್ಥನಾ ಭಾಗ

ದಾಸಸಾಹಿತ್ಯದಲ್ಲೆಲ್ಲ ಹರಿಯನ್ನು ಕುರಿತ ಪಾರ್ಥನಾಭಾಗವೇ ಅತಿ ಮುಖ್ಯವಾದ ಘಟ್ಟ . ಭಕ್ತನು ಆರ್ತಭಾವದಿಂದ, ವಾತ್ಸಲ್ಯ ಭಾವದಿಂದ ನಿಂದಾಸ್ತುತಿ ರೂಪದಿಂದ, ಮರುಕದಿಂದ, ಸಲಿಗೆಯಿಂದ ಭಗವಂತನನ್ನು ಹಾಡಿ ಪಾಡುತ್ತಾನೆ. ಭಗವಂತನ ಅನುಗ್ರಹವಾಗಲಿಲ್ಲವೆಂದು ಕೊರುಗುತ್ತಾನೆ. ಇನ್ನೊಮ್ಮೆ ದೇವರೊಡನೆ ಕಲಹಕ್ಕೆ ನಿಲ್ಲುತ್ತಾನೆ. ಮತ್ತೊಮ್ಮೆ ಆನಂದೋದ್ರೇಕದಿಂದ ಕೊರಗುತ್ತಾನೆ. ಒಂದು ಸಲ ತನ್ನನ್ನೇ ತಾನು ಹಿಯಾಳಿಸಿಕೊಳ್ಳುತ್ತಾನೆ. ಒಂದು ಸಲ ತನ್ನ ಸರಿ ಯಾರೆಂದು ಜಂಬ ಕೊಚ್ಚಿಕೊಳ್ಳುತ್ತಾನೆ. ಹೀಗೆ ನಾನಾ ಭಾವ ಭಂಗಿಗಳಲ್ಲಿ ದೇವರನ್ನು ಪ್ರಾರ್ಥನೆ ಮಾಡುವ ಪರಿಯನ್ನು ದಾಸರುಗಳು ಅತಂತ್ಯ ನೈಜವಾಗಿ ಚಿತ್ರಿಸಿದ್ದಾರೆ. ಪ್ರತಿಯೊಬ್ಬ ದಾಸರು ಮಹಾಭಗದ್ಭಕ್ತರಾದ್ದರಿಂದ ಅವರ ಈ ಕೃತಿಗಳೆಲ್ಲ ಅವರ ಅನುಭವದ ಮಾತುಗಳೇ ಎನ್ನಲೇನೂ ಅಡ್ಡಿಯಿಲ್ಲ. ಸ್ವಾತ್ಮದೈನ್ಯವು ಇವರ ಕೃತಿಗಳಲ್ಲಿ ತುಂಬಿದ್ದು ತಾವು ಮಾಡದ ಪಾಪವೇ ಇಲ್ಲವೆಂದು ದೇವರಲ್ಲಿ ಮೊರೆ ಇಡುತ್ತಾರೆ. ಮಹಾ ಪುಣ್ಯಶ್ಲೋಕರಾದ ದಾಸರುಗಳು ಹರಿಯ ಮಹಾ ವೈಭವವನ್ನು ಸ್ತುತಿಸುವಾಗ ಅದರೊಡನೆ ತಮ್ಮ ಅಲ್ಪತೆಯನ್ನು ಕಂಡುಕೊಂಡು ಹಾಗೆ ನೈಚ್ಯಾನುಸಂಧಾನವನ್ನು ಮಾಡುತ್ತಾರಯೇ ಹೊರತು ಅವರು ಬಣ್ಣಿಸಿದ ಈ ಪಾತಕ ವಿಶೇಷಗಳನ್ನು ಅವರು ಮಾಡಿದರೆಂದರ್ಥವಲ್ಲ. ಲೋಕದ ಸಾಮಾನ್ಯ ಜನರಿಗೆ ಇವರ ಆ ಪ್ರಾರ್ಥನೆಗಳು ಕರದೀವಿಗೆಯಂತೆ ಮಾರ್ಗದರ್ಶಕಗಳಾಗುವುವು.

ಮುಖಾರಿ—ಝಂಪೆ

ದಯಮಾಡಿ ಸಲಹೈಯ್ಯ ಭಯ ನಿವಾರಣನೆ

ಹಯವದನ ನಿನ್ನ ಚರಣ ನಂಬಿದೆ ಜೀಯ ಅ

ಕ್ಷಣ ಕ್ಷಣಕೆ ನಾ ಮಾಡಿದಂಥ ಪಾಪಗಳನ್ನು | ಎಣಿಸಲಳವಲ್ಲ ಅಷ್ಟಿಷ್ಟು ಎಂದು | ಫಣಿಶಾಯಿ ನೀನೆನ್ನ ಅವಗುಣಗಳೆಣಿಸದೆ | ನೆನಹಿನಾತುರ ಕೊಟ್ಟು ದಾಸನೆಂದೆನಿಸಯ್ಯ ೧

ಕಂಡ ಕಂಡ ಕಡೆಗೆ ಪೋಪ ಚಂಚಲ ಮನವು | ಪಿಂಡ ತಿಂಬುವಲ್ಲಿ ಬಹು ನಿಷ್ಠ ನಾನು | ಭಂಡಾಟದವನೆಂದು ಬಯಲಿಗೆ ತಾರದೆ | ಕೊಂಡಾಡುವಂತೆ ಭಕುತಿ ಕೊಟ್ಟು ಸಲಹಯ್ಯ ೨

ಜಾತಿ ಧರ್ಮವ ಬಿಟ್ಟು ಅಜಮಿಳನು ಇರುತಿರಲು |

ಪ್ರೀತಿಯಿಂದಲಿ ಮುಕುತಿ ಕೊಡಲಿಲ್ಲವೇ | ಖ್ಯಾತಿಯನು ಕೇಳಿ ನಾಮರೆ ಹೊಕ್ಕೆ ಸಲಹಯ್ಯ | ಪಾತಜನ ಪರಿಪಾಲ ಶ್ರೀರಂಗ ವಿಠಲ

ಶ್ರೀರಂಗ—ಆಟ

ದುರಿತ ಗಜ ಪಾಂಚಾನನ ನರಹರಿಯೆ ದೇವರ ದೇವ ಕಾಯೋ ಗೋವಿಂದ ಅ

ಆಪತ್ತು ತಾಪತ್ರಯ ಬಿಡದಿದ್ದರೆ ಶ್ರೀಪತಿ ಶರಣೆನ್ನಲ್ಯಾಕೋ ಗೋವಿಂದ ಅ

ಅರಸು ಮುಟ್ಟಲು ದಾಸಿ ರಂಭೆಯಾದಳು ದೇವ | ಪರಶುಮುಟ್ಟಲು ಲೋಹ ಸ್ವರ್ಣ ಗೋವಿಂದ ೬

ಮಾನಾಭಿಮಾನದೊಡೆಯ ರಂಗವಿಠಲ ಜ್ಞಾನಿಗಳರಸನೆ ಕಾಯೋಗೋವಿಂದ ೩

ಮೋಹನ —ಆದಿ

ನೀನೇ ಗತಿ ಮುಕತೆನಗೆ ಅನಂತ ಜನುಮಗಳಲಿ ಆನೇನರಯೆ ಗರುಡ ಗಮನ ಸಿರಿ ಕೃಷ್ಣರಾಯ ಅ

ಅನ್ಯವಾರ್ತೆ ಅನ್ಯಸಂಗ ಅನ್ಯ ಜನಾರಾಧನೆ | ಅನ್ಯ ಸತಿ ಅನ್ಯ ಕರ್ಮ ಮೊದಲು ಸಕಲ ತನ್ನು | ಮನ್ನವಾಕ್ಯಗಳಿಂದ ಜರಿದೆ ನಿನ್ನವರೊಳು ಎನ್ನ ಕೂಡಿಸೊ | ನಿನ್ನ ಚರಣ ಭಕುತಿಯಲಿ ಶ್ರೀಶ ೧

ಅಂದು ವೇದೋದ್ಭವಳ ಮೊರೆಯನು ಕೇಳಿ ಕಾಯ್ದಂತೆ | ಮುಂದ ಗಜೇಂದ್ರನಿ ಗೊಲಿದು ರಕ್ಷಿಸಿದ ಪರಿಯಂತೆ | ತಂದೆ ತಾಯಿ ಬಂಧುಬಳಗ ಎಂದೆಂದು ನೀನೆ ದಯಾ | ಸಿಂಧು ನಿನ್ನ ದಾಸರ ದಾಸನೆಂದೆನೆಸೆನ್ನ ೨

ರನ್ನನಖಾಂಗುಳಿಪಾದ ಜಂಘೆ ಜಾನೂರು ಕಟಿ | ಘನ್ನ ಬಾಹು ಉದರ ವಕ್ಷಭುಜಕುಂತಳದಿ | ಚನ್ನ ಕಿರೀಟ ಸರ್ವಾಲಂಕಾರದಿಂದ ಶೋಭಿಸುವ | ನಿನ್ನ ಮೂರುತಿಯನ್ನ ತೋರೋ ಭಕ್ತವತ್ಸಲ ಸಿರಿ ಕೃಷ್ಣ ೩

ರೇಗುಪ್ತಿ—ಝಂಪೆ

ನೀಕರುಣದಿಂದೆನ್ನ ಪಾಲಿಸದಿರ್ದೊಡೆ ನಾ ಕಾಣೆ ಮನ್ನಿಸುವವರ | ಸಾಕಾರರೂಪ

ಸರ್ವೋತ್ತಮನು ನೀನು ಪರಾಕುಮಾಡದೆ ಎನ್ನನು ದೇವ ಅ

ಗುರು ಹಿರಿಯರುನು ಕಂಡುತರಳತನದಲಿ ನಾನು |ಚರಣಕೆರಗದೆ ಬರುವೆನು | ಸರುವ ಸಂಪದವನ್ನು ಬೇಡಿ ಬಯಸುತ ನಿನ್ನ ಸ್ಮರಣೆಯನ್ನು ಮರೆತಿದ್ದನೋ | ಸ್ಮರನ ಬಾಣಕೆ ಸಿಲುಕಿ ಪರಸತಿಗೆ ಒಳಗಾಗಿ ದುರ್ಗತಿಗೆ ನೆಲೆಯಾದನೋ | ಸಿರಿಯರಸನೇ ನಿನ್ನ ಚರಣವನು ನಂಬಿದೆನೊ ಕಡೆ ಹಾಯಿಸೋ ಎನ್ನನೂ ದೇವ ೧

ಹಲವು ಜನ್ಮಗಳಲ್ಲಿ ಬಲುನೊಂದು ಬಾಯಾರಿ |ಬಳ ಬಳನೆ ತಿರುಗುತಿಹೆನೋ | ಜಲದ ಮೇಲಿನ ಗುಳ್ಳೆಯಂತಿಪ್ಪ ಈ ದೇಹ | ನೆಲೆಯೆಂದು ನೆಚ್ಚುತಿಹೆನೋ | ಸಲೆ ಉದರ ಪೋಷಣೆಗೆ ತಲೆ ಹುಳುಕನಾಯಂತೆ | ಹಲವು ಮನೆ ಅಲೆಯುತಿಹೆನೋ | ಜಲಜನಾಭನೆ ನಿಮ್ಮ ಮಹಿಮೆಯನ್ನು ಪೊಗುಳುವೆನೊ | ಚೆಲುವ ಹಯವದನ ಕಾಯೋದೇವ ೩

ಸುರುಟಿ–ಝಂಪೆ

ಆರಿಗೆ ಆರೋ ನಿನ್ನ ಉಳಿದು ಪೊರೆವರ ಕಾಣೆ ಶೂರ | ಮಾರಜನಕ ಅಕ್ರೂರ ವರದ ಧೊರೆಯೋ ಅ

ಸತಿ ಸುತರು ಹಿತರೇನೊ ಮತಿಭ್ರಾಂತಿ ಬಿಡಿಸುವರೊ | ಗತಿಯಾರನು ಕಾಣೆನೋ ಗರುಡವಾಹನ ರಂಗ ೧

ಆಶಾಪಾಶದಿ ಸಿಲುಕಿ ಗಾಸಿ ಪಟ್ಟೆನೋ | ಬಹಳ ವಾಸುದೇವನೆ ನಿನ್ನ ದಾಸನನೆಂದಿನಿಸೆನ್ನ ೨

ಮಾಯಾಮಡುವಲಿ ಬಿದ್ದು ಗಾಯವಾಯಿತೋ ಕಾಯ | ಉಪಾಯ ಪೇಳೊ ರಾಯ ಹಯನದನ

ಜಂಜೂಟಿ–ರೂಪಕ

ಎನ್ನನುದ್ಧರಿಸವಲಾಗದೆ ಚೆನ್ನರಾಯ ಎನ್ನನುದ್ಧರಿಸಲಾಗದೆ ಪ

ಎನ್ನನ್ನುದ್ಧರಿಸಲಾಗದೆ ಚೆನ್ನರಾಯ ಬಿನ್ನಸುವೆ |ಇನ್ನು ಬೇರೆ ಗತಿಯ ಕಾಣೆ ನಿನ್ನಪಾದ ಪದುಮದಾಣೆ ಅ

ಶರಣಜನರ ಪಾಲ ಕಲ್ಪತರು ದಯಾ ಸ್ವರೂಪನೆಂದು ಧರೆಯೊಳಖಿಳನಿಗಮ ಉಸುರು ತಿರಲು ನಿನ್ನ ಚರಣವನ್ನು | ಶಿರ ದೊಳಾಂತೆ ಎನ್ನಮೇಲಣ ಕರುಣ ವಿಲ್ಲದಿ ರಲು ನಿನಗದೇನು ಕಾರಣ ಸಲಹಬೇಕು ಸುರಮಸ್ತಕದ ಭೂಶಣ ಚೆನ್ನರಾಯ ೧

ಎನ್ನ ದುರ್ಗುಣವನು ಮರೆದು ನಿನ್ನ ಸದ್ಗುಣ ಪೊರೆದು | ಮನ್ನಿಸಿದರೆ ಲೋಕದೊಳಗೆ ಧನ್ಯನಹೆನು ಜನ್ಮಪೆತ್ತಿ | ಉನ್ನತಾಹುದು ನಿನ್ನ ಕೀರುತಿ ನಾಶವಹುದು ಎನ್ನಭವದ ಬಹಳ ದಾವತಿ ಇನ್ನು ಸಲಹೋ ಮಾನ್ಯ ಹಯನದನ್ನ ಮೂರುತಿ ಚೆನ್ನರಾಯ ೫

ಕಲ್ಯಾಣಿ—ಅಟ

ಇನ್ನೂ ದಯಬಾರದೆ ದಾಸನ ಮೇಲೆ ಇನ್ನೂ ದಯಬಾರದೆ |
ಪನ್ನಗಯಶಯನ ಪಾಲ್ಗಡಲೊಡಯನೆ ಕೃಷ್ಣ ಅ
ನಾನಾದೇಶಗಳಲ್ಲಿ ನಾನಾಕಾಲಗಳಲ್ಲಿ ನಾನಾಯೋನಿಗಳಲ್ಲಿ ನಲಿದು ಪುಟ್ಟಿ | ನಾನು ನನ್ನದು ಎಂಬ ನರಕದೊಳಗೆ ಬಿದ್ದು ನೀನೆ ಗತಿಯೆಂದು ನಂಬಿದ ದಾಸನಮೇಲೆ ೧
ಕಾಮಾದಿಷಡ್ವರ್ಗ ಗಾಢಾಂಧಕಾರದಿ | ಪಾಮರನಾಗಿಹ ಪಾತಕಿಯು | ಘಾಮಾನೋಹರನೆ ಚಿತ್ತಜನಕನೆ | ನಾಮಗತಿಯೆಂದು ನಂಬಿದದಾಸನ ಮೇಲೆ ೨
ಮಾನಸವಾಚಕಾಯದಿ ಮಾಳ್ಪಕರ್ಮವು ದಾನಾವಾಂತಕ ನಿನ್ನಧೀನ ವಲ್ತೆ | ಏನು ಮಾಡಿದರೇನು ಪ್ರಾಣ ನಿನ್ನದು ಸ್ವಾಮಿ ಶ್ರೀನಾಥಪುರಂದರವಿಠಲ ದಾಸನ ಮೇಲೆ೧

ಸಾವೇರಿ – ಝಂಪೆ

ಪುಟ್ಟಿಸ ಬೇಡೆಲೋ ದೇವ ಎಂದಿಂದಿಗು ಇಂಥ ಪ
ಭ್ರಷ್ಟನಾಗಿ ತಿರುಗುವ ಪಾಪಿ ಜೀವನವ ಅ
ನರರ ಸ್ತುತಿಸಿ ನಾಲಿಗೆ ಬರಿದುಮಾಡಿ ಉದರ ಪೋಷಣೆಗಾಗಿ ಇವರವರೆನ್ನದೆ | ಧರೆಯೊಳು ಲಜ್ಜೆ ನಾಚಿಕೆಗಳನೀಡಾಡಿ ಪರರ ಪೀಡಿಸಿ ತಿಂಬ ಪಾಪಿ ಜೀವನವ ೧
ಎಂಟೇಗೇಣು ಶರೀರ ಒಂದುಗೇಣು ಮಾಡಿಕೊಂಡು ಪಂಟಿಸುತ್ತ ಮೆಲ್ಲ ಮೆಲ್ಲನೆ ಪೋಗಿ | ಗಂಟಲ ಸೆರಗಳುಬ್ಬಿ ಕೇಳುವ ಸಂಕಟ ವೈಕುಂಠಪತಿ ನೀನೆ ಬಲ್ಲೆ ಕಪಟ ನಾಟಕನೆ ೨
ಲೆಕ್ಕದಲ್ಲಿ ನೀ ಮೊದಲು ಮಾಡಿದ್ದಲ್ಲದೆ ಒಮ್ಮಾನಕ್ಕಿ ವೆಗ್ಗಳವಾಗಿ ಕೊಡುವರುಂಟೆ | ಕಕ್ಕುಲತೆ ಪಟ್ಟಿನಿಲ್ಲ ಕರುಣಾಳು ನಿನ್ನ ಮರೆಹೊಕ್ಕೆನು ಸಲಹೊ ಶ್ರೀಪುರಂದರವಿಠಲ ೩

ಮಾಡಬೇಕಾದ ಕರ್ತವ್ಯವನ್ನು ಮಾಡದೆ ಬಿಟ್ಟೆನೆಂದು ತಪ್ಪುಗಳ ಪಟ್ಟಿಯೊಂದನ್ನು ದಾಸರು ಕೊಡುತ್ತಾರೆ.

ನಾದನಾಮಕ್ರಿಯೆ—ಅಟ

ತಪ್ಪುಗಳೆಲ್ಲ ನೀನೊಪ್ಪಿಕೊಳ್ಳೊ ನಮ್ಮಪ್ಪ ಕಾಯಬೇಕು ತಿಮ್ಮಪ್ಪ ನೀನೆ ಪ
ಸತಿಸುತರಿಗೆ ಸಂಸಾರ ಬಲೆಗೆ ಅತಿಮತಿ ಹೀನಾಗಿ ಸಿಕ್ಕೆ ಆಸೆಗಳಿಗೆ| ಮಿತಿಗಾಣೆನಯ್ಯ ಎನ್ನ ಪಾಪಗಳಿಗೆ ಮುಂದೆ ಗತಿಯಾವುದಯ್ಯ ಶ್ರೀಪತಿ ಎನಗೆ |
ಜಪತಪದಲಿ ರೀತಿ ಭಾಷೆಯಿಲ್ಲ ಎನ್ನಪರಾಧಗಳಿಗಿನ್ನು ಎಣಿಕೆಯಿಲ್ಲ | ಚಪಲತನದಲ್ಲಿ ಕಾಲ ಕಳೆದೆನಲ್ಲ ಸ್ವಾಮಿ ಕಪಟನಾಟಕ ನೀನೆ ಬಲ್ಲೆಯೆಲ್ಲ ೪
ಗಂಗೆ ಅಗ್ರೋದಕಗಳ ತಂದು ಸ್ನಾನಂಗಳ ಮಾಡಿಸಲಿಲ್ಲ ಎಂದು | ಹೊಂಗೇದಿಗೇ

ಪುಷ್ಪವನೊಂದು ಶ್ರೀರಂಗಗರ್ಪಿಸಲಿಲ್ಲ ಕಾಯೋ ಬಂದು ೫
ಎಷ್ಟು ಹೇಳಲಿ ಅವಗುಣಗಳೆಲ್ಲ ಅವು ಅಷ್ಟುಇಷ್ಟು ಎಂದು ಎಣಿಕೆಯಿಲ್ಲ | ದೃಷ್ಟಿಯಿಂದಲಿನೋಡೋ ದೀನವತ್ಸಲ್ಲ ಸರ್ವಸೃಷ್ಟಿ ಗೊಡೆಯ ಪುರಂದರ ವಿಠಲ ೧೫

ಕಲ್ಯಾಣಿ—ಆಟ

ಏಕೆ ನಿರ್ದಯನಾಗುವೆ ರಂಗಯ್ಯ ರಂಗ ಏಕೆ ನಿರ್ದಯನಾಗುವೆ | ಪ |
ಏಕೆ ನಿರ್ದಯ ರಂಗ ಕಾರುಣ್ಯಪತಿಯೆನ್ನ ಸಾಕುವುದು ನಿನ್ನ ಭಾರ ಪಾಕಶಾಸನವಂದ್ಯ ಅ
ಅರಿತು ಪಾಡುವೆನೆಂದರೆ ರಂಗಯ್ಯ ನಿನ್ನ ಅರಿತವರಾರಯ್ಯ | ಅರಿಯಬಾರದ ನಿನ್ನ ಹೊಂದುವ ಧ್ಯಾನ್ಯಂಗಯ್ಯ ಅರಿಯದವನು ನಾನು ದಾರಿ ತೋರಿಸೊ ನೀನು ೧
ಸುಲಭನು ನೀನೆಂದು ನಿನ್ನಬಳಿಗೆ ಬಂದೆನೊ ದೊರೆಯೆ | ಸುಲಭ ನೀನಾದರೆ ಒಲಿದು ಸಲಹಬೇಕೋ ಚೆಲುವಮೂರುತಿ ಕೃಷ್ಣ ಎನ್ನ ಬಿಟ್ಟಗಲದೆ ೨
ಎಷ್ಟುದಿವಸ ಹರಿಯೆ ಈ ಮುಚ್ಚಾಟ ಕಷ್ಟಪಡಿಸಬೇಡವೋ | ಎಷ್ಟಿದ್ದರೂ ನಾಮಾಡಿದಪರಾಧ ಅಷ್ಟು ಮರೆತು ಎನ್ನ ಇಷ್ಟದೆ ಕೈಪಿಡಿಯೋ ೩
ಮಾತುಮಾತಿಗೂ ನಿನ್ನ ನಾಮಗಳನ್ನು ಹೇ ತಾತ ನುಡಿದೆನಲ್ಲದೆ | ನೀತಿಯ ಪೇಳಯ್ಯ ವಾತಜನಯ್ಯನೆ ದೂತನು ನಾನಾಯ್ಯ ದೂರಮಾಡದೆ ಕಂಡ್ಯ ೪
ನಂಬಿಕೆ ಇಲ್ಲದಂಥ ಢಿಂಭವ ಪಡೆದೆ ಡಂಭಕ ಬೊಂಬೆಯಾದೆ | ಡಂಭಕತನವ ಬಿಡಿಸೋ ನಿನ್ನಂಫ್ರಿಯ ತೋರಿಸೋ ಅಂಬುಜಾಕ್ಷ ತಂದೆ ಪುರಂದರವಿಠಲನೆ ೫

ರೇಗುಪ್ತಿ—ಆಟ

ಯಾಕೆ ಕಡೆಗಣ್ಣಿಂದ ನೋಡುವೆ ಕೃಷ್ಣ ನೀ ಕರುಣಾಕರನಲ್ಲವೆ |ಅ |
ಭಕ್ತವತ್ಸಲ ನೀನಲ್ಲವೆ ಕೃಷ್ಣ ಚಿತ್ಸುಖದಾತ ನೀನಲ್ಲವೆ | ಅತ್ಯಂತ ಅಪರಾಧಿ ನಾನಾದಡೇನಯ್ಯ ಇತ್ತಿತ್ತಬಾರೆನ್ನ ಬಾರದೆ ರಂಗ ೧
ಇಂದಿರೆಯರಸ ನೀನಲ್ಲವೆ ಬಹು ಸೌಂದರ್ಯನಿಧಿ ನೀನಲ್ಲವೆ | ಮಂದಮತಿ ನಾನಾದರೇನು ಕೃಪಾಸಿಂಧು ನೀ ರಕ್ಷಸಬಾರದೆ ರಂಗ ೨
ದೋಷಿಯು ನಾನಾದಡೇನಯ್ಯ ಸರ್ವದೋಷರಹಿತ ನೀನಲ್ಲವೆ | ಘಾಸಿಯಾತಕೆ ನಿನ್ನ ನಂಬಿದೆ ಸಲಹಯ್ಯ ಶೇಷಶಾಯಿ ಶ್ರೀ ಪುರಂದರವಿಠಲ ೩

ನೀನೆ ಹುಟ್ಟಿಸಿ ಕಾಪಾಡದೆ ಕೈ ಬಿಡುವುದು ಸರಿಯಲ್ಲವೆಂದು ದೂರುತ್ತಾರೆ.

ಕಲ್ಯಾಣಿ—ಆಟ

ಸಲ್ಲದೋ ಕೃಷ್ಣ ಸಲ್ಲದೊ ಸಿರಿವಲ್ಲಭ ಇದ ನೋಡಿ ಪಾಲಿಸಬೇಕೋ ಅ
ಬಿತ್ತಿ ಬೆಳಸಿ ತಲೆಯೆತ್ತಿದಪೈರನ್ನು ಮತ್ತೆ ತುರುವಿಂಡು ಬಿಟ್ಟು ಮೆಲ್ಲಿಸುವುದು ೧
ಸಾವಿರ ಹೊನ್ನಿಕ್ಕಿ ಸದನವ ಸಾಧಿಸಿ ಪಾವಕನುರಿಗೆ ನೀನೊಪ್ಪಿಸಿ ಕೊಡುವುದು ೨

ಕುಶಲದಿ ಬಣ್ಣಿಸಿ ಬರೆದು ಚಿತ್ತಾರವ ಮಸಿಮಣ್ಣುಮಾಡಿ ನೀ ಕೆಡಿಸುವುದು ೩

ಬಲು ಕಾಲ ಮುದ್ದಿಸಿ ಕಲಿಸಿ ಮಾತುಗಳ ಗಿಳಿಯ ಸಾಕಿ ಬಾವುಗಕೆ ಒಪ್ಪಿಸುವುದು ೪

ಕರುಣಿಸು ಗುರುಪುಪುರಂದರ ವಿಠ್ಠಲ ನಮ್ಮ | ಹಿರಿದು ಮಾಡಿ ಮತ್ತೆ ಕಿರಿದು ಮಾಡುವುದು ||

ಕಾಂಬೋಧಿ–ಝಂಪೆ

ಕಂಡು ಕಂಡು ನೀ ಎನ್ನ ಕೈ ಬಿಡುವರೇ ಕೃಷ್ಣ ಪುಂಡಾರೀಕಾಕ್ಷ ಸಿರಿ ಪುರುಷೋತ್ತಮನೇ ಹರೇ ಅ

ಬಂಧುಗಳು ಎನಗಿಲ್ಲ ಬದಿಕಿನಲಿ ಸುಖವಿಲ್ಲ | ನಿಂದೆಯಲಿ ನೊಂದನ್ನೆ ನೀರಾಜಾಕ್ಷ | ತಂದೆ ತಾಯಿಯು ನೀನೆ ಬಂಧು ಬಳಗವು ನೀನೆ ಎಂದೆಂದಿಗೂ ನಿನ್ನ ನಂಬಿದೆನೊ ಕೃಷ್ಣ ೧

ಕ್ಷಣ ಒಂದು ಯುಗವಾಗಿ ತೃಣಕಿಂತ ಕಡೆಯಾಗಿ ಎಣಿಸಲಾರದಭವದಿ ನೊಂದೆ ನಾನು | ಸನಕಾದಿ ಮುನಿವಂದ್ಯ ವನಜಸಂಭವ ಜನಕ ಫಣಿಶಾಯಿ ಪ್ರಹ್ಲಾದಗೊಲಿದ ಶ್ರೀ ಕೃಷ್ಣ ೨

ಭಕ್ತವತ್ಸಲನೆಂಬೊ ಬಿರುದು ಪೊತ್ತ ಮೇಲೆ ಭಕ್ತರಾದೀನನಾಗಿರ ಬೇಡವೇ | ಮುಕ್ತಿದಾಯಕ ನೀನು ಹೊನ್ನುರು ಪುರವಾಸ ಶಕ್ತ ಪುರಂದರ ವಿಠಲ ಶ್ರೀ ಕೃಷ್ಣ ೩

ಕನಕದಾಸರ ಪ್ರಾರ್ಥನೆಯಲ್ಲೂ ದೈನ್ಯ ತುಂಬಿದೆ.

ಕೇದಾರಗೌಳ–ಆಟ

ನೀನುಪೇಕ್ಷೆಯ ಮಾಡೆ ಬೇರೆ ಗತಿಯಾರೆನಗೆ ನಿಗಮಗೋಚರ ಮುಕುಂದ |ಪ|

ಗಾನ ರಸಲೋಲ ಆಗಮಶೀಲ ಭಕ್ತ ಪರಿಪಾಲ ಗೋಪಾಲ ಬಾಲ |ಅ |

ಜಪತಪಾನುಷ್ಠಾನ ಜಪಿತನೆಂದೆನಿಸುವೆನೆ ಜಾಣತನವೆನ್ನೊಳಿಲ್ಲ | ಅಪರಿಮಿತ ಕರ್ಮವನು ಅನುಸರಿಸಿ ನಡೆಯುವೆನೆ ನಿಪುಣತ್ವ ಮೊದಲೆ ಇಲ್ಲ | ಗುಪಿತದಿಂ ದಾನ ಧರ್ಮವನು ನಾ ಮಾಡುವೆನೆ ಅಪರಿಮಿತ ಧನವು ಇಲ್ಲ | ರಪಣ ನಿಪುಣ ತ್ವವೊಂದಿಲ್ಲದಾ ಕೃಪಣನಿಗೆ ಸುಪವಿತ್ರ ನೀನೆ ಅಲ್ಲದಿಲ್ಲ ೧

ಆನೆ ಮೊಸಳೆಗೆ ಸಿಲುಕಿ ಅರೆ ಬಾಯಿ ಬಿಡುತಿರಲು ಮೌನದಿಂ ಬಂದು ಕಾಯ್ದೆ| ಏ ನಾರಣ ಎಂದಜಮಿಳಗೆ ಮುಕ್ತಿಯನು ನೀನೊಲಿದು ಕೃಪೆ ಮಾಡಿದೆ | ಹಾನಿಯಲ್ಲದ ಪದವಿನೀನಿತ್ತು ಧ್ರುವಗೆ ಕಡು ದೀನತ್ವವನು ಬಿಡಿಸಿದೆ | ದಾನವಾಂತಕ ಸಕಲ ದಿವಿಜ ಮುನಿವಂದ್ಯ ಅಭಿಮಾನಿ ಎನ್ನನು ಸಲಹದೇ ಬರಿದೇ | ೨

ಈಷಣತ್ರಯದ ಬಯಲಾಸೆಯಿಲಿ ಭ್ರಮೆಗೊಂಡು ಬೇಸರದಿ ಮನದಿ ನೊಂದು | ಹೇಸಿಗೆಯ ಸಂಸಾರ ಸಾಗರದಿ ಮುಳುಗಿ ಬಹುಘಾಸಿ

ಪಡಲಾರೆನಿಂದು | ಮೋಸವಿಲ್ಲದೆ ಯಮನ ಪಾಶವನುಪರಿವುದ್ಕೆ ಕೌಶಲವ ತೋರಿ ಇಂದು | ದಾಸನೆಂದೆನಿಸಿ ಡಂಗುರವ ಹೊಯಿಸಿದೆಯೋ ನೆಲೆಯಾದಿ ಕೇಶವನೆ ಹರಿಯೇ—ಧೊರೆಯೇ ೩

ಮುಖಾರಿ

ಮುಂದೆ ದಯವಿರಲಿ ಶ್ರೀಹರಿಯೆ ನೊಂದೆ ನಾನು |

ನೊಂದೆ ನಾನು ಸತ್ತು ಹುಟ್ಟುವ ಕೋಟಲೆಗಳಿಂದ | ನೊಂದೆ ನಾನು ಅರಿಷಡ್ವರ್ಗ ದಾಟಗಳಿಂದ | ನೊಂದೆ ನಾನು ಪಂಚೇಂದ್ರಿಯಂಗಳ ಬಯಕೆಯಿಂದ ನೊಂದೆ ನಾನು ಶ್ರೀಹರಿಯೆನ್ನದೆ ಅ

ತಂದೆತಾಯಿಗಳಾರು ಅಂದಿದ್ದ ಊರೇನು ಮಂದಿರವದೆಲ್ಲಿ ಆ ತಂದ ಸತಿಸುತರಾರು | ಬಂದಂಥ ಸುಖದುಃಖವೇನು ಹಿಂದೆನ್ನ ಕುಲಗೋತ್ರ ನಾಮಂಗಗಳೆನಗೇನು | ಅಂದು ಕೊಂದವರಾದಾರು ಇಂದು ಕಾಯ್ವರದಾರು ಕಂದ ಬಾರೆಂದು ಲಾಲಲಿಸಿದವರ ನಾ ಕಾಣೆ ತಂದೆ ನೆಲೆಯಾದಿ ಕೇಶವನೆ ನಿನ್ನ ಪಾದ ದ್ವಂದ್ವವನು ಬಿಡೆನೊ ೫

ವಿಜಯದಾಸರ ಮಾತುಗಳು ಮನ ನಾಟುವುವು. ಸಂಸಾರದ ದುಃಖವನ್ನು ಅವರು ತೆರೆತೆರೆಯಾಗಿ ಬಿಚ್ಚಿ ಹೇಳುವರು.

ಅರಭಿ—ಆಟ

ಸಾಕು ಇಹಕೆನ್ನ ನೂಕದಿರು ತಂದೆ | ವಾಕು ಕೇಳು ಪರಾಕು ಮಾಡದೆ | ಸಾಕು ದಯದಿಂದನೇಕ ಮಹಿಮನೆ | ಏಕಮೇವಾ ದ್ವಿತೀಯ |ಪ|

ಉದಯರಾಗ

ಜನಿಸಲಾರೆನು ಜಗದೊಳಗೆ ಹರಿಯೆ |

ಕನಸಿನೊಳು ನೆನೆಯೆ ಕಂಪನವಾಗುತಿದೆ ಮನಕೆ ಅ

ಹೆಂಡ್ರು ಮಕ್ಕಳಿಗಾಗಿ ಎನ್ನ ಹಿತವನೆ ಮರೆದು | ಕಂಡ ಕಂಡವರ ಕಾಡಿ ಬೇಡಿ | ಉಂಡುಟ್ಟು ಸುಖಪಟ್ಟು ಪಾರತ್ರಯವ ಮರೆದು ಕೊಂಡೆಯಲಿ ನಿಪುಣನಾಗಿ ತೂಗಿ | ಮಂಡೆಯನು ಬಲಿತ ಪಶುವಿನಂತೆ ಮದವೇರಿ ಚಂಡ ವೃತ್ತಿಯಲಿ ನಡೆದುನುಡಿದು | ಹಿಂಡು ಮಾತೇನು ಈಜನರೇ ಬಂದೆನ್ನ ಲಂಡುತನ ಪೋಗದಕಟ ಉಂಟೆ ವಿಕಟ ೭

ಧ್ರುವತಾಳ

ನೀಕಾಯದಿರೆ ಎನ್ನ ಕಾಯುವರಾರೋ ಕೃಷ್ಣ | ಬೇಕೋ ನೀ ಕಾಯಬೇಕೋ ಕಾಮಧೇನು | ವಾಕು ಲಾಲಿಸೋ ಮಮಕಾರ ತೊಲಗಿಸೋ | ನೂಕೋ ಭವಾಂಬುನಿಧಿ ಕರುಣಾಂಬುಧಿ | ಏಕಯ್ಯ ಯೀಕಯ್ಯ ನೀಕಯ್ಯ ಬಿಡುವುದು | ರಾಕಾಬ್ಜವದನ

ಪಿನಾಕಿ ವಂದಿತನೆ | ಏಕಾತ್ಮ ವಿಜಯ ವಿಗ್ರಹನೆ ವಲಿದು | ಏಕಾಯೋ ಏಕಾಯೋ ನಿನ್ನ ಸೇವಕನೆಂದು | ನಾಕರವ ಮುಗಿದು ಬೇಡಿಕೊಂಬೆನೊ ದೇವ | ಕೋಕಿಲಾವಳಿಯೊಳು ಕಾಕಯಿದ್ದಂತೆ ವಿ | ವೇಕ ರಹಿತನೊ ನಾನು ಏಕಾತ್ಮ ವಿಜಯ ವಿಠಲ ನಿ | ಜಾಕಾರ ಪುರುಷನೆ ಸೋಕಲೊ ಪರುಶ

ಆರಿಗಾಲ್ಪರಿಯಿಲಿ ಆರನಾಶ್ರೈಸಲಿ | ಆರಿಗೆ ಹಲ್ಗಿಂಜಿ ಆರಿಗೆ ಅಳುಕಲಿ | ಆರಿಗಾಳಾಗಿ ಸೇರಿ ಆರಿಗೆ ದುಡಿಯಲಿ ಆರನಪ್ಪಾ ಎಂದು ಹಾರೈಸಲೋ | ಆರನರ್ಚಿಸಿಲಿ ಆರಿಷ್ಟನಾಗಲಿ | ಆರಿಗಾರೋ ಸಿರಿ ವಿಜಯ ವಿಠಲ ರೇಯ | ಆರನಾದರು ಕಾಯಲಾರೆನೋ ಆರೇನೋ | ಹಾಗ ಕಾಸು ವೀಸ ಹಂಚಿಕೊಡು ಎಂದು | ಭಾಗದೇಯನಾಗಿ ನಾ ಬೇಡಲಿಲ್ಲ | ಕೂಗಿ ಬೆಟ್ಟಕ್ಕೆ ಪಿರಿದಾಗಿ ಸೌಭಾಗ್ಯ ಬೇಡಿ | ಪೋಗಗೊಡದೆ ನಿನ್ನ ತಡೆಯಲಿಲ್ಲ | ಬಾಗಿ ಬೇಡುವ ದೃಢ ಉಳ್ಳ ಭಕ್ತರ ಮನೆಯ | ಬಾಗಿಲು ಕಾಯುವಂಥ ಸೇವೆಯನ್ನು | ಯೋಗಿ ಹೃದಯ ಸಂಯೋಗ ವಿಜಯ ವಿಠಲ | ನೀಗರುಸಿವಿದರೆ ರೇಗದೆ ಒಡಲೊಳು ||

ಅಟತಾಳ

ಧೂಪದೀಪದಿಂದ ನಿನ್ನ ಬೇಡಿಕೊಂಡವನಲ್ಲ | ಅಪ್ಪ ಅಪ್ಪ ಎಂದು ನಿನ್ನ ಒಲಿಸಿಕೊಂಡವನಲ್ಲ | ಪಾಪವೆಂಬ ಗರಳದಲ್ಲಿ ಹಪತಾಪ ಪಡುತೇನೆ | ಶ್ರೀಪತಿಯೇ ನಿನ್ನ ನಾಮ ಲೇಪಿಸೆನ್ನ ನಾಲಿಗೆಗೆ | ನೀ ಪರಮ ಪ್ರೀತಿಯಿಂದ ಅನುತಾಪ ವನಿತ್ತು |ತಾಪವ ಕಳೆದು ಇನ ಸ್ವರೂಪ ಉದ್ಧಾರ ಮಾಡೋ | ಗೋಪತೇಯ ವಿಜಯ ವಿಠಲರೇಯ | ಹೇ ಪಾಲಿಸೋ ಪಾಲಿಸೋ ಎನ್ನ ಬಿಡದೆ ||

ಧ್ರುವತಾಳ

ಸುಖದ ದೈವವೆಂದು ಸತತದಿ ಸುಖಿಸಿದೆ |
ಮುಖವ ತಿರುಹುವರೇನೋ ಮುರವಿರೋಧಿಯೋ |

ಮಠ್ಯತಾಳ

ಜನನಿ ತನುಜಗೆ ಪಾಲು ಕುಡಿಸುವಾಗಲಿ | ಒಂದು ನೊಣ ಬಿದ್ದರೆ ಉದಾಸೀನ ಮಾಡುವಳೆ | ಜನುಮ ಜನುಮದಲಿ ಜನನಿಯಾಗಿಹೆ ಸಾ | ಧನ ಪುಣ್ಯವೆಂಬ ಪಾಲಿನ ಮಧ್ಯದೊಳು ಕಪ್ಪು | ಜಿಣುಗಿ ಬಿದ್ದಿರಲು ಉದಾಸೀನ ಮಾಡುವರೆ | ಸನಕಸನಂದನ ವಂದ್ಯ ವಿಜಯ ವಿಠ್ಠಲರೇಯ ಕ್ಷಣ ಪ್ರತಿ ಕ್ಷಣಕೆ ಎನ್ನ ಪಾಲಿಸುವ ದೈವ

ತ್ರಿಪುಟ ತಾಳ

ಉಪವಾಸದವನಿಗೆ ಊರು ತುಂಬಿದರೇನು......... | ತಪಸಿಗಳೊಡೆಯ ಶ್ರೀ ವಿಜಯ ವಿಠಲರೇಯನ | ಶ್ರೀಪಾದ ಕಾಣದವಗೆ ಅಪವರ್ಗದ ಗೊಡವೇನು |

ಅಟ್ಟತಾಳ

ಇಷ್ಟು ದಿನ ನಿನ್ನ ಹಾರೈಸಿಕೊಂಡವನ
ಭ್ರಷ್ಟನ ಮಾಡಿ ನೋಡುವರೇನೋ ಹರಿಯೆ ||

ಆದಿತಾಳ

ಹೊನ್ನು ಹಣವ ಕೊಡಲಿಬೇಡ ಮನ್ನಣೆಯಮಾಡಿಸಲೀಬೇಡ | ಎನ್ನದೆಂಬೊ ಮಾತು ಎಂದಿಂದಿಗೂ ಬೇಡ | ನಿನ್ನವನು ನಿನ್ನವನು ನಿನ್ನವನೆಂದೆನಿಸಿ | ಮನ್ನಿಸಿ ಪಾಲಿಸಯ್ಯ ವಿಜಯ ವಿಠಲರೇಯ |

ಕಾಪಿ—ಆದಿ

ಏಕೆ ಮಮತೆ ಕೊಟ್ಟು ದಣಿಸುವಿ ರಂಗ ನೀ ಕರುಣದಿ ಎನ್ನ ಪಾಲಿಸೋ ಕೃಷ್ಣ |
ನಿನ್ನ ಭಜಿಸಲು ಅನ್ಯ ವಿಷಯಂಗಳಿಗೆನ್ನನೊಪ್ಪಿಸುವುದು ನೀತವೇ |
ಮನ್ನಿಸಿ ದಯದಿ ನೀನೆನ್ನ ಪಾಲಿಸಿದರೆ ನಿನ್ನ ನೇಮಕೆ ಪ್ರತಿಕೂಲವೇ ರಂಗ ೧
ಎಂದಿಗೆ ಇನ್ನು ನಿನ್ನ ಚಿತ್ತಕ್ಕೆ ಬರುವುದೋ ಅಂದಿಗೆ ಉದ್ಧರಿಸೋ ಕರುಣಿಯೇ | ಸುಂದರ ವಿಗ್ರಹ ಗೋಪಾಲ ವಿಠಲ ಸುಖಸಾಂದ್ರ ಭವ ಮೋಚಕ ನಮೋ ನಮೋ ರಂಗ ೨

ರೇಗುಪ್ತಿ—ಝಂಪೆ

ಶ್ರೀಮಧ್ವಚಿತ್ತ ಮಂದಿರನೆ ನಿನ್ನಯ ಚರಣತಾಮರಸವ ನೆರೆ ನಂಬಿದೆ | ಕಾಮಕ್ರೋಧಗಳನ್ನು ಕಡಿದು ನಿನ್ನಯ ದಿವ್ಯನಾಮಾಮೃತವನುಣಿಸೋ ಸ್ವಾಮಿ ಅ
ನಾ ಮಾಡಿದಪರಾಧಗಳನೆಣಿಸಿ ಬರೆವುದಕೆ ಭೂಮಂಡಲವೆ ನೆರೆ ಸಾಲದೋ |
ಸೀಮೆಯೊಳಗುಳ್ಳ ದುರ್ಮತಿಯೆಲ್ಲ ಕೊಡಲು ಈ ಮತಿಗೆ ಅದು ಪೋಲುದೋ |
ಹೋಮ ಜಪತಪವು ಇನ್ನೆಷ್ಟು ಮಾಡಲು ಪಾಪಸ್ತೋಮ ವೆಂದಿಗೂ ವಾಲದೋ |
ಸಾಮಜವರದ ಮೋಹನ್ನ ವಿಠ್ಠಲ ನಿನ್ನ ನಾಮವೊಂದಲ್ಲದೆ ಪ್ರಾಯಶ್ಚಿತ್ತವ ಕಾಣೆ ೫

ದರ್ಬಾರ್—ಅಟ

ರಕ್ಷಿಸೋ ಶ್ರೀಶಾ | ಶ್ರೀನಿವಾಸಾ | ರಕ್ಷಿಸೋ ಶ್ರೀಶಾ ಪ
ಕಿಟ್ಟಗಟ್ಟಿದ ಕಬ್ಬಿಣದಂತೆ ಕೆಟ್ಟ ಕಿಲ್ಬಿಷದ ರೂಪದಿ ಬಿದ್ದು |
ಧಿಟ್ಟನಿನ್ನಯ ಗುಟ್ಟು ದಿಳಿಯದೆ ಪೊಟ್ಟೆಗೋಸುಗ ಕೆಟ್ಟ ಕುಜನರ |
ಘಾಟ್ಟನಾಕಾಲ್ಗಟ್ಟಿ ಬಹುಶ್ರಮಪಟ್ಟು ಭವದಿ ಕಂಗೆಟ್ಟು ಪ್ರತಿದಿನ ೧
ಶ್ರೀ ಕಮಲೇಶಾ ಹೃತ್ಪದ್ಮಾದ್ಯನೇಕ ಪ್ರಕಾಶಾ ಬೇಗನೆ ಬಂದು |
ಯಾಕೆರಡು ಎನ್ನ ವಾಕುಲಾಲಿಸಿ ಜೋಕೆಯಿಂದಲಿ ನೀ ಕರಪಿಡಿ |
ದಾ ಕುಚೇಲನ ಸಾಕಿದಪರಿ ಶ್ರೀಕರನೆ ಜಗನ್ನಾಥ ವಿಠಲ ೨

ಈ ಹಿಂದಿನ ಪದಗಳಲ್ಲಿ ದಾಸರುಗಳು ದೀನರಾಗಿ ಭಗವಂತನನ್ನು ಪ್ರಾರ್ಥಿಸಿದ್ದಾರೆ. ಈಗ ಹರಿಯೇ ಸರ್ವಕರ್ತ, ಸರ್ವತ್ರವ್ಯಾಪ್ತನಾಗಿದ್ದು ಎಲ್ಲವನ್ನು ಅವನೇ ಮಾಡಿಸುತ್ತಾನೆ. ಇನ್ನು ಭಕ್ತನಾದರೋ ಸಂಸಾರದಲ್ಲಿ ಸಿಕ್ಕು ತೊಳಲುತ್ತಿದ್ದಾನೆ. ಆದ್ದರಿಂದ ಸಂಸಾರದಿಂದ ಪಾರು ಮಾಡಬೇಕಾದುದು ಅವನಿಗೆ ಸೇರಿದ ಹೊಣೆಯೆಂದು ಈ ಪದಗಳಲ್ಲಿ ಕೇಳುತ್ತಾರೆ.

ಪೂರ್ವಿ—ಅದಿ

ನಾನೇ ಸಜ್ಜನನಾದರೆ ರಂಗ ಹೀನ ವಿಷಯಗಳಿಗೆರಗುವೆನೇನಯ್ಯ ||

ಚಿತ್ತವ ಪುರುಷೋತ್ತಮನಲ್ಲಿಡದೆ ಉತ್ತಮನಾದವರೊಡನಾಡದೆ | ತತ್ವ ವಿಚಾರವೊಂದರಿಯದೆ ನಾನುನ್ಮತ್ತರ ಸಂಗವ ಮಾಡುವೆನೇನಯ್ಯ ೧

ಹೇಯ ಶರೀರವೆನ್ನದೆ ಪೋಷಿವೆನೆಂದುಪಾಯವಮಾಡಿ ನಾ ಬಳಲುವೇನೆ | ರಾಯರಾಯರಮಾಡಿ ಶರಣರ ಸಲಹುವ ರಂಗವಿಠಲ ನಿನ್ನ ಮರೆವೆನೇನಯ್ಯ ೩

ಅಪರಾಧ ಅನಂತವಾಗಿದೆ. ಆದ್ದರಿಂದ ಭಗವಂತನನ್ನು ಮೊರೆಯಿಡಲು ಬಾಯಿಲ್ಲವೆಂದು ಪುರಂದರವಿಠಲದಾಸರು ಮಿಡುಕುತ್ತಾರೆ.

ಕಾಂಬೋಧಿ—ಝಂಪೆ

ಬಿನ್ನಹಕೆ ಬಾಯಿಲ್ಲವಯ್ಯ ಅನಂತ ಅಪರಾಧ ಎನ್ನಲ್ಲಿ ಇರಲಾಗಿ ಪ

ಶಿಸುಮೋಹ ಸತಿಮೋಹ ಜನನಿಜನಕರಮೋಹ ರಸಿಕಮಿತ್ರರ ಮೋಹ ರಾಜಮೋಹ | ಪಶುಮೋಹ ಭೂಮೋಹ ಬಂಧುವರ್ಗದ ಮೋಹ ಅಸುರಾರಿ ನಿನ್ನ ಮರೆತೆನೊ ಕಾಯೊ ಹರಿಯೆ ೧

ಅನ್ನಮದ ಅರ್ಥಮದ ಅಖಿಲ ವೈಭವದ ಮದ ಮುನ್ನಪ್ರಾಯದ ಮದವು ರೂಪಮದವೋ | ತನ್ನ ಸತ್ವದ ಮದವು ಧಾತ್ರಿವಶವಾದ ಮದ ಇನ್ನು ತನಗೆದುರಿದಲ್ಲವೆಂತೆಂಬ ಮದದಿಂದ ೨

ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ ಅಷ್ಟುದೊರಕಿದರು ಮತ್ತಿಷ್ಟಾಶೆ | ಕಷ್ಟ ಬೇಡೆಂಬಾಸೆ ಕಡುಸುಖವಕಾಂಬಾಸೆ ನಷ್ಟ ಜೀವನದಾಸೆ ಪುರಂದರವಿಠಲ ೨

ಅಪರಾಧವೇನೋ ದೊಡ್ಡದು. ಆದರೆ ಭಗವಂತನಲ್ಲದೆ ಇನ್ನಾರು ತಾರಿಸಬೇಕೆಂಬುದು ವ್ಯಾಸರಾಯರ ವಾದ.

ಯದುಕುಲ ಕಾಂಬೋಧಿ—ಆಟ

ಅಪರಾಧವೆನ್ನದೈಯ ಹೇ ಜೀಯ

ಅಪರಾಧವೆನ್ನದೈಯ ಅಪರಿಮಿತನೇ ಸರಿ

ಕೃಪೆ ಮಾಡೋದಿಲ್ಲವೆ ಕೃಪಣವತ್ಸಲ ಕೃಷ್ಣ ಅ

ಹುಡುಗರು ಮಾಡುವತಪ್ಪಿಗೆ ಜನನಿ ತಾ ಬಿಡುವಳೆ ಆದರಿಂದ ಕೃಪೆ ಮಾಡದಲೆ | ನಡೆವ ಕುದುರೆ ತಾನು ಎಡವಿದರೆ ಸ್ವಾಮಿ ಕಡೆಗೆ ಕಟ್ಟುವನೇನೋ ತಿರುಗಿನೋಡದಲೆ ೧

ಮಾಡುಎಂದದ್ದನ್ನು ಬಿಟ್ಟರೆ ಅಪರಾಧ ಬೇಡವೆಂದದ್ದನ್ನು ಮಾಡುವುದಪರಾಧ | ಈಡಿಲ್ಲ ನಿನ್ನದಯ ಬೇಡುವೇನೊ ನಿನಗೆ ಮಾಡುವೆ ಬಿನ್ನಹ ನಾಚಿಕೆ ಇಲ್ಲದಲೆ ೨

ಬೇಡಿಕೊಂಬೆನೊ ವಾಸುದೇವ ಶ್ರೀಹರಿಯೆ ನೋಡದಿದ್ದರೆ ಭಕುತ ಜನರು ತಮ್ಮ ಬೀಡ ಸೇರಿಸೆನ್ನ ಕೇಡೇನೊ ಇದಕೆಂತ ನೋಡೊ ನೀದಯದಿಂದ ಭಕ್ತವತ್ಸಲ ಕೃಷ್ಣ ೩

ಅಪರಾಧವೇಕೆ ಅಷ್ಟು ಗುರುತರವಾದುದೆಂದು ಹೇಳುತ್ತಾರೆ.

ವರಾಳಿ

ನಿನ್ನ ಧ್ಯಾನವ ಮಾಡುತ್ತ ಮಾಡುತ್ತ ಎನ್ನಮನ ಅನ್ಯಕ್ಕೆರಗುತಿದೆ |ಪ |

ಪತಿ ಅಂಗಸಂಗದೊಳಿರುತ್ತಿದ್ದು ಇದ್ದು ಸತಿ ಉಪಪತಿಯನ್ನು ಬಯಸುವಂತೆ | ಶ್ರುತಿ ತತ್ತ್ವಶಾಸ್ತ್ರಗಳರಿತಿದ್ದು ಇದ್ದು ದುರ್ಮತಿ ದುಷ್ಟ ಚರಿತೆಗೆ ಎಳೆಯುತಿದೆಎನ್ನ ೧

ಪರಮ ಪಾವನ ಗುಣಪೂರ್ಣನೆ ನಿನ್ನ ಚರಣಯುಗಳವನ್ನು ಧ್ಯಾನಿಸುತ ನೆರೆ ಹೊರೆಯಲಿ ಮನಹೋಗದಂತೆ ಕರುಣಿಸಿ ನಿಲ್ಲಿಸೋ ಸಿರಿ ಕೃಷ್ಣರಾಯ ೩

ಗೋಪಾಲದಾಸರ ವಾದಸರಣಿಯೇ ಪ್ರತ್ಯೇಕ. ಅಪರಾಧ ನನ್ನದಲ್ಲವೇ ಅಲ್ಲ ಎನ್ನುತ್ತಾರೆ ಅವರು.

ಯದುಕುಲ ಕಾಂಬೋಧಿ–ಆದಿ

ನಾನೇ ಭ್ರಮಿಸಿದೆನೋ ವಿಷಯದಿ ಮಮತೆ ನೀನೆ ಸೃಜಿಸಿದೆಯೋ।

ಅನಾದಿ ನಿಧಾನ ನೀನೆ ತಿಳಿದು ನೋಡೋ ಅ

ಕೇವಲಾನಂದ ಚಿನ್ಮಯ ಜೀವ ನೈಜ ಸ್ವಭಾವ ತ್ಯಜಿಸಿ ಅನ್ಯ | ಭಾವವಾಶ್ರೈಸಲು ಶ್ರೀವರ ನಿನ್ನ ಬಂಧಕಶಕುತಿ |ಅವರಿಸೆನ್ನ ಕಾವಳಗೊಳಿಸಿ ಈ ವಿಧ ಬನ್ನ ಬಡಿಸುತ್ತಿದೆ | ಕೈವಲ್ಯದರಸನೆ ನೀ। ವಿಚಾರಿಸಿ ಕಾಯೋ

ಎಷ್ಟೋ ನಿನ್ನ ಪ್ರಾರ್ಥನೆ ಮಾಡುವುದು ಎಂದು ವಿಜಯದಾಸರು ಸಿಟ್ಟಾಗುತ್ತಾರೆ.

ದೂರದಲ್ಲಿದ್ದೀಯೇನೋ ಮೊರೆಯಿಟ್ಟು ಬೇಡಿದರೆ | ಆರು ನೀನೆಂದು ಕೇಳದಿಪ್ಪುದು ಸರಿಯೇ | ದಾರಿದ್ರನ ಸೊಲ್ಲು ವ್ಯರ್ಥವಾಗಿದೆ ನೋಡು | ತಿರುಗಿ ಕೂಗಿದ್ದರಿಂದಲೇನಾಹುದೋ | ಧೀರನೀ ಕುರುಡನೋ ಬಧಿರನೋ | ಕೀರುತಿ ಒಲ್ಲೆನೆಂಬೋ ಮೌನವೋ ಏನಿದೊ | ಧಾರುಣಿಯೊಳಿದ್ದವರ ನೋಡೆ ನಾನೊಬ್ಬನೇ | ಭಾರವೇನೋ ತಂದೆ ಅಕಟಕಟ | ಸಾರಿದವರ ಪೊರೆವ ವಿಜಯ ವಿಠಲ ನಿನ್ನ | ಕಾರುಣ್ಯತನಕೆ ನಾನೊಬ್ಬನೇ ಎರವೆ |

ಗೋಪಾಲದಾಸರು ನನಗೇನು ರೋಗ ಬಂದಿದೆ ನೋಡೆಂದು ಭವರೋಗ

ವೈದ್ಯನನ್ನು ಕೇಳುತ್ತಾರೆ.

ಕಾಂಭೋಧಿ–ಝಂಪೆ

ಆವರೋಗವೋ ಎನಗೆ ಧನ್ವಂತ್ರಿ

ಸಾವಧಾನದಿ ಕೈಯ ಪಿಡಿದು ನೀನೋಡಯ್ಯ ಅ

ಹರಿ ಮೂರ್ತಿಗಳು ಕಾಣಿಸವು ಎನ್ನ ಕಂಗಳಿಗೆ | ಹರಿಯ ಕೀರ್ತಿಯು ಕೇಳಿಸದೆನ್ನ ಕಿವಿಗೆ | ಹರಿ ಮಂತ್ರ ಸ್ತೋತ್ರಬಾರದು ಎನ್ನ ನಾಲಿಗೆಗೆ | ಹರಿ ಪ್ರಸಾದವು ಎನಗೆ ಸರಿಯಾಗದಯ್ಯ ೧

ಅನಾಥ ಬಂಧು ಗೋಪಾಲವಿಠಲರೇಯ ಎನ್ನ ಭಾಗದ ವೈದ್ಯನೀನೆಯಾದಿ | ಅನಾದಿಕಾಲದ ಭವರೋಗ ಕಳೆಯಯ್ಯ ನಾನೆಂದಿಗೂ ಮರೆಯೆನೀಮಾಡಿದುಪಕಾರ ೩

ಗೋಪಾಲದಾಸರ ಈ ಸುಳಾದಿಯು ಅತ್ಯಂತ ಭಾವಗರ್ಭಿತವಾಗಿದೆ

ಧ್ರುವತಾಳ

ಒಂಧಪರಾಧವೆಂದು ವೊಂದಿಸಲೇನಯ್ಯ | ಒಂದರ ಚಿಂತೆಯೆಂದು ವೊಂದಿಸಲೇನಯ್ಯ | ಒಂದರ ಭಯವೆಂದು ಬೇಡಿಕೊಳ್ಳಲೇನಯ್ಯ | ಒಂದರ ಹರುಷವೆಂದು ಒಪ್ಪಿಕೊಳ್ಳಲೇನಯ್ಯ | ಒಂದರ ಕ್ಲೇಶವೆಂದು ಒದಗಿ ನುಂಗಲೇನಯ್ಯ | ಒಂದಲ್ಲ ಎರಡಲ್ಲ ವಿವರಿಸಿ ಹೇಳಲಿನ್ನೂ | ಒಂದಪರಾಧವೆ ಇವಕ್ಕೆ ಕಾರಣ ಮೂಲ | ಇಂದಿರೆ ಅರಸ ಗೋಪಾಲ ವಿಠಲ ಕೃಷ್ಣ | ತಂದೆ ನಿಮ್ಮ ವಿಸ್ಮೃತಿಯೆನಗೆ ಮುಖ್ಯಪರಾಧ ||

ಮಠ್ಯತಾಳ

ಜನನದ ಚಿಂತೆ ಜನಿಸುವಾಗಲಿ ಭಯವು | ಜನನಿಸಿದರೆ ಹರುಷದಿ ದಿನದಿನಕೆ ಆಸೆ | ಘನ ಆಸೆಯಿಂದ ಮೋಹ ಮೋಹದಿಂದ ಕ್ಲೇಶ | ಆನಂತರಪಾಯಗಳು ಒಂದೊಂದು ಆನಂತ | ಇನಿತಿನಿತು ಆವಾವ ಘನಕ್ಲೇಶಗಳಿಂದ | ದಣಿದು ದಣಿದು ದಣಿದು ಧೈರ್ಯಭ್ರಷ್ಟನಾಗಿ | ಮುಣುಗಿ ತೇಲುವೆನಯ್ಯ ಮುಂದುಗಾಣದೆ ಇನ್ನು | ಘನದಯವಾರಿಧೇ ಗೋಪಾಲವಿಠಲ ||

ರೂಪಕತಾಳ

ಇಂದಿನ ಸಾಧನೆ ಏನು ಆದದ್ದು ಎಲ್ಲ | ಇಂದಿಗೆ ಇದರ ವಿಚಾರ ತಿಳಿಯಿತೋ | ಮುಂದಿನಗತಿಗೆ ಮುಕುಂದ ಪೊಂದುವ | ಚೆಂದವನುರುಹಯ್ಯ ಸುಂದರಾಂಗ ದೇವ | ನಿಂದಲ್ಲಿ ಕುಳಿತಲ್ಲಿ ಬಂದಲ್ಲಿ ಪೋದಲ್ಲಿ | ತಂದು ನೀಡು ನೀನು ಚೆಂದುಳ್ಳಸ್ಮೃತಿಯನು | ನಂದನ ಕಂದ ಗೋಪಾಲ ವಿಠಲ ಆಪ್ತ ಬಂಧು | ಕರುಣಾಸಿಂಧು ಗತಿ ನೀನೆ ಹಿಂದೆ ಮುಂದೆ |

ಕೊನೆಗೆ ಅಸಹಾಯರಾಗಿ ಹೀಗೆ ಹೇಳುತ್ತಾರೆ.

ಧ್ರುವತಾಳ

ನಿನ್ನ ಚಿತ್ತ ಎನ್ನ ಭಾಗ್ಯ ಇನ್ನು ಬೇರೆನಗೆ ಇಲ್ಲ | ಮನ್ನಣೆ ಅಮನ್ನಣೆ ನಿನ್ನದೊ ಸರ್ವೇಶ | ಬೆನ್ನುಕೊಟ್ಟನೊ ನಿನಗೆ ಎನ್ನ ಏನನ್ನೂ ಮಾಡೋ | ಕಣ್ಣಿಲಿ ಕಂಡಷ್ಟು ಏನನ್ನು ಕೇಳೋಣ | ನಿನ್ನ ಬಣ್ಣಿಸಿ ನಾನು ಘನ ಬೇಡುವನಲ್ಲ | ಎನ್ನದೆಂಬಹಂಕಾರವನು ಬಿಡಿಸೋ ದೇವ | ಎನ್ನ ಸಂಕಲ್ಪವೆಲ್ಲ ನಿನ್ನ ಆಧೀನವಯ್ಯ | ನಿನ್ನ ಸಂಕಲ್ಪಕಿನ್ನು ಬಿನ್ನ ಭಿನ್ನಗಳಿಲ್ಲ | ನಿನ್ನಿಚ್ಛೆ ನೀ ಪ್ರೇರಕ ನಿನ್ನದೋ ಎನ್ನಭಾರ | ಇನ್ನ ಮುಂದೆಂದು ಇನ್ನಿದೆ ಸಿದ್ಧವಯ್ಯ | ಇನ್ನೊಂದು ನಾನರಿಯೆ ಎನ್ನೊಡೆಯನೆ ಕೇಳೋ | ಮನ್ನವಚಕಾಯದಿ ಇನ್ನು ನಿನ್ನೇ ಹಾರೈಸಿ | ಬಿನ್ನಹ ಮಾಡಿದನೋ ನಿನ್ನ ನಿಲಿಸಿಕೊಂಡೆ | ಚಿನ್ಮಯ ಮೂರುತಿ ಗೋಪಾಲವಿಠ್ಠಲ | ನಿನ್ನ ಬೇಡುವೆನಲ್ಲದೆ ಅನ್ಯರಿಗಾಲ್ಪರಿಯೇ |

ರಾಘವೇಂದ್ರ ಸ್ವಾಮಿಗಳ ಪದ ಉಪಲಬ್ಧವಿರುವುದು ಒಂದೇ. ಇದು ಭಗವಂತನಲ್ಲಿ ಆರ್ತಭಾವದಿಂದ ಪ್ರಾರ್ಥನೆ ಮಾಡುವುದಾಗಿದ್ದು, ಅತ್ಯಂತ ಭಾವಪೂರಿತವಾಗಿದೆ.

ಬೈರವಿ–ತ್ರಿಪುಟತಾಳ

ಇಂದು ಎನಗೆ ಗೋವಿಂದ ನಿನ್ನಯ |
ಪಾದರವಿಂದವ ತೋರೋ ಮುಕುಂದನೆ ಪ
ಸುಂದರವದನನೆ ನಂದಗೋಪಿಯಕಂದ |
ಮಂದರೋದ್ಧಾರ ಆನಂದ ಇಂದಿರೆರಮಣ ಅ

ನೊಂದೆನಯ್ಯ ಭವಬಂಧನದೊಳು ಸಿಲುಕಿ | ಮುಂದೆ ದಾರಿ ಕಾಣದೆ ಕುಂದಿದೆ ಜಗದೊಳು | ಕಂದಾನೆಂದೆನ್ನ ಕುಂದುಗಳೆನಿಸದೆ ತಂದೆ ಕಾಯೋ ಕೃಷ್ಣ ಕಂದರ್ಪ ಜನಕನೇ ೧

ಮೂಢತನದಿ ಬಲು ಹೇಡಿ ಜೀವನನಾಗಿ | ದೃಢ ಭಕ್ತಿಯ ಮಾಡಲಿಲ್ಲವೊ ಹರಿಯೆ | ನೊಡಲಿಲ್ಲವೋ ನಿನ್ನ ಪಾಡಲಿಲ್ಲವೊ ಮಹಿಮೆ | ಗಾಡಿಕಾರ ಕೃಷ್ಣ ಬೇಡಿಕೊಂಬೆನೊ ನಿನ್ನ ೨

ಧಾರುಣಿಯೊಳು ಬಲು ಭಾರ ಜೀವನನಾಗಿ ದಾರಿ ತಪ್ಪಿ ನಡೆದೆ ಸೇರಿದೆ ಕುಜನರ | ಆರು ಕಾಯುವರಿಲ್ಲ ಸೇರಿದೆ ನಿನಗಯ್ಯ | ಧೀರ ವೇಣುಗೋಪಾಲ ಪಾರುಗಾಣಿಸೋ ಸ್ವಾಮಿ

ಪುರಂದರದಾಸರು ಅತ್ಯಂತ ವಿಹ್ವಲರಾಗಿ ಪ್ರಾರ್ಥನೆ ಮಾಡುತ್ತಾರೆ.

ಕಾಂಬೋಧಿ–ಝಂಪೆ

ಏಕೆನ್ನ ಈ ರಾಜ್ಯಕೆಳತಂದೆ ಹರಿಯೇ | ಸಾಕಲಾರದೆ ಏನ್ನೇಕೆ ಪುಟ್ಟಿಸಿದೆ ಪ

ಎನ್ನ ಕುಲದವರಿಲ್ಲ ಎನಗೊಬ್ಬಹಿತರಿಲ್ಲ | ಮನ್ನಿಸುವ ದೊರೆಯಿಲ್ಲ ಮನಕೆ ಜಯ ವಿಲ್ಲ |ಹೊನ್ನು ಚಿನ್ನಗಳಿಲ್ಲ ಒಲಿಸಿಕೊಂಬುವರಿಲ್ಲ |ಇನ್ನಿಲ್ಲಿತರವಲ್ಲ ಇಂದಿರೇಶನುಬಲ್ಲ ೧

ಆದ್ದರಿಂದ ಸರಿಯಾದ ದಾರಿ ತೋರೆಂದು ಪ್ರಾರ್ಥನೆ ಮಾಡುತ್ತಾರೆ.

ಪೂರ್ವಿ–ಏಕ

ದಾರಿಯತೊರೋ ಮುಕುಂದ ನಾರಾಯಣ | ಹರಿಗೋವಿಂದ |
ಬಂದೆನು ನಾನಾಜನ್ಮದಲಿ ಬಹುಬಂಧನದಲಿ ಸಿಲುಕಿದೆನೋ |
ಮುಂದಿನ ಪಯಣದ ಗತಿತೋರೋ ಇಂದು ನೀ ತೋರೋ ಇಂದಿರೆರಮಣ ೧

ನಿನಗೇನೊ ಸಂಬಂಧವಿಲ್ಲದವರಂತೆ ನೋಡಬೇಡವೆಂದು ಕೇಳಿಕೊಳ್ಳುತ್ತಾರೆ.

ತೋಡಿ–ಛಾಪು

ಕಂಡವರಂತೆ ಎನ್ನನು ನೋಡಲಾಗದು ಪುಂಡರೀಕ ದಳನಯನ ಪುರಾಣ ಪುರುಷೋತ್ತಮನೆ | ಸಂಸಾರ ಸಾಗರದೊಳು ಸಿಕ್ಕಿ ಬಳಲಿದೆ ಬಹುಹಿಂಸೆ ತಾಳಿದೆ ನೀನೆ ಎನೆಗತಿ ಎಂದು ೨

ಹಾಗಾದರೆ ಭಕ್ತ ಬಯಸುವುದೇನು ? ಎಂದರೆ ಜಗನ್ನಾಥದಾಸರು ಹೇಳುತ್ತಾರೆ.

ಕಾಂಬೋಧಿ–ಝಂಪೆ

ಇದನೆ ಪಾಲಿಸು ಜನ್ಮಜನ್ಮಗಳಲಿ ಮಧುಸೂದನನೆ ನಿನ್ನಸ್ಮರಣೆ ದಾಸರಸಂಗ ಪ

ಪುಣ್ಯಾಪಾಪಜಯಾಪಜಯ ಕೀರ್ತಿ ಅಪಕೀರ್ತಿ ಇನ್ನು ಮೋಹಾಸಕ್ತಿ ಕಾಮಲೋಭಾ | ನಿನ್ನಧೀನವು ಎನ್ನದಲ್ಲವೆಂದಿಗೂ ಪ್ರಕೃತಿಗುಣ್ಯಾ ಜನ್ಯ ಕಾರ್ಯವೆಂಬುವ ಜ್ಞಾನವೆ ಸತತಾ ೧

ಈಶ ನೀನಾದಕಾರಣದಿಂದ ಸುಖದುಃಖ ಲೇಶವಿಲ್ಲವು ಸರ್ವಕಾಲಗಳಲಿ | ಕೇಶವ ಜಗನ್ನಾಥ ವಿಠಲನೆ ಭಕ್ತರ ಪ್ರಯಾಸವಿಲ್ಲದೆ ಕಾಯ್ವಿಯೆಂಬ ಸ್ಮರಣೆಯೆ ನಿರುತ ೩

ಈಗ ಮಾತ್ರ ಪ್ರಸನ್ನನಾದರೆ ಸಾಲದು ಸ್ವಾಮಿ, ಅಂತ್ಯಕಾಲದಲ್ಲಿ ನೀನು ಅನುಗ್ರಹ ಮಾಡಬೇಕೆಂದು ಕೇಳಿಕೊಳ್ಳುತ್ತಾರೆ.

ಸಾವೇರಿ–ಛಾಪು

ಆಗಲೇ ಕಾಯಬೇಕೋ ಅಂಬುಜಾಕ್ಷನೆ ಎನ್ನ |
ಈಗ ನೀಕಾಯ್ದರೇನೋ ಕಾಯದಿದ್ದರೇನೋ ಅ

ಅನುಜತನುಜರುಂಡು ಬಹುಗುಣವುಂಟು ಚಿನ್ನ| ಚೀಣಾಂಬರವುಂಟು ಉಪ್ಪರಿಗೆಯುಂಟು | ಮನ್ನೆ ಹುಟ್ಟಿದ ಗಂಡುಮಗನನನೊಬ್ಬನೆಗುಂಟು | ಸನ್ನಿ ಸಂಜ್ಞೆಗುಂದಿದಾಗ ಸಂಗಡೊಬ್ಬರ ಕಾಣೆ ೧

ಒಂದುಕ್ಷಣದಲ್ಲಿ ವಾತಪಿತ್ಥಕಫ ಮೊದಲಾಗಿ ಸಂಧಿ ವ್ಯಾಧಿಗಳಿಷ್ಟು ಬಾಧಿಸುತಿರೆ |

ಇಂದಿರೇಶ ನಿನ್ನನಾಮವೊಂದೇ ಕಾಯುವದಕೆ ಬಂದೆನ್ನಸಲಹಯ್ಯ ಪುರಂದರವಿಠಲ ೩

ನಾನೇನು ಹೆಚ್ಚಾಗಿ ನಿನ್ನನ್ನು ಕೇಳುವುದಿಲ್ಲ ಪ್ರಭು, ಇಷ್ಟುಮಾತ್ರ ಕರುಣಿಸು ಎಂದು ಬೇಡುತ್ತಾರೆ.

ಗೌಳಿಪಂತು—ತ್ರಿಪುಟ

ನಾ ನಿನಗೇನು ಬೇಡುವುದಿಲ್ಲ ।

ಎನ್ನ ಹೃದಯ ಕಮಲದೊಳು ನಿಂದಿರು ಕೃಷ್ಣ ಪ

ಶಿರ ನಿನ್ನ ಚರಣಕ್ಕೆ ಎರಗಲಿ ಎನ್ನ ಚಕ್ಷುಗಳು ನಿನ್ನ ನೋಡಲಿ । ಕರ್ಣಗೀತಂಗಳ ಕೇಳಲಿ ನಿನ್ನ ನಿರ್ಮಾಲ್ಯವ ನಾಸವಾಘ್ರಾಣಿಸಲಿ ಹರಿಯೆ ೧

ನಾಲಿಗೆ ನಿನ್ನ ಕೊಂಡಾಡಲಿ ಎನ್ನ ಕರಗಳೆರಡು ನಿನ್ನ ನರ್ಚಿಸಲಿ ಹರಿಯೇ ।ಚರಣ ತೀರ್ಥಯಾತ್ರೆಮಾಡಲಿ ನಿನ್ನ ಧ್ಯಾನವೆನಗೆ ಒಂದು ಕೊಡು ಕಂಡ್ಯ ಹರಿಯೇ ೨

ಬುದ್ಧಿ ನಿನ್ನೊಳು ಕುಣಿದಾಡಲಿ ಎನ್ನ ಚಿತ್ತ ನಿನ್ನೊಳು ಸ್ಥಿರವಾಗಿರಲಿ ಹರಿಯೇ ಭಕ್ತಜನರ ಸಂಗವಾಗಲಿ ರಂಗವಿಠಲನೆ ಇಷ್ಟೇ ದಯಮಾಡು ಹರಿಯೇ ೩

ಈಗ ಇಂದ್ರಿಯಗಳೇನು ಮಾಡುತ್ತಿವೆಯೆಂಬುದನ್ನು ವ್ಯಾಸರಾಯರು ವರ್ಣಿಸುತ್ತಾರೆ.

ಆನಂದ ಭೈರವಿ—ಆದಿ

ಎನ್ನ ಮನ ಕಂಡ ಕಡೆಗೆ ಎರಗುತಿದೆ ನಿನ್ನಲ್ಲಿ ನಿಲ್ಲಿಸಿ ಕಾಯೋ ಪ

ಚಕ್ಷುರಿಂದ್ರಿಯಗಳಿಂದ ಚದುರೇರ ಈಕ್ಷಿಸಿ ನೊಂದೆನಯ್ಯ

ಶಿಕ್ಷಕನು ನೀನೆ ಎನಗೆ ಸಿರಿಯರಸ ಭಕ್ಕುತರೋಳಿಟ್ಟು ಕಾಯೋ ೧

ತ್ವಗಿಂದ್ರಿಯಗಳಿಂದ ತಾಮಸ ಸೋಕಿ ನಾ ಕೆಟ್ಟೆನಯ್ಯ

ಕಾಕು ಮಾಡದೆ ಎನ್ನನು ಸಿರಿ ಕೃಷ್ಣ ಸಾಕಾರನಾಗಿ ಸಲಹೋ ೫

ನಾನು ಕೇಳುತ್ತಿರುವುದು ಅತ್ಯಲ್ಪ ಇಷ್ಟಾದರೂ ಕೊಡದಿದ್ದರೆ ಹೇಗೆ ಎನ್ನುತ್ತಾರೆ ಶ್ರೀಪಾದರಾಯರು

ಕೇದಾರಗೌಳ—ಅಟ

ಇದನಾದರೂ ಕೊಡದಿದ್ದರೆ ನಿನ್ನ ಪದಕಮಲವ ನಂಬಿ ಭಜಿಸುವುದೆಂತೋ ಪ

ಆಗಬೇಕು ರಾಜ್ಯಭೋಗಗಳೆನುತಲಿ ರಾಗದಿಂದ ಬೇಡ ಬಂದುದಿಲ್ಲ । ನಾಗಶಯನ ರಂಗವಿಠಲ ನಾ ನಿನ್ನ ಬಾಗಿಲು ಕಾಯುವ ಭಾಗ್ಯ ಸಾಕೆಂದರೆ ೫

ಸ್ವಾಮಿ ನಾನು ಕಳ್ಳ, ನನಗೆ ತಕ್ಕ ಶಿಕ್ಷೆ ಕೊಡೆಂದು ಚಮತ್ಕಾರವಾಗಿ ಪುರಂದರದಾಸರು ಹೇಳಿದ್ದಾರೆ.

ಉಗಾಭೋಗ

ನಿನ್ನ ನಾಮ ಭಂಡಾರ ಕದ್ದ ಕಳ್ಳನು ನಾನು । ನಿನ್ನ ಭಕುತಿಯೆಂಬ ಸಂಕೋಲೆಯ

ಸಿಕ್ಕಿ | ನಿನ್ನ ದಾಸರ ಕೈಯಲ್ಲಿ ಒಪ್ಪಿಸಿಕೊಟ್ಟು | ನಿನ್ನ ಮುದ್ರಿಕೆಯಿಂದ ಕಾಸಿ ಬಿಡಿಸೋ ದೇವ |ನಿನ್ನ ವೈಕುಂಠ ದುರ್ಗದೊಳಗೆನ್ನ | ಸೆರೆಯಿಟ್ಟು ಸಲಹೊ ಪುರಂದರವಿಠಲ||

ನನಗೇನು ಸಂಬಂಧವಿಲ್ಲೆಂದು ನೀನು ದೂರ ಸರಿದರೇ ನಾನೇ ಹುಟ್ಟಿ ಬಂದೆನೇ ಎಂದು ಕನಕದಾಸರ ಪ್ರಶ್ನೆ

ಮುಖಾರಿ—ಆಟ

ನನ್ನಿಂದ ನಾನೇ ಜನಿಸಿ ಬಂದೆನೆ ಕೃಷ್ಣ ಎನ್ನ ಸ್ವತಂತ್ರವು ಲೇಶವಿದ್ದರೂ ತೋರು | ನಿನ್ನ ಪ್ರೇರಣೆಯಿಂದ ನಡೆದು ನುಡಿದ ಮೇಲೆ ನಿನ್ನದು ತಪ್ಪೋ ಎನ್ನದು ತಪ್ಪೋ ಪರಮಾತ್ಮ ಅ

ಎಲವುಗಳೆಲ್ಲ ಜೊತೆಮಾಡಿ ನರಗಳ ಹೊಲೆ ಚರ್ಮವ ಹೊದೆಸಿ ದೇಹದೊಳು ಮಲಮೂತ್ರಗಳನ್ನು ಬಲಿಸಿ ಹೃದಯದಲ್ಲಿ ನೆಲಸಿ ಚೇತನವನಿತ್ತವ ನೀನಲ್ಲವೆ ೧

ಅಂಧಕನ ಕೈಲಿ ಕೋಲಿತ್ತು ಕರೆದೊಯ್ವನು ಮುಂದಡಿ ತಪ್ಪಿ ಗುಂಡಿಗೆ ಕೆಡಹಲು ಅಂಧಕನ ತಪ್ಪೊ ಮುಂದಾಳಿನ ತಪ್ಪೋ ಹಿಂದಾಡಬೇಡ ಎನ್ನಲಿ ತಪ್ಪಿಲ್ಲವೋ ೨

ಕಂದನ ಆಡಿಸುತ್ತಲಿರೆ ತಾಯಿ ಕಂದ ಬಾವಿಯ ಅಂದಿ ನೋಡುತ್ತಿರೆ | ಬಂದು ಬೇಗದಿ ಬಿಗಿದಪ್ಪಿರಲು | ಆ ಕಂದನ ತಪ್ಪೊ ಮಾತೆಯ ತಪ್ಪೋ ಪರಮಾತ್ಮ ೩

ದೂರು ನಿನ್ನದು ಭಾರ ನಿನ್ನದೋ ರಂಗ ನಾರಿ ಮಕ್ಕಳು ತನುಮತ ನಿನ್ನದಯ್ಯ | ಕ್ಷೀರದೊಳದ್ದು ನೀರೊಳದ್ದು ಗೋವಿಂದ ಹೇರೊಪ್ಪಿಸಿದ ಮೇಲೆ ಸುಂಕವೆಸಿರಿಕೃಷ್ಣ ೬

ಸಂಸಾರಕ್ಕೆ ತಂದವ ನೀನಾದಮೇಲೆ ಸಾಕದಿದ್ದರೆ ಹುಟ್ಟಿಸಿದೆಯೇಕೆಂದು ಮೊರೆಯಿಡುತ್ತಾರೆ.

ಅಸಾವೇರಿ—ಝಂಪೆ

ಯಾಕೆ ಪುಟ್ಟಿಸಿದೆ ನೀ ಸಾಕಲಾರದೆ ಜಗದೇಕಕಾರಣ ಪುರುಷನೆ ಕೃಷ್ಣ ಪ

ಏಕೋವಿಷ್ಣು ಎಂಬ ವಾಕುಚಿಂತಿಸೆ ಇಂಥ ಕಾಕುಮಾಡುವುದು ಚಿತವೇ ಕೃಷ್ಣ ಅ

ಎಂದೆಂದು ಸಿರಿಯರಸನೆಂದು ಶ್ರುತಿ ಸಾರುತಿದೆ ಬಂದುದೀಗೇನು ಸಿರಿಯೋ ಕೃಷ್ಣ |ಒಂದೊಂದುನಿಮಿಷ ಯುಗಗಿಂದಧಿಕವಾಗುತಿದೆ. ಮುಂದೋರದ್ಹಾಗಾಯಿತೋ ಕೃಷ್ಣ | ಸಂದೇಹಸಲ್ಲ ಗೋವಿಂದ ಶ್ರೀ ಪದದಾಣೆ ತಂದೆ ನೀರಕ್ಷಸದಿರೆ ಕೃಷ್ಣ | ಮುಂದೆ ಭಜಿಸುವರು ಹೀಗೆಂದು ವಾರತೆಕೇಳೆ ಬಂದುದಪಕೀರ್ತಿನೋಡೋ ಕೃಷ್ಣ ೨

ಹರಿಯಾತ್ರೆ ಮಾಡಲಿಲ್ಲ ಹರಿಮೂರ್ತಿ ನೋಡಲಿಲ್ಲ ಹರಿದಾಸ ಸಂಗವಿಲ್ಲಕೃಷ್ಣ | ಅರಿತರಿತು ಮನವಿಷಯಕೆರಗಿ ಹರುಷವತಾಳಿ ಬರಿದಾಯಿತಾಯುವೆಲ್ಲ ಕೃಷ್ಣ | ಮರುತಾಂತರ್ಗತ ಸಿರುಯರಸ ಹರಿಯೆಂದು ಹರುಷಾಬ್ಧಿಮಗ್ನನಲ್ಲ ಕೃಷ್ಣಾ ೭

ಉರಿಯೊಳಗೆ ಬಿದ್ದು ಶರೀರವನ್ನು ಕಳೆಯಲೊ ಪರುವತನೇರುರುಳಲೋ

ಕೃಷ್ಣ | ಗರಳಮಡುವನು ಧುಮುಕಿ ಉರುಗಫಣ ತುಳಿಯಲೋ ಎರಡೊಂದು ಶೂಲಕ್ಹಾಯಲೋ ಕೃಷ್ಣ | ಕೊರಳಿಗ್ಹಗ್ಗವಮಾಡಿ ಮರವೇರಿ ಕರಬಿಡಲೋ ಗರಗಸಕೆ ಶಿರ ಒಡ್ಡಲೋ ಕೃಷ್ಣ | ಕರುಣ ವಾರಿಧಿಯೆನ್ನ ಕರಪಿಡಿದು ಸಲಹಿದಿರೆ ಧರೆಯೊಳು ದ್ಧರಿಪರಾರೋ ಕೃಷ್ಣ ೧೦

ಎಷ್ಟು ಹೇಳಲಿ ಎನ್ನ ಕಷ್ಟಕೋಟಿಗಳನ್ನು ಸುಟ್ಟೀಗ ಬೇಯುತಿದೆಕೋ ಕೃಷ್ಣ | ಕಷ್ಟಬಟ್ಟೆನ್ನಮಗನೆಂದು ದೃಷ್ಟಿ ನೀರೊರೆಸೆನ್ನ ಪೊಟ್ಟೆಯೊಳು ಪೊರೆವರಾರೋ | ಕೃಷ್ಣ | ನಾಮೋಜ್ರಕ್ಕೆ ಬೆಟ್ಟದುರಿತವನೀಗಿ ಥಟ್ಟನೆ ಬಂದು ನೀನು ಕೃಷ್ಣ ಇಷ್ಟವನು ಸಲ್ಲಸಿ ಗುಟ್ಟಲಿ ಶ್ರೀರಂಗ ವಿಠಲ ಎನ್ನ ಕಾಯೋ ಕೃಷ್ಣ ೧೦

ಕೊನೆಗೆ ಬಹಳ ಆರ್ತರಾಗಿ ಪುರಂದರದಾಸರು ಮೊರೆ ಇಡುತ್ತಾರೆ.

ಪೂರ್ವಿ—ಆಟ

ತೇಲಿಸೋ ಇಲ್ಲ ಮುಳುಗಿಸೋ |

ನಿನ್ನ ಕಾಲಿಗೆ ಬಿದ್ದೆನೊ ಪರಮ ಕೃಪಾಳೋ ಅ

ದೋಷ ಉಳ್ಳವ ನಾನು ಭಾಷೆ ಉಳ್ಳವ ನೀನು ಮೋಸಹೋದೆನೊ ಭಕ್ತಿರಸವ ಬಿಟ್ಟು | ಶೇಷಶಯನ ಶ್ರೀಪುರಂದರವಿಠಲ ದಾಸರಸಂಗವಿತ್ತು ಪಾಲಿಸೋಹರಿಯೇ ೩

ಎಂತೆಂತಹ ಸಂದರ್ಭಗಳಲ್ಲಿ ಎಂತೆಂತಹ ಭಕ್ತರನ್ನು ಸಲಹಿದೆ ನಾನು ಮಾತ್ರ ನಿನ್ನ ಮನಸ್ಸಿಗೆ ಬಾರನೇ ಎಂದು ದಾಸರು ಕೇಳುತ್ತಾರೆ.

ಸುರುಟಿ—ಆದಿ

ನಾ ನಿನ್ನಮನಕೆ ಬಾರೆನೇ ಶ್ರೀ ಪಾಂಡುರಂಗ ನಾ ನಿನ್ನಮನಕೆ ಬಾರೆನೆ ಪ

ನಾ ನಿನ್ನಮನಕೆ ಬಾರೆನೆ ಬಂದರೆ ಈ ಭವದ ಬಲೆಯೊಳಗೆ ಸಿಲಕುವೆನೆ ಅ

ಕೆಟ್ಟ ಕಿರಾತನ ಪಾಪದ ಬೆಟ್ಟವ ಸುಟ್ಟು ವಾಲ್ಮೀಕ ಮುನಿಯೆನಿಸಿದೆ | ದೀನರುದ್ಧರಿಪ ಪುರಂದರವಿಠಲ ಏನುಕಾರಣ ಎನ್ನಮರೆತೆ ೭

ಉಳಿದ ಭಕ್ತರು ನಿನಗೆ ಹೆಚ್ಚಿನವರೇನು ? ನಾನೇನ ಮಾಡಿದೆ ? ನನ್ನನ್ನೇಕೆ ಕಾಪಾಡಲೊಲ್ಲೆ ಎಂದು ಪ್ರಶ್ನಿಸುತ್ತಾರೆ.

ಸಾರಂಗ—ಆಟ

ನಾನೇನ ಮಾಡಿದೆನೋ ಕೃಷ್ಣಯ್ಯ ನೀನೆನ್ನ ಸಲಹಬೇಕು ಪ

ಕರಿರಾಜ ಕರೆಸಿದನೆ ದ್ರೌಪದಿದೇವಿ ಬರೆದೋಲೆಯ ಕಳುಹಿದಳೇ

ಹರುಷದಿಂದಲಿ ಋಷಿಪತ್ನಿಯ ಶಾಪ ಪರಿಹರಿಸಿದಿಯಲ್ಲೋ ಸ್ವಾಮಿ ೧

ರಕ್ಕಸತನುಜನಲ್ಲೆ ಪ್ರಹ್ಲಾದ ಚಿಕ್ಕ ಪ್ರಾಯದ ಧ್ರುವನು | ಸಿಕ್ಕಿದ ಪಾಪ ಮಾಡಿದ ಅಜಮಿಳ ನಿನ್ನಕ್ಕರೆಯ ಮಗನೇ ಪೇಳೋ ಹೇ ಸ್ವಾಮಿ ೨

ಒಪ್ಪಿಡಿ ಅವಲಕ್ಕಿಯ ಕೃಷ್ಣಯ್ಯ ನಿನಗೋಪ್ಪಿಸಿದವಗೊಲಿದೆ | ಒಪ್ಪೆನು ನಿನಗೆ ಶ್ರೀಪುರಂದರವಿಠಲಪವರೊಪ್ಪಂತೆ ಕಾಯಬೇಕ ಹೇ ಸ್ವಾಮಿ ೩

ಇಷ್ಟು ಕೇಳಿದರೂ ನೀನು ಒಲಿಯದಿದ್ದರೆ ನಾನೇನು ಸುಮ್ಮನೆ ಬಿಡುವುದಿಲ್ಲವೆಂದು ದಾಸರು ಹಟಮಾಡುತ್ತಾರೆ.

ಶಂಕಾರಭರಣ—ಆಟ

ನೀ ಕೊಡೆ ನಾ ಬಿಡೆ ಕೇಳಯ್ಯ ರಂಗ ಗೋಕುಲಪತಿ ಗೋವಿಂದಯ್ಯ ಪ

ನೋಡುವೆ ನಿನ್ನನು ಪಾಡುವೆ ಗುಣಗಳಬೇಡುವೆ ಕಾಡುವೆ ನಾಡೊಳಗೆ |ಮೋಡಿಯ ಬಿಡು ಬಿಡು ಮೊದಲಿಗೆ ಬಡ್ಡಿಯ ಕಾಡಿಲಿ ತುರುಗಳ ಕಾಯ್ದರೆನ್ನ ೧

ಎಂಟಕ್ಷರವಿದೆ ಹೃದಯ ಸಾಕ್ಷಿಗಳಿವೆ ಗಂಟಿಗೆ ಮೋಸವೆ ದಾಸನಿಗೆ
ಎಂಟೆಂಟೆನಿಸುವ ಬಂಟನ ಕೈಲಿ ತುಂಟತನ ಬಿಡೋ ತುಡುಗರಸೋ ೨

ಅಪ್ಪ ಶ್ರೀ ಕೃಷ್ಣನೆ ಅಮರರಿಗೊಲಿದನೆ ಸರ್ಪನ ಮೇಲೊರಿಗಿಪ್ಪವನೆ
ಅಪ್ಪಿಸಿ ಕೊಟ್ಟರೆ ಪುರಂದರವಿಠಲನೆ ಒಪ್ಪುತ ಪಾಡುವೆ ನಡೆಮನೆಗೆ ೩

ಇದೆಲ್ಲ ಬೇಡಸ್ವಾಮಿ. ನಾನೂ ನೀನು ಒಂದೊಂಪ್ಪಂದ ಮಾಡಿಕೊಳ್ಳೋಣ. ಅದಕ್ಕೆ ಯಾರು ತಪ್ಪಿದರೂ ಆಣೆ ಇಡೋಣವೆಂದು ದಾಸರು ದೇವರನ್ನು ವ್ಯವಹಾರಕ್ಕೆಳೆಯುತ್ತಾರೆ.

ಶಂಕರಾಭರಣ—ತ್ರಿಪುಟ

ಎನಗೂ ಆಣೆ ರಂಗ ನಿನಗೂ ಆಣೆ
ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ ಅ

ನಿನ್ನನ್ನು ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ
ಎನ್ನ ನೀ ಕೈಬಿಟ್ಟು ಪೋದರೆ ನಿನಗೆ ಆಣೆ ೧

ತನು ಮನಧನದಲಿ ವಂಚಕನಾದರೆ ಎನಗೆ ಆಣೆ ರಂಗ
ಮನಸ್ಸು ನಿನ್ನಲಿ ನಿಲಿಸದಿದ್ದರೆ ನಿನಗೆ ಆಣೆ ೨

ಕಾಕು ಮನುಜರ ಸಂಗವ ಮಾಡಿದರೆನಗೆ ಆಣೆ ರಂಗ
ಲೌಕಿಕವ ಬಿಡಿಸದಿದ್ದರೆ ನಿನಗೆ ಆಣೆ ೩

ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ ರಂಗ
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ ೪

ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ ರಂಗ
ಪುರಂದರವಿಠಲ ನೀನೊಲಿಯದಿದ್ದರೆ ನಿನಗೆ ಆಣೆ ೫

ಏನು ಮಾಡಿದರೇನು ? ಒಟ್ಟಿನಮೇಲೆ ನನಗೆ ಗತಿಯಿಲ್ಲ ನಿನಗೆ ಸರಿಯಿಲ್ಲ; ಹೀಗಾಗಿದೆ ನಮ್ಮಿಬ್ಬರ ವ್ಯವಹಾರವೆಂದು ವ್ಯಾಸರಾಯರು ದೂರುತ್ತಾರೆ.

ಯದುಕುಲ ಕಾಂಬೋಧಿ—ತ್ರಿಪುಟ

ನಿನಗಾರು ಸರಿಯಿಲ್ಲ ಎನಗನ್ಯ ಗತಿಯಿಲ್ಲ
ನಿನಗೂ ನನಗೂ ನ್ಯಾಯ ಪೇಳುವರಿಲ್ಲ ಅ

ಒಂದೆ ಗೂಡಿನೊಳು ಒಂದುಕ್ಷಣವಗಲದೆ | ಎಂದೆಂದೂ ನಿನ್ನಪಾದ ಪೊಂದಿರಲಾಗಿ | ಬಂಧ ವಿಷಯಂಗಳಿಗೆನ್ನನೊಪ್ಪಿಸಿ ಕೊಟ್ಟು | ಅಂದಗಾರನಂತೆ ನೋಡುವುದುಚಿತವೇ ೧

ಪರಸತಿಗಳುಪಲು ಪರಮ ಪಾತಕಿಯೆಂದು | ಪರಿ ಪರಿನರಕಕ್ಕೆ ಗುರಿ ಮಾಡುವಿ | ಪರಸತಿಯರ ಒಲುಮೆ ನಿನಗೊಪ್ಪಿತೆಲೊ ಕೃಷ್ಣ | ದೊರೆತನಕಂಜಿ ನಾ ಶರಣೆಂಬೆನಲ್ಲದೆ ೨

ನಿನ್ನಾಜ್ಞದವನೋ ನಾ ನಿನ್ನ ಪ್ರೇರಣೆಯಿಂದ ಅನ್ನಂತ ಕರ್ಮವ ನಾ ಮಾಡುವೆ | ಎನ್ನಗುಣಗಳ ನೆಣಿಸಲಾಗದೊ ಸ್ವಾಮಿ| ಮನ್ನಿಸಿ ಸಲಹಯ್ಯ ಪರಮ ಪುರುಷ ಕೃಷ್ಣ ೩

ನಿನ್ನ ಗುಣಗಳೆಷ್ಟಿದ್ದರು ನನಗೋನೋ ಒಂದೂ ನಂಬಿಕೆ ಇಲ್ಲ ಎನ್ನುತ್ತಾರೆ ಪುರಂದರದಾಸರು.

ಧನಶ್ರೀ—ಆದಿ

ಕರುಣಾಕರ ನೀನೆಂಬುವದೇಕೋ ಭರವಸವಿಲ್ಲೆನಗೆ ಪ
ಪರಿಪರಿಯಲಿ ಈ ನರಜನ್ಮವನಿತ್ತು ತಿರುಗಿ ತಿರುಗಿ ಮನಕರಗಿಸುವುದ ಕಂಡು ಅ
ಕರಿಧ್ರುವ ಪಾಂಚಾಲಿ ಅಹಲ್ಯೆಯ ಪೊರೆದವ ನೀನಂತೆ
ಅರಿತು ವಿಚಾರಿಸಿ ನೋಡಲದೆಲ್ಲವು ಪರಿ ಪರಿ ಕಂತೆಗಳಂತಿದೆ ಕೃಷ್ಣ ೧
ಕರುಣಾಕರ ನೀನಾದರೆ ಈಗಲೆ ಕರಪಿಡಿದೆನ್ನನು ಹರಿ ಕಾಯೋ
ಸರಸಿಜಾಕ್ಷನೆ ಸರಸ ನೀನಾದರೆ ದುರಿತಗಳೆನ್ನನು ಪೀಡಿಪದುಂಟೆ ೨
ಮರಣಕಾಲದಲಿ ಅಜಮಿಳಗೊಲಿದೆ ಗರುಡಧ್ವಜನೆಂಬೊ ಬಿರುದುನಿಂದ | ವರಬಿರುದುಗಳು ಉಳಿಯಬೇಕಾದರೆ ತ್ವರಿತದಿಕಾಯೋ ಪುರಂದರವಿಠಲ ||

ದಾಸರು ಇನ್ನೂ ಸ್ವಲ್ಪ ಮುಂದುವರೆದು 'ನಿನ್ನ ನಂಬಿ ಯಾರು ಬದುಕಿದರು' ಎಂದು ಕೇಳುತ್ತಾರೆ.

ಕಾಂಬೋಧಿ—ಝಂಪೆ

ಆರು ಬದುಕಿದರಯ್ಯ ಹರಿ ನಿನ್ನನಂಬಿ ತೋರು ಈಜಗದೊಳಗೆ ಒಬ್ಬರಕಾಣೆ ಪ
ಕರಪತ್ರದಿಂದ ತಾಮ್ರಧ್ವಜನ ತಂದೆಯ ಕೊರಳ ಕೊಯಿಸಿದೆ ನೀನು ಕುಂದಿಲ್ಲದೆ | ಮರುಳನಂದದಿ ಪೋಗಿ ಭೃಗುಮುನಿಯು ಕಣ್ಣೊಡೆದೆ ಅರಿತು ತ್ರಿಪುರಾಸುರನ

ಹೆಂಡಿರನು ಬೆರೆದೆ | ತಿರುದುಂಬ ದಾಸರ ಕೈಲಿ ಕಪ್ಪವಕೊಂಬೆ ಗರುಡವಾಹನ ನಿನ್ನ ಚರ್ಯವರಿಯೆ | ದೊರೆ ಪುರಂದರ ವಿಠಲ ನಿನ್ನನು ನಂಬಿದರೆ ತಿರುಪೆಯೂ ಹುಟ್ಟಲೊಲ್ಲದು ಕೇಳೋ ಹರಿಯೇ ೩

ದಾಸರು ಇಷ್ಟಕ್ಕೆ ಬಿಡುತ್ತಾರೆಯೇ ದೇವರನ್ನು ಪಂಚಾಯಿತಿಗೆ ಕರೆಯುತ್ತಾರೆ.

ನಾಟಕುರಂಜಿ—ಮಟ್ಟತಾಳ

ನಡೆದು ಬಾ ನಾಲ್ವರಿದ್ದೆಡೆಗೆ ಎನ್ನಯ್ಯನೆ |

ನಮ್ಮ ನಿಮ್ಮ ತೊಡಕ ನಿರ್ಣಯಿಸಿಕೊಂಬೆನೋ ತೋಯಜಾಕ್ಷ ಪ

ಆದಿಯಲಿ ಎನ್ನ ಮತ್ತಾರು ನಿನ್ನ ಪಾದಸೇವೆಯ ಮಾಡಿ ಹಲವು ಕಾಲ | ಸಾಧಿಸಿದರ್ಥವ ಸಲೆಯನ್ನ ಜೀವಕ್ಕೆ ಆಧಾರವಾದುದನದನೇಕೆ ಕೊಡಲೊಲ್ಲೆ ೧

ಸಾಲವ ಕೊಡುವಲ್ಲಿ ಸಲೆ ಠೌಳಿಯ ಮಾಡಿ ಕಾಲವ ಕಳೆವ ನೀ ಕಪಟದಿಂದ | ಮೇಲಾದ ವಿಬುಧರು ಮೆಚ್ಚುವಂತೆ ನಿನ್ನ ಕಾಲಿಗೆ ಎನ್ನ ಕೊರಳ ಹತ್ತಕಟ್ಟುವೆ | ೨

ನನ್ನ ಸಾಲವೇ ನುಂಗಿದೆಯಲ್ಲ ಇದು ನ್ಯಾಯವೆ ಎಂದು ಸವಾಲು ಹಾಕುತ್ತಾರೆ. ಪುರಂದರದಾಸರು.

ಕೇದಾರಗೌಳ—ಆಟ

ನ್ಯಾಯವೇ ನಿನಗೆ ಎನಗೆ ಸಿರಿ ಕೃಷ್ಣ ಬಾಯಾಡಬಹುದೆ ಕೈಯೊಳಿತ್ತ ಹಣಗಳ ಅ

ಆರು ಅರಿಯದ್ಹಾಂಗೆ ಒಂಬತ್ತುಕೊಡುವಾಗ ತೋರಿಯಾಡಿದೆ ಒಮ್ಮೆ ನಿನ್ನ ಹೆಸರ | ಗಾರು ಮಾಡದೆ ಬಡ್ಡಿ ತೆತ್ತು ಬರುವೆನೆಂದು ಹಾರೈಸಿ ಕೊಡದೆ ಚಂಗುಡಿಯ ನಿಲಿಸುವರೆ ೧

ಅಸಲು ನಿನಗೆ ಸಮರ್ಪಣೆಯಾಯಿತೋ ದೇವ ಮೀಸಲುಪೊಂಬೆಸರು ನಿರುತ ನಡೆಯಲಿ | ಶಶಿಧರ ಬ್ರಹ್ಮಾದಿವಂದ್ಯ ಸತ್ಯವೆಂದು ಮೀಸಲಳುಹಿ ಎನ್ನ ಸಲಹೋ ಶ್ರೀ ಕೃಷ್ಣ ೩

ಕೊನೆಗೆ ದಾಸರು ಭಗವಂತನಿಗೆ 'ನನ್ನನು ಸಲಹುವೆಯೋ ಇಲ್ಲದಿದ್ದರೆ ನಿನ್ನ ವಿಷಯ ಬಯಲಿಗೆಳೆಯಲೋ' ಎಂದು ಬೆದರಿಕೆ ಹಾಕುತ್ತಾರೆ.

ಶಂಕರಾಭರಣ—ಆಟ

ಕೃಷ್ಣರಾಯನೆ ನಿನ್ನ ಕೃತ್ಯಗಳೆಲ್ಲ ಸೃಷ್ಟಿಯೊಳಗೆ ನಾನು ಬೀರಾಲ್ಯಾ |

ಶಿಷ್ಟರೊಳಗೆ ಇಟ್ಟು ಚಿರಕಾಲದಲ್ಲೆನ್ನ ಕಷ್ಟ ಬಿಡಿಸದ ಕಷ್ಟ ಬಿಡಿಸದೆ ಕಷ್ಟ ಬಿಡಿಸದೆ ಸುಮ್ಮನಿದ್ದೆಯಾ ಸ್ವಾಮಿ |

ಜನನ ಮರಣ ಶೂನ್ಯನೆನಿಸಿಕೊಂಡು ಗೋಪಿತನಯನಾಗಿದ್ದಿದ್ದು ಹೇಳಲ್ಯಾ |

ಸನಕಾದಿಸೇವ್ಯ ಪೂಜ್ಯನೆ ತುರುಗಳ ಹಿಂಡು ವನದಲ್ಲಿ ಕಾಯ್ದದ್ದು ಹೇಳಲ್ಯಾ ನಾನು

—ಜಗನ್ನಾಥರುದಾಸರು

ಮುಖಾರಿ—ಅಟ

ವಾಸುದೇವ ನಿನ್ನ ಪರ್ಮ ಕರ್ಮಂಗಳ ದೇಶದೇಶದಲ್ಲಿ ಪ್ರಕಟಿಸಲೊ | ತರಳತನದಲ್ಲಿದ್ದು ದುರುಳನಾಗಿ ಬಂದು ಒರಳಿಗೆ ಕಟ್ಟಿಸಿ ಕೊಂಡುದನ್ನ |ತುರುವ ಕಾಯಲಿ ಪೋಗಿ ಕಲಿಯೋಗರವನು ಗೋಲ್ಲರ ಕೂಡೆ ನೀ ಉಂಡುದನ್ನು |

ನೆರೆಮನೆ ಹೊರಮನೆಗಳ ಪೊಕ್ಕು ಬೆಣ್ಣೆಯ ಅರಿಯದಂತೆ ಕದ್ದು ಮೆದ್ದುದನು |

ಕೆರಳಿಸಿಯಾದರೆ ಒದರುವೆ ಎಲೊ ನರಹರಿ ಎನ್ನ ಬಾಯಿಗೆ ಬಂದುದನು |

—ಶ್ರೀಪಾದರಾಜರು

ಹೀಗೆ ದಾಸರುಗಳು ಮಾನವ ಸಹಜವಾದ ಸಕಲ ಭಾವಗಳನ್ನೂ ಪರಮಾತ್ಮನ ಸ್ತೋತ್ರ ಪಾರ್ಥನೆಯಲ್ಲಿ ಪ್ರಯೋಗಿಸಿ ತಮ್ಮ ಭಕ್ತಿಯ ಪಾರವಶತೆಯನ್ನು ತೋರಿದ್ದಾರೆ. ಈ ವಿವಿಧ ಭಾವಗಳನ್ನು ನೋಡಿದಲ್ಲಿ ಅವರ ದಾರ್ಢ್ಯ, ನಿಷ್ಕಲ್ಮಷ ಭಕ್ತಿ ಎಂತಹ ಉದಾತ್ತವಾದುದೆಂಬುದು ಸ್ಪಷ್ಟವಾಗುವುದು. ಈ ಮೇಲಿನ ಭಾವಗಳಲ್ಲದೆ ಇನ್ನೂ ಕೆಲವು ಚಮತ್ಕಾರ ರೀತಿಯಲ್ಲಿ ಹರಿ ಸ್ತೋತ್ರ ಮಾಡಿದ್ದಾರೆ. ಕೆಳಗಿನ ಪದಗಳು ಪರಮಾತ್ಮನನ್ನು ಕರೆಯುವುದಕ್ಕೆ ರಚಿತವಾಗಿದೆ.

ಕಾಂಬೋಧಿ—ಏಕ

ಯಾದವ ನೀ ಬಾ ಯದುಕುಲನಂದನ ಮಾಧವ ಮಧುಸೂದನ ಬಾರೋ ಪ
ಶಂಕ ಚಕ್ರವು ಕೈಯಲ್ಲಿ ಹೊಳೆಯುತ ಬಿಂಕದ ಗೋವಳ ನೀಬಾರೋ ೧
ಅಕಳಂಕ ಮಹಿಮನೆ ಆದಿನಾರಾಯಣ ಬೇಕೆಂಬ ಭಕ್ತರಿಗೊಲಿ ಬಾರೋ ೨
ಖಗವಾಹನನೆ ಬಗೆ ಬಗೆ ರೂಪನೆ ನಗುಮೊಗದರಸನೆ ನೀ ಬಾರೋ
ಜಗದೊಳು ನಿನ್ನಯ ಮಹಿಮೆಯ ಪೊಗಳುವೆ ಪುರಂದರವಿಠಲ ನೀಬಾರೋ ೩

ಮಧ್ಯಮಾವತಿ—ಆದಿ

ಬೇಗಬಾರೋ ನೀಲಮೇಘವರ್ಣನೇ ಮುದ್ದು ಮುಖದರನ್ನ ಭಕ್ತರಿಗೆಪ್ರಸನ್ನ ಪ
ಬೇಗಬಾರೋ ಬೇಗಬಾರೋ ವೇಲಾಪುರದ ಚೆನ್ನ ಅ
ಇಂದಿರಾರಮಣ ಗೋವಿಂದ ಬೇಗಬಾರೋ ನಂದನಕಂದ ಮುಕುಂದದದ ಬೇಗ ಬಾರೋ ೧
ಅಯ್ಯ ಸಿಂಹಯ್ಯ ವಿಜಯ ಬೇಗಬಾರೋ ಉದಯಾದ್ರಿವಾಸಾ ಹಯವದನ ಬೇಗಬಾರೋ ೨

ಹರಿಭಜನೆಯಲ್ಲಿದ್ದರೆ ಹರಿಪ್ರಸಾದವಾದರೆ ಇನ್ನೇತಕೆ ಕೊರತೆ ಎಂದಿದ್ದಾರೆ ದಾಸರು.

ಕಾನಡ—ರೂಪಕ

ನಾನಿನ್ನ ಧ್ಯಾನದೊಳಿರಲು ಮಿಕ್ಕ ಹೀನಮಾನವರೇನುಮಾಡಬಲ್ಲರೋ ರಂಗ ಪ

ಮಚ್ಚರಿಸುವರೆಲ್ಲ ಕೂಡಿ ಮಾಡುವುದೇನು|ಮಿಕ್ಕಅಚ್ಯುತ ನಿನದೊಂದು| ದೆಯೆಯಿರಲು | ವಾತ್ಸಲ್ಯ ಬಿಡದಿರು ನಿನ್ನ ನಂಬಿದೆ ದೇವ | ಕಿಚ್ಚಿಗೆ ಇರುವೆ ಮುತ್ತವುದೆ ಕೇಳೆಲೊ ರಂಗ ೧

ಕನ್ನಡಿಯೊಳಗಿನ ಗಂಟು ಕಳ್ಳ ಕನ್ನ ವಿಕ್ಕಲವನವಶವಹುದೆ | ನಿನ್ನ ನಂಬಲು ಮುದ್ದು ಪುರಂದರವಿಠಲ ಚಿನ್ನಕ್ಕೆ ಪುಟವನಿಟ್ಟಂತೆ ಆಹುದೊ ರಂಗ ೩

ಮುಖಾರಿ—ಝಂಪೆ

ನಾನೇಕೆ ಬಡವನು ನಾನೇಕೆ ಪರದೇಶಿ ಶ್ರೀನಿಧಿ ಹರಿಯೆನಗೆ ನೀನಿರುವತನಕ ಪ

ಪುಟ್ಟಿಸಿದ ತಾಯ್ತಂದೆ ಇಷ್ಟಮಿತ್ರನು ನೀನೇ ಅಷ್ಟಬಂಧುವು ನೀನೇ | ಸರ್ವಬಳಗ ನೀನೇ |ಪೆಟ್ಟಿಗೆಯೊಳಗಿನಾ ಅಷ್ಟಾಭರಣನೀನೇ ಶ್ರೇಷ್ಟಮೂರುತಿಕೃಷ್ಣ ನೀನಿರುವತನಕ ೧

ವಿದ್ಯೆಹೇಳುವ ನೀನೇ ಬುದ್ಧಿಕಲಿಸುವ ನೀನೇ ಉದ್ಧಾರಕರ್ತ ಮಮ ಸ್ವಾಮಿ ನೀನೇ | ಮುದ್ದು ಸಿರಿ ಪುರಂದರವಿಠಲ ನಿನ್ನಡಿಯಮೇಲೆ ಬಿದ್ದು ಕೊಂಡಿರುವ ಎನಗೇತರ ಭಯವು

ಈ ಪದದಲ್ಲಿ ಕನಕದಾಸರು ಸರ್ವವೂ ಹರಿಗೆ ಅರ್ಪಿತವೆಂದು ಹೇಳುತ್ತಾರೆ.

ಕೇದಾರಗೌಳ—ಆಟ

ತನುನಿನ್ನದು ಜೀವನನಿನ್ನದು ಅನುದಿನದಲಿ ಬಾಹೋ ಸುಖದುಃಖನಿನದಯ್ಯ ಪ

ಸವಿನುಡಿ ವೇದಪುರಾಣ ಶಾಸ್ತ್ರಗಳು ಕಿವಿಯಿಂದ ಕೇಳುವ ಕಥೆ ನಿನ್ನದೊ | ನವಯೌವನ ಮೋಹನಾಂಗೇರ ರೂಪವ ಕಣ್ಣಿಂದ ಎವೆಯಿಕ್ಕದೆ ನೋಡುವ ನೋಟ ನಿನದಯ್ಯ ೧

ಮಾಯಾಪಾಶದ ಬಲೆಯೊಳಗೆ ಸಿಲ್ಕಿರುವಂಥ ಕಾಯ ಪಂಚೇಂದ್ರಿಯಂಗಳು ನಿನ್ನವು |ಮಾಯಾರಹಿತ ಕಾಗಿನೆಲೆಯಾದಿಕೇಶವರಾಯ ನೀನಲ್ಲದೆನರರುಸ್ವತಂತ್ರರೆ೩

ದೇವರನ್ನು ಹೇಗೆ ಮೆಚ್ಚಿಸಬೇಕೆಂದು ಕನಕದಾಸರು ಕಳವಳ ಪಡುತ್ತಾರೆ.

ರೇಗುಪ್ತಿ

ಆವಪರಿಯಲಿ ನಿಮ್ಮನೊಲಿಸಿ ಮೆಚ್ಚಿಪ ವಿಧವು ಅಣು ಮಾತ್ರ ತೋರದಲ್ಲ ಪ

ದೇವ ದೇವೇಶ ನೀನೆಂದು ನಂಬಿರಲು ಕೃಪಾವಲೋಕನದಿ ಸಲಹೊ ದೇವ ಅ

ಫಣಿರಾಯನಾಸನದಿ ಕುಳಿತಿಹಗೆ ಅರಿವೆಯಾಸನ ನಾನೆಂತ್ಹಾಸಲಿ |

ಘನವಾದ ಗಂಗೆಯನು ಪಡೆದವನಿಗೆ ಕಲಶನೀರನದೆಂತು ಮೈಗೆರೆಯಲಿ |

ತನುವಿನ ಪರಿಮಳವು ಘಮಿ ಘಮಿಪನಿಗೆ ಚಂದನವದೆಂತು ಪೂಸಲಿ |

ಅನವರತ ನಾಭಿಯೊಳು ಶತಪತ್ರವಿಹಗೆ ಮಿಕ್ಕಿನ ಪೂವ ಮುಡಿಸುಲೆಂತೈ ದೇವ ೧

ಒಲಿಸುವುದನರಿಯೆ ಮೆಚ್ಚಿಸುವ ಬಗೆಯರಿಯೆ ಹೊಗಳುವ ಹೊಲಬನ್ನರಿ

ಯೆನು । ತಿಳಿದುದಿಲ್ಲವು ಷೋಡಶೋಪಚಾರದ ಪೂಜೆಗಳೊಂದ ಪರಿಯಾದರೂ । ನೆಲೆಯಗಾಣೆನೊ ನಿಗಮಶಾಸ್ತ್ರ ನವವಿಧಭಕ್ತಿಯೊಳಗೊಂದು ಬಗೆಯಾದರೂ ಅಖಿಲ ಸೇವೆಯೊಪ್ಪಿಕೊಂಡು ಶರಣನ ಸಲಹೊ ನೆಯಾದಿಕೇಶವನೆ ಸ್ವಾಮಿ ಪ್ರೇಮಿ ॥ 5 ॥

ಪುರಂದರದಾಸರು ಹರಿಯ ಈಪರಿ ಸೊಬಗು ಇನ್ನಾವ ದೇವತೆಗಳಲ್ಲೂ ಇಲ್ಲವೆಂದು ಘೋಷಿಸಿದ್ದಾರೆ.

ಕಾಂಬೋಧಿ-ಝಂಪೆ

ಈ ಪರಿಯ ಸೊಬಗಾವದೇವರೊಳು ಕಾಣೆ । ಗೋಪೀಜನಪ್ರಿಯ ಗೋಪಾಲಗಲ್ಲದೆ । ಧೊರೆಯತನದಲಿ ನೋಡೆ ಧರಣಿದೇವಿಗೆರಮಣ । ಸಿರಿಯತನದಲಿ ನೋಡೆ ಶ್ರೀಕಾಂತನೊ । ಹಿರಿಯತನದಲ್ಲಿ ನೋಡೆ ಸರಸಿಜೋದ್ಭವನಯ್ಯ । ಗುರುವುತನದಲಿ ನೋಡೆ ಜಗದಾದಿಗುರುವು । ಪಾವನತ್ವದಿ ನೋಡೆ ಅಮರಗಂಗಾಜನಕ । ದೇವತ್ವದಲಿ ನೋಡೆ ದಿವಿಜರೊಡೆಯ । ಲಾವಣ್ಯದಲಿ ನೋಡೆ ಲೋಕಮೋಹಕನಯ್ಯ । ಆವ ಧೈರ್ಯದಿ ನೋಡೆ ಅಸುರಾಂತಕ । ಗಗನದಲಿ ಸಂಚರಿಪ ಗರುಡದೇವನೆ ತುರುಗ । ಜಗತೀಧರ ಶೇಷಪರ್ಯಂಕಶಯನ । ನಿಗಮಗೋಚರ ಪುರಂದರವಿಠಲಗಲ್ಲದೆ ಮಿಗಿಲಾದ ದೈವಗಳಿಗೀಭಾಗ್ಯವುಂಟೆ ॥ 3 ॥

ವ್ಯಾಸರಾಯರು ಹರಿಯ ವೈಭವವನ್ನು ವಿರೋಧಾಭಾಸವಾಗಿ ವರ್ಣಿಸುತ್ತಾರೆ.

ಕಾಂಬೋಧಿ-ಝಂಪೆ

ಏನು ಬೇಡಲೋ ನಿನ್ನ ದೇವಾಧಿದೇವ ಏನಹುದೋ ನಿನ್ನೊಳಗೆ ಮಹಾನುಭಾವ ॥ ಪ ॥

ಮನೆಯ ಬೇಡಲೆ ವನಧಿಹಾಸಿಗಯು । ವಟಪತ್ರ ವನಿತೆಯರ ಬೇಡಲೆ ಬ್ರಹ್ಮಚಾರಿ ಘನಸಖ್ಯವನು ಬಯಸೆ ನೆನೆದವರ ಮನದಲಿಹೆ ತಿನುವುದಕೆ ಕೇಳುವೆನೆ ನವನೀತಚೋರ ॥ 1 ॥

ವಡವೆಗಳ ಬಯಸೆ ಶಿಖಿಪಿಂಟ ತುಳಸೀಪತ್ರ ಕಡುಸೈನ್ಯವನು ಬಯಸೆ ಗೋಪಾಲನು । ಬಿಡದೆ ರೂಪವ ಬಯಸೆ ನೀಲಮೇಘಶ್ಯಾಮ ಉಡುವುದಕೆ ಕೇಳುವೆನೆ ಸ್ತ್ರೀವಸನಚೋರ ॥ 2 ॥

ಶಕ್ತಿಯನು ಗೋಪಿಕಾ ಸ್ತ್ರೀಯರಲಿ ವ್ರಯಗೈದೆ ಭಕ್ತಿಯನು ಸತ್ಯವಂತರಿಗಿತ್ತಿಹೆ ॥ 3 ॥

ಭಕ್ತರನು ವಂಚಿಸುತ ನೀನು ಬಚ್ಚಿಟ್ಟಿರುವ ಮುಕ್ತಿಕಾಂತೆಯ ಕೊಡು ಸುಖಿಪೆನೋ ಶ್ರೀಕೃಷ್ಣ ॥ 4 ॥

ಭಕ್ತಿಯಿಂದ ಹರಿಯನ್ನು ಪೂಜಿಸಿದರೆ ಹರಿ ಒಲಿಯುವ ಬಗೆಯನ್ನು ಪುರಂದರದಾಸರು ವಿವರಿಸುತ್ತಾರೆ.

ಕಾಂಬೋಧಿ-ಝಂಪೆ

ಹೂವ ತರುವರ ಮನೆಗೆ ಹುಲ್ಲ ತರುವ ।

ಅವ್ವ ಲಕುಮೀರಮಣ ಇವಗಿಲ್ಲ ಗರುವ ॥ ಅ ॥

ಒಂದು ದಳ ಶ್ರೀತುಳಸಿ ಬಿಂದು ಗಂಗೋದಕವು । ಇಂದಿರಾರಮಣ ನಿನಗರ್ಪಿತವೆನಲು । ಒಂದೆ ಮನದಲಿ ಸಿಂಧುಶಯನ ಮುಕುಂದ ಎನೆ । ಎಂದೆಂದು ವಾಸಿಪಾನಾಮಂದಿರದೊಳಗೆ ॥ 1 ॥

ಪರಿಪರಿಯ ಪುಷ್ಪಗಳ ಪರಮಾತ್ಮಗರ್ಪಿಸಿ ಪರಿಪೂರ್ಣನೆಂದು ಪೂಜೆಯನು ಮಾಡೆ । ಪರಮ ಆಸಕ್ತಿಯಲಿ ಸೇವೆಯನು ಮಾಡಿದರೆ ಸರಿ ಭಾಗ ಕೊಡುವ ತನ್ನರಮನೆಯೊಳಗೆ ॥ 2 ॥

ಪಾಂಡವರ ಮನೆಯೊಳಗೆ ಕುದುರೆಗಳ ತಾ ತೊಳೆದ ಪುಂಡರೀಕಾಕ್ಷ
ಹುಲ್ಲನುಣಿಸಿದ । ಅಂಡಜ ವಾಹನ ಶ್ರೀಪುರಂದರವಿಠಲನು ತೊಂಡರಿಗೆ ತೊಂಡನಾಗಿ
ಸಂಚರಿಸುತಿಹನು ॥ 3 ॥

೧೩. ಉಪಾಸನೆ

ಭಕ್ತನು ಸತ್ಕರ್ಮಾನುಷ್ಠಾನಾದಿಗಳಿಂದ ಅಂತಃಕರಣ ನೈರ್ಮಲ್ಯವನ್ನು ಸಂಪಾದಿಸಿ, ವೈರಾಗ್ಯ ಶಮದಮಾದಿಗಳಿಂದ ದೃಢತರವಾದ ದೀಕ್ಷೆ ಪಡೆದು ಸಜ್ಜನರನ್ನಾಶ್ರಯಿಸಿ, ಸದ್ಗುರುಗಳನ್ನು ಹೊಂದಿ ಶಾಸ್ತ್ರಶ್ರವಣ ಮನನಾದಿ ಜ್ಞಾನಕಾರ್ಯಗಳಲ್ಲಿ ರತನಾದಂತೆಲ್ಲ, ಅವನಲ್ಲಿ ಭಕ್ತಿಯು ಶುದ್ಧವಾಗಿ ಬೆಳಗಿ ಅವನ ಮನಸ್ಸನ್ನು ಕರಗಿಸುವುದು. ಅದರ ಫಲವಾಗಿಯೇ ಅವನು ಭಗವಂತನಲ್ಲಿ ನಾನಾವಿಧವಾಗಿ ಮೊರೆಯಿಟ್ಟು ಪ್ರಾರ್ಥನೆ ಮಾಡುವನು. ಈ ಪ್ರಾರ್ಥನೆ ಬರಿಯ ತೋರಿಕೆಗಾಗಲೀ, ರಸಾಲಂಕಾರ ಪ್ರದರ್ಶನ- ಕ್ಕಾಗಿಯಾಗಲೀ ಆಗದೆ ಅವನ ಹೃದಯದಿಂದ ಮಿಡಿದೆದ್ದು ಸರ್ವದಾ ಅವನನ್ನು ಬ್ರಹ್ಮಾನುಚಿಂತನೆಯಲ್ಲೇ ಹೊಗಿಸುವುದು. ಈ ಸತತ ಬ್ರಹ್ಮಾನುಚಿಂತನೆಯಿಂದ ಭಕ್ತನು ಉಪನಿಷಾದಿಗಳಲ್ಲಿ ಉಕ್ತವಾದಂತೆ ಅತಿಗೂಢವಾದ ಪ್ರಮೇಯಗಳನ್ನು ಗ್ರಹಿಸಿಕೊಂಡು ಅದರಂತೆ ಉಪಾಸನೆ ಮಾಡುವನು. ಧ್ಯಾನಪ್ರಕಾರವಾದ ಈ ಉಪಾಸನಾ ವಿವರವನ್ನು ಸ್ವಯಂ ಅವರೋಹಿಗಳಾಗಿದ್ದುದರಿಂದ ಹರಿದಾಸರು ಅತ್ಯಂತ ವಿಸ್ತಾರವಾಗಿ ಬಣ್ಣಿಸಿರುವರು. ಇತರ ಹರಿದಾಸರುಗಳಿಗೂ ಕನ್ನಡ ಹರಿದಾಸರುಗಳಿಗೂ ಇದೇ ಅಂತರ. ಈ ಸೂಕ್ಷ್ಮ ಉಪಾಸನಾ ವಿವರವು ಇತರ ದಾಸರುಗಳಿಗೆ ತಿಳಿದೇ ಇರಲಿಲ್ಲ. ಅಂತೆಯೇ ಅವರು ಈ ಆ ವಿಷಯಕ್ಕೇ ಕೈ ಹಾಕಲೇ ಇಲ್ಲ. ಕನ್ನಡ ಹರಿದಾಸರುಗಳು ವರ್ಣಿಸಿರುವ ಈ ಉಪಾಸನಾ ಸ್ವಲ್ಪ ಪ್ರವೇಶವಿರತಕ್ಕವರಿಗೆ ಗುರ್ವನುಗ್ರಹದಿಂದ ಅರ್ಥವಾಗುವಂತಿದೆ. ಬರಿಯ ಪಾಂಡಿತ್ಯದಿಂದ ಅದು ಅರ್ಥವಾಗಲಾರದು. ಉಪಾಸನೆಯ ಗಹನತೆಯನ್ನು ಪುರಂದರದಾಸರು ಈ ಕೆಳಗಿನ ಪದದಲ್ಲಿ ಹೇಳಿರುವರು.

ಧನಶ್ರೀ-ಆದಿ

ಪಿಂಡಾಡದೊಳಗಿನ ಗಂಡನ ಕಾಣದೆ ಮುಂಡೇರಾದರು ಪಂಡಿತರೆಲ್ಲ ॥ ಪ ॥

ಕೂಡಲಿಶಯನ ಪದ ಪುಂಡರೀಕವನು ಹೃತ್ಪುಂಡರೀಕದೊಳು ಕಂಡು ಭಜಿಸದೆ ॥ ಅ ॥

ಆಧಾರ ಮೊದಲಾದ ಆರು ಚಕ್ರಮೀರಿ ನಾದಬಿಂದು ಕಳೆಯದ । ಬಳಿಕ ಶೋಧಿಸಿ ಸುಧೆಯ ಪ್ರಸಾದವನುಣದೆ ವಾದಿಸಿ ಸಭೆಯೊಳು ಒಂದನು ತಿಳಿಯದೆ ॥ 1 ॥

ನಾದದೊಳಗೆ ಸುನಾದದಿ ಓಂಕಾರ ಪದವ ಚಿತ್ತಪರಿಣಾಮವಾಗದೆ । ವೇದಾಂತರೂಪ ಚಿದ್ರೂಪವ ಓದಿಸಿ ಮನದೊಳು ಒಂದನ್ನು ಅರಿಯದೆ ॥ 2 ॥

ನವನಾದ ಮಧ್ಯದಿ ಪವನಸುತ್ತಿಪಣೆ ಶಿವನ ತ್ರಿಪುಟದಿ ಸ್ಥಿರವಾಗದೆ । ಭವರೋಗ ವೈದ್ಯನ ಧ್ಯಾನವ ಮಾಡಿ ಸರ್ವಭುಕ ಶ್ರೀಪುರಂದರವಿಠಲನ ಭಜಿಸದೆ ॥ 3 ॥

ಹರಿಮುಹಿಮಾಪರವಾದ ಶಾಸ್ತ್ರಜ್ಞಾನ ಸಂಪಾದಿಸಿದ ಮೇಲೆ ಸಾಧಕನು ಗುರ್ವಾಜ್ಞಾಪ್ರಕಾರವಾಗಿ ಮೊಟ್ಟ ಮೊದಲಿಗೆ ಅಭ್ಯಾಸಕ್ಕಾಗಿ ಒಂದು ಭಗವತ್ಪ್ರತಿಮೆಯನ್ನು ತಂತ್ರಸಾರೋಕ್ತಕ್ರಮದಿಂದ ಅರ್ಚನೆ ಮಾಡಬೇಕು. ಆ ಪ್ರತಿಮಾಸ್ಥ ಹರಿಯನ್ನು ಚಿಂತಿಸುತ್ತಾ ಅದರ ಪ್ರತೀಕವು ಮನಸ್ಸಿನಲ್ಲಿ ನಿಲ್ಲುವುದು. ಪ್ರಾಣಾಯಾಮಾದಿಗಳಿಂದ ಅಂತರ್ಮುಖಿಯಾದಾಗಲೆಲ್ಲ ಈ ಪ್ರತೀಕವು ಮನಸ್ಸಿಂದ ಮುಂದೆ ಬಂದು ನಿಲ್ಲುವುದು. ಇದು ವಾಸನಾಮಯ ಪ್ರತಿಮೆಯು. ಇದೆ ಮುಂದೆ ಬಿಂಬಾಪರೋಕ್ಷಕ್ಕೆ ಸೋಪಾನವು. ಅನಂತರ ಚಕ್ರಾಬ್ಜಾದಿಕ ಮಂಡಲದ ವಿವರದಂತೆ ಹೃದಯಮಂದಿರದಲ್ಲಿ ಹರಿಯ ಮಂಟಪಾದಿಗಳನ್ನು ಧ್ಯಾನಿಸಿ, ಆತ್ಮನ ಅಂದರೆ ಜೀವನ ಸ್ವರೂಪವನ್ನು ಅದರ ಸ್ಥಾನದಲ್ಲಿ ಚಿಂತಿಸುತ್ತಾ, ಅದರ ಬಿಂಬಮೂರ್ತಿಯನ್ನು ಸತತ ಚಿಂತಿಸಬೇಕು. ಇದೇ ಉಪಾಸನೆಯ ರಹಸ್ಯವು. ಭಗವಂತನ ಈ ಮೂರ್ತಿಯೇ ಬ್ರಹ್ಮಾಂಡಸ್ಥಿತ, ಸರ್ವತ್ರವ್ಯಾಪ್ತ ಹರಿಯೆಂದೂ, ವಿಶ್ವತೈಜಸಾದಿ ಭಗವನ್ಮೂರ್ತಿಗಳೂ ಇದರಿಂದ ಅಭಿನ್ನರೆಂದೂ, ಇದು ಸಚ್ಚಿದಾನಂದಾತ್ಮಕವಾದುದೆಂದು ಚಿಂತಿಸಬೇಕು. ಭಗವಂತ ಈ ಧ್ಯಾನಕ್ಕೆ ಒಗುಟ್ಟು ಅನುಗ್ರಹ ಮಾಡಿದನೆಂದರೆ ಬಿಂಬಾಪರೋಕ್ಷವಾಗುವುದು. ಅಂದರೆ ತನ್ನ ಸ್ವರೂಪದರ್ಶನವೂ, ಬಿಂಬಮೂರ್ತಿಯಾದ ಹರಿಯ ಸಾಕ್ಷಾತ್ಕಾರವೂ ಹೃದಯಕಮಲದಲ್ಲಿ ಆಗುವುದು. ಅದೀಗ ಜೀವನ್ಮುಕ್ತಿ, ಬದುಕಿದುದರ ಧ್ಯೇಯ, ಸಾಧಕನ ಸಿದ್ಧಿ, ಜೀವನ ಸಾರ್ಥಕ್ಯ. ನಾರಾಯಣೋಪನಿಷತ್ತಿನಲ್ಲಿ ಹೇಳಿದಂತೆ ನಾಭ್ಯುಪರಿಸ್ಥ ಹೃದಯಾದೋಮುಖವಾದ ಪದ್ಮಕೋಶಸ್ಥನಾದ ಶ್ರೀಹರಿಯ ದರ್ಶನವಾದ ಕೂಡಲೆ ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೆ ಸರ್ವಸಂಶಯಾಃ ಕ್ಷೀಯಂ ತೇ ಚಾಸ್ಯಕರ್ಮಾಣಿ ತಸ್ಮಿನ್‌ದೃಷ್ಟೇಃ ಪರಾವರೆ ಎಂಬ ವಾಕ್ಯಾನುಸಾರ ಕರ್ಮಬಂಧವು ಕಡಿಯುವುದು. ಸರ್ವ ಸಂಶಯವೂ ಪರಿಹಾರವಾಗುವುದು. ಇದೇ ಅಪರೋಕ್ಷಜ್ಞಾನವೆನಿಸುವುದು. ಇದಾದ ನಂತರವೂ ಹರಿಯು ವಿಶೇಷಾನುಗ್ರಹಕ್ಕಾಗಿ ಸಾಧಕನು

ಸತ್ಕರ್ಮಾನುಷ್ಠಾನಪರನಾಗಿ, ಭಗವದ್ಭಜನರತನಾಗಿದ್ದು ಪ್ರಾರಬ್ಧಕರ್ಮಾನುಭವ ಮಾಡುತ್ತಿರುವನು. ಜೀವಾಚ್ಛಾದಿಕಾ ಎಂದರೆ, ಅನಾದಿಕಾಲದಿಂದಲೂ ಜೀವನಿಗೆ ಅಂಟಿಕೊಂಡು ಬಂದ ಮಾಯಾಬಂಧ ಮತ್ತು ಇದನ್ನು ಹಾಗೆಯೇ ಇರಗೊಟ್ಟು ಪರಮಾತ್ಮನ ಇಚ್ಛೆಯೆಂಬ ಪರಮಾಚ್ಛಾದಿಕಾ ಎಂಬೀ ಎರಡು ತೆರೆಗಳು ಅವತರಣವಾದೊಡನೆ ಮಹಾಪ್ರಳಯ ಕಾಲದಲ್ಲಿ ಬ್ರಹ್ಮದೇವರೊಡನೆ ಈ ಜೀವನು ವಿರಜಾನದೀ ಸ್ನಾನದಿಂದ ಲಿಂಗದೇಹ ಮುಕ್ತನಾಗಿ ಹರಿಸಾನಿಧ್ಯವನ್ನೈದುವನು. ಇದೇ ಮೋಕ್ಷವು. ಮುಕ್ತಿಯೆಂದರೆ ತನ್ನ ಸ್ವರೂಪದ ಆನಂದವನ್ನೂ ಸವಿಯುವುದು. ಇದಕ್ಕೆ ಲಿಂಗದೇಹವು. ಪ್ರತಿಬಂಧಕ- ವಾದ್ದರಿಂದ ಸಂಸಾರವಸ್ಥೆಯಲ್ಲಿ ಇದು ಸಾಧ್ಯವಾಗಲಾರದು. ಮುಕ್ತಿರ್ಹಿತ್ವಾನ್ಯಥಾ ರೂಪಂ । ಸ್ವರೂಪೇಣ ವ್ಯವಸ್ಥಿತಿಃ ॥ ಎಂಬ ಭಾಗವತ ವಚನಾನುಸಾರ, ಜೀವಿಗೆ ತನ್ನ ನಿಜ ಸ್ವರೂಪದ ಆನಂದನುಭವವು ಪ್ರಾಪ್ತವಾಗಿ ಭಗವಂತನ ಸೇವೆಯಲ್ಲಿ ಅನಂತಕಾಲದವರೆಗೂ ಅವನು ಸುಖಿಸುತ್ತಿರುವನು. ಉಪಾಸನಾಭಾಗದ ಕೆಲವು ವಿವರಗಳು ಹೀಗಿವೆ.

ಮಧ್ಯಮಾವತಿ-ಧ್ರುವತಾಳ

ಸಾಮಾನ್ಯ ಧ್ಯಾನವಿದು ಮಾನ್ಯವಂತರು ಕೇಳಿ । ತಾಮಸಭಕ್ತಜನಕೆ ಪೇಳಸಲ್ಲ । ಸ್ವಾಮಿಭೃತ್ಯನ್ಯಾಯ ಬಲ್ಲ ತಾತ್ತ್ವಿಕರಿಗೆ । ಈ ಮಹಾಮಹಿಮೆಯು ತಿಳಿವದೋ । ಕಾಮ ಕ್ರೋಧಗಳಳಿದು ತನ್ನ ಚಿತ್ತಕ್ಕ ಸುಖ । ಸ್ತೋಮವಾಗುವ ಸೂಚನೆ ಗ್ರಹಿಸಿ । ನೇಮವಾದ ಭೋಜನ ನಿದ್ರಾ ನಾನಾವ್ಯಾಪಾರ । ಭೂಮಿವೊಳಗೆ ನಿರ್ಭಯವೇ ಸರಿ । ಕೋಮಲನಾಗಿ ಮಾಡಿ ಸ್ವಧರ್ಮ ಬಿಡದಲೆ । ಯಾಮಯಾಮಕೆ ಹರಿನಾರಾಯಣ । ರಾಮಾನಂತ ಗೋವಿಂದ ಅಚ್ಯುತ ಕೃಷ್ಣನೆಂಬೋ । ನಾಮಾಮೃತದಲ್ಲಿ ಓಲಾಡುತ । ಹೇಮರಜತರತುನ ಧನಧಾನ್ಯ ಪಶುವ್ರಾತ । ಧಾಮ ಸತಿಸುತರು ಕೇವಲವಾಗಿ । ತಾ ಮುನಿದು ಪೋಗದೆ ನಶ್ವರ ದೇಹದಲ್ಲಿ । ಪ್ರೇಮ ಅನವರತ ಇದ್ದದರೊಳು । ಕಾಮ ಅನುದಿನ ಹೊರ್ತು ಶ್ರೀರಮಣನ್ನ । ಪಾದ ತಾಮರಸದಲ್ಲಿ ಏಕಾಗ್ರದಿ । ಪ್ರೇಮ ಉಳ್ಳವನಾಗಿ ಹರಿ ಪರ ಪರಬೊಮ್ಮ । ಕಾಮಾದಿಗಳೊಡೆಯ ಸುಲಭನೆಂದು । ಸಮಸ್ತವೇದಾತೀತ ನಿರವಧಿಕ ನಿಗಮ । ತಮ ಸರ್ವ ಭವತಾರಕನೀತಾ ನಿತ್ಯ । ನಿಷ್ಕಾಮದಲ್ಲಿಗೆ ಮನಸು ಮಾಡಿ ಪ್ರಮೋದದಿಂದ । ರೋಮಾಂಚನಮಯ ಸ್ನೇಹದಿಂದ ಬಿಡದೆ । ಯಾಮಿನಿನಾಥವರ್ಣ ವಿಜಯವಿಠಲರೇಯ । ಕಾಮಿಸಿದ ಫಲಕೊಡುವನು ಭಕ್ತರಿಗೆ ।

ಮಠ್ಯತಾಳ

ತನಗಿಷ್ಟವಾದ ಪ್ರತಿಮೆಯನು ಸುಲ । ಕ್ಷಣವುಳ್ಳದೊಂದು ಕ್ಷಿಪ್ರಮತಿಯಲ್ಲಿ । ದಣಿ ದಣಿ ನೋಡುತ್ತ ಮುಂಭಾಗದಲ್ಲಿ ಇಟ್ಟು । ಮಣಿಮಯ ಮಕುಟ ಕಾಂಚನ । ತೊಡಗಿಯ

ತೊಡಿಸಿ । ಗುಣ ಗುಣ ಪರಿಪೂರ್ಣನಾಕಾರನೆಂದು । ಇನಿತು ಚಿಂತಿಸಿ ಪ್ರತೀಕದೊಳಗೆ ಇದೆ । ನೆನೆದು ತದ್ಗತವಾದ ಮೂರ್ತಿಯ ಮಧ್ಯದಲ್ಲಿ । ಅನಿಲದೇವನ ಸ್ಮರಿಸಿ ಇದರಂತೆ ಯೋ । ಚನೆ ಮಾಡು ವೊಳಗೆ ಚಿನುಮಯ ಕಾಯನ । ನಿನಗೆ ನೀನೆ ತಿಳಿ ದ್ವಯಬಿಂಬವ ತರುವಾಯ । ಸನುಮಾರ್ಗವನ್ನೆ ಸುಜ್ಞಸದಿಂದಲಿ । ಇನಿತು ಗೋಳಕವೆಂದು ನುಡಿಯದಿರೋ ಮಂದ । ಜನರಿಗೆ ಮಾತುರ ಪೇಳಿದೆ ನೋಡಿರೋ । ಘನ ಜ್ಞಾನಿಗಳೊಡೆಯ ವಿಜಯವಿಠಲರೇಯ । ಅನುದಿನ ಯೋಗ್ಯರಿಗೆ ಗೋಚರಿಸುವ ಕಾಣೋ ।

ತ್ರಿವಿಡಿತಾಳ

ಎದುರಿಲಿ ಮೂತಿ4ಯ ಇಟ್ಟು ಪೂಜಿಸಿ ತನ್ನ । ಸದಮಲ ದೃಷ್ಟಿಲಿ ನೋಡಿ ನೋಡಿ । ಪದಮೂಲ ಪಿಡಿದು ಕಿರೀಟ ಪರ್ಯಂತ । ಇದೆ ಇದೆ ಪರಿಯಲ್ಲಿ ನಿರೀಕ್ಷಿಸುತ್ತ । ಸುಧೆಯನ್ನು ಕುಡಿದಂತೆ ಇದ್ದ ಮೂರ್ತಿಯ ಬಾಹಿ । ರದಧ್ಯಾನ ಚೆನ್ನಾಗಿ ನಿಲ್ಲಲಾಗಿ । ಒದಗಿ ವಾಸನಾಮಯ ಜಡದಿಂದ ನಿರ್ಮಾಣ । ಹೃದಯದೊಳಗೆ ಬೇಗ ಮಾಡಿಕೊಂಡು । ಅದನೆ ಪೂಜಿಸಬೇಕು ಮರಳಿ ಮರಲಿ ಚಿತ್ತದಲಿ । ನಿಂದಲ್ಲಿ ಕುಳಿತರೆ ಮಲಗಿದರೆ । ಇದೆ ಇದೆ ಅಭ್ಯಾಸ ಮಾಡಲು ಬಲು ಜ । ನ್ಮದಲ್ಲಿದ್ದ ವಾಸನಾಮಯ ಮೂರುತಿ । ಪದೇ ಪದಿಗೆ ಸಾಂಗೋಪಾಂಗದಿಂದಲಿ ಪೊಳೆವ । ಇದುರಲಿ ಇಟ್ಟಿದ್ದ ದ್ರವ್ಯದಂತೆ । ಮದನ ಜನಕ ನಮ್ಮ ವಿಜಯವಿಠಲರೇಯ । ಇದನೆ ಹಿಂದು ಮಾಡಿ ಹೊಸಪರಿ ತೋರಿಸುವ ।

ಅಟತಾಳ

ನಿರುತಹಾಹನಮೂರ್ತಿ ಪೂಜಿಸಲು ಕಾಲ । ಪರಿಪತ್ವ ಬರಲಾಗಿ ಹರಿಕರುಣದಿಂದ ಗುರು ಕೃಪೆ । ಮಾಡುವ । ಸರನೆ ಈ ಮೂರ್ತಿ ಇವನ ಕಣ್ಣಿಗೆ ಗೋ । ಚರಿಸೋದು ಈತನೆ ತೋರುವ ಪ್ರಾಜ್ಞಾಕ್ಷಿಪೆ । ಸರುಳ್ಳಆತ್ಮಬಿಂಬ । ನಾಮಕನೆಂದು । ಕರೆಸುಕೊಳ್ಳುತಲಿಪ್ಪ ಕಡೆ ಮನೆ ಘೊರೆ ಎಂದು । ಶರಣರಿಗೆ ಮಿರುಗುವ ಅಂತರಂಗದಲ್ಲಿ । ಅರಿದೆ ಅವನ ಯೋಗ್ಯತವನ್ನೆಪಸರಿಸಿ । ಪರಮಪುರುಷ ನಮ್ಮ ವಿಜಯವಿಠ್ಠಲ ಮುಂದೆ । ಕುರುಹ ತೋರುವ ನಿಜಸ್ವರೂಪದೇಹವನ್ನಾ ।

ಆದಿತಾಳ

ಜೀವಾಂತರ್ಗತವಾದ ಮೂರ್ತಿಯೆ ತಾನಾಗಿ । ಆವಾಗಪೊಳಿಯಲು ಸಂಚಿತಗಾಮಿ ಕರ್ಮ । ಬೇವೋದು ಅನುಭವಿಪ ಪ್ರಾರಬ್ಧ ಕರ್ಮಂಗಳೆಲ್ಲ । ನೋವು ಸುಖವಾದರೂ ಉಂಡು ತೀರಿಸಬೇಕು. ಆ ವಿರಜಾ ನದಿಯಲ್ಲಿ ಮುಳುಗುವ ಪರ್ಯಂತ । ತ್ರಿವಿಧ ಎನಿಸುವ ದೇಹ ನಾಶವಿಲ್ಲ । ದೇವನ ಲೀಲೆಯೊಂತೋಧಿಕಾರ ಭೇದದಿಂದ । ತಾ ಒಳಗಿದ್ದು ಸರ್ವ ಬಗೆಯನ್ನು ಮಾಡಿಸುವ । ಪಾವನ ಜೀವಕ್ಕೆ ತಮಸ್ಸು ಎಂದಿಗೂ ಇಲ್ಲ ।

ಕೋವಿದರು ಕೇಳಿ ಕೌತುಕವೆನ್ನದಿರಿ । ಶ್ರೀವಲ್ಲಭ ನಮ್ಮ ವಿಜಯವಿಠಲರೇಯ । ಜೀವರ ಸ್ವರೂಪದಂತೆ ಧ್ಯಾನವ ಕೊಡುವ ।

ಜೊತೆ

ಆಚಾರವಂತರಾಗಿ ಧ್ಯಾನಮಾಡಲಿ ಬೇಕು ।

ರೇಚನಪ್ರಿಯ ವಿಜಯವಿಠಲನ್ನ ಮೂರುತಿಗಳು ।

ಧ್ಯಾನೋಪಾಸನೆಗೆ ಚಕ್ರಾಬ್ಜಾದಿಮಂಡಲ ಅತ್ಯವಶ್ಯ. ಬ್ರಹ್ಮಾಂಡದಲ್ಲಿ ಸರ್ವತ್ರವ್ಯಾಪ್ತನಾದ ಹರಿಯ ರೂಪಗಳನ್ನು ಹೃದಯದಲ್ಲಿ ಚಿಂತಿಸುವ ಕ್ರಮ ಇದರಲ್ಲಿರುವುದು. ವಿಜಯದಾಸರು ಇದರ ರಚನಾಕ್ರಮವನ್ನು 'ಕಂಕಣಾಕಾರ' ಸುಳಾದಿಯಲ್ಲಿ ವಿವರಿಸಿರುವರು. ಇದು ಅತಿ ಪ್ರಮೇಯಪುಂಜವಾದ ಸುಳಾದಿಯು. ಕನ್ನಡ ಹರಿದಾಸ ಸಾಹಿತ್ಯದಲ್ಲಿ ಈ ಸುಳಾದಿಯು ಒರೆಗಲ್ಲಿನಂತಿದೆ. ಇದರ ರಹಸ್ಯವನ್ನರಿತು ಚಕ್ರಾಬ್ಜಾದಿ ಮಂಡಲವನ್ನು ರಚಿಸುವುದು ಈಗ ಅವಶ್ಯವೆಂದೆ ಹೇಳಬೇಕು. ಹಿಂದೆ ಹರಿದಾಸ ಸಾಹಿತ್ಯ ಜೀವಂತವಿದ್ದಾಗ ಜ್ಞಾನಿಗಳಾದ ದಾಸರುಗಳು ಈ ಮಂಡಲವನ್ನು ರಚಿಸುತ್ತಿದ್ದರು. ಅದೇ ಈಗ ಕೆಲವೆಡೆಗಳಲ್ಲಿ ಕಾಯ್ದಿಡಲ್ಪಟ್ಟಿದೆ. ಅದರಲ್ಲಿ ಅನೇಕ ಸ್ಥಳಗಳಲ್ಲಿ ಅನೇಕ ದಳಗಳ ರಚನೆಯೂ, ಆ ದಳಗಳಲ್ಲಿ ವಿವಿಧ ಭಗವದ್ರೂಪ ಚಿಂತನಕ್ರಮವೂ ಉಕ್ತವಾಗಿದೆ.

ಭೈರವಿ-ಧ್ರುವ

ಕಂಕಣಾಕಾರವನ್ನು ಬರೆದು ಅದಕೆ ಮಧ್ಯ । ಓಂಕಾರ ಎರಡು ಎಡಬಲದಿ ರಚಿಸಿ । ಶಂಕೆ ಇಲ್ಲದೆ ನಡುವೆ ಘೃಣಿ ಎಂದು ಲಿಪಿಸಿ ಮೀ । ನಾಂಕನಯ್ಯನ ಪೀಠಸ್ಥಳವಿದೆಂದು । ಬಿಂಕದಲಿ ಸ್ವರದೊಳಗೆ ಕಡಿಯಣ ಸ್ವರವೆ ಎರಡಾ । ಲಂಕಾರವನೆ ಮಾಡಿ ಅದರ ಬಳಿಯ । ಕಂಕಣಾಕಾರವನ್ನು ಒಳಗೆ ಮಾಡಿಕೊಂಡು । ಮಂಕುಮತಿಯ ತೊರೆದು ತ್ರಿಕೋಣ ಸುತ್ತಿಸಿ । ಶ್ರೀಂಕಾರ ಇಚ್ಛಾಶಕ್ತಿ ಕ್ಲೀಂಕಾರ ಕ್ರಿಯಾಶಕ್ತಿ । ಹ್ರೀಂಕಾರ ಜ್ಞಾನ ಶಕ್ತಿ ಮೂರು ಮೂಲಿಗೆ ಬರಿಯೇ । ಪಂಕಜಾಪಾಣಿಯ ಶ್ರೀಭೂದುರ್ಗಾನಾಮಕಳು । ಪಂಕಜಾಕ್ಷನರೂಪ ಮೂರು ಉಂಟು । ಕಂಕಣಾಕಾರ ಮರಳೆ ತ್ರಿಕೋಣ ಮೇಲೆ ಬರೆದು । ಸಂಕೋಚವಾಗಿ ಇದೆ ದ್ವಿತೀಯ ವಲಯ । ಪಂಕಜ ಮಿತ್ರಸೋಮ ಅಗ್ನಿ ಜನರನಾಗ । ಕಂಕಣ ಅನಲ ವರುಣ ದಿಕ್ಕಿಗೆ ರಚಿಸಿ । ಕಿಂಕರ ಜನಪಾಲ ವಿಜಯವಿಠ್ಠಲ ಅಕ । ಳಂಕನ ಭಜಿಸುವುದು ಹೃದ್ಯಯದಲ್ಲಿ ತಿಳಿದು ।

ಮಠ್ಯತಾಳ

ಕರಿ, ಅಜ, ರಥವೀಧಿ ಎಂದೆಂಬವೆ ಮೂರು । ಬರೆದು ಇದಕೆ ಹನ್ನೆರಡು ರಾಶಿಗಳು ವಿ । ಸ್ತಾರವಾಗಿ ಉಂಟು ಎರಡರದೊಂದು ಕಡೆ । ಅರಿವದು ಸ್ಥಿಮಿತ ಸಮಗತಿತ್ವರಗತಿ ಸೂರ್ಯನ್ನ । ಎರಡು ನಾಲ್ಕು ಕೋಣೆ ವಿರಚಿಸಿದರೆ ಮೇಲೆ । ಮರುಳೆ ಮಧು ಮಾಧವ

ಕರಿಸುತ ಋತುವೊಂದೂ । ಬರೆದು ಪ್ರಣವ ವಿವಿರ ಹೃದಯದಲ್ಲಿ ನಮ । ಸ್ಮರಿಸು ಜ್ಞಾನಾತ್ಮನೆಂದು .... ।

ತ್ರಿವಿಡಿತಾಳ

ಪ್ರಣವ ನಾರಾಯಣ ಹರಿ ವಾಸುದೇವ ದ್ರು । ಹಿಣ ಗಾಯಿತ್ರಿ ಮಾತೃಕಾ ಪುರುಷ ವಿಷ್ಣು । ಇನಿತು ಮಂತ್ರವರ್ಣದೇವತೆಗಳು ಸಂ । ದಣಿಸಿ ಇಪ್ಪರು ಎಂಟು ದಿಕ್ಕಿನಲ್ಲಿ । ವನಜ ಕನ್ನಿಕೆ ದಳ ಇಂದರಾದಿಗಳ ಬಗೆಯ । ಮಿನುಗುವ ನಾನಾರೂಪವನೆ ಧರಿಸಿ । ಗುಣಿಸು ಈ ಪರಿಯಲ್ಲಿ ಚಕ್ರಾಬ್ಜಮಂಡಲ । ಎಣಿಕೆ ಮಾಡು ಮೇಲೆ ಅಧಿಕವಾಗಿ । ಗುಣಸಂಪೂರ್ಣ ನಮ್ಮ ವಿಜಯವಿಠಲರೇಯ । ತನುವಿನೊಳಗೆ ಇಂತು ನಿಂತು ಪರಿಪಾಲಿಪ ।

ಜೊತೆ

ಸಕಲಾಭರಣದಿಂದ ಒಪ್ಪುವ ಸಿರಿಕಾಂತ ।

ನಿಖಿಲೇಶ ವಿಜಯವಿಠಲ ಶೇಷಗಿರಿರಾಯ ।

ಉಪಾಸನಾಕ್ರಮವನ್ನೆಲ್ಲಾ ಸಂಗ್ರಹಿಸಿ ವಿಜಯದಾಸರು ಹೇಳಿದ್ದಾರೆ.

ಕಾಂಬೋಧಿ-ಝಂಪೆ

ಧ್ಯಾನವನು ಮಾಡು ಬಿಂಬಮೂರುತಿಯ ॥ ಪ ॥

ಆನಂದದಿಂದಲಿ ಕುಳಿತು ಅಂತರಂದಲಿ ॥ ಅ ॥

ಸದಾಚಾರವಾಗಿ ದ್ವಾದಶ ಗುರುಗಳಿಗೆರಗಿ । ಮುದದಿಂದ ಮೂಲಮಂತ್ರವನು ಜಪಿಸಿ । ಸದಮಲ ಭಕುತಿಯಲಿ ದೇಶ ಸ್ಥಿತಿಯನೆ ತಿಳಿದು । ಪದುಮಾಸನವ ಹಾಕಿ ಪರಮ ವಿಶ್ವಾಸದಲಿ ॥ 1 ॥

ಅಂಗವನು ಚಲಿಸದೆ ಚೆನ್ನಾಗಿ ದೃಢವಾಗಿ । ಕಂಗಳನೆ ಮುಚ್ಚಿ ಇಂದ್ರಿಯಗಳನೆ ತೆರದು । ಮಂಗಳ ಶೋಭಿತ ಅಖಂಡ ಧ್ಯಾನದಂ । ತರಂಗದೊಳಗೆ ನಿಲಿಸಿ ಎಲ್ಲವನು ಕಾಣೋ । ॥ 2 ॥

ಭಗವದ್ರೂಪಗಳೆಲ್ಲ ಒಂದು ಬಾರಿ ಸ್ಮರಿಸಿ । ಮಗುಳೆ ಪರಮ ಗುರುವಿನ ಮೂರ್ತಿಗೆ । ತೆಗೆದು ಆಹ್ವಾನ ಮಾಡಿ ಅಲ್ಲಿಂದ ಹರುಷದಿ । ಸ್ವಗುರು ಬಿಂಬಮೂರ್ತಿಯಲ್ಲಿ ಐಕ್ಯವನು ಮಾಡು । ॥ 3 ॥

ತಿರುಗಿ ಮೆಟ್ಟಿಕೆ ಮೂರುವೇಗದಿಂದಲಿ । ನಿನ್ನಲ್ಲಿರುವ ಮೂರ್ತಿಯಲ್ಲಿ ಚಿಂತನೆ ಮಾಡೋ । ಭರದಿಂದ ಎಲ್ಲವನ್ನು ತಂದು ಹೃದಯದಲ್ಲಿ । ಸ್ಥಿರವಾಗಿ ಇಪ್ಪ ಮೂರುತಿಯೊಡನೆ ಕಲೆಸು । ॥ 4 ॥

ಆತನೆ ಬಿಂಬಮೂರುತಿಯೆಂದು ತಿಳಿದುಕೋ । ಆ ತರುವಾಯ ನಾಡಿಗಳ ಗ್ರಹಿಸಿ । ಆ ತೈಜಸನ ತಂದು ವಿಶ್ವಮೂರ್ತಿಯಲ್ಲಿ । ಪ್ರೀತಿಯುಳ್ಳವನಾಗಿ ಪತಿಕರಿಸು ಮರುಳೆ ॥ 5 ॥

ಜ್ಞಾನ ಪ್ರಕಾಶದಲಿ ಇದ್ದು ನಿನ್ನ ಹೃದಯ ಸ್ಥಾನದಲಿ ಅಷ್ಟದಳ ಕಮಲ ಮಧ್ಯ । ಶ್ರೀನಿವಾಸಮೂರ್ತಿ ನಿಲ್ಲಿಸಿ ಬಾಹ್ಯದಲಿ ಏನೇನು ಪೂಜೆಯ ಉಳ್ಳುದನು ಮಾಡೋ ॥6॥

ಗುಣಸಾಲ್ಕರಿಂದಲಿ ಉಪಾಸನವನೆ ಮಾಡು ಕ್ಷಣ ಕ್ಷಣಕೆ ಹರಿ ಪಾದವನು ನೋಡುತ । ಅಣುರೇಣು ಚೇತನಾಚೇತನಕೆ ನೇಮಕ ಫಣಿಶಯನನಲ್ಲದೆ ಮತ್ತೊಬ್ಬರಿಲ್ಲವೆಂದು ॥7॥

ಮಮತೆಯನ್ನು ತೊರೆದು ಮೇಲೊಂದಪೇಕ್ಷಿಸದೆ ಸಮ ವಿಷಮ ತಿಳಿದೊಂದೆ ಭಕುತಿಯಲ್ಲಿ । ಸಮಾಧಿಗೊಳಗಾಗಿ ದಿವ್ಯ ದೃಷ್ಟಿಲಿ ಸರ್ವಕ್ರಮ ಅನುಕ್ರಮದಿಂದ ಭರಿತ ಭಾವುಕನಾಗೋ ॥8॥

ಈ ಪರಿ ಧೇನಿಸಲು ದೇವ ಕರುಣವ ಮಾಡೆ । ಪಾಪ ಸಂಚಿತವು ಪ್ರಾರಬ್ಧ ನಾಶ । ಅಪರೋಕ್ಷಿತನಾಗಿ ತನ್ನ ಯೋಗ್ಯತೆಷ್ಟು ಗೋಪಾಲ ವಿಜಯವಿಠ್ಠಲನೊಲಿವನಾ ॥ 9 ॥

೧೪. ಸಾಕ್ಷಾತ್ಕಾರ

ಹೀಗೆ ಉಪಾಸನೆ ಮಾಡುವ ಭಕ್ತರನ್ನು ಉದ್ಧರಿಸಬೇಕೆಂಬ ಇಚ್ಛೆಯಿಂದ ಪರಮಾತ್ಮನು ಭಕ್ತನ ಹೃದಯ ಗುಹೆಯಲ್ಲಿ ದರ್ಶನ ಕೊಡುವನು. ಆಗ ಅವನ ಅಂತರಂಗದ ಕದವು ತೆರೆದು ಅವನಿಗೆ ಅಪರೋಕ್ಷಜ್ಞಾನವಾಗುವುದು. ವಿಜಯದಾಸರು ಇದನ್ನು ಕೆಳಗಿನ ಪದದಲ್ಲಿ ವರ್ಣಿಸಿದ್ದಾರೆ.

ಬೇಗಡೆ-ಝಂಪೆ

ಅಂತರಂಗದ ಕದವು ತೆರೆಯಿತಿಂದು । ಎಂತು ಪುಣ್ಯದ ಫಲವು ಪ್ರಾಪ್ತಿ ದೊರಕಿತೊ ಎನಗೆ ॥ಪ॥

ಏಸುದಿನವಾಯಿತೋ ಬೀಗಮುದ್ರೆಯ ಮಾಡಿ । ವಾಸನಾಗಿದ್ದರೂ । ದುರುಳರಲ್ಲಿ । ಮೋಸವಾಯಿತು ಇಂದಿನ ತನಕ ತಮಸಿನ ರಾಶಿಯೊಳಗೆ ಹೊಳಿ ಕಾಣಿಸುತ್ತಿರಲಿಲ್ಲ ॥1॥

ಹರಿಕರುಣವೆಂಬಂಥ ಕೀಲಿಕೈ ದೊರಕಿತು । ಗುರುಕರುಣವೆಂಬಂಥ ಶಕ್ತಿಯಿಂದ । ಪರನಭಾವತರ ಸಹವಾಸದಲಿ ಪೋಗಿ ಹರಿಸ್ಮರಣೆಯಿದಲ್ಲಿ ಬೀಗಮುದ್ರೆಯ ತೆಗೆದೆ ॥2॥

ಸುತ್ತಲಿದ್ದವರೆಲ್ಲ ಪಲಾಯನವಾದರು ಭಕ್ತಿಕಕ್ಕಡವೆಂಬ ಜ್ಞಾನದೀಪ । ಜಿತ್ತಾಗಿ ಹಿಡಕೊಂಡು ದ್ವಾರದೊಳಗೆ ಪೊಕ್ಕೆ । ಎತ್ತ ನೋಡಿದರತ್ತ ಶೃಂಗಾರಸದನ ॥3॥

ಹೊರಗೆ ದ್ವಾರವು ನಾಲ್ಕು ಒಳಗೈದುದ್ವಾರಗಳು । ಪರದಾರಿಗೆ ಪ್ರಾಣ ಜಯ ವಿಜಯರು । ಮಿರುಗುವೋ ಮಧ್ಯಮಂಟಪ ಕೋಟಿರವಿಯಂತೆ । ಸರಸಿಜನಾಭನ ಅರಮನೆಯ ಸೊಬಗು ॥4॥

ಸ್ವಮೂರ್ತಿಗಣಮಧ್ಯ ಸಚ್ಚಿದಾನಂದೈಕ ರಮೆಧರೆಯರಿಂದಲಾ ಲಿಂಗಿತ್ವದಿ । ಕಮಲಜಾದಿಗಳಿಂದ । ತುತಿಸಿಕೊಳ್ಳುತ ಹೃದಯ ಕಮಲದೊಳಗಿರುವ ಶ್ರೀವಿಜಯವಿಠಲನ ಕಂಡೆ ॥ 5 ॥

ಹರಿದರ್ಶನವಾದ ಕೂಡಲೆ ಪುರಂದರದಾಸರು ಈ ಉಗಾಭೋಗವನ್ನು ನುಡಿದಿದ್ದಾರೆ.

ಇಂದಿನ ದಿನವೇ ಶುಭದಿನವು ಇಂದಿನ ವಾರ ಶುಭವಾರ । ಇಂದಿನ ತಾರೆ ಶುಭ ತಾರೆ ಇಂದಿನ ಯೋಗ ಶುಭಯೋಗ । ಇಂದಿನ ಕರಣ ಶುಭ ಕರಣ ಇಂದು ಪುರಂದರವಿಠಲರಾಯನ । ಸಂದರುಶನ ಫಲವೆನಗಾಯ್ತು ಸಂದರುಸನ ಫಲವೆನಗಾಯ್ತು ।

೧೫. ಹರಿದಾಸರ ಪ್ರಶಂಸೆ

ಇಂಥಹ ಉತ್ತಮ ಸಿದ್ಧಿಯನ್ನು ಪಡೆದ ಭಕ್ತರೇ ಧನ್ಯರು. ಅವರ ಜೀವನವೇ ಶ್ರೇಷ್ಠ. ಇವರ ರೀತಿ ನಡವಳಿಕೆಗಳು ಅತಿ ವಿಚಿತ್ರ. 'ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ' ಎಂಬ ಪದದಲ್ಲಿ ಜಗನ್ನಾಥದಾಸರು ಇಂಥಹ ಭಕ್ತರ ಲಕ್ಷಣವನ್ನು ಹೇಳಿದ್ದಾರೆ. ವಿಜಯದಾಸರು ಹರಿದಾಸರುಗಳನ್ನು ಹೀಗೆ ವರ್ಣನೆ ಮಾಡುತ್ತಾರೆ.

ಕಾಂಬೋಧಿ-ಝಂಪೆ

ಬೂದಿ ಮುಚ್ಚಿದ ಕೆಂಡದಂತಿಪ್ಪರು ಈ ಧರೆಯ ಮೇಲೆ ಶ್ರೀಹರಿಭಕ್ತ ಜನರು ॥ ಪ ॥

ಅಂಗ ನೋಡಲು ಅಷ್ಟಾವಕ್ರವಾಗಿಪ್ಪರು । ಕಂಗಳಿಂದಲಿ ನೋಡೆ ಘೋರತರರು । ಮಂಗಳಾಂಗನ ಅಂತರಂಗದಲಿ ಭಜಿಸುತ್ತ ಹಿಂಗದೆ ಸಂತಜನಸಂಗದೊಳಗಿಹರು ॥ 1 ॥

ಸಾಡುಜನರುಗಳಂತೆ ನಡೆಯರು ಕೂಡರು ಕುಟಿಲನ ಸಂಘದಲ್ಲಿ । ಚಾಡಿ ಕ್ಷುದ್ರವ ಹೇಳಿ ಒಡಲ ತುಂಬಿಸಿಕೊಳ್ಳರು ರೂಢಿಯೊಳಗೆಂದೆಂದು ಗೂಢವಾಗಿಹರು ॥ 2 ॥

ಡಂಭಕತನದಿಂದ ಗೊಂಬೆನೆರೆಹಿಕೊಂಡು ಡೊಂಬ ಕುಣಿದಂತೆ ಕುಣಿದಾಡರು । ಹಂಬಲಗಳು ಬಿಟ್ಟು ಹರುಷ ಉಳ್ಳವರಾಗಿ ಬಿಂಬಮೂರುತಿಯನು ಕೊಂಡಾಡುತಿಹರು ॥ 3 ॥

ಶತ್ರು ಮಿತ್ರರುಗಳ ಸಮವಾಗಿ ಎಣಿಸುತಿಹರು । ಪುತ್ರಮಿತ್ರ ಭ್ರಾತೃಗಳ ನೆಚ್ಚರು । ಯಾತ್ರೆ ತೀರ್ಥಗಳಿಗೆ ಹೋಗುತ್ತ ಶ್ರೀಹರಿಯ ಸ್ತೋತ್ರಗಳ ಮಾಡಿ ಸಾಧನ ಮಾಡಿಕೊಂಡಿಹರು ॥ 4 ॥

ಕಷ್ಟಸೌಖ್ಯಗಳು ಕರಿವರದಗರ್ಪಿಸಿಹರು ಇಟ್ಟುತೊಟ್ಟದ್ದು ಹರಕೊಟ್ಟನೆಂಬುವರು । ಸೃಷ್ಟೀಶ ಸಿರಿವಿಜಯವಿಠ್ಠಲನ ಪದಪದ್ಮ ಮುಟ್ಟಿ ಭಜಿಸಿ ಮುಕ್ತಿ ಸಾಮ್ರಾಜ್ಯ ಪಡೆಯುವರು ।

ಜಗನ್ನಾಥದಾಸರು ಇಂತಹವರನ್ನು ಸಂತರೆನ್ನಬಹುದೆಂದು ವರ್ಣಿಸಿದ್ದಾರೆ.

ಕಾಂಬೋಧಿ-ಝಂಪೆ

ಸಂತರೆನಬಹುದು ಸಜ್ಜನರಿವರನಾ
ಇಂಥ ಗುಣಗಳಿಂದ ಯುಕ್ತರಾಗಿಪ್ಪವರ ॥ ಪ ॥

ಸ್ವಾಂತಸ್ಥಾಸಂತ ಸರ್ವಾಂತರಾತ್ಮಕನೆಂದು । ಚಿಂತಿಸುವ ಮನದೊಳು ನಿರಂತರದಲಿ । ನಿಂತಲಿ ನಿಲ್ಲದೆ ದುರಂತಮಹಿಮನ ಗುಣವ । ಸಂಸ್ತುತಿಸುತನವರತ ಶಾಂತರಾಗಿಹರ । ಇಂಥ ಹರಿದಾಸರಿಗೆ ಯಾರ ಭಯವೂ ಇಲ್ಲ ॥ 1 ॥

ಧನ್ಯಾಸಿ-ಆದಿ

ಯಾತರೆ ಭಯ ಶ್ರೀನಾಥನ ಪರಮಸುಪ್ರೀತಿಯ ಪಡೆದವಗೆ ।
ಕಾತರಪಡದಲೆ ಪಾತಕ ಹರವಿಧಿತಾತನೆ ನಿಜಸುಖದಾತನೆಂದರಿತವರಿಗ್ಯಾ ॥ ಅ ॥

ಬಂಧು ಜನರು ತನುಗೊಂದಿಸಿ ನುಡಿಯಲು ಬಂದ ಭಾಗ್ಯವೇನೋ । ಹಿಂದೆ ಮುಂದೆ ತನ್ನ ನಿಂದಿಸಿ ನುಡಿಯಲು ಕುಂದಾದದ್ದೇನೋ । ಮಂದರಧರ ಗೋವಿಂದನ ಮಾನಸ ಮಂದಿರದಲಿ ತಂದಿಟ್ಟಿರುವವನಾಗಿ ॥ 1 ॥

ಶಂಕರಾಭರಣ-ಆದಿ

ಹರಿದಾಸರಿಗೆ ಒಬ್ಬರಹೊರವೆ ಯಾತಕೆ
ಅರಿವೇ ಅನ್ನಾಭರಣ ದ್ರವ್ಯ ಸರ್ವವು ಶ್ರೀಧರನೆ ಎಂಬ ॥ ಅ ॥

ನಿತ್ಯಾನಂದ ನಿತ್ಯಜ್ಞಾನ ಮಿತ್ರಬಂಧು ಭಕ್ತರಿಗೇ
ನಿತ್ತದ್ದೆ ಸಂಪತ್ತು ಎಂದು ಕೀರ್ತಿಸುತ್ತಾ ನರ್ತಿಸುವ ॥ 1 ॥

ಧರ್ಮೋಽಭವಥ್ಯರ್ಧಮೋಽಪಿ ಕೃತೋ ಭಕ್ತ್ಯಸ್ತವಾಚ್ಯುತ
ಪಾಪಂ ಭವತಿ ಧರ್ಮೋಽಪಿ ಯೇನ ಭಕ್ತ್ಯೈಃ ಕೃತೋ ಹರೇಃ

ಎಂಬ ಸ್ಮೃತಿಪಚನದಂತೆ ಹರಿಭಕ್ತರಾದವರ ಆಚರಣೆ ಸದಾಚರಣೆಯಿನಿಸುವುದು. ಇದನ್ನೇ ಮಾರ್ಮಿಮಕವಾಗಿ ಜಗನ್ನಾಥದಾಸರು ತಿಳಿಸಿದ್ದಾರೆ.

ಕೇದಾರಗೌಳ-ಅಟ

ನಿನ್ನವರಾಧರ್ಮ ವಿಹಿತವಾಗಿವುದು ಮತ್ತನ್ಯರಾಚರಿಸಿದ ಧರ್ಮ ಅಧರ್ಮ ॥ ಪ ॥

ಕಡಲಮಥನದಿ ಕಪರ್ದಿ ಕಾಲಕೂಟ ಕುಡಿಯಲು ಕಂಠಭೂಷಣವಾಯ್ತು । ಒಡನೆ ರಾಹು ಕೇತು ಸುಧೆಯ ಪಾನಮಾಡಿ ಮಡಿದರೆಂಬುದು ಮೂರು ಜಗ ನೆರೆವರಿಯೆ ॥ 1 ॥

ಮೇದಿನಿಯೊಳು ಪ್ರಾಣಿಹಿಂಸಕನೆನಿಸಿದಾ ವ್ಯಾಧನಾಮಿಕುಲೇಶನ ಮಾಡಿದೆಯ ವೇದೋಕ್ತ ಕರ್ಮವಾಚರಿಸಿದ ಜಿನನೊಳ್ ಪ್ರಾದುರ್ಭೂತನಾಗಿ ಕೆಡಹಿದೆ ತಮಕೆ ॥ 5 ॥

ಮುಖಾರಿ-ಆದಿ

ವಿಧಿನಿಷೇಧ ನಿನ್ನವರಿಗೆಂತೊ ಹರಿಯೆ । ವಿಧಿ ನಿನ್ನ ಸ್ಮರಣೆ ನಿಷೇಧ ವಿಸ್ಮೃತಿಯೆಂಬ ವಿಧಿಯನೊಂದನು ಬಲ್ಲವಗಲ್ಲದೆ ॥ ಅ ॥

ಮಿಂದದ್ದೆ ಗಂಗಾದಿತೀರ್ಥ ಪುಣ್ಯತೀರ್ಥಂಗಳು ಬಂದದ್ದೆ ಪುಣ್ಯಕಾಲ । ಸಾಧು ಜನರು ನಿಂದದ್ದೆ ಗಯಾವಾರಣಾಸಿ ಕುರುಕ್ಷೇತ್ರ । ಸಂದೇಹವಿಲ್ಲ ಮದ್ವಾನೆ ಪೋದುದೆ ಬೀದಿ ॥ 1 ॥

ಮೇಲಿನ ಪದದಲ್ಲಿ 'ಸ್ಮರ್ತವ್ಯಃ ಸತತಃ ವಿಷ್ಣುಃ । ವಿಸ್ಮರ್ತವ್ಯೋ ನಜಾತುಚಿತ್ । ಸರ್ವೆ ವಿಧಿನಿಷೇಧಾಸ್ಯುರೇತಯೋರೇವ ಕಿಂಕರಾಃ' ಎಂಬ ವಚನದ ತಾತ್ಪರ್ಯವನ್ನು ಪುರಂದರದಾಸರು ಹೇಳಿರುವರು.

ಯದುಕುಲ ಕಾಂಬೋಧಿ-ಝಂಪೆ

ಹರಿ ಭಕುತಿ ಉಳ್ಳವರ ಶರೀರವೆ ಕುರುಕ್ಷೇತ್ರ ।
ಅವರು ನರರೆಂದು ಬಗೆವರೆ ನರಕವಾಸಿಗಳು ॥ ಅ ॥

ಸದಮಲನ ನೆನೆಸುವ ಹೃದಯ ಕಾಶೀಪುರವು । ಮಧುವೈರಿ ನೆನೆವ ಮನ ಮಣಿಕರ್ಣಿಕೆ । ಪದುಮನಾಭನ ಪಾಡ್ವ ವದನವೆ ವೈಕುಂಠ । ಸದಮಲನ ಬಣ್ಣಿಸುವ ಜಿಹ್ವೆ ಶ್ರೀಮುಷ್ಣ ॥ 1 ॥

ಹರಿದಾಸರೆಂದರೆ ಎಲ್ಲ ದೋಷಗಳು ಅಂಜುವುವು-ಯಮನೂ ಭಯಪಡುವನು ಎನ್ನುತ್ತಾರೆ, ಪುರಂದರದಾಸರು.

ಕಾಂಬೋಧಿ-ಝಂಪೆ

ಕೊಡಕೆ ಜಿರಳೆ ಮುತ್ತುವುದುಂಟೆ ಪಾಂಡುರಂಗನ ದಾಸರಿಗೆ ಭಯವುಂಟೆ ॥ ಪ ॥

ಆನೆ ಸಿಂಹದ ಕೂಡೆ ಸ್ನೇಹ ಬೆಳೆಸುವುದುಂಟೆ ಶ್ವಾನ ಹೆಬ್ಬುಲಿ ಕೂಡೆ ಸರಸವುಂಟೆ ॥ ಅ ॥

ಏನೆಂಬೆ ಮನದಲ್ಲಿ ಸರ್ವದಾ ನಿನ್ನಂಘ್ರಿ ಧ್ಯಾನದೊಳಿದ್ದವಗೆ ದಾರಿದ್ರ್ಯವುಂಟೆ ॥ 1 ॥

ಪಂತುವರಾಳಿ-ಛಾಪು

ಯಮ ತನ್ನ ಪುರದಲ್ಲಿ ಸಾರಿದನು ನಮ್ಮ ಕಮಲನಾಭನ ದಾಸರನು ಮುಟ್ಟದಿರೆಂದು ॥ ಅ ॥

ಅನ್ಯ ದೈವ ಅನ್ಯ ಮಂತ್ರ ತಂತ್ರವ ಬಿಟ್ಟು ಪನ್ನಗಶಯನನೆಗತಿ । ಎನ್ನುತ ಉನ್ನತ ಪುರಂದರವಿಠಲನ ಭಜಿಪ ಪ್ರಸನ್ನರುಗಳ ಕೆಣಕದೆ ಬನ್ನಿರೊ ಎಂದು ॥

ಹರಿದಾಸರ ವೈಭವವನ್ನು ಈ ಕೆಳಪದಗಳಲ್ಲಿ ವಿವರಿಸುತ್ತಾರೆ.

ಪಂತುವರಾಳಿ-ಆದಿ

ಹರಿಯ ದಾಸರಿಗಿನ್ನೂ ಸರಿಯುಂಟೆ ನರಹರಿಯ ನಂಬಿದವರಿಗೆ ಕೇಡುಂಟೆ ॥ ಅ ॥

ಮಾರಿಯ ಕೈಯಲ್ಲಿ ನೀರು ಹೊರಿಸುವರು ಮಸಣಿಯ ಕೈಯ ಕಸ ಬಳಿಸುವರು । ಘೋರದ ಮೃತ್ಯುವಿನ ಕೈಲಿ ಭತ್ತ ಕುಟ್ಟಿಸುವರು ಜವನ ಕೈಲಿ ಜಂಗುಳಿ ಕಾಯಿಸುವರು ॥ 1 ॥

ಜಕಣಿಯು ಜಲಿದೇವರು ಮೊದಲಾದ ಭಿಕಾರಿದೈವಗಳ ಪೂಜಿಸರವರು । ಲೋಕನಾಯಕ ಶ್ರೀಪುರಂದರವಿಠಲನ್ನ ಸಾಕಾರದಯದ ಪರಮಭಾಗವತರು ॥ 3 ॥

ಇಷ್ಟೇ ಅಲ್ಲ, ಇಂಥಹ ದಾಸರಿಗೆ 'ಲಗ್ಗೆಯೋ ವೈಕುಂಠ ಲಗ್ಗೆಯೋ. ಒಗ್ಗಿ ಶ್ರೀಹರಿಯೊಡನಾಡೋ ಸುಜನರ್ಗೆ' ಎಂದು ಸಹ ಅವರು ಘೋಷಿಸಿರುವರು. ಏಕೆಂದರೆ 'ಆನಂದ ಆನಂದ ಮತ್ತೆ ಪರಮಾನಂದ ಆನಂದ ಕಂದನೊಲಿಯೆ ಏನಂದದ್ದೇವೇದ ವೃಂಜ'ವೆಂದು ವಿಜಯದಾಸರ ವ್ಯಾಖ್ಯಾರ್ಥ. ಹರಿದಾಸರ ಪ್ರಶಂಸೆ ಮಾಡುತ್ತಾ ದಾಸರುಗಳು ದೇವರನ್ನು ನೋಡಿ, ನಿನಗಿಂತ ನಿನ್ನ ದಾಸರೆ ಮಿಗಿಲೆಂದು ಹೇಳುತ್ತಾರೆ.

ಆರಭಿ-ಆದಿ

ನಿನ್ನಿಂದ ನಿನ್ನ ದಾಸರೆ ಮಿಗಿಲೋ ಕೃಷ್ಣ ॥ ಪ ॥

ನಿನ್ನಿಂದ ನಿನ್ನ ದಾಸರೇ ಮಿಗಿಲಾಗಿ ಮನ್ನಿಸುವುದು ನಿನಗೆ ಸುಪ್ರಿಯವೊ ರಂಗ ॥ ಅ ॥

ಜಲಜ ಭವಾಂಡಕ್ಕೆ ಒಡೆಯನ ನೀನೆನಿಸುವಿ ಬಲು ದೊಡ್ಡವನು ನೀನಹುದಹುದೋ ಅಲಸದೆ ಹಗಲಿರುಳೆನ್ನದೆ ಅನುದಿನ ಒಲಿದು ಬಲಿಯಮನೆ ಬಾಗಿಲಕಾಯ್ದು ಮೇಲೆ ।

ಭೈರವಿ-ಝುಂಪೆ

ಭಕುತ ಜನಮುಂದೆ ನೀನವರ ಹಿಂದೆ ಯು । ಕುತಿ ಕೈಗೊಳ್ಳದೊ ಗಯ ಗದಾಧರನೆ । ॥ ಪ ॥

ಉತ್ಸಾಹವಾಹನದಿ ಬೀದಿಯೊಳು ಮೆರೆಯುತಿರೆ ಸತ್ಸಂಗತಿಗೆ ಹರಿವಾರರೆಲ್ಲ । ವತ್ಸಲ ಸಿರಿವಿಜಯವಿಠಲ ವೆಂಕಟಾಧೀಶಾ ವತ್ಸ ಮುಂದಲ್ಲದೆ ಧೇನುತಾ ಮುಂದೆ ॥ 3 ॥

ಆದ್ದರಿಂದ ನಿನಗಿಂತ ನಿನ್ನ ದಾಸರನ್ನು ಕಂಡರೆ ನನಗೆ ಭಯವೆನ್ನುತ್ತಾರೆ ವಿಜಯದಾಸರು.

ಕಾಂಬೋಧಿ-ಝುಂಪೆ

ನಿನಗೆ ಅಂಜುವನಲ್ಲ ನೀರಜಾಕ್ಷ । ಮನವ ಕಾಯದಿಂ ನಿನ್ನವರುಗಂಜುವೆನು ॥ ಪ ॥

ರಾಗದಿಂದ ಇಂದ್ರದ್ಯುಮ್ನ ಭೂಪಾಲಕನು ಯೋಗಿಮಾರ್ಗದಿ ನಿನ್ನ ಭಜಿಸುತಿರಲು । ಯೋಗಿ ಕುಂಬೋದ್ಭವನು ಬಂದು ಶಾಪವ ಕೊಡಲು । ಆಗ ಮೌನದಲವನನೊಪ್ಪಿಸಿದ ಬಗೆ ಬಲ್ಲಿರಾ । ಅನಪರಾಧಿಗಳಿಗೆ ಇನಿತಾಯಿತೋ ದೇವ । ಎನಗೆ ತನಗೆಂಬುವರಿ- ಗಾವಗತಿಯೋ । ಮಣಿದು ಬೇಡಿಕೊಂಬೆ ವಿಜಯವಿಠಲರೇಯ ನಿನಗಿಂತ ಭಕುತಿ ನಿನ್ನವರಲ್ಲಿ ಕೊಡು ಎನಗೆ ॥ 5 ॥

ಹರಿಯೇ ಪೂಜಿಸುತ್ತಾನೆಂದಮೇಲೆ ಹರಿಶರಣಮಹಿಮೆ ಎಂಥಹುದೆಂದು ಊಹಿಸಬಹುದು.

ಸಾವೇರಿ-ತ್ರಿಪುಟ

ಹರಿ ದರುಶನಕಾಗಿ ನಾರದರು ಬರಲು ಸಿರಿದೇವಿ ಹೊರಗಿನ ಬಾಗಿಲಲ್ಲಿದ್ದಳು ॥ ಪ ॥

ಕರಕಮಲವ ಮುಗಿದು ಧೊರೆ ಸಮಯವೆನಲು ನಾರಿಮಣಿ ಲಕುಮಿ ಅರಹುವಳಾಗ ॥ ಅ ॥

ವರದೇವತಾರ್ಚನೆ ಅರಮನೆಯೊಳಗೆ ಭರದಿಂದ ಕುಳಿತಿರ್ಪ ಪರಮಾತ್ಮನು ।
ಸರಸಿಜೋದ್ಭವಮಾದಿ ಸುರರಿಗೆ ದೊರೆಯೀತ ಪರಮ ಆಶ್ಚರ್ಯವ ಅರಿಯಬೇಕೆಂದು ॥ 1 ॥

ಕಳವಳಿಸಿ ಮನದೊಳಗೆ ತೋರುತ ಅತಿ ಥಳಿಥಳಿಸುವ ರತ್ನ ಸಂಪುಟದಿ ಕಲುಷದೂರನು
ಪ್ರಹ್ಲಾದ ವರಧ್ರುವರು ಬಲಿ ಅಂಬರೀಷರ ಮುಖ್ಯರ ಪೂಜೆಗೈಯ್ವ ॥ 2 ॥

ಹರಿದಾಸರ ಚರಣರಜಗಳ ತುಂಬಿಟ್ಟು ತೆಗೆದು ತೋರಿದ ಮುನಿಗೆ ಪರಮಾತ್ಮನು
ಪರಮಾನಂದಭರಿತವಾದ ವಿರಂಚಿಸುವ ಸಿರಿಪತಿ ಪುರಂದರವಿಠಲನ್ನಸ್ಮರಿಸುತ ॥ 3 ॥

ಆದ್ದರಿಂದಲೇ ಹರಿಶರಣರ ಸಂಗವನು ಮಾಡಬೇಕೆಂದು ಶಾಸ್ತ್ರಗಳಲ್ಲಿ ಪುನಃ ಪುನಃ ಒತ್ತಿ ಹೇಳಿರುವರು.

ಸಾವೇರಿ-ಆಟ

ಹರಿದಾಸರ ಸಂಗಕ್ಕೆ ಸರಿಯುಂಟೆ ಗುರುಕರುಣಕ್ಕೆ ಇನ್ನು ಪಡಿಯುಂಟೆದೇವ ॥ ಅ ॥

ತಡೆಯಿಲ್ಲದ ಪೂರಾತೊರೆಯಲ್ಲಿ ಪೋಪನ ಪಿಡಿದೆತ್ತಿ ತಡಿಯ ಸೇರಿಸಿದಂತೆ । ಕಡೆಗೆಟ್ಟಿ
ಭವಾಬ್ಧಿ ನಡುವೆ ಸಿಕ್ಕಿದ ಎನ್ನ ಪಿಡಿದು ಶ್ರೀಕೃಷ್ಣನಂಘ್ರಿಗಳೆ ಸೇರಿಸುವ ॥ 5 ॥

ಅಷ್ಟೇ ಅಲ್ಲ; 'ಸಾಧುಸಂಗವಾಗದ ಬಾಳು ಬಾಳು ಆಗದಯ್ಯ' 'ಸಾಧು ಸಂಗ ಎಂಬೋದಯ್ಯ ಕ್ಷೇಮ ನಮಗೆ ನೀಡುವುದಯ್ಯ' ಎಂದು ಪುರಂದರದಾಸರು ಉಪದೇಶ ಮಾಡಿರುವರು.

೧೬. ಚಿತ್ರೋಕ್ತಿ

ಹರಿದಾಸ ಸಾಹಿತ್ಯದಲ್ಲಿ ಸುಲಭವಾದ, ನೇರವಾದ ಶೈಲಿಯಲ್ಲಿ ಪದ ಪದ್ಯಗಳು ಹೇಗೆ ರಚಿತವಾಗಿದೆಯೋ, ಹಾಗೆ ಕ್ಲಿಷ್ಟವಾದ ಶೈಲಿಯಲ್ಲೂ ಸಾಹಿತ್ಯ ನಿರ್ಮಾಣವಾಗಿದೆ. ಬಳಸಿಕೊಂಡು ವರ್ಣನೆ ಮಾಡುವುದು, ಒಗಟು-ಸಮಸ್ಯೆಗಳನ್ನು ಹೇಳುವುದು. ಹೇಳುವ ಅರ್ಥವನ್ನು ವಿಪರೀತ ಕ್ರಮದಲ್ಲಿ ತಿಳಿಸುವುದು, ಅಧ್ಯಾತ್ಮಪರನಾದ ಅರ್ಥ ಬೋಧಕವಾದವು, ಈ ಕೃತಿಗಳು ಪುಷ್ಕಲವಾಗಿವೆ. ಒಬ್ಬರನ್ನು ತಿಳಿಸಬೇಕಾದರೆ, ಅವರ ಗುಣಗಳನ್ನು ಬಣ್ಣಿಸಿ, ಅದರಿಂದ ಮುದ್ರಾಲಂಕಾರ ರೀತ್ಯಾ ತಿಳಿಸುವ ಪದಗಳು ಕನಕದಾಸರವು ಹೆಚ್ಚಾಗಿವೆ. ಅವರು ಮತ್ತು ವಿಜಯದಾಸರು ಯಾವುದು ಸಲ್ಲದೋ, ಅದೇ ಸರಿಯೆಂಬ ತೋರಿಕೆಯ ಅರ್ಥಕೊಡುವ ಪದಗಳನ್ನು ರಚಿಸಿದ್ದಾರೆ. ಗೋಪಾಲದಾಸರು ವಿಷಯ ವೈರಾಗ್ಯ, ಸಂಸಾರದ ನಿಸ್ಸಾರತೆಯನ್ನು ಇಂತಹ ಒಗಟುಗಳಿಂದ ತಿಳಿಸುತ್ತಾರೆ. ಪುರಂದರದಾಸರು ಕೇವಲ ಅಸಂಬದ್ಧ ಪದ, ವಾಕ್ಯ ಅರ್ಥಗಳನ್ನು ಸೇರಿಸಿ ಗಹನಾದ ಆಧ್ಯಾತ್ಮಾರ್ಥವನ್ನೂ ಹೇಳುತ್ತಾರೆ.

ಸಾವೇರಿ-ಆಟ

ಶೇಷಶಯನ ನಿಮ್ಮ ಪರಮಭಾಗವತರ ಸಹವಾಸದೊಳಿರು ಕಂಡ್ಯ ಎನ್ನನು ॥ ಅ ॥

ತಂದೆಯೊಡಲನು ಸೀಳಿದವರೊಳು ದೇವೇಂದ್ರನ ತಲೆಗೆ ತಂದವರೊಳು । ದುರ್ಗಂಧದ ಪೆಣ್ಣಿಗೆ ಚಂದನದ ಕಂಪನಿತ್ತಂಥ ಬಾಂಧವರೊಳಿರಿಸು ಕಂಡ್ಯ ಎನ್ನನು ॥ 1 ॥

ಭೈರವಿ-ಆಟ

ರಮಣಿ ಕೇಳಿಲೆ ಮೋಹನ ಶುಭಕಾಯನ ಅಮರವಂದಿತ ರವಿಶತಕೋಟಿತೇಜನ॥ ಪ ॥

ವಿಮಲ ಚರಿತ್ರದಿ ಮೆರೆವ ಶ್ರೀಕೃಷ್ಣನ ಕಮಲವದನೆ ನೀ ತೋರೆ ರಮಣಿ ॥ ಅ ॥

ಬಾಯೊಳಗಿಹಳ ಗಂಡನ ನಿಜತಮ್ಮನ ತಾಯಪಿತನ ಮಡದಿಯ ಧರಿಸಿದವನ । ಸ್ತ್ರೀಯಳ ಸುತನ ಕೈಯಲಿ ಶಾಪ ಪಡೆದನ ದಾಯಾದ್ಯನ ಮಗನ । ಸಾಯಕವದು ತೀವ್ರದಿ ಬರುತಿರೆ ಕಂಡು । ಮಾಯಾಪತಿ ಭೂಮಿಯನೊತ್ತಿ ತನ್ನಯ । ಬೀಯಗಾರನ ತಲೆಕಾಯಿದಂಥ ರಾಯನ ಕರೆದು ತೋರೆ ರಮಣಿ ॥ 1 ॥

ಈ ಕೆಳಗಿನ ಪದಗಳು ಆಪಾತತಃ ವಿಪರೀತಾರ್ಥ ಬೋಧಕಗಳಾಗಿವೆ.

ಕಾಂಬೋಧಿ-ಝಂಪೆ

ಸಹಜವಿದು ಈ ನುಡಿಯು ಸಟೆಯ ಮಾತಲ್ಲ

ಮಹಿಯೊಲಗೆ ಪೇಳುವೆನು ವಿಹಿತವಾಕ್ಯಗಳ ॥ ಅ ॥

ಶ್ರುತಿ ಶಾಸ್ತ್ರ ಪುರಾಣಗಳು ಓದುವನೆ ಶೂದ್ರ । ಅತಿಥಿಯಾದರಿಸುವನೆ ಅತಿಲುಬ್ಧನು । ಪ್ರತಿನಿತ್ಯ ಸಂಧ್ಯಾನ ಜಪ ಮಾಡುವನೆ ಪಾಪಿ । ಪತಿಯಾಜ್ಞೆಯಿಂದಿಹಳೆ ಪರಮಪಾತಕಿಯು ॥ 1 ॥

ದಾನ ಧರ್ಮಂಗಳನ್ನೂ ಬಿಡುವನೇ ಧರ್ಮಾತ್ಮ । ಮಾನಾಭಿಮಾನಿಗಳ ಹಿಂಡುಯುವನೆ ಯೋಗಿ । ಪ್ರಾಣಹಿಂಸೆಗಳನ್ನು ಮಾಡುವನೆ ಸುಜ್ಞಾನಿ । ದೀನ ಸಜ್ಜನರ ಕೆಡಿಸುವನೆ ಸತ್ಪುರುಷ ॥ 2 ॥

ಮಾರವಿ-ತ್ರಿವಿಡಿ

ಭೇದ ಪೇಳುವನೆ ತಮೋಯೋಗ್ಯ ಪೂರ್ಣಬೋಧರ ಮತವ ಬಿಡವನೆ ಮುಕ್ತಿಯೋಗ್ಯ ॥ ಪ ॥

ಭ್ರಷ್ಟನೆನಿಸುವನೆ ಧನ್ಯ ಪರರ ಇಷ್ಟಾರ್ಥ ಕೆಡಿಸುವನೆ ಬಲುಮಾನ್ಯ । ಕಷ್ಟ ಬೇಡವನೆ ರಾಜನ್ಯ ವಿಜಯವಿಠಲನ್ನ ಪೂಜೆ ಮಾಡುವನೆ ಗುಣಶೂನ್ಯ ॥ 3 ॥

ಈ ಕೆಳಗಿನ ಪದವು ವಾಯುದೇವರ ಅವತಾರತ್ರಯವನ್ನು ಬಣ್ಣಿಸುತ್ತದೆ. ಇದರಲ್ಲಿ ಐದು ಎಂಬ ಪದವೇ ಉಪಯುಕ್ತವಾಗಿದೆ.

ಕಾಂಬೋಧಿ-ಝಂಪೆ

ಐದನೆ ತಿಂಗಳಲ್ಲಿ ನಿಶ್ಚಯಿಸಿದೆ ಐದು ವರುಷದವನು ಮುಂದಾಹ ಶುಭಚರಿತೆ ॥ ಅ ॥

ಐದರೊಳಗೊಂದರ ತಮಯನೆನಿಸಿಕೊಂಡು ಐದರೊಳಗೊಂದು ಮಾರ್ಗವನೆ ಪಿಡಿದು ।

ಐದರೊಳಗೊಂದು ರಾಶಿಯ ಹಾರಿ ರಕ್ಕಸರ । ಐದೆರಡು ವರುಷಗಳ ಮ್ಲಾನ ಮಾಡಿದನೆಂದು ॥ 1 ॥

ಐದು ಬಾಣನ ಗೆಲಿದ ಆಶ್ರಮವ ಕೈಕೊಂಡು ಐದೊಂದು ಅರಿಯಗಳನು ಮುರಿದು ಮೆಟ್ಟಿ । ಐದು ಪ್ರಾಣರಿಗೆ ಗುರು ಗೋಪಾಲವಿಠಲನ ಐದೆರೆಡು ಮಾನಗಳಿಂದ ಭಜಿಸುವನೆಂದು ॥ 5 ॥

ಗೋಪಾಲದಾಸರ ಆ ಕೆಳಗಿನ ಪದವು 'ಜೀವನಿಗೆ ಸಂಸಾರದಲ್ಲಿರುವ ವಿಷಯಾದಿಗಳ ಬಂಧ. ಇದರಿಂದ ಸಾಧನೆಗೆ ಇರುವ ಅಡ್ಡಿ' ಇದನ್ನು ಒಗಟಿನ ಮೂಲಕ ತಿಳಿಸುತ್ತದೆ.

ಶಂಕರಾಭರಣ-ಆದಿ

ಒಗೆತನದೊಳು ಸುಖವಿಲ್ಲ ಇದನೊಲ್ಲೆನೆಂದರೆ ನೀಬಿಡೆಯಲ್ಲ ॥ ಪ ॥

ಜಗದೊಳು ಹಗರಣ ಮಿಗಿಲಾಯಿತು ಪನ್ನಗ ನಗನಗರ ನಿವಾಸ ॥ ಅ ॥

ಐದು ಮಂದಿ ಭಾವನವರು ಐದು ಮೈದುಮರು ಕೂಡಿ । ಐದು ಪರಿ ತಾನಾಗಿಕತ್ತಲೆ ಕೋಣೆಗೈದುವಂತೆ ಮಾಡುವರು । ಐದುತಂದು ಬೆಚ್ಚಿಸುವರು ಐದನೆ ಬೊಕ್ಕಸದ ಮನೆ ಎಲ್ಲಿದೆಯೋ ಕಾಣೆ ॥ 2 ॥

ಪುರಂದರದಾಸರ ಪದ ಅತಿ ಗಡಚು. ಇದರ ಅರ್ಥ ಪುರಂದರವಿಠಲನೇ ಬಲ್ಲ ಎಂದು ಅವರೇ ಅನ್ನುತ್ತಾರೆ.

ಮೋಹನ-ಛಾಪು

ಬೈಲಾಭಾವಿಗೆ ಬಂದಳೋರ್ವ ಬಾಲೆ
ಕಾಲು ಜಾರಿತು ಕೊಡ ಒಡೆಯಿತು ನೀರುರಳಿತು ॥ ಅ ॥

ನೆರಳಿಲ್ಲದೆ ನೀರಲ್ಲದೆ ಬೇರಿಲ್ಲದೆ ಸಸಿ ಹುಟ್ಟಿ । ಹೂವಿಲ್ಲದೆ ಕಾಯಿಲ್ಲದೆ ಫಲ ಬಂದಿತು । ಕರವಿಲ್ಲದೆ ಕಾಯಿಲ್ಲದೆ ಕೊಯ್ಯುವರು ಮೂವರು । ಫಲ ಉಂಬರೆಂಭತ್ತು ನಾಲ್ಕು ಲಕ್ಷದಲಿ ॥ 1 ॥

ಸೌರಾಷ್ಟ್ರ-ಆಟ

ನಡುಮನೆಯಲೊಂದು ನಾಲ್ಕು ತೆಂಗಿನ ಮರ ಹೇ ಗಿಣಿಯೇ ॥ ಪ ॥

ಅದು ತಲೆ ಮೊದಲಿಲ್ಲದೆ ಬೆಳೆದು ಹಣ್ಣಾಯಿತು ಹೇ ಗಿಣಿಯೇ ಹೇ ಗಿಣಿಯೇ ॥ ಅ ॥

ಕಾಲಿಲ್ಲದವ ಹತ್ತಿ ಕೈಯಿಲ್ಲದವ ಕೊಯ್ದ ಹೇ ಗಿಣಿಯೇ ಹೇ ಗಿಣಿಯೇ ಆದ । ತಲೆ ಇಲ್ಲದವ ಬಂದು ಹೊತ್ತು ತಂದಿಟ್ಟ ಹೇ ಗಿಣಿಯೇ ಹೇ ಗಿಣಿಯೇ ॥

ಫರಜು-ಆದಿ

ಮುಳ್ಳುಕೊನೆಯಲಿ ಮೂರು ಕೆರೆಯ ಕಟ್ಟಿ ಎರಡು ತುಂಬದು ಒಂದು ತುಂಬಲಿಲ್ಲ॥ ಅ ॥

ತುಂಬಲಿಲ್ಲದ ಕೆರೆಗೆ ಬಂದರು ಮೂವರೆಂಡರು ಇಬ್ಬರು ಕುಂಟರು ಒಬ್ಬೆಗೆ ಕಾಲೇ ಇಲ್ಲ॥ 1 ॥

ಕಾಲಿಲ್ಲದ ಒಡ್ಡರಿಗೆ ಕೊಟ್ಟರು ಮೂರು ಎಮ್ಮೆಗಳ ಎರಡು ಬರಡು ಒಂದಕ್ಕೆ ಕರುವೇ ಇಲ್ಲ ॥2॥

ಹಸಿವಿಲ್ಲದ ನೆಂಟರಿಗೆ ಕೊಟ್ಟರು ಮೂರು ಟೊಣಪೆಗಳ ಎರಡು ತಾಗವು ಒಂದು ತಾಗಲೇ ಇಲ್ಲ ॥3॥

ಇನ್ನೂ ಈ ಅರ್ಥಗಳೆಲ್ಲ ಪುರಂದರವಿಠಲ ಬಲ್ಲರ್‍ಯಾರೂ ತಿಳಿದವರಿಲ್ಲ.

ಮುಖಾರಿ-ಆದಿ

ಮುಸುಕ ತೆಗೆದರೆ ಬೆನ್ನಲಿ ನಾಲಿಗೆ ಇದರ ಹೆಸರು ಬಲ್ಲವರುಂಟೆ ಪೇಳಿ ರಂಗಯ್ಯ ॥ ಅ ॥

ಸತ್ತಿಗೆ ತಲೆಯವಳು ನೆತ್ತಲಿ ಬಾಲದವಳು ಕತ್ತಿನ ಕೆಳಗೆ ಕಪ್ಪಿನ ತೊಪ್ಪಿನವಳು । ಸುತ್ತೇಳು ವೈಗೆರಡು ಜೋಡು ಬಂಗಾರದ ಸೃಷ್ಟಿಯೊಳಗೆ ಇದರ ಹೆಸರ ಬಲ್ಲವರುಂಟೆ ॥1॥

ಪಂತುವರಾಳಿ-ಆಟ

ಲೊಟಪಾಟ ಸಂಸಾರ ಏನಣ್ಣ ॥ ಪ ॥

ಹುಟ್ಟಿದ್ದ ಮುಂಚೆ ಹಸಿವೆಯ ನರಿಯೊ ಕೊಟ್ಟೆಯೊಳಗೆ ಎಂಟು ಆನೆಯನು ಕಂಡೆ । ಮಣೆಯೊಳಗೆ ಏಳು ಕುದುರೆಯ ಕಂಡೆ ಕಿಲ್ಲೆಯೊಳಗೆ ಏಳು ಚರಣವ ಕಂಡೆ ॥1॥

ಪಂತುವರಾಳಿ-ಏಕ

ಮಾಡು ಸಕ್ಕದಲ್ಲಾ ಮಾಡಿನ ಗೂಡು ಸಿಕ್ಕದಲ್ಲಾ ।
ಜೋಡುಹೆಂಡಿರಂಜಿ ಓಡಿಹೋಗುವಾಗ ಗೋಡೆ ಬಿದ್ದು ಬಯಲಾಯಿತಲ್ಲಾ॥ ಅ ॥

ಎಚ್ಚರಗೊಳ್ಳಲಿಲ್ಲ ಮನವೆ ಹುಚ್ಚಾನಾದೆನಲ್ಲ ।
ಅಚ್ಚಿನೊಳಗೆ ಮೆಚ್ಚು ಮೆಚ್ಚಿನೊಳಗೆ ಅಚ್ಚು ಕೆಚ್ಚೆದ್ದು ಹೋಯಿತಲ್ಲಾ ॥ 1 ॥

ಮುಕ್ತಿಯ ವಿಚಾರವಾಗಿ ಹೀಗೆ ಹೇಳುತ್ತಾರೆ.

ನಾದನಾಮಕ್ರಿಯೆ-ಛಾಪು

ಸುಲಭವಲ್ಲವೊ ಮಹಾನಂದ ತನ್ನೊಳಗೆ ತಾ ತಿಳಿಯಬೇಕು ಗುರುಕೃಪೆಯಿಂದ ॥ ಅ ॥

ಬೆಕ್ಕನ್ನು ಇಲಿ ನುಂಗುವತನಕ ಕಡು ರಕ್ಕಸಿಯ ಕಂಡು ಗಿಳಿ ನುಂಗುವ ತನಕ । ಮಕ್ಕಳ ಭಕ್ಷಿಸುವ ತನಕ ಮದಸೊಕ್ಕಿದ ಗಜವನ್ನು ನರಿ ನುಂಗುವ ತನಕ ॥1॥

೧೭. ಲೋಕನೀತಿ

ಮೇಲಿನ ಪದಗಳಲ್ಲಿ ದಾಸರುಗಳು ಭಗವಂತನ ಮಹಿಮಾವರ್ಣನ, ಭಗವಂತನ ಸ್ತೋತ್ರ, ಜೀವರ ಸಾಧನ ಈ ವಿಷಯಗಳನ್ನು ತಿಳಿಸಿರುವರು. ಇದರಿಂದ ದಾಸರುಗಳು ಇಹಲೋಕದ ಸಂಪರ್ಕ ಬಿಟ್ಟು ಬರಿಯ ಪರಲೋಕದ ಪರಬ್ರಹ್ಮನ ವಿಚಾರವನ್ನು ಮಾತ್ರ

ಹೇಳಿದ್ದಾರೆಂದು ತಿಳಿಯಬಾರದು. ನಿಲ್ಲಲು ಗಟ್ಟಿ ನೆಲವಿಲ್ಲದೆ ಆಕಾಶದಲ್ಲಿ ಸುಂದರ ಗೃಹ ನಿರ್ಮಾಣ ಮಾಡುವ ಕಟ್ಟುಕತೆ ಹರಿದಾಸರದಲ್ಲ. ಮಧ್ವಮತದ ಅಚ್ಚುಕಟ್ಟು ಹಾಗಲ್ಲ. ದಾಸರುಗಳು ಈ ಜಗತ್ತಿನಲ್ಲಿ ಬದುಕುವ ನೀತಿಯನ್ನು ನಾನಾ ಮುಖವಾಗಿ ವಿವರಿಸಿದ್ದಾರೆ. ಲೋಕನೀತಿಯು ಖಂಡಿತವೂ, ಅನುಭವ ಪೂರ್ಣವೂ, ಲೋಕಹಿತ ದೃಷ್ಟಿಯಿಂದ ನುಡಿದುದೂ ಆಗಿದೆ. ಜೀವನರಹಸ್ಯವನ್ನೇ ಇದರಲ್ಲಿ ಅವರು ಹೊರಗೆಡಹಿದ್ದಾರೆ. ದಾಸರ ಈ ವಿಶಾಲ ದೃಷ್ಟಿ ಅವರನ್ನು ಮಾನವಶಾಸ್ತ್ರಜ್ಞರ ಹಿರಿಯ ಪಂಕ್ತಿಯಲ್ಲಿ ಸೇರಿಸುತ್ತದೆ. ಅವರ ಲೋಕನೀತಿಯಾದರೂ ಯಾವ ಪಕ್ಷದ ಏಕಾಭಿಪ್ರಾಯವನ್ನನುಸರಿಸಿಯೂ ಬಂದುದಲ್ಲ. ಲೋಕದ ಎಲ್ಲಾ ಬಗೆಯನ್ನು ಆಳವಾಗಿ ಅಭ್ಯಸಿಸಿದಂತಹ ಲೋಕೋತ್ತರ ಉಪದೇಶ ಅವರ ಈ ವಾಣಿಯಲ್ಲಿ ಕಾಣಬಹುದಾಗಿದೆ. ಅವರು ಉಪದೇಶಿಸಿದ ಈ ನೀತಿ ಸರಣಿಯನ್ನು ಪ್ರಯೋಗಕ್ಕೆ ತಂದಲ್ಲಿ ಇಂದಿನ ಈ ಯುದ್ಧಭಯ, ಪರಸ್ಪರ ದ್ವೇಷಾಸೂಯೇ, ಸ್ವಾರ್ಥ ಇವೆಲಾ ನಾಶವಾಗಿ ಜನರಲ್ಲಿ ತೃಪ್ತಿ ಸಮಾಧಾನಗಳು ಮೂಡಿ ಶಾಂತಿಯ ಶಾಶ್ವತ ಹಾದಿಯನ್ನು ಹಿಡಿದಂತಾಗುವುದು. ಈ ತುಮುಲ ಈ ದ್ವೇಷ ಬರಿಯ ಬಾಹ್ಯ ನಿಯಮಗಳಿಂದ, ಕಾನೂನುಗಳಿಂದ, ಆಡಳಿತ ಪದ್ಧತಿಗಳಿಂದ ಪರಿಹಾರವಾಗಲಾರದೆಂಬುದಂತೂ ಸುವ್ಯಕ್ತವಿದೆ. ಇದು ಉತ್ತಮವಾಗಬೇಕಾದಲ್ಲಿ ಜನರಲ್ಲಿ, ತಿಳುವಳಿಕೆ, ಮೂಡಬೇಕು. ವಿವೇಕದ ಉದಯವಾಗಬೇಕು. ವೈಯುಕ್ತಿಕ ಸಂಸಾರದ ಕ್ಲೇಶ ಕಡಿಮೆಯಾದರೆ ಸಂಸಾರಕ್ಲೇಶವೂ ಕಡಿಮೆಯಾಗುವುದು. ಸಂಸಾರ ಕ್ಲೇಶ ಕಡಿಮೆಯಾಗಬೇಕಾದರೆ, ಸಂಸಾರದ ಸ್ವರೂಪವನ್ನು ತಿಳಿದು ಅದಕ್ಕೆ ಸರಿಯಾಗಿ ಜೀವನವನ್ನು ಮಾರ್ಪಡಿಸಿಕೊಳ್ಳಬೇಕು. ದಾಸರ ಉಪದೇಶವು ಇದನ್ನು ಚೆನ್ನಾಗಿ ತಿಳಿಸುವುದು. ಹರಿದಾಸರುಗಳು ಯೋಗಿಗಳು, ಭಗವದ್ಭಕ್ತರು. ಆದ್ದರಿಂದ ಭಾರತದ ಸಂತಸಾಹಿತ್ಯದಲ್ಲಿ ಮಾತ್ರ ಹೆಸರು ಇರುತ್ತದೆಂದಲ್ಲ. ದೇಶದ ಸಮಾಜದ ಉನ್ನತಿಗಾಗಿ ಹೆಣಗುವವರ ಸಾಹಿತ್ಯದಲ್ಲೂ ಅವರ ಹೆಸರು ಚಿರಸ್ಥಾಯಿಯಾಗಿರುವುದು. ಆದ್ದರಿಂದಲೇ ದಾಸರುಗಳನ್ನು ಮಾನವೋಪಕಾರಿಗಳೆನ್ನುವುದು. ಸಾಮಾನ್ಯ ಜನತೆಯ ಉದ್ಧಾರದಲ್ಲಿ ಅವರಿಗೆ ಬದ್ಧದೀಕ್ಷೆ. ಸಮಾಜದಲ್ಲಿನ ಕೊಳೆಯನ್ನು ನೋಡಿ ಅವರು ಮನಕರಗಿ ಕಣ್ಣೀರು ಹಾಕುವರು. ಸಾಂತ್ವನೆಯಿಂದ, ನಿಷ್ಠುರರಾಗಿ ಹಾಸ್ಯಮುದ್ರೆಯಿಂದ ಕಾಂತಾಸಮ್ಮಿತ, ಪ್ರಭುಸಮ್ಮಿತ, ಮಿತ್ರಸಮ್ಮಿತದಿಂದ ಜನತೆಗೆ ಉಪದೇಶಿಸುವರು. ಇವರ ಈ ಲೋಕೋಪದೇಶ ಇತರ ದೇಶದ ಹರಿದಾಸರುಗಳಿಂದ ಮಾಡಲ್ಪಟ್ಟಿಲ್ಲ. ಅಂತೆಯೆ ಇದು ಕನ್ನಡ ಹರಿದಾಸರ ವೈಶಿಷ್ಟ್ಯವು.

ದಾಸರುಗಳ ಲೋಕನೀತಿಯನ್ನು ನೋಡುವಾಗ ಕೆಲವು ಅಂಶಗಳು ಹೊರಪಡುವುವು. ಮುಖ್ಯವಾಗಿ ಮನುಷ್ಯನು ದುರಾಚಾರಿಯಾಗಬಾರದು.

ಪರಸ್ತ್ರೀಯರನ್ನು ಬಯಸಬಾರದು. ತನ್ನ ಹೆಂಡಿರು ಮಕ್ಕಳ ದಾಸನಾಗಬಾರದು., ಸಂಸಾರವೇ ಸರ್ವಸ್ವವೆಂದು ಮುಳುಗಬಾರದು. ಮಾತಾಪಿತೃಸೇವೆ ಮಾಡಬೇಕು. ದಾನಧರ್ಮಗಳನ್ನು ಮಾಡಬೇಕು. ಸತ್ಸಂಗ ಮಾಡಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ಭಗವಂತನಲ್ಲಿ ಭಕ್ತಿಮಾಡಬೇಕು, ಎಂಬ ಅಂಶಗಳನ್ನು ಪುನಃ ಪುನಃ ಒತ್ತಿ ಒತ್ತಿ ಹೇಳುತ್ತಾರೆ. ಇದಲ್ಲದೆ ಸ್ತ್ರೀಯರಿಗಾಗಿಯೇ ಕೆಲವು ಉಪದೇಶಗಳನ್ನು ಮಾಡಿರುತ್ತಾರೆ. ತಾಳ್ಮೆ ಮುಂತಾದ ಗುಣಗಳನ್ನು ಪ್ರತ್ಯೇಕವಾಗಿ ಬಣ್ಣಿಸಿದ್ದಾರೆ. ಇದಷ್ಟೇ ಅಲ್ಲ ಲೋಕಧರ್ಮಗಳನ್ನು ಬಿಚ್ಚಿ ತೋರಿದ್ದಾರೆ. ಇನ್ನೂ ಕೆಲವು ಪದಗಳಲ್ಲಿ ಚಮತ್ಕಾರವಾದ ಅರ್ಥಗಳನ್ನು ಹೇಳಿದ್ದಾರೆ. ಹೀಗೆ ದಾಸರ ಉಪದೇಶ ಲೋಕನೀತಿಯ ವಿಷಯದಲ್ಲಿ ಸರ್ವವನ್ನು ತೆಗೆದುಕೊಂಡು ಸಾಗಿದೆ. ಇವು ಬೋಧಪ್ರದವಷ್ಟೇ ಅಲ್ಲದೆ ಅತ್ಯಂತ ಸ್ವಾರಸ್ಯವೂ ಆಗಿವೆ.

ದಾಸರು ಕಲಿಯುಗದ ಧರ್ಮವನ್ನು ವರ್ಣಿಸುತ್ತಾರೆ.

ಕಾಂಬೋಧಿ—ಝಂಪೆ

ಕಲಿಯಿಗದ ಮಹಿಮೆಯನು ಕಂಡಷ್ಟು ಪೇಳುವೆನು
ಕಮಲನಾಭನ ಕೃಪೆಯ ಪಡೆದವರು ಕೇಳಿ ಪ

ಸತ್ಯ ಧರ್ಮಗಳೆಲ್ಲ ಎತ್ತಪೋದವೋ ಕಾಣೆ ಉತ್ತಮರ ಜೀವನಕೆ ದಾರಿಯಿಲ್ಲ| ನಿತ್ಯದಲಿ ಕಳವು ವ್ಯಭಿಚಾರ ಉಳ್ಳವರೆಲ್ಲ ಅರ್ಥ ಸಂಪನರಾಗ್ಯನುಭವಿಸುತಿಹರು ೧

ಅತ್ತೆಯೇ ಸೊಸೆಯಾಗಿ ಸೊಸೆಯೆ ಅತ್ತೆಯುಆಗಿ ಪುತ್ರಪಿತನಾಗಿ ಪಿತಪುತ್ರ ನಾಗಿ | ಮತ್ತೆ ಗಂಡನಿಗೆ ಹೆಂಡತಿಯೆ ಗಂಡಳು ಆಗಿ ವರ್ತಿಸುವರಯ್ಯ ತಮಗೆದುರಿಲ್ಲವೆಂದು ೨

ಹಾವೆ ವರಸೆಯು ತಪ್ಪಿ ವೈರಿವರ್ಗವು ಹೆಚ್ಚಿ ದೇವ ಬ್ರಾಹ್ಮಣ ಗುರು ಹಿರಿಯರನು ಜರಿದು | ಕೇವಲಾಧಮರೆಲ್ಲ ಸಿರಿ ಮದದಿ ಸೊಕ್ಕಿದರು ಕಾವರಾರು ಸಾಧು ಸಜ್ಜನರನೀಗ ೩

ನಡೆವ ಕಾರ್ಯಗಳೆಲ್ಲ ನುಡಿವನ್ನನೆಳವಲ್ಲ ಒಡೆಯನೀನೆ ಬಲ್ಲೆ ಕಲಿಯುಗದ ಮಹಿಮೆ | ತಡವ ಮಾಡಲಿಬೇಡ ತಾಳಲಾರದು ಲೋಕ ಮೃಡನ ವೈರಿಯ ಪೆತ್ತ ಆದಿಕೇಶವನೆ |

ಹಣದ ಮಹತ್ವವನ್ನು ವರ್ಣಿಸುತ್ತಾರೆ.

ಸುರುಟಿ—ಆಪು

ಹಣವೇ ನಿನ್ನಯ ಗುಣವನಿತು ಬಣ್ಣಿಪೆನಯ್ಯ |ಹಣವಿಲ್ಲದವನೊಬ್ಬ ಹೆಣಕಿಂತ ಕಡೆಯಯ್ಯ ಅ

ಬೆಲೆಯಾಗದವನೆಲ್ಲ ಬೆಲೆಯ ಮಾಡಿಸುವಿ ಎಲ್ಲವಸ್ತುದಳಿನ್ನದ್ದಲ್ಲೇ ತರುಸುವಿ |
ಕುಲಗೆಟ್ಟವರ ಸತ್ಕುಲಕೆ ಸೇರುಸುವಿ ಹೊಲೆಯನಾದರು ತಂದು ಒಳಗೆಸೇರಿಸುವಿ ೧

ಅಂಗನೆಯರ ಸಂಗವನ್ನು ಮಾಡಿಸುವಿ ಶೃಂಗಾರಾಭರಣಂಗಳ ತರಿಸುವಿ |
ಮಂಗನಾದರು ಆನಂಗನೆಂದೆನಿಸುವಿ ಕಂಗಳಿಲ್ಲದವಂಗೆ ಮಗಳ ಕೊಡಿಸುವಿ ೨

ಹರಣಕ್ಕೆ ಬಂದಂಥ ದುರಿತವ ಬಿಡಿಸುವಿ ಸರುವರಿಗೆ ಶ್ರೇಷ್ಠನರನೆನಿಸುವಿ |
ಅರಿಯದ ಶುಂಠನ ಅರಿತವನೆನಿಸುವಿ ಸಿರಿಹಯವದನನ ಸ್ಮರಣೆ ಮರೆಯಿಸುವಿ ೩

ಆ ಕೆಳಗಿನ ಪದದಲ್ಲಿ ಕನಕದಾಸರು ಇಂದಿನ ಜೀವನ ಧ್ಯೇಯವನ್ನೇ ಬಿಚ್ಚಿತೋರಿದ್ದಾರೆ. ಅವರ ಮಾತುಗಳು ಅತ್ಯಂತ ನಿಷ್ಠುರವಾಗಿ ತೋರಿದರೂ, ಅದರಲ್ಲಿ ಸ್ವಲ್ಪವೂ ಅತಿಶಯೋಕ್ತಿ ಇಲ್ಲ. ಈಗ ಅತ್ಯಂತ ಪ್ರಗತಿಪರವಾದ ಸಾಮ್ಯವಾದದ ತತ್ತ್ವವಾಗಿದೆ. 'ಹೊಟ್ಟೆ–ಬಟ್ಟೆ'ಗಳ ಸಮಸ್ಯಾ ನಿವಾರಣೆಯೇ ಜಗತ್ತಿನಲ್ಲಿ ಮುಖ್ಯವಾಗಿ ಸಾಧಿಸಬೇಕಾದದ್ದೆಂದು ಈ ನೂತನ ಸಿದ್ಧಾಂತವು ಹೇಳುವುದು. ಇದೇ ಚರಮಧ್ಯೇಯವಲ್ಲವೆಂದು ಸನಾತನ ತತ್ತ್ವವನ್ನು ಧ್ವನಿತವಾಗಿ ದಾಸರು ತಿಳಿಸಿದ್ದಾರೆ.

ನಾದನಾಮ ಕ್ರಿಯೆ–ಏಕತಾಳ

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ ಅ

ವೇದ ಶಾಸ್ತ್ರಪಂಚಾಂಗ ಓದಿಕೊಂಡು ಪರರರಿಗೆ ಬೋಧನೆಯ ಮಾಡುವುದು
ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ೧

ಚಂಡಭಟರಾಗಿ ನಡೆದು ಕತ್ತಿಢಾಳು ಕೈಲಿ ಹಿಡಿದು ಖಂಡ ತುಂಡು ಮಾಡುವುದು
ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ೨

ಅಂಗಡಿಗಳನ್ನೆ ಹೂಡಿ ವ್ಯಂಗ ಮಾತುಗಳನ್ನೆ ಆಡಿ | ಭಂಗ ಬಿದ್ದು ಗಳಿಸುವುದು
ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ೩

ಬೆಲ್ಲದಂತೆ ಮಾತನಾಡಿ ಎಲ್ಲರನ್ನೂ ಮರುಳುಮಾಡಿ | ಸುಳ್ಳು ಬೊಗಳಿ
ತಿಂಬುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ೪

ಸನ್ಯಾಸಿ ಜಂಗಮ ಜೋಗಿ ಜಟ್ಟಿ ಮೊಂಡ ಭೈರಾಗಿ ನಾನಾ | ವೇಷಗಳೆಲ್ಲ
ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ೫

ಉನ್ನಂತ ನೆಲೆಯಾದಿ ಕೇಶವನ ಧ್ಯಾನವನ್ನು ಮನಮುಟ್ಟಿಮಾಡುವುದು
ಮುಕ್ತಿಗಾಗಿ ಆನಂದಕಾಗಿ ೧೧

ಜೀವ ಅನಾದಿ ಕರ್ಮದಿಂದ ಬದ್ಧ. ಅವನ ಆಗುಹೋಗುಗಳೆಲ್ಲ, ಆ ಕರ್ಮ ಫಲಗಳಿಂದ ನಿರ್ಧರಿಸಲ್ಪಡುತ್ತವೆ. ಬಿಡುಗಡೆ ಹೊಂದುವುದು ಯಾರಿಂದಲೂ ಸಾಧ್ಯವಿಲ್ಲವೆಂಬುದನ್ನು ಚಮತ್ಕಾರವಾಗಿ ತಿಳಿಸುತ್ತಾರೆ.

ಮುಖಾರಿ–ಝಂಪೆ

ಪ್ರಾಚೀನ ಕರ್ಮವಿದು ಬಿಡಲರಿಯರು

ಯೋಚನೆಯಮಾಡಿ ಬಳಲುವುದೇಕೆ ಮನವೆ | ಅ

ಸೇತುವೆಯಕಟ್ಟಿ ಲಂಕೆಗೆ ಹಾರಿ ಹನುಮಂತ | ಖ್ಯಾತಿಯಿಂದಲಿ ರಾವಣನ ಕೊಲಿಸಿ | ಸೀತೆಯನು ತಂದು ಶ್ರೀ ರಾಮನಿಗೆ ಕೊಡಲಾಗಿ ಪ್ರೀತಿಯಲಿ ಕೌಪೀನ ಬಿಡಿಸಲಿಲ್ಲ ಹರಿಯು ೧

ಸಾಸಿರನಾಮದ ಒಡೆಯಾದಿಕೇಶವನ ಬೇಸರದೆ ಹೆಗಲಮೇಲಿಟ್ಟುಕೊಂಡು | ಆಕಾಶ ಮಾರ್ಗದಲಿ ತಿರುಗುವ ಗರುಡನಿಗೆ ನಾಸಿಕದ ಡೊಂಕು ತಾ ತಿದ್ದಲಿಲ್ಲ ಹರಿಯು ೩

ಮೋಹನ–ಆಟ

ಕಷ್ಟಪಟ್ಟರು ಇಲ್ಲ ಕಳವಳಿಸಿದರಿಲ್ಲ ಭ್ರಷ್ಟಮನ ನಿನ್ನ ಹಣೆಬರಹದಷ್ಟಲ್ಲದೆ|ಪ |

ಸಿರಿವಂತನ ಸ್ನೇಹ ಮಾಡಿಕೊಂಡರು ಇಲ್ಲ | ಪರಿಪರಿ ವಿದ್ಯೆಗಳ ಕಲಿತರಿಲ್ಲ |ನರ ಬುದ್ಧಿಯಿಂದದಲಿ ನಡೆದುಕೊಂಡರು ಇಲ್ಲ|ಅರಿಯದೆ ಹಲವು ಹಂಬಲಿಸಿದರಿಲ್ಲ ೧

ಕಟ್ಟಾಳು ಕಡುಜಾಣನಾಗಿ ಪುಟ್ಟಿದರಿಲ್ಲ ಬೆಟ್ಟವನು ಕಿತ್ತು ತಂದಿಟ್ಟರಿಲ್ಲ ಸೃಷ್ಟಿಯೊಳು ಕಾಗಿನೆಲೆಯಾದಿಕೇಳವರಾಯ ಕೊಟ್ಟವರಿಗುಂಟು ಕೊಡದವರಿಗಿಲ್ಲ ೩

ಕಾಂಬೋಧಿ–ಝಂಪೆ

ತನ್ನ ಪ್ರಾಪ್ತಿಯಫಲವ ತಾನರಿಯದೆ ಇನ್ನುನುಡಿವುದು ಮೂರ್ಖತನವಲ್ಲವೆ ಪ

ಸರಸಿಜೋದ್ಭವನು ಫಣಿಯೊಳು ಬರೆದು ನಿರ್ಮಿಸಿದತೆರನುಂಟು ಬೇರುಂಟೆ ತಾನರಿಯದೆ | ಕೆರಕೊಂಡು ತನ್ನವರಕೂಡೆ ತಾನಾಡಿದರೆ ನೆರೆದುಃಖವಿದು ಬಿಟ್ಟು ಕಡೆಗೆ ತೊಲಗುವುದೇ ೧

ದೆಸೆಗೆಟ್ಟು ನಾಡು ದೈವಂಗಳಿಗೆರಗಿದರೆ ನೊಸಲ ಬರೆಹವ ತೊಡೆದು ತಿದ್ದಲಳವೇ | ವಸುಧೀಶ ಕಾಗಿನೆಲೆಯಾದಿಕೇಶವನಂಘ್ರಿ ಬಿಸಜವನು ನೀ ಕಂಡು ಸುಖಿಯಾಗು ಮನವೇ ೩

ಮುಂದಿನ ಪದ್ಯಗಳಲ್ಲಿ ಸಾಮಾನ್ಯ ನೀತಿಯನ್ನು ವಿವರಿಸುತ್ತಾರೆ.

ಉಗಾಭೋಗ

ನೀರಿಲ್ಲದ ಭಾವಿ ಊರಿಲ್ಲದ ಮಠವು ನೆರಳಿಲ್ಲದ ಮರ ಫಲವಿಲ್ಲದಂತೆ | ದನವಿಲ್ಲದಾತ ದಯವಿಲ್ಲದನಾಥ | ಮನವಿಲ್ಲದ ಶಕುತಿ ಭಯವಿಲ್ಲದ ಭಕುತಿ |ನರಹರಿ ಮುಕುಂದ ಶ್ರೀ ಕೃಷ್ಣ ಎನ್ನದ | ನರರಿದ್ದು ಫಲವೇನು ಇಲ್ಲದಿದ್ದರೆ ಏನು ||

ಕಾಂಬೋಧಿ—ಝಂಪೆ

ಅಹುದಾದರಹುದೆನ್ನಿ ಇಲ್ಲವಾದರಿಲ್ಲವೆನ್ನಿ
ಬಹುಜನರು ನೆರೆತಿಳಿದು ಪೇಳಿಮತ್ತಿದನು ಅ

ದೇವರಿಲ್ಲದ ಗುಡಿಯು ಹಾಳುಬಿದ್ದಂಗಡಿಯು | ಭಾವವಿಲ್ಲದ ಭಕುತಿ ಅದು ಕುಹುಕಯುಕುತಿ | ಹೇವುವಿಲ್ಲದ ಹೆಣ್ಣು ಗಜುಗಬೆಳೆದ ಕಣ್ಣು | ಸೇವೆಯರಿಯದ ಧಣಿಯು ಅದು ಕಲ್ಲು ಖಣಿಯು |ಮಕ್ಕಳಿಲ್ಲದ ಸಿರಿಯು ಕೊಳೆತ ತೆಂಗಿನಕಾಯು ೧

ಸೌಖ್ಯವಿಲ್ಲದ ಊಟ ಅದು ಕಾಳಕೂಟ | ಒಕ್ಕಲಿಲ್ಲದ ಊರು ಕೊಳೆತು ನಾರುವ ನೀರು | ಸೊಕ್ಕಿ ನಡೆಯುವ ಭೃತ್ಯ ಅವಕ್ರೂರ ಕೃತ್ಯ ೩

ಧನ್ಯಾಸಿ —ಅಟ

ಕೇಶವನೊಲಿಮೆಯು ಆಗುವತನಕ ಹರಿದಾಸರೊಳಿರು ಮನವೆ |ಪ|
ನ್ಯಾಯವ ಬಿಟ್ಟನ್ಯಾಯವ ಪೇಳುವ ನಾಯಿಗೆ ನರಕವು ತಪ್ಪೀತೆ ೧
ಬಾಯಿಕೊಬ್ಬಿನಲ್ಲಿ ಬೈಯುವ ಮನುಜಗೆ ಘಾಯವಾಗದೆ ಬಿಟ್ಟೀತೆ
ತಾಯಿತಂದೆಯರ ನೋಯಿಸಿಸಿದವನಿಗೆ ಮಾಯದ ಮರಣವು ತಪ್ಪೀತೆ ೨
ಮಾಯಾಜಾಲವ ಕಲಿತ ಮನುಜಗೆ ಕಾಯ ಕಷ್ಟವು ಬಿಟ್ಟೀತೆ
ಜೀಣನ ವಶದೊಳು ನಾನಾ ದ್ರವ್ಯವಿರೆ ದಾನ ಧರ್ಮಕೆ ಮನಸಾದೀತೆ ೩
ಹೀನ ಮನುಜನಿಗೆ ಜ್ಞಾನವ ಬೋಧಿಸೆ ಹೀನ ವಿಷಯವಳಿದ್ಹೋದೀತೇ
ಮಾನಿನಿ ಮನ ನಿಧಾನವಿಲ್ಲದಿರೆ ಮಾನಾಭಿಮಾನಗಳುಳಿದೀತೆ ೪
ಭಾನು ಪ್ರಕಾಶನ ಭಜನೆಯ ಮಾಡದ ಹೀನಗೆ ಮುಕುತಿಯು ದೊರೆತೀತೆ ೫
—ಕನಕದಾಸರು

ನಾದನಾನಕ್ರಿಯೆ—ಆದಿ

ನಂಬಿ ನೆಚ್ಚದಿರು ನರಲೋಕ ಸುಖವೆಂಬ ಅಂಬಲಿ ಪರಮಾನ್ನ | ಹಂಬಲಿಸುವುದು ಹರಿ ಲೋಕಾನಂದವೆಂಬ ಪೀಯೂಷಪಾನ | ದುರುಳ ಸಂಗವೆಂಬುದು ಎಂದಿಗೂ ನೊಣ ಬೆರಸಿದ ಊಟ | ಪರಮ ಭಾಗವತರ ಪದಸಂಗವೆಂಬುದು ಮಸ್ತಕದ ಮಕುಟ | ಮರೆ ಮೋಸಗೊಳಿಸುವ ಸತಿಸುತರೆಂಬೋದೆ ಕೇವಲ ಯಮಕಾಟ | ಪರತತ್ವವಾದ ಶ್ರೀಹರಿಯ ತಿಳಿಸುವುದೆ ವೈಕುಂಠಕೆ ಓಟ | —ವಿಜಯದಾಸರು

ಶಂಕಾರಭರಣ—ಆದಿ

ಹರಿನಿನ್ನೊಲುಮೆಯು ಆಗದತನಕ ಅರಿತು ಸುಮ್ಮನಿರುವುದು ಲೇಸು | ಮರಳಿ ಮರಳಿ ತಾ ಪಡೆಯದ ಭಾಗ್ಯಕೆ ಹೊರಹೊರಲುತ ಕನಲಲು ಬಂದೀತೆ ಅ

ದೂರು ಬರುವತೆರ ನಂಬಿಕೆ ಕೊಟ್ಟರೆ ದುರ್ಜನ ಬರುವುದು ತಪ್ಪೀತೆ |

ದೂರದಿ ನಿಂತು ಮೊರೆಯಿಟ್ಟು ಕೂಗಲು ಚೋರಗೆ ದಯವು ಪುಟ್ಟೀತೆ ||
ಬಾರಿ ಬಾರಿಗೆ ಪಾತಿವ್ರತ್ತ್ಯ ಬೋಧಿಸೆ ಜಾರಗದರ ನಿಜ ಸೋಗಸೀತೆ |
ಊರು ಬಿಟ್ಟು ಬೇರೂರಿಗೆ ಹೋದರೆ ಪ್ರಾರಬ್ಧವು ಬೇರಾದೀತೆ ||

—ಪುರಂದರದಾಸರು

ಮುಖಾರಿ—ಝಂಪೆ

ಮೂರ್ಖರಾದರು ಲೋಕದೊಳಗೆ

ಏಕದೇವನ ಬಿಟ್ಟು ಕಾಕು ದೈವವ ಭಜಿಸಿ ಅ

ಒಂಟಿಯಲಿ ಹೆಂಡತಿಯ ಬಿಡುವಾತನೇ ಮೂರ್ಖ | ಗಂಟನೊಬ್ಬರ ಕೈಯಲಿಡುವಾತನೆ ಮೂರ್ಖ | ನೆಂಟರಿಗೆ ಸಾಲವನು ಕೊಡುವಾತನೆ ಮೂರ್ಖ | ಜನಕಂಟಕನಾಗಿರುವ ಕಡು ಮೂರ್ಖನಯ್ಯ | ೧ —ಪುರಂದರದಾಸರು

ಇದೇ ಸಾಮಾನ್ಯ ನೀತಿಯೆನ್ನೇ ಬೇರೊಂದು ಭಾವದಿಂದ ಹೇಳುತ್ತಾರೆ

ಸೌರಾಷ್ಟ್ರ—ಆದಿ

ಮಧ್ವ ಮತವ ಪೊಂದುವವನ ಭಕುತಿಯಾತಕೆ |

ಊರ್ಧ್ವಪುಂಡ್ರ ತಿದ್ದದವನ ಕರ್ಮವ್ಯಾತಕೆ ಪ

ದಾನವನು ಮಾಡದವವನ ದ್ರವ್ಯವ್ಯಾತಕೆ | ಸ್ನಾನವನ್ನು ಮಾಡದವನ ಮೌನವ್ಯಾತಕೆ | ಮಾನಿವಿಯು ಇಲ್ಲದವನ ಬದುಕು ಯಾತಕೆ ಧ್ಯಾನವನ್ನು ಅರಿಯದವನ ಪೂಜೆಯಾತಕೆ ೧

ವಂಶವನ್ನುದ್ಧರಿಸುವಂಥ ಮಗನು ಯಾತಕೆ | ಹಿಂಸೆಯನ್ನೂ ಬಿಡಿಸದಂಥ ಅರಸುಯಾತಕೆ |ಸಂಸಾರವನ್ನು ಒಲ್ಲದಂಥ ಸತಿಯುಯಾತಕೆ | ಕಂಸಾರಿಯನ್ನು ತಿಳಿಯದಂಥ ಜ್ಞಾನವ್ಯಾತಕೆ —ವಿಜಯದಾಸರು

ಸೌರಾಷ್ಟ್ರ—ಆದಿ

ವರಕವಿಗಳ ಮುಂದೆ ನರಕವಿಗಳ ವಿದ್ಯೆ ಮಾಡಬಾರದು ಪ
ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದು ಅ
ಪಾಪಿಗಳಿದ್ದಲ್ಲಿ ರೂಪವುಳ್ಳ ವಸ್ತುವ ತೋರಬಾರದು ಬಹು |
ಕೋಪಿಗಳಿದ್ದಲ್ಲಿ ಅನುಭವ ಗೋಷ್ಠಿಯ ಆಡಬಾರದು ೧
ಮಡದಿಯನು ಕೇಳಿ ಜಗಳಕೊಬ್ಬರಕೂಡೆ ಹೋಗಬಾರದು
ಬಾಯ ಬಡಕರಿದ್ದಲ್ಲಿ ವಸ್ತಿ ಬಿಡಾರ ಮಾಡಬಾರದು ೨
ಮುಂದೆ ಭಲಾ ಎಂದು ಹಿಂದೆ ನಿಂದಿಪರನ್ನು ಕೂಡಬಾರದು

ನಮ್ಮ ತಂದೆ ಬಡದಾದಿಕೇವನ ಸ್ಮರಣೆಯ ಬಿಡಬಾರದು ೩

ಸೌರಾಷ್ಟ್ರ—ಆಟ

ಹರಿ ಸರ್ವೋತ್ತಮನೆಂದು ಸ್ಮರಿಸದ ಜನರ ಸಂಗ ಬೇಡ ಅ

ಸಿರಿವಾಯುಮತಪೊಂದಿ ಹರುಷ ಪಡದವರ ಸಂಗ ಬೇಡ | ಮುಂದೆ ಭಲಾ ಎಂದು ಹಿಂದಾಡಿ ಕೊಂಬುವರ ಸಂಗಬೇಡ | ಎಂದೆಂದಿಗೂ ಪರರ ನಿಂದೆ ಮಾಡುವರ ಪಾಪಿ ಸಂಗ ಬೇಡ | ತಂದೆತಾಯಿಗೆ ಮನ ಬಂದಂತೆ ನುಡಿವರ ಸಂಗ ಬೇಡ | ಇಂದುಮುಖಿಯರ ಮಾತಿನಂದದಿ ಕುಣಿವರ ಸಂಗಬೇಡ |—ಪುರಂದರದಾಸರು

ಮುಖಾರಿ—ಝಂಪೆ

ಚಿತ್ತ ಶುದ್ಧಿ ಇಲ್ಲದ ಮನುಜ ಜ್ಞಾನಿಯೋ ಪಾಪ |

ಹೊತ್ತು ಕಳೆಯುವಂಥ ನರ ಮನುಜನೆ ಅ

ಬಂಧನದೊಳಿಹ ವ್ಯಾಘ್ರ ಅದು ಬಹುತಪಸ್ವಿಯೇ | ಸಿಂಧುವಿನೊಳಿಹ ದೊರೆಕಿದ ಕಿರಣವೇ | ಅಂಧಕನು ಕಣ್ಣು ಮುಚ್ಚಲು ಅದು ಯೋಗ ಸಾಧನವೇ | ಮಂದಮತಿ ಸುಮ್ಮನಿರಲು ಮೌನವೆ ೧

ಶ್ವಾನ ಬೂದಿಯೊಳಿರಲು ಶಿವಭಕ್ತನೆನಬಹುದೆ | ಕಾನನದೊಳಿಹ ಕಾಗೆ ವನವಾಸಿಯೇ | ಗಾಣತಿರುಗಲೆತ್ತು ದೇಶಯಾತ್ರೆಯೆನಬಹುದೆ | ಮೀನದಾಸೆಯ ಬಕನ ಸ್ಥಿತಿ ಧ್ಯಾನವೇ ಪುರಂದರದಾಸರು.

ಕಾಂಬೋಧಿ—ಝಂಪೆ

ಮಾನಭಂಗವ ಮಾಡಿ ಮತ್ತೆ ಉಪಚಾರಗಳನೇನಮಾಡಿದರಲ್ಲಿ ಇರಬಾರದು ಅ

ಕುಂದುಗಳ ನೆತ್ತಿ ಕುಚೋದ್ಯ ಕುಮಂತ್ರಗಳ ನೊಂದೊಂದು ವರ್ಣಗಳ ನೆತ್ತಿ ಜರಿದು | ಮುಂದೆ ಭಂಗಿಸಿ ಹಿಂದೆ ಉಂಬಳಿಯ ನೀಡುವುದು ಮುಂದಲೆಯ ಕೊಯ್ದು ಮುಡಿಗ್ಹುವು ಮುಡಿಸಿದಂತೆ|ಅರ್ಥಹೋದರೆ ಪ್ರಾಣ ಹೋದರೆ ಮಾನ ವ್ಯರ್ಥವಾಗದಹಾಗೆ ಕಾಯಬೇಕು | ಕರ್ತ ಶ್ರೀ ಪುರಂದರವಿಠಲರಾಯನ ಚಿತ್ತದಲಿ ನೆನೆದು ಸುಖಿಯಾಗಬೇಕು. ೩

ಮೋಹನ—ಝಂಪೆ

ಅಜ್ಞಾನಿಗಳಕೂಡೆ ಅಧಿಕ ಸ್ನೇಹಕಿಂತ ಸುಜ್ಞಾನಿಗಳ ಕೂಡೆ ಜಗಳವೇ ಲೇಸು ಅ

ಉಂಬುಡುವಿದಕ್ಕಿರದ ಅರಸನೋಲಗಕಿಂತ ತುಂಬಿದರೊಳಗೆ ತಿರಿದುಂಬುವುದೇ ಲೇಸು | ಹಂಬಲಿಸಿ ಹಾಳು ಹರಟೆಗಳ ಹರಟೆಗಿಂತ ನಂಬಿ ಹರಿದಾಸರೊಳು ಪೊಂದುವುದೆ ಲೇಸು

ಎಸೆದು ಭಜಿಸಲು ನಮ್ಮ ಪುರಂದರವಿಠಲನ್ನ |ವಶವಹಗೆ ಮುಕ್ತಿಯು ವಶವಹಿದೆ ಕೇಳಿ ೩

ಕಾಂಬೋಧಿ–ಝಂಪೆ

ಇದು ಭಾಗ್ಯವಿದು ಭಾಗ್ಯವಿದು ಭಾಗ್ಯವಯ್ಯ |
ಪದುಮನಾಭನ ಪಾದಭಜನೆ ಸುಖವಯ್ಯ ಪ

ಕಲ್ಲಾಗಿರಬೇಕು ಕಠಿಣ ಭವರತೊರೆಯೊಳಗೆ |ಬಿಲ್ಲಾಗಿ ಇರಬೇಕು ಬಲ್ಲವರಿಗೆ | ಮೆಲ್ಲನೆ ಮಾಧವನಮನವ ಮೆಚ್ಚಿಸಬೇಕು | ಬೆಲ್ಲವಾಗಿರಬೇಕು ಬಂಧುಜನರೊಳಗೆ೧

ಬುದ್ಧಿಯಲಿ ತನುಮನವ ತಿದ್ದಿಕೊಳ್ಳಲಿ ಬೇಕು | ಮುದ್ದಾಗಬೇಕು ಮುನಿ ಯೋಗಿಗಳಿಗೆ | ಮಧ್ವಮತಾಬ್ಧಿಯೊಳು ಮೀನನಾಗಿರಬೇಕು | ಶುದ್ಧನಾಗಿರಬೇಕು ಕರಣತ್ರಯಗಳಲಿ ೨

ವಿಷಯ ಭೋಗದ ತೃಣಕೆ ಉರಿಯಾಗಿರಲು ಬೇಕು |ನಿಶಿ ಹಗಲು ಶ್ರೀ ಹರಿಯ ನೆನೆಯ ಬೇಕು | ವಸುಧೇಶ ಪುರಂದರ ವಿಠಲರಾಯನ ಸಹಸನಾದಾಸರ ಸೇವಿಸಲು ಬೇಕು ೩

ಕಾಂಬೋಧಿ–ಝಂಪೆ

ಭೂಷಣಕೆ ಭೂಷಣ ಇದು ಭೂಷಣ | ಶೇಷಗಿರಿವಾಸ ಶ್ರೀ ವೆಂಕಟೇಶ ಪ

ನಾಲಿಗೆ ಭೂಷಣ ನಾರಾಯಣನನಾಮ | ಕಾಲಿಗೆ ಭೂಷಣ ಹರಿ ಯಾತ್ರೆಯು | ಆಲಯಕೆ ಭೂಷಣ ತುಲಸಿ ವೃಂದಾವನವು |ವಿಶಾಲ ಕರ್ಣಕೆ ವಿಷ್ಣುಕಥೆ ಭೂಷಣ ೧

–ಶ್ರೀಪಾದರಾಯರು

ಹೀಗೆ ಸಾಮಾನ್ಯನೀತಿಯು ದಾಸ ಸಾಹಿತ್ಯದಲ್ಲಿ ಹೇರಳವಾಗಿವೆ.

18. ಶೀಲ

ಸ್ತ್ರೀಯರ ವಿಚಾರವನ್ನು ದಾಸರು ಚೆನ್ನಾಗಿ ಹೇಳಿದ್ದಾರೆ. ಪರಸ್ತ್ರೀಯರ ಸಂಗ ಸರ್ವನಾಶಕ್ಕೆ ಕಾರಣ. ಸ್ವಸ್ತ್ರೀಯಾದರೂ ಅವರಿಗೆ ವಶನಾಗಿ ತನ್ನ ವಿವೇಕವನ್ನು ಕಳೆದು ಕೊಳ್ಳಬಾರದು. ಸ್ತ್ರೀಯರಾದರೂ ಹೇಗೆ ವರ್ತಿಸಬೇಕು–ಇವೆಲ್ಲವನ್ನು ವಿವರಿಸಿದ್ದಾರೆ.

ಲೋಕದಲ್ಲಿ ಅನೇಕ ದೋಷಗಳುಂಟು. ಅದರಲ್ಲಿ ಇಂದ್ರಿಯಚಾಪಲ್ಯ ಬಹು ದೊಡ್ಡದೋಷ.ಇಂದ್ರಿಯಚಾಪಲ್ಯದಲ್ಲಿಯೂ ಜಿಹ್ವೇಂದ್ರಿಯ ಮತ್ತು ಗುಹ್ಯೇಂದ್ರಿಯ ಸಂಯಮನ ಮಾಡುವುದು ಅತಿದುಸ್ತರ. ಆರಂಭದಿಂದಲೂ ಮಾನವ ಜನಾಂಗದ ಅತಿಮುಖ್ಯ ಪ್ರಶ್ನೆಗಳಲ್ಲೊಂದಾಗಿದೆ ಗಂಡು ಹೆಣ್ಣಿನ ಸಂಬಂಧ. ಮೈಥುನವೆಂಬುದು ಪ್ರಾಣಿ ಸಾಮಾನ್ಯ ಧರ್ಮ. ಮನುಷ್ಯನನ್ನು ಬಿಟ್ಟು ಉಳಿದ ಪ್ರಾಣಿಗಳಿಗೆ ಈ ಸಂಬಂಧಕ್ಕೆ

ಒಂದು ನಿಯತಕಾಲವುಂಟು. ಆ ಋತುಕಾಲದಲ್ಲೇ ಗಂಡು ಹೆಣ್ಣಿನ ಸಂಬಂಧ ಬಯಸುವುದು. ಮನುಷ್ಯನಲ್ಲಿ ಈ ಕಾಲ ನಿಯಮ ಸಂತಾನವಾಗುವ ಮಟ್ಟಿಗೆ ಇದ್ದರೂ ಸ್ತ್ರೀ ಪುರುಷರ ಪ್ರಣಯಕ್ಕೆ ನಿಯಮವಿಲ್ಲ. ಈ ನಿಯಮವಿಲ್ಲದೆ ಪಶುಗಳಂತೆ ಯಾರೆಂದರವರನ್ನು ಕೂಡುಕೊಳ್ಳುವ ಪದ್ಧತಿಯಾದರೂ ಜಗತ್ತಿನ ಯಾವುದೇ ಜನಾಂಗದಲ್ಲಿ ಒಂದಿಲ್ಲೊಂದು ರೀತಿಯಿಂದ ಪ್ರತಿರೋಧಿಸಲ್ಪಟ್ಟಿದೆ. ಇದಕ್ಕಾಗಿಯೆ 'ಮದುವೆ' 'ಸೂಳೆಗಾರಿಕೆ' ಗಳೆಂಬ ಪದ್ಧತಿಗಳೂ ಬೆಳೆದು ಬಂದಿದೆ. ಈ ಎರಡು ನಿಯಮಗಳಿಂದ ಈ ಸಮಸ್ಯೆ ಪರಿಹಾರವಾಗಿಲ್ಲ. 'ಮದುವೆ'ಯ ಅಚ್ಚುಕಟ್ಟಿನಲ್ಲೂ 'ವ್ಯಭಿಚಾರ'ದ ಸೋಂಕು ಇದೆ. ಸೂಳೆಗಾರಿಕೆ ವೃತ್ತಿ ಕೆಲವರಿಗೆ ಅಸಹ್ಯವಾಗಿಯೂ ಇದ. ಇದೆಲ್ಲ ಆಯಾವ್ಯಕ್ತಿಗಳ ಕರ್ಮ ಸ್ವಭಾವವನ್ನನುಸರಿಸಿ ನಡೆದು ಬಂದಿದೆ. ಇಂತಹ ನಿಯಮಗಳಿದ್ದೂ ಅತ್ಯಂತ ಸಂಯಮಿಗಳಾದ ಪರಾಶರ, ವಿಶ್ವಾಮಿತ್ರ, ಮೊದಲಾದ ಮುನಿಗಳೂ ತಾರಾ, ಅಹಲ್ಯೆ ಮುಂತಾದ ಸಾಧ್ವಿಯರೂ ಇಂದ್ರಿಯಗಳ ಬಲೆಗೆ ವಶರಾಗಿ ಅಚಾತುರ್ಯ ನಡೆಸಿದ್ದಾರೆ. ಆದ್ದರಿಂದ ಈ ನಿಯಮಗಳನ್ನು ಸಡಿಲಗೊಳಿಸಿ ಜನರ ಸ್ವಾಭಾವಿಕ ಪ್ರವೃತ್ತಿಗಳಲ್ಲೊಂದಾದ ಕಾಮ ಪಿಪಾಸೆಗೂ ತಕ್ಕ ಅವಕಾಶ ಕಲ್ಪಿಸಿಕೊಡುವುದು ಸೂಕ್ತವೆಂದು ಆಧುನಿಕ ಪ್ರಗತಿಶೀಲರು ವಾದಹೂಡಿದ್ದಾರೆ. ಧರ್ಮವು ಅನಾಯಕವಾಗಿ ಅನೀತಿಯೇ ಎಲ್ಲೆಲ್ಲೂ ತಾಂಡವವಾಡುತ್ತಿರುವಾಗ ಅವರು ಹೂಡಿರುವ ಈ ವಾದವೇ ಜನತೆಗೆ ಮಾನ್ಯವಾಗುವುದರಲ್ಲಿ ಸಂದೇಹವಿಲ್ಲ. ಆದರೆ ಮಾನವ ಇತಿಹಾಸವನ್ನು ಚೆನ್ನಾಗಿ ಅಧ್ಯಯನ ಮಾಡಿದರೆ ಈ ನೂತನ ವಾದವು ವಿಘಾತಕವಾದುದೆಂದು ಅನಿಸದಿರದು. ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಯಾವುದನ್ನೂ ಮುಚ್ಚಿ ಮರೆ ಮಾಡಿಲ್ಲ. ಮದುವೆಯ ಜಟಿಲವಾದ ನಿಯಮಗಳನ್ನು ತಿಳಿಸಿದಂತೆ, ಸೂಳೆಗಾರಿಕೆಯ ಕ್ರಮವನ್ನು ಹೆಣ್ಣನ್ನೊಲಿಸುವ ಬಗೆಯನ್ನೂ ಕಾಮಶಾಸ್ತ್ರದಲ್ಲಿ ವರ್ಣಿಸಿದ್ದಾರೆ. ಪರಸ್ತ್ರೀಸಂಗ ಮಹಾಪಾತಕವೆಂದು ಬೆದರಿಸಿದ ಶಾಸ್ತ್ರಗಳಲ್ಲೇ ಮೇಲೆ ಹೇಳಿದಂತಹ ವಿಶ್ವಾಮಿತ್ರಾದಿಗಳ ದೃಷ್ಟಾಂತಗಳೂ ಉಕ್ತವಾಗಿವೆ. ಇದೆಲ್ಲ ವಿಚಾರಮಾಡಿ ವಿವೇಕಿಯಾದವನು ಕ್ಷೇಮಕರವಾದ ಮಾರ್ಗದಲ್ಲಿ ಹೆಜ್ಜೆ ಹಾಕಬೇಕೆಂಬುದೇ ನಮ್ಮ ಪ್ರಾಚೀನರ ಮತ. ವಿಶ್ವಾಮಿತ್ರಾದಿಗಳ ದೃಷ್ಟಾಂತವು ದಾರಿ ತಪ್ಪಿಹೋಗುವವನಿಗೆ ಎಷ್ಟರಮಟ್ಟಿಗೆ ಮಾರ್ಗದರ್ಶಿಯಾಗಿದೆಯೋ ಸರಿಯಾದ ಮಾರ್ಗವನ್ನನು ಸರಿಸಿಬೇಕೆಂಬುವವರಿಗೂ ಅಷ್ಟೇ ಮಾರ್ಗದರ್ಶಕವಾಗಿದೆ. ಕ್ಷಣಿಕವಾದ ಆಸೆಗೆ ಬಲಿ ಬಿದ್ದು ವಿಶ್ವಾಮಿತ್ರಾದಿಗಳು ಎಷ್ಟೋ ಕಾಲದಿಂದ ಆರ್ಜಿಸಿದ ತಪಸ್ಸಿನ ಫಲವನ್ನೂ ಕಳೆದುಕೊಳ್ಳಬೇಕಾಯಿತು. ಅಹಲ್ಯೆ ಸಾವಿರಾರು ವರ್ಷ ಕಲ್ಲಾಗಿರಬೇಕಾಯಿತು. ಇದರಿಂದ ಅವರ ಪಥವೇ ದುರ್ಗಮವಾಗಿ ಹೋಯಿತೆಂಬ

ವಿವೇಕ ಸನ್ಮಾರ್ಗವಲಂಬಿಯಾದವಗೆ ಬರದೆ ಇರದು. ಆಹಾರದಲ್ಲಿ ಎಷ್ಟು ನಿಯಮ ಮಾಡಿದರೂ ರೋಗಗಳು ಇದ್ದೇ ಇರುತ್ತವಾದ್ದರಿಂದ ಆ ನಿಯಮಗಳನ್ನೇ ತೊಡೆದುಹಾಕಿ ಸ್ವೇಚ್ಛಾಚಾರಕ್ರಮವನ್ನೂ ರೂಢಿಗೆ ತರುವುದು ಮಾನವ ಜನಾಂಗದ ಕ್ಷೇಮಕ್ಕಲ್ಲವೆಂದು ಎಂತಹ ಮಂದಮತಿಯೂ ತಿಳಿಯದಿರಲಾರನು. ಕಾಮವಿಷಯವೂ ಅಷ್ಟೆ. ಮನುಷ್ಯಸಾಮಾನ್ಯನಿಗೆ ಜೀವನಪಥದಲ್ಲಿ ಮುಂದಡಿಯಿಡಲು ಕೆಲವು ಧ್ಯೇಯಗಳು ಬೇಕೆ ಬೇಕು. ಆ ಧ್ಯೇಯ ಎಂದಿಗೂ, ಎಲ್ಲರಿಗೂ ಸಾಧಿಸಲಸಾಧ್ಯವಾದರೂ ಇಡೀ ಮಾನವ ವರ್ಗದ ಅನಂತಕಾಲದ ಇತಿಹಾಸದ ವ್ಯಾಪ್ತಿಯ ದೃಷ್ಟಿಯಿಂದ ಇದು ಅನಿವಾರ್ಯ. ಕಾಮಸಂಯಮ ಇಂತಹ ಧ್ಯೇಯದಲ್ಲೊಂದು. ವಿಶ್ವಾಮಿತ್ರಾದಿ ಮುನಿಗಳೇ ಇದರಿಂದ ಚ್ಯುತರಾದರೆಂದು, ಇಂದಿನಂತಹ ಅನೀತಿ ಯುಗದಲ್ಲೂ ಎಲ್ಲರೂ ಸ್ವೇಚ್ಛಾಚಾರಿಗಳಾಗಿಲ್ಲ. ಸಮಗ್ರ ಇತಿಹಾಸದ ಪರ್ಯಾಲೋಚನೆಯಿಂದ ಈ ವಿಷಯದಲ್ಲಿ ಸರಿಯಾದ ಮಾರ್ಗದಲ್ಲಿರುವವರೇ ಚ್ಯುತರಾದವರಿಗಿಂತ ಹೆಚ್ಚು. ಈ ಉದಾತ್ತನೀತಿಯನ್ನು ಉಳಿಸಿಕೊಂಡು ಬರಲೋಸುಗವೇ ನಮ್ಮಲ್ಲಿ ಅಂತಹ ಕಠಿಣ ನಿಯಮಗಳನ್ನು ಮಾಡಿರುವರು. ಹರಿದಾಸರೂ ಸಹ ಪರಸತಿಯ ಸಂಗ ಬಲು ಕೆಟ್ಟುದೆಂದು ಧಾಳವಾಗಿ ಬೋಧಿಸಿರುವರು.

ಆನಂದ ಭೈರವಿ–ಛಾಪು

ನೋಡದಿರು ಪರಸ್ತ್ರೀಯರ ನೋಡಿದರೆ ಕೇಡಹುದು ತಪ್ಪದಿದಕೋ ಅ
ನೋಡಿದರೆ ಸ್ತ್ರೀಹತ್ಯವು ನುಡಿಸಿ ಮಾತಾಡಿದರೆ ಗೋಹತ್ಯವು | ಕಾಡಿದರೆ ಶಿಶುಹತ್ಯವು ಮೈಗೂಡಿದರೆ ಬ್ರಹ್ಮಹತ್ಯವು ೧
ಎರಳ ಗಂಗಳರೊಲುಮೆಗೆ ಮರುಳಾಗಿ ಬರಿದೆ ನೀ ಕೆಡಬೇಡವೊ | ದುರುಳ ಯಮಲೋಕದಲ್ಲಿ ಕರೆದೊಯ್ದು ಉರಿಗಂಬವಪ್ಪಿಸುವರೋ ೨
ಮರುಳು ಮಾನವನೆ ಕೇಳೋ ಪರಸತಿಯ ಉರಿಯೆಂದು ನೋಡು ನಿತ್ಯ | ಪುರಂದರವಿಠಲನ ನೆನೆದರೆ ಸ್ಥಿರವಾದ ಮುಕುತಿಯಹುದು ೩

ಯದುಕುಲ ಕಾಂಬೋಧಿ–ಝಂಪೆ

ಯಮನ ಶಾಸನ ಕೇಳೋ ಜೀವ ಇದು ಸಂಶಯವಿಲ್ಲೆಂದು ಎಣಿಸು ಸ್ವಭಾವ ಅ
ಪರಸತಿಯರ ನೋಡಿದವಗೆ ಪತ್ತುಕೊರದು ಕೆಂಪಗೆಕಾಸಿ ಕುಕ್ಕಿ ಕಣ್ಣೊಳಗೆ | ಎರಡು ಗುಡ್ಡನು ಪೀಕೊರವಗೆ ಕರಗಿಸಿ ಸೀಸವ ಪೊಯ್ಯೋವರೋ ಅವನ ಕಿವಿಯೊಳಗೆ ೧
ಅನ್ಯಸ್ತ್ರೀ ಪುರುಷರ ಸಂಗ ತನ್ನವರ ಕುಲ ಅಳಿಸಿಟ್ಟು ಹಾಕುವ ರಂಗ | ನರಕಕ್ಕೆ ಗುರಿಮಾಡಿ ತುಂಗ ಕೆಂಡ ಉರಿವ ಉಕ್ಕಿನಕಂಭ ಕಟ್ಟಿಭಂಗ ೨ –ಪುರಂದರದಾಸರು

ಮೋಹನ–ಝಂಪೆ

ಬೇಡ ಪರಸತಿ ಸ್ನೇಹ ಭ್ರಷ್ಟನಾದ್ಯೊ ಮನುಜ । ನೋಡಿಕೋ ನೊಂದವರನು । ಧರಣಿಯೊಳಗೆ ಜಲಂಧರನು ಗೌರೀಗಣಿಕಿ ಹರನಿಂದ ಹತನಾದನು । ಮೂರು ಲೋಕವಗೆದ್ದು ಮೂಢರಾವಣ ಬಿದ್ದ ಹೀನಕೀಚಕನು ಕೆಟ್ಟಭ್ರಷ್ಟ ೧

ಕಾಕಾಸುರನ ನೋಡು ಏಕಾಕ್ಷಿಯಾದನು । ಪಾಕ ಶಾಸನನನೋಡು । ಆಕಾಶದಲಿ ಚಂದ್ರನಾಕಾರವನೆ ನೋಡು । ಯಾಕಲ್ಪಕಿನ್ನು ಬಿಡದು ಕೆಡದು ೨

–ಪುರಂದರದಾಸರು

ಕಾಂಬೋಧಿ–ಝಂಪೆ

ಹೆಣ್ಣಿಗಿಚ್ಛೆಸುವರೆ ಮೂಢ ಇದನು ಕಣ್ಣಿ ಮೈಮನಗಳಿಂ ಸೋಂಕಲೇಬೇಡ ಪ

ತಾಯಾಗಿ ಮೊದಲೆಪಡೆದಿಹುದೆ ಮಾತು ಜಾಯಾಯೆಂದೆನಿಸಿ ಕಾಮದಿ ಕೆಡಹುವುದು । ಕಾಯದಲಿ ಜನಿಸುತ್ತಲಿಹುದು ಇಂತು ಮಾಯೆಯು ನಿನ್ನ ಬಹು ವಿಧದಿ ಕಾಡುತಲಿಹುದು ೧

ಹಿತಶತ್ರುವಾಗಿ ಪೊಂದುವುದು ನಿಮಿಷ ರತಿ ಕೊಟ್ಟು ನಿತ್ಯ ಮುಕ್ತಿನಾಶಾ ಳಿಯುವುದು । ಕ್ಷಿತಿಯ ಪೂಜ್ಯತೆ ಕೆಡಿಸುವುದು ಮುಂದೆ ಶತ ಜನ್ಮಂಗಳಿಗೆ ಹೊಣೆಯಾಗಿ ನಿಲ್ಲುವುದು ೨

ಈ ಬಗೆಯ ತನು ಎಲು ನರಖಂಡ ಅದರೊಳಗೆ ವಾಯುರಂಧ್ರಕಿಸಿ ಕೊಳದೊ ದ್ದಂಡ । ಭಗವೆಂಬುದು ಮೂತ್ರದ ಭಾಂಡ ಅದವಗೆಡಿಸದೆ ನಿತ್ಯ ಸುಖವಿಲ್ಲಕಂಡ್ಯ೩

ವಶವಾದ ವಾಲಿಯ ಕೊಲ್ಲಿಸಿಹುದು ಹೀಗೆ ಹೆಸರು ಮಾತ್ರದಿ ದಶಕಂಠ ನ್ನಳಿಸಿಹುದು । ಶಚಿಪತಿಯಂಗದಿ ಭಗಾಕ್ಷಯ ಎಸೆದಿಹುದು ಹೀಗೆ ಹೆಸರು ಮಾತ್ರದಿ ಕೀಚಕನಳಿಸಿಹುದು ೪

ಪಶುಪತಿದೆಸೆಗೆಡಿಸಿಹುದು ಹೀಗೆ ವಸುಧೆಯೊಳು ಜೀವರಹಸಗೆಡಿಸುವುದು । ವಸುಧೇಶನ ನಾಮ ಮರೆಸುವುದು ನಮ್ಮ ಅಸಮ ಪುರಂದರವಿಠಲನ ಪೊರೆದು ೫

ಈ ಮೇಲಿನ ಪದಗಳಿಂದ ದಾಸರು ಎಲ್ಲರನ್ನೂ ಬರಿಯ ಸನ್ಯಾಸಿಗಳಾಗಿರೆಂದು ಹೇಳಲಿಲ್ಲ. 'ಅನಿಷಿದ್ಧ ಸುಖತ್ಯಾಗೀ ಪಶುರೇವ ನ ಸಂಶಯಃ' ಎಂಬ ನಾಣ್ಣುಡಿಯನ್ನು ಅವರೂ ಒಪ್ಪಿರುವರು. ನಿಷೇಧವಲ್ಲದ ಸುಖಪಡುವುದನ್ನು ಅವರು ಹೇಳಲು ಮರೆತಿಲ್ಲ.

ಪಂತುವರಾಳಿ–ಅಟ

ಅನ್ಯ ಸತಿಯರೊಲುಮೆಗೊಲಿದು ಅಧಮಗತಿಗೆ ಬೀಳಲೇಕೆ ।
ತನ್ನ ಸತಿಯರೊಲುಮೆಗೊಲಿದು ತಾನು ಸುಖಿಸಬಾರದೇಕೆ ಅ

ಮಿಂದುಮಲವನ್ನು ಬಿಡಿಸಿ ಮೇಲು ವಸ್ತ್ರವನ್ನು ತೊಡಿಸಿ | ಅಂದವಾದ ಆಭರಣವನ್ನಿಟ್ಟು ಆರ್ತಿಯಿಂದ ನೋಡುತ | ಗಂಧ ಕಸ್ತೂರಿ ಪುನುಗುಪೂಸಿ ಘಮಕದಿಂದ ಹೂವ ಮುಡಿಸಿ | ಸಂಕ್ಷಮದಿ ಸಂತೋಷ ಪಡುವ ಸುಖವು ತನಗೆ ಸಾಲದೆ | ೧

ಪೊಂಬಣ್ಣ ಎಸೆವ ಮೈಯದೊಳು ಒಲಿವ ಕುಚಕ್ಕೆ ಕೈಯನಿಟ್ಟು | ಕಂಬು ಕಂಧರವ ನೋಡಿ ಕಸ್ತೂರಿನಿಟ್ಟು ಮುದ್ದಿಸುತ | ಹಂಬಲಿಸಿ ಸತಿಯನೋಡಿ ಹಲವು ಬಂಧದಿಂದ ಕೂಡಿ | ಸಂಕ್ಷಮ ಸಂತೋಷ ಪಡುವ ಸುಖವು ತನಗೆ ಸಾಲದೆ | ಸತಿಪತಿಯು ಏಕವಾಗಿ ಸರ್ವಜನ ಹಿತವ ಚಿಂತಿಸಿ | ಅತಿಥಿಯನ್ನು ಪೂಜೆಮಾಡಿ ಒಂದೆನಿಸಿ ಕೊಳ್ಳುತ | ಕ್ಷಿತಿಯೊಳಧಿಕವಾದ ಗುರು ಪುರಂದರ ವಿಠಲನ್ನ ಪಾದವನು ಸ್ಮರಿಸಿ | ಸತಿ ಸುತರು ಹಿತರು ನೀವು ಹಿತದಿಂದ ಆಳಿರೋ | ೩

ಆದರೂ ಸಾಧಕನಾದವನು ಹೆಂಗಳೆಯರಲ್ಲಿ ಮನಸೋತರೆ ಅವರು ಅದರ ದುರುಪಯೋಗ ಪಡಿಸಿಕೊಳ್ಳುವುದು ಖಂಡಿತ. ಹೆಂಡಂದಿರ ಸ್ಥಿತಿಯೇ ಹೀಗಿರುವಾಗ ಇನ್ನು ಪರಸ್ತ್ರೀಯರಂತೂ ಸರ್ವಥಾ ನಂಬಿಕೆಗರ್ಹರಲ್ಲವೆಂದು ದಾಸರು ಹೇಳುತ್ತಾರೆ.

ಪೂರ್ವಿ—ಆದಿ

ನಂಬಬೇಡಿ ನಾರಿಯರನು ಹಂಬಲ ಹಾರೈಸಬೇಡಿ |
ಅಂಬುಜಾಕ್ಷಿಯರೊಲುಮೆ ಡಂಭಕವೆಂದು ತಿಳಿಯಿರೋ ಅ
ಧರಣಿಜನರು ಕೇಳಿ ಲೇಶ ಕರುಣವಿಲ್ಲ ನಾರಿಯರಿಗೆ | ಎರಳೆ ಕಂಗಳೊಲುಮೆ ಬರೆಹ ನೀರಮೇಲಿನ | ಸರಸಮುಖಿಯರಿರವ ನೀವು ಬರಿದೆ ನಂಬಿ ಕೆಡಲುಬೇಡಿ |
ಗುರು ಪುರಂದರ ವಿಠಲರಾಯನ ಚರಣ ನಂಬಿಬದುಕಿರೋ ೩

19 ಸ್ತ್ರೀವಿಭಾಗ

ಹೆಂಗಸಿನದು ಗಂಡಸಿಗೆ ಸರಿಯಾದಸ್ಥಾನವೆಂಬ ಸಿದ್ಧಾಂತ ಈ ಪ್ರಜಾಯುಗದಲ್ಲಿ ಅಂಗೀಕೃತವಾಗಿದ್ದರೂ, ಪ್ರಾಚೀನ ಸಮಾಜಶಾಸ್ತ್ರವಾದಿಗಳು ಇದನ್ನು ಒಪ್ಪುವುದಿಲ್ಲ. ಹೆಂಗಸಿನ ಕ್ಷೇತ್ರ ಕಾರ್ಯ ಮನೋಭಾವನೆ ಬೇರೆ. ಗಂಡಸಿನವು ಬೇರೆ. ಅವೆರಡೂ ಎಂದಿಗೂ ಒಂದಾಗುವುದಿಲ್ಲ. ಇದು ಸೃಷ್ಟಿಯವೈಚಿತ್ರ್ಯ. ಪ್ರಪಂಚ ನಡೆಯುವುದು ದ್ವಿಮುಖವಾದ ಕಾರ್ಯದಿಂದ, ಮೊದಲು ಜಗತ್ತು ಅಂದರೆ ಸಂತಾನ ಅಭಿವೃದ್ಧಿಯಾಗಿ ಆ ಸಂತಾನಗಳು ಸುಖ ಸಂರಕ್ಷಣೆ ಗೃಹಕೃತ್ಯ ನಿರ್ಬಾಧಕವಾಗಿ ನಡೆಯಬೇಕು. ಇದು ಹೆಂಗಸರಿಗೆ ಸೇರಿದ ಕೆಲಸ. ಸ್ವಾಭಾವಿಕವಾಗಿ ಕೋಮಲಾಂಗಿಯರೂ, ಮಕ್ಕಳನ್ನು ಹೆರುವರೂ ಆಗಿರುವ ಹೆಂಗಸರ ದೇಹನಿರ್ಮಾಣವೇ ಇದಕ್ಕೆ ಒಗ್ಗಿರುವುದು.ಇನ್ನು ಗಂಡಾಸಾದರೆ ದೇಹತಃ ಕಠಿಣನಾದ್ದರಿಂದಲೂ ಹೊರಗಿನ ಕಷ್ಟಗಳನ್ನು ಸಹಿಸ ಬಲ್ಲನಾದ್ದರಿಂದಲೂ, ಸಂಪಾದನೆ ಮಾಡಿ ಜಗತ್ತಿನಲ್ಲಿ ಬೇರೆ ಬೇರೆ ಕಾರ್ಯ ಸಾಧಿಸುವ

ಪ್ರಕೃತಿ ಅವನದು. ಅವನದ್ದು ಸ್ವಾಭಾವಿಕವಾಗಿ ಅಧಿಕಾರ ಮಾಡುವ ಧೋರಣೆ. ಹೆಣ್ಣಿನದಾದರೂ ಅವಳೆಷ್ಟೇ ಉಚ್ಚಪದವಿಯವಳಾದರೂ ಗಂಡನಿಗೆ ಅಡಿಯಾಳಾಗಿರುವ ಸ್ವಭಾವ, ಸಾಮ್ರಾಜ್ಞಿಯರೆನಿಸಿದ ರಾಣಿ ಎಲಜಿಬತ್ ಮೊದಲಾದ ಹೆಂಗೆಳೆಯರೂ ಕಾಮಜೀವನದಲ್ಲಿ ತಮ್ಮ ಸೇವಕರ ಅಧೀನರಾದುದ್ದು ಐತಿಹಾಸಿಕ ಸಂಗತಿ. ಸ್ತ್ರೀಪುರುಷರ ಕಾಮಕೇಳಿಯೇ ಅವರಿಬ್ಬರ ಅಂತಸ್ತನ್ನು ನಿರ್ಧರಿಸುತ್ತದೆ. ಈ ಸ್ವಾಭಾವಿಕ ಭೇದವನ್ನೇ ದೋಷವೆಂದು ತಿಳಿದು ಅದನ್ನು ತೊಡೆದು ಹಾಕಲು ಹವಣಿಸುವ ಇಂದಿನ ಸಮಾಜ ಸುಧಾರಕರು ಕುರುಡರೇ ಸರಿ. ಹೆಂಗಸರ ಸ್ಥಾನಮಾನ ಅವರ ದೇಹರಚನೆ, ಮನೋಭಾವನೆಗೆ ಅನುಸರಿಸಿ ಇರಬೇಕೆಂದು ಅಲೆಕ್ಸಿಸ್‌ಕಾರೆಲ್ ಮೊದಲಾದ ಪಾಶ್ಚಾತ್ಯ ವಿಜ್ಞಾನಿಗಳು, ಡಾಕ್ಟರರು ಸ್ಪಷ್ಟವಾಗಿ ನುಡಿದಿದ್ದಾರೆ. ಪ್ರಕೃತ ಹೆಣ್ಣಿಗೆ ಅವಳ ಹದ್ದು ಮೀರಿ ಸ್ವಾತಂತ್ರ್ಯಕೊಟ್ಟರೆ ಜೀವನ ಹಸನಾಗದೆಂದು ದಾಸರುಗಳು ನಿರ್ದಾಕ್ಷಿಣ್ಯವಾಗಿ ನುಡಿದಿದ್ದಾರೆ.

ಮೋಹನ–ಛಾಪು

ಸತಿಗೆ ಸ್ವತಂತ್ರವ ಕೊಡದಿರು ನಿನ್ನ ಮತಿಗೆಟ್ಟು ಬಾಯಬಿಡದಿರಣ್ಣ ಪ

ಪತಿಗೆ ಬಣ್ಣದ ಮಾತನಾಡ್ಯ್ಯಾಳೋ ಅವಳು ಮಿತಿಇಲ್ಲದೆ ವೆಚ್ಚ ಮಾಡ್ಯಾಳ್ಯೋ |
ಅತಿ ಹರುಷದಿಂದ ಕೂಡ್ಯಾಳೋ ಪರಗತಿಗೆ ಕರಕರೆ ಮ್ಯಾಡ್ಯಾಳಣ್ಣ ಅ

ಹಡೆದ ತಂದೆ ತಾಯಿ ತೊರೆಸ್ಯಾಳೋ ತನ್ನ ಕಡೆಗೆ ಬಾಯೆಂದು ಕರೆಸ್ಯಾಳೋ |
ಬಿಡದೆ ಒಂಟಿಯಮಾಡಿ ನಿಲ್ಲಿಸ್ಯಾಳೋ ಪಡಿ ಭತ್ತಕೆ ಬಾಯ ಬಿಡಿಸ್ಯಾಳಣ್ಣ ೨

–ಪುರಂದರದಾಸರು

ಕಾಂಬೋಧಿ–ಛಾಪು

ಪತಿಭಕುತಿ ಇಲ್ಲದಿಹ ಸತಿಯಸಂಗ ವ್ರತ ಕೆಟ್ಟು ಸುಖಪಡೆಯಲಿಲ್ಲವೋ ರಂಗ ಅ

ಒಂದುತಂದರೆ ಮನೆಗೆ ಹತ್ತೆಂದು ಭಾವಿಸದೆ ತಂದರೆ ಹತ್ತು ಮನೆಲೊಂದು ಮಾಡಿ | ಇಂದೇನಿಲ್ಲವೋ ಎಂದು ಮುಖ ಮೂರುಕಡೆ ತಿರುವಿಕೊಂಡು ಹೋಗುವನಾರಿ ದೊಡ್ಡ ಬಕಮಾರಿ ೨

ಪಂತುವರಾಳಿ–ಅಟ

ಸುಜ್ಞೆಯಿಂದಾಳಬೇಕಣ್ಣ ಗಂಡಾನಾಜ್ಞೆಯ ಮೀರಿ ನಡೆವಲಂಡ ಹೆಣ್ಣ ಅ

ಅತ್ತೆನಮಾವಗೆ ಅಂಜದವಳ ತನ್ನ ಉತ್ತಮಪುರುಷನ ಜರಿದು ನುಡಿದವಳ |
ಭಕ್ತರಕಂಡು ಬಂಧಿಪಳ ನಡುನೆತ್ತಿಯ ಚರ್ಮವ ಕೆತ್ತಬೇಕವಳ ೧

ನಲ್ಲರಕಂಡು ನಗುವಳ ತನ್ನ ಬಲ್ಲಿದ ಗಂಡನ ಬೈದು ಕರೆವಳ | ಮಲ್ಲರಂದದಿ ಹೋರುವವಳ ಅವಳ ಹಲ್ಲುಮುರಿದು ಜೀಕ್ವೆ ಸೀಳ ಬೇಕವಳ ೨

ಎಂದೂ ಈಪರಿಯಲ್ಲಿರುವವಳ ಅಂದ ಮಾಡುವುದೇಕೆ ಬಿಡಬೇಕನ್ನಿವಳ |
ಒಂದಿಷ್ಟು ಗುಣವಿಲ್ಲದವಳ ಶ್ರೀಪುರಂದರವಿಠಲರಾಯಗಲ್ಲದವಳ ೩

ಈ ಕೆಳಗಿನ ಪದದಲ್ಲಿ ಪುರಂದರದಾಸರು ಗಂಡನಿಲ್ಲದ ಹೆಂಗಸು ಸಮಾಜದಲ್ಲಿ ಎಷ್ಟು ಕೀಳು ಎಂಬುದನ್ನು ಅತಿ ಕನಿಕರದಿಂದ ಹೇಳುತ್ತಾರೆ.

ಮುಖಾರಿ–ಝಂಪೆ

ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ ಹಡೆದವಳ ಎದೆಕೊರಳ ಕೊಯ್ವಂಥ ಚೂರಿ ಪ

ಮಾತು ಕಲಿತರೆ ಏನು ಮಾಹಾಜಾಣೆಯಾದರೇನು ಚಾತುರ್ಯವಿದ್ದರೇನು ಚಲುವೆ ಯಾದರೆ ಏನು | ರಾಶಿ ಹಣವಿದ್ದರೇನು ಏಸು ಕೇಳಿದರೇನು ರೀತಿ ಕೆಟ್ಟ ಜನ್ಮ ಪೊರೆಯ ಬೇಕಲ್ಲ. ೧

ಹೊರಗೆ ಬರಲಿಕೆ ಸಲ್ಲ ಇದಿರಾಗಿ ಇರಸಲ್ಲ | ಅಡಿ ಯೋಗ್ಯಳಲ್ಲ ಹರಿಯು ತಾನೆ ಬಲ್ಲ | ಮರ್ಯಾದೆಗಳು ಇಲ್ಲ ಬಲು ಹಗುರ ರಾಜ್ಯಕೆಲ್ಲ ಸರ್ವ ರೀತಿಲಿ ಕೆಟ್ಟ ಜನ್ಮ ಪೊರೆಸಲ್ಲ ೨

ಅತ್ತೆ ತನ್ನಯ ಮಗಗೆ ಮೃತ್ಯು ಎಂತೆಂಬುವಳು ಹುಟ್ಟಿದಾ ಮನೆಯವರು ದೂಷಿಸುವರು | ಎಷ್ಟು ಹೇಳಲಿ ಬಹಳ ತುಚ್ಛವನೆ ಮಾಡುವರು ಅಕ್ಕ ತಂಗಿಯರಿಗೆ ದಿಕ್ಕು ಎಂಬುವರು ೩ –ಪುರಂದರದಾಸರು

ಈ ಕೆಳಗಿನ ಪದಗಳಲ್ಲಿ ಸ್ತ್ರೀಯರ ಧರ್ಮವನ್ನು ಹೇಳಿರುವರು.

ಪಂತುವರಾಳಿ–ಅಟ

ಸಾರಿದ ಡಂಗುರ ಯಮನು ಪಾಪಿ ನಾರೇರ ಎಳೆತಂದು ನರಕದಲ್ಲಿಡಿಯೆಂದು ಪ

ಹೊತ್ತಾರೆ ಎದ್ದು ಪತಿಗೆ ಎರಗದವಳ ಮೃತ್ತಿಕೆ ಶೌಚಮಾಡದಿಪ್ಪಳ | ಬತ್ತಲೆ ಕುಳಿತು ಮೈತೊಳೆವಳ ನಾದಿನಿ ಅತ್ತೆಮಾವನ ಬೈವಳೆಳೆತನ್ನಿರೋ ಎಂದು ೧

ಜಲಚಕ್ಕಿ ಸಾಳಿ ಕಂಬಳಿ ಬೋಳಿ ಉಕ್ಕಿ ಗೊಂದಲ್ಲಿ ಮೊದಲಾದವು ದೈವವೆಂದು | ತಿಳಿದು ಪಿಶಾಚಿ ಎಂಜಲನುಂಡು ಹಿಗ್ಗುವ ಲಲನೇರ ನಾಲಸ್ಯಗೊಳದೆ ತನ್ನಿರೊ ಎಂದು ೪

ಒಲಿವ ಔಷದಧಮಾಡಿ ಪತಿಯ ಒಲಿಸುವಳ ಮಲಮಕ್ಕಳೊಳು ಮತ್ಸರಿಸುತಿಪ್ಪಳ ಕಳವಿಲಿ ಕಾಂತನ ಧನವವಂಚಿಸುವಳ ಗಳಕೆ ಪಾಶವ ಕಟ್ಟಿ ಎಳತನ್ನಿರೊ ಎಂದು ೫

ಬಾಲಕರನು ತೊಟ್ಟಿಲೊಳಗಿಟ್ಟು ತೂಗುತ ಪಾಲೆರವುತ ಬೀಸುತ ಕುಟ್ಟುತಾ | ಆಲಯದೊಳು ಕೆಲಸಗಳ ಮಾಡುತ ಲಕ್ಷ್ಮೀಲೋಲನ ಗುಣವ ಪಾಡುವರ ನೋಡಿರೆಂದು ೧೫

ಅರಿಸಿನ ಕುಂಕುಮ ಪುಷ್ಪಾಂಜನ ವಸ್ತ್ರಾಭರಣ ಭೂಷಿತರಾಗಿ ಪತಿಯೊಡನೆ ಸರಸ ವಾಡುತ ಸುಖ ಹರಿಗೆ ಸಮರ್ಪಿಸಿ ಹರುಷ ಬಡುತಲಿಪ್ಪರ ಮುಟ್ಟದಿರೆಂದು ೧೭

ಅಗಣಿತ ಮಹಿಮ ಶ್ರೀಜಗನ್ನಾಥ ವಿಠಲನ ಹಗಲು ಇರಳು ಬಗೆ ಬಗೆ ಯಿಂದಲಿ | ಪೊಗಳುವ ದಾಸರ ಬಗೆಯವರಾದಂಥ ಸುಗುಣೆರಿದ್ದೆಡಗೆಗೆ ಕೈಮುಗಿದು ಬನ್ನಿರೋ ಎಂದು ೧೮

ಕಾಂಬೋಧಿ–ಝಂಪೆ

ತಂಗಿಗ್ಹೇಳಿದ ಕೃಷ್ಣ ಚೆಂದದಲಿಬುದ್ಧಿ ಅತ್ತೆಯ ಮನೆಯಲ್ಲಿ ಇರುವಂಥ ಸುದ್ಧಿಅ

ಯಾರೇನು ಅಂದರೂ ಮೋರೆಯನು ತಿರುವದಿರು ಮೋರೆ ಮೇಲೆ ಕೈಯೆತ್ತಿ ಬಲ್ಲ ಳೆಂದನಿಸಿ | ವಾರಿಗೆವರ ಕೂಡಿ ನೀರನ್ನು ತರುವಾಗ ವಾರಗಣ್ಣಿಲನೋಟ ನೋಡದಿರು ಕಂಡ್ಯ ೧

ಹಾಕಿದ್ದು ನೀಸೂಡುಬೇಕೆಂದು ಬೇಡದಿರು ಸಾಕು ಸಾಕು ಎಂಬ ನಾಚಿಕೆಯ ಹಿಡಿಯೆ | ನಾಕುಮಂದಿಯೊರಡನೆ ಕೋಕೆ ಮಾತಾಡದಿರು ಲೋಕದೊಳಗಿವಳೊಬ್ಬ ಮೂಕಿ ಎಂದನಿಸೆ ೨

ಇಷ್ಟರು ಅಂದರೂ ನಿಷ್ಠೂರ ಮಾಡದಿರು ಘಟ್ಟಿ ಮಾಡಮ್ಮ ನಿನ್ನ ಮನಸು | ಸೃಷ್ಟಿಯೊಳಗೆ ನಮ್ಮ ಪುರಂದರವಿಠಲನ್ನ ಶ್ರೇಷ್ಠನಾದ ಕೃಷ್ಣನ್ನ ತಂಗಿ ಎಂದೆನಿಸೆ ೩

ಶಂಕರಾಭರಣ–ರಾಗ

ಬುದ್ಧಿ ಮಾತು ಹೇಳಿದರೆ ಕೇಳಬೇಕಮ್ಮ ಮನ
ಶುದ್ಧಳಾಗಿ ಗಂಡನೊಡನೆ ಬಾಳಬೇಕಮ್ಮ ಅ

ಅತ್ತೆ ಮಾವಗಂಜಿಕೊಂಡು ನಡೆಯುಬೇಕಮ್ಮ ಮಗಳೆ | ಚಿತ್ತದೊಲ್ಲಭ ನಕ್ಕರೆಯನ್ನು ಪಡೆಯ ಬೇಕಮ್ಮ | ಹೊತ್ತು ಹೊತ್ತಿಗೆ ಮನೆಯ ಕೆಲಸ ಮಾಡಬೇಕಮ್ಮ ಮಗಳೆ | ಹತ್ತುಮಂದಿ ಒಪ್ಪುವ ಹಾಗೆ ನುಡಿಯಬೇಕಮ್ಮ ೧ –ಪುರಂದರದಾಸರು

20. ಸಂಕೀರ್ಣ

ದಾಸರುಗಳು ಬ್ರಾಹ್ಮಣ, ಹೊಲೆಯ, ಸ್ನಾನ, ಹಬ್ಬ ಋಣ, ಮಡಿ, ದುರ್ಜನರು ಹೀಗೆ ನಾನ ವಿಷಯಗಳ ಮೇಲೆ ಪ್ರತ್ಯೇಕವಾದ ಪದಗಳನ್ನು ರಚಿಸಿದ್ದಾರೆ. ಅವೊಂದೊಂದು ಬಹಳ ನೀತಿ ಬೋಧಕವಾಗಿವೆ. ಬ್ರಾಹ್ಮಣಾದಿಗಳ ಕರ್ತವ್ಯ ಕರ್ಮವನ್ನು ಬಿಟ್ಟು ಬರಿಯಕುಲವೇ ದೊಡ್ಡತನ ತಂದು ಕೊಡುವುದೆಂದು ಭ್ರಾಂತಿಯನ್ನು ಕನಕದಾಸರು ಬಯಲು ಮಾಡಿತ್ತಾರೆ.

ಮಧ್ಯಮಾವತಿ–ಅಟ

ಕುಲಕುಲವೆನ್ನುತಿಹರು ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ ಪ

ಕೆಸರೊಳು ತಾವರೆ ಪುಟ್ಟಲು ಆದ ತಂದು ಬಿಸಜನಾಭನಿಗೆರ್ಪಿಸಲಿಲ್ಲವೆ |ಹಸುವಿನ ಮಾಂಸದೊಳುತ್ತಿ ಕ್ಷೀರವು ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ ೧

ಆತ್ಮ ಯಾವಕುಲ ಜೀವ ಯಾವಕುಲ ತತ್ತ್ವೇಂದ್ರಿಯ ಕುಲ ಪೇಳಿರಯ್ಯ | ಆತ ಮಹಾತ್ಮನು ನೆಲೆಯಾದಿಕೇಶವ ಯಾತರ ಕುಲವಯ್ಯ ಆತನೊಲಿದಮೇಲೆ ೩

ಹೊಲೆತನ ಯಾವುದೆಂಬುದನ್ನು ವಿವರಿಸುತ್ತಾರೆ.

ನಾದನಾಮಕ್ರಿಯೆ–ಆದಿ

ಹೊಲತಿ ಹೊಲೆಯ ಇವರವರಲ್ಲ ಹೊಲಗೇರಿಯಲಿ ಹೊಲೆಯ ಹೊಲೆತಿಲ್ಲ ಅ

ಸತಿ ವಶನಾಗಿ ಜನನಿ ಜನಕಗೆ ಅತಿ ನಿಷ್ಠುರವನುಡಿದವ ಹೊಲೆಯ |

ಸುತರ ಪಡೆದು ವಾರ್ಧಕ ಮದವೇರಿ ಪತಿದ್ವೇಷ ಮಾಡುವಳೇ ಹೊಲತಿ ೧

ಗುರುವಿದ್ಯಾ ಕಲಿತು ಸುಖದಲ್ಲಿ ಜೀವಿಸಿ ಹಿರಿಯರ ಬಳಲಿಸುವವ ಹೊಲೆಯ |

ಪುರುಷರಿಗೊಲಿದು ಸ್ವಪುರುಷನ ಸರ್ವದಾ ವಿರಸ ಮಾಡುವವಳೆ ಹೊಲತಿ ೨

ಅಜನಪಿತ ನಾರಾಯಣನ ಪಾದದ ಭಜನೆ ಮಾಡದವನತಿ ಹೊಲೆಯ | ನಿಜವಾದ ಪುರಂದರ ವಿಠಲರಾಯನ ತ್ಯಜಿಸಿ ಬಾಳ್ವಳೆ ಅತ್ಯಂತ ಹೊಲತಿ ೩

ಬ್ರಾಹ್ಮಣ ಧರ್ಮವನ್ನು ಹೀಗೆ ಹೇಳಿದ್ದಾರೆ.

ಭೈರವಿ –ಆದಿ

ಬ್ರಾಹ್ಮಣನೆಂದರೆ ಬ್ರಹ್ಮನ ತಿಳಿದವನೀಗ ಬ್ರಾಹ್ಮಣನೊ ಅ

ಬ್ರಹ್ಮಭೇದವೆಂದು ಜಗವನ್ನು ಕಂಡವನೀಗ ಬ್ರಾಹ್ಮಣನೋ ಅ

ಮೂಗಲ್ಲಿ ವಾಯುತುಂಬಿ ತುಂಬಿ ಎಳೆಯೋವನವನೀಗ ಬ್ರಾಹ್ಮಣನೊ| ನಾದಸ್ವರದ ಧ್ವನಿ ಕಿವಿಯಲ್ಲಿ ಕೇಳೂವ ಅವನೀಗ ಬ್ರಾಹ್ಮಣನೋ | ಬೇಗನೆನೆಲೆನೆಲೆ ಆರನ್ನ ಆಡರೋವ ಅವನೀಗ ಬ್ರಾಹ್ಮಣನೋ | ವೇಗದಿಂದಲಿ ಚಂದ್ರಮಂಡಲ ದಮೃತವನೂಡುವ ಬ್ರಾಹ್ಮಣನೋ ೧

ಮುಖಾರಿ–ಅಟ

ಆಚಾರಿಯರೆಂಬುವರ ಇವರ ನೋಡಿ ಆಚಾರ ಬಲ್ಲವರೆ ಆಚಾರ್ಯರು ಪ

ಆ ಎಂದರೆ ಅತಿ ತತ್ತ್ವ ತಿಳಿದವರು ಅದ್ವೈತ ಮತಧ್ವಂಸ ಮಾಡುವರು |ಅತಿಥಿ ಅಭ್ಯಾಗತರಿಗೆ ಅನ್ನನವನ್ನು ಇಕ್ಕುವರು ಆಯುತವೃತ್ತಿಯನ್ನೇ ಮಾಡುವವರು ೧

ಚಾ ಅಂದರೆ ಚಂಚಾಲಾತ್ಮವನ್ನೆ ಅಳಿದವರು ಚೆನ್ನಾಗಿ ಮೋದಶಾಸ್ತ್ರವನ್ನೆ ಓದಿದವರು | ಚಲನೆಯಿಲ್ಲದೆ ಹಿರಿಯರಿಗೆ ಎರಗುವರು ಚಾನಸವ ಬಿಟ್ಟವರು ಆಚಾರ್ಯರು ೨

ರು ಎಂದರೆ ಋಣವ ಮಾಡದಿದ್ದವರು ರಿಪುಮಿತ್ರ ಸರ್ವರೆಂದು

ನೋಡುವರು | ರೌಪ್ಯ ಸೌವರ್ಣವನ್ನು ಮೃತ್ತಿಕೆಯೆಂದು ನೋಡುವರು ರಮಾಧವ ಪುರಂದರವಿಠಲನ್ನ ಬಲ್ಲವರೆ ಆಚಾರು ೩

ಸ್ನಾನ ವಿಷಯವನ್ನು ಪುರಂದರದಾಸರು ಹೇಳುತ್ತಾರೆ.

ಪೂರ್ವಿ—ಅಟ

ಸ್ನಾನ ಮಾಡಿರೋ ಜ್ಞಾನತೀರ್ಥದಲಿ ನಾನು ನೀನೆಂಬ ಅಹಂಕಾರವ ಬಿಟ್ಟು ಅ

ತಂದೆತಾಯಿಗಳ ಸೇವೆಯೊಂದು ಸ್ನಾನ ಬಂಧನದವರ ಬಿಡಿಸಲೊಂದು ಸ್ನಾನ | ಮುಂದಣಮಾರ್ಗ ತಿಳಿಯೊದೊಂದು ಸ್ನಾನ ಇಂದಿರೇಶನ ಧ್ಯಾನವೇ ಗಂಗಾ ಸ್ನಾನ ೧

ಪರಸತಿಯರ ಬಯಸದ್ದಿದರೆ ಒಂದು ಸ್ನಾನ ಪರರ ನಿಂದಿಸದಿರುವುದೊಂದು ಸ್ನಾನ | ಪರರೊಡೆವೆಯಪಹರಿಸದಿರೆ ಒಂದು ಸ್ನಾನ ಪರತತ್ತ್ವ ತಿಳಿದುಕೊಂಡರೆ ಗಂಗಾ ಸ್ನಾನ ೨

ವೇದಶಾಸ್ತ್ರವನೋದುವುದೊಂದು ಸ್ನಾನ ಭೇದಾಭೇದವ ತಿಳಿದರೊಂದು ಸ್ನಾನ | ಸಾಧು ಸಜ್ಜನರ ಸಂಗ ಒಂದು ಸ್ನಾನ ಪುರಂದರವಿಠಲನ ಧ್ಯಾನವೆಗಂಗಾ ಸ್ನಾನ ೩

ಅಂತಶ್ಶೌಚ ಬಾಹ್ಯಶೌಚವನ್ನರಿಯದೆ ನೀರಲ್ಲಿ ಮುಳುಗಿ ಮಡಿಯೆಂದು ಹಾರಾಡುವುದು ತಪ್ಪೆಂದು ದಾಸರು ತಿಳಿಸುತ್ತಾರೆ.

ಮಡಿ ಸುಳಾದಿ

ಧ್ರುವತಾಳ

ಮಡಿ ಮಾಡಬೇಕು ಒಳ್ಳೆಯ ನಡತೆ ಕಲಿಯಬೇಕೆಂ | ದೆಡಹಿ ಮುಗ್ಗುತ ನೀರ ಮಡುವಿನೊಳಗೆ ಪೋಗಿ | ಬುಡಗುಳಿಯಂತೆ ಮಿಂದು ಗುಡುಗುಡು ಗುಟ್ಟುತಲಿ | ನಡುವೆ ಮಂತ್ರಗಳು ಕಡುವೇಗ ಪಟ್ಟೆನಾಮ | ಬಡೆದು ಮುದ್ರೆಯ ಹಚ್ಚಿ ಜಡದೇಹ ತೊಳೆದು ನೀ | ಅಡಗಡಿಗೆ ಕಾಮ ಕ್ರೋಧ ಒಡಲೊಳು ಮಲ ಮೂತ್ರ | ಝುಡಿತ ರಕ್ತಮಾಂಸ ಕಡುಘೋರ ಇಂದ್ರಿಯಗಳು | ಕೊಡದೊಳು ಮದ್ಯತುಂಬಿ ಮುಡಿಗೆ ಪೂಮಾಲೆ ಸುತ್ತಿ | ಕಡುಪರಿಮಳ ದ್ರವ್ಯ ಸುಗಂಧ ಲೇಪಿಸಿ |ನಡು ಬೀದಿಯೊಳಿಟ್ಟು ಬೆಡಗು ತೋರಿಸಿ ಇನ್ನು | ಮಡಿ ಮಾಡಿದರುದು ಮಡಿಯಾಗಬಲ್ಲುದೆ | ಕಂದೆಡೆಯಲ್ಲಿ ವ್ಯಾಪ್ತನಾದ ಗೋಪಾಲವಿಠಲನೆಂದು | ದೃಢನುಡಿಯನೊಮ್ಮೆ ನುಡಿದು ಮಡಿ ಮಾಡಿದವ | ಮಡಿವಂತ ಮಡಿವಂತ ಮಡಿವಂತನೋ ||

ಶಂಕರಾಭರಣ—ಆದಿ

ಮಡಿ ಮಡಿ ಮಡಿಯೆಂದಡಿಗಡಿಗ್ಹಾರುವೆ ಮಾಡುವಬಗೆ ಬೇರುಂಟು | ಪ

ಪೊಡವಿಪಾಲಕನ ಪಾದಧ್ಯಾನವನು ಬಿಡದೆಮಾಡುವುದು ಮಡಿಯು | ಅ

ಬಟ್ಟೆಯ ನೀರೊಳಗದ್ದಿ ಒಣಗಿಸಿ ಉಟ್ಟುಕೊಂಡರೆ ಮಡಿಯಲ್ಲ |

ಹೊಟ್ಟೆಯೊಳಗಿನ ಕಾಮಕ್ರೋಧ ಮದಮಾತ್ಸರ್ಯಬಿಟ್ಟು ನಡೆದರೆ ಅದು ಮಡಿಯು೧
ದಶಮಿ ದ್ವಾದಶಿ ದಿನದಲಿ ವಸುದೇವ ಸುತನನನು ಪೂಜಿಸದೆ | ದೋಷಕಂಜದೆ
ಪರರನ್ನ ಭುಂಜಿಸಿ ಯಮಪಾಶಕೆ ಸಿಲುಕುವದದು ಮಡಿಯೆ ೨
ಹಿರಿಯರ ಗುರುಗಳ ಹರಿದಾಸರುಗಳ ಚರಣಕ್ಕೆರಗಿ ಬಲು ಭಕ್ತಿಯಲಿ |
ಪರಿಪಾಲಿಸು ಎಂದು ಪುರಂದವಿಠಲನ ಇರುಳು ಹಗಲಿ ಸ್ಮರಿಸುವುದುಮಡಿಯು ೩

ಈಗಿನ ಕಾಲಮಹಿಮೆಯನ್ನು ವರ್ಣಿಸುತ್ತಾರೆ.

ಪೂರ್ವಿ—ಅಟ

ಧರ್ಮಕ್ಕೆ ಕೈ ಬಾರದೀಕಾಲ ಪಾಪಕರ್ಮಕ್ಕೆ ಮನಸೋಲದೀಕಾಲ | ಅ |
ದಂಡ ದ್ರೋಹಕೆ ಉಂಟು ಪುಂಡು ಪೋಕರಿಗುಂಟು ಹೆಂಡತಿ ಮಕ್ಕಳಿಗಿಲ್ಲೀ
ಕಾಲ | ದಿಂಡೇರಿಗುಂಟು ಜನ ಭಂಡರಿಗುಂಟು ಅಂಡಲೆವರಿಗಿಲ್ಲವೀಕಾಲ ೧
ಮತ್ತೆ ಸುಳ್ಳರಿಗುಂಟು ನಿತ್ಯಹಾದರಕುಂಟು ಉತ್ತಮರಿಗಿಲ್ಲವೀ ಕಾಲ | ತೊತ್ತೇರಿ
ಗುಂಟು ಕಾಟಕಿಗುಂಟು ಹೆತ್ತ ತಾಯಿಗಿಲ್ಲವೀಕಾಲ ೨
ಹುಸಿದಿಟವಾಯಿತು ರಸ ಕಸವಾಯಿತು ಸೊಸೆ ಅತ್ತೆ ದಂಡಿಸೋದೀ ಕಾಲ |
ಬಿಸಜಾಕ್ಷ ಪುರಂದರವಿಠಲನ ಮನದಲ್ಲಿ ಸ್ತುತಿಸುವವರಿಗಿಲ್ಲವೀ ಕಾಲ ೩

ಎಲ್ಲ ಜನರ ಮೆಚ್ಚುಗೆಗೆ ಪಾತ್ರನಾಗುವುದು ಎಷ್ಟು ಕಷ್ಟವೆಂದು ಹೇಳುತ್ತಾರೆ.

ಬಿಲಹರಿ—ಆಟ

ಹರಿ ಹರಿ ನಿನ್ನನು ಒಲಿಸಲುಬಹುದು ನರರನೊಲಿಸುವುದು ಬಲು ಕಷ್ಟ ಪ
ಸುಮ್ಮನೆ ಇದ್ದರೆ ಬಹಳ ಗರುವಿಕೆ ಆತನಿಂಗೆಂಬೋರು | ಹೊರ ಬಿಚ್ಚಾಡಲು
ಬಾಯಿ ಬಡಕನೆಂಬೋರು | ಆಡದಿದ್ದರೆ ಮೂಕನೆಂಬರಯ್ಯ | ೨
ಸತಿಯಳ ಸಂಗದಿ ಸೌಖ್ಯವಿದ್ದರೆ ಸಲಿಗೆ ಕೊಟ್ಟ ಕೋತ್ಯೆಂಬರು | ವ್ರತದ ನಾರೇರ
ಸಂಗವ ಬಿಟ್ಟರೆ ನಪುಂಸಕನೆಂತೆಂಬರು | ಅರಿಯದಿದ್ದರೆ ದಡ್ಡನೆಂಬರಯ್ಯ |

—ಪುರಂದರದಾಸರು

ಮೋಹನ —ಆಟ

ಜಾಲಿಯ ಮರವಂತೆ ಧರೆಯೊಳು ದುರ್ಜನರು ಜಾಲಿಯಮರವಂತೆ ಪ
ಮೂಲಾಗ್ರ ಪರ್ಯಂತ ಮುಳ್ಳು ಕೂಡಿಪ್ಪಂಥ ಅ
ಬಿಸಿಲಲ್ಲಿ ಬಳಲಿಬಂದವರಿಗೆ ನೆರಳಿಲ್ಲ ಹಸಿದು ಬಂದವರಿಗೆ ಹಣ್ಣು ಇಲ್ಲ | ಕುಸುಮ
ವಾಸನೆ ಇಲ್ಲ ಕೂಡಲು ಸ್ಥಳವಿಲ್ಲ ರಸದಲ್ಲಿ ಸ್ವಾದವು ವಿಷದಂತೆ ಇರುತಿಹ ೧
ತನ್ನಿಂದ ಉಪಕಾರ ತಟುಕಾದರೂ ಇಲ್ಲ ಬಿನ್ನಾಣ ಮಾತಿಗೆ ಕೊನೆ ಇಲ್ಲವು |
ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ ಇನ್ನಿವರ ಕಾರ್ಯವು ಪುರುದರವಿಠಲ ೩

ಮುಖಾರಿ–ಝಂಪೆ

ಇರಬೇಕು ನಿಂದಕರುಸಜ್ಜನರಿಗೆ | ದುರಿತರಾಶಿಗಳೆಲ್ಲ ಪರಿಹರಿಪಗೋಸುಗದಿ ಪ
ಮಲವ ತೊಳೆವಳು ತಾಯಿ ನೀರನಿಂದಲಿ ನಿತ್ಯತೊಳೆವ ನಿಂದಕ ತನ್ನ ನಾಲಗಿಂದಾ | ಬಲು ಮಿತ್ರನಿವನೆಂದು ತಿಳಿದು ಮನ್ನಿಸಬೇಕು ಹಲವು ಮಹಾ ಪಾಪಗಳ ಕಳೆದು ಪುಣ್ಯವನೀವ | ಈ ಕಲಿಯುಗದೊಳಿವರ ನಿರ್ಮಿಸಿದ ಹರಿ ತಾನು ಭೂಕೋವಿದರ ಮಲವು ಪೋಗಲೆಂದು | ಶ್ರೀಕರಾರ್ಚಿತ ಜಗನ್ನಾಥ ವಿಠಲ ಗ್ರಾಮ ಸೂಕರರು ನಿಂದಕರು ಕರುಣಾಳು ಇಳೆಯೊಳಗೆ ೬

ನಾದನಾಮಕ್ರಿಯೆ–ಆಟ

ನಿಂದಕರಿರಬೇಕು ಹಂದಿಯಿದ್ದರೆ ಕೇರಿ ಹ್ಯಾಂಗೆಶುದ್ಧಿಯೋ ಹಾಂಗೆ ಅ
ಅಂದಂದು ಮಾಡಿದ ಪಾಪವೆಂಬ ಮಲತಿಂದು ಹೋಗುವರಯ್ಯ | ನಿಂದಕರು ವಂದಿಸಿ ಸ್ತುತಿಸುವ ಜನರೆಲ್ಲರು ನಮ್ಮ ಪೊಂದಿಹ ಪುಣ್ಯವ ನೊಯ್ಯುವರಯ್ಯ ೧
ದುಷ್ಟಜನರು ಈ ಸೃಷ್ಟಿಯೊಳಿದ್ದರೆ ಶಿಷ್ಟ ಜನರಿಗೆಲ್ಲ ಕೀರ್ತಿಗಳು | ಇಷ್ಟಪದೆ ಶ್ರೀ ಕೃಷ್ಣ ನಿನ್ನೊಳು ಇಷ್ಟೇವರವನು ಬೇಡುವೆನಯ್ಯ ೨
ದುರುಳ ಜನಗಳು ಚಿರಕಾಲವಿರುವಂತೆ ಕರವ ಮುಗಿದು ವರವಬೇಡುವೆನು | ಪರಿ ಪರಿ ತಮಸಿಗೆ ಗುರಿಯಹರಲ್ಲದೆ ಪರಮ ದಯಾನಿಧೆ ಪುರಂದರವಿಠಲ ೩

ಋಣವೆಂಬುದು ಜಗತ್ತಿನಲ್ಲಿ ಎಷ್ಟು ಕೆಡುಕಿನದೆಂದು ಹೇಳುತ್ತಾರೆ.

ಧ್ರುವತಾಳ

ಋಣದಿಂದ ಕಡಿಮೆಮಾಡು ಘನಮಹಿಮ ಕೃಪೆಯಿಂದ | ಎನಗಾರು ಪೊರೆವ ರಾಧರವಿಲ್ಲ | ಫಣಿಯ ಮುಂದಾದರೂ ಭಯಪಡದಿರಲಾಪೆ | ಅನಳಗಂಜದೆ ನಿಂದಿರ ಬಹುದು | ಋಣಭಾರದ ಮುಂದೆ ಇದಿರಿಸುವುದು ಶ್ರಮವು | ತನುವನಡಿಗಿ ಸಿಕೊಂಡು ತಿರುಗಬೇಕು | ಋಣದ ಸೂತಕವು ಜನ್ಮಜನ್ಮಾಂತರಕೆ | ತೊಲಗದು ಆವಾವಪರಿ ದುಡಿಯೆ | ಅನಿಮಿಷರು ಪೇಳುವರು ಶ್ರುತಿಯಿಂದಲಿ | ಋಣ ಭಯಂಕರ ರೂಪಿ ವಿಜಯವಿಠಲರೇಯ | ಋಣವಿದ್ದವನು ಹೊಲೆಯನೆಂದೆನಿಸುವನೋ ||

ಜೊತೆ

ಋಣ ಪೋಗದಿರೆ ನಿನ್ನರ್ಚಿಸಿ ಧ್ಯಾನಕೆ ಸಲ್ಲ
ಅನಿರ್ದೇಶವಪುಷ ಶ್ರೀವಿಜಯವಿಠಲರೇಯ

ಮುಖಾರಿ–ಆಟ

ಋಣವೆಂಬಸೂತಕವು ಬಹುಬಾಧೆ ಪಡಿಸುತ್ತಿದೆ
ಗುಣನಿಧಿಯೆ ನೀನೆನ್ನ ಋಣವ ಬರಿಹರಿಸೊ ಅ

ಕೊಟ್ಟವರು ಬಂದೆನ್ನ ನಿಷ್ಠುರಗಳನಾಡಿ ಕೆಟ್ಟ ಬೈಗಳ ಬೈದು ಮನ ದಣಿಯಲು |ದಿಟ್ಟ ತನವನು ಬಿಟ್ಟು ಕಳೆಗುಂದಿಹೆನಯ್ಯ ಸೃಷ್ಟಿಗೊಡೆಯನೆ ಎನ್ನಋಣವ ಪರಿಹರಿಸೊ ೧

ಹೆತ್ತ ಸೂತಕ ಹತ್ತು ದಿನಗಳಿಗೆ ಪರಿಹಾರ | ಮೃತ್ಯುಸೂತಕವು ಹನ್ನೊಂದುದಿನಕ ಮತ್ತೆ ಋಣ ಸೂತಕವು ಜನ್ಮ ಜನ್ಮಾಂತರಕೆ | ಎತ್ತ ಹೋದರೂ ಬಿಡದೆ ಬೆನ್ನತ್ತಿ ಬಹುದು ೪

ನೆಂಟನೊಡನೆ ಸಂಬಂಧ ಹೇಗೆಂದು ವರ್ಣಿಸುತ್ತಾರೆ.

ಕಾಂಬೋಧಿ–ಝಂಪೆ

ಶಕ್ತನಾದರೆ ನೆಂಟರಲ್ಲ ಹಿತರು

ಅಶಕ್ತನಾದರೆ ಅವರೆ ವೈರಿಗಳು ಲೋಕದಲ್ಲಿ ಅ

ವರದ ಶ್ರೀಪುರಂದರವಿಠನು ಒಲಿದಿರಲು ಸರ್ವ ಜನರೆಲ್ಲ ಮೂಜಗದ ಹಿತರು | ಕರಿಯ ಕಾಯಿದ ಹರಿಯ ಕರುಣ ತಪ್ಪಿದ ಮೇಲೆ ಮರೆಯ ಹೊಕ್ಕರು ಕಾಯ್ವ ಮಹಿತರಾರಯ್ಯ ೩

ಕಾಂಬೋಧಿ–ಟಾಪು

ಕೆಟ್ಟು ನೆಂಟರ ಸೇರುವುದು ಬಹು ಕಠಿಣ ಇನ್ನು | ಹುಟ್ಟೇಳು ಜನ್ಮಕೂ ಇದು ಬೇಡ ಹರಿಯೇ | ಕುಡುಗೋಲ ಪಿಡಿದು ಕೊರಳನು ಕೊಯ್ದುಕೊಳ್ಳಬಹುದು ಒಡಲಿಗಾಗಿ| ಹುಡಿಯ ಮುಕ್ಕಲಿ ಬಹುದು | ಪೊಡವಿಯೊಳು ಪುರಂದರವಿಠಲರಾಯನ ಕಡು ಹರುಷದಿ ಭಜಿಸಿ ಸುಖಿಯಾಗಬಹುದು ೨

ಏನಾದರೂ ಜೀವನಿಗೆ ಚಿಂತೆ ತಪ್ಪದೆಂದು ಹೇಳುತ್ತಾರ.

ಕಾಫಿ–ಅಟ

ಅನುಗಾರವು ಚಿಂತೆಜೀವಕ್ಕೆ ತನ್ನ ಮನವು ಶ್ರೀರಂಗನೊಳ್ ಮೆಚ್ಚುವತನಕ ಅ

ಸತಿಇದ್ದರೂ ಚಿಂತೆ ಸತಿ ಇಲ್ಲದ ಚಿಂತೆ ಮತಿಹೀನೆ ಸತಿಯಾದರೂ ಚಿಂತೆಯೋ | ಪೃಥ್ವಿಯೊಳಗೆ ಸತಿ ಕಡುಚೆಲ್ವೆಯಾದರೆ ಮಿತಿಮೀರೆ ಇಲ್ಲದ ಮೋಹದ ಚಿಂತೆ ೧

ಬಡವನಾದರೂ ಚಿಂತೆ ಬಲಿದನಾದರೂ ಚಿಂತೆ ಹಿಡಿ ಹೊನ್ನ ಕೈಯೊಳಿದ್ದರೂ ಚಿಂತೆಯು | ಪೊಡವಿಯೊಳಗೆ ನಮ್ಮ ಪುರಂದರವಿಠಲನ ಬಿಡದೆ ಧ್ಯಾನಿಸಿದರೆ ಚಿಂತೆ ನಿಶ್ಚಿಂತೆ

ಹೆಮ್ಮೆ ಪಡಬಾರದೆಂಬುದಕ್ಕೆ ನೀತಿಯನ್ನು ಹೇಳುತ್ತಾರೆ. ೩

ಮುಖಾರಿ–ಝಂಪೆ

ಹೆಮ್ಮೆಯಾಡಲು ಬೇಡಿ ಹೆಮ್ಮೆ ಗೀಡಾಗುವುದು |

ಹೆಮ್ಮೆಯಿಂದಲಿ ನೀವು ಕೇಡಿಬೇಡಿರಯ್ಯ ಅ

ಹನುಮನ ಕರೆಯೆಂದು ಗರುಡನ ಅಟ್ಟಲು ಮನದಲ್ಲಿ ಕಡುಕೋಪದಿಂದ ನೊಂದು | ವನಚರ ಬಾಯೆಂದು ಗರುಡ ತಾ ಕರೆಯಲು ಹನುಮಂತ ಗರುಡನ ತಿರುವಿ ಬಿಸಾಡಿದ | ಇಂತಿಂಥದೊಡ್ಡವರು ಈ ಪಾಡು ಪಡಲಾಗಿ ಪಂಥಗಾರಿತನ ತರವೆ ಅಲ್ಪಜನಕೆ | ಸಂತಜನರೊಡೆಯ ನಮ್ಮ ಪುರಂದರವಿಠಲನ್ನ ಸಂತತ ಮನದಲಿ ಚಿಂತಿಸಿಸುಖಿಸಿರೋ

ಸಾಧನದ ದಾರಿಯಲಿ ಒತ್ತರದಿಂದ ಸಾಗುತ್ತಿರುವವನಿಗೆ ಲೌಕಿಕ ಅಪಮಾನದಿಂದ ಕೇಡೇನಿಲ್ಲ; ಪ್ರತ್ಯುತ ಇದರಿಂದ ಇನ್ನೂ ಸಾಧನಯೇ ಆಗುವುದೆಂದು ದಾಸರು ನುಡಿಯುತ್ತಾರೆ.

ಪೂರ್ವಿ—ಅಟ

ಅಪಮಾನವಾದರೆ ಒಳಿತು ಅಪರೂಪ ಹರಿನಾಮ ಜಪಿಸುವ ಮನುಜನಿಗೆ ಪ

ಮಾನದಿಂದ ಅಭಿಮಾನವು ಪುಟ್ಟುವುದು ಮಾನದಿಂದ ತಾಪಹಾನಿ ಯಾಗುವುದು | ಮಾನಿ ದುರ್ಯೋಧನಗೆ ಹಾನಿಯಾಯಿತು ಅನುಮಾನವಿಲ್ಲ ಮಾನಾವಮಾನಸಮನಿಗೆ ೧

ಅಪಮಾನದಿಂದಲಿ ನೃಪ ಧೃವರಾಯಗೆ ಕಪಟನಾಟಕೃಷ್ಣ ಅಪರೋಕ್ಷನಾದನು ೨

ನಾನೇನು ಮಾಡಲಿ ಯಾರಲ್ಲಿ ಪೋಗಲಿ ಕಾನನಚರರಾರಾಧ್ಯ ನೀನಿರಲು | ದೀನ ರಕ್ಷಕ ನಮ್ಮ ಪುರಂದರವಿಠಲ ಏನು ಬೇಡೆನೆಗೆ ಅಪಮಾನವೇ ಇರಲಿ ||

ಪುರಂದಪದಾಸರ ಈ ಉಪದೇಶಕ್ಕೆ ವಾದಿರಾಜರು 'ತಾಳ್ಮೆಯ' ವಿಷಯವಾಗಿ ಹೇಳಿರುವ ಮಾತುಗಳು ಬಹಳ ಹೊಂದುವುವು.

ಕಾಂಬೋಧಿ—ಝಂಪೆ

ತಾಳುವಿಕೆಗಿಂತ ತಪವು ಇಲ್ಲ ಕೇಳಬಲ್ಲವರಿಗೆ ಹೇಳುವೆ ಸೊಲ್ಲ ಪ

ದುಷ್ಟ ಮನುಜರು ಪೇಳ್ವ ನಿಷ್ಠುರದ ನುಡಿತಾಳು ಕ,ಷ್ಟ ಬಂದರೆ ತಾಳು | ಕಂಗೆಡದೆ ತಾಳು | ನೆಟ್ಟ ಸಸಿ ಫಲ ಬರುವತನಕ ಶಾಂತಿಯ ತಾಳು | ಕಟ್ಟು ಬುತ್ತಿಯ ಮುಂದೆ ಉಣಲುಂಟು ತಾಳು ೧

ಹಳಿದು ಹಂಗಿಸುವಂಥ ಮಾತನೆ ತಾಳು | ಸುಳು ನುಡಿ ಕುಹಕ ಮಂತ್ರವನ್ನು ತಾಳು | ಅಳುಕದಲೆ ಬಿರುಸು ಬಿಂಕದ ನುಡಿಯ ನೀ ತಾಳು | ಹಲಧರಾನುಜನನು ಹೃದಯದಲ್ಲಿ ತಾಳು ೨

ನಕ್ಕುನುಡಿವರ ಮುಂದೆ ಮುಕ್ಕರಿಸದೆ ತಾಳು |ಅಕ್ಕಸವ ಮಾಡುವರ ಅಕ್ಕರದಿತಾಳು| ಉಕ್ಕು ಹಾಲಿಗೆ ನಿರನ್ನಿಕ್ಕುವಂದದಿ ತಾಳು |ಪಕ್ಷೀಶ ಹಯವದನ ಶರಣೆಂದು ಬಾಳು ೩

ಇಂಥಹ ತಾಳ್ಮೆಯಿಂದಲೇ ಮನುಷ್ಯ "ಧರ್ಮವೇ ಜಯವೆಂಬ'' ಮಂತ್ರ ಸಿದ್ಧನಾಗುವನು.

ಸಾವೇರಿ—ಅಟ

ಧರ್ಮವೇ ಜಯವೆಂಬ ದಿವ್ಯ ಮಂತ್ರ
ಮರ್ಮವನ್ನರಿತು ಮಾಡಲು ಬೇಕು ತಂತ್ರ ಅ

ವಿಷವಿಕ್ಕಿದವಗೆ ಷಡ್ರಸವನುಣಿಸಲುಬೇಕು | ದ್ವೇಷ ಮಾಡಿದವನ ಪೋಷಿಸಲು ಬೇಕು | ಪುಸಿಮಾಡಿ ಕೆಡಿಸುವವನ ಹಾಡಿ ಹರಸಲು ಬೇಕು | ಮೋಸ ಮಾಡುವನ್ಹೆಸರು ಮಗನಿಗಿಡಬೇಕು ೧

ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು | ಬಂಧನದೊಳಿಟ್ಟವರ ಬೆರೆಯುತಿರಬೇಕು | ಕೊಂದ ವೈರಿಯಮನೆಗೆ ನಡೆದು ಹೋಗಲಿಬೇಕು ಕುಂದಣಿಸುವವರ ಗೆಳೆತನ ಮಾಡಬೇಕು ೨ ಪುರಂದರದಾಸರು

ಜಗತ್ತಿನ ಎಲ್ಲ ಧರ್ಮ, ತತ್ವ, ಮತ್ತು ನೀತಿಬೋಧನೆಗಳು ಮನುಷ್ಯನ ವಿವೇಕಯುತ ನಡುವಳಿಕೆಯನ್ನು ರೂಪಿಸುವುದರಲ್ಲಿ ಇತಿ ಕರ್ತವ್ಯತೆಯನ್ನು ಕಂಡುಕೊಳ್ಳುತ್ತವೆ. ಹಾಗಿಲ್ಲದೆ ಬರಿಯ ಶಾಸ್ತ್ರವಚನಗಳನ್ನೇ ಆಧಾರವಾಗಿಟ್ಟುಕೊಂಡಲ್ಲಿ ವಿರುದ್ಧವಾದ ಉಪದೇಶಗಳೇ ಎದ್ದು ಕಂಡು ಮನುಷ್ಯನ ಚಿತ್ತವಿಭ್ರಮ ಮಾಡಿಬಿಡುತ್ತವೆ. ಆದ್ದರಿಂದ ಧರ್ಮದಲ್ಲಿ ದೃಢಕರವಾದ ಶ್ರದ್ಧೆ, ಅದರೊಂದಿಗೆ ಯಾವುದು ಯುಕ್ತ ಯಾವುದು ಅಯುಕ್ತ ಎಂಬ ವಿವೇಕ ಇವೆರಡು ಅತ್ಯವಶ್ಯಕ. ಈ ವಿವೇಕ ಉಂಟಾಗುವುದು ಮನಸ್ಸಿನ ಸಂಯಮದಿಂದ. ಆದರೆ ಮನಸ್ಸು ಬಹಳ ಚಂಚಲ. ಅದನ್ನು ಹತೋಟಿಯಲ್ಲಿಡುವುದೇ ಕಷ್ಟ . ದಾಸರು ಅದನ್ನೇ ಹೇಳುತ್ತಾರೆ.

ಕೇದಾರಗೌಳ—ಝಂಪೆ

ಮನಸು ನಿಲ್ಲಿಸುವುದು ಬಹಳ ಕಷ್ಟ ಗುಣಿಸುವುದು ನಿಮ್ಮೊಳಗೆ ನೀವೆ ನೆಲೆ ಬಲ್ಲವರುಪ ಪ

ಮೆರದೋಡಿ ಬರುವ ರಣರಂಗ ನಿಲ್ಲಿಸಬಹುದು | ಹರಿಯುತಿಹ ನದಿಗಳನು ತಿರುಗಿಸಲು ಬಹುದು | ಕರಿ ಸೊಕ್ಕಿ ಬರುತಿರಲಿ ತಡೆದು ನಿಲ್ಲಿಸಬಹುದು ದುರುಳ | ಮನ ನಿಲಿಸುವುದು ಸೂರಿಗಳವಲ್ಲ. ೧ —ವಿಜಯದಾಸರು.

ಇಂಥ ಚಿತ್ತಸಂಯಮವೆ ಸಾಧನಕ್ಕೆ ಸೋಪಾನವೆಂದು ದಾಸರು ಹೇಳುತ್ತಾರೆ.

ಧನಶ್ರೀ—ಮಠ್ಯತಾಳ

ಮುಸುರೆ ತೊಳೆಯಬೇಕು ಈಮನಸಿನ ಮುಸುರೆ ತೊಳೆಯಬೇಕು |ಮುಸುರೆ ತೊಳೆಯಬೇಕು | ಗುಸುಗುಸು ಬಿಡಬೇಕು ಈಶ ಪ್ರೇರಣೆಯೆಂಬೊ ಹಸಿಯ ಹುಲ್ಲನೆ ಹಾಕಿ ಅ

ಅಷ್ಟಮದದಿಂದ ಸುಟ್ಟ ಈ ಪಾತ್ರೆಯ ವಿಷ್ಣುನಾಮವೆಂಬೊ ಕೃಷ್ಣಾನದಿಯಲ್ಲಿ ೧

ಕಾಮಕ್ರೋಧದಿಂದ ಬೆಂದ ಈ ಪಾತ್ರೆಯ ರಾಮಕೃಷ್ಣರೆಂಬೋ ಹೇಮಾ ನದಿಯಲ್ಲಿ ೨

ವಿಷಯವೆಂಬೋ ಪಾತ್ರೆಯ ಮುಸುರೆಯ ತೊಳೆದಿಟ್ಟು ಬೀಸಜಾಕ್ಷ ಪುರಂದರ ವಿಠಲಾಗರ್ಪುಸೋ ನಿತ್ಯ ೩

ನಾದನಾಮಕ್ರಿಯೆ–ಟಾಪು

ಮನವ ಶೋಧಿಸಬೇಕೊ ನಿಚ್ಚಾ ದಿನದಿನ ಮಾಡುವ ಪಾಪ ಪುಣ್ಯದ ವೆಚ್ಚ । ಧರ್ಮ ಅಧರ್ಮ ವಿಂಗಡಿಸಿ ಅಧರ್ಮದ ನರಗಳ ಬೇರ ಕತ್ತರಿಸಿ ನಿರ್ಮಾಲಾ ಚಾರದಿಚರಿಸಿ ಪರಬೊಮ್ಮ ಮೂರುತಿ ಪಾದಕಮಲವ ಭಜಿಸಿ ೧

ತನುವ ಖಂಡಿಸಿ ಒಮ್ಮೆ ಮಾಣೋ ನಿನ್ನಮನವ ದಂಡಿಸಿ ಪರಮಾತ್ಮನಕಾಣೋ । ಕೊನೆಗೆ ನಿನ್ನೊಳಗೆ ನೀಜಾಣೋ ಮುಕ್ತಿ ನಿನಗೆದೂರಿಲ್ಲವು ಒಂದೇಗೇಣೋ ೨

ಆತನವರಿಗೆ ಕೇಡಿಲ್ಲ ಅವಪಾತಕ ಪತಿತ ಸಂಗವ ಮಾಡ್ವನಲ್ಲ । ನೀತಿವಂತರು ಕೇಲಿರಲ್ಲ ನಮಗಾತನೆ ಗತಿ ಈವ ಪುರಂದರವಿಠಲ ೩

ಹೀಗೆ ವಿವೇಕಯುತವಾಗಿ ಜೀವನವನ್ನು ನೋಡಿದರೆ ಎಲ್ಲದರ ಯಥಾರ್ಥಜ್ಞಾನವಾಗುವುದು. ಇಲ್ಲಿ ದೃಷ್ಟಾಂತಕ್ಕಾಗಿ ದಾಸರು ಹಬ್ಬವೇನೆಂದು ವರ್ಣಿಸಿರುವುದು ನೋಡುವಂತಿದೆ.

ಹಬ್ಬ ಸುಳಾದಿ

ಧ್ರುವತಾಳ

ಹಬ್ಬಗಳಿವೆ ಕೇಳಿ ಉರ್ವಿಯೊಳಗೆ ಪೈ । ದರ್ಭಿರಮಣನ ಕರುಣಾಬ್ಧಿ ವಲಿದ ಬಳಿಕ । ಒಬ್ಬರ ಕಾಡಿಬೇಡಿ ಹಬ್ಬವ ಅರ್ಬುದ ಜನಕೆ । ಹಬ್ಬಿದಾ ವೃತ್ತಿಧಾನ್ಯ ರುಬ್ಬಿ ಗಂಜಿಯ ಕಾಸಿ । ಹಬ್ಬಿದ ಸುಖಮನ ಒಬ್ಬರಿಗೆ ಸಂಪತಿ । ಇಬ್ಬರಾನಂದದಲ್ಲಿ ಹೆಬ್ಬೆಟ್ಟಿನಿಂದ ಸವೆದು । ಲಬ್ಯವಾಗಿಪ್ಪುದೆ ಹಬ್ಬವೇ ಬಲುಹಬ್ಬ । ನಿರ್ಭಯವಾದ ರತ್ನಗರ್ಭದಲ್ಲಿ ಕುಟೀರ । ಗುಬ್ಬಿ ಗೂಡಿನಷ್ಟು ಗರ್ಭವಾಸವಚರಿಸಿ । ಹಬ್ಬಿಗೆ ಕಾದೆ ಏನು ನಿರ್ಭಂಧವಿಲ್ಲದೆ । ಲಬ್ಯವಾಗಪ್ಪದೆ ಗರ್ಭಸುಖಿಗಳವರು । ಕರ್ಬೂರನಂತೆ ತಿಂದು ಕೊಬ್ಬಿ ತಿರುಗುವವರಿಗೆ । ಉಬ್ಬಸ ಅಲ್ಲದೆ ಹಬ್ಬ ಎನಿಸುವುದೆ । ಕಬ್ಬುಬಿಲ್ಲ ನೈಯ ವಿಜಯವಿಠಲರೇಯಗೆ । ದರ್ಭೆಯೇರಿಸಲು ಉಬ್ಬಿ ಕರವಪಿಡಿವಾ ॥

ಮಟ್ಟತಾಳ

ಕಾಮ ಕ್ರೋಧಂಗಳ ಬಿಡುವುದು ಬಲುಹಬ್ಬ । ನೇಮನಿತ್ಯವನ್ನು ಮಾಡುವದೆ ಹಬ್ಬ । ಕಾಮನ ಉಪಹತಿಗೆ ಅಂಜುವುದೆ ಹಬ್ಬ । ಕಾಮುಕ ಜನಗಳ ಬಿಡುವುದೆ ಮಹಹಬ್ಬ । ಭೂಮಿಯೊಳಗೆ ಜ್ಞಾನಿಯಾಗುವುದೆ ಹಬ್ಬ ।ಸ್ವಾಮಿ ಭೃತ್ಯನ್ಯಾಯ

ತಿಳಿವದೆ ಬಲುಹಬ್ಬ | ಯಾಮಯಾಮಕೆ ಹರಿಯನಾಮ ನೆನೆವುದೆ ಹಬ್ಬ |ವ್ಯೋಮ ಗಂಗಾ ಜನಕ ವಿಜಯವಿಠಲರೇಯನ | ಧಾಮವ ಬಯಸುವುದು ಧರೆಯೊಳು ಮಹಾಹಬ್ಬ |

ಜೊತೆ

ದಂಪತಿಗಳು ಏಕವಾಗಿಪ್ಪುದೆ ಹಬ್ಬ |
ಸೊಂಪಳಿಯದಂತೆ ವಿಜಯವಿಠಲ ಪೊಳೆವುದೆ ಹಬ್ಬ |

ಮಧ್ಯಮಾವತಿ—ಆದಿ

ಸಾಧು ಸಜ್ಜನರೊಳಗಿರುವದೆ ಹಬ್ಬ | ವೇದಾಂತದರ್ಥವ ತಿಳಿವೋದೆ ಹಬ್ಬ |ಭೇದ ಬುದ್ಧಿಗಳೆಲ್ಲ ಬಿಡುವೋದೆ ಹಬ್ಬ | ಭಾಗೀರಥಿಲಿ ಲೋಲಾಡುವುದೆ ಹಬ್ಬ | ಸಂಕಲ್ಪ ಸಿದ್ಧಿ ಮನಕೆ ದೊಡ್ಡ ಹಬ್ಬ | ನಿಶ್ಚಿಂತಯೋಗಿಗೆ ಅನುದಿನ ಹಬ್ಬ | ಸಾಲವಿಲ್ಲದ ಸಂಸಾರದಿ ಹಬ್ಬ | ಶರೀರಕ್ಕೆ ವ್ಯಾಧಿಬಾರದೇಕೆಂಬ ಹಬ್ಬ —ಪುರಂದರದಾಸರು

ಒಟ್ಟಿನಲ್ಲಿ ಈ ಪ್ರಪಂಚದಲ್ಲಿ ಬೇರೆ ಬೇರೆ ಜನರು ಬೇರೆ ಬೇರೆ ಅಂತಿಸ್ತಿನಲ್ಲಿರುವುದಕ್ಕೆ ಅವರು ಮಾಡಿರುವ ಕರ್ಮಗಳೇ ಕಾರಣವೆಂದು ದಾಸರು ಚಮತ್ಕಾರವಾಗಿ ಹೇಳುತ್ತಾರೆ.

ಧನಶ್ರೀ—ಆದಿ

ಹರಿ ಕೃಪೆಯಲಿ ತಾನೊಲಿದದ್ದಾದರೆ ಉರುತರ ಮೋಕ್ಷವೇ ಸಾಕ್ಷಿ
ಹರಿಶರಣರ ಸೇವಿಸುವ ನರರಿಗೆ ಧರೆಯ ಸೌಖ್ಯವೇ ಸಾಕ್ಷಿ ೧
ಅನ್ನದಾನವ ಮಾಡಿದವರಿಗೆ ದಿವ್ಯ ಅನ್ನ ಉಂಬುವುದೇ ಸಾಕ್ಷಿ
ಹೊನ್ನುದಾನವ ಮಾಡದವಗೆ ಪರದೈನ್ಯ ಬಿಡುವುದೆ ಸಾಕ್ಷಿ ೨

ಕಂಡ ಪುರುಷಗೆ ಕಣ್ಣಿಕ್ಕುವಳಿಗೆ ಗಂಡನ ಕಳೆವುದೆ ಸಾಕ್ಷಿ | ಭಂಡತನದಿ ಪರಸ್ತ್ರೀಯರ ಮೆಚ್ಚುವಗೆ ಹೆಂಡಿರ ಕಳೆವುದೆ ಸಾಕ್ಷಿ | ಪರಿಪರಿತಾನುಂಡು ಪರರಿಗಿಕ್ಕದ ನರಗೆ ಗುಲ್ಮರೋಗವೆ ಸಾಕ್ಷಿ | ಪರಿ ಪರಿಯಿಂದಲಿ ಹಿರಿಯರ ದೂಷಿಸೆ ತಿರಿದುಂಬೋದೆ ಬಲುಸಾಕ್ಷಿ | ಭಕ್ತಿಯಿಲ್ಲದ ಅಧಮರಿಗೊಂದು ಕತ್ತಲೆ ಮನೆಯೆ ಸಾಕ್ಷಿ ಮುಕ್ತಿ ಪಡೆವುದಕ್ಕೆ ಶ್ರೀಪುರಂದರವಿಠಲನ ಭಕ್ತನಾಗಿರುವುದೆ ಸಾಕ್ಷಿ ೬

ಹೀಗೆ ನೀತಿ ಪರವಾದ ಉಪದೇಶಗಳಲ್ಲದೆ ಕೆಲವು ವರ್ಣನೆಗಳನ್ನು ದಾಸರು ಮಾಡಿದ್ದಾರೆ. ಈ ಕೆಳಗಿನ ಪದಗಳು ಕಲ್ಲು ಮತ್ತು ಮಣ್ಣಿನ ಉಪದೇಶವನ್ನು ತಿಳಿಸುತ್ತವೆ.

ಕಾಂಬೋಧಿ—ಝಂಪೆ

ಕಲ್ಲಿನಿಂದಲಿ ಸರ್ವಫಲಬಾರೋದೋ ಕಲ್ಲುಭಜಿಸಿದರೆ ಕೈವಲ್ಯತೋರುವುದೋ ಅ
ಕಲ್ಲು ಕಡೆಯುತಿರಲು ಅಮೃತವೇ ಪುಟ್ಟಿತು | ಕಲ್ಲು ಎತ್ತಲು ಮಳೆಯೊಳೆಲ್ಲವರು

ಉಳಿದರು | ಕಲ್ಲು ಹರಿಪಾದವನು ಸೋಕೆ ಹೆಣ್ಣಾಯಿತು | ಕಲ್ಲು ಲಂಕೆಗೆ ಮಾರ್ಗ ಚೆನ್ನಾಗಿ ಶೋಭಿಸಿತು. |

ಕಲ್ಲಿನೊಳಗೆ ದೇವಮೊಡಮೂಡಿ ಕಾಣಿಸುವ | ಕಲ್ಲು ಕೊರೆಯಲು ಮೂರ್ತಿ ಮಂತಾಹುಜು | ಕಲ್ಲುದೇವರ ಗುಡಿಗೆ ಗರುಡಗಂಭವು ಆಯ್ತು | ಕಲ್ಲು ಕೋಟ್ಯಾನು ಕೋಟಿಗೆಲ್ಲ ಬೆಲೆಯಾಯ್ತು —ವಿಜಯದಾಸರು

ಶಂಕರಾಭರಣ—ಅಟ

ಮಣ್ಣಿಂದ ಕಾಯ ಮಣ್ಣಿಂದ ಪ

ಮಣ್ಣಿಂದ ಸಕಲ ದರುಶನಗಳೆಲ್ಲ ಮಣ್ಣಿಂದ ಸಕಲ ವಸ್ತುಗಳೆಲ್ಲ
ಮಣ್ಣಾ | ಬಿಟ್ಟವರಿಗೆ ಆಧಾರವಿಲ್ಲ ಅಣ್ಣಾಗಳೆಲ್ಲರೂ ಕೇಳಿರಯ್ಯ ಅ

ಅನ್ನಉದಕ ಊಟವೀಯೋದು ಮಣ್ಣು |ಬಣ್ಣಬಂಗಾರ ಬೊಕ್ಕಸವೆಲ್ಲಮಣ್ಣು |
ಉನ್ನಂತವಾದ ಪರ್ವತವೆಲ್ಲ ಮಣ್ಣು |ಕಣ್ಣು ಮೂರುಳ್ಳನ ಕೈಲಾಸ ಮಣ್ಣು ೧

ಭತ್ತ ಭರಣಧಾನ್ಯ ಬೆಳೆವುದೆ ಮಣ್ಣು |ಸತ್ತವರನು ಹೂಳಿಸಿಡುವುದು ಮಣ್ಣು |
ಉತ್ತಮವಾದ ವೈಕುಂಠವೆ ಮಣ್ಣು | ಪುರಂದರವಿಠಲನ ಪುರವೆಲ್ಲ ಮಣ್ಣು ೧

ದಾಸರು ಕೆಲವು ಶಬ್ದಸ್ವಾರಸ್ಯದ ಪದಗಳನ್ನು ರಚಿಸಿದ್ದಾರೆ.

ಮಧ್ಯಮಾವತಿ—ಅಟ

ಪಾಪೋಸು ಹೋದುವಲ್ಲ ಸ್ವಾಮಿ ಎನ್ನ ಪಾಪೋಸು ಹೋದುವಲ್ಲ ಪ

ಅಪಾರ ದಿನಗಳಿಂದ ಆರ್ಜನೆ ಮಾಡಿದ | ಉರಗಾದ್ರಿಯಲಿ ಸ್ವಾಮಿ | ಪುಷ್ಕರಣಿ ಮೊದಲಾದ ಪರಿಪರಿ ತೀರ್ಥಸ್ನಾನಗಳ ಮಾಡಿ | ಹರಿದಾಸರ ಕೂಡಿ ಗಿರಿರಾಯನ ಮೂರ್ತಿ | ದರುಶನದಲಿ ಮೈಮರೆತಿರಲು ಎನ್ನ ೧

ಮಾಯಾದೇವಿ ಎನಗೆ ಮೆಚ್ಚಿ ಕೊಟ್ಟಿದ್ದಳು ದಾಯಾದಿಗಳು ನೋಡಿ ಸಹಿಸಲಿಲ್ಲ | ಮಾಯಾ ರಮಣ ನಮ್ಮ ಪುರಂದರವಿಠಲನ | ಮಾಯಾದಿಂದಲಿ ಮಟ್ಟ ಮಾಯಾ ಪಾದವು ಎನ್ನ ೩

ನಾದನಾಮ ಕ್ರಿಯೆ—ಚಾಪು

ರಾಗಿ ತಂದಿರ್ಯ ಭಿಕ್ಷಕೆ ರಾಗಿ ತಂದಿರ್ಯ

ಯೋಗ್ಯರಾಗಿ ಭೋಗ್ಯರಾಗಿ ಭಾಗ್ಯವಂತರಾಗಿ ನೀವು ಅ

ಸಿರಿರಮಣನ ಸದಾ ಸ್ಮರಿಸುವರಾಗಿ ಗುರುತಿಗೆ ಬಾಹೋರಂಥವರಾಗಿ |
ಕರೆಕರೆ ಸಂಸಾರವ ನೀಗುವರಾಗಿ ಪುರಂದವಿಠಲನ ಸೇವಿಪರಾಗಿ ೯

ನಾದನಾಮ ಕ್ರಿಯೆ—ಏಕ

ಜಂಗಮರು ನಾವು ಜಗದೊಳು |

ಜಂಗಮರು ನಾವು ಲಿಂಗಾಂಗಿಗಳು ಮಂಗಳವಂತರು ಭವಿಗಳೆಂತೆಂಬರಿ ಅ

ವಿಭೂತಿ ನಮಗುಂಟಪ ವಿಶ್ವೇಶ ನಮಗುಂಟು | ಶೋಭನನಾಮ ಮುದ್ರೆಗಳುಂಟು | ಶ್ರೀ ಭಾಗೀರಥಿಯಗಣಿತ ಮಜ್ಜನ ಉಂಟು ಸೌಭಾಗ್ಯವೀವ ಮಹಂತನ ಮತದವರು ೨

—ಪುರಂದರದಾಸರು

ಪನ್ನಾಗವರಾಳಿ—ಆದಿ

ಗುಡಿ ಗುಡಿಯನು ಸೇದಿ ನೋಡೋ ಸೇದಿ ನೋಡೋ | ನಿನ್ನ ಒಡಲ ಪಾಪಗಳನೆ ಈಡಾಡೋ ಅ

ಮನವೆಂಬ ಸಂಚಿಯ ಬಿಚ್ಚಿ ನಿನ್ನ ದಿನದ ಪಾಪಗಳೆಂಬೊ ಭಂಗಿಯ ಕೊಚ್ಚಿ | ತನುವೆಂಬ ಚಿಲುಮೆಯೊಳಿಕ್ಕಿ ಅಚ್ಚುತನ ಧ್ಯಾನವೆಂತೆಬೋ ಬೆಂಕಿಯ ಹಚ್ಚಿ ೧

—ಪುರಂದರದಾಸರು

ಕಾಂಬೋಧಿ—ಝಂಪೆ

ತುರುಕರು ಕರೆದರೆ ಉಣಬಹುದು ತುರು ಕರು ಕರೆದರೆ ಅತಿ ಪುಣ್ಯವಯ್ಯ ಅ

ತುರುಕರಿಂದ ಮುಟ್ಟು ಮುಡಿ ಬಿಟ್ಟು ಹೋಗೋದು |ತುರುಕರಿಂದ ಎಂಜಲು ಹೋಗೋದು |ತುರುಕರುಕೂದಲ ತುರುಬಿಗೆತ್ತಿದರೆ ಎಣಿಕೆಯಿಲ್ಲದ ಮುತ್ತೈದೆಯಣ್ಣ ೧

—ಪುರಂದರದಾಸರು

ಧನಶ್ರೀ—ಅಟ

ಮಾಡಿದ ಎನ್ನ ಫಕೀರ ಸದ್ಗುರುವು ಮಾಡಿದ ಎನ್ನ ಫಕೀರ ಅ
ಅನುಭವ ಖಪ್ಪರಿ ಹೃದಯ ಜೋಳಿಗೆ ಎನ್ನ ಕಂಕುಳಲಿಟ್ಟು
ಅನಿಮಿಷ ಧಟ್ಟೆ ಅರಗಿನ ರೊಟ್ಟೆ ಎನ್ನ ಕೈಯಲಿಟ್ಟು ೧
ನಾದದ ತಂಬೂರಿ ಮೋದ ಮಂದಾರವು ನಿಚ್ಚಂಗದ ಟೊಪ್ಪಿಗೆನಿಟ್ಟು
ಬೋಧದ ಭಂಗಿ ಅಮೃತದ ಲುಂಗಿ ಸಮಾನ ಗುಳಿಗೆಯನಿಟ್ಟು ೨
ಈ ಪರಿಮಾಡಿ ಬಯಲನು ಕೋರಿ ಕರವನು ನೆತ್ತಿಯಲಿಟ್ಟ
ಭೂಪ ಪುರಂದರ ವಿಠಲರಾಯನು ತಿರುಗೆಂದಪ್ಪಣೆ ಕೊಟ್ಟ ೩

XV ಹರಿದಾಸರ ಗ್ರಂಥಗಳು

ದಾಸರುಗಳ ಪದಗಳಿಂದಲೇ ಅವರ ತತ್ತ್ವೋಪದೇಶ, ಅವರ ಅನುಭವವೆಂತಹುದೆಂಬುದು ವ್ಯಕ್ತವಾಗುತ್ತವೆ. ದಾಸರುಗಳು ರಚಿಸಿರುವ ಗ್ರಂಥಗಳಲ್ಲಿ ಇದೇ ವಿಷಯಗಳೇ ವಿಪುಲವಾಗಿ ವಿಚಾರಮಾಡಲ್ಪಟ್ಟಿವೆ. ದಾಸರುಗಳ ಗ್ರಂಥಗಳಲ್ಲಿ ಕೆಲವು ಅತ್ಯಂತ ಪ್ರಸಿದ್ಧವಾಗಿವೆ. ಜಗನ್ನಾಥದಾಸರ ಹರಿಕಥಾಮೃತಾಸಾರವು ಈ

ಗ್ರಂಥಗಳಲ್ಲೆಲ್ಲ ಅತ್ಯಂತ ಪ್ರಸಿದ್ಧವೂ ಪ್ರಮೇಯ ಗರ್ಭಿತವೂ ಆದದ್ದು. ಹೀಗೆ ಒಂದೊಂದು ವಿಷಯಗಳನ್ನಧಿಕರಿಸಿದ ಗ್ರಂಥಗಳನ್ನು ಮಾಡುವುದನ್ನು ಶ್ರೀಪಾದ ರಾಜರೇ ಆರಂಭ ಮಾಡಿದರೆನ್ನಬಹುದು. ಅವರು ರಚಿಸಿರುವ 'ಮಧ್ವ ನಾಮ, ಭ್ರಮರ ಗೀತೆ ಮತ್ತು ಲಕ್ಷ್ಮೀ ನರಸಿಂದ ಪ್ರಾದುರ್ಭಾವ ದಂಡಕ' ಗಳು ಈ ವರ್ಗಕ್ಕೆ ಸೇರುವುವು. ವ್ಯಾಸರಾಜರು ಭಗವದ್ಗೀತೆಯನ್ನು ಬಹಳ ಸಂಕ್ಷೇಪವಾಗಿ ರಚಿಸಿದ್ದಾರೆ. ಇವರ ಶಿಷ್ಯರಾದ ವಾದಿರಾಜರು ಮುಂದೆ ವಾಯುಪದಕ್ಕೆ ಬರುವಋಜುಗಣಸ್ಥರೆಂಬ ಐತಿಹ್ಯ ಉಂಟು. ಇವರು ಕನ್ನಡದಲ್ಲಿ ಅನೇಕ ಪ್ರಮೇಯ ಗ್ರಂಥಗಳನ್ನು ರಚಿಸಿರುವರು. 'ಲಕ್ಷ್ಮೀಶೋಭಾನೆ. ಹರಿಸರ್ವೋತ್ತಮಸಾರ, ಗುಂಡಕ್ರಿಯ, ಸ್ವಪ್ನಪದ ವೈಕುಂಠವರ್ಣನೆ'ಗಳೆಂಬ ಇವರ ಕಾವ್ಯಗಳು ಪ್ರಸಿದ್ಧವಾಗಿವೆ. ಇವುಗಳಲ್ಲಿ ಇವರು ಮಧ್ವಮತದ ಪ್ರಮಾಣಗಳನ್ನೂ ಪ್ರಮೇಯಗಳನ್ನೂ ಯುಕ್ತಿಯುಕ್ತವಾಗಿ ತಿಳಿಸಿದ್ದಾರೆ.

1. ಸ್ವಪ್ನಪದ

ಸ್ವಪ್ನಪದದಲ್ಲಿ 45 ಪದ್ಯಗಳಿವೆ. ಶೈಲಿ ಬಹಳ ಸುಲಭವಾಗಿದ್ದರೂ, ವಿಷಯ ಬಹಳ ಗಹನವಾಗಿದೆ. ಶ್ರೀ ವಿಷ್ಣು ಸರ್ವೋತ್ತಮತ್ವ ಪ್ರತಿಪಾದನೆಯೇ ಇದರ ವಿಷಯ. ಹರಿಯು ತಮ್ಮ ಸ್ವಪ್ನದಲ್ಲಿ ಬಂದು ಹೇಳಿದ ವಿಷಯವನ್ನೇ ಜನರಿಗೆ ತಿಳಿಸುತ್ತೇನೆಂದು ವಾದಿರಾಜರು ಹೇಳುತ್ತಾರೆ.

ನೆನೆದು ಶ್ರೀಹಯವದನ ಸ್ವಪ್ನದೊಳೆನಗೆ ಪೇಳಿದ ಪದವ ಲೋಕದ |
ಜನರಿಗಿದ ಸಂಗ್ರಹವ ಮಾಡುವೆನವನ ಕೃಪೆಯಿಂದ ||

ಈ ಕಾವ್ಯವೆಲ್ಲವೂ ಹರಿಯು ಹೇಳಿದಂತೆಯೇ ಬರೆಯಲ್ಪಟ್ಟಿದೆ. 'ಸಕಲರೂ ನನ್ನನ್ನು ಭಜಿಸಿ, ನಾನು ಭಕ್ತಾಧೀನ. ಗಜೇಂದ್ರ, ಅರ್ಜುನ, ದ್ರೌಪದಿ ಮೊದಲಾದ ಭಕ್ತ ಶ್ರೇಷ್ಠರುಗಳನ್ನು ಕಾಪಾಡಿದೆನು. ನನ್ನ ಪಾದದಿಂದ ಹುಟ್ಟಿದ ಗಂಗೆಯನ್ನು ಶಿವ ಶಿರಸ್ಸಿನಲ್ಲಿ ಧರಿಸಿದ. ಬ್ರಹ್ಮ ನನ್ನಿಂದ ವೇದೋಪದೇಶ ಪಡೆದ. ರಮೆ ಸರ್ವೋತ್ತಮ ನಾದ್ದರಿಂದ ನನ್ನನ್ನು ವರಿಸಿದಳು. ಶಾಸ್ತ್ರಗಳು ಆಜ್ಞಾರೂಪ. ನನ್ನ ಲೋಕವೇ ಮುಕ್ತಿ. ನನ್ನ ಗುಣ ಕೀರ್ತನೆ ಮಾಡು. ಬೇರೆ ಬೇರೆ ಶ್ರುತಿ ವಾಕ್ಯಗಳು ಹರಿಮಹಿಮೆಯನ್ನು ಪೊಗಳುವುವು.

ಏಷ ಸರ್ವಂ ಎನ್ನದೇ ನಿರ್ದೋಷ ಮಂಡೂಕೋಪನಿಷತಿನ್ನೇಷ ಭೂತಾಧಿಪತಿ | ಎನ್ನದೆ ಕಾಣ್ವರುಪನಿಷತು | ಏಷ ಸರ್ವೇಶಾನ ನೆನದೆ ವಿಲಾಸದಿಂ ಋಗ್ವೇದ ಮೊದಲಾಗೀ ಸಮಸ್ತವು ಜನ್ಯವೆನಿಸುವ ಋಷಿ ಮುಖೋದ್ಗತವು ||

"ಅಗ್ನಿರ್ವೈದೇವಾನಾಮವಮೋ ವಿಷ್ಣುಃಪರಮಃ" ಎಂಬ ಬ್ರಾಹ್ಮಣ ವಾಕ್ಯವೇ ನನ್ನ ಸರ್ವೋತ್ತಮತ್ವನನ್ನು ಸಾರುವುದು. 'ದ್ವಾಸುಪರ್ಣಾ ಸಯುಜಾಸಖಾಯಾ' ಎಂಬ ಶ್ರುತಿಯು ಜೀವ ಬ್ರಹ್ಮರುಗಳ ಭೇದವನ್ನು ಸ್ಪಷ್ಟವಾಗಿ ತಿಳಿಸುವುವು.

'ಅಹಂಬ್ರಹ್ಮಾಸ್ಮಿ' ಎಂಬ ಶ್ರುತಿಗೆ ಪ್ರಕರಣವನ್ನು ನೋಡಿ ಅರ್ಥಮಾಡಿಕೊಳ್ಳಬೇಕು. ಗಾಢಸ್ನೇಹದಿಂದ ರಾಜ ಸಚಿವನನ್ನು 'ಇವನೇ ನಾನು' ಎಂದರೆ ಅದನ್ನು ಯಾರಾದರೂ ಯಥಾರ್ಥವಾಗಿ ಗ್ರಹಿಸುವರೇ ? ಅಂತೆಯೇ ಈ ಅಭೇದ ಆಪಾತವಾಗಿ ತೋರುವ ಶ್ರುತಿಗಳ ಅರ್ಥವನ್ನೂ ಹಾಗೆಯೇ ತಿಳಿಯಬಾರದು. ನಾನೇ ಬ್ರಹ್ಮನಿಗೆ ತಂದೆಯು. ರುದ್ರನಿಗೆ ಪಿತಾಮಹನು. ಇಂದ್ರನಿಗೆ ಐಶ್ವರ್ಯವಿತ್ತವನು. ಸುರರಿಗಮೃತ ಉಣಿಸಿದವನು. ಕಾಲಕ್ಕೆ ಅಭಿಮಾನಿಯು. ನನ್ನಿಂದ ಜೀವರು ಬದುಕಿರುವರು. ನಾನು ಗುಣಪೂರ್ಣನು. ಜೀವರು ಅಲ್ಪರು, ನಾನು ಲಕ್ಷ್ಮೀಪತಿ, ಜೀವರು ದರಿದ್ರರು. ಹೀಗೆ ವಿರುದ್ಧ ಸ್ವಭಾವದವರು. ನಾನು ಅಪ್ರಾಕೃತಮೂರ್ತಿಯು. ಆದ್ದರಿಂದ ಜೀವ ಬ್ರಹ್ಮರುಗಳ ಐಕ್ಯವು ಅಸಂಭವವು. ಅದರಂತೆ ಜೀವರುಗಳು ಅಭಿನ್ನರು. ಭಿನ್ನಶರೀರೋಪಾಧಿಗಳಿಂದ ಭಿನ್ನರು ಎನ್ನುವ ವಾದವು ಅಯುಕ್ತವು. ಆಕಾಶ ದೃಷ್ಟಾಂತವೂ ಆ ವಿಷಯದಲ್ಲಿ ಕೂಡುವುದಿಲ್ಲ. ಹೀಗೆ ಇತರ ಮತಗಳು ದೋಷ ದುಷ್ಟವಾದುದರಿಂದ ವಾಯುಮತವೇ ಗ್ರಾಹ್ಯ. ಅದನ್ನನುಸರಿಸಿ ನನ್ನನ್ನು ಭಜಿಸು ಎಂದು ಹರಿಯು ಸ್ವಪ್ನದಲ್ಲಿ ಹೇಳಿದುದನ್ನು ರಚಿಸಿದ್ದಾರೆ.

2. ಹರಿಸರ್ವೋತ್ತಮಸಾರ

ಹರಿಸರ್ವೋತ್ತಮಸಾರವು ಇನ್ನೂ ಚಿಕ್ಕ ಕಾವ್ಯ. ಇದರಲ್ಲಿ 17 ಪದ್ಯಗಳು ಮಾತ್ರ ಇವೆ. ಶಿವನಿಗಿಂತಲೂ ವಿಷ್ಣುವೇ ಉತ್ತಮನೆಂಬ ಸಿದ್ಧಾಂತ ಇದರಲ್ಲಿ ಪ್ರತಿಪಾದಿತವಾಗಿದೆ. ವಿಷ್ಣು ಬ್ರಹ್ಮಾ ಮಹೇಶ್ವರರು ಜಗತ್ತಿನ ಪಾಲನ ಸೃಷ್ಟಿ ಮತ್ತು ಸಂಹಾರ ಮಾಡುವರೆಂದು ಪ್ರಸಿದ್ಧವಿದೆ. ಇವರಲ್ಲಿ ಹರಿಯು ತ್ರಿವಿಕ್ರಮಾವತಾರದಲ್ಲಿ ಬ್ರಹ್ಮನು ಆತನ ಪಾದ ತೊಳೆದ. ಅದೇ ಗಂಗೆಯು. ಶಿವ ಇದನ್ನು ಧರಿಸಿದ. ಇದರಿಂದಲೇ ಅವರಲ್ಲಿಯ ತಾರತಮ್ಯ ಅರ್ಥವಾಗುವುದೆಂದು ಮೊದಲ ಪದ್ಯದಲ್ಲಿ ವರ್ಣಿಸಿದ್ದಾರೆ.

ರಾವಣ ಸಂಹಾರದಿಂದ ಬ್ರಹ್ಮಹತ್ಯಾ ಪರಿಹಾರಕ್ಕಾಗಿ ರಾಮದೇವರು ಲಿಂಗಪ್ರತಿಷ್ಠೆ ಮಾಡಿದರೆಂಬ ಐತಿಹ್ಯವನ್ನೂ ಚರ್ಚಿಸುತ್ತಾರೆ. ಇದುಸರಿಯಲ್ಲವೆನ್ನುತ್ತಾರೆ. ರಾಮಾಯಣ ಪಾರಾಯಣವೇ ಸಕಲ ದುರಿತ ಪರಿಹಾರಕವಾದುದೆಂದಮೇಲೆ ದೇವರಿಗೆ ಬ್ರಹ್ಮಹತ್ಯೆ ಬಂದಿತೆನ್ನುವುದು ಹಾಸ್ಯಾಸ್ಪದವಾಗುವುದು. ಲಿಂಗಪ್ರತಿಷ್ಠೆ ಮಾಡಿದಂತೆಯೇ ರಾಮದೇವರು ವಿಭೀಷಣನನ್ನೂ ಪ್ರತಿಷ್ಠಿಸಿದಕತೆಯಿದೆ. ಇದರಿಂದಲೇ ಶಿವ ವಿಭೀಷಣರಿಬ್ಬರೂ ರಾಮಭಕ್ತರೆಂದು ಅರ್ಥವಾಗುತ್ತದೆ. ಬ್ರಹ್ಮನ ಶಿರಸ್ಸನ್ನು ತೆಗೆದ ಶಿವನ ಬ್ರಹ್ಮಹತ್ಯಾ ಪರಿಹಾರವಾಗಲು ರಾಮಸೇತುವಿನ ದರ್ಶನವಾಗಲೆಂಬ ಭಕ್ತಾನುಗ್ರಹದಿಂದ ಹರಿಯು ಲಿಂಗಪ್ರತಿಷ್ಠೆ ಮಾಡಿದನು. ಇದರಂತೆಯೇ ಹರಿಯ ಇತರ ವ್ಯಾಪಾರಗಳೂ ಅವನ ಉತ್ಕರ್ಷವನ್ನೇ ಹೇಳುತ್ತವೆ. ವಿಷ್ಣು ಉತ್ಕರ್ಷಕ ಪುರಾಣಗಳೇ ಸಾತ್ವಿಕವಾದ್ದರಿಂದ ವಿಷ್ಣು ಸರ್ವೋತ್ತಮನೆಂಬುದೇ ಮುಖ್ಯ ಸಿದ್ಧಾಂತವು.

3. ಗುಂಡಕ್ರಿಯ

ಇದು ನಲವತ್ತು ನುಡಿಗಳನ್ನೊಳಗೊಂಡಿದೆ. ಇದರಲ್ಲಿ ಸಂಕ್ಷೇಪವಾಗಿ ಚಾರ್ವಾಕ, ಜೈನ, ಬೌದ್ಧ, ಮೀಮಾಂಸಕ ಮತ್ತು ನ್ಯಾಯ ಮತಗಳನ್ನು ಖಂಡಿಸಿ, ಅದ್ವೈತ ಮತವನ್ನು ವಿಸ್ತಾರವಾಗಿ ಖಂಡಿಸುತ್ತಾರೆ. ಮೊದಲು ದೇಹಾತ್ಮವಾದಿಯಾದ ಚಾರ್ವಾಕನ ಖಂಡನೆ ಮಾಡುತ್ತಾ, ದೇಹವೇ ಜೀವವೆಂದು ಹೇಳಿದರೆ ಮೃತ ಶರೀರವನ್ನೇ ಜೀವಂತವೆಂದು ಏಕೆ ಹೇಳಬಾರದು ? ಸಮಾದಿಸ್ಥರಾದ ಯೋಗಿಗಳ ಶರೀರ ಮತ್ತು ಉಸಿರುಕಟ್ಟಿದ ಡೊಂಬನ ಶರೀರಗಳಲ್ಲೂ ಶ್ವಾಸವಿರುವುದಿಲ್ಲವಾದ್ದರಿಂದ ಅದು ಮೃತ ಶರೀರವಾಗುವುದೇ ? ಆದ್ದರಿಂದ ದೇಹಾತ್ಮವಾದ ಕೂಡುವುದಿಲ್ಲ. ಸ್ಯಾದ್ವಾದವನ್ನು ಹೇಳುವ ಜೈನ ಸಿದ್ಧಾಂತವೂ ಸ್ವವ್ಯಾಹತವು. ಕೇವಲ ಬುದ್ಧಿ ಬಲದ ಮೇಲೆ ಸಿದ್ಧಾಂತ ಸ್ಥಾಪಿಸುತ್ತೇನೆಂದು ಹೊರಟ ಬೌದ್ಧಮತವೂ ದೋಷದುಷ್ಟವೇ. ಆಸ್ತಿಕವಾದಗಳಲ್ಲಿ ಜಡಗಳಾದ ಕರ್ಮವೇ ಸರ್ವಸ್ವವೆಂಬ ಮೀಮಾಂಸಕ ಮತವೂ, ಘಟಪಟಾದಿಗಳ ಮೂಲವಾದ ಪರಮಾಣುಗಳೇ ಸರ್ವವೆಂಬ ನ್ಯಾಯಮತವೂ ಗ್ರಾಹ್ಯವಲ್ಲ. ಶ್ರುತಿಗಳೇ ಮಿಥ್ಯೆಯೆಂದು ಹೇಳುವ ಅದ್ವೈತ ಮತವಾದರೂ ಅಪಸಿದ್ಧಾಂತ ವೆನಿಸುವುದು. ಅದ್ವೈತ ಬೋಧಕ ಶ್ರುತಿಗಳೆಲ್ಲ ಪರಮಾತ್ಮನ ಅನಂತ ಮಹಿಮೆಯನ್ನು ಹೇಳುತ್ತವೆ. ಜೀವ ಬ್ರಹ್ಮರ ಅಬೇಧ ಹೇಳಿದರೆ ವಿರುದ್ಧ ಧರ್ಮಗಳು ಕೂಡುತ್ತವೆಂದ ಹಾಗಾಗುವುದು. ಅದ್ವೈತವು ಬೌದ್ಧಮತದಲ್ಲಿ ಪರ್ಯವಸಾನ ಹೊಂದುವುದು. ಶಿವಾದಿ ದೇವತೆಗಳಿಗಿಂತ ಉತ್ತಮನಾದ ಶ್ರೀಹರಿಯನ್ನು 'ಸೋಹಂ' ಎಂದು ಉಪಾಸನೆ ಮಾಡುವುದು ಮಹಾಪರಾಧವು.

"ಆವನ್ನ ಹೇಮಕೂಪದೊಳಗೀ ಜೀವರಾವಾಸವಾದ |ಬ್ರಹ್ಮಾಂಡ ರಾಶಿಗಳು | ತೀವಿಪ್ಪುದ್ಯತ್ರ ಪ್ರಿಯಾಹಿವಿಷ್ಣುಪರಮಾಣ್ವಾದ್ಯ ಎಂದು ಪೇಳ್ದ | ಶ್ರೀವೇದವ್ಯಾಸ ತಾನೇ ಈ ವಿಷ್ಣು ರೋಮಕ್ಕೆಣೆ ಇಲ್ಲವೆನ್ನೆ ಈ | ದೇವಗಿನ್ನಾವನೆಣೆ ಶ್ರೀವಾಸುದೇವ ಹಯ ವದನ ಸರ್ವೇಶ | ದೇವರೆಲ್ಲ ಇವನ ದಾಸ ದಾಸರಿನ್ನು ವಿವಾದವ್ಯಾಕೋ ಜೀವ ೨೫

ಸಮಸ್ತ ಜಗತ್ತಿಗೂ ಒಡೆಯನಾದ ಪರಮಾತ್ಮ ಸರ್ವ ಶ್ರೇಷ್ಠನೆಂದು ಶ್ರುತಿಗಳು ಸಾರುವುವು. ಇಂತಹ ಭಗವಂತನು ಮಹಾ ಕರುಣಾಳು, 'ಕ್ಷಿಪಾಮ್ಯಜಸ್ರಂ' 'ಮತ್ಕರ್ಮಕೃನ್ಮತ್ಪರಮೋ' ಎಂಬ ವಾಕ್ಯಗಳು ಅವನೇ ಜೀವರಿಗಳಿಗೆ ಗತಿಪ್ರದನೆಂದು ಹೇಳುವುವು. ಆದ್ದರಿಂದ ಸಂಸಾರದಲ್ಲಿ ದುಃಖಿಗಳಾದ ಜೀವರು ಅವನನ್ನೇ ಭಜಿಸಬೇಕು. ಕೊನೆಯ ಮೂರು ಪದ್ಯಗಳಿಂದ ವಾದಿರಾಜರು ದೇವರನ್ನು ಸ್ತೋತ್ರ ಮಾಡಿರುವರು.

4. ಲಕ್ಷ್ಮೀಶೋಭಾನೆ

ಇದರಲ್ಲಿ 113 ಪದ್ಯಗಳಿವೆ. ಅಮೃತ ಮಥನ ಕಾಲದಲ್ಲಿ ಸಮುದ್ರದಲ್ಲಿ ಹುಟ್ಟಿದ ಲಕ್ಷ್ಮೀದೇವಿಯರು ಅಲ್ಲಿ ನೆರೆದಿದ್ದ ಎಲ್ಲದೇವತೆಗಳೂ ದೋಷಯುಕ್ತರಾದದ್ದನ್ನು ನೋಡಿ, ಹರಿಯನ್ನು ವರಿಸುವುದೇ ಇದರ ಕಥಾವಸ್ತು. ಯಾವುದೋ ಒಂದು ಮದುವೆ ಮಂಟಪದಲ್ಲಿ ವರ ಅಪಮೃತ್ಯುವಿಗೀಡಾಗಿ ಮೃತನಾದಾಗ ಸಂಬಂಧ ಪಟ್ಟವರು ವಾದಿರಾಜರನ್ನು ಪ್ರಾರ್ಥನೆ ಮಾಡಲು ಅವರು ಅನುಗ್ರಹೋನ್ಮುಖರಾಗಿ ಈ ಪದವನ್ನು ರಚಿಸಿದರೆಂದೂ, ಇದರಿಂದ ವರ ಮತ್ತೆ ಬದುಕಿದನೆಂದೂ ಪ್ರಸಿದ್ಧವಿದೆ. ಅದರಿಂದಲೇ ಈ ಪದ್ಯಗಳಲ್ಲಿ ವಾದಿರಾಜರು 'ಅನುದಿನ ರಕ್ಷಿಸಲಿ ನಮ್ಮ ವಧೂವರರ' ಎಂದು ಮುಂತಾಗಿ ಹೇಳಿರುತ್ತಾರೆ.

ಈ ಕಾವ್ಯದ ಕತೆಯೇ ವಿಷ್ಣೂತ್ಕರ್ಷ ಪ್ರತಿಪಾದಕವೆಂಬುದು ಪ್ರಸಿದ್ಧವು. ಮೊದಲೂ ಹತ್ತು ಹನ್ನೆರಡು ಪದ್ಯಗಳಲ್ಲಿಸಮುದ್ರದಲ್ಲಿ ಹುಟ್ಟಿದ ಲಕ್ಷ್ಮೀದೇವಿಯ ಸುಂದರವರ್ಣನೆ ಇದೆ. ಅಲ್ಲಿ ನೆರೆದಿದ್ದ ದೇವತೆಗಳನ್ನು ನೋಡಿ ಲಕ್ಷ್ಮೀದೇವಿಯು ಹೀಗೆ ಹೇಳುತ್ತಾಳೆ.

ತನ್ನ ಮಕ್ಕಳ ಕಂದ ತಾನೇ ಹೇಳುವುದಕ್ಕೆ । ಮನ್ನದಿ ನಾಚೀ ಮಲಕ್ಷುಮಿ ।
ತನ್ನಾಮದಿಂದಲಿ ಕರೆಯದೊಬ್ಬೊಬ್ಬರ । ಉನ್ನಂತ ದೋಷಗಳ ಗಣಿಸಿದಳು । ೧೬

ಇಲ್ಲಿಂದ ಮುಂದೆ ಹದಿಮೂರು ಪದ್ಯಗಳಲ್ಲಿ ಒಬ್ಬೊಬ್ಬ ದೇವತೆಗಳಲ್ಲಿನ ದೋಷ ಗಳನ್ನು ಎತ್ತಿ ತೋರಿಸುತ್ತಾರೆ . ಆಮೇಲೆ ಲಕ್ಷ್ಮೀದೇವಿ ಹೀಗೆ ನಿರ್ಣಯಿಸಿಕೊಳ್ಳುತ್ತಾಳೆ.

ಒಂದೊಂದು ಗುಣಗಳು ಇದ್ದವು ಇವರಲ್ಲಿ । ಸಂದಣಿಸಿವೆ ಬಹುದೋಷ ।
ಕುಂದೆಳ್ಳಷ್ಟಿಲ್ಲದ ಮುಕುಂದನೆ ತನಗೆಂದು । ಇಂದಿರೆ ಪತಿಯ ನೆನೆದಳು । ೨೯

ಸುಮಾರು 40 ಪದ್ಯಗಳಲ್ಲಿ ಹರಿಯ ಗುಣಗಳನ್ನು ವರ್ಣಿಸುತ್ತಾರೆ. ಹರಿಗೆ ಹಸಿವು, ತೃಷೆ, ಜರಾ, ಮರಣ, ರೋಗ–ರುಜೀನಾದಿದೋಷಗಳಿಲ್ಲ. ಅವನಿಗೆ ದೋಷ ಗಳಿದ್ದರೆ ಅವನು ಹೇಗೆ ಜಗತ್ತಿಗೆ ಮೋಕ್ಷಪ್ರದನಾದನು ? ಸ್ವರಮಣನಾದ್ದರಿಂದ ಅವನಿಗೆ ರಮೆಯಿಂದ ಯಾವ ಸೌಖ್ಯವೂ ಆಗಬೇಕಾಗಿಲ್ಲ. ನೃಸಿಂಹವತಾರಿಗೆ ಪ್ರಾಕೃತ ಸಂಬಂಧವಿಲ್ಲ. ಹರಿ ಇಂದ್ರಿಯ ಚಾಪಲ್ಯದಿಂದ ಗೋಪಿಯರಿಗೆ ಬೆರೆಯಲಿಲ್ಲ.

ಹತ್ತು ವರ್ಷದ ಕೆಳಗೆ ಮಕ್ಕಳಾಟಿಕೆಯಲ್ಲಿ । ಚಿತ್ತ ಸ್ತ್ರೀಯರಿಗೆ ಎರಗುವುದೆ ।
ಅರ್ಥಿಯಿಂದರ್ಚಿಸಿದ ಗೋಕುಲದ ಕನ್ಯೆಯರ । ಸತ್ಯ ಸಂಕಲ್ಪ ಬೆರೆಸಿದ್ದ ೪೮

ಹತ್ತು ಮತ್ತಾರು ಸಾಸಿರ ಸ್ತ್ರೀಯರಲ್ಲಿ । ಹತ್ತು ಹತ್ತೆನಿಪ ಕ್ರಮದಿಂದ ಪುತ್ರರ
ವೀರ್ಯದಲಿ ಸೃಷ್ಟಿಸಿದವರುಂಟೆ । ಅರ್ಥಿಯ ಸೃಷ್ಟಿಹರಿಗಿದು ೪೯

ಹರಿ ಸರ್ವೋತ್ಕೃಷ್ಟನಾದ್ದರಿಂದ ಅವನಲ್ಲಿ ಜಾರತ್ವಾದಿ ದೋಷಗಳಿಲ್ಲ. ಹರಿಯನ್ನು ಲಕ್ಷ್ಮೀದೇವಿ ವರಿಸಿದುದೂ, ಮೋಹಿನಿಯಾಗಿ ಹರಿಯು ಅಮೃತವನ್ನು ಹಂಚಿದುದೂ ವರ್ಣಿತವಾಗಿದೆ.

5. ವೈಕುಂಠ ವರ್ಣನೆ

ವೈಕುಂಠ ವರ್ಣನೆಯು ವಾದಿರಾಜರಿಂದ ರಚಿತವಾದ ಕಾವ್ಯಗಳಲ್ಲೆಲ್ಲ ದೊಡ್ಡದು. ಇದರಲ್ಲಿ ನಾಲ್ಕು ಸಂಧಿಗಳಿವೆ. ಮೊದಲನೆಯ ಸಂಧಿಯಲ್ಲಿ 140 ಪದ್ಯಗಳಿವೆ. ಇದರಲ್ಲಿ ವೈಕುಂಠನಗರ ವರ್ಣನೆಯಿದೆ. ಎರಡನೆಯ ಸಂಧಿಯಲ್ಲಿ 49 ಪದ್ಯಗಳಿವೆ. ಇದರಲ್ಲಿ ಲಯ ವಿಷಯ ಉಕ್ತವಾಗಿದೆ. ಮೂರನೆಯ ಸಂಧಿಗೆ 'ಸೊಬಗಿನ ಸೋನೆ' ಎಂದು ಹೆಸರು. 83 ಪದ್ಯಗಳುಳ್ಳ ಈ ಸಂಧಿಯಲ್ಲಿ ಸೃಷ್ಟಿಯನ್ನು ವರ್ಣಿಸಿದ್ದಾರೆ. ಕೊನೆಯ ಸಂಧಿಯಲ್ಲಿ 93 ಪದ್ಯಗಳಿದ್ದು ಸ್ಥಿತಿಯ ವರ್ಣನೆಯಿದೆ. ಕೊನೆಗೆ 19 ಪದ್ಯಗಳಲ್ಲಿ ಫಲಸ್ತುತಿಯಿರುವುದು. ಈ ಕಾವ್ಯದಲ್ಲಿ ಮಧ್ವಮತದ ಅತ್ಯಂತ ಸೂಕ್ಷ್ಮ ಪ್ರಮೇಯವೂ. ಶ್ರುತ್ಯರ್ಥಗಳೂ ತುಂಬಿರುವುವು. ಹರಿದಾಸ ಸಾಹಿತ್ಯಕ್ಕೂ ಮಾಧ್ವ ವಾಙ್ಮಯಕ್ಕೂ ಇದೊಂದು ದೊಡ್ಡಕಾಣಿಕೆಯೆನ್ನಲೇನೂ ಅಡ್ಡಿಯಿಲ್ಲ. ಮೊದಲಿಗೆ ಹೀಗೆ ಪ್ರತಿಜ್ಞೆ ಮಾಡುತ್ತಾರೆ.

ತತ್ತ್ವತಸಾರದ ಸೊಬಗು ಧರೆಯೊಳು | ವಿಸ್ತರಿಸಬೇಕೆಂದು ಮುನಿಕುಲ | ರತ್ನ
ಶ್ರೀಗುರುವಾದಿರಾಜನು ಶ್ರುತಿ ಪುರಾಣಗಳ | ಮೊತ್ತವನು ನೆರೆಮಥಿಸಿ ಮೇಲಣ |
ಮುಕ್ತಿ ಸೃಷ್ಟಿಸ್ಥಿತಿಲಯಂಗಳ ಆರ್ಥಿಯಿಂದಲಿ ಬಣ್ಣಿಸಿದ ಕಥೆ ಕೇಳಿ ಸಜ್ಜನರು |

ಇದು ಪುಣ್ಯಕಥೆ ಲೋಕಕ್ಕಿದೆ ಮುಕುತಿಯ ಪಥ |ಇದಕೇಳುವವನೆ ಕೃತಾರ್ಥ |
ಇದು ಸರ್ವ ಸಾಧನ ವಿಧುಗಳಿಗೆ ಸಮ್ಮತ | ಮುದವನೀವುದು ಕೇಳ್ವಜನಕೆ |

ಮೇಲೆನಿಪ ನಾಟಿ ಮೊದಾಲಾದ ರಾಗಂಗಳ |ತಾಳಮೇಳದಿ ನಾಲ್ಕು ಸಂಧಿ |
ಶ್ರೀಲೋಲನಚರಿತೆ ತತ್ತ್ವ ರಹಸ್ಯವು | ಮೇಲೆ ಕೇಳ್ವರಿಗಲಂಕಾರ ||

ಆದ್ದರಿಂದ ಇದರಲ್ಲಿ ಮಧ್ಯದಲ್ಲಿ ಪದಗಳೂ ಸೇರಿವೆ. ಭಗವದ್ರೂಪಗಳಿಗೂ ತಾರತಮ್ಯಪ್ರಕಾರ ಸರಸ್ವತ್ಯಾದಿಗಳಿಗೂ ಮಂಗಳಮಾಡಿ ಆಚಾರ್ಯರ ಅವತಾರತ್ರಯವನ್ನು ಬಳಿತ್ಥಾಸೂಕ್ತಾದಿ ಶ್ರುತ್ಯರ್ಥಗಳಿಂದ ವರ್ಣಿಸುತ್ತಾರೆ.

'ಸರ್ವಂ ಮಿಥ್ಯಾ' ಎನ್ನುವ ಅದ್ವೈತ ಪ್ರಮೇಯದ ಮಿಥ್ಯಾತ್ವ ಲಕ್ಷಣವನ್ನು ವಿಚಾರ ಮಾಡುತ್ತಾ, ಅದ್ವೈತ ಮತವನ್ನು ಖಂಡಿಸುತ್ತಾರೆ. ಅದರಲ್ಲಿಯ ಅಸಂಬದ್ಧತೆಯನ್ನು ಸ್ಪಷ್ಟಪಡಿಸುತ್ತಾರೆ. ದೇವರೊಡನೆ ಅಭೇದ ಹೇಳುವುದು, ಅವನು ನಿರಾಕಾರನೆನ್ನುವುದು ಇವುಗಳ ದೋಷಗಳನ್ನು ಪ್ರಸ್ತಾಪಿಸುತ್ತಾರೆ. ದೇವತಾ ವಂದನವನ್ನು ಮುಂದುವರಿಸಿ, ಹರಿಯ ಗುಣಗಾನಮಾಡದ ಜೀವನ ವ್ಯರ್ಥ ಎಂಬ ಪುರಾಣ ವಚನವನ್ನು ಕನ್ನಡದಲ್ಲಿ ತಿಳಿಸುತ್ತಾರೆ. ಇಂದ್ರಿಯಗಳೆಲ್ಲ ಹರಿಸೇವೆಗೆ ಮೀಸಲಾಗಿರಬೇಕು; ಇಲ್ಲದಿದ್ದರೆ ಉಸಿರುಬಿಡುವ ತಿದಿಯಂತೆ, ಎತ್ತರವಾಗಿ ಬೆಳೆದುನಿಂತ ವೃಕ್ಷಗಳಂತೆ, ಸಾವಿರ ವರುಷ ಬದುಕುವ ಕಾಗೆಯಂತೆ, ನಾಯಿ ನರಿಗಳಂತೆ ವ್ಯರ್ಥವಾದೀತು ಮಾನವ ಜನ್ಮ. ಆದ್ದರಿಂದ ನಾರಾಯಣನನ್ನು ಧ್ಯಾನಮಾಡಬೇಕು. ಆ ಹರಿಯ ಮಂದಿರವಾದ ವೈಕುಂಠ

ಲೋಕವೇ ಮುಕ್ತ ಸ್ಥಾನವು. ಇದು ಹರಿಭಕ್ತರಲ್ಲದವರಿಗೆ ಅಪ್ರಾಪ್ಯವು. ಈ ಲೋಕವು ಪ್ರಕೃಷ್ಟ ತತ್ತ್ವರಾಶಿಗಳಿಂದ ಕೂಡಿದುದು. ಅಪ್ರಾಕೃತವು. ಅಲ್ಲಿಯ ಪದಾರ್ಥಗಳೆಲ್ಲ ಲಕ್ಷ್ಮಿಯ ರೂಪಗಳೇ. ಆಕೆಯೇ ಇದಕ್ಕೆ ಶತಕೋಟಿ ಸೂರ್ಯ ಪ್ರಕಾಶ ಬೀರುವಳು. 'ಭೇಜೇ ಖಗೇಂದ್ರಧ್ವಜಪಾದ ಮೂಲಂ' ಎಂಬ ಭಾಗವತವಚನಾನುಸಾರ ವೈಕುಂಠವು ಸಾಕಾರವು. ಅದರಲ್ಲಿರುವ ಮುಕ್ತರೂ ಹರಿಗೆ ಅಧೀನರು. ವೈಕುಂಠದ ಸುತ್ತ ರತ್ನ ಖಚಿತವಾದ ಏಳು ಸುತ್ತಿನ ಬಂಗಾರದ ಕೋಟೆಯಿರುವುದು. ಅದರ ಮಧ್ಯದಲ್ಲಿರುವ ನಗರಕ್ಕೆ 'ಅಯೋಧ್ಯೆ'ಯೆಂದು ಹೆಸರು. ಅಪ್ರತೀಕಾಲಂಬನರಿಗೆ ಸಪ್ತಪ್ರಾಕಾರದ ವರೆಗೂ ಪ್ರವೇಶವುಂಟು. ಈ ಪ್ರಾಕಾರದೊಳಗೆ ಲಿಂಗದೇಹ ನಾಶಕವಾದ ವಿರಜೆಯು ಪ್ರವಹಿಸುವಳು. ಇದರಲ್ಲಿ ಏಳನೆಯಪ್ರಾಕಾರದ ಬಾಗಿಲನ್ನು ಜಯ ವಿಜಯರು ಕಾಯುತ್ತಿರುವರು. ಇಲ್ಲಿಯವರೆಗೂ ಅಮುಕ್ತ ಸ್ಥಾನವೆಂದು ಹೆಸರು. ಇಲ್ಲಿಂದ ಒಳಗೆ ಮುಕ್ತರಿಗೆ ಮಾತ್ರ ಪ್ರವೇಶ. ಆದ್ದರಿಂದಲೇ ಹರಿಯು ಸನಕಾದಿಗಳು ಬಂದಾಗ ತಾನೇ ಈ ಬಾಗಿಲವರೆಗೂ ಬಂದಿದ್ದ ಹರಿಯ ಮೈಬೆವರೇ ಉದಕವಾಗಿ ಲಕ್ಷ್ಮೀದೇವಿಯೇ ನದಿಯಾಗಿ ವಿರಜೆಯೆನಿಸುವಳು. ಗುಣತ್ರಯವೇ ರಜೆಯು. ಅದಿಲ್ಲದುದರಿಂದ ವಿರಜೆಯು. ಈ ನದಿಯಾಚೆ ಇರುವ ಹರಿಯ ಅಂತಃಪುರಕ್ಕೆ 'ಪರಮವ್ಯೋಮವೆಂದು' ಹೆಸರು ಅಲ್ಲಿ ಸುರ–ನರ–ತರು ಪಕ್ಷ್ಯಾದಿ ನಾನಾ ಜಾತಿಗಳಿರುವುವು. ಆದರೂ ಪರಸ್ಪರ ದ್ವೇಷಾಸೂಯೆಗಳಿಗೆ ಅಲ್ಲಿ ಅವಕಾಶವಿಲ್ಲ. ''ಸರ್ವೇ ನಂದಂತಿ ಯಶಸಾಗ ತೇನ'' ಎಂಬ ಶ್ರುತಿಯು ಮುಕ್ತರಸ್ಥಿತಿಯನ್ನು ತಿಳಿಸುವುದು. ಹರಿಯು ಅಲ್ಲಿ ಎಲ್ಲರಿಗೂ ಸುಖಪ್ರದನಾಗಿರುವನು. ಅಲ್ಲಿ ಎಲ್ಲರೂ ಶ್ರುತ್ಯಾದಿಗಳಿಂದ ಹರಿಗಾಥಾ ಗಾನ ಮಾಡುತ್ತಿರುವರು. 'ಮನೋಜವೇಷ್ಟಾ ಸಾಮಾಬಭೂವ' ಎಂಬ ಶ್ರುತಿಯು ಮುಕ್ತಿಯಲ್ಲಿ ತಾರತಮ್ಯ ಉಂಟೆಂದು ಸಾರುವುದು. ಬ್ರಹ್ಮದೇವರು ಸಾಯುಜ್ಯ ಪದವಿಯನ್ನು ಅನುಭವಿಸುವರು. ಸರಸ್ವತ್ಯಾದಿ ಸ್ತ್ರೀಯರು ಲಕ್ಷ್ಮೀಯೋಲಗದಲ್ಲಿ ಸುಖಿಸುತ್ತಿರುವರು. ಮುಕ್ತರ ಅಲಂಕಾರಗಳು ವೈಭವ ಪೂರ್ಣವಾದವು. ಹರಿಯ ಶ್ರೀವತ್ಸ ಮತ್ತು ಕೌಸ್ತುಭ ಇವೆರಡನ್ನೂ ಬಿಟ್ಟರೆ ಚತುರ್ಭುಜಯುಕ್ತರಾದ ಮುಕ್ತರಿಗೂ ಹರಿಗೂ ಭೇದವೇ ತೋರುವುದಿಲ್ಲ. ಮುಕ್ತರು ಯೋಗ್ಯತಾನುಸಾರ ಸಾಯುಜ್ಯ ಸಾರೂಪ್ಯ, ಸಾಲೋಕ್ಯ ಸಾಮೀಪ್ಯರೂಪ ಚತುರ್ವಿಧ ಮುಕ್ತಿಯನ್ನು ಪಡೆಯುವರು. ಅಲ್ಲಿನ ವೈಭವ ಸುಖಗಳೆಲ್ಲವೂ ನ್ಯಾಯವಾಗಿಯೇ ಇರುವುವು. ಅನ್ಯಾಯದ ಪ್ರವೇಶವಲ್ಲಿ ಇಲ್ಲ. ಅಲ್ಲಿ 'ಅರ' 'ಅಣ್ಯ' ಎಂಬ ಎರಡು ಸುರಸಾಗರಗಳುಂಟು. ಮುಕ್ತರು ಅವುಗಳ ರಸಾಸ್ವಾದನೆ ಮಾಡುವರು. ಅಮೃತಸ್ಯಂದಿನಿಯಾದ ಅಶ್ವತ್ಥ ವೃಕ್ಷವೊಂದು ಅಲ್ಲಿ ಉಂಟು. ಮುಕ್ತರು ಅದನ್ನು ಸವಿಯುವರು. ಇದಲ್ಲದೆ ಷಡ್ರಸಗಳನ್ನು ಕೊಡುವ ನದಿಯು ಅಲ್ಲಿ ಹರಿಯುತ್ತಿರುವುವು.

ಮುಕ್ತಿಯ ಪೂರ್ವಾವಸ್ಥೆಯೇ ಲಯವು. ಆದ್ದರಿಂದ ಎರಡೇನೆಯ ಸಂಧಿಯಲ್ಲಿ ಅದನ್ನು ಬಣ್ಣಿಸುತ್ತಾರೆ. ಸೃಷ್ಟಿಯಾದಮೇಲೆ ಚತುರ್ಮುಖ ಬ್ರಹ್ಮದೇವರಿಗೆ ನೂರುವರ್ಷ ಮುಗಿದಕೂಡಲೆ ಲಯವಾಗುವುದು. ಸೃಷ್ಟನಾದ ಜೀವರಿಗೆ ತಕ್ಕ ಗತಿಗಳನ್ನು ಕೊಡುವು ದಕ್ಕಾಗಿಯೇ ಹರಿಯು ಲಯ ಮಾಡುವನು. ಪಾತಾಳಾದಿ ಲೋಕಗಳು ಅಗ್ನಿಯಿಂದ ಭಸ್ಮೀಭೂತವಾಗುವುವು. ಇದೇ ಲಯದ ಆರಂಭ. ಅನಂತರ ಪಂಚಭೂತಗಳೇ ಮೊದಲಾದ ತತ್ತ್ವಗಳು ನಾಶಹೊಂದುವುವು. ಮೂರು ಗುಣಗಳು ಮೂಲಪ್ರಕೃತಿ ಯಲ್ಲಿ ಸೇರಿಹೋಗುವುವು. ಆಗ ಹರಿಯು, ಎಲ್ಲವನ್ನೂ ತನ್ನ ಕುಕ್ಷಿಯೊಳಗಿಟ್ಟು ರಮೆಗೆ ಸುಖವೀಯುವನು. ಬ್ರಹ್ಮದೇವರು ಮಹತ್ತತ್ತ್ವವನ್ನು ತಮ್ಮಲ್ಲಿ ಸೇರಿಸಿಕೊಂಡು ಉಳಿದ ಇಪ್ಪತ್ತುಮೂರು ತತ್ತ್ವಗಳ ಅಧಿಪತಿಗಳೊಡನೆ ಕೂಡಿ ಕೊಂಡು ವಿರಜಾ ಸ್ನಾನಕ್ಕೆ ಸಿದ್ಧರಾಗುವರು. ಹರಿಯು ಏಳುಕೋಟಿ ಯೋಜನದಷ್ಟು ದೊಡ್ಡ ದೇಹವನ್ನು ಮಾಡಿಕೊಂಡು ಜಗತ್ತನ್ನೆಲ್ಲ ಭುಂಜಿಸುವನು. ಭೋಜನಮಾಡಿ ಶುದ್ಧಾ ರ್ಣವದಿಂದ ಆಚಮನಮಾಡಿ ಕುದಿವ ಬಾಹ್ಯೋದಕವೆಂಬ ಕಷಾಯ ಕುಡಿದು ಲಕ್ಷ್ಮೀಯೊಡನೆ ಪವಡಿಸುವನು. ಸೃಷ್ಟ ಜೀವರಾಶಿಗಳಂತೆ ಮುಕ್ತರೂ ಹರಿಯುದರ ಪ್ರವೇಶ ಮಾಡುವರು. ಎಲ್ಲ ಜೀವರನ್ನು ಹೊಟ್ಟೆಯಲ್ಲಿಟ್ಟುಕೊಂಡು ಹರಿಯು ನಿದ್ರೆಗೈಯ್ಯುವನು.

ಇಂತಹ ಮಹಾಪ್ರಳಯಕಾಲದಲ್ಲೂ ಹರಿಯ ಮೂರುಲೋಕಗಳಿಗೆ ಚ್ಯುತಿಯಿಲ್ಲ. ಏಕೆಂದರೆ ಲಕ್ಷ್ಮೀದೇವಿಯೇ ಆ ಲೋಕಗಳಾಗಿರುವಳು. ಮಹಾ ಪ್ರಳಯೋದಕಳೂ ಲಕ್ಷ್ಮಿಯೇ. ಹರಿಯು ಪವಡಿಸಿದ ವಟಪತ್ರವೂ ಲಕ್ಷ್ಮಿಯೇ. ಹರಿಯು ಅಲ್ಲಿ ಪವಳಿಸಿ ಲಕ್ಷ್ಮಿಯರೂಪಗಳಾದ ಶ್ರೀಭೂದುರ್ಗೆಯರೊಡನೆ ರಮಿಸುವರು. ಮಹಾಪ್ರಳಯ ಕಾಲದಲ್ಲಿ ಹರಿಯುದರದಲ್ಲಿದ್ದ ಜೀವರೆಲ್ಲರೂ ಸುಪ್ತರಾಗಿದ್ದರೂ, ಮುಖ್ಯಪ್ರಾಣನೊಬ್ಬ ಎಚ್ಚತ್ತಿರುವನು. 'ವಾಯುರ್ವಾವನಿತ್ಯಾ' ಎಂಬ ಶ್ರುತಿಯು ಇದೇ ಅರ್ಥವನ್ನೇ ಪ್ರತಿಪಾದಿಸುವುದು.

ಮಹಾ ಪ್ರಳಯಾಕಾಲವು ಬ್ರಹ್ಮದೇವರ ನೂರು ವರ್ಷಗಳಷ್ಟು ಕಾಲ ಇರುವುದು. ಇದರಲ್ಲಿ ಎಂಭತ್ತೇಳೂವರೆ ವರ್ಷ ಕಳೆದುಹೋದಮೇಲೆ, ದುರ್ಗಾ ದೇವಿಯರು ಎಚ್ಚರ ಗೊಳ್ಳುವರು. ಜೀವರುಗಳಿಗಿರುವ 'ಜೀವಾಚ್ಛಾದಿಕಾ' ಮತ್ತು 'ಪರಮಾಚ್ಛಾದಿಕಾ' ಎಂಬ ಎರಡು ವಿಧವಾದ ಮಾಯೆಯಲ್ಲಿ ಜೀವಾಚ್ಛಾದಿಕೆಯು ಕಳಚುವುದು. ದುರ್ಗಾದೇವಿಯರು ನಾನಾ ನಿಗಮೋಕ್ತ ಪ್ರಕಾರವಾಗಿ ಹರಿಯ ಇಚ್ಛೆಯನ್ನರಿತು, ಹರಿಪಾದ ನಿಷೇವಣ ಮಾಡುತ್ತಾ ಸ್ತೋತ್ರ ಮಾಡುವರು. ಹರಿಯು ಆಗ ಎಚ್ಚತ್ತು ಕಣ್ಣು ಬಿಡುವನು. ಇಂತಹ ಹರಿಗೆ ನಾಶವೆಲ್ಲಿಯದು ? ಇಂತಹ ಹರಿಯೊಡನೆ ಜೀವರುಗಳ ಅಭೇದ ಕೂಡುವುದಾದರೂ ಹೇಗೆ ?

ಮೂರನೆಯ ಸಂಧಿಯಲ್ಲಿ ಸೃಷ್ಟಿ ವಿಷಯ ಉಕ್ತವಾಗಿರುವುದು. ಹಿಂದಿನ ಕಲ್ಪದಲ್ಲಿ ಮುಕ್ತರಾದ ಜೀವರಿಗಲ್ಲದೆ ಮತ್ತೊಂದು ತಂಡದ ಜೀವ ರಾಶಿಗಳಿಗೆ ಗತಿಯನ್ನೀಯಲು ಹರಿಯು ಜಗತ್ಸೃಷ್ಟಿಮಾಡಿದ. ಇದು ತನಗೆ ಲೀಲೆ, ಲಕ್ಷ್ಮಿಗೆ ವೈಭವ ಮತ್ತು ಜೀವರಿಗೆ ಅವರ ಯೋಗ್ಯತಾನುಸಾರ ಫಲ.

ಸತ್ತ್ವ ರಜಸ್ತಮೋಗುಣಗಳು ಶುಕ್ಲ ರಕ್ತ ಮತ್ತು ಕೃಷ್ಣಾಣುಗಳ ರಾಶಿಯು. ಈ ಗುಣತ್ರಯ ಪರಮಾಣು ರಾಶಿಗಳಿಗೆ ಗುಣಗಳೆಂದು ಹೆಸರು. ಯಾವದ್ದ್ರವ್ಯ ಭಾವಿ ಯಾದುದರಿಂದ ಇವು ಗುಣಗಳೆನಿಸುವುವು. ಈ ಗುಣತ್ರಯ ಪರಮಾಣು ರಾಶಿಗಳ ಬೆರಕೆಯಿಂದಲೇಪ್ರತ್ಯಪ್ರತ್ಯೇಕವಾಗಿ ತೆಗೆತೆಗೆದು ಬೇರೆಬೇರೆ ತತ್ತ್ವಗಳನ್ನು ಸೃಷ್ಟಿಸುವನು.

ಮಹತ್ತೆಂಬ ತತ್ತ್ವ ಮಹಿಮೆಯನೀವುದು ಅಹಂತತ್ತ್ವದಿಂದಹಂಕಾರ ಬಾಹೋದು ಬುದ್ಧಿ ನಿಶ್ಚೈಸಿ ಕೊಡುವುದು ನಾನಾ ಹಂಬಲಿಕೆಯ ಮನವು.

ಈ ಮಹದಹಂಕಾರ ತತ್ತ್ವಗಳಿಂದ ಪಂಚ ಕರ್ಮೇಂದ್ರಿಯ, ಪಂಚ ಜ್ಞಾನೇಂದ್ರಿಯ, ಪಂಚ ತನ್ಮಾತ್ರ, ಪಂಚ ಭೂತಗಳು ಉದಯಿಸುವುವು. ಇವುಗಳ ಜೊತೆಗೆ ಮನಸ್ಸು, ಬುದ್ಧಿ ಸೇರಿ ಇಪ್ಪತ್ತುನಾಲ್ಕು ತತ್ತ್ವಗಳಾಗುವುವು. ಇವು ದುಷ್ಟ ವ್ಯಾಪಾರ ಮಾಡಿಸಿ ಮನುಷ್ಯನನ್ನು ಸಂಸಾರದಲ್ಲಿ ಸಿಲುಕಿಸುವುವು. ಹರಿಯ ಅನುಗ್ರಹವಿದ್ದು, ಸತ್ಸಂಗವಾದರೆ ಇವೆಲ್ಲ ಸತ್ಕರ್ಮದತ್ತ ತಿರುಗಿಸುವುವು. ತತ್ತ್ವೇಶರಿಗೆ ಇವು ಕೆಡಕು ಮಾಡಲಾರವು. ಈ ತತ್ತ್ವಗಳ ಸೂಕ್ಷ್ಮಾಂಶ ಪ್ರಕೃತಿಯೊಳಗೆ ಅನಂತವಾಗಿರುವುವು. ನೂರುಕೋಟಿ ಯೋಜನ ಪ್ರಮಾಣವಾದ ಬ್ರಹ್ಮಾಂಡದಲ್ಲಿ ಹರಿಯು ಹೊಕ್ಕು ರಕ್ಷಿಸುವನು. ಈ ಬ್ರಹ್ಮಾಂಡದಲ್ಲೆಲ್ಲಾ ಇಪ್ಪತ್ತುನಾಲ್ಕು ತತ್ತ್ವಗಳು ತಾನೇ ತಾನಾಗಿ ಬೆರೆತಿರುವುವು. ಇದೇ ಜಗತ್ತಿನ ಸೃಷ್ಟಿಕ್ರಮವು. ಹರಿಯು ಪ್ರಳಯೋದಕದಲ್ಲಿ ಪವಡಿಸಿದ್ದಾನೆ. ಇಪ್ಪತ್ತೈದುಕೋಟಿ ಯೋಜನದುದ್ದ ಬೆಳಗುವ ಪದ್ಮವನ್ನು ಸೃಷ್ಟಿಸಿದ. ಅದರಲ್ಲಿ ಬ್ರಹ್ಮನ ಉದ್ಭವವಾಯಿತು. ಆಮೇಲೆ ಆ ಪದ್ಮದಳದಲ್ಲಿ ಹದಿನಾಲ್ಕು ಲೋಕಗಳೂ ಉದಯಿಸಿದವು. ಹಿಂದಿನ ಕಲ್ಪದಲ್ಲಿ ವಾಯುದೇವರಾಗಿದ್ದವರು ಬಹುಕಾಲ ತಪಸ್ಸುಮಾಡಿ ಬ್ರಹ್ಮಪದವಿಯನ್ನು ಪಡೆದರು. ಜಗತ್ತೆಲ್ಲ ಸೃಷ್ಟವಾದ ಮೇಲೆ ದೈತ್ಯರಿಂದ ಬಾಧೆ ಬಂದಾಗ ಹರಿಯು ಹತ್ತವತಾರಗಳನ್ನು ಮಾಡಿ ಭಕ್ತರನ್ನು ಸಂರಕ್ಷಿಸುವನು. ಸೃಷ್ಟಿಯನ್ನು ವಿವರಿಸುವ ಈ ಮೂರನೆಯ ಸಂಧಿಗೆ 'ಸೊಬಗಿನ ಸೋನೆ'ಯೆಂದು ಹೆಸರು.

ಕೊನೆಯ ಸ್ಥಿತಿ ಸಂಧಿಯಲ್ಲಿ ಊರ್ಧ್ವಪುಂಡ್ರಧಾರಣ, ತಪ್ತ ಮುದ್ರಾಂಕನಗಳಿಗೆ ಶ್ರುತಿವಾಕ್ಯಗಳ ಆಧಾರ ಕೊಟ್ಟು ಅವುಗಳನ್ನು ಸಮರ್ಥಿಸುವರು. ವೈಷ್ಣವ ಚಿಹ್ನೆಗಳು, ವರ್ಣಾಶ್ರಮಾದಿಗಳು ಹರಿಯ ಆಜ್ಞಾಪ್ರಕಾರವಿರುವುದೆಂದು ಹೇಳಿ, ತ್ರಿವಿಧ ಜೀವರ ಭೇದಗಳನ್ನು ತಿಳಿಸುವರು.

ಹರಿಯೇ ಸರ್ವೋತ್ತಮ ಹರಿಯೇ ಪರದೇವತೆ | ಹರಿಯೇ ಸಕಲ ವೇದವೇದ್ಯ | ನಿರುಪಮನ ಸತ್ಕೀರ್ತಿ ನಿತ್ಯನಿರ್ಮಲಮೂರ್ತಿ ಸುರ ಚಕ್ರವರ್ತಿ ಜಯ ಜಯತು

ಕೊನೆಗೆ ಫಲಸ್ತುತಿಯನ್ನು ಹೇಳಿದ್ದಾರೆ. ಅದರಲ್ಲಿ ಹರಿಯ ಅನುಗ್ರಹದಿಂದ ತಮ್ಮ ಪಾದೋದಕ ಸೇವನಾದಿಗಳಿಂದ ದುಃಖಾದಿಗಳು ನಿವಾರಣೆಯಾಗುತ್ತದೆಂದು ತಿಳಿಸಿ, ತಮಗೆ ಕಣ್ಣು ಕಾಣದಿದ್ದರೂ ಹರಿಯೇ ಪೊರೆಸಿ, ಕೀರ್ತಿಕೊಟ್ಟು ರಕ್ಷಿಸಿದನೆಂದು ಹೇಳಿ ಮಂಗಳ ಮಾಡಿದ್ದಾರೆ. ಇದು ಅತ್ಯಂತ ಉತ್ತಮವಾದ ಕಾವ್ಯ.

6. ಕನಕದಾಸರ ಹರಿಭಕ್ತಿಸಾರವು

ಕನಕದಾಸರ ಕೃತಿಗಳೆಲ್ಲೆಲ್ಲ ಹರಿಭಕ್ತಿಸಾರವೆ ಹೆಚ್ಚು ಪ್ರಸಿದ್ಧವಾದದ್ದು. ಇವರು ವ್ಯಾಸರಾಜರಲ್ಲಿ ಹರಿದಾಸದೀಕ್ಷೆ ಪಡೆದರು. ಇದಕ್ಕೆ ಮೊದಲು ಇವರು ರಾಮಾನುಜ ಮತಾನುಯಾಯಿಯಾಗಿದ್ದರೆಂದು ತೋರುತ್ತದೆ. ಆಮೇಲೆ ವ್ಯಾಸರಾಯರ ಶಿಷ್ಯರಾದಮೇಲೆ ಇವರು ಮಾಧ್ವಸಂಪ್ರದಾಯವನ್ನೇ ಚೆನ್ನಾಗಿ ಅನುಸರಿಸಿಕೊಂಡು ಬಂದರೆಂಬುದು ಸ್ಪಷ್ಟವಿದೆ.

ಹರಿಭಕ್ತಿ ಸಾರವು ಹರಿಯಮಹಿಮೆಯನ್ನು ಕೊಂಡಾಡುವುದು. 110 ಪದ್ಯಗಳ ಈ ಕಾವ್ಯದಲ್ಲಿ ಪ್ರತಿಪದ್ಯದ ಕೊನೆಯಲ್ಲೂ 'ರಕ್ಷಿಸಿ ನಮ್ಮನನವರತ' ಎಂಬ ಪ್ರಾರ್ಥನೆ ಇದೆ.

'ಕಮಲಸಂಭವವಿನುತ ವಾಸವ ನಮಿತ ಮಂಗಳಚರಿತ ದುರಿತ | ಕ್ಷಮಿತ ರಾಘವ ವಿಶ್ವಪೂಜಿತ ವಿಶ್ವ ವಿಶ್ವಮಯ'

ಮೇಲಿನ ಪದ್ಯದಲ್ಲಿ ಹರಿಯು ಸರ್ವೋತ್ತಮನೆಂದು ಹೇಳಿರುವರು. ಮೊದಲ 15 ಪದ್ಯಗಳಲ್ಲಿ ದೇವರನ್ನು ಸ್ತೋತ್ರಮಾಡಿ —

'ಭಕ್ತಿಸಾರದ ಚರಿತೆಯನು ಹರಿಭಕ್ತರಾಲಿಸುವಂತೆ ರಚಿಸುವೆ ಎಂದು ಪ್ರತಿಜ್ಞೆ ಮಾಡಿದ್ದಾರೆ. 'ನಿಗಮತತಿ ಕೈವಾರಿಸುತ ಪದಯುಗವ ಕಾಣದೆ ಬಳಲುತಿದೆ' ಎಂಬುದರಿಂದ ಹರಿಯು ವೇದಗಳಿಂದಲೂ ಸಾಕಲ್ಯೇನ ಅಜ್ಞೇಯನೆಂದು ಹೇಳಿದ್ದಾರೆ.

'ಹಸಿವರಿತು ತಾಯ್ತನ್ನ ಶಿಶುವಿಗೆ ಒಸೆದು ಮೊಲೆಕೊಡುವಂತೆ | ನೀಪೋಷಿಸದೆ ಬೇರಿನ್ನಾರು ಪೋಷಕರಾಗಿ ಸಲಹುವರು | ಬಸುರೊಳಗೆ ಬ್ರಹ್ಮಾಂಡ | ಕೋಟಿಯ ಪಸರಿಸಿದ ಪರಮಾತ್ಮ ನೀನೆಂದುಸುರುತಿವೆ ವೇದಗಳು .... |೨೩|

ಈ ಪದ್ಯದಲ್ಲಿ ಆತ್ಮಭಾವ ಚೆನ್ನಾಗಿ ತೋರಿದ್ದಾರೆ.

ಸಿರಿಯು ಕುಲಸತಿ ಸುತನು ಕಮಲಜ | ಹಿರಿಯಸೊಸೆ ಶಾರದೆ, ಸಹೋದರಿ ಗಿರಿಜೆ ಮೈದುನ | ಶಂಕರನು ಸುರರೆಲ್ಲ ಕಿಂಕರರು ನಿರುತ ಮಾಯೆಯು | ದಾಸಿ ನಿಜ ಮಂದಿರವಜಾಂಡವು | ಜಂಗಮಸ್ಥಾವರ ಕುಟುಂಬಿಗನು ನೀನು ||

ಹಗೆಯರಿಗೆ ವರವೀವರಿಬ್ಬರು ತೆಗೆಯಲರಿಯರು | ಕೊಟ್ಟವರಗಳ ತೆಗೆದುಕೊಡುವ ಸಮರ್ಥರಾರೀಜಗಕೆ ನಿನ್ನಂತೆ ||

ಈ ಪದ್ಯಗಳಲ್ಲಿ ಹರಿಯು ಬ್ರಹ್ಮ, ರುದ್ರ, ಮಿಕ್ಕೆಲ್ಲ ದೇವತೆಗಳಿಗಿಂತಧಿಕನೆಂದು ಕೊಂಡಾಡಿದ್ದಾರೆ. ಹರಿಯು ಬೇರೆ ಬೇರೆ ಭಕ್ತರನ್ನು ರಕ್ಷಿಸುದುದು, ಮಹಾಭಾರತದ ಚಾಲಕನಾದುದನ್ನು ವರ್ಣಿಸುತ್ತಾರೆ. ಏನು ಕರ್ಮ ಮಾಡಿದರೂ ಹರಿಯು ತಾನಾಗಿ ಒಲಿದ ಹೊರತು ಭಕ್ತರಿಗೆ ಪ್ರಸನ್ನನಾಗಲಾರ. ಹರಿ ಒಲಿದರೆ ಹನುಮನಿಗೆ ಬ್ರಹ್ಮ ಪಟ್ಟವೇ ದೊರೆಕಿತು. ಅಂದ ಮೇಲೆ ಅವನ ಅನುಗ್ರಹಕ್ಕಿಂತ ಮಿಗಿಲಾದುದಿನ್ನಾವುದು? ಮಹಾಪರಾಧಗಳು ಮಾಡಿದ ಇಂದ್ರಾದಿಗಳನ್ನು ಸಹ ಹರಿಯು ರಕ್ಷಿಸಿದನು. ಹರಿಯು ಸರ್ವತ್ರ ವ್ಯಾಪ್ತ. ಅವನಿಲ್ಲದ ಸ್ಥಳವಿಲ್ಲ. "ಹರಿಯೇ ನೀನು ನಿನ್ನ ಮಹಾ ವೈಭವದಲ್ಲಿ ಆರ್ತರನ್ನು ಮರೆವರೇ ? ದೀನರಕ್ಷಕನಾದ ನೀನು ಮಹಾಉದಾರಿ ಯಲ್ಲವೆ?''ಎಂದು ಆರ್ತರಾಗಿ ಪ್ರಾರ್ಥಿಸುತ್ತಾರೆ. ಜೀವನ ಅಲ್ಪತೆಯನ್ನು ಹೇಳಿಕೊಳ್ಳುತ್ತಾರೆ. ಹರಿಯೇ ಯಾವಾಗಲೂ ರಕ್ಷಕನೆಂದು ಘೋಷಿಸುತ್ತಾರೆ. ಗರ್ಭವಾಸದಲ್ಲಿದ್ದಾಗ ಸಲಹಿದವರಾರು ? "ಹಿಂದೆ ನಾನಾ ಯೋನಿಗಳಲ್ಲಿ ಜನ್ಮವೆತ್ತಿ ಈಗ ಯಾವುದೋ ಪುಣ್ಯವಿಶೇಷದಿಂದ ಮನುಷ್ಯನಾಗಿದ್ದೇನೆ; ಹರಿಯೇ ಇನ್ನು ಬಳಲಿಸಬೇಡ; ಮತ್ತೆ ಸಂಸಾರಕ್ಕೆ ದೂಡಬೇಡ. ನಾನೆತ್ತಿದ ಜನ್ಮ ಅಷ್ಟಿಷ್ಟಲ್ಲ. ಇಂದ್ರಿಯಗಳು ದುರ್ವಿಷಯದ ಕಡೆ ಓಡುತ್ತಿವೆ. ಕಾಮಕ್ರೋಧಾದಿಗಳು ತುಂಬಿವೆ. ಸಂಪಾದಿಸಿದ ದುಷ್ಕರ್ಮವೋ ರಾಶಿ ರಾಶಿಯಾಗಿ ಬಿದ್ದಿದೆ. ನೀನಲ್ಲದೆ ಇನ್ನಾರು ತಾರಿಸಬೇಕು ಹರಿಯೇ. ಚರ್ಮ, ರಕ್ತ ಮಾಂಸ, ಎಲುಬುಗಳಿಂದ ತುಂಬಿದ್ದು ಇದು. ನೀನು ಅನುಗ್ರಹಿಸಿ ಇದರಲ್ಲಿರು ವವರೆಗೂ ಇದಕ್ಕೆ ಆದರ. ನೀ ಕೈ ಬಿಟ್ಟ ಕೂಡಲೇ ಇದನ್ನು ಮಣ್ಣು ಮಾಡುವರು. ಇಂತಹ ದೇಹದಲ್ಲಿ ಏನು ಪುರುಷಾರ್ಥವಿದ್ದೀತು ? ಸ್ನಾನ ಸಂಧ್ಯಾದಿ ಸತ್ಕರ್ಮಾಚರಣೆಯು ಹೀನ ಜನ್ಮಗಳನ್ನು ಮಾತ್ರ ದೂರ ಮಾಡಬಲ್ಲವು. ಭಕ್ತಿಸಹಕೃತ ಜ್ಞಾನವೊಂದೇ ಮುಕ್ತಿಗೆ ಸೋಪಾನ. ಅದಕ್ಕೆ ನಿನ್ನ ಅನು ಗ್ರಹಬೇಕು, ಅದ್ದರಿಂದ ಕೈ ಬಿಡದೇ ರಕ್ಷಿಸು. ನಿನ್ನ ಸೂತ್ರದಲ್ಲಿ ಈ ಚರಾ ಚರಜಗತ್ತೆಲ್ಲ ಇರುವುದು. ಅಂತಹ ನಿನ್ನನ್ನು ಮರೆತು ನಾನು ನಶ್ವರವಾದ ಸಂಸಾರದಲ್ಲಿ ಮುಳುಗಿದ್ದೇನೆ.ನನ್ನ ಕರ್ಮ, ಈ ಸಂಸಾರ, ಇವು ಬೀಜವೃಕ್ಷನ್ಯಾಯದಂತೆ ಇರುವುದು. ಇದರ ರಹಸ್ಯ ನಿನಗೊಬ್ಬನಿಗೇ ಗೊತ್ತು. ಅದ್ದರಿಂದ ನೀನೆ ರಕ್ಷಿಸಬೇಕು. ನಿನ್ನ ನಾಮಸ್ಮರಣೆಯನ್ನೇ ಯಾವಾಗಲೂ ಕೊಡು. ಕೊನೆಗೆ ನನಗೆ ಬೇಕಾದುದು ಇಷ್ಟೇ.''

ಕೇಳುವುದು ಹರಿಕಥೆಯು ಕೇಳಲು |ಹೇಳುವುದು ಹರಿಭಕ್ತಿ ಮನದಲ್ಲಿ ತಾಳು ವುದು | ಹಿರಿದಾಗಿ ಚರಣಸೇವೆಯಲಿ |ಊಳಿಗವ ಮಾಡುವುದು ವಿಷಯವ ಹೂಳು ವುದು |ನಿಜಮುಕ್ತಿಕಾಂತೆಯುನ್ನಾಳುವುದು ಕೃಪೆಮಾಡಿರಕ್ಷಿಸು ನಮ್ಮ ನನವರತ ೧೦೨

ಹೀಗೆ ಇದನ್ನು ಮುಗಿಸಿ ಕೊನೆಗೆ ಫಲಸ್ತುತಿಯನ್ನು ಹೇಳಿದ್ದಾರೆ. ಮಹಾಭಾರತದ

ಕರ್ತೃವಾದ ಹರಿಗೆ ಇದು ಅಂಕಿತವಾದುದು. ಇದು ಹರಿಗೆ ಅತ್ಯಂತ ಪ್ರೀತ್ಯಾಸ್ಪದವು. ಕೊನೆಯ ಮಂಗಳವನ್ನು ಬೇಲೂರು ಚನ್ನಿಗರಾಯನಿಗೆ ಹಾಡಿದ್ದಾರೆ.

7. ಮೋಹನ ದಾಸರ ಕೋಲುಹಾಡು

ವಿಜಯದಾಸರ ಶಿಷ್ಯರಾದ ಮೋಹನದಾಸರು ಕೋಲುಹಾಡನ್ನು ರಚಿಸಿದ್ದಾರೆ. 217 ನುಡಿಗಳುಳ್ಳ ಈ ಕಾವ್ಯವು ಕೃಷ್ಣಾರ್ಜುನರ ಮತ್ತು ಸುಭದ್ರ ರುಕ್ಮಿಣಿಯರ ಸರಸ ಸಲ್ಲಾಪನ್ನೂ ಬಹು ಚಮತ್ಕಾರವಾಗಿ ಚಿತ್ರಿಸುತ್ತದೆ. ಮೋಹನದಾಸರ ಶೈಲಿ ಬಹಳ ಲಲಿತ. ಮಾತುಗಳು, ಬಹಳ ಸರಸ, ಮೊದಲು ವಿಘ್ನೇಶನ ಸ್ತೋತ್ರದಿಂದ ಈ ಕಾವ್ಯವನ್ನು ಆರಂಭಿಸಿದ್ದಾರೆ. ದೇವರಸ್ತೋತ್ರ ಮಾಡುತ್ತಾ, ದಶಾವತಾರಗಳನ್ನೂ ಕೇಶವಾದಿ ಚತುರ್ವಿಂಶತಿ ರೂಪಗಳನ್ನೂ ವರ್ಣಿಸುತ್ತಾರೆ. ಆಮೇಲೆ ಅನಿರುದ್ಧಾದಿ ಬೇರೆ ಬೇರೆ ಭಗವದ್ರೂಪಗಳನ್ನು ಸ್ತೋತ್ರ ಮಾಡುತ್ತಾರೆ. ಲಕ್ಷ್ಮಿದೇವಿಯರ ಸ್ತೋತ್ರದಲ್ಲಿ ಮಾಯಾ–ಜಯಾದಿ ಬೇರೆ ಬೇರೆ ರೂಪಗಳನ್ನೂ ಧ್ಯಾನಿಸುತ್ತಾರೆ. ಅನಂತರ ಬ್ರಹ್ಮ ವಾಯ್ವಾದಿ ದೇವತೆಗಳನ್ನೂ ಜಾಂಬವತ್ಯಾದಿ ಷಣ್ಮಹಿಷಿಯರು, ಪಾರ್ವತಿ ಮೊದಲಾದವರನ್ನೂ ವಂದಿಸುತ್ತಾರೆ. ಆಮೇಲೆ ಆಚಾರ್ಯಾದಿ ಗುರುಪರಂಪರಾ ವಂದನಮಾಡುತ್ತಾ 4 ಪದ್ಯಗಳಿಂದ ಚಂದ್ರಿಕಾಚಾರ್ಯರನ್ನೂ 5 ಪದ್ಯಗಳಿಂದ ರಾಯರನ್ನೂ ಆಮೇಲೆ ಸತ್ಯಾಭಿನವಾದಿ ಸ್ವಗುರುಗಳನ್ನು ವಂದಿಸಿ ಪುರಂದರ ವಿಜಯದಾಸರನ್ನು ನಮಸ್ಕರಿಸುತ್ತಾರೆ.

ಕೃಷ್ಣಾವತಾರ ವರ್ಣನೆ ಮಾಡುತ್ತಾ, ವಿಶ್ವಕರ್ಮನಿಂದ ಕೃಷ್ಣನು ನಿರ್ಮಿಸಿದ ದ್ವಾರಕಾಪಟ್ಟಣದ ಸೊಬಗನ್ನು ಹೇಳುತ್ತಾರೆ.

ದ್ವಾರಕಾಪುರದ ಶೃಂಗಾರ ವರ್ಣಿಸಲು ಮೂರುಕಣ್ಣವಗೆವಶವಲ್ಲ ಕೋಲೆ |
ಮೂರು ಕಣ್ಣವಗೆ ವಶವಲ್ಲ ನಾಲ್ಕಾರ ಮೋರೆಯವರಿಗೆ ವಶವಲ್ಲ ಕೋಲೆ ೬೨

ತಳಿರು ತೋರಣ, ಬಂಗಾರದ ಕಲಶಗಲಿಂದ ಅಲಂಕೃತವಾದ ದ್ವಾರಕೆಯಲ್ಲಿ ಕೃಷ್ಣ ಮತ್ತು ಅವನ ಅರಸಿಯರ ಮಂದಿರಗಳು ಶೋಭಿಸುತ್ತಿವೆ. ಕೃಷ್ಣ ಅಷ್ಟಮಹಿಷೆ ಯರೊಡನೆ ಅಂತಃಪುರದಲ್ಲಿದ್ದ. ಆಗ ಸುಭದ್ರೆಯು ಪಾಂಡವರೊಡನೆ ಮುಯ್ಯ ತಂದಿಡುತ್ತಾಳೆ. ಅವರೊಂದಿಗೆ ಅಷ್ಟದಿಕ್ಪಾಲಕರೂ ಬರುತ್ತಾರೆ.

ಹರಿಯೆ ಸರ್ವೋತ್ತಮ ಹರಿಯೇ ಪರದೇವತೆ | ಹರಿದಾಸರೆಂಬೋ ಬಿರುದಿನ ಕೋಲೆ | ಹರಿದಾಸರೆಂಬೋ ಬಿರುದಿನ ಹೆಗ್ಗಾಳೆ | ಹಿರಿಬಾಗಿಲೊಳು ಹಿಡಿಸಿಹರು ಕೋಲೆ ೭೯

ಆಮೇಲೆ 26 ಪದ್ಯಗಳಿಂದ ವೈಕುಂಠವರ್ಣನೆ ಮಾಡುತ್ತಾರೆ. ಇವರು ಪಂಚವಿಧ ಮುಕ್ತಿ ಹೇಳುತ್ತಾರೆ. ಸುಭದ್ರೆಯು ಅತ್ತಿಗೆಯರನ್ನು ಹಾಸ್ಯಮಾಡಿ ಕರೆಯುತ್ತಾಳೆ. ರುಕ್ಮಣೀದೇವಿಯು ಬಂದು ಯಾರವರು ಬಂದವರೆಂದು ಕೇಳುತ್ತಾಳೆ. ಓಡಿಬಂದು

ಅಣ್ಣನ ಕೂಡಿದ ನಿನಗೆ ಅಣ್ಣನ ಮೋಹದ ಒಲುಮೆ ಹೆಚ್ಚಾಯಿತು. ಅದಕ್ಕೇ ನಮ್ಮೊಂದಿಗೆ ನೀನು ಮಾತಾಡಲೊಲ್ಲೆಯೆಂದು ಸುಭದ್ರೆ ಆಕ್ಷೇಪಿಸುತ್ತಾಳೆ. ನಾನೇನು ನಿನ್ನಂತೆ ಸನ್ಯಾಸಿಯೊಡನೆ ಓಡಿಬರಲಿಲ್ಲವೆನ್ನುತ್ತಾಳೆ ರುಕ್ಮಿಣಿ. ಸತ್ಯಭಾಮೆಯೂ ಅಕ್ಕನೊಂದಿಗೆ ದನಿಗೂಡಿಸುತ್ತಾಳೆ. ಅಂತೆಯೇ ಕೃಷ್ಣನೂ ಅರ್ಜುನನನ್ನು ರೇಗಿಸುತ್ತಾನೆ. ದನಗಾವ ನಿನಗೆ ಈಗೆಲ್ಲೋ ಒಮ್ಮೆ ಧೊರೆತನ ಬಂದಿದೆ. ಇಲ್ಲದಿದ್ದರೆ ನಿನಗೆ ಮೂರು ದುಡ್ಡೂ ಹುಟ್ಟಲಾರದು. ಇದಿಕ್ಕೇಕೀ ಗರ್ವ ಎಂದು ಅರ್ಜುನ ತಿರುಗಿಸುತ್ತಾನೆ. ಅರ್ಜುನ ನೀನೆಲ್ಲಿ, ನಮ್ಮ ಸುಭದ್ರೆಯೆಲ್ಲಿ ? ನೀನು ಕಬ್ಬಿಣ, ಅವಳು ಕನಕ ಎಂದು ಕೃಷ್ಣ ಮೂದಲಿಸುತ್ತಾನೆ. ಆಗ ಅರ್ಜುನ ದೇವರ ನಿಂದಾಸ್ತುತಿ ಮಾಡುತ್ತಾನೆ.

ನಿನಗೆ ಸಮುದ್ರ ಏನಂತ ಮಗಳನ್ನು ಕೊಟ್ಟ ಕೃಷ್ಣ ! ನಿನಗೆ ಮನೆಯಿಲ್ಲ. ನಿಲ್ಲಲು ಸ್ಥಳ ಸಹ ಇಲ್ಲ. ಬಲಿಯೇ ಇದಕ್ಕೆ ಸಾಕ್ಷಿ. ಕುಲವಿಲ್ಲ, ಗೋತ್ರವಿಲ್ಲ, ದೈತ್ಯರೆಲ್ಲ ಶತ್ರುಗಳು ! ಹೆಂಡಿರೋ ಅನೇಕ, ಮಲಮಕ್ಕಳಿಗೆ ಲೆಕ್ಕವಿಲ್ಲ. ನೀನು ಸಿರಿದೇವಿಗೆಂದೂ ತಕ್ಕವರನಲ್ಲ. ವಯಸ್ಸಿನಲ್ಲೋ ಮುದಿಜರಠ. ಕೈಲಿ ಕಾಸಿಲ್ಲ. ಕುದುರೆಮೂತಿ. ಉರಿಗಣ್ಣ. ಸಮುದ್ರವೇ ಮನೆ. ಹಾವು ಮಂಚ. ಹದ್ದು ವಾಹನ. ಹದ್ದು ಹಾರುವಾಗ ನೀನು ಬಿದ್ದರೆ ಗತಿಯೇನು? ನಿನ್ನ ಹಣೆಬರಹ ನೋಡಿಯೇ ಭೃಗು ನಿನ್ನ ಕಾಲಿಂದ ಒದ್ದ. ಶಿಶುಪಾಲ ಬಾಯಿಗೆ ಬಂದಂತೆ ಬೈದ. ನೀನು ಹೇಡಿ, ಕಾಲಯವನ, ಜರಾಸಂಧರುಗಳಿಗೆ ಹೆದರಿದೆ. ಪಾರಿಜಾತ ತರಲು ಹೋದಾಗ ನಮ್ಮಕ್ಕ ಸತ್ಯಭಾಮೆ ಇದ್ದಳೆಂದೇ ನೀನು ಉಳಿದೆ. ದುರ್ಯೋಧನನ ಸಭೆಯಲ್ಲಿ ನಿನಗಾದ ಬವಣೆ ಮರೆತೆಯಾ ? ಯಾರನ್ನು ನೀನು ಎದುರಿಸಿ ಯುದ್ಧಮಾಡಿದೆ ನೀನೇ ಹೇಳು.

ಕ್ಷೀರಸಾಗರಶಾಯಿ ಎಂದರೆ ಅತ್ತೆ ಮನೆ ಸೇರಿಕೊಂಡಿದ್ದೀಯೆ. ಹಾಲು ಮೊಸರು ಕದ್ದು ಹೆಣ್ಣು ಹುಡುಗಿಯರನ್ನೆಲ್ಲ ಕೆಡಿಸಿದೆ. ಆಳಿನ ಮನೆಯಲ್ಲಿ ಉಂಡೆ. ಹೆಣ್ಣಾಗಿದ್ದೆ. ಸ್ವರರಮಣನೆಂದು ಹೇಳಿಕೊಳ್ಳುವವನು ಕರಡಿಯ ಮಗಳನ್ನು ಕೂಡಿದೆ. ಹತ್ತಾವತಾರ ಗಳೇ ಹತ್ತುಲಕ್ಷಣ, ಶಬರಿಯೆಂಜಲುಂಡೆ. ಕುಬ್ಜೆಯ ಕೂಡಿದೆ. ಅತ್ತೆಯನ್ನು ನೀನು ಬಿಡಲಿಲ್ಲ. ಹೆತ್ತಮಗಳನ್ನು ಲಗ್ನಾಪಾದೆ. ಇದೂ ನಿನ್ನ ಶೀಲ.

ಇನ್ನು ಸಂಸಾರ, ಆಪ್ತರು, ಇಷ್ಟರು ಎಂಥವರು ನೋಡು. ನಿನ್ನ ದೊಡ್ಡ ಮಗ ತಲೆ ಹೊಡಕ. ಕಿರಿಮಗ ಚಂಚಲ. ಮೊಮ್ಮಗ ನಾರದ ಚಾಡಿಕೋರ. ತಿರುಗಾಲ ತಿಪ್ಪಿ ಹೆಂಗಸು. ನಿನ್ನ ಮಗಳು ಮಹಾಪತಿವ್ರತೆ, ಶಿವತಲೆಯೇರಿದವಳು. ನಿನ್ನ ಸೊಸೆ ಶಾರದೆ ಎಲ್ಲರ ಬಾಯಲ್ಲೂ ಬರುತ್ತಾಳೆ. ರುದ್ರ ಬ್ರಹ್ಮಹತ್ಯ ಮಾಡಿದವ. ಬಲಿ ಸ್ವರ್ಣಸ್ತೇಯಿ. ಬಲರಾಮ ಪಾಯಿ. ಚಂದ್ರ ಗುರುತಲ್ಪಗಾಮಿ. ನಾರದ ಮಾತೃದ್ರೋಹಿ. ಪ್ರಹ್ಲಾದ ಪಿತೃ ದ್ರೋಹಿ. ಅಕ್ರೂರ ಸ್ವಾಮಿದ್ರೋಹಿ. ಇಂಥವರಿಗೆ ನೀನು ಒಡೆಯ ಎಂದು ಅರ್ಜುನ ಆಕ್ಷೇಪಿಸುವುದಕ್ಕೆ 'ಅರ್ಜುನ ನಿನಗೆ ತಂಗಿಯನ್ನು ಕೊಟ್ಟು ನಿನ್ನ ಬಂಡಿ

ಬೋಧವನಾದುದಕ್ಕೆ ಇದೀಗ ಒಳ್ಳೆಯ ಉಪಕಾರ'ವೆನ್ನುತ್ತಾನೆ ಕೃಷ್ಣ.

'ಸ್ವಾಮಿ।ಭೃತ್ಯನ್ಯಾಯವರಿಯದೆ ನಾನಿನ್ನ ಪಾಮರನಂತೆ ನುಡಿದೆನು ಕೋಲೆ ।
ಪಾಮರನಂತೆ ನುಡಿದಪರಾಧವ ಶ್ರೀಮನೋಹರನೆ ಮನ್ನಿಸು ಕೋಲೆ'

ಎಂದು ಅರ್ಜುನನು ಕ್ಷಮೆ ಬೇಡುತ್ತಾನೆ. ಸುಭದ್ರೆಯೂ ಬಂದು ಅಣ್ಣನನ್ನು ಕ್ಷಮಿಸುವಂತೆ ಪ್ರಾರ್ಥಿಸುವಳು. ಕೃಷ್ಣ ಆಮೇಲೆ ಅವರನ್ನು ಸಮಾಧಾನಮಾಡುತ್ತಾನೆ. ರುಕ್ಮಿಣಿಯೂ ನಮಸ್ಕರಿಸಿದ ಸುಭದ್ರೆಯನ್ನು ತಕ್ಕೈಸುತ್ತಾಳೆ. ಅಶ್ವಮೇಧ ಪರ್ವದ ಈ ಸಂಗತಿ ಕಟ್ಟುಕಥೆಯಲ್ಲವೆಂದು ಮೋಹನದಾಸರು ಮುಂಗಳ ಹೇಳಿದ್ದಾರೆ. ಈ ಗ್ರಂಥ ರಚಿಸಿದ ಕಾಲವನ್ನೂ ಅವರು ತಿಳಿಸಿದ್ದಾರೆ.

8. ತತ್ತ್ವ ಸುವಾಲಿ

ಜಗನ್ನಾಥದಾಸರ ಹೆಸರು ದಾಸಸಾಹಿತ್ಯದಲ್ಲಿ ಚಿರಸ್ಮರಣೀಯವಾದುದು. ಇವರು ಹರಿಕಥಾಮೃತಸಾರವಲ್ಲದೆ ತತ್ತ್ವಸುವಾಲಿಯೆಂಬ ಹೆಸರಿನ ಮುಕ್ತಕಗಳನ್ನು ರಚಿಸಿದ್ದಾರೆ. ಸಾಂಗತ್ಯ ರೂಪಗಳಲ್ಲಿರುವ ಈ ಮುಕ್ತಕಗಳಲ್ಲಿ ವಿಘ್ನೇಶ್ವರ, ರುದ್ರ, ವಾಯು, ವೃಂದಾವನ, ಶ್ರೀ—ಭೂ—ದುರ್ಗಾ, ಬ್ರಹ್ಮ, ವಾಯು, ನವಗ್ರಹ, ಅಗ್ನಿ, ಮೊದಲಾದ ದೇವತಾ ಸ್ತೋತ್ರಗಳಿವೆ. ಇದಲ್ಲದೆ ಕೃಷ್ಣ ಚರಿತೆ, ದಶಾವತಾರ ಸ್ತೋತ್ರ, ರುಕ್ಮಿಣೀ ವಿಲಾಸಗಳನ್ನು ರಚಿಸಿದ್ದಾರೆ. ಇದರಲ್ಲೆಲ್ಲ ಶ್ರೀನಿವಾಸ ದೇವರ ಸ್ತೋತ್ರ ಬಹಳ ದೊಡ್ಡದು. ಇದರಲ್ಲಿ 142 ನುಡಿಗಳಿವೆ. ಅನೇಕ ಪ್ರಮೇಯಗಳನ್ನು ಇದರಲ್ಲಿ ಹೇಳಿದ್ದಾರೆ. ಇದರಶೈಲಿ ಬಹಳ ಸರಸವಾಗಿದ್ದು ಭಾವಗಳು ಮನಸ್ಸಿನಮೇಲೆ ಪರಿಣಾಮ ಮಾಡುವಂತಿವೆ.

ಶ್ರೀನಿಧೇ ನಿನ್ನವರ ನಾನಾಪರಾಧಗಳು ನೀನೆಣಿಸುವರ ಸಲಹುವಿ ಸಲಹುವಿ
ಸರ್ವಜ್ಞ ಯೆಣಿಸಬೆ ನಿನ್ನ ಕರುಣಕ್ಕೆ ೫

ಯೆಂದು ಕಾಂಬೆ ನಿನ್ನ ಮುಂದಸ್ಮಿತಾನನದ ಕಂದರ್ಪನಯ್ಯ ಕರ್ವಿಗೋಯ ತವಿಗೇಯ
ನಿನ್ನಂಥ ಬಂಧು ಎನಗಿರಲೋ ಬಹುಕಾಲ ೬

ಅಚ್ಯುತನೆ ನಿನ್ನಂಥ ಹುಚ್ಚ ದೊರೆಯನು ಕಾಣೆ ಬಿಚ್ಚಿ ಕೈಯೊಡ್ಡ ಭಕುತರ। ಭಕುತರ
ಪರಾಧಗಳ ತುಚ್ಛಗೈದವರ ಸಲಹುವಿ ೭

ಅನಯೋನಿಯಲಿರಿಸು ಅವಲೋಕದೊಳಿರಿಸು ಅವಾಗ ನಿನ್ನ ನೆನೆವಂತೆ।
ನೆನೆವಂತೆ ಕರುಣಿಸೋ ದೇವಕೀಕಂದ ದಯದಿಂದ ೧೩

ಸದಸದ್ವಿಲಕ್ಷಣನೆ ಅಧಿಭೂತ ಅಧ್ಯಾತ್ಮ ಅಧಿದೈವರಸ ರಸರೂಪಿ ರಸರೂಪಿ
ನೀನೆ ಸನ್ಮೋದ ಪುಷ್ಟಿ ತುಷ್ಟಿಗೊಡುತಿಪ್ಪಿ ೨೯

ಮನವೆ ಆಲೋಚಿಸಿಕೋ ನಿನಗಿದ್ದ ಚಿಂತೆ ನಮ್ಮನಿರುದ್ಧರಿಲ್ಲೇ ಅನುಗಾಲ।
ಅನುಗಾಲ ಸಲಹುತಿರೆ ಬರಿದೆ ಚಿಂತ್ಯಾಕೋ ನಿನಗಿನ್ನು ೪೦

ಅಂಬುಜಭವಾಂಡದೊಳು ಒಂಭತ್ತುವಿಧದಲ್ಲಿ ಅಂಬುಜಾಂಬಕನ ವಿಭೂತಿ |
ವಿಭೂತಿಮೂರ್ತಿಗಳ ಕಾಂಬುವನೆ ಯೋಗಿ ಜಗದೊಳು । ೪೭

ಕರ್ತೃಕರ್ಮಗಳಲ್ಲಿ ಕರಣತ್ರಯಗಳಲ್ಲಿ ನಿತ್ಯ ನೀನಿದ್ದು ಸಲಹುವಿ ನುಡಿಸಿ
ಜೀವರನು ಕೃತಕೃತ್ಯರನು ಮಾಡಿ ಸಲಹುವಿ ೪೯

ನಿತ್ಯಬದ್ಧನನು ನಾನು ನಿತ್ಯಮುಕ್ತನು ನೀನುಭೃತ್ಯನೋ ನಾನು ಪ್ರಭು ನೀನು ।
ಪ್ರಭು ನೀನು ಮೂರ್ಲೋಕ ವ್ಯಾಪ್ತನೋ ನೀನು ಅಣು ನಾನು ೫೧

ಮಳೆಯೆ ಮಜ್ಜನವು ದಿಗ್ವಿಲಯಂಗಳೇ ವಸನ ಬೆಳೆದ ಬೆಳೆಸುಗಳೇ
ನೈವೇದ್ಯ । ನೈವೇದ್ಯ ಜನರ ಕಂಗಳಕಾಂತಿ ನಿನಗೆ ಆರತಿಯೆ ೫೩

ಸತ್ಯ ಸಂಕಲ್ಪ ತ್ವಚ್ಚಿತ್ತಾನುಸಾರದಲ್ಲಿ ಮಚ್ಚಿತ್ತವರ್ತಿಸಲಿ ಸರ್ವತ್ರಾ ಸರ್ವತ್ರ
ಸರ್ವದಾ ಮತ್ತೊಂದು ಲಾಭ ನಾನೊಲ್ಲೆ ೭೪

ಮತದೊಳಗೆ ಮಧ್ವಮತವೆನ್ನಿ ವ್ರತದೊಳಾ ಹರಿದಿನ ಕಥೆಯೊಳಗೆ ಭಾಗವತ
ಕಥೆಯೆನ್ನಿ । ಕತೆಯೆನ್ನಿ ಮೂರ್ಲೋಕದೊಳಗೆ ಶ್ರೀಕೃಷ್ಣ ಪ್ರತಿಮೆನ್ನಿ ೮೫

ನ್ನ ವಿಸ್ಮೃತಿ ಕೊಡುವ ಪುಣ್ಯ ಲೋಕಗಳೊಲ್ಲೆ ನಿನ್ನನೇ ನೆನೆವ ಮಹಪಾಪ |
ಮಹಪಾಪ ಕರ್ಮಗಳು ಜನ್ಮ ಜನ್ಮದಲಿ ಇರಲಯ್ಯ ೯೧

ವಾಸುದೇವನ ಬಿಟ್ಟು ಲೇಸು ಹರಿಸಿಕೊಂಡೋ ಸುದ್ದೈವಗಳ ಭಜಿಸಲು | ಭಜಿಸಲು
ಬರಿದೆ ಆಯಾಸವಲ್ಲದಲೆ ಸುಖವಿಲ್ಲ ೧೦೯

ನಿನ್ನ ಅಧೀನಯ್ಯ ನಿನ್ನ ದಾಸರದಾಸ ಯೆನ್ನದೆಂತಯ್ಯ ಅಪರಾಧ ಅಪರಾಧಗಳ
ನೋಡಿ ಬನ್ನಬಡಿಸುವುದು ಉಚಿತವಲ್ಲ ೧೧೮

ಅನಾಥಬಂಧು ಜಗನ್ನಾಥ ವಿಠಲ ಪ್ರಪನ್ನ ಪರಿಪಾಲ ಮಾಲೋಲ ಮಾಲೋಲ
ಅರಿಪಾಂಚನ್ಯ ಧೃತಪಾಣಿ ಸಲಹೆಮ್ಮ ೧೪೩

ಮೇಲಿನ ಪದಗಳಲ್ಲಿ ಭಕ್ತನ ಆರ್ತ ಪ್ರಾರ್ಥನೆ, ಹರಿಯ ವೈಭವ, ವ್ಯಾಪ್ತಿ ಪೂಜೆ, ಹರಿಯಸ್ವಾತಂತ್ರ್ಯ, ಮುಂತಾದ ಅನೇಕ ಪ್ರಮೇಯಗಳು ಬಹು ಸರಳವಾಗಿ ಉತ್ತಮವಾಗಿದೆ. ಜಗನ್ನಾಥ ದಾಸರು ದುರ್ವ್ಯಾಧಿ ವಿಧವೆಯಾದ ತಮ್ಮ ಮಗಳಿಗೆ ಈ ಕಾವ್ಯ ರಚಿಸಿದರೆಂಬ ಐತಿಹ್ಯವಿದೆ.

9. ಹರಿಕಥಾಮೃತಸಾರ

ಜಗನ್ನಾಥ ದಾಸರ ಹರಿಕಥಾಮೃತಸಾರವು ಹರಿದಾಸ ಸಾಹಿತ್ಯದಲ್ಲೆಲ್ಲ ಶ್ರೇಷ್ಠವಾದ ಗ್ರಂಥ. ಶ್ರೀಪಾದರಾಜರೇ ಮೊದಲಾದ ಎಲ್ಲ ಹರಿದಾಸ ಶ್ರೇಷ್ಠರುಗಳ ಅಪ್ಪಣೆಯಂತೆ ಈ ಗ್ರಂಥವನ್ನು ರಚಿಸಿದರೆಂಬ ಪ್ರತೀತಿ ಇದೆ. ಇದರಲ್ಲಿ ಮಧ್ವಮತದ ಎಲ್ಲ ಮುಖ್ಯ ಪ್ರಮೇಯಗಳೂ ಅಡಕವಾಗಿವೆ. ಸುಮಾರು 1000 ಪದ್ಯಗಳುಳ್ಳ ಈ ಕಾವ್ಯದಲ್ಲಿ 32 ಸಂಧಿಗಳಿವೆ. ಈ ಪದ್ಯಗಳು ಬಹಳ ವಿಚಾರಗಳನ್ನೊಳಗೊಂಡಿರುವುದರಿಂದ ಮಧ್ವ

ಶಾಸ್ತ್ರದ ನಿಷ್ಕೃಷ್ಟವಾದ ಜ್ಞಾನವಿಲ್ಲದೆ ಇವುಗಳ ಅರ್ಥವಾಗಲಾರದು. ಇದನ್ನು ರಚಿಸಿದ ಜಗನ್ನಾಥದಾಸರು ದೊಡ್ಡ ಪಂಡಿತರಾದ್ದರಿಂದಲೂ ಅಪರೋಕ್ಷ ಜ್ಞಾನಿಗಳಾದ ಹರಿದಾಸಾಗ್ರಣಿಗಳಾದ್ದರಿಂದಲೂ ಇಂತಹ ಗ್ರಂಥವನ್ನು ರಚಿಸಿದರು. ಇದು ಇತರರಿಂದ ಅಸಾಧ್ಯವಾದುದು. ಕೇವಲ ಶ್ರುತ್ಯರ್ಥಗಳನ್ನೊಳಗೊಂಡ ಈ ಗ್ರಂಥವು ಸಂಸ್ಕೃತ ಗ್ರಂಥಗಳಂತೆ ಬಹಳ ಕ್ಲಿಷ್ಟವಾಗಿದೆ.

ಜಗನ್ನಾಥದಾಸರು ಪ್ರತಿಯೊಂದು ಸಂಧಿಗೂ ಮೊದಲು "ಹರಿಕಥಾಮೃತಸಾರ ಗುರುಗಳ ಕರುಣದಿಂದಾಪನಿತುಪೇಳುವೆ ಪರಮ ಭಗವದ್ಭಕ್ತರಿದನಾದರದಿ ಕೇಳುವುದು" ಎಂಬ ಅರ್ಧ ಪದ್ಯವನ್ನು ಸೇರಿಸಿದ್ದಾರೆ.

ಮೊದಲನೆಯ(ನಾಂದೀ) ಸಂಧಿಯಲ್ಲಿ 13 ಪದ್ಯಗಳಿವೆ. ಒಂದೊಂದು ಪದ್ಯದಿಂದ 'ಹರಿ, ಲಕ್ಷ್ಮೀ, ಬ್ರಹ್ಮ, ವಾಯು, ಸರಸ್ವತಿ, ಭಾರತೀಯರಸ್ತೋತ್ರ ಆಮೇಲೆ ವೇದವ್ಯಾಸರು, ಆಚಾರ್ಯರು, ರುದ್ರದೇವರು ಮತ್ತು ಇಂದ್ರಾದಿ ದೇವತಗಳ ಸ್ತೋತ್ರ, ಪದ್ಮನಾಭತೀರ್ಥರೇ ಮೊದಲಾದ ಯತಿಗಳು. ಪುರಂದರಾದಿ ರಮಾಕಲತ್ರನ, ದಾಸ ವರ್ಗಕೆ' ನಮಸ್ಕಾರ ಮಾಡಿದ್ದಾರೆ. ಕೊನೆಯ ಪದ್ಯದಲ್ಲಿ ಹರಿಯು ಎಲ್ಲರಲ್ಲಿಯೂ ಇದ್ದು ಹೇಗೆ ವ್ಯಾಪಾರ ಮಾಡುತ್ತಾನೆಂಬುದನ್ನು ಸದೃಷ್ಟಾಂತ ತಿಳಿಸುತ್ತಾರೆ.

ಪರಿಮಳವು ಸುಮನದೊಳಗನಳನು | ಮರಣಿಯಲ್ಲಿಪ್ಪಂತೆ ದಾಮೋ | ದರನು ಬ್ರಹ್ಮಾದಿಗಳ ಮನದಲಿ ತೋರಿ ತೋರದಲೆ | ಇರುತಿಹ ಜಗನ್ನಾಥ ವಿಠಲನ ಕರುಣ ಪಡೆವಮುಮುಕ್ಷು ಜೀವರುಪರಮ ಭಾಗವತರನು ಕೊಂಡಾಡುವುದುಪ್ರತಿದಿನವು ೧೩

ಎರಡನೆಯ ಕರುಣಾಸಂಧಿಯಲಿ 32 ಪದ್ಯಗಳಿವೆ. ಇದರಲ್ಲಿ ಮುಖ್ಯವಾಗಿ ಹರಿಯ ಅಗಾಧ ಮಹಿಮೆ, ಅವನ ಭಕ್ತವಾತ್ಸಲ್ಯ ಇವನ್ನು ವರ್ಣಿಸಿದ್ದಾರೆ. ಹರಿಯ "ಮಂಗಳ ಕಥೆ"ಯ ಫಲವನ್ನು ಮೊದಲ ಪದ್ಯದಲ್ಲಿ ವಿವರಿಸುತ್ತಾರೆ. ಇದು" ಶ್ರವಣ ಮನಕಾನಂದವೀವುದು ಭವಜನಿತ ದುಃಖಗಳ ಕಳೆವುದು ವಿವಿಧ ಭೋಗಗಳಿಹ ಪರಂಗಳಲಿತ್ತು ಸಲಹುದು." ಆದ್ದರಿಂದ ಇದನ್ನು ಶ್ರದ್ಧೆಯಿಂದ ಕೇಳಬೇಕೆಂದು ಭೂಸುರರನ್ನು ಪ್ರಾರ್ಥಿಸುತ್ತಾರೆ. ನಿಖಿಳ ವೇದಾಭಿಮಾನಿ ಲಕ್ಷ್ಮಿಯ ಸ್ತುತಿಗಳಿಗೇ ಅಗೋಚರನಾದ ಹರಿ ಭಕ್ತರ ಸಂಸ್ತುತಿಗೆ ವಶನಾಗುವನೆಂದು ಹರಿಯ ಕಾರುಣ್ಯವನ್ನು ಹೇಳುತ್ತಾರೆ.

ಶ್ರುತಿತತಿಗಳಭಿಮಾನಿ ಲಕುಮೀ | ಸ್ತುತಿಗಳಿಗೆ ಗೋಚರಿಸದಪ್ರತಿ | ಹತ ಮಹೈಶ್ವರ್ಯಾದ್ಯಖಿಳಸದ್ಗುಣಗಣಾಂಬೋಧಿ | ಪ್ರತಿದಿವಸ ತನ್ನಂಘ್ರಿಸೇವಾ | ರತ ಮಹಾತ್ಮರು ಮಾಡುತಿಹ ಸಂ | ಸ್ತುತಿಗೆ ವಶನಾಗುವನಿವನ ಕಾರುಣ್ಯಕೇನೆಂಬೆ |

ಮನಸ್ಸಿಗೆ ಸಹ ದೂರನಾದ ಸ್ವಾಮಿ ತನ್ನ ನೆನೆವರನ್ನು ಅನುಸರಿಸಿ ತಿರುಗುತ್ತಾನೆ. ಭಕ್ತಪ್ರಾರ್ಥನೆಯನ್ನು ಹರಿಯು ಆದರದಿಂದ ಲಾಲಿಸುತ್ತಾನೆ. ಮನಸ್ಸಿಲ್ಲಿದ್ದು ಪ್ರೇರಣೆ

ಮಾಡುವ ಹರಿಗೆ ಮನವೆಂತಲೇ ಹೆಸರು. ಭಕ್ತಿಯಿಂದ ಹರಿಯನ್ನು ಆರಾಧಿಸಿದರೆ ಅವನು ತನ್ನನ್ನೇ ಕೊಡುವನು. ಅತನ್ನು ಬಿಟ್ಟು ಕಾಮ್ಯಕರ್ಮಾ ಸಕ್ತನಾಗಿದ್ದರೆ, ಹರಿಯು ಐಹಿಕ ಪ್ರಲೋಭನಗಳಲ್ಲಿ ಬಂಧಿಸಿಡುವನು. ಬ್ರಹ್ಮರುದ್ರಾದಿದೇವತೆಗಳಲ್ಲಿದ್ದು ಸೃಷ್ಟಿ ಸಂಹಾರಾದಿಗಳನ್ನು ಮಾಡುವನು. ಅವನು ಸರ್ವತ್ರ ವ್ಯಾಪ್ತ. "ಒಬ್ಬನಲಿ ನಿಂತಾಡುವನು ಮತ್ತೊಬ್ಬನಲಿ ನೋಡುವನು" ಹೀಗೆ ಎಲ್ಲಕ್ಕೂ ಅವನು ನಿಯಾಮಕನಾಗಿರುವನು.

ಜನನಿಯನು ಕಾಣದಿಹ ಬಾಲಕ | ನೆನೆನೆನೆದು ಹಲಬುತಿರೆ ಕತ್ತಲೆ | ಮನೆಯೊಳಡಗಿದ್ದವನ ನೋಡುತ ನಗುತ ಹರುಷದಲಿ | ತನಯನಂ ಬಿಗಿದಪ್ಪಿರಂಬಿಸಿ ಕನಲಿಕೆಯ ಕಳೆವಂತೆ ಮಧುಸೂ | ದನನು ತನ್ನವರಿದ್ದೆಡೆಗೆ ಬಂದೊದಗಿ ಸಲಹುವನು ೧೧

ಹರಿಯು ಇಷ್ಟು ಸುಲಭವಾಗಿ ಭಕ್ತರನ್ನು ರಕ್ಷಿಸುವನೆಂಬುದಕ್ಕೆ ಪುಂಡರೀಕ, ಸುಧಾಮಾದಿಗಳೇ ಸಾಕ್ಷಿ. ಹರಿಯನ್ನ ನಿಂದಿಸಿದ ಶಿಶುಪಾಲಾದಿಗಳನ್ನೂ ಹರಿಯು ಸಲಹಿದನು. ಅವನ ಪಾದೋದ್ಭವಳಾದ ಗಂಗೆಯೇ ಜಗತ್ಪಾವನಳಾದಮೇಲೆ ಅವನ ನಾಮೋಚ್ಚಾರಣೆಯು ಭಕ್ತರನ್ನು ಪಾವನ ಮಾಡುವುದಚ್ಚರಿಯೇನು ?

ಚೇತನಾಚೇತನ ವಿಲಕ್ಷಣ | ನೂತನ ಪದಾರ್ಥಗಳೊಳಗೆ ಬಲು | ನೂತನ ಸುಂದರಕೆ ಸುಂದರ ರಸಕೆ ರಸರೂಪ | ಜಾತರೂಪೋದರ ಭವಾದ್ಯರೊಳಾತತಪ್ರತಿಮಪ್ರಭಾವ ಧ | ರಾತಳದೊಳೆಮ್ಮೊಡನೆಯಾಡುತಲಿಪ್ಪ ನಮ್ಮಪ್ಪ ೨೩

ಇಂಥದು ಹರಿಮಹಿಮೆ. 32 ಪದ್ಯಗಳ ಮುಂದಿನ ವ್ಯಾಪ್ತಿಯಲ್ಲೂ ಹರಿಯ ಮಹಿಮೆಯನ್ನು ಹೇಳುತ್ತಾರೆ.

ಸ್ತ್ರೀನಪುಂಸಕ ಪುರುಷ ಭೂಸಲಿಲಾನಲಾನಿಲ ಗಗನಮನಶಶಿ |ಭಾನು ಕಾಲಗುಣ ಪ್ರಕೃತಿಯೊಳಗೊಂದು ತಾನಲ್ಲ | ಏನು ಇವನ ಮಹಾಮಹಿಮೆ ಕಡೆಗಾಣರಜಭವ ಶಕ್ರಮುಖರು ನಿ | ದಾನಿಸಲು ಮಾನವರಿಗಳವಡುವುದೆ ವಿಚಾರಿಸಲು ೨

ಹರಿಯು ಭೋಗ್ಯವಸ್ತುಗಳಲ್ಲಿದ್ದು ಭೋಗ ತಂದಿತ್ತು ಮನಸ್ಸಿನಲ್ಲಿದ್ದು ಭೋಗ ಮಾಡಿಸುವನು. ಸಕ ಲಇಂದ್ರಿಯಗಳಲ್ಲೂ ತತ್ತ್ವೇಶರಲ್ಲೂಇದ್ದು ವ್ಯಾಪಾರ ಮಾಡಿಸುವನು. ಗುಣಗಳಲ್ಲಿ, ದ್ರವ್ಯಗಳಲ್ಲಿ, ಜೀವರ ಬುದ್ಧಿಯಲ್ಲಿ ಸಿದ್ಧಿ ಮತ್ತು ವಿದ್ಯೆಗಳಲ್ಲಿರುವನು. ಪಂಚವ್ಯೂಹನಾದ ಹರಿಯು ತಾನೇ ಸೇವ್ಯ ಸೇವಕನಾಗಿರುವನು. ಜೀವರ ಜಾಗ್ರತ್ಸ್ವಪ್ನ ಸುಷುಪ್ತಿಯಲ್ಲಿದ್ದು, ವಿವಿಧ ಅನುಭವಗಳನ್ನು ತಂದುಕೊಡುವನು. ಪೂಜಾಸಾಧನಗಳಲ್ಲಿದ್ದು ಪೂಜಕನಲ್ಲಿ ಪ್ರೇರಿತನಾಗಿ ತಾನೇ ಪೂಜೆಗೊಂಬನು. ಹೀಗೆ ಹರಿ ಸರ್ವತ್ರ ವ್ಯಾಪ್ತನಾಗಿದ್ದರೂ ಅವನು ಕಾಣಿಸಿ ಕೊಳ್ಳುವುದಿಲ್ಲ. ಹರಿಯು ಗ್ರಾಹ್ಯ ಗ್ರಾಹಕನು, ಶ್ಯಾಮಲನು, ಕೋಮಲಾಂಗನು, ಒಳಗೂ ಹೊರಗೂ ಮತ್ತನಂದದಿ

ಸುತ್ತುತ್ತಿರುವನು. ಬಿಳುಪಾದ ವಜ್ರ, ನೀಲವಾದ ಹಿರಣ್ಮಣಿ, ಕೆಂಪಾದ ಹವಳಗಳ ಛಾಯೆಯಂತೆ ದೇವದಾನವ ಮಾನವರಲ್ಲಿ ತ್ರಿವಿಧ ಕಾರ್ಯಗಳನ್ನೂ ಅವರವರ ಸ್ವರೂಪ ಯೋಗ್ಯತೆಯಂತೆ ವ್ಯಕ್ತಮಾಡುವನು. ಹರಿಯು ಅಣುವಿನಲ್ಲೂ ಮಹತ್ತಿನಲ್ಲೂ ಇರುವುದಲ್ಲದೆ ಘನಪದಾರ್ಥವನ್ನು ಅಣುವಿನಲ್ಲಿ ಅಡಗಿಸಿಡುವನು. ಸೂಕ್ಷ್ಮವನ್ನು ಮುಳುಗಿಸಬಲ್ಲ, ಸ್ಥೂಲವನ್ನು ಅಣುವಿನಲ್ಲಿ ತೇಲಿಸಬಲ್ಲ. ಅವನಿಗೆ ಯಾರಲ್ಲೂ ಸ್ನೇಹ, ಉದಾಸೀನ, ದ್ವೇಷಗಳಿಲ್ಲ. ನೀರು ಬೇರೆ ಬೇರೆ ರಸಗಳುಳ್ಳ ಫಲ ವೃಕ್ಷಗಳಿಗೆ ಪೋಷಕವಾಗುವಂತೆ ಹರಿಯು ಜೀವರುಗಳಲ್ಲಿದ್ದು ಅವರವರಿಗೆ ತಕ್ಕ ಫಲ ಕೊಡುವನು. ಮಕ್ಕಳು ಮನೆ ಕಟ್ಟಿ ಆಟವಾಡಿದಂತೆ ಹರಿಯ ಲೀಲೆ. ಅಪ್ರಾಕೃತನಾದ ಹರಿಗೆ ಜೀವರ ದುಃಖಾದಿಗಳ ಸಂಪರ್ಕವಿಲ್ಲ.

ಸಾಮಾನ್ಯಾಕಾರೇಣ ಹರಿಯ ವ್ಯಾಪ್ತಿಯನ್ನು ತಿಳಿಸಿದಮೇಲೆ ಮುಂದಿನ ಸಂಧಿಯಲ್ಲಿ ಭೋಜನ ಪದಾರ್ಥಗಳಲ್ಲಿ ಹರಿಯ ವಿವಿಧರೂಪಗಳ ವಿಷಯವನ್ನು ವಿಸ್ತಾರವಾಗಿ ಭೋಜನಪದಾರ್ಥಗಳಲ್ಲಿ ತದ್ಗತರಸಗಳಲ್ಲಿ ಭೋಕ್ತೃವಿನಲ್ಲಿ ಇದ್ದು ಆಯಾ ರಸಾನುಭವಗಳನ್ನು ಆಯಾ ಭೋಕ್ತೃಗಳಿಗೆ ಮಾಡಿಸುತ್ತಾ ಇರುವನು. ಜೀವರ ದೇಹದಲ್ಲಿರುವ ಎಪ್ಪತ್ತೆರಡು ಸಾವಿರ ನಾಡಿಗಳಲ್ಲಿನ ದೇವತೆಗಳಲ್ಲಿ ಹರಿಯು ಸನ್ನಿಹಿತನಾಗಿರುವನು. ನೀರಿನಲ್ಲಿ ವಾರಿಶಬ್ದವಾಚ್ಯನಾಗಿರುವನು. ಭೋಜ್ಯ ಪದಾರ್ಥಗಳಲ್ಲಿ ಹರಿಯ ಎಪ್ಪತ್ತು ಸಾವಿರ ರೂಪಗಳಿರುವುವು. ಕ್ಷೀರದಲ್ಲಿ 354, ಘೃತಗತ ರೂಪಗಳು 29, ಗುಡದೊಳಗೆ 5108, ಫಲಗಳಲ್ಲಿ 2200 ರೂಪಗಳು. ಹೀಗೆ ಬೇರೆ ಬೇರೆ ಪದಾರ್ಥಗಳಲ್ಲಿರುವುವು. ಇಂದ್ರಿಯಗಳಲ್ಲಿನ ಭಗವದ್ರೂಪಗಳನ್ನು ಹೇಳುತ್ತಾರೆ.

ಕಪಿಲ ನರಹರಿ ಭಾರ್ಗವತ್ರಯ ವಪುಷ ನೇತ್ರದಿ ನಾಸಿಕಾಸ್ಯದಿ | ಶಫರನಾಮಕ ಜಿಹ್ವೆಯಲ್ಲಿ ದಂತದಲಿ ಹಂಸಾಖ್ಯ | ತ್ರಿಪದಿಪಾದ್ಯ ಹಯಾಸ್ಯ ವಾಚ್ಯದೊಳಪರಿಮಿತ ಸುಖಪೂರ್ಣ ಸಂತತ ಕೃಪಣ ವತ್ಸಲರೊಳಗಿದ್ದವರವರ ರಸ ಸ್ವೀಕರಿಸಿ ಕೊಡುವ ।

ಹೀಗೆ ಭೋಕ್ತೃಗಳಲ್ಲೂ ಭೋಜ್ಯಪದಾರ್ಥಗಳಲ್ಲೂ ಇರುವನು. ಹರಿಯ ಈ ವ್ಯಾಪ್ತಿಯನ್ನು ಚಿಂತಿಸಿ ಭೋಜನಮಾಡುವವನು ನಿತ್ಯೋಪವಾಸಿ ಎನಿಸುವನು. ಅದೊಂದು ಯಜ್ಞಾಚರಣೆಯು. ಪಂಚಕೋಶಸ್ಥ ಭಗವದ್ರೂಪಗಳನ್ನು ವರ್ಣಿಸುತ್ತಾರೆ. ಪಂಚಪ್ರಾಣಗಳಲ್ಲಿನ ಸಾವಿರಾರು ಭಗವದ್ರೂಪಗಳನ್ನು ಹೇಳುತ್ತಾರೆ. ಅಂತೂ ಎಲ್ಲಪದಾರ್ಥಗಳ ಮುಖ್ಯಸಾರವನ್ನು ಭುಂಜಿಸಿ ಅಲ್ಪಭಾಗವನ್ನು ಜೀವರಿಗೆ ಕೊಡುತ್ತಾನೆ. ಇಂತಹ ಹರಿಗೆ ಉಪಚಯಾಪಚಯಗಳೆಲ್ಲಿ ಬಂದಾವು ?

ಹರಿಯ ವಿಭೂತಿ ರೂಪಗಳನ್ನು ಮುಂದಿನ ಸಂಧಿಯಲ್ಲಿ ಹೇಳುತ್ತಾರೆ. ಇದರಲ್ಲಿ ಮುಖ್ಯವಾಗಿ ಹರಿಯ ಅಧಿಷ್ಠಾನವನ್ನು ತಿಳಿಸಿ, ದೇಹಗತ ಹರಿಯನ್ನು ಪೂಜಿಸುವ

ಬಗೆಯನ್ನು ವಿಶ್ವರೂಪದ ಪರಿಯನ್ನು ಬಣ್ಣಿಸುತ್ತಾರೆ. ಹರಿಯ ವ್ಯಾಪ್ತರೂಪಗಳನ್ನು ತಿಳಿದು ಹರಿಮಹಿಮೆನ್ನು ಕೊಂಡಾಡಬೇಕೆಂದು ಹೇಳುತ್ತಾರೆ. ಪ್ರತಿಮ, ಸಾಲಿ ಗ್ರಾಮಾದಿಗಳಲ್ಲಿ ಹರಿಯ ವಿಭೂತಿಯನ್ನು ತಿಳಿಸಿ, ಭಾವಾದ್ವೈತ, ದ್ರವ್ಯಾದ್ವೈತ ರಹಸ್ಯವನ್ನೂ ಹೇಳುತ್ತಾರೆ. ದೇಹವು ಹರಿಗೆ ಪೂಜಾಸಾಧನವೆಂದು ತಿಳಿಯುವ ಬಗೆಯನ್ನೂ ವಿವರಿಸುತ್ತಾರೆ. ಪಂಚಭೂತಗಳು ಹರಿಯ ಪೂಜಾಸಾಮಗ್ರಿ ಎಂದು ಮೊದಲು ಚಿಂತಿಸಬೇಕು. ವಿಷಯ ಸಂಬಂಧವೇ ಪರ್ಯಂಕ, ತತ್ಸುಖವೇ ಸುಪ್ಪತ್ತಿಗೆ, ಆತ್ಮನಿವೇದನವೇ ಶಯನ, ಪಾಪ ಕರ್ಮಗಳು ಪಾದುಕೆಗೆ ಹತ್ತುವ ಕೊಳಕು, ಪುಣ್ಯ ಕರ್ಮವೇ ಹೂ, ಕೋಪ ಧೂಪ, ಭಕ್ತಿ ಭೂಷಣ, ಸದ್ಬುದ್ಧಿಯೇ ಛತ್ರ, ಜ್ಞಾನವೇ ದೀಪ, ಗುಣಕಥನಲೇ ಆರತಿಗಳು. ಇದೇ ಹರಿಪೂಜೆಯಲ್ಲಿ ಉತ್ತಮವಾದುದು. ಇದನ್ನು ಅನುಸಂಧಾನ ಮಾಡಬೇಕು. ಇದರಂತೆ ಹೃದಯಗುಹೆಯಲ್ಲೂ ಅನುಸಂಧಾನ ಮಾಡುವ ಪರಿಯನ್ನು ಹೇಳುತ್ತಾರೆ. ಇದು ಅಂತರ್ಯ ಪೂಜೆಯೆನಿಸುವುದು. ಹರಿಯ ವಿರಾಡ್ರೂಪ ಚಿಂತನ ಕ್ರಮವನ್ನೂ, ಬಿಂಬ ಭಾವವನ್ನು ವಿವರಿಸುವರು.

ಆರನೆಯ ಸಂಧಿಯಲ್ಲಿ ಪಂಚ ಮಹಾಯಜ್ಞಗಳ ಅನುಸಂಧಾನವನ್ನು ಹೇಳುತ್ತಾರೆ. ಆಕಾಶ, ಮೇಘ, ಭೂಮಿ, ತಂದೆ, ತಾಯಿ, ಇವರುಗಳಲ್ಲಿ ಜೀವನು ಪ್ರವೇಶಮಾಡಿ ದೇಹಸಹಿತನಾಗಿ ಹುಟ್ಟುವನು. ಈ ಐದೂ ಪಂಚಾಗ್ನಿಗಳೆನಿಸುವುವು. ಹರಿಯ 30 ರೂಪಗಳ ವ್ಯಾಪಾರವನ್ನೂ ಇವುಗಳಲ್ಲಿ ಚಿಂತಿಸುವುದೇ ಪಂಚಮಹಾಯಜ್ಞವು.

ಗಗನ ಪಾವಕ ಸಮಿಧಿ ರವಿ ರಶ್ಮಿಗಳೆ ಧೂಮವು ಅರ್ಚಿಯೆನಿಪುದೆ।
ಹಗಲು ನಕ್ಷತ್ರಗಳೆಕಿಡಿಗಳು ಚಂದ್ರಮಾಂಗಾರ।
ಮೃಗವರೋದರನೊಳಗೆ ಐರೂಪಗಳ ಚಿಂತಿಸಿ ಭಕ್ತಿರಸ ಮಾ |
ತುಗಳ ಮಂತ್ರವಮಾಡಿ ಹೋಮಿಸುವರು ವಿಪಶ್ಚಿತರು ||೨ ||

ಹೀಗೆ ಉಳಿದ ನಾಲ್ಕು ಅಗ್ನಿಯಲ್ಲೂ ಚಿಂತಿಸಬೇಕು. ಬ್ರಹ್ಮಾದಿ ದೇವತೆಗಳಲ್ಲಿ, ಅಧಿಭೂತ, ಅಧ್ಯಾತ್ಮ ಅಧಿದೈವಗಳಲ್ಲಿ, ದಶವಿಧ ಪ್ರಾಣಗಳಲ್ಲಿ ಬೇರೆ ಹೆಸರುಗಳಿಂದ ಇರುವನು. ಶಬ್ದಾದ್ಯಧಿಷ್ಠಾನದಲ್ಲಿಯೂ, ಶರೀರಗಳಲ್ಲಿಯೂ, ವೇದಾದಿಗಳಲ್ಲಿಯೂ, ನಾಲ್ಕು ಯುಗಗಳಲ್ಲೂ ಹರಿಯಿರುವನು. ವಿಶ್ವ, ತೈಜಸಾದಿ ರೂಪಗಳಿಂದ ಲಿಂಗ ಶರೀರ ದಲ್ಲಿರುವನು. ಇದರಂತೆ ಮನಸ್ಸು, ಅವ್ಯಕ್ತಗಳಲ್ಲಿಯೂ, ಮಾಸ, ಋತು, ವಾಸರ ಗಳಲ್ಲಿಯೂ, ಸ್ತ್ರೀಪುಂಶರೀರಗಳಲ್ಲೂ ಬೇರೆ ಬೇರೆ ಹೆಸರುಗಳಿಂದ ವ್ಯಾಪಾರ ಮಾಡು ವನು. ಬೇರೆ ಬೇರೆ ಭಾಗಗಳಲ್ಲಿ ಮತ್ಸ್ಯಾದಿ ದಶರೂಪಗಳ ಸನ್ನಿಧಾನವಿರುವುದು

ಮುಂದಿನ ತನ್ಮಾತ್ರಾಸಂಧಿಯಲ್ಲೂ ಹರಿಯ ವಿವಿಧ ವ್ಯಾಪ್ತಿಯನ್ನೇ ವರ್ಣಿಸುವರು. ದೇಹಗತ 72000 ನಾಡಿಗಳಲ್ಲಿ, ಸ್ವರೂಪ; ಲಿಂಗ, ಅನಿರುದ್ಧ ಮತ್ತು ಸ್ಥೂಲ ದೇಹಗಳಲ್ಲಿ ಹರಿಯ ರೂಪಗಳನ್ನು ಚಿಂತಿಸಬೇಕು. ಅಧಿಭೂತಾದಿಗಳಲ್ಲಿ ಅನೇಕ

ರೂಪಗಳಿರುವುವು. ವರ್ಣಗಳು, ಚೇತನರು, ಜಡಗಳು, ಎಲ್ಲದರಲ್ಲೂ ಹರಿಯ ರೂಪಗಳನ್ನು ಚಿಂತಿಸಿದವನೇ ಜ್ಞಾನಿಯು. ನೃಸಿಂಹನಾಗಿದ್ದು ಜೀವರ ಅಪಮೃತ್ಯು ಪರಿಹಾರಕನಾಗಿರುವನು. ನೂರು ವರುಷಗಳಲ್ಲಿರುವ 36000 ದಿನಗಳಲ್ಲೂ ಹರಿಯ ಸ್ತ್ರೀಪಂರೂಪಗಳನ್ನೂ ಧ್ಯಾನಿಸಬೇಕು.

ಒಂದರೊಳಗೊಂದೊದು ಬೆರದಿಹ ಇಂದಿರೇಶನ ರೂಪಗಳ ಮನ
ಬಂದತೆರದಲಿ ಚಿಂತಿಸಿದಕನುಮಾನವಿನಿತಿಲ್ಲ
ಸಿಂಧುರಾಜನೊಳಂಬರಾಲಯ ಬಂಧಿಸಲು ಪ್ರತಿ ತಂತುಗಳೊಳುದ
ಬಿಂದುವ್ಯಾಪಿಸಿದಂತೆ ಇರುತಿಪ್ಪನು ಚರಾಚರದಿ ೨೩

ಹರಿಯ ಅನಂತರೂಪಗಳು ಒಂದೇ ಬಗೆಯಾಗಿರುವುವು. ಅಂತು ಗುರು ಮುಖದಿಂದ ಈ ರಹಸ್ಯವನ್ನರಿತು ಚಿಂತಿಸಬೇಕು. ಲಕ್ಷ್ಮಿಯೇ ಹರಿಯ ಆ ಅನಂತ ರೂಪಗಳ ನೆಲೆಕಾಣಳೆಂದಮೇಲೆ ಜೀವರಿಗಿನ್ನೇನು ತಿಳಿಯುವುದು. ಅವನೆ ಗತಿಯೆಂದು ದೃಢವಾಗಿ ನಂಬಿದಲ್ಲಿ ಅವನು ಉದ್ಧರಿಸುವನು. ಈ ಸಂಧಿಯಲ್ಲಿ ವರ್ಣಗಳ ಪ್ರಸ್ತಾಪ ಬಂದಿದ್ದರಿಂದ ಮಾತೃಕಾನ್ಯಾಸದ ವಿಷಯ ಹೇಳಿದಂತಾಯಿತು. ಮುಂದಿನ ಸಂಧಿಯಲ್ಲಿ ತತ್ತ್ವನ್ಯಾಸ, ಪಾಪಪುರುಷ ವಿಸರ್ಜನ ಕ್ರಮದಲ್ಲಿ ಹರಿ ರೂಪಗಳ ವಿವರಗಳನ್ನೂ ತಿಳಿಸಿರುತ್ತಾರೆ. ಮಾತೃಕಾಮಂತ್ರ, ತದಭಿಮಾನಿ ದೇವತೆಗಳ ವಿಚಾರ, ನಾಡಿಗಳಲ್ಲಿ ಮುಖ್ಯವಾದ ಸುಷುಮ್ನಾನಾಡಿ, ತದ್ಗತ ಷಟ್ಕಮಲ, ಮೂಲೇಶ ಅಗ್ರೇಶ, ಪ್ರಾದೇಶ ಬಿಂಬಗಳ ರೂಪಚಿಂತನ ಪ್ರಕಾರ, ಬಲಗಣ್ಣಿನಲ್ಲಿರುವ ವಿಶ್ವರೂಪೋಪಾಸನೆ, ಪ್ರದ್ಯುಮ್ನನಾಮಕಹರಿ, ಮಹಾಲಕ್ಷ್ಮಿ ಮತ್ತು ವತ್ಸರೂಪಿ ವಾಯುದೇವರಮಹಿಮೆ, ಹತ್ತೊಂಬತ್ತು ಮುಖದ ವಿಶ್ವನಾಮಕ ಹರಿಯ ಮಹಿಮೆಗಳನ್ನೂ, ಬಲಗಿವಿಯಲ್ಲಿ ಗಂಗಾಸಾನಿಧ್ಯ ವಿಚಾರವನ್ನೂ, ದೇಹಾ ಯವಗತ ತತ್ತ್ವೇಶ, ತನ್ನಿಯಾಮಕ ಭಗವ ದ್ರೂಪಗಳ ತತ್ತ್ವನ್ಯಾಸಕ್ರಮ, ಕಾಲಾಭಿಮಾನಿ ಹರಿಯ ರೂಪಗಳ ವಿಷಯವನ್ನೂ ಹೇಳಿರುವರು.

ಒಂಭತ್ತನೆಯ ವರ್ಣಪ್ರಕ್ರಿಯ ಸಂಧಿಯಲ್ಲಿ ಪಂಚಾಶದ್ವರ್ಣ, ಉದಾತ್ತಾದಿ ಸ್ವರ ಇತ್ಯಾದಿಗಳಲ್ಲಿ ಹರಿಯೇ ಇರುವನೆಂದು ತಿಳಿದ ಜೀವರ ನುಡಿಯೇ ವೇದಾರ್ಥನೆನಿಸು ವುದೆಂದು ಹೇಳಿರುವರು. ಹರಿಪೂಜೆಯ ಕ್ರಮವನ್ನು ಸಂಗ್ರಹವಾಗಿ ಹೇಳಿರುವರು.

ಈಶನಲಿ ವಿಜ್ಞಾನ ಭಗವದ್ದಾಸರಲಿ ಸದ್ಭಕ್ತಿ ವಿಷಯ ನಿ
ರಾಸೆ ಮಿಥ್ಯಾ ವಾದಿಯಲಿ ಪ್ರದ್ವೇಷ ದಿನದಿನದಿ
ಈ ಸಮಸ್ತ ಪ್ರಾಣಿಗಳೊಳು ರಮೇಶ ನಿಹನೆಂದರಿತು ಅವರಾಭಿ
ಲಾಷೆಗಳ ಪೂರೈಸುವುದೆ ಮಹಾಯಜ್ಞಾ ಹರಿಪೂಜೆ ೨

ದೈಹಿಕ, ದೈಶಿಕ ಮತ್ತು ಕಾಲಿಕವೆಂದು ತ್ರಿವಿಧವಾದ ಕರ್ಮವು ಅತ್ಯಂತ

ಗಹನವಾದುದು. ಸಾಧಕನು ನಿಷ್ಕಾಮಕರ್ಮವನ್ನಾಚರಿಸುತ್ತಾ ಬೃಹತಿನಾಮಕ ಭಾರತೀಶನ ಆರಾಧನೆ ಮಾಡುತ್ತ ಸಕಲವನ್ನೂ ಭಗವಂತನಿಗರ್ಪಿಸಬೇಕು. ಅಣು ರೂಪರಾದ ಜೀವಿಗಳಲ್ಲಿ ಹರಿಯು ಅಂಗಷ್ಠ ಮಾತ್ರದಿಂದಿರುವರು. ಜೀವಿಗಳ ಲಿಂಗ ಶರೀರದಲ್ಲಿ ವಾಯುದೇವರೂ ಭಾರತಿಯೊಡನಿದ್ದು ವ್ಯಾಪಾರ ಮಾಡುವರು ಜೀವಾಚ್ಛಾದಿಕಾ, ಪರಮಾಚ್ಛಾದಿಕಾರೂಪ ತೆರೆಗಳು ಅನಿರುದ್ಧ ದೇಹಗಳಲ್ಲಿರುವುವು. ದೈತ್ಯರು, ರುದ್ರಾದಿದೇವತೆಗಳೂ ಅನಿರುದ್ಧ ದೇಹಗಳಲ್ಲಿ ವ್ಯಾಪಿಸಿರುವರು. ಸುಷಮ್ನಾನಾಡಿಯ ವಿಚಾರವನ್ನು ಹೃತ್ಪದ್ಮಸ್ಥಿತ ಭಗವದ್ರೂಪವಿಷಯಥನ್ನೂ ವಿವಸಿರುವರು. 49 ಮರುದ್ಗಣಗಳು ಚರ್ಮಾದಿಗಳಲ್ಲಿ ಇರುವರು. ಸಪ್ತಧಾತುಗಳಲ್ಲಿ, ಅನ್ನಮಯಾದಿ ಕೋಶಗಳಲ್ಲಿ ಹರಿಯ ವ್ಯಾಪ್ತಿಯನ್ನು ತಿಳಿಸುವರು.

ಹತ್ತನೆಯ ಸಂಧಿಯು ಒಂದು ರೀತಿಯಿಂದ ಹಿಂದಿನ ಎಂಟುಸಂಧಿಗಳ ಸಂಗ್ರಹ ರೂಪವೆಂದು ಹೇಳಬಹುದು. ಹರಿಯ ವ್ಯಾಪ್ತಿಯನ್ನು ವಿವಿಧ ಪದಾರ್ಥಗಳಲ್ಲಿ ಹಿಂದೆ ಹೇಳಿದರು. ಈ ಸರ್ವಪ್ರತೀಕ ಸಂಧಿಯಲ್ಲಿ ಅದನ್ನೆಲ್ಲ ಹೀಗೆ ಸಂಗ್ರಹಿಸಿರುವರು.

ಮೇದಿನಿಯ ಮೇಲುಳ್ಳ ಗೋಷ್ಪಾದೋದಕಗಳೆಲ್ಲಮಲತೀರ್ಥವು
ಪಾದಪಾದ್ರಿ ಧರಾತಳವೆ ಸುಕ್ಷೇತ್ರ ಜೀವಗಣ
ಶ್ರೀಧನ ಪ್ರತಿಮೆಗಳು ಅವರುಂಬೋದನವೆ ನೈವೇದ್ಯ ನಿತ್ಯದಿ
ಹಾದಿ ನಡೆವುದೆ ನರ್ತನಗಳೆಂದರಿತವನೆ ಯೋಗಿ ೩

ಮುಖ್ಯ ಅನುಸಂಧಾನವು ಅವಶ್ಯವು. ಸಾಧಕನು ಪ್ರತಿಯೊದರಲ್ಲೂ ಹರಿ ಸಾನ್ನಿಧ್ಯವನ್ನು ನೆನೆಯಬೇಕು. ಹೀಗೆ ಹರಿಧ್ಯಾನರತರಾದವರೇ ಜ್ಞಾನಿಗಳು, ಪವಿತ್ರರು. ಹರಿಧ್ಯಾನರತಾರಾದ ಜೀವರ ಕರ್ಮಗಳು ಸಮುದ್ರವನ್ನು ಹೊಕ್ಕ ನದಿಗಳಂತೆ ಬೆರೆತು ಹೋಗುವುವು. ಅಂತೂ ಸರ್ವ ಪ್ರಕಾರದಿಂದಲೂ ಹರಿಯನ್ನೇ ಶರಣು ಹೋಗಬೇಕು. ಹರಿಯನ್ನು ಬಿಟ್ಟು ಇತರ ದೇವತೆಗಳನ್ನಾಶ್ರಯಿಸಿದರೆ, ಪ್ರವಾಹದೆದುರು ಈಸಿಹೋದವನಂತೆ ನಾಶಹೊಂದುವನು. ಹರಿಯೇ ಸ್ವತಂತ್ರನು. ಅವನೇ ಎಲ್ಲ ವ್ಯಾಪಾರಮಾಡುವವನು ಎಂದು ತಿಳಿದವರೇ ಧನ್ಯರು, ಎಂದು ಹೇಳಿ ಸ್ವಾಹಾಂಕಾರ ಖಂಡನೆಯನ್ನು ಮಾಡಿಕೊಂಡು, ಈಗ್ರಂಥವು ಹರಿಭಕ್ತರಿಗೆ ಮಾತ್ರ ಯೋಗ್ಯವು ಎಂದು ಹೇಳುವರು.

ಹನ್ನೊಂದನೆಯ 'ಧ್ಯಾನಪ್ರಕ್ರಿಯ' ಸಂಧಿಯಲ್ಲಿ ಉಪಾಸನಾ ವಿಷಯವನ್ನು ತಿಳಿಸುತ್ತಾರೆ. ಮುಖ್ಯವಾಗಿ ಹರಿ ಸಾನ್ನಿಧ್ಯೋಪಾಸನೆಯೇ ಅವಶ್ಯ ಅನುಷ್ಠೇಯ. ಸಕಲ ವಿಧಿಪರ ಶಾಸ್ತ್ರಗಳ ಇತಿಕರ್ತವ್ಯತೆಯೇ ಇದು ಎಂದು ಹೇಳುತ್ತಾರೆ. ಹರಿಯೇ ಸಕಲೇಂದ್ರಿಯನಿಯಾಮಕನೆಂಬ ಎಚ್ಚರ ಯಾವಾಗಲೂ ಇರುವವನು ಏನು ಮಾಡಿ ದರೂ ಅವು ಪುಣ್ಯಕರ್ಮಗಳೆನಿಸುವುವು, ಎಂದು ತಿಳಿಸಿ ಸಾಧನೆಯ ಮೊದಲ

ಹೆಜ್ಜೆಯನ್ನ 'ಕುರು ಭುಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದವಿನಮ್ರ ಧಿಯಾ ಸತತಂ' ಎಂಬ ಆಚಾರ್ಯರವಚನ ಮತ್ತು 'ಈಶಾವಾಸ್ಯಮಿದಂ ಸರ್ವಂ' ಎಂಬ ಉಪನಿಷತ್ತಿನ ಅರ್ಥವನ್ನೂ ನಿರೂಪಿಸುತ್ತಾರೆ. ಹರಿಗೂ ಜೀವರುಗಳಿಗೂ ಇರುವ ಅಂತರವನ್ನು ಸರ್ವದಾ ನೆನೆಯುತ್ತಿರಬೇಕು. ನಾಡಿಗತ ಭಗವದ್ರೂಪ ಚಿಂತನೆಯನ್ನು ಭೀಷ್ಮರು ಶಾಂತಿಪರ್ವದಲ್ಲಿ ಯುಧಿಷ್ಠಿರನಿಗೆ ಉಪದೇಶಿಸಿದ್ದಾರೆ.

ನಿನ್ನ ಸರ್ವತ್ರ ನೆನೆವವರನ್ಯ ಕರ್ಮವ ಮಾಡಿದರು ಸರಿ
ಪುಣ್ಯಕರ್ಮಗಳೆನಿಸುವುವು ಸಂದೇಹ ವಿನಿತಿಲ್ಲ
ನಿನ್ನ ಸ್ಮರಿಸದೆ ಸ್ನಾನ ಜಪ ಹೋಮಾನ್ನವಸ್ತ್ರಗಜಾಶ್ವ ಭೂಧನ
ಧಾನ್ಯ ಮೊದಲಾದಖಿಳ ಧರ್ಮವ ಮಾಡಿ ಫಲವೇನು ೮

'ಧರ್ಮೋಽಭವತ್ಯಧರ್ಮೋಽಪಿ' ಎಂಬ ವಾಕ್ಯದ ಅರ್ಥವನ್ನು ವಿವರಿಸಿರುವರು. ಕಾರಣಸಾಮಗ್ರಿಗಳಲ್ಲಿದ್ದು ಕಾರ್ಯಗಳೆಸಗಿ ತಾನು ಕಾಣಿಸಿಕೊಳ್ಳದೆ ನೋಡುವವರಿಗೆ ಕಾರಣದಿಂದ ಕಾರ್ಯ ಹುಟ್ಟುವುದು ಸ್ವಾಭಾವಿಕವೆಂಬ ಭ್ರಾಂತಿ ಹುಟ್ಟಿಸುವನು. ಇದರಂತೆ ಮನಸ್ಸಿನಲ್ಲಿ, ಪ್ರೇರ್ಯ ಪ್ರೇರಕರಲ್ಲಿ ಹರಿಯಿದ್ದು ಕ್ರಿಯೆ ನಡೆಸುವನು. ಆದರೆ ಹರಿ ಇದೊಂದಕ್ಕೂ ಅಂಟಿಕೊಳ್ಳುವುದಿಲ್ಲ. ಪ್ರತಿ ಜೀವರಲ್ಲಿದ್ದು ಅವರವರ ವ್ಯಾಪಾರಗಳನ್ನು ನಡೆಸಿ ತಾನು ಈಶನೆಂದೆನಿಸಿಕೊಳ್ಳುವನು. ಹರಿಯನ್ನು ಸರ್ವ ಪದಾರ್ಥಗಳಲ್ಲೂ ನಿಯಾಮಕನೆಂದರಿಯುವುದೇ ಸಾಧನೆಯ ಮುಖ್ಯಾಂಶವು.

ಮುಂದಿನನಾಡೀ ಪ್ರಕ್ರಿಯ ಸಂಧಿಯಲ್ಲಿ ದೇಹಗತ ವಿವಿಧನಾಡಿಸ್ಥ ಭಗವದ್ರೂಪಗಳನ್ನು ವಿವರಿಸುತ್ತಾರೆ. ದೇಹದಲ್ಲಿರುವ ಮೂವತ್ತಾರು ಸಹಸ್ರ ನಾಡಿಗಳಲ್ಲಿ ಹರಿಯು ವಾಯುದೇವರು ಮತ್ತು ತತ್ತ್ವೇಶರೊಂದಿಗಿರುವನೆಂದು ಚಿಂತಿಸಬೇಕು. ನೀರಿನಲ್ಲಿ ಉಪ್ಪು ಬೆರತಂತೆ ಹರಿಯು ಸರ್ವತ್ರವ್ಯಾಪ್ತನಾಗಿರುವನು. ಪ್ರಾತಃಸ್ಸದ ನಾದಿಗಳ ಅಧಿಪತಿಗಳಾದ ದೇವತೆಗಳಲ್ಲೂ ಹರಿಯ ವ್ಯಾಪ್ತಿಯನ್ನು ಚಿಂತಿಸಬೇಕು. ಹೀಗೆ ಸರ್ವತ್ರ ಹರಿಯಿದ್ದರೂ ನಿರ್ಲಿಪ್ತನಾಗಿರುವನು.

ನಾಮಸ್ಮರಣ ಸಂಧಿಯಲ್ಲಿ ಹರಿನಾಮಸ್ಮರಣೆ ಮಾಡುವುದನ್ನು ಪರಿ ಪರಿಯಾಗಿ ಹೇಳುತ್ತಾರೆ.

ಮಕ್ಕಳಾಡಿಸುವಾಗ ಮಡದಿಯೊಳಕ್ಕರದಿ ನಲಿವಾಗ ಹಯ ಪ
ಲ್ಲಕ್ಕಿ ಗಜ ಮೊದಲಾದ ವಾಹನವೇರಿ ಮೆರೆವಾಗ |
ಬಿಕ್ಕುವಾಗಾಕಳಿಸುತಲಿ ದೇವಕ್ಕಿ ತನಯನ ನೆನೆಯುತಿಹ ನರ
ಸಿಕ್ಕನವನೆಮದೂತರಿಗೆ ಆವಾವಲ್ಲಿ ನೋಡಿದರು ೧

ಹರಿನಾಮಸ್ಮರಣೆಯು ಸಕಲ ಸಾಧನಗಳಿಗೂ ಮಿಗಿಲಾದದ್ದು. ಸರ್ವರಿಗೂ ಶಕ್ಯವಾದದ್ದು. ಇದಿಲ್ಲದ ಯಾವ ಸತ್ಕರ್ಮವೂ ಸಾರ್ಥಕವಾಗಲಾರದು. ಹರಿಯೇ

ಸರ್ವಕ್ಕೂ ಕರ್ತೃವೆನ್ನುವನೆ ಉತ್ತಮಾಧಿಕಾರಿಯು. ತೀರ್ಥಕ್ಷೇತ್ರಗಳಲ್ಲಿ ಭಗವದ್ರೂಪ ಗಳನ್ನು ಚಿಂತಿಸಬೇಕಲ್ಲದೆ, ನದಿಯ ನೀರೆ ತೀರ್ಥವೆಂದಾಗಲೀ ವಿಗ್ರಹ ದೇವರೆಂದಾಗಲೀ ತಿಳಿಯಬಾರದು. ಸತ್ಸಂಗವನ್ನು ಮಾಡಬೇಕು. ಸರ್ವ ಪದಾರ್ಥ ಗಳಲ್ಲೂ ಸರ್ವದಾ ಹರಿಯು ಸನ್ನಿಹಿತನಾಗಿರುವನೆಂದು ಸದಾ ಚಿಂತಿಸಬೇಕು. ಹರಿಭಕ್ತ ಮಾತ್ರ ಹೀಗಿರಬಲ್ಲ. ಹರಿಭಕ್ತರಲ್ಲದವರಿಗೆ ಹರಿಮಹಿಮೆಯು ರುಚಿಸದೆಂದು ಹೇಳಿದರು.

ಸರ್ವಜೀವನಕಲ್ಪ ಸಂಧಿಯಲ್ಲಿ ಶ್ರಾದ್ಧಕ್ಕೆ ಸಂಬಂಧಪಟ್ಟ ವಸು, ರುದ್ರ, ಆದಿತ್ಯರಲ್ಲಿ ಹರಿಯಿದ್ದು ಷಣ್ಣವತಿರೂಪಗಳಿಂದ ಪಿತೃಗಳಿಗೆ ತೃಪ್ತಿಯನ್ನೀಯುವನು ಎಂದು ಹೇಳಿ ಶ್ರಾದ್ಧ ಸ್ವಾಮಿ ಜನಾರ್ದನನ ಮಹಿಮೆಯನ್ನು ತಿಳಿಸುತ್ತಾರೆ. ಹರಿಯೇ ಸರ್ವ ಸರ್ಜಕ, ಸರ್ವನಿಯಾಮಕನೆಂದರಿಯಬೇಕೆಂದು ಹೇಳುತ್ತಾರೆ. ಜೀವರುಗಳಲ್ಲಿ ಕ್ಷರ, ಅಕ್ಷರ, ವಿಲಿಂಗ, ಸಲಿಂಗ, ಸೃಜ್ಯ, ಅಸೃಜ್ಯ ಎಂದು ಎರಡೆರಡು ವಿಧ. ಲಕ್ಷ್ಮೀದೇವಿಯು ಅಕ್ಷರಳು. ನಾಶವುಳ್ಳವರಾದ್ದರಿಂದ ಬ್ರಹ್ಮಾದಿ ಚೇತನರು ಕ್ಷರರು. ಕ್ಷರರಲ್ಲಿ ವಿಲಿಂಗರು ಮುಕ್ತರು. ಸಲಿಂಗರು ಅಮುಕ್ತರು, ಸಲಿಂಗರಲ್ಲಿ ಸೃಜ್ಯರು ಮತ್ತು ಅಸೃಜ್ಯರು. ಮುಂದೆ ಪಂಚಭೇದವನ್ನೂ, ಬಿಂಬ ಪ್ರತಿಬಿಂಬಭಾವವನ್ನೂ ಹೇಳುವರು.

ಶ್ವಾಸಸಂಧಿಯಲ್ಲಿ ವಾ[illegible]ವರ ಮಹಿಮೆ, ಹರಿಯ ಮಹಿಮೆಯನ್ನು ಬಣ್ಣಿಸುವರು. ವಾಯುದೇವರು ಪ್ರತಿಯೊಬ್ಬನ ಶರೀರದಲ್ಲೂ ಇದ್ದು ನಿತ್ಯದಲ್ಲೂ 21600 ಹಂಸಮಂತ್ರಜಪ ಮಾಡುತ್ತಿರುವರು. ಇದನ್ನು ಅನುಸಂಧಾನ ಮಾಡಿ ಚಿಂತಿಸಬೇಕು. ಭೋಜನ ಮಾಡುವಾಗ ಅನ್ನ ಉದಕಗಳ ಅಭಿಮಾನಿ ದೇವತೆಗಳನ್ನು ಧ್ಯಾನಮಾಡಬೇಕು. ವಾಯುದೇವರ ಮಹಿಮೆ ತಿಳಿಯದೆ ವೇದಾರ್ಥಜ್ಞಾನವಾದರೂ ವ್ಯರ್ಥವೆಂದು ಹೇಳಿದರು. ಹರಿಮಂದಿರದ ದ್ವಾರಪಾಲಕರಲ್ಲಿನ ಭಗವದ್ರೂಪಗಳನ್ನು ಹೇಳಿ ಹರಿಯು ಅನಂತ ಮಹಿಮೋಪೇತನೆಂದೂ, ಅವನ ಒಂದು ಗುಣವನ್ನು ಚಿಂತಿಸಿದರೂ ಉದ್ಧೃತನಾಗುವನೆಂದೂ ಹೇಳಿದರು.

16ನೆಯ ಸಂಧಿಯಲ್ಲಿ ಬಹು ಮುಖ್ಯವಾದ 'ದತ್ತ ಸ್ವಾತಂತ್ರ್ಯ' ಪ್ರಮೇಯವನ್ನು ಹೇಳುವರು. ವಿಷ್ಣುರಹಸ್ಯೋಕ್ತವಾದುದು, ಈ ಪ್ರಮೇಯವೆಂದು ಹೇಳಿರುವರು. ಪರಮಾತ್ಮನಿಂದ ಹಿಡಿದು ಎಲ್ಲ ತತ್ತ್ವೇಶರುಗಳು ಜೀವರ ವಿವಿಧ ಇಂದ್ರಿಯಾದಿಗಳಿಗೆ ಅಭಿಮಾನಿಗಳಾಗಿ ಹೇಗೆ ಇರುವರೋ, ಹಾಗೆ ವಿವಿಧ ಕಲ್ಯಾದಿ ದೈತ್ಯರೂ ಅಭಿಮಾನಿಗಳಾಗಿರುವರು. ಹರಿಯು ತಮ್ಮ ಸ್ವಾತಂತ್ರ್ಯದಲ್ಲಿ ಕೆಲವು ಭಾಗವನ್ನು ಈ ದೇವತೆಗಳಿಗೂ, ದೈತ್ಯರಿಗೂ ಹಂಚಿ ಕೊಡುವನು. ಈ ದೇವ ದೈತ್ಯರುಗಳ ಮೇಲೆ ತಾನೇ ನಿಯಾಮಕನಾಗಿದ್ದು ಪ್ರತಿ ಜೀವರಲ್ಲೂ ನಿಂತು ವಿವಿಧ ಶುಭಾಶುಭ ವ್ಯಾಪಾರ ಮಾಡಿಸುವನು. ಅವುಗಳಿಗೆ ಬರುವ ಫಲಗಳಲ್ಲಿ ಬಹ್ವಂಶಗಳ ಶುಭ ಫಲಗಳನ್ನು ದೇವತೆಗಳಿಗೂ ಅಶುಭ ಫಲಗಳನ್ನು ದೈತ್ಯರಿಗೂ ಹಂಚಿ ಕೇವಲ ಅಲ್ಪಭಾಗವನ್ನು

ಜೀವನ ಭೋಗಕ್ಕೆ ಕೊಡುವನು. ಈ ರಹಸ್ಯವನ್ನರಿತು ಹರಿಯೇ ಸಕಲಕ್ಕೂ ನಿಯಾಮಕನು, ನಾವು ಮಾಡುವ ವ್ಯಾಪಾರವೆಲ್ಲ ಅವನಿಗೆ ಸೇರಿದುದೆಂದು ಅನುಸಂಧಾನ ಮಾಡಿದಲ್ಲಿ ಜೀವನು ಉದ್ಧೃತನಾಗುವನು.

ಹಿಂದಿನ ಸಂಧಿಯಲ್ಲಿ ಹೇಳುದುದನ್ನೇ ಸ್ವಾತಂತ್ರ ವಿಭಾಗ ಸಂಧಿಯಲ್ಲಿ ವಿಸ್ತರಿಸುತ್ತಾರೆ. ಹರಿ ತನ್ನಲ್ಲಿನ ಅಪಾರ ಸ್ವಾತಂತ್ರ್ಯ ಗುಣದಲ್ಲಿ ಕೆಲವನ್ನು ತೆಗೆದು ಲಕ್ಷ್ಮಿದೇವಿ ಮೊದಲಾದ ದೇವತೆಗಳಿಗೂ, ಕಲಿ ಮೊದಲಾದ ದೈತ್ಯರಿಗೂ ವಿಭಾಗ ಮಾಡುತ್ತಾನೆ. ಅವರಿಂದ ವ್ಯಾಪಾರ ಮಾಡಿಸುತ್ತಾನೆ. ಅವರವರಿಗೆ ಅನುಗುಣವಾದ ಫಲಗಳನ್ನು ಕೊಡುತ್ತಾನೆ. ಜೀವರಲ್ಲಿ ಪರಮಕಾರುಣಿಕನಾದ್ದರಿಂದ ಸ್ವಾಮಿ ಜೀವರ ಉದ್ಧಾರಾರ್ಥವಾಗಿಯೇ ಜಗದ್ವ್ಯಾಪಾರಗಳಲ್ಲಿ ಮಗ್ನನಾಗಿರುವನು. ಅದನ್ನು ತಿಳಿದು ಅವನನ್ನು ಮೊರೆಹೊಕ್ಕರೆ ಜೀವನು ಉದ್ಧೃತನಾಗುವುದು ಖಂಡಿತ. ಅದಿಲ್ಲದೆ ಇತರ ದೇವತೆಗಳನ್ನು ಭಜಿಸಿದಲ್ಲಿ ಅವರು ದುರ್ಗತಿಯನ್ನು ಹೊಂದುವರು. ಧರ್ಮದ ಹಾದಿ ಹಿಡಿಯಬೇಕೆಂದು ಭಾಗವತಾದಿಗಳಲ್ಲಿ ಉಕ್ತವಾಗಿದೆ. ಆದರೆ ಜೀವರು ಆಪಾತ ರಮಣೀಯವಾಗಿ ತೋರುವ ಸಂಸಾರದಲ್ಲಿ ಮಗ್ನರಾಗಿರುತ್ತಾರೆ. ಬಲ್ಲವರು, ಜ್ಞಾನಿಗಳು ಮಾತ್ರ ಇದು ಹೇಸಿಗೆಯೆಂದು ವೈರಾಗ್ಯ ತಾಳುತ್ತಾರೆ. ಹರಿಗೆ ಶರಣುಹೋಗುವುದೇ ಉದ್ಧಾರದ ಮುಖ್ಯಮಾರ್ಗ. ಬ್ರಹ್ಮಾದಿ ದೇವತೆಗಳು ಈ ದಾಸಮಾರ್ಗವನ್ನೇ ಅವಲಂಬಿಸಿರುವರು. ಸೋಹಂ ಎಂಬುದು ಆತ್ಮನಾಶದ ಮಾರ್ಗ. ಈ ಗ್ರಂಥ ಕನ್ನಡವೆಂದು ಹೀಯಾಳಿಸುವವರು ಕುಟಿಲರು. ಹರಿಮಹಿಮೆಯನ್ನೊಳಗೊಂಡ ಈ ಕೃತಿಯು ಹರ್ಯನುಗ್ರಹ ಸಂಪಾದಕವು.

ಬಿಂಬೋಪಾಸನಾಸಂಧಿಯಲ್ಲಿ ಮೊದಲಿಗೆ ಬಿಂಬಸ್ವರೂಪವನ್ನು ತಿಳಿಸುತ್ತಾರೆ. ಮುಕ್ತರು, ಅಪರೋಕ್ಷಿಗಳು, ಸಂಸಾರಿಗಳು, ಅಸೃಜ್ಯರು ಈ ಜೀವರುಗಳಿಗೆ ಕ್ರಮನಾಗಿ ತುರಿಯ, ವಿಶ್ವ, ತೈಜಸ, ಪ್ರಾಜ್ಞನಾಮಕ ಹರಿಯ ರೂಪಗಳು ಬಿಂಬವೆನಿಸುವುವು. ಈ ಪ್ರಾಜ್ಞಾದಿ ರೂಪಗಳೇ ಅನ್ನ, ಅನ್ನದಾದಿ ರೂಪಗಳಾಗಿದ್ದು, ದೇಹಕ್ಕೆ ಉಪಚಯಾದಿಗಳನ್ನು ಕೊಡುವುವು. ಇದರಂತೆ ಭೋಜನದಲ್ಲಿ ನಾದ, ಬಿಂದು, ಘೋಷಾದಿ ಶಬ್ಧವಾಚ್ಯ ಹರಿಯಿರುವನು. ವೇದಾಭಿಮಾನಿ ಲಕ್ಷ್ಮೀದೇವಿಗೂ ಹರಿಯ ಮಹಿಮೆ ನಿಲುಕದ್ದು, ಹರಿಯಾದರೋ ಮಹತತ್ತ್ವಾದಿಗಳಲ್ಲಿ ಪುರುಷರೂಪಗಳಿಂದ ವ್ಯಾಪ್ತನಾಗಿರುವನು. ಈ ಪುರುಷರೂಪವೇ ಜೀವರುಗಳನ್ನು ಗುಣಬದ್ಧರನ್ನು ಮಾಡಿ ಸಂಸಾರದಲ್ಲಿ ಹಾಕುವುದು. ಈ ರೂಪವೇ ಸಾಶನ, ಅನಶನವೆಂದು ಕರೆಸಿಕೊಂಡು ಜೀವರಿಗೆ ಯೋಗ್ಯ ರಸಗಳನ್ನು ಕೊಡುವುದು. ಹರಿಯ ಮೂರು ಪಾದಗಳು ತ್ರಿಧಾಮದಲ್ಲಿ ಸ್ವರೂಪಾಂಶವಾದ ನಾರಾಯಣಾದಿ ರೂಪಗಳೆನಿಸುವುವು. ಇನ್ನೊಂದು ಪಾದವೇ ಈ ಜಗತ್ತಿನ ಸಮಸ್ತ ಜೀವ ಜಡರುಗಳು. ಇವರು ಭಿನ್ನಾಂಶರೆನಿಸುವರು.

ಹರಿಗೆ ಇವು ಜಡ ಪ್ರತಿಮೆಗಳೆಂದೂ, ಚೇತನ ಪ್ರತಿಮೆಗಳೆಂದು ಎನಿಸುವುವು.

ಸ್ತೋತ್ರಪ್ರಕರಣ ಸಂಧಿಯಲ್ಲಿ ಮೂಲ ಅವತಾರ, ಆವೇಶ, ಕಾರಣ, ಕಾರ್ಯ ಮತ್ತು ನಿಜರೂಪಗಳ ವಿಷಯ, ಜೀವೇಶ್ವರರ ಭೋಗ ದೃಷ್ಟಾಂತ, ಅಯೋಗ್ಯರು ಸತ್ಕರ್ಮಮಾಡಿದ್ದರೂ ಅದು ನಿರರ್ಥಕವೆನ್ನಲು ದೃಷ್ಟಾಂತ, ಸದ್ಭಕ್ತರ ಪುಣ್ಯವೃದ್ಧಿ, ಕಾಲಾದಿ ಶುದ್ಧಿಗಿಂತ ದೇವರ ಭಕ್ತಿಯಿಂದ ಅಧಿಕ ಶುದ್ಧಿಯೆಂಬ ವಿಚಾರ, ಇತರದೇವತೋಪಾಸನೆಯ ನಿರಾಕರಣೆ, ನಿಷ್ಕಾಮ ಸೇವೆಯು ಅವಶ್ಯ ಕರ್ತವ್ಯ, ದುರ್ದ್ರವ್ಯವು ತ್ಯಾಜ್ಯ ಎಂಬುದು, ಜ್ಞಾನಜ್ಞೇಯ ಜ್ಞಾತೃಸ್ವರೂಪವರ್ಣನೆ, ಈ ವಿಚಾರಗಳನ್ನು ನಿರೂಪಿಸಿದ್ದಾರೆ.

ಮುಂದಿನ ಸಂಧಿಯಲ್ಲಿ ತಾರತಮ್ಯವನ್ನೂ, ಒಬ್ಬರಿಗಿಂತ ಇನ್ನೊಬ್ಬರು ಎಷ್ಟು ಗುಣಗಳಿಂದ ಅಧಮರು ಎಂಬುದನ್ನು ತಿಳಿಸುವರು.

ಹರಿ ಸಿರಿ ವಿರಂಚೀರ ಭಾರತಿ ಗರುಡ ಫಣಿಪತಿ ಷಣ್ಮಹಿಷಿಯರು |
ಗಿರಿಜೆ ನಾಕೇಶಸ್ಮರ ಪ್ರಾಣಾನಿರುದ್ಧ ಶಚಿ |
ಗುರು ರತಿ ಮನುದಕ್ಷ ಪ್ರವಾಹಮರುತ ಮಾನವಿಯಮ ಶಶಿದಿವಾ |
ಕರವರುಣ ನಾರದ ಸುರಾಸ್ಯ ಪ್ರಸೂತಿ ಭೃಗುಮುನಿಪ ೨೪

ಹೀಗೆ ಮನುಷ್ಯೋತ್ತಮರ ಪರ್ಯಂತ ತಾರತಮ್ಯವನ್ನು ಹೇಳಿರುವರು.

ಆವೇಶ, ಅವತಾರ ತಾರತಮ್ಯವನ್ನು ಮುಂದಿನ ಸಂಧಿಯಲ್ಲಿ ಹೇಳಿರುವರು. ಹರಿಯಿಂದ ಮೊದಲು ಮಾಡಿ ಮನುಷ್ಯೋತ್ತಮರವರೆಗೂ ತಾರತಮ್ಯೋಪೇತರಾದ ವರಲ್ಲಿ ಯಾರ್‍ಯಾರ ಅವತಾರಗಳು ಯಾವುವು ? ಎಂಬುದನ್ನು ವಿವರಿಸಿರುವುದಲ್ಲದೆ, ಯಾವ ದೇವತೆಗಳಿಗೆ ಯಾವ ಅವತಾರಗಳಲ್ಲಿ ಯಾವ ಉತ್ತಮ ದೇವತೆಗಳ ಆವೇಶವಿರುವುದು. ಆಗ ತಾರತಮ್ಯ ಕ್ರಮವೇನೆಂಬುದನ್ನು ವಿವರಿಸಿ ಹೇಳಿದ್ದಾರೆ.

ಮುಂದಿನ ಕಲ್ಪಸಾಧನ ಸಂಧಿಯಲ್ಲಿ ತೃಣದಿಂದ ಹಿಡಿದು ಬ್ರಹ್ಮದೇವರವರೆಗೂ ಸಾಧನ ಕ್ರಮ ಮತ್ತು ಕಾಲಾವಧಿಯನ್ನು ತಿಳಿಸುತ್ತಾರೆ. ತೃಣ, ಕ್ರಿಮಿ, ಪಕ್ಷಿ ಪಶು ಮತ್ತು ಮನುಷ್ಯೋತ್ತಮರವರೆಗೂ ನಿರಂಶರು; ಇವರು ಕರ್ಮಯೋಗಿಗಳೆನಿಸುವರು. ದೇವ ಗಂಧರ್ವರು, ಅಜಾನುಜ, ಪಿತೃದೇವತೆಗಳು ಜ್ಞಾನಯೋಗಿಗಳೆನಿಸುವರು. ಪುಷ್ಕರನಿಂದ ಹಿಡಿದು ಪರ್ಜನ್ಯ ಪರ್ಯಂತರಾದ ಸಾಂಶದೇವತೆಗಳು ವಿಜ್ಞಾನ ಯೋಗಿಗಳೆನಿಸುವರು. ಇವರೂ ಮನುಷ್ಯರುಗಳಂತೆ ಸಾವಿರಾರು ಜನ್ಮಗಳನ್ನೆತ್ತಿ ಸಾಧನೆ ಮಾಡಿಕೊಳ್ಳಬೇಕು. ಇವರ ಜ್ಞಾನಮಾತ್ರ ಸಮಾನಾಧಿಕರಣವಾಗಿರುವುದು. ಶತಸ್ಥ ದೇವತೆಗಳಿಂದ ಬ್ರಹ್ಮದೇವರವರೆಗೂ ಭಕ್ತಿಯೋಗಿಗಳು. ಇವರಲ್ಲಿ ಬ್ರಹ್ಮ ವಾಯು, ಸರಸ್ವತಿ, ಭಾರತಿ,–ಈ ನಾಲ್ವರು ಅಚ್ಛಿನ್ನ ಭಕ್ತರೆನಿಸುವರು. ವಾಯು ದೇವರು, ದೇವ, ಋಷಿ, ಪಿತೃ, ಚಕ್ರವರ್ತಿಗಳಲ್ಲೂ, ಮನುಷ್ಯರಲ್ಲೂ ಇದ್ದು ಅವರ

ಸ್ವಭಾವಕ್ಕನುಸರಿಸಿ ಕರ್ಮ ಮಾಡುವರು. ವಾಮನ ಪುರಾಣೋಕ್ತ ವಾಯುದೇವರ ಅನೇಕ ರೂಪಗಳನ್ನು ಕೂರ್ಮಾದಿ ರೂಪಗಳನ್ನು ವಾಯುದೇವರ ಮತ್ತು ರುದ್ರಾದಿ ದೇವತೆಗಳ ಸಾಧನೆಗಳನ್ನೂ ಹೇಳುವರು.

ಜೀವರುಗಳ ಸಾಧನಕ್ರಮ, ಅವರ ಸ್ವಾತಂತ್ರ್ಯವೂ ಭಗವದ್ದತ್ತವಾದದ್ದೆಂಬ ವಿಷ್ಣುಪುರಾಣವಚನವನ್ನು ಕ್ರೀಡಾ ವಿಲಾಸ ಸಂಧಿಯಲ್ಲಿ ತಿಳಿಸುವರು. ಜೀವರ ದೈನಂದಿನ ಕ್ರಿಯೆಗಳಾದ ಪಚನ ಭಕ್ಷಣಾದಿಗಳೂ ಹರಿಯ ಕೃಪೆಯಿಂದಲೇ ನಡೆಯುವುದು. ಅವನ ಅನುಗ್ರಹ ತಪ್ಪಿದ ಕೂಡಲೆ ಜೀವನು ಶವನೆನಿಸಿವನು. ಕೇವಲ ಕ್ರೀಡೆಗಾಗಿಯೂ, ಜೀವರಿಗೆ ಗತಿ ಕೊಡಬೇಕೆಂಬ ಅನುಕಂಪದಿಂದಲೂ ಹರಿ ಈ ವ್ಯಾಪಾರಗಳನ್ನು ಮಾಡುವನು. ಹರಿಯು ಪುರುಷರಲ್ಲಿ ಪುರುಷರೂಪನಾಗಿಯೂ, ಸ್ತ್ರೀಯರಲ್ಲಿ ಸ್ತ್ರೀರೂಪನಾಗಿಯೂ ಇದ್ದು ವ್ಯಾಪಾರಮಾಡುವನು. ಬಿಂದು ಮಾತ್ರ ಸುಖವೂ ಪರ್ವತದಷ್ಟು ದುಃಖವೂ ಈ ಸಂಸಾರದಲ್ಲಿ ತುಂಬಿರುವುದು. ಆದ್ದರಿಂದ ಇದರಲ್ಲಿ ಇಚ್ಛೆಯನ್ನು ತೊರೆದು, ಹರಿಯೇ ಸಕಲ ವ್ಯಾಪಾರಗಳನ್ನು ಮಾಡಿಸುವನೆಂದು ಚಿಂತಿಸಿ ಉದ್ಧೃತನಾಗಬೇಕು.

ಮುಂದಿನ ಎರಡು ಸಂಧಿಗಳಲ್ಲಿ ಆರೋಹಣ ಮತ್ತು ಅವರೋಹಣ ತಾರತಮ್ಯವನ್ನು ವಿವರಿಸಿರುವರು. ಅನುಕ್ರಮಣಿಕಾ ಸಂಧಿಯಲ್ಲಿ ಭಗವತ್‌ಸ್ತೋತ್ರವೂ, ಅದರ ಮುಂದಿನ ಸಂಧಿಯಲ್ಲಿ 21 ಪದ್ಯಗಳಿಂದ ವಿಘ್ನೇಶ್ವರನ ಸ್ತೋತ್ರವೂ ವರ್ಣಿತವಾಗಿರುವುದು. "ತಾರತಮ್ಯ ಪರಿಜ್ಞಾನೇ ಮಹಾ ತಾತ್ಪರ್ಯ ಮಿಷ್ಯತೇ" ಎಂಬ ವಚನಾನುಸಾರ ಶಾಸ್ತ್ರಗಳಲ್ಲಿ ತಾರತಮ್ಯ ಜ್ಞಾನವು ಅತ್ಯವಶ್ಯವೆಂದು ಹೇಳಿರುವುದರಿಂದ ದಾರ್ಢ್ಯಾರ್ಥವಾಗಿ ಪುನಃ ಪುನಃ ಇದನ್ನು ತಿಳಿಸುವುದಕ್ಕೋಸ್ಕರ ಅಣುತಾರತಮ್ಯವೆಂಬ ಮುಂದಿನ ಸಂಧಿಯಲ್ಲಿ ತಾರತಮ್ಯವನ್ನು ಮತ್ತೆ ವರ್ಣಿಸುತ್ತಾರೆ.

ದೈತ್ಯತಾರತಮ್ಯ ಸಂಧಿಯಲ್ಲಿ ಮೊದಲು ಎಂಟು ಪದ್ಯಗಳಿಂದ ಹರಿ ಭಕ್ತರಲ್ಲದವರ ಲಕ್ಷಣಗಳನ್ನು ಹೇಳುತ್ತಾರೆ. ಹರಿದ್ವೇಷಮಾಡುವವನು, ಹರಿಯ ಗುಣ ಅವತಾರಾದಿಗಳಲ್ಲಿ ಭೇದವೆಣಿಸುವವನು. ಹರಿಯ ರೂಪಗಳಲ್ಲಿ ದ್ವೇಷವೆಣಿಸುವವನು, ಹರಿಯೊಂದಿಗೆ ಶಿವಸಾಮ್ಯವನ್ನು ಹೇಳುವನು, ಇದು ದೈತ್ಯರ ಲಕ್ಷಣವೆಂದು ಹೇಳಿದರು. ಕಲಿಯು ಬ್ರಹ್ಮದೇವರಂತೆ ಶತಾಯುಷ್ಯ ಉಳ್ಳವನು. ದೈತ್ಯರುಗಳಲ್ಲಿ ಇವನೆ ಪ್ರಮುಖ, ಇತರ ದೈತ್ಯರು ನರಾಧಮರು, ಇವನಿಗಿಂತ ನೀಚರು. ವಾಯುದೇವರ ಗದಾಪ್ರಹಾರದಿಂದ ಲಿಂಗದೇಹ ಭಂಗವಾಗಿ ಈ ದೈತ್ಯರು ಅಂಧಂತಮಸ್ಸನ್ನು ಹೊಂದುವರು. ಕಲಕ್ಕ್ರಿ, ವಿಪ್ರಜಿತ್ತಿ, ಕಾಲನೇಮಿ, ಮಧುಕೈಟುಭರು, ಹಿರಣ್ಯಕಶಿಪು ಹೀಗೆ ದೈತ್ಯರಲ್ಲಿ ತಾರತಮ್ಯವಿರುವುದು. ಈ ಕ್ರಮವು ಗರುಡ ಪುರಾಣೋಕ್ತವು.

ಮುಂದಿನದು ನೈವೇದ್ಯ ಪ್ರಕರಣಸಂಧಿ. ದೈನಂದಿನ ಕರ್ಮಗಳಲ್ಲಿ ಭೋಜನವು ಅತಿ

ಮುಖ್ಯವಾದುದು. ಎಲ್ಲಾರು ಮಾಡುವುದು ಹೊಟ್ಟೆಗಾಗಿ ಎಂಬ ಕನಕದಾಸರ ವಚನದಂತೆ ಜಗತ್ತಿನ ಹೋರಾಟವೇ ಹೊಟ್ಟೆಗಾಗಿದೆ. ಇಂತಹ ಭೋಜನವು ಹರಿ ಪೂಜೆಯೆಂದು ಅನುಸಂಧಾನ ಮಾಡುವುದು ಉತ್ತಮ ಸಾಧನೆ. ಈ ಸಂಧಿಯಲ್ಲಿ ಜಗನ್ನಾಥದಾಸರು ಹರಿಯು ಸಾಶನಾಶನ ರುಪಗಳಿಂದ ಭೋಜ್ಯಪದಾರ್ಥಗಳಲ್ಲಿ ಹೇಗೆ ಸನ್ನಿಹಿತನಾಗಿದ್ದು ವ್ಯಾಪಾರ ಮಾಡುವನೆಂಬುದನ್ನು ಬಣ್ಣಿಸಿದ್ದಾರೆ.

ಕೊನೆಯ ಸಂಧಿಯಲ್ಲಿ ತಾರತಮ್ಯ ಕ್ರಮವಾಗಿ ವಿಷ್ಣುಸರ್ವೋತ್ತಮತ್ವ ಸ್ಥಾಪನಾರ್ಥವಾಗಿ ಅವರೋಹಣ ಕ್ರಮದಿಂದ ವರ್ಣನೆ ಮಾಡುತ್ತಾರೆ. ಬ್ರಹ್ಮದೇವರು ಹರಿಯ ಗುಣಗಳನ್ನು ಚಿಂತಿಸುವ ಬಗೆಯನ್ನು ಹೇಳುತ್ತಾರೆ.

ಒಂದಜಾಂಡದೊಳೊಂದೆ ರೂಪದೊಳೊಂದವಯವದೊಳೊಂದು ನಖದೊಳ
ಗೊಂದು ಗುಣಗಳ ಪಾರಗಾಣದೆ ಕೃತಪುಟಾಂಜಲಿಯಿಂ ।
ಮಂದಜಾಸನ ಪುಳಕಪುಳಕಾನಂದಬಾಷ್ಪದ ತೊದಲನುಡಿಯಿಂ ।
ದಿಂದಿರಾವಲ್ಲಭನ ಮಹಿಮೆ ಗಭೀರತರವೆಂದ ॥

ಬ್ರಹ್ಮದೇವರಿಂದ ಹಿಡಿದು ಮನುಷ್ಯೋತ್ತಮರು, ಆಚಾರ್ಯರ ಮತಾನು ಯಾಯಿಗಳವರೆಗೂ ಸ್ತೋತ್ರಮಾಡಿ ಈ ಸಂಧಿಯಲ್ಲಿ ಮಂಗಳ ಹಾಡಿರುವರು. ಇಲ್ಲಿಗೆ ಹರಿಕಥಾಮೃತಸಾರವು ಮುಗಿಯಿತು.

ಜಗನ್ನಾಥದಾಸರ ಶಿಷ್ಯರಾದ ಕರ್ಜಗಿ ದಾಸಪ್ಪದಾಸರು ಇದಕ್ಕೆ 24 ಪದ್ಯಗಳಿಂದ ಫಲಸ್ತುತಿ ರಚಿಸಿರುವರು. ಇದರಲ್ಲಿ ಜಗನ್ನಾಥದಾಸರನ್ನು ಆಶುಕವಿಕಲ್ಪರೆಂದೂ, ರಂಗನೊಲಿದ ದಾಸರೆಂದೂ ಹೇಳಿರುವರು. ವರ್ಣಾಭಿಮಾನಿ ದೇವತೆಗಳೇ ನಿಂತು, ಈ ಮಹಾಕಾವ್ಯವನ್ನು ಜಗನ್ನಾಥದಾಸರ ಬಾಯಿಂದ ನುಡಿಸಿರುವರೆಂದು ಹೇಳಿರುವರು. ಇದು ಜೀವನ್ಮುಕ್ತಿ ಯೋಗ್ಯವಾದ ಕಾವ್ಯವೆಂದೂ, ಪ್ರಾಕೃತವೆಂದೂ ಇದನ್ನು ಉದಾಶೀನ ಮಾಡಬಾರದೆಂದೂ, ಸಕಲ ಶ್ರುತ್ಯರ್ಥಗಳನ್ನೊಳಗೊಂಡ ಈ ಕಾವ್ಯವನ್ನು ಆದರದಿಂದ ಪಠಿಸುವರನ್ನು ಹರಿಯು ಕೈಹಿಡಿಯುವನು ಎಂದು ವರ್ಣಿಸಿದ್ದಾರೆ. ಇದೇನು ವ್ಯಾಸ ರಾಯರ ದಯವೋ ಪುರಂದರದಾಸರ ಅನುಗ್ರಹವೋ ಅಂತು ವಾದಿರಾಜರ ಕೋಶಕೊಪ್ಪುವ ಗ್ರಂಥವನ್ನು ಗುರುವರ್ಯರು ರಚಿಸಿರುವರೆಂದಿದ್ದಾರೆ.

XVi ಹರಿದಾಸರು ಮತ್ತು ಕರ್ನಾಟಕ ಸಂಗೀತವು

ಕನ್ನಡ ಹರಿದಾಸರ ವಿಶಾಲವಾದ ಸಾಹಿತ್ಯವು ಈಗ ಬಳಕೆಯಲ್ಲಿರುವ ಗದ್ಯ ಶೈಲಿಯಲ್ಲಿಲ್ಲ. ವೈದಿಕ ಲೌಕಿಕ ಸಂಸ್ಕೃತವಾಙ್ಮಯವು ಛಂದೋಬದ್ಧವಾಗಿರುವಂತೆ ಇದೂ ಸಂಗೀತದ ಅಚ್ಚುಕಟ್ಟಿನಲ್ಲಿ ಸೇರಿದೆ. ಕನ್ನಡದಲ್ಲಿ ಹರಿದಾಸ ಸಾಹಿತ್ಯವಲ್ಲದೆ ಇತರ ಸಾಹಿತ್ಯವೆಲ್ಲ ವಚನರೂಪವಾಗಿಯೂ, ರಗಳೆ, ಚಂಪೂ, ಷಟ್ಪದಿ ಮೊದಲಾದ ಛಂದಸ್ಸುಗಳಲ್ಲಿ ರಚಿತವಾಗಿಯೂ ಇವೆ. ಆದರೆ ಸಂಗೀತವನ್ನು ಬಳಸಿರುವುದು

ಹರಿದಾಸ ಸಾಹಿತ್ಯದ ವೈಶಿಷ್ಟ್ಯವು, ಸಂಗೀತದಲ್ಲೂ ಹರಿದಾಸರು ದೊಡ್ಡ ಯುಗಪ್ರವರ್ತಕರಾಗಿ ಹೊಸ ಅಧ್ಯಾಯವನ್ನೇ ಸ್ಥಾಪಿಸಿದ್ದಾರೆ. ಹರಿದಾಸರು ಸಂಗೀತ ಶಾಸ್ತ್ರದಲ್ಲಿ ಮಾಡಿರುವ ಕೆಲಸವು ಶಾಸ್ತ್ರದ ಸಂಕ್ಷಿಪ್ತ ಇತಿಹಾಸವನ್ನು ನೋಡಿದರೆ ತಿಳಿಯುವುದು.

ಓಂಕಾರದ ಅರ್ಥವಿವರಣೆಯು ವೇದಗಳು. ಹಾಗೆಯೇ ಸಂಗಿತವು ಓಂಕಾರದ ನಾದಪ್ರಪಂಚ ರೂಪವು. ಋಗ್ವೇದಲ್ಲಿ ಸ್ವರಿತವೆಂಬ ಆಧಾರ ಸ್ವರದಿಂದ ಉಚ್ಚನೀಚೋಚ್ಚಾರನಿಮಿತ್ತವಾದ ಉದಾತ್ತ ಮತ್ತು ಅನುದಾತ್ತವೆಂಬ ಮೂರು ಸ್ವರಗಳು ಪ್ರಸಿದ್ಧವಿರುವುವು. ಉದಾತ್ತತರ, ಅನುದಾತ್ತತರ, ಮಂದ್ರ ಮತ್ತು ಅತಿಸ್ವಾರವೆಂಬ ಸ್ವರಗಳು ಸೇರಿ ಸಾಮವೇದದಲ್ಲಿ ಸಪ್ತಸ್ವರಗಾನವು ಪ್ರಸಿದ್ಧವಾಯಿತು. ಋಗ್ವೇದ ಮಂತ್ರಗಳನ್ನೇ ಈ ಸಪ್ತಸ್ವರಗಳಲ್ಲಿ ಹಾಡುವ ಸಾಮವೇದವು ಹರಿಗೆ ಅತ್ಯಂತ ಇಷ್ಟವು.

ವೇದದ ಅನುಷ್ಟುಪ್ ಮೊದಲಾದ ಛಂದಸ್ಸುಗಳೇ ಮಹಾಭಾರತದ ರಾಮಾಯಣಾದಿ ಇತಿಹಾಸ ಪುರಾಣಗಳಲ್ಲಿ ಸ್ವಲ್ಪ ರೂಪಾಂತರದಿಂದ ಕಾಣಿಸಿಕೊಂಡವು. ರಾಮಾಯಣ, ಮಹಾಭಾರತ ಮತ್ತು ಪುರಾಣಾಗಳಲ್ಲಿ ಭಾಗಗಳನ್ನು ಸ್ವರಲಯಗಳೊಂದಿಗೆ ಹಾಡುವುದಕ್ಕೆ ಅಪಕೃಷ್ಟ ಧ್ರುವ ಗಾಯನವೆಂದು ಹೆಸರು. ಹೀಗೆ ಆ ಕಾಲದಲ್ಲಿ ಛಂದಶ್ಯಾಸ್ತ್ರ ಲಕ್ಷಣ ಲಕ್ಷಿತವಾದುದೇ ಸಂಗೀತಕ್ಕೆ ಉಪಯುಕ್ತವಾದ ಸಾಹಿತ್ಯವಾಗಿತ್ತು. ಇದಕ್ಕೆ ಗ್ರಾಮಗಾಯನವೆಂಬ ಹೆಸರು ರೂಢವಾಯಿತು. ಈ ಧ್ರುವ ಪದಗಾಯನದಲ್ಲಿ ಐದು ಸ್ವರಗಳಿಗಿಂತ ಕಡಿಮೆ ಇರುವ ಸರಣಿಗಳು ಸೇರುವುದಿಲ್ಲ.

ಭರತನು ನಾಟ್ಯಶಾಸ್ತ್ರ ಪ್ರವರ್ತಕನಾಗಿ ನೃತ್ಯ, ಸಂಗೀತ, ಸಾಹಿತ್ಯಗಳಿಗೆಲ್ಲ ಆಚಾರ್ಯಪುರುಷನೆನಿಸಿರುವನು. ಅವನು ಸ್ವರ, ಮೂರ್ಛನೆ, ಶುದ್ಧಜಾತಿ, ಸಂಕೀರ್ಣಜಾತಿ ಮೊದಲಾದ ಸ್ವರಪ್ರಮೇಯಗಳನ್ನೂ, ಹ್ರಸ್ವ ದೀರ್ಘ ಪ್ಲುತವೆಂಬ ವೈದಿಕವರ್ಣೋಚ್ಚಾರಣ ಮಾತ್ರಾಕಾಲಗಳ ಆಧಾರದ ಮೇಲೆ ವಿಳಂಬಿತ, ಮಧ್ಯ ಮತ್ತು ದ್ರುತವೆಂಬ ಲಯಗಳನ್ನು ಹೇಳಿ, ಅವುಗಳಿಂದ ತಾಳಗಳನ್ನು ನಿರ್ಮಿಸಿರುವನು. ಈ ಸ್ವರಲಯಗಳ ಅಚ್ಚುಕಟ್ಟಿನಲ್ಲಿ ಹಾಡಬಹುದಾದ ಧ್ರುವಪದದ ಮಾದರಿಗಳನ್ನೂ, ಅವುಗಳಿಗೆ ಬೇಕಾಗುವ ಮಾಗಧೀ, ಅರ್ಧಮಾಗಧೀ, ಸಂಭಾವಿತ ಮತ್ತು ಕ್ಷಥುಲಾ ಎಂಬ ನಾಲ್ಕು ವಿಧ ಗೀತಪ್ರಕಾರಗಳನ್ನು ಹೇಳಿರುವನು.

ಭರತಮುನಿಯ ಹಿಂದೆ ವಾಡಿಕೆಯಲ್ಲಿದ್ದ ಅಪಕೃಷ್ಣ ಧ್ರುವಪದ ಗಾಯನ ಪದ್ಧತಿಯಲ್ಲಿ ರಾಗತಾಳಗಳ ಗೊಂದಲವಿಲ್ಲದೆ ಜನರು ತಮ್ಮ ಐಚ್ಛಿಕ ಸ್ವರಲಯದ ಸಂಚಾರದೊಂದಿಗೆ ಹಾಡುತ್ತಿದ್ದರು. ಇದು ಭಾವಪ್ರಧಾನವಾಗಿದ್ದು ಅನಿಬದ್ಧ ಪದ್ಧತಿಯೆನಿಸಿತು. ಭರತಮುನಿಯು ರಾಗ ತಾಳಗಳನ್ನು ವ್ಯವಸ್ಥೆಗೊಳಿಸಿದ್ದರಿಂದ ನಿಬದ್ಧಗಾಯನ ಪದ್ಧತಿಯು ಅವನಿಂದಲೇ ಆರಂಭವಾಯಿತೆನ್ನಬಹುದು. ಇದರ

ಬೆಳವಣಿಗೆಯಿಂದ ಭಾವ ಪ್ರಧಾನವಾದ ಅನಿಬದ್ಧಗಾಯನ ಪದ್ಧತಿಯು ಲೋಪವಾಗ ಲಾರಂಬಿಸಿತು. ಆದರೂ ರಾಗಾಲಾಪನೆಯಕಾಲದಲ್ಲಿ ಅರ್ಥರಹಿತವಾದ ನೋಂ, ತೋಂ, ಇತ್ಯಾದಿ ಸಂಕೇತವು ಬಳಕೆಯಲ್ಲಿ ಬಂದಿತು. ಇಂಥಹ ರಾಗಾಲಾಪನ ಪದ್ಧತಿಗೆ ತಕ್ಕ, ಉಪಾಸನೆಗೆ ಯೋಗ್ಯವಾದ ಸಾಹಿತ್ಯ ಒದಗಿಸಿಕೊಟ್ಟವರು ಕನ್ನಡದ ಹರಿದಾಸರು. ಇದೇ ಉಗಾಭೋಗವೆಂದೂ, ಸ್ಥಾಯಿಪದ್ಧತಿ (ಠಾಯಿ)ಯೆಂದು ಪ್ರಖ್ಯಾತವಾಯಿತು. ಹಿಂದೂಸ್ಥಾನೀ ಪದ್ಧತಿಯಲ್ಲಿ ಇದರಿಂದಲೇ ಅಸ್ತಾಯಿ (ಖಯಾಲ್) ಪದ್ಧತಿಯ ಸಂಗೀತವು ಪ್ರಚಾರಕ್ಕೆ ಬಂದಿತು. **ಉಗಾಭೋಗಗಳ** ಪದ್ಧತಿಯನ್ನು ಜಾರಿಗೆ ತಂದುದು ಕನ್ನಡ **ಹರಿದಾಸರ ವೈಶಿಷ್ಟ್ಯಗಳಲ್ಲಿ ಮೊದಲನೆಯದು.** ಊಗಾಭೋಗವೆಂಬುದು ಉದ್ಗ್ರಾಹ, ಮೇಲಾಪಕ, ಧ್ರುವಾ, ಅಂತರಾ ಮತ್ತು ಅಭೋಗ ಎಂಬೀ ಐದು ಧಾತುಗಳಲ್ಲಿ ಆದ್ಯಂತಗಳು ಸೇರಿದ 'ಉದ್ಗ್ರಾಹಾಭೋಗ' ಎಂಬುದರ ಕನ್ನಡ ರೂಪವು.

ನಿಬದ್ಧಗಾಯನ ಪದ್ಧತಿಯನ್ನು ವಿಚಾರ ಮಾಡಿದರೆ ಭರತಮುನಿಯಿಂದ ವ್ಯವಸ್ಥೆಗೊಳಿಸಲ್ಪಟ್ಟ 'ಜಾತಿ'ಗಳಿಂದ ರಾಗಾಂಗ (ಶುದ್ಧ) ಉಪಾಂಗ (ಸಾಲಗ) ಭಾಷಾಂಗ (ಸಂಕೀರ್ಣ) ಮತ್ತು ಕ್ರಿಯಾಂಗ ಈ ಚತುಷ್ಟಯ ನಿಯಮರೀತ್ಯಾ ಬೇರೆ ಬೇರೆ ರಾಗಗಳು ಹುಟ್ಟಿಕೊಂಡವು. ಈ ರಾಗಗಳನ್ನೆಲ್ಲಾ ನಿಯಮನಮಾಡಿ ಅವುಗಳಲ್ಲಿ ಶ್ರೀರಾಗ, ವಸಂತ, ಭೈರವ, ಪಂಚಮ, ಮೇಘ, ಮತ್ತು ನಟನಾರಾಯಣವೆಂಬ ಆರು ರಾಗಗಳು ಜನಕ ರಾಗಗಳೆಂದೂ, ಅವುಗಳೊಂದೊಂದಕ್ಕೂ ಜನ್ಯರಾಗಗಳೂ, ರಾಗಿಣಿಗಳೂ ಹುಟ್ಟಿದವೆಂದು ಶಾಸ್ತ್ರೀಯವಾಗಿ ಸಾಧಿಸಿತೋರಿಸಿದವನು ಕಲ್ಯಾಣ ಚಾಲುಕ್ಯ ವಂಶದ ಸೋಮೇಶ್ವರನು. ಇವನು ಕ್ರಿ. ಶ ಹನ್ನೆರಡನೆಯ ಶತಮಾನಕ್ಕೆ ಸೇರಿದ ಕನ್ನಡಿಗನು. ಇದನ್ನೇ ಮುಂದೆ **ಚಾಲುಕ್ಯ** ಅರಸನಾದ ರಾಮಚಂದ್ರದೇವನನ ಆಸ್ಥಾನದಲ್ಲಿದ್ದ ಗೋಪಾಲನಾಯಕನು ಮಲ್ಲಿಕಾಫರನೊಂಧಿಗೆ ಉತ್ತರಭಾರತಕ್ಕೆ ಹೋಗಿ ಅಲ್ಲಿ ವಿಶೇಷ ಪ್ರಚಾರಮಾಡಿದನು. ಇದಕ್ಕೆ ರಾಗಪರಿವಾರ ಪದ್ಧತಿಯೆಂದು ಹೆಸರು. ಕನ್ನಡಿಗರಿಂದ ಪ್ರಚಾರಗೊಂಡ ಈ ರಾಗಪರಿವಾರಪದ್ಧತಿಯೇ ಹಿಂದುಸ್ತಾನೀ ಸಂಗೀತವೆನಿಸಿರುವುದು.

ಭರತ ಮುನಿಯಿಂದ ಮುಂದೆ ಆದ ಬೆಳವಣಿಗೆಯನ್ನು ವಾದ್ಯ ಮೊದಲಾದ ಅನೇಕ ವಿಷಯಗಳನ್ನೂ ಶಾರ್ಙ್ಗದೇವನು "ಸಂಗೀತರತ್ನಾಕರ" ವೆಂಬ ಗ್ರಂಥಧಲ್ಲಿ ಸಂಗ್ರಹಿ ಸಿರುವನು. ಭರತಾಚಾರ್ಯನ ನಾಟ್ಯಶಾಸ್ತ್ರವಾದ ಮೇಲೆ ಸಂಗಿತದ ಲಕ್ಷಣ ಶಾಸ್ತ್ರವೆಂದರೆ ಇದೇ. ಶಾರ್ಙ್ಗದೇವನು ಜನ್ಮತಃ ಕಾಶ್ಮೀರಿಯಾದರೂ ದೇವಗಿರಿಯ ಯಾದವ ವಂಶದ ಸಿಂಘಾಣರಾಜನ ಆಸ್ಥಾನದ ಮುಖ್ಯ ಕೋಶಾಧ್ಯಕ್ಷನಾದ್ದರಿಂದ ಕರ್ನಾಟಕ ದೇಶಕ್ಕೆ ಸೇರಿದವನೆಂದೇ ಹೇಳಬೇಕು. ಇವನು ಕ್ರಿ. ಶ. 13ನೇಯ ಶತಮಾನದ ಆದಿ

ಭಾಗದಲ್ಲಿದ್ದನು. ಇವನಿಂದ ರಚಿತವಾದ ಸಂಗೀತ ರತ್ನಾಕರವು ಅತ್ಯಂತ ವಿಸ್ತಾರವಾದ ಗ್ರಂಥವು.

ಭರತಾಚಾರ್ಯರಿಂದ ನಿಬದ್ಧ ಮಾಡಲ್ಪಟ್ಟ ಧ್ರುವಗೀತೆಗಳನ್ನು ಹಾಡುವುದೇ ಎಲ್ಲಕಡೆಯೂ ಪ್ರಚಾರದಲ್ಲಿದ್ದು, ರಾಗಪರಿವಾರ ಪದ್ಧತಿಯೇ ಎಲ್ಲ ಕಡೆಯಲ್ಲೂ ರೂಢವಾಗಿದೆ. ಈ ಪದ್ಧತಿಯಲ್ಲಿ ಹೇಳಿದ ಆರು ಪುರುಷರಾಗಗಳಲ್ಲಿ ಶ್ರೀರಾಗವೇ ಮೊದಲನೆಯದೆಂದು ಸೋಮೇಶ್ವರ, ಉಮಾಪತಿ ಮತ್ತು ಶಾರ್ಙ್ಗದೇವರು ಅಭಿಪ್ರಾಯ ಪಡುತ್ತಾರೆ. ಮುಂದೆ ಸ್ವರ ಮೇಳ ಪ್ರಸ್ತಾರವನ್ನು ಹೇಳಿದ ಲಕ್ಷಣ ಗ್ರಂಥಕಾರರೂ ಸಹ ಇದನ್ನು ಜನಕರಾಗ ಅಥವಾ ಜನಕಮೇಳವೆಂದು ಕರೆದಿರುವರು. ಈ ರಾಗಕ್ಕೆ ಶ್ರೀರಂಜಿನಿ, ವಾಕ್‌ಶ್ರೀ ಅಥವಾ ಬಾಗೇಶ್ರೀ (ಭಾಗೇಶ್ವರಿ, ಬಾಗೇಸರಿ) ಎಂಬ ಹೆಸರುಗಳುಂಟು. ಈ ವಿಷಯದಲ್ಲಿ ಶ್ರೀಹಲಗೂರು ಕೃಷ್ಣಾಚಾರ್ಯರು ಹೀಗೆ ಬರೆಯುತ್ತಾರೆ. :—ಮತ್ತೂ ವಿಶೇಷವೆಂದರೆ ಶ್ರೀ ಎಂಬ ಹೆಸರಿನಿಂದಲೇ ಅದು ಆದಿರಾಗವೆಂಬರ್ಥವು ಸ್ಪಷ್ಟವಾಗಿದೆ. ಯಾಕೆಂದರೆ ಆ ರಾಗಕ್ಕೆ ಹತ್ತುವ ಏಳು ಸ್ವರಗಳನ್ನೂ ಆಧಾರವಾಗಿಟ್ಟುಕೊಂಡು ಏಳು ಬೇರೆ ಸ್ವರ ಸಪ್ತಕಗಳನ್ನು ಮಾಡಿದರೂ ಪ್ರತಿಯೊಂದು ಸಪ್ತಕವೂ ಮೂಲರಾಗ ದಂತೆಯೇ ರಂಜನಕಾರಿಗಳಾದ ಏಳು ಬೇರೆ ರಾಗಗಳೇ ಆಗುತ್ತವೆ. ಹೀಗೆ ಏಳು ಸಪ್ತಕಗಳೂ ಏಳು ರಾಗಗಳಾಗುವಂಥ ಬೇರೊಂದು (ರಾಗ) ಸಪ್ತಕವೇ ಇಲ್ಲ. ಆದುದರಿಂದ ಇದಕ್ಕೆ ಷಡ್ಗ್ರಾಮವೆಂತಲೂ, ಷಾಡ್ಜಿ ಜಾತಿಯೆಂತಲೂ, ಷಡ್ಜಾದಿ ಮೂರ್ಛನೆಯೆಂತಲೂ, (ಶ್ರೀ) ರಾಗವೆಂತಲೂ ಸಾಮಾನ್ಯ ಹೆಸರು ಬಂದಿದೆ. (ಹ.ಕ.ಸಂ.ಪುಟ 50) ಮುಂದೆ ಅವರು ಹೀಗೆ ಹೇಳುತ್ತಾರೆ. ಹೀಗೆ ಶ್ರೀರಾಗವು ನಮ್ಮ ಸಾಮವೇದದ ಪರಂಪರವಾದ ಕರ್ಣಾಟಕಸಂಗೀತಕ್ಕೆ ಆದಿರಾಗವಿದ್ದು ಅದರ ಸ್ವರಮೇಳ ಗಳಿಲ್ಲಯ ರಿ, ಗ,ಧ, ನಿ, ಈ ನಾಲ್ಕೂ ಸ್ವರಗಳನ್ನು ಪರಂಪರೆಯ ಶುದ್ಧ ಸ್ಥಾನಗಳಿಂದ ಒಂದೊಂದು ಸ್ವರಸ್ಥಾನದ ಕೆಳಗಿರಿಸಿ ಆ ಸ್ಥಾನಗಳಿಗೆ ಶುದ್ಧ ಸಂಜ್ಞೆಯನ್ನು ಕೊಟ್ಟಿದ್ದು ಕರ್ಣಾಟಕ ಸಂಗೀತಶಾಸ್ತ್ರ ಪ್ರವರ್ತಕಚಾರ್ಯರ ಕೌಶಲ್ಯ ಮತ್ತು ವೈಶಿಷ್ಟ್ಯವನ್ನೇ ತೋರಿಸುವುದು. (ಪು. 52) ಕನ್ನಡ ಹರಿದಾಸರುಗಳಲ್ಲಿ ಮೊದಲನೆಯದು ಶ್ರೀರಾಗದಲ್ಲಿಯೇ ಇರುವುದು ಗಮನಾರ್ಹವಾಗಿದೆ.

ಕರ್ಣಾಟಕ ಸಂಗೀತದ ಆದ್ಯ ಪ್ರವರ್ತಕಾಚಾರ್ಯನಾದ ಪುಂಡರೀಕ ವಿಠಲನು ಸೋಮೇಶ್ವರನು ಹೇಳಿದ ಶ್ರೀ ರಾಗವು ಆದಿರಾಗವೆಂಬ ಸ್ಥಾನದಲ್ಲಿ ಶುದ್ಧ ಭೈರವವನ್ನು ಬರೆದಿರುವನು. ಆ ಭೈರವವವೇ ಈಗಿನ ಮಾಳವ ಗೌಳವವು. ಈಗಿನ ಸಂಗೀತ ಪಾಠದ ಸರಳೆ. ಜಂಟಿ, ಅಲಂಕಾರ ಮೊದಲಾದ ಬಾಲ್ಯ ಪಾಠಗಳೆಲ್ಲ ಮಾಳವ ಗೌಳದಲ್ಲಿಯೇ ಆರಂಭವಾಗುವುವು. ಹಿಂದೂಸ್ಥಾನೀ ಸಂಗೀತದಲ್ಲಿಯೂ ಇದೇ ಪದ್ಧತಿಯಿತ್ತು. ಪೂರ್ವ ಪರಂಪರೆಯ ಧ್ರುಪಪದ ಗಾಯಕರು ಈ ರಾಗದ 'ಪ್ರಥಮ ಗಣೇಶ'

ವೆಂಬುದರಿಂದಲೇ ಗೀತ ಪಾಠವನ್ನೂ ಪ್ರಾರಂಭಿಸುತ್ತಿದ್ದರು. ಇದನ್ನು ಮತ್ತೊಮ್ಮೆ ಪ್ರಚಾರಕ್ಕೆ ತಂದ ಕೀರ್ತಿ ಪುರಂದರದಾಸರದು. ಇವರು ಇದನ್ನು ಪ್ರಚಾರಕ್ಕೆ ತಂದುದರಿಂದಲೇ ಲಕ್ಷಣ ಗ್ರಂಥಕಾರನಾದ ಪುಂಡರೀಕ ವಿಠಲನು ಇದನ್ನು ಆದಿರಾಗವೆಂದು ಗ್ರಹಿಸಿರುವನು. ಸ್ವರಪಾಠವು ಮುಗಿದ ಕೂಡಲೆ ಗೀತಪಾಠದ ಪ್ರಾರಂಭಕ್ಕೆ ಈಗಲೂ ಪುರಂದರದಾಸರ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಮತ್ತು 'ಪದುಮನಾಭ ಪರಮ ಪುರುಷಾ 'ಎಂಬ ಪಿಳ್ಳಾರಿ ಗೀತೆಗಳ ಪಾಠವಾಗುವುದು. ಇವು ಈ ರಾಗಮೇಳದಲ್ಲಿಯೇ ಬರುವುದು. ಇದನ್ನು ಪ್ರಚಾರಕ್ಕೆ ತಂದವರು ಪುರಂದರ ದಾಸರು. ದಾಕ್ಷಿಣಾತ್ಯರೂ ಈ ಪದ್ಧತಿಯನ್ನು ಇಂದಿಗೂ ಅನುಸರಿಸುತ್ತಿರುವರು.

ಕರ್ಣಾಟಕ ಸಂಗೀತ ವೈಶಿಷ್ಯವೇ ಸ್ವರಮೇಳ ಪ್ರಸ್ತಾರವು. ನರಹರಿತೀರ್ಥರೇ ಮೊದಲಿಗೆ ಈ ಪದ್ಧತಿಯಲ್ಲಿ ಗೀತರಚನೆ ಮಾಡಿದರು. ಅವರನ್ನನುಸರಿಸಿ ಶ್ರೀಪಾದ ರಾಜರೇ ಮೊದಲಾದ ಎಲ್ಲ ಹರಿದಾಸರೂ ಸಂಗಿತ ರಚಿಸಿದರು. ಪುರಂದರದಾಸರ ಸಮಕಾಲಿಕನಾದ ಪುಂಡರೀಕವಿಠಲನು "ಸದ್ರಾಗಚಂದ್ರೋದಯ" ವೆಂಬ ತನ್ನ ಲಕ್ಷಣ ಗ್ರಂಥದಲ್ಲಿ ಹರಿದಾಸರ ಲಕ್ಷ್ಯ ಗೀತಗಳನ್ನು ಅನುಸರಿಸಿ ಶುದ್ಧ ವಿಕೃತ ಸ್ವರಗಳೆಲ್ಲವನ್ನೂ ಸೇರಿಸಿ 90 ಸಂಖ್ಯೆಯುಳ್ಳ ಸ್ವರಮೇಳ ಪ್ರಸ್ತಾರವನ್ನು ಹೇಳಿದ್ದಾನೆ. ಇವನ "ರಾಗಮಂಜರೀ, ನರ್ತನ ನಿರ್ಣಯ" ಮತ್ತು "ರಾಗಮಾಲ" ಎಂಬ ಇನ್ನು ಮೂರು ಗ್ರಂಥಗಳೂ ಸಂಗೀತಶಾಸ್ತ್ರದ ಮೇಲೆ ರಚಿತವಾಗಿದೆ. ಆದರೆ ಪುಂಡರೀಕವಿಠಲನಲ್ಲಿ ಂಥವು ಅತ್ಯಂತ ಪ್ರೌಢವಾದ ಸಂಸ್ಕೃತ ಭಾಷೆಯಲ್ಲಿ ವೃತ್ತಶ್ಲೋಕಗಳಿರಿನ ಶವಾದ್ದರಿಂದ ಇದರ ಪ್ರಚಾರ ಹೆಚ್ಚಾಗಿ ಆಗಲಿಲ್ಲ ಮುಂದೆ ತಂಜಾವೂಂಡೀ ರಾಘವ ಭೂಪಾಲನ ಆಶ್ರಯದಲ್ಲಿದ್ದ ವೆಂಕಟಮಖಿಯ "ಚತುರ್ದಂಡಿಗೂ ಎಶ"ವೆಂಬ ಗ್ರಂಥವೇ ಕರ್ಣಾಟಕ ಸಂಗೀತಕ್ಕೆ ಮಾನ್ಯ ಗ್ರಂಥವೆಂದು ಇಂದಿನವನು ಪ್ರಚಾರವಾಗಿದೆ. ಆದರೆ ಸ್ವರಮೇಳ ಪ್ರಸ್ತಾರ ಪದ್ಧತಿಯನ್ನು ಮೊದಲಿಗೆ ಹೇಳಿದುಬತ್ತು ಪುಂಡರೀಕ ವಿಠಲನೇ. ಇವನಾದರೂ ಪುರಂದರಾದಿ ಹರಿದಾಸರು ವರದ ವಾಗ್ಗೇಯಕಾರರುಗಳಿಂದ ರಚಿತವಾದ ಸಾಹಿತ್ಯವನ್ನು ಬರೆದನು. ತಂಜಾವೂಬ ಮರಾಠಾ ನಾಯಕನು 18 ನೆಯ ಶತಮಾನದಲ್ಲಿ "ಸಂಗೀತ ಸಾರಾಮೃತ"ವೆಂ, ಗ್ರಂಥವನ್ನು ಬರೆದನು. ಇವನು ಅತ್ಯಂತ ದೊಡ್ಡ ಪಂಡಿತನೂ, ವಿಮರ್ಶಕನೂ ದೂರದರ್ಶಿಯೂ ಆಗಿದ್ದನು. ಇವನು ಪುಂಡರೀಕ ವಿಠಲನನ್ನು ಅವನ ಸ್ವರಮೇಳ ಪ್ರಸ್ತಾರವನ್ನು ಸಂಗ್ರಹಿಸಿರುವುದಲ್ಲದೆ ಪುರಂದರದಾಸರನ್ನು ಪ್ರಾಚೀನರೂ, ಸಂಪ್ರದಾಯ ಪರವರ್ತಕರೂ ಎಂದು ಚೆನ್ನಾಗಿ ಗೌರವಿಸಿ ಅವರ ಠಾಯಿಗಳನ್ನೂ, ಸುಳಾದಿಗಳನ್ನೂ, ಗೀತಗಳನ್ನೂ ಅವುಗಳ ಸ್ವರಸಂಚಾರ ಪೂರ್ವಕ ಆಧಾರವೆಂದು ಉದಾಹರಿಸಿದ್ದಾನೆ. ತನ್ನ ಸಂಗೀತ ಗುರುಗಳು ವ್ಯಾಸಪ್ಪಾಚಾರ್ಯರೆಂದೂ ಅವರಿಂದಲೇ

ಇವನು ತನ್ನ ಲಕ್ಷಣಗ್ರಂಥದ ಲಕ್ಷ್ಯಸಾಹಿತ್ಯವನ್ನೆಲ್ಲ ಕನ್ನಡ ಹರಿದಾಸರಿಂದ ಸಂಗ್ರಹಿಸಿದೆನೆಂದೂ ಹೇಳಿಕೊಂಡಿದ್ದಾನೆ.

ಪ್ರಸಿದ್ಧ ಸಂಗೀತವಿದ್ಯಾ ಸಂಪ್ರದಾಯ ಪ್ರವರ್ತಕಃ
ವಿದ್ಯಾಸಿಂಹಾಸನಾಧ್ಯಕ್ಷಃ ಕಲ್ಪನಾ ಚತುರಾನನಃ।
ವ್ಯಾಸಪ್ಪಾಚಾರ್ಯ ಏವಾಸ್ಮತ್ ಪೂರ್ವಾಚಾರ್ಯೇತಿ ವಿಶ್ರುತಃ
ತೇನ ವಾಗ್ಗೇಯಕಾರೇಣ ಕೃತಃ ಶ್ರೀವತ್ಸನಾಭಿದಃ
ಜಯ ಕರ್ನಾಟ ಧಾರೇತಿ ಪ್ರಬಂಧೋ ಲಕ್ಷಣಾನ್ವಿತಃ
ತಲ್ಲಕ್ಷಣಂ ತು ಸಂಗೀತರತ್ನಾಕರ ಇತೀರಿತಮ್ ||–ಸಂಗೀತಸಾರಮೃತ p 157.

ಪುಂಡರೀಕ ವಿಠಲನ ಗ್ರಂಥದಿಂದ ಸುಳಾದಿ ಲಕ್ಷಣವನ್ನು ಇವನು ಸಂಗ್ರಹಿಸಿದ್ದಾನೆ.

......................ವಿಠಲೇನೋದಾಹೃತಮ್
ಧ್ರುವೋ ಮಠ್ಯೋ ರೂಪಕಶ್ಚ ಝಂಪಾತಾಲಸ್ತತಃ ಪರಮ್ ।
ತ್ರಿಪುಟಶ್ಚಾಂಕತಾಲಾಖ್ಯ ಶ್ಚೈಕತಾಲೇತಿ ಚ ಕ್ರಮಾತ್
ಏವಂ ಸಾಲಗ ಸೂಡಸ್ಥ ಸೂಲಾದಿ ಕ್ರಮ ಈರಿತಃ
ಸೂಲಾದಿ ಭೇದಬಹವೋಽಪಿ ಏವಮಿತ್ಯವಧಾರ್ಯತಾಂ
ತಾಲೈಸ್ಸಪ್ತಭಿರೇವೈತೈಃ ಧ್ರುವಾದ್ಯೈರ್ಲೋಕ ವಿಶ್ರುತೈಃ
ಪ್ರಯುಜ್ಯಂತೇ ಪೃಥಗ್ಗೀತ ವಿಶೇಷಾ ಲಕ್ಷ್ಯಕೋವಿದೈಃ ||ಸಂ. ಸಾ. 152–153

ಮತ್ತು ಇಂಥಾ ಸುಳಾದಿಗಳನ್ನು ರಚಿಸಿದ ಪುರಂದರದಾಸರನ್ನೂ ಹೊಗಳಿದ್ದಾನೆ.

ಇತಿ ಸಾಲಗ ಸೂಡಸ್ಥ ಗೀತಾನಾಂ ಲಕ್ಷ್ಯ ಕೀರ್ತನಮ್
ಶ್ರೀ ಪುರಂದರ ದಾಸಾದ್ಯೈರಭಿಯುಕ್ತೈಃ ಪುರಾತನೈಃ
ಪ್ರಯುಕ್ತೇಷು ಪ್ರಸಿದ್ಧೇಷು ಲಕ್ಷ್ಯೇಷು ವಿವಿಧೇಷ್ವಪಿ
ಧ್ರುವಾದಿಷು ತ್ವದುಕ್ತಾನಿ ಲಕ್ಷಣಾನಿ ಮಹಾಮತೇ। ಸಂ. ಸಾ. 150

ಪುರಂದರದಾಸರ್ಯರುಗಳನ್ನನುಸರಿಸಿ ಗ್ರಂಥರಚನೆಮಾಡಿ ಕರ್ನಾಟಕ ಸಂಗೀತ ಶಾಸ್ತ್ರದ ಆದ್ಯಾಚಾರ್ಯನೆನಿಸಿದ ಪುಂಡರೀಕ ವಿಠಲನ ಪ್ರತಿಭೆಯು ದಕ್ಷಿಣದೇಶದಲ್ಲಿ ಮಾತ್ರ ಇದ್ದಿತೆಂದಲ್ಲ, ಉತ್ತರದಲ್ಲಿ ಶಹಜಾನನನ ದರ್ಬಾರಿನಲ್ಲಿ ಸಂಗೀತರಾಯ ಪ್ರಶಸ್ತಿಯನ್ನು ಪಡೆದ ಭಾವಭಟ್ಟನು ಸಂಗೀತದ ಮೇಲೆ ಮೂರು ಗ್ರಂಥಗಳನ್ನು ಬರೆದು ಪ್ರಖ್ಯಾತನಾದನು. ಈ ಗ್ರಂಥಗಳಲ್ಲಿ ಪುಂಡರೀಕವಿಠಲನ ರಾಗಮಂಜರಿಯ ವಿಷಯಗಳನ್ನು ಅವನ ಪರಿಭಾಷೆಯಿಂದಲೇ ಬರೆದಿದ್ದಾನೆ. ಆ ಭಾವಭಟ್ಟನ ತಂದೆ ಜನಾರ್ದನ ಭಟ್ಟನೂ ದೊಡ್ಡ ಸಂಗಿತ ವಿದ್ವಾಂಸ. ಅವನ ತಂದೆ ತಾನಭಟ್ಟ ಈ ತಾನಭಟ್ಟನೇ ಚತುರ್ದಂಡೀಪ್ರಕಾಶ ಗ್ರಂಥಕರ್ತನಾದ ವೆಂಕಟಮಖಿಯ ಮುಖ್ಯ

ಗುರುವಾದ ತಾನಪ್ಪಾಚಾರ್ಯನು. ಹೀಗೆ ಉತ್ತರ ದಕ್ಷಿಣಗಳಲ್ಲಿಯೂ ಪುಂಡರೀಕ ವಿಠಲನ ಪದ್ಧತಿಯೇ ಮಾನ್ಯವಾಯಿತು.

ಪುರಂದರದಾಸರೇ ಮೊದಲಾದ ದಾಸರುಗಳ ಪದಗಳನ್ನೇ ಮಾದರಿಯಾಗಿಟ್ಟುಕೊಂಡು ಮುಂದೆ ದಕ್ಷಿಣದ ವಾಗ್ಗೇಯಕಾರರುಗಳಾದ ಕ್ಷೇತ್ರಜ್ಞ, ತ್ಯಾಗರಾಜ, ಮುತ್ತುಸ್ವಾಮಿದೀಕ್ಷಿತರು ಮತ್ತು ಶಾಮಶಾಸ್ತ್ರಿಗಳು ತಮ್ಮ ಕೃತಿಗಳನ್ನು ರಚಿಸಿದರು. 1910ರವರೆಗೂ ಇದ್ದ ದೀಕ್ಷಿತರ ಮೊಮ್ಮಕ್ಕಳಾದ ಇಟ್ಟ್ಯಾಪುರದ ಸುಬ್ಬರಾಮ ದೀಕ್ಷಿತರು "ಸಂಪ್ರದಾಯಪ್ರದರ್ಶಿನೀ" ಎಂಬ ಲಕ್ಷಣ ಗ್ರಂಥದಲ್ಲಿ ಪುರಂದರದಾಸರ ಪದ ಮತ್ತು ಸುಳಾದಿಗಳನ್ನು ಲಕ್ಷ್ಯಗಳಾಗಿ ಉದಹರಿಸಿದ್ದಾರೆ. ಇದು ಅತ್ಯಂತ ಉಪಯುಕ್ತ ಗ್ರಂಥವು. ತ್ಯಾಗರಾಜರಾದರೂ 'ಪ್ರಹ್ಲಾದ ಭಕ್ತಿ ವಿಜಯದ' ಪ್ರಾರಂಭದಲ್ಲೆ

ದುರಿತವ್ರಾತಮುಲೆಲ್ಲುನು ಪರಿಮಾರ್ಚೆಡಿ ಹರಿಗುಣಮುಲ ಬಾಡುಚುನೆ ಪುಡ್ಡನ್
ಪರವಶತ್ಯವೆಲಯು ಪುರಂದರದಾಸುನಿ ಮಹಿಮಮುಲನು ದಲಚೆದ ಮದಿಲೋನ್ ೧

ಎಂದು ಪುರಂದರದಾಸರನ್ನು ಮುಕ್ತಕಂಠದಿಂದ ಹೊಗಳಿರುವರು. ಇದರಿಂದಲೇ ಹರಿದಾಸರುಗಳು ಸಂಗೀತ ಸಾಸ್ತ್ರದಲ್ಲಿ ಎಂತಹ ಮಾನ್ಯತೆಯನ್ನು ಪಡೆದಿದ್ದರೆಂಬುದು ವ್ಯಕ್ತವಾಗುವುದು.

ಕರ್ಣಾಟಕ ಸಂಗೀತದ ವೈಶಿಷ್ಟ್ಯವೆಂದರೆ ಸ್ವರಮೇಳ ಪ್ರಸ್ತಾರವು. ಹರಿದಾಸರೇ ಇದಕ್ಕೆ ತಕ್ಕ ಸಾಹಿತ್ಯವನ್ನು ಮೊದಲಿಗೆ ಒದಗಿಸಿಕೊಟ್ಟವರು. ಈ ಸ್ವರಮೇಳ ಪ್ರಸ್ತಾರದ ವಿಷಯವನ್ನು ಶ್ರೀ ಹುಲಗೂರು ಕೃಷ್ಣಾಚಾರ್ಯರು ಹೀಗೆ ಸಂಗ್ರಹಿಸಿರುವರು.:- ಹೀಗೆ ಒಟ್ಟು 17 ಸ್ವರಗಳು ಶುದ್ಧ ವಿಕೃತಗಳೆಲ್ಲ ಸೇರಿ) ಒಂದೊಂದೇ ಹೆಸರುಗಳು ಪುನರುಕ್ತಿಯಾಗದಂತೆ ಉತ್ತರೋತ್ತರವಾಗಿ ಅವುಗಳ ಅವಧಿಯ ಚಾಲನ ಮಾಡುವುದರಿಂದ ಅರವತ್ತು ಮೇಳಗಳಾಗುವುವು. ಅವುಗಳಲ್ಲಿ ಷಡ್ಜದಿಂದ ಪಂಚಮದವರೆಗಿನ ಸ್ವರಗಳನ್ನು ಒಂದು ಗುಂಪು, ಪಂಚಮದಿಂದ ದ್ವಿಗುಣ ಷಡ್ಜದವರೆಗಿನ ಸ್ವರಗಳನ್ನು ಒಂದು ಗುಂಪು, ಹೀಗೆ ಎರಡು ಬೇರೆಬೇರೆ ಗುಂಪು ಎಂದು ಭಾವಿಸಿ ಸ್ವರಗಳ ಚಾಲನದಲ್ಲಿ ಪರಸ್ಪರ ಅವಧಿಯನ್ನು ಮೀರಬಾರದು. ಈ ಪ್ರಕಾರ ಮಾಡಿದರೆ ಷಡ್ಜ ಪಂಚಮಗಳ ನಡುವೆ 15 ಭೇದಗಳಾಗುವುವು. ಪಂಚಮತಾರ ಷಡ್ಜಗಳ ನಡುವೆ 6 ಭೇದಗಳಾಗುವುವು. ಮೊದಲಿನ 15 ಪ್ರಭೇದಗಳು ಪ್ರತಿಯೊಂದು 6 ವಿಧವಾದರೆ 15x6=90 ಈ ಸಂಖ್ಯೆಯು ಸಹಜವಾಗಿ ದೊರಕುವುದು.................ಆದರೆ ವೆಂಕಟಮುಖಿ ಒಂದು ವಿಕೃತಸ್ವರವನ್ನು 16 ಸ್ವರಗಳಿಂದಲೇ ಪ್ರಸ್ತಾರವನ್ನು ಮಾಡಿದ್ದಾನೆ. ಆದ್ದರಿಂದ 72 ಸಂಖ್ಯೆಯಾಯಿತು. ಆದ್ದರಿಂದ ಅವನ ಪ್ರಸ್ತಾರದಲ್ಲಿ ಸಾರಂಗಮೇಳ

ಮೊದಲಾದ 18 ಮೇಳಗಳನ್ನು ಬಿಡಬೇಕಾಯಿತು. ಇಂತಹ ವ್ಯವಸ್ಥಿತರೀತಿ ಸಂಗೀತ ಶಾಸ್ತ್ರ ಪದ್ಧತಿಗೆ ದಾಸರುಗಳು ಹಾದಿಹಾಕಿಕೊಟ್ಟಿದ್ದಾರೆ. ಇದು ಇವರ ವೈಶಿಷ್ಟ್ಯದ ಪರಮಾವಧಿಯನ್ನು ಸೂಚಿಸುವುದು.

ಹರಿದಾಸರುಗಳು ರಸಭಾವ ಪ್ರಧಾನವಾದ ಪದ ಪದ್ಯ, ಸುಳಾದಿ, ಉಗಾಭೋಗಗಳನ್ನು ರಚಿಸಿದವರಲ್ಲಿ ಮೊದಲಿಗರು. ಇವರ ಈ ಬಗೆಯ ನೂತನ ರಚನೆಗಳಿಂದ ಗೀತಪ್ರಬಂಧಗಳು ಹಿಂದೆ ಬಿದ್ದವು. ಉಗಾಭೋಗಗಳನ್ನು ಮೊದಲು ರಚಿಸಿದವರು ಅಚಲಾನಂದ ದಾಸರು. ಇವರು ನರಹರಿ ತೀರ್ಥರ ಸಮಕಾಲಿಕರು. ಕನ್ನಡ ಹರಿದಾಸರಿಂದ ಆರಂಭಿಸಲ್ಪಟ್ಟ ಠಾಯೀ ಪದ್ಧತಿಯ ಊಗಾಭೋಗಗಳು ಇಂದಿಗೂ ಹಿಂದೂಸ್ತಾನಿ ಸಂಗೀತದಲ್ಲಿ ಆಸ್ತಾಯಿ ಅಥವಾ ಖಯಾಲ್ ಎಂಬ ಹೆಸರಿನಿಂದ ಪ್ರಚಾರಗೊಂಡಿದೆ.

ಪ್ರಬಂಧಾಂಗಾನಿ ಷಟ್ ತಸ್ಯ ಸ್ವರಶ್ಚ ಬಿರುದಂ ಪರಂ ।
ತೇನಕಃ ಪಾಟತಾಲೌಚ ಪ್ರಬಂಧಪುರುಷಸ್ಯ ತೇ। —ಸಂ.ರ.273

ಪ್ರಬಂಧವೆಂದರೆ ಶಾಸ್ತ್ರೀಯ ಗೀತೆಯಲ್ಲಿ ಆರು ಲಕ್ಷಣಗಳಿರಬೇಕು. 1) ಸ್ವರ—ರಾಗ ವಾಚಕರಸ್ವರ ಸಂಚಾರ, 2)ಬಿರುದ—ಪ್ರಬಂಧ ರಚನಾಕಾರನ ಬಿರುದು, 3)ಪದ—ಅರ್ಥಬೋಧಕವಾಕ್ಯ, 4)ತೇನಕ—ಬ್ರಹ್ಮ ವಿಚಾರಪರ, 5)ಪಾಟ—ಮೃದಂಗಾದಿವಾದ್ಯಕ್ಕೆ ಅನುಕೂಲವಾದ ಅರ್ಥವಿಹೀನ ಸಂಕೇತಿಕ ಅಕ್ಷರಗಳು ಮತ್ತು 6) ತಾಲ. ಇದರಲ್ಲಿ ಹರಿದಾಸರು ಎಲ್ಲಕಿಂತಲೂ ಹೆಚ್ಚಾಗಿ ತೇನಕವೆಂಬ ಅಂಗವನ್ನು ಹೆಚ್ಚು ಲಕ್ಷ್ಯದಲ್ಲಿಟ್ಟು ಸಾಹಿತ್ಯ ನಿರ್ಮಾಣ ಮಾಡಿದರು.

ಉಗಾಭೋಗವಲ್ಲದೆ ಹರಿದಾಸರು ಸುಳಾದಿಗಳನ್ನು ರಚಿಸಿದರು. ಇದೊಂದು ಹರಿದಾಸರ ಮೂರನೆಯ ವೈಶಿಷ್ಟ್ಯ. ಮೊಟ್ಟಮೊದಲಿಗೆ ಸುಳಾದಿ ಲಕ್ಷಣ ಹೇಳಿರುವವನು ಪುಂಡರೀಕ ವಿಠಲನೇ. ಕನ್ನಡ ಹರಿದಾಸರ ಪೂರ್ವದಲ್ಲಿ ಇನ್ನಾರೂ ಇದನ್ನು ರಚಿಸಿಲ್ಲ. ಹರಿದಾಸರಲ್ಲಿ ಮೊದಲು ಸುಳಾದಿಗಳನ್ನು ರಚಿಸಿದವರು ಶ್ರೀಪಾದರಾಜರು. ನಿಬದ್ಧ ಗಾಯನದಲ್ಲಿ ಸೂಡಕ್ರಮ ಅಂದರೆ ಶುದ್ಧ (ಸೂಡ)ಮತ್ತು ಆಲಿಕ್ರಮ(ಸಾಲಿಗ—ಸೂಡ) ಎಂದು ಎರಡು ವಿಧ. ಇದರಲ್ಲಿ ಸೂಡಕ್ರಮದಲ್ಲಿ ಪಲ್ಲವ, ಅನುಪಲ್ಲವ, ಚರಣ ಇತ್ಯಾದಿ 8 ಲಕ್ಷಣಗಳನ್ನು ಸೋಮೇಶ್ವರನು ಹೇಳಿರುವನು. ಶ್ರೀಪಾದರಾಜರಾದರೋ ಈ ಎಂಟು ಲಕ್ಷಣಗಳುಳ್ಳ ಶುದ್ಧಸೂಡಕ್ರಮವನ್ನು ಸಪ್ತತಾಳಗಳಲ್ಲಿ ಸಾಲಗ ಸೂಡದಲ್ಲಿ ಪರಿವರ್ತಿಸಿ (ದೇಶಿಪದ್ಧತಿಯಲ್ಲಿ ಹಾಡುವ ಕ್ರಮ) ಅದಕ್ಕೆ ಸೂಡಾದಿ ಅಥವಾ ಸುಳಾದಿ ಎಂಬ ಪರಿಭಾಷೆಯನ್ನು ಏರ್ಪಡಿಸಿದರು. ಈ ಸುಳಾದಿಯಲ್ಲಿ ಧ್ರುವ, ಮಂಠ, ರೂಪಕ, ಝಂಪಕ, ತ್ರಿಪುಟ, ಅಡ್ಡ ಮತ್ತು ಏಕತಾಲ. ಇವುಗಳ ಜೊತೆಗೆ ಆದಿತಾಳ ಹೀಗೆ ಎಂಟು ತಾಳಗಳ ಉಪಯೋಗವುಂಟು.

ಸುಳಾದಿಗಳು ವಿಶೇಷವಾಗಿ ಲಯ ತಾಳ ಪ್ರಧಾನವಾದವು. ನರ್ತನಕಾರರು ಲಯಗಳ ಮತ್ತು ತಾಳಗಳ ವೈಚಿತ್ರ್ಯವನ್ನು ತಮ್ಮ ಅರ್ಥಶೂನ್ಯ ಸಾಂಕೇತಿಕ ಅಕ್ಷರಗಳಿಂದ ಮಾಡುವಂತೆ ಹರಿದಾಸರು ಸುಳಾದಿಗಳಲ್ಲಿ ಅರ್ಥಯುಕ್ತವಾದ ಶಬ್ದಗಳನ್ನು ಜೋಡಿಸಿ ಆ ವೈಚಿತ್ರ್ಯವನ್ನೂ ವೈವಿಧ್ಯವನ್ನೂ, ಕಲಾ ಕೌಶಲ್ಯವನ್ನೂ ವ್ಯಕ್ತಮಾಡಿರುವರು.

ಹರಿದಾಸರು ವಿಶೇಷವಾಗಿ ರಚಿಸಿರುವುದೆಂದರೆ ಪದಗಳು. ಇವುಗಳಲ್ಲಿ ಉದ್ಗ್ರಾಹ ಅಥವಾ ಪಲ್ಲವಿ, ಧ್ರುವ ಅಥವಾ ಅನುಪಲ್ಲವಿ, ಮತ್ತು ಆಭೋಗ ಅಥವಾ ನುಡಿ ಈ ಮೂರು ಧಾತುಗಳಿರುವುವು. ಉಗಾಭೋಗದಲ್ಲಿ 5 ಧಾತುಗಳಲ್ಲಿ ಎರಡು ಧಾತುಗಳಿದ್ದರೂ ಸಾಕು. ಆದರೆ ಪದಗಳಲ್ಲಿ ಮಾತ್ರ ಮೂರು ಧಾತುಗಳಿರಬೇಕು. ಜಯದೇವನ ಅಷ್ಟಪದಿಯಲ್ಲೂ ಆಚಾರ್ಯರ ದ್ವಾದಶಸ್ತೋತ್ರದಲ್ಲಿಯೂ ಎರಡೇ ದಾತುಗಳಿರುವುವು. ಆದರೆ ಹರಿದಾಸರು ರಚಿಸಿದ ಪದಗಳು ದೇಶಿಯ ಗೀತಗಳಲ್ಲಿ ಒಂದಾಗಿದ್ದು ರಾಗ ಮತ್ತು ಲಯ ಪ್ರಧಾನ ಗೀತೆಗಳ ಸಾಮರಸ್ಯ ರೂಪವಾಗಿರುವುವು. ಇದನ್ನು ಪ್ರಚಾರಕ್ಕ ತಂದವರೂ ಹರಿದಾಸರೇ. ಇದರಲ್ಲಿ ಪಲ್ಲವಿಯನ್ನು ವಿಲಂಬದಿಂದಲೂ, ಅನುಪಲ್ಲವಿಯನ್ನು ಮಧ್ಯ ದ್ರುತದಲ್ಲಿಯೂ, ಮೂರನೆಯದಾದ ನುಡಿಗಳನ್ನು ಮಧ್ಯ ದ್ರುತಲಯದಲ್ಲಿಯೂ ಹಾಡಬೇಕು. ಪಲ್ಲವಿ, ಅನುಪಲ್ಲವಿ, ಮತ್ತು ನುಡಿಗಳ ಮಧ್ಯದಲ್ಲಿ ಸ್ವರಸಂಗತಿ ಅಥಾವ ಆಲಾಪಕ್ಕೆ ಅವಕಾಶವಿರುತ್ತದೆ. ಲಯಪ್ರಧಾನವಾದ್ದರಿಂದ ಸುಳಾದಿಗಳಲ್ಲಿ ಆಲಾಪಕ್ಕೆ ಅವಕಾಶವಿರುವುದಿಲ್ಲ. ಹರಿದಾಸರು ರಚಿಸಿದ ಈ ಪದಗಳನ್ನನುಸರಿಸಿಯೇ ತ್ಯಾಗರಾಜಾದಿಗಳೆಲ್ಲ ಕೃತಿಗಳನ್ನು ರಚಿಸಿದರು. ಇಂತಹ ಪದಗಳಲ್ಲಿ ಪಲ್ಲವಿ, ಅನುಪಲ್ಲವಿ, ಮತ್ತು ನುಡಿಗಳು ಬೇರೆಬೇರೆ ರಾಗ ತಾಳಗಳಲ್ಲೂ ಹಾಡಲು ಬರುವುದರಿಂದ ಇವು ಗಾಯನ, ವಾದನ, ನರ್ತನ, ಈ ಮೂರಕ್ಕೂ ವಿಶೇಷ ಉಪಯೋಗಕಾರಿಗಳಾಗಿವೆ. ಹರಿದಾಸ ಸಾಹಿತ್ಯದಲ್ಲಿ ಮಾತ್ರ ಇಂತಹ ಸಾಹಿತ್ಯ ದೊರಕುವುದೇ ಹೊರತು ಇತರ ಸಾಹಿತ್ಯದಲ್ಲಿ ದೊರಕಲಾರದು.

ಕೊನೆಯದಾಗಿ ತಾಳಗಳಲ್ಲಿಯೂ ಹರಿದಾಸರು ದೊಡ್ಡ ಕ್ರಾಂತಿಯನ್ನೇ ಮಾಡಿದ್ದಾರೆನ್ನಬಹುದು. ಸುಳಾದಿಗಳಿಗೆ ಧ್ರುವಾದಿ ತಾಳಗಳನ್ನು ಉಪಯೋಗಿ ಸಿದ್ದರೂ ಪದಗಳಿಗೆ ಮಾತ್ರ ಚಾಪು ತಾಳಗಳನ್ನೇ ಹೆಚ್ಚಾಗಿ ಬಳಸಿದ್ದಾರೆ. ಅದರಲ್ಲೂ ಝುಂಪೆತಾಳವನ್ನೇ ಹೆಚ್ಚಾಗಿ ಉಪಯೋಗಿಸಿರುವುದಕ್ಕೂ ಒಂದು ಕಾರಣವಿದೆ. ಹರಿದಾಸರು ಹರಿಕೀರ್ತನೆಗಾಗಿ ಪದಗಳನ್ನು ಉಪಯೋಗಿಸುತ್ತಿದ್ದುದರಿಂದ ಸರ್ವರಿಗೂ ಸುಲಭವಾಗಿಯೂ ಒಂದೇ ಕೈಯಲ್ಲಿ ಚಿಟಿಕೆಗಳಿಂದ ತಾಳಹಾಕಲು ಅನುಕೂಲವಾಗಿಯೂ ಇದ್ದ ತಾಳವನ್ನೇ ಹೆಚ್ಚು ಪ್ರಚಾರಕ್ಕ ತಂದಿರುವರು.

ಹರಿದಾಸರು ಬರಿಯ ಸಂಗೀತ ಪರಿಣತರೆಂದಾಗಲೀ ಕವಿಗಳೆಂದಾಗಲೀ ಭಾವಿಸಬಾರದು. ಅವರು ತಾವು ರಚಿಸಿದ ಪದಗಳು ಸಮಾಜದಲ್ಲಿ ಪ್ರಚಾರವಾಗಿ

ಪ್ರಾಚೀನ ಸಂಸ್ಕೃತಿಯು ಎಲ್ಲ ಕಡೆಯೂ ಹರಿದು ಜನರು ಉನ್ನತಿಯನ್ನು ಹೊಂದಲಿ ಎಂಬ ಭಾವದಿಂದ ತಮ್ಮ ಅಮೋಘ ಕೃತಿಗಳನ್ನು ಜನಗಳಲ್ಲಿ ಜೀವಂತವಾಗಿ ಉಳಿಯುವಂತೆ ಪ್ರಚುರಪಡಿಸಿದರು. ಅಂತೆಯೇ ನೂರಾರು ವರ್ಷಗಳಾಗಿದ್ದರೂ ದಾಸರುಗಳ ಪದಗಳು ಇಂದಿಗೂ ಎಲ್ಲ ಅಕ್ಷರಸ್ಥ, ಅನಕ್ಷರಸ್ಥರ ಬಾಯಲ್ಲೂ ಸಂಗೀತಜ್ಞಾನವಿಲ್ಲದಿದ್ದರೂ, ಬರುತ್ತಿರುವುದಲ್ಲದೆ ಆಯಾ ಪದಗಳ ಧಾಟಿಯೂ ಒಂದೇ ರೀತಿ ಬಳಕೆಯಲ್ಲಿವೆ. ಇಂತಹ ಸಂಸ್ಕಾರ ಕನ್ನಡಿಗರಿಗಿದ್ದ ಹಾಗೆ ಇತರರಲ್ಲಿ ಇಲ್ಲ. ಇದಕ್ಕೆ ಕಾರಣ ನಮ್ಮಲ್ಲಿ ದಾಸರುಗಳಿಂದ ರಚಿತವಾದ ಹಾಡಲರ್ಹವಾದ ಸಂಗೀತ, ಸಾಹಿತ್ಯ ಮತ್ತು ಅದನ್ನು ಪುನಃ ಪುನಃ ಕೇಳುತ್ತಿರುವುದೇ ಆಗಿದೆ. ಆದ್ದರಿಂದ ಹರಿದಾಸರು ಭಾರತೀಯ ತತ್ತ್ವಶಾಸ್ತ್ರಪ್ರಪಂಚದಲ್ಲಿ ಎಂತಹ ಅಮೋಘ ಕೆಲಸ ಮಾಡಿರುವರೋ ಸಂಗೀತಲೋಕದಲ್ಲಿ ಅಷ್ಟೇ ಶಾಶ್ವತವಾದ ಕೆಲಸ ಮಾಡಿರುವರು. ಕನ್ನಡ ಹರಿದಾಸರುಗಳೆಲ್ಲರಿಗೂ ಮುಖ್ಯ ಪ್ರತಿನಿಧಿಗಳಾದ ಪುರಂದರದಾಸರ ಮಹತ್ತ್ವವನ್ನು ಗಾನಮಾಡಿರುವ ಮದ್ರಾಸ್ ಮ್ಯೂಸಿಕ್ ಆಕ್ಯಾಡೆಮಿಯವರ ತ್ರೈಮಾಸಿಕ ಪತ್ರಿಕೆಯ 1942–VOL XIII PI – VI ರ ಕೆಲ ಅಂಶಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುವುದು.

Sri prurandaradas

The personality of sri Purandaradas is the greatest that a combination of spirituality art and culture has produced. .... In the realm of music his services are precious beyond estimate. He is the father of the Karnatik system of music which stands un paralelled as the most evolved system of music in the world. His compositions range from the simplest Svaravalis and Gitas to the elaborate and complex Suladis. His synthesis of Sahityakshara and Svara, Raga, Laya is the very acme of perfection..... India, nay the world has not produced a greater composer than Purandaradas......... It is no dsiparagement even to Tyagaraja to say that his compositions in the main furnished the inspiritions for the latter's out-pourings. It is learned on good authority that the monther of Tyagaraja was familiar with a large number the Kirtanas of Purandaradas and her frequent singing of them left such lasting impression on young Thyagaraja that in later life, he found their influence irresistible in shaping his style in Sangita and Sahitya. Muttuswamy Dikshitar though a composer with a diistinctive origional style of his own was yet a faithful adherent to the tradition of Purandaradas in the frequent use he made of the suladi Sapta

Talas and in the shaping of melodic forms of antique ragas embodied in the Devaranamas..............

Purandradas has been justly termed the father of carnatic music. He was not merely a composer, but a Lakshanakara of the highest calibre. The system of South Indian music as we now have it is entirely his gift.............

It is stated that Adippa Iyah modelled his Tanavarnas on those of Purandaradas....... Some of his compositions contains the Nayaka Nayaki bhava and but for the language they are quite apt to be fancied as Kshetragna's. There is not doubt that they served to inspire the compositions of the latter. In Bhava, Raga and Tala, they are the prototype for all Pada Composers.

It is usual to estimate a composer's contribution to carnatic music, but what words can adequately convey the magnitude of the achievement of him who was the author and founder of that very system of which we are proud inheritors ; who endowed and enriched with hundredss of thousands of compositions : who never sang: but composed and never composed but sang whose creations bearing the sad touch of humanity are of perennial interest to mankind. His place as Vaggeyakara and Lakshnakara is unique. He is to carnatic music what Valmiki is for Sanskrit Literature. He is a mighty personality the like of whome it takes the world a millenium to produce.

XVII ಹರಿದಾಸರ ಭಾಷೆ ಮತ್ತು ಸಾಹಿತ್ಯ

ಹರಿದಾಸರು ಭಕ್ತಿಯ ಉದ್ರೇಕದಿಂದ ಸಾಹಿತ್ಯ ಸೃಷ್ಟಿಸಿದರು. ಮಹಾಜ್ಞಾನಿಗಳಾಗಿದ್ದುದರಿಂದ ಅವರ ಸಾಹಿತ್ಯ ಸಮಗ್ರ ಶಾಸ್ತ್ರಾರ್ಥವನ್ನೆಲ್ಲಾ ಒಳಗೊಂಡಿತು. ಹರಿದಾಸ ರಚನೆಗಳು ಹೆಚ್ಚಾಗಿ ಧಾರ್ಮಿಕ ಸ್ವರೂಪದ್ದಾದ್ದರೂ ಸಾಹಿತ್ಯದಲ್ಲಿ ಅವುಗಳ ಸ್ಥಾನ ಬಹಳ ಹಿರಿದಾದದ್ದು. ಕನ್ನಡ ಸಾಹಿತ್ಯದಲ್ಲಿ ಹರಿದಾಸರದು ಅತಿಮುಖ್ಯವಾದ ಅಧ್ಯಾಯವು. ಸುಮಾರು ಆರೇಳು ಶತಮಾನಗಳುಷ್ಟು ದೀರ್ಘಕಾಲ ಕನ್ನಡಸಾಹಿತ್ಯ ವಾಹಿನಿಯನ್ನು ಜೀವಂತವಾಗಿ ನಡೆಸಿಕೊಂಡು ಬಂದದ್ದಲ್ಲದೆ ಅದಕ್ಕೆ ಹೆಚ್ಚಿನ ಸಿರಿ ತಂದೊಡ್ಡಿದ ಕೀರ್ತಿ ಹರಿದಾಸರದು. ಕರ್ನಾಟಕದ ಉತ್ತರ ಗಡಿಯಿಂದ ಹಿಡಿದು ದಕ್ಷಿಣ ಗಡಿಯ ವರೆಗೂ ಎಲ್ಲ ಭಾಗಗಳಿಂದಲೂ ದಾಸರುಗಳಾಗಿ ವಾಙ್ಮಯ ಸೃಷ್ಟಿಸಿದ್ದಾರೆ. ಸಾಮಾನ್ಯವಾಗಿ ಪಂಪ, ರನ್ನ,ಮೊದಲಾದ ಅತ್ಯಂತ ಪ್ರಾಚೀನಕಾಲದ ಹಳಗನ್ನಡ ಕವಿಗಳೂ ನವೀನ ಸಾಹಿತ್ಯ ಪ್ರಪಂಚಕ್ಕೂ ಹರಿದಾಸರುಗಳು ನಡುವಣ

ಕೊಂಡಿಯಂತಿರುವರೆಂದೂ ಬಳಸಿರುವ ಕನ್ನಡಕ್ಕೆ ನಡುಗನ್ನಡವೆಂದು ಹೇಳುವುದು. ಸುಪ್ರಸಿದ್ಧವಿದೆ.

ಹರಿದಾಸರ ಕೃತಿಗಳಲ್ಲಿ ಸಂಗೀತದ ಸ್ಥಾನ ಅತಿ ಮುಖ್ಯವಾದದ್ದು. ಸಂಗೀತದ ಪದ್ಧತಿಯನ್ನು ಬಿಟ್ಟರೆ ಅವರು ಛಂದೋವೃತ್ತಗಳಲ್ಲಿ ಸಾಹಿತ್ಯ ರಚನೆ ಮಾಡಿರುವರು. ಆ ಛದರಸ್ಸುಗಳು ಅನೇಕವಾಗಿರುವುವು.

ವೃತ್ತನಾಮಗಳು ತಾಳವೃತ್ತ ಪದ್ಧತಿಗೂ ಛಂದೋವೃತ್ತ ಪದ್ಧತಿಗೂ ನಡುವಿನದೆಂದು ಹೇಳಬಹುದು. ಸಂಸ್ಕೃತದಲ್ಲಿ ಜಯದೇವನಿಂದ ರಚಿತವಾದ ಗೀತ ಗೋವಿಂದದಲ್ಲಿ ಒಂದು ಧ್ರುವಪದ ಗಾಯನವೂ, ಒಂದು ವೃತ್ತ ಶ್ಲೋಕವೂ ಕಂಡು ಬರುವುದು. ಕನ್ನಡ ವೃತ್ತನಾಮಗಳೂ ಇದೇ ವರ್ಗಕ್ಕೆ ಸೇರಿದವು. ಗೋಪಾಲದಾಸರ 'ರಕ್ಷಿಸೋ ವೆಂಕಟಗಿರಿರಾಜಾ' ವ್ಯಾಸರಾಯರ 'ಕೇಳಯ್ಯ ಎನಮಾತ ಪ್ರಾರ್ಥನೆ' ಎಂಬುವು ಅತ್ಯಂತ ಪ್ರಸಿದ್ಧವಾದ ವೃತ್ತನಾಮಗಳು.ಈ ವೃತ್ತನಾಮಗಳಲ್ಲಿನ ಪದ್ಯಗಳು ಕನ್ನಡ ಷಟ್ಪದಿಗಳಂತಿರದೆ ಸಂಸ್ಕೃತದ ಶಾರ್ದೂಲ ವಿಕ್ರೀಡಿತ ಮತ್ತು ಸ್ರಗ್ಧರಾ ಮೊದಲಾದ ವೃತ್ತಗಳಿಗೆ ಹೋಲುವುವು.

ಇನ್ನು ಮಾತ್ರಾವೃತ್ತಗಳಲ್ಲಿ ಪ್ರಸಿದ್ಧಪಾದವು. ಷಟ್ಪದಿಗಳು. ಇವು ಆರುವಿಧ. ಹರಿದಾಸರು ಇವುಗಳಲ್ಲಿ ಭಾಮಿನಿ ಮತ್ತು ವಾರ್ಧಿಕ ಷಟ್ಪದಿಗಳನ್ನು ವಿಶೇಷವಾಗಿ ಬಳಸಿರುವರು. ಇವು ಹಾಡಿನ ರೂಪದಲ್ಲಿರುವುದೂ ಉಂಟು.

ಸಮಾನ ಮಾತ್ರಗಣಗಳುಳ್ಳ ಬಹುಪಾದಗಳಿಂದ ಕೂಡಿದ ವೃತ್ತವು ರಗಳೆ ಯೆನಿಸುವುದು. ಇದನ್ನೂ ದಾಸರುಗಳೂ ಉಪಯೋಗಿಸಿರುವರು.

ದಂಡಕವೆಂಬುದು ಪಾದವಿಭಾಗವಿಲ್ಲದೆ ದಂಡಾಕಾರವಾಗಿರುವ ಶಬ್ಧರಚನಾ ವಿಶೇಷವು. ಶ್ರೀಪಾದರಾಜರ ಲಕ್ಷ್ಮೀ ನೃಸಿಂಹ ಪ್ರಾದುರ್ಭಾವ ದಂಡಕವು ಈ ಶೈಲಿಯಲ್ಲಿ ಉತ್ತಮವಾದುದು.

ಇವಲ್ಲದೆ ದ್ವಿಪದಿ, ಚೌಪದಿ, ಸಾಂಗತ್ಯ, ತ್ರಿಪದಿ ಮೊದಲಾದ ಕೆಲವು ಮಾತ್ರಾ ವೃತ್ತಗಳು ಹಾಡಿನ ರೂಪದಿಂದ ಇರುವುವು. ಇವುಗಳಲ್ಲಿ ಮಾತ್ರಾವೃತ್ತಗಳು ಹಾಡಿನ ರೂಪದಿಂದಿರುವುವು. ಗಣಗಳು ಹಲವೆಡೆ ಸ್ಪಷ್ಟವಾಗಿ ತೋರುವುವು. ಮತ್ತೆ ಕೆಲವೆಡೆಗಳಲ್ಲಿ ಹೇಳುವಾಗ ಲಯವನ್ನನುಸರಸಿ ಅಕ್ಷರಗಳನ್ನೆಳೆಯುವುದರಿಂದ ಮಾತ್ರಾ ಗಣಗಳನ್ನು ತಿಳಿಯಬೇಕು. ಜಗನ್ನಾಥದಾಸರ ತತ್ವಸುವಾಲಿಯು, ಕನಕದಾಸರ ಕೆಲವು ಕೃತಿಗಳೂ ಆ ಜಾತಿಗೆ ಸೇರಿವೆ.

ಇವುಗಳಲ್ಲಿ ಕೆಲವು ಜಾನಪದ ಛಂದಸ್ಸುಗಳು ಹಳ್ಳಿಯವರಿಗೂ, ಸಾಮಾನ್ಯ ಜನರಿಗೂ ವಿಶೇಷವಾಗಿ ಹಿಡಿಯುವ ಈ ಪದಬಂಧಗಳಲ್ಲೇ ದಾಸರು ಸಾಹಿತ್ಯ ನಿರ್ಮಾಣ ಮಾಡಿರುವರು.

ಹರಿದಾಸರ ರಚನೆಯಲ್ಲಿ ಇನ್ನೊಂದು ವಿಶೇಷವುಂಟು. ಇವರ ಭಾಷೆ ನಡುಗನ್ನಡ. ಹಳೆಗನ್ನಡದಲ್ಲಿನ ಅಕ್ಷರ, ಶಬ್ದ ಮತ್ತು ಸಮಾಸ ಪ್ರಯೋಗಗಳು ಮರೆಯಾಗುತ್ತಾ ಬಂದು, ಹೊಸ ಪ್ರಯೋಗಗಳು ರೂಢಿಯಲ್ಲಿ ಬಂದ ಭಾಷೆಗೆ ಹೊಸಗನ್ನಡವೆನ್ನುವರು. ಇವೆರಡರ ಮಧ್ಯಶೈಲಿಯು ನಡುಗನ್ನಡವೆನಿಸುವುದು. ದಾಸರ ಭಾಷೆಯು ಈ ದೃಷ್ಟಿಯಿಂದ ಮಾತ್ರ ನಡುಗನ್ನಡವಲ್ಲ. ದಾಸರುಗಳು ಕ್ಲಿಷ್ಟವಾದ ವೇದಾಂತ ತತ್ತ್ವಗಳನ್ನು ಸಾಮಾನ್ಯ ಜನತೆಗೆ ಉಪದೇಶಿಸುವ ಭಾರ ತೆಗೆದುಕೊಂಡಿದ್ದರಿಂದ ಅವರ ಶಬ್ದ ರಚನಾ ಶೈಲಿಯೂ ಅದಕ್ಕೆ ತಕ್ಕಂತೆ ಮಾರ್ಪಟ್ಟಿತು. ಹಿಂದೆ ಹಳಗನ್ನಡದಲ್ಲಿ ಗ್ರಾಂಥಿಕ ಭಾಷೆಯೇ ಇವುಗಳಲ್ಲಿ ಉಪಯೋಗಿಸಲ್ಪಡುತ್ತಿತ್ತು. ಈ ಗ್ರಾಂಥಿಕ ದೇಶಶಬ್ದಗಳನ್ನು ವಿಶೇಷ ಬಳಸುವ ಆಂಡಯ್ಯನ ಕಬ್ಬಿಗರ ಕಾವ್ಯದ ಭಾಷೆಯೊಂದು, ಹೆಚ್ಚಿನ ಸಂಸ್ಕೃತಪದ ಪ್ರಯೋಗ ಉಳ್ಳ ಜೈಮಿನಿ ಭಾರತದಂತಹ ಭಾಷೆಯೊಂದು. ಹರಿದಾಸರು ಈ ಗ್ರಾಂಥಿಕ ಭಾಷೆಗೆ ಹೆಚ್ಚಾಗಿ ಪ್ರಾಶಸ್ತ್ಯ ಕೊಡಲಿಲ್ಲ. ಅವರು ಒಮ್ಮೆಲೆ ಜನರು ಆಡುವ ಭಾಷೆಯನ್ನೇ ತಮ್ಮ ರಚನೆಯಲ್ಲಿ ಭಟ್ಟಿ ಇಳಿಸಿದರು. ಈ ಬಳಸುವ ಭಾಷೆ ಸುಸಂಸ್ಕೃತ ಸಮಾಜದ ಉಚ್ಚತರಗತಿಯವರದಾದಲ್ಲಿ ಸಂಸ್ಕೃತ ಮಿಶ್ರಿತವಾಗಿ ರೂಢಶಬ್ದಗಳನ್ನೊಳಗೊಂಡಿರುವುದು. ಅಸಂಸ್ಕೃತರಾದ ಹಳ್ಳಿಗರ ಭಾಷೆಯಾದಲ್ಲಿ ಗ್ರಾಮ್ಯ ಮತ್ತು ದೇಶ್ಯ ಶಬ್ದಗಳನ್ನೇ ಹೆಚ್ಚು ಹೊಂದಿರುವುದು. ದಾಸರು ಈ ಎರಡು ತರಹೆಯ ಬಳಕೆಯ ಭಾಷೆಗಳನ್ನು ತಮ್ಮ ಸಾಹಿತ್ಯಕ್ಕೆ ಅಳವಡಿಸಿಕೊಂಡಿರುವರು. ಹೀಗೆ ತಮ್ಮ ಭಾಷೆಯನ್ನು ಆರಿಸಿಕೊಡಿದ್ದರಿಂದ ಅವರ ಅಲಂಕಾರ ಪ್ರಯೋಗಗಳಿಗೂ ರಸಪುಷ್ಟಿಗೂ, ಸಾಹಿತ್ಯದ ಓಜಸ್ಸಿಗೂ ಹೆಚ್ಚಿನ ಕಳೆ ಬಂದಿತೇ ವಿನಃ ಯಾವ ಧಕ್ಕೆಯೂ ಉಂಟಾಗಲಿಲ್ಲ. ಹರಿದಾಸರುಗಳ ಈ ನೂತನ ಮಾರ್ಗಾವಿಷ್ಕರಣೆ ಹೊಸಗನ್ನಡ ಸಾಹಿತ್ಯದ ಬೆಳೆವಣಿಗೆಗೆ ವಿಶೇಷ ಪ್ರೋತ್ಸಾಹ ಕೊಟ್ಟಿತೆನ್ನಲೇನೂ ಅಡ್ಡಿ ಇಲ್ಲ. ಹರಿದಾಸರ ಕೃತಿಗಳು ಈ ಬಳಕೆಯ ಭಾಷೆಯನ್ನುಪಯೋಗಿಸಿದಾದ್ರಿಂದಲೇ ಇಂದಿಗೂ ಜನಪ್ರಿಯವಾಗಿರುವುದಲ್ಲದೆ ಮುಂದೆ ನೂರಾರು ವರ್ಷಗಳು ಕಳೆದರೂ ಇದೇರೀತಿಯಾಗಿ ಜನರ ಸಾಹಿತ್ಯವಾಗಿ ಉಳಿಯುವುದು.

XV iii. ಜಗತ್ತಿಗೆ ಹರಿದಾಸರ ಸಂದೇಶ

ಹರಿದಾಸಸಾಹಿತ್ಯ ಭಾರತದ ಆರ್ಯಸಂಸ್ಕೃತಿಯ ಎಲ್ಲ ಅಂಗಗಳನ್ನೂ ಸಮಗ್ರವಾಗಿ ಅಳವಡಿಸಿಕೊಂಡು ಬೆಳೆದಿದೆ. ಕೆಲ ಪಂಡಿತರು ಭಾರತದ ಧಾರ್ಮಿಕ ಸಾಹಿತ್ಯದಲ್ಲಿ ವೈದಿಕ, ಪೌರಾಣಿಕ, ದಾರ್ಶನಿಕ,ಭಾಗವತ ಭಾಗಗಳನ್ನು ಪ್ರತ್ಯೇಕವಾಗಿ ವಿಭಾಗಮಾಡಿ, ಒಂದಕ್ಕೊಂದು ಭಿನ್ನಾರ್ಥ ಪ್ರತಿಪಾದಕಗಳೆಂದೂ ಆತಏವ ಭಿನ್ನಮನೋಧರ್ಮಗನ್ನು ಅವು ಪ್ರತಿಬಿಂಬಿಸುವುದೆಂದೂ ಹೇಳಿರುವರು. ಹರಿದಾಸರು ಅದನ್ನು ಮುಖ್ಯವಾಗಿ ತೊಡೆದುಹಾಕಿ "ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯಚ ಪುನಃ ಪುನಃ |ಇದಮೇಕಂ

ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ । ವೇದೆ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ । ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ, ಸ್ಮರ್ತವ್ಯಃ ಸತತಂ ವಿಷ್ಣುಃ ವಿಸ್ಮರ್ತವ್ಯೋ ನಜಾತುಚಿತು, ಸರ್ವೇ ವಿಧಿನಿಷೇದಾಃ ಸ್ಯುಃ ಏತಯೋರೇವ–'' ಇತ್ಯಾದಿ ವಾಕ್ಯರಹಸ್ಯವನ್ನೇ ತಮ್ಮ ರಚನೆಯಲ್ಲಿ ಹೊರಗೆಡ ವಿದ್ದಾರೆ. ಭಾರತದ ಸಮಗ್ರ ಸಂಸ್ಕೃತಿಯು ಹರಿಭಕ್ತಿಯನ್ನು ಉಪದೇಶಿಸುವುದು. ಇಹಜೀವನದ ವಿವಿಧ ವಿಧಾಯಕ ಕ್ರಮಗಳೂ ಇದಕ್ಕೆ ಪೋಷಕವಾಗಿಯೇ ಬೆಳೆಯಬೇಕು ಎಂಬುದನ್ನು ನಿಖರವಾಗಿಯೂ, ಸ್ಪಷ್ಟವಾಗಿಯೂ ಹೇಳಿರುವರು.

ಜೀವನವು ರಸಮಯವಾದುದು. ಶೃಂಗಾರಾದಿ ವಿವಿಧ ರಸಭಾವಗಳು ಜೀವನಕ್ಕೆ ಅತ್ಯಂತ ಪೋಷಕವು. ಅಂತೆಯೇ ಹರಿದಾಸರುಗಳು ಆ ರಸಗಳನ್ನು ಕೃಷ್ಣಾವತಾರದ ಲೀಲಾವಿಲಾಸದ ಸುಂದರ ವರ್ಣಗಳಲ್ಲಿ ಬೆಳೆಸಿದರು. ಇಹಜೀವನದಲ್ಲಿ ಅದಕ್ಕೆ ವಿಶೇಷ ಪ್ರಾಶಸ್ತ್ಯ ಕೊಟ್ಟಲ್ಲಿ ಮನುಷ್ಯನು ತನ್ನ ಜೀವನದ ಕೇಂದ್ರದತ್ತ ದೃಷ್ಟಿ ಹೊರಳಿಸಲಾರನೆಂಬುದೆ ಅವರ ಅಭಿಪ್ರಾಯ. ಇದರಂತೆಯೇ ಅವರು ಮನುಷ್ಯನ ಜೀವನದಲ್ಲಿ ಅನಿವಾರ್ಯವಾಗಿ ಕಾಣಿಸಿಕೊಳ್ಳುವ ಕಾಮ ಕ್ರೋಧಾದಿ ದೌರ್ಬಲ್ಯಗಳಿಗೂ ಪುಣ್ಯಕ್ಕೆ ಹಾದಿ ಹಾಕಿ ಹರಿನಿಷ್ಠೆ ಹೆಚ್ಚಿಸುವಂತಹ ಸಮಿಚೀನ ಮುಕ್ತದ್ವಾರ ತೆಗೆದು, ಎಲ್ಲ ಬಗೆಯಲ್ಲೂ ಜೀವನ ಹರಿಭಕ್ತಿಯತ್ತಲೇ ಕೇಂದ್ರೀಕರಿಸಲೆಂದು ಹೆಣಗಿರುವರು. ಇಂತಹ ಸಮಗ್ರದೃಷ್ಟಿ ಇನ್ನಾವ ಸಂತರ ಇತಿಹಾಸದಲ್ಲೂ ಕಾಣಿಸುವುದಿಲ್ಲ.

ಹರಿಭಕ್ತಿಯೆಂಬ ವಿಶಾಲವಾದ ಈ ತತ್ತ್ವದ ಆಂತರ್ಯದಲ್ಲಿನ ಪ್ರಮೇಯಗಳನ್ನು ಅವರು ವಿಸ್ತಾರವಾಗಿ ರೂಪಿಸಿದ್ದರೂ, ಒಂದು ವಿಚಾರವು ಮಾತ್ರ ಇದರಲ್ಲಿ ಗಮನಾರ್ಹವಾದುದು. ಅದೆಂದರೆ ಜಗದೊಡೆಯನಾದ ಹರಿಯು ಅಧೀಶ್ವರನಾಗಿ, ಲೋಕಪಾಲಕನಾಗಿ, ಅಗಮ್ಯನಾಗಿ, ದೂರದಲ್ಲಿ ಮಾತ್ರ ಇರುವನೆಂಬ ಭಾವನೆ ಕೂಡದು. ಹರಿಯ ಈ ವೈಭವವಿಶೇಷಕ್ಕಿಂತ ಹರಿಯು ಜೀವರುಗಳ ಸುಹೃತ್ತಮ ; ಸದಾ ಜೀವರ ಒಳಗೂ ಹೊರಗೂ ಸುತ್ತಲೂ ಇದ್ದು ಜೀವರುಗಳ ರಕ್ಷಕನಾಗಿದ್ದಾನೆಂಬ ಭಾವನೆ ಜೀವರ ಉದ್ಧಾರಕ್ಕೆ ಅತಿ ಮುಖ್ಯವಾದುದು. ಇದನ್ನು ಪುನಃ ಪುನಃ ಮನನಾಟುವಂತೆ ಉಪದೇಶಿಸಿದವರು ಹರಿದಾಸರು. ಅವರು ಹರಿಯ ಆ ಅಂತರ್ಯಾಮಿತ್ವ, ವ್ಯಾಪ್ತತ್ವ ಧರ್ಮಗಳ ಉಪದೇಶಮಾಡಿ ಜನಜೀವನಲ್ಲಿ ದೇವರ ಭಾವನೆ ಸದಾಕಾಲ ಜಾಗ್ರತವಾಗಿರುವಂತೆ ಮಾಡುವುದರಲ್ಲಿ ಯಶಸ್ವಿಗಳಾಗಿದ್ದಾರೆಂದು ಅವರ ಸಾಹಿತ್ಯವನ್ನು ನೋಡಿದಲ್ಲಿ ಧಾರಾಳವಾಗಿ ಹೇಳಬಹುದು. ಸತ್ಕರ್ಮಾಚರಣೆಯು, ಶಾಸ್ತ್ರಜ್ಞಾನವು, ಸತ್ಸಂಗವು, ಭಕ್ತಿಯು, ವಿಷಯ ವೈರಾಗ್ಯವೂ ಎಲ್ಲವೂ ಈ ಜಾಗೃತಿಯನ್ನು ಉಂಟುಮಾಡುವುದಕ್ಕಾಗಿಯೇ. ಈ ಅನುಸಂಧಾನವನ್ನು ಜೀವಂತವಾಗಿ ಜನತೆಯಲ್ಲಿ ಬೆಳೆಸಿದವರು ಹರಿದಾಸರು. ಅವರು ಭಗವದ್ದರ್ಶನ ಪಡೆದ

ಅಪರೋಕ್ಷಜ್ಞಾನಿಗಳಾದ್ದರಿಂದ ಅವರು ಉಪದೇಶಿಸಿದ ಸ್ವಯಂ ಅನುಭೂತ ಭಗವಚ್ಚಿಂತನೆಯು ಜನತೆಯಮೇಲೆ ಅದ್ಭುತ ಪರಿಣಾಮ ಮಾಡಿತು. ವೇದಾದಿ ಶಾಸ್ತ್ರವನ್ನು ಓದಿದರಾಗಲಿ, ಪುರಾಣಶ್ರವಣ ಮಾಡಿದರಾಗಲೀ ವೇದಾಂತ ದರ್ಶನಗಳನ್ನು ಅಭ್ಯಾಸಿಸಿದರಾಗಲಿ ಭಗವದನುಸಂಧಾನಕ್ರಮವು ಇಷ್ಟು ನಿಷ್ಕೃಷ್ಟವಾಗಿ ಮನಸ್ಸಿಗೆ ನಾಟಲಾರವು. ಪರಲೋಕ, ಬ್ರಹ್ಮ ಈ ವಿಚಾರದಲ್ಲೇ ಬಹಳ ಚರ್ಚೆ ಮಾಡುತ್ತಾ ಎಲ್ಲಾ ಶಾಸ್ತ್ರಗಳೂ ಕೇಂದ್ರತತ್ತ್ವವನ್ನುಪದೇಶಿಸುವುದನ್ನು ಸಂಕೋಚ ಮಾಡಿಬಿಡುವುದು. ಅದನ್ನೇ ಹರಿದಾಸರುಗಳು ಎತ್ತಿಹಿಡಿದು ಭಾರತ ಸಂಸ್ಕೃತಿಯ ಮುಖ್ಯ ಹೃದಯವನ್ನು ಹೊರಗೆಡದರು. ಹಿಂದಿನಕಾಲದಲ್ಲಾಗಲೀ ಈಗಿನ ಕಾಲ ದಲ್ಲಾಗಲೀ ಮುಂದಿನ ಅನೇಕ ಶತಮಾನಗಳಲ್ಲಾಗಲೀ ಜನರು ಎಂತಹ ಕಾರ್ಯ ಕ್ಷೇತ್ರಗಳಲ್ಲಿ ಮಗ್ನರಾಗಿದ್ದರೂ, ಜೀವನದ ಈ ಮುಖ್ಯ ತತ್ತ್ವವನ್ನು ಮನವರಿಕೆ ಮಾಡಿ ಕೊಂಡಲ್ಲಿ ವೈಯುಕ್ತಿಕ, ಸಾಮಾಜಿಕ ಕಲ್ಯಾಣವು ಇಹಪರಗಳೆರಡರಲ್ಲೂ ಆಗುವುದು. ಸಾವಿರಾರು ವರ್ಷ ತಪಸ್ಸು ಮಾಡಿ ತಿಳಿಯಬೇಕಾದ ಇಂತಹ ಸೂಕ್ಷ್ಮತತ್ತ್ವವನ್ನು ಹರಿದಾಸರು ಜನಾನುಕಂಪದಿಂದ ವಿವಿಧ ರಸಭಾವಗಳಲ್ಲಿ ಪುನಃ ಪುನಃ ಸಾರಿ ಸಾರಿ ಹೇಳಿ ಮಾನವಕೋಟಿಯ ಉದ್ಧಾರದ ಮಾರ್ಗ ತೋರಿಸಿಕೊಟ್ಟಿದ್ದಾರೆ. ಹರಿದಾಸರ ಈ ಅಮರ ಸಂದೇಶವನ್ನು ಜಗತ್ತು ಮರೆಯದೆ ಗ್ರಹಿಸಿದಲ್ಲಿ ಜಗತ್ತಿನಲ್ಲಿ ಶಾಶ್ವತ ಶಾಂತಿಯೇರ್ಪಡುವುದರಲ್ಲಿ ಸಂದೇಹವಿಲ್ಲ.

APPENDIX
AUTHOR'S NOTE

on Nature and details of Research

Time And Material

1. I offered myself as a candidate for degree of Doctor of Philosophy and got my name registered in the year 1946, in Kannada, in the faculty of Arts. I chose "A critical study of the Haridasas of Karnatak" as the subject of my Thesis. The only available materials on this subject are pulications of verses and songs of the Haridasas in two editions. The Bangalore Edition of these songs contains less number of songs than the udupi Edition. But the songs in it are more or less faithful to originals whereas the Udupi Edition is much corrupt. This latter also contains some rare compositions though in corrupted forms, weich require critical study.

2. Apart from these two collections of songs and some minor compilatons, there are only a few books giving out some informaton about Haridasas and their compositions. Karnataka Bhaktivijaya of Sr Belur Kesavadas and Haribhaktisudhe of Sri R.R. Diwakar may be mentioned in this connection. But they are mere hand-books meant for general reading and therefore they were of little use to me for a critical study of the Haridasas. I has to start right from the begining to bring out the Thesis.

3. In this connection I was not only guided by my University teacher Sri R.S. Panchamukhi, M.A., but was given some very valuable informa-

tion regarding the historical background for the spread of Vaishnava faith in Karnatak and his work on Dasa Sahitya which appeared in the journal of Kannada Sahitya Parishat, Bangalore was, of great use to me in dealing with Kamabhakthi and other forms of Bahkti and in determining the importance of some of the Haridasas.

4. Though a great bulk of the songs have come in print, there was a necessity of collecting manuscripts of them to determine the correct readings of many verses and to make a detailed study of many published songs. This collection work took nearly two years . I had to tour the whole of Karnataka. As a result of this research, I got two big manuscript collections containing almost all the published songs and many unpublished songs of the Various Haridasas. These two collections were of great help to me in arriving at correct readings of many verses. One of these collections was with one Mr. Hanumantha Rao, Gorebal, Vakil, Lingasugar, Hyderabad State (now in Mysore state) and the other was with Sri Venugopala Das of Tumkur, Mysore state, a renowned Haridasa.

5. I started my work on the basis of these published and unpublished songs of the Various Haridasas. *I claim the entire thesis as original* prepared under valuable guidance of Sri R.S. Panchamukhi.

Main Attempt in the Thesis

6. After carefully studying each verse of the Haridasas, I attempted to classify them under various headings, which forms the main portion of

my Thesis. This new classification of some of the songs is much more than mere editing. The songs have been presented in a particular Order which helps to get at the importance of the intricate doctrines of Vedic theology. In descriptions of Ten Avataras of Vishnu, for example, presentation of the various songs expressing rati, vatsalya, Premakalaha, Nindastuthi and other Bhavas clearly shows that Haridasas never lost sight of the importance of the Supremacy of Vishnu in any of those states of aesthetic experience. Such delineations on the otehr hand strengthen the central theory of God's perfection. Haridasas attempt to give out this exalted conception of God in whatever form and experession is kept in view in arranging songs. Songs arranged in such order speak for themselves without much of my observation on them. *Presention of such new Relation of facts found in the stray and disconnected songs of the haridasas is my main attempt in the Thesis.*

Some New Facts Discovered

7. There is a heated controversy over the faith followed by Narayanappa the author of Kannada Mahabharatha. I have collected new material from his work to prove beyond doubt that he was a staunch follower of Madhva faith and that he closely followed Madhva's "Mahabharata Tatparya Nirnaya" whle writing Mahabharatha. This interenal evidence proves validity of the traditional saying that Narayanappa was a contemperary of Sri Vyasaraja and that he secured a favourable opinion on his work by both Sri Vyasaraja and Sri Purandaradasa. He also closely follwed the Haridasa tradition.

8. In the Udupi. Edition of the "Jagannathadasara Kirthanegalu" a summary of "Tantrasara" in the varsi.ied form is ascribed to Jagannathadasa. But the same with some variations is ascribed to Sri Varadendra Tirtha in collection of Sri G.Hanumanth Rao. On careful examination of the song its authorship could be definitely ascertained and I have discussed this and have ascribed to Sri Varadendra Tirtha who was the Guru of Jagannathadasa.

9. A new song in praise of Vyasaraja is found in the mss colection of Sri Venugopaladas, which can be safely ascribved to Sri Viyayindra Tirtha, the disciple of Vyasaraja. Discovery of this song throuws new light on the traditon of the Haridasas.

How This Thesis Tends towards

the General advancement of Knowledge.

10. Haridasa literature cannot be treated Merely as productions of some litearary value of Kannada, but it represents Indian culture in all its entirety. This is elaborately discussed and exemplified at greate length. A strong vindcaton of religious hypothesis in the social moral and historical make-up of human civilisation is made with a view to making the case of the mystic aspect of the Haridasas based on a firm scientific ground. This new approach in the vindication of Vedic religion with a comparitive study of other religions is, I claim, an original contribution to the general advancement of knowledge.